

ಜೂನ್ ೧೯೪೦
ವರ್ಷ
೨ನೆಯ ಸಂಚಿಕೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚಸೇರಿ ೩—೦—೦ .... ವ್ಹಿ. ಪಿ. ಯಿಂದ ೩-೫-೦ .... ಬಿಡಿಸಂಚಿಕೆಗೆ ೪ ಆ.

ಸಂಪಾದಕರು :

ಪಾಟೀಲ ಮಾಧವರಾಯರು   ಬೆಟಗೇರಿ ಕೃಷ್ಣಶರ್ಮರು

೩ನೆಯ ವರ್ಷ	ಜೂನ್ ೧೯೪೦	೨ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಹಳ್ಳಿಯ ಬಾಳು (ಕವನ)	ಶ್ರೀ. ಶ್ಯಾಮಸುಂದರ ಪುಣೇಕರ ಬಿ. ಎಜಿ.	೫೭
ಸಂಪಾದಕೀಯ	ಸಂಪಾದಕರು	೫೮
ಮಂಗನ ಮಲ್ಲಿನಾಥತನ	ಶ್ರೀ. ' ಮಲ್ಲಿನಾಥ '	೫೯
ಅಮಾನುಷರಾದ ' ಆಗ್ಸ್ಪ ' ಗಳು (ರಾಜಕಾರ್ಯ ಪರಿಚಯ) ..	ಶ್ರೀ. ಜಾರಾಮುನಿಯ ' ತಂತ್ರ '	೬೧
ಕನಸಿನಲ್ಲಿ ಕಂಡ ಚಿತ್ರ (ಅನುಭವಕಥನ)	ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ	೬೪
ಇಂದುವಿನ ಹೃದಯ (ಸಣ್ಣಕತೆ)	ಶ್ರೀ. ' X. Y. Z. '	೬೫
ನಾರ್ಯೀಜೀವನ (ಪರಿಚಯಾತ್ಮಕ)	ಪ್ರೊ. ಎಸ್. ಎಮ್. ಕುಲಕರ್ಣಿ, ಎಂ. ಎ.	೭೩
ಸಂಭಾಷಣ (ಹರಟೆ)	ಶ್ರೀ. ಗಣೇಶ ನಾರಾಯಣ ಕುರ್ಡಿ	೭೭
ಧೀಂಕಿಟ ತರಿಕಿಟ (ಕವನ)	ಶ್ರೀ. ' ಬಾಲಪುರಂದರ '	೮೦
ಯುಗಾದಿಯ ರವಿ (ಕವನ)	ಶ್ರೀ. ವಿ. ಎನ್. ಭೂಪಾಲಂ	೮೦
ಆಚಾರ್ಯ ವಿನೋಬಾ (ವ್ಯಕ್ತಿದರ್ಶನ)	ಶ್ರೀ. ' ಹರಟೆಯ ಮಲ್ಲ '	೮೯
ರಾಜನ ಧರ್ಮಸಂಶೋಧನೆ (ಸಣ್ಣಕತೆ)	ಶ್ರೀ. ' ಆನಂದಕಂದ '	೮೩
ಆಯುರ್ವೇದ ಮತ್ತು ಜಾತಕ (ಜ್ಯೋತಿಷ ವಿಷಯಕ) ..	ಶ್ರೀ. ವಿದ್ವಾನ್ ಎಂ. ಜಿ. ವೆಂಕಟೇಶಯ್ಯ, ಎಂ. ಎ.	೯೩
ವೇಣುವಾದನ ವಿಶಾರದ (ಸಂದರ್ಶನಾತ್ಮಕ ಪರಿಚಯ) ..	ಶ್ರೀ. ಎಚ್. ಎಸ್. ಪಾಟೀಲ, ಎಂ. ಎ.	೯೭
ಹೆಂಗುಸರಿಗಾಗಿ ವ್ಯಾಯಾಮಕ್ರಮ	ಶ್ರೀ. ಶ್ರೀ. ಜ. ಬಾಪಟ ಬಿ. ಸಿಎಚ್. ಸಿ.	೧೦೧
ಮನೆಯಲ್ಲಿಯೆ ಹೊಲಿಗೆ (ಸರಕಿನ ಅಂಗಿ)	ಶ್ರೀ. ಹಳಪೇಟೆ ಚಿಂತಾಮಣಿರಾಯರು. ಟಿ. ಸಿ. ಡಿ.	೧೦೩
ಪುಸ್ತಕವಿಮರ್ಶೆ	ಬೇರೆ ಬೇರೆಯ ವಿಮರ್ಶಕರು	೧೦೬
ಇಂದಿನ ಯುದ್ಧದ ಕೆಲವು ವೈಶಿಷ್ಟ್ಯಗಳು	ಸಂಪಾದಕೀಯ ಸಂಗ್ರಾಹಕರು	೧೦೭
ಸಾದರ ಸ್ವೀಕಾರ	.. ..	೧೦೮
ನಗೀಗೆ ನೇವಿದ್ಯ	ಶ್ರೀ. ' ಸಕಲೀ ನಾರಾಯಣಾಚಾರಿ '	೧೦೯
ನಾಲ್ಕಾ ನಿಟ್ಟಿನ ನೋಟ	' ನಿರೀಕ್ಷಕರು '	೧೧೦



೩ನೆಯ ವರ್ಷ | ಜೂನ್ ೧೯೪೦ | ೨ನೆಯ ಸಂಚಿಕೆ

ಹಳ್ಳಿಯ ಬಾಳು

ಶ್ರೀ. ಶ್ಯಾಮಸುಂದರ ಪುಣೇಕರ

೧

ಹಿರಿಯಾಶೆಯನು ಬಿಟ್ಟು ಹೊಟ್ಟೆಯ ಸಲುವಾಗಿ
“ ಹೀನರ ” ದುಡಿತಾ ದುಡಿಯೋಣ !
ಒಣಗಿದ ರೊಟ್ಟೀ ಕಾರದೊಡನೆ ತಿಂದು
ಒರತೆಯ ನೀರು ಕುಡಿಯೋಣ !

೨

ಆರು ಗಳಿಗೆ ರಾತ್ರಿ ಇರುವಾಗ ಹೊರಬಿದ್ದು
ದೂರದ ಹೊಲಕೆ ಹೋಗೋಣ !
ಹೊಟ್ಟಿನ ಚೀಲಾ ತಲೆಗಿಂಬಿಗಿಟುಕೊಂಡು
ಕಣಕೆಯ ಮೇಲೆ ಮಲಗೋಣ !

೩

ಕುಂಟಿಯ ಮೇಲೆ ಎರಡೂ ಕಾಲ್ಗಳಿಟ್ಟು
ಬಾರುಕೋಲ ನಾವು ಬೀಸೋಣ !
ಬಯಲಿನ ಗಾಳಿಯ ಸವಿಯುತ ಹಾಡುತ
ಕರಿನೆಲಕಡಲ ಈಸೋಣ !

೪

ಡಾಕ್ಟರ ಬಿಲ್ಲಿಗೆ ಕಾಸನು ಕಳೆಯದೆ
ಹಸನಾದ ಆರೋಗ್ಯ ಗಳಿಸೋಣ !
ಆರೋಗ್ಯಬಲದಿಂದ ಅಂಜದೆ ಕಷ್ಟಕೆ
ಬಡತನದ ಬರೆಹಾ ಅಳಿಸೋಣ !

೫

ಪಟ್ಟಣವನು ಬಿಟ್ಟು ಹೊಲದ ಹತ್ತಿರವಿದ್ದು
ಹಳ್ಳಿಯ ಬಾಳನು ಬಾಳೋಣ !
ಯಾರ್‍ಯಾರ ಕಾಟವು ಇಲ್ಲದೆ ಅನುಗಾಲ
ಸ್ವಾತಂತ್ರ್ಯಸಾಮ್ರಾಜ್ಯ ಆಳೋಣ !

೬

ಹಿರಿಯಾಶೆಯನು ಬಿಟ್ಟು ಹೊಟ್ಟೆಯ ಸಲುವಾಗಿ
“ ಹೀನರ ” ದುಡಿತಾ ದುಡಿಯೋಣ !
ಒಣಗಿದ ರೊಟ್ಟೀ ಕಾರದೊಡನೆ ತಿಂದು
ಒರತೆಯ ನೀರು ಕುಡಿಯೋಣ !

ನಮ್ಮ ಸಂಪಾದಕ ಮಂಡಲಿಯ ವರದಿಯಿಂದ

ಜಯಂತಿಯಲ್ಲಿ ಪ್ರಕಟಿಸುವುದಕ್ಕೆಂದು ಹಲವು ಜನ ಹೊಸ ಹೊಸ ಲೇಖಕರು ಲೇಖನಗಳನ್ನು ಕಳುಹುತ್ತಿರುವರು. ಆದರೆ ಅವುಗಳಲ್ಲಿ, ನಮ್ಮ ಸಂಪಾದಕ ಮಂಡಲದಿಂದ ಸ್ವೀಕೃತವಾಗುವ ಲೇಖನಗಳು ನೂರಕ್ಕೆ ಐದರಂತೆಯಾದರೂ ಹೊರಡುವುವೊ ಇಲ್ಲವೊ ಸಂಶಯ. ಲೇಖನದೊಂದಿಗೆ ಬಂದಿರುವ ಪತ್ರಗಳಲ್ಲಿಯ ಬಹುಸಂಖ್ಯಾಕ ಅಭಿಪ್ರಾಯಗಳನ್ನು ನೋಡಿದರೆ ‘ ನಾನು ಹೊಸ ಲೇಖಕನಿದ್ದೇನೆ; ಹೇಗಾದರೂ ಮಾಡಿ ನನ್ನ ಲೇಖನ ಜಯಂತಿಯಲ್ಲಿ ಪ್ರಕಟಿಸಬೇಕು ’ ಎಂಬ ಅರ್ಥವನ್ನೇ ಒಳಗೊಂಡುವಾಗಿರುವುವು. ಆದರೆ ಬಹುಜನರಿಗೆ ತಾವು ಬರೆದುದು ಅಚ್ಚಾಗಬೇಕೆಂಬ ಅಪೇಕ್ಷೆ ಮಾತ್ರ ಇರುವುದಲ್ಲದೆ, ಬರೆದು ಅಚ್ಚುಹಾಕಬೇಕಾದುದು ಏತಕ್ಕೆ ಎಂಬುದರ ಕಲ್ಪನೆಯೆ ಇದ್ದಂತೆ ಕಾಣುವುದಿಲ್ಲ. ಕೆಲಕೆಲವು ಲೇಖನಗಳಂತೂ ಓದುವಾಗ ನಮ್ಮ ತಾಳ್ಮೆಯನ್ನೇ ಕೆಣಕಲು ತೊಡಗುವುವು. ಕನ್ನಡ ನಾಡಿನಲ್ಲಿ ಬರೆಹಗಾರರು ಹೆಚ್ಚಾಗಬೇಕೆಂಬ ಉದ್ದೇಶ ಜಯಂತಿಗಿದೆಯಾದರೂ ಒಳ್ಳೆಯ ಬರೆಹಗಾರರು ಹೆಚ್ಚಾಗಬೇಕೆಂಬುದು ಆ ಉದ್ದೇಶದ ಅರ್ಥ.

ನಮ್ಮಲ್ಲಿಗೆ ತಾವಾಗಿಯೆ ಬರುವ ಲೇಖನಗಳಲ್ಲಿ ಕತೆ, ಕವಿತೆ, ಹರಟೆ, ನಾಟಕಗಳೆ ಹೆಚ್ಚಾಗಿ ಬರುವುವು. ಇವುಗಳಲ್ಲಿ ಪರಭಾಷೆಯಲ್ಲಿಯ—ಎರಡನೆಯ ಮೂರನೆಯ ದರಗತಿಗೆ ಸೇರಬಹುದಾದವುಗಳ— ಭಾಷಾಂತರ ಅನುವಾದಗಳೆ ಹೆಚ್ಚಾಗಿರುವುವು. ಸ್ವತಂತ್ರವಾಗಿ ಬರೆದುವುಗಳೆಂದು ಬರುವುದರಲ್ಲಿ, ವಿಮರ್ಶಾತ್ಮಕ ದೃಷ್ಟಿ ಇಲ್ಲದೆ ಬರಿಯೆ ಆಭಾಸಾತ್ಮಕ ಅನುಕರಣ ಹೆಚ್ಚಾಗಿ ಕಂಡುಬರುವುದು. ಕವಿತೆಗಳು ನೀರಸ ಪದಮಾಲೆಗಳಾಗಿರುವುವು. ಕತೆಗಳು ವೃತ್ತಪತ್ರದ ವರದಿಗಳಾಗಿರುವುವು. ಹರಟೆಯ ತಂತ್ರವೆ ಹಲವರಿಗೆ ಗೊತ್ತಿರದು. ಏಕಾಂಕನಾಟಕಗಳು ಲೇಖಕರ ಹುಚ್ಚಾಟಗಳಾಗಿರುವುವು. ಹೀಗಾದರೆ ಕನ್ನಡ ವಾಙ್ಮಯದ ಒಳ್ಳೆಯ ಭವಿಷ್ಯತ್ತಿಗೆ ಆಶೆಯೆಲ್ಲಿ !

ನಮ್ಮಲ್ಲಿಗೆ ಬರುವ ಲೇಖನಗಳನ್ನು ಜಾಳಿಸಿ ನೋಡುತಿರುವಾಗ ‘ ನಮ್ಮಲ್ಲಿಯ ಹೆಚ್ಚು ಜನರಿಗೆ ಜೀವನದ ಬೇಕು-ಬೇಡಗಳ ರಹಸ್ಯವೆ ಗೊತ್ತಿಲ್ಲ ! ’ ಎಂದು ಯಾರಿಗೂ ಎನಿಸುವಂತಿದೆ. ಗಂಡಿಗೆ ಹೆಣ್ಣು ಹೆಣ್ಣಿಗೆ ಗಂಡು ಬೇಕಾಗುವುದು ಸಹಜಸಿದ್ಧವಾದರೂ, ಬೇರೆಬೇರೆಯ ಸ್ವಭಾವಗಳ ಮೂಲಕ ಹೆಣ್ಣು-ಗಂಡುಗಳ ಹೊಂದಿಕೆಯಲ್ಲಿಯೂ ಎಂತೆಂತಹ ರಹಸ್ಯಸಮಸ್ಯೆಗಳು ತಲೆದೋರುವುವೆಂಬುದನ್ನು ಸೂಕ್ಷ್ಮವಾಗಿ ಕಾಣುವವರೆ ವಿರಳರು. ಇದರಂತೆಯೆ ಸಮಾಜ-ಸಮೂಹಗಳ ವಿಚಾರ ! ವ್ಯಕ್ತಿವ್ಯಕ್ತಿಗಳ ಜೀವನವೈವಿಧ್ಯ-ಜೀವನವೈಷಮ್ಯಗಳ ಮೂಲಕ, ವಿಚಾರವೈವಿಧ್ಯ-ವಿಚಾರವೈಷಮ್ಯಗಳ ಮೂಲಕ, ಮತವೈವಿಧ್ಯ-ಮತವೈಷಮ್ಯಗಳ ಮೂಲಕ, ಎಷ್ಟೆಷ್ಟು ಬಗೆಯ ಸಮಸ್ಯೆಗಳು ತಲೆದೋರುವುವೆಂಬುದನ್ನು ವಿಶ್ಲೇಷಿಸಿ ನೋಡುವವರೆ ತೀರ ಕಡಿಮೆ ಜನರು. ನಮ್ಮ ಲೇಖಕರಲ್ಲಿ ಕಾಣುವ ಇನ್ನೊಂದು ದೊಡ್ಡ ಕೊರತೆಯೆಂದರೆ ಜೀವನದ ಆದರ್ಶದ ಸ್ಪಷ್ಟತೆಯಿಲ್ಲದುದು. ಈ ಅಸ್ಪಷ್ಟತೆಯ ಮೂಲಕವೆ ವ್ಯವಹಾರಧರ್ಮ-ಮತಧರ್ಮಗಳನ್ನು ಕಲಬೆರಕೆ ಮಾಡಿಬಿಡುವರು. ಬುದ್ಧಿಪ್ರಧಾನವಿಚಾರ, ಭಾವನೆಯ ರಭಸದೋಟ ಇವೆರಡನ್ನೂ ಸೇರಿಸಿ ಭತ್ತ-ಮೊಸರು ಕಲಸಿದಂತೆ ಮಾಡಿಬಿಡುವರು. ಸುತ್ತು-ಮುತ್ತಣ ಪರಿಸ್ಥಿತಿಯ ಸೂಕ್ಷ್ಮ ಪರಿಚಯದ ಕಡೆಗೆ ಔದಾಸೀನ್ಯ ತೋರಿಸುವುದರ ಮೂಲಕ, ಬರೆಹಗಳಲ್ಲಿ ಸಜೀವ ವಿಚಾರಗಳೆ ಕಾಣುತ್ತಿರುವುದಿಲ್ಲ. ಇವೆಲ್ಲ ಕೊರತೆಗಳು ಇಲ್ಲದಂತೆ ಆದಾಗಲೆ, ನಮ್ಮಲ್ಲಿಗೆ ಬರುವ ಎಲ್ಲ ಲೇಖನಗಳೂ ಸ್ವೀಕೃತವಾಗಿ, ಜಯಂತಿಯ ಪುಟಗಳು ಪ್ರಕಟನೆಗೆ ಸಾಲದೆ ಹೋಗಬಹುದು.

ನಮ್ಮ ಹೊಸ ಬರೆಹಗಾರರಿಗೆ ನಮ್ಮ ಸೂಚನೆಯೊಂದೆಂದರೆ ಮೊದಲನೆಯದಾಗಿ ತಮ್ಮ ಆದರ್ಶವನ್ನು ಸ್ಪಷ್ಟಪಡಿಸಿಕೊಳಬೇಕು. ಆ ಆದರ್ಶಸಾಧನೆಗಾಗಿ ಹೆಣಗಿದ ಜನರ ಪರಿಚಯವನ್ನಲ್ಲದೆ ಅವರ ಚರಿತ್ರೆ, ವಿಚಾರಸಂಗ್ರಹ, ಗ್ರಂಥ ಮೊದಲಾದುವುಗಳನ್ನು ಅಭ್ಯಸಿಸಬೇಕು. ಆಧಿಭೌತಿಕ ಪ್ರಗತಿ ವಿಚಾರವನ್ನೆ ಆದರ್ಶವನ್ನಾಗಿ ಇರಿಸಿಕೊಂಡಿದ್ದವರು, ಆ ದಾರಿಯಲ್ಲಿ ನಡೆದವರೊಂದಿಗೆ ನಡೆಯಬೇಕು. ನುಡಿದವರ ಮಾತುಗಳನ್ನು ಕೇಳಬೇಕು. ಸ್ವಂತದ ತಪಃಕೃಷಿಯಿಂದಲೂ ದಾರಿಯನ್ನು ಗೊತ್ತುಪಡಿಸಿಕೊಳ್ಳಲು ಹೆಣಗಬೇಕು. ಈ ನಡೆ ಈ ನುಡಿ ಈ ಹೆಣಗಾಟಗಳೇ ಪ್ರಾಮಾಣಿಕಬುದ್ಧಿಯ ನೆರವಿನಿಂದ ಮಾತಿನಲ್ಲಿ ರೂಪಗೊಂಡು ಹೊರಕ್ಕೆ ಬರತೊಡಗಿದರೆ ಹೊಸಗನ್ನಡದಲ್ಲಿಯೂ ಒಳ್ಳೆಯ ಕತೆ, ಒಳ್ಳೆಯ ಕವಿತೆ, ಒಳ್ಳೆಯ ಪ್ರಬಂಧ, ಒಳ್ಳೆಯ ನಾಟಕ, ಒಳ್ಳೆಯ ವಿಚಾರಚರ್ಚೆ ಏನೆಲ್ಲವೂ ಹೆಚ್ಚಾಗಬಹುದು. ಹೀಗಾಗದಿದ್ದರೆ ಕನ್ನಡದ ಒಳ್ಳೆಯ ಭವಿಷ್ಯತ್ತಿಗೆ ಆಶೆಯೆಲ್ಲಿ ?

ಕ. ಸಾ. ಪರಿಷತ್ತಿನ ಬೆಳ್ಳಿಯ ಹಬ್ಬ

ಇಪ್ಪತ್ತೈದು ವರ್ಷ ಪ್ರಾಯದ ಕನ್ನಡ ಸಾಹಿತ್ಯಪರಿಷತ್ತು, ಮಾನವನ ಆಯುಷ್ಯದ ಅಳೆಗೋಲಿನಿಂದ ಅಳೆದು ಹೇಳಬಹುದಾದರೆ ಪ್ರಬುದ್ಧಾವಸ್ಥೆಯನ್ನು ಹೊಂದಿತೆಂದು ಹೇಳಬಹುದು. ಆದರೆ ಸಂಸ್ಥಾಜೀವಮಾನ ದೃಷ್ಟಿಯಿಂದ ನೋಡಿದರೆ ಇಪ್ಪತ್ತೈದು ವರ್ಷಗಳೆಂದರೆ ಏನೂ ಅಲ್ಲ; ಕ. ಸಾ. ಪರಿಷತ್ತು ಇದೀಗ ಕಣ್ಣುಬಿಡುತ್ತಿರುವ ಹಸುಗೂಸೇ ಎಂದು ಹೇಳಬಹುದು. ಈ ಇಪ್ಪತ್ತೈದು ವರ್ಷಗಳಲ್ಲಿ ಪರಿಷತ್ತು ಮಾಡಿದ ಕೆಲಸವೂ ಹಸುಗೂಸಿನದೆ ಎಂದು ಹೇಳಬಹುದು. ತನ್ನ ಕಾಲ ಮೇಲೆ ತಾನೆ ನಿಲ್ಲುವ ಶಕ್ತಿ ಇನ್ನೂ ಅದಕ್ಕೆ ಬಂದಿಲ್ಲ; ಆದುದರಿಂದಲೆ ಇನ್ನೂ ಅದಕ್ಕೆ ಪಾಲಕರ ಸಂರಕ್ಷಣೆ ಬೇಕಾಗಿದೆ. ಸಂರಕ್ಷಣೆಯಲ್ಲಿರುವ ಶಿಶುವಿಗೆ ಸ್ವಾತಂತ್ರ್ಯ ಹೇಗೆ ಸಿಕ್ಕಬೇಕು ! ಮನಸ್ಸಿನಲ್ಲಿ ಬಂದುದನ್ನು ಗಟ್ಟಿಸಿ ಮಾತನಾಡಬೇಕಾದರೂ ಬೆಚ್ಚಿಬೆದರಿ ಸುತ್ತುಮುತ್ತು ನೋಡುವಂತಹ ಪರಿಸ್ಥಿತಿ ಇನ್ನೂ ಕ. ಸಾ. ಪರಿಷತ್ತಿಗೆ ಇದೆ. ಇಂತಹ ದಾಕ್ಷಿಣ್ಯದ ಕೂಸಿನಿಂದ ಕನ್ನಡಿಗರು ಯಾವ ಕಾರ್ಯರಭಸವನ್ನು ಅಪೇಕ್ಷಿಸುವರು ? ಭಾರತದ ಮಿಕ್ಕ ಭಾಷೆಯ ಸಾಹಿತ್ಯಪರಿಷತ್ತುಗಳಿಗಿಂತ ಕನ್ನಡ

(೬೩ನೆಯ ಪುಟ ನೋಡಿರಿ)

ಬೇಡಿಕೆ ಹೆಚ್ಚಿದ್ದ ಮಾಲಿಗೆ ಬೆಲೆ ಹೆಚ್ಚು

"ಮೈಸೂರು-ಮದ್ರಾಸ ಯುನಿವರ್ಸಿಟಿಯಿಂದ ಪ್ರಕಟವಾಗುತ್ತಿರುವ ಎಂತೆಂತಹ ಉಪಯುಕ್ತವಾದ ಕನ್ನಡ ಪುಸ್ತಕಗಳೂ ಎಷ್ಟೊಂದು ಸುಲಭ ಬೆಲೆಗೆ ಸಿಕ್ಕುತ್ತವೆ, ಆದರೆ ಮುಂಬಯಿ ಯುನಿವರ್ಸಿಟಿಯಿಂದ ಪ್ರಕಟವಾದ ಮ್ಯಾಟ್ರಿಕ್ ಪರೀಕ್ಷೆಯ 'ಕನ್ನಡ ಸಿಲೆಕ್ಶನ್' ಪುಸ್ತಕ, ಬರೇ ೮೪ ಪುಟಗಳದಿದ್ದರೂ ಅದರ ಬೆಲೆ ೧ ರೂಪಾಯಿ ಯಾಕಿರಬೇಕು?" ಎಂಬ ಪ್ರಶ್ನೆಯನ್ನೊಳಗೊಂಡ ಪತ್ರವೊಂದು ಮಂಗರಾಯನಿಗೆ ಬಂದಿದೆ. ಇದೊಂದು ಮಹತ್ತ್ವದ ಪ್ರಶ್ನೆಯೆಂದು ಮಂಗರಾಯನಿಗೆ ಎನಿಸಿಲ್ಲವಾದರೂ, ಪ್ರಶ್ನೆ ಕೇಳಿದವರೆಂದ ಮೇಲೆ ಅವರ ಮಾತಿಗೆ ಮನ್ನಣೆ ಕೊಡಬೇಕಾಗಿದೆ ನೋಡಿ! ಇದರ ಬಗ್ಗೆ ವಿಚಾರ ಮಾಡಿದಾಗ ಮಂಗರಾಯನಿಗೆ ಒಂದು ಸಂಗತಿ ತಿಳಿದು ಬಂದಿತು, ಅದೇನೆಂದರೆ:—

ಮೈಸೂರು-ಮದ್ರಾಸ ವಿಶ್ವವಿದ್ಯಾನಿಲಯಗಳ ಸದಸ್ಯರಲ್ಲಿ, ಸ್ವಂತದ ಮುದ್ರಣಾಲಯವನ್ನು ಇಟ್ಟುಕೊಂಡವರು ಯಾರೂ ಇಲ್ಲವಂತೆ. ಇದ್ದರೂ ತಮ್ಮ ಮುದ್ರಣಾಲಯಗಳಲ್ಲಿ ಅವನ್ನು ಮುದ್ರಿಸುವುದಿಲ್ಲವಂತೆ. ಬೇರೆಯವರ ಮುದ್ರಣಾಲಯಗಳಲ್ಲಿ ಆ ವಿ ವಿ. ನಿಲಯಗಳು ತಮ್ಮ ಗ್ರಂಥಗಳನ್ನು ಮುದ್ರಿಸುವುದರಿಂದ, ಅಗ್ಗದ ಬೆಲೆಯಲ್ಲಿ ಮುದ್ರಣವಾಗುವುವಂತೆ. ಇನ್ನೊಂದು ವಿಷಯ: 'ಬೇಡಿಕೆಯಿದ್ದ ಮಾಲಿಗೆ ಬೆಲೆ ಹೆಚ್ಚಾಗುವುದು!' ಎಂಬ ವ್ಯಾಪಾರಸೂತ್ರ ಅನೇಕರಿಗೆ ಗೊತ್ತಿರಬಹುದು. ಮೈಸೂರು-ಮದ್ರಾಸ್ ಯುನಿವರ್ಸಿಟಿಗಳವರು ಬೇಡಿಕೆಯಿಲ್ಲದ ಪುಸ್ತಕಗಳನ್ನು ಪ್ರಕಟಿಸುವರಾದುದರಿಂದ, ಅವುಗಳ ಬೆಲೆಯನ್ನು ಅಗ್ಗವಾಗಿ ಇರಿಸುವರು. ಮುಂಬಯಿ ಯುನಿವರ್ಸಿಟಿಯ ಮ್ಯಾಟ್ರಿಕ್ ಪರೀಕ್ಷೆಯ ಪಠ್ಯಪುಸ್ತಕವೆಂದ ಮೇಲೆ ಬೇಡಿಕೆ ಬಹಳವಾಗಿರುವುದು ಸ್ವಾಭಾವಿಕ. ಸಾವಿರೆರಡುಸಾವಿರ ವಿದ್ಯಾರ್ಥಿಗಳು ಗಿರಾಕಿಗಳು. ಎಂದಮೇಲೆ ಅಂತಹ ಮಾಲಿನ ಬೆಲೆ ಹೆಚ್ಚಿರಬೇಡವೆ? ಕನ್ನಡ ಪಠ್ಯಪುಸ್ತಕದ ಬೆಲೆ ಹೆಚ್ಚಾಗಿರುವುದರ ಕಾರಣ ಹೀಗಿದೆ ನೋಡಿ! ಇನ್ನೇನು?

ಹಿಗ್ಗು ಬೇಕಾದಾಗ ಹೊರಕ್ಕೆ ಬನ್ನಿರಿ!

ಎತ್ತು ಹಾಯಬಹುದೆಂದು ಮುಸ್ಲೀಂ ಹುಡುಗನೊಬ್ಬನನ್ನು ಸಂರಕ್ಷಿಸಹೋದರೆ, ಯಾದಗಿರಿ (ನೈಝಾಮ್) ಯಲ್ಲಿ ಹಿಂದೂ-ಮುಸಲ್ಮಾನ್ ದೊಂಬಿಯಾಯಿತಂತೆ. ಮೊಗಲಾಯಿಯಲ್ಲಿ ಮುಸಲ್ಮಾನ್-ಹಿಂದುಗಳ ಜಗಳಾಟಕ್ಕೆ ವಿಶೇಷ ಕಾರಣಗಳು ಬೇಕಾಗುವುದೆ ಇಲ್ಲ. ಆರ ತಿಂಗಳ ಕುರಿಯಮರಿ ಒಂದು ವರ್ಷಕ್ಕೆ ಹಿಂದೆಯೆ ತೋಳನನ್ನು ಬೈದಿರುತ್ತದೆ; ಆದುದರಿಂದಲೆ ಕುರಿಮರಿಯ ಮೇಲೆ ತೋಳನ ಕ್ರೋಧ. ಮರಿಯೇನನೂ ಮಾಡಿರದಿದ್ದರೂ ಮರಿಯ ಅಜ್ಜ-ಮುತ್ತಜ್ಜಂದಿರಾದರೂ ತೋಳನಿಗೆ ಏನಾದರೊಂದು ಅನ್ಯಾಯ ಮಾಡಿಯೆ ಮಾಡಿರುತ್ತವೆ. ಆದಕ್ಕಾಗಿಯಾದರೂ ಕುರಿಯಮರಿಯನ್ನು ಮುರಿಯಲೆ ಬೇಕು. ನೈಝಾಮರಾಜ್ಯದಲ್ಲಾಗುವ ಹಿಂದೂ-ಮುಸಲ್ಮಾನ್ ದೊಂಬಿಗೆ ಇಂತಹ ಕಾರಣಗಳಿದ್ದರೆ ಸಾಕು. ಇಷ್ಟರಮೇಲೆ ಬೇಕಾದಂತಹ ದೊಡ್ಡ ದೊಡ್ಡ ದೊಂಬಿಗಳನ್ನೂ ಅಲ್ಲಿ ಎಬ್ಬಿಸಬಹುದು. ದೊಂಬಿ ನಡೆದ ಸ್ಥಳದಲ್ಲಿ ಪೋಲೀಸರು ಬಂದು ಸೀಟಿಗಳನ್ನೂದಿದರೆ, ಹೊಸ ಪೋಲಿಸರ ಪಡೆ ಬಾರದೆ ದೊಂಬಿಗಾರರ ಗುಂಪುಗಳೆ ಬರುವ ರೀತಿಯೂ ಅಲ್ಲಿ ಇದೆಯೆಂಬುದು, ಯಾದಗಿರಿಯಲ್ಲಿ ಮೊನ್ನೆ-ಮೊನ್ನೆಯ ಬಸವ ಜಯಂತಿಯ ದಿನ ನಡೆದ ದೊಂಬಿಯ ಸುದ್ದಿಯಿಂದ ಗೊತ್ತಾಗುವುದು. ಹಿಂದುಗಳ ಹಬ್ಬದ ಉಲ್ಲಾಸ ಮೊಗಲಾಯಿಯ ಮಹಮ್ಮದೀಯರಿಗೆ, ಇತ್ತೀಚೆಗೆ ಮೂಕನೆದುರು ಮೂಗು ತುರಿಸಿಕೊಂಡಂತೆ ಆಗುತ್ತಲಿದೆ; ಇಲ್ಲದ ಗೊಂದಲಕ್ಕೆ ಕಾರಣವಾಗುತ್ತಲಿದೆ. ಆದುದರಿಂದ ಜನಸಂಖ್ಯೆಯಲ್ಲಿ ನೂರಕ್ಕೆ ತೊಂಬತ್ತರಷ್ಟಿದ್ದ ಹೇ ದಾವ ಮೊಗಲಾಯಿಯ ಹಿಂದುಗಳೆ, ನಿಮಗೆ ಮಂಗರಾಯನ ಹಿತೋಪದೇಶವೊಂದಿದೆ ಕೇಳಿ:

"ಇಂದಿನಿಂದ ನೀವು ನಿಮ್ಮ ನಿಮ್ಮ ಹಬ್ಬ-ಹರಿದಿನಗಳನ್ನು ನಿಲ್ಲಿಸಿರಿ; ಪೂಜೆ-ಪುರಸ್ಕಾರಗಳನ್ನು ತಡೆದು ಹಿಡಿಯಿರಿ; ಗುಡಿ-ದೇಗುಲಗಳಿಗೆ ಬಾಗಿಲಿಕ್ಕಿ ಬೀಗಹಾಕಿರಿ; ಮದುವೆ-ಮುಂಜಿಗಳಲ್ಲಿ ಇಲ್ಲದ ಸಮಾರಂಭಕ್ಕೆ ಅವಕಾಶ ಕೊಡಬೇಡಿರಿ! ಮಡಿಯುವುದೊಂದೇ ನಿಮ್ಮಯ ಧರ್ಮ! ಸಡಗರಕೂ ನಿಮಗೂ ಇದೆ ವರ್ಮ! ದುಡಿದು ದುಡಿದು ಕೊಡುವುದೆ ನಿಮ ಕರ್ಮ! ಬಂಧುಗಳೆ, ನಿಮಗೊಂದು ಕಿವಿಮಾತನ್ನು ಹೇಳುತ್ತೇನೆ ಕೇಳಿರಿ: ಹೆಂಡ-ಸಾರಾಯಿಗಳು ನಿಝಾಮರ ರಾಜ್ಯದಲ್ಲಿ ಸುಲಭದರಕ್ಕೆ ಸಿಕ್ಕುವುವೆಂದು ಅಲ್ಲಿಗೆ ಓಡಿಹೋಗಿ ಕುಡಿದುಬರುವ ನೆರೆನಾಡಿಗರ ಜಂಗುಳಿಯನ್ನು ನಾನು ನೋಡಿದ್ದೇನೆ. ಹಾಗೆಯೆ ನಿಮಗೆ ಹಬ್ಬ-ಹರಿದಿನಗಳ ಹಿಗ್ಗು ಬೇಕಾದರೆ, ನಿಝಾಮನ ರಾಜ್ಯದಿಂದ ಹೊರದೇಶಕ್ಕೆ ಬಂದು ಅನುಭವಿಸಿ ಮರಳಿಹೋಗುತ್ತೀರಿ! ಅಲ್ಲಿಯೆ ಅಂತಹ ಹಿಗ್ಗನ್ನು ಪಡೆಯಬೇಕಾದರೆ ತುಂಬ ಬೆಲೆಕೊಡಬೇಕಾಗುವುದೆಂಬುದನ್ನು ಮರೆಯಬೇಡಿರಿ!"

* * *

ಗೂಡವಾಲಾ-ಶೀವಾಲಾ!

ಮೊನ್ನೆ ಮೊನ್ನೆ ಹುಬ್ಬಳ್ಳಿಯಲ್ಲಿ ಸೇರಿದ ಮುಸ್ಲಿಂ ಲೀಗಿನ ಪರಿಷತ್ತಿಗೆ ಸ್ವಾಗತಾಧ್ಯಕ್ಷರು ಶ್ರೀ. ಗೂಡವಾಲಾ (ಬೆಲ್ಲದವರು); ಮುಸ್ಲೀಂ ಶಿಕ್ಷಣ ಪರಿಷತ್ತಿಗೆ ಸ್ವಾಗತಾಧ್ಯಕ್ಷರು ಶ್ರೀ. ಶೀವಾಲಾ (ತುಪ್ಪದವರು). ಕರ್ನಾಟಕದಲ್ಲಿ ಬೆಲ್ಲ-ತುಪ್ಪ ಸಾಕಷ್ಟಿದೆಯೆಂಬುದನ್ನು ಕರ್ನಾಟಕೇತರ ಮುಸಲ್ಮಾನರಿಗೆ ತೋರಿಸಿಕೊಡಬೇಕೆಂದೇ ಇರಬಹುದು, ಈ ಪರಿಷತ್ತುಗಳು ಬೆಲ್ಲ-ತುಪ್ಪಗಳನ್ನು ಒಂದೆಡೆಗೆ ಸೇರಿಸಿದುವು. ಆದರೆ ಮಂಗರಾಯನು ತಿಂದು ನೋಡಿದಾಗ ಗೂಡವಾಲಾರ ಬೆಲ್ಲ ಬೇವಿಗಿಂತ ಕಹಿಯಾಗಿದ್ದಿತು. ಶೀವಾಲಾರ ತುಪ್ಪ ಕೈಯೆಣ್ಣೆಗಿಂತ ಕೀಳು ರುಚಿಯದಾಗಿತ್ತು. ಇದಕ್ಕೆ ಕಾರಣ ಮುಸ್ಲೀಂ ಲೀಗು ಬೀಸಿದ ಕೆಟ್ಟ ಗಾಳಿ. ಆದುದರಿಂದಲೆ ಇನ್ನು ಮೇಲೆ ಕನ್ನಡಿಗರು ಗೂಡವಾಲಾರ ಬೆಲ್ಲವನ್ನು ಗೂಡವಾಲಾರ ಗೋದಾವುನಿನಲ್ಲಿಯೆ ಉಳಿಸಬೇಕಾಗಿದೆ. ಶೀವಾಲಾರ ತುಪ್ಪವನ್ನು ಶೀವಾಲಾರ ಪೀಪುಗಳಲ್ಲಿಯೆ ಮುಗಿಸ

ಬೇಕಾಗಿದೆ. ಇಂತಹ ತಪ್ಪು-ಬೆಲ್ಲಗಳನ್ನು ಕನ್ನಡ ನಾಡಿನ ಮಹಮ್ಮದೀಯರು ತಿಂದರೆ ನಿಜವಾಗಿಯೂ ಅವರ ಆರೋಗ್ಯ ಕೆಟ್ಟುಹೋಗುವುದು ಖಂಡಿತ. ಇದುವರೆಗೆ ಕೊಂಡುಕೊಂಡು ತಿಂದು-ಗೂಡವಾಲಾ ಘೀವಾಲಾರ ಜೋಳ್ಳನ್ನು ಬೆಳೆಯಿಸಿದ ಕನ್ನಡಿಗರಾದ ಹಿಂದುಗಳೂ ಅವರ ಕೂಡ ವ್ಯಾಪಾರಮಾಡಬೇಕಾದರೆ ಎಚ್ಚರಿಕೆಯಿಂದ ಮಾಡಬೇಕು! ಕನ್ನಡ ಹಿಂದೂ-ಮುಸಲ್ಮಾನರಿಬ್ಬರಿಗೂ ಮಂಗರಾಯನ ಎಚ್ಚರಿಕೆ!

ಮಂಗರಾಯನು ಸಂಪಾದಿಸಿದ ಮನ್ನಣೆ

ಕಳೆದ ತಿಂಗಳಲ್ಲಿ 'ಬ್ರಾಹ್ಮಣರಲ್ಲಿ ಸಂಘಟನೆಯೇ?' ಎಂಬುದರ ವಿಚಾರದಲ್ಲಿ ಬರೆದ ಮಂಗರಾಯನ ಅಭಿಪ್ರಾಯವನ್ನೋದಿ, ಬ್ರಾಹ್ಮಣ ಸಂಘದ ಮಾನ್ಯ ಸದಸ್ಯರೊಬ್ಬರು, ಕೆಳಗೆಕೊಟ್ಟ ಬರೆಹವನ್ನು ಪ್ರಸಿದ್ಧಿಗಾಗಿ ನಮ್ಮ ಕಡೆಗೆ ಕಳುಹಿದ್ದಾರೆ. ಅದನ್ನು ಇದ್ದುದಿದ್ದಂತೆಯೆ ಇಲ್ಲಿ ಪ್ರಕಟಿಸಲಾಗಿದೆ. —ಮಲ್ಲಿನಾಥ.

ಬ್ರಾಹ್ಮಣರಲ್ಲಿ ಸಂಘಟನೆಯು ಹೇಗೆ ಆದೀತು?

(ಲೇಖಕರು:—ರಾಮಚಂದ್ರಶಾಸ್ತ್ರಿ ಜೋಯಿಸ್ರು, ಸೆಕ್ರೆಟರಿ ಸಂಸ್ಕೃತ ಲಿಟರರಿ ಸೊಸಾಯಿಟಿ, ಧಾರವಾಡ)

ಕಳೆದ ತಿಂಗಳ ೨೫ ಮತ್ತು ೨೬ ತಾ|| ಗಳಿಗೆ ಗದಗಿಯಲ್ಲಿ ಕೂಡಿದ ಕರ್ನಾಟಕ-ಪ್ರಾಂತೀಯ ಬ್ರಾಹ್ಮಣಸಮ್ಮೇಲನದಲ್ಲಿ 'ಕರ್ನಾಟಕ ಪ್ರಾಂತೀಯ ಬ್ರಾಹ್ಮಣಸಂಘವು' ಸ್ಥಾಪಿಸಲ್ಪಟ್ಟಿತಷ್ಟೇ? ಆ ಹೊತ್ತಿನಿಂದ ಇಂದಿನವರೆಗೆ ಸಂಘದ ವಿಷಯದಲ್ಲಿ ಒಬ್ಬೊಬ್ಬರು ಒಂದೊಂದು ವಿಧವಾಗಿ ಮಾತನಾಡುತ್ತಲಿರುವದು ಕಂಡುಬರುತ್ತದೆ. ಇದಕ್ಕನುರೂಪವಾಗಿಯೇ ಮೇ ತಿಂಗಳ ೧ನೇ ತಾ|| ನ 'ಜಯಂತಿ' ಯಲ್ಲಿ ಇದೇ ವಿಷಯದಲ್ಲಿ ಮಂಗರಾಯನ ಅಭಿಪ್ರಾಯವೊಂದು ಪ್ರಕಟವಾಗಿರುವದು. ಅದು ಕೆಲವರಿಗೆ ಟೀಕಾತ್ಮಕವಾಗಿ ತೋರುವಂತಿದೆ. ಆದರೆ ನಮಗೆ ಹಾಗೆ ತೋರುವದಿಲ್ಲ. ಬರಹಗಾರರ ಮನಸು ಹೇಗೆಯೇ ಇರಲಿ, ನಮಗಂತು ಅದು ಬ್ರಾಹ್ಮಣ ಸಮಾಜಕ್ಕೆ ಆದರಣೀಯವಾದ ಎಚ್ಚರಿಕೆಯಾಗಿದೆ. ಅದರಲ್ಲಿ ಯಥಾಸ್ಥಿತ ಸಂಗತಿಯು ಹೇಳಲ್ಪಟ್ಟಿದೆ. ಬ್ರಾಹ್ಮಣಸಮಾಜದ ಸಂಘಟನೆಗೆ ಬಾಧಕವಾದ ದೋಷಗಳು ನಮ್ಮಲ್ಲಿರುವವೇನೂ ಸುಳ್ಳಲ್ಲ. ಮತ್ತು ಆ ದೋಷಗಳನ್ನು ತೆಗೆದು ಹಾಕಿದ ಹೊರತು ಬ್ರಾಹ್ಮಣರ ಸಂಘಟನೆಯಾಗದು ಎಂಬದೇ ಬರಹಗಾರರ ಅಭಿಪ್ರಾಯವಿದ್ದಿರಬೇಕೆಂದು ನಮ್ಮ ಕಲ್ಪನೆ. ಈ ವಿಷಯದಲ್ಲಿ ನಮ್ಮ ಅಭಿಪ್ರಾಯವೇನೆಂಬವನ್ನು, ಈ ಮೊದಲೇ, ಈ ಸಂಘವನ್ನು ಸ್ಥಾಪಿಸುವ ವಿಚಾರದಿಂದ ಶ್ರೀವಿಠ್ಠಲಮಂದಿರದಲ್ಲಿ ಕೂಡಿದ ಮೊದಲನೆಯ ಸಾರ್ವಜನಿಕ ಸಭೆಯಲ್ಲಿ ನಾನು ಸ್ಪಷ್ಟವಾಗಿ ಹೇಳಿಬಿಟ್ಟಿದ್ದೇನೆ. ಅನೇಕ ಪಂಗಡಗಳು, ಅನೇಕ ಮತಗಳು, ಅನೇಕ ಪಂಥಗಳು ಇರುವ ಬ್ರಾಹ್ಮಣರಲ್ಲಿ ಸಂಘಟನೆಯಾಗಬೇಕಾದರೆ, ಎಲ್ಲರಿಗೂ ಸಮಾನವಾದದ್ದೊಂದು ಭೂಮಿಕೆಯನ್ನು ನಾವು ಆರಿಸಿ ತೆಗೆಯಬೇಕು, ಅಂದರೆ ಯಾವ ಭೂಮಿಕೆಯ ಮೇಲೆ ನಿಲ್ಲಲು ಎಲ್ಲರಿಗೂ ಆಸ್ಪದವಾಗುವದು. ಮಂಗರಾಯನು ಹೇಳಿದ ದೋಷಗಳು ಈ ದೃಷ್ಟಿಯ ಮಟ್ಟಿಗಾದರೂ ನೋಡಿದರೆ ಉತ್ತಮವೇ. ಒಂದುವೇಳೆ ಅವು ಇದ್ದರೂ ಸಹ ಸಮಸಂಕಟದಲ್ಲಿ ಬಂದ ಪರಸ್ಪರಶತ್ರುಗಳು ಸಹ ಆ ಸಂಕಟವನ್ನು ದೂರಮಾಡುವಮಟ್ಟಿಗಾದರೂ ಒಂದಾಗುವಂತೆ, ಆ ತರದ ಸಮಾನಸಂಕಟದ ಭೂಮಿಕೆಯನ್ನೊಂದನ್ನೇ ಎದುರಿಗಿಟ್ಟುಕೊಂಡು ಕೆಲಸಮಾಡಿದರೆ ಸಂಘಟನೆಯಾಗುವದಸಾಧ್ಯವಲ್ಲ. ಅಂಥ ಭೂಮಿಕೆಯನ್ನು ಹುಡುಕಿ ತೆಗೆಯುವದು ಈಗಿನ ಕಾಲಕ್ಕೆ ಪ್ರಯಾಸದ ಮಾತಲ್ಲ. ಪರಿಸ್ಥಿತಿಯೇ ಆ ತರದ ಭೂಮಿಕೆಯನ್ನು ಮುಂದಿರಿಸುವದು. ಹೀಗೆ ಬ್ರಾಹ್ಮಣರಲ್ಲಿ ಸಂಘಟನೆಯಾಗಬೇಕೆಂಬ ವಿಚಾರವು ಹೊರಟದ್ದೇ ಅದಕ್ಕೆ ಸಾಕ್ಷಿಯು. ಯಾವದೇ ಮತ, ಪಂಥ, ಪಂಗಡದವನಿರಲಿ, ಅವನು ಬ್ರಾಹ್ಮಣನು ಎಂಬ ಮಾತ್ರದಿಂದಲೇ 'ಅವನನ್ನು ಕೆಳಗೊತ್ತಬೇಕು, ಹಿಂದೂಡಬೇಕು, ಮುಂದೆ ಬರಗೊಡಬಾರದು' ಎಂಬ ಪ್ರವೃತ್ತಿಯು ಎಲ್ಲ ಕಡೆಯಲ್ಲಿ ಬೆಳೆಯುತ್ತಿರುವದಲ್ಲವೇ? ಅವನು ಬ್ರಾಹ್ಮಣನಾಗಿ ಹುಟ್ಟಿದುದೊಂದೇ ತಪ್ಪು! ಅವನಿಗಿರತಕ್ಕ ಸಾಮಾನ್ಯ ಹಕ್ಕುಗಳು ಸಹ ಅವನಿಗುಪಭೋಗಿಸಕೊಡಲ್ಪಡುವದಿಲ್ಲ. ಇದೇ ಬ್ರಾಹ್ಮಣರಿಗೆ ಈಗಿನ ಪರಿಸ್ಥಿತಿಯಲ್ಲಿ ಸಮಾನವಾದ ಸಂಕಟವು. ಅವನು ಧಾರ್ಮಿಕದೃಷ್ಟಿಯಿಂದ ಸದಾಚಾರಿಯಿರಲಿ, ದುರಾಚಾರಿಯಿರಲಿ, ಸುಧಾರಕನಿರಲಿ, ಉದ್ಧಾರಕನಿರಲಿ, ನಾಸ್ತಿಕನಿರಲಿ ಆಸ್ತಿಕನಿರಲಿ, ಧರ್ಮವೇ ಬೇಡೆಂಬುವನಿರಲಿ ಬೇಕೆಂಬುವನಿರಲಿ, ಬ್ರಾಹ್ಮಣ ತಂದೆ-ತಾಯಿಗಳಿಂದ ಹುಟ್ಟಿದ್ದರೆ ಸಾಕು; ಅವನಿಗೆ ಈ ಸಂಕಟವು ತಪ್ಪದು. ಆದ್ದರಿಂದ ಈ ಎಲ್ಲ ತರದ ಬ್ರಾಹ್ಮಣರಲ್ಲಿ ಸಂಘಟನೆಯಾಗದೆ ನಮ್ಮಲ್ಲಿ ಬಲ ಬಾರದು; ಬಲವಂತರಾದವರಿಗೇ ಹಕ್ಕುಗಳು. ಹೀಗಿರುವಲ್ಲಿ ಸಂಘಟನೆ ಹೇಗೆ ಆದೀತು? ಅಂದರೆ ಪಂಗಡಗಳಿಗೆ ಕಾರಣವಾದ ಧರ್ಮದ ವಿಷಯಗಳನ್ನೆಲ್ಲ ಸಂಘಟನೆಗಾಗಿ ಹೊರಟ ಸಂಘವು ಹೊರಗಿಡಬೇಕು. ಇದೇ ದೃಷ್ಟಿಯಿಂದ ನಾನು ಬ್ರಾಹ್ಮಣಸಂಘದ ಧ್ಯೇಯವು (creed) ಏನಿರಬೇಕೆಂಬದನ್ನು ಮೇಲೆ ಹೇಳಿದ ಶ್ರೀವಿಠ್ಠಲಮಂದಿರದಲ್ಲಿ ಕೂಡಿದ ಸಭೆಯ ಮುಂದೆ ಇಟ್ಟಿದ್ದೆನು. ಆ ನನ್ನ ಧ್ಯೇಯವು ಏನಿತ್ತೆಂದರೆ:— 'ಜನ್ಮತಃ ಪ್ರಾಪ್ತವಾಗುವ ಬ್ರಾಹ್ಮಣತ್ವದಲ್ಲಿ ವಿಶ್ವಾಸವಿಟ್ಟು, ಬ್ರಾಹ್ಮಣಸಮಾಜದ ಮೇಲೆ ಬರುವ ಎಲ್ಲ ಬಗೆಯ ಆಘಾತಗಳನ್ನು ತಡೆಯಲಿಕ್ಕೆ ಸಂಘಟಿತರಾಗಿ ಬಲಬೆಳಸಿಕೊಂಡು, ಬ್ರಾಹ್ಮಣಸಮಾಜದ ಔದ್ಯೋಗಿಕ, ಆರ್ಥಿಕ ಮೊದಲಾದ ಉನ್ನತಿಯನ್ನು ಮಾಡಲೆತ್ನಿಸುವದೇ ಸಂಘದ ಧ್ಯೇಯವು. ಆದರೆ ಈ ನನ್ನ ಧ್ಯೇಯಕ್ಕೆ ಬಹುಮತ ಬೀಳದೆ, ಈಗ ಪಾಸಾದ ಧಾರ್ಮಿಕವಲ್ಲ ಅಧಾರ್ಮಿಕವಲ್ಲ ಎಂಬಂತಿರುವ ಅರ್ಧಜರತೀನ್ಯಾಯದ ಕ್ರೀಡಿಗೆ ಬಹುಮತಗಳು ಬಿದ್ದುವು. ನನ್ನ ದೃಷ್ಟಿಯಿಂದ, ಮೇಲೆ ಹೇಳಿದ ನನ್ನ ಕ್ರೀಡಿನಲ್ಲಿ ತೋರಿಸಿದ ಭೂಮಿಕೆಯ ಮೇಲೆ ಮಾತ್ರ ಬ್ರಾಹ್ಮಣರ ಸಂಘಟನೆಯಾದೀತಲ್ಲದೆ ಧಾರ್ಮಿಕವಿಷಯಗಳನ್ನು ಸೇರಿಸಿಕೊಂಡರೆ ಸಂಘಟನೆಯಾಗಲು ಶಕ್ಯವೇ ಇಲ್ಲೆಂದು ನಾನು ಅಂದಿನ ಸಭೆಯಲ್ಲಿ ಸಾರಿ ಹೇಳಿ ಕುಳಿತುಕೊಂಡೆನು. ಆ ನನ್ನ ಕ್ರೀಡು ಪಾಸಾಗಿದ್ದರೆ ಸಾರ್ವಜನಿಕ ಉಪನಯನ, ಸ್ತ್ರೀಯರಿಗೆ ಮತಾಧಿಕಾರ ಮೊದಲಾದ ವಿಷಯಗಳ ಬಗ್ಗೆ ವಿವಾದಿಸುವ ಪ್ರಸಂಗವೇ ಬರುತ್ತಿದ್ದಿಲ್ಲ. ಇನ್ನಾದರೂ ನಾನು ಮೇಲೆ ತೋರಿಸಿದ ರೀತಿಯಲ್ಲಿ ಸಂಘದ ಧ್ಯೇಯದಲ್ಲಿ ಬದಲು ಮಾಡುವುದು ನನಗಂತೂ ಅವಶ್ಯವಾಗಿ ತೋರುತ್ತದೆ. ನಾನೂ ಒಬ್ಬನು ಸಂಘದ ಕಮಿಟಿಯಲ್ಲಿ ಮೊದಲಿನಿಂದ ಇಂದಿನವರೆಗೆ ಸದಸ್ಯನಿದ್ದೇನೆ.

ಅಮಾನುಷರಾದ 'ಆಗ್ಪು'ಗಳು

★

ಅ ರ್ಥಾ ತ್

ರಶಿಯದ ಗುಪ್ತಚರಸೈನಿಕರು

ಜಾರ್‌ಮನೆಯ 'ತಂತ್ರಿ' ಬರೆದುದು

ಬಲದಿಂದ ಆಳುವ ಆಡಳಿತಕ್ಕೆ ಕ್ರೌರ್ಯದ ನೆರವು ಅವಶ್ಯವಾಗಿ ಬೇಕು. ಸರ್ಕಸಿನಲ್ಲಿಯ ಪ್ರಾಣಿಗಳನ್ನು ಆಳುವ '<u>ರಿಂಗಮಾಸ್ಟರು</u>' ಏಟಿನ ಭೀತಿಯಿಂದ ಹುಲಿ-ಸಿಂಹಗಳನ್ನೂ ಅಧೀನದಲ್ಲಿ ಇಟ್ಟುಕೊಂಡಿರುವನು. ಇಂದು ರಶಿಯವನ್ನು ಬಲದಿಂದಲೆ ಆಳುವ ಬೋಲ್‌ಶೆವಿಕರಿಗೆ 'ಆಗ್ಪು'ಗಳ ಅಮಾನುಷ-ವೃತ್ತಿಯೆ ಆಧಾರವಾಗಿದೆ.

ಕಲಿಯುಗದ ಕಬ್ಬಿಣಮೂರುತಿ ಸ್ಟ್ಯಾಲಿನ್

★

ಜರ್ಮನಿ, ರಶಿಯ ಮತ್ತು ಇಟಲಿ ದೇಶಗಳಲ್ಲಿಯ ಗುಪ್ತ-ಪೋಲೀಸರ ವಿಷಯ ನಾವು ಕೇಳಿಬಲ್ಲೆವಾದರೂ, ಅವರ ಕಾರ್ಯ-ವ್ಯಾಪ್ತಿಯ ಬಗೆಗೆ ಸಾಕಷ್ಟು ತಿಳಿದವರಾಗಿಲ್ಲ. ಕೆಲವು ದಿನಗಳ ಹಿಂದೆ ಜರ್ಮನಿಯ ಗುಪ್ತದಳದ—ಗೆಸ್ಟಪೋದಳದ ಬಗೆಗೆ ವಿಶದ ವಿಚಾರ ಮಾಡಲಾಗಿದೆ. ಈಗ ರಶಿಯದ ಗುಪ್ತಚಾರರಾದ ಆಗ್ಪುಗಳ ಬಗೆಗೆ ಕೆಲವು ಮಾತುಗಳನ್ನು ವಿವರಿಸಬೇಕೆಂದಿರುವೆವು. ಹಾಗೆ ನೋಡಿದರೆ ಗೆಸ್ಟಪೋದಳವು ಆಗ್ಪು ಪದ್ಧತಿಯನ್ನೇ ಅನುಸರಿಸಿದೆ. ಆಗ್ಪುದವರೇ ಅವರಿಗೆ ಮಾದರಿ; ಹೀಗಿದ್ದು ಮೊದಲು ಗೆಸ್ಟಪೋದ ಬಗೆಗೆ ವಿಚಾರಮಾಡಿ, ಆಮೇಲೆ ಆಗ್ಪುಗಳ ಬಗೆಗೆ ತಿಳಿಯುವುದು ಕಾಲಾನುಕ್ರಮದಲ್ಲಿ ವ್ಯತ್ಯಾಸ ಕಂಡುಬರಬಹುದು. 'ಫಿನ್‌ಲಂಡಕ್ಕೆ ಆಗ್ಪುದಳವೊಂದು ಹೋಯಿತು. ಪ್ರೇಗ್ ಪಟ್ಟಣಕ್ಕೆ ಗೆಸ್ಟಪೋದವರ ದಾಳಿಯಾಯಿತು' ಎಂದು ಪತ್ರಿಕೆಗಳಲ್ಲಿ ನೋಡಿರಬಹುದು. ಈ ಆಗ್ಪುಗಳೆಂದರೆ ಯಾರು ?

ಆಗ್ಪು ಮತ್ತು ಗೆಸ್ಟಪೋ ದಳಗಳನ್ನೂ ಅವುಗಳ ಕಾರ್ಯವನ್ನೂ ತಿಳಿಯುವುದೆಂದರೆ ಪರ್ಯಾಯವಾಗಿ ಆ ಆ ದೇಶಗಳ ರಾಜಕಾರಣವನ್ನು ತಿಳಿದಂತೆಯೆ ಸರಿ. ಗೆಸ್ಟಪೋದವರಂತೆ ಆಗ್ಪುಗಳೂ ಗುಪ್ತ-ಚಾರರೆಂದೇ ಎಲ್ಲ ಕಡೆಯಲ್ಲಿಯೂ ಧ್ವನಿತವಾಗಿದೆ. ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿಯೂ ಈ ತೆರದ ವ್ಯವಸ್ಥೆ ಕಂಡುಬರುವುದು. ಇಟಲಿಯಲ್ಲಿ ಓವ್ರಾ ಜನರು, ಇಂಗ್ಲಂಡಿನಲ್ಲಿ ಸ್ಕಾಟಲಂಡ್ ಯಾರ್ಡ್‌ನವರು ಅಮೇರಿಕೆಯಲ್ಲಿ ಮೆಟ್ರೊಪೊಲಿಟನ್ ಪೋಲೀಸಿನವರು ಕಾರ್ಯಮಾಡುತ್ತಿದ್ದಾರೆ. ದೇಶವೆಂದ ಮೇಲೆ ಅನೇಕ ಮತ-ಪಂಥಾನುಯಾಯಿಗಳೂ ಪಕ್ಷ-ಪಂಗಡದವರೂ ಇರುವರು. ಸರಕಾರದಲ್ಲಿ ಒಂದು ಪಕ್ಷದವರು ಮನ್ನಣೆ ಪಡೆದು ಅಧಿಕಾರ ಹೊಂದಿ ಕಾರ್ಯಮಾಡತೊಡಗಿದರೆ, ಇನ್ನೊಂದು ಪಕ್ಷದವರಿಗೆ ಇವರ ಕಾರ್ಯಕ್ರಮವು ಸರಿಯೆನಿಸುವುದೂ ಇಲ್ಲ; ಸಹನೀಯವೂ ಎನಿಸುವುದಿಲ್ಲ. ಇಂತಹ ಅಸಂತುಷ್ಟ ಜನರು, ಇದ್ದ ಕಾರ್ಯ-ಕ್ರಮಕ್ಕೆ ವಿರುದ್ಧವಾಗಿ ಒಳಗಿಂದೊಳಗೆಯೆ ಕುದಿದು ಅಪಪ್ರಚಾರ ಮಾಡಬಹುದು. ದೇಶಹಿತದ ದೃಷ್ಟಿಯಿಂದ ಅಂತಹ ಅಪಪ್ರಚಾರವು ಒಮ್ಮೊಮ್ಮೆ ಯೋಗ್ಯವೆನಿಸಲಾರದು. ಬಹಿರಂಗವಾಗಿ ನಡೆಯದೆ ಇದ್ದ ಒಳಚಳವಳಿಗಳನ್ನು ತಿಳಿದುಕೊಂಡು, ಒಯ್ಯಲಿಗೆಳೆಯುವುದೇ ಗುಪ್ತಚಾರದಳದ ಪ್ರಧಾನ ಕಾರ್ಯ. ಆ ಆ ದೇಶಗಳಲ್ಲಿ ಅವರ ಕಾರ್ಯದ ವ್ಯಾಪ್ತಿ-ರೀತಿಗಳು ಹೆಚ್ಚು ಕಡಿಮೆ ಒಂದೇ ತೆರನಾಗಿ ಇದ್ದರೂ, ಕೆಲವು ಕಡೆಗಳಲ್ಲಿ ರಾಜಕಾರಣಕ್ಕೇ ಹೆಚ್ಚು ಸಂಬಂಧಿಸಿದುವಾಗಿರುವುದರಿಂದ ಅವರು ಹೆಚ್ಚು ಪ್ರಭಾವವುಳ್ಳವರಾಗಿದ್ದಾರೆ.

ಆಗ್ಪು ಶಬ್ದವಾದರೂ ಗೆಸ್ಟಪೋದಂತೆ ಒಂದು ದೊಡ್ಡ ಹೆಸರಿನ ಮೊದಲಕ್ಷರಗಳಿಂದ ಕೂಡಿ ಆದುದು. "ಓಡೀಲ್ ಗಸೂದಾರ್-ಸ್ತ್ವೆನೋ ಪೋಲಿಟಿಶಕೆಹೋ ಉಪ್ರಾವ್‌ಲೆನಿಯಾ" ಎಂದರೆ 'ಸರಕಾರದ ರಾಜಕೀಯ ನಿಯಂತ್ರಣ ಸಂಸ್ಥೆ' ಎಂದರ್ಥ ಕನ್ನಡದಲ್ಲಿ.

ಗೆಸ್ಟಪೋದವರು ಸಾಮಾನ್ಯತಃ ರಾಜಕಾರಣಕ್ಕೆ ಅಷ್ಟು ಸಂಬಂಧ ಪಟ್ಟವರಾಗಿ ಇರದೆ ಇದ್ದರೂ, ಅವರು ಆಗ್ಪುದವರನ್ನೇ ಮಾದರಿಯಾಗಿಟ್ಟುಕೊಂಡಿರುವರು. ಗೆಸ್ಟಪೋ ಎಂದರೆ ಆಗ್ಪುದ ಪ್ರತಿಬಿಂಬ. ಆಗ್ಪುದವರನ್ನು ಹೆಚ್ಚಾಗಿ ತಿಳಿಯಬೇಕಾದರೆ, ಆ ಸಂಸ್ಥೆಯ ಇತಿಹಾಸವನ್ನು ನೋಡುವುದು ಅಗತ್ಯ.

೧೯ ನೆಯ ಶತಮಾನದಲ್ಲಿ ರಶಿಯದಲ್ಲಿ ಕ್ರಾಂತಿಕಾರಕ ಚಳವಳಿಗಳು ಬೆಳೆದುವು. ಅವು ಒಮ್ಮೊಮ್ಮೆ ಹಿಂಸಾತ್ಮಕ ಸ್ವರೂಪವನ್ನು ತಾಳಿ, ಸಮ್ರಾಟನಾದ ಝಾರನನ್ನೂ ಉಚ್ಚವರ್ಣೀಯ ಜನರನ್ನೂ ಕೊಲೆಮಾಡತೊಡಗಿದುವು. ಆ ಚಳವಳಿಯ ಕಾರ್ಯವನ್ನು ತಡೆಯಲು ಯತ್ನಿಸಲೆಂದು ವಿಶಿಷ್ಟವಾದ ಗುಪ್ತರಕ್ಷಣಕಾರರ ಸಂಸ್ಥೆಯೊಂದು ಏರ್ಪಟ್ಟು, ಅವರು ಅರಸುಮನೆತನದವರನ್ನೂ ರಾಜ್ಯದ ಹಿರಿಯರನ್ನೂ ರಕ್ಷಣೆಮಾಡತೊಡಗಿದರು. ಆ ಗುಪ್ತ-ರಕ್ಷಕರು ಮೊದಲು ' ಓಕ್ರಾನಾ ' ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದರು. ಕ್ರಾಂತಿಯ ಚಳವಳಿಗಳು ಹೆಚ್ಚುತ್ತ ಹೋದ ಹಾಗೆ 'ಓಕ್ರಾನಾ' ಸಂಸ್ಥೆಯು ಬಲಹೊಂದಿತಲ್ಲದೆ, ಯುರೋಪದ ಮೂಲೆ ಮೂಲೆಗಳಲ್ಲಿಯೂ ಅದು ಹಬ್ಬಿತು ರಾಜ್ಯಗಳಲ್ಲಿ ಚಳವಳಿ ಪ್ರಾರಂಭಿಸಬಹುದೆಂದು, ದೇಶಭ್ರಷ್ಟರಾದ ಬೇರೆ ಬೇರೆಯ ಜನರ ಮೇಲೆ ಕಣ್ಣಿಡುವುದೂ ಅವರ ಕಾರ್ಯಕಲಾಪಗಳನ್ನು ತಿಳಿಯುವುದೂ ' ಓಕ್ರಾನಾ ' ಸಂಸ್ಥೆಯ ಮುಖ್ಯ ಕರ್ತವ್ಯವಾಯಿತು.

ಎಷ್ಟೋ ವರ್ಷಗಳವರೆಗೆ ರಶಿಯದ ಕ್ರಾಂತಿಕಾರರು ಮತ್ತು ಓಕ್ರಾನಾ ಸಂಸ್ಥೆಯವರು -ಒಬ್ಬರ ಮೇಲೊಬ್ಬರು ಒಳಸಂಚು ಮಾಡುವ ಹವಣಿಕೆಯಲ್ಲಿದ್ದರು. ಅನೇಕ ವೇಳೆ ಅವರಲ್ಲಿ ಕಿರು-ಕುಳಗಳಾದುದುಂಟು. ೧೯೧೭ರಲ್ಲಿ ರಶಿಯದಲ್ಲಿ ಆದ ರಾಜ್ಯ-ಕ್ರಾಂತಿಯ ಮೂಲಕ, ಝಾರನ ಅವನತಿಯಾಗಿ ರಾಜಕೀಯ ದೇಶತ್ಯಾಗಿಗಳು ರಶಿಯಕ್ಕೆ ಹಿಂದಿರುಗಿ ಬಂದರು; ಅಲ್ಲದೆ ಬಹುಸಂಖ್ಯಾಕರಾದ ಬೊಲ್‌ಶೆವಿಕರು ಹಿಂಸಾತ್ಮಕವಾದ ಸಾಧನೆಗಳನ್ನು ಕೈಕೊಂಡವರಾದುದರಿಂದ, ಇದ್ದ ಸರಕಾರವನ್ನು ಬದಿಗೊತ್ತಿ ತಾವೇ ಮೇಲುಬಿದ್ದು ಮುಂದುವರಿದರು. ' ಸೋವಿಯೆಟ್ ' ಎಂದು ಹೆಸರು ಪಡೆದ ಹೊಸ ಸರಕಾರ ತಲೆದೋರಿ, ಅದಕ್ಕೆ ಝಾರಸಮ್ರಾಟನಂತೆಯೆ ಪ್ರತಿಪಕ್ಷಿಗಳ ಬಲವನ್ನು ಕುಗ್ಗಿಸುವುದಕ್ಕಾಗಿಯೂ ತಮ್ಮ ಪ್ರಭಾವವನ್ನು ಬೀರುವುದಕ್ಕಾಗಿಯೂ ಉಳಿದ ಕ್ರಾಂತಿಯನ್ನು ಹತ್ತಿಕ್ಕುವುದಕ್ಕಾಗಿಯೂ ಒಂದು ಸಂಸ್ಥೆಯ ಆವಶ್ಯಕತೆಯೆನಿಸಿತು. ಇಷ್ಟು ದಿನಗಳವರೆಗೆ ಅನೇಕ ಅಸಹ್ಯವೇದನೆಯ ಅನುಭವವನ್ನು ಪಡೆದ ರಶಿಯದಲ್ಲಿ, ಪ್ರಚಲಿತವಿದ್ದ ' ಓಕ್ರಾನಾ ' ಸಂಸ್ಥೆಯನ್ನೇ ಪುನಃ ಸ್ಥಾಪಿಸುವುದರಲ್ಲಿ ಅಸಹಜವಾದುದೇನು ? ಬಹಿರಂಗವಾಗಿ ಸರಕಾರದ ಟೀಕೆಯನ್ನು ತಡೆಯುವುದಕ್ಕೆ ಅಪಪ್ರಚಾರವನ್ನು ತಡೆಯುವುದಕ್ಕೆ ಒಂದು ಸಂಸ್ಥೆಯು ಏರ್ಪಟ್ಟಿತು. ಅದರ ಉದ್ದೇಶ, ಕಾರ್ಯ ಮೊದಲಿನಂತೆಯೇ ಇದ್ದರೂ ಹೆಸರು ಮಾತ್ರ ಬದಲಾಯಿತು. " ಚೇಕಾ " ಸಂಸ್ಥೆಯೇ ಈ ಹೊಸ ಹೆಸರಿನದು. ಪ್ರತಿಕ್ರಾಂತಿಯನ್ನು ತಡೆಯಲು ಹೆಣಗುವ ವಿಶೇಷಸಂಸ್ಥೆ ಎಂಬ ಅರ್ಥವುಳ್ಳ ಶಬ್ದದ ಸಣ್ಣಸ್ವರೂಪವೇ " ಚೇಕಾ ". ' ಓಕ್ರಾನಾ ' ಸಂಸ್ಥೆಗೂ ' ಚೇಕಾ ' ಸಂಸ್ಥೆಗೂ ವ್ಯತ್ಯಾಸವೆಂದರೆ ಚೇಕಾದವರು ಹೆಚ್ಚು ಕ್ರೂರರು; ಹೆಚ್ಚು ಭಯಂಕರರು. ಏಕೆಂದರೆ ಪರದೇಶ-ಪರಪ್ರಾಂತಗಳಲ್ಲಿ ' ಓಕ್ರಾನಾ ' ಸಂಸ್ಥೆಯವರನ್ನು ತಪ್ಪಿಸಿ, ತಮ್ಮ ಜೀವನವನ್ನು ಸಾಗಿಸುವುದರಲ್ಲಿ ಅನುಭವಿಸಿದ ಕಷ್ಟ-ನಷ್ಟಗಳು, ಅವರನ್ನು ಕ್ರೂರರೀತಿಯಿಂದ ಪ್ರತಿಭಟಿಸುವಂತೆ ಮಾಡಿದುವು. ಓಕ್ರಾನಾ ಸಂಸ್ಥೆಯ ಕುಂದು-ಕೊರತೆಗಳನ್ನು ಅರಿತುಕೊಂಡು, ಚೇಕಾದವರು ತಮ್ಮ ಸಂಸ್ಥೆಯನ್ನು ಹೆಚ್ಚು ಯಶಸ್ವಿಯಾಗಿ ಮಾಡಿದರು. ಆದುದರಿಂದಲೆ ಅದು ಜಗತ್ತಿನಲ್ಲಿ ಹಿಂದೆ ಎಂದೂ ಆಗದೆ ಇದ್ದಂತಹ ಭಯಂಕರವಾದ ಕ್ರೂರವಾದ ಬಲವಾದ ಸಂಸ್ಥೆಯಾಗಿ ಪರಿಣಮಿಸಿತು.

೧೯೨೬ರಲ್ಲಿ ಈ ಸಂಸ್ಥೆಯ ಮುಖ್ಯಸ್ಥನಾದ ಝೆರಝಿಂಸ್ಕಿಯು ಚಮತ್ಕಾರಿಕ ಪರಿಸ್ಥಿತಿಯಲ್ಲಿ ಸತ್ತನು. ಅವನು ಬಹಳ ಪ್ರಭಾವಶಾಲಿಯಾಗುತ್ತಿರುವನೆಂದು ತಿಳಿದು, ಕಮ್ಯೂನಿಸ್ಟ ಪಕ್ಷದ ಕೆಲವು ಮುಂದಾಳುಗಳು ಕೂಡಿ ಅವನಿಗೆ ವಿಷಪ್ರಯೋಗಮಾಡಿರಬಹುದೆಂದು ಹಲವರ ನಂಬಿಕೆಯಿದೆ. ಅದೇ ಕಾಲಕ್ಕೆ ' ಚೇಕಾ ' ಸಂಸ್ಥೆಯನ್ನು ಪುನಃ ಮಾರ್ಪಡಿಸಿ ಹೊಸ ಹೆಸರನ್ನಿಟ್ಟರು. ಅದುವೇ ಸರಕಾರದ ರಾಜಕೀಯ ನಿಯಂತ್ರಣ ಸಂಸ್ಥೆ—ಎಂದರೆ ನಾವು ಇಂದು ತಿಳಿದ ' ಆಗ್ಪು '.

ಈಗಿನ 'ಆಗ್ಪು' ಮತ್ತು ನಾಝಿ 'ಗೆಸ್ಟಪೋ' ಇವು ಆ ಮೊದಲಿನ ಓಕ್ರಾನಾದ ಪ್ರತಿಬಿಂಬಗಳಾಗಿವೆ. ಇವು ಗುಪ್ತಚಾರ ದಳಗಳಾಗಿದ್ದರೂ, ಸ್ಕಾಟಲಂಡ್‌ಯಾರ್ಡನವರಿಗೂ ಮೆಟ್ರಾಪೊಲ್ಟನ್ ಪೋಲೀಸಿನವರಿಗೂ ಯಾವುದೇ ರೀತಿಯಿಂದ ರೂಪದಲ್ಲಾಗಲಿ ಕಾರ್ಯದಲ್ಲಾಗಲಿ ಹೊಂದುಗೂಡುವುದಿಲ್ಲವೆಂಬುದನ್ನು ತಿಳಿಯಬಹುದಾಗಿದೆ. ಏಕೆಂದರೆ ಕೇವಲ ಗುಪ್ತಚಾರ ಕೆಲಸವನ್ನು ಮಾಡುವುದಲ್ಲದೆ,ಯುದ್ಧರಂಗದ ಮುಂಭಾಗದಲ್ಲಿ ನಿಂತು ಹೋರಾಟ ಮಾಡುವುದನ್ನೂ ಈ ' ಆಗ್ಪು ' ಮತ್ತು ' ಗೆಸ್ಟಪೋ ' ದಳಗಳು ಮಾಡುವುವು. ರಶಿಯವನ್ನೇ ಉದಾಹರಣೆಗಾಗಿ ತೆಗೆದುಕೊಳ್ಳುವ! ರಶಿಯದಲ್ಲಿ ಅನೇಕರಿಗೆ ಬೋಲ್‌ಶೆವಿಕ್ ತತ್ತ್ವಜ್ಞಾನವು ಸರಿದೋರಿಲ್ಲ. ಆ ಸರಕಾರದಿಂದ ಉಂಟಾದ ಚಿಕ್ಕ ಪುಟ್ಟ ಸುಧಾರಣೆಗಳಿಗೆ ಸಮ್ಮತಿಯನ್ನಿತ್ತಿರಬಹುದು. ಆದರೆ ತತ್ತ್ವತಃ ರಶಿಯದಲ್ಲಿ ಒಂದೇ ಧ್ವನಿ, ಇಲ್ಲ. ಆಂತರಿಕ ವ್ಯವಸ್ಥೆಯಲ್ಲಿಯೂ ಬಹಿರಂಗದ ನೀತಿಯಲ್ಲಿಯೂ ರಶಿಯದ ಕಮ್ಯೂನಿಸ್ಟ ಪಕ್ಷದವರು ಸಮನಾಗಿ ಇದ್ದುದು ಕಾಣಬರುವುದಿಲ್ಲ. ಅಲ್ಲಲ್ಲಿ ವ್ಯತ್ಯಾಸ ಬಹಳ ಇದೆ. ರಶಿಯದ ಸಾಮಾನ್ಯ ಜನತೆಗೆ, ಬೋಲ್‌ಶೆವಿಕರ ಅತಿಕ್ರಮಣದ ಪ್ರವೃತ್ತಿಯಿಂದ ಉಂಟಾದ ಜಾಗತಿಕ ಕ್ರಾಂತಿಯ ಹಂಚಿಕೆಯಲ್ಲಿ--ನಿಜವಾಗಿ ನೋಡಿದರೆ— ಏನೂ ಮನಸ್ಸಿಲ್ಲ. ಆದುದರಿಂದಲೆ ರಶಿಯದ ಯುದ್ಧನೀತಿಯಲ್ಲಿ ತಿಳಿಯಲಾರದಂತಹ ವಿಷಮತೆಯು ಕಂಡುಬರುವುದು. ರಶಿಯನ್ ಸೈನಿಕರು ಸ್ವದೇಶ-ರಕ್ಷಣಕ್ಕಾಗಿ ಹೋರಾಡುತ್ತಿದ್ದರೆ ತುಂಬ ಶೂರತನದಿಂದ ಸ್ಥೈರ್ಯದಿಂದ ಕಾದಬಹುದಾಗಿದೆ. ಆದರೆ ಅದನ್ನು ಬಿಟ್ಟು ಅತಿಕ್ರಮಣ ಪ್ರವೃತ್ತಿಯುಳ್ಳವರಾದರೆ— ಎಲ್ಲ ರಶಿಯನರಿಗೂ ಆ ಪ್ರವೃತ್ತಿ ಇರದಿರುವುದರಿಂದ—ಅಲ್ಲಲ್ಲಿ ಸಡಿಲುಬೀಳುವ ಸಂಭವವಿದೆ. ಎಂತಲೆ

ಅಲ್ಲಿಯ ಮುತ್ಸದ್ದಿಗಳು, ಯುದ್ಧದಲ್ಲಿಯ ನೀತಿಯೂ ಕೀಳಾಗಲಿಕ್ಕೆ ಹತ್ತಿರುವುದೆಂಬುದನ್ನು ಸಮರ್ಥಿಸುತ್ತಲಿದ್ದಾರೆ. ಇದು ಇಂದಿನ ಮಾತು. ಆದರೆ ಆ ಹಳೆಯ ಕಾಲದ ರಶಿಯದಲ್ಲಿ 'ಪ್ರತಿಯೊಬ್ಬನೂ ತಾನು ಹೋರಾಡುವುದು ದೇವರಿಗಾಗಿ, ದೇವನಿಯೋಜಿತ ಝಾರನಿಗಾಗಿ' ಎಂದು ತಿಳಿದಾಗ ಆ ವಿಷಯವೇ ಬೇರೆಯಾಗಿತ್ತು.

ಇಂದಿನ ರಶಿಯದಲ್ಲಿ ದೇವರಿಗೆ ಸ್ಥಾನವಿಲ್ಲ. ಝಾರನನ್ನು ಕತ್ತು ಹಿಸುಕಿದ್ದಾರೆ. ಅವುಗಳ ಬದಲು ಕಾರ್ಲ್‌ಮಾರ್ಕ್ಸನ ತತ್ತ್ವವು ನೆಲೆಗೊಂಡಿದೆ. ಜಗತ್ತಿನಲ್ಲಿ ತಮಗಿಂತ ಹಿರಿಯರೂ ತಿಳಿದವರೂ ಅಧಿದೇವತೆಯೂ ಬೇರೊಂದಿಲ್ಲವೆಂದು ತಿಳಿದಿರುವುದರಿಂದ, ಯುದ್ಧರಂಗದಲ್ಲಿ ಯಾವರೀತಿಯ ಹೀನಕೃತ್ಯವನ್ನು ಮಾಡಲಿಕ್ಕೂ ಅಲ್ಲಿಯ ಜನರು ಹೇಸದವರಾಗಿದ್ದಾರೆ. ಫಿನ್‌ಲಂಡಿನಲ್ಲಿ ನಡೆದ ಉಪಟಳವು ಇದಕ್ಕೆ ಸಾಕ್ಷಿಯಾಗಿದೆ. ಸೈನ್ಯದಲ್ಲಿ ಹುರುಪು ತುಂಬುವುದಕ್ಕಾಗಿ, ಹೊಸ ಚೈತನ್ಯವನ್ನು ಬೀರುವುದಕ್ಕಾಗಿ, ಪ್ರತಿಯೊಂದು ವಿಭಾಗವೂ— ಸಿದ್ಧರಾದ ಸಜ್ಜಾದ— 'ಆಗ್ಪು' ಜನದಿಂದ ತುಂಬಲ್ಪಟ್ಟಿದೆ. ಇವರು ಈಗಿನ ಸರಕಾರದಲ್ಲಿ ಅಚಲವಾದ ಶ್ರದ್ಧೆಯನ್ನಿಟ್ಟವರೂ ಬೊಲ್‌ಶೆವಿಕ್ ತತ್ತ್ವಜ್ಞಾನದ ತಲೆತಿರುಕರೂ ಆಗಿದ್ದಾರೆ.

ಇವರ ಸಿದ್ಧತೆಯು ಅಸಾಧಾರಣವಾಗಿದೆ. ಸಂಬಳವು ಮೇರೆ ಮೀರಿದೆ. ವಿಶಿಷ್ಟ ಅಧಿಕಾರ ಇವರಿಗಿದೆ. ಮತ್ತು ಈ ಸರಕಾರದ ಬದಲು ಇನ್ನೊಂದು ಪಕ್ಷದವರು ಯಾರು ಅಧಿಕಾರವನ್ನು ಪಡೆದರೂ ತಮ್ಮನ್ನು ನರಕಯಾತನೆಗೆ ಸಿಲುಕಿಸಬಹುದೆಂಬ ಅರಿವು ಇವರಿಗಿದೆ. ಈ ಆಗ್ಪು ಘಟಕಗಳು ಸೈನ್ಯದ ಮುಂಭಾಗದಲ್ಲಿದ್ದು, ಅಲ್ಲಲ್ಲಿ ಸೈನಿಕರ ಪ್ರವೃತ್ತಿಯನ್ನು ಕಂಡು ಹಿಡಿದು, ಕಾರ್ಯನಿವೃತ್ತರಾಗದಂತೆ ಎಚ್ಚರಿಸುವರು. ಇದು ಇವರ ಆದ್ಯ ಕರ್ತವ್ಯವಾಗಿದೆ. ಸೈನ್ಯವನ್ನೆಚ್ಚರಿಸುವುದೆಂದಮೇಲೆ ಅಲ್ಲಿ ಏನಾದರೂ ಸಡಿಲು ತಲೆದೋರಿರಬೇಕಲ್ಲವೆ ?

ಜರ್ಮನಿಯಲ್ಲಾದರೂ ಇಂತಹದೆ ಪರಿಸ್ಥಿತಿ ಉದ್ಭೂತವಾಗಿದೆ. ಆಸ್ಟ್ರಿಯವನ್ನು ಕಸಿದುಕೊಂಡ ನಂತರ, ಝೆಕೋಸ್ಲೋವಾಕಿಯಾವನ್ನು ಜರ್ಮನ್ ರೀಷದಲ್ಲಿ ಹೊಂದಿಸಿಕೊಂಡ ನಂತರ, ಆ ಬೃಹದ್ ರೀಷದಲ್ಲಿ ಅನೇಕ ಪರಕೀಯ ಘಟಕಗಳು ಬಂದುವು. ಅವುಗಳಲ್ಲಿ ಕ್ರಾಂತಿ ತಲೆದೋರದಂತೆ ಹತ್ತಿಕ್ಕಿ ಇಡುವುದೇ ರಾಜನಿಷ್ಠ ತತ್ತ್ವನಿಷ್ಠ ಜನತೆಯ ಕಾರ್ಯವಾಯಿತು. ಹಾಗೆ ಮಾಡುವಲ್ಲಿ ಸಾಧನವು ಯಾವಾಗಲೂ ಒಳ್ಳೆಯದೇ ಇರಬೇಕೆಂದು ಅಲ್ಲ; ಅದಕ್ಕಾಗಿ ಆ ಕಾರ್ಯವ್ಯವಹಾರವನ್ನು ಆರಿಸಬೇಕಾದಾಗ ತತ್ತ್ವಕ್ಕಾಗಿ ತಲೆತಿರುಗಿದವರನ್ನೇ ಆರಿಸುತ್ತಾರೆ.

ಜರ್ಮನಿಯವರು ತಮ್ಮ ಸರಕಾರದ ಪ್ರಭಾವವನ್ನು ಜನತೆಯ ಮೇಲೆ ಅಚ್ಚಳಿಯದ ಹಾಗೆ ಉಳಿಸಬೇಕೆಂದು, ಗೆಸ್ಟಪೋದವರನ್ನು ಅಲ್ಲಲ್ಲಿ ಹರಡಿದ್ದಾರೆ. ಬೊಲ್‌ಶೆವಿಕ್ ತತ್ತ್ವಜ್ಞಾನದ ವಿರುದ್ಧ ಯಾರೂ ತಲೆಯೆತ್ತಕೂಡದೆಂದು ರಶಿಯನ್ ಸರಕಾರದವರು ಆಗ್ಪು ಸಂಸ್ಥೆಯನ್ನು ನಿರ್ಮಿಸಿದ್ದಾರೆ. ಇಂದು ಹಿಟ್ಲರನಿಗೆ ಜರ್ಮನ್ ಸಾಮ್ರಾಜ್ಯವನ್ನು ಕಟ್ಟಬೇಕೆಂಬ ಹಿರಿಯಾಸೆ ಇದ್ದರೆ, ಜಗತ್ತಿನಲ್ಲಿಯೆ ಸಂಘವಾದವನ್ನು ಪ್ರಚಾರಮಾಡಿಕೊಳ್ಳಬೇಕೆಂಬ ಹೆಗ್ಗುರಿಯು ಸ್ಟಾಲಿನ್‌ನದಾಗಿದೆ. ಇಬ್ಬರೂ ತಂತಮ್ಮ ಧ್ಯೇಯಕ್ಕಾಗಿ ತಮ್ಮ ಬಲವನ್ನು ಸಂಚಯಮಾಡಿದರೆ, ಯಾವ ಒಂದು ಗುಪ್ತಸಂಸ್ಥೆಯೂ ನಿಜವಾದ ಕಾರ್ಯಮಾಡಬಹುದು ? ಇದು ಈ ಎರಡು ದೇಶಗಳ ವಿಷಯವಾಯಿತು. ಇಟಲಿಯವರೂ ತಮಗೆ ವಿರೋಧಿಗಳಾಗಿ ಯಾರೂ ನಿಲ್ಲಬಾರದೆಂದು ಒಂದು ಗುಪ್ತಸಂಸ್ಥೆಯನ್ನು ಏರ್ಪಡಿಸಿದ್ದಾರೆ. ಜಗತ್ತಿನಲ್ಲಿ ತಾವೇ ಏಕಮೇವಾದ್ವಿತೀಯರಾಗಿ ಮೆರೆಯಬೇಕೆಂದು ಇಂದು ಅಲ್ಲಿ ಪ್ರತಿಯೊಬ್ಬನ ಲಾಲಸೆಯಾಗಿದೆ. ಎಂತಲೆ ಅವರವರ ಸಾಧನೆಗಳಲ್ಲಿ ವ್ಯತ್ಯಾಸ ಕಾಣಬರುತ್ತದೆ. ಕೆಲವರು ಸಾಮ್ರಾಜ್ಯವಾದವನ್ನು ಹರಡುತ್ತಿದ್ದರೆ ಹಲವರು ರಾಷ್ಟ್ರೀಯ ಸಾಮ್ಯವಾದವನ್ನು ಬಿತ್ತುತ್ತಿದ್ದಾರೆ. ಒಂದುಕಡೆ ಸಂಘವಾದವೇ ಮೇಲು ಎಂದು ಕೈ ಎತ್ತಿದರೆ ಮತ್ತೊಂದೆಡೆ ಪ್ರಜಾಧಿಪತ್ಯವೇ ಪ್ರಮಾಣವೆಂದು ಸಾರುತ್ತಿದ್ದಾರೆ. ಮಾನವ ಜನತೆಯು ನಾಗರಿಕತೆಯ ಮೆಟ್ಟಿಲನ್ನು ಏರುತ್ತಿದ್ದರೂ ಎಲ್ಲರೂ ಒಂದೇ ಮಟ್ಟದಲ್ಲಿ ಇಲ್ಲ. ಧ್ಯೇಯ ಒಂದೇ ಆಗಬಹುದು; ಆದರೆ ಒಮ್ಮೊಮ್ಮೆ ಧ್ಯೇಯವು ಒಂದೇ ಆಗಿದ್ದರೂ ಸಾಧನವು ಬದಲಾಗುವುದು.

(ಹಿಂದಿನ ಪುಟದಿಂದ ಮುಂದುವರಿದುದು)

ಸಾಹಿತ್ಯಪರಿಷತ್ತಿನ ಪರಿಸ್ಥಿತಿ ತೀರ ಚಿಂತೆಗೀಡಾಗಿದೆ. ಮಿಕ್ಕ ಪರಿಷತ್ತುಗಳು ಸಂಪೂರ್ಣವಾಗಿ ಜನತೆಯ ಕೈಯಲ್ಲಿವೆ. ನಮ್ಮ ಪರಿಷತ್ತು ಜನತೆಯ ಕೈಯಲ್ಲಿಯೆ ಇದ್ದರೂ, ಕೊರಳಿಗೊಂದು ಕಾಣದಂತಹ ಪಾಶವಿದೆ. ಕನ್ನಡ ಜನರು ಕಣ್ಣು ತೆರೆದು, ತಾವೆ ಪೋಷಕರಾಗಿನಿಂತು ಪಾಶವನ್ನು ಕತ್ತರಿಸಿದರೆ, ಪರಿಷತ್ತಿಗೆ ಸ್ವತಂತ್ರವೃತ್ತಿಯಿಂದ ವಿಶೇಷಕಾರ್ಯಮಾಡಲು ಅನುಕೂಲವಾಗುವುದು. ಇಂದು ಪರಿಷತ್ತಿನ ಸಮ್ಮೇಲನಗಳಲ್ಲಾಗುವ ಬಿನಂತಿ-ವಿಜ್ಞಾಪನೆಗಳ ಗೊತ್ತುವಳಿಗಳನ್ನು ನೋಡಿದರೆ, ಕನ್ನಡದ ಮೇಲಾಗುವ ಆಘಾತವನ್ನು ನಿಷ್ಕರ ನಡೆ-ನುಡಿಗಳಿಂದ ತಡೆಯುವ ಪರಿಸ್ಥಿತಿ ಸಾಹಿತ್ಯಪರಿಷತ್ತಿಗಿಲ್ಲವೆಂಬ ಮಾತು ತಾನೆ ವ್ಯಕ್ತವಾಗುವುದು. ಇದೆಲ್ಲಕ್ಕೂ ಅದರ ಆರ್ಥಿಕಆಪತ್ತಿಯೊಂದೇ ದೊಡ್ಡ ಕಾರಣವಾಗಿದೆ. ಕನ್ನಡ ಜನತೆ ದೊಡ್ಡ ಮನಸ್ಸು ಮಾಡಿದರೆ, ಪರಿಷತ್ತಿನ ಮೇಲೆ ಹೊನ್ನಿನ ಮಳೆಯನ್ನೆ ಕರೆಯಬಹುದು ಬರಲಿರುವ ಬೆಳ್ಳಿಯ ಹಬ್ಬದ ಕಾಲದಲ್ಲಿ ಸೇರುವ ಕನ್ನಡಿಗರು ಇದರ ವಿಚಾರವನ್ನು ಚೆನ್ನಾಗಿ ಮಾಡಬೇಕು. ನಮ್ಮ ಕನ್ನಡ ಸಾಹಿತ್ಯ ಪರಿಷತ್ತು, ಸಹಾಯಕ್ಕಾಗಿ ರಾಜರು ಮಹಾರಾಜರುಗಳ ಬಳಿ ದೈನ್ಯದಿಂದ ಕೈಯೊಡ್ಡಿ ಹೋಗಕೂಡದು; ಅದರ ಕರ್ತೃತ್ವಶಕ್ತಿಯನ್ನು ಕಂಡು, ಅವರು ತಾವಾಗಿಯೆ ಬಂದು ಪರಿಷತ್ತಿಗೆ ಕಾಣಿಕೆ ಸಲ್ಲಿಸುವಂತೆ ಆಗಬೇಕು. ಹೀಗಾಗಬೇಕಾದರೆ ಕನ್ನಡಜನತೆಯಲ್ಲಿ ತನ್ನತನದ ಜಾಗೃತಿ ಬೇಕು. ನಾಡು-ನುಡಿಗಳ ಅಭಿಮಾನ ತೀವ್ರವಾದುದಾಗಬೇಕು. ಅದಿಲ್ಲದಿದ್ದರೆ ಬೆಳ್ಳಿಯ ಹಬ್ಬವಾದರೇನು, ಬಂಗಾರದ ಹಬ್ಬವಾದರೇನು ಎಲ್ಲವೂ ನೀರಲ್ಲಿ ಹೋಮಮಾಡಿದಂತೆ.

—ಸಂಪಾದಕರು.

ಕನಸಿನಲ್ಲಿ ಕಂಡ ಚಿತ್ರ

★

ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ, ಮೈಸೂರು

ನಡುರಾತ್ರಿ, ಜಗತ್ತು ನಿದ್ರೆಗಡಲಿನಲ್ಲಿ ಮುಳುಗಿ, ಮೈಮರೆತು ಮೌನವಾಗಿದ್ದಿತು. ಸ್ವಪ್ನಕಾಮಿನಿಯು ತನ್ನ ಮಂತ್ರದಂಡವನ್ನು (magic wand) ಎಲ್ಲರ ಮೇಲೆಯೂ ಆಡಿಸುತ್ತಾ ಪಹರೆ ಕೊಡುತ್ತಿದ್ದಳು.

ಮಾಯಾದಂಡದ ಮಹಾ ಪ್ರಭಾವ! ಸುಷುಪ್ತಿಯು ಸ್ವಪ್ನವಾಯಿತು. ಆಗ ಕಂಡ ಚಿತ್ರವಿದು:—

ರಾತ್ರಿಯ ಎಂಟುಗಂಟೆಯ ಸಮಯ. ನಾನು ಹಜಾರದಲ್ಲಿ ದಿಂಬೊರಗಿ ಕುಳಿತಿದ್ದೆ. ಭಿಕ್ಷಾನ್ನದ ಹುಡುಗನೊಬ್ಬನು ಸ್ವಲ್ಪ ಒರಟುದನಿಯಲ್ಲಿ 'ಭವತಿ ಭಿಕ್ಷಾಂ ದೇಹಿ' ಎನ್ನುತ್ತಾ ಬಂದು ಮುಚ್ಚಿದ್ದ ಬಾಗಿಲನ್ನು ದಬ್ಬಿದನು.

'ಇನ್ನೂ ಅಡಿಗೆಯಾಗಿಲ್ಲವಯ್ಯಾ, ಹೋಗಿ ಬಾ' ಅಧಿಕಾರಯುತ ಧೋರಣೆಯಲ್ಲಿ ನಾನು ಹೇಳಿದೆ.

'ಎಲ್ಲೂ ಸಿಕ್ಕಿಲ್ಲಾ ಸ್ವಾಮಿ' ಹುಡುಗನು ಮೊದಲಿನ ಒರಟು ದನಿಯಲ್ಲಿಯೇ ಆದರೂ ದೈನ್ಯವಾಗಿ ಮರುನುಡಿದನು.

'ಒಂದು ಸಾರಿ ಹೇಳಿದರೆ ತಿಳಿಯೋದಿಲ್ಲವೆ? ಅಧಿಕಪ್ರಸಂಗಿ, ಹಾಕುವುದಿಲ್ಲ, ನಡೆ!' ನಾನು ಸ್ವಲ್ಪ ರೇಗಿ ಹೇಳಿದೆ.

ಪಾಪ, ಆ ತರಳನ ಕರುಳು ಎಷ್ಟು ನೊಂದಿರಬಹುದೋ!

ಮತ್ತೆ ಆ ಹುಡುಗನ ಮಾರುತ್ತರ ಬರಲಿಲ್ಲ. ಎರಡು ಕ್ಷಣಗಳ ವರೆಗೆ ನೀರವ, ಮೌನ. ನಂತರ 'ಧಢ್ ಧಢ್ ಧಡಂ!'—ಬಿದ್ದ ಸದ್ದು; ಅಳುವಿನ ಬೊಬ್ಬೆ!

ನನಗೆ ಎದೆ 'ಝುಗ್' ಎಂದಿತು. ಹಜಾರದಿಂದ ಬಾಗಿಲಿಗೆ ಹೋದೆ. ನೋಡುತ್ತೇನೆ! ಪಾಪ, ಹುಡುಗನು ಮೆಟ್ಟಲಿಳಿಯುವಾಗ ಕಾಲುತಪ್ಪಿ ಬಿದ್ದುಬಿಟ್ಟಿದ್ದನು. ಬಟ್ಟಲಲ್ಲಿದ್ದ ಕೊಂಚ ಅನ್ನವೂ ಮಣ್ಣುಪಾಲಾಗಿದ್ದಿತು. ಕೈಕಾಲುಗಳು ತರಚಿ ರಕ್ತ ಹರಿಯುತ್ತಿತ್ತು. ಮೆಟ್ಟಿಲಿನ ಏಣಿಗೆ ಸಿಲುಕಿ, ಅವನು ನಡುವಿನ ಮೇಲೆ ಬಿಗಿದಿದ್ದ ಹಳೆಯ ತುಂಡೂ ಹರಿದುಹೋಗಿದ್ದಿತು. ತುಟಿ ಕಚ್ಚಿಕೊಂಡಿದ್ದುದರಿಂದ ಬಾಯಿಂದಲೂ ರಕ್ತವು ಸ್ರವಿಸುತ್ತಿತ್ತು.

ನಿರಾಶನಾಗಿ ನಿಸ್ಸಹಾಯನಾಗಿ ಹುಡುಗನು ಗೊಳೋ ಎಂದು ಬಿಕ್ಕಿ ಬಿಕ್ಕಿ ಅಳುತ್ತಾ ಎದ್ದು ನಿಂತುಕೊಂಡು ಮೈಕೈ ಕೊಡಹಿಕೊಳ್ಳುತ್ತಿದ್ದನು.

ನನಗೆ ಬೆಂಕಿಬಿದ್ದಹಾಗಾಯಿತು. ನನ್ನಿಂದಲ್ಲವೆ ಆ ಹುಡುಗನು ಈ ದುರವಸ್ಥೆಗೀಡಾದುದು? ಎಂತಹ ಪಾಪಿ ನಾನು! ನನ್ನ ನಿಷ್ಠುರವಾಣಿಯಿಂದ ಕಳವಳಚಿತ್ತನಾದುದರಿಂದಲ್ಲವೇ ಅವನಿಗೆ ಈ ಅವಸ್ಥೆ! ಹಾಯ್! ಹಾಯ್!

ಹೊರಗಿನಿಂದಲೇ ಮನೆಯವರನ್ನು ಕರೆದೆ; ಒಬ್ಬ ಆಳಿಗಾಗುವಷ್ಟು ಅನ್ನ-ಸಾರುಗಳನ್ನು ತೆಗೆದುಕೊಂಡು ಬನ್ನಿರೆಂದೆ. ತೆಗೆದುಕೊಂಡು ಬಂದರು. ಆದರೆ ಆ ಹುಡುಗನನ್ನು ಕೂಗಿದರೆ ಅವನು ತಿರುಗಿ ಸಹ ನೋಡಲಿಲ್ಲ. ಅಳುತ್ತ, ಗಾಯಗಳನ್ನು ಸವರಿಕೊಳ್ಳುತ್ತಾ, ಕಂಬನಿ ತೊಡೆಯುತ್ತಾ ಮುಂದಕ್ಕೆ ಹೋದನು.

ನಾನು ಭ್ರಾಂತಿಕವಿದು ನೋಡುತ್ತಿದ್ದೆ. ಹುಡುಗನು ಮತ್ತೊಂದು ಮನೆಯ ಹಂತವನ್ನು ಹತ್ತಿದನು.

'ಭವತಿ ಭಿಕ್ಷಾಂ—ದೇ—ಹಿ.' ಹುಡುಗನ ರೋದನಪೂರ್ಣ ದೀನವಾಣಿ.

'ಮುಂದೆ ಹೋಗಿ ಬಾಪ್ಪ' ಮನೆಯವರ ಉದಾಸೀನದ ಮಾರುತ್ತರ.

ಹಾ, ಮಾನವಹೃದಯವನ್ನು ಕವಿದಿರುವ ನಿಷ್ಕರುಣೆಯ ನಿಷ್ಠುರ ಕಾವಳವೆ!

* * *

ಕನಸೊಡೆದು ಎಚ್ಚರಾಯಿತು. ಆದರೆ ಕನಸಿನ ಅನುಭವವು ಮಾತ್ರ ಮನಸಿನಿಂದ ಮಾಯವಾಗಲಿಲ್ಲ. ಚಿತ್ರವು ಕಣ್ಣಿಗೆ ಕಟ್ಟಿದಂತಿತ್ತು; ಚಿತ್ತವು ಕಳವಳಗೊಂಡಿತ್ತು; ಎದೆ ಹೊಡೆದುಕೊಳ್ಳುತ್ತಲಿತ್ತು. ಎಚ್ಚರಾದುದು ಆ ಇರುಳೆಲ್ಲಾ ಮತ್ತೆ ಝೊಂಪು ಹತ್ತಲಿಲ್ಲ.

ಈಗಲೂ ಆ ಅನುಭವವು ಸ್ಮೃತಿಗೆ ಬಂದರೆ ಚಿತ್ತವು ಕೆರಳುವುದು; ಎದೆಯು ತುಡಿಯತೊಡಗುವುದು; ನವಿರು ನಿಮಿರಿ ನಿಲ್ಲುವುದು!

* ವಾಸ್ತವವಾಗಿ ಕಂಡ ಕನಸೊಂದರ ಸರಳ ನಿರೂಪಣೆಯಿದು.

(ಸಣ್ಣ ಕತೆ)

ಇಂದುವಿನ ಹೃದಯ

ಲೇಖಕ: 'X Y Z'

ಕನಸಿಗೂ ನನಸಿಗೂ ಅಂತರವಿರುವಷ್ಟು ಆದರ್ಶದ ಕಲ್ಪನಾಪ್ರಪಂಚಕ್ಕೂ ಪ್ರತ್ಯಕ್ಷ-ಜೀವನಕ್ಕೂ ಅಂತರವಿರುತ್ತದೆ. ಇಂದುವು ಈ ಅಂತರವನ್ನು ಅನುಭವಿಸಿ ಅರಿತವ. ಅವನ ಗೆಳೆಯ ಇವರ ಅನುಭವಜ್ಞಾನವಿಲ್ಲದವ, ಇಂದುವಿನ ಬಾಳಿನ ಕತೆ ಆ ಗೆಳೆಯನ ಆದರ್ಶದ ತೆರೆಯನ್ನು ಹರಿದೊಗೆಯಿತು. ಜೀವನದ ನಿಷ್ಠುರತೆಯನ್ನು ಅನುಭವಕ್ಕೆ ತಂದುಕೊಟ್ಟಿತು.

ನನ್ನ ಮುಂದೆ ಮಾತನಾಡುತ್ತ ನಿಂತ ಆಕೆ ಕನಸಿನ ಕಲ್ಪನೆಯೇ ಇರಬೇಕೆಂದು ಭಾಸವಾಯಿತು.

ಜೀವನದ ಅನುಭವವನ್ನು ಪಡೆಯುವುದಕ್ಕಿಂತ ಮುಂಚೆಯೆ ನಾನು, ನನ್ನ ಭಾವೀಜೀವನದ ವಿಚಾರವಾಗಿ ಮಹತ್ತರವಾದ ಕನಸುಗಳನ್ನು ಕಾಣುತ್ತಿದ್ದೆ. ನನ್ನ ಮುಂದೆ ಜೀವನದ ಬಾಗಿಲುಗಳು ತೆರೆದು ನಿಂತಿದ್ದುವು. ನನ್ನ ಭಾವೀಜೀವನವು ಒಂದು ದೇದೀಪ್ಯಮಾನವಾದ ಸುಂದರ ಉದ್ಯಾನವನದಂತೆ ಗೋಚರವಾಗುತ್ತಿತ್ತು. ಎಲ್ಲಿ ನೋಡಿದರೂ ಹರ್ಷ; ಎಲ್ಲಿ ತಿರುಗಿದರೂ ಆನಂದ! ಇದೇ ರೀತಿಯ ಸಾಮ್ರಾಜ್ಯವನ್ನು ದಿನೇದಿನೇ ನಿರ್ಮಾಣ ಮಾಡುತಲಿದ್ದೆ.

ಆದರೆ ಜೀವನದ ಅನುಭವಕ್ಕಾಗಿ ಮನಸ್ಸು ಬಹಳ ಆಸಕ್ತಿಯನ್ನು ವಹಿಸುತ್ತಿತ್ತು. ಜೀವನದ ಅನುಭವಕ್ಕಿಂತ ಮೊದಲು

ನಮ್ಮನ್ನು ಒಂದು ಅಜ್ಞಾನದ ಪೊರೆಯು ಮುಚ್ಚಿರುವುದು. ನಾವು ನಮ್ಮ ಬಾಲ್ಯದ ಅಜ್ಞಾನದಿಂದಲೆ ಜೀವನವನ್ನು ಪ್ರವೇಶಿಸಲು ಯತ್ನಿಸುತ್ತೇವೆ.

ನಾನು ನನ್ನ ಸುತ್ತುಮುತ್ತಲಿನ ಜೀವನವನ್ನು ಕುತೂಹಲದಿಂದ ನೋಡುತ್ತಿದ್ದೆ. ಉಲ್ಲಾಸದಿಂದಿರುವ ತರುಣಿಯರನ್ನು ನೋಡಿದಾಗ ನನ್ನ ಆತ್ಮವು ದಿಗಂತಕ್ಕೆ ಪುಷ್ಪಕವಿಮಾನದಲ್ಲಿ ಸಾಗುತ್ತಿದ್ದಂತೆ ಭಾಸವಾಗುತ್ತಿತ್ತು. ನಿತ್ಯವೂ ಹೆಂಗುಸರನ್ನು ಎಲ್ಲಿ ಸುಲಭವಾಗಿ ನೋಡಬಹುದಾಗಿತ್ತೋ, ಆ ಸ್ಥಳಗಳನ್ನೆಲ್ಲಾ ನನ್ನ ಕಾಲುಗಳು ಬೇಗನೆ ಪರಿಚಯಮಾಡಿಕೊಂಡುವು. ನನ್ನ ಮುಂದೆ ತರುಣದಂಪತಿಗಳು ನಡೆವಾಗ, ಅವರ ವಿಷಯದಲ್ಲಿ ಹೆಚ್ಚಿನ ಸಮಾಚಾರವನ್ನು ಗ್ರಹಿಸುತ್ತಿದ್ದೆ. ಅನಂತರ ನನ್ನ ಮನಸ್ಸು ನನ್ನ ಭವಿಷ್ಯದ ಪ್ರಣಯಿನಿಯೊಡನೆ ಉಲ್ಲಾಸದಿಂದಿರುವ ಚಿತ್ರಕ್ಕಾಗಿ ಹಾತೊರೆಯುತ್ತಿತ್ತು. ಜೀವನದಲ್ಲಿ ಕಾಲಿಡುವುದಕ್ಕಿಂತ ಮುಂಚೆಯೆ ನನ್ನದೊಂದು ಆದರ್ಶಸ್ತ್ರೀವ್ಯಕ್ತಿಯ ಸೃಷ್ಟಿಗಾಗಿ ನಾನು ತುಂಬಾ ಆಲೋಚಿಸುತ್ತಿದ್ದೆ.

* * * *

ಆಗ ಬೆಂಗಳೂರಿನಲ್ಲಿ ರೂಮುಮಾಡಿಕೊಂಡು ನನ್ನ ವ್ಯಾಸಂಗವನ್ನು ಮುಂದುವರಿಸುತ್ತಿದ್ದೆನು. ಕಾಲೇಜಿನಲ್ಲಿ ನಾನು ಓದುತ್ತಿದ್ದರೂ ನನ್ನ ಮನಸ್ಸಿನಲ್ಲಿದ್ದ ಜೀವನದ ವಿಚಾರದ ಸುಪ್ತಭಾವನೆಗಳು ಆಗಲೆ ಚೇತನಗೊಳ್ಳಲಾರಂಭಿಸಿದ್ದುವು. ನಾನು ಸ್ವಲ್ಪ ಸಂಕೋಚ ಪ್ರಕೃತಿಯವನಾದುದರಿಂದ, ಯಾರೊಂದಿಗೂ ಹೆಚ್ಚಾಗಿ ಬೆರೆಯುತ್ತಿರಲಿಲ್ಲ. ಇದರಿಂದ ನನಗೊಂದುರೀತಿಯಲ್ಲಿ ಸಹಾಯವೆ ಆಗುತ್ತಿತ್ತು. ಒಂಟಿಯಾಗಿಯೆ ಇರುತ್ತಿದ್ದುದರಿಂದ, ನನ್ನ ಭಾವೀ ಜೀವನದ ಕಲ್ಪನಾಘಟನೆಗಳು ನನ್ನ ದೃಗ್ಭಿತ್ತಿಯ ಮೇಲೆ ನಿರಾತಂಕವಾಗಿ ಮೂಡಿ ಮೂಡಿ ಮುಂದುವರಿಯುತ್ತಿದ್ದುವು. ಇದರೊಂದಿಗೆಯೆ ನನ್ನ ನಲ್ಲೆಯ ಆದರ್ಶಮೂರ್ತಿಯ ಚಿತ್ರವೊಂದು ನಿಧಾನವಾಗಿ ರಚಿತವಾಗುತ್ತಿತ್ತು. ಈ ಸುಖದ ಅನುಭವಕ್ಕೆ ಯಾರೂ ಅಡ್ಡಿಬರದಿರಲೆಂದು ನಾನು ಬಹಳವಾಗಿ ಇಷ್ಟಪಡುತ್ತಿದ್ದೆ. ನನ್ನ ಆದರ್ಶನಿಯಮದ ತಕ್ಕಡಿಯಲ್ಲಿ ಅನೇಕರನ್ನು ತೂಗಿ ತೇಲಿಸಿದ್ದೆ.

ಒಂಟಿಯಾಗಿಯೆ ಇದ್ದು, ನನ್ನ ಕಲ್ಪನೆಯ ಸವಿಯನ್ನು ಅನುಭವಿಸಬೇಕೆಂದಿದ್ದ ನಾನು, ನಿರ್ವಾಹವಿಲ್ಲದೆ ನನ್ನ ಹಳೆಯ ಸ್ನೇಹಿತನೊಬ್ಬನಿಗೆ ಎಡೆಕೊಡಬೇಕಾಯಿತು. ಚಂದುವು ಬಂದು, ಹೇಗಾದರೂ ಮಾಡಿ ನನ್ನ ರೂಮಿನಲ್ಲಿಯೆ ಸ್ವಲ್ಪ ಸ್ಥಳ ಕೊಡಬೇಕೆಂದು ಪ್ರಾರ್ಥಿಸಿಕೊಂಡ. ಚಂದುವು ಇದಕ್ಕಿಂತ ಮುಂಚೆ ಬೇರೆ ಕಡೆ ತಾನೊಬ್ಬನೆ ರೂಮುಮಾಡಿಕೊಂಡು ಇದ್ದ. ಆದರೆ ಮನೆಯವನು 'ಇನ್ನು ಮುಂದೆ ಯಾರಿಗೂ ರೂಮು ಕೊಡುವುದಿಲ್ಲ' ಎಂದು ಹೇಳಿದುದರಿಂದ, ನನ್ನ ಹತ್ತಿರ ಬರಬೇಕಾಯಿತು ಎಂದು ಹೇಳಿದ. ಚಂದೂ ನಮ್ಮೂರಿನವನೆ. ಆದರೆ ನನಗಿಂತಲೂ ಮೂರು ನಾಲ್ಕು ವರ್ಷಗಳಿಗೆ ಹಿರಿಯವನು. ಮೊನ್ನೆ ತಾನೆ M. Sc. ಡಿಗ್ರಿಯನ್ನು ಪಡೆದಿದ್ದ. ಬೆಂಗಳೂರಿನಲ್ಲಿದ್ದುಕೊಂಡೆ ಕೆಲಸಕ್ಕೆ ಪ್ರಯತ್ನಮಾಡುತ್ತಿದ್ದೇನೆಂದು ನಾನು ಕೇಳಿದುದಕ್ಕೆ ಹೇಳಿದ. ಇನ್ನಾರಾದರೂ ಬಂದು ನನ್ನ ರೂಮಿನಲ್ಲಿ ಜಾಗವನ್ನು ಕೇಳಿದ್ದರೆ ಖಂಡಿತವಾಗಿಯೂ ಕೊಡುತ್ತಿರಲಿಲ್ಲ. ಆದರೆ ಚಂದುವಿಗೆ ಇಲ್ಲವೆಂದು ಹೇಳಲು ನನ್ನ ಮನಸ್ಸೊಪ್ಪಲಿಲ್ಲ. ಹೆಚ್ಚು-ಕಡಮೆ ಚಿಕ್ಕಂದಿನಿಂದಲೂ ಒಂದೇ ಹಳ್ಳಿಯಲ್ಲಿ ಬೆಳೆದವರು; ಅದೂ ಅಲ್ಲದೆ ಅವರ ಮನೆಯವರಿಗೂ ನಮ್ಮ ಮನೆಯವರಿಗೂ ಕೇವಲ ಪರಿಚಯ; ಮೇಲಾಗಿ ಅವನು ನನಗಿಂತ ಒಂದು ಕ್ಲಾಸು ಹೆಚ್ಚಾಗಿ ಓದಿದ್ದರಿಂದ, ಅವನಿಗೆ ಎಡೆಯನ್ನು ಕೊಡಲು ನಾನು ಒಪ್ಪಬೇಕಾಯಿತು.

ಚಂದುವು ಕಟ್ಟಾಳು. ವಯಸ್ಸು ಇಪ್ಪತ್ತುನಾಲ್ಕು ಅಥವಾ ಇಪ್ಪತ್ತೈದು ಇರಬಹುದು. ಆಕಾರದಲ್ಲಿಯೂ ಚೆನ್ನಾಗಿ ಇದ್ದ. ಆದರೆ ಅದೇನೋ—ಆಗಾಗ ಹೊಟ್ಟೆನೋವಿನಿಂದ ಬಳಲುತ್ತಲಿದ್ದ.

ಚಂದುವು ನನ್ನ ಜೊತೆಗೆ ಬಂದ ಮೇಲೆ—ನನ್ನ ಕಲ್ಪನಾ ಸಾಮ್ರಾಜ್ಯದ ಸುವ್ಯವಸ್ಥಿತನಿರ್ಮಾಣವು ನಿಂತುಹೋಗುವುದೆಂದು ಭಾವಿಸಿದ್ದೆ. ಆದರೆ ಅದು ಹಾಗೆ ಆಗಲಿಲ್ಲ. ನಾನಾಗಿಯೆ ನನ್ನ ಮನಸ್ಸಿನ ಚಿತ್ರಗಳನ್ನು ಅವನಿಗೆ ತೋರಿಸಿದರೆ, ಅವುಗಳ ಬಗೆಗೆ ತನ್ನ ಒಪ್ಪಿಗೆಯನ್ನೂ ಅಭಿರುಚಿಯನ್ನೂ ಆತ ತೋರಿಸುತ್ತಿದ್ದ. ಅವನಿಂದ ಒಂದು ತರದ ಮೆಚ್ಚುಗೆ ದೊರೆಯುತ್ತಿದ್ದುದರಿಂದ, ನನ್ನ ಕನಸಿನ ಸೊಗಸನ್ನು ಆತನಿಗೂ ಸ್ವಲ್ಪಸ್ವಲ್ಪವಾಗಿ ಪರಿಚಯಮಾಡಿಕೊಡುತ್ತಿದ್ದೆ.

ನಾನೇನೋ ಚಂದುವನ್ನು ನನ್ನ ಭವಿಷ್ಯದ ದಾಂಪತ್ಯದ ವಿಚಾರದಲ್ಲಿ ಸಾಕಷ್ಟು ಬೇಜಾರುಗೊಳಿಸಿದ್ದೆ. ಆದರೆ ಅವನು, ನಾನು ಹೇಳುವುದನ್ನು ಕೇಳಿದ ಮೇಲೆ ಸುಮ್ಮನೆ ನಕ್ಕುಬಿಟ್ಟು "ಈಗ ಆಡುವ ಮಾತುಗಳೇ ಬೇರೆ..ಜೀವನದ ಅನುಭವವೇ ಬೇರೆ" ಎಂದು ಮಾತ್ರ ಹೇಳುತ್ತಿದ್ದ. ಅವನು ತನ್ನ ಖಚಿತವಾದ ಅಭಿಪ್ರಾಯವನ್ನು, ನಾನು ಕೇಳಿದಾಗ ಹೇಳುತ್ತಿರಲಿಲ್ಲ. ಹೀಗಾಗಿ ದಾಂಪತ್ಯದ ವಿಚಾರದಲ್ಲಿ, ಚಂದುವಿನ ಅಭಿಪ್ರಾಯವನ್ನು ಗ್ರಹಿಸಲು ನನ್ನೆದೆಯು ತವಕಗೊಂಡಿತು.

ಒಂದು ದಿನ ಹೀಗೆಯೆ ಮಾತನಾಡುತ್ತಿದ್ದಾಗ ವಿಷಯವು ದಾಂಪತ್ಯಜೀವನದಿಂದ ವೇಶ್ಯೆಯರ ಜೀವನಕ್ಕೆ ತಿರುಗಿತು. ಚಂದುವಿನ ಅಭಿಪ್ರಾಯಗಳು ಅಂದು ಬಹಳ ತೀವ್ರದೃಷ್ಟಿಯಿಂದ ಕೂಡಿದ್ದುವು. ಮಾತಿನ ಭರದಲ್ಲಿ ವಿಚಾರವು ಗೃಹಸ್ಥಜೀವನದಲ್ಲಿದ್ದುಕೊಂಡು ಈ ತರದ ಜೀವನವನ್ನು ನಡೆಯಿಸುವವರ ಕಡೆಗೂ ತಿರುಗಿತು. ಆಗ ಚಂದುವು ತನ್ನ ಹೃದಯಾಂತರಾಳದಿಂದಲೂ, ಅಂತಹ ವ್ಯಕ್ತಿಗಳ ಕಡೆಗೆ ಮರುಕವನ್ನೂ ಸಹಾನುಭೂತಿಯನ್ನೂ ತೋರಿಸಿದ. ನನಗೆ ಇವನ ವರ್ತನೆಯೇನೊ ಸ್ವಲ್ಪ ಹುಚ್ಚುಹುಚ್ಚಾಗಿ ತೋರಿತು. ಆಗ ನಾನು ಕೇಳಿದೆ:

"ಹಾಗಾದರೆ ನಿನ್ನ ಜೀವನದಲ್ಲಿ ನಿನ್ನ ಹೆಂಡತಿಗೂ ಇದೇ ರೀತಿಯ ಸೌಲಭ್ಯವನ್ನು ನೀನು ದೊರೆಕಿಸಿಕೊಡುತ್ತೀಯಾ"?

"ನಾನು ಮದುವೆಯಾದರಲ್ಲವೆ....ಒಂದು ವೇಳೆ ಆದರೆ

ಖಂಡಿತವಾಗಿಯೂ ನನಗೆ ನಷ್ಟವಿಲ್ಲ ಇಷ್ಟವಿಲ್ಲದಿದ್ದರೆ..ಅಥವಾ ನನ್ನಿಂದ ಆಕೆಯ ಜೀವನವು ಸುಖಮಯವಾಗದಿದ್ದರೆ....''

ನನ್ನ ಮನಸ್ಸು ಸ್ವಲ್ಪ ಯೋಚನೆಗಿಟ್ಟುಕೊಂಡಿತು. ನಾನು ಇಲ್ಲಿಯ ತನಕವೂ ಹಸಿದು ಬೇಡುತ್ತಿದ್ದುದು ಆದರ್ಶ ಜೀವನ.... ಆದರ್ಶದಾಂಪತ್ಯ. ಸಂಸಾರದಲ್ಲಿಯ ನ್ಯೂನತೆಗಳನ್ನು ಕಂಡು ನನ್ನ ಮನಸ್ಸು ಹೇಸಿಗೆಗೊಂಡಿತ್ತು. ನನ್ನ ದಾಂಪತ್ಯಜೀವನದಲ್ಲಿ ಅದನ್ನೆಲ್ಲಾ ತೊಡೆದುಹಾಕಬೇಕೆಂದಿದ್ದೆ ನಾನು.

" ಚಂದೂ ನಾನೇನೋ ಜೀವನದಲ್ಲಿ ಆದರ್ಶದಾಂಪತ್ಯಕ್ಕಾಗಿ ಹಾತೊರೆಯುತ್ತಿದ್ದೇನೆ. ಜೀವನದಲ್ಲಿ ಆದರ್ಶವನ್ನು ಕಾಣಬೇಕೆಂದಿದ್ದರೆ ಈ ಹೇಸಿಗೆಗಳು ತಲೆ ಹಾಕಲಾರವು! "

" ನೀನು ಕಟ್ಟುತ್ತಿರುವುದು ಕಲ್ಪನೆಯ ಆದರ್ಶ!..ಜೀವನದ ಅನುಭವದಿಂದ ಮಾರ್ಪಾಡಾದ ಆದರ್ಶ ಬೇರೊಂದಿದೆಯೆಂಬುದು ನಿನಗೆ ಗೊತ್ತಿಲ್ಲ!'' ಅವನ ಮಾತುಗಳೊಂದರದೂ ನನಗೆ ಅರ್ಥವಾಗಲೂ ಇಲ್ಲ; ಸರಿಬೀಳಲೂ ಇಲ್ಲ. ಆಗ ನಾನು ನುಡಿದೆ :

" ಏನೇ ಆಗಲಿ ಚಂದು, ನನ್ನ ಹೆಂಡತಿ ನನ್ನನ್ನು ತ್ಯಜಿಸಿ ಬೇರೊಬ್ಬನೊಂದಿಗೆ ಹೋಗುವುದನ್ನು ನಾನು ನೋಡಲಾರೆ! "

" ಗಂಡುಸರು ಮಾತ್ರ ಹೆಂಡತಿಯಿದ್ದರೂ ಬೇರೊಬ್ಬಳೊಂದಿಗೆ ತಮ್ಮ ಜೀವನದ ಪಾಲನ್ನು ಕೊಡುವುದು ನಿನಗೆ ಒಪ್ಪಿಗೆಯೊ ?'

" ನನಗೆ ಯಾವುದೂ ಒಪ್ಪಿಗೆಯಿಲ್ಲ..ಆದರೂ ಚಂದೂ, ಗಂಡುಸರು ಎಂಜಲು ತಿನ್ನುವುದಕ್ಕೆ ಹೋಗುತ್ತಾರೆಂದು ನಮ್ಮ ಹೆಣ್ಣುಮಕ್ಕಳನ್ನೂ 'ಎಂಜಲು ತಿನ್ನಿ' ಎನ್ನುವುದಕ್ಕಾಗುತ್ತದೆಯೆ ?''

" ....ಎಂಜಲಿಲ್ಲ.. ಎಂಜಲು..ಮೃಷ್ಟಾನ್ನಭೋಜನ.. 'ಸುಖದ ಊಟವನ್ನು ಸವಿಯಿರಿ' ಎಂದು ಹೇಳಬೇಕು! "

ಎಂದು ಹೇಳಿ ಮಾತು ಮುಗಿಸಿದನು.

* * * *

ಮೊದಮೊದಲು ನಾನು ಚಂದುವನ್ನು ಬಿಟ್ಟು, ಒಬ್ಬನೆ ಸಾಯಂಕಾಲ ಅಲೆದಾಡುವುದಕ್ಕೆ ಹೋಗುತ್ತಿದ್ದೆ. ಆದರೆ ನಮ್ಮಿರ್ವರ ಸ್ನೇಹವು ಬಹಳವಾಗಿ ಬೆಳೆದುದರಿಂದ, ಸಾಯಂಕಾಲದ ವೇಳೆಯಲ್ಲಿ ಇಬ್ಬರೂ ಒಟ್ಟಿಗೆ ಹೋಗಲು ಪ್ರಾರಂಭಮಾಡಿದೆವು. ನಾನು ಚಂದುವಿಗೆ ನನಗೆ ಇಷ್ಟವಾದ ಸ್ಥಳಗಳನ್ನು ತೋರಿಸಿದೆ. ನನಗೆ ಉಲ್ಲಾಸವನ್ನುಂಟು ಮಾಡುತ್ತಿದ್ದ ವಸ್ತುಗಳನ್ನೆಲ್ಲಾ ಅವನ ಅನುಭವಕ್ಕೆ ತಂದುಕೊಟ್ಟೆ.

ಚಂದುವು ನನ್ನ ಜೊತೆಗೆ ಬಂದಮೇಲೆ ನಾನು 'ಆದರ್ಶ ಆದರ್ಶ' ವೆಂದು ಎಂತಹ ಚೆಲುವಿಗಾಗಿ ಬಾಯಿಬಿಡುತ್ತಿದ್ದೆನೊ ಅದೇ ಚೆಲುವನ್ನು ಪಡೆದುಕೊಂಡಿರುವ ಒಂದು ಸ್ತ್ರೀಮೂರ್ತಿ ನನ್ನ ಮನವನ್ನಾಕರ್ಷಿಸಿತು. ಆ ಮೂರ್ತಿಯು ಸುಂದರವಾದುದು, ಮುಗ್ಧ-ಮನೋಹರವಾದುದು. ಚಂದು, ನಾನು ಇಬ್ಬರೂ ಒಟ್ಟಿಗೆ ಸಂಚಾರಮಾಡುತ್ತಿದ್ದ ವೇಳೆಯಲ್ಲಿ, ನಮ್ಮ ದೃಷ್ಟಿಗೆ ಆಕೆ ಹಲವು ಸಲ ಗೋಚರಳಾಗುತ್ತಿದ್ದಳು. " ಚಂದು, ನೀನು ನನ್ನ ಭಾಗ್ಯದ ದೇವರು ಕಣೊ..ನೀನು ನನ್ನ ಜೊತೆಗೆ ಬಂದಮೇಲೆ ಈ ದಿವ್ಯ-ಮೂರ್ತಿಯ ದರ್ಶನ ದೊರೆಯಿತು..ನನಗೂ ಇಂತಹಳೊಬ್ಬ ಹೆಂಡತಿ ದೊರೆಯಲಪ್ಪಾ..ಎಂದು ಪ್ರಾರ್ಥಿಸುತ್ತಿದ್ದೇನೆ " ಎಂದೆ. ಆಗ ಅವನು ಸ್ವಲ್ಪ ಹಿಂಜರಿದಂತೆ ಕಂಡುಬಂದಿತು.

ನಿಜಕ್ಕೂ ನನ್ನ ಕನಸಿನ ಆದರ್ಶಕ್ಕೂ ಮತ್ತು ನನ್ನ ಮನಸ್ಸನ್ನು ಸೆರೆಹಿಡಿದ ಹೆಂಗುಸಿಗೂ ಬಹಳ ಹೊಂದಿಕೆಯಾಗುತ್ತಿತ್ತು. ಆಕೆಯ ಆಕಾರವು ಮಂಗಲದಾಯಕವಾಗಿದ್ದಿತು. ಆಕೆಯ ಕಣ್ಣುಗಳು ನನ್ನ ಮನಸ್ಸಿನ ಸುಪ್ತ-ಸುಂದರಭಾವನೆಗಳನ್ನು ನಿಮಿಷಮಾತ್ರದಲ್ಲಿ ಎಬ್ಬಿಸುವ ದಾರ್ಢ್ಯವನ್ನು ಪಡೆದಿದ್ದುವು. ತುಂಬಿದ ಎರಡು ಕೆನ್ನೆಗಳಿಂದಲೂ ಚಿಮ್ಮುತ್ತಿದ್ದ ರಕ್ತವು ಅರುಣೋದಯದ ಮಂಜುಳದೃಶ್ಯವನ್ನು ನೆನಪಿಗೆ ತರುತ್ತಿತ್ತು. ಅವಳ ಮೆಲು-ನಗೆಯು ಬೆಳದಿಂಗಳ ಮಾಧುರ್ಯವನ್ನು ಪರಿಚಯ ಮಾಡಿಕೊಡುತ್ತಿತ್ತು. ಮಲಗಿದ್ದ ಒಂದು ಎಳೆಮಗುವನ್ನು ನೋಡಿದಾಗ ಹೇಗೆ ಅಮಲವಾದ ಭಾವವುಂಟಾಗುತ್ತಿರುವುದೊ ಹಾಗೆಯೆ ಅವಳನ್ನು ನೋಡಿದವನಿಗೆ ಸೌಂದರ್ಯದ ಪವಿತ್ರತೆಯು ಭಾಸವಾಗುತ್ತಿತ್ತು. ಆ ಮುಖದ ಕಾಂತಿ ನಮ್ಮನ್ನು 'ಆಕೆಯೊಡನೆ ಸದಾ ದಿವ್ಯಸ್ನೇಹವನ್ನು ಪಡೆಯುವುದಕ್ಕೆ ಯತ್ನಿಸಿ' ಎಂದು ಪ್ರೇರೇಪಿಸುತ್ತಿತ್ತು. ಆಕೆಯ ನಡಿಗೆಯ ಮಾಟ ಸಭ್ಯತೆಯ ಪತಾಕೆಯನ್ನು ಹಿಡಿದಂತೆ ಸಾಧಿಸುತ್ತಿತ್ತು.

ಹೀಗಾಗಿ ಆಕೆ ನನ್ನ ಆದರ್ಶಮೂರ್ತಿಯ ಸಾಮೀಪ್ಯವನ್ನೈದಿದುದರಿಂದ, ಆಕೆಯ ಸಂದರ್ಶನದಿಂದ ನನಗೆ ಸ್ವಲ್ಪ ಶಾಂತಿಯೂ

ಧನ್ವಂತರಿ ಕಾರ್ಯಾಲಯ, ಅಂಕೋಲಾ
ಉತ್ತರಕನ್ನಡ ಇವರ
ರಜಿಸ್ಟರ್ಡ್
ಅರ್ಧಾಂಗವಾಯು
ಹೊನ್ನಿ ಎಣ್ಣೆ
ಮತ್ತು
ವಾತಾರಿ ತೊಪ್ಪಲ
ಅರ್ಧಿತವಾಯು, ಕೈ-ಕಾಲು-ಮೋರೆ ನಡುಗುವುದು, ಪಕ್ಷವಾತ, ಸಂಧಿವಾತ ಮುಂತಾದ ರೋಗಿಗಳು ನಿರಾಶರಾಗದೆ ಒಮ್ಮೆ ಉಪಯೋಗಿಸಿರಿ; ಖಂಡಿತ ಗುಣವಾಗುವುದು.
ಬಾ. ಬೆ. ೧ ರೂ. ★ ತೊ. ಬೆ. ೧೦ ಆಣೆ.
ಸ್ಟಾರ್ ಕಂಪನಿ, ಬೆಳಗಾಂವ

ಸಿಕ್ಕುತ್ತಿತ್ತು. ಇಲ್ಲಿಯವರೆಗೂ ಕನಸಿನಲ್ಲಿದ್ದ ನನ್ನ ಆದರ್ಶವು ಈಗ ಮೂರ್ತಿಮತ್ತಾಗಿಯೆ ನನಗೆ ಗೋಚರವಾಯಿತು.

ಆಕೆ ನನಗೆ ಉಂಟುಮಾಡುತ್ತಿದ್ದ ಆನಂದವನ್ನು ಚಂದುವಿಗೆ ಹೇಳುತ್ತಿದ್ದೆ. ಒಂದು ದಿನ ನಾನು ಚಂದುವಿಗೆ "ಆಕೆಯ ಗಂಡ ಆವಳ ಕೈಹಿಡಿದಿರುವುದಕ್ಕೆ ಪುಣ್ಯಮಾಡಿರಬೇಕು. ಆ ಧನ್ಯನಾದ ಮನುಷ್ಯ ಯಾರೋ ತಿಳಿದುಕೊಳ್ಳಬೇಕು" ಎಂದು ಹೇಳಿ, ಆಕೆ ಹೋದ ದಾರಿಯನ್ನೆ ಹಿಂಬಾಲಿಸಿದೆ. ಆಗ ಚಂದು ನನ್ನನ್ನು ತಡೆದು, ನಾವು ಹಾಗೆ ಮಾಡಬಾರದೆಂದು ಹೇಳಿದ. ಆದರೆ ಇದಾದ ಒಂದೆರಡು ದಿನಗಳಲ್ಲಿ, ನನ್ನ ಹುಚ್ಚನ್ನು ತಡೆಯಲಾರದೆ ಆಕೆಯ ಗಂಡನ ಹೆಸರು, ವಾಸಸ್ಥಳ ಇವುಗಳನ್ನು ಹೇಳಿದ: ಆಕೆಯ ಗಂಡನ ಹೆಸರು ನಾರಾಯಣರಾಯರೆಂದೂ, ಫ್ಯಾಕ್ಟರಿಯಲ್ಲಿ ಅವರಿಗೆ ಕೆಲಸವಿದೆಯೆಂದೂ, ಅವರಿಗೆ ಅದು ಎರಡನೆಯ ಮದುವೆ ಯೆಂದೂ ಮತ್ತು ಆಕೆಯ ಹೆಸರು 'ಇಂದಿರಮ್ಮ' ಅಥವಾ 'ಇಂದು' ಎಂದಿದೆಯೆಂದೂ ಹೇಳಿದ. ಈ ಸಂಗತಿಯನ್ನು ಬಹಳ ಗುಟ್ಟಿನಿಂದ ತನ್ನ ಸ್ನೇಹಿತನೊಬ್ಬನಿಂದ ಕೇಳಿ ತಿಳಿದೆನೆಂದು ಹೇಳಿದ.

ಇದಾದನಂತರ ಚಂದು, ನಾನು ಒತ್ತಾಯಮಾಡುತ್ತಿದ್ದುದ ರಿಂದ ಆಕೆಯ ಮನೆಯ ಮುಂದೆ ಹೋಗಲು ಒಪ್ಪುತ್ತಿದ್ದ. ನಿತ್ಯವೂ ತಪ್ಪದೆ ಆಕೆಯ ದರ್ಶನ ಸಿಕ್ಕುತ್ತಿತ್ತು. ಮನೆಯ ಬಾಗಿಲಲ್ಲಿ ಆಕೆಯನ್ನು ಕಾಣದಿದ್ದರೆ ಲಾಲ್‌ಬಾಗಿನಲ್ಲಿಯಂತೂ ಆಕೆಯ ದರ್ಶನ ಧಾರಾಳವಾಗಿ ದೊರೆಯುತ್ತಿತ್ತು. ಜುಗುಪ್ಸೆಯೋ ಬೇಜಾರೋ ಆಗಿದ್ದ ದಿನ ಒಂದು ಬಗೆಯ ಶಾಂತಿಯನ್ನು ಕೊಡುತ್ತಿತ್ತು ಆ ನನ್ನ ಇಂದುವಿನ ಮುಖ. 'ಇಂದೂ' 'ಇಂದಿರಾ' ಎಂಬ ಹೆಸರು ನನ್ನ ಹೃದಯದ ಸಾಮ್ರಾಜ್ಯವನ್ನು ಪಡೆಯಿತು.

ಒಂದೊಂದು ದಿನ ಆಕೆಯ ಸಂದರ್ಶನವು ಸಿಕ್ಕುತ್ತಿರಲಿಲ್ಲ. ಆ ದಿನವೆಲ್ಲಾ ನನಗೆ ಹುಚ್ಚು ಹಿಡಿದಂತಾಗುತ್ತಿತ್ತು. ನಾನು ಆಗ ದೈನ್ಯದಿಂದ "ಚಂದೂ.. ಈ ದಿನ ಕೆಟ್ಟಹೊತ್ತಿನಲ್ಲಿ ಎದ್ದೆ. ಅದಕ್ಕೇ ಇಂದು ದೇವಿಯ ದರ್ಶನ ಸಿಕ್ಕಲಿಲ್ಲ" ಎಂದು ಚಂದುವಿಗೆ ಹೇಳು ತ್ತಿದ್ದೆ. ಆಗ ಅವನು "ಲೋ, ನಿನ್ನ ಸಂಕಟ ನಾನು ನೋಡ ಲಾರೆ.... ಹೇಗಾದರೂ ಮಾಡಿ ಆಕೆಯ ಫೋಟೋ ಸಂಪಾದಿಸಿ ಕೊಡಲೇನೋ?" ಎಂದ.

"ಅಯ್ಯೋ ಹುಚ್ಚಾ! ಆಕೆಯಲ್ಲಿರುವ ಪ್ರೇಮ-ವಿಶ್ವಾಸಗಳು ಆ ಕಾಗದದ ಮೇಲಿನ ಛಾಯೆಯಿಂದ ದೊರೆಯುತ್ತವೆಯೆ?" ಎಂದು ಪ್ರಶ್ನಿಸಿದೆ.

"ನೀನು ಕನಸಿನಲ್ಲಿಯೆ ಆದರ್ಶಚಿತ್ರವನ್ನು ರಚಿಸಿ ಸುಖ ವನ್ನು ಪಡೆಯುತ್ತಿದ್ದವನು; ಎಂದಮೇಲೆ ಫೋಟೋವಿನಿಂದ ಆ ಸುಖವನ್ನು ದೊರೆಕಿಸಿಕೊಳ್ಳಲಾರೆಯಾ?"

"ಕನಸು-ಫೋಟೋಗಳೆಲ್ಲವೂ ನಮಗೆ ಬೇಕಾದ ವ್ಯಕ್ತಿಯ ಪರಿಚಯವಿಲ್ಲದಿರುವಾಗ.. ನಮ್ಮ ಕೈಗೆ ನಿಲುಕದಿದ್ದಾಗ. ಮಮ ತಾಜಳು ಬದುಕಿದ್ದರೆ ತಾಜಮಹಲಿನ ಸೃಷ್ಟಿನೆ ಎಂದೂ ಆಗುತ್ತಿರ ಲಿಲ್ಲ!"

"ನಾನು ಹೇಳುವುದೂ ಅದೇ; ಮುಮತಾಜಳಿಲ್ಲದುದರಿಂದ ಅವನು ತಾಜಮಹಲು ಕಟ್ಟಿಸಿ ಸುಖಪಡೆಯಲು ಯತ್ನಿಸಬೇಕಾ ಯಿತು;.. ಆಕೆ ನಿನಗೆ ಕಾಣಿಸದೆ ದೂರವಿರುವುದರಿಂದ, ಆಕೆಯ ಫೋಟೋವಿನಿಂದಲೇ ಸೌಖ್ಯದ ತೃಪ್ತಿಯನ್ನು ನೀನು ಪಡೆಯ ಬೇಕು!"

"ಚಂದೂ, ಯಾವ ಛಾಯಾಯಂತ್ರಗಾರನೂ ತೆಗೆಯಲಾರ ದಂತಹ ಚಿತ್ರವನ್ನು ನನ್ನ ಹೃದಯಮಂದಿರದಲ್ಲಿ ತೆಗೆದಿಟ್ಟಿದ್ದೇನೆ. ನನ್ನ ಹೃದಯವು ಹರಿದರೆ ಆ ಚಿತ್ರವು ಅಳಿಯಬೇಕು. ಅದು ಅಷ್ಟು ಅಮರ.. ಅಮೃತವಾಗಿದೆ....! ಆದರೆ ನೀನು ಆಕೆಯ ಛಾಯಾಚಿತ್ರವನ್ನು ದೊರೆಕಿಸಿ ಕೊಟ್ಟರೆ ನಾನು ನಿನಗೆ ಕೃತಜ್ಞ ನಾಗಿರುತ್ತೇನೆ.. ಯಾಕೆಂದರೆ ಇಂದುವಿನ ಸಮೀಪಕ್ಕೆ ನನ್ನ ಆತ್ಮವನ್ನು ಕೊಂಡೊಯ್ಯುವ ಯಾವ ಸಾಮಗ್ರಿಗೆ ಆಗಲಿ, ನನ್ನದು ಚಿರಸ್ವಾಗತ" ಎಂದೆ.

ಈ ಮಾತು-ಕತೆಗಳು ನಡೆದ ಮೂರನೆಯ ದಿನವೆ ಚಂದುವು ಇಂದುವಿನ ಛಾಯಾಚಿತ್ರವನ್ನು ದೊರೆಕಿಸಿ ಕೊಟ್ಟ. ಸೊಗಸಾದ ಚಿತ್ರ; ಇಂದುವು ಸಜೀವಿಯಾಗಿ ಅಲ್ಲಿ ನಿಂತಿದ್ದಾಳೆಂದು ನನಗೆ ಅರಿ ವಾಗುತ್ತಿತ್ತು. ನಾನು ನನ್ನೆರಡು ಕಣ್ಣುಗಳಿಂದಲೂ ಆ ಚಿತ್ರದ ಸೊಬಗನ್ನು ಸೂರೆಮಾಡುತ್ತಿರುವಾಗ ಚಂದುವು.... "ಬಹಳ ಕಷ್ಟಪಟ್ಟೆ ಕಣೋ ಆ ಚಿತ್ರಕ್ಕಾಗಿ; ನಿನ್ನೆ ನಿನ್ನ ಇಂದು ಒಬ್ಬ ಫೋಟೋಗ್ರಾಫರ್ ಸ್ಟೂಡಿಯೊ ಒಳಗೆ ಇದ್ದುದನ್ನು ಕಂಡೆ. ಈಹೊತ್ತು ಅವನಿಗೆ 'ಗೋಲಂನ್' ಮಾಡಿ, ಇದನ್ನು ಎಗರಿಸಿ ಕೊಂಡು ಬಂದೆ" ಎಂದ. ಚಿತ್ರದ ಸೊಬಗಿನಲ್ಲಿ ಮೈಮರೆಯುತ್ತಿದ್ದ ನನಗೆ ಅವನು ಏನು ಹೇಳಿದರೂ ಬೇಡವಾಗಿತ್ತು.

ಆ ಚಿತ್ರಕ್ಕೆ ನನ್ನ ರೂಮಿನಲ್ಲಿ ಅಗ್ರಸ್ಥಾನವನ್ನು ಕೊಟ್ಟೆ. ಬೆಳಗು ಆದೊಡನೆಯೆ ರೂಮಿನ ಪಕ್ಕದಲ್ಲಿದ್ದ ಗಿಡದಿಂದ, ಬಿರಿದ ಕುಸುಮಗಳನ್ನು ತಂದು ಆ ಫೋಟೋವಿನ ಮುಂದೆ ಅರ್ಪಿಸುತ್ತಿದ್ದೆ.

* * *

ಆ ಫೋಟೋವು ಬಂದಮೇಲೆ ನಾನು ನಿರೀಕ್ಷಿಸಿದುಕ್ಕಿಂತ ಹೆಚ್ಚಿನ ಶಾಂತಿ ದೊರೆಯಲಾರಂಭಿಸಿತು. ಯಾಕೆಂದರೆ: ಒಂದೊಂದು ಸಾರಿ ಎರಡು-ಮೂರು ದಿನವಾದರೂ ನನ್ನ ದೇವಿಯ ದರ್ಶನ ದೊರೆಯುತ್ತಿರಲಿಲ್ಲ. ಆಗ ಆ ಫೋಟೋವಿನಿಂದ ಒಂದು ಬಗೆಯ ಆತ್ಮತೃಪ್ತಿ ದೊರೆಯುತ್ತಿತ್ತು. ಆದರೆ ಕೆಲವು ದಿನಗಳಲ್ಲಿಯೆ ಮೂರುಹೊತ್ತೂ ಆ ಫೋಟೋವಿನ ಮುಂದೆಯೆ ಇರಲು ತೊಡಗಿದೆ. ನನ್ನ ಹುಚ್ಚು ಈ ರೀತಿಯಾಗಿ ಬೆಳೆಯುತ್ತಿರುವುದನ್ನು ಚಂದುವು ನೋಡಿ "ಏನೋ, ಫೋಟೋವನ್ನು ತಂದು ಕೊಟ್ಟರೂ ನಿನ್ನ ಹುಚ್ಚು ಅಡಗಲಿಲ್ಲಾ?" ಎಂದ. ಆಗ ನಾನು "ಚಂದೂ, ಆ ಫೋಟೊ ಬರುವುದಕ್ಕಿಂತ ಮುಂಚೆ ಇಂದುವಿಗೂ ನನಗೂ ಅಂತರ ಬಹಳವಾಗಿತ್ತು. ಈಗ ಹೇಗಾದರೂ ಮಾಡಿ ಇಂದುವಿನ ತೀರ ಬಳಿಯಲ್ಲಿದ್ದು ಪ್ರತ್ಯಕ್ಷವಾಗಿ ಆಕೆಯ ಬಾಯಿಂದ ಎರಡು ಮಾತುಗಳನ್ನು ಕೇಳಬೇಕೆಂದು ನನ್ನೆದೆ ಬಯಸುತ್ತಿದೆ" ಎಂದು ಹೇಳಿದೆ. ಆಗ ಅವನು "ಎಂತಹ ಹುಚ್ಚೋ ನಿನ್ನದು!" ಎಂದು ನಗುತ್ತಿದ್ದ.

ಬಹಳ ದಿವಸಕ್ಕೆ ಒಂದು ಸಾರಿ ಬರುತ್ತಿದ್ದ ಅವನ ಹೊಟ್ಟೆ ನೋವು ಬರುಬರುತ್ತಾ ಬಹಳ ತಾಪವನ್ನು ಕೊಡಲುಪಕ್ರಮಿಸಿತು. ಅವನ ಸಂಕಟ ನೋಡಲಾರದೆ, ನಾನು ಚಂದುವನ್ನು ಆಸ್ಪತ್ರೆಗೆ ಸೇರಿಸಿ ಬರುತ್ತಿದ್ದೆ. ಆದರೆ ಸ್ವಲ್ಪ ನೋವು ಕಡಮೆಯಾದೊಡನೆ ಆತ ರೂಮಿಗೆ ಮರಳಿ ಬಂದುಬಿಡುತ್ತಿದ್ದ. ಕೊನೆ-ಕೊನೆಗೆ ವಾರಕ್ಕೆ ಎರಡು ದಿನವಾದರೂ ಆಸ್ಪತ್ರೆಯಲ್ಲಿರುವುದು ತಪ್ಪಲಿಲ್ಲ. ನಾನು ಅವನಿಗೆ 'ತಂದೆ-ತಾಯಿಗಳನ್ನು ಕರೆಯಿಸಿಕೊಳ್ಳೊ' ಎಂದು ಒತ್ತಾಯ ಮಾಡಿದೆ. ಅವನು ಅದಕ್ಕೆ "ಈ ಸಣ್ಣ ಪುಟ್ಟ ಕಾಯಿಲೆಗಳಿಗೆಲ್ಲಾ ಅಪ್ಪಾ-ಅಮ್ಮಂದಿರ ಆರೈಕೆ ಬೇಕೋ?" ಎಂದು ಹೇಳುತ್ತಿದ್ದ.

ಆದರೆ ಚಂದುವು ಹೊಟ್ಟೆಯ ನೋವಿನಿಂದ ಬಿಡುಗಡೆ ಹೊಂದುವ ಹಾಗೆ ಕಾಣಲಿಲ್ಲ. ಆಸ್ಪತ್ರೆಯಲ್ಲಿ ಎರಡು ದಿನ ಇದ್ದು ಬರುತ್ತೇನೆಂದು ತಿಳಿದಿದ್ದ ಅವನಿಗೆ, ಈ ಸಲ ಹಾಗೆ ಬರಲು ಆಗಲಿಲ್ಲ. ನಾನು ಕಾಯಿಲೆಯ ವಿಚಾರದಲ್ಲಿ ಡಾಕ್ಟರು ಹೇಳಿದ ಮಾತಿನ ಮೇರೆಗೆ, ಅವನ ತಂದೆ-ತಾಯಿಗಳಿಗೆ ಟೆಲಿಗ್ರಾಂ ಕೊಟ್ಟು ಬೆಂಗಳೂರಿಗೆ ಕರೆಯಿಸಿಕೊಂಡೆ. ಡಾಕ್ಟರು ಚಂದುವಿನ ಕಾಯಿಲೆಯು 'ಕ್ರಾನಿಕ್ ಕೇಸ್ (Chronic Case)' ಎಂದೂ, ಅದಕ್ಕಾಗಿ ಶೀಘ್ರದಲ್ಲಿಯೆ ಮದರಾಸಿಗೆ ಹೋಗಿ ರೇಡಿಯೋ ಟ್ರೀಟ್‌ಮೆಂಟಿನಿಂದ ಗುಣ ಹೊಂದಿ ಬರಬೇಕೆಂದೂ ಹೇಳಿದರು. ಅವನ ತಂದೆ-ತಾಯಿಗಳಿಗೆನೋ ಬಹಳ ಘಾಬರಿ ಆಯಿತು. ಆದರೆ ನಿರ್ವಾಹವಿಲ್ಲದೆ ಮರು-ದಿನವೇ ಮದರಾಸಿಗೆ ಹೊರಡಲು ಅಣಿಮಾಡಲು ಹೋದರು. ಚಂದುವನ್ನು ಆಸ್ಪತ್ರೆಯಿಂದಲೆ, ಅಂಬ್ಯುಲೆನ್ಸ್ ಗಾಡಿಯಲ್ಲಿ ಸ್ಟೇಷನ್ನಿಗೆ ಕರೆದುಕೊಂಡು ಹೋಗಬೇಕೆಂದೂ ನಿರ್ಧಾರವಾಯಿತು. ಚಂದುವಿನ ತಂದೆ-ತಾಯಿಗಳು ಆಸ್ಪತ್ರೆಯನ್ನು ಬಿಟ್ಟು ಹೋದ ಮೇಲೆ, ಚಂದುವು ನನ್ನನ್ನು ಹತ್ತಿರಕ್ಕೆ ಬರಮಾಡಿಕೊಂಡ. ಅವನ ಆಗಿನ ಸ್ಥಿತಿಯನ್ನು ನೋಡಿ ನಾನು 'ಚಂದೂ ಧೈರ್ಯ ತೆಗೆದುಕೊಳ್ಳಬೇಕಪ್ಪಾ' ಎಂದೆ. ಅದಕ್ಕೆ ಅವನು 'ಅಯ್ಯೋ, ಈ ಕಾಯಿಲೆಯ ವಿಚಾರದಲ್ಲಿ ನಾನು ಒದ್ದಾಡುತ್ತಲೆ ಇಲ್ಲಾ' ಎಂದ. ಆಗ ನಾನು 'ಹಾಗಾದರೆ ಬೇರೆ ಏನು ಯೋಚಿಸುತ್ತಿದ್ದೀಯಾ?' ಎಂದೆ. ಅವನು ಅದಕ್ಕೆ ಉತ್ತರ ಕೊಡುವುದರ ಬದಲು ಏನನ್ನೋ ಮನಸ್ಸಿನಲ್ಲಿಯೇ ಯೋಚಿಸುತ್ತ ಮಲಗಿದ್ದ. ಸ್ವಲ್ಪ ಹೊತ್ತಾಗುತ್ತಲೂ ನನ್ನನ್ನು ಇನ್ನೂ ಹತ್ತಿರ ಬರಮಾಡಿಕೊಂಡು "ನಾಳೆಯ ಬೆಳಗಿನಲ್ಲಿ ನೀನು ಇಲ್ಲಿಗೆ ಬರುವುದರೊಳಗಾಗಿ ಒಂದು ಕಾಗದ ಬರೆದಿಟ್ಟಿರುತ್ತೇನೆ... ನೀನು ಅಡ್ರೆಸ್ ನೋಡದೆ ಪೋಸ್ಟ್ ಮಾಡಬೇಕು! ಮುಂದೆ ಎಲ್ಲಾ ನಿನಗೆ ಗೊತ್ತಾಗುವುದು" ಎಂದ. ನನಗೆ ನಿಜವಾಗಿಯೂ ನಗೋಣವೆ ಎಂದೆನಿಸಿತು. ಆದರೂ ಅವನ ಮುಖವನ್ನು ನೋಡಿ ಹಾಗೆ ಮಾಡಲು ಆಗಲಿಲ್ಲ. ಅವನಿಗೆ 'ಆಗಲಿ' ಎಂದು ಮಾತುಕೊಟ್ಟೆ.

ಅವನ ತಂದೆ-ತಾಯಿಗಳು ಆಸ್ಪತ್ರೆಗೆ ಹೋಗುವುದಕ್ಕಿಂತ ಮುಂಚೆಯೆ ನಾನು ಅವನ ಬಳಿ ಇದ್ದೆ. ಆಗ ಅವನು, ಬರೆದ ಕಾಗದವನ್ನು ನನ್ನ ಕೈಗೆ ಕೊಟ್ಟ. ನಾನು ಅದನ್ನು ಭದ್ರವಾಗಿ ಜೋಬಿನಲ್ಲಿಟ್ಟುಕೊಂಡ ಮೇಲೆ, ಅವನ ತಂದೆ ಆಸ್ಪತ್ರೆಗೆ ಬಂದರು. ನಾನು ಅವನಿಗೆ ಧೈರ್ಯಹೇಳಿ ರೂಮಿಗೆ ವಾಪಸ್ಸು ಬರಲು ಸನ್ನದ್ಧನಾದೆ. ಯಾಕೋ ಬಾಯಿಂದ ಮಾತುಗಳು ಹೊರಡುವುದು ಬಹಳ ಕಷ್ಟವಾಗಿತ್ತು. ನಮ್ಮಿರ್ವರ ಸ್ನೇಹ ಅಷ್ಟುಮಟ್ಟಿಗೆ ಬಲಿತಿತ್ತು. ಚಂದುವನ್ನು ಬಹಳ ಕಾಲದ ವರೆಗೂ ಅಗಲಬೇಕಾಗುವುದೆಂಬ ಭಾವವು ನನ್ನನ್ನು ಹುಚ್ಚನನ್ನಾಗಿ ಮಾಡುವಂತಿತ್ತು. ಕೊನೆಗೆ 'ದೇವರು ನಿನಗೆ ಬೇಗ ವಾಸಿಮಾಡಿ ಕಳುಹಿಸಲಪ್ಪಾ' ಎಂದೆ. ನಾನು ಅವನನ್ನು ಬಿಟ್ಟು ಬರುವುದಕ್ಕಿಂತ ಮುಂಚೆ ಅವನು ನನಗೆ "ನೀನು ಹಿಂದಿನ ಜನ್ಮದಲ್ಲಿ ನನಗೆ ಸ್ವಂತ ತಮ್ಮನಾಗಿರಬೇಕು" ಎಂದು ಹೇಳಿ, ಮಾತನ್ನು ಸ್ವಲ್ಪ ನಿಲ್ಲಿಸಿ "ನಾನು ನಿನ್ನ ಜೊತೆಯಲ್ಲಿ ಇಲ್ಲಾ ಎಂದು ನಿತ್ಯವೂ ಹೋಗುತ್ತಿದ್ದ ಸಾಯಂಕಾಲದ ದಾರಿಯನ್ನು ಬಿಡಬೇಡ! ಇಂದುವಿನೊಡನೆ ಮಾತನಾಡಬೇಕೆಂದಿದ್ದೆಯಲ್ಲಾ.. ದೇವರು ನಿನ್ನಾಶೆಯನ್ನು ಸಫಲಗೊಳಿಸಲಿ!" ಎಂದು ಹೇಳಿದ.

ಅವನನ್ನು ಬಿಟ್ಟು ಬರುವುದರೊಳಗಾಗಿ ನನ್ನ ಕಣ್ಣುಗಳಿಂದ ನೀರಿನ ಹನಿಗಳು ಕೆಳಕ್ಕಿಳಿಯಲಾರಂಭಿಸಿದುವು.

* * *

ಆಸ್ಪತ್ರೆಯನ್ನು ಬಿಟ್ಟ ಕೂಡಲೆ, ಅವನು ಕೊಟ್ಟ ಕಾಗದವನ್ನು ಪೋಸ್ಟ್ ಮಾಡಿದೆ.

ಗಜಕರ್ಣ, ಹುರುಕು, ತದ್ದು ಮುಂತಾದ
ತ್ವಚರೋಗದಿಂದ ಪೀಡಿತರಾದ
ಜನರಿಗೆ

ರಜಿಸ್ಟರ್ಡ್

ಗೋವಾ ಮಲಮು

GOA OINTMENT

ಗುಣ ಬಾರದಿದ್ದಲ್ಲಿ
ಹಣ ತಿರುಗಿ ಕೊಡುವ ಗ್ಯಾರಂಟಿಯಿಂದ
ಮಾರಲ್ಪಡುತ್ತದೆ.

ಬಾಟಲಿ ಕಿಮ್ಮತ್ತು ೪ ಆಣೆ.

ಸ್ಟಾರ್ ಕಂಪನಿ, ಬೆಳಗಾಂವ

ಚಂದುವು ಮದರಾಸಿಗೆ ಪ್ರಯಾಣಮಾಡಿದ ದಿನವೆಲ್ಲಾ ನಾನು ಮನೆಯನ್ನು ಬಿಟ್ಟು ಕದಲಲೆ ಇಲ್ಲ. ಚಂದುವಿನ ವಿಚಾರದಲ್ಲಿಯೆ ಆ ದಿನವನ್ನೆಲ್ಲಾ ಕಳೆದೆ. “ ಪಾಪ ಚಂದುವಿಗೆ ಸ್ವಲ್ಪವೂ ಪುರಸತ್ತು ಕೊಡದೆ ಅವಸರದಲ್ಲಿಯೆ ಮದರಾಸಿಗೆ ಕರೆದುಕೊಂಡು ಹೋದರು. ದೇವರೇ, ಬೇಗ ಅವನಿಗೆ ಗುಣ ಮಾಡಿಸಪ್ಪಾ” ಎಂದು ದೇವರನ್ನು ಬೇಡಿಕೊಂಡೆ.

ಮಾರನೆಯ ಸಾಯಂಕಾಲ ಯಥಾಪ್ರಕಾರ ನನ್ನ ಹಾದಿಯನ್ನು ಹಿಡಿದೆ. ಚಂದುವಿನ ಆರೋಗ್ಯಕ್ಕಾಗಿ ಬೇಸತ್ತಿದ್ದ ಜೀವಕ್ಕೆ ಒಂದು ತರದ ಧೈರ್ಯದ ನಂಬಿಕೆ ದೊರೆಯಲೆಂದು, ನನ್ನ ದೇವಿಯ ದರ್ಶನಕ್ಕಾಗಿ ಆಶೆಪಟ್ಟೆ. ನಾನು ಆ ದಾರಿಗೆ ಬರುತ್ತಿರುವಾಗ ನನ್ನ ಇಂದುವು ಬಾಗಿಲಲ್ಲಿ ನಿಂತಿದ್ದುದು ದೂರದಿಂದಲೆ ಕಾಣಬಂತು. ಆದರೆ ನಾನು ಅವರ ಮನೆಯ ಕಡೆಗೆ ಸಾಗುವುದರೊಳಗಾಗಿ ಅವಳು ಒಳಗೆ ಹೋಗಿಬಿಟ್ಟಿದ್ದಳು. ನಾನು ನಿರಾಶೆಯ ಚಿನ್ಹೆಯನ್ನು ನನ್ನ ಮುಖದ ಮೇಲೆ ಹೊತ್ತು, ಮೆಲ್ಲಗೆ ಹೆಜ್ಜೆಯನ್ನು ಮುಂದು ವರಿಸಿದೆ. ಇಂದುವಿನ ಮನೆಯ ಬಾಗಿಲನ್ನು ಸೇರುವುದರೊಳಗಾಗಿ ಇಂದುವು ಬಾಗಿಲ ಬಳಿ ಬಂದು ನಿಂತುಕೊಂಡಿದ್ದಳು. ‘ ಸದ್ಯ ನನ್ನ ದೇವಿಯ ದರ್ಶನವಾಯಿತಲ್ಲಾ ’ ಎಂದು ಸಂತೋಷಗೊಂಡೆ.

ಆದರೆ ನಾನು ಮುಂದುವರಿಯಬೇಕೆನ್ನುವುದರೊಳಗಾಗಿ ಆಕೆ ‘ ಒಳಕ್ಕೆ ಬನ್ನಿ ’ ಎಂದು ಕರೆದಳು.

ಏನು ಮಧುರ ಕಂಠ! ಆ ಧ್ವನಿಗಾಗಿ ಎಂತಹ ತಪಸ್ಸನ್ನು ಮಾಡು ಎಂದು ಹೇಳಿದ್ದರೂ ಮಾಡುತ್ತಿದ್ದೆ. ಆಗ ನಾನು ಇನ್ನಾರನ್ನೊ ಕರೆಯುತ್ತಿರಬಹುದೆಂದು, ಮುಂದಕ್ಕೆ ಹೆಜ್ಜೆಯನ್ನು ಇಡಲಾರದೆ ಇಟ್ಟೆ. ಆಕೆ ಪುನಃ ‘ಒಳಕ್ಕೆ ಬರಬೇಕು’ ಎಂದು ಸ್ವಲ್ಪ ಕಂಠವನ್ನು ಏರಿಸಿ ಕೂಗಿದಳು. ನಾನು ಅವಾಕ್ಕಾದೆ. ಹಿಂದಿರುಗಿ ನೋಡಿದೆ; ದಾರಿಯಲ್ಲಿ ಯಾರೂ ಬರುತ್ತಿರಲಿಲ್ಲ. ನನ್ನನ್ನೇ ಕರೆಯುತ್ತಿರಬಹುದೆಂದು ಬೇಗನೆ ಅರಿವಾಯಿತು. ಆದರೆ ನಾನು ಈ ಬಗೆಯ ಸಂದರ್ಭವನ್ನು ನಿರೀಕ್ಷಿಸಿರಲಿಲ್ಲವಾದುದರಿಂದ ಅದಕ್ಕೆ ಸಿದ್ಧನೂ ಆಗಿರಲಿಲ್ಲ. ನಾನು ಯಾರನ್ನು ಸಮೀಪಿಸಲಾರೆನೆಂದು ಬಗೆದಿದ್ದೆನೋ, ಆಕೆಯೇ ನನ್ನನ್ನು ಕರೆದದ್ದು ನನಗೆ ದಿಗ್ಭ್ರಮೆಯನ್ನು ಹಿಡಿಸಿತು. ನೀವೆಲ್ಲರೂ ದೇವರ ವಿಗ್ರಹದ ಮುಂದೆ ‘ ದೇವರೇ ಒಂದುಸಲವಾದರೂ ನಿನ್ನ ಕೃಪಾಕಟಾಕ್ಷವನ್ನು ತೋರಪ್ಪಾ ’ ಎಂದು ಹಂಬಲಿಸಿಯೆ ಇದ್ದೀರಾ; ಅಂತಹ ಸಮಯದಲ್ಲಿ ಆ ವಿಗ್ರಹವೆ ಹಠಾತ್ತಾಗಿ ಜೀವರೂಪದಿಂದ ಮಾತನಾಡಿದರೆ ಯಾವ ರೀತಿಯ ಭಾವಗಳು ಉಂಟಾಗುವುವೋ ಅವು ನನ್ನ ಮನಸ್ಸಿನಲ್ಲಿ ಉದ್ಭವವಾದುವು. ಯಾವುದನ್ನು ನಾನು ಅತೀತವೆಂದು ಬಗೆದಿದ್ದೆನೊ ಅದು ನನಗೆ ಬಹಳ ಆತ್ಮೀಯವಾಗಿ ಕಂಡು ಬಂದಿತು. ಆಗ ನನ್ನ ಮೈಮೇಲೆ ನಿಜವಾಗಿಯೂ ಅರಿವಿರಲಿಲ್ಲ. ಮೂಕನಂತೆ ಆಕೆಯ ಹಿಂದೆಯೆ ಆಕೆಯ ಮನೆಯನ್ನು ಪ್ರವೇಶಿಸಿದೆ.

ಆಕೆ ಕೂಡಲೇ ನನ್ನನ್ನು ಹಜಾರಕ್ಕೆ ಕರೆದುಕೊಂಡು ಹೋದಳು. ಸುಂದರವಾಗಿ ಜೋಡಿಸಿದ ಕುರ್ಚಿ-ಮೇಜುಗಳು ಹಾಲನ್ನು ಬೆಳಗುತ್ತಿದ್ದುವು. ನಾನು ಏನನೂ ಅರಿಯದವನಂತೆ ಬಾಗಿಲಲ್ಲಿಯೆ ನಿಂತಿದ್ದೆ; ಆಕೆ ಆಗ “ ಬನ್ನಿ ಕುಳಿತುಕೊಳ್ಳಿ ” ಎಂದು ಒಂದು ಕುರ್ಚಿಯ ಕಡೆ ಸಂಜ್ಞೆಮಾಡಿದಳು.

ಒಂದು ಕ್ಷಣಕಾಲ ಮೌನ. ಆ ಕೆಲವು ಕ್ಷಣಗಳನ್ನು ಕಳೆಯುವುದರೊಳಗಾಗಿ ನನ್ನ ಮೈ ಸಂಪೂರ್ಣವಾಗಿ ಬೆವತು ಹೋಯಿತು. ಆಕೆಯೆ “ ನೀವು ನನ್ನ ಸಂಗಡ ಮಾತನಾಡಬೇಕೆಂದಿದ್ದಿರಂತೆ !” ಎಂದಳು.

ನನಗೆ ನಿಜವಾಗಿಯೂ ದಿಗ್ಭ್ರಮೆ ಹಿಡಿದಂತಾಯಿತು. ಒಂದು ಮಾವಿನ ಕಾಯಿಗೆ ಆಶೆಪಟ್ಟು ಸರ್ವವಿಧದಿಂದಲೂ ಅದನ್ನು ಹೊಂದಲು ಯತ್ನಿಸಿ, ಅನಂತರ ನಿರಾಶೆಪಟ್ಟು ಆ ಮಾವಿನಕಾಯಿಯನ್ನೆ ನೋಡುತ್ತಾ ‘ ಏ ಮಾವಿನಕಾಯಿಯೆ, ಎಷ್ಟು ಸುಂದರವಾಗಿದ್ದೀಯೇ, ನಿನ್ನಲ್ಲಿ ಮಧುವು ಉಕ್ಕುತ್ತಿರುವಂತಿದೆ– ನನ್ನ ಕೈಗೆ ನೀನು ಬೀಳಬಾರದೆ? ’ ಎಂದು ಹಂಬಲಿಸುತ್ತಾ ಕುಳಿತವನೊಬ್ಬನ ಕೈಗೆ, ಅಕಸ್ಮಾತ್ತಾಗಿ ಆ ಹಣ್ಣು ಬಿದ್ದರೆ ಅವನ ಅನುಭವವು ಹೇಗೆ ಇರುತ್ತದೆಯೊ ಹಾಗೆ ನನಗೆ ಆಯಿತು. ಕೈಗೆ ಬಿದ್ದದ್ದು ಮಾವಿನ ಹಣ್ಣೊ ಅಥವಾ ಮಾಯೆಯ ಹಣ್ಣೊ ಎಂದು ಅವನು ತವಕಿಸುವಂತೆ, ನನ್ನ ಮುಂದೆ ಮಾತನಾಡುತ್ತಾ ನಿಂತಿದ್ದ ಆಕೆ ಕನಸಿನ ಕಲ್ಪನೆಯೆ ಇರಬೇಕೆಂದು ಭಾಸವಾಯಿತು. ಆದರೂ ನನ್ನ ಮನಸ್ಸು ಹಿಂದೆಗೆಯಲಿಲ್ಲ. ಮೆಲ್ಲಗೆ “ ಹೌ. .ದು ” ಎಂದೆ.

ತಿರುಗಿ ಮೌನ. ಆಕೆ ಆಗ ತನ್ನ ಮುಂಗುರುಳನ್ನು ತಿದ್ದಿಕೊಳ್ಳುತ್ತಾ ನಿಂತಿದ್ದಳು. ನಾನೇ ಧೈರ್ಯವನ್ನೆಲ್ಲಾ ಒಟ್ಟುಗೂಡಿಸಿ “ ತಮಗೆ ತಿಳಿದ ಬಗೆ ಹೇಗೆ ? ” ಎಂದೆ.

“ ತಿಳಿಯಿತು. . ” ಎಂದು ಹೇಳಿ ಆಕೆ ಕತ್ತನ್ನು ಕೊಂಕಿಸಿದಳು. ಅನಂತರ ಶಬ್ದಮಾಡುತ್ತಿದ್ದ ಬಾಗಿಲನ್ನು ಸರಿಪಡಿಸಿ ಹೊರಕ್ಕೆ ಒಂದು ಸಲ ನೋಡಿ ಬಂದು “ ಎಂದೂ ಇಲ್ಲದಿದ್ದ ನಮ್ಮ ಮನೆಯವರು, ಈವೊತ್ತು ಆಫೀಸಿಗೆ ರಜಬರೆದು ಮನೆಯಲ್ಲಿಯೆ ಇದ್ದುಬಿಟ್ಟರು. ನೀವು ಬರುವುದಕ್ಕಿಂತ ಮುಂಚೆ, ಆಗ ತಾನೆ ಹೊರಕ್ಕೆ ಹೋದರು. . ಇಲ್ಲದಿದ್ದರೆ ಇಂದು ನಿಮ್ಮ ಸ್ನೇಹ ದೊರೆಯುತ್ತಲೆ ಇರಲಿಲ್ಲ. . ” ಎಂದಳು.

ನನ್ನ ತಲೆ ನಿಜವಾಗಿಯೂ ತತ್ತರಿಸುತ್ತಿದ್ದ ಹಾಗೆ ಭಾಸವಾಯಿತು. ಯಾರನ್ನು ನನ್ನ ಆದರ್ಶವೆಂದು ತಿಳಿದು ಅದರ ಮೇಲೆ ನನ್ನ ಕನಸುಗಳನ್ನು ಕಟ್ಟಿದ್ದೆನೊ ಅವೆಲ್ಲವೂ ನನ್ನ ಮುಂದೆಯೆ ಪಟಪಟನೆ ಕೆಳಕ್ಕೆ ಉದುರಲಾರಂಭಿಸಿದಂತಾಯಿತು. ನಿಜ, ನಾನೇನೋ ಆಕೆಯೊಡನೆ ಮಾತನಾಡಲು ಇಚ್ಛಿಸಿದ್ದೆ. ಆದರೆ ನಾನು ಆಕೆಯ ವಿಚಾರದಲ್ಲಿ ಇಟ್ಟಿದ್ದ ಅಭಿಪ್ರಾಯಕ್ಕೆ ಮೆಚ್ಚಿ, ಅಮರಲೋಕದ ಸ್ತ್ರೀಯಂತೆ ಶುದ್ಧಹೃದಯದಿಂದ ನಡೆದು ನನ್ನ ಆಶೆಯನ್ನು ತಣಿಸುವ ದೃಶ್ಯಕ್ಕಾಗಿ ಆತುರಪಟ್ಟಿದ್ದೆ. ಆದರೆ ಅದರ ಬದಲು ಗಂಡನನ್ನು ವಂಚಿಸಿ ನೀತಿಗೆಟ್ಟ ಸ್ತ್ರೀಯಂತೆ ಮಾತನಾಡಲು ಬಂದುದು ನನಗೆ ಕೋಪವನ್ನುಂಟು ಮಾಡಿತು. ಕೂಡಲೆ “ ಗಂಡನಿದ್ದರೂ ಅವನನ್ನು ವಂಚಿಸಿ ಈ ಹೊಲಸು ಕಾರ್ಯಕ್ಕೆ ಕೈಹಾಕುತ್ತೀರಾ ? ” ಎಂದು ಸ್ವಲ್ಪ ಕೋಪದಿಂದಲೆ ಕೇಳಿದೆ.

ಆಕೆ ಸ್ವಲ್ಪ ರೋಷಗೊಂಡು “ ಇದ್ದ ಗಂಡನಿಂದ ನನ್ನ ಆದರ್ಶ ಸಾಧನೆಯಾಗದಿದ್ದರೆ. . ಆದರ್ಶಸಾಧನೆಗೆ ಸಹಾಯ ಮಾಡುತ್ತಿದ್ದ ನನ್ನ ಹೃದಯೇಶ್ವರನ ಮಾತಿಗಾಗಿ. . ”

ಆಕೆಯು ಮಾತನ್ನು ಮುಗಿಸುವುದರೊಳಗಾಗಿ, ಅವಳು ಮಾಡುವುದೆಲ್ಲವೂ ಬೂಟಾಟಿಕೆ-ವಂಚನೆ-ಎಂದು ತಿಳಿದು “ ನೀವು ಸರಿಯಾಗಿದ್ದರೆ ನಿಮ್ಮ ಗಂಡನಿಂದಲೆ ನಿಮ್ಮ ಆದರ್ಶಸಾಧನೆ ಮಾಡಿಕೊಳ್ಳಬಹುದಾಗಿತ್ತು. ಹೀಗೆ ವಂಚನೆಮಾಡಿ ಆದರ್ಶವನ್ನು ಸಂಪಾದಿಸುತ್ತೇನೆಂದು ಬಗೆಯುವುದರ ಬದಲು, ಬೀದಿಯ ಹೆಂಗುಸಾಗಿ ಬಾಳಿದ್ದರೆ ನಿಮ್ಮ ಆದರ್ಶವು ಸುಲಭವಾಗಿ ದೊರೆಯುತ್ತಿತ್ತಲ್ಲಾ!” ಎಂದು ಹೇಳಿ, ಅಲ್ಲಿರುವುದು ಸರಿಯಲ್ಲ ಎಂದು ಎದ್ದು ಹೊರಡುವುದರಲ್ಲಿದ್ದೆ.

ಆಕೆ ಉದ್ವೇಗದಿಂದ “ ಅದೂ ಆಗುತ್ತಿದ್ದೆ. . ನನ್ನ ಜೀವದಾಶೆ ಅದರಿಂದ ಪೂರಯಿಸುತ್ತಿದ್ದರೆ ಅದೂ ಆಗುತ್ತಿದ್ದೆ. ನೀವು ನಿಮ್ಮ ಆದರ್ಶದ ವಿಚಾರವಾಗಿ ಬಹಳ ಕನಸುಕಂಡಿದ್ದೀರೆಂದು ನನಗೆ ಗೊತ್ತು. ನಾನೂ ನನ್ನ ಎಳೆಯದಿನಗಳಲ್ಲಿ ಬಹಳ ಕನಸುಗಳನ್ನು ಕಾಣುತ್ತಿದ್ದೆ. ನಾನೂ, ನನ್ನ ಮುಂದಿನ ಪತಿಯೂ, ಪ್ರಪಂಚಕ್ಕೆ ಮಾದರಿಯಾಗಿರಬೇಕೆಂಬುದಾಗಿ ಬಹಳವಾಗಿ ಹಂಬಲಿಸಿದ್ದೆ. ನನ್ನ ತಂದೆ ಮದುವೆಯ ವಿಚಾರವನ್ನು ನನ್ನ ಪಾಲಿಗೆ ಬಿಟ್ಟು, ಧೈರ್ಯದಿಂದ ನನಗೆ ವಿದ್ಯಾಭ್ಯಾಸವನ್ನು ಕೊಡಲು ತೊಡಗಿದರು. ಆದರೆ ನನ್ನ ದುರ್ದೈವಕ್ಕೆ, ನಾನು ಕಾಲೇಜಿಗೆ ಬರುವುದರೊಳಗಾಗಿ ನಮ್ಮ ತಂದೆ ಸತ್ತುಹೋದರು. ನಮ್ಮ ತಾಯಿಯ ಮೇಲೆ ಸಂಸಾರದ ಭಾರ ಮತ್ತು ವಯಸ್ಸಾದ ಮಗಳ ಮದುವೆಯ ಭಾರ ಎರಡೂ ಬಿತ್ತು. ನಾನು ಎಷ್ಟು ಧೈರ್ಯ ಹೇಳಿದರೂ ನಮ್ಮ ತಾಯಿಗೆ ಧೈರ್ಯವುಂಟಾಗುತ್ತಿರಲಿಲ್ಲ. ನನ್ನ ಮದುವೆಯನ್ನು ಹೇಗಾದರೂ ಬೇಗನೆ ಮಾಡಿಬಿಡಬೇಕೆಂದು ಹವಣಿಸತೊಡಗಿದರು. ಆ ಸಮಯಕ್ಕೆ ಸರಿಯಾಗಿ ನಮ್ಮೂರಿನ ಒಬ್ಬರಿಗೆ ವಯಸ್ಸಾದ ಹುಡುಗಿ ಬೇಕಾಗಿದ್ದುದರಿಂದ, ಅವರೊಡನೆ ನನ್ನ ವಿವಾಹವು ನೆರವೇರಿತು. ನನ್ನ ಗಂಡನಿಗೆ ಕಂಪನಿಯಲ್ಲಿ ಕೆಲಸ. ನನಗಿಂತ ವಯಸ್ಸಿನಲ್ಲಿ ಬಹಳ ಹಿರಿಯರು. ನಾನು ನನ್ನ ಕನಸಿನ ಸವಿಯನ್ನು ಜೀವನದಲ್ಲಿ ಕಾಣಬೇಕೆಂದಿದ್ದೆ. ಆದರೆ ಜೀವನದ ನೈಜತ್ವವು ಹೆದರಿಕೆಯನ್ನುಂಟು ಮಾಡಿತು ” ಎಂದು ಹೇಳಿ ಸ್ವಲ್ಪ ನಿಧಾನಿಸಿದಳು.

ಏಳಬೇಕೆಂದು ಇದ್ದ ನಾನು ಹಾಗೆಯೆ ಕುರ್ಚಿಯನ್ನು ಬಲವಾಗಿ ಹಿಡಿದೆ. ಅವಳ ಜೀವನದ ಅಂತರಂಗವನ್ನು ಅರಿಯಲು ನನಗೂ ಆಶೆಯಾಯಿತು. ಹಾಗೆಯೆ “ ನಿಮ್ಮ ಪತಿಯ ಆಶೆ-ಆಕಾಂಕ್ಷೆಗಳನ್ನು ತಿಳಿಯುವುದು ನಿಮ್ಮ ಕರ್ತವ್ಯವಾಗಿತ್ತು! ” ಎಂದೆ. ಆಕೆ ಸ್ವಲ್ಪ ನಿಧಾನಿಸಿ ಮಾತನಾಡಿದಳು :

“ . . . . ಹೌದು. . ನನಗೆ ಅವರ ಕಾಮವಿಲಾಸಗಳ ಅರ್ಥವನ್ನು ತಿಳಿಯಬೇಕೆಂದು ಎಷ್ಟು ಹವಣಿಸಿದರೂ ಅವು ಗೊತ್ತಾಗುತ್ತಿರಲಿಲ್ಲ. ಯಾಕೆಂದರೆ ನಮ್ಮಿರ್ವರಿಗೂ ಸರಿಯಾದ ಭೇಟಿಯೆಂದರೆ ರಾತ್ರಿಯ ಹೊತ್ತೆ. ಮಿಕ್ಕ ಸಮಯದಲ್ಲಿ ಅವರ ಕೆಲಸ ಅವರಿಗೆ—ನನ್ನ ಬಾಳು ನನಗೆ. ಅವರಿಗೆ ನಾನೊಂದು ಕಾಮದ ಹೆಣ್ಣಾಗಿ ಪರಿಣಮಿಸಿದ್ದೆ. ಅವರ ಲೈಂಗಿಕನೀತಿಯು ನನ್ನಲ್ಲಿ ಒಂದು ಬಗೆಯ ಅಸಹ್ಯವನ್ನುಂಟುಮಾಡಿತು. ಜೀವನದ ಸುಖವನ್ನು ಅವರೊಡನೆ ಅನುಭವಿಸಲು ಏನನ್ನು ಬೇಕಾದರೂ ಧಾರೆ ಎರೆಯುತ್ತಿದ್ದೆ. ನನಗೆ ದೊರೆತ ಆ ಗಂಡನಿಂದಲೆ ನನ್ನ ಜೀವನದ ಸುಖವನ್ನು ಪರಿಗಣಿಸಲು ಬಹಳ ಯತ್ನವನ್ನು ಮಾಡಿದೆ. ಆದರೆ ಅವರಿಗೆ ಬೇಕಾಗಿದ್ದುದು ನನ್ನ ಯೌವನ-ನನ್ನ ಸೌಂದರ್ಯ ಇವೆರಡೆ. ನನ್ನ ಸುಖದ ಸಾಧನೆಗಾಗಿ ಅವರ ಯೋಚನೆ ತಿರುಗಲೇ ಇಲ್ಲ. ಎಷ್ಟೋಸಾರಿ ನನ್ನ ಮನಸ್ಸಿನಲ್ಲಿಯೆ “ಅಯ್ಯೋ ದೇವರೇ, ನನ್ನ ಮನಸ್ಸಿನಲ್ಲಿರುವ ಬಯಕೆ. . ಜೀವನದ ಕನಸು ಇವುಗಳ ಬಗೆಗೆ ಹೇಗಾದರೂ ಮಾಡಿ ಅವರಿಗೆ ಅರಿವನ್ನುಂಟು ಮಾಡಪ್ಪಾ ” ಎಂದು ದೇವರಲ್ಲಿ ಪ್ರಾರ್ಥಿಸುತ್ತಿದ್ದೆ. ಜೀವನದ ಸೌಜನ್ಯವನ್ನು ಸವಿಯಬೇಕೆಂದಿದ್ದ ನನಗೆ, ಜೀವನದ ಕಠೋರತೆ-ಕಾಠಿಣ್ಯಗಳ ಅನುಭವವೇ ಆಗುತ್ತ ಬಂತು. ಪ್ರತಿನಿತ್ಯದ ರಾತ್ರಿಯ ಅನುಭವವು ಬೆಳಗಾಗುವುದರೊಳಗಾಗಿ ನಮ್ಮಿರ್ವರಿಗೂ ಇದ್ದ ಅಂತರವನ್ನು ಹೆಚ್ಚಿಸುತ್ತಿತ್ತು. ಒಂದು ರಾತ್ರಿ ನನಗೆ ತಡೆಯಲಾರದಂತಾಗಿ ಅವರ ಹುಚ್ಚಿಗೆ ಎದುರಾಗಿ ನಿಂತೆ. ಅವರು ಕೋಪದಲ್ಲಿ ನನ್ನೆದುರಿಗೇ ಬೇರೊಬ್ಬಳ ಮನೆಗೆ ಹೋಗುವುದಾಗಿ ತಿಳಿಸಿದರು. ನಾನು ಆಗ ‘ ಹೋದರೆ ಹೋಗಿ ’ ಎಂದೆ. ಅಂದು ರಾತ್ರಿ ಅವರು ಮನೆ ಬಿಟ್ಟವರು ಮನೆಗೆ ಪುನಃ ಬಂದಾಗ ರಾತ್ರಿ

ತಲೆನೋವು, ನೆಗಡಿ, ಕಾಲರಾ,
ಉರಿ ಮುಂತಾದ ಶಾರೀರಿಕ
ರೋಗಗಳ ಮೇಲೆ

“ ರಜಿಸ್ಟರ್ಡ್ ”

ನೀಲಗಿರಿ ಅರ್ಕ
NILGIR ARK

ಪ್ರತಿ ಒಂದು ಹನಿ ಗುಣದ ಪ್ರಭಾವ
ತೋರಿಸುತ್ತದೆ.

ಬಾಟಲಿ ಕಿಮ್ಮತ್ತು ೪ ಆಣೆ.

ಸ್ಟಾರ್ ಕಂಪನಿ, ಬೆಳಗಾಂವ

ಒಂದು ಗಂಟೆಯಾಗಿತ್ತು. ಅಲ್ಲಿಂದ ಹೊತ್ತಾಗಿ ಬಂದ ದಿನಗಳಲ್ಲಿ ಅವರು ಎಲ್ಲಿಗೆ ಹೋಗುತ್ತಿದ್ದರೆಂಬುದನ್ನು ಅರಿಯಲು ನನಗೆ ಕಷ್ಟವಾಗುತ್ತಿರಲಿಲ್ಲ. ಆದರೆ ನನ್ನಲ್ಲಿದ್ದ ಬಯಕೆಗಳು ತಮ್ಮ ಫಲವನ್ನು ಸಾಧಿಸಲು ಬಹಳ ಶ್ರಮಪಟ್ಟುವು. ನನ್ನ ವಿವಾಹದಿಂದ ನನ್ನ ಬಯಕೆಗಳು ಪೂರ್ಣಗೊಳ್ಳಲಿಲ್ಲ. ನನ್ನ ಪ್ರೇಮದ ಪರಿಪೂರ್ಣತೆಗಾಗಿ ನನ್ನಂತೆಯೆ ಗುಣವುಳ್ಳವನೊಡನೆ ಸ್ನೇಹ-ಹೊಂದಲು ನನ್ನೆದೆ ತವಕಿಸಿತು. ನನ್ನಲ್ಲಿ ಸುಪ್ತವಾಗಿದ್ದ ಕಿಡಿ ಆರಿ ಬೂದಿಯಾಗುವುದರ ಬದಲು, ಜ್ವಾಲೆಗೊಂಡು ಪ್ರಕಾಶ-ಮಾನವಾಗಲು ನನ್ನ ಮನಸ್ಸು ಇಷ್ಟಪಟ್ಟಿತು. ಆ ಆಶೆ ಬಹಳ ಬೇಗನೆ ಪೂರ್ಣಗೊಂಡಿತು. ನಮ್ಮ ನೆರೆಯಲ್ಲಿಯೆ ವ್ಯಾಸಂಗ-ಮಾಡುತ್ತಿದ್ದವರೊಬ್ಬರ ಸ್ನೇಹವು ನನಗೆ ದೊರೆಯಿತು. ಅಂದಿನಿಂದಲೂ ನಾವಿಬ್ಬರೂ ಒಬ್ಬರನ್ನೊಬ್ಬರು ಚೆನ್ನಾಗಿ ಅರಿತಿದ್ದೇವೆ. ನಾನು ಜೀವನದಲ್ಲಿ ನನ್ನ ವಿವಾಹಿತ ಗಂಡನೊಡನೆ ಕಾಣಬೇಕೆಂದಿದ್ದ ಕನಸಿನ ರುಚಿಯನ್ನು ಈಗ ಬೇರೊಬ್ಬರ ಜೊತೆ ಅನುಭವಿಸುತ್ತಿದ್ದೇನೆ. ಆ ನನ್ನ ಕನಸಿನ ಆದರ್ಶವೆ ಬೇರೆ.. ಈಗ—ನನ್ನ ಜೀವನದ ದೌರ್ಜನ್ಯವನ್ನು ಕಂಡು—ಮಾರ್ಪಡಿಸಿಕೊಂಡಿರುವ ಈ ನನ್ನ ಆದರ್ಶವೇ ಬೇರೆ. ಇದೇ ನನಗೆ ನೂರ್ಮಡಿ ಹೆಚ್ಚು ಸುಖ-ಶಾಂತಿಗಳನ್ನು ಕೊಡುತ್ತಿದೆ. ದೇವರು ಈ ಸುಖವನ್ನು ಅನಂತಕಾಲದ ವರೆಗೂ ಕಾಪಾಡಿಕೊಂಡು ಬರಲೆಂಬುದೊಂದೇ ನನ್ನ ಬಯಕೆ " ಎಂದು ಹೇಳಿ, ಸ್ವಲ್ಪ ನಿಧಾನಿಸಿ " ನನ್ನ ಇನಿಯನಿಂದ ನಿಮಗೊಂದು ಕಾಗದವಿದೆ. ಅದು ನನಗೆ ಬರೆದುದಾದರೂ ನಿಮಗೂ ಅನ್ವಯಿಸುತ್ತದೆ.. ಇದನ್ನು ನನ್ನ ಯಜಮಾನರಿಗೆ ಸಿಕ್ಕದಂತೆ ಕಾಪಾಡುವುದರಲ್ಲಿ ನನ್ನ ಶಕ್ತಿಯೆಲ್ಲವೂ ವೆಚ್ಚವಾಯಿತು " ಎಂದು ಹೇಳಿ, ತನ್ನ ಮಡಿಲಿನಿಂದ ಒಂದು ಕಾಗದವನ್ನು ತೆಗೆದುಕೊಟ್ಟಳು.

ನಾನು ವಿಸ್ಮಯದೊಂದಿಗೆ ಆ ಕಾಗದವನ್ನು ನೋಡಿದೆ; ಕಾಗದ ಚಂದುವಿನದು. ಒಕ್ಕಣೆ ಹೀಗೆ ಇತ್ತು:—

"ಪ್ರಿಯ ಇಂದುವಿಗೆ

ನಿನಗೆ ಬಂದ ಕಾಗದಗಳನ್ನು ಯಾರೂ ಒಡೆಯುವುದಿಲ್ಲ ಎಂದು ಹಿಂದೆ ನೀನು ಹೇಳಿದ ಮಾತಿನ ಧೈರ್ಯದ ಮೇಲೆ ಈ ಕಾಗದವನ್ನು ಬರೆಯುತ್ತಲಿದ್ದೇನೆ. ದೇವರು ಕಾಗದವನ್ನು ನಿನ್ನ ಕೈಗೇ ಮುಟ್ಟಿಸಲಿ!

ನನ್ನ ಹೊಟ್ಟೆನೋವು ಬೇಗನೆ ವಾಸಿಯಾಗಬಹುದೆಂದು ತಿಳಿದಿದ್ದೆ. ಆದರೆ ಡಾಕ್ಟರರ ಮಾತಿನ ಮೇರೆಗೆ ಅನಿವಾರ್ಯವಾಗಿ ಮದರಾಸಿಗೆ ಚಿಕಿತ್ಸೆಗಾಗಿ ಹೋಗಬೇಕಾಯಿತು. ನನ್ನ ತಂದೆ-ತಾಯಿಗಳು ನನ್ನ ಜೊತೆಯಲ್ಲಿಲ್ಲದಿದ್ದರೆ, ಹೇಗಾದರೂ ಮಾಡಿ ನಿನ್ನನ್ನು ನೋಡಬೇಕೆಂದಿದ್ದೆ. ಕಾಯಿಲೆಯೇನೂ ಉಗ್ರವಾದುದಲ್ಲ; ಹೆದರಬೇಡ.

ಇನ್ನೊಂದು ವಿಷಯ: ನಾನು ನಿನಗೆ ನನ್ನ ಸ್ನೇಹಿತನ ವಿಷಯ ಹೇಳಿರಲಿಲ್ಲವೆ? ನಿನ್ನಲ್ಲಿ ಅವನು ಇಟ್ಟಿದ್ದ ಭಾವನೆಗಳನ್ನು ಹಿಂದೆಯೆ ಅನೇಕ ವೇಳೆ ನಿನಗೆ ತಿಳಿಸಿರಲಿಲ್ಲವೆ? ಆಗ ನೀನೇ ಸಂತೋಷದಿಂದ ನಿನ್ನ ಫೋಟೋವನ್ನು—ಅವನಿಗೆ ಆನಂದವನ್ನುಂಟುಮಾಡಲಿ ಎಂದು ಕೊಟ್ಟಿದ್ದೆಯಲ್ಲಾ—ಅವನಿಗೆ ನನ್ನ ನಿನ್ನ ಸಂಬಂಧದ ವಿಷಯ ಹೇಳುವುದಕ್ಕೆ ಅದೇಕೋ ನನಗೆ ಆಗುತ್ತಿರಲಿಲ್ಲ. ನೀನೇ ನನಗಿಂತ ಧೈರ್ಯವಂತೆ. ಅದಕ್ಕೆ ನಾಳೆ ನಿಮ್ಮ ಮನೆಯ ಹತ್ತಿರ ಅವನು ಬಂದಾಗ, ನಮ್ಮ ಸಂಬಂಧವನ್ನು ಅವನಿಗೆ ತಿಳಿಸು. ನಿನ್ನ ಜಾಣತನ ಇದರಲ್ಲಿ ತೋರಿಸು, ನೋಡೋಣ. ನನ್ನ ಕಾಯಿಲೆಯ ವಿಚಾರವಾಗಿ ಅವನಿಗೆ ಕಾಗದವನ್ನು ನಾನು ಬರೆಯುತ್ತಿರುತ್ತೇನೆ. ಅವನನ್ನು ನಾನು ನನ್ನ ಹಿಂದಿನ ಜನ್ಮದ ತಮ್ಮನೆಂದೇ ಭಾವಿಸಿದ್ದೇನೆ. ಅವನಿಂದ ನನ್ನ ವಿಷಯವನ್ನು ತಿಳಿದುಕೊಳುತ್ತಲಿರು; ಕಾಯಿಲೆಯಿಂದ ಬೇಗ ವಾಸಿಯಾಗಿ ಬರುತ್ತೇನೆ, ಹೆದರಬೇಡ!

ನಿನ್ನ ಪ್ರೀತಿಯ ಚಂದೂ"

ಕಾಗದವನ್ನು ಓದುತ್ತಾ ಓದುತ್ತಾ ಮನಸಿನಲ್ಲಿ ಅನೇಕ ಭಾವಗಳು ಮೂಡಿದುವು. 'ಬೇರೊಬ್ಬನೊಡನೆ ಸ್ನೇಹ ಸಂಪಾದಿಸುವುದು ಅವಳಿಗೆ ಆವಶ್ಯಕ ಇದ್ದಿತೇ? ತನ್ನ ಬಯಕೆಯನ್ನು ಸಹಿಸಿಕೊಂಡಿರಲು ಆಗುತ್ತಿರಲಿಲ್ಲವೇ!' ಎಂಬ ಪ್ರಶ್ನೆಗಳು ತಲೆಯಲ್ಲಿ ಬಂದುವು. ಕೊನೆಗೆ ಅವೆಲ್ಲಕ್ಕೂ "ಇಲ್ಲಾ..ಇಲ್ಲಾ..ಅವಳು ಮಾಡಿದ್ದೆಲ್ಲವೂ ಸರಿ. ಒಂದು ಕೊಳಕಾದ ಕೊಳದಿಂದ ತಿಳಿನೀರಿಗೆ ಬಂದಿದ್ದಾಳೆ" ಎಂದು ಮನಸ್ಸಿಗೆ ಹೊಳೆಯಿತು. ನನ್ನ ಅಜ್ಞಾನ-ಮೂಲಕ ಕೋಪದಲ್ಲಿ ಇಂದುವಿನ ಪಾಪಗಳು ಸುಟ್ಟುಹೋದಂತೆ ಭಾಸವಾಯಿತು. ಇಂದುವು ಆದರ ಬದಲು ದಿವ್ಯಜ್ಯೋತಿಯಿಂದ ಬೆಳಗುತ್ತಿರುವ ಅಮರಸ್ತ್ರೀಯಾಗಿ ಕಂಡಳು. ನಾನು ಇಂದುವಿನ ಮನಸ್ಸನ್ನು ನನ್ನ ಕೋಪದ ಮಾತಿನಲ್ಲಿ ನೋಯಿಸಿದ್ದಕ್ಕಾಗಿ ವ್ಯಥೆಪಟ್ಟೆ. ಕೂಡಲೆ ಮನಃಶಾಸ್ತ್ರಜ್ಞನೊಬ್ಬನ ಮಾತುಗಳು ನನ್ನೆದುರಿಗೆ ಬಂದು ನಿಂತುವು: "The character of a person is never the borois of moral judgement. It is only an index of the attitude of the person towards the Society or eonvionment." ಅವರವರ ಗುಣಗಳು ಸಂದರ್ಭದ ಕಾಠಿಣ್ಯಕ್ಕೆ ಸಿಕ್ಕಿ ನಾನಾ ರೀತಿಯಲ್ಲಿ ಮಾರ್ಪಾಡಾಗುವುವು. ಇಂದುವಿಗೆ ಸರಿಯಾದ ಗಂಡನು ದೊರೆತಿದ್ದರೆ ಅವಳಿಗೆ ತನ್ನ ಆದರ್ಶಸಾಧನೆಗಾಗಿ ಈ ಬಗೆಯ ಕಷ್ಟವೆ ಇರುತ್ತಿರಲಿಲ್ಲ..ಎಂದು ಯೋಚಿಸಿ, ನಾನು ಮಾಡಿದ ತಪ್ಪಿಗಾಗಿ ಅವಳ ಕ್ಷಮೆಯನ್ನು ಕೇಳಬೇಕೆಂದು ಇಂದುವಿನ ಕಡೆಗೆ ತಿರುಗಿದೆ. ನನಗೆ ಅವಳಲ್ಲಿ ನಿಜವಾಗಿಯೂ ಪೂಜ್ಯಬುದ್ಧಿ ಹುಟ್ಟಿತು.

ಆಗ ಅವಳು "ಕಾಯಿಲೆಯಿಂದ ಬೇಗನೆ ವಾಸಿಯಾಗಿ ಬರುತ್ತಾರೆಯೆ?" ಎಂದು ಕೇಳಿದಳು. "ನಾನು ಖಂಡಿತವಾಗಿಯೂ" ಎಂದೆ. ಅವಳ ಕಂಠವು ಬಿಗಿದು ಬಂತು. ಎದುರಿಗಿದ್ದ ಭಗವಾನನ ಪಟದ ಕಡೆಗೆ ನೋಡುತ್ತಾ, ಕೈಮುಗಿದು ನಸುವೆ ಕಣ್ಣುಮುಚ್ಚಿದಳು. ಆಕೆಯ ಪ್ರಾರ್ಥನೆ ಮುಗಿಯುವುದರೊಳಗಾಗಿ ನಮ್ಮಿಬ್ಬರ ಕಣ್ಣೂ ತೇವಗೊಂಡಿತು.

* * *

ಚಂದುವಿನಿಂದ ಕಾಗದ ಬಂದ ಕೂಡಲೆ ಇಂದುವಿನ ಮನೆಗೆ ಓಡಬೇಕೆಂದು, ಚಂದುವಿನ ಕಾಗದಕ್ಕೆ ಕಾಯುತ್ತಲಿದ್ದೇನೆ.

ನಾಝೀ ಜೀವನ

ಪ್ರೊ. ಎನ್. ಎಮ್. ಕುಲಕರ್ಣಿ, ಎಂ. ಎ.
ಬನಾರಸ ಹಿಂದು ಯುನಿವರ್ಸಿಟಿ

★ ★

ನಾಝೀ ಪೂರ್ವ ಜರ್ಮನಿಯಲ್ಲಿ ಮಧ್ಯಮತರಗತಿಯ ಜನರ ಸ್ಥಾನಕ್ಕೇ ಬೆಲೆಯಿರಲಿಲ್ಲವೆಂದಮೇಲೆ, ಮಿಕ್ಕವರ ಬೆಲೆಯ ಬಗೆಗೆ ಮಾತನ್ನೆ ಎತ್ತುವಂತಿರಲಿಲ್ಲ. ಇಂದಿನ ನಾಝೀ ಜರ್ಮನಿಯ ಸಾಂಘಿಕಜೀವನದಲ್ಲಿ ಪ್ರತಿಯೊಂದು ವ್ಯಕ್ತಿಗೂ ಸ್ಥಾನವಿದೆ, ಮಾನವಿದೆ. ಎಂತಲೆ ಅವರಲ್ಲಿ ಬಳೆಯುತ್ತಿರುವ ರಾಷ್ಟ್ರೋನ್ನತಿಯ ಆದರ್ಶ ಅವರನ್ನು ಒಂದು ಬಗೆಯ ತೃಪ್ತಿಯ ದಾರಿಯಲ್ಲಿ ಕರೆದೊಯ್ಯುತ್ತಲಿದೆ.

(೩)

— ದೈನಿಕ ಜೀವನದ ಚಿತ್ರಗಳು —

ಪ್ರಸ್ತುತ ಲೇಖನದಲ್ಲಿ ಜರ್ಮನರ ಇಂದಿನ ದೈನಂದಿನ ಜೀವನದ ಕೆಲವು ಶಬ್ದಚಿತ್ರಗಳನ್ನು ವಾಚಕರ ಮುಂದಿಡಲು ಯತ್ನಿಸಿದ್ದೇನೆ. ಇಲ್ಲಿಯವರೆಗೆ ನಾಝೀಪಂಥದ ಕನಸುಗಳನ್ನೂ ಮತ್ತು ಅದರ ಪ್ರಾರಂಭದ ಸ್ಥಿತಿಯನ್ನೂ ವರ್ಣಿಸಿದ್ದಾಗಿದೆ. ಹಿಟ್ಲರನು ಸರ್ವಾಧಿಕಾರಿಯಾದಂದಿನಿಂದ, ಪರರಾಷ್ಟ್ರಗಳಿಗೆ 'ಸೇರಿಗೆ ಸವ್ವಾಸೇರಿ'ನ ಪಾಠವನ್ನು ಕಲಿಸಹತ್ತಿದ್ದಾನೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ವರ್ಸಾಯದ ಶಾಂತಿಯೊಪ್ಪಂದದ ಎಲ್ಲ ಕರಾರುಗಳನ್ನೂ ಮುರಿದು ಹಾಕಿ, ಜರ್ಮನಿಯು ಇಂದು ತನ್ನದೊಂದು ವಿಶಿಷ್ಟ ನಿರ್ಣಿತ ನಿಯಮಾವಳಿಯ ಜಾಲವನ್ನು ಯುರೋಪದ ಎಲ್ಲ ರಾಷ್ಟ್ರಗಳ ಮೇಲೆ ಹಬ್ಬಿಸಿಬಿಟ್ಟಿದೆ ಎಂದೆನಬಹುದು. ಇದರಲ್ಲಿ ಮುಖ್ಯ ಕಾರ್ಯಗಳೆಂದರೆ, ಫ್ರೆಂಚರು ಆಕ್ರಮಿಸಿದ ರುಹರ್–ರ್‍ಹಾಯಿನ್ ದೇಶಗಳ ಪುನರಾಕ್ರಮಣ; 'ಜರ್ಮನಿಯು ಅಪ್ಪಣೆ ಪಡೆಯದೆ ಮದ್ದು-ಗುಂಡುಗಳನ್ನು ತಯಾರಿಸಕೂಡದು' ಎಂಬ ಒಪ್ಪಂದದ ನಿರಾಕರಣ; ಮತ್ತು 'ಚಿಕ್ಕ ರಾಷ್ಟ್ರಗಳ ರಾಜಕಾರಣದಲ್ಲಿ ಜರ್ಮನಿಯು ತನ್ನ ಇಷ್ಟದಂತೆ ನಿಯಮಗಳನ್ನು ಮಾಡಿಕೊಳ್ಳುವುದು' ಎಂಬ ನಿರ್ಧಾರ. ಈ ನಿಯಮತ್ರಯಗಳ ಬಲದಿಂದ ಜರ್ಮನಿಯು ಇಂದು ತನ್ನ ಅಂತರರಾಷ್ಟ್ರೀಯ ವ್ಯಕ್ತಿತ್ವವನ್ನು ಸ್ಥಿರೀಕರಿಸಿಕೊಂಡಿದೆ, ಅಲ್ಲದೆ ತನ್ನದೇ ಒಂದು ವಿಶಿಷ್ಟ ರಾಷ್ಟ್ರೀಯತೆಯನ್ನೂ ಜಗತ್ತಿನಲ್ಲಿ ವ್ಯಕ್ತಮಾಡಿದೆ. ಇದೆಲ್ಲ ಬಾಹ್ಯಜೀವನದ ರೀತಿಯಾಯಿತು. ಆದರೆ ನಾಝೀ ಜೀವನದ ಆಂತರಿಕರೀತಿಯು ಇದಕ್ಕೂ ಹೆಚ್ಚಿಗೆ ಮಹತ್ತ್ವದ್ದಾದುದರಿಂದ ಆ ಜೀವನದ ಗುಟ್ಟು-ರೀತಿಗಳನ್ನೂ ಇಲ್ಲಿ ಚಿತ್ರಪೂರ್ತಿಯ ಸಲುವಾಗಿ ವರ್ಣಿಸುವುದು ಅವಶ್ಯವಿದೆ. ಮುಖ್ಯತಃ ಯಾವುದೇ ರಾಷ್ಟ್ರದ ಉನ್ನತಿಗೆ ಆದರ ಆಂತರಿಕ ಬಾಳಿನ ಬೇರುಗಳೇ ಮೂಲಾಧಾರವೆಂದು ಹೇಳಬಹುದು. ಬಾಹ್ಯಜಗತ್ತಿನಲ್ಲಿ ವ್ಯಕ್ತವಾಗುವ ಎಲ್ಲ ಕಾರ್ಯಗಳಿಗೆ ಈ ಆಂತರಿಕವಾದ ಜೀವನರೀತಿಯಿಂದಲೆ ಪುಟ ದೊರೆಯುತ್ತದೆ. ಮಹಾಯುದ್ಧಪೂರ್ವದ ಜರ್ಮನರ ಜೀವನಕ್ಕೂ ಇಂದಿನ ಅವರ ಜೀವನಕ್ಕೂ ಯಾವ ಸಾಮ್ಯವೂ ಇಲ್ಲವೆಂದು ಖಂಡಿತವಾಗಿ ಹೇಳಿದರೆ ಅದು ತಪ್ಪಾಗಲಾರದು. ಆ ಪೂರ್ವಜೀವನದ ರೀತಿಗಳು ಇಂದು ನಾಮಶೇಷವಾಗಿವೆ. ಅದಕ್ಕೆ ಮುಖ್ಯಕಾರಣವೆಂದರೆ ಇಂದಿನ ನಾಝೀ ಪಂಥದ ಆದರ್ಶಯೋಗ. ಈ ಯೋಗಾಭ್ಯಾಸದಲ್ಲಿ ಜರ್ಮನರು ಎಷ್ಟರ ಮಟ್ಟಿಗೆ ಯಶಸ್ವಿಗಳಾಗಿದ್ದಾರೆಂಬುದನ್ನು ನೋಡುವಾ.

ಇಂದಿನ ಜರ್ಮನಿಯ ಆಂತರಿಕಜೀವನಕ್ಕೆ ತಳಹದಿಯಾದ ತತ್ತ್ವಗಳು ಮುಖ್ಯವಾಗಿ ಈ ರೀತಿಯವಾಗಿವೆ: (೧) ಯುರೋಪದಲ್ಲಿ ನೆಲಸಿಕೊಂಡಿರುವ, ಹಂಚಿಹೋಗಿರುವ ಯಾವತ್ತೂ ಜರ್ಮನರ ಐಕ್ಯತೆಯು ಮೊದಲು ಆವಶ್ಯಕ; (೨) ದೇಶದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಸಾಕಷ್ಟು ಸ್ಥಳ ಮತ್ತು ಆಹಾರ ತಂದುಕೊಡಲಿಕ್ಕೆ ವಸಾಹತುಗಳನ್ನು ದೊರಕಿಸಬೇಕು; (೩) ಜರ್ಮನಿಯು ಕೇವಲ 'ಆರ್ಯ' ಜರ್ಮನರ ಭೂಮಿಮಾತ್ರವೆಂಬ ಆದರ್ಶವಿರಬೇಕು; (೪) ಕೆಲಸವಿಲ್ಲದೆ ಗಳಿಸಿದ ಯಾವತ್ತೂ ಆಸ್ತಿಗಳು ಲಿಲಾವಾಗಬೇಕು; (೫) ಯುದ್ಧದಲ್ಲಿ ದುಡಿದ ಎಲ್ಲ ಆಸ್ತಿಗಳೂ ಲಿಲಾವಾಗಬೇಕು; (೬) ಸರಕಾರಕ್ಕೆ ಪ್ರತಿಬಂಧಕವಾದ ಎಂತಹ ಸಂಘಗಳೂ ನಿಃಪಾತವಾಗಬೇಕು; (೭) ಸರ್ವ ಜರ್ಮನ್ ರಾಷ್ಟ್ರದ ಮೇಲೆ ಪ್ರಭುತ್ವವೆಂದರೆ ಕೇವಲ ಸರಕಾರದ್ದು ಮಾತ್ರ. ಈ ಏಳು ತತ್ತ್ವಗಳು ಇಂದಿನ ಜರ್ಮನಿಯ ಆಂತರಿಕ ಜೀವನದ ಬೇರುಗಳಾಗಿವೆ. ಎಲ್ಲಕ್ಕೂ ಶ್ರೇಷ್ಠವಾದ ಬದಲಾವಣೆಯೆಂದರೆ ಇಂದಿನ ಜರ್ಮನರ ಸಾಮಾಜಿಕ ಜೀವನ. ಯುದ್ಧಪೂರ್ವದಲ್ಲಿ ಜರ್ಮನರು ಸಾವಿರಾರು ತರದ ಕುಲ-ಗೋತ್ರ-ಜಾತಿ ಮುಂತಾದ ಭಿನ್ನತೆಗಳಿಂದ ಹಂಚಿ ಹೋಗಿದ್ದರು. ನಮ್ಮ ದೇಶದಲ್ಲಿ ಕೂಡ ಕಾಣದಂತಹ ಜಾತಿ-ನೀತಿಭೇದವು ಅಂದಿನ ಜರ್ಮನಿಯಲ್ಲಿತ್ತು. ಇಂದಿನ ನಾಝೀಜೀವನದಲ್ಲಿ ಈ ಎಲ್ಲ ಉಚ್ಚ-ನೀಚ

ಡೋಂಗರೆ ಇವರ ಬಾಲಾಮೃತವು

ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಭೇದಭಾವನೆಗಳು ಮಾಯವಾಗಿವೆ. ಈ ಪೂರ್ವದಲ್ಲಿ ಮುಖ್ಯವಾಗಿ 'ರಾವಸಾಹೇಬ' ಮತ್ತು 'ರಾವಬಹಾದ್ದೂರ್' ಎಂಬಂತಹ ಪದವೀಧರರ ಸಾಮಾಜಿಕ ಪಂಗಡವೊಂದು ಜರ್ಮನಿಯಲ್ಲಿ ವಿಶಿಷ್ಟಹುದ್ದೆಗಳಲ್ಲಿ ಬೇರೂರಿತ್ತು. ಅಲ್ಲದೆ ಕಲಿತವರು ಬೇರೆ, ಕಲಿಯದವರು ಬೇರೆ. . ಎಂಬ ಇನ್ನೊಂದು ಭಿನ್ನತೆ; ಉದಾಹರಣೆಗಾಗಿ ಹೇಳಬೇಕೆಂದರೆ ಜರ್ಮನಿಯಲ್ಲಿ ಅಂದು ಪೋಸ್ಟ್‌ಮನ್ನರೂ ಪೋಲೀಸರೂ 'ರಾವಬಹಾದ್ದೂರ್' ಪಂಗಡವೊಂದಸ್ನುಳಿದು ಇನ್ನಿತರ ಜನರಿಗಿಂತ ಶ್ರೇಷ್ಠವಾದ ಸಾಮಾಜಿಕ ಮರ್ಯಾದೆಯುಳ್ಳವರಾಗಿದ್ದರು! ನಿಜವಾಗಿಯೂ ಈ ರೀತಿಯ ಸಾಮಾಜಿಕ ಭಿನ್ನತೆಯು ಹಿಟ್ಲರನ ಪ್ರಥಮಚಳವಳಿಗೆ ಒಂದು ದೊಡ್ಡ ಕಂಟಕವಾಗಿತ್ತು. ಹಿಟ್ಲರನು ಹಿಂಡನ್‌ಬರ್ಗನಿಂದ 'ಸಿಪಾಯಿ' ಎಂಬ ಹೀನೋಕ್ತಿಯಲ್ಲಿ ಕರೆಯಲ್ಪಡುತ್ತಿದ್ದನು. ಇಂತಹ ಭಿನ್ನತೆಯುಳ್ಳ ಜರ್ಮನರನ್ನೆಲ್ಲ ಇಂದು ಹಿಟ್ಲರನು ಸಮಾನಧ್ಯೇಯದವರನ್ನು ಮಾಡಿದ್ದಾನೆ. ಇಂದು ಜರ್ಮನಿಯಲ್ಲಿ ಯಾವ ರೀತಿಯ ಸಾಮಾಜಿಕ ಉಚ್ಚ-ನೀಚ ಭಿನ್ನಭಾವವಿಲ್ಲ. ಎಲ್ಲರಿಗೂ ಮರ್ಯಾದೆತರುವ ಇಂದಿನ ರೀತಿಯೆಂದರೆ ಒಂದೇ ಒಂದು: ಜರ್ಮನಿಯ ರಾಷ್ಟ್ರೀಯತೆಗೆ ಆತ್ಮಯಜ್ಞಮಾಡುವವರೆಲ್ಲ ಇಂದು ನಾಝೀಜೀವನದಲ್ಲಿ ಶ್ರೇಷ್ಠಪದದವರು. ಅದೇ ಒಂದು ವಿಶಿಷ್ಟತೆ ಇದ್ದರೆ ಸಾಕು, ಇನ್ನಾವ ಶಿಫಾರಸೂ ಬೇಕಾಗಿಲ್ಲ.

ಜರ್ಮನಿಯ ಇಂದಿನ ಜೀವನಾದರ್ಶಕ್ಕೆ ತಲೆದೂಗದ ಅನೇಕ ವಿಮರ್ಶಕರು, ಈ ರಾಷ್ಟ್ರದ ವಿಷಯವಾಗಿ ಅನೇಕ ಕಟುತಮ ಶಬ್ದಗಳನ್ನು ಪಯೋಗಿಸಿದ್ದಾರೆ. ಅದು ಸಂಕುಚಿತ ದೃಷ್ಟಿಯ ಫಲ. ಹಿಟ್ಲರನ ರಾಜ್ಯರೀತಿಯು ಕೆಲವೊಂದು ರೀತಿಗಳಲ್ಲಿ ನಿಕೃಷ್ಟವಾಗಿಯೂ ವಿಮರ್ಶಾರ್ಹವಾಗಿದ್ದರೂ, ಈ ವಿಷಯದಲ್ಲಿ ಮಾತ್ರ ಬಲವಾಗಿ ಹೊಗಳತಕ್ಕಂತಹದಾಗಿದೆ. ಒಂದೆ ಮಾತಿನಲ್ಲಿ ಹೇಳಬೇಕೆಂದರೆ, ಇಂದು ಜರ್ಮನಿಯಲ್ಲಿ '**ಕರ್ಮಯೋಗಿ**'ಗಳಿಗೆ ಮಾತ್ರ ಸ್ಥಾನ, ಮರ್ಯಾದೆ ಇದೆ. ಎಂದರೆ ನಾಝೀಜೀವನದಲ್ಲಿ ಆದರ್ಶ-ಕನಸುಗಳಿಗೆ ಸ್ಥಾನವಿಲ್ಲವೆಂದಲ್ಲ. ಆದರೆ ಕೇವಲ ಮಾತಿನಿಂದ ಜೀವಿಸುತ್ತಿರುವ ಜನರಿಗೆ ಇಂದು ಜರ್ಮನಿಯಲ್ಲಿ ಸ್ಥಾನವಿಲ್ಲ. ಪ್ರತಿಯೊಬ್ಬನೂ ಕೆಲವೊಂದು ವಿಶಿಷ್ಟಕಾರ್ಯವನ್ನೂ ಕೈಮುಟ್ಟಿ ಮಾಡಲೆ ಬೇಕು. ಅದಕ್ಕೆ ಹಿಟ್ಲರನ ಜೀವನವೇ ಸಾಕ್ಷಿ ಮತ್ತು ಉತ್ತೇಜನ. ಪ್ರಾಯಶಃ ಜಗತ್ತಿನಲ್ಲಿ ಇಷ್ಟು ದೊಡ್ಡ ಅಧಿಕಾರ ದೊರಕಿಸಿದ ಯಾವ ವ್ಯಕ್ತಿಯೂ ಹಿಟ್ಲರನಷ್ಟು ಸಾಮಾನ್ಯರೀತಿಯಲ್ಲಿ ಜೀವಿಸುವುದಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇದೇ ತತ್ತ್ವವೇ ಇಂದಿನ ಜರ್ಮನ್ ರಾಷ್ಟ್ರದ ಸಫಲತೆಗೆ ಕಾರಣವಾಗಿದೆ. ಆರೂವರೆ ಕೋಟಿ ಸದೃಢಕಾಯರಾದ ಮಾನವರು, ಕೈಮುಟ್ಟಿ ಕಾರ್ಯಭೂಮಿಯಲ್ಲಿ ಕೆಲಸ ಮಾಡಹತ್ತಿದರೆ ಅವರಿಂದ ಯಾವ ಕಾರ್ಯವು ಅಸಾಧ್ಯ?

ಇಂತಹ ಕಾರ್ಯಭೂಮಿಯಲ್ಲಿ ಮೇಲುಪಟ್ಟಿ ಹಾಕಿಕೊಡುವ ಇಂದಿನ ನಾಝೀರೀತಿಯೊಂದಿದೆ. ಅದಕ್ಕೆ 'Strength through Joy' ಎಂದು ಹೆಸರು. ಇದೊಂದು ಕೆಲಸ ಮಾಡುವವರ ಸಂಘ. ಇದರಲ್ಲಿ ಸುಮಾರು ೩೫೦,೦೦೦ ಜನರಿದ್ದಾರೆ. ಇವರೆಲ್ಲರೂ ಕೂಲಿಕಾರರು. ಈ ಖಾತೆಗೆ ಒಬ್ಬ ಅಧಿಕಾರಿಯಿದ್ದಾನೆ. ಅವನಿಗೆ ಮಂತ್ರಿಪದವಿದೆ. ಅವನು ಈ ಎಲ್ಲ ಜನರಿಗೆ ಒಂದು ವಿಶಿಷ್ಟ ವೇಳಾಪತ್ರವನ್ನೂ ಕಾರ್ಯನಿರ್ವಾಹಕ ಮಾದರಿಯನ್ನೂ ತಯಾರಿಸಿದ್ದಾನೆ. ಪ್ರತಿಯೊಬ್ಬ ಈ ಸಂಘದ ಸದಸ್ಯನೂ ದಿನಾಲು ತನ್ನ ಶಕ್ತಿಯಿದ್ದಷ್ಟು ಕಾರ್ಯ ಮಾಡಲೆ ಬೇಕು. ಅದು ದೈಹಿಕಶ್ರಮವಿದ್ದಿರಬಹುದು, ಇಲ್ಲವೆ ಮಾನಸಿಕ ಕಾರ್ಯವಿರಬಹುದು. ಆದರೆ ಪ್ರತಿಯೊಬ್ಬ ಸದಸ್ಯನಿಗೂ ಕೂಲಿಯೆಂದರೆ ತನಗೋಸುಗವಲ್ಲ; ಅವನ ಆಹಾರ-ವಿಹಾರಕ್ಕೆ ಪೂರ್ತಿಯಾಗುವಷ್ಟು ಮಾತ್ರ ಅವನಿಗೆ ಕೂಲಿ. ಅದು ಕೂಡ ಸರಕಾರದಿಂದ ಅವನಿಗೆ ಪದಾರ್ಥರೂಪದಲ್ಲಿ ದೊರೆಯುತ್ತದೆ. ಅಲ್ಲದೆ ಸದಸ್ಯನ ಆಧ್ಯಾತ್ಮಿಕ ಜೀವನಕ್ಕೂ ಸರಕಾರದಿಂದಲೆ ವ್ಯವಸ್ಥೆಯಾಗುತ್ತದೆ. ಎಂದರೆ ಅವನ ಆಟ-ನೋಟ ಮತ್ತು ಇನ್ನಿತರ ಲಲಿತಕಲಾ ವ್ಯಾಸಂಗವೆಲ್ಲವೂ, ಸರಕಾರದಿಂದ ನಡೆಯಿಸಿದ ಗಾಯನ-ಕಲಾಭುವನಗಳಲ್ಲಿ ದೊರೆಯುತ್ತದೆ. ಅಲ್ಲದೆ ಸ್ಥಳದಿಂದ ಸ್ಥಳಕ್ಕೆ ಸಂಚರಿಸಲಿಕ್ಕೂ, ಸರಕಾರದಿಂದ ನಿರ್ಮಿತವಾದ ಮೋಟಾರು ಅಥವಾ ರೇಲ್ವೆ ಮತ್ತು ಹಡಗು ಇವುಗಳ ಅನುಕೂಲತೆಯಿರುತ್ತದೆ. ಇದಾವುದಕ್ಕೂ ಸದಸ್ಯನು ಹಣ ಕೊಡಬೇಕಾಗಿಲ್ಲ. ಈ ರೀತಿಯಿಂದ ಇಂದಿನ ನಾಝೀ ಕೂಲಿಕಾರನು ತನ್ನ ಶಕ್ತಿಮೀರಿ, ಸಂಕೋಚವಿಲ್ಲದೆ ತಕರಾರಿಲ್ಲದೆ

ಸಂಘ' ಹೂಡದೆ ಸ್ವಸಂತೋಷದಿಂದ ಕಾರ್ಯಮಾಡುತ್ತಾನೆ. ಅವನ ಪ್ರತಿಯೊಂದು ನಿಮಿಷವೂ ರಾಷ್ಟ್ರಕಾರ್ಯದಲ್ಲಿ ನಿರತವಾಗಿರುತ್ತದೆ. ಇದೊಂದು ಕಾರ್ಯಕ್ರಾಂತಿಯೆಂದೇ ಹೇಳಬಹುದು. ಏಕೆಂದರೆ ಭಾರತದಲ್ಲಿ ದೇಶಭಕ್ತರು, ರಾಷ್ಟ್ರಸೇವಕರು ಎಂದರೆ ಕೇವಲ ಹಣವಿದ್ದವರು ಇಲ್ಲವೆ ಮನೆ-ಮಾರಿನ ಪರಿವೆ ಇಲ್ಲದವರಷ್ಟೇ ರಾಷ್ಟ್ರಕಾರ್ಯದಲ್ಲಿ ಭಾಗವಹಿಸಲು ಶಕ್ಯವಿದೆಯಷ್ಟೇ? ಇಂತಹ ದೇಶಭಕ್ತಿಯಿಂದ ವ್ಯಕ್ತಿಗಳ ಆತ್ಮ-ಯಜ್ಞವಾದದ್ದಷ್ಟೆ ಹೊರತಾಗಿ, ಆ ಯಜ್ಞಕ್ಕೆ ಪ್ರತಿಫಲ ದೊರಕಲು ಶಕ್ಯವಿಲ್ಲ. ಗೀತೆಯಲ್ಲಿ 'ಕರ್ಮಣ್ಯೇವ' ಎಂದು ಹೇಳಿದಂತೆ ಇಂತಹ ಭಕ್ತರು ಒಂದು ಬಗೆಯ ಆಧ್ಯಾತ್ಮಿಕ ಸಮಾಧಾನವನ್ನು ಹೊಂದಬಹುದು. ಆದರೆ ದೈನಿಕಜೀವನದಲ್ಲಿ ಇಂತಹ ಸಮಾಧಾನದಿಂದ ಹೆಚ್ಚು ಫಲ ಬರಲು ಸಾಧ್ಯವಿಲ್ಲ. ಈ ರೀತಿಯಿಂದ ನೋಡಲು ಇಂದಿನ ಈ ಜರ್ಮನರ ಕೂಲಿಕಾರಸಂಘವು ನಿಜವಾಗಿಯೂ ಉಚ್ಚತಮ ರಾಷ್ಟ್ರಸೇವೆಯಲ್ಲಿ ನಿರತವಾಗಿದೆಯಲ್ಲದೆ ಆದರ ಪ್ರತಿಫಲವೂ ಸಾಕಷ್ಟು ರಾಷ್ಟ್ರೋನ್ನತಿಯಲ್ಲಿ ಕಂಡುಬರುತ್ತಲಿದೆ. ಅಂತೆಯೆ ಈ ಕೂಲಿಕಾರರು ದೇಶಭಕ್ತರಾಗಿದ್ದಾರೆ. ಅವರು ಎಂದಿಗೂ ಕರ್ಮಯೋಗಿಗಳು. ಆದರ್ಶಗಳನ್ನು ಕಾರ್ಯರೂಪದಲ್ಲಿ ತರುವ ಇಚ್ಛೆಯಿದ್ದವರು ಈ ಮಾದರಿಯನ್ನು ಮುಂದಿಟ್ಟುಕೊಳ್ಳಬಹುದು. ಪ್ರಾಯಶಃ ಜೀವನದಲ್ಲಿ ಇಂತಹ ಮಾದರಿಗಳ ಸೂಚನೆ ಮಾಡುವವರಿಗೆ ವಿಶೇಷ ಮರ್ಯಾದೆ ಇರುವುದಿಲ್ಲ. ಆದರೂ ಇಂತಹ ರೀತಿಯು ಕರ್ಮಕ್ಷೇತ್ರದಲ್ಲಿ ತರಲು ಶಕ್ಯವಿದೆಯೆಂದು ಈ ನಾಝೀ ಕೂಲಿಕಾರಸಂಘವು ಸಾರುತ್ತದೆ.

ಇದರಲ್ಲಿ ಇನ್ನೊಂದು ವೈಶಿಷ್ಟ್ಯ: ಜರ್ಮನಿಯು ಯುದ್ಧದ ಪೂರ್ವದಲ್ಲಿ ವಿಶೇಷತಃ ಔದ್ಯೋಗಿಕ ಕೇಂದ್ರವಾಗಿತ್ತು. ಏಶಿಯದಲ್ಲಿ ಜಪಾನು ಇದ್ದಂತೆ ಯುರೋಪದಲ್ಲಿ ಜರ್ಮನಿಯಿತ್ತು. ಆದರೆ ಇಂದು ಔದ್ಯೋಗಿಕ ಸ್ಥಾನದಿಂದ ನಾಝೀಜೀವನವು ಕೃಷಿಕರ್ಮದ ಸ್ಥಾನಕ್ಕೆ ಬಂದಿದೆಯೆಂದು ಹೇಳಬಹುದು. ಚಲಿತ ಶತಮಾನದ ನಾಗರಿಕತೆಯಲ್ಲಿ,ಎಲ್ಲಿ ನೋಡಿದರೂ ಕೇವಲ ಯಂತ್ರೋದ್ಯೋಗಿಕ ಪ್ರಚಾರವೆ ಸಾಗಿ ಬಂದಿದೆ. ಮೇಲ್ಪಙ್ಕ್ತಿಯಲ್ಲಿರುವ ಇಂದಿನ ರಾಷ್ಟ್ರಗಳೆಲ್ಲವೂ ಔದ್ಯೋಗಿಕ ಕೇಂದ್ರಗಳಾಗಿವೆ. ಆದರೆ ಜರ್ಮನಿಯು ಮಾತ್ರ ಇಂದು 'ಹಳೆಯ ಪದ್ಧತಿ'ಗೆ ಹೋಗಹತ್ತಿದೆ, ಎಂದರೆ ಔದ್ಯೋಗಿಕೋನ್ನತಿಯನ್ನು ಬಯಸದೆ ನೇಗಿಲುವಿದ್ಯೆಯಲ್ಲಿ ತನ್ನ ಶಕ್ತಿಯನ್ನು ಉಪಯೋಗಿಸಹತ್ತಿದೆ. ಇಂತಹ ರೀತಿಯಲ್ಲಿ ಒಂದು ಔಚಿತ್ಯವಿದೆ. ಅದೇನೆಂದರೆ ಯಾವುದೇ ರಾಷ್ಟ್ರದ ನಿಜವಾದ ಉನ್ನತಿಯು ಭೂಮಿಯಲ್ಲಿ ಅಂತರ್ಗತವಾಗಿದೆಯೆಂದು ಹೇಳಬಹುದು. ಎಂದರೆ ಯಾವುದೇ ಜನಾಂಗವು ತನ್ನ ವೈಶಿಷ್ಟ್ಯವನ್ನು ವ್ಯಕ್ತಮಾಡಲಿಕ್ಕೆ, ಮೊದಲು ತನ್ನ ಕೃಷಿಜೀವನವನ್ನು ಸ್ಥಿರೀಕರಿಸಿಕೊಳ್ಳಬೇಕು. ಭೂಮಾತೆಯಿಂದ ಜನಿಸಿದವರು ಅವಳ ಪೂಜೆಯಿಂದಲೆ ಪುಷ್ಟರಾಗಲಿಕ್ಕೆ ಸಾಧ್ಯವಿದೆ. ಅಂತೆಯೆ ನಿಜವಾದ ನಾಗರಿಕತೆಯು ಹೆಚ್ಚಬೇಕಾದರೆ ಜನಾಂಗಗಳೆಲ್ಲ 'ಹಳೆಯ ಪದ್ಧತಿ'ಯನ್ನು ಅನುಸರಿಸಬೇಕು. ಸಾಂಸ್ಕೃತಿಕ ಉನ್ನತಿಯಾದರೂ ಇದರಿಂದಲೆ ಉಂಟು. ಮಾನವನು ನಿಸರ್ಗದಿಂದ ದೂರನಾದಂತೆ ಅವನ ಸಂಸ್ಕೃತಿಯು ಕೃತ್ರಿಮವಾದದ್ದಾಗುತ್ತವೆ, ಜೀವನದ ಬೆಲೆಗಳು ದುರುಪಯೋಗವನ್ನು ಹೊಂದುತ್ತವೆ. ಒಕ್ಕಲಿಗರ ಬಾಳು ನಿಜವಾಗಿಯೂ ಸುಸಂಸ್ಕೃತವಾದದ್ದು; ಅವರು ಕಲಿತಿರಲಿ, ಕಲಿಯದಿರಲಿ, ನಿಜವಾದ ಸಂಸ್ಕೃತಿಯ ಮಾರ್ಗ ಮಾತ್ರ ಅವರದೇ ಎಂದು ಹೇಳಬಹುದು. ಭೂಮಿಯನ್ನು ಸಾಗುವಳಿ ಮಾಡಿದಂತೆ ಅವರ ಮನಸ್ಸೂ ದೇಹವೂ ಕೂಡಿಯೆ ಸಾಗುವಳಿಯಾಗುತ್ತವೆ. ಈ ಕೃಷಿಯೆ ಸಂಸ್ಕೃತಿ. ಇದೆಲ್ಲ ತತ್ತ್ವವನ್ನು ಒಕ್ಕಲಿಗನು ಅರಿಯದಿದ್ದರೂ ಅದರ ಸತ್ಯವು ಕಟ್ಟಿಟ್ಟದ್ದೆ. ಈ ದೃಷ್ಟಿಯಿಂದ ನೋಡಲು ಇಂದಿನ ನಾಝೀಜೀವಿಗಳು ನಿಜವಾಗಿಯೂ ಸಾಂಸ್ಕೃತಿಕ ಪಥದಲ್ಲಿವೆಯೆಂದು ನಿರ್ವಿವಾದವಾಗಿ ಹೇಳಬಹುದು. ಸಾಮಾನ್ಯವಾಗಿ ಇಂದಿನ ಜರ್ಮನಿಯ ನಿಂದಾಪೂರ್ಣಸಾಹಿತ್ಯವನ್ನೆ ಶ್ರವಣಿಸಿದವರಿಗೆ ಈ ಎಲ್ಲ ತತ್ತ್ವಾನುವಾದವು ಆಶ್ಚರ್ಯಕರವಾಗಿಯೂ, ನಂಬಲಾರದ್ದಾಗಿಯೂ ಕಾಣುವುದು ಸಹಜ. ಆದರೆ ಇದು ಅಲ್ಲಿಯ ಇಂದಿನ ನಿಜಸ್ಥಿತಿ. ಇಂತಹ ಕಾರ್ಯವನ್ನು ಕೊನೆಗಾಣಿಸಲಿಕ್ಕೆ ನಾಝೀಪಂಥದವರು 'ದೇಶೀಯ ಆಹಾರ ಖಾತೆ (Natinnal Food Estate)' ಎಂಬುದೊಂದು ಸಂಘ ನಿರ್ಮಿಸಿದ್ದಾರೆ. ಇದರ ಮುಖ್ಯ ಕರ್ತವ್ಯವೆಂದರೆ, ಒಕ್ಕಲಿಗರು ಬೆಳೆಯತಕ್ಕ ಧಾನ್ಯಗಳ ಪರಿಮಾಣವನ್ನೂ, ಬೆಲೆಗಳನ್ನೂ ಪೂರ್ವದಲ್ಲಿಯೆ ನಿರ್ಣಯಿಸುವುದು. ಈ ವಿಷಯದಲ್ಲಿ ಒಕ್ಕಲಿಗರಿಗೆ ವ್ಯಕ್ತಿಸ್ವಾತಂತ್ರ್ಯವಿಲ್ಲ. ಅವರೆಲ್ಲರೂ ಈ ಸಂಘವು ನಿರ್ಣಯಿಸಿದ ಧಾನ್ಯಗಳನ್ನೆ ಬೆಳೆಯಬೇಕು; ಅಲ್ಲದೆ

ಡಾಕ್ಟರ್ ಪಿ. ಸಿ. ರಾಯರು ಕೊಂಡಾಡಿದ

ರುಚಿಕರ ಮತ್ತು ಪಾಚಕ ವನಸ್ಪತಿಜನ್ಯ

ರಜಿಸ್ಟರ್ಡ್ ಚಮನ ಟ್ರಾ.ಕಿ. ೪ ೮.

CHAMAN

ಇದರಿಂದ ಹಸಿವೆಯಾಗಿ ಪಚನಶಕ್ತಿಯು
ಬೆಳೆಯುತ್ತದೆ; ಮತ್ತು ದುರ್ಘಟ
ಅಜೀರ್ಣವನ್ನು ಗುಣಪಡಿಸುತ್ತದೆ.

ಇದಲ್ಲದೆ ಥಂಡಿಯಿಂದ ಹೊಟ್ಟೆನೋಯೋಣ,
ಅಪಚನ, ಕೆಮ್ಮು, ದಮ್ಮು, ಕಫ
ಮುಂತಾದುವುಗಳ ಮೇಲೆ

ಚಮನವು

ಅತ್ಯಂತ ಗುಣಕಾರಿಯಿದೆ.

ಸ್ಟಾರ್ ಕಂಪನಿ, ಬೆಳಗಾಂವ

ಹೊಸ ಕಾನೂನಿನ ಪ್ರಕಾರ ಟ್ರೇಡ್‌ಮಾರ್ಕುಗಳನ್ನು ರಜಿಸ್ಟರ್ ಮಾಡಿಸುವುದು ಅನಿವಾರ್ಯವಾಗಿದೆ.
ವಿವರಗಳಿಗಾಗಿ ಕೂಡಲೆ ಬರೆಯಿರಿ.
ಸಿ. ಜಿ. ಅನುಂದ್ ಆ್ಯಂಡ್ ಕಂಪನಿ
೧೪ ಹೇರಸ್ಟ್ರೀಟ್, ಕಲಕತ್ತಾ
ವೆಚ್ಚ ಕಡಿಮೆ! ಹೆಚ್ಚಿನ ಸಂರಕ್ಷಣೆ!

ಪರಿಮಾಣದಲ್ಲಿಯೂ ಸಂಘವು ನಿರ್ದಿಷ್ಟಪಡಿಸಿದಷ್ಟನ್ನೇ ಬೆಳೆಯಬೇಕು. ಒಕ್ಕಲಿಗರಿಗೆ ಒಂದು ಬಗೆಯ ಧೈರ್ಯ ಮತ್ತು ಉನ್ನತಿಯ ಆಸೆ ದೊರೆಯಬೇಕೆಂದು ಈ ಸಂಘವು ೩೦೦ ಎಕರೆಗಳ (ಅಥವಾ ಅದರೊಳಗಿನ) ಎಲ್ಲ ಜಮೀನುಗಳನ್ನೂ ಒತ್ತೀ, ಮಾರಾಟ ಮೊದಲಾದುವುಗಳಿಂದ ಸಂರಕ್ಷಿಸುತ್ತದೆ. ಎಂದರೆ ಈ ಜಮೀನುಗಳಿದ್ದವರು ತಮ್ಮ ಕೃಷಿಕಾರ್ಯವನ್ನು ನಡೆಯಿಸಲಿಕ್ಕೆ ಸಾಲಮಾಡಿ, ಸಾವುಕಾರರಿಗೆ ತಾವು ಬೆಳೆದ ಎಲ್ಲ ಪೈರಿನ ಫಲ ಕೊಡುವ ಅವಶ್ಯವಿಲ್ಲ. ಯಾವುದೇ ರೀತಿಯ ಸಹಾಯ ಬೇಕಾಗಿದ್ದರೂ ಈ ಒಕ್ಕಲಿಗರು ಸಂಘದಿಂದ ಸಹಾಯ ಹೊಂದುತ್ತಾರೆ. ಗೊಬ್ಬರ, ಬೀಜ, ಕೂಲಿ ಮುಂತಾದ ಎಲ್ಲವನ್ನೂ, ಸಂಘಕ್ಕೆ ಅರ್ಜಿಮಾಡಿ ದೊರಕಿಸಬಹುದು; ಮತ್ತು ಅದಕ್ಕೆಲ್ಲ ಒಂದು ನಿರ್ದಿಷ್ಟ ಬೆಲೆ ಕೊಡಬೇಕಾಗುವುದು. ಜಮೀನ್‌ದಾರನ ತರುವಾಯ ಅದು ಅವನ ಮಕ್ಕಳಿಗೆ ಇಲ್ಲವೆ ಇತರ ವಾರಸದಾರರಿಗೆ ಹೋಗುವುದು. ಯಾವುದೇ ಜಮೀನ್‌ದಾರನು ತನ್ನ ಕ್ಷೇತ್ರವನ್ನು ಸರಿಯಾಗಿ ಸಾಗುವಳಿ ಮಾಡದಿದ್ದರೆ, ಅವನಿಂದ ಜಮೀನು ಸಂಘದ ಸ್ವಾಧೀನಕ್ಕೆ ಬಂದು ಕೆಲಸ ಮಾಡಬಲ್ಲ ಒಕ್ಕಲಿಗನಿಗೆ ಅದು ಕೊಡಲ್ಪಡುವುದು. ಈ ನಿಯಮವನ್ನು ಭಾರತದ ಜಮೀನ್‌ದಾರರಿಗೆ ಹೇಳಿದರೆ ಅಲ್ಪ-ಸ್ವಲ್ಪ ಸುಧಾರಣೆಯಾಗಬಹುದು. ಬೀಳು ಬಿದ್ದರೇನು? ಹೇರಳವಾಗಿ ಹಣ ಬಂದರೇನೇ ಹೊಲ ಮಾಡಿಸುವುದೆಂದು ಸಾರುವ ಜಮೀನ್‌ದಾರರು ನಮ್ಮಲ್ಲಿ ಬೇಕಾದಷ್ಟಿದ್ದಾರೆ. ಈ ರೀತಿ ನಿಸರ್ಗಸಿದ್ಧ ಫಲಗಳನ್ನು ನಿರಾಕರಿಸುವ ಮಾನವರಿಗೆ ನಾಝೀಜೀವನದಲ್ಲಿ ಸ್ಥಳವಿಲ್ಲ.

ಇಂತಹ ಒಕ್ಕಲಿಗರ ಸಂಘದಲ್ಲಿ ಜರ್ಮನಿಯಲ್ಲಿ ಇಂದು ಹತ್ತು ಲಕ್ಷ ಸದಸ್ಯರಿದ್ದಾರೆ. ಅವರಿಗೆ ಜಮೀನಿನಲ್ಲಿ ಸ್ವಾಮಿತ್ವವಿಲ್ಲ. ಅದು ರಾಷ್ಟ್ರದ್ದು. ಕೇವಲ ಕರ್ಮಯೋಗಿಗಳಿಗೇ ಅದರ ಉಪಯೋಗದ ಅಧಿಕಾರ. ಈ ರೀತಿಯಲ್ಲಿ ಸಾಗುವಳಿಯಾದ ಭೂಮಿಯಿಂದ ಇಂದಿನ ನಾಝೀಜೀವನದ ಎಲ್ಲ ಆಹಾರವಸ್ತುಗಳು ಬೆಳೆದು ಬರುತ್ತವೆ. ಪರದೇಶದಿಂದ ಬರುವ ಆಹಾರಪದಾರ್ಥಗಳ ಪ್ರಮಾಣವು ದಿನೇ ದಿನೇ ಕಡಿಮೆಯಾಗುತ್ತ ನಡೆದಿದೆ. ಅಲ್ಲದೆ ಸಂಘವು ನಿರ್ದಿಷ್ಟಗೊಳಿಸಿದ ಬೆಳೆಯನ್ನು ಪೂರಯಿಸಿಕೊಟ್ಟ ಜಮೀನದಾರರಿಗೆ ಇನ್ನಾವ ರೀತಿಯಿಂದಲೂ ಭೀತಿಯಿಲ್ಲ. ಅವರ ಸ್ವಾಮಿತ್ವಕ್ಕೆ ಅಲಸಿಗತನವೇ ಒಂದು ಪ್ರತಿಬಂಧವಾಗಬಹುದಿಷ್ಟೇ! ಇಂತಹ ಒಕ್ಕಲಿಗರ ಸಂಘದ ಪರಿಣಾಮವಾಗಿ ಇಂದು ಜರ್ಮನಿಯ ಭೂಮಿಯೆಲ್ಲ ಫಲಪ್ರದವಾಗಿದ್ದು, ರಾಷ್ಟ್ರೋನ್ನತಿಯ ಕಾರ್ಯದಲ್ಲಿ ಅದು ಶ್ರೇಷ್ಠ ಕಾರಣವಾಗಿದೆ. ಯಾವುದೆ ಜಮೀನಿನಲ್ಲಿ ಏನಾದರೂ ಕೊರತೆಗಳಿದ್ದರೆ ಅವುಗಳನ್ನು ಸಂಘಕ್ಕೆ ಅರ್ಜಿ ಮಾಡಿ ದೂರಮಾಡಿಕೊಳ್ಳಬಹುದು. ನಟ್ಟು ಕಡಿಸುವುದು, ಕಾಲುವೆ ತೆಗೆಸುವುದು, ಒಡ್ಡು ಹಾಕಿಸುವುದು, ಕೆರೆ-ಕಟ್ಟೆ ಕಟ್ಟುವುದು ಮುಂತಾದ ಕಾರ್ಯಮಾಡಬೇಕಾಗಿದ್ದಲ್ಲಿ, ಜಮೀನುದಾರನು ಸಂಘಕ್ಕೆ ತಿಳಿಸಿದರೆ ಕೂಡಲೆ ನೂರಾರು ತರುಣ-ತರುಣಿಯರು ಸಂಘದಿಂದ ಇಂತಹ ಕಾರ್ಯಕ್ಕೆ ಕಳಿಸಲ್ಪಡುವರು. ಎಲ್ಲರಲ್ಲಿಯೂ ಕಾರ್ಯೋತ್ಸಾಹ; 'ಇದು ನನ್ನ ಹೊಲ, ಇನ್ನೊಂದು ಪರರದು' ಎಂಬ ಭಿನ್ನತೆಯಿಲ್ಲ. 'ಎಲ್ಲ ಹೊಲಗಳೂ ರಾಷ್ಟ್ರದುವು, ಇವುಗಳಿಂದ ಬರುವ ಫಲವೆಲ್ಲ ನಮ್ಮದೇ' ಎಂಬ ಭಾವನೆ ಆಶೆಗಳಿಂದ ಪ್ರೇರಿತರಾದ ತರುಣರು, ಸ್ವಲ್ಪಾವಧಿಯಲ್ಲಿಯೆ ಮಾಡಬೇಕಾಗಿದ್ದ ಕಾರ್ಯಮುಗಿಸಿ, ಒಕ್ಕಲಿಗನ ಕುಂದು-ಕೊರತೆಗಳನ್ನು ದೂರ ಮಾಡುತ್ತಾರೆ. ಅವರಿಗೆಲ್ಲ ಸಂಘದಿಂದಲೆ ಕೂಲಿ ಸಿಕ್ಕುವುದು. ಆದರೆ ಕಾರ್ಯಸಾಂಗವಾಗುವತನಕ ಜಮೀನುದಾರನು ಇವರಿಗೆಲ್ಲ ಆಹಾರ ಒದಗಿಸಿ ಕೊಡಬೇಕು. ಈ ಆಹಾರದ ಬೆಲೆಯು ಹೆಚ್ಚಾಗಿ ಬರುವಂತಿದ್ದರೆ ಅದೆಲ್ಲವೂ ಸಂಘದಿಂದಲೆ ಕೊಡಲ್ಪಡುತ್ತದೆ. ಈ ರೀತಿಯಲ್ಲಿ ನಡೆದು ಬಂದ ಒಕ್ಕಲಿಗರ ಸಂಘದ ಕಾರ್ಯದಿಂದ, ಇಂದಿನ ನಾಝೀಜೀವಿಗಳಿಗೆ ಉತ್ತಮ ಆಹಾರವೂ ಪುಷ್ಟವಾದ ದ್ರವ್ಯಗಳೂ ದೊರೆತು, ರಾಷ್ಟ್ರದ ಬಲವು ಹೆಚ್ಚಾಗುತ್ತ ನಡೆದಿದೆ. ಒಬ್ಬನು ದುಡಿದು ಹತ್ತು ಮಂದಿಗೆ ಉಣಿಸುವಷ್ಟು ಪರೋಪಕಾರಬುದ್ಧಿ ನಾಝೀಜೀವಿಗಳಿಗೆ ಇನ್ನೂ ಬಂದಿಲ್ಲ. ಇನ್ನೊಂದು ವಿಷಯವೆಂದರೆ, ಜಮೀನಿಗೆ ಬೇಕಾದ ದುರುಸ್ತಿಯ ಕಾರ್ಯದಲ್ಲಿ ಕೇವಲ ಸಂಘದ ಸದಸ್ಯರಿಂದ ದೊರೆತ ಸಹಾಯವಲ್ಲದೆ 'ಹಿಟ್ಲರ್ ತರುಣ ಸಂಘ' ಎಂಬುದರಿಂದಲೂ ಸಹಾಯ ಸಿಗುತ್ತದೆ. ಶಾಲೆ-ಕಾಲೇಜುಗಳಿಂದ ರಜೆ ದೊರೆತ ವಿದ್ಯಾರ್ಥಿಗಳು ಬಿಡುವಿನಲ್ಲಿ ಈ ಕೆಲಸ ಮಾಡುತ್ತಾರೆ. ಅಲ್ಲದೆ ಅವರ ರಜೆಯಾದರೂ ಪೈರುಗಳನ್ನು ಕೊಯ್ಯುವ ಕಾಲಕ್ಕೇ ಬರುತ್ತದೆ. ಈ ತರದ ಭಿನ್ನ ಭಿನ್ನ ಖಾತೆಗಳ ಪರಸ್ಪರ ಸಹಕಾರದಿಂದ ಇಂದಿನ ನಾಝೀಜೀವನದ ರಥವು ಸರಳವಾಗಿ ಸಾಗಿದೆ. ಇದು ಒಕ್ಕಲಿಗರ ಬಾಳಾಯಿತು; ಇನ್ನಿತರ ವಿಷಯವನ್ನು ಮುಂದಿನ ಲೇಖನದಲ್ಲಿ ಚಿತ್ರಿಸುವುದಿದೆ.

ಕೊಲ್ಹಾಪುರದಲ್ಲಿಯ
ಹೆಸರಾದ ಟೊಪ್ಪಿಗೆಯ ವ್ಯಾಪಾರಿಗಳು.
ಬೋಂಗಾಳೇ ಬ್ರದರ್ಸ್, ಕ್ಯಾಪ್ ಮೇಕರ್ಸ್
ಮಹಾದ್ವಾರ ರೋಡ್, ಕೊಲ್ಹಾಪುರ ಸಿಟಿ.
✻ ಎಲ್ಲ ಮಾದರಿಯ ಟೊಪ್ಪಿಗೆಗಳೂ ಸರಿಯಾದ ಬೆಲೆಗೆ ಸಿಕ್ಕುವುವು.
ಕರ್ನಾಟಕದಲ್ಲಿಯ ಗೋಕಾಕ, ಚಿಕ್ಕೋಡಿ, ರಾಮದುರ್ಗ ಮೊದಲಾದ ಮುಖ್ಯಸ್ಥಳಗಳಲ್ಲೆಲ್ಲ ಪ್ರಸಿದ್ಧಿಯಿದೆ. ತಾವೂ ವಿಚಾರ ಮಾಡಿರಿ, ನಮ್ಮ ಟೊಪ್ಪಿಗೆಗಳನ್ನು ತರಿಸಿ ಅನುಭವ ಪಡೆಯಿರಿ.

ಸಂಭಾಷಣ

★

(ಒಂದು ಹರಟೆ)

ಲೇಖಕ : —

ಶ್ರೀ. ಗಣೇಶ ನಾರಾಯಣ ಕುರ್ಡಿ

★

ಸಂಭಾಷಣಚಾತುರ್ಯವೂ ಒಂದು ಕಲೆಯೆನಿಸುವುದು. ಈ ಕಲೆಯಿಂದ ಮನುಷ್ಯ ಬಲುಬೇಗ ಲೋಕಪ್ರಿಯನಾಗುವನಲ್ಲದೆ ಬದುಕಿನ ತೊಡಕನ್ನು ಸುಲಭವಾಗಿ ಬಿಡಿಸಿಕೊಳ್ಳಲು ಸಮರ್ಥನಾಗುವನು. ಸಂಭಾಷಣಚಾತುರ್ಯವಿಲ್ಲದವನ ಮಾತು ಬೇಸರಕ್ಕೊ ಜಗಳಕ್ಕೊ ಕಾರಣವಾಗುವುದು. ಸಂಭಾಷಣಚಾತುರ್ಯ-ಸಂಪಾದನೆಗಾಗಿ ನಾವು ಏನೇನು ಮಾಡಬೇಕು? ಯಾವ ಯಾವ ದೋಷಗಳನ್ನು ದೂಡಬೇಕು?

★

ಈ ಅತಿ ಸುಲಭವಾದ ವಿಷಯವನ್ನಿಟ್ಟುಕೊಂಡು ಮಾತನಾಡಿದವರಾಗಲಿ, ನಿಬಂಧಗಳನ್ನು ಬರೆದವರಾಗಲಿ ತೀರ ಕಡಮೆ ಜನರು. ಇಂತಹ ಕ್ಷುಲ್ಲಕ ವಿಷಯವನ್ನು ಕುರಿತು ಏನು ಹೇಳುವುದೆಂದು ಅವರು ತಿಳಿದಿರಬಹುದು. ಆದರೂ ಇಂತಹ ಸಣ್ಣ ವಿಷಯದ ಸಲುವಾಗಿಯೆ ಹೇಳತಕ್ಕ ಮಾತುಗಳು ಬಹಳವಿರುವುವೆಂಬುದನ್ನು ಅವರು ಮರೆತಂತೆ ತೋರುತ್ತದೆ. ನಾನೀಗ ಕೆಲವು ಮಾತುಗಳನ್ನು ಈ ವಿಷಯವನ್ನು ಕುರಿತು ಹೇಳಬೇಕೆಂದಿರುವೆ:

ಜಗತ್ತಿನಲ್ಲಿ ಮನುಷ್ಯಪ್ರಾಣಿಗೆ ದುಃಸಾಧ್ಯವಾದ ಸಂಗತಿಗಳು ಪಲವಾರ ' ಇರುತ್ತವೆ. ಉದಾಹರಣೆಗಾಗಿ: ದೋಷವಿಲ್ಲದ ಗೆಳೆಯ, ಕುಂದು-ಕೊರತೆಗಳಿಲ್ಲದ ಸರಕಾರ, ಇಲ್ಲವೆ ದೋಷರಹಿತವಾದ ಮದುವೆ ಮುಂತಾದುವು. ಇವುಗಳನ್ನು ಮನುಷ್ಯನು ಕನಸಿನಲ್ಲಿ ಮಾತ್ರ ದೊರಕಿಸಬಹುದು; ಆದರೆ ಒಳ್ಳೆಯ ಸಂಭಾಷಣಕಾರನಾಗುವುದೆಂದರೆ ಹಾಗಲ್ಲ. ಒಳ್ಳೆಯ ಸಂಭಾಷಣಕಾರನಾಗುವುದು ಅತಿ ಸುಲಭ. ಇಲ್ಲಿ ಮನುಷ್ಯನಿಗೆ ತಿದ್ದಿಕೊಳ್ಳಲು ಸಾಧ್ಯವಿದ್ದ ಕೆಲವು ಸಹಜವಾದ ತಪ್ಪುಗಳನ್ನು ತಿದ್ದಿಕೊಂಡರಾಯಿತು; ಎಂದರೆ ಅವನು ತಾನು ಮಾತನಾಡುವಾಗ ಆಗುವ ಅನೇಕ ತಪ್ಪುಗಳನ್ನು ಮನಸ್ಸಿಗೆ ತಂದುಕೊಂಡು, ಆ ತಪ್ಪುಗಳು ಮುಂದಾಗದಂತೆ ನೋಡಿಕೊಳ್ಳಬೇಕು. ಆಗ ಖಂಡಿತ ಅವನು ಮನೋರಂಜಕನಾದ ಸಂಭಾಷಣಕಾರನಾಗಬಹುದು.

ದಿನದ ಸಂಭಾಷಣೆಯಲ್ಲಿಯ ಅತಿ ಸಹಜವಾದ ಕುಂದುಗಳಲ್ಲಿಯ ಕೆಲವನ್ನು ಇಲ್ಲಿ ಹೇಳುವೆ. ಇವುಗಳಲ್ಲಿಯ ಕೆಲವು, ಮನುಷ್ಯನಿಗೆ ತಾನು ಮಾತನಾಡುವಾಗ ಆಗುವ ತಪ್ಪುಗಳು ಎಂದು ತಿಳಿದರೂ ತಪ್ಪಿಸಲು ಸ್ವಲ್ಪ ಕಠಿನವಾದಂತಹವಾಗಿರುತ್ತವೆ.

ಇಂತಹ ತಪ್ಪುಗಳಲ್ಲಿ ಬಹಳ ಮಾತನಾಡುವುದು ಮೊದಲನೆಯದು ಎಂದು ನಾವು ನಿರಾತಂಕವಾಗಿ ಹೇಳಬಹುದು. ಇದು ಎಲ್ಲರಿಗೂ ತಿಳಿದಿರುವ ವಿಷಯ. ಆದರೂ ಐದು ಮಂದಿ ಕೂಡಿದ ಒಂದು ಗುಂಪಿನಲ್ಲಿ ಒಬ್ಬನಾದರೂ ಬಹಳ ಮಾತನಾಡುವವನು ಇಲ್ಲವೆಂದು ಹೇಳುವುದು ಅಸಾಧ್ಯ. ಇವನು, ಎಲ್ಲರ ಮಧ್ಯದಲ್ಲಿ ಅವರಿಗೆ ಬೇಸರಿಕೆ ಬರುವಂತೆ, ತನ್ನ ಆಯುಷ್ಯಮಾನದಲ್ಲಿ ಘಟಿಸಿದ ಅನೇಕ ಸಂಗತಿಗಳನ್ನೂ ಅಕ್ಷರಶಃ ಹೇಳತೊಡಗುವ. ಹೀಗೆ ಮಾತನಾಡುವಾಗ ಮಧ್ಯದಲ್ಲಿಯೆ ಉಪಕಥೆಯೊಂದನ್ನು ಹೇಳುವ ಲವಲವಿಕೆಯುಂಟಾಗುವುದು. ಅದನ್ನು ಹೇಳುವೆನೆಂದು ಹೇಳಿ ಪ್ರಾರಂಭಮಾಡುವಷ್ಟರಲ್ಲಿ ಅದು ಇವನಿಗೆ ಮರೆತು ಹೋಗುವುದು. ' ಆ ಕಥೆ ಹಾಗಿರಲಿ ' ಎಂದು ಹೇಳಿ ಇವನು ತನ್ನ ಮಾತು

ವೀರಪ್ಪ ಶಿವಪ್ಪ ಅರಬಳ್ಳಿ, ರಬಕವಿ

ಬಣ್ಣದ ನೂಲು ಮತ್ತು ಇರಕಲ್
ನಮೂನೆಯ ರಬಕವಿ ಸೀರೆಯ ವ್ಯಾಪಾರಿಗಳು

ನಮ್ಮಲ್ಲಿ ಕೈಮಗ್ಗಗಳ ಮೇಲೆ ಇರಕಲಾ ಧನವಡೀ
ಮತ್ತು ನಾರಾಯಣಪೇಟೆ ಅಂಚಿನ ಉತ್ತಮ
ಮತ್ತು ಬಣ್ಣದ ಖಾತ್ರಿಯ ಸೀರೆಗಳು
ಯೋಗ್ಯಬೆಲೆಗೆ ಸಿಕ್ಕುತ್ತವೆ.

ಸಾಗಿಸುವಷ್ಟರಲ್ಲಿ ಆ ಕಥೆ ಇವನಿಗೆ ನೆನಪಾಗುವುದು. ಆಗ ಅದನ್ನು ಹೇಳುವ. ಆದರೆ ಅದು ಕೂಡಿದವರು ಹಿಂದೆ ಐವತ್ತು ಸಾರೆ ಕೇಳಿದ ಕಥೆಯೊ ಇಲ್ಲವೆ ಇವನಾಗಿಯೆ ಹೆಣೆದ ಒಂದು ನೀರಸವಾದ ಕಟ್ಟುಕಥೆಯೊ ಆಗಿರುವುದು.

ಸಂಭಾಷಣೆಯಲ್ಲಿಯ ಎರಡನೆಯ ತಪ್ಪು ತಮ್ಮ ಸಂಗತಿಗಳನ್ನು ತಾವೇ ಹೇಳಿ, ತಮ್ಮನ್ನು ತಾವೇ ಹೊಗಳಿಕೊಳ್ಳುವವರದು. ಇವರು ಎಲ್ಲರ ನಡುವೆ ಕುಳಿತು ಉಳಿದವರಿಗೆ ಬೇಸರಿಕೆ ಬರುವಂತೆ ತಮ್ಮ ಹಿಂದಿನ ಇತಿಹಾಸವನ್ನು ಹೇಳತೊಡಗುವರು. ಇವರಿಗೆ ತಾವು ಎಲ್ಲರ ಮಧ್ಯೆ ಸ್ವಲ್ಪ ಹೆಚ್ಚಿನವರಾಗಿ ಕಾಣಿಸಬೇಕಾಗಿರುವುದರಿಂದ, ತಾವು ಮಾಡಿದ ಸಾಹಸದ ಕಾರ್ಯಗಳನ್ನು ಅತಿ ಹುರುಪಿನಿಂದ ಹೇಳತೊಡಗುವರು. ಕೆಲವರಂತೂ ಸುಳ್ಳನ್ನೂ ಬೆರಸಲಿಕ್ಕೆ ಹಿಂದೆ ಮುಂದೆ ನೋಡುವುದಿಲ್ಲ. ಇವರು, ಕುದುರೆ ಹೂಡಿದ ಟಾಂಗಾದ ಮೇಲೆ ಕುಳಿತುಕೊಳ್ಳಬೇಕಾದರೆ ಎಲ್ಲಿ ಬಿದ್ದು ಬಿಡುವೆವೋ ಎಂಬ ಅಂಜಿಕೆಯಿಂದ ಹಿಂದೆ ಮುಂದೆ ನೋಡುವವರಾಗಿದ್ದರೂ, ತಮ್ಮ ಪ್ರಾಯದ ಕಾಲದಲ್ಲಿ ಕುದುರೆಯ ಮೇಲೆ ಕುಳಿತು ಒಂದು ದಿವಸದಲ್ಲಿ ನೂರಾರು ಮೈಲುಗಳನ್ನು ಪ್ರವಾಸ ಮಾಡುತ್ತಿದ್ದೆವೆನ್ನುವರು. ಗುಬ್ಬಚ್ಚಿ ಮಾಯುವ ಹೊಂಡದಲ್ಲಿ ಇಳಿಯಲು ಅಂಜುವವರು ತಾವಾಗಿದ್ದರೂ, ಬನಾರಸಕ್ಕೆ ಹೋದಾಗ ಗಂಗೆಯಲ್ಲಿ ಎರಡು ಮೂರು ಮೈಲುಗಳವರೆಗೆ ಸಹಜವಾಗಿ ಈಸಿಹೋದೆವೆನ್ನುವರು. ತಾವು ಈಗ ಬಡವರಾಗಿದ್ದರೂ ಮೊದಲು ರಾಜ್ಯೋಪಭೋಗವನ್ನು ಅನುಭವಿಸಿದವರೆಂತಲೂ, ಅಪ್ಪಟ ರೇಶಿಮೆಯ ರುಮಾಲು, ಮ್ಯಾಂಚೆಸ್ಟರಿನ ಧೋತರ, ಹತ್ತು ರೂಪಾಯಿಗೆ ವಾರದ ಉಣ್ಣೆಯ ಕೋಟು ಇವುಗಳನ್ನು ಹಾಕಿಕೊಳ್ಳುತ್ತಿದ್ದೆವೆಂತಲೂ, ಆಗ ಜಿಲ್ಲೆಯ ಕಲೆಕ್ಟರ್‌ಸಾಹೇಬರು ಇವರನ್ನು ದಿನಾಲು ಊಟಕ್ಕೆ ಕರೆಯುತ್ತಿದ್ದರೆಂತಲೂ, ಡಿ.ಎಸ್.ಪಿ. ಸಾಹೇಬ ತಾನೊಬ್ಬನೆ ಹೋಗಲು ಅಂಜಿ, ಇವರನ್ನು ದಿನಾಲು ಕರೆದೊಯ್ಯುತ್ತಿದ್ದನೆಂತಲೂ ಪೌರುಷ ಕೊಚ್ಚಿಕೊಳ್ಳುವವರು ಇವರು. ಕೈಯಲ್ಲಿ ದುಡ್ಡಿಲ್ಲದಿದ್ದುದರಿಂದ ಪಂಜೆಗಳನ್ನು ಉಡುತ್ತಿದ್ದರೂ ತಾವು ದೇಶಭಕ್ತರೂ, ಖಾದಿಯ ಪ್ರಚಾರಕರೂ ಆಗಿರುವುದರಿಂದ ಹೀಗೆ ಮಾಡುವೆವೆನ್ನುವರು. ತಾವು ತಮ್ಮ ಊರಲ್ಲಿ ಇನ್ನೊಬ್ಬರ ಮನೆಯಲ್ಲಿ ಆಳಾಗಿ ದುಡಿಯುತ್ತಿದ್ದರೂ, ಪರವೂರಿಗೆ ಬಂದಾಗ ಎರಡನೆಯವರ ಮುಂದೆ, ತಾವು ಮನೆಯಲ್ಲಿ ಅನೇಕ ಆಳುಗಳನ್ನು ದುಡಿಸಿಕೊಳ್ಳುವವರೆಂತಲೂ, ಇಲ್ಲಿ ಆಳುಗಳಿಲ್ಲದಿದ್ದುದರಿಂದ ಸ್ವಲ್ಪ ತೊಂದರೆಯಾದರೂ ಅದನ್ನು ತಾಳಿಕೊಳ್ಳಬೇಕು ಎಂತಲೂ ದೊಡ್ಡ ಮಾತುಗಳನ್ನು ಆಡುವರು. ತಾವು ಯಾವುದೊ ಒಂದು ಬ್ಯಾಂಕಿನಲ್ಲಿ ಕಾರಕೂನರಾಗಿದ್ದರೂ ಇಪ್ಪತ್ತು ಮೂವತ್ತು ಸಾವಿರ ರೂಪಾಯಿಗಳ ಶೇರುಗಳನ್ನು ಕೊಂಡವರಂತೆ, ಅವುಗಳ ಬೆಲೆಯ ವಿಷಯ ಮಾತನಾಡುವರು. ಹೀಗೆ ತಮ್ಮನ್ನೆ ತಾವು ಹೊಗಳಿಕೊಂಡರೆ ಇನ್ನೊಬ್ಬರಿಗೆ ಬೇಸರಿಕೆ ಬರುವುದೆಂಬುದು ಇವರ ಮನದೆದುರೇ ಬರುವುದಿಲ್ಲ. ತಮ್ಮ ಸಂಗತಿಗಳು ತಮಗೆ ಮಹತ್ತ್ವದುವಿದ್ದರೂ ಅವು ಇನ್ನೊಬ್ಬರಿಗೆ ಮನೋರಂಜಕವಾಗಲಾರವೆಂಬ ಅರಿವೇ ಇವರಿಗೆ ಇರುವುದಿಲ್ಲ.

ಸಂಭಾಷಣೆಗಳಲ್ಲಿ ಆಗುವ ಮೂರನೆಯ ತಪ್ಪೆಂದರೆ ಒಂದು ಗುಂಪಿನಲ್ಲಿದ್ದಾಗ ಬೇರೆಯಾಗಿ ತಮ್ಮಷ್ಟಕ್ಕೆ ತಾವೇ ಮಾತನಾಡುವವರದು. ಇವರು ತಾವು ಬಾಲ್ಯದಲ್ಲಿ ಒಟ್ಟಾಗಿ ಆಡಿದವರೆಂಬುದನ್ನೊ, ಲಂಗೋಟಿಯ ಗೆಳೆಯರೆಂಬುದನ್ನೊ, ಅಥವಾ ಇಬ್ಬರೂ ಒಂದೇ ಸಾಲೆಯಲ್ಲಿ ಒಂದೇ ಕಾಲೇಜಿನಲ್ಲಿ ಒಂದೇ ಪುಸ್ತಕವನ್ನು ಒಂದೇ ಮಾಸ್ತರರಲ್ಲಿ ಕಲಿತುದದನ್ನೊ, ಇಲ್ಲವೆ ಒಮ್ಮೆ ಸಿನೇಮಾಕ್ಕೆ ಹೋದಾಗ ಒಬ್ಬರ ಬದಿಯಲ್ಲಿ ಒಬ್ಬರು ಕುಳಿತು ನೋಡಿದ್ದನ್ನೊ ನೆನಪಿಗೆ ತಂದುಕೊಂಡು ಮಾತನಾಡತೊಡಗುವರು. ಹತ್ತಿರಿದ್ದವರಿಗೆ ಇದರಿಂದ ತುಂಬ ಬೇಸರು ಬರುವುದು. ಇದರಿಂದ ಸಂಭಾಷಣೆಯು ಕೆಡುವುದು.

ಇನ್ನು ಕೆಲವರು ತಾವು ಹಾಸ್ಯಗಾರರೆಂದು ತಿಳಿದುಕೊಂಡಿರುವರು. ತಾವು ಮಾತನಾಡುವಾಗ ಉಳಿದವರು ನಗಬೇಕೆಂಬುದೆ ಇವರ ಇಚ್ಛೆ. ತಾವು ಮಾತನಾಡಿದಾಗ ಉಳಿದವರು ನಗದಿದ್ದರೆ ದೊಡ್ಡ ಪ್ರಮಾದವಾಯಿತೆಂದು ಇವರು ತಿಳಿದುಕೊಳ್ಳುವರು. ಹೀಗೆ ಉಳಿದವರನ್ನು ನಗಿಸಲಿಕ್ಕೆ ಮಾತನಾಡುವಾಗ ಇವರು, ಅಸಂಬದ್ಧವಾದ ಹುಚ್ಚು ಮಾತುಗಳನ್ನೂ ಆಡಿ, ತಮ್ಮ ಮಾನಮರ್ಯಾದೆಗಳನ್ನು ಕಳೆದುಕೊಳ್ಳುತ್ತಲೆ ಬೇರೆಯವರನ್ನು ನಗಿಸುವರು. ಇಂಥವರು ಬಯಲಾಟಗಳಲ್ಲಿ ಇಲ್ಲವೆ ಹಬ್ಬದ ದಿವಸಗಳಲ್ಲಿ ತಿಂದುಂಡು ನಲಿಯಬೇಕಾದ ಸಮಯದಲ್ಲಿ ಇರಲು ತಕ್ಕವರಾಗಿದ್ದರೂ, ಮಹತ್ವದ ಸಂಭಾಷಣೆಗಳಲ್ಲಿ ಇವರನ್ನು ಸೇರಿಸಿಕೊಳ್ಳಲಾಗದು.

ಸಂಭಾಷಣೆಯಲ್ಲಿಯ ಇನ್ನೊಂದು ತಪ್ಪು ವಿಕ್ಕವರ ಮನಸ್ಸನ್ನು ನೋಯಿಸುವ ಮಾತುಗಳನ್ನಾಡುವವರದು. ಇವರು ಬಳಿಯುವರನ್ನು ನಗಿಸುವುದಕ್ಕಾಗಿ, ಹತ್ತಿರದಲ್ಲಿ ಕುಳಿತಿದ್ದ ಒಬ್ಬ ಬಡವನ, ಇಲ್ಲವೆ ಸಾದಾ ಮನುಷ್ಯನ ಕುಂದು-ಕೊರತೆಗಳನ್ನು ಬಯಲಿಗೆಳೆಯುವರು. ತಾವು ಹೀಗೆ ಹೀಯಾಳಿಸಿ ನಗುವಾಗ ಅವರ ಮನಸ್ಸು ಎಷ್ಟೊಂದು ನೋಯುವುದೆಂಬುದರ ಕಡೆಗೆ ಲಕ್ಷ್ಯವೇ ಇವರಿಗೆ ಇರುವುದಿಲ್ಲ. ಇಂತಹ ಕೆಲವು ಸಂದರ್ಭಗಳಲ್ಲಿ ಸಂಭಾಷಣೆಯು ಕೆಡುವುದಿಷ್ಟೇ ಅಲ್ಲದೆ, ಹೊಡೆದಾಟ-ಬಡಿದಾಟಗಳೂ ಸಂಭವಿಸಬಹುದು.

ಪ್ರತಿಯೊಬ್ಬರೂ ಸಂಭಾಷಣೆಯ ಕಾಲದಲ್ಲಿ ಮಾಡಬಾರದಂತಹ ತಪ್ಪು ಎಂದರೆ, ಎರಡನೆಯವರು ಮಾತನಾಡುವಾಗ ಮಧ್ಯದಲ್ಲಿ ಬಾಯಿಹಾಕುವುದು. ಇವರು ಉಳಿದವರೆಲ್ಲ ಒಂದು ವಿಷಯದ ಮೇಲೆ ಮಾತನಾಡುತ್ತಿರುವಾಗ ಅವರನ್ನು ಮಧ್ಯದಲ್ಲಿಯೆ ನಿಲ್ಲಿಸಿ, ತಾವು ಅದೇ ವಿಷಯದ ತಮ್ಮ ಸ್ವಂತದ ಅಭಿಪ್ರಾಯಗಳನ್ನು ಹೇಳತೊಡಗುವರು. ಇದರ ಜೊತೆಗೆ ಸೇರಿದ ಇನ್ನೊಂದು ತಪ್ಪು ಎಂದರೆ, ತಾವು ಮಾತನಾಡುವಾಗ ಇನ್ನೊಬ್ಬರು ಮಾತನಾಡದಂತೆ ಪ್ರಯತ್ನಪೂರ್ವಕ ನೋಡಿಕೊಂಡು ಬಹಳ ಮಾತನಾಡುವವರದು. ಉಳಿದವರೂ ಸ್ವಲ್ಪ ಮಾತನಾಡಲಿ ಎಂಬ ಧಾರಾಳ ಹೃದಯವೇ ಇವರಿಗೆ ಇರುವುದಿಲ್ಲ.

ಮಾತನಾಡುವಾಗ ಅನೇಕ ಕಥೆಗಳನ್ನು ಹೇಳುವುದು, ಸಂಭಾಷಣೆ ಮಾಡುವವರಲ್ಲಿ ಒಂದು ಕುಂದು ಎಂದು ಹೇಳಬಹುದು. ಸ್ವಲ್ಪ ದಿವಸಗಳ ವರೆಗೆ ಇವರ ಕಥೆಗಳ ಮೂಲಕ ಇವರು ಮನೋರಂಜಕರಾಗಬಹುದು. ಆದರೆ ಇವರು ಹೀಗೆಯೆ ಎಷ್ಟು ಕಥೆಗಳನ್ನು ನೆನಪಿನಲ್ಲಿಡಬಹುದು; ಅಥವಾ ಎಷ್ಟು ಕಥೆಗಳನ್ನು ಕಟ್ಟಿ ಹೇಳಬಹುದು! ಒಂದಿಲ್ಲೊಂದು ದಿನ ಅವರ ಕಥೆಗಳ ಸಂಗ್ರಹವು ಬರಿಯದಾಗಿ, ಹೇಳಿದ ಕಥೆಗಳನ್ನೆ ಇನ್ನೊಮ್ಮೆ ಹೇಳಬೇಕಾಗಿ ಬರುವುದು. ಇದರಿಂದ ಕೇಳುವವರಿಗೆ ಬೇಸರು ಬರತೊಡಗುವುದು.

ಸಾವಿರಾರು ಮಂದಿಯ ಮಧ್ಯದಲ್ಲಿ ಏರುಮಣೆಯಮೇಲೆ ನಿಂತು ಭಾಷಣಮಾಡಿ, ಜನರನ್ನು ತಮ್ಮ ಪಕ್ಷಕ್ಕೆ ಎಳೆಕೊಳ್ಳಬಲ್ಲ ಜನರು ಒಳ್ಳೆಯ ಸಂಭಾಷಣಕಾರರಾಗಲಾರರು. ಇಂತಹ ದೊಡ್ಡ ಭಾಷಣಕಾರರಿಗೆ ಆರಿಸಿದ ಕೆಲವು ಶಬ್ದಗಳು ನಾಲಗೆಯ ತುದಿಯ ಮೇಲೆ ಇರುತ್ತವೆ. ಅವುಗಳನ್ನೆ ಅವರು ಮೇಲಿಂದಮೇಲೆ ತಮ್ಮ ಭಾಷಣಗಳಲ್ಲಿ ಉಪಯೋಗಿಸುವರು. ಆದರೆ ಬಹಳ ಶಬ್ದಗಳು ಗೊತ್ತಿದ್ದ ಭಾಷಾವಿಶಾರದರು ಒಳ್ಳೆಯ ಸಂಭಾಷಣಕಾರರಾಗಬಲ್ಲರಾದರೂ ಒಳ್ಳೆಯ ಭಾಷಣಗಳನ್ನು ಕೊಡಲಾರರು; ಯಾಕೆಂದರೆ ಅವರಿಗೆ ಬಹಳ ಶಬ್ದಗಳು ಗೊತ್ತಿರುವುದರಿಂದ ಅವರು ಒಳ್ಳೆಯ ಶಬ್ದಗಳನ್ನು ಆರಿಸುವಾಗ ತಡವಾಗುತ್ತದೆ. ಆದರೆ ಇವರು ಒಳ್ಳೆಯ ಸಂಭಾಷಣಕಾರರಾಗಬಹುದು.

ಎಲ್ಲರೂ ತಿದ್ದಿಕೊಳ್ಳಬೇಕಾದ ಸಂಭಾಷಣೆಯಲ್ಲಿಯ ಇನ್ನೊಂದು ತಪ್ಪು ಎಂದರೆ, ಉಳಿದವರು ಮಾತನಾಡುವಾಗ ಅಲಕ್ಷ್ಯದಿಂದಿರುವುದು. ಇವರು ಉಳಿದವರು ಮಾತನಾಡುತ್ತಿರುವಾಗ ಲಕ್ಷ್ಯಕೊಟ್ಟು ಕೇಳಿಕೊಳ್ಳದೆ, ಅವರು ಮಾತನಾಡುವುದು ಮುಗಿದ ಮೇಲೆ ತಾವು ಏನು ಹೇಳಬೇಕೆಂಬುದನ್ನು ವಿಚಾರ ಮಾಡುತ್ತಿದ್ದು ಅವರು ತಮ್ಮ ಮಾತು ಮುಗಿದು 'ತಿಳಿಯಿತೆ?' ಎಂದು ಏನಾದರೂ ಕೇಳಿದರೆ 'ಅಂ!' ಎನ್ನುವರು. ಇದರಿಂದ ಮಾತನಾಡುವವರ ಉತ್ಸಾಹವು ಕುಗ್ಗಿ ಹೋಗುವುದಷ್ಟೆ ಅಲ್ಲದೆ, ಕೆಲವು ಸಲ ಅವರು ಸಿಟ್ಟಿಗೇಳುವ ಸಂಭವವೂ ಇದೆ. ಈ ತಪ್ಪನ್ನು ಎಲ್ಲರೂ ತಿದ್ದಿಕೊಳ್ಳುವುದು ಅತ್ಯವಶ್ಯ.

ಸಂಭಾಷಣೆಗಳಲ್ಲಿ ನಾವು ಸುಧಾರಿಸಬೇಕಾದರೆ ಹೆಂಗುಸರನ್ನು ನಮ್ಮ ಗುಂಪುಗಳಲ್ಲಿ ಸೇರಿಸಿಕೊಳ್ಳುವುದು ಅಗತ್ಯ. ಹೆಂಗುಸರು ಹತ್ತಿರ ಇರುವುದರಿಂದ ಕೀಳುತರದ ಮಾತುಗಳಿಗೆ ಅವಕಾಶವಿಲ್ಲದಂತಾಗುವುದು. ಹೆಂಗುಸರು ಮತ್ತು ಗಂಡುಸರು ಒಟ್ಟಾಗಿ ಬೆರತುಕೊಳ್ಳುವುದು ಕೆಲವರಿಗೆ ಸೇರಿ ಬರದಿದ್ದರೂ, ಆದರಿಂದ ನಾವು ಸಂಭಾಷಣೆಯಲ್ಲಿ ತಪ್ಪದೆ ಸುಧಾರಿಸುವೆವೆಂದು ನಾನು ಎದೆ ತಟ್ಟಿ ಹೇಳಬಲ್ಲೆ.

ಸಂಭಾಷಣದಲ್ಲಿಯ ಕೆಲವು ಕುಂದುಗಳನ್ನು ನಾನು ಹೇಳಿದೆ. ಇವು ಮುಖ್ಯವಾದುವುಗಳು. ಇವುಗಳನ್ನೂ ಇನ್ನೂ ಕೆಲವು— ಅಧಿಕಾರಯುಕ್ತವಾದ ವಾಣಿಯಿಂದ ಮಾತನಾಡುವುದು, ಅತಿ ಪರಿಚಯವಿದ್ದುದರಿಂದ ಮಾನಾಪಮಾನಗಳಿಗೆ ಲಕ್ಷ್ಯಕೊಡದೆ ಮಾತನಾಡುವುದು, ಇಲ್ಲವೆ ದಿನಾಲು ಜರುಗುವ ಸಂಗತಿಗಳನ್ನು ಒಂದು ಬಿಡದಂತೆ ಹೇಳುವುದು ಇವೇ ಮೊದಲಾದ ಕೆಲವು— ತಪ್ಪುಗಳನ್ನೂ ಸುಧಾರಿಸಿಕೊಂಡರೆ, ನಾವು ಸಂಭಾಷಣದಲ್ಲಿ ನಿಶ್ಚಯವಾಗಿ ಸುಧಾರಿಸುವೆವು.

ಫೋಟೋ ಎನ್‌ಲಾರ್ಜ್‌ಮೆಂಟ್ಸ್

ಸುಂದರವಾಗಿಯೂ ಮೆಚ್ಚಿಗೆಯಾಗುವಂತೆಯೂ ಪ್ರಾಮಾಣಿಕತೆಯಿಂದಲೂ ಕೆಲಸಮಾಡಿ ಕೊಡಲಾಗುವುದು;

ಸಮಯನಿಷ್ಠತೆ ನಮ್ಮ ಬಿರುದು!

ತಮ್ಮ ಫೋಟೋ ಕಳಿಸಿ, ಎನ್‌ಲಾರ್ಜಮೆಂಟ್ ಯಾವ ಅಳತೆಯದಿರಬೇಕೆಂಬುದನ್ನು ಕೂಡಲೆ ತಿಳಿಸಿರಿ!

ಬಣ್ಣಬಣ್ಣದ ಎನ್‌ಲಾರ್ಜ್‌ಮೆಂಟೂ ನಮ್ಮಲ್ಲಿ ಆಗುವುದು!

ಬೆಲೆ ಸುಲಭ! ❖ ತೃಪ್ತಿಕರವಾದ ಕೆಲಸ!!

ಸಿನೇಮಾ ಸ್ಲೈಡುಗಳನ್ನೂ ಸುಂದರವಾಗಿ ಮಾಡಿಕೊಡುವೆವು!

ಗೋವಾರೀಕರ್ ಅಂಡ್ ಸನ್ಸ್,
ಫೋಟೋಗ್ರಾಫಿಕ್ ಡೀಲರ್ಸ್ ಕೊಲ್ಹಾಪುರ

ಧೀಂಕಿಟ ತರಿಕಿಟ !

ಶ್ರೀ. ಬಾಲಪುರಂದರ

೧

ಬೆಟ್ಟದ ತುದಿಯಿಂ ಥಟ್ಟನೆ ಧುಮ್ಮುಕುವ
ನಿರ್ಝರಿ ಗರ್ಜಿಸುವುದ ಕೇಳು,
ಬ್ರಹ್ಮಾಂಡದಖಂಡಶ್ರುತಿಗೊಪ್ಪುವ
ಲಯದಲಿ ನಡೆಯುವ ಹರಿವಾಳು !
ಚಿತ್ತದ ಭಿತ್ತಿಯನೊಡೆದೊಡನೇಳುವ
ರಸದೂಟೆಯ ಬಲ್ಲೆಯ ಹೇಳು ?
ಗಿರಿನದವನು ಧಿಕ್ಕರಿಸುತ ಮೆರೆಸುತ
ಭೋರ್ಗರೆವುದು ಶಬ್ದದ ಸಾಲು !

ಸಾಗರದಾಳವ ಕಲಕಿಸಿ ತುಳುಕಿಸಿ
ಬೊಬ್ಬಿರಿದೇಳುವ ಹೆಗ್ಗಿಚ್ಚು
ಭಾವೋದ್ರೇಕದ ಚಂಡಚಮತ್ಕೃತಿ-
ಗೆರಗಿತು ; ಬಲ್ಮೆಗಿದೇಂ ಮೆಚ್ಚು !
‘ ಧೀಂಕಿಟ ತರಿಕಿಟ ಧೀಂಕಿಟ ತರಿಕಿಟ ’
ಎಂದಗ್ಗಳಿಸುತ ಧುಮುಧುಮಿಸಿ
ನಾದಬ್ರಹ್ಮನ ನರಗಳ ಮೂಲಕ
ಘೂರ್ಣಿಸುತಿದೆ ಮೆಯ್ಯಾಯೆನಿಸಿ !

೨

ಶಬ್ದವೆ ದೇಹವು, ನಾದವೆ ಬಗೆಯಾ
ಭಾವೋತ್ಕರ್ಷವೆ ರಸವಾಗಿ,
ಅದ್ಭುತರೂಪಂಬಡೆವುದು ಕವಿತಾ
ವಿದ್ಯುದ್ವಲ್ಲರಿಗಸುವಾಗಿ !
ಆವೇಶದ ಕುಣಿವಯಲಲಿ ಕುಣಿವುದು
ಚಮಕಿಸಿ ಚಂಡಾಹತಿಯಿಂದ ;
ಜೀವನಸವರ್ತಿಗೆ ಕಿಚ್ಚನು ಹಚ್ಚುತ
ಧಗಧಗಿಸುವುದುಷರತಿಯಿಂದ !

ಲೋಕವ ಗುಡುಗಿಸಿ ಶೋಕವನುಡುಗಿಸಿ
ಸಂಘಟ್ಟಿಸಿ ಬಾಳ್ಗಾಳಿಯನು !
ಶಬ್ದಬ್ರಹ್ಮನು ಜಿಗಿವನು ನೆಗೆವನು
ಲೆಕ್ಕಿಸದನಿಮಿಷವೇಗವನು !
‘ ಧೀಂಕಿಟ ತರಿಕಿಟ ಧೀಂಕಿಟ ತರಿಕಿಟ ’
ಎನ್ನುತ ಧೀಂಕಿಟ್ವಾಗಸವ
ಡಂ ಡಂ ಡಮರುಗವಾಟದೊಳೊಗೆಸಿದ-
ನಾ ವೈಯಾಕರಣೋತ್ಸವವ !

೩

ಛಂದಶ್ಚರಣನ ಚಂಚದ್ಭ್ರಮಣವ
ತಡೆಯುವ ಗಂಡೆದೆಯೆಲ್ಲುಂಟು ?
ಸಂಗೀತಕೆ ಬಾಯೆಂಬಾ ಶಬ್ದವು
ನುಡಿಸಿದ ರಸ-ಭಾವಗಳುಂಟೆ ?
ನಾಟ್ಯದ್ವಯ ನಿಷ್ಣಾತ ಬೃಹನ್ಮತಿ
ಕುಣಿಯದ ಕುಣಿತದ ಮಟ್ಟೆಲ್ಲಿ ?
ಆಟಂಧಲೆವಾ ಸ್ವೇಚ್ಛಾಮತಿಗಳ
ಮೆಟ್ಟಲು ಮರೆದಿಹ ಮೆಟ್ಟೆಲ್ಲಿ ?

ವಿಶ್ವದ ನಿಯಮವ ಕಲಿಸಲು ಲೋಕಕೆ
ಕಂಕಣದೊಟ್ಟಿಹ ಕಲಿವಾಳು,
ನಶ್ವರ ಜೀವನದವಧಿಯ ತಿಳುಹಿಸಿ
ಬಿಂಕವನಿಳ್ಕುವ ಬಲ್ಪೀಳು—
‘ ಧೀಂಕಿಟ ತರಿಕಿಟ ಧೀಂಕಿಟ ತರಿಕಿಟ ’
ಎಂಬೀ ನಿಸ್ವನದಾಳದಲಿ
ಅಡಗಿರ್ದುರ್ವರೆಯುವ್ವಳಿಸುತ್ತಿದೆ
ಚಿತ್ತಾಹ್ಲಾದಕ ತಾಳದಲಿ !

ಯುಗಾದಿಯ ರವಿ

ಶ್ರೀ. ವಿ. ಎನ್. ಭೂಪಾಲಂ

★

ನಾದಿನ ಪುಣ್ಯದ ಪೂರ್ವದಿಗಂತದಿ
ನವಯುಗದಿನರಥವೇರುತಿದೆ,
ತಮವವಸಾನದ ಮಂಗಲ ಸಮಯದಿ
ರುಧಿರಧ್ವಜವದು ಹಾರುತಿದೆ !

★

ಯುಗವಳಿಯಲು ಪಾಪದ ಚಿಲುಮೆ,
ಮರೆಯಾಗಲು ಮೂಢನ ಬಲುಮೆ,
ಎಮೆ ತೆರೆಯಲು ಜ್ಞಾನದ ಒಲುಮೆ,
ಯುಗಕರ ಮುದದಲಿ ಬೆಳಗುತಿದೆ !

ವೈದೋರಲು ಶಾಂತಿಯ ಕೊರಲು
ಸುಳಿ-ಸುಳಿಯಲು ಸೌಖ್ಯದ ಹೊನಲು
ಕಿತ್ತೆಸೆಯಲು ರಣಮಾರಿಯುರುಲು
ಮೂಡಣದಾಶೆಯು ಮೊಳಗುತಿದೆ !

★

ಅರಿವಿನ ದಿನಕರನುದಿಸೆ ಯುಗಾದಿ
ಮೇಲು-ಸವಿಗೊರಲಲಿ ಹಾಡುತಿದೆ !
ಅರಳಿದ ಕವಿಯೆದೆ ನಲಿಯೆ ಯುಗಾದಿ
ಕವನವ ರಚಿಸಲು ಕಾಡುತಿದೆ !

ಆಚಾರ್ಯ ವಿನೋಬಾ

★

ಶ್ರೀ. 'ಹರಟೆಯಮಲ್ಲ'

ವಿನೋಬಾ ಹಿರಿಯ ಪಂಡಿತರು. ಪ್ರಪಂಚದಲ್ಲಿ ಪಾಂಡಿತ್ಯವೇನೂ ಅಷ್ಟೊಂದು ಅಲಭ್ಯವಲ್ಲ; ಆದರೆ ಪಾಂಡಿತ್ಯವನ್ನು ಜೀರ್ಣಿಸಿಕೊಂಡು ಜೀವನಪಥದಲ್ಲಿ ಊರುಗೋಲನ್ನಾಗಿ ಮಾಡಿಕೊಂಡವರು ಬಹಳ ಜನರಿಲ್ಲ. ವಿನೋಬಾ ಪಾಂಡಿತ್ಯವನ್ನು ಹಾಗೆ ಊರುಗೋಲು ಮಾಡಿಕೊಂಡು ಆದರ್ಶದ ಸಾಮೀಪ್ಯವನ್ನು ಸಂಧಿಸಿದವರು.

★

ಗಾಂಧೀಜೀ ಸಾಬರಮತಿ ಆಶ್ರಮವನ್ನು ಮೊದಲು ಮಾಡಿದಾಗ ಅವರಿಗೆ ಒಂದು ದಿನ ಒಂದು ಕಾಗದ ಬಂತು. ಯಾರೋ ಆಶ್ರಮವನ್ನು ಸೇರಲು ಅಭಿಲಾಷೆಪಟ್ಟು ಗಾಂಧೀಜಿಯ ಅಪ್ಪಣೆ ಕೇಳಿದ್ದರು. ಉತ್ತರ ಬರೆಯೋಣವೆಂದು ಅವರು ಕಾಗದವನ್ನು ತೆಗೆದಿಟ್ಟರು.

ಮಾರನೆಯ ದಿನ ದರ್ಶನಕ್ಕೆಂದು ಒಬ್ಬ ಮಹಾರಾಷ್ಟ್ರದ ತರುಣ ಬಂದರು. ಮೈ ಸೀರಲು, ಗಾಳಿಗೆ ಹಾರಿಹೋಗುವ ಹಾಗಿತ್ತು. ಮೂಳೆಗಳೆಲ್ಲ ಕಾಣುತ್ತಿದ್ದುವು. ತಾವು ಆಶ್ರಮಕ್ಕೆ ಸೇರಲು ಬಯಸಿದುದಾಗಿಯೂ ಹಾಗೆ ಕಾಗದ ಬರೆದುದಾಗಿಯೂ ಹೇಳಿದರು. ಉತ್ತರಕ್ಕಾಗಿ ಕಾಯುವುದು ಮನಸ್ಸಿಗೆ ಭಾರವಾಗಿ ತಾವೇ ಬಂದು ಬಿಟ್ಟರು.

ಗಾಂಧೀಜೀ ತರುಣನ ಈ ಆತುರ-ಉತ್ಸಾಹಗಳಿಗೆ ಮುಗುಳುನಗೆ ಸೂಸಿ, ಅವರ ಅಪೇಕ್ಷೆಗೆ 'ಅಸ್ತು' ಎಂದರು.

ಆಶ್ರಮದಲ್ಲಿ ದಿನಚರಿಯ ಜೀವನ ಬಹಳ ಕಠಿನವಾದುದು. ಇಷ್ಟಾರದ ಕೆಲಸ ನಾಲ್ಕಾದರೆ ಕಷ್ಟವಾದ ದುಡಿತ ಹತ್ತು. ಶರೀರ-ಶ್ರಮ ಬಹಳ. ಈ ಬಡಕಲು ಯುವಕನಿಗೆ ಬಾವಿಯಿಂದ ನೀರು ಸೇದುವುದು ಮೊದಲಾದ ರಟ್ಟೆ ಹರಿಯುವ ಕೆಲಸ ಬಂತು. ಆತ ಸ್ವಲ್ಪವೂ ಗೊಣಗದೆ, ತುಟಿ ಪಿಟಕ್ಕೆನ್ನದೆ ಸಂತೋಷವಾಗಿ ಆ ಕೆಲಸ ಮಾಡುತ್ತಿದ್ದರು. ಇದು ಒಂದು ದಿನ ಗಾಂಧೀಜಿಯ ಕಣ್ಣಿಗೆ ಬಿತ್ತು. 'ಈ ಕೆಲಸ ಕಷ್ಟವಲ್ಲವೆ? ನೀನು ಮೊದಲೇ ಕೈಲಾಗದವನ ಹಾಗಿದ್ದೀಯೆ. ಜೊತೆಗೆ ಆರೋಗ್ಯವೂ ಕೆಟ್ಟಹಾಗಿದೆ' ಗಾಂಧೀಜೀ ಕೇಳಿದರು. ಆತ ಬದಲು ಹೇಳಿದ: 'ಮೈ ಬಡಕಲಾಗಿದ್ದರೇನು ಆತ್ಮದ ಬಲವಿಲ್ಲವೆ?' ಗಾಂಧೀಜೀ ಆ ತರುಣನನ್ನು ಅಪಾದಮಸ್ತಕವೂ ದಿಟ್ಟಿಸಿ ನೋಡಿದರು. ಮೊದಲೇ ಆತನ ಆಧ್ಯಾತ್ಮ ಪಿಪಾಸೆ-ಉತ್ಕಂಠತೆಗಳಿಗೆ ಮನಸೋತಿದ್ದರು. ಈಗಂತೂ ಆ ಅಭಿಮಾನ ದುಪ್ಪಟ್ಟು ಮೂರುಪಟ್ಟಾಯಿತು.

ಆ ತರುಣ ಆಚಾರ್ಯ ವಿನೋಬಾ; ಗಾಂಧೀಜಿಯ ಶಿಷ್ಯಕೋಟಿಯಲ್ಲಿ ಆಣಿಮುತ್ತು.

ಈ ಹಸಿವು, ಆಧ್ಯಾತ್ಮದ ಈ ಒಲವು ವಿನೋಬಾಜಿಯ ಜೀವನದಲ್ಲಿ ಮೊದಲಿಂದಲೂ ಇತ್ತು. ಇಲ್ಲದಿದ್ದರೆ ಇನ್ನೂ ಕಾಲೇಜಿನಲ್ಲಿ ಓದುತ್ತಿರುವಾಗಲೆ, ಮನೆಮಾರು ಬಿಟ್ಟು ಕಾಶಿಗೆ ಓಡಿ ಹೋಗುವುದು ಎಲ್ಲರಿಗೂ ರುಚಿಸೀತೆ? ವಿನೋಬಾ ಇಂಟರ್ ಪರೀಕ್ಷೆಗಾಗಿ ಬೊಂಬಾಯಿಗೆ ಬರಬೇಕಾಗಿತ್ತು. ಅವರಿದ್ದುದು ಬರೋಡಾದಲ್ಲಿ. ಕಿತ್ತ ಕಾಲು ಬೊಂಬಾಯಿಗೆ ತಿರುಗಿಸದೆ ಕಾಶಿಗೆ ಓಡಿ ಹೋದರು. ವಿದ್ಯಾಭ್ಯಾಸಕ್ಕೆ ಇತಿಶ್ರೀ ಆಯಿತು.

ಇವರ ಕಣ್ಣಿಗೆ ವೈರಾಗಿಕಳೆ ಚಿಕ್ಕಂದಿನಲ್ಲಿಯೆ ಬಂದಿತ್ತು. ಇವರ ತಂದೆ ಸ್ವಲ್ಪಮಟ್ಟಿಗೆ ಸ್ವತಂತ್ರವೃತ್ತಿಯುಳ್ಳವರು. ಇವರ ತಾಯಿಯು ತಂದೆಯ ಸ್ವಭಾವ ವಿರಕ್ತರದು. ವಿನೋಬಾಗೆ ಎಳೆಯತನ

ಮೇಲ್ತರಗತಿಯ

ಹಳಕು (Concentreted) ಬಣ್ಣಗಳು

- ಬರೆಯುವ ಮಸಿಗಳು
- ಟಾಯಿಪ್‌ರಾಯಿಟಿಂಗ್ ರಿಬನ್ನುಗಳು
- ಸಾಬೂನುಗಳು
- ಮಿಠಾಯಿಗಳು

ಇವುಗಳನ್ನೆಲ್ಲ ತಯಾರಿಸುವುದಕ್ಕೆ ಬಳಸುವ ಬಣ್ಣಗಳು. ವಿಶೇಷವಿವರಗಳಿಗಾಗಿ ಇಂಗ್ಲಿಷ್ ಭಾಷೆಯಲ್ಲಿ ಬರೆದು ಕೇಳಿಕೊಳ್ಳಿರಿ.

ಕ್ರಿಸಾಗ್ ಲಿಮಿಟೆಡ್

ಪೋ, ಬಾ. ಪಿ. ಬಿ. ಸಂ. ೨೧೦, ಮುಂಬಯಿ.

ದಲ್ಲೇ ಏಕಾಂತವಾಸದ ಒಲವು ಬಹಳ. ಓದಿನಲ್ಲಿ ಯಾರಿಗೇನು ಕಡಮೆಯಲ್ಲದಿದ್ದರೂ, ಎಲ್ಲಾದರೂ ಮೂಲೆಯಲ್ಲಿ ಸೇರಿ ಏನೋ ಆಲೋಚನೆಮಾಡಿಕೊಳ್ಳುತ್ತ ಕಾಲಕಳೆಯುತ್ತಿದ್ದರು. ಸಾಹಿತ್ಯದ ಮೇಲೆ ಪ್ರೀತಿಯಿದ್ದರೂ ಗಣಿತದ ಮೇಲೆ ಇವರ ಹಿಡಿತ ಬಹಳ. ಗಣಿತದಲ್ಲಿ ಇವರಿಗೆ ಯಾವಾಗಲೂ ಪ್ರಥಮಸ್ಥಾನ. ಧಾರ್ಮಿಕ-ವಿಚಾರದಲ್ಲಿ ಇವರಿಗೆ ತುಂಬಾ ಶ್ರದ್ಧೆ. ಅದಕ್ಕಾಗಿ ಇವರಿಗೆ ಸಂಸ್ಕೃತದ ರುಚಿ ಬಲವಾಗಿತ್ತು.

ಮಹಾರಾಷ್ಟ್ರದ ಗಾಳಿಯಲ್ಲಿ ೩೦–೪೦ ವರ್ಷಗಳ ಕೆಳಗೆ ಧರ್ಮ, ಸಂಸ್ಕೃತಿ, ಬ್ರಹ್ಮಚರ್ಯ, ದೇಶಸೇವೆಗಳ ಮಾತು ಕೇದಗಿಯ ಕಂಪಿನಂತೆ ಇಡುಗಿ ಹೋಗಿತ್ತು. ಸಮರ್ಥ ರಾಮದಾಸ ಸ್ವಾಮಿಯ ಚಿತ್ರವು ಜನರ ಕಣ್ಣೆದಿರು ಸಜೀವವಾಗಿ ಸಶಕ್ತವಾಗಿ ನಿಂತಿತ್ತು. 'ಮಹಾರಾಜ' 'ಬುವಾ' ಗಳೂ ಅಲ್ಲಲ್ಲಿ ಎದ್ದಿದ್ದರು. ರಾಜಕೀಯ ರಂಗದಲ್ಲೂ ಧಾರ್ಮಿಕರಂಗು ಚೆಲ್ಲಿತ್ತು. ಗೋಖಲೆ '**ದೇಶಸೇವೆಯೇ ಈಶಸೇವೆ**' ಎಂದರು. ತಿಲಕರಂತೂ ಗೀತೆಯ ಅಭಿಮಾನಿಗಳು; ಗಣಪತಿಯ ಹಬ್ಬವನ್ನು ನಾಡಹಬ್ಬವನ್ನಾಗಿ ಮಾಡಿದ ಚತುರರು. ವಿನೋಬಾರ ಕಣ್ಣುಮುಂದೆ ರಾಮದಾಸ ಸ್ವಾಮಿಯ ಶ್ರೇಷ್ಠ ಆದರ್ಶವು ಕಟ್ಟಿದಂತಿತ್ತು. ಅವರ ಹಾಗೆ ಬ್ರಹ್ಮಚಾರಿಗಳಾಗಬೇಕೆಂದೂ ಸಂಯಮಿಗಳಾಗಿ ದೇಶಸೇವೆ ಮಾಡಬೇಕೆಂದೂ ಆಶೆ ಬಾಲ್ಯದಲ್ಲಿಯೇ ಮೊಳೆಯಿತು.

ಈ ಹಂಬಲವೇ ಅವರನ್ನು ಓದು ಬಿಡಿಸಿ ಬೊಂಬಾಯಿಯ ಬದಲು ಕಾಶಿಗೆ ಸೆಳೆದದ್ದು. ಆದರೆ ಅಲ್ಲಿ ಬೈರಾಗಿಯಾಗಿ 'ಭಾಂಗ-ಚಿಲಂ' ಗಳ ಭಕ್ತರಾಗಿ ಬಾಳುವುದು ಇವರಿಗೆ ಅಸಹ್ಯವಾಯಿತು. ಸನಾತನಿ ಸಂನ್ಯಾಸಿಯಂತೆ 'ವೇದವಾದರತ' ರಾಗಿ ಜಡ ಕರ್ಮಠರಾಗುವುದೂ ಸರಿತೋರಲಿಲ್ಲ. ರಾಮದಾಸರ ಸ್ಫೂರ್ತಿ ಆ ದಾರಿಯದಲ್ಲ.

ಇದಲ್ಲದೆ ಹಿಂದುಸ್ಥಾನದಲ್ಲಿ ಹೊಸದೊಂದು ತೆರೆಯೆದ್ದಿತ್ತು ಆಗ. ವಂಗಭಂಗದ ಚಳವಳಿಯು ವಿಶಾಲವಾದ ಈ ದೇಶವನ್ನು ಕಲಕಿ ಜನರ ಮನಸ್ಸನ್ನು ರಾಷ್ಟ್ರೀಯತೆ ದೇಶಪ್ರೇಮಗಳ ಕರ್ಮಯೋಗದ ಹಾದಿಯ ಕಡೆಗೆ ಸೆಳೆದಿತ್ತು. ಸ್ವರಾಜ್ಯದ ಆಶೆಯಲ್ಲಿ ಹಿಂಸಾಮಯವಾದ ಕ್ರಾಂತಿಯ ವಿಚಾರಗಳೂ ಬೆರೆತು ಬರುತ್ತಿದ್ದುವು. ಲೋಕಮಾನ್ಯರ ಅದ್ಭುತತ್ಯಾಗ, ದೈವಭಕ್ತಿಯ ತಳಹದಿಯ ಮೇಲೆ ಬೆಳೆದ ಆ ಧೈರ್ಯಗಳೂ ಇವರ ಮನಸ್ಸನ್ನು ಮುತ್ತಿದ್ದುವು. ವಿನೋಬಾ ಕಾಶಿಯಲ್ಲಿ ನಿಲ್ಲಲಿಲ್ಲ; ನಿವೃತ್ತಿಯ ನಿಷ್ಕರ್ಮಮಾರ್ಗವನ್ನು ಹಿಡಿಯಲಿಲ್ಲ. ಕಾಶೀಯಾತ್ರೆಯಾದ ಮೇಲೆಯೇ ಇವರು ಸಾಬರಮತಿಗೆ ಹೋದುದು.

ವಿನೋಬಾ ಭಾವೆ— ಅದು ಅವರ ಪೂರ್ಣಹೆಸರು— ಬೊಂಬಾಯಿ ಬಳಿ, ಕೊಲಾಬಾ ಜಿಲ್ಲೆಯ ಗಾಗೋದೆ ಹಳ್ಳಿಯಲ್ಲಿ ಹುಟ್ಟಿದರು. ಇವರ ತಂದೆಗೆ ಬಡೋದಾದ ಕಲಾಭವನದಲ್ಲಿ ಕೆಲಸವಿತ್ತು. ಇವರ ವಿದ್ಯಾಭ್ಯಾಸ ಅಲ್ಲೇ ಆಯಿತು. ಮೊದ-ಮೊದಲು ಮನೆಯಲ್ಲಿ ಕಲಿತದ್ದೇ ಬಹಳ. ಇವರ ತಂದೆಗೆ ಕಲೆ-ಉದ್ಯೋಗಗಳ ಮೇಲೆ ಪ್ರೀತಿ. ಮಗ ಸ್ವತಂತ್ರವಾಗಿ ಗೌರವದಿಂದ ಬಾಳಲೆಂದು ಇವರಿಗೆ ಚಿತ್ರಕಲೆಯನ್ನು ಚೆನ್ನಾಗಿ ಕಲಿಸಿದರು. ಇವರ ಧ್ಯಾನಾಸಕ್ತ ಹೃದಯಕ್ಕೆ ಅದೂ ನೀರೆರೆದಿರಬೇಕು.

ಗಾಂಧೀಜಿಯ ಜೀವನಸೌರಭಕ್ಕೆ ಮನಸೋತ ತುಂಬಿಗಳಲ್ಲಿ ವಿನೋಬಾ ಸಹಜವಾಗಿಯೇ ಶ್ರೇಷ್ಠರು. ಮೊದಲೇ ಮುಮುಕ್ಷು ಜೀವಿ. ಸಾಬರಮತಿ ಆಶ್ರಮವನ್ನು ಸೇರಿದ ನಾಲ್ಕೈದು ವರ್ಷಗಳಲ್ಲಿಯೆ ಸ್ವತಂತ್ರ ವ್ಯಕ್ತಿತ್ವವನ್ನು ಗಳಿಸಿದರು. ಇವರ ತಾಪಸ ಜೀವನ-ಸುಮುಖಪಾಂಡಿತ್ಯಗಳು ಗಾಂಧೀಜಿಯನ್ನು ಮೆಚ್ಚಿಸಿದುವು. ಅಷ್ಟುಹೊತ್ತಿಗೆ ಸೇಠ ಜಮನಾಲಾಲ ಬಜಾಜರು ಸಾಬರ-ಮತಿಯ ಮಾದರಿಯ ಆಶ್ರಮವೊಂದನ್ನು ವರ್ಧಾದಲ್ಲಿ ಪ್ರಾರಂಭಿಸಲು ನಿಶ್ಚಯಿಸಿದರು. ಸ್ವತಂತ್ರ ಆಶ್ರಮದ ಜವಾಬ್‌ದಾರಿ ಯಾರು ಹೊರಬೇಕು ? ಆ ಪ್ರಶ್ನೆ ಸುಲಭವಾಗಿ ಹರಿಯಲಿಲ್ಲ. ಕೊನೆಗೆ ಗಾಂಧೀಜಿ ಅದನ್ನು ಬಿಡಿಸಿದರು. ವರ್ಧಾ ಆಶ್ರಮಕ್ಕೆ ವಿನೋಬಾಜಿಯನ್ನು ಹಿರಿಯರನ್ನಾಗಿ ಮಾಡಿ ಕಳಿಸಿಕೊಟ್ಟರು. ಅಂದಿನಿಂದ ವಿನೋಬಾ ವರ್ಧಾದಲ್ಲೇ ಇದ್ದಾರೆ.

ವರ್ಧಾದಲ್ಲಿ ಸತ್ಯಾಗ್ರಹಾಶ್ರಮ ಮೊದಲಾದಾಗ ಮಗನಲಾಲ ಗಾಂಧಿ, ರಮಣಿಕಲಾಲಭಾಯಿ ಇವರ ಜೊತೆಗೆ ಇದ್ದರು. ಮಗನಲಾಲರು ಖಾದಿಯ ಪಂಚಪ್ರಾಣವಾಗಿದ್ದರು ಪ್ರಾರಂಭದಲ್ಲಿ. ಅವರ ಸಾಂಗತ್ಯದಲ್ಲಿ ವಿನೋಬಾಗೆ ಖಾದಿಯ ಸೆಳೆತ ಪೂರಾ ಆಗಿ ಹೋಯಿತು. ದರಿದ್ರನಾರಾಯಣನ ಆರಾಧಕರಾಗಿ ಖಾದೀ ಶಾಸ್ತ್ರವನ್ನು ಅಭ್ಯಾಸ ಮಾಡಿದರು. ಅದರ ವಿಷಯವಾಗಿ

ಮಗನಲಾಲರೊಡಗೂಡಿ ಒಂದು ಪುಸ್ತಕವನ್ನು ಬರೆದರು. ಈಗಲೂ ಸದಾ ಖಾದಿಯನ್ನು ಕುರಿತು ವಿಚಾರಮಾಡುತ್ತಿರುತ್ತಾರೆ. ಮೊನ್ನೆ ಮೊನ್ನೆ ಇವರಿಗೆ ಬೇನೆಯಾಗಿದ್ದಾಗ, ಹಾಸಿಗೆಯಲ್ಲಿ ಮಲಗಿ, ಹಿಂಜುವ ಬಿಲ್ಲಿನ ಸಹಾಯವಿಲ್ಲದೆ ಕೈಯಿಂದಲೇ ಅರಳೆ ಹಿಂಜುವ ಪದ್ಧತಿಯೊಂದನ್ನು ಮೊದಲುಮಾಡಿದರು. ವರ್ಧಾದಲ್ಲಿ ವರ್ಷವರ್ಷವೂ ವಿನೋಬಾಜೀ ನಡೆಯಿಸುವ ಖಾದೀ ಜಾತ್ರೆ ಒಂದು ವೈಶಿಷ್ಟ್ಯವೇ ಆಗಿದೆ. ನಿಜವಾದ ಗ್ರಾಮಜೀವನವೇ ಸಂಸ್ಕೃತಿಯ ಲಕ್ಷಣವೆಂದು ಗಾಂಧೀಜಿಯಂತೆ ಇವರೂ ಪೂರ್ಣವಾಗಿ ನಂಬಿದ್ದಾರೆ. ಗ್ರಾಮಜೀವನದಲ್ಲಿ ಸರಳತೆ ಸತ್ಯಗಳು ತಾನೇ ತಾನಾಗಿ ತುಂಬಲು ಖಾದೀ-ಗ್ರಾಮೋದ್ಯೋಗಗಳೇ ಹಾದಿಯೆಂದು ಇವರ ಸಿದ್ಧಾಂತ. ಆ ಸಿದ್ಧಾಂತವನ್ನು ವಿನೋಬಾ ಆಚರಣೆಗೆ ತಂದಷ್ಟು ಗಾಂಧೀಜಿಗೂ ಆಗಿಲ್ಲ.

ಸತ್ಯಾಗ್ರಹಾಶ್ರಮ ವರ್ಧಾಕ್ಕೆ ೧-೧½ ಮೈಲು ದೂರದಲ್ಲಿರುವ ನಾಲವಾಡಿ ಎಂಬ ಹಳ್ಳಿಯಲ್ಲಿದೆ. ಅದರಲ್ಲಿ ಹರಿಜನರೇ ಬಹಳ. ಅವರಿಗಾಗಿಯೆ ಆಶ್ರಮ ಇಲ್ಲಿ ಕಟ್ಟಲ್ಪಟ್ಟಿರಬಹುದು. ಈ ಆಶ್ರಮ ಮಧ್ಯಪ್ರಾಂತದ ತರುಣರ ಸಾಧನಾಕ್ಷೇತ್ರವಾಗಿತ್ತು. ಮಹಾರಾಷ್ಟ್ರದ ತರುಣರನೇಕರು ವಿನೋಬಾಜಿಯ ಸುತ್ತಲೂ ಬಂದು ಸೇರಿದರು. ಅವರಲ್ಲನೇಕರಿಗೆ ಇಂದಿಗೂ ಇವರು ಅಂತರಂಗದ ಗೆಳೆಯ, ಗುರು ಆಗಿದ್ದಾರೆ.

ವಿನೋಬಾ ಬರಿಯ ಆಧ್ಯಾತ್ಮಲೋಕದ ಮರುಳಲ್ಲ. ಅವರ ಆಶ್ರಮಜೀವನದಲ್ಲಿ ಹತ್ತಿಯನ್ನು ಹಿಂಜುವುದು, ನೂಲುವುದು, ನೇಯುವುದು, ಬೇಸಾಯ ಮುಖ್ಯಶಿಕ್ಷಣವಾಗಿತ್ತು. ಗಾಂಧೀಜಿಯ ರಾಷ್ಟ್ರೀಯ ಶಿಕ್ಷಣದ ಪ್ರಯೋಗ ಇಲ್ಲಿ ದೀರ್ಘಕಾಲ ನಡೆಯಿತು. ಇಂಥ ಅನೇಕ ಪ್ರಯೋಗಗಳ ಫಲ ಇಂದಿನ ವರ್ಧಾ-ಯೋಜನೆ. ಆಶ್ರಮವಾಸಿಗಳು ತಮ್ಮ ಅಡಿಗೆ ತಾವೇ ಮಾಡಿಕೊಳ್ಳುತ್ತಿದ್ದರು. ಆಹಾರ ಅತಿ ಸಾದಾ ಮತ್ತು ಸಾತ್ವಿಕ. ತಾವು ನೂತು ನೇದ ಬಟ್ಟೆಯಿಂದಲೇ ತಮ್ಮ ಉಡುಗೆ. ಸ್ವಾವಲಂಬನ ತತ್ತ್ವವು ಗಾಂಧೀಜಿಯ ಗ್ರಾಮಸಂಸ್ಕೃತಿಯ ಮುಖ್ಯ ಸೂತ್ರವಷ್ಟೆ. ಆಶ್ರಮದಲ್ಲಿ ಅಪರಿಗ್ರಹತತ್ತ್ವವನ್ನೂ ವಿನೋಬಾ ಕಡ್ಡಾಯವಾಗಿ ಕಲಿಸಿಬಿಡುತ್ತಿದ್ದರು. ದಿನವೂ ತಾಸೆರಡು ತಾಸು ಆಶ್ರಮವಾಸಿಗಳಿಗಾಗಿ ವಿನೋಬಾಜಿಯ ಪ್ರವಚನವಾಗುತ್ತಿತ್ತು. ಅದಕ್ಕೆ ಆಧಾರ ಅವರ ಅನುಭವ; ಯಾವ ಗ್ರಂಥಸಮುದಾಯವೂ ಅಲ್ಲ.

ಈಗ ಆಶ್ರಮ ಚೆದರಿದಂತಾಗಿದೆ. ಇವರ ಅನುಯಾಯಿಗಳು ಗ್ರಾಮಸೇವಾ ಮಂಡಲವೊಂದನ್ನು ಮಾಡಿಕೊಂಡಿದ್ದಾರೆ. ಅದರ ಸದಸ್ಯರಿಗೆ 'ಜೀವನ ವೇತನ'— ಕೇವಲ ಹೊಟ್ಟೆ ಬಟ್ಟೆಗಾಗುವಷ್ಟು—ಕೊಡುತ್ತಾರೆ. ಹಳ್ಳಿಗಳಲ್ಲಿ ಪುನರುಜ್ಜೀವನದ ಸಂಸ್ಕೃತಿಯ ಪ್ರಚಾರ, ಉದ್ಯೋಗಪ್ರಿಯತೆ, ಖಾದೀಪ್ರಚಾರ ಇವರ ಕೆಲಸ; ಮುಖ್ಯವಾಗಿ ಗ್ರಾಮಪುನರ್ನಿರ್ಮಾಣ.

ಗಾಂಧೀಜೀ ವರ್ಧಾ ಸೇರಿದ ಮೇಲೆ, ನಾಲವಾಡಿ ಖಾದೀ ಕೇಂದ್ರವಾಗಿ ಬಿಟ್ಟಿದೆ. ೪೧-೫೦ ಮಗ್ಗಗಳದೊಂದು ಕಾರಖಾನೆಯಾಗಿದೆ. ಮಹಾರಾಷ್ಟ್ರ ಚರಖಾಸಂಘಕ್ಕೆ ಮುಖ್ಯ ಕೇಂದ್ರವಾಗಿದೆ. ವಿನೋಬಾ ಈಗ ಅಲ್ಲಿರುವುದೂ ಇಲ್ಲ. ಕೆಲವು ದಿನಗಳ ಹಿಂದೆ ಬಹಳ ಬೇನೆ ಬಿದ್ದು, ಹತ್ತಿರದಲ್ಲಿರುವ **ಪೌನಾರ್** ಎಂಬ ಹಳ್ಳಿಗೆ ಆರೋಗ್ಯವರ್ಧನಕ್ಕಾಗಿ ಹೋದರು. ಅಲ್ಲೇ ಇದ್ದಾರೆ ಇನ್ನೂ.

ನೋಡುವುದಕ್ಕೆ ವಿನೋಬಾ ಆಕರ್ಷಕವಾದ ವ್ಯಕ್ತಿಯಲ್ಲ. ಮೈಮೇಲೆ ಬಟ್ಟೆ ಬಹಳ ಇಲ್ಲ. ಉಡುವುದು ಒಂದು ಖಾದೀ ತುಂಡುಪಂಚೆ. ಮೇಲೊಂದು ಉತ್ತರೀಯ. ಚಳಿಗಾಲದಲ್ಲಿ ಒಂದು ಕಂಬಳಿ. ಮೈಕಟ್ಟು ತೀರ ಬಣಕಲು. ಮೊದಲೇ ಸೀರ ಸಿಪ್ಪಾಡಿ; ಮೇಲೆ ತಪೋಜೀವನದ ನಿಷ್ಠುರ ಸಂಯಮ. ಹಲ್ಲಿನ ಸಾಲು ಸ್ವಲ್ಪ ಮುಂದೆ ಬಂದಿದೆ. ಬಣ್ಣ ಸ್ವಲ್ಪ ಕಪ್ಪು. ಆದರೆ ಕಣ್ಣು ಮಾತ್ರ ನಂದಾದೀಪದಂತೆ ನಿಚ್ಚಳವಾಗಿ ಸ್ಥಿರವಾಗಿ ಹೊಳೆಯುತ್ತವೆ. ಒಳಗೆ ತುಂಬಿ ಹೋದ ಶಾಂತಿಯ ಬೆಳಕು ಕಣ್ಣಲ್ಲಿ ಕೋಡಿಹರಿಯುತ್ತಿದೆ. ಎಳೆಯತನದಲ್ಲಿದ್ದ ವೈರಾಗ್ಯದ ಭಾವಪರವಶತೆಯ ಕಳೆ ಸಾಧನೆ-ಅಭ್ಯಾಸಗಳಿಂದ ಸ್ಪಷ್ಟವಾಗಿ, ಶುದ್ಧವಾಗಿ, ಜಗಜ್ಜ್ಯೋತ್ಯಜ್ಞಾನಯೋಗಿಯ ಪ್ರಭೆಯಾಗಿದೆ ಆ ಕಣ್ಣಲ್ಲೇ ಅವರ ಜೀವವಿದೆ.

ವಿನೋಬಾ ಗೊಡ್ಡು ವೇದಾಂತಿಯಲ್ಲ. ಅವರ ಬುದ್ಧಿ ವ್ಯವಹಾರದಲ್ಲಿ ಅತಿ ಸೂಕ್ಷ್ಮವಾಗಿ ಓಡುತ್ತದೆ. ಅವರ ವೇದಾಂತದಲ್ಲೂ ಗಣಿತಶಾಸ್ತ್ರದ ರೀತಿ ಕಾಣಬರುತ್ತದೆ. ವ್ಯವಹಾರಕ್ಕೆ ಎಲ್ಲವನ್ನೂ ಸಮನ್ವಯ ಮಾಡುತ್ತಹೋಗುತ್ತಾರೆ. ಸಾಹಿತ್ಯದಲ್ಲಿ ಮೊದಲಿಂದಲೂ ಪ್ರೀತಿಯಿದೆ. 'ಮಧುಕರ' ಎಂಬ ಹೆಸರಿನಿಂದ ಮರಾಠಿಯಲ್ಲಿ ಲೇಖನವ್ಯವಸಾಯವನ್ನೂ ನಡೆಯಿಸಿದ್ದರು. ಅವರ ಶೈಲಿ ಮನೋಹರವಾದುದೆಂದು ಮರಾಠಿಯ ಗೆಳೆಯರು ಹೇಳಿದುದನ್ನು ಬಲ್ಲೆ.

ಬ್ರಹ್ಮಚರ್ಯವಾದರೂ ಅಷ್ಟೆ; ಜೀವನದ ಆನಂದದಲ್ಲಿ ಅವರಿಗಿರುವ ಶ್ರದ್ಧೆ-ಆಸಕ್ತಿಗಳನ್ನು ಕಡಮೆ ಮಾಡಿಲ್ಲ. ಬ್ರಹ್ಮಚರ್ಯವೆಂದರೆ ಒಳಗಿರುವ ಬೆಂಕಿಗೆ ನೀರು ಹಾಕಿ ಬೂದಿಮಾಡುವುದಲ್ಲ. ಅಂತರ್ಜ್ಯೋತಿಯನ್ನು ಅಖಂಡವಾಗಿ ದೇದೀಪ್ಯಮಾನವಾಗಿ ಬೆಳಗಿಸುವುದು. ಇಂದ್ರಿಯಗಳನ್ನು ಸುಟ್ಟುಕೊಂಡು ಹೆಳವಾಗಿ ಜೀವನದ ಆನಂದವನ್ನು ಕಳೆದುಕೊಳ್ಳುವುದು ಸಂಯಮವಲ್ಲ. ದೇಹವು ಒಂದು ರಥ, ಇಂದ್ರಿಯಗಳು ಕುದುರೆಗಳು. ಅವನ್ನು ಪಳಗಿಸಿಕೊಳ್ಳಬೇಕು. ವಿವೇಕಕ್ಕೆ ವಿಧೇಯವಾಗಿರುವಂತೆ ಅವನ್ನು ತಿದ್ದಬೇಕು. ಹಾಗಿಲ್ಲದುದು ನಿಸ್ಸಾರವಾದ ಬಂಜೆತನ.

ವಿನೋಬಾ ಹಿರಿಯ ಪಂಡಿತರು. ಸಂಸ್ಕೃತವನ್ನು ಚೆನ್ನಾಗಿ ಅಭ್ಯಾಸಮಾಡಿದ್ದಾರೆ. ಇವರಷ್ಟು ಆಳವಾಗಿ ಅಭ್ಯಾಸಮಾಡಿದವರು ವಿರಳ. ವೇದ-ಪುರಾಣಾದಿಗಳು ಇವರಿಗೆ ಅಂಗೈ ನೆಲ್ಲಿಕಾಯಿ. ಪ್ರಪಂಚದಲ್ಲಿ ಪಾಂಡಿತ್ಯವೇನು ಅಲಭ್ಯವಲ್ಲ. ಕೆಲವರಿಗಾದರೂ ಅಗಾಧ ಪಾಂಡಿತ್ಯ ಬಂದೀತು. ಆದರೆ ಪಾಂಡಿತ್ಯವನ್ನು ಜೀರ್ಣಿಸಿಕೊಂಡು ಜೀವನ ಪಥದಲ್ಲಿ ಅದನ್ನು ಊರುಗೋಲಾಗಿ ಮಾಡಿಕೊಂಡವರು ಮಾತ್ರ ಬಹಳ ಇಲ್ಲ. ವಿನೋಬಾ ತಮ್ಮ ಪಾಂಡಿತ್ಯ

ದಿಂದ ಬಾಳಿನಲ್ಲಿ ಹಾದಿ ಹುಡುಕುತ್ತಾರೆ. ಇದ್ದ ದಾರಿಗಳನ್ನೂ ಮುಚ್ಚಲು ಹೋಗುವುದಿಲ್ಲ. ಪಾಂಡಿತ್ಯವನ್ನು ಜೀವನದಲ್ಲಿ ಹೀಗೆ ಹಿತವಾಗಿ ಬೆರಸಿಕೊಂಡು ಹೋಗುವುದು ಸಾಧ್ಯ ಎಂಬ ಮಾತು ಶ್ರೀವಾಸಿಷ್ಠಗಣಪತಿ ಮುನಿಗಳನ್ನು ನೋಡಿದಾಗ ಎನಿಸಿತ್ತು. ವಿನೋಬಾಜಿಯನ್ನು ನೋಡಿ ಇದೇ ಪಾಂಡಿತ್ಯದ ಗುರಿ ಎಂಬುದು ತಿಳಿಯಿತು. ಈ ಗುಣವೇ ಇವರನ್ನು ಆ ಉತ್ತಮ ಜಾತಿಯ ಶಿಕ್ಷಕರನ್ನಾಗಿ ಮಾಡಿದೆ. ಇವರೊಡನೆ ಒಂದು ತಾಸು ಕಳೆದರೆ ಅದೇ ಶಿಕ್ಷಣ. ಇವರ ಸಹವಾಸವೇ ವಿದ್ಯಾಭ್ಯಾಸ.

ಸರಳತೆಯ ಮಾತು ಬಂದಿತಲ್ಲ; ವಿನೋಬಾಜಿಗೆ ಸರಳತೆಯ ಹುಚ್ಚು ಹಿಡಿದಿದೆ. ಸರಳತೆಯನ್ನು ಒಮ್ಮೊಮ್ಮೆ ಗೌರೀಶಂಕರದ ತುದಿಗೂ ಏರಿಸಿ, ಅಲ್ಪಜೀವಿಗಳಿಗೆ ನಿಲುಕಲಾರದಂತೆ ಮಾಡುತ್ತಾರೆ. ಅವರ ಸರಳತೆಯ ತೊರೆ ಹರಿಯುವುದು ಅಸ್ವಾಮ್ಯದ ತಲೆಮೂಡಿನಿಂದ. ಆದರೆ ಆ ಅಸ್ವಾಮ್ಯ-ಅಸಂಗ್ರಹಗಳಿಗೂ ಸತ್ಯವೇ ಮೂಲವಾದುದರಿಂದ, ಈ ಸರಳತೆಯಲ್ಲಿ ಛಾಂದಸತನವಿಲ್ಲ; ಸೌಂದರ್ಯವಿರದಿದ್ದರೂ ಕಾಠಿನ್ಯವಿಲ್ಲ.

ಇದಕ್ಕೆ ಅವರ 'ಮುಟ್ಟಿದರೆ ಮುನಿ' ಯ ಸ್ವಭಾವವೇ ಕಾರಣ. ಜನರ ನಡುವೆ ಅವರಿಗೆ ಸಹಿಸಲಾರದ ಸಂಕೋಚ. ಅವರದು ಆತ್ಮಸ್ತಂಭನವಿದ್ಯೆ, ಬಾಲ್ಯದಿಂದಲೂ ಅವರಿಗೆ ಏಕಾಂತಪ್ರೀತಿ. ಜನಸಂದಣಿ, ಪಟ್ಟಣದ ಗಲಿಬಿಲಿ ಅವರಿಗೆ ತಡೆಯಲಾಸಲ್ಲ. ಹೆಸರು, ಮರ್ಯಾದೆ ಅವರಿಗೆ ಹೇಸಿಗೆ. ಇಂಥ ಪ್ರಸಂಗ ಬಂದಾಗ ಅವರು ಹರಿದೋಡುತ್ತಾರೆ. ಫೈಜಪುರದ ಕಾಂಗ್ರೆಸ್ ನಡೆದಾಗ ವಿನೋಬಾ ಸ್ವಾಗತಸಮಿತಿಯ ಜೀವಾಳವಾಗಿದ್ದರು. ಹಳ್ಳಿಹಳ್ಳಿಗೂ ಮನೆಮನೆಗೆ ಹೋಗಿ ಭಿಕ್ಷೆಬೇಡಿದರು. ಮಹಾರಾಷ್ಟ್ರದ ಜನಸಾಮಾನ್ಯರಲ್ಲಿ ಸುಂಟರಗಾಳಿಯನ್ನೇ ಹರಿಬಿಟ್ಟರು. ಕಾಂಗ್ರೆಸ್ ನಗರ ನಿರ್ಮಾಣವನ್ನೂ ಸ್ವಯಂ ನಿಂತು ನೋಡಿದರು. ಇಷ್ಟಾದರೂ ಕಾಂಗ್ರೆಸ್ ನಡೆದಾಗ ಅವರ ಸೊಲ್ಲೇ ಇಲ್ಲ. ಅವರ ದರ್ಶನವೂ ಅಸಾಧ್ಯವಾಯಿತು. ತಮ್ಮ ಗುಡಿಸಲಲ್ಲಿ ಸೇರಿಕೊಂಡು ಯಾರನ್ನೂ ನೋಡದಂತೆ ಮಾಡಿದರು; ಬಯಲಿಗೇ ಬರಲಿಲ್ಲ.

ಗಾಂಧೀಜಿಗಿದ್ದಂತೆ ವಿನೋಬಾಗೂ ಗೀತೆಯ ಬಗ್ಗೆ ಬಹು ಅಕ್ಕರೆ. ಈ ಇಪ್ಪತ್ತು ವರ್ಷದಲ್ಲಿ ಒಂದು ದಿನವಾದರೂ ಗೀತಾ-ಪಾರಾಯಣವನ್ನೋ ಚಿಂತನವನ್ನೋ ಅವರು ಮಾಡದೆ ಇಲ್ಲ. ಗೀತೆಯನ್ನು 'ಗೀತಾಯಿ'—ಗೀತಾತಾಯಿ ಎಂದು ಕರೆದಿದಾರೆ. ಸುಲಭವಾದ ಸವಿಯಾದ ಮರಾಠಿಯಲ್ಲಿ ಅವರು ಗೀತೆಯನ್ನು ಅನುವಾದಿಸಿದಾರೆ. ಅನುವಾದದ ಛಂದಸ್ಸು ಮೂಲದ ಅನುಷ್ಟುಪೇ. ಆ ಛಂದೋಗತಿಯಲ್ಲಿ ಒಂದು ಚೆಂದವಿದೆ. ವಿನೋಬಾಗೆ ಮಾತ್ರವೇ ಏಕೆ, ಗೀತೆ ಸಾವಿರಾರು ಜನಕ್ಕೆ ನಿಜವಾದ ತಾಯಿ. ಗೀತೆಯಲ್ಲಿ ಅಹಿಂಸೆ ಅನಾಸಕ್ತಿಯೋಗಗಳನ್ನೂ ಇವರು ಕಂಡಿದಾರೆ.* ಅನೇಕಸಲ ಗಾಂಧೀಜಿಯ ವೇದಾಂತ ವಿಚಾರಗಳಲ್ಲಿ ಅವರದು ಯಾವುದು, ವಿನೋಬಾಜಿಯದು ಯಾವುದು, ಎಂದು ತಿಳಿದುಕೊಳ್ಳುವುದೇ ಕಷ್ಟ.

ಗಾಂಧೀವಾದಿಗಳಲ್ಲಿ ವಿನೋಬಾಗೆ ತುಂಬಾ ಮರ್ಯಾದೆ. ಗಾಂಧೀಜಿಯ ತರುವಾಯ ವಿನೋಬಾ ಬರುತ್ತಾರೆ ಅವರ ಪಟ್ಟಿಯಲ್ಲಿ. ಸ್ವಯಂ ಗಾಂಧೀಜೀ ವಿನೋಬಾಜಿಯನ್ನು ಎಷ್ಟೋ ಮಾತಿನಲ್ಲಿ ತಮಗಿಂತ ಮೇಲೆಂದು ತಿಳಿಯುತ್ತಾರೆ. ಹಾಗೆ ಅವರಿವರಿಗೆ ಹೇಳಿಯೂ ಹೇಳುತ್ತಾರೆ. ಗಾಂಧೀಜಿಯ ಎಲ್ಲ ಕಾರ್ಯಗಳಿಗೂ ವಿನೋಬಾಜಿಯ ಬೆಂಬಲವಿದೆ; ಅವರ ತಪಶ್ಶಕ್ತಿ ಇವರ ಕೆಲಸಕ್ಕಾಗಿಯೇ ದತ್ತವಾಗಿದೆ. ಆ ನಿಷ್ಕಾಮದಲ್ಲಿ ಏಕಾಂತಜೀವನದಲ್ಲಿ ಹಿಂದಿನಕಾಲದ ಋಷಿಗಳ ಎಲ್ಲ ಸರಲ-ಗಾಂಭೀರ್ಯವೂ ಇದೆ.

* ವಿನೋಬಾರವರ ಬಗ್ಗೆ ಗೀತೆಯ ಬಗ್ಗೆ ಅವರ ಅಭಿಪ್ರಾಯದ ಬಗ್ಗೆ 'ವರ್ಧಾಯಾತ್ರೆ' ಎಂಬ ಪುಸ್ತಕ ಓದಬೇಕು.



ಹಿಂದುಸ್ಥಾನದ ಶ್ರೇಷ್ಠ ತರಗತಿಯ ವಿಮಾಸಂಸ್ಥೆಗಳಲ್ಲಿ ಒಂದಾದ

ದಿ ಏಶಿಯಾಟಿಕ್ ಗವ್ಹರ್ನಮೆಂಟ್ ಸೆಕ್ಯೂರಿಟಿ

ಲೈಫ್ ಅಶ್ಯೂರನ್ಸ್ ಕಂಪನಿ, ಲಿ. ಬೆಂಗಳೂರು

ಇದುವರೆಗೆ ರೂ. ೨,೫೦,೦೦೦,೦೦ ವಿಮಾಕಾರ್ಯ ಮಾಡಿದೆ. ★ ೭೫,೦೦೦ ಸಂಸಾರಗಳಿಗೆ ವಿಮಾರಕ್ಷಣೆ ದೊರಕಿಸಿದೆ.

ಕಡಿಮೆದರದ ಹಪ್ತೆಯ ಮೇಲೆ ವಿಮಾ ಇಳಿಸಬಹುದು.

ಏಶಿಯಾಟಿಕ್ ಕಂಪನಿಯ ಪ್ರಗತಿಯು ಕನ್ನಡಿಗರು ಹೆಮ್ಮೆ ಪಡತಕ್ಕದ್ದಾಗಿದೆ. ವಿಮೆ ಇಳಿಸಲು ಸುರಕ್ಷಿತವಾದ, ಭದ್ರವಾದ ಮೈಸೂರಿನ ವಿಮಾ ಸಂಸ್ಥೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ಏಜನ್ಸಿ ಸುಪರಿಂಟೆಂಡೆಂಟ್,

ಏಶಿಯಾಟಿಕ್ ಲೈಫ್ ಆಫೀಸ್, ಧಾರವಾಡ.

ರಾಜನ ಧರ್ಮಸಂಶೋಧನೆ

★

(ಸಣ್ಣ ಕತೆಯೊಂದು)

ಶ್ರೀ. ‘ ಆನಂದಕಂದ ’

‘ ಅಶಕ್ತಮಾನವನ ಅಪರಾಧವನ್ನು ಸಹಾನುಭೂತಿಯಿಂದ ಕಂಡು ಕ್ಷಮಿಸದ ಧರ್ಮವೂ ಧರ್ಮವಲ್ಲ, ಅಪರಾಧ-ಅನ್ಯಾಯಗಳ ಮೂಲಕವೆ ಧರ್ಮಪ್ರಚಾರಮಾಡುವ ಧರ್ಮವೂ ಧರ್ಮವಲ್ಲ’ ಎಂಬ ಸಿದ್ಧಾಂತವನ್ನು ರಾಜ ಕಂಡುಕೊಂಡಿದ್ದಾನೆ. ಆತನ ಈ ಸಿದ್ಧಾಂತಕ್ಕೆ ಮಾಲಿನಿಯ ಜೀವನವೆ ಹೇಗೆ ಕಾರಣವಾಯಿತೆಂಬುದನ್ನು ನೋಡಿ, ನಾನಿಯಂತೆ ನೀವೂ ನಿಟ್ಟುಸಿರಿಡಬೇಕು !

★

“ಅಲ್ಲವೊ ರಾಜಾ, ನಾವಿಬ್ಬರೂ ಹೈಸ್ಕೂಲಿನಲ್ಲಿ ಕೂಡಿ ಕಲಿಯುತ್ತಿರುವಾಗ ನಿನ್ನಲ್ಲಿ....ಯಾರಲ್ಲಿಯೂ ಕಾಣದಂತಹ ಮತಾಭಿಮಾನ ; ಇನ್ನೆಲ್ಲಿಯೂ ತೋರದಂತಹ ಹಿಂದೂ ಧರ್ಮಾಭಿಮಾನ ! ಆದರೆ ಈಗಿನ ನಿನ್ನ ಮಾತುಗಳನ್ನು ನೋಡಿದರೆ ಆ ಮತ-ಧರ್ಮಗಳನ್ನು ಔದಾಸೀನ್ಯದಿಂದ ಕಾಣುವ ಹಾಗೆ ಎನಿಸುವುದು ; ಇದೇನು ವಿಚಿತ್ರ ! ”

“ ಇದರಲ್ಲಿ ವಿಚಿತ್ರವೇನೂ ಇಲ್ಲ ; ಮತ-ಧರ್ಮಗಳು ಮಾನುಷ ಧರ್ಮವನ್ನು ಮೆಟ್ಟಿ ತುಳಿದು, ಸಮಾಜದಲ್ಲಿಯ ಮನುಷ್ಯತ್ವವನ್ನೆ ಮರೆಮಾಡುವುವೆಂಬ ಅನುಭವಜ್ಞಾನ ನನಗಾಗಿದೆ. ಆ ಅನುಭವ ವಾದಂದಿನಿಂದ, ಮತ-ಧರ್ಮಗಳಲ್ಲಿಯ ನನ್ನ ವಿಶ್ವಾಸವೆ ಹಾರಿ ಹೋಗಿದೆ.”

“ ಅದಾವುದಪ್ಪಾ ನಿನ್ನ ಅನುಭವ ?”

ರಾಜನ ಮುಖದ ಕಳೆ ಒಮ್ಮೆಲೆ ಇಳಿಯಿತು. ಕೆಳದುಟಿಯಲ್ಲಿದ್ದ ನಗೆಯರಳು ಎಲ್ಲಿಯೊ ಮಾಯವಾಯಿತು. ಸಿಡಿದಾದ ಉಸಿರೊಂದು ಹೊರಬಿದ್ದು ಹವೆಯಲ್ಲಿ ಬೆರೆಯಿತು. ಒದ್ದೆಯಾದ ಕಣ್ಣುಗಳನ್ನೊಮ್ಮೆ ಗಟ್ಟಿಯಾಗಿ ಮುಚ್ಚಿ ತೆರೆದು, ನಿಡುನೋಟದಿಂದ ನನ್ನನ್ನು ನೋಡಲು ತೊಡಗಿದ. ಬೆರಗಿನ ದನಿಯಲ್ಲಿ ನಾನು ಕೇಳಿದೆ :

“ ಅದೇನು ರಾಜ! ನಿನಗಾದ ಅನುಭವ ನಿನ್ನ ಮನಸ್ಸನ್ನು ತುಂಬ ಅಲುಕಿಸಿದೆಯೆಂದು ತೋರುತ್ತದೆ ! ”

“ ಮನಸ್ಸನ್ನು ಅಲುಕಿಸಿದುದಷ್ಟೆ ಏಕೆ ನಾನೀ ! ನನ್ನ ಆದರ್ಶದ ದೆಸೆಯನ್ನೆ ಮಾರ್ಪಡಿಸಿಬಿಟ್ಟಿದೆ. ನೆನಪಾದಾಗಲೆಲ್ಲ ಎದೆಯನ್ನು ನಡುಗಿಸುವಂತಹ ಅನುಭವ. ನನ್ನ ಜೀವನದಲ್ಲಿಯ ಶಾಂತಿ-ಸಮಾಧಾನಗಳನ್ನೆ ಮರೆಗೊಳಿಸಿದಂತಹ ಅನುಭವ ! ”

“ ಅದೇನು ಅನುಭವ ? ನನ್ನೆದುರು ಹೇಳುವುದಕ್ಕೆ ಸಾಧ್ಯವಿದೆಯೆ ಅದನ್ನು, ರಾಜಾ ? ”

ರಾಜ ಅರೆನಿಮಿಷ ಸುಮ್ಮಗೆ ಕುಳಿತು, ಬಳಿಕ ಮೆಲುದನಿಯಲ್ಲಿ ಮಾತಿಗೆ ಮೊದಲು ಮಾಡಿದ :

“ ನೋಡು ನಾನೀ ! ನನ್ನ ಅನುಭವದ ಕಥೆಯನ್ನು ಇದುವರೆಗೆ ಯಾರೆದುರೂ ಹೇಳಿಲ್ಲ ; ಎಲ್ಲಿಯಾದರೂ ಹೇಳಬೇಕೆಂಬ ಬಯಕೆ ನನ್ನ ಹೃದಯವನ್ನು ಕೊರೆಯುತ್ತಿರುತ್ತದೆ. ಆದರೆ ಯಾವ ಮಾತನ್ನೆ ಆಗಲಿ, ಸಹಾನುಭೂತಿಯಿಂದ ಕೇಳಿಕೊಳ್ಳುವವರು ಬೇಕು; ಕೇಳಿ ಉಪೇಕ್ಷೆಯ ನಗೆ ನಕ್ಕುಬಿಡುವವರೆದುರು ಹೇಳಿದರೆ ಎದೆಯ ನೋವನ್ನು ಇನ್ನಿಷ್ಟು ಹೆಚ್ಚಿಸಿಕೊಂಡಂತೆಯೆ ಆಗುವುದಲ್ಲವೆ ? ”

ನನ್ನಲ್ಲಿ ಆತುರ ಹೆಚ್ಚಿತು ; ಗಂಭೀರಭಾವದಲ್ಲಿಯೆ ಹೇಳಿದೆ :

“ ಹೌದು ರಾಜಾ, ನನಗೂ ಅಂತಹ ನೋವಿನ ಅನುಭವವಿದೆ. ಎಂತೆಂತಹ ಆಳವಾದ ವಿಷಯವನ್ನೂ ಸಹಜವಾಗಿ ಕೇಳಿ, ಹಗುರಾಗಿ ನಕ್ಕು ನಡೆಯುವವರೆ ಹೆಚ್ಚು ಜನ ಲೋಕದಲ್ಲಿ. ಗಂಭೀರವಿಚಾರಿಯಾದವನಿಗೆ ಲೋಕದ ಈ ಹುಡುಗಾಟಿಕೆಯ ಸ್ವಭಾವವು ಬರೆಯೆಳೆದಂತೆ ನೋವನ್ನುಂಟುಮಾಡುವುದು ! ”

“ ನಾನೀ, ಮೊದಲಿನಿಂದಲೂ ನಿನ್ನ ಸ್ವಭಾವವನ್ನು ನಾನು ಬಲ್ಲೆ. ಎಂತಲೆ ಇದುವರೆಗೆ ನಾನು ಯಾರಮುಂದೆಯೂ ಹೇಳದಂತಹ ನನ್ನ ಅನುಭವದ ಕರುಣಕಥೆಯನ್ನು ನಿನಗೆ ಹೇಳಿ, ನನ್ನ ಹೃದಯದ ಭಾರವನ್ನು ಸ್ವಲ್ಪಮಟ್ಟಿಗೆ ಹಗುರುಮಾಡಿಕೊಳ್ಳಬೇಕೆಂದಿದ್ದೇನೆ. ”

ಆಸ್ಥೆಯಿಂದ ಕೇಳಿಕೊಳ್ಳುವ ಭಾವವನ್ನು ಮುಖದ ಮೇಲೆ ತಂದುಕೊಂಡು ನಾನು ಕುಳಿತೆ. ರಾಜ ಮಾತನ್ನು ಮುಂದುವರಿಸಿದ :

“ ನಾನೀ, ನಾವಿಬ್ಬರೂ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಪಾಸಾದ ಮೇಲೆ ನೀನು ಕಾಶಿಗೆ ಹೊರಟುಹೋದೆ. ನಾನು × × × ರಿನ ಆರ್ಟ್ಸ್ ಕಾಲೇಜನ್ನು ಪ್ರವೇಶಿಸಿದೆ. ಮೊದಲಿನ ಎರಡು ವರ್ಷಗಳು ವಿಶೇಷವೇನೂ ಇಲ್ಲದೆ ಕಳೆದುಹೋದುವು. ನಾನು ಇಂಗ್ಲಿಷಿನಲ್ಲಿ ಕನ್ನಡದಲ್ಲಿ ಚೆನ್ನಾಗಿ ಮಾತನಾಡುತ್ತಿದ್ದುದು ಸರಿಯಷ್ಟೆ! ಅದಕ್ಕಾ'ಯೆ ಅಧ್ಯಾಪಕವರ್ಗಕ್ಕೂ ವಿದ್ಯಾರ್ಥಿವರ್ಗಕ್ಕೂ ವಿಶೇಷವಾಗಿ ಬೇಕಾದವನಾಗಿದ್ದೆನು. ಇಂಟರ್

ಪರೀಕ್ಷೆಯಲ್ಲಿ ಕಾಲೇಜಿಗೆ ಮೊದಲನೆಯವನಾಗಿ ಉತ್ತೀರ್ಣನಾದ ಮೇಲಂತೂ ನನ್ನ ಕೊಂಡಾಟ ಕಾಲೇಜಿನಲ್ಲಿ ಇನ್ನಿಷ್ಟು ಬೆಳೆಯಿತು. ಕಾಲೇಜಿನಲ್ಲಿರುವಾಗ ನಾನು, ಆಗಾಗ ರಾಮಕೃಷ್ಣಾಶ್ರಮಕ್ಕೆ ಹೋಗಿ ಅಲ್ಲಿ ನಡೆಯುವ ಉಪನ್ಯಾಸ-ಪ್ರವಚನಗಳನ್ನು ತುಂಬ ಶ್ರದ್ಧೆಯಿಂದ ಕೇಳುತ್ತಿದ್ದೆನು. ಆರ್ಯಸಮಾಜ ಮಂದಿರದಲ್ಲಿ ದಿನದಿನವೂ ನಡೆಯುತ್ತಿದ್ದ ಹಿಂದುತ್ವದ ಮೇಲ್ಮೆಯ ಮಾತುಗಳನ್ನು ಕೇಳಿ ಹೆಮ್ಮೆಯಿಂದ ಹಿಗ್ಗುತ್ತಿದ್ದೆನು. ಹಿಂದೂಮಹಾಸಭೆಯ ವ್ಯಾಖ್ಯಾನಗಳು ಎಲ್ಲಿ ನಡೆದರೂ ನಾನವನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ. ಆದುದರಿಂದಲೆ ಹಿಂದುಸ್ತಾನ, ಹಿಂದೂ ಧರ್ಮ, ಹಿಂದೂಸಮಾಜ ಎಂದರೆ., ಇವೆಲ್ಲ ನನ್ನ ಅಭಿಮಾನಧನವಾಗಿದ್ದುವು. ಹಿಂದುಸ್ತಾನವು ಜಗತ್ತಿಗೆ ಕೊಟ್ಟ ಬೌದ್ಧ, ಜೈನ, ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಮೊದಲಾದ ಮತಗಳ ಕಾಣಿಕೆಯ ವಿಷಯ, ಯಾವಾಗಲೂ ನನ್ನ ಕೊಂಡಾಟದ ಕಥೆಯಾಗಿದ್ದಿತು. . . ."

"ಹೈಸ್ಕೂಲಿನಲ್ಲಿರುವಾಗಲೆ ನೋಡಿದ್ದೆನೆಂದು ಹೇಳಿದೆನಲ್ಲ ನಿನ್ನ ಧರ್ಮಾಭಿಮಾನವನ್ನು! ಸರಿ, ಮುಂದೆ?" ನಾನು ನಡುವೆ ಮಾತನಾಡಿದೆ:

"ಜ್ಯೂನಿಯರ್ ಬಿ. ಎ. ತರಗತಿಯಲ್ಲಿದ್ದೆ. ಎರಡನೆಯ ಟರ್ಮಿನಲ್ಲಿ ಕಾಲೇಜಿನ ಚರ್ಚಾಸಂಘದಿಂದ ವಾದ-ವಿವಾದವೊಂದನ್ನು ಇರಿಸಲಾಯಿತು. 'ವೈದಿಕ ಸನಾತನಧರ್ಮವು ಪರಿಪೂರ್ಣವಾದುದು' ಎಂಬುದನ್ನು ಪೂರ್ವಪಕ್ಷದವರು ಮಂಡಿಸಬೇಕಾಗಿದ್ದಿತು. 'ಎಲ್ಲ ಮತಧರ್ಮಗಳಂತೆ ಸನಾತನ ವೈದಿಕಧರ್ಮವೂ ಅಪೂರ್ಣತೆಯಿಂದ ಕೂಡಿದುದೆ' ಎಂಬುದನ್ನು ಉತ್ತರಪಕ್ಷದವರು ಸಾಧಿಸಬೇಕಾಗಿದ್ದಿತು. ನಾನು ಪೂರ್ವಪಕ್ಷದ ಮಂಡನಕಾರರಲ್ಲಿ ಮೊದಲಿಗನಾಗಿ ಮಾತನಾಡಿದೆನು. ಅಂದಿನ ನನ್ನ ಮಾತುಗಾರಿಕೆ ನನ್ನನ್ನೆ ಆಶ್ಚರ್ಯಗೊಳಿಸಿತು. ಚಪ್ಪಳೆಗಳ ಮೇಲೆ ಚಪ್ಪಳೆಗಳು; 'ಹಿಯರ್ ಹಿಯರ್'ಗಳ ಸುರಿಮಳೆ! ಉತ್ತರಪಕ್ಷದಲ್ಲಿಯ ಯಾರ ಮಾತುಗಳೂ ಅಂದಿನ ಸದಸ್ಯರಿಗೆ ಸೇರಿಕೆಯಾಗಲಿಲ್ಲ. ಕೊನೆಯದಾಗಿ ಮಾತನಾಡಿದ ನನ್ನ ಉತ್ತರದ ಭಾಷಣವೂ ಜನರೆಲ್ಲರಿಗೆ ಮೆಚ್ಚಿಕೆಯದಾಯಿತು. ಅಂದಿನ ಚರ್ಚೆಗೆ ಅಧ್ಯಕ್ಷರಾಗಿ ಬಂದಿದ್ದ ನಮ್ಮ ಕಾಲೇಜಿನ ಪರ್ಶಿಯನ್ ಪ್ರೊಫೆಸರ್— ಮೌಲವಿ ರಹಿಮತ್ ಉಲ್ಲಾ— ಅವರು, ನಾನು ಮಾತನಾಡುವಾಗ ತುಂಬ ತಲೆದೂಗುತ್ತಲಿದ್ದರಲ್ಲದೆ ಕೊನೆಯ ತಮ್ಮ ಭಾಷಣದಲ್ಲಿ ನನ್ನ ಮಾತುಗಾರಿಕೆಯನ್ನೂ ವಿಷಯನಿರೂಪಣೆಯನ್ನೂ ತುಂಬ ಹೊಗಳಿದರು."

ಗೆಳೆಯನ ಮೇಲ್ಮೆಯ ಕಥೆಯನ್ನು ಕೇಳುತ್ತಿರುವಾಗ ನನ್ನ ಹೃದಯ ಹಿಗ್ಗಿನಿಂದ ತುಂಬಿನಿಂತಿದ್ದಿತು. ರಾಜ ತನ್ನ ಕತೆಯನ್ನು ಮುಂದೆ ಸಾಗಿಸಿದ್ದ:

"....ಇಷ್ಟೇ ಅಲ್ಲ, ವಿಧರ್ಮಿಯರಾದರೂ ಮೌಲವಿಯವರು ಅಂದು ಹಿಂದೂವೈದಿಕಧರ್ಮವನ್ನು ತುಂಬುಮಾತುಗಳಿಂದ ಬಣ್ಣಿಸಿ ಬಣ್ಣಿಸಿ ಅದನ್ನು ಎತ್ತಿಹಿಡಿದರು. ಸಭೆ ಮುಗಿದಮೇಲೆ ಅವರು ನನ್ನನ್ನು ಬಳಿಗೆ ಕರೆದು, ಕೈಕುಲುಕಿ ಅಭಿನಂದಿಸಿದರಲ್ಲದೆ, ಆಗಾಗ ತಮ್ಮ ಮನೆಯ ಕಡೆಗೆ ಬರುತ್ತಿರುವುದಾಗಿ ಹೇಳಿದರು. ಮೌಲವಿಯವರು ತುಂಬ ಬುದ್ಧಿವಂತರೆಂದೂ ರಸಿಕರೆಂದೂ ಬೇರೆಬೇರೆಯ ತತ್ತ್ವಜ್ಞಾನಗಳನ್ನು ಕುರಿತು ಸಾಕಷ್ಟು ಓದಿ ವಿಚಾರ ಮಾಡಿದವರೆಂದೂ ನಾನು ಅದುವರೆಗೆ ಬರಿಯೆ ಕೇಳಿ ಅರಿತಿದ್ದೆನು. ಅಂದು ಅವರ ಪರಿಚಯವಾದುದಕ್ಕಾಗಿ ನನಗೆ ತುಂಬ ಆನಂದವಾಯಿತಲ್ಲದೆ, ಅವರು ತಮ್ಮ ಬಾಯಿಂದಲೆ ಹಿಂದೂಧರ್ಮವನ್ನು ಹೊಗಳಿ ಹಾಡಿದುದನ್ನು ಕೇಳಿ ಒಂದು ವಿಧದ ಹೆಮ್ಮೆಯು ಕೋಡು ಮೂಡಿದಂತಾಗಿದ್ದಿತು. 'ಆಗಲಿ ಸರ್, ಸಮಯದೊರೆತಾಗ ತಮ್ಮ ಕಡೆಗೆ ಬರುತ್ತಿರುತ್ತೇನೆ' ಎಂದು ಹೇಳಿದೆ."

"ಸರಿ, ನಿನ್ನ ಧರ್ಮಾಭಿಮಾನ ಆ ಮುಸಲ್ಮಾನನ ಮನೆಗೆ ಹೋಗಗೊಡಿಸಿತೇ?" ನಾನು ಕೇಳಿದೆ.

"ಅದನ್ನೆ ಹೇಳುತ್ತೇನೆ ಕೇಳು. ಅಂದು 'ಬರುತ್ತೇನೆ' ಎಂದು ಹೇಳಿದರೂ, ಎರಡು ಮೂರು ತಿಂಗಳ ವರೆಗೆ ನಾನೇನೂ ಹೋಗಲಿಲ್ಲ. ಅಷ್ಟರಲ್ಲಿಯೆ ಮೂರು ನಾಲ್ಕು ಸಲ ನನ್ನ ಮತ್ತು ಮೌಲವಿಯವರ ಭೆಟ್ಟಿಯಾಯಿತು. ಕಂಡ ಸಲಕ್ಕೊಮ್ಮೆ ಅವರು ಪ್ರೀತಿಯಿಂದ ತಮ್ಮ ಮನೆಗೆ ಬರಲು ಸೂಚಿಸುತ್ತಿದ್ದರು. ನನ್ನ ಹಲವು ಜನ ಪರಿಚಿತರಿಂದ 'ಮೌಲವಿಯವರು ಮುಸಲ್ಮಾನರಿದ್ದರೂ ಹಿಂದೂಧರ್ಮದಲ್ಲಿ ಅವರಿಗೆ ತುಂಬ ವಿಶ್ವಾಸವಿದೆ' ಎಂಬ ಸಂಗತಿ ಗೊತ್ತಾಯಿತು. ಆದುದರಿಂದಲೆ 'ಏನೆ ಆಗಲಿ, ಅವರ ಮನೆಗೆ ಒಮ್ಮೆ ಹೋಗಿಬರಬೇಕು' ಎಂದು ನಿರ್ಣಯಿಸಿದೆ. ಒಂದು ರವಿವಾರ ಮನೆಗೆ ಬರುವುದಾಗಿ ಮೊದಲೆ ಸೂಚನೆಕೊಟ್ಟು, ಸಂಜೆಯ ಐದುಗಂಟೆಯ ಸುಮಾರು ಮೌಲವಿಯವರ ಮನೆಗೆ ಹೋದೆ.

ನಾನು ಹೋದಾಗ ಮೌಲವಿಯವರು ಮನೆಯ ಮುಂಗಡೆಯಲ್ಲಿಯೆ ನಿಂತುಕೊಂಡಿದ್ದರು. ಬಹುಶಃ ನಾನು ಬರುವ ದಾರಿಯನ್ನೇ ಕಾಯುತ್ತಿರಬೇಕು. ನಾನು ಹೋದೊಡನೆ ಆದರದ ಸ್ವಾಗತವಾಯಿತು. ಮುಂದಿನ ಹಜಾರದಲ್ಲಿಯ ಎರಡು ಮೆತ್ತೆಯ ಕುರ್ಚಿಗಳ ಮೇಲೆ, ಎದುರು ಬದುರು ಕುಳಿತುಕೊಂಡು ಮಾತನಾಡಲು ಮೊದಲುಮಾಡಿದೆವು. ತಾವು ಪ್ರೊಫೆಸರರು, ನಾನೊಬ್ಬ ವಿದ್ಯಾರ್ಥಿ ಎಂಬ ವಿಚಾರವೆ ಮೌಲವಿಯವರ ಅಂದಿನ ವರ್ತನೆಯಲ್ಲಿ ಕಾಣುತ್ತಿರಲಿಲ್ಲ. ತೀರ ಸಮಾನಸ್ಕಂದರಂತೆ ನನ್ನೊಡನೆ ಮಾತನಾಡುತ್ತಿದ್ದರು. ನಾನು ಕೂಡ ಬಿಚ್ಚುಮನಸಿನಿಂದಲೆ ಅವರೊಂದಿಗೆ ಚರ್ಚಿಸುತ್ತಿದ್ದೆ.

ಅಂದಿನ ನಮ್ಮ ಸಂಭಾಷಣದಲ್ಲಿ ಹಲವು ವಿಷಯಗಳು ಬಂದುಹೋದುವು. ಹಿಂದೂ ಸಂಸ್ಕೃತಿಯ ಮಹತಿಯನ್ನು ಕುರಿತೂ ಮಾತುಗಳಾದುವು. ನನ್ನೆಲ್ಲ ವಿಧಾನಗಳನ್ನೂ ಮೌಲವಿಯವರು ಮನಸಾರೆ ಒಪ್ಪುತ್ತಿದ್ದರು.

ಹರಟೆಯ ಕೊನೆಗೆ ರಸವತ್ತಾದ ಹಣ್ಣುಗಳ ಉಪಾಹಾರವಾಯಿತು. ಅವೊತ್ತು ಮನೆಗೆ ಮರಳಿದಾಗ ೭॥ ಗಂಟೆ ರಾತ್ರಿಯಾಗಿದ್ದಿತು."

* * *

“ಇನ್ನೊಂದು ರವಿವಾರ ನಾನು ಮೌಲವಿಯವರ ಮನೆಗೆ ಹೋದಾಗ, ಅವರು ಯಾವುದೊ ಒಂದು ಪುಸ್ತಕವನ್ನೋದುತ್ತ ಮನೆಯ ಪಕ್ಕದ ಕೈದೋಟದಲ್ಲಿ ಕುರ್ಚಿಯೊಂದರಲ್ಲಿ ಕುಳಿತಿದ್ದರು. ನಾನು ಹೋದಮೇಲೆ ಅಲ್ಲಿಯೆ ಇನ್ನೊಂದು ಕುರ್ಚಿಯನ್ನು ತರಿಸಿ ಹಾಕಿಸಿಯಾಯಿತು. ಕುಳಿತ ಮೇಲೆ ಕ್ಷೇಮಸಮಾಚಾರದ ಮುಮ್ಮಾತುಗಳು ಆದುವು. ಬಳಿಕ ಮೌಲವಿಯವರು ಕುತೂಹಲದ ಸ್ವರದಲ್ಲಿ ಪ್ರಶ್ನೆಯೊಂದನ್ನು ಕೇಳಿದರು:

‘ಏನು, ನಿಮಗೆ ತಂದೆ, ತಾಯಿ ಯಾರೂ ಇಲ್ಲವಂತೆ ?’

‘ಅಹುದು, ನನ್ನ ದುರ್ದೈವ ಚಿಕ್ಕತನದಲ್ಲಿಯೇ ನನ್ನಿಂದ ಅವರನ್ನು ಅಗಲಿಸಿಬಿಟ್ಟಿದೆ. ನಾನು ಬಳೆದುದು ನಮ್ಮ ಸೋದರಮಾವನ ಮನೆಯಲ್ಲಿ !’

‘ನಿಮ್ಮ ಬ್ರಾಹ್ಮಣರಲ್ಲಿ ಬೇಗನೆ ಮದುವೆ ಆಗುತ್ತದೆ; ನಿಮ್ಮದಿನ್ನೂ ಆಗಿಲ್ಲವೆಂದು ತೋರುವುದು ?’

‘ಇನ್ನೂ ಆಗಿಲ್ಲ; ತಾಯಿ-ತಂದೆಗಳಿದ್ದರೆ ಅವರ ಪುತ್ರ-ಪ್ರೇಮ, ಮದುವೆಯ ಬಲೆಯಲ್ಲಿ ನನ್ನನ್ನು ಕೆಡಹದೆ ಇರುತ್ತಿರಲಿಲ್ಲ. ಎಷ್ಟೋ ಸಲ, ಅವರು ಇಲ್ಲದುದು ನನಗೊಂದು ಉಪಕಾರವೊ ಅಪಕಾರವೊ ಎಂಬುದು ತಿಳಿಯದಂತಾಗುವುದು !’

ಮೌಲವಿಯವರು ದೊಡ್ಡನಗೆಯೊಂದನ್ನು ಹೊರಕ್ಕೆ ಹಾಕಿದರು. ಬಳಿಕ ಕೇಳಿದರು:

ತರುಣಿಯೊಬ್ಬಳು ಕೈಯಲ್ಲಿ ಪುಸ್ತಕವೊಂದನ್ನು ಹಿಡಿದುಕೊಂಡು ನಮ್ಮ ಕಡೆಗೆ ಬರುತ್ತಿದ್ದಳು.

“ನಿಮ್ಮ ಆಸ್ತಿಯೆಲ್ಲ ಸರಕಾರದ ಸಂರಕ್ಷಣೆಯಲ್ಲಿದೆಯಂತೆ ಅಹುದೇನು ?”

“ಅಹುದು, ಪ್ರತಿತಿಂಗಳೂ ನನ್ನ ವೆಚ್ಚಕ್ಕೆಂದು ೧೫೦ ರೂಪಾಯಿಗಳನ್ನು ಸರಕಾರ ಕೊಡುತ್ತದೆ. ಅಷ್ಟನ್ನಾದರೂ ನನಗೆ ತೆಗೆದುಕೊಂಡು ಏನುಮಾಡಬೇಕಾಗಿದೆ? ವೆಚ್ಚವಾಗಿ ಮಿಕ್ಕ ಹಣವನ್ನು ನನ್ನ ಸೋದರಮಾವನ ಕಡೆಗೆ ಕಳುಹುತ್ತೇನೆ ಆಯಿತು!’

‘ಇಷ್ಟೊಂದು ಶ್ರೀಮಂತ ಮನೆತನದವರು ನೀವಿದ್ದು, ಹೀಗೆ ಇಷ್ಟೊಂದು ಸರಳವಾದ ಜೀವನವನ್ನು ಇರಿಸಿಕೊಂಡುದು ಆಶ್ಚರ್ಯದ ಸಂಗತಿ. ನಿಮ್ಮ ಹಿಂದೂ ಜನರಲ್ಲಿ ಹೀಗಿರುವ ಜನ ಅಪರೂಪ. ಒಂದು ಬರುತ್ತಿದ್ದರೆ ಎರಡು ವೆಚ್ಚ ಮಾಡುವವರೇ ಹೆಚ್ಚು !’

‘ನಿಮ್ಮ ಈ ಮಾತು ಸರಿಯಾದುದು; ನನ್ನ ಸರಲ ಜೀವನಕ್ಕೆ ಕಾರಣವೆಂದರೆ ನಮ್ಮ ಸೋದರಮಾವ. ತುಂಬ ಆಚಾರನಿಷ್ಠರವರು. ಅವರ ಸಂರಕ್ಷಣೆಯಲ್ಲಿಯೇ ನನ್ನ ಎಳೆಯತನ ಹೋಗಿದೆ.’

‘ಸರಿ, ಸರಿ !’ ಎಂದು ಮೌಲವಿಯವರು ತಮ್ಮೊಳಗೆ ತಾವು ಏನನ್ನೋ ನೋಡಲು ತೊಡಗಿದರು. ನಾನು ಸುಮ್ಮಗೆ ಕುಳಿತಿದ್ದೆ. ಕೊಂಚ ವೇಳೆಯಲ್ಲಿಯೆ ಅವರು ನನ್ನ ಕಡೆಗೆ ಕಣ್ಣುಗಳನ್ನು ಹೊರಳಿಸಿ ಮಾತಿಗೆ ಮೊದಲು ಮಾಡಿದರು;

'ನೋಡಿ, ನೀವು ಈ ಮಾತನ್ನೆಂದಾದರೂ ಯೋಚನೆ ಮಾಡಿದ್ದೀರಾ? ಲೋಕದಲ್ಲಿ ಅನೇಕ ವ್ಯಕ್ತಿಗಳಿರುತ್ತವೆ, ಅನೇಕ ವಿಚಾರಗಳಿರುತ್ತವೆ. ಯಾವುದೇ ಒಂದು ವ್ಯಕ್ತಿಯನ್ನಾಗಲಿ ವಿಚಾರವನ್ನಾಗಲಿ ನಾವು ಅಭಿಮಾನಪೂರ್ವಕ ಪುರಸ್ಕರಿಸಬೇಕಾದರೆ, ಮಿಕ್ಕ ವ್ಯಕ್ತಿ ಅಥವಾ ವಿಚಾರಗಳಿಗಿಂತ ನಾವು ಪುರಸ್ಕರಿಸುವ ವ್ಯಕ್ತಿ ಅಥವಾ ವಿಚಾರಗಳಲ್ಲಿ ಹೆಚ್ಚಿನ ಗುಣಗಳೇನಾದರೂ ಇರಬೇಕಲ್ಲವೆ?'

'ಅಹುದು, ಇರಲೇ ಬೇಕು!'

'ಹಾಗಿದ್ದಲ್ಲಿ ಆ ವ್ಯಕ್ತಿ ಇಲ್ಲವೆ ವಿಚಾರಗಳಲ್ಲಿ ಹೆಚ್ಚಿನ ಗುಣಗಳಿವೆಯೆಂಬುದನ್ನು ತಿಳಿದುಕೊಳ್ಳುವ ಬಗೆ ಹೇಗೆ?'

'ಮಿಕ್ಕ ವ್ಯಕ್ತಿ ಅಥವಾ ವಿಚಾರಗಳಲ್ಲಿಯ ಗುಣದೋಷ ವಿಮರ್ಶೆಯ ಮೂಲಕ!'

'ಸರಿ! ಒಳ್ಳೆಯ ಮಾತು! ನೀವು ಹಿಂದೂಧರ್ಮದ ವಿಚಾರದಲ್ಲಿ ಸಂಪೂರ್ಣ ಅಭಿಮಾನವಿಟ್ಟಿದ್ದೀರಲ್ಲವೆ?'

'ಅಹುದು!'

'ಏಕೆ ಇಟ್ಟಿದ್ದೀರಿ?'

'ಅದು ಗುಣಪೂರ್ಣವಿರುತ್ತದೆಂದು!'

'ಹಾಗಿದ್ದರೆ ಮಿಕ್ಕ ಧರ್ಮಗಳು ಗುಣರಹಿತವಾಗಿವೆಯೆಂಬುದನ್ನು ನೀವು ಸಂಪೂರ್ಣ ಕಂಡುಕೊಂಡಿದ್ದೀರಾ?'

ನನ್ನ ಎದೆಯನ್ನು ಯಾರೋ ಹಿಡಿದು ಅಲುಗಿಸಿದಂತಾಯಿತು. ಬಾಯಿ ಒಣಗಿದಂತಾಯಿತು. ನೀರವವಾದ ಧ್ವನಿಯಲ್ಲಿ ಹೇಳಿದೆ:

'ಮಿಕ್ಕ ಧರ್ಮಗಳ ಬಗೆಗೆ ನಾನು ಇದುವರೆಗೆ ವಿಚಾರವನ್ನೆ ಮಾಡಿಲ್ಲ. ನನಗೆ ಅವುಗಳ ಪರಿಚಯವೂ ಇಲ್ಲ.'

'ಹಾಗಿದ್ದರೆ ಹಿಂದೂಧರ್ಮವು ಸರ್ವಗುಣಸಂಪೂರ್ಣವೆಂದು ಅಭಿಮಾನದಿಂದ ಸಾಧಿಸುತ್ತೀರಲ್ಲ; ಇದಕ್ಕೆ ನಾನು ಏನೆನ್ನಬೇಕು?'

ಒಮ್ಮೆಲೆ ನನಗೊಂದು ಬೆಳಕುಕಂಡಂತಾಯಿತು. ಆ ಬೆಳಕಿನಲ್ಲಿ ಎಂತೆಂತಹವೊ ಮುಖಗಳು ಮೂಡಿ ನಿಂತು, ನನ್ನನ್ನು ಅಣಕಿಸಿ ನಗುತ್ತಿರುವಂತೆ ಭಾಸವಾಯಿತು. ಅಭಿಮಾನಭಂಗದ ತಗ್ಗಿದ ಧ್ವನಿಯಲ್ಲಿ ನಾನು ಹೇಳಿದೆ:

'ಮಿಕ್ಕ ಧರ್ಮಗಳ ವಿಚಾರವನ್ನು ಇದುವರೆಗೇನೂ ನಾನು ಮಾಡಿಲ್ಲ; ವಿದ್ಯಾರ್ಥಿದಶೆಯ ಮೂಲಕ ಆಗಿಯೂ ಇಲ್ಲ. ಇನ್ನು ಮೇಲೆ ಅವುಗಳನ್ನು ಅಭ್ಯಸಿಸಿ ವಿಮರ್ಶಿಸಬೇಕೆಂಬ ಆಶೆಯೇನೊ ಇದೆ!'

'ಭಲೆ! ಸರಿಯಾದ ವಿಚಾರ! ಈಗೇನು! ಹೇಗಿದ್ದರೂ ನಿಮಗೆ ಜ್ಯೂನಿಯರ್ ಈಯರು; ಸಾಕಷ್ಟು ವೇಳೆಯಿರುವುದು. ಈಗಲೆ ಏತಕ್ಕೆ ಆರಂಭಿಸಬಾರದು ಅಂತಹ ಅಭ್ಯಾಸವನ್ನು?'

'ಆರಂಭಿಸಬಹುದು ಅದಕ್ಕೇನು? ನನ್ನದೊಂದು ಬಲುದಿನದ ಹಂಬಲು: ನಮ್ಮ ದೇಶದಲ್ಲಿ ಹಿಂದೂಧರ್ಮಕ್ಕೆ ಮುಖ್ಯವಾಗಿ ವಿರೋಧಿಯಾಗಿ ನಿಂತ ಧರ್ಮವೆಂದರೆ ಮುಸ್ಲಿಮ್ ಧರ್ಮ. ಆ ಧರ್ಮದ ಮೂಲತತ್ತ್ವಗಳಾದರೂ ಏನಿವೆಯೆಂಬುದನ್ನು ತಿಳಿದುಕೊಳ್ಳಬೇಕು—ಎಂದು. ತಮ್ಮಿಂದ ಇದರ ಬಗೆಗೆ ನಾನು ಸಹಾಯವನ್ನು ಅಪೇಕ್ಷಿಸಲೆ?'

'ಸಂತೋಷ! ಎಂತಹ ಸಹಾಯವನ್ನು ಅಪೇಕ್ಷಿಸಿದರೂ ನಾನು ಕೊಡಲು ಸಿದ್ಧನಿದ್ದೇನೆ.'

'ಸುಲಭವಾಗಿ ಆ ತತ್ತ್ವವನ್ನು ಪರಿಚಯಮಾಡಿ ಕೊಡಬಲ್ಲ ಪ್ರಾಥಮಿಕ ಪುಸ್ತಕಗಳೇನಾದರೂ ಇವೆಯೇ ತಮ್ಮಲ್ಲಿ?'

'ಬೇಕಾದಷ್ಟು ಇವೆ; ಬೇಕಾದರೆ ಈಗಲೆ ತಮಗೊಂದು ತರಿಸಿಕೊಡುತ್ತೇನೆ ತಡೆಯಿರಿ!' ಎಂದು ಹತ್ತಿರದಲ್ಲಿಯೆ ಕೆಲಸ ಮಾಡುತ್ತಿದ್ದ ಆಳನ್ನು ಕರೆದರು; ಜೇಬಿನಿಂದ ಕಾಗದದ ತುಂಡೊಂದನ್ನು ತೆಗೆದು, ಅದರ ಮೇಲೆ ಏನನೋ ಬರೆದು 'ಇದನ್ನು ಮುಮತಾಜಳ ಕೈಯಲ್ಲಿ ಕೊಡು' ಎಂದು ಹೇಳಿ ಕಳುಹಿದರು.

ಒಂದೆರಡು ನಿಮಿಷ ಇಬ್ಬರೂ ಮಾತನಾಡದೆ ಕುಳಿತೆವು. ಮೌಲವಿಯವರು ದಾರಿಕಾಯುವ ದೃಷ್ಟಿಗಳನ್ನು ತಮ್ಮ ಮನೆಯ ಕಡೆಗೆ ತಿರುಗಿಸಿದ್ದರು. ನಾನು ಆದರದ ದೃಷ್ಟಿಗಳನ್ನು ಮೌಲವಿಯವರ ಮುಖದಲ್ಲಿ ನೆಲೆಗೊಳಿಸಿದ್ದೆನು. ಆಗ ಹತ್ತಿರದಲ್ಲಿಯೆ ಇನ್ನಾರದೂ ಕಾಲಸಪ್ಪುಳವಾದುದರಿಂದ, ಸಹಜವಾಗಿ ನನ್ನ ನೋಟ ಮೌಲವಿಯವರ ಮನೆಯಕಡೆಗೆ ಹೊರಳಿದುವು. ಸುಮಾರು ಇಪ್ಪತ್ತು ಇಪ್ಪತ್ತೊಂದು ವರ್ಷದ ತರುಣಿಯೊಬ್ಬಳು, ಕೈಯಲ್ಲಿ ಪುಸ್ತಕವೊಂದನ್ನು ಹಿಡಿದುಕೊಂಡು ನಮ್ಮ ಕಡೆಗೆ ಬರುತ್ತಿದ್ದಳು. ನನ್ನ ಕಣ್ಣು ಅವಳನ್ನೆ ನೋಡಲು ತೊಡಗಿದುವು.

ನಾನು ಎಂದೂ ಕಾಣದಂತಹ ಚೆಲುವಿಕೆಯವಳದು. ಕೇತಕಿಯ ಬೆಳ್ಪಿನಲ್ಲಿ ಕೆಂಜಾಜಿಯ ನಸುಗೆಂಪನ್ನು ಸೇರಿಸಿದಂತಹ ಮೈಬಣ್ಣ. ಸ್ವಲ್ಪ ಎತ್ತರದ ನಿಲುವಿಕೆ. ಮುಖದ ಮಾಟ ಸ್ವಲ್ಪ ಉದ್ದಕ್ಕೆ, ಆದರೂ ತುಂಬುಗೆನ್ನೆಯ ಮೂಲಕ ದುಂಡಗಾಗಿ ತೋರುವುದು. ಮೂಗು ನಿಡಿದಾದುದು, ಕಣ್ಣುಗಳು ತೊಳಗುತ್ತಿದ್ದು, ದೃಷ್ಟಿಯಲ್ಲಿಯ ಚಾಂಚಲ್ಯವನ್ನು ಕಳೆದುಕೊಂಡಂತಹವು. ಅಂಗಾಂಗಗಳಲ್ಲಿಯೂ ತುಂಬುಜವ್ವನ ಆಟವಾಡುತ್ತಿರುವುದು. ಪಾರಶಿ ಹೆಂಗುಸರು ಉಡುವ ರೀತಿಯಲ್ಲಿ ಆಕೆ ಮೆರುಗು—ರೇಶಿಮೆಯ ತೆಳುಬಟ್ಟೆಯೊಂದನ್ನು ಉಟ್ಟಿದ್ದಳು. ಜಾರ್ಜೆಟ್ಟಿನ ಅರೆದೋಳ ಕುಪ್ಪಸ ತೆರೆದ ದುಂಡುದೋಳಿಗೆ ಶೋಭೆಕೊಡುತ್ತಿರುವುದು. ಚೆಂದುಟಿಯ ಮೇಲೆ ಮೆಲುನಗೆಯಿದ್ದಿತಾದರೂ ಆ ನಗೆಯಲ್ಲಿ ಲೀಲಾಲಾಸ್ಯವಿರಲಿಲ್ಲ. ಒಟ್ಟಿನಲ್ಲಿ ಯಾರ ಕಂಗಳನ್ನೂ ತನ್ನ ಕಡೆಗೆ ತಿರುಗಿಸಿಕೊಳ್ಳುವಂತಹ ಸೌಂದರ್ಯ ಅವಳದು!"

"ಇದೇನು ರಾಜಾ, ಈಗ ನೀನು ಹೇಳುತಿರುವ ಸ್ತ್ರೀವರ್ಣನೆಯ ಮಾತುಗಳೆಲ್ಲ, ನನ್ನ ಬಾಲಸ್ನೇಹಿತ ರಾಜನವೇ ಎಂದು ಭಾವಿಸಲೇ ನಾನು?"

"ಅಲ್ಲ, ನಿನ್ನ ಬಾಲಸ್ನೇಹಿತ ರಾಜನವಲ್ಲ; ಅವನು ತರುಣನಾದ ಮೇಲೆ ಸುಂದರಿಯಾದ ತರುಣಿಯೊಬ್ಬಳನ್ನು ಕಂಡು ಆಡಿದ ವಾಸ್ತವ ಮಾತುಗಳಿವು; ಬರಿಯ ವರ್ಣನೆಯಲ್ಲ!"

ನಾನು ನಗುನಗುತ್ತ ನುಡಿದೆ:

"ಸರಿ, ಸರಿ! ಮುಂದೆ?"

“ಆಕೆ ಬಂದು ಪುಸ್ತಕವನ್ನು ಮೌಲವಿಯವರ ಕಡೆಗೆ ಕೊಟ್ಟು ಅಲ್ಲಿಯೆ ನಿಂತಳು. ಮೌಲವಿಯವರು ತಮ್ಮ ಭಾಷೆಯಲ್ಲಿ ‘ನಮ್ಮ ಕಾಲೇಜಿನ ವಿದ್ಯಾರ್ಥಿಯಿತ; ರಾಜೇಂದ್ರ ಎಂದು ಇವರಿಗೆ ಹೆಸರು. ತುಂಬ ಬುದ್ಧಿವಂತರು; ಸಿರಿವಂತರು. ಇಂಗ್ಲಿಷಿನಲ್ಲಿ ಚೆನ್ನಾಗಿ ಮಾತನಾಡಬಲ್ಲರು’ ಎಂದು ಆಕೆಗೆ ಹೇಳಿದರು. ನನ್ನ ಕಣ್ಣು ಇನ್ನೂ ಅವಳಲ್ಲಿಯೇ ಕೀಲಿಸಿ ನಿಂತಿರುವಾಗಲೆ ಮೌಲವಿಯವರು ‘ಇದು ನೋಡಿ..ಈ ಪುಸ್ತಕ’ ಎಂದರು. ನಾನು ಬೆಚ್ಚಿಬಿದ್ದು ಅವರ ಕಡೆಗೆ ನೋಡುತ್ತ, ಪುಸ್ತಕವನ್ನು ಕೈಗೆ ತೆಗೆದುಕೊಂಡೆ. ಅದೊಂದು ಇಂಗ್ಲಿಷ್ ಪುಸ್ತಕ. ‘ಇಸ್ಲಾಂ ತತ್ತ್ವಜ್ಞಾನದ ಸುಲಭಪಾಠ’ ಎಂದು, ಆ ಪುಸ್ತಕದ ಹೆಸರನ್ನು ಕನ್ನಡಕ್ಕೆ ಭಾಷಾಂತರಿಸಿ ಹೇಳಬಹುದು. ನಾನು ಆ ಪುಸ್ತಕವನ್ನು ತಿರುತಿರುಹಿ ನೋಡುತ್ತಿರುವಾಗಲೆ, ಮೂರು ನಾಲ್ಕು ಕಳ್ಳನೋಟಗಳನ್ನು ತರುಣಿಯ ಕಡೆಗೆ ಕಳುಹಿದ್ದೆ. ಆಗ ಆಕೆ ಎಡೆಬಿಡದ ನೋಟಗಳಿಂದ ನನ್ನನ್ನೆ ನೋಡುತ್ತಿರುವಂತೆ ತೋರಿತು. ‘ನೀನಿನ್ನು ಹೋಗಬಹುದು’ ಎಂದು ತರುಣಿಗೆ ಮೌಲವಿಯವರು ಹೇಳಿದರು. ಆಕೆ ಮರಳಿ ನಡೆದಳು. ನಾನು ಪುಸ್ತಕವನ್ನು ಬಿಟ್ಟು, ಜಡವಾದ ಹಜ್ಜೆಗಳನ್ನಿರಿಸುತ್ತ ಹೋಗುತ್ತಿರುವ ಆ ತರುಣಿಯ ಬೆಂಬದಿಯನ್ನು ನಿಟ್ಟಿಸಲು ತೊಡಗಿದೆ. ನೋಡು ನಾನೀ, ಸ್ತ್ರೀಯರ ಮುಖದಲ್ಲಿ ಮಾತ್ರ ಚೆಲುವಿನ ಆಕರ್ಷಣೆಯಿರುವುದೆಂದು ಅದುವರೆಗಿನ ನನ್ನ ಭಾವನೆ. ಆದರೆ ಅವರ ಬೆಂಬದಿ ಕೂಡ ಏನೋ ಒಂದುಬಗೆಯ ಚೆಲುವಿನ ಸೆಳೆತದಿಂದ ಕೂಡಿರುವುದೆಂಬುದನ್ನು ನಾನಂದು ಮೊದಲನೆಯ ಸಲವೆ ಅರಿತುಕೊಂಡೆ. ಹೋಗು-ಹೋಗುತ್ತಿರುವಾಗಲೆ ಎರಡು ಮೂರು ಸಲ ಮುಖವನ್ನು ನಮ್ಮ ಕಡೆಗೆ ಹೊರಳಿಸಿ ಹೊರಳಿಸಿ ಆಕೆ ನೋಡಿದಳು. ‘ರಾಜೇಂದ್ರ!’ ಮೌಲವಿಯವರು ಕೂಗಿದರು. ನಾನು ಹಾರಿಬಿದ್ದು ಅವರ ಕಡೆಗೆ ತಿರುಗಿದೆ. ‘ರಾಜೇಂದ್ರ, ನೀವು ಈ ಪುಸ್ತಕ ಓದಿ ಮುಗಿಸಿರಿ. ಇದರಿಂದ ಇಸ್ಲಾಂ ಧರ್ಮದ ಸ್ಥೂಲಪರಿಚಯವಾಗುವುದು. ಆ ಮೇಲೆ ಒಂದೊಂದೆ ವಿಷಯವನ್ನು ಕುರಿತು ಸೂಕ್ಷ್ಮವಾಗಿ ವಿವರಣೆಯಿರುವ ಗ್ರಂಥಗಳನ್ನು, ಒಂದೊಂದಾಗಿ ನಿಮಗೆ ಕೊಡುವೆನು’ ಎಂದವರು ಹೇಳಿದರು. ‘ತಮ್ಮಿಂದ ನಾನು ಉಪಕೃತನು’ ಎಂದು ನಾನು ನುಡಿದೆ.”

“ಸರಿ, ಇಷ್ಟೆಲ್ಲ ಬಣ್ಣನೆಯಾಯಿತು. ಆ ತರುಣಿ ಯಾರೆಂಬುದನ್ನು ತಿಳುಹಲೆ ಇಲ್ಲವಲ್ಲ ನೀನು?” ನಾನು ಕೇಳಿದೆ.

“ಅದನ್ನೆ ಹೇಳುತ್ತೇನೆ ಕೇಳು! ಮೌಲವಿಯವರು ನನ್ನ ಮನಸ್ಸಿನ ಅಭಿಪ್ರಾಯವನ್ನು ತಿಳಿದುಕೊಂಡವರಂತೆ ತಾವಾಗಿಯೆ ಹೇಳಲು ತೊಡಗಿದರು: ‘ಈಗ ಬಂದಿದ್ದಳಲ್ಲ; ಈಕೆಯ ಹೆಸರು ಮುಮತಾಜ್ ಎಂದು. ನಮ್ಮ ದೂರದ ಬಂಧುವರ್ಗಕ್ಕೆ ಸೇರಿದವಳು. ನಮ್ಮ ಮನೆಯಲ್ಲಿಯೆ ಸಾಕಿ ದೊಡ್ಡವಳನ್ನಾಗಿ ಮಾಡಿದ್ದೇವೆ. ಆಕೆಗೂ ಓದುವ ನಾದ ಬಹಳ. ಸಂಗೀತದಲ್ಲಿಯಂತೂ ತುಂಬ ಗಟ್ಟಿಗಳು! ನಾನು ಆಕೆಗೆ ಸಾಕಷ್ಟು ಸ್ವಾತಂತ್ರ್ಯ ಕೊಟ್ಟುಬಿಟ್ಟಿದ್ದೇನೆ. ನಮ್ಮ ಜಾತಿಯಲ್ಲಿ ಹೆಂಗುಸರೆಂದರೆ ಸೆರೆಯಾಳುಗಳಿದ್ದಂತೆ ಮರೆಯಲ್ಲಿಯೆ ಇರಬೇಕು. ನನಗದು ಸ್ವಲ್ಪವೂ ಮೆಚ್ಚಿಕೆಯಿಲ್ಲ. ನಿಮಗೆ ಅವಳನ್ನು ಪರಿಚಯ ಮಾಡಿಕೊಡಬೇಕೆಂದಿದ್ದೆ; ಆದರೆ ನೀವು ಹಿಂದೂಸಂಪ್ರದಾಯಾಭಿಮಾನಿಗಳು, ಒಪ್ಪಿಗೆಯಾಗುವುದೋ ಇಲ್ಲವೋ ಎಂದು ಬಿಟ್ಟೆ!’ ಮೌಲವಿಯವರ ಮಾತನ್ನು ಕೇಳಿ ನಾನು ‘ಹಹಹ, ಹಹಹಹ’ ಎಂದು ಹುಚ್ಚುನಗೆ ನಗುತ್ತ ‘ಹಹಹ ಅದಕ್ಕೇನು’ ಎಂದೆ. ‘ಸರಿ ಇನ್ನೊಂದು ಸಲ ಬಂದಾಗ ನಿಮಗೆ ಆಕೆಯ ಪರಿಚಯ ಮಾಡಿಕೊಡುತ್ತೇನೆ ಹಾಗಾದರೆ’ ಎಂದು ಮೌಲವಿಯವರು ಹೇಳಿದರು. ‘ಹಹಹ! ಹಹಹಹ!’ ಎಂದು ಹುಚ್ಚುನಗೆ ನಗುತ್ತಲೆ ಅವರನ್ನು ಬೀಳ್ಕೊಂಡು ಮನೆಗೆ ಮರಳಿದೆನು.”

“ಸರಿ, ಗೊತ್ತಾಯಿತು ಬಿಡು; ಆ ದಿನ ರಾತ್ರಿ ಬಿದ್ದ ಕನಸುಗಳಲ್ಲೆಲ್ಲ ಮುಮತಾಜಳನ್ನೇ ಕಂಡಿರಬಹುದು ನೀನು!” ನಾನೆಂದೆ.

“ನಿದ್ದೆ ಹತ್ತಿದರಲ್ಲವೆ ಕನಸುಗಳು ಬೀಳಬೇಕು? ಏಕೆಂಬುದನ್ನು ತಿಳಿಯದೆ ಅಂದಿನ ಇರುಳನ್ನೆಲ್ಲ ಅಸ್ವಸ್ಥಮನಸ್ಕನಾಗಿಯೆ ಕಳೆದೆನು. ಮರುದಿನದ ನನ್ನ ದಿನಚರ್ಯೆಯಲ್ಲಿ, ನಡುನಡುವೆ ಮೌಲವಿಯವರ ಮನೆಯ ನೆನಪಾದಂತಾಗಿ, ಎದೆಯಲ್ಲಿ ಜುಮ್ಮೆನ್ನುತ್ತಿದ್ದಿತು.”

“ತಿಳಿಯಿತು ಬಿಡು ರಾಜೂ, ಒಂದು ಹೆಣ್ಣನ್ನು ಒಂದೆ ಒಂದು ಸಲ ನೋಡುವುದರಿಂದಲೆ ನಿನ್ನ ಧರ್ಮಾಭಿಮಾನ ಸಡಿಲಿ ಹೋದಂತೆ ಕಾಣುತ್ತದೆ; ಒಳ್ಳೆಯ ಹುಡುಗ ನೀನು!”

“ನೋಡು ನಾನೀ, ನನ್ನ ಧರ್ಮಾಭಿಮಾನ ಸಡಿಲಿದುದು ಬರಿಯೆ ಹೆಣ್ಣನ್ನು ನೋಡಿದುದಕ್ಕಾಗಿಯೆ ಅಲ್ಲವೆಂಬುದು ನಿನಗೆ ಮುಂದೆ ಗೊತ್ತಾಗಬಹುದು. ತಾರುಣ್ಯದ ಹುಚ್ಚು ಸಹಜವಾಗಿ ನನ್ನ ಮನಸ್ಸಿನ ಮೇಲೆ ಆಗ ಒಂದುಬಗೆಯ ಪರಿಣಾಮವನ್ನುಂಟು ಮಾಡಿದುದೇನೋ ಸರಿ! ನಾನೂ ಮನುಷ್ಯನೆ ಅಲ್ಲವೆ ನಾನೀ?”

“ಸರಿ, ತಮ್ಮ ಮನುಷ್ಯತ್ವವನ್ನು ಒಪ್ಪಿಕೊಳ್ಳುವವರು ನಿಜವಾಗಿಯೂ ಮನುಷ್ಯರು. ಇರಲಿ, ನಿನ್ನ ಮುಂದಿನ ಕತೆ ಕೇಳಬೇಕೆಂಬ ಆತುರ ನನ್ನ ಎದೆಯಲ್ಲಿ ಎಡೆಬಿಡದೆ ಕುಣಿಯುತ್ತಲಿದೆ!”

ರಾಜ ಹೇಳಲು ತೊಡಗಿದ:

“ಮರುದಿನದ ರಾತ್ರಿಯೆಲ್ಲ ಕುಳಿತು, ಮೌಲವಿಯವರು ಕೊಟ್ಟ ಪುಸ್ತಕವನ್ನು ಓದಿ ಮುಗಿಸಿದೆ. ಅಷ್ಟೊಂದು ಬೇಗನೆ ಮುಗಿಸಲಿಕ್ಕೆ ಕಾರಣವೆಂದರೆ, ಬೇಗನೆ ಮೌಲವಿಯವರ ಮನೆಗೆ ಮತ್ತೆ ಹೋಗಬೇಕೆಂಬುದೆ. ಮೂರನೆಯ ದಿನ ಕಾಲೇಜಿನ ಪಾಠಗಳನ್ನು ತೀರಿಸಿ, ಸಂಜೆಯ ಕಡೆಗೆ ಅವರ ಮನೆಗೆ ಹೋದೆ. ಮೊಗಸಾಲೆಯಲ್ಲಿಯೆ ಅವರು ಕುಳಿತಿದ್ದರು. ಪುಸ್ತಕವನ್ನೋದಿ ಮುಗಿಸಿದೆನೆಂದು ಹೇಳಿದೆ. ಅವರು ಬೆರಗಿನ ಧ್ವನಿಯಲ್ಲಿ ಮೆಚ್ಚಿಕೆಯ ಉದ್ಗಾರಗಳನ್ನು ತೆಗೆದು, ಆ ಪುಸ್ತಕದಲ್ಲಿಯ ಒಂದೆರಡು ವಿಷಯಗಳನ್ನು ಕುರಿತು ನನ್ನನ್ನು ಕೇಳಿದರು. ನಾನು ಚೆನ್ನಾಗಿ ಓದಿ ತಿಳಿದುಕೊಂಡುದರಿಂದ, ಅವರ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಹೇಳಿದೆ. ಮೌಲವಿಯವರು ಆನಂದದಿಂದ ನನ್ನ ಕೈ ಕುಲುಕಿ ‘ಭಲೆ’ ಎಂದರು. ಬಳಿಕ ಟೇಬಲ್ಲಿನ ಮೇಲಿನ ಕೂಗು-ಗಂಟೆಯನ್ನು ಹಠಾತ್ತಾಗಿ ಬಾರಿಸಿದರು. ಒಂದೆರಡು ನಿಮಿಷಗಳಲ್ಲಿಯೆ ಮುಮತಾಜಳು ಅಲ್ಲಿಗೆ ಬಂದಳು. ಅವಳ ಕೈಯಲ್ಲಿ

ಎಲ್ಲಕ್ಕಿಂತ ಅಗ್ಗ ! ಎಲ್ಲಕ್ಕಿಂತ ಉತ್ತಮ !
ಮಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ !



೮ ಆಣೆಗೆ ೧೦ ಬ್ಲೇಡು !

ಹದವಾಗಿ ಬಿಡಿಸಿದ ಕಿತ್ತಳೆಯ ತೊಳೆಗಳುಳ್ಳ ಎರಡು ತಟ್ಟೆಗಳು ಇದ್ದುವು. ನಮ್ಮ ಮುಂದೆ ಇದ್ದ ಚಿಕ್ಕ ಟೇಬಲ್ಲಿನ ಮೇಲೆ ತಟ್ಟೆಗಳನ್ನಿರಿಸಿ ಮುಮುತಾಜಳು ಒಳಗೆ ಹೊರಟಿದ್ದಳು. ಮೌಲವಿಯವರು ತಡೆದು ಅವಳಿಗೆ ಹೇಳಿದರು:

'ಇಲ್ಲಿಯೆ ಕುಳಿತಿರು ಮುಮ್ತಾಜ್, ರಾಜೇಂದ್ರರು ನಿನ್ನೊಡನೆ ಪರಿಚಯಮಾಡಿಕೊಳ್ಳಲು ಅಪೇಕ್ಷಿಸುತ್ತಾರೆ !'

'ಹಹಹ' ಎಂದು ಹುಚ್ಚುನಗೆ ನಗುತ್ತ ನಾನು ಅವಳನ್ನು ನೋಡತೊಡಗಿದೆ. ಸೆಳೆಮಿಂಚಿನಂತಹ ಕಣ್ಣುಗಳ ನಿಡುನೋಟದಿಂದ ನನ್ನನ್ನು ಚುಚ್ಚುತ್ತ, ಮುಮುತಾಜ್ ನನ್ನ ಬಳಿಯ ಕುರ್ಚಿಯಲ್ಲಿಯೆ ಬಂದು ಕುಳಿತುಕೊಂಡಳು. ಆಗ ನಾನೇನು ಮಾಡಬೇಕೆಂಬುದು ನನಗೇ ತಿಳಿಯಲಿಲ್ಲ. ಮೌಲವಿಯವರು ಮಾತನ್ನು ಪ್ರಾರಂಭಿಸಿದರು :

'ನೋಡು ಮುಮ್‌ತಾಜ್ ! ಮೊನ್ನೆ ತೆಗೆದುಕೊಂಡು ಹೋದ ಪುಸ್ತಕವನ್ನು ಇವರು ಇಷ್ಟರಲ್ಲಿಯೆ ಮುಗಿಸಿಬಿಟ್ಟಿದ್ದಾರಂತೆ !'

'ಓ, ಇಷ್ಟರಲ್ಲಿಯೆ ಮುಗಿಸಿದರೇ ?'

ಆಶ್ಚರ್ಯದ ನಗೆಯೊಂದಿಗೆ ಆಕೆ ಕೇಳಿದಳು. ನಾನೂ ನಾಚಿಕೆ ಬೆರೆತ ದನಿಯಲ್ಲಿ ಹೇಳಿದೆ:

'ನನಗೆ ಓದುವುದೊಂದು ರೋಗ ! ಒಳ್ಳೆಯ ಪುಸ್ತಕ ದೊರೆತರೆ ಇಪ್ಪತ್ನಾಲ್ಕು ತಾಸೂ ಓದುತ್ತಲೆ ಇರುತ್ತೇನೆ ! ನೀವೂ ಓದಿದ್ದೀರಿ ಅಲ್ಲವೇ ಈ ಪುಸ್ತಕವನ್ನ ! ಧರ್ಮಗಳೆಂದರೇನು ? ಎಲ್ಲ ಧರ್ಮಗಳೂ ಅಲ್ಲಲ್ಲಿಯ ಸಮಾಜದ ಧಾರಣೆಗಾಗಿಯೆ ಹೊರಟಂತಹವು. ನಿಜವಾಗಿ ನೋಡಿದರೆ ಇಸ್ಲಾಂ ಧರ್ಮದ ಮೂಲತತ್ತ್ವಗಳು ಹಿಂದೂ ಧರ್ಮದ ಮೂಲತತ್ತ್ವಗಳಿಗಿಂತ ಬೇರೆಯಾಗಿಯೇನೂ ತೋರುವುದಿಲ್ಲ ! ಇದ್ದರೆ ದೇಶ–ಕಾಲ– ಪರಿಸ್ಥಿತಿಗನುಸಾರವಾದ ಕೆಲವು ಆಚಾರಭೇದಗಳಿರಬಹುದಷ್ಟೆ ?' ನಾನು ಈ ಮಾತುಗಳನ್ನಾಡುತ್ತಿರುವಾಗ, ಒಮ್ಮೆ ಮೌಲವಿಯವರ ಕಡೆಗೆ ಇನ್ನೊಮ್ಮೆ ತರುಣಿಯ ಕಡೆಗೆ ನೋಡುತ್ತಿದ್ದೆ. ಅದೇನೋ, ತರುಣಿಯ ಹಣೆ–ಹುಬ್ಬುಗಳ ಮೇಲೆ ಚಿಂತಾರೇಷೆಗಳು ಮೂಡಿ ಮರೆಯಾಗುತ್ತಿದ್ದಂತೆ ನನಗೆ ಕಂಡಿತು. ಮೌಲವಿಯವರು ಅಭಿಮಾನಸ್ವರದಲ್ಲಿ 'ಇಸ್ಲಾಂ ಧರ್ಮದ ಆಚಾರಗಳು ಕೂಡ ಅದರ ಮೂಲತತ್ತ್ವಗಳನ್ನು ಬಿಟ್ಟು ದೂರವಿಲ್ಲವೆಂಬುದೂ ನಿಮಗೆ ಬರುಬರುತ್ತ ಗೊತ್ತಾಗಬಹುದು' ಎಂದು ನುಡಿದರು.

ನಡುವೆ ನಾನು ಮಾತನಾಡಿದೆ:

"ನೋಡು ರಾಜ, ನಿಮ್ಮ ಮೌಲವಿಯವರು ಚೆನ್ನಾದ ಮನಃಶಾಸ್ತ್ರಜ್ಞರಿರಬೇಕು. ಏಕೆಂದರೆ ಜಗತ್ತಿನ ಅನುಭವವಿಲ್ಲದ ನಮ್ಮಂತಹ ತರುಣರಿಗೆ, ಯಾವ ಮತ–ಧರ್ಮದ ಗ್ರಂಥಗಳನ್ನೋದಲು ತೊಡಗಿದರೂ, ಅವುಗಳಲ್ಲಿಯ ತರ್ಕವಿಧಾನಗಳ ಮೂಲಕ ಅವೆಲ್ಲವುಗಳ ಮಾತೂ ನಮಗೆ ಸತ್ಯವೆಂದು ತೋರಲು ತೊಡಗುವುದು. ಹಿಂದೆ ಹಿಂದೂಧರ್ಮವನ್ನು ಹೊಗಳುತ್ತಲೆ, ಮಹಮ್ಮದೀಯ ಧರ್ಮವಿಚಾರವನ್ನೂ ತಿಳಿದುಕೊಳ್ಳಬೇಕೆಂಬ ವಿಚಾರವನ್ನು ನಿನ್ನ ತಲೆಯಲ್ಲಿ ಹಾಕಿದರು. ಈಗ ಅದರ ವಿವರ–ವಿವರಗಳೂ ಸತ್ಯವಾಗಿವೆಯೆಂಬುದನ್ನು ನಿನ್ನ ಬಾಯಿಂದಲೆ ಒಪ್ಪಿಸಿಬಿಡಬೇಕೆಂಬ ಬುದ್ಧಿಯಿಂದ ಮೌಲವಿಯವರು ಹೀಗೆ ಹೇಳಿರಬಹುದು, ಅಲ್ಲವೇ ರಾಜ?"

"ನಾನೀ, ನಿಜವಾಗಿಯೂ ನಾನು ನಿನ್ನಷ್ಟು ಬುದ್ಧಿವಂತನಲ್ಲ ನೋಡು ! ಮುಂದೆ ಹೇಳುತ್ತೇನೆ ಕೇಳು. ಮೌಲವಿಯವರ ಮಾತಿಗೆ 'ಆಗಲಿ ಸರ್, ಮುಂದಿನ ಪುಸ್ತಕ ಕೊಡುತ್ತೀರಾ ಇಂದು ಓದಲಿಕ್ಕೆ ?' ಎಂದೆ. ಅವರು ಒಪ್ಪಿದ ಮೇಲೆ ಫಲಾಹಾರ ನಡೆಯಿತು. ಹಣ್ಣು ತಿನ್ನುವುದಾದ ಮೇಲೆ 'ಸ್ವಲ್ಪ ಷರಬತ್ ತರಿಸಲೆ ?' ಎಂದು ಮೌಲವಿಯವರು ಕೇಳಿದರು. ನಾನು 'ಬೇಡ, ಬೇಡ' ಎಂದು ಹೇಳಿ, ದಾಕ್ಷಿಣ್ಯದ ನೋಟದಿಂದ ತರುಣಿಯ ಕಡೆಗೆ ನೋಡಿದೆ. ಆಕೆ ನೋಟವನ್ನು ನನ್ನಲ್ಲಿಯೆ ನೆಲೆಗೊಳಿಸಿ ಕುಳಿತುದನ್ನು ಕಂಡೆ. ಹೆಣ್ಣು ಹೀಗೆ ನನ್ನನ್ನೆ ನೋಡುತ್ತಿರುವುದರ ಅನುಭವವನ್ನು ಈ ಮೊದಲು ನಾನೆಂದೂ ಅನುಭವಿಸಿರಲಿಲ್ಲ. ಆಕೆ ನನ್ನನ್ನು ನೋಡುತ್ತಿರುವುದರಲ್ಲಿ ಏನೋ ಒಂದು ಬಗೆಯ ಆತ್ಮೀಯತೆಯ ಭಾವ ಕಾಣುತ್ತಿದ್ದಿತು. ಆ ನೋಟಗಳಿಂದ ನನ್ನನ್ನು ಮತ್ತೂ ಮತ್ತೂ ನೋಡುತ್ತಿರಬೇಕೆಂದು ನನಗೆ ಎನಿಸಲು ತೊಡಗಿತು."

"ತುಂಬ ಭಾವನಾಮಯ ಜೀವಿ ನೀನು ರಾಜು ! ನಿನಗೆ ಧರ್ಮಾಭಿಮಾನದ ಹುಚ್ಚು ಹತ್ತುವುದೂ ತಡವಿಲ್ಲ; ಇನ್ನೊಂದಾವುದರ ಹುಚ್ಚು ಹತ್ತುವುದೂ ತಡವಿಲ್ಲ !" ನಾನೆಂದೆ.

"ಮುಂದೆ ಕೇಳು" ಎಂದು ರಾಜೇಂದ್ರ ಹೇಳತೊಡಗಿದ:

"ಫಲಾಹಾರ ಮುಗಿದಮೇಲೆ ಮೌಲವಿಯವರು, ನನಗೆ ಕೊಡಬೇಕಾಗಿದ್ದ ಪುಸ್ತಕವನ್ನು ಹುಡುಕಿ ತೆಗೆದುಕೊಂಡು ಬರಲಿಕ್ಕೆಂದು, ತಾವೆ ತಮ್ಮ ಗ್ರಂಥಾಗಾರಕ್ಕೆ ಹೋದರು. ಹೋಗುವಾಗ ಮುಮುತಾಜಳನ್ನು ಕುರಿತು ಏನನೊ ಕಣ್ಣುಸನ್ನೆ ಮಾಡಿದುದು, ಅಸ್ಪಷ್ಟವಾಗಿ ನನ್ನ ಕಣ್ಣಿಗೆ ಬಿದ್ದಿತು. ಅವರು ಹೋಗುತಿರುವಾಗಲೆ ಮುಮುತಾಜಳು ತನ್ನ ಕುರ್ಚಿಯನ್ನು ಇನ್ನಿಷ್ಟು ನನ್ನ ಬಳಿಯಲ್ಲಿ ಸರಿಸಿದಳು. ಹಾಗೆ ಸರಿಸುವಾಗ ಕುರ್ಚಿಯ ಹಿಡಿಕೆಯ ಮೇಲೆ ಜೋಲು ಬಿಟ್ಟಿದ್ದ ನನ್ನ ಕೈಗೆ, ಆಕೆಯ ಕೆಳನಡು ತಗುಲಿತು; ಸರಿದು ಕುಳಿತುಕೊಳ್ಳುವಾಗ ಆಕೆಯ ಮೆಲ್ಲಡಿ ನನ್ನ ಕಾಲಿಗೆ ಹತ್ತಿತು. ಆಗ ಅವಳು ಅಪ್ರತಿಭಭಾವದಲ್ಲಿ 'ಅಯ್ಯೋ, ಕಾಲು

ತಗುಲಿತು ಕ್ಷಮಿಸಿ! ' ಎಂದು ಕನ್ನಡದಲ್ಲಿಯೆ ಮಾತನಾಡಿದಳು. ನಾನು ಬೆಚ್ಚಿ ಕೇಳಿದೆ ' ನಿಮಗೆ ಕನ್ನಡ ಬರುತ್ತದೆಯೆ? ' ಎಂದು. ಆಗ ಅವಳ ಮುಖದ ಕಳೆ ಒಮ್ಮೆಲೆ ಇಳಿದಂತಾಯಿತು. ನೀರಸವಾದ ಧ್ವನಿಯಲ್ಲಿ ಹೇಳಿದಳು: ' ಕನ್ನಡವೇ? .. ಹುಂ .. ಬರುತ್ತದೆ '. ಆಕೆ ಮಾತಿನ ಕೊನೆಯೊಂದಿಗೆ ನಿಟ್ಟುಸಿರೊಂದನ್ನು ಬಿಟ್ಟಳು. ' ತುಂಬ ಸಂತೋಷ ' ಎಂದು ನಾನು ಹೇಳಿದೆ. ಅದೇನು ಕಾರಣವೊ ಮುಮತಾಜ್ ತನ್ನ ಕುರ್ಚಿಯನ್ನು ಮತ್ತೆ ಸ್ವಲ್ಪ ದೂರ ಸರಿಸಿಕೊಂಡು, ಕಳೆಯಿಳಿದ ಮೊಗದಿಂದ ಶೂನ್ಯದೃಷ್ಟಿಯುವಳಾಗಿ ಕುಳಿತುಕೊಂಡಳು. ನನಗಾಗ ಏನು ಮಾತನಾಡಬೇಕೆಂಬುದೆ ತಿಳಿಯಲೊಲ್ಲದು. ಒಂದರ್ಧ ನಿಮಿಷದ ತರುವಾಯ ಆಕೆಯೆ ತಗ್ಗಿದ ಧ್ವನಿಯಲ್ಲಿ ಕೇಳಿದಳು:

' ತಮ್ಮ ಮನೆ ಎಲ್ಲಿದೆ ಇಲ್ಲಿ? '

' ಈ ಊರಲ್ಲಿ ನನಗೆ ಸ್ವಂತದ ಮನೆಯಿಲ್ಲ; ಕಾಲೇಜ್ ಹಾಸ್ಟೆಲ್ಲಿನಲ್ಲಿಯೆ ನನ್ನ ವಸತಿ! '

'ಹಾಸ್ಟೆಲ್ಲಿನಲ್ಲಿ ಇರುತ್ತೀರಾ?' ಎಂದು ಯೋಚನಾಧ್ವನಿಯಲ್ಲಿ ಎಳೆದು ನುಡಿದು ' ಹಾಗಿದ್ದರೆ ತಮ್ಮ ತಂದೆ-ತಾಯಿಗಳೆಲ್ಲಿ? ' ಎಂದು ಕೇಳಿದಳು. ' ನನಗೆ ತಂದೆಯಿಲ್ಲ, ತಾಯಿಯಿಲ್ಲ; ಚಿಕ್ಕತನದಿಂದಲೂ ಪರದೇಶಿ ನಾನು! ' ಎಂದು ಒಂದು ವಿಧದ ಆಶೆಯ ನೋಟದಲ್ಲಿ ಅವಳ ಕಡೆಗೆ ನೋಡಿದೆ. ಆಕೆಯ ಕಣ್ಣುಗಳಲ್ಲಿಯೂ ಆಶೆ ತುಂಬಿ ತುಳುಕುತ್ತಿದ್ದಿತು. ಏನನೋ ಮಾತನಾಡಬೇಕೆಂದು ತುಟಿ ಎತ್ತುವವಳಿದ್ದಳು; ಅಷ್ಟರಲ್ಲಿಯೆ ಮೌಲವಿಯವರು ಪುಸ್ತಕ ತೆಗೆದುಕೊಂಡು ಅಲ್ಲಿಗೆ ಬಂದರು. ಅವರು ಬರುವುದನ್ನು ನೋಡಿದೊಡನೆಯೆ ಮುಮತಾಜಳ ಮುಖದಲ್ಲಿ ನಗೆಹೂ ಅರಳಿತು. ವಿಲಾಸಭಾವ ಆಟವಾಡತೊಡಗಿತು. ಮೌಲವಿಯವರು ಪುಸ್ತಕ ತಂದು ಕೊಟ್ಟೊಡನೆಯೆ ನಾನು ಹೊರಡಬೇಕೆಂದು ಮೇಲಕ್ಕೆದ್ದೆನು. ಇನ್ನೇನು, ' ಮುಮತಾಜಳ ಗುರುತು ಚೆನ್ನಾಗಿ ಆಯಿತೆ? ' ಎಂದು ಕೇಳಿದರು. ಹಾಗೆಯೆ ನನ್ನನ್ನು ಕಳುಹಲೆಂದು ತಾವೂ ಎದ್ದರು. ಮುಮತಾಜಳೂ ಎದ್ದಳು. ನಾನು ಹುಸಿನಗೆಯಲ್ಲಿ ' ಓಹೊ, ಗುರುತಾಯಿತಲ್ಲ! ' ಎಂದು ಹೇಳುತ್ತ ಮುಮತಾಜಳ ಕಡೆಗೊಂದು ಸಲ ನೋಟವನ್ನು ಹೊರಳಿಸಿ, ಇಬ್ಬರನ್ನೂ ಬೀಳ್ಕೊಂಡು ಮನೆಗೆ ನಡೆದೆ. ' ಮುಮತಾಜಳಿಗೆ ಕನ್ನಡ ಎಷ್ಟು ಚೆನ್ನಾಗಿ ಬರುತ್ತದಲ್ಲ!' ಎಂಬ ಯೋಚನೆಯೆ ಅಂದು ನನ್ನ ತಲೆಯಲ್ಲಿ ತಿರುಗುತ್ತಿತ್ತು. ಮಧ್ಯೆ ಮಧ್ಯೆ ಒಮ್ಮೊಮ್ಮೆ ಎದೆ ಜುಮ್ಮುದಟ್ಟುತ್ತಿತ್ತು. ಕಾರಣವನ್ನು ಹುಡುಕಲು ಹೋದಾಗಲೆಲ್ಲ ಮುಮತಾಜಳ ಮೈ ನನಗೆ ತಾಗಿದುದು ನೆನಪಾಗುತ್ತಿದ್ದಿತು.

* * *

" ನಾನು ಆಗಾಗ ಮೌಲವಿಯವರ ಮನೆಗೆ ಹೋಗಿ ಬರತೊಡಗಿದೆ. ಮುಮತಾಜಳ ಹೊರತು ಮೌಲವಿಯವರ ಮನೆಯಲ್ಲಿ ಇನ್ನಾವ ಹೆಂಗುಸರಿಗೂ ಸ್ವಾತಂತ್ರ್ಯವಿದ್ದಂತೆ ತೋರಲಿಲ್ಲ. ಏಕೆಂದರೆ ಅವರನ್ನು ನಾನು ಎಂದೂ ನೋಡಲಿಲ್ಲ. ಮುಮತಾಜಳಿಗೆ ಕೂಡ ಮನೆಬಿಟ್ಟು ಹೊರಗೆ ಹೋಗುವ ಸ್ವಾತಂತ್ರ್ಯವಿರಲಿಲ್ಲವೆಂದು ತೋರುವುದು. ಕಾರಣವೇನೆಂದರೆ ಆಕೆ ತಿರುಗಾಡಿಬರಲಿಕ್ಕೆಂದಾಗಲಿ, ನಾಟಕ-ಸಿನೇಮಾಗಳಿಗಾಗಲಿ, ಎಂದೂ ಹೊರಕ್ಕೆ ಹೊರಟುದನ್ನು ನಾನು ಕಾಣಲಿಲ್ಲ. ಇದೆಲ್ಲದರ ಬಗೆಗೆ ಮೌಲವಿಯವರೊಂದಿಗೆ ಮಾತನಾಡಬೇಕೆಂದು ಅದೆಷ್ಟೋ ಸಲ ಮನಸ್ಸಿಗೆನಿಸುವುದು; ಮತ್ತೆ ಯಾವುದೊ ಒಂದು ಬಗೆಯ ಸಂಕೋಚವೃತ್ತಿ ನನ್ನ ಮನಸ್ಸನ್ನು ಬಿಗಿಹಿಡಿಯುವುದು. ನಾನೀ, ನನ್ನ ಅಶಕ್ತತೆಯನ್ನು ಒಪ್ಪಿಕೊಳ್ಳುತ್ತೇನೆ ನೋಡು; ಮುಮತಾಜಳು ಒತ್ತಾಯಪಡಿಸಿದಾಗಲೆಲ್ಲ ಮೌಲವಿಯವರ ಮನೆಯಲ್ಲಿ ಷರಬತ್ತು ಕುಡಿಯತೊಡಗಿದೆ; ಚಹಾ-ಕಾಫಿಗಳನ್ನೂ ಸೇವಿಸತೊಡಗಿದೆ. ಮೊದಮೊದಲು ನೊಣತಿಂದಂತೆ ಮುಳಮುಳಿಸುತ್ತಿದ್ದಿತಾದರೂ ಬರುಬರುತ್ತ ಎಲ್ಲವೂ ಒಗ್ಗಿಹೋಯಿತು. ಮುಸ್ಲಿಂ ಧರ್ಮದ ವ್ಯಾಸಂಗ ನಡೆದಿದ್ದಿತಲ್ಲದೆ, ಆಗಾಗ ಮೌಲವಿಯವರ ಬಾಯಿಂದ ಅದರ ಮೇಲ್ಮೆಯ ಪ್ರವಚನಗಳನ್ನೂ ಕೇಳುತ್ತಿದ್ದೆನು. ಮುಮತಾಜಳೊಂದಿಗೆ ತುಂಬ ಸಲುಗೆಯಿಂದ ಮಾತನಾಡತೊಡಗಿದೆನಾದರೂ ಆಕೆಯ ವಿಚಿತ್ರಮನಃಸ್ಥಿತಿಯ ಅರ್ಥವೆ ನನಗೆ ಆಗದಂತಾಗಿದ್ದಿತು. ಒಂದೊಂದು ಸಲ ಮಾತನಾಡತೊಡಗಿದಳೆಂದರೆ ನನಗೆ ಮೈಮರೆವು ಉಂಟಾಗುವಂತಹ ಮಮತೆಯ ಮಾತುಗಳನ್ನಾಡತೊಡಗುವಳು. ಇನ್ನೂ ಒಂದೊಂದು ಸಲ ಏನನೋ ವಿಚಾರಮಾಡುತ್ತಿರುವಂತೆ ಕಂಡು, ವಿಷಣ್ಣಭಾವದವಳಾಗಿರುವಳು; ಆಗ ಅವಳು ಹೆಚ್ಚಾಗಿ ಮಾತುಗಳನ್ನೇ ಆಡುತ್ತಿರಲಿಲ್ಲ. ವಿಶೇಷತಃ ಮೌಲವಿಯವರು ಹತ್ತಿರ

ಕೊಕ್ಕೋಕ ಕಳಾಶಾಸ್ತ್ರ

64 ರಹಸ್ಯ ಚಿತ್ರಪಟಗಳು ಸಹ ರೂ. 1. ಇದರಲ್ಲಿ ಸ್ತ್ರೀಪುರುಷರನ್ನು ಪ್ರೀತಿಸುವ ರಹಸ್ಯಗಳು, ಮುದ್ದಿಡುವ ವಿಧಗಳು, ಆಲಿಂಗನಮಾಡುವ ರೀತಿಗಳು, ಕನ್ಯೆಯ ರ ಪ್ರೇಮ ಮತ್ತು ಸಂಯೋಗಕಾಲದ ಮಾರ್ಗಗಳು ಇನ್ನೂ ಶೃಂಗಾರರಹಸ್ಯಗಳು, ಪ್ರಪಂಚದಲ್ಲೆಲ್ಲ ಗುಟ್ಟಾಗಿ ಇಡಲ್ಪಟ್ಟ ಕಾಮಶಾಸ್ತ್ರದ ವಿಷಯ ಇವುಗಳನ್ನು ಪ್ರತಿಯೊಬ್ಬ ರಸಿಕನಿಗೆ ಉಲ್ಲಾಸವಾಗುವಂತೆ ಬರೆಯಲ್ಪಟ್ಟಿದೆ. ಬಹಿರಂಗವಾಗಿ ಇಂಥ ಪುಸ್ತಕವು ಯಾರಿಂದಲೂ ಪ್ರಚುರಿಸಲ್ಪಡಲಿಲ್ಲ. 264 ಪುಟಗಳುಳ್ಳ ದೊಡ್ಡ ರಹಸ್ಯ ಕನ್ನಡ ಪುಸ್ತಕ; ಕ್ರಯ ರು. 1; ಪೋಸ್ಟೇಜ್ 5 ಆಣೆ.

ಸರಸ್ವತೀ ಬುಕ್ ಡಿಪೋ,

ಅರುಣಾಚಲ ಮೊದಲಿ ಬೀದಿ, ಜಿ. ಟಿ. ಮದರಾಸು.

ರಿಜಿಸ್ಟರ್ ಲೀವರ್ ಇಲ್ಲವೆಂದು ತಿಳಿಯಪಡಿಸುವವರಿಗೆ ಹಣ ಪರತ

ಕೆಂಪುಗಳು ಕೆತ್ತಲ್ಪಟ್ಟ ರಿಜಿಸ್ಟರ್ ಲೀವರ್, ರೋಲ್ಡು ಗೋಲ್ಡು ಪ್ಲೇಟ್, ರಿಸ್ಟು ಗಡಿಯಾರ ದೃಢವಾದದ್ದು ಮತ್ತು ಅಂದವಾದದ್ದು.

5 ಸಂವತ್ಸರ ಗ್ಯಾರಂಟಿ ಸಹಾ ಬೆಲೆ ರೂ. 5-8-0.

ರಾಜನ್ ವಾಚ್ ಕಂಪೆನಿ.

27ನೆಯ ಬೀಟ್ ಜಿ. ಒ. ಒ. ಮದರಾಸು.

ಇಲ್ಲದಿರುವಾಗ ಅವಳ ಮನಃಸ್ಥಿತಿ ಹೀಗೆ ವಿಪರೀತವಾಗಿರುವುದನ್ನು ನೋಡುತ್ತಿದ್ದೆ. "

ಮುಮತಾಜಳು ನನಗೂ ಒಡೆಯದ ಒಗಟವಾಗಿ ಕಾಣತೊಡಗಿದಳು. ರಾಜನ ಮುಂದಿನ ಕಥೆಯನ್ನು ಕೇಳಬೇಕೆಂಬ ಆತುರ ಹೃದಯವನ್ನು ಕೆಣಕಿ ಕೆರಳಿಸತೊಡಗಿತು. ರಾಜನು ಒಂದು ಬಿಸಿಯಾದ ಉಸಿರನ್ನು ಹೊರಕ್ಕೆ ಹಾಕಿ ಮುಂದೆ ಹೇಳಲು ತೊಡಗಿದನು:

" ಒಂದು ರವಿವಾರ, ಹಗಲು ೪ ಗಂಟೆಯ ಸುಮಾರಿಗೆ ನಾನು ಮೌಲವಿಯವರ ಮನೆಗೆ ಹೋದೆ. ಮೊಗಸಾಲೆಯಲ್ಲಿ ಯಾರೂ ಇರಲಿಲ್ಲ. ಟೇಬಲಿನ ಮೇಲಿದ್ದ ಕೂಗುಗಂಟೆಯನ್ನು ಬಾರಿಸಿದೆ. ಕೂಡಲೆ ಮುಮತಾಜಳು ಹೊರಕ್ಕೆ ಬಂದಳು. 'ಮೌಲವಿಯವರೆಲ್ಲಿ?' ಎಂದು ನಾನು ಕೇಳಿದೆ. ' ಸಿನೇಮಾಕ್ಕೆ ಹೋಗಿದ್ದಾರೆ; ಇಂದು ರವಿವಾರ ಮ್ಯಾಟನಿ ಇದೆಯಲ್ಲವೆ! ' ಎಂದು ಹೇಳುತ್ತಿರುವಾಗಲೇ ನನ್ನ ಎದುರ್ಬದಿ ಟೇಬಲ್ಲಿನ ಮೇಲೆ ಕೈಯಿಟ್ಟುಕೊಂಡು ನಿಂತಳು. ನಾನು ಆಕೆಯ ಮುಖದ ಕಡೆಗೆ ನೋಡಿದೆ; ಬಾಡಿ ಬತ್ತಿದ ಮುಖ, ಕಣ್ಣ ಕೆಳಗೆ ಕಂಬನಿ ಕೋಡಿಯಿಟ್ಟ ಕಲೆಗಳು. ನನಗೆ ತುಂಬ ಆಶ್ಚರ್ಯ; ತಟ್ಟನೆ ಕೇಳಿದೆ:

' ಇದೇನು ಮುಮತಾಜ, ಮುಖ ಬಾಡಿದೆಯೇಕೆ? ಅತ್ತಂತೆ ಇವೆಯಲ್ಲ ಕಣ್ಣುಗಳು? '

ಗಂಟಲು ಬಿಗಿದು ಬಂದುದರಿಂದ ಮುಮತಾಜಳ ಬಾಯಿಂದ ಮಾತು ಹೊರಡಲಿಲ್ಲ. ಕಂಬನಿ ಮಾತ್ರ ಪಳಪಳನೆ ಕೆಳಕ್ಕೆ ಸುರಿದುವು. ನಾನು ಗಾಬರಿಯ ಧ್ವನಿಯಲ್ಲಿ ಮತ್ತೆ ಕೇಳಿದೆ:

' ಏನಾಯಿತು ಮುಮತಾಜ! ಯಾರಾದರೂ ಏನಾದರೂ ಅಂದರೆ? '

ಮುಮತಾಜ್ ಕುರ್ಚಿಯೊಂದರ ಮೇಲೆ ಕುಳಿತು ಕಣ್ಣೀರನ್ನು ಮಿಡಿದಳು. ಒಂದೆರಡು ನಿಮಿಷ ಸುಮ್ಮಗೆ ಕುಳಿತಿದ್ದು, ಬಳಿಕ ಅತ್ತಿತ್ತ ಬೆದರುಗಣ್ಣುಗಳಿಂದ ನೋಡಿ ಮೆಲ್ಲಗೆ ಹೇಳಿದಳು :

' ರಾಜೇಂದ್ರ, ನೀವು..ಇಲ್ಲಿಗೆ ಇನ್ನು ಮೇಲೆ..ಬಾರದೆ ಇರುವುದು..ಒಳ್ಳೆಯದು! '

' ಏಕೆ ಮುಮತಾಜ? ' ನಾನು ಗಾಬರಿಯಿಂದ ಕೇಳಿದೆ.

' ಅದೇನೋ, ನಿಮ್ಮ ಜೀವನ ಸುಖವಾಗಬೇಕೆಂದು ನನ್ನ ಆಶೆ. ಇಲ್ಲಿ ನೀವು ಬರುವುದರಿಂದ ಆ ಸುಖಕ್ಕೆ ವ್ಯತ್ಯಯ ಬಾರದಿರದೆಂದು ನನಗೆ ಎನಿಸುತ್ತಲಿದೆ! '

' ಎಂದರೆ ಏನು? '

' ಇನ್ನೇನೂ ಇಲ್ಲ, ಮೌಲವಿಯವರು ಹಸುವಿನ ಚರ್ಮ ಹೊತ್ತ ಹುಲಿ! ನಿಮಗದು ಗೊತ್ತಿಲ್ಲ! '

' ಎಂದರೇನು? '

' ಏನೆಂದು ಹೇಳಲಿ? ನಿಮ್ಮನ್ನು ಜಾತಿಗೆಡಿಸಬೇಕೆಂದು ಅವರು ಪ್ರಯತ್ನ ನಡೆಯಿಸಿದ್ದಾರೆ. ' ಮೇಲೆ ಮೇಲೆ ಹಿಂದೂಧರ್ಮದಲ್ಲಿ ವಿಶ್ವಾಸ ತೋರಿಸುತ್ತಿದ್ದರೂ, ಅಂತರಂಗದಲ್ಲಿ ಇಸ್ಲಾಂ ಧರ್ಮದ ಪ್ರಚಾರವಾಗಬೇಕೆಂಬ ಬಯಕೆಯುರಿ ಅವರಲ್ಲಿ ಅಖಂಡವಾಗಿ ಉರಿಯುತ್ತದೆ. ಅದಕ್ಕಾಗಿ ಎಂತೆಂತಹ ಹೀನ ಉಪಾಯಗಳನ್ನು ಯೋಚಿಸಲಿಕ್ಕೂ ಹಿಂದೆ ಮುಂದೆ ನೋಡರು! '

ನಾನು ಒಂದೂ ತಿಳಿಯದೆ ಸುಮ್ಮಗೆ ಕುಳಿತುಬಿಟ್ಟೆ.

' ರಾಜೇಂದ್ರ, ನಿಮ್ಮನ್ನು ಮಹಮ್ಮದಿಯರನ್ನಾಗಿ ಮಾಡಬೇಕಾದ ಹೊರೆ ಈಗ ನನ್ನ ತಲೆಯ ಮೇಲೆ ಇದೆ. ಅದಕ್ಕಾಗಿಯೆ ಅನೇಕ ವಿಧವಾದ ಮೋಹಜಾಲಗಳನ್ನು ಪಸರಿಸಬೇಕಾದ ಸಂದರ್ಭ ನನಗೆ ಬಂದಿದೆ. ಹೆಣ್ಣಿನ ಮೋಹದಲ್ಲಿ ಬೀಳದ ತರುಣರು ಯಾರಿದ್ದಾರೆ ಹೇಳಿರಿ! '

' ಏನೆನ್ನುತ್ತೀಯೆ ನೀನು ಮುಮತಾಜ್! '

' ಇನ್ನೇನನೂ ಎನ್ನುತ್ತಿಲ್ಲ; ನಿಜವನ್ನೆ ಹೇಳುತ್ತೇನೆ. ದಯೆಯಿಟ್ಟು ನೀವಿನ್ನು ಇಲ್ಲಿಗೆ ಬರಬೇಡಿ! '

' ಮೌಲವಿಯವರು..ನಿನ್ನನ್ನು..ನನ್ನ ಮೇಲೆ ಮೋಹಜಾಲಗಳನ್ನು ಪಸರಿಸಲು ಉಪಯೋಗಿಸುತ್ತಿದ್ದಾರೆಯೆ? ಅವರಿಗೆ ಸಂಬಂಧಿಕಳಲ್ಲವೆ ನೀನು? '

' ಸಂಬಂಧಿಕಳು..! ರಾಜೇಂದ್ರ, ಜಗತ್ತಿನಲ್ಲಿ ನನಗೆ ಯಾರೂ ಸಂಬಂಧಿಕರಿಲ್ಲ. ನಾನು ಒಬ್ಬಳೆ ಒಬ್ಬಳು! ಪರಾಧೀನ ಜೀವನದ ಮೂಲಕ, ದೀಹದ ಹಕ್ಕಿಯಂತೆ—ಬೇಟೆಯನ್ನು ಒದವಿಸಿ ಕೊಡುವ ಕೆಲಸಕ್ಕೆ—ನನ್ನ ಚೆಲುವನ್ನು ಉಪಯೋಗ ಮಾಡಬೇಕಾಗಿದೆ. '

' ಹಾಗಾದರೆ ಮೌಲವಿಯವರಿಗೆ ನೀನು ಸಂಬಂಧಿಕಳಲ್ಲವೇ? ' ನಾನು ಬೆರಗುವಟ್ಟು ಕೇಳಿದೆ.

' ಸಂಬಂಧಿಕಳಲ್ಲವಿಷ್ಟೇ ಅಲ್ಲ, ನಾನು ಈ ಊರವಳು ಕೂಡ ಅಲ್ಲ! '

' ಯಾವ ಊರು ನಿನ್ನದು? '

' ರಾಜೇಂದ್ರ, ನನ್ನ ಕರುಣೆಯ ಕಥೆಯನ್ನು ಕೇಳದಿರುವುದೇ ಲೇಸು! '

ನನ್ನ ಆತುರ ಹೆಚ್ಚತೊಡಗಿತು. ಒಮ್ಮೆಲೆ ಕೇಳಿದೆ:

' ಅದೇನು ನಿನ್ನ ಕರುಣೆಯ ಕಥೆ? ಯಾವ ಊರು ನಿನ್ನದು? '

' ಯಾವ ಊರಾದರೇನು? ಹುಟ್ಟಿದ ತಪ್ಪಿಗೆ ಬದುಕಿರಬೇಕು.. ಎನ್ನುವ ದುರಾಶೆ, ನನ್ನನ್ನು ಈ ದುರ್ದಶೆಗೆ ತಂದುಬಿಟ್ಟಿದೆ! '

'ಎಷ್ಟು ಚೆನ್ನಾಗಿ ಕನ್ನಡ ಮಾತನಾಡುತ್ತೀಯೆ ಮುಮತಾಜ್?'

' ರಾಜೇಂದ್ರ, ದಯೆಯಿಟ್ಟು ನೀವಾದರೂ ನನ್ನನ್ನು ಮುಮತಾಜಳೆಂದು ಕರೆಯಬೇಡಿರಿ! ನನ್ನ ಹೆಸರು ಮಾಲಿನೀ ಎಂದಿದೆ! '

' ಮಾಲಿನೀ..ಎಂದು ಹೆಸರೇ? ಹಾಗಾದರೆ ನೀನು ಹಿಂದೂಧರ್ಮದವಳೇನು? '

' ಅಹುದು, ದುಷ್ಟ— ಕಠೋರ – ಹಿಂದೂಧರ್ಮದವಳು! ದೀನೆಯಾದ ನನ್ನನ್ನು ಸಂತವಿಟ್ಟು ಕರೆದುಕೊಳ್ಳದೆ, ಬೀದಿಗೆ ಅಟ್ಟಿದ ಹಿಂದೂಧರ್ಮದವಳು! '

' ಮುಮತಾಜ್!—ಅಲ್ಲ—ಮಾಲಿನೀ! ನನ್ನನ್ನು ವ್ಯರ್ಥ ಆತುರದಲ್ಲಿ ಇರಿಸಬೇಡ. ದಯೆಯಿಟ್ಟು ನಿನ್ನ ಸಂಗತಿಯೇನೇನೆಂಬುದನ್ನು ಹೇಳು! '

ಮಾಲಿನಿಯ ಕಣ್ಣಲ್ಲಿ ನೀರು ಧಾರೆಗಟ್ಟಿ ಸುರಿಯತೊಡಗಿದುವು. ನಸುವೇಳೆ ತಡೆದು ಕಂಪಿಸುವ ಕಂಠದಲ್ಲಿ ಹೇಳಲು ತೊಡಗಿದಳು :

‘ ರಾಜೇಂದ್ರ, ನನ್ನ ಕತೆ ನಿಮಗೊಬ್ಬರಿಗಾದರೂ ಗೊತ್ತಿರಲಿ, ಹೇಳುತ್ತೇನೆ ಕೇಳಿರಿ! ನಮ್ಮ ತಂದೆ × × ಪುರದಲ್ಲಿ ಬಟ್ಟೆಯ ಗಿರಣಿಯೊಂದರಲ್ಲಿ ಗುಮಾಸ್ತರಾಗಿದ್ದರು. ನಮ್ಮ ತಾಯಿ ಈಗಲೂ ಇದ್ದಾರೆ. ಬಾಲವಿಧವೆಯಾದ ನಾನು ತಂದೆಯ ಬಳಿಯಲ್ಲಿಯೆ ಇರುತ್ತಿದ್ದೆ. ತಂದೆಯವರು ನನ್ನನ್ನು ತುಂಬ ಪ್ರೀತಿಯಿಂದ ಕಾಣುತ್ತಿದ್ದರು. ನನಗೆ ಕನ್ನಡ–ಸಂಸ್ಕೃತ–ಇಂಗ್ಲಿಷ್ ಓದುಬರೆಹ ಹೇಳಿಕೊಟ್ಟವರು ಅವರೆ! ಬೇಡವಾಗಿದ್ದರೂ ಚೆಲುವಿಕೆ ಬೇಕಾದಷ್ಟು ನನಗಿದ್ದಿತು; ಬೇಕಾಗಿರದಿದ್ದರೂ ನನ್ನ ದೇಹಕ್ಕೆ ತಾರುಣ್ಯ ಬಂದೆ ಬಂದಿತು. ಗಿರಣಿಯ ಕೆಲಸಗಾರರಲ್ಲಿ ನಮ್ಮ ಮನೆಗೆ ಆಗಾಗ ಬಂದು ಹೋಗುವವರು ಹಲವು ಜನರು.

ನನ್ನ ದೌರ್ಭಾಗ್ಯಕ್ಕೆ ಸರಿಯಾಗಿ ನಮ್ಮ ತಂದೆ ವಿಷಮಜ್ವರದಿಂದ ಮಲಗಿಕೊಂಡರು. ಒಂದುದಿನ ನಡುರಾತ್ರಿಯಲ್ಲಿ ತಂದೆ ತುಂಬ ಗಾಬರಿಮಾಡಿದರು. ಮನೆಯಲ್ಲಿ ತಾಯಿ ನಾನು ಇಬ್ಬರೆ! ತಾಯಿ ತಂದೆಯವರ ಬಳಿ ಕುಳಿತುಕೊಂಡರು; ಹತ್ತಿರದಲ್ಲಿಯೆ ಇರುವ ಡಾಕ್ಟರರನ್ನು ಕರೆದುತರಬೇಕೆಂದು ನಾನು ಬಾಗಿಲನ್ನು ತೆರೆದು ಹೊರಟೆ. ಕೃಷ್ಣಪಕ್ಷದ ರಾತ್ರಿ, ನಾವಿರುವ ಭಾಗದಲ್ಲಿ ಮನೆಗಳು ಒಂದರಿಂದೊಂದು ದೂರಕ್ಕಿದ್ದುವು. ಹತ್ತಿಪ್ಪತ್ತು ಹಜ್ಜೆ ನಡೆದು ಹೋಗಿರಬಹುದು. ಅಷ್ಟರಲ್ಲಿಯೆ, ಒಮ್ಮೆಲೆ ನನ್ನ ಮೇಲೆ ಐದಾರು ಜನರು ಬಿದ್ದು, ಕೂಗಿಕೊಳ್ಳಲು ಬಾರದಂತೆ ಬಾಯನ್ನು ಒತ್ತಿಹಿಡಿದು, ಎಲ್ಲಿಗೊ ಹೊತ್ತುಕೊಂಡು ಹೊರಟರು. ನನಗಾಗ ಮೈಮೇಲೆ ಎಚ್ಚರವೆ ಇರಲಿಲ್ಲ. ಎಚ್ಚರು ಬಂದಾಗ ನೋಡುತ್ತೇನೆ; ನಾನು ಸುಂದರವಾದ ಮನೆಯ ಕೋಣೆಯೊಂದರಲ್ಲಿ, ಮಂಚದ ಮೇಲೆ ಮಲಗಿದ್ದೇನೆ. ದೊಡ್ಡ ಊರು, ವಿಧವಾಜೀವನದ ಮೂಲಕ ಮನೆಬಿಟ್ಟು ಹೆಚ್ಚಾಗಿ ನಾನು ಹೊರಡುತ್ತಿರಲೆ ಇಲ್ಲ. ಆದುದರಿಂದಲೆ—ನಾನು ಬಂದುದು ಎಲ್ಲಿಯೊ, ಯಾರ ಮನೆಯೊ ಎಂಬುದು ನನಗೆ ಗೊತ್ತಾಗುವಂತಿರಲಿಲ್ಲ. ಅಲ್ಲಿ ಹಲವು ಬಗೆಯ ಒತ್ತಾಯ ನನ್ನ ಮೇಲೆ ನಡೆಯಿತು. ಸಿರಿವಂತನಾದ ಆ ಮನೆಯ ಯಜಮಾನ, ಅಬಲೆಯಾದ ನನ್ನ ಶೀಲವನ್ನು ಬಲುಮೆಯಿಂದ ಮಣ್ಣುಗೂಡಿಸಿದ. ನನಗೆ ತಂದೆಯ ಕಾಯಿಲೆಯ ಯೋಚನೆ, ನನ್ನ ಶೀಲಭ್ರಷ್ಟತೆಯ ಯೋಚನೆ ಎರಡೂ ಕೂಡಿ ಹುಚ್ಚುಹಿಡಿಸಿದಂತೆ ಮಾಡಿದ್ದುವು. ನನ್ನ ಬಾಳನ್ನು ಕೆಡಿಸಿದ ಆ ನೀಚ ಹಿಂದುವೆ ಇದ್ದನೆಂಬುದನ್ನು ಹೇಳಲು ವ್ಯಥೆಯೆನಿಸುತ್ತಿದೆ ರಾಜ! ಆ ಮನೆಗೆ ಬಂದುಹೋಗುತ್ತಿರುವ ಹಲವರಲ್ಲಿ, ನಮ್ಮ ಮನೆಗೆ ಆಗಾಗ ಬಂದುಹೋಗುತ್ತಿರುವ ಗಿರಣಿಯ ಕೆಲಸಗಾರರೊಬ್ಬಿಬ್ಬರನ್ನೂ ದೂರದಿಂದ ಕಂಡೆ. ಹತ್ತು ಹನ್ನೊಂದು ದಿನಗಳು ಕಳೆದುವು. ಒಂದುದಿನ ರಾತ್ರಿಯಲ್ಲಿ, ನಾನು ಗಾಢನಿದ್ರೆಯಿಂದೆದ್ದು ನೋಡುತ್ತೇನೆ; ನಮ್ಮ ಮನೆಯ ಅಂಗಳದಲ್ಲಿ ನಾನು ಬಿದ್ದುಕೊಂಡಿದ್ದೇನೆ. ಆಗ ರಾತ್ರಿಯ ಎರಡು ಗಂಟೆಯಾಗಿರಬಹುದು. ಮೆಲ್ಲಗೆ ಎದ್ದು ‘ಅಮ್ಮಾ ಅಮ್ಮಾ’ ಎಂದು ಕೂಗಿದೆ. ಆಕೆಗೆ ನಿದ್ದೆಯೆ ಹತ್ತಿರಲಿಲ್ಲವೇನೊ! ಒಮ್ಮೆಲೆ ಬಾಗಿಲನ್ನು ತೆರೆದು ನನ್ನ ಕೊರಳಿಗೆ ತೆಕ್ಕೆಬಿದ್ದು ಅಳಲು ತೊಡಗಿದಳು. ನಾನೂ ಅಳುತ್ತಿದ್ದೆ. ಅಳುವಿನ ಭರ ತೀರಿ ಮಾತನಾಡಲಾರಂಭಿಸಿದಾಗ, ನಮ್ಮ ತಂದೆಯವರು ತೀರಿ ಅಂದಿಗೆ ಎಂಟುದಿನಗಳಾಗಿದ್ದುವೆಂಬುದು ಗೊತ್ತಾಯಿತು. ನನ್ನ ಪಾಡನ್ನೂ ಒಂದೊಂದಾಗಿ ತಾಯಿಯೆದುರು ಹೇಳಲು ತೊಡಗಿದೆ. ಅದನ್ನು ಕೇಳುತಿರುವಾಗ ಆಕೆ ಪಟ್ಟ ದುಃಖ ವರ್ಣನಾತೀತವಾದುದು. ಅಂದು ರಾತ್ರಿ ಇಬ್ಬರಿಗೂ ನಿದ್ದೆಯಿಲ್ಲ. ಭವಿಷ್ಯದ ಭೀಕರಚಿತ್ರಗಳು ಕಣ್ಣೆದುರು ನಿಂತು ನಿಂತು, ಕರುಳನ್ನು ತೊತ್ತಳದುಳಿಯುತ್ತಿದ್ದುವು.

ನಾನು ಒಮ್ಮೆಲೆ ಇಲ್ಲದಂತಾಗಲು, ಹಲವು ದುಷ್ಟವಾರ್ತೆಗಳು ಜನರಲ್ಲಿ ಹರಡಿದುದನ್ನು ತಾಯಿ ಹೇಳಿದಳು. ವಿಧರ್ಮೀಯರು ಅಪಹರಿಸಿಕೊಂಡು ಹೋಗಿರಬಹುದೆಂದು ಕೆಲವರ ತರ್ಕ. ನಾನೇ ಯಾರೊಂದಿಗಾದರೂ ಓಡಿಹೋಗಿರಬಹುದೆಂದು ಇನ್ನು ಕೆಲವರ ತರ್ಕ. ನಮ್ಮ ತಂದೆಯವರಿದ್ದ ಗಿರಣಿಯ ಯಜಮಾನ ಎಗರಿಸಿಕೊಂಡು ಹೋಗಿರುವನೆಂಬ ಸುದ್ದಿಯೂ ಜನರಲ್ಲಿದ್ದಿತಂತೆ. ಯಾರೋ ಪೋಲೀಸರಿಗೆ ತಿಳುಹಿದುದರಿಂದ,ಅವರು ಶೋಧನೆಯನ್ನೂ ನಡೆಯಿಸಿದ್ದರಂತೆ. ನಾನು ಒಮ್ಮೆಲೆ ಮನೆಗೆ ಬಂದುದು ಪೋಲೀಸರ ಶೋಧನೆಯ ಪರಿಣಾಮವೆ ಇರಬಹುದು. ಮರುದಿನ ನಾನು ಮನೆಗೆ ಬಂದುದನ್ನು ನೋಡಿ, ಜನರೆಲ್ಲ ತಮ್ಮ ತಮ್ಮೊಳಗೆ ಪಿಸುಮಾತುಗಳನ್ನಾಡುತ್ತ, ಏನೋ ಒಂದು ವಿಧದ ದೃಷ್ಟಿಯಿಂದ ನನ್ನ ಕಡೆಗೆ ದೂರದಿಂದ ನೋಡುತ್ತ ಹಾಗೆಯೆ ಹೋಗುವರು. ನೆರೆಹೊರೆಯ ಪರಿಚಿತರು ಕೂಡ ಹಾಗೆಯೆ. ನನ್ನ ಮನಸ್ಸು ನನ್ನನ್ನೇ ತಿನ್ನುತ್ತಿದ್ದುದರಿಂದ ಹೇಗೇಕೆಂದು ಕೇಳುವ ಧೈರ್ಯ ನನಗೂ ಆಗಲೊಲ್ಲದು.

ತಂದೆಯ ಉತ್ತರಕ್ರಿಯೆಯ ಮಾತು ಬಂದಿತು. ನಾನು ಮನೆಯಲ್ಲಿರುವುದರಿಂದ ಪುರೋಹಿತರಾರೂ ಬರುವುದಿಲ್ಲವೆಂದು ಹೇಳಿದರು. ಉತ್ತರಕ್ರಿಯೆ ಬಿಟ್ಟರೆ ತಾಯಿಗೂ ಬಹಿಷ್ಕಾರ ಬೀಳುವುದು. ನಾನು ಮನೆ ಬಿಡಬೇಕೆಂದರೆ ಎಲ್ಲಿ ಹೋಗಬೇಕು? ಮನೆಯಲ್ಲಿಯೆ ಸ್ಥಳವಿಲ್ಲದ ದುರ್ದೈವಿಗೆ ಯಾವ ಉತ್ತಮಜಾತಿಯ ಹಿಂದುಗಳ ಮನೆಯಲ್ಲಿ ಸ್ಥಳ ಸಿಕ್ಕುವುದು? ಧರ್ಮರಕ್ಷಣೆಗಾಗಿ—ತಂದೆಯವರು ಸದ್ಗತಿಗೆ ಹೋಗಬೇಕೆಂಬ ತಾಯಿಯ ಮುಗ್ಧ ವಿಶ್ವಾಸಕ್ಕಾಗಿ—ನಾನು ಮನೆ ಬಿಡಬೇಕಾಯಿತು. ನನ್ನ ತಂದೆಯವರ ಬಳಿ ಆಗಾಗ ಕೆಲಸಕ್ಕೆಂದು ಬರುತ್ತಿದ್ದ ಒಬ್ಬ ಮುಸಲ್ಮಾನ್ ಕೂಲಿಕಾರನೊಬ್ಬನಲ್ಲಿ ನನಗೆ ಇರಲು ಎಡೆದೊರೆಯಿತು.

ಉತ್ತರಕ್ರಿಯೆ ಮುಗಿದ ಮೇಲೆ ಕೂಡ—ನನ್ನ ಚರಿತ್ರೆಯನ್ನು ಅರಿತಿದ್ದ ಧರ್ಮಾಭಿಮಾನಿನಿ ತಾಯಿಗೆ—ನನ್ನ ಬರವು ಬೇಡವಾಯಿತು. ನನ್ನ ಬದುಕೆಂದರೆ ಒಂದು ನುಂಗಲಾರದ ಉಗುಳಲಾಗದ ತುತ್ತಾಗಿ ಆಕೆಗೆ ಪರಿಣಮಿಸಿತು. ನಾನಿದ್ದ ಮಹಮ್ಮದೀಯ ಕೂಲಿಕಾರನೆದುರು, ನನ್ನ ಜೀವನಸಮಸ್ಯೆಯನ್ನು ಕುರಿತು ಹೇಳಿ ಹೇಳಿ ಆಗಾಗ ನನ್ನ ತಾಯಿಯೂ ಅಳುತ್ತಿದ್ದಳು, ನಾನೂ ಅಳುತ್ತಿದ್ದೆ. ಆತನಿಗೆ ಕರುಣೆಹುಟ್ಟಿತಾಗಿ, ನನಗೆ ಕಲ್ಯಾಣಮಾಡಬೇಕೆಂಬ ಸದ್ಬುದ್ಧಿಯಿಂದಲೆ, ತನ್ನ ಪರಿಚಿತ ಮಹಮ್ಮದೀಯ ಸದ್ಗೃಹಸ್ಥನೊಬ್ಬನಿಗೆ ನನ್ನ ವಿಷಯ ತಿಳುಹಿದನಂತೆ. ಆ ಗೃಹಸ್ಥ

ಒಂದು ದಿನ ನನ್ನ ಬಳಿಗೆ ಬಂದು, ನನಗೆ ಬರುವ ಓದು-ಬರೆಹದ ವಿಷಯ್ಟ್ಕೇಳಿ ತಿಳಿದುಕೊಂಡ. 'ಎಲ್ಲಿಯಾದರೂ ಶಾಲೆಯಲ್ಲಿ ನಿಮಗೊಂದು ಕೆಲಸ ಹಚ್ಚಿಕೊಡಲೇ?' ಎಂದು ಕೇಳಿದ. ಬದುಕು ವುದರಲ್ಲಿಯೆ ಆಶೆಯಿದ್ದ ನಾನು 'ಆಗಲಿ' ಎಂದೆ. ಅದೇ ಊರಲ್ಲಿ ಮಹಮ್ಮದೀಯರ ಹುಡುಗಿಯರ ಶಾಲೆಯಲ್ಲಿ ಇಂಗ್ಲಿಷ್ ಶಿಕ್ಷಿಕೆ ಯಾದೆ. ತಾಯಿಗೆ ಇದಾವುದೂ ಮನಸ್ಸಿಗೆ ಬರಲಿಲ್ಲ. ಅವಳ ದಾರಿ ನನಗೇನೆಂಬ ಬಿಗುಹಿನಿಂದ ನಾನು ನನ್ನ ಕೆಲಸಕ್ಕೆ ತೊಡಗಿದೆ.

ಅದೊಂದು ಖಾಸಗೀ ಶಾಲೆ. ಶಾಲೆ ನಡೆಯಿಸುವವರು 'ನೀನು ಮುಸಲ್ಮಾನಳಾಗಬೇಕು' ಎಂದು ಒತ್ತಾಯಮಾಡತೊಡಗಿದರು. ಮೊದಮೊದಲು ನನ್ನ ಮನಸ್ಸು ಹಿಂಜರಿಯಿತು. ಆದರೆ ಹಿಂದೂ ಧರ್ಮದಲ್ಲಿ ಸಾಮಾಜಿಕ ಗೌರವ ನನಗೆ ಸಿಕ್ಕದೆಂದು ಪೂರ್ಣವಾಗಿ ಮನವರಿಕೆಯಾದುದರಿಂದ, ಯಾವುದೋ ಒಂದು ವಿಷವೇಳೆಯಲ್ಲಿ ಧರ್ಮಾಂತರಕ್ಕೆ ಒಪ್ಪಿದೆ. 'ಮಾಲಿನಿ' ಹೋಗಿ 'ಮುಮತಾಜ್' ಆದೆ. ಧರ್ಮಾಂತರ ಹೊಂದಿದ ಒಂದೆರಡು ತಿಂಗಳುಗಳಲ್ಲಿಯೆ 'ಇನ್ನೂ ಒಳ್ಳೆಯ ಕೆಲಸ ಕೊಡಿಸುತ್ತೇವೆ' ಎಂದು ಆ ಶಾಲೆಯ ವ್ಯವಸ್ಥಾಪಕರು ನನ್ನನ್ನು ಇಲ್ಲಿ ತಂದುಬಿಟ್ಟರು.

ಇಲ್ಲಿ ನನಗೆ ಹಿಂದೂತರುಣರನ್ನು ಜಾತಿಗೆಡಿಸುವ ಬಗೆಗೆ ಕೆಲವು ದಿನಗಳ ವರೆಗೆ ಶಿಕ್ಷಣ ದೊರೆಯಿತು. ಈ ಮನೆಯಲ್ಲಿ ಆ ಕೆಲಸ ಎಡೆಬಿಡದೆ ನಡೆಯುತ್ತಿರುವುದು. ನನಗೆ ಮೊದಲನೆಯ ಬೇಟೆಯಾಗಿ ನೀವೆ ಸಿಕ್ಕಿದಿರಿ; ಆದರೆ ನಿಮ್ಮ ಪ್ರಾಮಾಣಿಕತನ, ಜ್ಞಾನಾರ್ಜನದ ಅಪೇಕ್ಷೆ, ಸರಳವೃತ್ತಿ ಇವುಗಳನ್ನು ಕಂಡು ನನ್ನ ಮನಸ್ಸು ಸೋತಿತು. ನಾನು ಕೆಟ್ಟುಹೋದ ಪಾಪವಲ್ಲದೆ ನಿಮ್ಮಂತಹ ಪವಿತ್ರಜೀವಿಗಳನ್ನೂ ಕೆಡಿಸುವ ಪಾಪವನ್ನು ಮಾಡ ಬಾರದೆಂದು ಆಗಾಗ ಎನಿಸುತ್ತಿದ್ದಿತು. ಮೌಲವಿಯವರ ಒತ್ತಾಯ-ಹೆದರಿಕೆಗಳ ಮೂಲಕ ತಮ್ಮನ್ನು ನನ್ನ ಮೋಹಜಾಲದಲ್ಲಿ ಕೆಡಹಿ ಕೊಳ್ಳುವ ಹಂಚಿಕೆಗಳನ್ನೂ ಆಗಾಗ ಮಾಡುತ್ತಿದ್ದೆ. ಆ ಮೋಹ-ಜಾಲದಲ್ಲಿ ಬೀಳುವ ಹವಣಿಕೆಯಲ್ಲಿ ತಾವಿದ್ದುದನ್ನೂ ಅರಿತು ಕೊಂಡೆ. ಆದರೆ ರಾಜೇಂದ್ರ, ನಿಮ್ಮಂತಹರ ಜೊತೆಯಲ್ಲಿ ಬದುಕಿ ಬಾಳುವ ಪುಣ್ಯ ನನ್ನ ಹಣೆಯಲ್ಲಿ ಬರೆದಿಲ್ಲ. ಇನ್ನಾವ ಹೆಣ್ಣಿನ ಬಾಳನ್ನಾದರೂ ಧನ್ಯವಾಗಿಸಿ ಸುಖವಾಗಿ ಸಂಸಾರ ಮಾಡಿರಿ ನೀವು!' ಎಂದು ಮಾತನ್ನು ಮುಗಿಸಿ, ದೀರ್ಘವಾದ ಉಸಿರೊಂ-ದನ್ನು ಆಕೆ ಚೆಲ್ಲಿದಳು.

ನಾನು ದಿಙ್ಮೂಢನಾಗಿ ಕುಳಿತು ಕೇಳುತ್ತಲಿದ್ದೆ. ಕಣ್ಣಲ್ಲಿ ಕಂಬನಿ ಕೂಡ ಹಣೆಯಿಕ್ಕುತ್ತಿದ್ದುವು. ಆಕೆಯ ಮಾತು ಮುಗಿದ ಒಂದೆರಡು ನಿಮಿಷ ಸುಮ್ಮಗೆ ಕುಳಿತಿದ್ದು, ಬಳಿಕ ಒಮ್ಮೆಲೆ ಭಾವಾವೇಶದಲ್ಲಿ ನುಡಿದೆ:

'ಮಾಲಿನಿ! ನಿನ್ನನ್ನು ಈ ಸ್ಥಿತಿಯಿಂದ ಮುಕ್ತಳನ್ನಾಗಿ ಮಾಡ ಲಿಕ್ಕೆ ಸಾಧ್ಯವಿಲ್ಲವೆ ನನಗೆ?'

'ಸಾಧ್ಯವಿದ್ದರೂ ಮುಕ್ತಳಾಗಿ ನಾನೇನು ಮಾಡಬೇಕಾಗಿದೆ? ಹಿಂದೂಸಮಾಜದ ದೃಷ್ಟಿಯಿಂದ ನಾನು ನಾಯಿಮುಟ್ಟಿದ ಗಡಿಗೆ. ಮೇಲಾಗಿ ಪರಧರ್ಮವನ್ನು ಸ್ವೀಕರಿಸಿದ್ದೇನೆ. ಬದುಕು ವುದೇ ಒಂದು ಗುರಿ ಇದ್ದವಳಿಗೆ ಇಲ್ಲಿಯೇನು, ಎಲ್ಲಿಯೇನು? ಬದುಕು ಎಂದು ಬೇಡವೆನ್ನಿಸುವುದೋ ಅಂದು, ಮರಣವನ್ನು ತಂದುಕೊಳ್ಳುವುದೂ ನನ್ನ ಕೈಯಲ್ಲಿದೆ!'

ಏನು ಮಾತನಾಡಬೇಕೆಂಬುದೆ ನನಗೆ ತಿಳಿಯದಂತಾಯಿತು. 'ನನ್ನ ಜೊತೆಗೆ ನೀನೂ ಬಂದೇ ಬಿಡು' ಎಂದು ಹೇಳಲಿಕ್ಕೆ ಹೃದಯ ಹೆದರಿ ಹಿಂಜರಿಯಲು ತೊಡಗಿತು. ಆಗ ಮಾಲಿನಿಯೆ ಹೇಳಿದಳು:

'ರಾಜೇಂದ್ರ, ಮೌಲವಿಯವರು ಮನೆಗೆ ಬರುವ ಸಮಯ, ಈಗ ನೀವು ಮನೆಗೆ ಹೋಗಿ ಬಿಡಿರಿ! ಹುಂ ಏಳಿರಿ!'

ನಾನು ಯಂತ್ರದ ಬೊಂಬೆಯಂತೆ ಮೇಲಕ್ಕೆದ್ದು ಹಾಗೆಯೆ ಮನೆಗೆ ಹೊರಟೆನು. ಅಂದು ಹಾಸ್ಟೆಲ್ಲಿನಲ್ಲಿ ಯಾರೊಂದಿಗೂ ಮಾತನಾಡಬೇಕೆನಿಸಲಿಲ್ಲ, ಊಟವನ್ನೂ ಮಾಡಲಿಲ್ಲ. ಯಾವುದೋ ಕೆಲಸದ ನೆಪ ಹೇಳಿ, ಅಂದೆಯೆ ರಾತ್ರಿಯ ಟ್ರೇನಿನಿಂದ ಈ ಹಳ್ಳಿಗೆ ಬಂದುಬಿಟ್ಟೆ. ಕಾಲೇಜು, ಓದು, ಪದವಿ ಒಂದೂ ಬೇಡ ವಾಯಿತು. ಅಂದು ಬಂದವನು ಮರಳಿ × × × ರಿಗೆ ಹೋಗಲೆ ಇಲ್ಲ. ಹಳ್ಳಿಯಲ್ಲಿಯೆ ಇದ್ದುಬಿಟ್ಟಿದ್ದೇನೆ. ನನಗೀಗ ಯಾವ ಮತ-ಧರ್ಮದಲ್ಲಿಯೂ ಪ್ರೀತಿಯಿಲ್ಲದಂತಾಗಿದೆ. ನಂಬುಗೆ ತಪ್ಪಿ ಹೋಗಿದೆ. ಇವಾವ ಮತ-ಧರ್ಮಗಳ ತೊಡಕೂ ಇಲ್ಲದ ಶುದ್ಧ-ಮಾನವಧರ್ಮದವನಾಗಿ ಬಾಳಬೇಕೆಂದು ನನಗೆ ಆಶೆ. ಅಶಕ್ತ ಮಾನವನ ಅಪರಾಧವನ್ನು ಸಹಾನುಭೂತಿಯಿಂದ ಕ್ಷಮಿಸದ ಧರ್ಮವೂ ಧರ್ಮವಲ್ಲ, ಅಪರಾಧ-ಅನ್ಯಾಯಗಳ ಮೂಲಕವೆ ಧರ್ಮಪ್ರಚಾರ ಮಾಡುವ ಧರ್ಮವೂ ಧರ್ಮವಲ್ಲ..ಎಂದು ನಾನು ನಿರ್ಣಯಿಸಿ ಬಿಟ್ಟಿದ್ದೇನೆ."

ಇಷ್ಟು ಹೇಳಿ ರಾಜ, ನನ್ನನ್ನೆ ಕುತೂಹಲದ ಕಣ್ಣುಗಳಿಂದ ನಿಟ್ಟಿಸತೊಡಗಿದ. ಆಗ ನನ್ನ ಕಣ್ಣು-ಮನಸ್ಸುಗಳನ್ನೆಲ್ಲ ಮಾಲಿನಿಯೆ ವ್ಯಾಪಿಸಿ ನಿಂತಿದ್ದಳು. ತನ್ನ ಹೃದಯದ ಸಂತಾಪವನ್ನು ನನ್ನ ಹೃದಯದಲ್ಲಿಯೂ ಅವಳು ಕಳುಹಿದ್ದಳು. ಎಷ್ಟು ವೇಳೆಯವರೆಗೆ ನಾನು ಮಾತನಾಡದೆ ಕುಳಿತಿದ್ದೆನೋ! ನೋಟ ಮಾತ್ರ ರಾಜೇಂದ್ರನ ಮುಖವನ್ನು ನೋಡುತ್ತಿದ್ದುವು.

ಆಯುರ್ವೇದ ಮತ್ತು ಜಾತಕ

ವಿದ್ವಾನ್ ಎಂ. ಜಿ. ವೆಂಕಟೇಶಯ್ಯ, ಎಂ. ಎ., ಬಳ್ಳಾರಿ.

★

ಜಾತಕನ ರಾಶಿಸ್ಥಾನಗಳ ಮೂಲಕ ಆತನ ದೇಹದಲ್ಲಿಯ ದೋಷಲಕ್ಷಣಗಳನ್ನು ಹೇಳಬಹುದಲ್ಲದೆ, ಅವನಿಗೆ ಉಂಟಾಗಬಹುದಾದ ರೋಗಗಳನ್ನೂ ಹೇಳಲಿಕ್ಕಾಗುವುದು. ವೈದ್ಯರು ತಮಗೆ ಬೇಕಾಗುವ ವನೌಷಧಿಗಳನ್ನು ತರುವ ಸಮಯಕ್ಕಾಗಿ ಕೂಡ ಜ್ಯೋತಿಶ್ಶಾಸ್ತ್ರವನ್ನು ಅವಲಂಬಿಸಬೇಕಾಗುವುದು.

★

ಜಾತಕವೆಂದರೇನು, ಜಾತಕಕ್ಕೂ ಜೀವನಕ್ಕೂ ಇರುವ ಸಂಬಂಧವೇನು, ಜಾತಕದಲ್ಲಿ ಕಾಣಬರುವುದೇನು ಮುಂತಾದುವನ್ನು ಹಿಂದೆ ನೋಡಲಾಯಿತು. ಈಗ 'ಜಾತಕಕ್ಕೂ ಆಯುರ್ವೇದಕ್ಕೂ ಏನಾದರೂ ಸಂಬಂಧವುಂಟೆ?' ಎಂಬ ವಿಚಾರವನ್ನು ನೋಡೋಣ. ಪ್ರತಿ ಜಾತಕದಲ್ಲೂ ೬ನೆಯ ಭಾವದಲ್ಲಿ ರೋಗಾದಿಗಳು, ೮ನೆಯ ಭಾವದಲ್ಲಿ ಮರಣ ಸಾಮಾನ್ಯವಾಗಿ ಕಂಡು ಬರುತ್ತವೆಂದು ಹಿಂದೆ ಹೇಳಲಾಯಿತು.

ಪಾಶ್ಚಿಮಾತ್ಯ ರೀತಿಯಲ್ಲಿ ವ್ಯಾಸಂಗ ಮಾಡಿ ಪರಿಶೋಧಿಸಿದವರಿಗೆ, ನಮ್ಮ ಶಾಸ್ತ್ರಗಳು ಶಾಸ್ತ್ರಗಳಂತೆಯೆ ಕಾಣುವುದಿಲ್ಲವೆಂದು ತೋರುವುದು. ಇದಕ್ಕೆ ಕಾರಣ ನಮ್ಮಲ್ಲಿ ವಿಭಾಗಿಸಿದ ರೀತಿಯಿಂದ ಶಾಸ್ತ್ರಗಳು (Organised knowledge) ಇಲ್ಲದಿರುವುದೆಂದು ಹೇಳಬೇಕಾಗಿದೆ. ಅವರಲ್ಲಿ ಇದ್ದಂತೆ ಆಯುರ್ವೇದ-ಜ್ಯೋತಿಷ (Medical Astrology) ಎಂದು ಬೇರೆ ಇಲ್ಲದಿರುವುದೇ ಒಂದು ಕಾರಣವೆನ್ನೋಣ: ಬೇರೆ ಇಲ್ಲದೆ ಇದ್ದಾಗಲೂ ವಿಚಾರವಿಲ್ಲವೆಂದರ್ಥವಲ್ಲ.

ಹನ್ನೆರಡು ರಾಶಿಗಳು, ಅವುಗಳ ಬಲಾಬಲಗಳು; ಅವುಗಳಲ್ಲಿಯ ಗ್ರಹಗಳು, ಅವುಗಳ ಬಲಾಬಲಗಳು; ಇವುಗಳ ಸಂಕಲನವೇ ಜಾತಕನ ಪ್ರಾಣ-ಮಾನ-ಧನಾದಿಗಳು. ಇವುಗಳನ್ನು ಜಾತಕಭಾಗದಲ್ಲಿ ಕಲ್ಯಶಕ್ತಿಸ್ಥಾನಗಳು, ಚಿತ್ತೋತ್ಥಸ್ಥಾನಗಳು ಎಂಬುದಾಗಿ ವಿಭಾಗಿಸಿದ್ದಾರೆ. ಕಲ್ಯಶಕ್ತಿಸ್ಥಾನಗಳು ಲಗ್ನದಿಂದ ಆರನೆಯ ಭಾವಗಳವರೆಗೆ; ಚಿತ್ತೋತ್ಥಗಳು ಅಲ್ಲಿಂದಾಚೆಗೆ. ಲಗ್ನವು ಪ್ರಾಣಬಲ, ದೇಹಬಲ, ಬುದ್ಧಿಬಲ ಮುಂತಾದುವುಗಳಿಗೆ ಆಧಾರ; ಏಳನೆಯ ರಾಶಿಯು ಚಿತ್ತೋತ್ಥ, ಭಾವ-ಕಾಮಾದಿಗಳಿಗೆ ಆಧಾರ.



(ದೇಹ-ಜ್ಞಾನ; ಜ್ಞಾನ-ಚಿತ್ತಾದಿಗಳ ಆರೋಹಣ ಅವರೋಹಣ)

ಲಗ್ನವೆ ದೇಹ; ದೇಹಕ್ಕೆ ಆಹಾರವೇ ಶಕ್ತಿಯನ್ನು ಕೊಡುವುದು. ಆಹಾರವೆಂದರೆ ೨ನೆಯ ರಾಶಿ. ಆಹಾರದಿಂದ ಶಕ್ತಿ; ಎಂತಲೆ ಅದು ೩ನೆಯ ರಾಶಿ. ಇವುಗಳಲ್ಲದೆ ವಾಸಮಾಡುವ ಸ್ಥಳವೂ ದೇಹದ ಮೇಲೆ ತನ್ನ ಶಕ್ತಿಯನ್ನು ತೋರಿಸುತ್ತದೆ; ಇದು ೪ನೆಯ ರಾಶಿ. ಲಗ್ನ (೧), ಆಹಾರ (೨), ಶಕ್ತಿ (೩), ವಾಸಸ್ಥಾನ (೪) ಇವುಗಳಿಂದಲೆ ದೇಹಪಟುತ್ವದ ಸಂಕಲನೆ. ೫ನೆಯ ರಾಶಿ ಜ್ಞಾನ-ಇಲ್ಲಿಂದಾಚೆಗೆ ಬುದ್ಧಿಬಲ. ಆಕಸ್ಮಿಕವಾಗಿ ಏಟು ಮುಂತಾದುವುಗಳಿಂದ (ಕ್ಷತಜ) ತೊಂದರೆಯನ್ನು ೬ನೆಯ ರಾಶಿ ತೋರಿಸುತ್ತದೆ. ಚಿತ್ತಬಲ, ಭಾವ-ಕಾಮಾದಿಗಳು ೭ನೆಯ ರಾಶಿಯಿಂದ ತಿಳಿಯುವುವು. ದೇಹ-ಚಿತ್ತಗಳ ಮೇಲೆ ಆಗುವ ಪರಿಣಾಮ-ಮರಣಾದಿಗಳು ೮ನೆಯ ರಾಶಿಯಲ್ಲಿ ತಿಳಿಯುವುವು. ೧-೪ ದೇಹಬಲ; ೫-೭ ಜ್ಞಾನಚಿತ್ತಾದಿಗಳ ಬಲ; ೮ ಮರಣ. ೯-೧೨ ಅದೃಷ್ಟಬಲ. ಹಿಂದಿನ ಜನ್ಮದಲ್ಲಿ ಜಾತಕನು ಮಾಡಿದ ಸುಕೃತಾದಿಗಳು ಅದೃಷ್ಟಬಲ.

ದೇಹವು ಪಂಚಭೂತಾತ್ಮಕ. ದೇಹವನ್ನು ಬೆಳೆಯಿಸುವ ಆಹಾರ ಪದಾರ್ಥಗಳು ಷಡ್ರಸಮಯ. ಈ ಷಡ್ರಸಗಳ ಸರಿಯಾದ ಸಮ್ಮೇಳನವೇ ವಾತ-ಪಿತ್ತ-ಕಫಾದಿಗಳನ್ನು ದೇಹದಲ್ಲಿ ಸಮನಾಗಿ ಇಟ್ಟಿರುವುದು. ವಾತ-ಪಿತ್ತ-ಕಫಗಳ ವ್ಯತ್ಯಾಸದಿಂದಲೆ ದೇಹದಲ್ಲಿ ಅನಾರೋಗ್ಯ. ಉದಾಹರಣೆಗಾಗಿ:—ಕಟು-ತಿಕ್ತ-ಕಷಾಯಗಳನ್ನು ಮಟ್ಟಿಗೆ ಸೇರಿಸಿದರೆ ವಾತಪ್ರಕೋಪ; ಇದರಿಂದ ವಾತಸಂಬಂಧ ರೋಗಪ್ರಾಪ್ತಿ. ಇದೇ ವಿಚಾರವನ್ನೇ ಜಾತಕದಲ್ಲಿ ಹೀಗೆ ಹೇಳಬಹುದು :— ರವಿ, ಕುಜ, ಶನಿಗಳು ಎರಡನೆಯ ರಾಶಿಯಲ್ಲಿ ಸೇರಿದರೆ ವಾತಪ್ರಕೋಪದಿಂದ ಅನಾರೋಗ್ಯ.

ಗ್ರಹ	ರಸ	ತತ್ತ್ವ	ವಿಶೇಷ
ಶನಿ, ರಾಹು	ಕಷಾಯ	ವಾಯು	ಗ್ರಹಕ್ಕೂ ರಾಶಿಗೂ ಒಂದೇ ವಿಧವಾದ ರಸ-ತತ್ತ್ವಗಳಿದ್ದು, ಅದು ಲಗ್ನವಾದರೆ ದೇಹಪುಷ್ಟಿ, ವಿಪರೀತವಾದರೆ ವೈಕಲ್ಯ.
ಗುರು	ಮಧುರ	ಆಕಾಶ	
ಕುಜ	ತಿಕ್ತ	ತೇಜಸ್ಸು	
ರವಿ	ಕಟು	ತೇಜಸ್ಸು	
ಶುಕ್ರ	ಆಮ್ಲ	ಜಲ	
ಬುಧ	ಮಿಳಿತ	ಪೃಥ್ವಿ	
ಚಂದ್ರ	ಲವಣ	ಜಲ	

ಮಧುರ, ಆಮ್ಲ, ಲವಣ, ತಿಕ್ತ, ಕಟು, ಕಷಾಯಗಳಲ್ಲಿ ಎಲ್ಲರಸಕ್ಕಿಂತಲೂ ಅಧಿಕ ಶಕ್ತಿಯಿರುವುದು ಮಧುರಕ್ಕೆ. ಈ ಮಧುರಕ್ಕೆ ಅಧಿಪತಿ ಗುರು. ಜಾತಕದಲ್ಲಿ ಲಗ್ನ (ದೇಹ)ದಲ್ಲಿ ಗುರುವಿದ್ದರೂ ಗುರುದೃಷ್ಟಿ ಲಗ್ನಕ್ಕಿದ್ದರೂ ಬಾಲಾರಿಷ್ಟ ದೋಷವಿಲ್ಲ. ಹಾಗೆಯೆ ಗುರು ಎರಡನೆಯ ಮನೆಯಲ್ಲಿ ಪ್ರಬಲನಾಗಿದ್ದರೆ, ಅವನಿಗೆ ಮಧುರ-ರಸ ಪ್ರಧಾನವಾದ ಊಟ. ಎರಡನೆಯದು ಆಮ್ಲ (ಶುಕ್ರ). ಎಲ್ಲದಕ್ಕಿಂತಲೂ ಬಲಹೀನವಾದದ್ದು ಕಷಾಯ (ಶನಿ), ದೇಹ ವಿಚಾರದಲ್ಲಿ ರಸಗಳ ಪ್ರಬಲತ್ವವನ್ನು ಹೇಗೆ ನಿರ್ಧರಿಸಿದ್ದಾರೊ ಹಾಗೆಯೇ ಗ್ರಹಗಳ ಪ್ರಬಲತ್ವವನ್ನೂ ನಿರ್ಣಯಿಸಿದ್ದಾರೆ. ಇವೆರಡಕ್ಕೂ ಚೆನ್ನಾಗಿ ಕೂಡಿಬರುತ್ತದೆ.

ನಾಡಿ, ಜಿಹ್ವಾ, ಮುಖ, ಮೂತ್ರ, ಕೋಷ್ಠ, ಇವುಗಳನ್ನು ಪರೀಕ್ಷಿಸದೆ ಔಷಧವನ್ನು ಕೊಡುವವನು ವೈದ್ಯನಲ್ಲ, ಯಮನೆಂದು ಹೇಳಿದೆ. ನಾಡಿಯು ದೇಹದ ಸಾಮಾನ್ಯಲಕ್ಷಣ ಮತ್ತು ಮರಣ ಇವುಗಳನ್ನು ಸೂಚಿಸುತ್ತದೆ; ಲಗ್ನ ಅಷ್ಟಮಾದಿಗಳ ಬಲಾಬಲ. ಜಿಹ್ವಾ ೨ನೆಯ ರಾಶಿ; ಆಕೃತಿ ೩ನೆಯ ರಾಶಿ; ಕೋಷ್ಠ ೬ನೆಯ ರಾಶಿ; ಮಲಮೂತ್ರಾದಿಗಳು ೧೨ನೆಯ ರಾಶಿ. ಸಾಧಾರಣವಾಗಿ ಮಾರಕ ಸ್ಥಾನಗಳೆಂದರೆ ೨ ಮತ್ತು ೭. ಎರಡು ಆಹಾರ; ಏಳು ಚಿತ್ರೋತ್ಥಾ. ಮಾನುಷೀಚಿಕಿತ್ಸೆಯಲ್ಲಿ ಕಷಾಯಾದಿಗಳಿಗೂ ಗ್ರಹಗಳಿಗೂ ಇರುವ ಸಂಬಂಧವನ್ನು ಸ್ಥೂಲರೀತಿಯಾಗಿ ಇಲ್ಲಿ ಹೇಳಲ್ಪಟ್ಟಿದೆ. ಇದರಂತೆಯೆ ಆಸುರೀ (ಶಸ್ತ್ರ) ಮತ್ತು ದೈವೀ (ಧಾತು) ಚಿಕಿತ್ಸೆಗಳಿಗೂ ತೋರಿಸಬಹುದು.

ಬೃಹಜ್ಜಾತಕದಲ್ಲಿಯ ಅರಿಷ್ಟಾಧ್ಯಾಯವನ್ನೂ, ಬೃಹದ್ವೈದ್ಯ ರತ್ನಾಕರವನ್ನೂ ನೋಡಿದಲ್ಲಿ ಈ ವಿಚಾರವಾಗಿ ಇನ್ನೂ ಅನೇಕ ಯೋಗ (ಗ್ರಹ)ಗಳು ಕಂಡುಬರುತ್ತವೆ. ಇವೆಲ್ಲವನ್ನೂ ಒಂದೆಡೆ ಸೇರಿಸಿ, ಪಂಗಡಗಳಾಗಿ ವಿಂಗಡಿಸಿ, ಅವುಗಳ ಉಪಯೋಗವನ್ನು ಸರಿಪಡಿಸಿಕೊಳ್ಳಬಹುದು.

ಜೈಮಿನಿ ಸೂತ್ರಗಳಲ್ಲೂ ಈ ವಿಚಾರವಿದೆ. ಆತ್ಮಾಕಾರಕನಿಗಾಗಲಿ, ಲಗ್ನಕ್ಕಾಗಲಿ (ಯಾವುದು ಪ್ರಬಲವಾದರೆ ಅದು) ಮೂರನೆಯ ಮನೆಯಲ್ಲಿ ಚಂದ್ರನಿದ್ದರೆ ಕ್ಷಯ; ಶನಿ ಇದ್ದರೆ ವಾತ-ರೋಗ; ಶನಿ-ಗುಳಿಕರಿದ್ದರೆ ಶ್ಲೇಷ್ಮರೋಗ, ದೂಷೀವಿಷಾದಿಗಳಿಂದ ಮರಣ; ಕೇತುವಿದ್ದರೆ ಜಲರೋಗ; ಚಂದ್ರ–ಗುಳಿಕರಿದ್ದರೆ ಅಜೀರ್ಣ, ಉದರರೋಗ; ಗುರುವಿದ್ದರೆ ಶೋಫೆ; ಶುಕ್ರನಿದ್ದರೆ ಮೇಹರೋಗಾದಿಗಳು.

ಜಾತಕನ ವಿಚಾರವೊಂದೇ ಅಲ್ಲ; ಅವನ ಕಳತ್ರಕ್ಕೆ ಕೂಡ ಎಂತಹ ರೋಗಗಳು ಪ್ರಾಪ್ತವಾಗುತ್ತವೆ ಎಂಬ ವಿಚಾರವನ್ನು ಕೂಡ ಜೈಮಿನೀ ಸೂತ್ರಗಳಲ್ಲಿ ನೋಡಬಹುದು. ಉಪಪದ ಲಗ್ನಕ್ಕೆ ಎರಡನೆಯ ರಾಶಿಯಲ್ಲಿ ರವಿ, ಶನಿ, ರಾಹುಗಳಿದ್ದರೆ ಅಸ್ಥಿಗತ ಜ್ವರ; ಅದು ಬುಧನ ರಾಶಿಯಾಗಿ ಅಲ್ಲಿ ಶನಿ-ಕುಜರಿದ್ದರೆ ನಾಸಿಕ ರೋಗ; ಕುಜನ ರಾಶಿಯಾಗಿ ಅಲ್ಲಿ ಕುಜ-ಶನಿಗಳಿದ್ದರೆ ನಾಸಿಕರೋಗ; ಕುಜ–ಶನಿಗಳ ರಾಶಿಯಾಗಿ ಅಲ್ಲಿ ಗುರು-ಶನಿಗಳಿದ್ದರೆ ಕರ್ಣರೋಗ; ಬುಧ, ಕುಜ ಇವರ ರಾಶಿಯಾಗಿ ಗುರು–ರಾಹುಗಳಿದ್ದರೆ ದಂತ ರೋಗ; ಕನ್ಯಾ-ತುಲಗಳಾಗಿ ಶನಿ–ರಾಹುಗಳಾಗಲಿ, ಅವರ ದೃಷ್ಟಿಯಾಗಲಿ ಇದ್ದರೆ ವಾತರೋಗ.

ವೈದ್ಯನು ಮೂಲಿಕಾದಿಗಳನ್ನು ತರಬೇಕಾದ ಕೆಲವು ಸಮಯಗಳನ್ನೂ ವೈದ್ಯಶಾಸ್ತ್ರದಲ್ಲಿ ಹೇಳಿದ್ದಾರೆ. ಇದರಿಂದ ಆಯಾ ಮೂಲಿಕೆಗಳ ಪಕ್ವಕಾಲಗಳನ್ನು ನಿಶ್ಚಯಿಸಿ ಅವುಗಳನ್ನು ರೂಢಿಯಲ್ಲಿ ತರಲು ಹೇಗೆ ಮಾಡಿರಬಹುದೆಂಬುದಕ್ಕೆ ಸಾಕಾದಷ್ಟು ನಿದರ್ಶನವು ಸಿಕ್ಕಬಹುದು.

ತಿಳಿವಗೆ ಮತ್ಸರಂ ಪಿರಿದು; ರಾಜರಿಗೆ ಆಗತ್ಯವಿಲ್ಲ; ವಿಕ್ಕವರು ತಿಳಿವಿಲ್ಲದವರು. ಹೀಗಾಗಿ ಸುಭಾಷಿತ ಮುಳುಗಿ ಹೋಯಿತೆಂಬ ಮಾತು ಜ್ಯೋತಿಷ ಆಯುರ್ವೇದಗಳೆರಡಕ್ಕೂ ಚೆನ್ನಾಗಿ ಅನ್ವಯಿಸುವಂತಿದೆ.

ಎಂಬ್ರೋಸಿಯಾದಿಂದಲೆ ನನ್ನ ಆರೋಗ್ಯ ಸುಧಾರಿಸಿತು !

ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಹೆಂಗುಸರ ವಿಕಾರಗಳಮೇಲೆ ಉತ್ಕೃಷ್ಟವಾದ ಔಷಧಿಯೆಂದು ಪ್ರಸಿದ್ಧಿಯಿದ್ದು, ಹಲವು ಜನ ಡಾಕ್ಟರರು ಈ ಔಷಧವನ್ನು ಕುರಿತು ಮುಕ್ತ ಕಂಠದಿಂದ ಹೊಗಳಿ ಹಾಡಿರುವರು. ಎಂಬ್ರೋಸಿಯಾದ ನಿಯಮಿತ ಸೇವನೆಯಿಂದ ಅವ್ಯವಸ್ಥಿತವಾಗಿ ಮುಟ್ಟಾಗುವುದು, ಅದರ ಮೂಲಕ ಕೆಳಹೊಟ್ಟೆಯಲ್ಲಿ ಅಸಹನೀಯವಾದ ವೇದನೆಯಾಗುವುದು, ಪ್ರದರ, ಹಿಸ್ಟೀರಿಯಾ, ಹೊಟ್ಟೆತೊಳಸುವುದು, ತಲೆನೋಯುವುದು ಮೊದಲಾದ ವಿಕಾರಗಳು ಕೂಡಲೆ ಇಲ್ಲದಂತಾಗುವುವು. ಎಲ್ಲೆಲ್ಲಿಯೂ ಸಿಕ್ಕುವುದು. ಸಿಕ್ಕದಿದ್ದರೆ "ಪ್ಲಿ. ರಾಮ ಮತ್ತು ಕಂಪನಿ, ಪ್ರಿನ್ಸೆಸ್ ಸ್ಟ್ರೀಟ್, ಮುಂಬೈ" ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

'ವೇಣುವಾದನ ವಿಶಾರದ' ★ ಅರ್ಥಾತ್

★

ಶ್ರೀಮಾನ್ ಹೊಂಬಳ ಪ್ರಲ್ಹಾದರಾಯರು

ಶ್ರೀ. ಎಚ್. ಎಸ್. ಪಾಟೀಲ, ಎಂ. ಎ.

ಬೀಜವೊಂದನ್ನು ನೋಡಿದಾಗ ಅದೊಂದು ದೊಡ್ಡ ಮರವಾಗಬಹುದೆಂದು ಯಾರು ಭಾವಿಸಬಹುದು? ತಾವು ನೋಡಿದ ಬೀಜವೆ ಮೊಳೆತು ಮರವಾದುದನ್ನು ಕಂಡಾಗ ಎಲ್ಲರೂ ಆಶ್ಚರ್ಯಪಡುವರು. ಧಾರವಾಡದ ಬೀದಿ ಬೀದಿ ಸುತ್ತುವ ತುಂಟ ಹುಡುಗನೊಬ್ಬ 'ವೇಣುವಾದನ ವಿಶಾರದ' ನಾಗಬಹುದೆಂದು ಯಾರು ಅರಿತಿದ್ದರು? ಆದರೆ ಹಾಗೆ ಆಗಿದ್ದಾನೆಂದು ಹೇಳಿದರೆ ಹಲವರು ವಿಸ್ಮಿತರಾಗಬಹುದು!

"ಪುರುಷರ ಭಾಗ್ಯವನ್ನು ಅರಿತಿರುವರಾರು?" ಎಂದು ಸುಭಾಷಿತವನ್ನು ಹೇಳಿದರು ಶ್ರೀ. ಜೋಶಿ ಶಂಕರರಾಯರು ಅಂದಿನ ಸಭೆಯಲ್ಲಿ. ಸಭೆ ಎಂದರೇನು, ಅದು ಅಂತಹ ದೊಡ್ಡ ಜನಸಮೂಹದ್ದೇನೂ ಇದ್ದಿರಲಿಲ್ಲ. ಕಳೆದ ಡಿಸೆಂಬರ್ ೯ನೆಯ ತಾರೀಖಿನ ದಿನ, ನಾವು ಎಂದರೆ ಧಾರವಾಡ ಕನ್ನಡ ನಾಟ್ಯವಿಲಾಸಿಗಳು, ಬಾಗಿಲುಕೋಟೆಯ ವಾಸುದೇವ ವಿನೋದಿನೀ ಸಭೆಯವರಿಗೆ ಸಂತೋಷಕೂಟವನ್ನೇರ್ಪಡಿಸಿದ್ದೆವು. ಅದೇ ಕಾಲಕ್ಕೆ, ಆಗ ತಾನೆ ಪಡುವಣ ದೇಶಗಳ ಪ್ರಯಾಣವನ್ನು ಮುಗಿಸಿಕೊಂಡು ಮರಳಿ ಬಂದ ಶ್ರೀ. ಹೊಂಬಳ ಪ್ರಲ್ಹಾದರಾಯರನ್ನೂ ನಾವು ಮರ್ಯಾದಿಸಬೇಕೆಂದಿದ್ದೆವು. ಆ ಕಾಲಕ್ಕೆ ನೆರೆದ ಜನರಲ್ಲಿ ಶ್ರೀ. ಪ್ರಲ್ಹಾದರಾಯರ ಗುಣ-ಗೌರವದ ಪರಿಚಯವನ್ನು ಮಾಡಿಕೊಡುತ್ತ, ಶ್ರೀ. ಶಂ. ಬಾ. ಜೋಶಿಯವರು ಈ ಮೊದಲು ಹೇಳಿದ ವಾಕ್ಯವನ್ನು ನುಡಿದರು. ನಿಜವಾಗಿ ನೋಡಿದರೆ ಪುರುಷನು ಕೇವಲ ಭಾಗ್ಯದ ಮೇಲೆ ಮಾತ್ರ ಕೈಯೂರಿ ಕುಳಿತರೆ ಅದು ಯಾವ ಕಾಲಕ್ಕೆ ಮನುಷ್ಯನಿಗೆ ಕೈ ತೋರಿಸೀತೆಂಬುದನ್ನು ಹೇಳಲಾಗುವುದಿಲ್ಲ. ಶ್ರೀ. ಹೊಂಬಳ ಪ್ರಲ್ಹಾದರಾಯರು ಕೇವಲ ಭಾಗ್ಯದ ಮೇಲೆ ನಂಬಿಗೆಯನ್ನಿಡದೆ, ತಾವು ಯಾವಾಗಲೂ ಪುರುಷಪ್ರಯತ್ನದಲ್ಲಿಯೆ ಇರುತ್ತಿದ್ದರು. ಕರ್ತವ್ಯದ ಕಡೆಗೆ ಮಾತ್ರ ತಮ್ಮ ಲಕ್ಷ್ಯವನ್ನು ಪೂರಯಿಸುತ್ತಿದ್ದರಲ್ಲದೆ ತಮ್ಮ ಗುರಿಯನ್ನು ಸಾಧಿಸುವ ಹಂಚಿಕೆಗಳನ್ನು ಮಾತ್ರ ಚಿಂತಿಸುತ್ತಿರುವರು. ಆದುದರಿಂದಲೆ, ಮೊನ್ನೆ ಮೊನ್ನೆ ಬೆಳಗಾಂವಿಯಲ್ಲಿ ಜರುಗಿದ ಸಾಹಿತ್ಯಸಮ್ಮೇಳನದಲ್ಲಿ ಅವರಿಗೆ '**ವೇಣುವಾದನ ವಿಶಾರದ**' ಎಂಬ ಮನ್ನಣೆಯ ಬಿರುದು ದೊರೆಯಿತು.

ಶ್ರೀ. ಹೊಂಬಳರು

ಶ್ರೀ. ಪ್ರಲ್ಹಾದರಾಯರ ಜೀವನದಲ್ಲಿ ಇಲ್ಲಿಯವರೆಗೆ ಸಂಭವಿಸುತ್ತ ಬಂದ ಹಲಕೆಲವು ಸಂದರ್ಭಗಳನ್ನು ನೆನೆದರೆ, ಒಮ್ಮೊಮ್ಮೆ ಈ ಬಗೆಯಾಗಿ ಅವರನ್ನು ಮಾರ್ಪಡಿಸುತ್ತಿರುವುದು ಯಾವುದೋ ಒಂದು ಅಜ್ಞಾತ–ಅದೃಶ್ಯ–ಅವಿದಿತವಾದ ಶಕ್ತಿಯೆ ಎಂಬುದನ್ನು ಒಪ್ಪಬೇಕೆನಿಸುವುದು. ಪ್ರಯತ್ನವಾದಿಗಳು ಬೇಕಾದರೆ ಅದಕ್ಕೆ 'ಅವರು ಇಂದಿನ ಈ ಕೀರ್ತಿಸೋಪಾನವನ್ನು ಏರಿಬರಲು ಅಣಿಯಾಗಿರುವ ಮೆಟ್ಟಿಲುಗಳು– ಆ ಎಲ್ಲ ಸಂಗತಿಗಳು' ಎಂದು ಮುಂತಾಗಿ ವಾದಿಸಬಹುದು. ಏಕೆಂದರೆ ಚಿಕ್ಕತನದಲ್ಲಿ ಇವರು ಕೈಕೊಂಡ ಹಲಕೆಲವು ವಿಷಯಗಳು, ತಿಳಿದುಕೊಳ್ಳಲಿಕ್ಕೆ ಬಹು ಮೋಜಿನವಿರುವುವು. ಇವರು ೧೯೧೦ನೆಯ ಇಸವಿಯಲ್ಲಿ ಹುಬ್ಬಳ್ಳಿಯಲ್ಲಿ ಹುಟ್ಟಿದ್ದರೂ, ಹೊಂಬಳ ಎಂಬ ಉಪನಾಮವನ್ನು ಧರಿಸಿದ್ದರೂ, ಇವರ ಮೂಲ ವಸತಿಸ್ಥಾನ ಲಕ್ಷ್ಮೇಶ್ವರ. ಮುಂದೆ ಕಾರಣಾಂತರಗಳಿಂದ ಇವರು ಧಾರವಾಡಕ್ಕೆ ಬರಬೇಕಾಗಿ ಬಂದುದರಿಂದ, ಇವರ ಇಂಗ್ಲಿಷ್ ಶಿಕ್ಷಣದ ಮೊದಮೊದಲಿನ ಕೆಲವು ಭಾಗವು, ಮಾಳಮಡ್ಡಿಯಲ್ಲಿ ಆ ಕಾಲಕ್ಕೆ ಇದ್ದ 'ಮಾಡರ್ನ ಸ್ಕೂಲ' ನಲ್ಲಾಯಿತು. ಆಗ ವರ್ಗದ ಕಿಡಿಗೇಡಿ ಹುಡುಗರ ಹೆಗ್ಗ-ಡೆಯೂ, ಡ್ರಾಯಿಂಗ್ ಪರೀಕ್ಷೆಗೆ ಕುಳಿತುಕೊಳ್ಳಬೇಕೆಂಬ ಹಂಬಲುಳ್ಳವರೂ ಆದ ಇವರು, ಒಮ್ಮೆಲೆ ಹೀಗೆ ಕೊಳಲನ್ನು ಬಾಜಿಸುವುದರ ಕಡೆಗೆ ಹೇಗೆ ಒಲಿದರು? .. ಎಂಬುದನ್ನು ಗೊತ್ತು ಮಾಡಿಕೊಳ್ಳಬೇಕೆಂದು ನನಗೆ ತುಂಬ ಆತುರವಿದ್ದಿತು. ಅದನ್ನು ಅವರು ತಾವಾಗಿಯೆ ಈ ಬಗೆಯಾಗಿ ಹೇಳಿದರು:

"ನಾನು ಮುಂದಿನ ಶಿಕ್ಷಣಕ್ಕಾಗಿ ವ್ಹಿಕ್ಟೋರಿಯಾ ಹೈಸ್ಕೂಲನ್ನು ಸೇರಿದೆ. ಅಲ್ಲಿಯ ಎರಡು ಆಕಸ್ಮಿಕ ಘಟನೆಗಳು ನನ್ನನ್ನು ಈ ಮಾರ್ಗದತ್ತ ಎಳೆದುತಂದಿರಬಹುದು. ಮೊದಲನೆಯದೆಂದರೆ ಮಾಳಮಡ್ಡಿಯಿಂದ ವ್ಹಿಕ್ಟೋರಿಯಾ ಹೈಸ್ಕೂಲಿಗೆ ಹೋಗಬೇಕಾದ ಪ್ರತಿಯೊಬ್ಬ ವಿದ್ಯಾರ್ಥಿಗೆ ಆ ದಾರಿಯಲ್ಲಿ ಸಿಕ್ಕಲೆ ಬೇಕಾಗುವ

ಶ್ರೀ. ಪಿತ್ರೇ ವಕೀಲರ ಮನೆ; ಅಲ್ಲದೆ ಇನ್ನೊಂದೆಂದರೆ ನಾನು ಆಗ ಏನೋ ಒಂದು ಉಬ್ಬಿನಲ್ಲಿ ಸ್ಕೌಟಾದುದು. ಅದೇ ಸಮಯಕ್ಕೆ ಸಂಭವಿಸಿದ ಇನ್ನೂ ಒಂದು ಸಂಗತಿಯೆಂದರೆ, ನನಗೆ ಕುಣಿತಗಾರರಾದ ಶ್ರೀ. ಕುಲಕರ್ಣಿ ಶ್ರೀನಿವಾಸರ ಪರಿಚಯವಾದುದು. ಆಗ ಮಲ್ಲಸಜ್ಜನ ವ್ಯಾಯಾಮಶಾಲೆಯು ವ್ಹಿಕ್ಟೋರಿಯಾ ಹೈಸ್ಕೂಲಿನ ಕಟ್ಟಡದಲ್ಲಿತ್ತು—" ಎಂದು ಅವರು ನುಡಿದರು. ಅದಕ್ಕೆ ನಾನು ಜೋಡಿಸಿದೆ: "ಅದೇಕೆ ಈಗಲೂ ಅಲ್ಲಿಯೆ ಇರುವುದು-ನೀವೇನು ಅನುಮಾನಿಸಬೇಡಿರಿ. ನೀವು ಇಂಗ್ಲಂಡಿಗೆ ಹೋಗಿಬಂದರೂ ಅದೇನು ಸ್ಥಾನಾಂತರವಾಗಿಲ್ಲ" ಎಂದು ನಗುತ್ತ ಹೇಳಿದೆ. ಅವರೂ ನನ್ನ ಸಂಗಡ ನಕ್ಕು ಮುಂದೆ ಹೇಳಲಾರಂಭಿಸಿದರು:

"ಅದರ ಆಗಿನ ಸಂಚಾಲಕರು ಶ್ರೀ. ಕುಲಕರ್ಣಿ ಶ್ರೀನಿವಾಸರಿದ್ದರು. ನಾನು ಪ್ರತಿನಿತ್ಯ ವ್ಯಾಯಾಮಕ್ಕೆ ಹೋಗುತ್ತಿದ್ದೆನಾದುದರಿಂದ ನನಗೆ ಅವರ ಗುರುತಾಯಿತು. ಕೆಲವು ದಿನಗಳಲ್ಲಿಯೆ ನಮ್ಮಲ್ಲಿ ಸ್ನೇಹವು ಗಾಢವಾಗಿ ಬೆಳೆಯಿತು.. ನಮ್ಮ ಸ್ಕೌಟ್ ಪಥಕದ ಬ್ಯಾಂಡಿನಲ್ಲಿ ಕೊಳಲುಬಾಜಿಸುವುದನ್ನು—ಅದೇಕೋ ನನಗೆ ಗೊತ್ತಿಲ್ಲ—ನನಗೆ ಒಪ್ಪಿಸಿದ್ದರು. ಮೊದಮೊದಲು ನಾನು ಎಂದಿನಂತೆ ನನ್ನ ಬುಕ್‌ಬೈಂಡಿಂಗ್, ಇಲೆಕ್ಟ್ರಿಕ್ ಫಿಟಿಂಗ್ ಮುಂತಾದುವುಗಳ ಕಡೆಗಿರುವ ನನ್ನ ಒಲವನ್ನು ಪೂರಯಿಸಿಕೊಳ್ಳುತ್ತ, ಕೊಳಲು ನುಡಿಸುವುದನ್ನು ಸ್ವಲ್ಪಸ್ವಲ್ಪವಾಗಿ ರೂಢಿಮಾಡಿಕೊಂಡಿದ್ದೆ. ಆದರೆ ಈ ಬಗೆಯ ಕಲೆಯಲ್ಲಿ ಆಗಿನಿಂದಲೇ ಆಸಕ್ತಿಯುಳ್ಳ ಶ್ರೀ. ಕುಲಕರ್ಣಿ ಶ್ರೀನಿವಾಸರು ನನ್ನ ಸಂಗಡಿಗರಾದ ಕೂಡಲೆ, ಆ ನನ್ನ ಅಭ್ಯಾಸವು ಒಂದು ದೈನಂದಿನ ಚಟವಾಗಿಯೆ ಪರಿಣಮಿಸಿತು. ಇದೇ ಸಮಯಕ್ಕೆ ಮೊತ್ತಮೊದಲನೆಯದಾಗಿ—ನಮ್ಮ ಶಾಲೆಯ ವಾರ್ಷಿಕೋತ್ಸವದ ಕಾಲಕ್ಕೆ— ನನ್ನದೊಂದು ವೀಣಾವಾದನದ ಸಾರ್ವಜನಿಕ ಕಾರ್ಯಕ್ರಮವು ಜರುಗಿತು. ಇದೊಂದು ಪ್ರಯೋಗವೆ ಎನ್ನಿರಿ! ಆಗಿನ ನನ್ನ ವ್ಯಾಸಂಗದ ಮಟ್ಟಿಗೆ ಅದು ಯಶಸ್ವಿಯಾಗಿ ಪರಿಣಮಿಸಿತೆಂದೇ ಹೇಳಬಹುದು. ಆ ನನ್ನ ಕಾರ್ಯಕ್ರಮದ ಕಾಲದಲ್ಲಿ ಅಲ್ಲಿ ದಯೆಮಾಡಿಸಿದ್ದ ಶ್ರೀ. ಗುತ್ತಲ ವಕೀಲರು ನನ್ನನ್ನು ಕರೆದೊಯ್ದು, ತಮ್ಮ ಮಿತ್ರರೂ ಸಂಗೀತಜ್ಞರೂ ಆದ ಶ್ರೀ. ಪಿತ್ರೆಯವರೆಡೆಗೆ ನನ್ನನ್ನು ಇರಿಸಿದರು. ಅದುವೆ ನನ್ನ ಕಲಾಜೀವನದ ಪ್ರಾರಂಭಕಾಲ ಎಂದೆನ್ನಬಹುದು. ಅಲ್ಲಿಯವರೆಗೆ ಸಂಸಾರಸಮುದ್ರದಲ್ಲಿ ತೇಲಿಬಿಡ್ಡ ನನ್ನ ಜೀವನನೌಕೆಯು, ಆ ದಡಕ್ಕೊಮ್ಮೆ, ಈ ದಂಡೆಗೊಮ್ಮೆ, ಮತ್ತೊಮ್ಮೆ ಮತ್ತೊಂದು ಬಂಡೆಗೆ ಹೀಗೆ ಹಾಯುತ್ತಿದ್ದಿತು. ಈಗ ಕೊಳಲನ್ನು ಆಧಾರವಾಗಿರಿಸಿಕೊಂಡಿದ್ದುದರಿಂದ ಸಹಜವಾಗಿ ಹುಟ್ಟುಹಾಕುತ್ತ ಆ ಮಹಾಸಾಗರವನ್ನು ದಾಟಲು ನನಗೆ ಅನುಕೂಲವಾಯಿತು." ಎಂದು—ತಮ್ಮ ಅಲಂಕಾರದ ಭಾಷೆಗಾಗಿಯೆ ಇರಬಹುದು— ಒಮ್ಮೆಲೆ ನಕ್ಕುಬಿಟ್ಟರು.

ಈ ಪ್ರಕಾರವಾಗಿ ಅವರು ಶಾಲೆಯ ಅಭ್ಯಾಸವನ್ನು ನೋಡಿಕೊಳ್ಳುತ್ತ, ಸಂಗೀತ ವಿದ್ಯೆಗೆ ಹೆಚ್ಚುಹೆಚ್ಚಾಗಿ ಲಕ್ಷ್ಯವನ್ನು ಪೂರಯಿಸುತ್ತ, ವರ್ಷ ಎರಡು ವರ್ಷಗಳನ್ನು ಕಳೆಯುವಷ್ಟರಲ್ಲಿ ಧಾರವಾಡ ನಗರದ ತುಂಬೆಲ್ಲ—ಅದೇಕೆ ಸಾಮಾನ್ಯವಾಗಿ ಕರ್ನಾಟಕದ ಇತ್ತ ಕಡೆಯ ಭಾಗದಲ್ಲೆಲ್ಲ—ಅವರ ಕಾರ್ಯಕ್ರಮಗಳು ಜರುಗತೊಡಗಿದುವು. ಮೊದಲು ಧಾರವಾಡದ **ಶ್ರೀ ಶಾಂತೇಶ ವಾಚನಾಲಯದ** ಪರವಾಗಿ ಎಸ್. ಎಂ. ಬ್ಯಾಂಕಿನ ಅಟ್ಟದಮೇಲೊಂದು ಪ್ರಯೋಗವಾಯಿತು. ಅದರಲ್ಲಿ ತೋರಿಸಿದ ನೈಪುಣ್ಯವು, ಜನರಿಂದ ಉತ್ಸಾಹ, ಮನ್ನಣೆಗಳ ಕಾಣಿಕೆಯನ್ನು ಪಡೆಯಿತು. ಮುಂದೆ ಒಮ್ಮೆ, ಶ್ರೀ. ಕುಲಕರ್ಣಿ ಶ್ರೀನಿವಾಸರು ಶ್ರೀ. ಬೇಂದ್ರೆಯವರಿಗಾಗಿ ಏರ್ಪಡಿಸಿದ ಸಂತೋಷಕೂಟದಲ್ಲಿ, ಇವರ ಕಾರ್ಯಕ್ರಮವಾಗಿ ಸಾಹಿತಿಗಳಿಂದಲೂ ಪ್ರೋತ್ಸಾಹನೆಯನ್ನು ಪಡೆದರು. ಅದೇ ಪ್ರಸಂಗವು ಇನ್ನೊಬ್ಬ ಸಂಗೀತಕಲಾವಿದರಾದ ಶ್ರೀ. ರೂಬೆನ್ನರ ಪರಿಚಯ ಮಾಡಿಕೊಳ್ಳುವ ಸುಯೋಗವಾಗಿ ಸಂಭವಿಸಿತು ಇವರಿಗೆ. ಹೀಗೆಯೆ ಇವರಿಗೆ ಕ್ರಮಕ್ರಮವಾಗಿ ಜನತೆಯಿಂದ ಸನ್ಮಾನ-ಸಹಾನುಭೂತಿಗಳೂ, ಸಾಹಿತಿ-ಸಂಗೀತಗಾರರಿಂದ ಸಹಾಯ-ಸಹಕಾರಗಳೂ ಲಭಿಸಹತ್ತಿದುದರಿಂದ, ಇವರ ಗೆಳೆಯರ ಬಳಗವು ಬೆಳೆಯಹತ್ತಿತು. ಅದರ ಪರಿಣಾಮವಾಗಿ, ಜಾಗೃತ ಕರ್ನಾಟಕದ ಹೊಸಲಕ್ಷಣವಾದ ನಾಡಹಬ್ಬದಲ್ಲಿ ಇವರ ಕಾರ್ಯಕ್ರಮಗಳು ವರುಷ-ವರುಷಕ್ಕೂ ಜರುಗಹತ್ತಿದುವು. ಬಾಗಿಲುಕೋಟೆ, ಗದಗ, ವಿಜಾಪೂರ, ನವಿಲುಗುಂದ, ಕೊಪ್ಪಳ, ಹೊಸಪೇಟೆ ಹೀಗೆ ಇನ್ನೂ ಅನೇಕ ಸ್ಥಳಗಳಿಗೆ ಇವರು ಹೋಗಿಬಂದು ತಮ್ಮ ಪತಾಕೆಯನ್ನು ಮೆರೆಯಿಸಿದರು. ಇದೇ ಸಮಯದಲ್ಲಿ ನೆರವೇರಿದ ವಿಜಯನಗರದ ಸಾಮ್ರಾಜ್ಯ ಸ್ಮಾರಕೋತ್ಸವದ ಸಮಾರಂಭದಲ್ಲಿ ಇವರದೊಂದು ಚಿಕ್ಕ ಕಾರ್ಯಕ್ರಮವಾಯಿತು.

ಇದೆಲ್ಲವನ್ನೂ ಕೇಳುತ್ತಿದ್ದ ನನಗೆ ಒಮ್ಮೆಲೆ ಒಂದು ವಿಚಾರವು ಹೊಳೆಯಿತು: 'ನಮ್ಮಲ್ಲಿಯ ಜನರು ಯಾವುದಾದರೊಂದು ಕಲೆಯನ್ನು ಅರಿತಿದ್ದರೆ, ಅದನ್ನು ಕಟ್ಟಿಕೊಂಡು ಅಲ್ಲಿಯೆ ಸುತ್ತುಮುತ್ತಲೂ ಸುತ್ತಾಡುವರೇ ಹೊರತು ಹೊರಗೆ ಕಾಲಿಟ್ಟು ಬೇರೆ ಪ್ರಾಂತಗಳಲ್ಲಿ, ಬೇರೆ ನಾಡುಗಳಲ್ಲಿ ಕನ್ನಡದ ಹಿರಿಮೆಯನ್ನು ಯಾಕೆ ತಿಳಿಸುವುದಿಲ್ಲವೋ' ಎಂಬುದೇ ಆ ವಿಚಾರ. ಆ ವಿಚಾರಭರದಲ್ಲಿಯೆ ಅವರನ್ನು, ಅದೇ ನಿಟ್ಟಿನಲ್ಲಿ ಒಂದು ಪ್ರಶ್ನೆಯನ್ನು ಕೇಳಿಬಿಟ್ಟೆ:

"ನೀವು ಕರ್ನಾಟಕದಿಂದ ಹೊರಗೆ ಯಾಕೆ ಹೋಗಿಲ್ಲ—ನಿಮ್ಮ ಕೊಳಲಿನೊಂದಿಗೆ?" ನನ್ನ ಮಾತಿಗೆ ಉತ್ತರರೂಪವಾಗಿ ಶ್ರೀ. ಹೊಂಬಳರು ಹೇಳಿದುದು ಹೀಗೆ:

"ನಾನೂ ಈಗ ಅದನ್ನೇ ಹೇಳಬೇಕೆಂದು ಮಾಡಿದ್ದೆ. ಇಲ್ಲಿಯೆ ನನಗೆ ತಮಗೆ ಬಂದ ಸಂಬಂಧದ ಜೀವನವು ಪ್ರಾರಂಭವಾಯಿತೆನ್ನಬಹುದು. ಅಲ್ಲಿ ನೀವು ನನಗೆ ಮಾಡಿದ ಸಹಾಯವನ್ನು ನಾನು ಮರೆಯಲಾರೆ!" ಎಂದು ಅವರು ನುಡಿದರು. ನನಗೆ ಅದೊಂದು ವಿಚಿತ್ರದ ಅನುಭವ. ಏನೋ ವಿಚಾರ ಬಂದು ಏನನ್ನೊ ಕೇಳಬೇಕೆಂದರೆ, ಅದು ನನ್ನ ಮೈಮೇಲೆಯೆ ಹೊರಳಿತು. ಗತಿಸಿದ ಇಸವಿಯಲ್ಲಿ ನಾನು ಮುಂಬಯಿಯಲ್ಲಿದ್ದಾಗ, ಶ್ರೀ. ಹೊಂಬಳ ಅವರಿಗೆ, ಬಾಂಬೆ ವ್ಹೆಟರನರಿ ಕಾಲೇಜಿನ ಮೊನ್ನ ಹಬ್ಬಕ್ಕಾಗಿ ಔತನ

ಂದಿತ್ತು. ಆಗ ಅವರು ಅಲ್ಲಿಗೆ ಆಗಮಿಸಿದವರು—ಏನೋ ಸಹಜ ವಾಗಿ ನಮ್ಮ ನಿವಾಸಸ್ಥಾನಕ್ಕೆ ಬಂದರಂತೆ. ಅದೇ ನನ್ನ ಅವರ ಮೊದಲನೆಯ ಭೆಟ್ಟಿ. ಆ ಮೊದಲನೆಯ ಭೆಟ್ಟಿಯಲ್ಲಿಯೆ ಅದೇಕೋ, ಶ್ರೀ. ಹೊಂಬಳರವರ ಬಗೆಗೆ ನನ್ನಲ್ಲಿ ಒಂದು ವಿಧದ ಆತ್ಮೀಯತೆ ತಲೆದೋರಿತು. ಆ ಬಗೆಯ ಆತ್ಮೀಯತೆ ತಲೆದೋರುವಂತೆ ಮಾಡಿದುದು “ಹೊಂಬಳ” ಎಂಬ ಅಡ್ಡಹೆಸರೂ ಇರಬಹುದು. ಅವರ ಅಡ್ಡಹೆಸರು ಹೊಂಬಳ; ನಮ್ಮ ಊರು ಹೊಂಬಳ. ಇದೊಂದು ಭಾವನಾಸಂಬಂಧವೆ ಅಂದು ಉದಿಸಿ ಬೆಳೆದು, ಸ್ನೇಹದಲ್ಲಿ ಪರಿಣಮಿಸಿ ಇಂದಿನವರೆಗೆ ನಿಂತುಬಿಟ್ಟಿದೆ. ಅದೇ ಕಾಲಕ್ಕೆ ನಾವೆಲ್ಲರೂ ಮುಂಬಯಿಯ ರೇಡಿಯೋದಲ್ಲಿಯೂ, ಕರ್ನಾಟಕ ಸಂಘದಲ್ಲಿಯೂ ಒಂದೆರಡು ಖಾಸಗೀ ಸ್ಥಳಗಳಲ್ಲಿಯೂ, ಅವರ ಕಾರ್ಯಕ್ರಮಗಳನ್ನು ಮಾಡಿಸಿದೆವು. ತಿರುಗಿ ಊರಿಗೆ ಹೊರಟ ದಾರಿಯಲ್ಲಿ ಪುಣೆಯವರೆಗೆ ಅವರನ್ನು ಹಿಂಬಾಲಿಸಿ ಹೋಗಿ, ಅದೇ ಕಾಲಕ್ಕೆ ಜರುಗಿದ ಪುಣೆಯ ಕರ್ನಾಟಕ ಸಂಘದ ವಾರ್ಷಿಕೋತ್ಸವದಲ್ಲಿ ಕೂಡ ಅವರ ಕಾರ್ಯಕ್ರಮವಾಗುವಂತೆ ಏರ್ಪಡಿಸಲಾಯಿತು. ಅಲ್ಲಿ ಅವರ ವಾದನದ ಸಂಗಡ ಹಾರ್ಮೋನಿಯಂನ ಪ್ರುತಿ ಹಿಡಿದವನು ನಾನೇ.

ಈ ಪ್ರಕಾರವಾಗಿ ಮುಂಬಯಿ ಪ್ರಾಂತದ ಉತ್ತರದಭಾಗದಲ್ಲೆಲ್ಲ ಅವರು ತಿರುಗಾಡಿ ಬಂದು, ಸಾತಾರಾ ಬೆಳಗಾಂವಿ ಮೊದಲಾದ ನಗರಗಳಲ್ಲಿ ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದುದರಿಂದ, ಅವರಿಗೆ ಆದ ದೊಡ್ಡ ಲಾಭವೆಂದರೆ: ಪ್ರಯಾಣಕಾಲದಲ್ಲಿ ಅವರು ಗಳಿಸಿದ ವಿವಿಧ ಅನುಭವಗಳು. ಬೇರೆ ಬೇರೆ ಭಾಷೆಯ ಸಂಗೀತದ ಅಭಿರುಚಿ, ಬೇರೆ ಬೇರೆ ಭಾಗದ ಜನರ ಸೇರಿಕೆ-ಮೆಚ್ಚುಗೆಗಳು, ಬೇರೆ ಬೇರೆ ತರದ ಸಂಗೀತದ ಮಾದರಿಗಳು ಇವುಗಳನ್ನೆಲ್ಲ ತಿಳಿದು ಕೊಳ್ಳುವ ಸಂಧಿ ಈ ಪ್ರವಾಸದಲ್ಲಿ ಅವರಿಗೆ ದೊರೆಯಿತು. ಅಂತೆಯೆ ಅವರು ಅಲ್ಲಿಂದ ಮರಳಿ ಬಂದೊಡನೆ ಮತ್ತೆ ಇಲ್ಲಿ ನಹ ಅದೇ ಉದ್ಯೋಗಕ್ಕೆ ತೊಡಗಿದರು. “ಇನ್ನುಮುಂದೆ ಹೆಚ್ಚು ಹೆಚ್ಚು ರೂಢಿ ಮಾಡಿಕೊಳ್ಳಬೇಕು, ಜನರಲ್ಲಿ ಗಳಿಸಿಕೊಂಡ ಹೆಸರನ್ನು ಕಾಯ್ದುಕೊಳ್ಳಬೇಕಾದರೆ—ನನ್ನ ಅಭ್ಯಾಸವನ್ನು ಹೆಚ್ಚು ಮಾಡಿ ಕೊಳ್ಳಬೇಕು” ಎಂಬ ಅರಿವು ಅವರಿಗುಂಟಾಗಿ, ಅವರು ಕೆಲಕಾಲ ಹಾಗೆ ಮಾಡಹತ್ತಿದರು. ಅದರೂ ಆಗಾಗ ಒಂದೆರಡು ಪ್ರಸಂಗಗಳಲ್ಲಿ ಭಾಗವಹಿಸಬೇಕಾದ ಸಂದರ್ಭ ಬಂದೆಬರುತ್ತಿದ್ದುವು.

ಇದೇ ಸಮಯದಲ್ಲಿ ಇವರು, ವಿರಜಿಯ ಸಂಸ್ಥಾನಿಕರ ವರ್ಧಂತಿಯ ಕಾಲಕ್ಕೆ,ಲಕ್ಷ್ಮೇಶ್ವರಕ್ಕೆ ಹೋದರು. ಧಾರವಾಡದಲ್ಲಿ ಶ್ರೀರಂಗರು ಬರೆದ “ನಾಗರಿಕತಾ ವಿಕಾಸ” ಎಂಬ ಮೂಕ-ದೃಶ್ಯಕ್ಕೆ ಸಂಗೀತದ ಜೋಡಣೆಯನ್ನು ಮಾಡಿ ಆ ಕಾರ್ಯಕ್ರಮವನ್ನು ರಂಜಕವಾಗಿ ಮಾಡಿ ತೋರಿಸಿದವರು ಇವರೇ.

“ಹೀಗೆ ಮತ್ತೆ ಅಭ್ಯಾಸದಲ್ಲಿ ತೊಡಗಿದ ನಿಮಗೆ ಆಕಸ್ಮಿಕವಾಗಿ ಈ ಯುರೋಪಯಾತ್ರೆಯ ಸಂಧಿಯು ಹೇಗೆ ದೊರೆಯಿತು?” ಎಂದು ನಾನು ಕೇಳಿದೆ:

“ಅದೂ ಒಂದು ನೀವು ನುಡಿದಂತೆ ಆಕಸ್ಮಿಕ ಘಟನೆಯೆ” ಎಂದರು ಅವರು. “ಒಮ್ಮೆ ನಾನು ಶ್ರೀಮನ್ಮಹಾರಾಜರವರ ವರ್ಧಂತಿಯ ಕಾಲಕ್ಕೆ ಮೈಸೂರಿಗೆ ಹೋಗಿದ್ದೆ. ಆಗ ಎಲ್ಲರೂ ಭಾಗವಹಿಸಿದಂತೆ ನಾನೂ ಕೊಳಲನ್ನು ಅಲ್ಲಿ ಬಾಜಿಸಿದೆ— ಕೆಲ ನಿಮಿಷ. ಅದರಲ್ಲಿ ಶ್ರೀ. ಎಂ. ಎಸ್. ಪಾರ್ಥಸಾರಥಿ ಯವರು, ಮುತ್ತಯ್ಯ ಭಾಗವತರು, ವಿಲಾಯತಖಾನರು ಮೊದಲಾದ ವಿದ್ವಾಂಸರು ಭಾಗತೆಗೆದು ಕೊಂಡಿದ್ದರು. ಆಗಿನ ನನ್ನ ‘ತಯ್ಯಾರಿ’ ನೋಡಿ, ಮುತ್ತಯ್ಯ ಭಾಗವತರಲ್ಲಿ ನನ್ನದೊಂದು ಸ್ಪೇಶಲ್ ಪ್ರೋಗ್ರಾಮನ್ನು ಏರ್ಪಡಿಸಿದರು. ಮೈಸೂರಲ್ಲಿ. ಅದುವೆ ನನಗೆ ಪಡುವಣದಲ್ಲಿ ಪ್ರವಾಸಮಾಡಿ ಬರಲು ಅವಕಾಶವನ್ನು ಕಲ್ಪಿಸಿಕೊಟ್ಟ ಸನ್ನಿವೇಶ ಎಂದು ಹೇಳಬಹುದು.” ಎಂದವರೇ ಅವರು ತಮ್ಮ ಯುರೋಪ ಯಾತ್ರೆಯ ವಿಷಯವನ್ನು ಸಾದ್ಯಂತವಾಗಿ ಹೇಳಿದರು:



ಶ್ರೀ. ಹೊಂಬಳರವರೊಂದಿಗೆ ಹೋಗಿದ್ದ ಕನ್ನಡ ಸಂಗೀತಗಾರರ ವಿವಿಧ ವಾದ್ಯಗಳ ಸಮ್ಮಿಶ್ರ ಸಂಗೀತವು, ಇಟಲಿಯಲ್ಲಿ ಪ್ರೇಕ್ಷಕರೆದುರು ನಡೆದಿದೆ.

“ಮೊನ್ನೆಯ ಅಕ್ಟೋಬರ್ ತಿಂಗಳಲ್ಲಿ ಮೈಸೂರ ಶ್ರೀಮದ್ಯುವ-ರಾಜರು ತಮ್ಮ ಪರಿವಾರದೊಂದಿಗೆ ಯುರೋಪ-ಅಮೇರಿಕೆಗಳ ಪ್ರವಾಸಕ್ಕೆಂದು ಹೊರಟರಷ್ಟೆ. ಆ ಕಾಲಕ್ಕೆ ಕನ್ನಡ ಸಂಗೀತ-ಗಾರರ ಕೂಟವೊಂದನ್ನು ಕೂಡಿಸಿಕೊಂಡು ಹೋಗಬೇಕೆಂದು ಅವರ ಮನಸ್ಸಿನಲ್ಲಿ ಬಂದಿತಂತೆ. ಅದರ ಪರಿಣಾಮವಾಗಿ ಒಂದು ದಿನ ನನಕಿನಲ್ಲಿ ನನ್ನನ್ನೊಪ್ಪಿಸಲು ಶ್ರೀಮಾನ್ ಹೆಬ್ಬೀಕೆರರವರು ಬಂದರು; ಬಂದವರೇ ನನಗೆ ಆ ಸಮಾಚಾರವನ್ನು ಹೇಳಿದರು. ಅದು ತೀರ ಅನಪೇಕ್ಷಿತವಾದ ಸುದ್ದಿಯಿದ್ದುದರಿಂದ, ನನ್ನನ್ನು ನಾನೇ ನಂಬಲಾಗದಂತಾಯಿತು. ಅಂತೂ ನಾನು ಆ ದಿನ, ಹೊರ

ಡುವ ಸಿದ್ಧತೆಯನ್ನು ನಡೆಯಿಸಿದೆ. ನನ್ನ ಕಡೆಯಿಂದ ಪಾಸ್‌ಪೋರ್ಟಿಗಾಗಿ ಕೊಂಚ ವಿಲಂಬವಾದ ಕಾರಣ, ಅವರು ಕುಕ್ ಕಂಪನಿಯವರಿಗೆ ಹೇಳಿಟ್ಟು ಮುಂದೆ ಸಾಗಿದ್ದರು. ಆಗಿನ ಕಾಲದ ನನ್ನ ಮನಃಸ್ಥಿತಿಯನ್ನು ನೀವು ಅಲ್ಲಿಯೆ ಇದ್ದುದರಿಂದ ಚೆನ್ನಾಗಿ ಬಲ್ಲಿರಿ. ಹೋಗುವ ಉತ್ಕಂಠೆಯಾದರೂ ಕ್ಷಣಕ್ಷಣಕ್ಕೆ ಬಲಿಯ ಹತ್ತಿತ್ತು. ಆದರೆ ಕರೆದುಕೊಂಡು ಹೋಗುವವರೇ ಮುಂದೆ ನಡೆದದ್ದರಿಂದ, ಏನೋ ಒಂದು ಬಗೆಯ ಅಧೈರ್ಯ. ಅಂತಹ ಪರಿಸ್ಥಿತಿಯಲ್ಲಿಯೆ ಅಂತೂ, ಅದೆಲ್ಲದರ ಪರಿಚಯವಿಲ್ಲದ ನಾನು ಒಮ್ಮೆ ಪ್ರವಾಸದ ಎಲ್ಲ ಸಿದ್ಧತೆಯನ್ನು ಮಾಡಿ, ಧೈರ್ಯದಿಂದ ಒಬ್ಬನೇ ಹೊರಡಬೇಕಾಯಿತು....."

"ಹಾಗಾದರೆ ನಿಮಗೆ ಹಡಗಿನಲ್ಲಿ ಒಬ್ಬರಿಗೇ ದಿಕ್ಕು ತೋಚ ದಂತಾಗಿರಬಹುದು!" ಎಂದೆ ನಾನು. "ಕೇಳುವುದೇನು? ಅಲ್ಲಿ ಶಾಕಾಹಾರಿಯೆಂದರೆ ನಾನೇ ಒಬ್ಬ. ಆದರಲ್ಲಿ ಎಲ್ಲ ಬಗೆಯಿಂದಲೂ ಹೊಸಬ. ಆದರೂ ಅವರೆಲ್ಲರಿಗಿಂತ ಒಂದು ವಿಷಯದಲ್ಲಿ ನಾನು ಹೆಚ್ಚಿನಾತನಾಗಿದ್ದೆ. ಅದೆಂದರೆ ನನಗೆ ಸಮುದ್ರಯಾನದ ತೊಂದರೆಯು ವಿಶೇಷವಾಗಲಿಲ್ಲ. ಚಿಕ್ಕತನದಲ್ಲಿ ವ್ಯಾಯಾಮವನ್ನು ತೆಗೆದುಕೊಂಡು, ನೀಳವಾದ ಮೈಕಟ್ಟನ್ನೂ, ಸುದೃಢವಾದ ಶರೀರಸಂಪತ್ತನ್ನೂ ಗಳಿಸಿಕೊಂಡುದಕ್ಕಾಗಿ ಆಗ ನನ್ನ ಬೆನ್ನನ್ನು ನಾನೇ ಚಪ್ಪರಿಸಿಕೊಂಡೆ. ಆದರೆ ಆ ಉದ್ದ ಈ ಉದ್ದಕ್ಕೆ ಒಬ್ಬನೇ..! ಆದರೂ ಹಾಗೆ ಹೀಗೆ ಮಾಡಿ ಒಬ್ಬೊಬ್ಬರ ಮೋರೆಯ ಗುರುತಿನ ಮೇಲಿಂದ ಕೊಂಚ ಹರಟೆ ಹಚ್ಚಿದೆ. ಹರಟೆಗೆ ಬೇಸರುಬಂದಾಗ ನನ್ನ ಮುರಲಿಯಂತೂ ಇದ್ದೇ ಇದ್ದಿತು."

"ಹಾಗಾದರೆ ಮುಂದೆ ಯುವರಾಜರು ನಿಮ್ಮನ್ನು ಎಲ್ಲಿ ಕೂಡಿದರು?" ಎಂದು ಕೇಳಿದೆ ನಾನು.

"ಅವರ ನಮ್ಮ ಸಮ್ಮಿಲನವು ರೋಮದಲ್ಲಾಯಿತು. ಒಂದು ಸಂಗತಿಯನ್ನು ಮಾತ್ರ ನಾನು ಎಂದಿಗೂ ಮರೆಯಲಾರೆ. ಅದೆಂದರೆ ನನ್ನ-ಅದೇಕೆ-ತಮ್ಮ ಎಲ್ಲ ಸಂಗಡಿಗರ ವಿಷಯದಲ್ಲಿ ಶ್ರೀಮದ್ಯುವರಾಜರವರು ತೋರಿಸುತ್ತಿರುವ ಆತ್ಮೀಯತೆ. ಎಲ್ಲೆಡೆಗಳಲ್ಲಿಯೂ, ನನಗೆ ತೊಂದರೆಯಾಗಬಾರದೆಂದು ಸಕಲ ವ್ಯವಸ್ಥೆಯನ್ನೂ ಮಾಡಿಟ್ಟು ಅವರು ಮುಂದೆ ಸಾಗಿದ್ದರು. ನಾವು ಪೋರ್ಟಸೈಡ್ ದಾಟಿದೆವೆಂದರೆ ಇಂಗ್ಲೀಷ್ ಭಾಷೆಯು ದುರ್ಲಭವಾಗುವುದು. ಅಲ್ಲಿ ಆಗುವ ಭಾರತೀಯನ ಬವಣೆಯನ್ನು ಬಣ್ಣಿಸಲಳವಲ್ಲ. ಆದರೂ ಶ್ರೀಮದ್ಯುವರಾಜರವರು ಕುಕ್ ಕಂಪನಿಯ ನೌಕರರಿಗೆ ಅಲ್ಲಲ್ಲಿ ಹೇಳಿ ಹೋಗಿ, ಕೊನೆಗೆ ಮಾರ್ಸೆಯಲ್ಲಿ ನಾನಿದ್ದಾಗ ಒಂದು ತಂತಿಯನ್ನು ಕಳಿಸಿ, ನನ್ನನ್ನು ಕರೆಯಿಸಿಕೊಂಡರು. ಆದುದರಿಂದಲೇ ನಾನು ಸುಸೂತ್ರ ಪಾರಾದೆನು..ಅವರನ್ನು ಸುಖರೂಪದಿಂದ ಕೂಡಿದೆನು.

ಯುವರಾಜರನ್ನು ಕಂಡೊಡನೆ ನನಗೆ ಹಿಡಿಸಲಾರದಷ್ಟು ಆನಂದವಾಯಿತು. ಕನ್ನಡದಲ್ಲಿ ಮಾತುಗಳನ್ನಾಡದೆ ಎಷ್ಟೋ ದಿನಗಳಾದಂತೆನಿಸಿದ ನನಗೆ, ಆ ದಿನ ಒಂದು ಹಬ್ಬದಂತಾಯಿತು..ಮುಂದೆ ನಾವು ಎಲ್ಲರೂ ಕೂಡಿಕೊಂಡು ಮಿಲಾನ, ಲೂಸರ್ನ್, ಫ್ಲಾರೆನ್ಸ್ ನಗರಗಳನ್ನು ಕಂಡು, ಮುಂದೆ ಪಾರಿಸಕ್ಕೆ ತೆರಳಿದೆವು. ಎಲ್ಲೆಲ್ಲಿ ಹೋದರೂ, ಸಭ್ಯಗೃಹಸ್ಥರ ಇಲ್ಲವೆ ಪ್ರತಿಷ್ಠಿತರ ಸಂಗಡಗಳಲ್ಲಿ ನಮ್ಮ ಸಂಗೀತಮಂಡಲದ ಕಾರ್ಯಕ್ರಮಗಳಾಗುತ್ತಿದ್ದುವು. ನಾವಾದರೂ ಅಲ್ಲಿಯವರ ಔತನಗಳ ಮೇರೆಗೆ, ಅವರ ಸಂಗೀತ ಕಾರ್ಯಕ್ರಮಗಳನ್ನು ನೋಡಲು ಹೋಗುತ್ತಿದ್ದೆವು.

ನಮ್ಮ ಪ್ರವಾಸಸಿದ್ಧತೆಯೇನೋ ಯುರೋಪು-ಅಮೇರಿಕೆಗಳನ್ನು ಸುತ್ತಾಡಿಕೊಂಡು ಬರುವುದೆಂದಿತ್ತು. ಆದರೆ ಪಾರಿಸದಲ್ಲಿ ಹನ್ನೊಂದು ದಿನಗಳನ್ನು ಕಳೆಯುವುದರಲ್ಲಿಯೆ ಯುದ್ಧವು ಪ್ರಾರಂಭವಾಯಿತು. ಆದುದರಿಂದಲೆ ನಾವೆಲ್ಲ ಹೆದರಿದೆವು; ನಮ್ಮ ಮುಂದಿನ ಪಯಣವನ್ನು ಗಡಿಬಿಡಿಯಿಂದ ಮುಗಿಸಿಕೊಂಡು, **ಲಂಡನ್** ನಗರವನ್ನು ಸೇರಿದೆವು."

"ಹಾಗಾದರೆ ಪ್ರತ್ಯಕ್ಷವಾಗಿ ನಿಮಗೆ ಯುದ್ಧದ ವಾತಾವರಣವನ್ನು ನೋಡಲು ಸಿಕ್ಕಿತೆನ್ನಬಹುದು!" ಎಂದು ನಾನು ಕೇಳಿದೆ.

"ಹೌದು, ಲಂಡನ್ನಿನಲ್ಲಿದ್ದಾಗ ನಾವು ನಿಜವಾಗಿಯೂ ಎಲ್ಲ ಬಗೆಯ ಯುದ್ಧವಿಷಯಕ ಸಂಗತಿಗಳನ್ನು ಕಣ್ಣಾರೆ ಕಂಡುದಲ್ಲದೆ, ಅನೇಕ ಬಗೆಯ ಅನುಭವಗಳನ್ನು ಸಹ ಪಡೆದೆವು. ಅಲ್ಲಿಯೆ ನಮಗೆ ಮುಖವಾಡ (Gas Mask) ಗಳನ್ನು ತೆಗೆದುಕೊಳ್ಳಬೇಕಾಯಿತು. ಜನರ ಜಾಗ್ರತೆ, ಬಾಂಬಿನ ಮಳೆಯಿಂದ ಕಾಪಾಡಿಕೊಳ್ಳಲು ಮಾಡಿದ ನೆಲಮನೆ, ಉಸುಕಿನ ಚೀಲಗಳ ಮನೆ, ಸ್ವಯಂಸೇವಕರ ತಂಡಗಳು ಹಾಗೂ ಜನರೆಲ್ಲರ ಸಂಪೂರ್ಣ ಸಿದ್ಧತೆಗಳು ಇವೆಲ್ಲವೂ ಹೃದಯಂಗಮವೆನಿಸುವಂತಹ ಸಂಗತಿಗಳು. ಅಲ್ಲಿ ನಾವು ೨-೩ ದಿವಸ ತಡೆಯಬೇಕಾಯಿತು. ಮುಂದೆ ಯುದ್ಧನಿಲ್ಲುವ ಸಂದರ್ಭಗಳು ಒದಗುವ ಲಕ್ಷಣವೇನೂ ತೋರದ್ದರಿಂದ, ನಮ್ಮಲ್ಲಿಯ ಕೆಲವು ಜನರು ಮನೆಗೆ ಹೋಗಿ ಸುರಕ್ಷಿತವಾಗಿರಬೇಕೆಂದು ಕಳವಳಿಸಹತ್ತಿದರು. ಅದಕ್ಕೆಂತಲೇ ಶ್ರೀಮದ್ಯುವರಾಜರವರು, ಕೆಲವು ಜನರನ್ನು ವಿಮಾನಮಾರ್ಗದಿಂದಲೂ, ಅಲ್ಲಿ ಅವಕಾಶ ಸಾಕಷ್ಟು ಸಿಕ್ಕದುದರಿಂದ ಇನ್ನು ಕೆಲವರನ್ನು ಹಡಗಿನ ಮಾರ್ಗದಿಂದಲೂ, ಮರಳಿ ಭಾರತಕ್ಕೆ ಕಳಿಸುವ ಏರ್ಪಾಡನ್ನು ಮಾಡಿದರು..ನಾವು ಜಿನೇವಾ, ಪಾರಿಸಗಳ ಮೇಲಿಂದ, ಪಾಂಪಿ, ನೇಪಲ್ಸ್‌ಗಳನ್ನು ನೋಡಿಕೊಂಡು, ಇಟಾಲಿಯನ್ ಬೋಟಿನಲ್ಲಿ ಬಂದು ಕರಾಚಿಯನ್ನು ಸೇರಿದೆವು."

"ಹಾಗಾದರೆ ಕಲೆಯ ದೃಷ್ಟಿಯಿಂದ ನಿಮಗೆ ಅಲ್ಲಿಂದ ಕಲಿತುಕೊಳ್ಳುವಂತಹದೇನೂ ದೊರೆತಿರಲಿಕ್ಕಿಲ್ಲ!" ಎಂದು ಅನುಮಾನಿಸುತ್ತ ನಾನು ಕೇಳಿದೆ.

"ಅದೇಕೆ? ಯುದ್ಧವು ಪ್ರಾರಂಭವಾಗುವುದಕ್ಕಿಂತ ಮೊದಲು ಅನೇಕ ನಾಟಕ, ಸಿನಮಾ, ಆಪೆರಾ ಮುಂತಾದ ಪ್ರಯೋಗಗಳನ್ನು ನೋಡಹೋಗಿದ್ದೆವು. ಹಂಗೇರಿಯನ್‌ಮ್ಯೂಸಿಕ, ಇಟಾಲಿಯನರ ಫ್ರೆಂಚರ ಹಾಡುಗಾರಿಕೆ, ಕುಣಿತ, ವಿವಿಧ ವಾದ್ಯಗಳು ಇವನ್ನೆಲ್ಲವನ್ನೂ ನೋಡಿ ಕಲಿತುಕೊಳ್ಳಲು ನಮಗೆ ಸ್ವತಃ ಶ್ರೀಮದ್ಯುವರಾಜರವರೇ ಸಮಯಗಳನ್ನು ಒದವಿಸಿಕೊಡುತ್ತಿದ್ದರು. ನಾನು ಅದೇ ಕಾಲಕ್ಕೆ ಬೇರೆ ಬೇರೆ ಬಗೆಯ ವೇಷ-ಭೂಷಣ, ಮಾತುಗಾರಿಕೆ, ರಂಗಶೃಂಗಾರದ ಸಲಕರಣೆಗಳು, ವಾದ್ಯಗಳನ್ನು ಮಾಡುವ ಉಪಕರಣಗಳು ಇವುಗಳೆಗೆಲ್ಲ ಆವಶ್ಯಕ

ವೆನಿಸುವ ಅನೇಕ ಸಂಗತಿಗಳನ್ನು ಕಲಿಹಾಕಿಕೊಂಡು ಬಂದೆ. ಇದೆಲ್ಲಕ್ಕೂ, ನನಗೂ ಉಳಿದವರೆಲ್ಲರಿಗೂ ಯುವರಾಜರವರ ಉತ್ತೇಜನ ದೊರೆಯಿತೆಂದೇ ಅನುಕೂಲವಾಯಿತು.

“ಹಾಗಾದರೆ ನಿಮ್ಮ ಸಂಗಡ ರಾಜಮನೆತನದವರು ಎಲ್ಲ ಕಡೆಗೆ ಕೂಡಿಯೆ ಇರುತ್ತಿದ್ದರೇ?” ಎಂದು ಕೇಳಿದೆ ನಾನು.

“ಹೌದು, ನಾವೆಲ್ಲರೂ ಒಂದೇ ಕುಟುಂಬದ ಜನರಂತೆ ಆ ಪ್ರವಾಸದಲ್ಲಿ ಹಾಯಾಗಿ ಇದ್ದು ಬಂದೆವು. ಶ್ರೀಮದ್ಯುವರಾಜರ ನಗೆಯಾಟದ ಸ್ವಭಾವವಂತೂ ನಮ್ಮೆಲ್ಲರನ್ನು ಬೆರಗುಗೊಳಿಸಿತ್ತು. ಒಮ್ಮೆ ಲಂಡನ್ ನಗರದಲ್ಲಿಯ ಒಂದು ಹೊಟೇಲಿನಲ್ಲಿ ಇಲಿಯು ಬಂದಾಗ ಮಾಡಿದ ನಮ್ಮ ಕೋಲಾಹಲವೂ, ಅದರಿಂದ ಉದ್ಭವಿಸಿದ ನಗೆಯೂ, ತುಂಬ ಮೋಜನ್ನುಂಟುಮಾಡಿತು.”

“ಸರಿ! ಪಾಶ್ಚಿಮಾತ್ಯಜನರಿಂದ ನೀವು ಹೆಚ್ಚಿನದೇನು ಕಲಿತುಕೊಂಡು ಬಂದಿರಿ?” ಎಂದೆ ನಾನು. ಅದಕ್ಕೆ ಅವರೆಂದರು:

“ಒಂದೆಂದರೆ ಅವರ ಓದಣ ಹಾಗೂ ನಿಯಮಿತತನ. ಇನ್ನೊಂದೆಂದರೆ ಅವರ ಅವರ್ಣನೀಯವಾದ ಸಾಂಘಿಕಜೀವನ ಪ್ರತಿಯೊಂದು ವಿಷಯದಲ್ಲಿಯೂ ಅಚ್ಚುಕಟ್ಟಾಗಿ ಕೆಲಸ ಮಾಡುವುದರಲ್ಲಿ ಅವರ ಕೈ ಮೇಲು. ಸಂಗೀತದಲ್ಲಿ ಸಹ ನಮ್ಮಲ್ಲಿಯಂತೆ ವ್ಯೆಯಕ್ತಿಕವಾದ ಪ್ರಯತ್ನಕ್ಕೆ ಅಲ್ಲಿ ಮನ್ನಣೆ ಇರದೆ, ಸಂಯುಕ್ತ ಸಂಗೀತಕ್ಕೇ ಹೆಚ್ಚು ಸೇರಿಕೆ. ಅದಕ್ಕೆಂತಲೇ ಅಲ್ಲಿ ಆರ್ಕೆಸ್ಟ್ರಾ (Orchestra) ಅಷ್ಟು ಮುಂದುವರಿದಿರುವುದು. ಅವರಲ್ಲಿ ನಾದಕ್ಕಿಂತ (Melody) ಸ್ವರಯೋಜನೆ (Harmony)ಗೆ ಹೆಚ್ಚು ಪ್ರಾಶಸ್ತ್ಯ.'' ಎಂದರು. ಅಲ್ಲಿಂದ ನಾವು ಚಹವನ್ನು ತೀರಿಸಿಕೊಂಡು, ನಮ್ಮ ನಮ್ಮ ಸ್ಥಳಗಳಿಗೆ ಹೊರಟೆವು.

ಶ್ರೀಮಾನ್ ಹೊಂಬಳರು ತರುಣರಿದ್ದಾರೆ; ಉತ್ಸಾಹಿಗಳಿದ್ದಾರೆ. ಇಲ್ಲಿಯವರೆಗೆ ಅವರು ಅಸಂಖ್ಯ ಗೆಳೆಯರನ್ನು ಸಂಪಾದಿಸಿಕೊಂಡು ಸಂಗ್ರಹಿಸಿಕೊಂಡು ಎಷ್ಟೋ ಉತ್ತಮವಾದ ಕಾರ್ಯಗಳನ್ನು ಮಾಡಿದ್ದಾರೆ. ಕರ್ನಾಟಕದಲ್ಲಿಯ ಅನೇಕ ಸ್ವತಂತ್ರೋದ್ಯಮಿಗಳಿಗೆ ತಕ್ಕ ಕಾರ್ಯಕ್ಷೇತ್ರಗಳಿಲ್ಲದಿರುವಂತೆ ಸಂಗೀತಗಾರರಿಗೂ ಇಲ್ಲ. ಆದುದರಿಂದಲೆ ಶ್ರೀ. ಹೊಂಬಳರವರಿಗೆ ಈಗ, ಪುಣೆಯಲ್ಲಿರುವ ಪ್ರಭಾತ ಚಲಚ್ಚಿತ್ರ ಕಂಪನಿಯಲ್ಲಿ ವೇಣುವಾದಕರಾಗಿ ಸೇರಿಕೊಳ್ಳುವ ಸಂದರ್ಭವೊದಗಿದೆ. ಪರಪ್ರಾಂತದಲ್ಲಿ ನಮ್ಮವನೊಬ್ಬ ಮನ್ನಣೆಯ ಸ್ಥಾನದಲ್ಲಿ ಇದ್ದಾನೆಂದು ನಾವು ಹೆಮ್ಮೆ ಪಟ್ಟುಕೊಂಡರೂ, ಆತನ ಜಾಣತನದ ಶ್ರೇಯಸ್ಸೆಲ್ಲ ಇನ್ನೊಂದು ಪ್ರಾಂತದ ಕೀರ್ತಿಯ ಉಡಿಯಲ್ಲಿಯೆ ಬೀಳುವುದನ್ನು ನೆನಸಿಕೊಂಡಾಗ, ಕನ್ನಡದ ಅಭಿಮಾನಿಗಳು ತಲೆಬಾಗಿಸಬೇಕಾಗುವುದು. ಕನ್ನಡ ನಾಡು ಒಂದುಗೂಡಿ, ತನ್ನಲ್ಲಿ ಹುಟ್ಟಿ ಬೆಳೆದ ಪಂಡಿತರನ್ನೂ, ಉದ್ಯಮಶೀಲರನ್ನೂ, ಕಲಾವಿದರನ್ನೂ, ತನ್ನಲ್ಲಿಯೆ ಒಟ್ಟುಗೂಡುವಂತೆ ಮಾಡುವ ಸುಯೋಗವನ್ನು ನಾವೆಂದು ಕಾಣುವೆವೊ! ಅಲ್ಲಿಯವರೆಗೆ ಶ್ರೀ. ಹೊಂಬಳರಂತಹ ಕಲಾವಿದರ ಕೀರ್ತಿ ಕನ್ನಡನಾಡಿಗೆ ಶೋಭೆಯನ್ನು ಒದವಿಸುವಂತಿಲ್ಲ.

ಶ್ರೀ. ಹೊಂಬಳರವರು ಕನ್ನಡದ ತುಂಬ ಅಭಿಮಾನಿಗಳು. ಎಲ್ಲಿ ಹೋದರೂ ತಮ್ಮ ಕನ್ನಡತನವನ್ನು ಕಾಯ್ದುಕೊಳ್ಳುವವರು. ಅವರ ವೇಣುವಾದನದ ಕೀರ್ತಿ ಎಲ್ಲೆಲ್ಲಿಯೂ ಹಬ್ಬಿ, ಕನ್ನಡಕ್ಕೆ ಹೆಮ್ಮೆಯ ಹಬ್ಬವನ್ನು ತರಲಿ!



ಎಲ್ಲರೂ ಯಾಕೆ ಬಳಲುವದಿಲ್ಲ?

ಎಲ್ಲರ ಪ್ರಕೃತಿಯು ಒಂದೇ ಸನನೆ ಇರದ್ದರಿಂದ. ಆದರೂ ಬಿಸಿಲಿನ ತಾಪ, ಅಂಗೈ ಅಂಗಾಲಿನ ಉರಿವು, ಉರಿಯುವ ಉಚ್ಚೆ, ಹುಳಿಡರಿಕೆ, ಮೇಲಿಂದ ಮೇಲೆ ನೀರಡಿಕೆ, ನಿರುತ್ಸಾಹ, ದಣಿವು ಮುಂತಾದ ತೊಂದರೆಗಳು ಮೂಡಿದ ಕೂಡಲೇ ನೀವು ಸಾಕಷ್ಟು ನಿದ್ದೆ ಮಾಡುವದಿಲ್ಲ, ನೀವು ಬಹಳ ಶ್ರಮಪಡುವಿರಿ, ನಿಮ್ಮ ಆಹಾರವು ನಿಯಮಿತವಿಲ್ಲ-ಈ ಕಾರಣಗಳಿಂದಲೂ ಹೊಟ್ಟೆಯಲ್ಲಿ ಉಷ್ಣ ಹವೆಯು ಹೋಗುವದರಿಂದಲೂ ನಿಮ್ಮ ಪಚನೇಂದ್ರಿಯಗಳು ದಣಿದು ಮುಂದವಾಗಿವೆಯೆಂದು ತಿಳಿಯಿರಿ. ಅವಕ್ಕೆ ಮೊದಲಿನಂತೆಯೇ ಕಸುವು ಕೊಡಲಿಕ್ಕೆ **ಪರ್ಲ ಕ್ರಾಷ್ಟೆ**ಯನ್ನು ತೆಗೆದು ಕೊಳ್ಳಹತ್ತಿರಿ. ಮೈಯಲ್ಲಿಯ ಎಲ್ಲ ದಣಿವೂ ನಿರುತ್ಸಾಹವೂ ಕೂಡಲೇ ಬಿಟ್ಟುಹೋಗುವವು. ಶುದ್ಧ ಕಳೆಎದ್ದು ಕೆಂಪು ರಕ್ತ ಹರಿಯಹತ್ತುವದು. ಹೊಟ್ಟೆ ಹರಿಯುವಂತೆ ಹಸಿವೆ ಹತ್ತಿ ಉಂಡದ್ದೆಲ್ಲ ಕರಗಿ ಹೋಗುವದು. ಮೈಯಲ್ಲೆಲ್ಲ ಆನಂದ ಉತ್ಸಾಹ ತುಂಬಿ ಬಿಸಿಲು ಅಂದ ಕೂಡಲೇ ನಗೆ ಬರುವದು.



ಯಿಂದ ಬಿಸಿಲಿನ ಬಳಲಿಕೆ ಆಗದು

ಹೆಂಗುಸರಿಗಾಗಿ ವ್ಯಾಯಾಮಕ್ರಮ

ಪ್ರೊ. ಶ್ರೀ. ಜ. ಬಾಪಟ, ಬಿ. ಪಿಎಚ್. ಸಿ.

★

೨ನೆಯ ಬರಹ

ಹೆಂಗುಸರ ಅನಾರೋಗ್ಯಕ್ಕೆ ಕಾರಣಗಳು

'ಸರಿಯಾದ ಆರೋಗ್ಯ'ವನ್ನು ಸಾಧಿಸುವುದಕ್ಕೆ ಆವಶ್ಯಕವಾದ ಸಾಧನೆಗಳು ಸ್ತ್ರೀ-ಪುರುಷರಿಬ್ಬರಿಗೂ ಸಾಮಾನ್ಯವಾದುವುಗಳಾಗಿರುವುವು; ಎಲ್ಲಿಯೊ ಒಂದೆರಡು ಕಡೆಗಳಲ್ಲಿ ಅಲ್ಪ ಸ್ವಲ್ಪ ಹೆಚ್ಚು ಕಡಿಮೆಯನ್ನು ಮಾಡಿಕೊಳ್ಳಬೇಕಾಗಿ ಬರಬಹುದಿಷ್ಟೆ. ಸ್ತ್ರೀ-ಪುರುಷರಿಬ್ಬರಿಗೂ ಸಾಮಾನ್ಯವಾದ ಆರೋಗ್ಯವಿಚಾರಗಳಾವುವೆಂದರೆ: ದೇಹದ ಒಂದೊಂದು ಅವಯವಗಳ ಸ್ವತಂತ್ರ ವಿಕಾಸ, ಒಂದು ಅವಯವ ಇನ್ನೊಂದಕ್ಕೆ ಪ್ರಮಾಣಬದ್ಧವಾಗಿ ಹೊಂದಿಕೊಂಡಿರುವುದು, ಈ ಪ್ರಮಾಣಬದ್ಧತೆಯ ಮೂಲಕ ಒಪ್ಪಿರೆ



ಹೆಂಗುಸರ ಕೆಳಹೊಟ್ಟೆಯ ಒಳಭಾಗ

ಸ್ಫುಟವಾಗಿ ತೋರುವ ಸರ್ವತೋಮುಖ ಶರೀರಸೌಷ್ಠವ, ದೇಹದ ಗಟ್ಟಿತನ, ಬೆಳವಣಿಗೆ, ಸಾಮರ್ಥ್ಯ ಮೊದಲಾದುವು. ಇವೆಲ್ಲ ಹೊರಮೈಯ ಆರೋಗ್ಯಕ್ಕೆ ಸಂಬಂಧಿಸಿದುವು. ಮನಸ್ಸಿನ ಏಕಾಗ್ರತೆ, ದೇಹದಲ್ಲಿಯ ಪಾಚನ-ಉತ್ಸರ್ಜನ-ಅಭಿಸರಣ-ಶ್ವಸನ-ಸಂಪೂರ್ಣ ನಾಡೀಮಂಡಲ ಮೊದಲಾದ ಬೇರೆ ಬೇರೆ ಸಂಸ್ಥೆಗಳ ಸುವ್ಯವಸ್ಥಿತ ಕಾರಭಾರ ಅಲ್ಲದೆ ಅವುಗಳ ರೋಗರಾಹಿತ್ಯ, ರೋಗಪ್ರತಿಕಾರಕ ಸಾಮರ್ಥ್ಯ ಮೊದಲಾದ ಒಳಮೈಯ ಆರೋಗ್ಯ ವಿಚಾರಗಳೂ ಅದರಲ್ಲಿ ಸಮಾವಿಷ್ಟವಾಗುವುವು. ಈ ಒಳಮೈ-ಹೊರಮೈಗಳು, ಮೇಲೆ ಹೇಳಿದ ಎಲ್ಲಗುಣಲಕ್ಷಣಗಳಿಂದ ಕೂಡಿಕೊಂಡಿದ್ದರೆ ಅಂತಹ ದೇಹವು 'ಸರಿಯಾದ ಆರೋಗ್ಯ'ದಿಂದ ಕೂಡಿದೆಯೆಂದು ಹೇಳಲಿಕ್ಕೆ ಯಾವ ಅಡ್ಡಿಯೂ ಇರದು.

'ಸರಿಯಾದ ಆರೋಗ್ಯ' ಎಂದರೇನೆಂಬುದನ್ನು ಇಲ್ಲಿ ವಿವರಿಸಿ ಆಯಿತು. ಈ ವಿವರಣೆಯಂತೆಯೆ ಸಾಮಾನ್ಯವಾಗಿ ಎಲ್ಲರ ದೇಹಗಳೂ ಇರುತ್ತವೆಂದಲ್ಲ. ಒಂದೊಂದು ದೇಹದಲ್ಲಿಯೂ ಒಂದೊಂದು ಬಗೆಯ ಕುಂದು-ಕೊರತೆ ಇದ್ದೆ ಇರುತ್ತದೆ.

ಸ್ತ್ರೀಯರ ಶಾರೀರಿಕ ಶಿಕ್ಷಣವನ್ನು ಕುರಿತು ವಿಚಾರ ಮಾಡುವಾಗ, ಪ್ರಾಮುಖ್ಯವಾಗಿ ಯಾವ ಒಂದೆರಡು ವಿಷಯಗಳ ಕಡೆಗೆ ಹೆಚ್ಚು ಲಕ್ಷ್ಯಕೊಡಬೇಕಾಗುವುದೋ ಅವೆಲ್ಲವುಗಳಲ್ಲಿ ಕೆಳಹೊಟ್ಟೆಗೆ (ಕಿಬ್ಬೊಟ್ಟೆಗೆ) ಸಂಬಂಧಿಸಿದ ವಿಷಯವು ಪ್ರಾಧಾನ್ಯವಾದುದು. ಇದರ ಆರೋಗ್ಯದ ಬಗೆಗೆ ತುಂಬ ಎಚ್ಚರಿಕೆ ತೆಗೆದುಕೊಳ್ಳಬೇಕಾಗುತ್ತದೆ. ನಾಡೀಮಂಡಲದ ಆರೋಗ್ಯವನ್ನು ಕುರಿತು ಹೆಚ್ಚಿನ ಎಚ್ಚರಿಕೆ ತೆಗೆದುಕೊಳ್ಳುವುದೂ ಮೊದಲಿನದರಷ್ಟೇ ಮಹತ್ವದುದಾಗಿದೆ. ಹೆಂಗುಸಿನ ಮತ್ತು ಗಂಡುಸಿನ ಕೆಳಹೊಟ್ಟೆಯ ಒಳಪೊಳ್ಳಿನ (abdominal cavity) ರಚನೆಯಲ್ಲಿಯೂ ಒಳಗಿನ ಭಾಗಗಳಲ್ಲಿಯೂ ಕೆಲವೊಂದು ಹೆಚ್ಚು-ಕಡಿಮೆಗಳಿವೆ. ಹೆಂಗುಸಿನ ಕೆಳಹೊಟ್ಟೆಯ ಒಳಪೊಳ್ಳಿನಲ್ಲಿ, ಗಂಡುಸಿನ ಕೆಳಹೊಟ್ಟೆಯ ಒಳಪೊಳ್ಳಿನಲ್ಲಿದ್ದಂತೆಯೆ ಸಣ್ಣ ಕರುಳು, ದೊಡ್ಡ ಕರುಳು, ಯಕೃತ್ತು, ಪ್ಲೀಹ, ಮೂತ್ರಪಿಂಡ (ಕಿಡ್ನಿ) ಮೊದಲಾದುವುಗಳಿರುವುವಲ್ಲದೆ, ಗರ್ಭಾಶಯವೆಂಬುದೊಂದು ಹೆಚ್ಚಿನ ಅವಯವವಿರುತ್ತದೆ. ಅದರಂತೆಯೆ ಹೆಂಗುಸಿನ ಕಟಿಪ್ರದೇಶದ ಎಲುವುಗಳ ಆಕಾರವು ಗಂಡುಸಿಗಿಂತ ಬೇರೆ ಬಗೆಯದಾಗಿರುವುದು. ಎಲುವುಗಳ ಹೊಂದಿಕೆಯಿಂದ ಅಲ್ಲಿ ಉಂಟಾಗಿರುವ ತಗ್ಗುತನವು, ಗಂಡುಸಿಗಿಂತ ಹೆಂಗುಸಿನದು ಆಳ ಕಡಮೆಯುಳ್ಳುದಾಗಿರುತ್ತದೆ. ಆದುದರಿಂದ ಆ ಆ ಪ್ರದೇಶಕ್ಕೆ ಆದಷ್ಟು ಹೆಚ್ಚಿಗೆ ಉಪಕಾರವಾಗುವಂತಹದೂ ಅಪಕಾರಕವಾಗದಂತಹದೂ ಆದ ವ್ಯಾಯಾಮಕ್ರಮವನ್ನು ನಾವು ಸ್ತ್ರೀಯರಿಗಾಗಿ ಯೋಜಿಸಿಕೊಡಬೇಕಾಗುವುದು.

ಇನ್ನೊಂದು ಮಾತೆಂದರೆ ಮಧ್ಯಮವರ್ಗದ ಸಮಾಜದಲ್ಲಿ ಗಂಡುಸರಂತೆ ಹೆಂಗುಸರಿಗೂ ಮಲಬದ್ಧತೆ, ಮಂದಾಗ್ನಿ, ಅಪಚನ ಮೊದಲಾದ ರೋಗಗಳು ಸಾಮಾನ್ಯವಾಗಿ ಇರುವುವು. ಇವಲ್ಲದೆ ಹಿಸ್ಟೀರಿಯಾ, ಸೊಂಟದ ನೋವು, ಬಾಣಂತಿಯರಾದ ಮೇಲೆ ಉಂಟಾಗುವ ಪಾಂಡುರೋಗ ಮೊದಲಾದುವುಗಳೂ ಹೆಂಗುಸರನ್ನು ಆವರಿಸಿರುವುದುಂಟು. ಆದುದರಿಂದ, ಈ ಎಲ್ಲ ದೇಹ-ಮನೋವಿಕಾರಗಳಿಂದ ಮುಕ್ತರಾಗುವುದಕ್ಕೆ ಅತ್ಯಂತ ಆವಶ್ಯವಾದ 'ಸರಿಯಾದ ಆರೋಗ್ಯ'ವನ್ನು ಸಾಧಿಸುವ ಬಗೆ ಯಾವುದೆಂಬ ವಿಷಯಕ್ಕೆ ನಾವೀಗ ವಿಮರ್ಶಿಸಿ ವಿಚಾರಿಸಿ ನೋಡೋಣ.



ಗಂಡುಸರ ಕಟಿಪ್ರದೇಶದ ಮೂಳೆಗಳು

ಸಾಮಾನ್ಯವಾಗಿ ನಮ್ಮ ದೇಹವೂ ದೇಹದ ಆಲುಗಾಟಗಳೂ ಎಲುವು ಮತ್ತು ಸ್ನಾಯುಗಳ ಪರಸ್ಪರ ಸಹಕಾರಿತ್ವವನ್ನು ಅವಲಂಬಿಸಿಕೊಂಡಿರುತ್ತವೆ. ದೇಹವನ್ನು ನೇರವಾಗಿ ನಿಂತಿರುವಂತೆ ಮಾಡಲು ಮುಖ್ಯ ಸಹಕಾರಿಯಾದ ಎಲುವುಗಳೆಂದರೆ ಮೇರುದಂಡದ (ಬೆನ್ನಹುರಿಯ) ಕಳಿಗೆಗಳು. ದೇಹದ ಆರೋಗ್ಯ-ಪರಿಸ್ಥಿತಿಯೂ ಈ ಮೇರುದಂಡವನ್ನೇ ಅವಲಂಬಿಸಿಕೊಂಡು ಇರುತ್ತದೆ. ಮೇರುದಂಡದ ವಕ್ರತೆಯು, ಯಾವುದಾದರೊಂದು ದೈಹಿಕವಿಕಾರವನ್ನು ಸಾರಿಹೇಳುವುದೆಂದು ಖಂಡಿತ ತಿಳಿಯಬಹುದು. ಮೇರುದಂಡವನ್ನು ನೇರವಾಗಿರಿಸುವುದರಿಂದ ಸಾಮಾನ್ಯವಾಗಿ ದೇಹಕ್ಕೆ ಎಲ್ಲಬಗೆಯ ಸ್ವಾಸ್ಥ್ಯ ಸಿಕ್ಕುವುದಲ್ಲದೆ, ಎಲ್ಲ ಸ್ನಾಯುಮಂಡಲಗಳೂ ಕಾರ್ಯಕ್ಷಮವಾಗುವುದಕ್ಕೆ ಅನು-ಕೂಲತೆಯುಂಟಾಗುವುದು. ದೇಹದಲ್ಲಿ ಕಂಡುಬರುವ ಜಡತೆಗೂ ಪಚನೇಂದ್ರಿಯದ ವಿಕಾರಗಳಿಗೂ—ಸ್ವಲ್ಪ ಹೆಚ್ಚು ಕಡಿಮೆಯ ಪ್ರಮಾಣದಲ್ಲಿ– ಮೇರುದಂಡದ ವಕ್ರತೆಯೆ ಕಾರಣವಾಗಿರುವುದು. ಮೇರುದಂಡವನ್ನು ನೇರವಾಗಿರಿಸಿಯೆ ತಂತಮ್ಮ ಕೆಲಸಗಳನ್ನು ಮಾಡುತ್ತಿದ್ದರೆ ದೇಹದ ಎಲ್ಲ ವ್ಯವಹಾರಗಳೂ ಸುಯಂತ್ರಿತವಾಗಿ ಸಾಗುವುವು; ಹೀಗೆ ಮಾಡದೆ ಬೆನ್ನಿಗೆ ಡೂಗನ್ನು (ಗೂನು) ತಂದುಕೊಂಡು ವರ್ತಿಸುವುದರಿಂದ, ಮೇರುದಂಡಕ್ಕೆ ಅಸ್ವಾಭಾವಿಕವಾದ ವಕ್ರತೆ ಬಂದು ಅಡಸುವುದಲ್ಲದೆ, ಡೂಗು ಹಾಯಿಸಿ ಕುಳಿತುಕೊಳ್ಳುವುದರಿಂದ ರಕ್ತಾಶಯ ಮತ್ತು ಫುಪ್ಫುಸಗಳ ಮೇಲೆ ಹೆಚ್ಚಿನ ಒತ್ತಾಳಿಕೆಯುಂಟಾಗಿ, ಅವುಗಳ ಕಾರ್ಯಕಾರಿ ಸಾಮರ್ಥ್ಯದ ಮೇಲೂ ತುಂಬ ಅನಿಷ್ಟ ಪರಿಣಾಮಗಳು ಘಟಿಸುವುವು. ಅಲ್ಲದೆ ಸ್ವಾಭಾವಿಕವಾಗಿ ನಡೆದಿರುವ ಉಸಿರಾಟ (ಶ್ವಸನ) ದಲ್ಲಿ ವ್ಯತ್ಯಯ ಬಂದೊದಗಿ, ಆದರಲ್ಲಿಯ ಸಹಜತೆಗೆ ಭಂಗಬರುವುದು. ಆದರಂತೆಯೆ ಹೃದಯದ ಮೇಲೆ ಹೆಚ್ಚಿನ ಭಾರ ಬಿದ್ದಂತಾಗುವುದರಿಂದ ದೇಹದಲ್ಲಿ ಎಲ್ಲೆಲ್ಲಿಯೂ ರಕ್ತವನ್ನು ಹರಿದಾಡಿಸುತ್ತಿರುವ ದೊಡ್ಡ ಧಮನಿ (ಶುದ್ಧರಕ್ತನಾಳ) ಗಳು ಆ ಭಾರದ ದುಷ್ಪರಿಣಾಮವನ್ನು ಭೋಗಿಸುವುವು. ಇದರಿಂದ ರಕ್ತಾಭಿಸರಣದ ಸಹಜಕ್ರಿಯೆಯಲ್ಲಿ, ವ್ಯರ್ಥವಾಗಿ ಇಲ್ಲದ ಅಡೆ-ತಡೆಗಳನ್ನು ಒಡ್ಡಿದಂತಾಗುವುದು.

ಸ್ತ್ರೀಯರು ಎದ್ದುನಿಂತುಕೊಳ್ಳುವ ರೀತಿಯನ್ನು ನಾವು ಪರೀಕ್ಷಿಸಿದರೆ ಹೆಚ್ಚಿನ ಜನರ ನಿಲುವಿನ ರೀತಿ ಆರೋಗ್ಯದೃಷ್ಟಿಯಿಂದ ತಪ್ಪಾದುದಿರುವುದೆಂಬುದು ಕಂಡುಬಾರದೆ ಇರದು. ಆದರೆ ಅವರ ತಪ್ಪು ಅವರಿಗೆಂದೂ ತಿಳಿಯಲಾರದಂತಹದು. ಸುಮಾರು ೧೦೦ ಕ್ಕೆ ಖಂರಷ್ಟು ಹೆಂಗುಸರು ಹೀಗೆ, ಅವ್ಯವಸ್ಥಿತವಾಗಿ ನಿಂತುಕೊಳ್ಳುವುದರಿಂದಲೇ ತಮ್ಮ ಆರೋಗ್ಯವನ್ನು ಕೆಡಿಸಿಕೊಳ್ಳುತ್ತಿರುತ್ತಾರೆ. ಅವ್ಯವಸ್ಥಿತವಾದ ನಿಲುವಿನಿಂದುಂಟಾದ ಪರಿಣಾಮವು ಅವರ ದೇಹದಲ್ಲಿ ಸ್ಪಷ್ಟವಾಗಿ ಕಂಡುಬರುತ್ತಿರುವುದು. ಅಶಾಸ್ತ್ರೀಯವಾಗಿ ನಿಂತುಕೊಳ್ಳುವುದರಿಂದ ಕೆಳಹೊಟ್ಟೆಯ ಒಳಪೊಳ್ಳಿನಲ್ಲಿರುವ ಬೇರೆ ಬೇರೆ ಅವಯವಗಳು ಸ್ಥಾನಚ್ಯುತಿಯನ್ನು ಹೊಂದುವುವಲ್ಲದೆ, ಮುಂದೆ ಕೂಡ ಅವುಹಾಗೆಯೆ ಸ್ಥಾನಚ್ಯುತಸ್ಥಿತಿಯಲ್ಲಿಯೆ ನಿಂತುಬಿಡುವುವು. ಇದರ ಪರಿಣಾಮವಾಗಿ ದೇಹ ನಿರ್ಬಲವಾಗುವುದಲ್ಲದೆ, ಬಗೆಬಗೆಯ ಬೇನೆಗಳಿಗೆ ತಾಯಮನೆಯಾಗುವುದು.

ಅವಯವಗಳ ಸ್ಥಾನಚ್ಯುತಿಯು, ಸಾಮಾನ್ಯವಾಗಿ ಕೆಳಹೊಟ್ಟೆಯ ಒಳಪೊಳ್ಳಿನ ಸ್ವಾಧೀನತೆಯನ್ನೆ ತಪ್ಪಿಸಿಬಿಡುವುದು. ಇದರಿಂದ ಅಜೀರ್ಣ, ಬದ್ಧಕೋಷ್ಠ, ಹೊಟ್ಟೆ-ಕರುಳುಗಳಲ್ಲಿ ಗಾಳಿ ತುಂಬುವುದು, ಮೇದೋವೃದ್ಧಿ ಇವೇ ಮೊದಲಾದ ವಿಕಾರಗಳಿಗೆ ದೇಹದಲ್ಲಿ ಎಡೆ ದೊರೆಯುವುದು; ಆದರಂತೆಯೆ ಯಕೃತು, ಪ್ಲೀಹ, ಮೂತ್ರಪಿಂಡ ಇವುಗಳ ಕಾರ್ಯಕಾರಿಶಕ್ತಿಗೆ ಕೊರತೆಯುಂಟಾಗುವುದು. ಹೀಗಾಗುವುದರ ಮೂಲಕ ದೇಹಾಭ್ಯಂತರದಲ್ಲಿಯೂ ಅಸ್ವಸ್ಥತೆ ತಲೆದೋರಿ, ಮನುಷ್ಯನ ಆರೋಗ್ಯವು ಸ್ವಲ್ಪ ಕಾಲದಲ್ಲಿಯೆ ಕೆಳಮಟ್ಟಕ್ಕಿಳಿಯುವುದು.

ಮೇರುದಂಡದ ವಕ್ರತೆಯು ಜ್ಞಾನತಂತುಮಂಡಲದಲ್ಲಿಯೂ ಆದರ ಮೂಲಕ ಮೆದುಳಿನಲ್ಲಿಯೂ ತುಂಬ ಹಾನಿಕಾರಕವಾದ ವಿಕಾರಗಳನ್ನು ಉಂಟುಮಾಡುತ್ತದೆ. ಜ್ಞಾನತಂತುಮಂಡಲದ ವ್ಯವಸ್ಥೆಯಲ್ಲಿ ವ್ಯತ್ಯಯ ಬಂದೊದಗಿದರೆ, ಆದರಿಂದಾಗುವ ಪರಿಣಾಮವು ಭಯಂಕರವೆನಿಸುವುದು. ಆಗ ಜ್ಞಾನತಂತುಮಂಡಲದ ಕೇಂದ್ರಗಳಲ್ಲಿಯ ಕಾರ್ಯಕಾರಿ ಶಕ್ತಿ ಕಡಿಮೆಯಾಗುವುದಲ್ಲದೆ, ಮನಸ್ಸಿನ ಮೇಲಿನ ಸ್ವಾಧೀನತೆ ತಪ್ಪಿಹೋಗುವುದು. ಇದೆಲ್ಲದರ ಪ್ರತ್ಯಕ್ಷಫಲವು, ಅಂತಹ ಹೆಂಗುಸರ ಬೇರೆ ಬೇರೆ ವ್ಯವಹಾರಗಳಲ್ಲಿ ಸ್ಪಷ್ಟವಾಗಿ ಕಂಡುಬರುವುದು. ಇಂತಹ ಸಂದರ್ಭಗಳಲ್ಲೆಲ್ಲ ಹೆಂಗುಸರು ಉತ್ಸಾಹಹೀನೆಯರೂ ಚಿಂತಾಗ್ರಸ್ತರೂ ಆಗಿರುವುದನ್ನು ನಾವು ನೋಡುವೆವು. ಮನದ ಮೇಲಿನ ಹಿಡಿತ ತಪ್ಪಿ



ಹೆಂಗುಸರ ಕಟಿಪ್ರದೇಶದ ಮೂಳೆಗಳು

ನಮ್ಮಲ್ಲಿಯ ಹೆಣ್ಣುಮಕ್ಕಳು ನಿಂತುಕೊಳ್ಳುವ
ಅಶಾಸ್ತ್ರೀಯ ಪದ್ಧತಿ

ಹೋಗಿರುವುದರಿಂದ ಅವರಿಗೆ ಏಕಾಗ್ರತೆಯೆ ಸಾಧಿಸುವುದಿಲ್ಲ. ಇದೇ ರೀತಿಯ ಬೇರೆ ಪ್ರತ್ಯಕ್ಷ ಫಲಗಳನ್ನೂ ಅವರ ಬದುಕಿನಲ್ಲಿ ನಮಗೆ ಕಾಣಲಿಕ್ಕಾಗುವುದು.

ಪರಿಸ್ಥಿತಿಯು ಹೀಗಿರುವುದರಿಂದ, ಮೇರುದಂಡವನ್ನು ನೇರವಾಗಿ ಇರಿಸಿಕೊಂಡೇ ಎಲ್ಲ ವ್ಯವಹಾರವನ್ನು ನಡೆಯಿಸುವುದರ ಕಡೆಗೆ ನಾವೆಲ್ಲ ಲಕ್ಷ್ಯ ಪೂರಯಿಸಬೇಕಾಗುವುದು. ಮೇರುದಂಡವನ್ನು ನೇರವಾಗಿ ಇರಿಸುವುದರಿಂದ ಸಿಕ್ಕುವ ಇನ್ನೊಂದು ಮಹತ್ತ್ವದ ಲಾಭವೆಂದರೆ, ಶ್ವಸನಸಂಸ್ಥೆಯ ಮೇಲೆ ಉಂಟಾಗುವ ಅದರ ಸುಪರಿಣಾಮವು. ಮೇರುದಂಡವು ಸರಳವಾಗಿರುವುದರಿಂದ, ದೇಹದಲ್ಲಿ ನಡೆಯುವ ಪ್ರತಿಯೊಂದು ಉಸಿರಾಟವು ಸಂಪೂರ್ಣವಾಗಿ, ಎಂದರೆ ಎಲ್ಲೆಲ್ಲಿಯೂ ಯಾವ ಬಗೆಯ ತಡೆ ಇಲ್ಲದೆ ನಡೆಯುವುದು. ಹೀಗೆ ಸಂಪೂರ್ಣವಾಗಿ ನಡೆದ ಉಸಿರಾಟದಿಂದ ದೇಹಕ್ಕೆ ಯಾವಾಗಲೂ ಅವಶ್ಯಕವಾಗಿ ಬೇಕಾಗುವ ಪ್ರಾಣವಾಯು (ಆಕ್ಸಿಜನ್) ವಿನ ಸಂಗ್ರಹವು ತಾನಾಗಿಯೆ ಬೆಳೆಯತೊಡಗುವುದು. ಹೀಗೆ ಸಂಗ್ರಹಗೊಂಡ ಪ್ರಾಣವಾಯುವು ರಕ್ತದ ಶುದ್ಧತೆ-ಕಾರ್ಯಕ್ಷಮತೆಗಳನ್ನು ಬಳೆಯಿಸುವ ಕಾರ್ಯದಲ್ಲಿ ಸಾಕಷ್ಟು ಉಪಯೋಗವಾಗುವುದು.

ಮೇರುದಂಡವನ್ನು ಸರಳವಾಗಿ ಇರಿಸಿಕೊಂಡಿರುವುದರಿಂದ, ಮೇಲೆ ಹೇಳಿದಂತೆ ದೇಹಕ್ಕೆ ತುಂಬ ಹಿತವನ್ನುಂಟುಮಾಡುವ ಹಲವು ಲಾಭಗಳುಂಟು. ಮೇರುದಂಡವು ಹೇಗೆ ದೇಹವನ್ನು ನೇರವಾಗಿ ನಿಲ್ಲಿಸುವುದಕ್ಕೆ ಮುಖ್ಯ ಆಧಾರವಾಗಿ ಇರುವುದೋ, ಹಾಗೆಯೆ ಆ ದೇಹದ ಎಲ್ಲ ಅಂಗಾಂಗಗಳ ಆರೋಗ್ಯಸ್ಥಿತಿಗೂ ಆ ಮೇರುದಂಡವೇ ಆಧಾರವಾಗಿರುವುದೆಂಬ ಸಂಗತಿಯನ್ನು ನಾವು ಮೇಲಿನ ಮಾತುಗಳಿಂದ ಅರಿತುಕೊಳ್ಳಬಹುದಾಗಿದೆ. ಸ್ತ್ರೀಯರಿಗೆ ಅವಶ್ಯಕವಿರುವ ವ್ಯಾಯಾಮಶಿಕ್ಷಣದಲ್ಲಿ ಈ ಮೇರುದಂಡಕ್ಕೆ ಸಂಬಂಧಿಸಿದ ಶಿಕ್ಷಣವೆ ಮುಖ್ಯವಾದುದು. ಹೆಂಗುಸರು ಸಹಜ-ಸ್ಥಿತಿಯಲ್ಲಿ ನಿಲ್ಲತೊಡಗಿದರೆ ಅಥವಾ ಬೆನ್ನಹುರಿಯನ್ನವರು ಸುಸ್ಥಿತಿಯಲ್ಲಿರಿಸುವ ಪ್ರಯತ್ನವನ್ನು ಪ್ರಾರಂಭಿಸಿದರೆ, ಶರೀರದಲ್ಲಿಯ ಬೇರೆ ಬೇರೆ ಸಂಸ್ಥೆಗಳೂ ಮಂಡಲಗಳೂ ತಮ್ಮಿಂದ ತಾವೇ ಸ್ವಾಭಾವಿಕವಾಗಿ ಹೆಚ್ಚು ಹೆಚ್ಚು ಕಾರ್ಯಕ್ಷಮತೆಯನ್ನು ಪಡೆಯುತ್ತ ಹೋಗುತ್ತವೆ. ಮೇರುದಂಡದ ವಿಶೇಷಪರಿಚಯವನ್ನು ಮುಂದಿನ ಲೇಖಾಂಕದಲ್ಲಿ ಇನ್ನೂ ವಿವರವಾಗಿ ಮಾಡಿಕೊಡಬೇಕೆಂದಿದ್ದೇವೆ.

ರಾಜಯೋಗಿ

★

'ಆನಂದಕಂದ'ರ ಐತಿಹಾಸಿಕ ಕಾದಂಬರಿಯ

ಎರಡನೆಯ ಆವೃತ್ತಿ

ಇದೀಗ ಪ್ರಕಟವಾಗಿದೆ. ಬೆಲೆ ೧ ರೂಪಾಯಿ.

ಬೆಳಗಾಂವಿ ಜಿಲ್ಲೆಯ ಹಲವು ಹೈಸ್ಕೂಲುಗಳಲ್ಲಿ ಇದನ್ನು, ಈ ವರ್ಷ ೪ ನೆಯ ತರಗತಿಗೆ ಕನ್ನಡ ಪಠ್ಯಪುಸ್ತಕವೆಂದು ನಿಯಮಿಸಲಾಗಿದೆ.

ಬೆಳಗಾಂವಿಯ ಏಜಂಟರು:—

ಶ್ರೀ. ಪ್ಯಾಟೀ ಶಾಮರಾಯರು
ಕಥಾಕುಂಜ ಕಾರ್ಯಾಲಯ

ಧಾರವಾಡದ ಮಾರಾಟಗಾರರು:—

ಮನೋಹರ ಗ್ರಂಥಭಾಂಡಾರ
ಮೋಟಾರ್ ಸ್ಟ್ಯಾಂಡಿನ ಬಳಿ





ಮನೆಯಲ್ಲಿಯೆ ಹೊಲಿಗೆ

ಹೊಸಬಗೆಯ ಸರಕಿನ ಅಂಗಿ

★

ಹಳಪೇಟೆ ಚಿಂತಾಮಣಿರಾಯರು, ಟಿ. ಸಿ. ಡಿ.

★

ಪೇಟೆಯಲ್ಲಿ ಸಿಕ್ಕುವ, ಬಣ್ಣಬಣ್ಣದ ಮೆರುಗಿನ ಬಟ್ಟೆಯ ಸರಕಿನ ಅಂಗಿಗಳು, ಈ ಕೆಳಗೆ ಬರೆದ ರೀತಿಯಂತೆ ಕತ್ತರಿಸಿ ಹೊಲಿದುವುಗಳಾಗಿರುತ್ತವೆ. ಈ ಅಂಗಿಗಳು ಹೆಚ್ಚು ಜನಪ್ರಿಯವಾಗಿವೆ. ಇದಕ್ಕೆ ತೋಳನ್ನು ಹಚ್ಚಬಹುದು; ಇಲ್ಲವೆ ತೋಳಿನ ಸ್ಥಳದಲ್ಲಿ ಅಗಲವಾದ ಲೇಸನ್ನು ಭುಜದ ಮೇಲೆ ಅಲೆದಾಡುವಂತೆ ಹಚ್ಚಬಹುದು. ಅಂಗಿಯ ಬುಡಕ್ಕೆ ಅಂಗಿಯ ಬಟ್ಟೆಯನ್ನೇ ನೀರಿಗೆ ಮಾಡಿ ಹಚ್ಚಬಹುದು, ಇಲ್ಲವೆ ತೋಳಿಗೆ ಹಚ್ಚುವಂತೆ ಲೇಸನ್ನಾದರೂ ಹಚ್ಚಬಹುದು. ಕೊರಳಿನ ಭಾಗಕ್ಕೆ (ಡ, ಇ ಚಿತ್ರ ನೋಡು). ಒಂದು ಅದೇ ಆಕಾರದ ತುಂಡು ಬಟ್ಟೆಯನ್ನು ಕೊಟ್ಟು ಒಳಕ್ಕೆ ತಿರುವಿಕೊಂಡು, ಮುಂಭಾಗದ (ಡ ಹತ್ತಿರ) ಒಳಬದಿಗೆ ಗುಂಡಿಯ ಮನೆಯಂತಹ ತೂತನ್ನು ಮಾಡಿ, ಅದರಲ್ಲಿ ಒಂದು ಲಾಡಿಯನ್ನು ಹಾಕಬೇಕು.

ಅಳತೆ :— ೬ ತಿಂಗಳಿನಿಂದ ಒಂದು ವರುಷದ ವರೆಗಿನ ಮಗುವಿನದಿದು. ೧೩ ಇಂಚು ಉದ್ದ, ೨೦ ಇಂಚು ಎದೆ, ೪ ಇಂಚು ತೋಳು.

ಮೈ

ಚಿತ್ರಿಸುವುದು :— ಬ, ಅ, ಕ ಕಾಟಕೋನ ಮಾಡು.

ಅ, ಕ=೧೧" ಪೂರ್ಣ ಉದ್ದ—೨" ನೀರಿಗೆ ಬಟ್ಟೆ =೧೧"

ಅ, ಡ=೧"

ಅ, ಬ=೬⅓"

ಬ, ಇ=೧⅓"

ಡ, ಇ ಕೂಡಿಸು.

ಬ, ಫ=⅓"

ಬ, ರ=೫" ಅಂದರೆ ಎದೆಯ ¼.

ಇ, ಫ ಕೂಡಿಸು.

ಫ, ರ ಚಿತ್ರದಂತೆ ಬಾಗು ಕೂಡಿಸು.

ಕತ್ತರಿಸುವುದು :— ೧೧ ಇಂಚು



ಉದ್ದ, ೧೩ ಇಂಚು ಅಗಲ ಉಳ್ಳ ಎರಡು ಬಟ್ಟೆಯ ತುಂಡುಗಳನ್ನು ತೆಗೆದುಕೊಂಡು, ಎರಡನ್ನೂ ಅಗಲದಲ್ಲಿ ಮಡಿಕೆ ಮಾಡಬೇಕು. ಮಡಿಕೆ ಅ, ಕ ದ ಕಡೆಗೆ ಬರುವಂತೆ ಇಡು. ಡ, ಇ, ಫ, ರ ಗಳನ್ನು ನಾಲ್ಕು ಪದರುಗಳನ್ನು ಕತ್ತರಿಸು.

ಕೆಳಬದಿಯ ಕ, ಗ ಭಾಗಕ್ಕೆ ೨⅓" ಉದ್ದ ೫೨" (ತುಸು ಹೆಚ್ಚು ಕಡಿಮೆ) ಅಗಲ ಒಂದು ಪಟ್ಟಿಯನ್ನು ತೆಗೆದುಕೊಂಡು ನೀರಿಗೆ ಮಾಡಿ ಹಚ್ಚಬೇಕು.

ತೋಳು *

ಬ, ಅ, ಕ ಕಾಟಕೋನ.

೨, ಬ=೭"

ಅ, ಕ=೪⅓" ಉದ್ದ+⅓" ಹೆಲಿಗೆಗೆ

ಡ ಇದು ಅ, ಬ ಗಳ ಮಧ್ಯ.

ಬ, ಇ= ೧¼"

ಇ, ಡ ಕೂಡಿಸು ಚಿತ್ರದಂತೆ.

ಡ, ಫ=೧"

ಫ, ನ=⅓"

ಇ, ಫ, ನ, ಕ ಕೂಡಿಸು.

ಕತ್ತರಿಸುವುದು:— ೪⅓" ಉದ್ದ ೧೪" ಅಗಲ ಉಳ್ಳ ಎರಡು ಬಟ್ಟೆಯ ತುಂಡುಗಳನ್ನು ಅಗಲದಲ್ಲಿ ಮಡಿಕೆ ಮಾಡಬೇಕು. ಮಡಿಕೆ ಅ, ಕ ಗಳ ಕಡೆಗೆ ಬರಬೇಕು. ಅ ದಿಂದ ಡ, ಇ ಬಾಗನ್ನು ಇ, ನ ಹಾಗೂ ನ, ಕ ಕತ್ತರಿಸು. ಅ ಡ, ಇ ಮೇಲ್ಭಾಗವನ್ನು ಅಂಗಿಯ ಫ, ರ ದಷ್ಟು ಆಗುವಂತೆ ನಿರಿಗೆ ಮಾಡಿ ಹಚ್ಚಬೇಕು. ತೋಳಿನ ತುದಿಗೆ (ಕ, ನ) ಬಿರಿಯ ದುಂಡು ಕಟ್ಟಬೇಕು.

ಬೇಕಾಗುವ ಬಟ್ಟೆ:— ೨೭ ಇಂಚು ಅಗಲ ಉಳ್ಳ ಅರಿವೆಯು ೨೧ ಇಂಚು ಎಂದರೆ ೧೦ ಗೆರೆ ಬಟ್ಟೆ ಬೇಕು. ತೋಳು ಹಾಗೂ ಬುಡಕ್ಕೆ ಲೇಸು ಹಚ್ಚಿದರೆ ೫ ಗೆರೆ ಅರಿವೆ ಸಾಕಾಗುವುದು.

---

* ತೋಳಿನ ಚಿತ್ರಕ್ಕಾಗಿ ಕಳೆದ ಮಾರ್ಚ ಸಂಚಿಕೆಯಲ್ಲಿ ನೋಡಿರಿ. ಲೇ.



೧೦೩. ಹಿಂದುಸ್ಥಾನದ ಹೊಸಘಟನೆ.

ಬರೆದವರು. ನಾಯಕ ವೆಂಕಟರಾಯರು,
ಬರೆದವರೇ ಪ್ರಕಾಶಕರು.

ಯಾವುದೊಂದು ದೇಶದ ಮುನ್ನಡೆಯು ಆ ದೇಶದ ಸರಕಾರವನ್ನವಲಂಬಿಸಿದೆಯೆಂದು ಕೆಲವರ ಅಭಿಮತ. ರಾಷ್ಟ್ರವು ಪ್ರಗತಿ ಹೊಂದಬಹುದೇ ಎಂದು ತಿಳಿಯಬೇಕಾದರೆ, ಆ ರಾಷ್ಟ್ರದ-ದೇಶದ-ಸರಕಾರದ ರಾಜ್ಯ ಘಟನೆಯನ್ನು ಅಭ್ಯಸಿಸುವುದು ಯುಕ್ತ ಸಾಧನ. ನಮ್ಮ ನಾಡಿನ ಬಗೆಗೂ ಅದೇ ವಿಚಾರ. ನಾವು ಮುಂದಡಿಯಿಡಲು ನಮ್ಮ ಸರಕಾರದ ರಾಜ್ಯಘಟನೆಯಲ್ಲಿ ಅನುಕೂಲ-ವಿದೆಯೆ ಎಂಬುದನ್ನು ತಿಳಿದುಕೊಳ್ಳುವುದು ಆವಶ್ಯಕ. ಶ್ರೀಮಾನ್ ನಾಯಕ ವೆಂಕಟರಾಯರು ಈ ಆವಶ್ಯಕತೆಯನ್ನರಿತೇ ಕನ್ನಡಿಗರಿಗೆ ಘಟನೆಯ ಕನ್ನಡಿಯನ್ನೊಂದನ್ನು ಒದವಿಸಿ ಕೊಟ್ಟಿದ್ದಾರೆ.

ಬ್ರಿಟಿಶರಾಳಿಕೆಯ ಮೊದಲಿನಿಂದ—೧೬೦೦ ರಿಂದ ಇಂದಿನವರೆಗೆ—ಮಾರ್ಪಾಡಾಗುತ್ತ ಬಂದಿದ್ದ ಘಟನೆಯ ಇತಿಹಾಸವನ್ನು ಇದರಲ್ಲಿ ತಿಳಿಯಾಗಿ ಕೊಟ್ಟಿದ್ದಾರೆ, ಅಲ್ಲದೆ ೧೮೫೭ರ 'ಬಂಡಾಯ' ನಂತರದ ಇತಿಹಾಸವನ್ನೂ ಹೆಚ್ಚು ವಿಶದವಾಗಿ ಕೊಟ್ಟು, ಅದರ ರಹಸ್ಯ ಎಲ್ಲರಿಗೂ ತಿಳಿಯುವಂತೆ ಮಾಡಿದ್ದಾರೆ. ಅನಂತರದ ಮುಖ್ಯ ಸುಧಾರಣೆಗಳಾದ, ಮೋರ್ಲೆ-ಮಿಂಟೊ, ಮೊಂಟೆಫರ್ಡ ಇವುಗಳಲ್ಲಿಯ ಸ್ವಾಯತ್ತತೆಯ ವಿಚಾರ, ಕೊಡಕು, ಅದರಲ್ಲಿಯ ಪ್ರಜಾ-ಪ್ರಭುತ್ವದ ಸೋಗು ಇವುಗಳನ್ನು ಬಿಡಿಸಿ ಹೇಳಿದ್ದಾರೆ. ಕೊನೆಯದಾಗಿ, ೧೯೩೫ರ ಸಂಯುಕ್ತರಾಜ್ಯಘಟನೆಯ ವಿಚಾರವೂ, ಅದರ ತಳಹದಿಯಂತಿದ್ದ ಸಾಯಮನ್ ಸಮಿತಿ-ದುಂಡುಮೇಜಿನ ಪರಿಷತ್ತುಗಳ ಸಂಗತಿಗಳೂ ಸ್ಥಾನಪಡೆದಿವೆ.

ಕನ್ನಡಭಾಷೆಯನ್ನು ಚೆನ್ನಾಗಿ ಬಲ್ಲವರಾದ ಶ್ರೀ. ನಾಯಕರು, ಅನೇಕ ಹೊಸ ಹೊಸ ಶಬ್ದಗಳನ್ನು ನಿರ್ಮಿಸಿದ್ದಾರೆ. ಕನ್ನಡ ಭಾಷೆಗೆ ವಿವಿಧರೀತಿಯ ಪಾರಿಭಾಷಿಕ ಶಬ್ದಗಳ ಅವಶ್ಯಕತೆ ಇದ್ದೇ ಇದೆ.

ಈ ಗ್ರಂಥದಲ್ಲಿ ಬಳಸಿದ ಘಟನಾ ಶಾಸ್ತ್ರಕ್ಕೆ ಸಂಬಂಧಿಸಿದ ಪಾರಿಭಾಷಿಕ ಶಬ್ದಗಳ ಪಟ್ಟಿಯೊಂದನ್ನು ಶ್ರೀಯುತರು ಕೊಟ್ಟಿದ್ದಾರೆ. ಭಾಷೆ ಪ್ರೌಢವಾಗಿದ್ದು ಸಂಸ್ಕೃತದ ಪ್ರಭಾವವು ಹೆಚ್ಚಾಗಿ ತೋರುವುದು. 'ಮುಂಗಾಣಿ' 'ಮೇಲ್ಮನೆ,' 'ಹಿರಿಯೋಲಗ,' 'ಕೆಳಮನೆ' 'ಕಿರಿಯೊಲಗ' ಇಂತಹ ಪರಿಭಾಷಾ ಶಬ್ದಗಳು ಸಮಾಧಾನವನ್ನುಂಟು ಮಾಡುತ್ತಿದ್ದರೆ, ತಡೆಗೋಲಧಿಕಾರ, ಗಣಸಂಖ್ಯೆ ಮೊದಲಾದುವು ಅತೃಪ್ತಿಯನ್ನು ತರುತ್ತವೆ. Quorumದಲ್ಲಿ ಅಗತ್ಯದ ಸದಸ್ಯರ ಸಂಖ್ಯೆಯೆಂದಿದ್ದ ಅರ್ಥವನ್ನು "ಗಣಸಂಖ್ಯೆ" ಹೇಗೆ ಸೂಚಿಸುವುದು?

ಒಟ್ಟಿನಲ್ಲಿ ಶ್ರೀ. ನಾಯಕರ ಪುಸ್ತಕವು ತಿಳಿವಿನದಾಗಿದೆ. ಪರಿಭಾಷಾ ಪದಗಳ ಪಟ್ಟಿ, ಪರಿಶಿಷ್ಟಗಳು ಉಪಯುಕ್ತವಾಗಿವೆ. ಮುನ್ನುಡಿ ಬರೆದ ಶ್ರೀ. ವಿಜಯೀಂದ್ರರಾಯರು ಅಂದಂತೆ "ಈ ಸಣ್ಣ ಹೊತ್ತಿಗೆಯು ಕೇವಲ ವಿದ್ಯಾರ್ಥಿಗಳಿಗೆ ಅಲ್ಲದೆ, ಹಿಂದೀರಾಜ್ಯಘಟನೆಗೆ ಸಂಬಂಧಿಸಿದ ಪ್ರಶ್ನೆಗಳಲ್ಲಿ ಆಸ್ಥೆ-ಆಸಕ್ತಿಯುಳ್ಳವರೆಲ್ಲರಿಗೂ ಸಹ ಉಪಯುಕ್ತವಾಗುವುದೆಂದು ನನ್ನ ಅಭಿಪ್ರಾಯ."

—'ನೆರಂಗ್'

೫೦. ರಾಯ ಮತ್ತು ರಾಯವಾದ.

ಬರೆದವರು: ಸ. ರಂ. ಸುಂಟಣಕರ ಮತ್ತು
ಕೆ. ರಾಮರಾವ್.

ಕನ್ನಡದಲ್ಲಿಯ ಪುಸ್ತಕಗಳ ಪಟ್ಟಿಯನ್ನು ನೋಡಿದರೆ, ಇಂತಹ ಪುಸ್ತಕಗಳು ಬಹಳವಾಗಿ ಬೇಕು ಎನ್ನಿಸುವಂತಿವೆ. ಭಾರತ ರಾಜಕೀಯ ಕ್ರಾಂತಿಕಾರರಾದ್ದ ಛಾಯಾ ಮಾನವೇಂದ್ರನಾಥ ರಾಯ ಅವರ ಜೀವನ ಚರಿತ್ರೆಯೂ ಅವರ ತತ್ತ್ವಜ್ಞಾನವೂ ಈ ಪುಸ್ತಕದಲ್ಲಿ ಅಡಕವಾಗಿವೆ. ರಾಯವಾದವು ಮಾರ್ಕ್ಸವಾದದ ತಳಹದಿಯ ಮೇಲೆಯೆ ನಿಂತಿದೆ. ಆ ತತ್ತ್ವಗಳನ್ನು ಕನ್ನಡ—ಕೇವಲ ಕನ್ನಡ ಬಂದವರಿಗೆ ತಿಳುಹಲಿಕ್ಕೆ ಈ ಮಾದರಿಯ ಪುಸ್ತಕಗಳು ಬೇಕೇ ಬೇಕು. ಅದಕ್ಕಾಗಿ ಲೇಖಕರು ಅಭಿನಂದನೀಯರು.

ಪುಟ ತಿರುಹಿದ ಕೂಡಲೆ ಒಂದು ವಿಷಯ ಮಾತ್ರ ಕಣ್ಣಿಗೆ ಬೀಳುವುದು: ಲೇಖಕರಿಗೆ ಕನ್ನಡಭಾಷೆಯ ಜ್ಞಾನವು ಸಾಕಷ್ಟಿಲ್ಲವೆಂಬುದು. ಏಕೆಂದರೆ, ಅನೇಕ ವಾಕ್ಯಗಳು ಮರಾಟೀ ಭಾಷೆಯಲ್ಲಿಯ ವಾಕ್ಯಗಳಂತಿವೆ. ವಾಕ್ಯರಚನೆಗಳು ಪರಭಾಷೆಯ ಪ್ರಭಾವವನ್ನು ತೋರಿಸುತ್ತವೆ. ವಿಷಯಕ್ಕೆ ಪ್ರಾಮುಖ್ಯತೆ ಕೊಟ್ಟು ಸಾಮಾನ್ಯವಾದ ಕುಂದುಗಳನ್ನು ಮರೆಯಬಹುದು. ಮಾರ್ಕ್ಸವಾದ, ರಾಯವಾದ ಅವುಗಳಲ್ಲಿಯ ಭೇದಭಾವ, ಸಾಮ್ಯ, ಭಾರತೀಯ ಕ್ರಾಂತಿಕಾರಕ ಚಳವಳಿಯ ಕತೆ ಇವೆಲ್ಲ ಬೋಧಕವಾಗಿವೆ. ಎರಡನೆಯ ಮುದ್ರಣದಲ್ಲಿ ಭಾಷೆಯನ್ನು ಕನ್ನಡದ ಮಟ್ಟಕ್ಕೆ ತಂದರೆ, ಪುಸ್ತಕದ ಉಪಯುಕ್ತತೆ ಹೆಚ್ಚಾಗುವುದು. ಮುದ್ರಣವೂ ಇನ್ನಿಷ್ಟು ಚೆನ್ನಾಗಬೇಕಾಗಿದ್ದಿತು.

— 'ನೆರಂಗ್'



೨೧ ಎಣ್ಣೆ ತೆಗೆಯುವುದು

ಶ್ರೀ. ಝವೇರ್‌ಭಾಯಿ ಸಿ. ಪಟೇಲ ಅವರು ಬರೆದುದರ ಕನ್ನಡ ಅನುವಾದ.

ಹಿಂದುಸ್ತಾನದಿಂದ ಎಣ್ಣೆಕಾಳು ಪರದೇಶಕ್ಕೆ ತುಂಬ ದೊಡ್ಡ ಪ್ರಮಾಣದಿಂದ ಹೋಗುತ್ತದೆ. ಇದರಿಂದ ನಮ್ಮ ದೇಶದಲ್ಲಿಯ ಎಣ್ಣೆತೆಗೆಯುವ ಉದ್ಯೋಗಕ್ಕೆ ಬಲವಾದ ಆಘಾತವುಂಟಾಗಿದೆ. ಹೀಗೆ ಆಘಾತವಾಗದಂತೆ, ನಮ್ಮಲ್ಲಿ ಎಣ್ಣೆತೆಗೆಯುವ ಉದ್ಯಮ ಹೆಚ್ಚು ಹೆಚ್ಚಾಗಿ ಬೆಳೆಯಬೇಕೆಂಬ ಸಂಗತಿಯನ್ನೂ, ಅದಕ್ಕಾಗಿ ಆದಷ್ಟು ಕಡಿಮೆ ವೇಳೆಯಲ್ಲಿ, ಕಡಿಮೆ ಶ್ರಮದಿಂದ, ಹೆಚ್ಚಿನ ಪ್ರಮಾಣದಲ್ಲಿ ಎಣ್ಣೆಯನ್ನು ಹೊರಡಿಸಬೇಕಾದರೆ ಗಾಣದ ರಚನೆ ಹೇಗಿರಬೇಕೆಂಬುದನ್ನೂ ಕುರಿತು, ಸಪ್ರಯೋಗಿಕವಾಗಿ ಮಾಡಿದ ಸಂಶೋಧನೆಯ ವಿಷಯ ಈ ಸಣ್ಣ ಪುಸ್ತಕದಲ್ಲಿ ಅಡಕವಾಗಿದೆ.

ಹಿಂದುಸ್ತಾನದಲ್ಲಿಯ ಮಿಕ್ಕ ಎಲ್ಲ ಪ್ರಾಂತ್ಯಗಳ ಗಾಣಗಳನು ಮಗನವಾಡಿಗೆ ತರಿಸಿ ಪ್ರಯೋಗಮಾಡಿ ನೋಡಿರುವರಾದರೂ ಕರ್ನಾಟಕದಲ್ಲಿ ಪ್ರಚಾರದಲ್ಲಿರುವ ಗಾಣಗಳನ್ನವರು ನೋಡಿದಂತೆ ಕಾಣುವುದೇ ಇಲ್ಲ. ನಿಜವಾಗಿ ನೋಡಿದರೆ ಕರ್ನಾಟಕದಲ್ಲಿ ಬೆಳೆಯುವ ಕುಸುಬೆ- ನೆಲಗಡಲೆ- ಎಳ್ಳು-ಹುಚ್ಚೆಳ್ಳು- ಅಗಸೆಗಳು, ಮಿಕ್ಕ ಪ್ರಾಂತ್ಯಗಳಿಗಿಂತ ಯಾವಬಗೆಯಲ್ಲಿಯೂ ಕಡಿಮೆಯಿಲ್ಲ; ಕುಸುಬೆಯಿಂದ ಎಣ್ಣೆತೆಗೆಯುವ ಉದ್ಯೋಗದಿಂದ ಉತ್ತರ ಕರ್ನಾಟಕದಲ್ಲಿ ಹೊಟ್ಟೆ ತುಂಬಿಕೊಳ್ಳುವವರೆಷ್ಟೋ ಜನರು. ಹೀಗೆ ಎಣ್ಣೆತೆಗೆಯುವುದರಲ್ಲಿ ಅಥಣಿ- ಬಾಗಿಲುಕೋಟೆ- ಸಾಂಗಲಿಗಳ ಕಡೆಗಿನವರ ರೀತಿಯೆ ಬೇರೆ; ಮಿಕ್ಕ ಕಡೆಗಿನವರ ರೀತಿಯೆ ಬೇರೆ ಇದಾವುದರ ವಿವೇಚನೆಯೂ ಈ ಪುಸ್ತಕದಲ್ಲಿ ಇರದುದರಿಂದ ಕನ್ನಡಿಗರಿಗೆ ಇದರ ಬಗೆಗೆ ಅಷ್ಟೊಂದು ಆತ್ಮೀಯತೆಯೆನಿಸದಿರುವುದು ಸಹಜ. ನಮ್ಮಲ್ಲಿ ಬರಿಯೆ ಮರದ ಒರಳುಗಳು ಇರುವುದೆ, ಇಲ್ಲ. ದೊಡ್ಡ ಕಲ್ಲುಗಳಲ್ಲಿ ಕಡೆದು ಮಾಡಿದ ಒರಳುಗಳಿದ್ದು, ಆ ಒರಳುಗಳಲ್ಲಿ 'ಮರವನ್ನು ಕಟ್ಟಿಸುವ' ಪದ್ಧತಿಯುಂಟು. ನಮ್ಮಲ್ಲಿಯ ಈ ಗಾಣಗಳ ಅನುಕೂಲತೆ-ಪ್ರತಿಕೂಲತೆಗಳ ವಿಚಾರವೂ ಇದರಲ್ಲಿ ಬರಬೇಕಾಗಿದ್ದಿತು.

ಅನುವಾದದ ಭಾಷೆ ಸ್ವಲ್ಪವೂ ಚೆನ್ನಾಗಿಲ್ಲವಿಷ್ಟೇ ಅಲ್ಲ; ಅನು-ವಾದಕರಿಗೆ ಕನ್ನಡ ಭಾಷೆಯೆ ಅಷ್ಟೊಂದು ಚೆನ್ನಾಗಿ ಬಾರದೇನೋ ಎನಿಸುವುದು. ಎಂತಲೆ ಅನೇಕ ಕಡೆಗೆ ಭಾಷೆ ಅರ್ಥವೆ ಆಗುವುದಿಲ್ಲ. ಗಾಣದ ಬೇರೆ ಬೇರೆ ಭಾಗಗಳಿಗೆ ನಮ್ಮಲ್ಲಿ ಮೊದಲಿನಿಂದಲೂ ನಡೆದುಬಂದ ಪಾರಿಭಾಷಿಕಶಬ್ದಗಳಿರುವುವು. ಅವುಗಳನ್ನರಿತುಕೊಂಡು ಇದರಲ್ಲಿ ಬಳಸಿದ್ದರೆ ಅರ್ಥಗ್ರಹಣಕ್ಕೆ ಹೆಚ್ಚು ಅನುಕೂಲವಾಗುತ್ತಿದ್ದಿತು. ಪ್ರಮಾಣಕ್ಕಾಗಿ ಎಳ್ಳೊಂದನ್ನೆ ತೆಗೆದುಕೊಂಡುದು ಏಕದೇಶೀಯವಾದಂತಾಗಿ, ಮಿಕ್ಕ ಎಣ್ಣೆಕಾಳು ಬೆಳೆಯುವ ಪ್ರದೇಶದವರಿಗೆ ಈ ಪುಸ್ತಕ ಪ್ರಯೋಜನವಿಲ್ಲದಂತಾಗಿದೆ. ಆಯಾ ಪ್ರಾಂತಗಳಲ್ಲಿ ಪ್ರಯೋಗ ನಡೆಯಿಸಿ, ಗಾಣಗಳಲ್ಲಿ ಮಾಡಬೇಕಾಗಿದ್ದ ಸುಧಾರಣೆಗಳನ್ನು ಮಾಡಬಹುದಲ್ಲದೆ ಎಲ್ಲರಿಗೂ ಸಾಮಾನ್ಯವಾಗುವಂತಹ ಒಂದೇ ಗಾಣವನ್ನು ಹುಡುಕುವುದು ಕಷ್ಟಕರವಾದ ಕೆಲಸವೇ ಸರಿ !

ಸಂ. .... ಕ.

ಇಂದಿನ ಯುದ್ಧದ ಕೆಲವು ವೈಶಿಷ್ಟ್ಯಗಳು

(ಸಂಪಾದಕೀಯ ಸಂಗ್ರಹಕರಿಂದ)

೧. ಸದ್ಯಕ್ಕೆ ನಡೆದ ಯುದ್ಧವು ೨೫ ವರ್ಷಗಳ ಹಿಂದಿನ ಯುದ್ಧಕ್ಕಿಂತ ಅನೇಕ ರೀತಿಗಳಲ್ಲಿ ಬೇರೆಯಾಗಿದೆ. ಮೊದಲನೆಯ ಮಾತೆಂದರೆ, ವ್ಯೂಹತಂತ್ರವೆ ತೀರ ಬೇರೆಯಾಗಿದೆ. ೧೯೧೪ರ ಯುದ್ಧದಲ್ಲಿ ತೋಡಿನ (trench) ಪದ್ಧತಿ ಇದ್ದಿತು. ಎರಡೂ ಬದಿಯ ಸೈನ್ಯಗಳು ಮುಂದೆ ಹಿಂದೆ ಸರಿದಂತೆ ತೋಡುಗಳನ್ನು ಅಗಿದು, ಮುಂದೆ ತೋಫುಗಳನ್ನು ಸಾಲಾಗಿರಿಸಿ, ಹಿಂದೆ ತಗ್ಗಿನ ಆಸರದಲ್ಲಿ ಹೋರಾಡುತ್ತಿದ್ದುವು. ಅನೇಕ ದಿವಸಗಳವರೆಗೆ ಒಂದೇ ಸ್ಥಳದಲ್ಲಿ ಹೋರಾಟ ನಡೆಯುತ್ತಿತ್ತು. ಆದರೆ ಇಂದಿನದು ದ್ರುತವ್ಯೂಹ. ಸೈನ್ಯ ಒಂದೆಡೆ ತಳಊರಿ ನಿಲ್ಲುವುದಿಲ್ಲ. ಟ್ಯಾಂಕುಗಳು, ಮೋಟಾರಿನಲ್ಲಿಟ್ಟ ತೋಫುದಳಗಳು ಒಂದೇ ಸವನೆ ನಾಶಗೊಳಿಸುತ್ತ ಸಾಗುವುವು. ಒಂದು ಸ್ಥಳವನ್ನು ಆಕ್ರಮಿಸಿ ತಳವೂರುವುದಕ್ಕಿಂತ, ಅದನ್ನು ನಾಶಗೊಳಿಸಿ ಮುಂದೆ ಸಾಗುವುದು ಇಂದಿನ ಪದ್ಧತಿ. ಮುಂದೆ ನಡೆದ ಯಂತ್ರವಾಹನದಳ (mechanised units) ಗಳ ಸಂರಕ್ಷಣಾರ್ಥವಾಗಿ ವಿಮಾನದಳ, ಹಿಂದಿನಿಂದ ಕಾಲಾಳು ಸಾಗಿ, ಹಾಳಾದುದನ್ನು ಹಸನುಮಾಡಿಕೊಂಡು ನಿಲ್ಲುವುವು.

೨. ಇನ್ನೊಂದು ಮುಖ್ಯ ವೈಶಿಷ್ಟ್ಯವೆಂದರೆ, ವಿಮಾನ ಹಾವಳಿ. ಕೆಲವೆಡೆ ಮೊದಲು ವಿಮಾನದಳಗಳು ಹೋಗಿ ವಿಮಾನ ಗೃಹಗಳನ್ನೂ ಆಯಕಟ್ಟಿನ ಸ್ಥಾನಗಳನ್ನೂ ನಾಶಗೊಳಿಸಿಯಾಗಲಿ ಜನರನ್ನು ಹೆದರಿಸಿ ಓಡಿಸಿಯಾಗಲಿ ಬಿಡುವುವು. ಹಿಂದಿನಿಂದ ಬೇರೆ ದಳಗಳು ಬಂದು ಈ ಸ್ಥಾನಗಳನ್ನು ಆಕ್ರಮಿಸಿಕೊಳ್ಳುವುವು.

೩. ಮೂರನೆಯದಾಗಿ ವಿಮಾನದಿಂದಿಳಿದು ಬರುವ ಆಕಾಶದಳ (parachutist). ನೂರರಷ್ಟು ಜನರನ್ನು ಸಾಗಿಸುವ ವಿಮಾನಗಳು ಈ ಆಕಾಶದಳಗಳನ್ನು ಅಲ್ಲಲ್ಲಿ ಇಳಿಬಿಡುವುವು; ಬಾಂಬುಗಳ ಸ್ಫೋಟದಿಂದ ಜನರನ್ನು ಚೆದರಿಸಿ, ಈ ಆಕಾಶದಳಗಳು ಅನಿರೀಕ್ಷಿತವಾದ ಸ್ಥಳಗಳನ್ನು ಆಕ್ರಮಿಸಿಕೊಳ್ಳುವುವು.

೪. ಜರ್ಮನಿಯ ತಂತ್ರದಲ್ಲಿ ಇನ್ನೊಂದು ವ್ಯೂಹವಿದೆ. ಅದೆಂದರೆ ದ್ರೋಹಕದಳ (fifth column). ಆಯಾದೇಶಗಳಲ್ಲಿದ್ದ ಜರ್ಮನರಾಗಲಿ, ಹಿಟ್ಲರನ ಸಹಾನುಭೂತಿಗರಾಗಲಿ, ವಿಮಾನ ಹಾವಳಿಗೆ ಹೆದರಿ ಓಡುವ ಅಸಹಾಯನಾಗರಿಕರ ಗುಂಪಿನಲ್ಲಿ ಸೇರಿಸಿ ಓಡುವ ಹೇಡರಾಗಲಿ, ನಿಯಕಕಾಲಕ್ಕೆ ಸ್ಥಾನಿಕದ್ರೋಹಿಗಳಾಗಿ, ಹಾವಳಿಗ ಜರ್ಮನ ಸೈನ್ಯಕ್ಕೆ ಇದಿರಾಗಿ ಸಹಾಯವನ್ನು ಕೊಡುವರು.

೫. ಇಂದಿನ ಯುದ್ಧದಲ್ಲಿ ಆಕಾಶವಾಣಿಯ ಮಹತ್ತ್ವವೂ ಹೆಚ್ಚಿದೆ. ಆಗಾಗ ಶತ್ರುಗಳ ದೇಶದಲ್ಲಿ ಗುಪ್ತವಾಗಿ ನೆಲಸಿದ ಕೇಂದ್ರಗಳಿಂದ ಜರ್ಮನರು ಸುಳ್ಳುಸುದ್ದಿಗಳನ್ನು ಆಕಾಶವಾಣಿಯಲ್ಲಿ ಪ್ರಕಟಿಸುವರು. ಸಾಮಾನ್ಯ ಜನಗೆ ಭೀತಿಯನ್ನೂ ಅಸತ್ಯದಲ್ಲಿ ವಿಶ್ವಾಸವನ್ನೂ ಹುಟ್ಟಿಸಲು ಆಕಾಶವಾಣಿಯು ಜರ್ಮನರಿಗೆ ಅತ್ಯಂತ ಸಹಾಯಕಾರಿಯಾಗಿದೆ.

ಸಾ ದ ರ ಸ್ವೀ ಕಾ ರ

೮. ನವಚೇತನ (ಮಾಸಪತ್ರಿಕೆಯ ಯುಗಾದಿ ಸಂಚಿಕೆ) ಸಂಪಾದಕರು ಶ್ರೀ. ರಾ. ವೆ. ವಾಲಗಳ್ಳಿ ಶಿರಸಿ. ಇವರೇ ಪ್ರಕಾಶಕರು ಕೂಡ. ಫೂಲ್ಸ್‌ಕ್ಯಾಪ್ ಆಕಾರದ ೬೨ ಪುಟ. ಬೆಲೆ ೦-೨-೦

ಉತ್ತರ ಕನ್ನಡ ಜಿಲ್ಲೆಯಲ್ಲಿ ಹೊರಡುವ ಒಂದೇ ಒಂದು ಮಾಸಪತ್ರಿಕೆಯ ವಿಶೇಷ ಸಂಚಿಕೆಯಿದು. ವಿವಿಧ ಲೇಖಕರು ಬರೆದ ಲೇಖನ-ಕವಿತೆ-ಕತೆಗಳು ಇದರಲ್ಲಿ ಪ್ರಕಟವಾಗಿವೆ.

೯. ದ್ವೈತದುಂದುಭಿ (ತ್ರೈಮಾಸಿಕ). ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ರಾಮಾಚಾರ್ಯ ಕಟಗೇರಿ ಬಿ.ಎ., ದ್ವೈತ-ದುಂದುಭಿಕಾರ್ಯಾಲಯ ಹುಬ್ಬಳ್ಳಿ, ಅವರು. ರೊಯಲ್ ಆಕಾರದ ಸುಮಾರು ೮೦ ಪುಟಗಳು. ವಾರ್ಷಿಕ ಚಂದಾ ೪-೮-೦, ಬಿಡಿಸಂಚಿಕೆಗೆ ೧-೪-೦.

ಮೊದಲನೆಯ ವರ್ಷದ ೧ರಿಂದ ೩ರ ವರೆಗಿನ ಸಂಚಿಕೆಗಳು ನಮ್ಮ ಕಡೆಗೆ ಬಂದಿವೆ. ಮಧ್ವಮತಾನುಯಾಯಿಗಳಿಗೆ ತಿಳಿದಿರ ಬೇಕಾದ ಅನೇಕ ವಿಷಯಗಳೂ, ಹಲವು ಮಾಧ್ವಮತದ ಸಂಸ್ಕೃತಗ್ರಂಥಗಳ ಕನ್ನಡ ಅನುವಾದಗಳೂ, ಹರಿಕಥಾಮೃತಸಾರ-ದಾಸರ ಪದಗಳ ಮೇಲಿನ ವ್ಯಾಖ್ಯಾನಗಳೂ ಇದರಲ್ಲಿ ಪ್ರಕಟವಾಗಿವೆ. ಪತ್ರಿಕೆಯ ಭಾಷೆ ಗಂಭೀರವಾಗಿದ್ದು ಪರಿಶುದ್ಧವಾದುದಾಗಿರುತ್ತದೆ. ನಿಜವಾಗಿಯೂ ಇಂತಹ ಪತ್ರಿಕೆಯ ಅಗತ್ಯ ಕನ್ನಡಕ್ಕೆ ತುಂಬ ಇದ್ದಿತು. ಏತಕ್ಕೆಂದರೆ ತಾವು ಅನುಸರಿಸಬೇಕಾಗಿದ್ದ ತತ್ತ್ವಜ್ಞಾನದ ಪರಿಚಯ ತಮಗೇನೂ ಇಲ್ಲದೆ, ಅದರ ಬಗೆಗೆ ವ್ಯರ್ಥಾಭಿಮಾನವನ್ನು ತೋರಿಸುವುದೂ ಅದರಂತೆಯೆ ಅದು ವೈಗುಣ್ಯಪರಿಪೂರ್ಣವಾದುದೆಂದು ಇನ್ನೊಂದನ್ನು ಪುರಸ್ಕರಿಸುತ್ತ ಹೋಗುವುದೂ ತಿಳಿಗೇಡಿತನದ್ದಾಗಿ ಪರಿಣಮಿಸದಿರದು. ಆದುದರಿಂದಲೆ ಜನಸಾಮಾನ್ಯರಿಗೆಲ್ಲ ಅವರ ಭಾಷೆಯಲ್ಲಿಯೆ ಅವರ ತತ್ತ್ವಜ್ಞಾನದ ತಿರುಳನ್ನು ತಿಳುಹಿಕೊಡಲೆಂದು ಮಾಡುತ್ತಲಿರುವ ಈ ಪ್ರಯತ್ನಕ್ಕಾಗಿ ಸಂಪಾದಕರನ್ನು ಮನಸಾರೆ ಕೊಂಡಾಡುವೆವು. ಇದು ಬಹುಕಾಲ ಬದುಕಿ ಬಾಳುವಂತೆ ಮಾಡಬೇಕಾದುದು ಕನ್ನಡಿಗರ ಕರ್ತವ್ಯ.

೧೦. ಅಂತರಂಗದ ಯುಗಾದಿ ಸಂಚಿಕೆ. ಕ್ರೌ. ಆಕಾರದ ೧೦೪ ಪುಟ. ಬೆಲೆ ೦-೨-೦. ಪ್ರಕಾಶಕರು ಶ್ರೀ. ಪಿ. ವೆಂಕಟರಮಣಾಚಾರ್ಯರು ಮಣಿಪಾಲ ಪಾವರ್ ಪ್ರೆಸ್, ಉಡುಪಿ.

ಆಕರ್ಷಕವಾದ ಚಿತ್ರದಿಂದೊಡಗೂಡಿದ ಮೇಲೋಲೆಯಿಂದಲೂ ವಿವಿಧ ಲೇಖಕರ ಮನೋರಂಜಕ ಲೇಖನಗಳಿಂದಲೂ ಈ ವಿಶೇಷಸಂಚಿಕೆ ಕೂಡಿಕೊಂಡಿದೆ. ಇಂತಹ ಸಂಚಿಕೆಯನ್ನು ಇಷ್ಟೊಂದು ಕಡಿಮೆಯ ಬೆಲೆಗೆ ಕೊಡುವುದೆಂದರೆ ಈ ಕಾಲದಲ್ಲಿ ಸಾಹಸದ ಮಾತೇ ಸರಿ!

೧೧. ಕವಿರಾಘವಾಂಕ (ಕವಿ-ಕಾವ್ಯ ಪರಿಚಯ) ಲೇ. ಶ್ರೀಮಾನ್ ಎಚ್. ಎಂ. ಶಂಕರ ನಾರಾಯಣರಾವ್ ಎಂ.ಎ., ಕನ್ನಡ ಅಧ್ಯಾಪಕರು ಧರ್ಮಪ್ರಕಾಶ ಬನುಮಯ್ಯನವರ ಹೈಸ್ಕೂಲು ಮೈಸೂರು. ಫೂ. ಕ್ಯಾ. ಆ. ೮೨ ಪುಟ; ಬೆಲೆ ೦-೪-೦.

೧೨. ಕಾವ್ಯಾವಲೋಕನ (ನಾಗವರ್ಮ ಕವಿಕೃತ ಲಕ್ಷಣಗ್ರಂಥ). ಸಂಪಾದಕರೂ ಟಿಪ್ಪಣಿಕಾರರೂ ಪ್ರೋ. ಎಸ್. ಎಸ್. ಬಸವನಾಳ ಎಂ. ಎ. ಮತ್ತು ಶ್ರೀಮಾನ್ ಕೇವು ಶಂಕರ ನಾರಾಯಣ. ಡೆ. ಆ. ಸು. ೪೦೦ ಪುಟ. ಬೆಲೆ ೨-೪-೦. ಧಾರವಾಡ ಕ. ವಿ. ವ. ಸಂಘದ ಸುವರ್ಣ ಮಹೋತ್ಸವದ ಪ್ರಕಟನೆಯಿದು.

೧೩. ವರ್ಧಾಯಾತ್ರೆ (ಅನುಭವ ಕಥನ). ಲೇಖಕರು ಶ್ರೀಮಾನ್ ಸಿ. ಕೃಷ್ಣಶರ್ಮ (ಹರಟೆ ಮಲ್ಲ). ಪ್ರಕಾಶಕರು ಶ್ರೀಮಾನ್ ಎಸ್.ಜಿ. ಕುಲಕರ್ಣಿ, ಸಾಧನ ಮುದ್ರಣಾಲಯ, ಧಾರವಾಡ. ಕ್ರೌ. ಆ. ೧೦+೧೪೮ ಪುಟಗಳು. ಬೆಲೆ ೧-೮-೦.

೧೪. ಕಚ್ಛೂರ್ ಕ್ಯಾಲೆಂಡರ್. ಕರ್ನಾಟಕ ಕೆಮಿಕಲ್ ವರ್ಕ್ಸ್ ಗದಗ ಅವರು ಪ್ರಕಟಿಸಿದುದು.

ಹಿಂದೂ ವರ್ಷವನ್ನನುಸರಿಸಿ ಹೊರಡುವ ಕ್ಯಾಲೆಂಡರುಗಳು ಕನ್ನಡದಲ್ಲಿ ತೀರ ವಿರಳ. ಈ ಕ್ಯಾಲೆಂಡರು ಆ ಕೊರತೆಯನ್ನು ಕಳೆಯುತ್ತದೆ. ಇದು ಮನೆಯಲ್ಲಿ ಇರುವುದರಿಂದ, ಪಂಚಾಂಗದಂತೆಯೂ ಕೆಲಸವನ್ನು ಕೊಡಬಲ್ಲದು. ಎರಡು ಬಣ್ಣಗಳಲ್ಲಿ ಮುದ್ದಾಗಿ ಮುದ್ರಿತವಾಗಿದೆ.

೧೫. ಶರೀರಶಿಕ್ಷೆ (ಸಚಿತ್ರವ್ಯಾಯಾಮ ವಿಷಯಕ ಗ್ರಂಥ) ಲೇಖಕರು ಶ್ರೀಮಾನ್ ಶ್ರೀ.ಜ. ಬಾಪಟ ಮದೀಹಾಳ, ಧಾರವಾಡ. ಪ್ರಕಾಶಕರೂ ಅವರೇ. ಡೆ. ಅ. ೨೧೨ ಪುಟಗಳು ಬೆಲೆ ೩-೦-೦.

೧೬. ಎಕ್ಸ್‌ರೇ (ಸಚಿತ್ರ ವೈಜ್ಞಾನಿಕ ಗ್ರಂಥ) ಲೇಖಕರು ಶ್ರೀಮಾನ್ ಯು. ರಾಘವೇಂದ್ರಾಚಾರ್ಯ ಬಿ. ಎಸ್‌ಸಿ. (ಆನರ್ಸ್), ಫಿಜಿಕ್ಸ್ ಲೆಕ್ಚರರ್ ಲೊಯೊಲಾ ಕಾಲೇಜ್, ಮದರಾಸ. ಲೇಖಕರೇ ಪ್ರಕಾಶಕರು. ಕ್ರೌ. ಆ. ೧೮+೯೨ ಪುಟಗಳು. ಬೆಲೆ ?

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ, ೬ ಆಣೆಗೆ ಒಂದು ಸೆಟ್ಟು.

೧ ಬ್ಲೇಡಿಗೆ ೬ ಉತ್ತಮ ಕ್ಷೌರ!
೫ ಬ್ಲೇಡಿಗೆ ೬ ಆಣೆ.

ಇರಲಿಲ್ಲಂತೆ, ಸಾಧಿಸಿತು

« ಆಲ್ಲೋ, ನಿನಗ.... ಬ್ಯಾಂಕಿನೊಳಗ ನೌಕರೀ ಸಿಕ್ಕಿತs? ಹಾಂ, ಗೊತ್ತಾದ್ಹಾಂಗ ಆಯ್ತು ಬಿಡು. ಬ್ಯಾಂಕಿನ ಮ್ಯಾನೇಜರು ಗುರುತಿನಾಂವ ಇದ್ದಾನೇನೋ ಅಲ್ಲs?"

« ಎಲ್ಲೀ ಗುರುತಿನಾಂವರೀ? ಗುರುತು ಇರಲಿಲ್ಲಂತs ಕೆಲಸಾ ಸಾಧಿಸಿಕೊಂಡೆ ಎನ್ರಿಸಾ! »

* * *

ನೆರೆ ಸರಿಯಾಗಿರಬೇಕು

ಅಂಗಡಿಯಂವ:— ಏನ್ರೀ ರಾಯರs! ಸಂಕ್ರಮಣ ಹಬ್ಬಕ್ಕಂತ ಸಾಮಾನು ಒಯ್ದಿರಿ; ಆದರ ಬಿಲ್ಲು ಇನ್ನೂ ತೀರಿಸಲೇ ಇಲ್ಲವಲ್ಲಾ ನೀವು?

ಗಿರಾಕಿ:— ಅಧ್ಯಾಂಗರೀ ಇನ್ನೂ ತೀರಿಸಿಲ್ಲಂತೀರಿ? ಮೊನ್ನೆ ಮೊನ್ನೇ ನಮ್ಮ ಮನೀ ಹೆಂಗಸರ ಕಡಿಂದs ಹಣಾ ಕೊಟ್ಟು ಕಳಿಸೀದೀನಲ್ಲಾ!

ಅಂಗಡಿಯಂವ:— ಅವರು ಇಲ್ಲಿಗೆ ಬಂದೇ ಇಲ್ಲ ಬಿಡ್ರಿ!

ಗಿರಾಕಿ:— ಅದಕ್ಕ ನಾ ಏನ್ರಿ ಮಾಡಲಿ? ನಾನಂತೂ ಕಳಿಸಿಕೊಟ್ಟಿದ್ದು ನಿಜ! ಆದರ ಒಂದು ಮಾತು; ಯಾವಾಗಲೂ ನೆರೀ ಸರಿಯಾದದ್ದಿರಬೇಕೂ ಅಂಬೂದನ್ನ ನೀವು ಮರೆತುಬಿಟ್ಟಿದ್ದೀರಿ. ನೀವು ನಿಮ್ಮ ಕಿರಾಣೀ ಅಂಗಡೀನ ಫೇಸ್‌ಪಾವಡರು, ಸುಗಂಧದೆಣ್ಣಿ, ಹೇರ್‌ಕ್ಲಿಪ್ಪು ಇವುಗಳ ಅಂಗಡೀ ಹತ್ತರ ಇಟ್ಟಿದ್ದು ದೊಡ್ಡ ತಪ್ಪು!

* * *

ಪ್ರತಿನಿತ್ಯದ ಕೈಚಳಕ

ಮ್ಯಾಜಿಕ್ ಆಟಗಾರನೊಬ್ಬ ಬೇರೆ ಬೇರೆ ಆಟ ಮಾಡಿ ತೋರಿಸುತ್ತಿದ್ದ. ಪ್ರೇಕ್ಷಕರಲ್ಲಿಯ ಒಬ್ಬ ಇನ್ನೊಬ್ಬನಿಗೆ ಬೆರಗಿನ ಧ್ವನಿಯಲ್ಲಿ ಹೇಳತೊಡಗಿದ:

« ನೋಡ್ರೀ ನೋಡ್ರೀ, ಹ್ಯಾಂಗ, ನೋಡು-ನೋಡುತ್ತಿರೂದರೊಳಗs ರೂಪಾಯಿ ಇಲ್ಲದ್ಹಾಂಗ ಮಾಡಿದ! ಇಂಥಾ ಕೈಚಳಕಾ ನಾ ಎಲ್ಲೂ ನೋಡಿದ್ದಿಲ್ಲ ಬಿಡ್ರಿ! »

« ನೋಡಿಲ್ಲs ನೀವು? ನಿಮಗ ಇನ್ನೂ ಮದಿವ್ಯಾಗಿಲ್ಲ ಕಾಣಸ್ತsದ! ಮದಿವ್ಯಾದ ಮ್ಯಾಲ ಪ್ರತಿನಿತ್ಯ ನಿಮಗ ಇಂಥಾ ಕೈಚಳಕಾ ನೋಡೂ ಸಂದರ್ಭ ಬರತsದ ತಿಳಿತೇನು? »

* * *

ಮೋಟಾರಿನೊಳಗs ಇದ್ದಾರ

ಹದಿನಾರು ಪ್ರವಾಸಿಕರನ್ನು ಕುಳ್ಳಿರಿಸಬಹುದೆಂದು ಲೈಸೆನ್ಸು ಇದ್ದ ಸರ್ವಿಸ್ ಮೋಟಾರೊಂದರಲ್ಲಿ, ಇಪತ್ನಾಲ್ಕುಜನ ಪ್ರವಾಸಿಕರಿರುವುದನ್ನು ಕಂಡು ರೊಚ್ಚಿಗೆದ್ದ ರಾಯರು 'ಡ್ರಾಯ್ವರ್‌ಸಾಬ್' ನನ್ನು ಕರೆದು ಹೇಳಿದರು:

« ಇದೇನಯ್ಯಾ ಇದು ಗದ್ದಲ? ಕೂತುಕೊಳ್ಳಿಕ್ಕೆಸುದ್ದಾ ಜಾಗ ಇಲ್ಲ, ತುಂಬೇ ತುಂಬಲಿಕ್ಕೆ ಹತ್ತೀದಿಯಲ್ಲ ಮಂದೀನ! ಫೌಜದಾರ ಕಚೇರಿಗೆ ಹೋಗಿ ಹೇಳ್ತೀನಿ ನೋಡು, ಹುಷಾರು! »

'ಡ್ರಾಯ್ವರಸಾಬ' ಸಮಾಧಾನದ ಸ್ವರದಲ್ಲಿಯೆ ಉತ್ತರಕೊಟ್ಟ:

« ರಾಯರs ಕಚೇರಿಗೆ ಹೋಗೂ ತ್ರಾಸರೇ ಯಾಕ ನಿಮಗ? ನೀವು ಯಾವ ಫೌಜದಾರ ಹತ್ತರ ಹೋಗಬೇಕಾಗೇದೋ ಆ ಫೌಜದಾರರು, ಜಮಾದಾರರು, ಅವರ ಮನೀಮಂದಿ ಎಲ್ಲಾರೂ ಈ ಮೋಟಾರಿನೊಳಗs ಇದ್ದಾರ!"

* * *

ಕರ್ತೃತ್ವಶಾಲಿ!

« ನಾನು ಮುಂಬಯಿಗೆ ಮೊದಲು ಬಂದಾಗ, ನನ್ನ ಜೇಬಿನೊಳಗ ಬರೇ ಐದು ಬಿಲ್ಲಿ ರೊಕ್ಕ ಮಾತ್ರ ಇದ್ದೂ ಎನ್ರಿಸಾ! ಈಗ ನನ್ನ ಬ್ಯಾಂಕಿನೊಳಗ ಐವತ್ತು ಸಾವಿರ ರೂಪಾಯಿ ನಗದು ನಗದು ಆವೆ! » -

« ನಿಮ್ಮದೇನು ಹೇಳತೀರಿ ಬಿಡ್ರೀ! ನನಗ ಇನ್ನೊಬ್ಬ ಮನುಷ್ಯನ ಕಥೀ ಗೊತ್ತದ: ಅವನ ಜೇಬಿನೊಳಗ ಒಂದೇ ಒಂದು ಒಡಕು ಕವಡಿ ಕೂಡಾ ಇರಲಿಲ್ಲ; ಆದರ ಅಂವ ಮನ್ಯಾಗ ಬೆಳ್ಳೀ-ಭಂಗಾರಾ ರಾಶಿ ರಾಶಿ ಒಟ್ಟಿದ್ದ! »

« ಅಬ್ಬಾ, ಹೀಂಗೇನು? ನಿಜವಾಗಿಯೂ ಕರ್ತೃತ್ವಶಾಲಿ ಆತ! ಸದ್ಯ ಅವರು ಎಲ್ಲಿದ್ದಾರ? »

« ಜೇಲಿನೊಳಗಿದ್ದಾರ! »

* * *

ಹೊರಡುವ ಸಿದ್ಧತೆ

ಆಕೆ:— ಇನ್ನು ಹೊರಡಬಹುದಲ್ಲವೆ? ನನ್ನ ಸಿದ್ಧತೆಯೆಲ್ಲಾ ಆದಂತಾಯಿತು. ಇದೇನು? ನಾನೆಂದುಕೊಂಡಿದ್ದೆ: ಇಷ್ಟರಲ್ಲಿಯೆ ನಿಮ್ಮ ಸಿದ್ಧತೆ ಮುಗಿದು ನನ್ನ ದಾರೀ ಕಾಯುತ್ತಿರಬಹುದೆಂದು!

ಆತ:— (ಗಡ್ಡದ ಮೇಲೆ ಕೈಯಾಡಿಸಿಕೊಳ್ಳುತ್ತ) ನನ್ನ ಸಿದ್ಧತೆ ಮುಗಿದು ಅದೆಷ್ಟೋ ಹೊತ್ತಾಗಿದ್ದಿತು. ಇರಲಿ, ಈಗ ಎರಡು ನಿಮಿಷ ತಡೆ; ಇನ್ನೊಮ್ಮೆ ಮುಖಕ್ಷೌರಮಾಡಿಕೊಂಡು ಬರುತ್ತೇನೆ!

* * *

ಡಾಕ್ಟರರಿಗೆ ಕರೆ

ಟೆಲಿಫೋನಿನಲ್ಲಿ ಡಾಕ್ಟರು ಧ್ವನಿಯೊಂದನ್ನು ಕೇಳಿದರು:

« ಹಲೊ ಡಾಕ್ಟರ್, ನಮ್ಮ ಮಗು ನನ್ನ ಫೌಂಟನ್‌ಪೆನ್ನನ್ನು ತನ್ನ ತಾಯಿಯ ಗಂಟಲೊಳಗ ಹಾಕಿಬಿಟ್ಟದೆ. ಅದು ಅಲ್ಲಿಯೆ ಸಿಕ್ಕಿಕೊಂಡಿದೆ. ಕೂಡಲೆ ಬಂದುಬಿಡಿ! »

ಡಾಕ್ಟರರು ಹೇಳಿದರು:

« ಇದೋ ಹೊರಟುಬಿಟ್ಟೆ. ಅಲ್ಲಿಯವರೆಗೆ ನೀವು ಏನು ಮಾಡುತ್ತೀರಿ? »

« ಫೌಂಟನ್‌ಪೆನ್ನು ಇಲ್ಲದ್ದರಿಂದ, ಪೆನ್ಸಿಲಿನಿಂದ ಬರೆಯಬೇಕೆಂದಿದ್ದೇನೆ? » ನ. ನಾ.



ವ್ಯಕ್ತಿಸ್ವಾತಂತ್ರ್ಯ ಮತ್ತು ಶಕ್ತಿಸಂಘಟನೆ

ಸದ್ಯದ ಯುದ್ಧವಾತಾವರಣದಲ್ಲಿ ನಮ್ಮ ದೇಶದ ರಾಜಕಾರಣಕ್ಕೆ ಒಂದು ವಿಶಿಷ್ಟಸ್ವರೂಪ ಬಂದಿದೆ, ಒಂದು ದೃಷ್ಟಿಯಿಂದ ತಡೆಯೂ ಉಂಟಾಗಿದೆ; ಮುಸ್ಲಿಂಲೀಗ, ಲಿಬರಲ್, ಹಿಂದುಮಹಾಸಭೆ, ಕಾಂಗ್ರೆಸ್ (ಪಂಡಿತ ಜವಾಹರರನ್ನುಳಿದು) ಮುಂತಾದ ಎಲ್ಲ ರಾಜಕೀಯ ಪಕ್ಷಗಳು ಒಂದೇ ಸ್ವರದಿಂದ ಬ್ರಿಟಿಶರಿಗೆ ಸಹಾನುಭೂತಿಯನ್ನು ತೋರಿಸಿದ್ದಾರೆ; ಇದರಲ್ಲಿ ಆಶ್ಚರ್ಯಪಡತಕ್ಕಂತಹ ವಿಷಯವಿಲ್ಲ. ಇಂದು ಯುರೋಪದಲ್ಲಿ ಜರ್ಮನಿಯಿಂದ ಉದ್ಭವಿಸಿದ ಯುದ್ಧವು, ರಾಷ್ಟ್ರ-ರಾಷ್ಟ್ರಗಳ (ಅದರಲ್ಲೂ ಕೆಲವೇ ರಾಷ್ಟ್ರಗಳ) ನಡುವೆ ನಡೆದ ಕದನವಲ್ಲ. ಈ ನಮ್ಮ 'ನೋಟ'ದಲ್ಲಿ ಹಿಂದೆ ಅನೇಕ ಸಲ ಹೇಳಿದಂತೆ ಇದಕ್ಕೆ 'ತತ್ತ್ವಗಳ ಯುದ್ಧ'ಎಂದು ಹೇಳಬಹುದಾಗಿದೆ. ಒಂದೇ ರಾಷ್ಟ್ರದಲ್ಲಿ ಎರಡು-ಯುದ್ಧದಲ್ಲಿ ತೊಡಗಿದ-ಪಕ್ಷಗಳಿವೆ ಎಂಬುದು ನಾರ್ವೆ, ಡೆನ್ಮಾರ್ಕಗಳ ದೃಷ್ಟಾಂತದಿಂದ ತಿಳಿದುಬರುವುದು. ಇಂಗ್ಲಂಡಿನಲ್ಲೂ ಒಂದು ಫಾಸಿಸ್ಟ ಪಕ್ಷವಿದೆ-ಅಥವಾ ಇದ್ದಿತು ಎನ್ನೋಣ; ಈಗ ಆ ಪಕ್ಷದವರನ್ನೆಲ್ಲ ಬಂಧನದಲ್ಲಿರಿಸಲಾಗಿದೆ ಎಂಬ ಸಂಗತಿಯಿಂದ ಈ ಯುದ್ಧದ ವಿಶಿಷ್ಟಸ್ವರೂಪವು ತಿಳಿದುಬರುವುದು. ಎರಡು ರಾಜಕೀಯ ತತ್ತ್ವಗಳ ನಡುವೆ ಈ ಯುದ್ಧ ನಡೆದಿದೆ; ಈ ಯುದ್ಧದ ಪರಿಣಾಮವಾಗಿ ನಮ್ಮ ಜೀವನಸಂಸ್ಕೃತಿಯೆ ಬದಲಾಯಿಸುವುದರಲ್ಲಿ ಸಂದೇಹವಿಲ್ಲ, ಇಂದು ಸಂಘರ್ಷಣೆಗೊಳಗಾದ ಎರಡು ತತ್ತ್ವಗಳೆಂದರೆ- ವ್ಯಕ್ತಿಸ್ವಾತಂತ್ರ್ಯ ಒಂದು, ಶಕ್ತಿಸಂಘಟನೆ ಮತ್ತೊಂದು.

ಹಿಟ್ಲರನ ಹುಂಬವಾದ

ಶಕ್ತಿಸಂಘಟನೆಯ ತತ್ತ್ವಕ್ಕೆ ಹಿಟ್ಲರನ ಜರ್ಮನಿಯೆ ತವರ್ಮನೆಯಾಗಿದೆ. 'ಶಕ್ತಿಯೆ ಜೀವಿತದ ಸಾಧನ' ಎಂಬುದು ಹಿಟ್ಲರವಾದದ ತಳಹದಿ. 'ವ್ಯಕ್ತಿಯ ಶಕ್ತಿಗಿಂತ ಸಂಘಟನೆಯ ಶಕ್ತಿ ಶ್ರೇಷ್ಠವಾದುದು' ಎಂಬ ತರ್ಕವನ್ನನುಸರಿಸಿ ಹಿಟ್ಲರನು 'ರಾಷ್ಟ್ರ' ಎಂಬುದನ್ನು ಶಕ್ತಿಸಂಘಟನೆಯ ಕೇಂದ್ರವನ್ನಾಗಿ ಮಾಡಿದ್ದಾನೆ. ಅದಕಾಗಿ ಹಿಟ್ಲರವಾದದಲ್ಲಿ ರಾಷ್ಟ್ರಕ್ಕೆ ಮಾತ್ರವೆ ಅಸ್ತಿತ್ವವಿದೆ, ವ್ಯಕ್ತಿಗೆ ಅಸ್ತಿತ್ವವಿಲ್ಲ. ವ್ಯಕ್ತಿಸ್ವಾತಂತ್ರ್ಯದ ರಾಷ್ಟ್ರಗಳಲ್ಲಿ ಮೇಲಧಿಕಾರವು ವ್ಯಕ್ತಿಯ ಮತಾಧಿಕಾರದ ಮೇಲೆ ಅವಲಂಬಿಸಿರುವುದು. ವ್ಯಕ್ತಿಸ್ವಾತಂತ್ರ್ಯವಿದ್ದಲ್ಲಿ ಸಾರ್ವಜನಿಕ ಮತಾಧಿಕಾರ (universal franchise)ವು ವೈಶಿಷ್ಟ್ಯವಾಗಿದೆ. ಸಾಮಾನ್ಯ ಮನುಷ್ಯನಿಗೆ ಮತಾಧಿಕಾರಕ್ಕೆ ಬೇಕಾಗುವ ವಿವೇಕಬುದ್ಧಿ ಇರುವುದಿಲ್ಲವೆಂಬುದು ನಮ್ಮ ದೇಶದಲ್ಲಿ ಇತ್ತಿತ್ತಲಾಗಿ ಹೆಚ್ಚು ಸ್ಪಷ್ಟವಾಗಿ ಕಂಡುಬರುತ್ತಲಿದೆ. ಈ ಕಾರಣಕ್ಕಾಗಿ ಹಿಟ್ಲರನ ತಂತ್ರದಲ್ಲಿ ವೈಯಕ್ತಿಕಸ್ವಾತಂತ್ರ್ಯಕ್ಕೆ ಸ್ಥಾನವಿಲ್ಲ. ಅವನ ಪದ್ಧತಿ ನಾಯಿ-ಕುರಿಹಿಂಡು ಪದ್ಧತಿ. ಕುರಿಹಿಂಡಿಗೆ ನಾಯಿ ಬೇಕೇ ಬೇಕು; ರಾಷ್ಟ್ರಕ್ಕೆ ಒಬ್ಬ ನಾಯಕನೇ ಬೇಕು. ನಾಯಿ ತೋರಿಸುವ ದಾರಿಯಲ್ಲಿಯೆ ಕುರಿಹಿಂಡು ಹೋಗಬೇಕು. ಇದರಿಂದ ಕುರಿಹಿಂಡಿಗೆ ತಾತ್ಪೂರ್ತಿಕವಾಗಿ ಭದ್ರತೆ ಇದೆ. ನಾಯಿ ಚಿರಂಜೀವಿಯಲ್ಲ ಎಂಬುದೊಂದೇ ತೊಡಕು ಈ ಪದ್ಧತಿಯಲ್ಲಿ; ಆದರೆ ನಾಯಿ ಇರುವವರೆಗೆ ಮಾತ್ರ ಸ್ಪೃಹಣೀಯವಾದ ಶಿಸ್ತು, ಸುರಕ್ಷಿತತೆ ಮತ್ತು ಶಕ್ತಿಸಂಘಟನೆ ಇರುವುವೆಂಬುದು ಹಿಟ್ಲರನ ಸದ್ಯದ ಹಾವಳಿಯಿಂದ, ಯುದ್ಧದಲ್ಲಿ ಅವನಿಗೆ ದೊರೆವ ಮುನ್ನಡೆಯಿಂದ ಕಂಡುಬರುವುದು.

ಸ್ವಾತಂತ್ರ್ಯಕ್ಕೆ ಸಾವಿಲ್ಲ

ಆದರೆ ವ್ಯಕ್ತಿಸ್ವಾತಂತ್ರ್ಯದ ಪದ್ಧತಿಯಲ್ಲಿ-ಸದ್ಯಕ್ಕೆ ನಡೆಯುತ್ತಿರುವ ಯುದ್ಧದಿಂದ ಎಷ್ಟೋ ಲೋಪಗಳು ಕಂಡುಬಂದರೂ-ಒಂದು ಅತ್ಯಂತ ಆಕಾಂಕ್ಷಣೀಯವಾದ ವೈಶಿಷ್ಟ್ಯವಿದೆ. ಅದೆಂದರೆ ತಪ್ಪಿದುದನ್ನು ಒಪ್ಪಿ ಸರಿಪಡಿಸಿಕೊಂಡು ಬೆಳೆಯುವ ಶಕ್ತಿ. ಇಂಗ್ಲಂಡಿನಲ್ಲಿ ವಿನ್‌ಸ್ಟನ ಚರ್ಚಿಲ್‌ರು ಮುಖ್ಯಪ್ರಧಾನರಾದುದೂ ಸಹಾಯಕ ರಾಷ್ಟ್ರಗಳ ಸೇನಾನಾಯಕನಾದ ಗಾಮೆಲಾ ಅಧಿಕಾರಚ್ಯುತನಾದುದೂ ಈ ಮಾತಿಗೆ ಸಾಕ್ಷ್ಯ. ಜರ್ಮನಿಯಲ್ಲಿ ಹಿಟ್ಲರನ ನಾಯಕತ್ವ ಬೇಡವಾದರೆ, ಸಶಸ್ತ್ರ ಇಲ್ಲವೆ ಕ್ರೂರ ಕ್ರಾಂತಿಯಿಂದಲೇ ಆ ನಾಯಕತ್ವವನ್ನು ಬದಲಾಯಿಸಬೇಕಲ್ಲದೆ ಬೇರೆ ಮಾರ್ಗವೆ ಇಲ್ಲ. ಈ ದೃಷ್ಟಿಯಿಂದ ಹಿಟ್ಲರವಾದದ ಮುಂದೆ ಪ್ರಜಾಪ್ರಭುತ್ವವು ಅಹಿಂಸಾಪರವಾದುದೆಂದು ಹೇಳಬಹುದು. ಏಕನಾಯಕತ್ವದ ತಂತ್ರಕ್ಕೆ ಸ್ಥಿರತೆ ಇಲ್ಲ, ಆದರೆ 'ವ್ಯಕ್ತಿ' ಎಂಬುದಕ್ಕೆ ಸಾವೇ ಇಲ್ಲ!

ಶಕ್ತಿಯು ಗುರಿಯಾವುದು ?

ಹಿಟ್ಲರವಾದದಲ್ಲಿ ಇನ್ನೊಂದು ದೊಡ್ಡ ದೋಷವಿದೆ. ಸಂಘಟನೆಯೂ ಬೇಕು, ಶಕ್ತಿಯೂ ಬೇಕು, ಇಲ್ಲದಿದ್ದರೆ ಸುರಕ್ಷಿತತೆಯೆ ಇಲ್ಲ ಎಂಬುದನ್ನು ಹಿಟ್ಲರನ ಶತ್ರುಗಳು ಕೂಡ ಒಪ್ಪುವರು. ಆದರೆ ಈ ಶಕ್ತಿಸಂಘಟನೆಗೆ ಗುರಿಯಾವುದು ಎಂಬುದರಲ್ಲಿ ತೀವ್ರ ಮತಭೇದವಿದೆ. ಶಕ್ತಿಯು ಸಾಧನವೂ ಎನಿಸಬಹುದು, ಸಾಧ್ಯವೂ ಎನಿಸಬಹುದು. ಸಾಧನವೆನಿಸಿದಾಗ ಅದಕ್ಕೊಂದು ಗುರಿ ಇದೆ; ಸಾಧ್ಯವೆನಿಸಿದಾಗ ಶಕ್ತಿಯೆ ಗುರಿಯಾಗುವುದು. ಇಂದು ಜರ್ಮನಿಗೆ ಶಕ್ತಿಯೆ ಗುರಿಯಾಗಿದೆ. ಹಿಟ್ಲರನು ಅಧಿಕಾರಕ್ಕೆ ಬಂದಂದಿನಿಂದ ಶಕ್ತಿಯನ್ನು ಗುರಿಯಾಗಿ ಸಂಪಾದಿಸುತ್ತಲಿದ್ದಾನೆ; ಅದಕ್ಕಾಗಿಯೆ ಅವನಿಗೆ ಯುದ್ಧದ ಪ್ರಾರಂಭದ ದಶೆಯಲ್ಲಿ ಪರಿಸ್ಥಿತಿ ಅನುಕೂಲವಾಗಿ ಪರಿಣಮಿಸಿದೆ. ಹಿಟ್ಲರನು ಶಕ್ತಿಯನ್ನು ಸಂಪಾದಿಸಿದ್ದು ಆತ್ಮರಕ್ಷಣೆಗೊ ಅನ್ಯರ ಸಂಹಾರಕ್ಕೊ ಎಂಬ ಪ್ರಶ್ನೆಗೆ ಒಂದೇ ಒಂದು ನಿಃಸಂದಿಗ್ಧವಾದ ಉತ್ತರವಿದೆ; ಅದೆಂದರೆ: ಅನ್ಯರ ಸಂಹಾರಕ್ಕಾಗಿ! ಜಗತ್ತಿನೊಳಗೆ ಇನ್ನೊಬ್ಬನಿರುವವರೆಗೆ ತನಗೆ ಹೆದರಿಕೆ ಎಂಬ ತರ್ಕದಿಂದ ಎಲ್ಲರನ್ನೂ ಸಂಹರಿಸಿ ಒಬ್ಬನೇ ಬಾಳಬೇಕೆಂಬ ವೃತ್ತಿ ಹಿಟ್ಲರವಾದದಲ್ಲಿ ಕಂಡುಬರುವುದು ! ಆದಕ್ಕಾಗಿಯೆ ಹಿಟ್ಲರನಿರುವವರೆಗೆ ಜಗತ್ತಿನಲ್ಲಿ ಶಾಂತಿ ಇಲ್ಲ, ಹಿಟ್ಲರನು ಗೆದ್ದರೆ ಜಗತ್ತಿನಲ್ಲಿ ಸ್ವಾತಂತ್ರ್ಯವಿಲ್ಲ– ಎಂಬ ಘೋಷ ಎಲ್ಲ ಕಡೆ ನಡೆದಿದೆ.

ಭಾರತದ ಸಮಸ್ಯೆ

ಕಾಂಗ್ರೆಸಿನ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರು ತಮ್ಮ ಹೇಳಿಕೆಯಲ್ಲಿ ಇದೇ ಧೋರಣೆಯನ್ನು ಕಾಣಿಸಿದ್ದಾರೆ. 'ಬ್ರಿಟಿಶ ಸಾಮ್ರಾಜ್ಯಶಾಹಿತ್ವವು ಅನಿಷ್ಟವಾದುದೇನೊ ನಿಜ, ಆದರೆ ಹಿಟ್ಲರವಾದಕ್ಕಿಂತ ಅದು ಹಿತಕರವಾದುದು ' ಎಂದು ತಮ್ಮ ಅಭಿಪ್ರಾಯವನ್ನು ಧೈರ್ಯದಿಂದ ಬಿಚ್ಚಿಟ್ಟಿದ್ದಾರೆ. ಮಹಾತ್ಮಾ ಗಾಂಧಿಯವರು ಈ ಮಾತನ್ನು ೯–೬ ತಿಂಗಳು ಮುಂಚಿತವಾಗಿಯೆ ಸಾರಿದ್ದಾರೆ. ಸದ್ಯಕ್ಕೆ ಸಹಾಯಕ ರಾಷ್ಟ್ರಗಳು ಬಿಕ್ಕಟ್ಟಿನಲ್ಲಿ ಸಿಕ್ಕುದರಿಂದ, ನಾವೆಲ್ಲರೂ ನಮ್ಮ ಪಕ್ಷ-ಪಂಗಡಗಳನ್ನು ಮರೆತು ಒಂದುಗೂಡಿ,ನಮಗೆ ಪ್ರಿಯವಾದ ಸ್ವಾತಂತ್ರ್ಯತತ್ತ್ವದ ಸಹಾಯಕ್ಕಾಗಿ ಬ್ರಿಟನ್ನಿನ ಬೆನ್ನುಕಟ್ಟಬೇಕು— ಎಂದು ಒಂದು ಕಡೆ ಜಿನಾ ಅವರು, ಒಂದು ಕಡೆ ಸಾವರಕರರು ಏಕವಾಕ್ಯವಾಗಿ ಹೇಳಿದ್ದಾರೆ! ಇದೇ ಸಂದರ್ಭದಲ್ಲಿ ಮಿತವಾಗಿಯೂ ಮಿದುವಾಗಿಯೂ ಮಾತನಾಡಲು ಧೈರ್ಯವುಳ್ಳ ಸ್ಟೇಟ್ ಸೆಕ್ರೆಟರಿಯೊಬ್ಬರು ಅಧಿಕಾರಕ್ಕೆ ಬಂದಿದ್ದಾರೆ. ಇವೆಲ್ಲ ಸಂದರ್ಭಗಳು ಸೇರಿ, ತಾತ್ಪೂರ್ತಿಕವಾಗಿಯಾದರೂ ಹಿಂದುಸ್ಥಾನದ ರಾಜಕೀಯಸಮಸ್ಯೆಗೆ ಸಮಾಧಾನಕಾರಕವಾದ ಉತ್ತರ ದೊರೆಯುವ ಲಕ್ಷಣವಿದೆ. ಸ್ವಾತಂತ್ರ್ಯದ ಹೆಸರಿನಿಂದ, ಅಭಿಮಾನದಿಂದ ಇಂದು ಒಂದುಗೂಡುವ ನಮ್ಮ ರಾಜಕೀಯ ಪಕ್ಷಪುರೋಹಿತರಲ್ಲಿ, ಪರಸ್ಪರ ಪರಿಚಯ ಮತ್ತು ವಿಶ್ವಾಸ ಬೆಳೆಯುವುದರಲ್ಲಿ ಸಂದೇಹವಿಲ್ಲ. ಆದರಂತೆಯೆ ಹೀಗೆ ಒಂದುಗೂಡುವ ಪಕ್ಷಗಳನ್ನು ಧಿಕ್ಕರಿಸುವ ಶಕ್ತಿಯು ಯುದ್ಧದಲ್ಲಿ ವಿಜಯದೊರಕಿಸಿದ ಇಂಗ್ಲಂಡಿಗೂ ಸಾಲದಾಗುವುದು. ಎಲ್ಲವೂ ವೈಸರಾಯರ ಮೇಲೆ ಅವಲಂಬಿಸಿದಂತೆ. ಪ್ರಾಮಾಣಿಕ ಧೈರ್ಯದಿಂದ ಮುಂದಾಗಿ ಅವರು ಎಲ್ಲರನ್ನೂ ಒಂದೆಡೆ ಆಮಂತ್ರಿಸಿದರೆ, ಪಕ್ಷಗಳ ಏಕೀಕರಣವು ಕೂಡಲೆ ಘಟಿಸುವ ಲಕ್ಷಣಗಳಿವೆ. ಹಿಂದುಸ್ಥಾನದ ಸಾರ್ವತ್ರಿಕ ನೈತಿಕಬಲ, ಸಾಮ್ರಾಜ್ಯದಲ್ಲಿ ಒಕ್ಕಟ್ಟು ಇವೆ ಎಂಬುದು ಸ್ಪಷ್ಟವಾದರೆ, ಶತ್ರುವಿನ ಶಕ್ತಿ ಅಷ್ಟರ ಮಟ್ಟಿಗೂ ಕುಗ್ಗುವುದು.

ಪಾಕಿಸ್ಥಾನದ ಪರಾಭವ

ಕೊನೆಯದಾಗಿ ಇಂತಹ ಘಟನೆಯಿಂದ ಪಾಕಿಸ್ಥಾನದ ಘಾತುಕ ಯೋಜನೆಯೂ ಹಿಂದೆಬೀಳುವುದರಲ್ಲಿ ಸಂದೇಹಲ್ಲ. ಮುಂದಾಳುಗಳ ಸೌಹಾರ್ದವೂ ಇದಕ್ಕೆ ಕಾರಣವಾಗುವುದು. ಆದರೆ ಮುಖ್ಯವಾದ ಮಾತೆಂದರೆ, ಹಿಟ್ಲರವಾದಕ್ಕೂ ಪಾಕಿಸ್ಥಾನ ಯೋಜನೆಗೂ ಇದ್ದ ತಳಹದಿಯ ಸಾಮ್ಯ. ಇನ್ನೊಬ್ಬರಿಂದ ತನಗೆ ಭೀತಿ ಎಂದು ಹಿಟ್ಲರನಂತೆ ಮುಸ್ಲಿಂ ಸಮಾಜವೂ ನಂಬಿ, ರಾಷ್ಟ್ರವೆಂದರೆ ಒಂದೇ ಜಾತಿ-ಜನಾಂಗದ ಗುಂಪು ಎಂದು ಹಿಟ್ಲರನಂತೆಯೆ ಒಪ್ಪಿ, ಅಲ್ಪಸಂಖ್ಯಾಕ ಸಜಾತೀಯರು ಹೊರಗಿರುವಾಗ, ವಾತಾಪಿಯಂತೆ (Quisling, Fifth Column) ದ್ರೋಹಕವಾಗಬೇಕೆಂಬ ಭಾವನೆಗೊಳಗಾಗಿ ಪಾಕಿಸ್ಥಾನ 'ನಾಝಿಸ್ಥಾನ' ದಿಂದ ಬೇರೆಯಲ್ಲದಾಗಿದೆ. ಆದಕಾಗಿ ಹಿಟ್ಲರನ ನಾಶವಾದರೆ ಅದೇ ಹೊಡೆತಕ್ಕೆ ಪಾಕಿಸ್ಥಾನವೂ ಮಣ್ಣುಗೂಡುವುದರಲ್ಲಿ ಸಂದೇಹವಿಲ್ಲ. ಹೀಗೆ ಎಲ್ಲ ದೃಷ್ಟಿಗಳಿಂದ, ನಮ್ಮ ಅನೇಕ ಮುಂದಾಳುಗಳು ಹೇಳುವಂತೆ, ನಮ್ಮ ಸದ್ಯದ ಕರ್ತವ್ಯವೆಂದರೆ ಸ್ವಾರ್ಥವನ್ನೂ ಸಂಕುಚಿತ ಭಾವನೆಗಳನ್ನೂ ಬದಿಗಿಟ್ಟು ಹಿಟ್ಲರನನ್ನೂ ಹಿಟ್ಲರವಾದವನ್ನೂ ನಿರ್ಮೂಲಗೊಳಿಸುವುದು.

ಕನ್ನಡ ಪಂಡಿತರು, ಕನ್ನಡ ಗ್ರ್ಯಾಜ್ಯುಏಟರು

ಸಂಸ್ಕೃತದಂತೆಯೆ ಕನ್ನಡವೂ ಸಾಕಷ್ಟು ವೈದಗ್ಧ್ಯದಿಂದ ಕೂಡಿದ ಭಾಷೆ. ಆದುದರಿಂದಲೆ ಸಂಸ್ಕೃತದಂತೆಯೆ ಕನ್ನಡಕ್ಕೂ ಪಾಂಡಿತ್ಯದ ಒಂದು ಪರಂಪರೆಯುಂಟು. ಮುಂಬಯಿ ಸರಕಾರಕ್ಕೊಳಗಾದ ಮಿಕ್ಕ ಯಾವ ಭಾಷೆಗಳಿಗೂ ಇಂತಹ ಪರಂಪರೆಯಿಲ್ಲವೆಂಬುದನ್ನು ನಾವು ಪ್ರತ್ಯಕ್ಷವಾಗಿ ಕಾಣಬಹುದಾಗಿದೆ. ಪಾಂಡಿತ್ಯಪರಂಪರೆಯ ಆವಶ್ಯಕತೆಯನ್ನರಿತೇ ಮೈಸೂರು ಸರಕಾರವು 'ಕನ್ನಡ ಪಂಡಿತ' ಪರೀಕ್ಷೆಯನ್ನಿಟ್ಟಿರುವುದು; ಮದ್ರಾಸ ಸರಕಾರವು 'ಕನ್ನಡ ವಿದ್ವಾನ್' ಪರೀಕ್ಷೆಯನ್ನಿಟ್ಟಿರುವುದು. ಮುಂಬಯಿ ಸರಕಾರವು ಕೂಡ ಇದುವರೆಗೆ ಈ 'ಪಂಡಿತ' 'ವಿದ್ವಾನ್' ಪರೀಕ್ಷೆ ಪಾಸಾದವರ ಆವಶ್ಯಕತೆಯನ್ನರಿತು, ಅವರಿಗೆ ಮನ್ನಣೆಯ ಸ್ಥಾನವನ್ನು ಕೊಡುತ್ತ ಬಂದಿದೆ. ಆದರೆ ಈಗ ಅದಕ್ಕೆ ಪಂಡಿತರ ಆವಶ್ಯಕತೆ ಕಾಣದಾಗಿದೆಯಂತೆ. ಕನ್ನಡದ ಇಂದಿನ ಅಭ್ಯಾಸಿಗಳಿಗೆ ಪಂಡಿತರಿಂದ ಕಲಿಯಬೇಕಾದ ವಿಷಯವೂ ತುಂಬ ಇದೆ.

ನಮ್ಮ ಪೌರ್ವಾತ್ಯ ವಾಙ್ಮಯವನ್ನು ಅಭ್ಯಾಸಮಾಡಬೇಕಾದಲ್ಲಿ, ನಾವಿಂದು ಎರಡು ರೀತಿಗಳಿಂದ ಅದನ್ನು ಅವಲೋಕಿಸ

ಬೇಕಾಗುವುದು. ಮೊದಲನೆಯದು ಪೌರ್ವಾತ್ಯ ಲಕ್ಷಣಶಾಸ್ತ್ರದ ರೀತಿ. ಎರಡನೆಯದು ಪಾಶ್ಚಾತ್ಯರ ವಿಮರ್ಶಾಶಾಸ್ತ್ರದ ರೀತಿ. ಪೌರ್ವಾತ್ಯ ಲಕ್ಷಣಶಾಸ್ತ್ರಗಳ ಸೂಕ್ಷ್ಮ ಪರಿಚಯ ಪಂಡಿತರಿಗಿರುವಷ್ಟು ಪದವೀಧರರಿಗಿರುವುದಿಲ್ಲ; ಪಾಶ್ಚಾತ್ಯರ ವಿಮರ್ಶಾಶಾಸ್ತ್ರದ ಪರಿಚಯ ಪಂಡಿತರಿಗಿರುವುದಿಲ್ಲ. ಆದರೆ ಕನ್ನಡದ ಸಾಹಿತ್ಯದ ಅಭ್ಯಾಸಕ್ಕೆ ಎರಡರ ಆವಶ್ಯಕತೆಯೂ ಇದೆಯೆಂಬುದನ್ನು ಮರೆತು ನಡೆಯುವಂತಿಲ್ಲ. ಇಂದಿನ ಬಿ. ಎ., ಎಂ. ಎ. ಪದವೀಧರರಿಗೆ ಕನ್ನಡ ಲಕ್ಷಣಶಾಸ್ತ್ರ, ಕನ್ನಡ ಸಾಹಿತ್ಯದಲ್ಲಿ ಹೆಚ್ಚಾಗಿ ತೋರುವ ಬೇರೆ ಬೇರೆ ಮತ-ಧರ್ಮಗಳ ಪೌರಾಣಿಕ ಕಥಾಸಂದರ್ಭ, ಆಚಾರ-ವಿಚಾರ ಸಂದರ್ಭ ಇವುಗಳ ಸಂಪೂರ್ಣಜ್ಞಾನವಿರುವುದಿಲ್ಲ. ಏಕೆಂದರೆ ಇಂದಿನ ಪರೀಕ್ಷೆಯ ರೀತಿಯಲ್ಲಿ ಅವುಗಳಿಗೆ ಹೆಚ್ಚಿನ ಅವಕಾಶವೆ ಇಲ್ಲ. ಪಂಡಿತರಿಗೆ ಮಾತ್ರ ಇವುಗಳ ಕೂಲಂಕಷ ಜ್ಞಾನವಿರಬಹುದಾದ ವಿರ್ಪಾಡು ಅವರ ಅಭ್ಯಾಸ-ಪರೀಕ್ಷೆಗಳಲ್ಲಿದೆ. ಆದುದರಿಂದಲೆ ಕನ್ನಡದ ಹೆಚ್ಚಿನ ಅಭ್ಯಾಸವು ಯಾವ ಯಾವ ವಿದ್ಯಾಸಂಸ್ಥೆಗಳಲ್ಲಿ ನಡೆಯಬೇಕೆಂದಿರುವುದೊ, ಆ ಆ ಸಂಸ್ಥೆಯ ಸಂಚಾಲಕರು, ಕನ್ನಡ ಕಲಿಸುವುದಕ್ಕಾಗಿ ಪಂಡಿತಶಿಕ್ಷಕರನ್ನೂ ಇರಿಸಬೇಕು; ಪದವೀಧರ ಶಿಕ್ಷಕರನ್ನೂ ಇರಿಸಬೇಕು. ಹೀಗೆ ಮಾಡದೆ, ಬರಿಯೆ ಪಂಡಿತರನ್ನಿರಿಸಿದರೂ ಸರಿಯೆ ಬರಿಯೆ ಪದವೀಧರರನ್ನಿರಿಸಿದರೂ ಸರಿಯೆ—ವಿದ್ಯಾರ್ಥಿಗಳಿಗೆ ಏಕದೇಶೀಯ ಜ್ಞಾನವಾಗಿ, ಅವರ ಕನ್ನಡಪಾಂಡಿತ್ಯವು ಒಂದೆ ಗಾಲಿಯ ಬಂಡಿಯಂತಾಗುವುದು ಕಟ್ಟಿಟ್ಟ ಮಾತು. ಮುಂಬಯಿ ಸರಕಾರದವರು ಬರಿಯೆ ಪದವೀಧರರೆಂಬ ಹುಚ್ಚುಭ್ರಮೆಯಲ್ಲಿ ಬೀಳದೆ, ತಮ್ಮ ಉಚ್ಚ ವಿದ್ಯಾಸಂಸ್ಥೆಗಳಲ್ಲೆಲ್ಲ—ಉದಾಹರಣಾರ್ಥವಾಗಿ ಕರ್ನಾಟಕ ಕಾಲೇಜ್, ಧಾರವಾಡ ಪ್ರಾ. ಶಿಕ್ಷಕರ ಟ್ರೇನಿಂಗ್ ಕಾಲೇಜ್, ಬೆಳಗಾಂವಿಯ ಮಾ. ಶಿಕ್ಷಕರ ಟ್ರೇನಿಂಗ್ ಕಾಲೇಜ್, ಅಲ್ಲಲ್ಲಿಯ ಸರಕಾರಿ ಹೈಸ್ಕೂಲುಗಳು ಇಲ್ಲೆಲ್ಲ— ಪದವೀಧರರಂತೆಯೆ 'ಕನ್ನಡ ಪಂಡಿತ' 'ಕನ್ನಡ ವಿದ್ವಾನ್' ಅವರಿಗೂ ಎಡೆಕೊಡುವುದು—ವಿದ್ಯಾರ್ಥಿಗಳ ಹಿತದ ದೃಷ್ಟಿಯಿಂದ—ತುಂಬ ಆವಶ್ಯಕ. ನಾವು ಮುಂಬಯಿ ಸರಕಾರದ ವಿದ್ಯಾಖಾತೆಯವರ ಲಕ್ಷ್ಯವನ್ನು ಈ ಮಾತಿನ ಕಡೆಗೆ ಎಳೆಯಲು ಬಯಸುವೆವು.

ಮುಧೋಳದ ಮರಾಟಿಗರ ಮರುಳುಕೂಗು

ನಮ್ಮಲ್ಲಿ ತತ್ತ್ವವಿಲ್ಲದೆ ಚಳವಳಿಯನ್ನು ಮಾಡುತ್ತಿರುವುದರಿಂದಲೆ ಯಾವ ಚಳವಳಿಗೂ ಯಶಸ್ಸಿಲ್ಲವಿಷ್ಟೇ ಅಲ್ಲ; ನಮ್ಮ ನಮ್ಮಲ್ಲಿಯೆ ಹೊಡೆದಾಡಬೇಕಾದ ಸಂದರ್ಭ ಬೇಕಾದಷ್ಟು ಸಲ ಬರುತ್ತಲಿದೆ. ಇದಕ್ಕೆ ಉದಾಹರಣೆಯೆಂದು ಮುಧೋಳ ಸಂಸ್ಥಾನದಲ್ಲಿ ನಡೆದಿರುವ ಸಂಗತಿಯೊಂದನ್ನು ಹೇಳಬಹುದು: ಮುಧೋಳ ಸಂಸ್ಥಾನವು ಸಂಪೂರ್ಣ ಕನ್ನಡ ಮಾತನಾಡುವವರ ಪ್ರದೇಶ. ಸಂಸ್ಥಾನಿಕರು ಮಾತ್ರ ಮರಾಠಾ ಜಾತಿಯವರು. ಎಂತಲೆ ಇದುವರೆಗೆ ಅಲ್ಲಿಯ ಶಿಕ್ಷಣದ ಭಾಷೆಯೂ ಆಡಳಿತದ ಭಾಷೆಯೂ ಮರಾಟಿಯಾಗಿಯೆ ಇದ್ದಿತು. ಆದರೆ ಇತ್ತೀಚೆಗಿನ ಅಲ್ಲಿಯ ಜನಜಾಗೃತಿಯ ಮೂಲಕವೆನ್ನಿ ಅಥವಾ ಸದ್ಯದ ಸಂಸ್ಥಾನಿಕರ ಉದಾರಧೋರಣೆಯಿಂದೆನ್ನಿ, ೧೦೦ಕ್ಕೆ ೧೦೦ ಪ್ರಜೆಗಳ ಭಾಷೆಯಾದ ಕನ್ನಡವು, ಆಡಳಿತದ ಭಾಷೆಯ ಸ್ಥಾನವನ್ನು ಕ್ರಮಕ್ರಮವಾಗಿ ಪಡೆಯುವುದರಲ್ಲಿದೆ. ಅದಕ್ಕನುಸಾರವಾಗಿ ಮುಧೋಳ ಪ್ರಜಾಪ್ರತಿನಿಧಿ ಸಭೆಯಲ್ಲಿ, ಅಲ್ಲಿಯ ಮೇಲ್ತರಗತಿಯ ಶಾಲೆಗಳಲ್ಲಿ ಈಗ ಪ್ರಚಾರದಲ್ಲಿರುವ ಮರಾಟಿ ೬–೭ ನೆಯ ಇಯತ್ತೆಗಳನ್ನು ತೆಗೆದುಹಾಕಿ, ಕನ್ನಡ ೬–೭ ನೆಯ ಇಯತ್ತೆಗಳನ್ನು ಪ್ರಾರಂಭಿಸಬೇಕೆಂದು ನಿರ್ಣಯವಾಗಿದೆ. ಈ ನಿರ್ಣಯವಾಗುವುದೇ ತಡ, ನೌಕರಿಯ ಮೂಲಕವೊ ವ್ಯಾಪಾರದ ಮೂಲಕವೊ ಮುಧೋಳ ನಗರದಲ್ಲಿ ವಾಸವಾಗಿರುವ ಮುಷ್ಟಿತುಂಬ ಮರಾಟಿಗರಲ್ಲಿಯ ಕೆಲವರು, ಸರಕಾರಕ್ಕೊಂದು ಬಿನ್ನವತ್ತಳೆ ಕಳಿಸಿ ಚಳವಳಿ ಹೂಡಿದ್ದಾರೆ. ಈ ಚಳವಳಿಯಲ್ಲಿ ಗೃಹಭೇದಿಗಳಾದ ಕೆಲವು ಜನ ಕನ್ನಡಿಗರು ಸೇರಿದ್ದರೂ ಆಶ್ಚರ್ಯಪಡಬೇಕಾದ ಕಾರಣವೇನೂ ಇಲ್ಲ. ಕೇಸರಿಯಂತಹ ಹೊಣೆಗಾರಿಕೆಯನ್ನರಿತ ಪತ್ರವು ಕೂಡ ತತ್ತ್ವವನ್ನು ಮರೆತು ಈ ಮರಾಟಿಗರ ಚಳವಳಿಯನ್ನು ಎತ್ತಿಹಿಡಿಯುತ್ತಿದೆಯೆಂದ ಮೇಲೆ, ಇಕ್ಕ ಮರಾಟಿ ಪತ್ರಗಳ ಮಾತನ್ನು ಹೇಳಲೆ ಬೇಕಾಗಿಲ್ಲ. ನಾವು ಬ್ರಿಟಿಷರೊಂದಿಗೆ ನಮ್ಮ ಯಾವ ಯಾವ ಹಕ್ಕುಗಳ ಸಲುವಾಗಿ ಹೋರಾಡುತ್ತಲಿದ್ದೇವೆಯೊ ಅದೇ ಹಕ್ಕುಗಳನ್ನು, ಸಂಸ್ಥಾನಿಕರ ಬಳಿ ಅಲ್ಲಿಯ ಪ್ರಜೆಗಳು ಕೇಳಿದರೆ ಅದು ಅನ್ಯಾಯವೆ! ಬ್ರಿಟಿಷ್ ಮಹಾರಾಷ್ಟ್ರದಲ್ಲಿ ಇಂಗ್ಲಿಷರು ಇಂಗ್ಲಿಷ್ ಭಾಷೆಯನ್ನು, ಶಿಕ್ಷಣದ ಭಾಷೆಯನ್ನಾಗಿ ಆಡಳಿತದ ಭಾಷೆಯನ್ನಾಗಿ ಮಾಡಿದರೆ ಅದು ಬಲುಮೆ–ಜುಲುಮೆ–ಅತ್ಯಾಯವೆನಿಸುವುದು. ಆದರೆ ಸಂಸ್ಥಾನೀ ಕರ್ನಾಟಕದಲ್ಲಿ ಸಂಸ್ಥಾನಿಕರು ತಮ್ಮ ಭಾಷೆಯನ್ನು ಜನರ ಮೇಲೆ ಹೇರುತ್ತಿದ್ದರೆ ಅದು ಬಲುಮೆಯೆನಿಸದೆ! ಇಷ್ಟೇ ಅಲ್ಲ, ಅಲ್ಲಿಯ ಪ್ರಜರು ತಮ್ಮ ಭಾಷೆಯ ಹಕ್ಕಿನ ಸಲುವಾಗಿ ಚಳವಳಿ ಮಾಡಿದರೆ 'ಮರಾಟಿ ಭಾಷೆಯ ಮೇಲೆ ಕನ್ನಡಿಗರ ಜುಲುಮೆ' ಎಂಬ ಕೂಗು ಮಹಾರಾಷ್ಟ್ರದ ಮೂಲೆ ಮೂಲೆಯಲ್ಲಿಯೂ ಕೇಳಬರುತ್ತದೆ. 'ಚೋರಾಚಾ ಉಲಟಾ ಬೋಂಬಾ' ಎಂಬ ಮರಾಟಿಗರ ಗಾದೆಯನ್ನೆ ನಾವೀಗ ಅವರಿಗೆ ಉಡುಗೊರೆಯನ್ನಾಗಿ ಸಲ್ಲಿಸಬೇಕಾಗಿದೆ. ಇದುವರೆಗೆ ಸಮಂಜಸಬುದ್ಧಿಯನ್ನು ತೋರಿಸುತ್ತ ಬಂದಿದ್ದ ಮುಧೋಳ ಆಡಳಿತವು, ಕನ್ನಡದ ಸ್ಥಾನ-ಮಾನಗಳನ್ನರಿತು ಅದಕ್ಕೆ ಸಲ್ಲಬೇಕಾಗಿರುವ ಪ್ರಾಶಸ್ತ್ಯವನ್ನು ಕೊಟ್ಟೇಕೊಡಬೇಕೆಂದು ಅದನ್ನು ಬಿನ್ನವಿಸಿಕೊಳ್ಳಬೇಕಾಗಿದೆ.

ಜಯಂತಿಯ ಚಂದಾದಾರರಾಗುವುದೆಂದರೆ ಹೊಸಕಾಲದಲ್ಲಿ ಬಾಳುವುದಕ್ಕಾಗಿ ತಕ್ಕ ಶಿಕ್ಷಣವನ್ನು ಸುಲಭವಾಗಿ ಸಂಪಾದಿಸಿದಂತಾಗುವುದು!

ಕರ್ನಾಟಕ ವಿದ್ಯಾವರ್ಧಕ ಸಂಘದಿಂದ

ಸಾಹಿತ್ಯಸ್ಪರ್ಧೆಗಳು

ಬರಲಿರುವ ಜುಲೈ (೧೯೪೦) ೨೦ನೆಯ ತಾರೀಖು ಶನಿವಾರ ಕ. ವಿ. ವ. ಸಂಘದ ಸಂಸ್ಥಾಪನಾದಿನವಾದುದರಿಂದ, ಆದಿನ ವಿಶೇಷರೀತಿಯಲ್ಲಿ ಸಾಹಿತ್ಯೋತ್ಸವವೊಂದನ್ನು ನಡೆಯಿಸಬೇಕೆಂದು ನಿರ್ಣಯವಾಗಿದೆ. ಅದರ ಅಂಗವಾಗಿಯೆ ವಿದ್ಯಾರ್ಥಿಗಳ ಸಲುವಾಗಿ ಸಾಹಿತ್ಯಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಕನ್ನಡನಾಡಿನ ಯಾವ ಭಾಗದ ವಿದ್ಯಾರ್ಥಿಗೂ ಇದರಲ್ಲಿ ಎಡೆಯುಂಟು. ಆದುದರಿಂದ ಹಲವು ಜನ ವಿದ್ಯಾರ್ಥಿಗಳು ಉತ್ಸಾಹದಿಂದ ಈ ಸ್ಪರ್ಧೆಗಳಲ್ಲಿ ಭಾಗವಹಿಸಬೇಕಾಗಿ ಬೇಡಿಕೆ.

ಸ್ಪರ್ಧೆಗಳ ವಿವರ

೧. **ನಿಬಂಧ ಲೇಖನಸ್ಪರ್ಧೆ :—** ಇದು ಶುಕ್ರವಾರ ತಾ. ೧೯-೭-೪೦ನೆಯ ಬೆಳಗಿನ ೮|| ಘಂಟೆಗೆ ಪ್ರಾರಂಭವಾಗುವುದು. ಇದಕ್ಕೆ ಗೊತ್ತುಮಾಡಿದ ಅವಧಿ ೧|| ತಾಸು.

೨. **ಸಣ್ಣ ಕಥೆಯ ಲೇಖನಸ್ಪರ್ಧೆ :—** ಇದು ಶುಕ್ರವಾರ ತಾ. ೧೯-೭-೪೦ನೆಯ ಅಪರಾಹ್ನ ೩|| ಗಂಟೆಗೆ ಪ್ರಾರಂಭವಾಗುವುದು. ಇದಕ್ಕೆ ಗೊತ್ತುಮಾಡಿದ ವೇಳೆ ೧|| ತಾಸು.

೩. **ಕಾವ್ಯ ಗಾಯನ ಸ್ಪರ್ಧೆ :—** ಇದು ತಾ. ೨೦-೭-೪೦ನೆಯ ಶನಿವಾರ ದಿನ, ಸಭೆಗೆ ಮೊದಲು ನಡೆಯುವುದು.

ಸ್ಪರ್ಧೆಯ ನಿಯಮಗಳು

(೧) ಪ್ರತಿಯೊಂದು ಸ್ಪರ್ಧೆಯಲ್ಲಿಯೂ ಭಾಗವಹಿಸುವ ವಿದ್ಯಾರ್ಥಿಯ ವಯಸ್ಸು ೧೪ ರ ಮೇಲೆ ೧೮ ರ ಒಳಗೆ ಇರಬೇಕು (ವಯಸ್ಸಿಗಾಗಿ ಅವರವರ ಶಾಲೆಯ ಅಧ್ಯಾಪಕರ ಪ್ರಶಸ್ತಿಯನ್ನೆ ಅಧಿಕೃತವೆಂದು ಗಣಿಸಲಾಗುವುದು).

(೨) ಯಾವನೊಬ್ಬ ವಿದ್ಯಾರ್ಥಿ ಮೂರು ಸ್ಪರ್ಧೆಗಳಲ್ಲಿಯೂ ಭಾಗವಹಿಸಬಹುದು.

(೩) ಪ್ರತಿಯೊಂದು ಸ್ಪರ್ಧೆಯಲ್ಲಿಯೂ ಉತ್ತೀರ್ಣರಾದ ಮೊದಲಿನ ಮೂವರಿಗೆ ಅವರವರ ಸ್ಥಾನಕ್ರಮದಂತೆ ೩ ಬಹುಮಾನಗಳನ್ನು ಕೊಡಲಾಗುವುದು.

(೪) ಪ್ರತಿಯೊಂದು ಸ್ಪರ್ಧೆಯ ೧ನೆಯ ಬಹುಮಾನ ೧೦ ರೂಪಾಯಿ; ೨ನೆಯ ಬಹುಮಾನ ೬ ರೂಪಾಯಿ; ೩ನೆಯ ಬಹುಮಾನ ೩ ರೂಪಾಯಿ. ಬಹುಮಾನಗಳನ್ನು ವಿದ್ಯಾರ್ಥಿಗಳಿಗೆ ಉಪಯುಕ್ತವೆನಿಸಬಹುದಾದ—ಸಂಘವು ಗೊತ್ತುಪಡಿಸಿದ—ಗ್ರಂಥಗಳ ರೂಪದಲ್ಲಿ ಕೊಡಲಾಗುವುದು.

(೫) ನಿಬಂಧಲೇಖನಸ್ಪರ್ಧೆಗಾಗಿ, ಸ್ಪರ್ಧೆಯ ದಿನವೆ ಸೂಚಿಸಲಾಗುವ ನಾಲ್ಕೈದು ವಿಷಯಗಳಲ್ಲಿ, ತಮಗೆ ಬೇಕೆನಿಸಿದ ಒಂದನ್ನು ಆಯ್ದುಕೊಂಡು, ಫು. ಕ್ಯಾ. ಎರಡು ಅರ್ಧಹಾಳೆಗಳಿಗೆ ಮೀರದಂತೆ ನಿಬಂಧ ಬರೆಯಬೇಕು.

(೬) ಕಥಾಲೇಖನಸ್ಪರ್ಧೆಗಾಗಿ, ಕಥಾವಸ್ತುವನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೇ ಕೊಡಲಾಗುವುದು. ಆದರೆ ಆ ಕಥಾವಸ್ತು ತೀರಹೊಸದು ಇರಬೇಕು.

(೭) ಯಾವುದೇ ಸ್ಪರ್ಧೆಯಲ್ಲಿ ಬಹುಮಾನಕ್ಕೆ ಅರ್ಹವಾದ ನಿಬಂಧ-ಕಥೆಗಳು ಇಲ್ಲವೆಂದು ನಿರ್ಣಾಯಕರು ಅಭಿಪ್ರಾಯಪಟ್ಟಲ್ಲಿ, ಬಹುಮಾನಕೊಡಲಿರುವ ಸ್ವಾತಂತ್ರ್ಯವನ್ನು ಸಂಘವು ತನ್ನ ಕಡೆಗೆ ಇಟ್ಟುಕೊಂಡಿದೆ.

(೮) ಕಾವ್ಯಗಾಯನಸ್ಪರ್ಧೆಯಲ್ಲಿ ಭಾಗವಹಿಸುವವರು, ೨೪ ರಿಂದ ೩೬ ರ ವರೆಗೆ ಪಙ್ತಿಗಳಾಗಬಹುದಾದ ಎರಡು ಕವಿತೆಗಳನ್ನೊ, ಒಂದು ಕವಿತೆಯನ್ನೊ ಇಲ್ಲವೆ ಹಳಗನ್ನಡ ಕಾವ್ಯಗಳಲ್ಲಿಯ ಪದ್ಯಗಳನ್ನೊ ಉಚಿತವಾದ ಧಾಟಿಯಲ್ಲಿ ಹಾಡಿತೋರಿಸಬೇಕು.

(೯) ಸ್ಪರ್ಧೆಯಲ್ಲಿ ಭಾಗವಹಿಸುವವರು ತಾವು ಯಾವಯಾವ ಸ್ಪರ್ಧೆಗಳಲ್ಲಿ ಸೇರಲೆಳಸುವರೆಂಬುದನ್ನು ೧೬-೭-೪೦ರೊಳಗಾಗಿ, ಬರೆಹಮೂಲಕವಾಗಿ, ಸಂಘದ ಕಾರ್ಯದರ್ಶಿಗಳ ಬಳಿ ತಿಳುಹಬೇಕು (ಇದರಲ್ಲಿಯೆ ವಯಸ್ಸಿನ ನಂಬುಗೆಯ ಬಗೆಗೆ ಅಧ್ಯಾಪಕರ ಒಪ್ಪಿತವು ಇರಬೇಕು).

ಕೆ. ಎಸ್. ಕವಲಾಪೂರ

ಧಾರವಾಡ
೨೦-೫-೧೯೪೦

ಕೃ. ಶ್ರೀ. ಬೆಟಗೇರಿ

ಕಾರ್ಯದರ್ಶಿಗಳು.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾ ರ ವಾ ಡ.

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೆ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು:— ಎಸ್. ಗೋವರ್ಧನರಾವ್ ಮ್ಯಾನೇಜರ್

The United Karnatak Insurance Co. Ltd., DHARWAR.

★ ತಲೆಗೂದಲು ಚೆನ್ನಾಗಿದ್ದರೆ ಚೆಲುವಿಗೊಂದು ಬೆಲೆ !

ಹಾಗೆ ಚೆನ್ನಾಗಿರುವುದೆಂದರೇನು ?

ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಳವಾಗಿ ಇರಬೇಕು !

ಹಾಗಾಗಬೇಕಾದರೆ 'ಮುಕುಲ' ಉಪಯೋಗಿಸಿರಿ !

ತರುಣ-ತರುಣಿಯರು ಬರಿಯೆ ಕಣ್ಣು-ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು ? ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಚೆಲುವಿಕೆಯಿದ್ದರೂ ಅದು ವ್ಯರ್ಥವೆನಿಸುವುದು.

ಅದಕ್ಕಾಗಿಯೆ

ಆಯುರ್ವೇದ ತಜ್ಞರಿಂದ ಶುದ್ಧ ಕೊಬ್ಬರಿಎಣ್ಣೆಯಲ್ಲಿ ತಯಾರಿಸಲಾದ 'ಮುಕುಲ' ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ್ಮ ಚೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿ. ಲಿ., ಅಹಮ್ಮದನಗರ

ಕರ್ನಾಟಕ ಶಾಖೆ : ಸ್ಟೇಶನ್ ರೋಡು, ಹುಬ್ಬಳ್ಳಿ.

Printed by V. V. Jathar, B. Sc, Karnatak Printing Works, Dwr. Edited and published by M. G. Patil at Jayanti Office Dharwar



S.M.KULKARNI
ಜುಲೈ ೧೯೪೦
ನೆಯ ವರ್ಷ
ನೆಯ ಸಂಚಿಕೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೦—೦ .... ವ್ಹಿ. ಪಿ. ಯಿಂದ ೩-೫-೦ .... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಪಾಟೀಲ ಮಾಧವರಾಯರು ಬೆಟಗೇರಿ ಕೃಷ್ಣಶರ್ಮರು

೩ನೆಯ ವರ್ಷ	ಜುಲೈ ೧೯೪೦	೩ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಒಳನುಡಿ (ಕವನ)	ಶ್ರೀ. ಮೊ. ಗೋಪಾಲ ಕೃಷ್ಣ ಅಡಿಗ	೧೧೩
ಸಂಪಾದಕೀಯ	ಸಂಪಾದಕರು	೧೧೪
ಮಂಗನ ಮಲ್ಲಿನಾಥತನ	ಶ್ರೀ. ' ಮಲ್ಲಿನಾಥ '	೧೧೫
ಸಂಕಟಕಾಲದ ಸೇನಾಪತಿ (ಮಾ. ವೇಗಾನ್‌ನ ಪರಿಚಯ) ..	ಶ್ರೀ. ಜಾರ್ಮನಿಯ ' ತಂತ್ರಿ '	೧೧೭
ಜರ್ಮನಿ-ಫ್ರಾನ್ಸ್‌ಗಳಲ್ಲಾದ ಕೆಲವು ಕರಾರುಗಳು	ಸಂಪಾದಕೀಯ ಸಂಗ್ರಾಹಕರು	೧೨೦
ಕಾಮೋಡ (ಸಣ್ಣಕತೆ)	ಶ್ರೀ. ವಿಶ್ವನಾಥ ಹೆಗಡೆ, ಮುಂಬಯಿ	೧೨೧
ಮಾಯಕೊಂಡದ ಮುತ್ತಿಗೆ (ಮದಕರಿ ನಾಯಕ)	ಶ್ರೀ. ಹುಲ್ಲೂರ ಶ್ರೀನಿವಾಸ ಜೊಯ್ಸ ವಕೀಲರು	೧೩೦
ಬಾಳ್-ಸಂಜೆ (ಕವನ)	ಶ್ರೀ. ಟಿ. ಎನ್. ಶ್ರೀನಿವಾಸ ಮೂರ್ತಿ	೧೩೨
ರಸಭಂಗ (ಕಿರುಗತೆ)	ಶ್ರೀ. ದತ್ತಾತ್ರೇಯ ಕುಲಕರ್ಣಿ, ಧಾರವಾಡ	೧೩೩
ಧಾರವಾಡದಲ್ಲಿ ಧನಂಜಯರು (ವ್ಯಂಗ್ಯಲೇಖನ)	ಶ್ರೀ. ಎಚ್. ಎಸ್. ಪಾಟೀಲ ಎಂ. ಎ.	೧೩೫
ಸಾರ್ಥಜೀವನ (ಪರಿಚಯಾತ್ಮಕ)	ಪ್ರೊ. ಎಸ್. ಎಂ ಕುಲಕರ್ಣಿ ಎಂ. ಎ	೧೩೮
ಯುಗಾದಿ (ಸಣ್ಣಕತೆ)	ಶ್ರೀ. ಸಿ. ರಂಗನಾಥರಾವ ಬೆಂಗಳೂರು	೧೪೧
ಬಾಗು ರಾಜಾರಾವ್ (ವ್ಯಕ್ತಿಪರಿಚಯ)	ಶ್ರೀ. ' ಹರಟೆಮಲ್ಲ '	೧೪೬
ಅಖಿಲಕರ್ನಾಟಕ ವ್ಯಾಯಾಮ ಪರಿಷತ್ತು (ವಿಮರ್ಶಾತ್ಮಕವರದಿ)	' ವಿಹಂಗಮ '	೧೪೯
ಕೊರಚರ ಕೇರಿಯಲ್ಲಿ (ವಾಸ್ತವ ಚಿತ್ರ)	ಶ್ರೀ. ಬಿ. ಕೆ. ರಾಮಚಂದ್ರರಾವ್ ಎಲ್‌ಎಲ್. ಬಿ	೧೫೪
ಹೆಂಗುಸರಿಗಾಗಿ ವ್ಯಾಯಾಮಕ್ರಮ	ಶ್ರೀ. ಶ್ರೀ. ಜ. ಬಾಪಟ ಬಿ. ಪಿಎಚ್. ಸಿ.	೧೫೭
ಇಂದಿನ ಜಂಪರು (ಹೊಲಿಗೆಯ ವಿಚಾರ)	ಶ್ರೀ. ಹಳಪೇಟೆ ಚಿಂತಾಮಣಿರಾಯರು, ಟಿ. ಸಿ. ಡಿ.	೧೫೯
ಸಾದರ ಸ್ವೀಕಾರ	.. ..	೧೬೧
ಪುಸ್ತಕವಿಮರ್ಶೆ	ಬೇರೆ ಬೇರೆಯ ವಿಮರ್ಶಕರು	೧೬೨
ನಗೀಗೆ ನೇಪಿಥ್ಯ	ಶ್ರೀ. ' ಸಕಲೀ ನಾರಾಯಣಾಚಾರಿ '	೧೦೯
ನಾಲ್ಕಾ ನಿಟ್ಟಿನ ನೋಟ	' ನಿರೀಕ್ಷಕರು '	೧೭೬



೩ನೆಯ ವರ್ಷ | ಜುಲೈ ೧೯೪೦ | ೩ನೆಯ ಸಂಚಿಕೆ

ಒಳನುಡಿ

ಶ್ರೀ. ಮೊಗೇರಿ ಗೋಪಾಲಕೃಷ್ಣ ಅಡಿಗ

ಅಲೆಅಲೆಯಾಗಿ ಬಂದೊಲಿಯದೆ, ತಂಗಾಳಿ?
ನೆಲೆಯಿಲ್ಲದಲೆಯದೆ ಜಲದ?
ಅಲರಲರನು ಸುತ್ತಿ ಮೊರೆಯದೆ ಮರಿದುಂಬಿ?
ತೊಳಲು, ತೊಳಲು, ನನ್ನ ಮನವೆ! ೧

ಆರು ಗೇಣಿನ ದೇಹದೀ ಸೆರೆಮನೆಯೊಳು
ಸೇರಿ ಸುಮ್ಮನೆ ಸಾಯಬೇಡ;
ಮೂರುಲೋಕದ ನೀರು-ನೆಲ-ಮುಗಿಲನು ಸೇರಿ,
ವಿಹಾರಿ ಮುಂದಕೆ ಹೆಜ್ಜೆಮಾಡು! ೨

ಒಂದು ತೊರೆಯ ನೀರೆ ಸಾಕೆನ್ನದಿರು ಸಿಂಧು-
ಸಿಂಧುವನೂ ಹೀರು ಹೀರು!
ಒಂದಲರಿಗೆ ಸೆರೆಯಾಗದೆ ಹಲವಾರ-
ರಿಂದ ಮರಂದವ ಮೋರು! ೩

ಗೂಡೊಂದು ಬೇಕೆಂದು ಬೀಡೊಂದೆ ಸಾಕೆಂದು
ನಾಡಾಡಿ ನೀನಾಗಬೇಡ!
ಬೀಡುಬೀಡಿನ ಗೂಡುಗೂಡಿನ ಸೊಬಗಿನ
ಗಾಡಿ-ಮೋಡಿಯೊಳೊಂದುಗೂಡು! ೪

ವಿಕಟನೆಂದನ್ಯರು ಜರೆದರು ಬೆದರದೆ
ಸುಖಸಾಧನೆಗೆ ಸಿದ್ಧನಾಗು!
ಅಕುಟಿಲ ಹೃದಯವೊಂದಿರೆ ಸಾಕು ದಿವ್ಯ ಭಾ-
ವುಕರೆದೆಯನು ಬಗೆಗೊಳಲು! ೫

ತೊರೆತೊರೆಗಳ ನೀರು ಕುಡಿಕುಡಿಯೆಲೆ ಜಿಂಕೆ,
ಅಲರಲರನು ಹೀರು ಮಧುಪ!
ತೆರೆತೆರೆಗಳ ಕೂಡೆ ಸರಸವಾಡೆಲೆ ಗಾಳಿ,
ಫಲಫಲಗಳನುಣ್ಣು ವಿಹಗ! ೬

ಅದನೊಲ್ಲೆನಿದನಲ್ಲೆನೆಂಬ ಸಣ್ಣೆದೆಕನ
ತಿಳಿವುಹೂವಿಗೆ ವಿಷಕೀಟ;
ಅದು ಸಿದ್ಧವಿದು ಬದ್ಧವೆಂಬ ದುಡುಕುಮನ
ಬಗೆಯ ಬಾನಿಗೆ ಮುಗಿಲಾಟ! ೭

ಅನ್ಯರ ನಡೆ-ನುಡಿಗಳ ಟೀಕೆ ಬರೆವರೆ
ನಿನ್ನೊಳೇನಿದೆ ಅಧಿಕಾರ?
ನಿನ್ನೊಳಗಿನ ಕೊಳೆಕಸವನು ಕಳೆದೊಗೆ;
ಹಣ್ಣಿಸದೆಯ ಕಸುಗಾಯ! ೮

ಕಂಡವರಾಡಿದ ಕೆಂಡನುಡಿಗೆ ಮಾ-
ರ್ಕೊಂಡು ನೀನುರಿಗೊಳ್ಳಬೇಡ!
ಕೆಂಡವು ತಣಿದೀತು, ಗಂಡೆದೆ ಮಣಿದೀತು,
ಖಂಡಿತವೀ ಭವ ಗೂಢ! ೯

ಅಂದ-ಚೆಂದಗಳನು ಕೊಂಡುಕೊಳೆದು ಭೂ-
ನಂದನದಲಿ ನಲಿದಾಡು!
ಹಿಂದುಮುಂದಿನ ದಂದುಗವ ಮರೆತಾನಂದ-
ದಿಂದಲಿ ಕೊರಲೆತ್ತಿ ಹಾಡು! ೧೦



ನಮ್ಮ ಸಂಪಾದಕಮಂಡಲಿಯ ವರದಿಯಿಂದ

ಹೊಸಕನ್ನಡದ ಜಾಗೃತಿಯ ಪ್ರಾರಂಭದಲ್ಲಿ, ಕೆಲವು ಜನರು ಬರಿಯೆ ಕವಿತೆ ಬರೆದೂ ಬರಿಯೆ ಸಣ್ಣಕತೆ ಬರೆದೂ ಹೆಚ್ಚಿನ ಸ್ಥಾನಪಡೆದು ನಿಂತರು. ಈಗ ಮುಂದೆ ಬರುವ ತರುಣಲೇಖಕರೆಲ್ಲ ಅವರನ್ನೆ ಆದರ್ಶರನ್ನಾಗಿಟ್ಟುಕೊಂಡು, ಅವರು ಮಾಡಿದುದನ್ನೆ ತಾವೂ ಮಾಡತೊಡಗಿದರು. ಎಂದರೆ ಹೆಚ್ಚಿನ ಜನರು ಕತೆ–ಕವಿತೆಗಳನ್ನೇ ಬರೆಯಲು ತೊಡಗಿದರು. ಇದರಿಂದ ಆಗಿರುವ ಪರಿಣಾಮವೊಂದೆಂದರೆ ಕನ್ನಡ ಸಾಹಿತ್ಯದೇವಿಯ ಒಂದೆರಡು ಅಂಗಗಳು ಮಿತಿಮೀರಿ ಪುಷ್ಟವಾಗಿ ಬೆಳೆದಿದ್ದು, ಮಿಕ್ಕ ಅಂಗಾಂಗಳೆಲ್ಲ ಪೋಷಣೆ ದೊರೆಯದೆ ಬಡಕಲು ಬಡಕಲಾಗಿಯೆ ಉಳಿದುಕೊಂಡಿವೆ. ವಾಚಕರಿಗೆ ಕೂಡ, ಸಾಹಿತ್ಯದೂಟದಲ್ಲಿ ಒಂದೆರಡೆ ಜೀವಸತ್ತ್ವಗಳು ದೊರೆಯುತ್ತಿದ್ದು, ಮಿಕ್ಕ ಜೀವಸತ್ತ್ವಗಳು ದೊರೆಯಲಿಕ್ಕೆ ಮಾರ್ಗವೆ ಇಲ್ಲದಂತಾಗಿದೆ. ಹೊಸತಾಗಿ ಮುಂದೆ ಬರುವ ತರುಣಲೇಖಕರು ಈ ಕೊರತೆಯನ್ನು ಕಳೆಯಬೇಕಲ್ಲವೇ ?

ವಿಜ್ಞಾನದ ಪ್ರಗತಿಯ ಮೂಲಕ ಜಗತ್ತು ದಿನದಿನಕ್ಕೆ ಮುಂದೆ ನಡೆದಿದೆ. ಇಂತಹ ಸಂದರ್ಭದಲ್ಲಿ ಹೇಗೆ ಬದುಕಬೇಕೆಂಬುದೇ ಗೊತ್ತಿಲ್ಲದ ಕನ್ನಡಿಗರಿಗೆ ಗತಿಯಾವುದು ? ಇದರ ವಿಚಾರವನ್ನು ನಮ್ಮ ಹೊಸ ಲೇಖಕರು ಇಂದು ಮಾಡಬೇಕಾಗಿದೆ. ‘ ನಮ್ಮ ಮನೆ ಹೇಗಿರಬೇಕು ? ’ ‘ ನಮ್ಮ ಊರು ಹೇಗಿರಬೇಕು ? ’ ‘ ನಮ್ಮ ಆಹಾರ ಎಂತಹದಿರಬೇಕು ? ’ ‘ ನಮ್ಮ ಅಡಿಗೆಮನೆ ಹೇಗಿರಬೇಕು ? ’ ‘ ಊಟದ ಮನೆ ಹೇಗಿರಬೇಕು? ’ ‘ ನಿದ್ದೆಯನ್ನು ಹೇಗೆ ಎಷ್ಟು ಮಾಡಬೇಕು? ’ ‘ ಋತುಮಾನಕ್ಕನುಸರಿಸಿ ನಮ್ಮ ಆಹಾರ-ವಿಹಾರ ಹೇಗಿರಬೇಕು? ’ ‘ ನಮ್ಮ ಉಡಿಗೆತೊಡಿಗೆ ಹೇಗಿರಬೇಕು? ’ ‘ ನಾವು ಏನು ಓದಬೇಕು? ’ ‘ ಓದಿದುದನ್ನು ಹೇಗೆ ತಿಳಿದುಕೊಳ್ಳಬೇಕು ? ’ ‘ ನಮ್ಮ ದೇಹದ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕು ? ’ ‘ ರೋಗ ಬಾರದಿರುವಂತೆ ಹೇಗೆ ಎಚ್ಚರು ತೆಗೆದುಕೊಳ್ಳಬೇಕು? ’ ‘ ಮನೆಯಲ್ಲಿ ಪರಸ್ಪರರು ಹೇಗೆ ನಡೆದುಕೊಳ್ಳಬೇಕು ?’ ಸಮೂಹದೊಂದಿಗೆ ಹೇಗೆ ಬಾಳಬೇಕು? ’ ‘ ನಾಗರಿಕತೆಯೆಂದರೇನು ? ’ ‘ ನಾಗರಿಕನ ಹಕ್ಕು-ಬಾಧ್ಯತೆಗಳೇನು? ’ ‘ ಸಿರಿವಂತಿಕೆ ಬಡತನಗಳಿಗೆ ಕಾರಣವೇನು?’ ‘ ಅವುಗಳ ಜಗಳಾಟದ ಪರಿಣಾಮವೇನು ? ’ ‘ ಹೆಣ್ಣು-ಗಂಡಿನ ಸಮಸ್ಯೆಗಳಾವುವು? ’ ‘ ಜಾತಿ ಭಿನ್ನತೆಯ ರೀತಿ–ನೀತಿಗಳೇನು? ’ ದೇಹವನ್ನು ಹೇಗೆ ಅಲಂಕರಿಸಿಕೊಳ್ಳಬೇಕು ? ’ ‘ ಮನೆಯನ್ನು ಹೇಗೆ ಅಲಂಕರಿಸಬೇಕು ? ’ ‘ ಊರನ್ನು ಹೇಗೆ ಅಚ್ಚುಕಟ್ಟಾಗಿರಿಸಬೇಕು ? ’ ಇವೆಲ್ಲ ಪ್ರತಿಯೊಬ್ಬ ಮನುಷ್ಯನ ದೈನಂದಿನ ಜೀವನದಲ್ಲಿ ಅಡಿಗಡಿಗೆ ಮುಂದೆ ನಿಲ್ಲುವ ಪ್ರಶ್ನೆಗಳು. ಪ್ರತಿಯೊಬ್ಬನಿಗೂ ಈ ಪ್ರಶ್ನೆಗಳನ್ನು ಕೂಲಂಕಷ ವಿಚಾರ ಮಾಡಲಿಕ್ಕಾಗುವುದಿಲ್ಲ. ಆದುದರಿಂದಲೆ ನಮ್ಮ ನಾಡಿನ ಬಹುಜನರಿಗೆ ಇವೆಲ್ಲ ಪ್ರಶ್ನೆಗಳು ಪ್ರಶ್ನೆಗಳಾಗಿಯೆ ಉಳಿದಿರುವುವಲ್ಲದೆ ಉತ್ತರ ದೊರೆತೇ ಇಲ್ಲ. ಬದುಕಲಿಕ್ಕೆ ಬೇಕಾಗಿರುವ ಆವಶ್ಯಕ ಪ್ರಶ್ನೆಗಳಿಗೇ ಉತ್ತರಗಳನ್ನು ಕಾಣದವರು, ಸುಖವಾಗಿ ಬದುಕುವ ಬಗೆ ಹೇಗೆ ? ಆದುದರಿಂದಲೆ ನಮ್ಮ ತರುಣಲೇಖಕರು, ಇಂದು ಇಂತಹ ಪ್ರಶ್ನೆಗಳನ್ನು ಒಂದೊಂದಾಗಿ ತೆಗೆದುಕೊಂಡು, ಅಭ್ಯಾಸಪೂರ್ವಕ ವಿಚಾರಮಾಡಿ, ಜನಸಾಮಾನ್ಯರಿಗೆ ಅವುಗಳ ಉತ್ತರಗಳನ್ನೊದಗಿಸುವುದು ಅಗತ್ಯವಾಗಿದೆ. ಅದಕ್ಕಾಗಿ ಗೂಢವಾದದ ಕವಿತೆ ಬೇಕಿಲ್ಲ. ‘ ಕಲೆಗಾಗಿ ಕಲೆ ’ ಎನ್ನುವ ತತ್ತ್ವದಿಂದ ಬರೆದ ಕತೆ–ಕಾದಂಬರಿ-ನಾಟಕ ಬೇಕಿಲ್ಲ. ಹೊಸ ತಂತ್ರದಿಂದ ಬರೆದಿರುವೆವೆಂದು ಹೇಳುವ ಹಾಳುಹರಟೆ ಬೇಕಿಲ್ಲ. ಅದಕ್ಕಾಗಿ ಸರಲವಾದ ಸುಲಭವಾದ ಭಾಷೆಯಲ್ಲಿ ಬರೆದ ವಿವೇಚನಾತ್ಮಕ–ವಿಷಯಪರಿಚಯಾತ್ಮಕ–ಬಿಡಿಬರೆಹಗಳೂ ಗ್ರಂಥಗಳೂ ಬೇಕಾಗಿವೆ. ಆದುದರಿಂದಲೆ ನಮ್ಮ ತರುಣ-ಲೇಖಕರು ಆರೋಗ್ಯಶಾಸ್ತ್ರವನ್ನು ಅಭ್ಯಸಿಸಬೇಕು. ಮನಶ್ಶಾಸ್ತ್ರವನ್ನೋದಿ ಮನನಮಾಡಿಕೊಳ್ಳಬೇಕು. ಜೀವಶಾಸ್ತ್ರವನ್ನೋದಿ ಜೀರ್ಣಿಸಿಕೊಳ್ಳಬೇಕು. ಜನಾಂಗಶಾಸ್ತ್ರದ ಅಧ್ಯಯನಮಾಡಬೇಕು. ಸಮಾಜಶಾಸ್ತ್ರದಲ್ಲಿ ಸಮರಸರಾಗಬೇಕು. ಅರ್ಥಶಾಸ್ತ್ರದ ಪರಿಚಯ ಮಾಡಿಕೊಳ್ಳಬೇಕು. ಸೌಂದರ್ಯಶಾಸ್ತ್ರದಲ್ಲಿ ಮನಸ್ಸನ್ನು ತೊಡಗಿಸಬೇಕು. ಎಲ್ಲ ಶಾಸ್ತ್ರಗಳಿಗೂ ಆವಶ್ಯಕವಾದ ತರ್ಕಶಾಸ್ತ್ರವನ್ನಂತೂ ಪ್ರತಿಯೊಬ್ಬರೂ ಅಭ್ಯಸಿಸಬೇಕು. ಇವೆಲ್ಲ ಬದುಕಲಿಕ್ಕೆ ಆವಶ್ಯಕವಾದ ಶಾಸ್ತ್ರಗಳು. ಎಲ್ಲರೂ ಎಲ್ಲ ಶಾಸ್ತ್ರಗಳನ್ನಲ್ಲದಿದ್ದರೂ ಒಂದನ್ನೊ ಎರಡನ್ನೊ ತಂತಮ್ಮ ವಿಶೇಷಾಭ್ಯಾಸದ ವಿಷಯವನ್ನಾಗಿಟ್ಟುಕೊಂಡು, ಅಭ್ಯಾಸ, ಅನುಮಾನ, ಚರ್ಚೆ, ವಾದ–ವಿವಾದಗಳಿಂದ ಆ ವಿಷಯಗಳನ್ನು ಚೆನ್ನಾಗಿ ಮಂಥನಮಾಡಿ, ಅದರಿಂದ ಹೊರಟ ಅನುಭವ-ನವನೀತವನ್ನು ಜನಸಾಮಾನ್ಯರಿಗೆ ಒದಗಿಸಿಕೊಡಬೇಕು. ಉಚ್ಚ-ಸಂಸ್ಕಾರಸಂಪನ್ನನಾದ ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಿದು; ತಾನು ಹುಟ್ಟಿದ ದೇಶಕ್ಕೆ ತೆರಬೇಕಾದ ತೆರಿಗೆಯಿದು; ತಾನು ಬೆಳೆದು ಬಾಳುತ್ತಿರುವ ಸಮಾಜಕ್ಕೆ ಸಲ್ಲಿಸಬೇಕಾದ ಋಣವಿದು.

ಇದರಂತೆಯೆ ಇಂದಿನ ಹೊಸಕಾಲದಲ್ಲಿ ಬದುಕಿಬಾಳಬೇಕಾದ ಪ್ರತಿಯೊಬ್ಬ ಮನುಷ್ಯನಿಗೆ ಇಂದಿನ ವಿಜ್ಞಾನಸಂಶೋಧನೆಯ ಪರಿಣಾಮಫಲಗಳ ಪರಿಚಯವಿರಬೇಕಾದುದು ಅತ್ಯಗತ್ಯ. ನಮ್ಮ ತರುಣ ಲೇಖಕವರ್ಗದಲ್ಲಿ ಬಿ. ಎಸ್ಸಿ., ಎಂ. ಎಸ್ಸಿ, ಪರೀಕ್ಷೆಗಳವರೆಗೆ ವಿಜ್ಞಾನಶಾಸ್ತ್ರವನ್ನು ಅಭ್ಯಸಿಸಿದವರೂ ಇರುವರು. ಅವರು ಇಂದಿನ ಮಾನವಜೀವನಕ್ಕೆ ವಿಜ್ಞಾನದ ಪ್ರಗತಿಯ ಮೂಲಕವಾಗಿ ಒದಗಿದ ಅನುಕೂಲತೆಯ ವೈವಿಧ್ಯಗಳನ್ನು (ಉದಾಹರಣೆಗಾಗಿ ರೇಡಿಯೊ, ಟೆಲಿಫೋನ್, ಎಕ್ಸ್‌ರೆ, ಗ್ರಾಮೋಫೋನ್, ವಿದ್ಯುದ್ಯಂತ್ರ ಮೊದಲಾದವುಗಳನ್ನು) ಪರಿಚಯಮಾಡಿಕೊಡುವಂತಹ ಲೇಖನಗಳನ್ನು ಬರೆಯಬೇಕು. ನಿತ್ಯಜೀವನದಲ್ಲಿ ರಸಾಯನವಿಜ್ಞಾನವನ್ನೂ ಪದಾರ್ಥವಿಜ್ಞಾನವನ್ನೂ ಸುಲಭವಾಗಿ ಹೇಗೆ ಹೇಗೆ ಉಪ-ಯೋಗಮಾಡಿಕೊಳ್ಳಲಿಕ್ಕೆ ಬರಬಹುದೆಂಬುದನ್ನು ಕುರಿತು ಪುಟ್ಟ ಪುಟ್ಟ ಲೇಖನ ಬರೆಯಬೇಕು. ಉದಾಹರಣೆಗಾಗಿ ಮನೆಯಲ್ಲಿಯೆ ಸಾಬೂನು

(೧೨೦ನೆಯ ಪುಟ ನೋಡಿರಿ.)



೧. ಸನಾತನ ರಾಮಬಾಣ

ಹಿಟ್ಲರನ ಹಾವಳಿ ತಡೆಯಲು ಅನೇಕರು ದಿಗ್ಭ್ರಾಂತರಾಗಿರಬಹುದು. ಆದರೆ ಅತಂತ್ರ-ಸುತಂತ್ರ - ಸರ್ವತಂತ್ರಸ್ವರೂಪಗಳಾದ ದೇವ-ಧರ್ಮಗಳಲ್ಲಿ ವಿಶ್ವಾಸವನ್ನಿಟ್ಟ ನಮ್ಮೀ ಸುವರ್ಣ ಭೂಮಿಯ ಭೂಸುರಭಾಸುರರು, ಒಂದು ಸುಲಭೋಪಾಯವನ್ನು ಕಂಡುಹಿಡಿದಿದ್ದಾರೆ. ಅದೆಂದರೆ—ಯಾಗವನ್ನಾಚರಿಸುವುದು. ಕೆಲವು ದಿನಗಳ ಹಿಂದೆ ಮುಂಬಯಿಯಲ್ಲಿ ಒಂದು ಯಾಗವಾಯಿತು. ಆದರೆ ಅದು ರಜಿಸ್ಟರ್ಡ ಪಾರ್ಸಲ್ ಇದ್ದಿರಲಿಲ್ಲವೇನೋ! ಇನ್ನೂ ಆ ದಾನವ ಹಿಟ್ಲರನಿಗೆ ಮುಟ್ಟಿದಂತೆಯೆ ಕಾಣುವುದಿಲ್ಲ. ಅದಕಾಗಿ ಸದಾ ಸನಾತನಿಗಳಾದ ಕೆಲವರು, ಇನ್ನೊಂದು ಯಾಗವನ್ನು ಹೂಡಬೇಕೆಂದಿದ್ದಾರೆ. ಹಿಟ್ಲರಾಧಮಾ, ಇನ್ನು ಜೋಕೆ! ಮಾನವರನ್ನು ಕುರಿಗಳನ್ನಾಗಿ ಮಾಡುವ ನಿನ್ನ ಹಾವಳಿಯನ್ನು, ಮಾನವರು ಕುರಿಗಳಿಂದಲೇ ತಡೆಯುವರು! ಇಲ್ಲಿಯ ಕುರಿಗಳ ನೆತ್ತರವು ನೆತ್ತರ ನೆಕ್ಕುವ ನಿನಗೆ ವಿಷವಾಗಲಿದೆ, ಜೋಕೆ! ನಾವು ಎಷ್ಟು ಕುರಿಗಳನ್ನು ಯಾಗಕ್ಕೆ ಅರ್ಪಿಸಬಹುದಾಗಿದೆ—ಎಂದು ಅಲ್ಲಗಳೆಯಬೇಡ. ಲೆಕ್ಕಕ್ಕೆ ಹತ್ತಿದ ಕುರಿಗಳ ಸಂಖ್ಯೆಯೇ ಮೂವತ್ತು ಮೂರು ಕೋಟಿಯನ್ನು ಮೀರಿದೆ. ಲೆಕ್ಕಕ್ಕೆ ಹತ್ತದ ಕುರಿಗಳು ಇನ್ನೂ ಎಷ್ಟು ಅಸಂಖ್ಯಾತವಾಗಿವೆಯೊ! ಆದ್ದರಿಂದ ಜೋಕೆ! ನಾಹಂ ಕರ್ತಾ ಕುರಿಃ ಕರ್ತಾ.... ಶಾಂತಂ ಪಾಪಂ.

* * *

೨. ಜಿನಾ ಅವರ ಜಾಗಿರಿ-ಸ್ಥಾನ

ಮಹಾತ್ಮಾ ಗಾಂಧಿಯವರಿಗೆ ಯಾರೂ ಒಂದು ಗ್ರಾಮದ ಜಾಗೀರಿಯನ್ನು ಕೊಟ್ಟರೆಂದು ಕೇಳಿ ಮಂಗರಾಯನು ವಿವಂಚನೆಗೊಳಗಾಗಿದ್ದಾನೆ. ಇಂತಹ ಕೃತಿಗಳಿಂದಲ್ಲವೆ ನಮ್ಮ ದೇಶದಲ್ಲಿ ಜಾತಿ-ದ್ವೇಷವು ಬೆಳೆಯುವುದು? ಕಾಂಗ್ರೆಸಿನ ಪಕ್ಷದ ನಾಯಕನಿಗೆ ತೋರಿಸಿದ ಮಾನವನ್ನೆ ಮುಸ್ಲಿಂ ಲೀಗದ ನಾಯಕನಿಗೂ ಯಾಕೆ ತೋರಿಸಬಾರದು? ಹೋಗಲಿ, ಮಂಗರಾಯನು ಈ ನ್ಯೂನತೆಯನ್ನು ತುಂಬಿಕೊಳ್ಳಲು ಸಮರ್ಥನಾಗಿದ್ದಾನೆಂಬುದು ಸಂತೋಷದ ಸಂಗತಿ; ಅರ್ಥಾತ್ ಮಂಗರಾಯನು ಬ್ಯಾರಿಸ್ಟರ್ ಜಿನಾಸಾಹೇಬರಿಗೆ ಜಾಗೀರಿಯೊಂದನ್ನು ಕೊಡುತ್ತಲಿದ್ದಾನೆ. 'ಹಿಂದೂ ಬಹುಮತದ ದಬ್ಬಾಳಿಕೆ ತಡೆಯದಂತಾಗಿದೆ' ಎಂದು ಅರ್ಭಟಿಸುವ ಜಿನಾಸಾಹೇಬರಿಗೆ ಸಹಾಯಕವಾಗುವಂತಹದಿದೆ ಈ ಜಾಗೀರಿ. ಎಲ್ಲ ದಬ್ಬಾಳಿಕೆಯನ್ನೂ ಪ್ರತಿಭಟಿಸಲು ಅನುಕೂಲವಾಗುವಂತಹ ಜಾಗೆ ಇದು. ಹಿಟ್ಲರನ ದಬ್ಬಾಳಿಕೆಯನ್ನು ಪ್ರತಿಭಟಿಸುವವರು ಕೂಡ ಈ ಜಾಗೆಯಲ್ಲಿ ಇದ್ದಾರೆಂಬುದರಿಂದ, ಇದರ ಸ್ಥಾನಮಾಹಾತ್ಮ್ಯದ ಕಲ್ಪನೆ ಬರಬಹುದು ವಾಚಕರಿಗೆ. ಈ ಸ್ಥಾನ ಯಾವುದು? ಅರ್ಥಾತ್ ಎಲ್ಲಿ ಫ್ರಾನ್ಸ, ಪೋಲಾಂದ, ಬೆಲ್ಜಂ, ನಾರ್ವೆಗಳ ಸರಕಾರಗಳು ಒಂದುಗೂಡಿ ಹಿಟ್ಲರನ ದಬ್ಬಾಳಿಕೆಯನ್ನು ಪ್ರತಿಭಟಿಸುತ್ತಿರುವುವೊ ಅಂತಹ ಲಂಡನ್ — ಸ್ವಾತಂತ್ರ್ಯದ ಮಕ್ಕಾ — ಜೀನಾ ಸಾಹೇಬರ ಜಾಗಿರಿಸ್ಥಾನ!

ಲಂಡನ ಕೋ ಚಾಕರ
ಅಲ್ಲಾ ಹೋ ಅಕಬರ!!

* * *

೩. ಒಂದು ಕತೆ

ಸದ್ಯದ ಯುದ್ಧದಲ್ಲಿ ಬ್ರಿಟಿಶ ಸರಕಾರಕ್ಕೆ ಸಹಾಯಮಾಡಬೇಕೆಂದು ಮಂಗನೂರಲ್ಲಿ ಒಂದು ಸಭೆ ಸೇರಿತ್ತು. ಹಳ್ಳಿಹಳ್ಳಿಗಳಿಂದ, ತಾಲೂಕು ತಾಲೂಕುಗಳಿಂದ ಜನರು ಕಿಕ್ಕಿರಿದು ನೆರೆದಿದ್ದರು. ಸಭೆಗೆ ಪ್ರಾರಂಭವಾಯಿತು. ಸಾಹೇಬರ ಮಾತಾಯಿತು, ರಾವಸಾಹೇಬರದಾಯಿತು, ಖಾನಸಾಹೇಬರದಾಯಿತು; ಆ ಮೇಲೆ ರಾವಬಹಾದ್ದೂರರೆದ್ದರು, ಅವರನ್ನು ಖಾನಬಹಾದ್ದೂರರನು-ಮೋದಿಸಿದರು. ಆಯಿತು, ಮತ್ತೆ ಸಾಹೇಬರ ಮಾತಾಯಿತು. ಪಾಪ! ನೆರೆದವರಿಗೆ ಇದೇನು ಗೂಢವೊ ತಿಳಿಯಲೊಲ್ಲದು. ಅಷ್ಟರಲ್ಲಿ ಸಭಾವಿಸರ್ಜನೆಯಾಯಿತೆಂದು ಸಾಹೇಬರೆದ್ದರು. ಹಳ್ಳಿಗರು ತಮ್ಮೂರಿಗೆ ತಿರುಗಿಹೋಗಿ ಸಭೆಯ ಸಂಗತಿಯನ್ನು ಹೀಗೆ ಹೇಳಿದರಂತೆ: 'ಅಂಗ್ರೇಜಿ ಸರಕಾರಕ್ಕ ಸಹಾಯ ಮಾಡೋದಂದರೆ ಇಂಗ್ಲಿಶನಾಗೇ ಮಾಡಬೇಕೆಂಬೋದು ನಮಗ ಗೊತ್ತಿರಲಿಲ್ಲ. ಕನ್ನಡದೊಳಗ ಮಾತಾಡಿದರ ಸರಕಾರಕ್ಕ ತಿಳಿಯೋದಿಲ್ಲ ಕಾಣತದ! ಹೋಗಲಿ ಬಿಡ್ರಿ. ನಮ್ಮದೇನು ಕೆಲಸ ಇದ್ದಾಂಗ ಇಲ್ಲ. ಯಾಕಂದ್ರ, ರಾವಸಾಹೇಬ ರಾವಬಹಾದ್ದೂರ ಅಂತ ಪದವಿ ಇದ್ದವರಿಗೇ ಸಾಹೇಬರು ಮಾತಾಡಿ ಸಹಾಯ ಮಾಡಲಿಕ್ಕೆ ಹೇಳಿದರು'! ಈ ಕತೆಗೆ ತಿಲಕಾಷ್ಠ ಮಹಿಷಬಂಧನ ಕತೆ ಎಂಬ ಹೆಸರು—ಎಂದು ಯಾರೋ ಮಂಗರಾಯನಿಗೆ ಹೇಳಿದರು.

ಪದವೀಗೆ ಮುಯನ್
ರಾವಸಾಹೇಬಕೀ ಜೈ!

* * *

'ಕನ್ನಡದಿ ಯೋಗ್ಯ ಬುಕ್ಕುಗಳೆ ಇಲ್ಲ!'

ಮಂಗರಾಯನ ಸರ್ವಜ್ಞತ್ವದ ಕಲ್ಪನೆ ಇತ್ತೀಚಿಗೆ ಜನಕ್ಕೆ ಬರಹತ್ತಿದೆ. ಯಾವುದೇ ಒಂದು ಸಣ್ಣ ವಿಷಯವಿರಲಿ, ದೊಡ್ಡ ವಿಷಯವಿರಲಿ, ಅದರ ಬಗ್ಗೆ ಮಂಗರಾಯನ ಅಭಿಪ್ರಾಯವೇನಿರುವುದೆಂಬುದನ್ನು ತಿಳಿದುಕೊಳ್ಳಬೇಕೆಂಬವರ ಸಂಖ್ಯೆ ದಿನದಿನಕ್ಕೆ ಬೆಳೆಯುತ್ತ ನಡೆದಿದೆ. ಈಗ ಬೆಳಗಾಂವಿಯ ಕನ್ನಡಾಭಿಮಾನಿಗಳು, ತೀರ ಕುತೂಹಲಿಗಳಾಗಿ, ಮಂಗರಾಯನಿಗೆ ಕಾಗದವೊಂದನ್ನು ಬರೆದಿದ್ದಾರೆ. ಅದರಲ್ಲಿಯ ವಿಷಯ ಹೀಗೆ:

"ಬೆಳಗಾಂವಿಯ ಸರಕಾರಿ 'ಸರದಾರ ಹೈಸ್ಕೂಲ'ನಲ್ಲಿ, ಈಸಲ ಗೊತ್ತುಮಾಡಿದ ಕನ್ನಡ ಪಠ್ಯಪುಸ್ತಕಗಳೆಲ್ಲ ಬಹುಶಃ ಕಳೆದ ಶತಮಾನದವುಗಳೇ ಆಗಿವೆ. ಹೀಗೆ ಏಕೆ ಆಗಿರಬಹುದು? ಹೊಸತಾಗಿ ಹೊರಟ ಪುಸ್ತಕಗಳಾವುವೂ ಪಠ್ಯ-ಪುಸ್ತಕವಾಗುವ ಯೋಗ್ಯತೆಯುಳ್ಳವೊ ಹೇಗೆ? ಅಲ್ಲದೆ ಪಠ್ಯಪುಸ್ತಕವೆಂದು ಗೊತ್ತುಮಾಡಿದ ಎಷ್ಟೋ ಪುಸ್ತಕಗಳು ಪೇಟೆಯಲ್ಲಿ ಸಿಕ್ಕುವುದೇ ಇಲ್ಲವಲ್ಲಾ! ಇದಕ್ಕೇನು ಮಾಡಬೇಕು?"

ಇದಕ್ಕೆ ಹೇಗೆ ಉತ್ತರ ಕೊಡಬೇಕೆಂಬುದು ಮಂಗರಾಯನಿಗೊಂದು ಸಮಸ್ಯೆಯೆ ಆಗಿದೆ. ಏಕೆಂದರೆ ಕಂಡದ್ದನ್ನಾಡಿದರೆ ಕೆಂಡದಂತಹ ಕೋಪ ತಾಳುವವರೆ ಬಹುಜನರು. ಅದರೂ

ಜನಸೇವಾತತ್ಪರನಾದ ಮಂಗರಾಯ, ಎಂತೆಂತಹ ಸಂದರ್ಭಗಳಿಗೂ ಎದುರಾಗಿ ನಿಲ್ಲಬೇಕಾಗಿದೆ. ಮೇಲಿನ ಕಾಗದಕ್ಕೆ ಅವನು ಕೊಟ್ಟ ಉತ್ತರ ವಿದು:—

“ಮಹನೀಯರೆ, ತಮ್ಮ ಕಾಗದ ತಪ್ಪಿ ಅಭಿಪ್ರಾಯವಾಯಿತು. ಸರದಾರ್ ಹೈಸ್ಕೂಲಿನಲ್ಲಿ ಕನ್ನಡ ಪಾಠ ಹೇಳುವ ಶಿಕ್ಷಕರು, ತಾವು ವಿದ್ಯಾರ್ಥಿಗಳಾಗಿರುವಾಗ ಶಾಲೆಗಳಲ್ಲಿ ಓದಿದ ಪುಸ್ತಕಗಳನ್ನೆ ಪಠ್ಯಪುಸ್ತಕಗಳಾಗಿ ನಿಯಮಿಸಬೇಕೆಂದು ಪ್ರಯತ್ನಪಟ್ಟಿರುವ ಸಂಭವವಿದೆ. ಹೊಸ ಹೊಸ ಕನ್ನಡ ಪುಸ್ತಕಗಳನ್ನು ನಿಯಮಿಸಿದರೆ ಹೊಸದಾಗಿ ಅಭ್ಯಾಸಮಾಡಿ ಹೇಳಬೇಕಾಗುವುದು; ಆ ತೊಂದರೆಗೆ ಗುರಿಯಾಗಬಾರದೆಂದು ಅವರ ಉದ್ದೇಶವಿರಬಹುದು. ಇನ್ನೂ ಒಂದು ಕಾರಣವಿರುವ ಸಂಭವವಿದೆ. ಅದೆಂದರೆ ಇಂಗ್ಲಿಷ್ ಶಾಲೆಯಲ್ಲಿರುವವರು ಕನ್ನಡ ಗ್ರಂಥ ಓದುವುದೇ ಕಡಿಮೆ. ಆದುದರಿಂದ ಕನ್ನಡದಲ್ಲಿ ಹೊಸಹೊಸ ಗ್ರಂಥಗಳು ಹೊರಟ ವಿಷಯವೆ ಗೊತ್ತಿರಲಾರದು. ಇಷ್ಟೇ ಅಲ್ಲ. ತಾವು ವಿದ್ಯಾರ್ಥಿದಶೆಯಲ್ಲಿ ಓದಿದ ಪುಸ್ತಕಗಳಷ್ಟೇ ಕನ್ನಡದಲ್ಲಿದ್ದ ಪುಸ್ತಕಗಳೆಂಬ ಕಲ್ಪನೆಯಿರಬಹುದು. ಮತ್ತೂ ಒಂದು ಇರಬಹುದಾದ ಕಾರಣವೆಂದರೆ ಗ್ರಂಥಕರ್ತರು ಬಂದು ಅಲ್ಪಿಂದು ಹೇಳಿಕೊಳ್ಳಬೇಕೆಂದು ಅನೇಕರ ಅಪೇಕ್ಷೆಯಿರುವುದು. ಹೊಸ ಗ್ರಂಥಕಾರರಾರೂ ತಮ್ಮ ಪಠ್ಯಪುಸ್ತಕ ನಿಯಮಿಸುವ ಅಧಿಕಾರಿಗಳಿಗೆ ಹೇಳಿಕೊಂಡಿರಲಿಕ್ಕಿಲ್ಲ. ಹಾಗೆ ಹೇಳಿಕೊಂಡರೆ ಎಂತೆಂತಹ ಬೀದಿಯ ಪುಸ್ತಕಗಳೂ ಪಠ್ಯಪುಸ್ತಕದ ಮನ್ನಣೆಗೆ ಏರುವುದು ನಮ್ಮ ನಿಮ್ಮ ಅನುಭವದ ವಿಷಯವೆ ಆಗಿರುವುದು. ಇನ್ನು ಪೇಟೆಯಲ್ಲಿ ಪುಸ್ತಕ ಸಿಕ್ಕದಿರುವ ವಿಚಾರ; ಹೋಗಲಿ ಬಿಡಿ, ಅದಕ್ಕೇಕೆ ಅಷ್ಟೊಂದು? ನಿಮ್ಮ ಜೇಬಿನಲ್ಲಿಯ ದುಡ್ಡು ಜೇಬಿನಲ್ಲಿಯೆ ಉಳಿಯುವುದು. ನಿಮ್ಮ ಹುಡುಗರಿಗೆ ಓದಬೇಕಾದ ತೊಂದರೆ ತಪ್ಪುವುದು. ಶಿಕ್ಷಕರಿಗೆ ಓದಿಸಬೇಕಾದ ತೊಂದರೆ ತಪ್ಪುವುದು. ಹಣದ ಉಳಿತಾಯ, ಶ್ರಮದ ಉಳಿತಾಯ! ಇನ್ನೇನು ಬೇಕು ನಿಮಗೆ?”

‘ಕನ್ನಡದ ಯೋಗ್ಯ ‘ಬುಕ್’ ಒಂದು ಇಲ್ಲ!
ಬರೆದವರು ಬಂದಾರು ಹೇಳಿಕೊಳಲಿಲ್ಲ!’

* * *

ಮಂಗರಾಯನ ‘ಮಮತೆಯ ಹಬ್ಬ’

ಮಂಗರಾಯನಿಗೆ ತುಂಬ ಅಸಮಾಧಾನವಾಗಿತ್ತು. ಏಕೆಂದರೆ ಅವನು ಹುಟ್ಟಿ ಅರುವತ್ತು ವರ್ಷವಾಗಿಲ್ಲ; ಅವನು ಯಾವುದಾದರೊಂದು ಸಂಸ್ಥೆ ತೆಗೆದಿಷ್ಟು ಅದಕ್ಕೆ ೨೫ ಇಲ್ಲವೆ ೫೦ ವರ್ಷಗಳಾಗಿಲ್ಲ. ಹುಟ್ಟಿ ೬೦ ವರ್ಷಗಳಾಗಿದ್ದರೆ ಶ್ರೀಮಾನ್ ಆಲೂರ ವೆಂಕಟರಾಯರಂತೆ ಡಾ. ಸವಣೂರ ಹನುಮಂತರಾಯರಂತೆ ಕನ್ನಡಿಗರಿಂದ ಷಷ್ಟ್ಯಬ್ದಪೂರ್ತಿಶಾಂತಿ ಸಮಾರಂಭವನ್ನು ಮಾಡಿಸಿಕೊಳ್ಳುತ್ತಿದ್ದ. ಅವನು ತೆಗೆದ ಸಂಸ್ಥೆಗೆ ೫೦ ವರ್ಷಗಳಾಗಿದ್ದರೆ ಕರ್ನಾಟಕ ವಿದ್ಯಾವರ್ಧಕ ಸಂಘದಂತೆ ಬಂಗಾರದ ಹಬ್ಬವನ್ನು ಮಾಡಿಸುತ್ತಿದ್ದ; ಕೊನೆಗೆ ೨೫ ವರ್ಷಗಳಾದರೂ ಆಗಿದ್ದರೆ ಕರ್ನಾಟಕ ಇತಿಹಾಸ ಸಂಶೋಧಕ ಮಂಡಲ, ಕನ್ನಡ ಸಾಹಿತ್ಯ ಪರಿಷತ್ತುಗಳಂತೆ ಬೆಳ್ಳಿಯ ಹಬ್ಬವನ್ನಾದರೂ ಮಾಡಿಸುತ್ತಿದ್ದ. ಈಗ ಒಂದನ್ನೂ ಮಾಡಲಿಕ್ಕೆ ಮಾಡಿಸಲಿಕ್ಕೆ ಬಾರದಂತಾಗಿದೆಯಲ್ಲಾ ಎಂದವನು ಹಲ್ಲು ಹಲ್ಲು ಕಿರಿಯುತ್ತಿದ್ದಾನೆ. ಅದೇನೊ ೧೯೪೦ನೆಯ ಇಸ್ವಿಯು ಹಬ್ಬ-ಸಮಾರಂಭಗಳ ವರ್ಷವಾಗಿದೆ. ಇದೇ ಸಲವೆ ಮಂಗರಾಯನಿಗೂ ಯಾವುದಾದರೊಂದು ಸಮಾರಂಭದ ಮನ್ನಣೆ ಸಿಕ್ಕಿದ್ದರೆ ಚೆನ್ನಾಗುವುದು. ಆದರೆ ‘ಮುಂದೆಬಂದು ಮೂರು ವರ್ಷವೂ ಮುಗಿದಿರದ ಈ ಪೋರನನ್ನು ಮನ್ನಿಸಬೇಕು ಯಾರು? ತನ್ನ ಮಂಗಾಟದಿಂದ ಬರಿಯ ಜನರ ಮನಸ್ಸನ್ನು ಕೆಣಕುತ್ತ ಕೆರಳಿಸುತ್ತ ಹೋಗುವ ಮರಪಂಡಿತನಿಗೆ ‘ಮಮತೆಯ ಮುಡಿಪು’ ಯಾರಿಂದ ಸಲ್ಲಬೇಕು? ಮಂಗರಾಯನ ಕೊನೆಗಾಲವನ್ನು ಕಾಣಬೇಕೆಂದು ಟಟುಕು ಮುರಿಯುತ್ತ ಶಾಪದ ಮಳೆಗರೆಯುವ ‘ಕಲಿ-ಪುರುಷ’ರು ಕರ್ನಾಟಕದಲ್ಲಿರುವಾಗ, ಆತನಿಗೆ ಸಿಕ್ಕುವ ಕಾಣಿಕೆಯೆಂತಹದಿರಬೇಕು?’ ಎಂದು ಕೆಲವುಜನ ಮುಂದೆ ಮುಖಮಾಡಿ ಕೇಳಬಹುದು. ಆದರೆ ಮಂಗರಾಯನಿಗೆ ತುಂಬ ವಿಶ್ವಾಸವಿದೆ: ಕನ್ನಡಿಗರಲ್ಲಿ ಹಲವರು ತನ್ನನ್ನು ಮೆಚ್ಚುವವರೂ ಮನ್ನಿಸುವವರೂ ಇದ್ದಾರೆಂದು. ಎಂತಲೆ ಅವರು ಯಾವುದಾದರೊಂದು ರೀತಿಯಲ್ಲಿ ಮಂಗರಾಯನ ಹಬ್ಬ ಮಾಡಿಯೆ ಮಾಡುವರೆಂದು ಅವನು ತನ್ನ ಅಸಮಾಧಾನವನ್ನು ಓಡಿಸಿಬಿಡುವುದರಲ್ಲಿದ್ದಾನೆ. ಮಂಗರಾಯನಿಗೆ ಬೆಳ್ಳಿಯ ಹಬ್ಬ ಬೇಕಾಗಿಲ್ಲ; ಬಂಗಾರದ ಹಬ್ಬ ಬೇಕಾಗಿಲ್ಲ; ‘ಮಮತೆಯ ಹಬ್ಬ’ ಮಾಡಿದರೆ ಸಾಕು. ಅದಕ್ಕಾಗಿ ಹೂಮಾಲೆ ಬೇಕಿಲ್ಲ, ಹಣದ ಚೀಲ ಬೇಕಿಲ್ಲ, ಹಬ್ಬದೂಟ ಬೇಕಿಲ್ಲ!

ಮಮತೆಯನು ತುಂಬಿ ಕಳುಹಿರಿ ಚೀಲ ಚೀಲ!
ಮಂಗರಾಯನಿಗೆ ಕೋರಿರಿ ಮೇಲುಮೇಲು!

* * *

ಹೇಳಿದ್ಹಾಂಗೆ ಲಾಗಾ ಹಾಕಣ್ಣಾ!

ಜಮಖಂಡಿಯಲ್ಲಿ ದಕ್ಷಿಣಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನ ಕಳೆದ ತಿಂಗಳಲ್ಲಿ ಜರುಗಿತಂತೆ. ಗಂಡಭೇರುಂಡದಂತೆ ಎರಡು ತಲೆಗಳಿದ್ದ—ಸರ್ಪರಾಜನಂತೆ ಎರಡು ನಾಲಗೆಗಳಿದ್ದ—ಕೆಲವು ಜನ ಕನ್ನಡಿಗರು, ಈ ಸಮ್ಮೇಳನದಲ್ಲಿಯೂ ಮನಸಾರೆ ಭಾಗವಹಿಸಿದ್ದರಂತೆ. ಜಮಖಂಡಿಯನ್ನು ಬಿಟ್ಟರೆ ಹೊರಗಿನ ಕನ್ನಡಲೋಕಕ್ಕೆ ಈ ಸಮ್ಮೇಳನದ ಸುದ್ದಿ ಗೊತ್ತಾಗಿಯೆ ಇಲ್ಲ. ಜಮಖಂಡಿಯಲ್ಲಿರುವ ಸುದ್ದಿಗಾರರಾರೂ ಈ ಸಮ್ಮೇಳನದ ವಿಶದ ವರದಿಯನ್ನು ಕನ್ನಡ ಪತ್ರಿಕೆಗಳಿಗೆ ಎಲ್ಲಿಯೂ ಕಳುಹಿದಂತಿಲ್ಲ. ಬಹುಶಃ ಸಮ್ಮೇಳನದಲ್ಲಿ ಭಾಗವಹಿಸಿದ ಕನ್ನಡ ಮುಂದಾಳುಗಳು ಹಾಗೆ ಕಳುಹದಿರುವಂತೆ ಸುದ್ದಿಗಾರರಿಗೆ ದೈನ್ಯದಿಂದ ಬಿನ್ನವಿಸಿಕೊಂಡಿರಬೇಕು. ತಮ್ಮ ಮಂಗತನ ಕನ್ನಡಿಗರಿಗೆ ತಿಳಿದು, ತಮ್ಮ ಸ್ಥಾನ-ಮಾನ ಕೆಳಮಟ್ಟಕ್ಕಿಳಿಯಬಹುದೆಂಬ ಹೆದರಿಕೆಯಾಗಿರಬಹುದೇನೋ! ಅಥವಾ ಹೆದರಿಕೆಯೂ ಇರಲಿಕ್ಕಿಲ್ಲವೆನ್ನಿ! ‘ಜಂಬುಕಂಡಿಯು ರನ್ನನ ಅಚ್ಚಕೆಚ್ಚಿನ ಕನ್ನಡನಾಡು’ ಎಂದು ಹೇಳಿದ ಹೆಮ್ಮೆಯಿಂದಲೇ ‘ಜಮಖಂಡ ಇದೂ ರಾಂಭಾವೂ ರಾನಡೇ ಹಂತವರು ಹುಟ್ಟಿದ ದಕ್ಷಿಣ ಮಹಾರಾಷ್ಟ್ರ’ ಎಂದು ಹೇಳುವುದಕ್ಕೂ ಇವರು ಸಿದ್ಧರಾಗುವರು, ಎಂದಮೇಲೆ ಯಾವುದರ ವಿಷಯದಲ್ಲಿ ಇವರಿಗೆ ಅಭಿಮಾನವಿದ್ದೀತು? ಛೆ! ಛೆ! ಇವರಿಗೆಲ್ಲಿಯ ಅಭಿಮಾನ! ಮಂಗರಾಯನ ದೃಷ್ಟಿಯಲ್ಲಿ ನಿಜವಾಗಿಯೂ ‘ಮಂಗಣ್ಣ’ಗಳಿವರು! ಆಟಗಾರ ಲಾಗಹಾಕೆಂದರೆ ಲಾಗಹಾಕುವವರು; ಗಣ ಏರೆಂದರೆ ಗಣ ಏರುವವರು! ಆಟಗಾರನ ಮೇಲೆ ಅವಲಂಬಿಸಿದೆ ಇವರ ಕಾರ್ಯ. ಕನ್ನಡ ಆಟಗಾರನ ಕೈಯಲ್ಲಿ ಸಿಕ್ಕರೆ ಕನ್ನಡ ತವರುಮನೆಯ ಕೊಡಹೊತ್ತ; ಮರಾಟಿ ಆಟಗಾರನ ಕೈಯಲ್ಲಿ ಸಿಕ್ಕರೆ ಮರಾಟಿ ತವರುಮನೆಯ ಕೊಡ ಹೊತ್ತ!

ವಾರೇ, ವಾರೇ, ದಾಮಣ್ಣಾ!
ಹೇಳಿದ್ಹಾಂಗ್ ಲಾಗಾ ಹಾಕಣ್ಣಾ!

* * *

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ,
೬ ಆಣೆಗೆ ಒಂದು ಸೆಟ್ಟು.

೧ ಬ್ಲೇಡಿಗೆ ೬ ಉತ್ತಮ ಕ್ಷೌರ!
೫ ಬ್ಲೇಡಿಗೆ ೬ ಆಣೆ.

ಸಂಕಟ ಸಮಯದ ಸೇನಾಪತಿ

★

ಮಾಗ್ಸೀಮ್ ವೇಗಾನ್

ಜಾರ್ಮನಿಯ "ಶಂತ್ರಿ" ಬರೆದುದು

ನಡೆದಿರುವ ಯುದ್ಧದ ವೃತ್ತಾಂತವನ್ನು ಓದಿದವರೂ ಕೇಳಿದವರೂ ವೇಗಾನ್ ಸೇನಾಪತಿಯ ಹೆಸರನ್ನು ಸಾಕಷ್ಟು ಸಲ ಕೇಳಿ ಅರಿತಿರುವರು. ಆದರೆ ಅವನ ಚರಿತ್ರೆಯೇನೆಂಬುದನ್ನು ಅರಿಯಬೇಕೆಂಬ ಕುತೂಹಲ ಹಲವರಲ್ಲಿ ಉಂಟಾಗಿರಬಹುದು. ಪ್ರಸಿದ್ಧ ಸೇನಾಪತಿ ಮಾರ್ಶಲ್ ಫೋಕ್‌ನಿಂದ 'ಸಂಕಟಬಂದಾಗ ವೇಗಾನನ್ನು ಕರೆಯಿರಿ!' ಎಂದು ಕೊಂಡಾಡಿಸಿಕೊಂಡ ಬಂಟನೀತ!

ಫ್ರೆಂಚ್ ಸೇನಾಮಂತ್ರಿ ಮಾಗ್ಸಿಮ್ ವೇಗಾನ್

'ಗೆದ್ದವನೇ ಜಾಣ, ಬಿದ್ದವನೇ ಕೋಣ' ಎಂದು ಒಮ್ಮೆಲೆ ಹೇಳಲಿಕ್ಕಾಗದು. ಯಾವನೊಬ್ಬನ ಬೆಲೆಯನ್ನು ಅವನ ಕಾರ್ಯದ ಸೋಲು-ಗೆಲುವುಗಳಿಂದಲೆ ತಿಳಿಯುವೆನೆಂದರಾಗದು. ಎಷ್ಟೇ ಚಾಣಾಕ್ಷನೂ ದೂರದರ್ಶಿಯೂ ಇದ್ದರೂ, ಕೆಲವು ಅನಿರೀಕ್ಷಿತ ಸನ್ನಿವೇಶಗಳು ಒದಗಿ ಬಂದು, ಮಾಡಿಟ್ಟ ಹಂಚಿಕೆಗಳನ್ನು ಮಣ್ಣುಗೂಡಿಸುವುದುಂಟು. ಆದರಿಂದ ಕೆಲಸಗಾರನು ಕೇವಲ ದಡ್ಡನೆಂದು ಹೇಳುವುದು ಸಾಹಸವೆನಿಸುವುದು. ಪ್ರತಿಯೊಂದು ಪ್ರಸಂಗವನ್ನು ಧೈರ್ಯದಿಂದ ಎದುರಿಸಿ, ಅದರ ಆಳವನ್ನು ತಿಳಿದುಕೊಂಡು, ಉತ್ಕಟತೆಯಿಂದ ಕಾರ್ಯಮಾಡುತ್ತಿದ್ದರೆ ಅವನೊಬ್ಬ ಜಾಣ; ಹಿರಿಯ; ಮುಂದಾಳು; ಎನಿಸಿಕೊಳ್ಳುವನು.

ಫ್ರಾನ್ಸ್ ದೇಶವು ಕಾಲಕಾಲಕ್ಕೆ ಅತ್ಯುತ್ತಮರಾದ ಸೇನಾಧಿಪತಿಗಳನ್ನು ಹುಟ್ಟಿಸಿದೆ. ಅವರ ಸ್ವಭಾವ-ಗುಣ-ಶೀಲಗಳೂ, ಯುದ್ಧನೀತಿಯಲ್ಲಿಯ ಜಾಣ್ಮೆಯೂ ಜಗತ್ತನ್ನೆ ಬೆರಗುಗೊಳಿಸುವಂತಹವು. ಭೂಮಿಯ ಗುಣವೊ ಏನೊ ಎನ್ನುವಷ್ಟು ಸಹಜವಾಗಿದೆ ಅವರ ಬೆಳೆವಣಿಗೆ. ನೆಪೋಲಿಯನ್ನು ಫ್ರಾನ್ಸಿನಲ್ಲಿ ಜನ್ಮತಾಳದೆ ಇದ್ದರೂ, ಫ್ರಾನ್ಸ್‌ದೇಶದಲ್ಲಿ ಶಿಕ್ಷಣ ಪಡೆದುದರಿಂದಲೆ ಫ್ರೆಂಚರ ಜಿಗುಟುತನವು ಅವನಲ್ಲಿ ಬಂದು, ಜಗತ್ತಿಗೆ ಮಾದರಿಯಾದನು. ಯುರೋಪದಲ್ಲಿ ಫ್ರೆಂಚರಿಗೆ ವಿಡಂಬನಾತ್ಮಕವಾಗಿ 'ಲಲನೆಯರು' ಎಂದರೂ, ಫ್ರೆಂಚ್ ಸೈನಿಕರೂ, ಫ್ರೆಂಚ್ ದಳಪತಿಗಳೂ ಬಳ್ಳೊಳ್ಳೆಯ ಗಂಡುಸರೆಂದು ಹೇಳಿಕೊಳ್ಳುವವರನ್ನೂ ವಿಚಾರಿಸಿದಷ್ಟು ಪೌರುಷವುಳ್ಳವರು ಇದ್ದಾರೆ.

"ಸಂಕಟ ಬಂದಾಗ ಕರೆಯಿರಿ ವೇಗಾನನನ್ನು" ಎಂದನಂತೆ ಮಾರ್ಶಲ್ ಫೋಕ್. ಜೀವನದ ಕೊನೆಯ ಮಾತಿನಲ್ಲಿ ಸತ್ಯಾಂಶ ಹೆಚ್ಚು. ಫೋಕ್ ತನ್ನ ಕೊನೆಯ ಮಾತಿನಲ್ಲಿ ಫ್ರಾನ್ಸ್‌ದೇಶಕ್ಕೆ ಸಂದೇಶರೂಪವಾಗಿ ಈ ಮಾತನ್ನು ಹೇಳಿದನು. ಅಷ್ಟೊಂದು ವಿಶ್ವಾಸ ಅವನಿಗೆ ವೇಗಾನ್‌ನಲ್ಲಿ. ವೇಗಾನ್ ಕೂಡ ಅನೇಕ ಸನ್ನಿವೇಶಗಳಲ್ಲಿ ತನ್ನ ಶಕ್ತಿಯ ಅರಿವನ್ನು ಮೇಲಿನವರಿಗೆ ತಂದುಕೊಟ್ಟಿದ್ದಾನೆ. ಅದು ಕಾರಣವೆ, ಮೊನ್ನೆ ಫ್ರಾನ್ಸ್ ದೇಶವು ತೀರ ಅತ್ಯವಸ್ಥ ಸ್ಥಿತಿಗೆ ಬಂದಾಗ, ಇಡಿ ದೇಶದ ಹೊಣೆಯನ್ನು ವೇಗಾನ್‌ನ ಮೇಲೆ ಒಪ್ಪಿಸಲಾಯಿತು. ಅಂದಿನಿಂದ ಇಂದಿನ ವರೆಗೆ, ಅಲ್ಲಿ ಪರಿಸ್ಥಿತಿಯು ಕೆಡದೆ ಉಳಿದಿದೆ. ಪ್ರಸಂಗಗಳನ್ನು ಎದುರಿಸುವ ಹದವಿದೆ, ಎದುರಾಳಿಗಳ ಸಾಮರ್ಥ್ಯವನ್ನು ಅಳೆಯುವ ತೂಕವಿದೆ, ಧೈರ್ಯವಿದೆ— ಪ್ರಸಂಗಾವಧಾನವಿದೆ, ದೊಡ್ಡ ಸೇನಾಪತಿಗೆ ತಕ್ಕ ಶಾಂತತೆಯಿದೆ—ಈತನಲ್ಲಿ!

ವೇಗಾನ್‌ನೂ ನೆಪೋಲಿಯನ್‌ನಂತೆ ಫ್ರಾನ್ಸ್ ದೇಶದ ಹೊರಗಿನಿಂದ ಬಂದವನು. ಇವನು ೧೮೬೭ನೆಯ ಇಸ್ವಿಯಲ್ಲಿ, ಬ್ರುಸೆಲ್ಸ್ ಪಟ್ಟಣದಲ್ಲಿ ಜನ್ಮತಾಳಿದನಾದರೂ—ಶಿಕ್ಷಣವೆಲ್ಲ ಫ್ರಾನ್ಸ್ ದೇಶದಲ್ಲಿಯೆ ಆಗಿದೆ. ತೀರ ಎಳೆಯ ವಯಸ್ಸಿನಲ್ಲಿಯೆ ಇವನ ಉನ್ಮತ್ತತನದ ಬಗ್ಗೆ ಅನೇಕ ಕತೆಗಳು ಇನ್ನೂ ಪ್ರಚಲಿತವಾಗಿವೆ. ಯಾವಾಗಲೂ ಯಾರೊಬ್ಬರೊಂದಿಗೆ ಈತನದು ಜಗಳಾಟವೆ. ಶಾಲೆಯ ಹುಡುಗರು ಒಂದೆಡೆ ಗುಂಪುಕಟ್ಟಿಕೊಂಡು ನಿಂತಿದ್ದರೆ, ಅದು ವೇಗಾನ್‌ನ ಹೊಡೆದಾಟದ ಮೂಲಕವೆ ಎಂದು ಧಾರಾಳವಾಗಿ

PHOTO ENLARGEMENTS
Punctulity is our Motto;
SEND YOUR PHOTO; GET IT ENLARGED.
We Guarantee faithful reproduction.
Colouring our speciality.
Cheap Rates! *Satisfactory Work!!*
Even for Cinema Slides
Approach: GOVARIKAR & SONS,
Photographic dealers, KOLHAPUR.

ಹೇಳಬಹುದಾಗಿತ್ತು. ಕುಂಟನೆಂದರೆ ಕುಂಟ. ದೊಡ್ಡ ದೊಡ್ಡ ವ್ಯಕ್ತಿಗಳು ಹೇಗೆ ತಮ್ಮ ಜೀವನದ ಅರುಣೋದಯ ಕಾಲಕ್ಕೆ ಕೇವಲ ಕುಂಟರೆಂದು ನಿರ್ದೇಶಿಸಲ್ಪಟ್ಟವರೆಂಬುದನ್ನು ತಿಳಿದು, ಕುಂಟ ಹುಡುಗರ ಬಗೆಗೆ ಸಹಜವಾಗಿಯೆ ಆದರ ಉತ್ಪನ್ನವಾಗುವುದು. ಆದರೂ ಕುಂಟತನದಲ್ಲಿಯೂ ತಾರತಮ್ಯಗಳುಂಟು. ಇಂತಹರ ಕುಂಟತನದಲ್ಲಿ ಒಂದು ವೈಶಿಷ್ಟ್ಯವಿರುವುದು; ಕಾರಣವಿರುವುದು; ಕಾರಣಕ್ಕಾಗಿ ಅವರ ಕಾರ್ಯವಿರುವುದರಿಂದಲೆ ಅವರು ಮುಂದೆ ಕಾರಣಪುರುಷರಾಗಿರುವರು.

ವೇಗಾನ್‌ನ ಹುಡುಗತನವು ದಾಟಿ ಯೌವನವು ಬರಲು, ಅದರ ಸಂಗಡ ಹೊಣೆಗಾರಿಕೆಯೂ ಬಂದಿತು. ಅಂದಿನಿಂದ ಇಂದಿನವರೆಗೆ ಈತನಲ್ಲಿ ಶಾಂತತೆಯೂ ತಾಳ್ಮೆಯೂ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಕೂಡ ಸ್ಥೈರ್ಯವೂ ಒಡೆದುಕಾಣುವುವು. ವೇಗಾನ್‌ನ ಜೀವನವೆಂದರೆ ಸರಲತನದ ಪ್ರವಾಹದಂತಿದೆ. ಇಂದು ಫ್ರಾನ್ಸ್‌ನಲ್ಲಿಯೆ ಉನ್ನತಸ್ಥಾನವನ್ನು ಪಡೆದಿದ್ದರೂ ಈತನಲ್ಲಿ ಅದೆಂತಹ ಸೌಜನ್ಯ, ಅದೆಂತಹ ಮಿತ್ರತ್ವ! ಕಾರ್ಯತತ್ಪರನೂ, ಕಾರ್ಯಕುಶಲನೂ, ಎಂದು ವೇಗಾನ್ ಹೆಸರು ಪಡೆದಿರುವನು. ಆಲಸ್ಯವು ಸಾವಿಗಿಂತಲೂ ಕೀಳು ಎಂದು ಇವನ ನಂಬುಗೆ.

ವೇಗಾನ್‌ನ ಸೈನಿಕಶಿಕ್ಷಣವು, ಯುರೋಪದಲ್ಲಿಯೆ ಶ್ರೇಷ್ಠವಾದ ಕ್ಸೆಂಟ್ ಸೀರ್ ಎಂಬ ಶಾಲೆಯಲ್ಲಿ ಆಯಿತು. ಅವನ ಮೊಗ ನೋಡಿದ ಕೂಡಲೆ ಇವನೊಬ್ಬ ಕುಶಲ ಕುದುರೆ ಸವಾರನೆಂದು ತಿಳಿದುಬರುತ್ತದೆ. ಶಿಕ್ಷಣಹೊಂದಿ ಶಾಲೆಬಿಟ್ಟ ಕೂಡಲೆ, ದೇಶದಲ್ಲೆಲ್ಲ ಜಾಣನಾದ ಸವಾರನೆಂದು ಹೆಸರುಪಡೆದನು. ಮುಂದೆ ಸ್ವಲ್ಪ ದಿನಗಳಲ್ಲಿಯೆ ಶಾಂಬೆರಿಯಲ್ಲಿಯ ಆನೆಯ ಸೈನ್ಯಪಡೆಯ ಉಪಸೇನಾಪತಿಯೆಂದು ನಿಯಮಿಸಲ್ಪಟ್ಟನು. ಆ ಸೈನಿಕ ಶಾಲೆಯಲ್ಲಿ ಪಡೆದ ಶಿಕ್ಷಣದ ಕುರುಹು ಮಾತ್ರ ಇವನಲ್ಲಿ ಉಳಿದಿರದೆ, ಇಡಿಯೆ ಶಿಕ್ಷಣದ ಉಜ್ವಲತೆ ಬೆಳಬೆಳಗುತ್ತಲೆ ಇನ್ನೂ ಉಳಿದುಕೊಂಡಿದೆ.

ವಯಸ್ಸು ಆಂಕ್ಕೆ ಬಂದಿದ್ದರೂ ವೇಗಾನ್‌ನು ದೇಹಚಾಪಲ್ಯವನ್ನು ಚೆನ್ನಾಗಿ ಇಟ್ಟುಕೊಂಡಿದ್ದನು. ಕುದುರೆ ಹತ್ತುವುದೂ, ಕಟ್ಟಡ ಏರುವುದೂ ಅವನ ಒಲವಿನ ಕಾರ್ಯಗಳಾಗಿದ್ದುವು. ಬಾಗಿಲು ಮುಚ್ಚಿಕೊಂಡು ತಲೆಚೋಕೊಂಡು ಓದುತ್ತ ಕುಳಿತಿರುವುದಕ್ಕಿಂತ, ಬಯಲಲ್ಲಿ ಆಡುವುದು ಓಡುವುದು ಅವನಿಗೆ ಹೆಚ್ಚು ಸೇರುತ್ತಿದ್ದಿತು. ವ್ಯಾಯಾಮದ ಪ್ರಭಾವದಿಂದಲೆ ಇಂದು ೭೩ ವರುಷಕ್ಕೆ ಸಮಿಾಪಿಸಿದ್ದರೂ, ಪುಟಚಂಡಿನಂತೆ ತರುಣರನ್ನು ನಾಚಿಸುವಷ್ಟು ಉತ್ಸಾಹವಿದೆ ವೇಗಾನ್‌ನಲ್ಲಿ.

೧೯೦೯ ರಲ್ಲಿ ಸೊಮೂರಾದಲ್ಲಿಯ ಕುದುರೆಸವಾರರ ಶಾಲೆಯಲ್ಲಿ ಶಿಕ್ಷಕನೆಂದು ನಿಯಮಿಸಲ್ಪಟ್ಟಾಗ, ಇವನ ಕುದುರೆತಂತ್ರವನ್ನು ಮೆಚ್ಚಿ 'ಕೊನೆಯುವರೆಗೂ ಅಶ್ವವಿದ್ಯಾವಿಶಾರದನೆಂದು ಕೀರ್ತಿಗೊಳ್ಳುವನು' ಎಂದು ಇವನ ಗೆಳೆಯರೆಲ್ಲರೂ ಸಾರಿದರು. ನಾಲ್ಕು ವರುಷಗಳ ನಂತರ, ಕಿರಿಯ ದಳಪತಿಗಳನ್ನು ಸಿದ್ಧಪಡಿಸುವುದಕ್ಕಾಗಿ, ಸೈನ್ಯಶಿಕ್ಷಣಕೇಂದ್ರಕ್ಕೆ ಇವನನ್ನು ವರ್ಗಾಯಿಸಲಾಯಿತು. ಆ ಕಾಲಕ್ಕೆ ಯುದ್ಧಸಮಿತಿಯ ಉಪಾಧ್ಯಕ್ಷನಾದ ಸೇನಾಪತಿ ಜೊಫರ್‌ನು, ಇವನ ಕಾರ್ಯದ ಬಗೆಗೆ ಸಂತೋಷಪಟ್ಟು, ಮುಂದೆ ಸೇನಾಧಿಪತಿಯಾಗಲು ಯೋಗ್ಯರಿದ್ದವರೊಂದಿಗೆ ಇವನ ಹೆಸರನ್ನೂ ಸೇರಿಸಿದನು.

ಇಷ್ಟಾಗುವುದರಲ್ಲಿ ಬಂತು ೧೯೧೪ ರ ಮಹಾಯುದ್ಧ. ಕಿರಿಯ ದಳಪತಿಯಾಗಿದ್ದ ವೇಗಾನ್‌ನು ನಾನ್‌ಸಿಯಲ್ಲಿಯ ದಳದ ಮೇಲಧಿಕಾರಿಯಾಗಿದ್ದನು. ಇವನ ದಳವನ್ನೆ ಯುದ್ಧರಂಗಕ್ಕೆ ಕಳುಹಲಾಯಿತು. ಸಾಂಬರದ ಹತ್ತಿರ ಜರ್ಮನರು ಯಶಸ್ವಿರೀತಿಯಿಂದ ಮುತ್ತಿಗೆಹಾಕಿದ್ದರು. ಮತ್ತು ಮಿತ್ರಪಕ್ಷದವರು ಶಾರ್ಲೆರಾಯಿದಿಂದ ಜಾಣತನದಿಂದ ಹಿಂದೆ ಸರಿದಿದ್ದರು. ಈ ಎರಡೂ ಸೈನ್ಯಗಳ ನಡುವೆ ಸಂದು ಬಂದಿತ್ತು. ಅದನ್ನು ಸಂರಕ್ಷಿಸಲು ಜೊಫರ್‌ನಿಗೆ ಯೋಗ್ಯ ದಳಪತಿಯೊಬ್ಬನು ಬೇಕಾಗಿದ್ದನು. ಆ ಸ್ಥಾನವನ್ನು ವೇಗಾನ್‌ನು ಚಮತ್ಕಾರವೆನಿಸುವಂತೆ ಜಾಣತನದಿಂದ ಹಿಡಿದುಕೊಂಡನು.

ಮತ್ತೊಂದು ಪ್ರಸಂಗವು ಹೀಗೆ ಬಂತು: ಕೆಲವು ದಿನಗಳಾದ ಬಳಿಕ ವೇಗಾನ್‌ನೂ, ಇನ್ನೊಬ್ಬ ಸಹೋದ್ಯೋಗಿ ಡೆವ್ರೊನೂ ಮುಖ್ಯ ಕಚೇರಿಗೆ ಬಂದರು. ಡೇವ್ರೊನು ವೇಗಾನ್‌ಗಿಂತಲೂ ಸೈನ್ಯಶಾಲೆಯಲ್ಲಿ ಹೆಚ್ಚು ಮನ್ನಣೆ ಪಡೆದವನು. ಸೇನಾಪತಿ ಫ್ಲೊಕ್‌ನು: 'ನಿಮ್ಮಿಬ್ಬರಲ್ಲಿ ಹಿರಿಯನಾರು?' ಎಂದು ಕೇಳಲು 'ನಾನು' ಎಂದ ವೇಗಾನ್. 'ಒಳ್ಳೇದು, ನೀನೆ ನನ್ನ ಬಲಗೈಯಂತೆ ವರ್ತಿಸು' ಎಂದು ವೇಗಾನ್‌ನಿಗೆ ಹೇಳಿ, ಡೇವ್ರೊನ ಕಡೆಗೆ ಮೊಗತಿರುಹಿ, "ನೀನು ವೇಗಾನ್‌ನ ಸಹಾಯಕನಾಗು" ಎಂದನು. ಈ ವ್ಯವಸ್ಥೆಯು ಕಾನೂನಿಗೆ ವಿರುದ್ಧವಾಗಿತ್ತು. ಎಂತಲೆ ಕಾಯದೆ-ಕೋಳಿಗಳು ಮೂಗುಮುರಿದುವು. "ಈ ಸವಾರನು ಸರಿಯಾಗಿ ಕೆಲಸಮಾಡದಿದ್ದರೆ, ಆ ದಿನಗಳಲ್ಲಿ ಹಿಂದೆ ಕಳಿಸುವೆ" ಎಂದು ಗುಪ್ತವಾಗಿ ಫ್ಲೊಕ್ ಜೊಫರನಿಗೆ ಬರೆದಿದ್ದನು. ಆದರೆ ಅಂತಹ ಪ್ರಸಂಗ ಬರಲೇ ಇಲ್ಲ. ಮುಂದೆ ೯ ವರುಷಗಳ ತನಕ ವೇಗಾನ್‌ನು ಸೇನಾಪತಿ ಫ್ಲೋಕನ ಭುಜಕ್ಕೆ ಭುಜ ತಗುಲಿಸಿ ಕಾರ್ಯಮಾಡಿ, ಅವನ ಯಶೋಭಾಗಿಯಾದನು. ಫ್ಲೋಕನ ಬಗೆಗೆ ವೇಗಾನ್‌ನಿಗೆ ಆತ್ಮಾದರ. ವೇಗಾನ್‌ನನ್ನು ಕಂಡರೆ, ಫ್ಲೋಕನಿಗೆ ಪ್ರೀತಿ. ಒಬ್ಬರನ್ನೊಬ್ಬರು ಬಿಟ್ಟು ಅಗಲಲಾರದವರಾಗಿದ್ದರು. ಫ್ಲೋಕನಿಗೆ ವೇಗಾನ್‌ನಲ್ಲಿ ಸಂಪೂರ್ಣ ವಿಶ್ವಾಸ. ಹೊಸ ಕಾರ್ಯವೇನಾದರೂ

ತನ್ನ ಪಾಲಿಗೆ ಬಂದರೆ "ವೇಗಾನ್, ಇದನ್ನು ನೋಡುತ್ತಿರು" ಎಂದು ಫೋಕನು ಹೇಳಿದರೆ ಸಾಕು, ಆ ಕಾರ್ಯವು ಯಶಸ್ವಿಯಾಯಿತೆಂದೆ ತಿಳಿಯಬೇಕು.

ಮಹಾಯುದ್ಧವು ಜೋರಿನಿಂದ ನಡೆದಾಗ, ೧೯೧೬ ರಲ್ಲಿ ವೇಗಾನ್‌ನು 'ಬ್ರಿಗೇಡಿಯರ್ ಜನರಲ್' ಮಾಡಲ್ಪಟ್ಟನು. ಮತ್ತು ಒಪ್ಪಂದದ ದಿನದಲ್ಲಿ ವೇಗಾನ್‌ನೇ ಒಪ್ಪಂದದ ಕರಾರುಗಳನ್ನು ಜರ್ಮನಿಯ ರಾಯಭಾರಿಗೆ ಓದಿಹೇಳಿದನು. ಎಂತಹ ಯೋಗ! ಅಂದು ಒಪ್ಪಂದದ ಕರಾರುಗಳನ್ನು ಜರ್ಮನಿಯವರಿಗೆ ಓದಿ ಹೇಳಿದವನು ವೇಗಾನ್‌ನು; ಇಂದು ಅದೇ ವೇಗಾನ್‌ನು, ಜರ್ಮನಿಯ ಕರಾರುಗಳು ಏನು ಬರುವುವೆಂದು ದಾರಿಕಾಯಬೇಕಾಗಿದೆ. ಅಂದು ವಿಜಯಶಾಲಿಯಾಗಿ, ತನ್ನ ಪ್ರೀತಿಯ ಕುದುರೆಯಾದ 'ಹೌಜಾರ್'ದ ಮೇಲೆ ಕುಳಿತು ಮೆರೆವಣಿಗೆಯಲ್ಲಿ ನಡೆದಿದ್ದನು; ಇಂದು ಇಡಿ ಫ್ರಾನ್ಸ್ ದೇಶವೆ ಹತಾಶವಾಗಿ, ಕಂಗೆಟ್ಟು, ದೆಸೆಗೆಟ್ಟಿದೆ. ಅದರ ಹೊಣೆಗಾರಿಕೆಯನ್ನು ವೇಗಾನ್‌ನೂ, ಪೆತಾ ಅವರೂ ಹೊತ್ತಿದ್ದಾರೆ.

ಈ ದಿನದ ಸ್ಥಿತಿಯು ತಾನು ಮಾಡಿದ ಶೌರ್ಯದ ಸಂನಿವೇಶಗಳನ್ನು ನೆನಪಿಗೆ ತಾರದೆ ಇರುವುದೆ ವೇಗಾನ್‌ನಿಗೆ! ೧೯೨೦ ರ ಜುಲೈ ತಿಂಗಳಲ್ಲಿ ಬೋಲ್‌ಶೇವಿಕರು ಪೋಲಂಡಿನವರನ್ನು ಹೆದರಿಸಿದಾಗ, ವಾರ್ಸಾಕ್ಕೆ ವೇಗಾನ್‌ನನ್ನೇ ಕಳುಹಲಾಗಿದ್ದಿತು. ಮತ್ತು ಅವನ ಶೌರ್ಯ-ಸಾಹಸ-ಹಂಚಿಕೆಗಳಿಂದ ಪೋಲರು ಸುಸಂಘಟಿತರಾಗಿ, ರಸಿಯದವರನ್ನು ಹೊರದೂಡಲು ಶಕ್ತರಾದರು. ೧೯೨೩ರಲ್ಲಿ ಸಿರಿಯಾದ ಹಿರಿಯ ಕೊಮಿಸ್ಸೇರ್‌ನೆಂದು, ವೇಗಾನ್ ನಿಯಮಿಸಲ್ಪಟ್ಟನು. ೧೯೩೦ರಲ್ಲಿ ಫ್ರಾನ್ಸ್ ದೇಶದ ಸೇನಾಧಿಪತಿಯಾದನು. ಮತ್ತು ಕೆಲಕಾಲದ ನಂತರ ಪೆತಾ ಅವರು ರಾಜಿನಾಮೆ ಕೊಟ್ಟ ಮೇಲೆ ಯುದ್ಧಸಮಿತಿಯ ಉಪಾಧ್ಯಕ್ಷನಾದನು.

ಆ ಹಿಂದಿನ ದಿನದ ಸವಿನೆನಹುಗಳು ಇಂದು ಹೊಸಹುರುಪನ್ನು ಕೊಟ್ಟು, ಫ್ರಾನ್ಸ್ ದೇಶವನ್ನು ಪುನರುಜ್ಜೀವನಗೊಳಿಸಿ, ಸಜ್ಜುಗೊಳಿಸಿ, ಪರಂಪರೆಯಿಂದ ಬಂದ ಫ್ರಾನ್ಸ್‌ದ ಧೈರ್ಯ-ಶೌರ್ಯಗಳನ್ನು ಕಾಯ್ದುಕೊಳ್ಳಲು ಸಹಾಯಕವಾಗದೆ ಹೋಗುವುವೇ?— ಎಂದು ಅನುಮಾನಬರುತ್ತದೆ. ಆದರೆ ಏನೂ ಹೇಳಲು ಬರುವಂತಿಲ್ಲ. ಯುದ್ಧನೀತಿಯೆ ಹಾಗಿರುವುದು. ಕಣ್ಣಿಗೆ ಕಾಣಿಸಲು ಎಲ್ಲವೂ ಕೈಮೀರಿಹೋಗಿರುವುದೆಂದು ತಿಳಿದರೂ, ಯಾವನೊಬ್ಬನ ಹಂಚಿಕೆಯಿಂದ ದಿನದ ಬಣ್ಣ ಒಮ್ಮೆಲೆ ಬದಲಾಗುವ ಸಂಭವವೂ ಅಸಂಭವವಲ್ಲ. ಕ್ರಾಂತಿಪಾತದ ಶಾಂತಿಪಾತವನ್ನು ಹಾಕಿದ ಅಮೇರಿಕೆಯವರೂ ಅದನ್ನು ಅನುಸರಿಸಿ, ಯಶಸ್ವಿಗಳೆನಿಸಿಕೊಂಡ ಫ್ರೆಂಚರೂ ಕೈಗೆ ಕೈ ಕೊಟ್ಟರೆ, ಇಂದಿನ ಯುದ್ಧರಂಗದ ಕಳೆಯೆ ಬದಲಾಗಬಹುದಾಗಿತ್ತು, ಪ್ರಜಾಸತ್ತೆಯು ಮರುಕಳಿಸಿಬರಬಹುದಾಗಿತ್ತು.

ಇಲ್ಲದಿದ್ದರೆ. ಯುರೋಪದಲ್ಲಿ ಯಾವ ಹೊಸತತ್ತ್ವದ ಬೀಜಾರೋಪಣೆಯಾಗಬಹುದೊ ತಿಳಿಯದಾಗಿದೆ. ಎಂದಿನಂತೆ ಫ್ರಾನ್ಸ್ ದೇಶವು ಇಂದೂ ವೇಗಾನ್‌ರಕ್ಷೆಲೆ ಮುಖಿತಿರುಗಿಸಿದೆ. ಅಂದು ಫೋಕ್‌ನು ಆಡಿದ ಮಾತು ಸತ್ಯವಾಗಬಹುದೆ? ಹುಚ್ಚು ಹಂಬಲು ಎಂದೆನಿಸಿಕೊಳ್ಳುವುದೆ?



ನಿಮ್ಮದು
ಯಾಕೆ
ಆಗಬಾರದು?

ನಿಮಗೆ ನೆಟ್ಟಗಾದ ಕಾರಣ ಒಂದೇ. ಅಂದರೆ ಗುಣಪಡುವ ಆಶೆಯಿಂದ ನೀವು ಇಲ್ಲಿಯವರೆಗೆ ದೊರಕಿಸಿದ ಉಪಾಯಗಳೆಲ್ಲ ನಿರುಪಯೋಗಿಯಾಗಿದ್ದುವು. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೆ ಬೇರುಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದನ್ನು ತೆಗೆದುಕೊಳ್ಳಹತ್ತಿದ ಕೂಡಲೆ ಕೆಮ್ಮು ನಿಲ್ಲುವುದು, ತೇಕು ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ, ಪಚನ-ಕ್ರಿಯೆಯು ನೆಟ್ಟಗಾಗುವುದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಫುಸವು ಗಟ್ಟಿಮುಟ್ಟಾಗಿ, ದಮ್ಮು ಹೆಸರುಳಿಯದಂತೆ ನೆಟ್ಟಗಾಗುವುದು.

ಪುರೋಹಿತ ಶ್ವಾಸಹಾರಿಯು ೪ ಔ. ೬ ಔ. ಮತ್ತು ೧೬ ಔ. ಬಾಟ್ಲಿಗಳಲ್ಲಿ ಕ್ರಮವಾಗಿ ೨-೨ ರೂ. ೪-೧೨ ರೂ. ೬-೮ ರೂ. ಗಳಿಗೆ ಎಲ್ಲ ಕಡೆಗೆ ಸಿಗುವುದು.

ತರಿಸಿಕೊಳ್ಳುವ ವಿಳಾಸ:—

ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಇಲ್ಲಿವೆ ಮುಂಬಯಿ ಸೋಲ ಏಜಂಟರು:

ವನಮಾಳಿ, ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ, ಮುಂಬಯಿ.

ದಮ್ಮಿಗೆ
ಯಶಸ್ವಿಯಾದ
ಡಾಕ್ಟರರ
ಉಪಾಯವು.

ಪುರೋಹಿತ
ಶ್ವಾಸಹಾರಿ

ಜರ್ಮನಿ-ಫ್ರಾನ್ಸುಗಳಲ್ಲಾದ ಕೆಲವು ಕರಾರುಗಳು

(ಸಂಪಾದಕೀಯ ಸಂಗ್ರಾಹಕರಿಂದ)

(೧) ಫ್ರಾನ್ಸಿನ ಪಶ್ಚಿಮದ ಕಡಲಕರೆಯೂ ಜಿನೇವಾದಿಂದ ಟೂರ್ಸ್‌ರೇಷೆಯ ಉತ್ತರಕ್ಕಿದ್ದ ಎಲ್ಲ ಪ್ರದೇಶವೂ ಜರ್ಮನಿಯ ಅಧೀನದಲ್ಲಿಯೆ ಉಳಿಯಬೇಕು.

(೨) ಫ್ರೆಂಚ್ ಸೈನ್ಯಕ್ಕೆ ರಜೆಯನ್ನು ಕೊಟ್ಟು ಅದನ್ನು ನಿಃಶಸ್ತ್ರವಾಗಿಸಬೇಕು. ಜರ್ಮನಿಯು ಅಧೀನಕ್ಕೆ ತೆಗೆದುಕೊಳ್ಳದಿದ್ದ ಭಾಗದಲ್ಲಿ, ಕೆಲವೊಂದು ಫ್ರೆಂಚ್‌ಸೈನ್ಯವನ್ನು ಫ್ರಾನ್ಸ್ ಇಟ್ಟುಕೊಂಡಿರಬಹುದು. ಆದರೆ ಈ ಸೈನ್ಯಸಂಖ್ಯೆ ಎಷ್ಟಿರಬೇಕೆಂಬುದನ್ನು ಗೊತ್ತುಮಾಡುವ ಅಧಿಕಾರ ಇಟಲಿ-ಜರ್ಮನಿಗಳದಾಗಿದೆ.

(೩) ಜರ್ಮನಿಯ ಅಧೀನಕ್ಕೆ ಬಂದ ಪ್ರದೇಶದ ಎಲ್ಲ ಬಗೆಯ ಒಡೆತನವೂ (ಸ್ಥಾನಿಕ ಆಡಳಿತವನ್ನುಳಿದು) ಜರ್ಮನಿಯದೇ. ಇದಕ್ಕಾಗಿ ಬೇಕಾಗುವ ಅನುಕೂಲತೆಗಳನ್ನೆಲ್ಲ ಫ್ರೆಂಚ್ ಸರಕಾರದವರು ಒದಗಿಸಿಕೊಡಬೇಕು. ಫ್ರೆಂಚ್ ಸರಕಾರವು ತನ್ನ ರಾಜಧಾನಿಯನ್ನು, ತನ್ನ ಅಧೀನದಲ್ಲಿದ್ದ ಪ್ರದೇಶದಲ್ಲಿ ಯಾವ ಸ್ಥಳವನ್ನೂ ಆರಿಸಬಹುದು. ಇಲ್ಲವೆ ಅವರಿಗೆ ಬೇಕೆನಿಸಿದರೆ ಪ್ಯಾರಿಸನ್ನೂ ರಾಜಧಾನಿಯನ್ನಾಗಿ ಮಾಡಿಕೊಳ್ಳಬಹುದು. ಪ್ಯಾರೀಸಿಗೆ ರಾಜಧಾನಿ ಬಂದಲ್ಲಿ, ಅದಕ್ಕೆ ಬೇಕಾಗುವ ಅನುಕೂಲತೆಗಳನ್ನೆಲ್ಲ ಜರ್ಮನ್ ಸರಕಾರವು ಕಲ್ಪಿಸಿಕೊಡುವುದು.

(೪) ಜರ್ಮನ್ ಸರಕಾರವು ಗೊತ್ತುಪಡಿಸಿದ ಅವಧಿಯೊಳಗಾಗಿ ಹಡಗುಪಡೆಯನ್ನೂ, ಕಾಲಾಳುಬಲ-ವಿಮಾನದಳಗಳನ್ನೂ ಕಡಿಮೆಮಾಡಿ, ಅವುಗಳನ್ನೆಲ್ಲ ಶಸ್ತ್ರರಹಿತವಾಗಿಸಬೇಕು. ರಾಷ್ಟ್ರದ ಸಂರಕ್ಷಣೆಗೆ ಬೇಕಾಗುವಷ್ಟು ದಲವನ್ನು ಹಾಗೆಯೆ ಇರಿಸಲಾಗುವುದು. ಆದರೆ ಈ ದಲದ ಸಂಖ್ಯೆಯೆಷ್ಟಿರಬೇಕೆಂದು ನಿರ್ಣಯಿಸುವ ಅಧಿಕಾರ ಜರ್ಮನ್ ಸರಕಾರದ ಕಡೆಗೆ. ಜರ್ಮನಿಗೆ ಅಧೀನವಾಗಿರುವ ಪ್ರದೇಶದಲ್ಲಿದ್ದ ಸೈನಿಕರನ್ನು, ಫ್ರೆಂಚ್‌ಫ್ರಾನ್ಸ್ ಪ್ರದೇಶಕ್ಕೆ ಕರೆಯಿಸಿಕೊಂಡು, ಅವರನ್ನೂ ಶಸ್ತ್ರರಹಿತರನ್ನಾಗಿ ಮಾಡಬೇಕು.

(೫) ಒಳ್ಳೆಯ ಸ್ಥಿತಿಯಲ್ಲಿರುವ ಶಸ್ತ್ರಾಗಾರ, ಟ್ಯಾಂಕ್ಸ್, ವಿಮಾನಗಳು, ಮದ್ದುಗುಂಡು, ಸೈನ್ಯೋಪಯುಕ್ತ ಯುದ್ಧಸಾಮುಗ್ರಿ, ಟ್ರ್ಯಾಕ್ಟರ್ಸ್ ಅಲ್ಲದೆ ಎಲ್ಲಾ ಮದ್ದುಗುಂಡು ಇವನ್ನೆಲ್ಲ ಒಳ್ಳೆಯ ನಡೆವಳಿಕೆಯ ಬಗ್ಗೆ ಆಡವು ಎಂದು, ಜರ್ಮನ್ ಸರಕಾರದ ವಶಕ್ಕೆ ಒಪ್ಪಿಸಬೇಕು.

(೬) ಜರ್ಮನಿಯ ವಶಕ್ಕೆ ಒಳಗಾಗಿರದ ಪ್ರದೇಶದಲ್ಲಿದ್ದ ಯುದ್ಧಸಾಮುಗ್ರಿಗಳನ್ನೆಲ್ಲ ಜರ್ಮನಿ ಹಾಗೂ ಇಟಾಲಿಗಳ ನೇತೃತ್ವದಲ್ಲಿ ಒಟ್ಟುಗೂಡಿಸಲಾಗುವುದು. ಅಲ್ಲದೆ ಆ ಪ್ರದೇಶದಲ್ಲಿ ಇರುವ ಮದ್ದು-ಗುಂಡಿನ ಕಾರಖಾನೆಗಳ ಕೆಲಸವನ್ನು ಒಮ್ಮೆಲೆ ನಿಲ್ಲಿಸಲಾಗುವುದು.

(೭) ಜರ್ಮನರ ವಶಕ್ಕೊಪ್ಪಿಸುವ ಭಾಗದಲ್ಲಿದ್ದ ವ್ಯೂಹ-ರಚನಾ ಸಾಮುಗ್ರಿಗಳನ್ನೆಲ್ಲ ಇದ್ದುದಿದ್ದಂತೆಯೆ ಸುವ್ಯವಸ್ಥಿತವಾಗಿ ಜರ್ಮನ್ ಸರಕಾರಕ್ಕೆ ಒಪ್ಪಿಸಬೇಕು.

(೮) ವಸಹಾತುಗಳಲ್ಲಿದ್ದ ಫ್ರೆಂಚರ ಹಿತಸಂಬಂಧದ ಸಂರಕ್ಷಣೆಗೆ ಅವಶ್ಯಕವಿದ್ದಷ್ಟು ಹಡಗುಪಡೆಯನ್ನು ಅಲ್ಲಲ್ಲಿ ಇರಿಸಿ, ಮಿಕ್ಕುದನ್ನೆಲ್ಲ ಮರಳಿ ಕರೆಯಿಸಿಕೊಂಡು, ಅದನ್ನೆಲ್ಲ ನಿಶ್ಶಸ್ತ್ರವಾಗಿಸಬೇಕು, ಅಲ್ಲದೆ ಅದನ್ನೆಲ್ಲ ಜರ್ಮನಿ ಹಾಗೂ ಇಟಲಿಯ ಸಂಯುಕ್ತ ಯಾಜಮಾನ್ಯಕ್ಕೆ ಒಪ್ಪಿಸಿಕೊಡಬೇಕು. ಈ ಹಡಗುಪಡೆಯ ಮೇಲಿನ ಅಧಿಕಾರವು ಜರ್ಮನರ ಕಡೆಗೆ ಸಂಪೂರ್ಣವಾಗಿದ್ದರೂ, ಇದರಲ್ಲಿಯ ತೀರ ಅವಶ್ಯಕವಿದ್ದಷ್ಟು ಭಾಗವನ್ನು ಪಶ್ಚಿಮದಂಡೆಯ ಸುರಕ್ಷಿತತೆಗಾಗಿ ಉಪಯೋಗಿಸಲಾಗುವುದು. ಮಿಕ್ಕ ಭಾಗವನ್ನು ಮುಂದೆ ನಡೆಯಬಹುದಾದ ಯುದ್ಧದಲ್ಲಿ ಉಪಯೋಗಿಸಿಕೊಳ್ಳುವುದಿಲ್ಲವೆಂದು ಖಂಡಿತನಂಬುಗೆಯನ್ನು ಜರ್ಮನ್ ಸರಕಾರವು ಫ್ರೆಂಚ್ ಸರಕಾರಕ್ಕೆ ಕೊಡುವುದು.

ವಿ. ಸೂ: ಈ ಕರಾರುನಾಮೆ ೨೪ ಕಲಮುಗಳದಿದ್ದು ಅವುಗಳಲ್ಲಿಯ ಮೊದಲಿನ ಎಂಟು ಕಲಮುಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ. ಅಗಳು ಹಿಸುಕಿ ನೋಡಿರಿ !

(೧೧೪ ನೆಯ ಪುಟದಿಂದ ಮುಂದುವರಿದುದು.)

ಮಾಡುವ ವಿಧಾನ, ಬಟ್ಟೆಗಳಿಗೆ ಬೇರೆ ಬೇರೆ ಬಣ್ಣಹಾಕುವ ರೀತಿ, ಮನೆಯಲ್ಲಿಯ ಬೇರೆ ಬೇರೆ ಸಾಮಾನುಗಳು ಕೆಡದಂತೆ ಕಾಯ್ದಿರಿಸುವ ಹಂಚಿಕೆ, ಸಣ್ಣಪುಟ್ಟ ನೋವು-ಗಾಯ-ಕಡಿತಗಳಿಗೆ ಮದ್ದು ಮುಂತಾದುವು. ಹೀಗೆಯೆ ಬೇರೆ ಬೇರೆ ಯಂತ್ರಗಳ ಪರಿಚಯವನ್ನೂ ಜನಸಾಮಾನ್ಯರಿಗೆ ಮಾಡಿಕೊಡುವುದಗತ್ಯವುಂಟು. ಜೀವನೋಪಯುಕ್ತವಾದ ವಿಧಾಯಕಯಂತ್ರಗಳಲ್ಲದೆ ಇಂದು ಜೀವವಿಧ್ವಂಸಕವಾದ ಹಲವು ಯಂತ್ರಗಳು ದಿನದಿನಕ್ಕೆ ಮುಂದೆ ಬರುತ್ತಲಿವೆ. ಅವುಗಳ ಹೆಸರನ್ನು ಕೇಳಿದಾಗ ' ಅವುಗಳ ರಚನೆ-ರೀತಿಗಳೇನು ? ' ' ಅವುಗಳನ್ನು ರಚಿಸಿದವರಾರಿರಬಹುದು? ' ಎಂಬುದನ್ನು ತಿಳಿದುಕೊಳ್ಳುವ ಕುತೂಹಲ ಜನಸಾಮಾನ್ಯರಲ್ಲಿ ಉಂಟಾಗುವುದು ಸಹಜ. ಸಾಧ್ಯವಿದ್ದವರು ಆ ಆ ಯಂತ್ರಗಳ ರಚನಾಶ್ರಮಗಳ ವಿವರವನ್ನು, ಪರಭಾಷೆಯಲ್ಲಿದ್ದುವುಗಳನ್ನು ಕನ್ನಡಿಗರಿಗಾಗಿ ಒದಗಿಸಿದರಾಗದೆ ? ನಮ್ಮ ಸಾಹಿತ್ಯದಲ್ಲಿ ಇಷ್ಟು ವಿವಿಧಮುಖವಾಗಿ ಕೆಲಸಮಾಡಬೇಕಾಗಿರುವಾಗ, ಲೆಕ್ಕಣಿಕೆ ಹಿಡಿದವರೆಲ್ಲರೂ ಲಲಿತ ಸಾಹಿತ್ಯದ ಬೆಂಬತ್ತಿಯೆ ಹೊರಡುವರೆಂದರೆ ಮಿಕ್ಕ ವಿಷಯಗಳ ಕೊರತೆಯನ್ನು ತುಂಬುವವರಾರು ? ಇದರ ವಿಚಾರ ಮಾಡದಿರುವುದು ನಮ್ಮ ಲೇಖಕರಲ್ಲಿಯದೊಂದು ದೊಡ್ಡ ಕೊರತೆಯಲ್ಲವೆ ?

—ಸಂಪಾದಕರು

ಕಾರ್ಮೋಡ

(ಸಣ್ಣ ಕತೆ)

★

ಶ್ರೀ. ವಿಶ್ವನಾಥ ಹೆಗಡೆ, ಮುಂಬಯಿ

ಜೀವನದಲ್ಲಿ ಹಲವು ಸಲ ಕಾರ್ಮೋಡ ಸುಳಿದು ದಾರಿಯ ಬೆಳಕನ್ನು ಮುಂಜುಗೊಳಿಸುವುದು. ಮೋಡದ ಕತ್ತಲೆ ಕ್ಷಣಿಕವಾದುದೆಂಬ ಕಲ್ಪನೆ ಮನುಷ್ಯನಿಗಾಗ ಬರುವುದಿಲ್ಲ; ವ್ಯರ್ಥವಾಗಿ ಕುದಿಯುವನು, ಕಳವಳಿಸುವನು. ಸುಗುಣಾಬಾಯಿ ಎಬ್ಬಿಸಿದ ಕಾರ್ಮೋಡವೊಂದು, ಈ ಕತೆಯ ಪಾತ್ರಗಳನ್ನು ಎಷ್ಟೊಂದು ಕತ್ತಲೆಯಲ್ಲಿ ಕೆಡಹಿಬಿಟ್ಟಿದ್ದಿತು ನೋಡಿರಿ!

★

“ ನಿನಗೆ ವಾಙ್ಮಯದ ಅಭಿರುಚಿ ಬಹಳವೆಂದು ಕಾಣುವುದು? ”

ಆಗ ಸುಮಾರು ಮೂರು-ಮೂರೂವರೆ ಘಂಟೆಯಾಗಿತ್ತು. ಸಪ್ಟಂಬರಿನ ಕೊನೆಯ ರಣ-ರಣ ಬಿಸಿಲು ಉರಿಯುತ್ತಿದ್ದರೂ ಮನೆಯೊಳಗಿನ ತಾಪವನ್ನು ತಾಳಲಾರದೆ, ಛತ್ರಿಯನ್ನು ತೆಗೆದುಕೊಂಡು ಗ್ಲೋಬ್ ಸಿನೆಮಾದಲ್ಲಿ ನಡೆಯುತ್ತಿದ್ದ “ ಮತಲಬೀ ದುನಿಯಾ ” ದ ಚಿತ್ರಗಳನ್ನು ನೋಡಿಕೊಂಡೋ, ಅಥವಾ ಇನ್ನೆಲ್ಲಿಯಾದರೂ ಸುತ್ತಾಡಿಕೊಂಡೋ ಬರೋಣವೆಂದು ಹೊರಕ್ಕೆ ಹೊರಟೆ.

ಮನೆಯೊಳಗಿನ ತಾಪವೆಂದರೆ ಅದು ಹೀಗೆ :- ಆ ಹೊತ್ತು ಹನ್ನೆರಡು ಘಂಟೆಯಿಂದಲೂ ನಮ್ಮ ತಾಯಿ ಒಂದೇ ಸಮನೆ ಕಿರಿಕಿರಿ ಹಚ್ಚಿಬಿಟ್ಟಿದ್ದಳು. ನಮ್ಮ ತಂದೆಯ ನಂತರ ನನ್ನ ದೆಸೆಯಿಂದ ಅವಳು ಬಹಳ ಉಪವಾಸ-ವನವಾಸವನ್ನು ಕಾಣಬೇಕಾಯಿತೇನೋ ನಿಜ. ತನ್ನ ಸ್ವಂತದ ಮನೆಯಲ್ಲೂ ಪರರಮನೆಯಲ್ಲೂ ಎಷ್ಟೋ ಕೀಟಲೆಯನ್ನು ಸಹಿಸಿಕೊಂಡು, ಅದೆಷ್ಟೋ ಕಣ್ಣೀರು ಸುರಿಸಿ, ಐದುವರ್ಷದವನಾಗಿದ್ದ ನನ್ನನ್ನು ದೊಡ್ಡವನನ್ನಾಗಿ ಮಾಡಿದಳೆಂಬುದೂ ಸತ್ಯ. ' ಇಷ್ಟೆಲ್ಲ ಮಾಡಿದರೂ ಈಚೆಗೆ ಪ್ರಭಾಕರ ತನ್ನ ಮಾತು ಕೇಳುವುದಿಲ್ಲ ' ಎಂಬುದು ಅವಳ ಜಪವಾಗಿ ಹೋಗಿತ್ತು. ಅದರೆ ಮರುಮಾತಿಲ್ಲದೆ ಎಲ್ಲವನ್ನೂ ಕೇಳುತ್ತಿದ್ದ ಚಿಕ್ಕಂದಿನ ಪ್ರಭಾಕರನಿಗೂ ಎಮ್. ಎ. ಪಾಸಾದ ಈಗಿನ ಪ್ರಭಾಕರನಿಗೂ ಇರುವ ಅಭ್ಯಂತರವನ್ನು ನಮ್ಮ ತಾಯಿ ನೋಡುತ್ತಿರಲಿಲ್ಲ. ತಾನು ಹೇಳಿದ್ದಕ್ಕೆಲ್ಲ ಹೂಂ ಮುದ್ರೆಯೊತ್ತಬೇಕೆಂದು ಅವಳ ಪ್ರತಿಪಾದನೆ.

ದೀಪಹಚ್ಚಿದ ಕೂಡಲೆ ಮನೆಗೆ ಬಾರದಿರುವುದು, ಒಂದ ಮೇಲೆ ಕೈಕಾಲು ತೊಳೆದುಕೊಳ್ಳದೆ ಇರುವುದು, ದೇವರು ದೀಪದಲ್ಲಿ ಆಸ್ಥೆ ತೋರದಿರುವುದು.. ಇವೇ ಮೊದಲಾದ ಕ್ಷುಲ್ಲಕ ಸಂಗತಿಗಳಲ್ಲಿ ಸಹ ನನಗೂ ಅವಳಿಗೂ ಸರಿಬೀಳುತ್ತಿದ್ದಿಲ್ಲ. ಏನಿದ್ದರೂ ಅವಳದು ಹಳೆಯ ಪದ್ಧತಿ. ಶಿಕ್ಷಣ ಪಡೆದ ಆಧುನಿಕತರುಣನಾದ ನಾನು ಎಲ್ಲವನ್ನೂ ಹೇಗೆ ಸಹಿಸಿಕೊಂಡಿರಲಿ ?

ಆದರೆ ಒಂದು : ನಾನು ಮಾತೃದ್ರೋಹಿಯೆಂದು ಮಾತ್ರ ಯಾರೂ ತಿಳಿಯ ಬೇಡಿ. ಆಕೆ ನನ್ನ ಸಲುವಾಗಿ ಪಟ್ಟ ಕಷ್ಟವನ್ನು ನಾನು ಬಲ್ಲೆ. ಅವಳಿಗೆ ಸಲ್ಲತಕ್ಕ ಭಕ್ತಿಯೂ ಆದರವೂ ನನ್ನಲ್ಲಿ ಇದ್ದೇ ಇದೆ. ಅವಳ ಮನಸ್ಸನ್ನು ನೋಯಿಸಬಾರದೆಂದು ಮನ-

ಪೂರ್ವಕವಾಗಿ ಹವಣಿಸುತ್ತಿರುವೆ. ಆದರೇನು, ತನ್ನ ಪ್ರಭಾಕರ ಇನ್ನೂ ನಾಲು ಹಲ್ಲು ಉದುರದ ಬಾಲಕನೆಂದೇ ಅವಳ ಕಲ್ಪನೆ!

ಈ ಜಗ್ಗಾಟವು ೫-೬ ವರ್ಷಗಳಿಂದಲೂ ನಡೆದಿತ್ತು. ಮೊದ-ಮೊದಲು ನಾನು ಅಂಜುತ್ತಂಜುತ್ತ ಅವಳೊಂದಿಗೆ ನಡಕೊಳ್ಳು ತ್ತಿದ್ದೆ. ಕಡೆಕಡೆಗೆ 'ಇದೇನು, ದಿನಾ ಒಂದೇ ಹಾಡು!' ಎಂದು-ಕೊಂಡು ನಿರ್ಲಕ್ಷ್ಯಭಾವದಿಂದ ಇರತೊಡಗಿದೆ. ನಮ್ಮ ತಾಯಿ ಅದಕ್ಕೆ ಮಾಡಿಕೊಂಡ ಅರ್ಥವೇ ಬೇರೆ: 'ನಾನು ಜೊತೆಗಾತಿ ಯೊಬ್ಬಳನ್ನು ಸಂಪಾದಿಸುವ ಚಿಂತೆಯಲ್ಲಿದ್ದೇನೆ; ಆದ್ದರಿಂದಲೇ ನನ್ನ ಲಕ್ಷ್ಯ ಮನೆಯ ಕಡೆಗೆ ಇರುವುದಿಲ್ಲ' ಎಂದು ಅವಳ ಗ್ರಹಿಕೆಯಾಯಿತು.

ನಿಜ ಹೇಳಬೇಕಾದರೆ, ಲಗ್ನವಾಗಿದ್ದರೆ ನನಗೇನು ಬೇಡವೆಂದಿರ ಲಿಲ್ಲ. ನನ್ನೊಡನೆ ಬಿ. ಎ. ವರ್ಗದಲ್ಲಿ ಓದುತ್ತಿದ್ದ ಒಬ್ಬಳನ್ನು ಅದಕ್ಕಾಗಿ ಕೇಳಬೇಕೆಂದೂ ಬಹಳ ದಿನಗಳಿಂದ ನನ್ನ ಮನಸ್ಸಿ ನಲ್ಲಿತ್ತು. ಆದರೆ ಹಾಗೆ ಕೇಳುವುದಕ್ಕಿಂತ ಮುಂಚಿತವಾಗಿಯೆ, ಅವಳ ಲಗ್ನವು ನಿಶ್ಚಯವಾಗಿದೆಯೆಂದು ನನಗೆ ತಿಳಿದ ಬಳಿಕ, ಲಗ್ನದ ವಿಷಯವನ್ನೇ ಮರೆತೆನೆನ್ನಬಹುದು. ಎಂದರೆ ನಿರಾಶನಾದೆನೆಂದಲ್ಲ, ಪ್ರೇಮಸಾಗರದಲ್ಲಿ ಧುಡುಂ ಪ್ರವೇಶಮಾಡಿ ಆತ್ಮಹತ್ಯೆ ಮಾಡಿ ಕೊಳ್ಳದೆ, ಸಾರಾಸಾರ ವಿಚಾರಮಾಡಿ ಲಗ್ನವಾಗಬೇಕೆಂದು ನಿರ್ಧಾರಮಾಡಿದೆ.

ನನಗೆ ಜೊತೆಗಾತಿಯ ಆವಶ್ಯಕತೆ ಇದ್ದಿತೆಂಬುದು ನಿಜ; ಆದರೆ ಈ ವಿಷಯದಲ್ಲಿ ನಮ್ಮ ತಾಯಿಯ ದೃಷ್ಟಿಯೇ ಬೇರೆಯಿದ್ದಿತು. ನನ್ನ ವರ್ತನಕ್ಕೆ 'ಬ್ರೆಕ್' ಆಗುವಂತಹ, ನನ್ನ ಮೇಲೆ ಪಹರೆ ಮಾಡುವಂತಹ ಸೊಸೆಯೊಬ್ಬಳು ತನಗೆ ಬೇಕೆಂದು ಅವಳ ತಿಳಿ-ವಳಿಕೆ. ನಾನಾದರೊ, ಲಗ್ನದ ವಿಷಯದಲ್ಲಿ ಅವಳ ಸಲಹೆ ಕೇಳ ಬಾರದೆಂದು ಗಟ್ಟಿಮಾಡಿಕೊಂಡಿದ್ದೆ. ಹೀಗಾಗಿ ಎಷ್ಟೋ ಹುಡುಗಿಯರ ಪ್ರಸ್ತಾಪ ಬಂದಾಗಲೆಲ್ಲ ಆಕೆಯ ಮನಸ್ಸನ್ನು ನೋಯಿಸಲೇ ಬೇಕಾಯಿತು. ಒಬ್ಬ ಹುಡುಗಿಯ ವಿಷಯದಲ್ಲಂತೂ ನಮ್ಮ ತಾಯಿ ಸತ್ಯಾಗ್ರಹವನ್ನೆ ಹೂಡಿಬಿಟ್ಟಿದ್ದಳು.

* * *

ಎಂದಿನಂತೆ ಆ ದಿನವೂ ಮಧ್ಯಾಹ್ನ ಊಟಕ್ಕೆ ಕುಳಿತಾಗ ನಮ್ಮ ತಾಯಿ ಮಾತಿಗೆ ನೊದಲುಮಾಡಿದಳು:

"ದಿನ ಹೋದಂತೆಲ್ಲಾ ಜನರು ಹೇಗೊಹೇಗೋ ವಿಚಿತ್ರವಾಗಿ ನಡೆಯತೊಡಗುತ್ತಾರೆ."

ಒಂದು ಕ್ಷಣದ ಶಾಂತತೆ. ಚಪಾತಿಯ ಚೂರನ್ನು ಎಲೆಯ ಮೇಲಿಟ್ಟು ಕೇಳತೊಡಗಿದೆ. ತಾಯಿ ಮುಂದುವರಿಸಿದಳು:—

"ಅಲ್ಲ, ಲಗ್ನದ ವಯಸ್ಸಾದರೂ ಏನು ಮಣ್ಣು ಶಿಕ್ಷಣವೊ ನಿಮ್ಮದು, ಯಾರಿಗೆ ಗೊತ್ತು! ಇಲ್ಲಿ ನೀನು ಹೀಗೆ ಸೆಟೆದು ಕೂಡು. ಅಲ್ಲಿ ಹುಡುಗಿಯರನ್ನು ನೋಡಿದರೆ ಒಬ್ಬರಿಗಿಂತ ಒಬ್ಬರು ಮೇಲು! ಕಲ್ತು ಕಲ್ತು ಗವರ್ನರನನ್ನು ಲಗ್ನವಾಗ್ತಾರೇ!"

"ಅಮ್ಮಾ, ಒಂದು ಪ್ರಾಂತಕ್ಕೆ ಒಬ್ಬನೇ ಗವ್ಹರ್ನರು. ಮತ್ತು ಅವನನ್ನೂ ಯಾರಾದರೂ ಮೊದಲೇ ಹೊಡಕೊಂಡು ಬಿಟ್ಟಿರು ತ್ತಾರೆ. ಗವರ್ನರರ ಚಿಂತೆ ನಮಗ್ಯಾಕೆ?" ಎಂದು ನಾನು ಶಾಂತ ವಾಗಿಯೇ ಹೇಳಿದೆ. ಅದಕ್ಕೆ ಅವಳು ಸಿಟ್ಟಿನಿಂದ ಒಂದು ಸವುಟು ಪಲ್ಯ ಹೆಚ್ಚಿಗೆ ಬಡಿಸಿಬಿಟ್ಟಳು. ನನಗೂ ಅಷ್ಟೇ ಬೇಕಾಗಿತ್ತು ಎನ್ನಿ.

"ಹುಡುಗಿಯರ ಶಿಕ್ಷಣ ಬಹಳ. . ಇದಾಗಿಹೋಗಿದೆ. ಮೊನ್ನೆ ಎಲ್ಲೋ ಕೇಳಿದೆ: ಅವರು ಕಾರವಾರದವರಂತೆ. ಹುಡುಗಿ ಎರಡು ಮಕ್ಕಳ ತಾಯಿ. ಮನೆಯಲ್ಲಿ ಅತ್ತೆ, ಮಾವ, ಗಂಡ, ಎಲ್ಲರೂ ಇದ್ದಾರಂತೆ. ಹುಡುಗಿ ಕಲಿಯಲಿ ಎಂದು– ಇಂಗ್ಲೀಷು ಓನೆಯತ್ತ ಯಲ್ಲಿದ್ದಾಳಂತೆ– ಇಲ್ಲಿ ಬೆಳಗಾಂವಿಗೆ ಕಳಿಸಿ, ಅಣ್ಣನೊಂದಿಗೆ ಬಿಡಾರ ಮಾಡಿಕೊಟ್ಟರಂತೆ. ಮಕ್ಕಳನ್ನು ತವರುಮನೆಗೆ ಕಳಿಸಿದರಂತೆ. ಇದೇನು ಚಾಪಲ್ಯವೊ, ಚೇಷ್ಟೆಯೋ? ಅಲ್ಲ, ಹುಡುಗಿಯ– ಏನಾ ದರೂ ಹೆಚ್ಚು ಕಡಿಮೆಯಾಗಿ,– ಹುಡುಗಿಯ ಆಯುಷ್ಯದ ಹೋಳಿ ಯಾದರೆ ಯಾರನ್ನು ಹಿಡಿಯಬೇಕು!"

"ಊರ ಜನರದೆಲ್ಲಾ ಪಂಚಾಯತಿ ನಮಗೇಕೆ? ನಿನ್ನ ಕಾರ್ಯ ನೀ ನೋಡಿಕೊಂಡರೆ ಸಾಕಲ್ಲವೆ? ಪರರ ಯೋಚನೆ ನಮಗೇಕೆ?"

"ಹೌದು, ಅಷ್ಟೊಂದು ಆಡುವದು ಗೊತ್ತು ನಿನಗೆ! ಅಲ್ಲಾ, ಯೋಚನೆ ತಕ್ಕೊಳ್ಳದೆ ಇಷ್ಟು ದೊಡ್ಡವನಾದೆ, ಅಲ್ಲವೆ? ನನಗೆ ಬುದ್ಧೀ ಹೇಳ್ತಿ! ಸಗುಣಾಬಾಯಿಯ ಮಗಳು ಗುಂಡಕ್ಕನ್ನ ಲಗ್ನ ವಾಗೆಂದರೆ ನನ್ನ ಮಾತು ಕಸಕ್ಕಿಂತ ಕಡೆಯಾಗಿದೆ ನಿನಗೆ!"

"ಗುಂಡಕ್ಕ ಪೌಡರು ಹಚ್ಚಿಕೊಳ್ತಾಳೆಂದು ನೀನೇ ಹೇಳ್ತಿದ್ದೆ ಯಲ್ಲ!" ಸ್ವಲ್ಪ ನಕ್ಕು ನಾನು ಹೇಳಿದೆ. ಆಕೆ ಸಿಡಿದುಬೀಳುವ ಳೆಂಬುದು ನನಗೆ ಗೊತ್ತು:

"ಹಾಗಾದರೆ ನಮ್ಮಲ್ಲಿ ಅಕ್ಕಿಯ ಹಿಟ್ಟಿಗೆ ಬರಗಾಲವೇನು! ಅದೆಲ್ಲ ಲಗ್ನವಾಗುವತನಕವೇ. ಒಮ್ಮೆ ಗಂಟು ಬಿತ್ತೂ ಎಂದರೆ ಮುಸುರೆ ತಿಕ್ಕುವಾಗ ಪೌಡರಿನ ನೆನಪು ಆಗೋದು, ತಿಳೀತೇನು?"

ಮತ್ತೆ ಶಾಂತತೆ ನೆಲಸಿತು. ಆದರೆ ಅದು ಬಿರುಗಾಳಿಯ ಮುಂಚಿನ ಶಾಂತತೆಯಾಗಿದ್ದಿತು. ಸಮಾಧಾನದಿಂದ 'ಹಾಗಾದರೆ ಸಗುಣಾಬಾಯಿಯ ಮಗಳು ನಿನ್ನ ಮನಸ್ಸಿಗೆ ಬಂದಳೇ?' ಎಂದು ನಮ್ಮ ತಾಯಿ ಕೇಳಿದಳು.

'ಇಲ್ಲ' ಎಂದು ನಾನೂ ಸಮಾಧಾನದಿಂದ ಹೇಳಿದೆ. ತಾಯಿ ಕೈಯೊಳಗಿನ ಸವುಟನ್ನು ದೂರ ಬೀಸಾಡಿ, ಕಾಲಬುಡಕ್ಕೆ ಇದ್ದ ಪಾತ್ರೆಗಳನ್ನು ಒದ್ದು, ನನಗೆ ಮಜ್ಜಿಗೆ ಅನ್ನವನ್ನು ಕೂಡ ಬಡಿಸದೆ, ಪಡಸಾಲೆಗೆ ಹೋಗಿ ಒಂದು ಗೋಣಿ ಚೀಲದ ಮೇಲೆ ಬಿದ್ದು-ಕೊಂಡಳು. ಸರಿ; ಊಟ ಇಷ್ಟಕ್ಕೇ ಮುಗಿಯಿತೆಂದು ನಾನು ಎದ್ದೆ; ಮುಸುರೆ ಕೈಯಲ್ಲೆ ಅಮ್ಮನ ಬಳಿಗೆ ಹೋಗಿ ಕುಳಿತು ಕೇಳಿದೆ:

"ಅಮ್ಮಾ, ಇಲ್ನೋಡು– ಸುಮ್ಮನೆ ಯಾಕೆ ತ್ರಾಸು ಮಾಡಿ-ಕೊಳ್ಳುತ್ತೀಯೆ?"

"ನಾ ಕಣ್ಮುಚ್ಚಿದಮೇಲೆ ನೀನು ಲಗ್ನವಾಗುವವ! ನನ-ಗೇನು ಗೊತ್ತಿಲ್ಲವೆಂತ ತಿಳಿದಿಯೊ? ಮಿಂಚಿನಂಥ ಹುಡುಗಿಯರು ಬೇಕು ನಿಮಗೆ! ನಿಮಗೆಲ್ಲಾ ತಾಯಿಯಾ ಅಂದರೆ ಒಂದು ಕಸ. ನಾ ಹೋದ ಹೊರತು ನೀ ಹ್ಯಾಂಗಮಾ ತಂದೀಯೆ ನಿನ್ನ ದೊರೆಸಾನಿ ಯನ್ನ!"

"ಅಮ್ಮಾ ನಿನಗೆ ನೂರು ಸಲ ಹೇಳಿದೆ: ನೀನು ನನಗೆ ಕಸವೆಂದು ತೋರುವುದಿಲ್ಲ. ಹೀಗೇಕೆ? ನೀನು ಕಷ್ಟಪಟ್ಟು ನನ್ನನ್ನು ಬೆಳೆಯಿಸಿದ್ದನ್ನು ನಾನು ಎಂದೂ ಮರೆಯಲಾರೆ!"

ಅಮ್ಮ ನನ್ನ ಕಡೆ ತಲೆಯನ್ನು ಹೊರಳಿಸಿ, ಸೆಟ್ಟ ದೃಷ್ಟಿಯಿಂದ ಹೇಳಿದಳು:

"ಹಾಗಾದರೆ ಗುಂಡಕ್ಕನನ್ನು ಲಗ್ನವಾಗು!"

"ಗುಂಡಕ್ಕನನ್ನೇ ಯಾಕೆ? ಇದೆಂತಹ ಬಲವಂತ? ಆ ಹುಡುಗಿ ನನಗೆ ಸೇರುವುದಿಲ್ಲ!" ಎಂದು ಕಳವಳದಿಂದ ಹೇಳಿದೆ.

"ನಾನೂ ನಿನಗೆ ಸೇರುವದಿಲ್ಲಾ, ಅನ್ನು!"

"ಅದು ಹ್ಯಾಗೆ? ನಿನಗೆ ಸೇರಿದ ಹುಡುಗಿ ನನ್ನ ಮನಸ್ಸಿಗೆ ಬಾರದಿದ್ದರೆ, ನೀನೂ ನನಗೆ ಸೇರುವುದಿಲ್ಲವೆಂದು ಹೇಗಾಗುವುದು! ಹುಚ್ಚರ ಹಾಗೆ—"

"ಹೌದು, ನಾ ಹುಚ್ಚಿ! ತಾಯಿ ಎಲ್ಲಾದರೂ ಬುದ್ಧಿವಂತೆ ಇರುವದುಂಟೆ? ಕೇಳಿ, ನಮ್ಮ ಪಂಡಿತ ಮಗನ ಮಾತು!"....

ಈ ರೀತಿ ನಡೆದದ್ದರಿಂದ ಬೇಸರುಗೊಂಡವನಾಗಿಯೆ ನಾನಂದು ಅಲ್ಲಿಂದೆದ್ದು ಹೊರಬಿದ್ದದ್ದು.

ಆದರೆ ಎಲ್ಲಿಗೆ ಹೋಗಬೇಕೆಂಬುದು ನಿಶ್ಚಿತವಿಲ್ಲದ್ದರಿಂದ, ದಾರಿ ಒಡೆದಲ್ಲಿ ಹೋಗಹತ್ತಿದೆ. ಹೋಗುತ್ತ ಹೋಗುತ್ತ ಆಕಾಶದಲ್ಲಿ ಕವಿಯುತ್ತಿದ್ದ ಕಾರ್ಮೋಡಗಳ ಕಡೆಗೆ ಸಹಜವಾಗಿ ದೃಷ್ಟಿಯು ಹೋಯಿತು. ಬಹುಶಃ ಸಾಯಂಕಾಲ ಮಳೆ ಬಂದೀತು ಎಂಬ ವಿಚಾರ ಮೂಡಿ ಕೂಡಲೆ ಮಾಯವಾಯಿತು. ಯಾಕೆಂದರೆ ನನ್ನ ತಲೆಯಲ್ಲಿ ಬೇರೆ ಬೇರೆ ವಿಚಾರಗಳ ತಿಕ್ಕಾಟ ನಡೆದಿದ್ದಿತು.

ಆರ್ಯ ಸಂಸ್ಕೃತಿಯ ಪಾಲಕರೂ ಪುರಸ್ಕರ್ತರೂ 'ಮಾತೃದೇವೋಭವ' ಎಂದು ಘೋಷಣೆಮಾಡಿ, ನಾನು ದ್ರೋಹಿಯೆಂದು ಸಿದ್ಧಪಡಿಸಬಹುದು. ಅಷ್ಟೆಲ್ಲ ದುಃಖ ಸೈರಿಸಿಕೊಂಡು, ಅಷ್ಟೆಲ್ಲ ಮಾಡಿಮುಟ್ಟಿದ ತಾಯಿಯ ವಿರುದ್ಧ ಬಂಡಾಯವೆಂದರೇನು? ಹೇಳಿಕೊಳ್ಳಲಿ! ನಾನು ಆಕೆಯ ವೃತ್ತಿ-ಅಭಿರುಚಿಗಳಿಗೆ ಅಡ್ಡಬರುತ್ತಿರಲಿಲ್ಲ. ನನ್ನ ಇಚ್ಛೆ-ಅಭಿರುಚಿಗಳ ಕಡೆಗೆ ಅವಳೇಕೆ ನೋಡಬಾರದು! ತಾಯಿ ಎಂಬ ವ್ಯಕ್ತಿ ಎಂದೂ ತಪ್ಪನ್ನೇ ಮಾಡಲಾರದೇನು? ನನ್ನ ಮನಸ್ಸಿಗೆ ಬಾರದ ಹುಡುಗಿಯನ್ನು ಕಟ್ಟಿಕೊಂಡು ಆಜನ್ಮ ಹೆಣಗಾಡಬೇಕೆ! ಅದೂ ಅಲ್ಲದೆ ನನ್ನ ಸರಲೆಯ ಗತಿಯೇನು!

ಮೇ ತಿಂಗಳಲ್ಲಿ ಯಾರಿಗೂ ಹೇಳದೆ ಕೇಳದೆ, ನಾನೇ ಹೋಗಿ, ನೋಡಿ, 'ಪಾಸು' ಮಾಡಿದ ಸರಲೆ!– ನನ್ನ ಮಿತ್ರನ ತಂಗಿ— ಅವಳ ಪಾಡೇನು? ನಮ್ಮ ತಾಯಿಗೆ ಇದೊಂದೂ ಗೊತ್ತಿರಲಿಲ್ಲ. ನಾನು ದುಷ್ಟಹೇತುವಿನಿಂದ ತಾಯಿಯನ್ನು ಕತ್ತಲೆಯಲ್ಲಿ ಇಟ್ಟಿದ್ದೆನೆಂತಲ್ಲ. ಆಕೆಯ ಮನ್ನಣೆ ಸಿಕ್ಕುವುದೋ ಇಲ್ಲವೋ ಎಂಬ ಹೆದರಿಕೆಯಿಂದೆನ್ನಿ, ಅಥವಾ ನಾಚಿಕೆಯಿಂದ ಎಂದು ಇಟ್ಟುಕೊಳ್ಳಿ, ಈ ಸಂಗತಿಯನ್ನು ಅವಳಿಗೆ ಹೇಳಿರಲೇ ಇಲ್ಲ. 'ಇಂದು ಹೇಳೋಣ, ನಾಳೆ ಹೇಳೋಣ' ಎನ್ನುತ್ತ ಸುಮ್ಮನಿದ್ದುಬಿಟ್ಟೆ. ಸಗುಣಾಬಾಯಿಯ ಮನೆಯ ಗುಂಡಕ್ಕ ಕ್ಷಿತಿಜದ ಮೇಲೆ ಹೊಳೆಯಲಾರಂಭಿಸಿದ ಮೇಲಂತೂ ನನ್ನ ಬಾಯಿಗೆ ದೊಡ್ಡ ಬೀಗ ಬಿದ್ದಿತು. ತುಂಬ ಇಕ್ಕಟ್ಟಿನಲ್ಲಿ ಸಿಕ್ಕುಬಿದ್ದಂತಾಯಿತು. ಗುಂಡಕ್ಕನ ವಿಷಯದಲ್ಲಿದ್ದ ತಾಯಿಯ ಹಟವನ್ನು ಹೋಗಲಾಡಿಸುವುದು, ಸರಲೆ ಆಕೆಗೆ ಒಪ್ಪಿಗೆಯಾಗುವಂತೆ ಮಾಡುವುದು— ಹೀಗೆ ಎರಡು ಸಮಸ್ಯೆಗಳನ್ನು ನಾನು ಬಿಡಿಸಬೇಕಾಗಿತ್ತು.

ಇಂತಹ ವಿಚಾರಗಳ ಹೊಯ್ದಾಟದಲ್ಲಿ ಹೇಗೆ ವರ್ತಿಸಬೇಕೆಂಬುದು ನನಗೆ ತೋಚಲಿಲ್ಲ. ನಾನು ನಡೆಯುತ್ತಲೆ ಇದ್ದೆ. ಒಮ್ಮಿಂದೊಮ್ಮೆ ಗಾಳಿಯು ಜೋರಿನಿಂದ ಬೀಸಿದಂತೆ ಭಾಸವಾಯಿತು. ಎಚ್ಚತ್ತವನಂತೆ ಅತ್ತಿತ್ತ ನೋಡಿದೆ. ನಿಸರ್ಗದಲ್ಲಿ ಒಂದು ತಾಸಿಗೆ ಮುಂಚಿದ್ದ ನೋಟವಿರಲಿಲ್ಲ. ಪಶ್ಚಿಮ ದಿಗಂತದಿಂದ— ದಾಳಿಮಾಡಹೊರಟ ಸೈನ್ಯದಂತೆ— ಕರಿಮೋಡಗಳು ರಾಶಿರಾಶಿಯಾಗಿ ಎದ್ದು, ಗಂಭೀರವಾಗಿ ಗರ್ಜಿಸುತ್ತ, ನಾ ಮುಂದೆ ತಾ ಮುಂದೆ ಎಂದು ಸಾಗಿದ್ದುವು. ಗಿಡ–ಮರಗಳು ಭಯದಿಂದಲೋ ಎಂಬಂತೆ ತರತರನೆ ನಡುಗುತ್ತಿದ್ದುವು. ಆ ಗಾಳಿಗೆ ಸ್ವಲ್ಪವಾದರೂ ಬುದ್ಧಿಯಿರಲಿಲ್ಲವೆಂದು ಕಾಣುತ್ತದೆ. ಚಿಕ್ಕ ಮಕ್ಕಳ ಲಹರಿಸ್ವಭಾವದಂತೆ— ಒಮ್ಮೆ ಆಚೆಯಿಂದ, ಒಮ್ಮೆ ಈಚೆಯಿಂದ, ಮಗುದೊಮ್ಮೆ ಎಲ್ಲಾ ಕಡೆಯಿಂದ— ಗೊತ್ತುಗುರಿಯಿಲ್ಲದೆ ಬೀಸುತ್ತಿತ್ತು. ತರಗೆಲೆಗಳೂ ಕಾಗದದ ಚೂರುಗಳೂ ಕಸ-ಕಡ್ಡಿಗಳೂ ಸುಳಿಗಾಳಿಯಲ್ಲಿ ಸಿಕ್ಕು ಗಿರ್ರನೆ ತಿರುಗಿ ಎಲ್ಲಿಯೊ ತೇಲಿಹೋಗುತ್ತಿದ್ದುವು.

ಡಾಕ್ಟರ್ ಪಿ. ಸಿ. ರಾಯರು ಕೊಂಡಾಡಿದ

ರುಚಿಕರ ಮತ್ತು ಪಾಚಕ ವನಸ್ಪತಿಜನ್ಯ

ರಜಿಸ್ಟರ್ಡ್ ಚಮನ ಟ್ರಾ. ಕಿ. ೪೪.

CHAMAN

ಇದರಿಂದ ಹಸಿವೆಯಾಗಿ ಪಚನಶಕ್ತಿಯು ಬೆಳೆಯುತ್ತದೆ; ಮತ್ತು ದುರ್ಘಟ ಅಜೀರ್ಣವನ್ನು ಗುಣಪಡಿಸುತ್ತದೆ.

ಇದಲ್ಲದೆ ಥಂಡಿಯಿಂದ ಹೊಟ್ಟೆನೋಯೋಣ, ಅಪಚನ, ಕೆಮ್ಮು, ದಮ್ಮು, ಕಫ ಮುಂತಾದುವುಗಳ ಮೇಲೆ

ಚಮನವು

ಅತ್ಯಂತ ಗುಣಕಾರಿಯಿದೆ.

ಸ್ಟಾರ್ ಕಂಪನಿ, ಬೆಳಗಾಂವ

ಮೆಲ್ಲಗೆ ಕತ್ತಲೆ ಕವಿಯತೊಡಗಿತು. ಇನ್ನೇನು, ಕ್ಷಣಾರ್ಧದಲ್ಲಿ ಮಳೆಗೆ ಪ್ರಾರಂಭವಾಗುವುದೆಂದು ತರ್ಕಮಾಡಿದೆ.

ಇದೇ ಸಮಯಕ್ಕೆ ೧೮-೧೯ ವರ್ಷದ ತರುಣಿಯೊಬ್ಬಳು ನನ್ನ ಎದುರಿಗೆ ಲಗುಬಗೆಯಿಂದ ಹೋಗುತ್ತಿರುವುದನ್ನು ನೋಡಿದೆ. ಮರುಕ್ಷಣದಲ್ಲಿಯೇ ನಾನು ಇವಳನ್ನೆಲ್ಲಿಯೋ ನೋಡಿರಬೇಕೆಂದೆನಿಸಿತು. ಅವಳ ಕೈಯಲ್ಲಿ ಕೊಡೆಯಿರಲಿಲ್ಲ. ನೈಜೋಯಿಸಿಕೊಳ್ಳಬಾರದೆಂಬ ಉದ್ದೇಶದಿಂದ—ಹರಕು ಕಾಲುಜೋಡನ್ನು ಹೇಗೊ ಸಾವರಿಸಿಕೊಂಡು—ಗಡಬಡಿಯಿಂದ ಆಕೆ ಸಾಗಿದ್ದಳು. ಮೋರೆ ನೋಡಿದಹೊರತು ಗುರುತುಹತ್ತುವುದಿಲ್ಲವೆಂದು ಬಗೆದು, ಒತ್ತರದಿಂದ ನಡೆದು ಅವಳನ್ನು ಸರಿಗಟ್ಟಬೇಕೆಂದು ಸಂಕಲ್ಪ ಮಾಡಿ, ನಾನೂ ಬೇಗಬೇಗ ಕಾಲುಹಾಕಿದೆ. ಸಂಜೆಯ ಸಮಯ; ಬ್ರೆಬೋರ್ನ್ ರಸ್ತೆಯಮೇಲೆ, ಶಾಲೆ-ಕಾಲೇಜಿನ ಪರಿಚಯದ ಜನರ ಕಣ್ಣುತಪ್ಪಿಸಿ, ಟಾಂಗಾ ಮೋಟಾರು ಸೈಕಲ್ಲುಗಳಿಗೆ ಬಲಿಬೀಳದೆ, ಈ ಕೆಲಸವನ್ನು ನೆರವೇರಿಸುವುದು ಎಷ್ಟು ಕಠಿನವೆಂಬುದು ಹೇಳಿ ತಿಳಿಯುವಂತಹದಲ್ಲ.

ನನ್ನ ಸುದೈವ! ಜನರ ದಟ್ಟಣೆಯಿಂದಲೂ, ಆಗ ತಾನೆ ಭೋಯೆಂದು ಸುರಿಯತೊಡಗಿದ ಮಳೆಯ ಅಬ್ಬರದಿಂದಲೂ ಪಾರಾಗಲಿಕ್ಕೆಂದು, ಅವಳು ಒಂದು ಆಲದ ಮರದ ಕಡೆಗೆ ತಿರುಗಿದಳು. ನೋಡುತ್ತೇನೆ, ಸರಲೆ! ತುಸುಹೊತ್ತು ಏನುಮಾಡಬೇಕೆಂಬುದೇ ನನಗೆ ಹೊಳೆಯಲಿಲ್ಲ.

ಮತ್ತಾವ ಹುಡುಗಿಯಾದರೂ ಆಗಿದ್ದರೆ 'ನನಗೇನು' ಎಂದು ಬಿಟ್ಟು ಮುಂದಕ್ಕೆ ನಡೆದು ಬಿಡುತ್ತಿದ್ದೆ. ಆದರೆ ಐದು ತಿಂಗಳ ಹಿಂದೆ ನೋಡಿ 'ಪಾಸು' ಮಾಡಿದ ಹುಡುಗಿಯ ಮೇಲೆ ಬಂದಿತ್ತು ಈ ಪ್ರಸಂಗ! ಅವಳಿಗೆ ಛತ್ರಿ ಕೊಡೋಣವೆ, ನನಗೆ ಅನಾನುಕೂಲ; ಸುಮ್ಮನೆ ನನ್ನ ದಾರಿ ಹಿಡಿದು ಹೋಗೋಣವೆ, ಅದಕ್ಕೆ ನನ್ನ ಮನಸ್ಸು ಒಪ್ಪಲಿಲ್ಲ.

ಸರಲೆ ನನ್ನನ್ನು ನೋಡಿರಬೇಕು; ಆದರೆ ಪರಿಚಯವಿದ್ದುದನ್ನು ತೋರಿಸಬಾರದೆಂದು ಅವಳು ಯೋಚಿಸಿಕೊಂಡಂತೆ ಕಾಣಿಸಿತು. ಒಮ್ಮೆ ನನ್ನ ಕಡೆಗೆ ತಿರುಗಿನೋಡಿ, ಮಳೆಯು ಸುರಿಯುತ್ತಿದ್ದರೂ ವೇಗವಾಗಿ ನಡೆಯಲಾರಂಭಿಸಿದಳು.

ನಾನು ಧೈರ್ಯದಿಂದ 'ಸರಲಾಬಾಯಿ' ಎಂದು ಮರ್ಯಾದೆಯಿಂದ ಕರೆದೆ. ಸರಲೆ ನಿಂತಳು. ಅವಳ ಸೀರೆಯ ಸೆರಗು ಒದ್ದೆಯಾಗಿದ್ದಿತು. ಮೋರೆಯ ಮೇಲೆ ಕಾತರತೆ ಮೂಡಿ ನಿಂತಿದ್ದಿತು. ಒದ್ದೆಕೈಯಿಂದ ಚೆದರಿದ ಕೂದಲ ಮೇಲೆ ಕೈಯಾಡಿಸುತ್ತ ಆಕೆ ನನ್ನೆಡೆಗೆ ನೋಡಿದಳು.

"ಛತ್ರಿಯೊಳಗೆ ಬರ್ತೀರೇನು?" ಎಂದು ನಸುವೆ ನಾಚುತ್ತ ನಾನೆಂದೆ.

ಕಿವಿಯಲ್ಲಿ ಗಾಳಿಹೊಕ್ಕ ಕರುವಿನಂತೆ, ಬಾಲ ನಿಮಿರಿಸಿ ನಾಗಾಲೋಟಕ್ಕೆಲ್ಲಿ ಮೊದಲು ಮಾಡುವಳೋ ಎಂಬ ಶಂಕೆ ನನಗೆ ಬಂದಿತ್ತು; ಅಂತಹದೇನನೂ ಮಾಡದೆ ಸರಲೆ ಛತ್ರಿಯ ಆಶ್ರಯದಲ್ಲಿ ಬಂದಳು. ನನಗೆ ಆನಂದ. ಅವಳ ಸೆರಗು ನನ್ನ ಕೋಟನ್ನು ಸೋಂಕುತ್ತ ಫಡಫಡಿಸುತ್ತಿತ್ತು. ಯಾರಾದರೂ ನೋಡಿದರೆ! ಸಂಕೋಚವನ್ನು ಹೋಗಲಾಡಿಸುವುದಕ್ಕೋಸ್ಕರ ನಾನು ಮಾತೆತ್ತಿದೆ.

"ಗುರುತು ಹತ್ತುವುದೆ?"

"ಗುರುತಿಲ್ಲದ ಕಳ್ಳನಿಗಿಂತ ಪರಿಚಿತನೇ ಲೇಸು ಅಂತಾರಲ್ಲ!.."

"ಹಾಗಲ್ಲ, ಗುರುತಿನ ಕಳ್ಳ ಜೀವಕ್ಕೆ ಮೂಲ..ಎನ್ನುವರು."

"ಅದಕ್ಕೇ ಹೇಳಿದೆ; ಮೇ ತಿಂಗಳಲ್ಲಿ ನೋಡಿ, ಪಾಸು ಮಾಡಿ ಹೋದ ಕಳ್ಳ, ಸಪ್ಟಂಬರ್ ತಿಂಗಳು ಮುಗಿಯುತ್ತ ಬಂದರೂ ಹಿಂದೆ ಬಿಟ್ಟ ಜೀವದ ಅವಸ್ಥೆಯೇನೆಂದು ಒಂದು ಶಬ್ದವನ್ನೂ ಕೇಳಲಿಕ್ಕೆ ಹೇಗೆ ಬರಲಿಲ್ಲ?" ಎಂದು ಕೈಯೊಳಗಿನ ಪುಸ್ತಕದ ಗಂಟನ್ನು ಸರಿಮಾಡುತ್ತ ಸರಲೆಯೆಂದಳು.

"ನಿನಗೆ ವಾಙ್ಮಯದ ಅಭಿರುಚಿ ಬಹಳವೆಂದು ಕಾಣುವುದು!'

"ಅಷ್ಟೊಂದು ಚಿಂತೆಯೇಕೆ? ನಾನು ಇನ್ನೂ ಅಷ್ಟು ನಿರುಪಯೋಗಿಯಾಗಿಲ್ಲ!" ಇಬ್ಬರೂ ಸಂಕೋಚವಿಲ್ಲದೆಯೆ ನಕ್ಕೆವು.

ಒಂದೇ ಕೊಡೆಯಲ್ಲಿ ತಿರುಗುವ ಸುಖಕ್ಕೂ ಕೊನೆಯೆಂಬುದು ಇದೆಯಷ್ಟೆ! ಆದುದರಿಂದ ನಾನು ಸರಲೆಯನ್ನು ಕೇಳಿದೆ.

"ಈ ಮಳೆ ಬೇಗನೆ ನಿಲ್ಲುವಂತಿಲ್ಲ; ಏನು ಮಾಡೋದು?"

"ಮತ್ತೇನು? ನನ್ನನ್ನು ಮನೆತನಕ ಮುಟ್ಟಿಸೋದು; ಮತ್ತು ಅಳಿಯರಾಯನಿಗೆ ಅತ್ತೆ ಚಹಾ ಪಹಾ ಕೊಡೋದು! ಬೇಡವೆ? ಅದರಲ್ಲೂ ಒಂದೇ ಛತ್ರಿಯಲ್ಲಿ ತನ್ನ ಮಗಳನ್ನು ಕರಕೊಂಡು ಬರುವ ಪರಾಕ್ರಮ ಮಾಡಿದ ಅಳಿಯನಿಗೆ—'

ನನ್ನ ವಿಚಾರವೇ ಬೇರೆಯಾಗಿತ್ತು. ಸರಲೆಯನ್ನು ನಮ್ಮ ಮನೆಗೆ ಕರೆದೊಯ್ದು ಅಮ್ಮನಿಗೆ ತೋರಿಸಿದರೆ ಹೇಗೆ? ಈ ಸಾಹಸದ ಪರಿಣಾಮವೇನಾದೀತು? ಸರಲೆಯನ್ನು ನೋಡಿದರೆ ಗುಂಡಕ್ಕನ ಭೂತ ತಾಯಿಯ ಮನಸ್ಸಿನಿಂದ ಓಡಿಹೋಗಬಹುದೇ?..ಏನು ಮಾಡಿದರೂ ಸರಲೆಯನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಬೇಕೆಂಬ ವಿಚಾರ ತಲೆಯೊಳಗಿಂದ ಹೋಗಲಿಲ್ಲ. ನಾನು ಸರಲೆಯ ಕಡೆಗೆ ಮೆಲ್ಲಗೆ ನೋಡಿ ಹೇಳಿದೆ:—

"ಸರಲೆ, ನಮ್ಮ ಮನೆಗೆ ಬರ್ತೀಯೇನು? ಕಣ್ಣು ಕಣ್ಣು ಬಿಡಬೇಡ! ಏನಡ್ಡಿ? ಅಮ್ಮ ಮನೆಯಲ್ಲಿದ್ದಾಳೆ—"

"ಹುಂ, ಮುಂದಾದರೂ ನೀವು ಲಗಾಮು ಎಳೆದಂತೆ ಕುಣಿಯೋದು ಇದ್ದೇ ಇದೆ. ಈಗಲೇ ಅದರ ರೂಢಿ ಮಾಡಿಕೊಳ್ಳುವೆನು!"

ನನಗೆ ಹಿಡಿಸಲಾರದಷ್ಟು ಆನಂದ! ನಗುತ್ತ ನಾನೆಂದೆ:

"ಲಗ್ನವಾದ ಹೆಂಗುಸರು ಹೀಗೆ ಹೇಳಿದಂತೆ ಕೇಳಿದ್ದರೆ—"

"ಕೇಳಿದ್ದರೆ, ಸಂಸಾರ ಸುಖದ್ದಾಗುವುದರ ಬದಲು ಮನೆಯೆಂಬುದು ಆಸ್ಪತ್ರೆಯಾದೀತು, ಗೊತ್ತೋ? ಲಗ್ನವಾದಹೆಂಗುಸರು ಇಂತಹ ಮಳೆಯಲ್ಲಿ ಎಂದೂ ಹೊರಬೀಳುವುದಿಲ್ಲ. ಒಂದುವೇಳೆ ಹೊರಬಿದ್ದರೂ, ಹೀಗೆ ಪರಿಚಯದವರ ಛತ್ರಿಯಲ್ಲಿ ಬರುವಂತಿಲ್ಲ.

ನ್ನೆಲ್ಲ ತೋಯಿಸಿಕೊಂಡು ಮನೆಗೆ ಹೋಗಬಹುದು; ಹೋಗಿ 'ಡಾಕ್ಟರನ್ನು ಕರಕೊಂಡು ಬನ್ನಿ' ಎಂದು ಹೇಳಬಹುದು!"

"ನಿನ್ನ ಮಾತು ಯಾವಾಗ ಮುಗಿಯುವುದೋ ಎಂದು ಕೊಂಡಿದ್ದೆ."

* * *

ಮನೆಯಲ್ಲಿ ಕಂಡುಬಂದ ಪ್ರಕಾರವೇ ಬೇರೆ. ತುಂಬ ಆಶೆಯಿಂದ ನಾನು ಮನೆಗೆ ಬಂದಿದ್ದೆ, ಬಾಗಿಲಿಗೆ ಬೀಗಹಾಕಿದ್ದನ್ನು ನೋಡಿ ಬೆಪ್ಪಾದೆ. ಸಾಲದುದಕ್ಕೆ ಸಗುಣಬಾಯಿ ಮತ್ತು ಗುಂಡಕ್ಕ ಮುಂದಿನ ಮನೆಯ ಅಟ್ಟದ ಮೇಲಿಂದ ನಮ್ಮನ್ನು ನೋಡಿ ಏನೋ ಗುಣುಗುಟ್ಟುತ್ತಿದ್ದರು. ಈ ಘಟನೆ ಹೊಸತಾಗಿತ್ತು. ಎಂದೂ ಮನೆಯ ಹೊರಗೆ ಬೀಳದ ತಾಯಿ-ಮಕ್ಕಳು ಈ ಹೊತ್ತೇ ಈ ರೀತಿ ಗೃಹತ್ಯಾಗಿಗಳಾದುದನ್ನು ಕಂಡು ನನ್ನ ಮೋರೆ ಬೆಳ್ಳಗಾಯಿತು. ಸರಲೆ ನನ್ನ ಕಡೆಗೆ ನೋಡಿದಳು; ನಾನು ಸರಲೆಯ ಕಡೆಗೆ ನೋಡಿದೆ. ಇದಕ್ಕಿಂತಲೂ ಹೆಚ್ಚಿಗೆ ಏನು ಮಾಡಬಲ್ಲವಾಗಿದ್ದೆವು ನಾವು?

ಇಷ್ಟರಲ್ಲಿಯೆ ಹಿಂದೆ ಏನೋ ಶಬ್ದವಾದಂತಾಗಲು ನೋಡಲಿಕ್ಕೆಂದು ತಿರುಗಿದೆ. ಕೈಯಲ್ಲಿ ಬೀಗದ ಕೈಯ ಸರಪಳಿಯನ್ನು ಹಿಡಿದುಕೊಂಡು ಗುಂಡಕ್ಕ ನಿಂತಿದ್ದಳು. ಸರಪಳಿಯು ನನ್ನ ಕಾಲ್ಬದಿಗೆ ಬಿದ್ದಿತು. ಒಂದುಬಾರಿ ಆಶ್ಚರ್ಯದಿಂದ ಸರಲೆಯನ್ನು ನೋಡಿ ಗುಂಡಕ್ಕ ಮರಳಿದಳು. ಎರಡು ಬೆಕ್ಕುಗಳು ಒಂದನ್ನೊಂದು ನೋಡುತ್ತವಲ್ಲ ಅಂತಹ ನೋಟವದು.

"ಇವಳಾರು?" ಎಂದು ಸರಲೆ ಕಣ್ಣಿನಿಂದ ಪ್ರಶ್ನೆಮಾಡಿದಳು.

"ಏನೋ, ಇದ್ದಾಳೆ" ಎಂದು ನಾನೂ ಕಣ್ಣಿನ ನುಡಿಯಿಂದಲೇ ಉತ್ತರವಿತ್ತೆ.

ಅಮ್ಮನಿಟ್ಟ ಕೀಲಿಕೈಯ ಉಪಯೋಗಮಾಡಿ ಮನೆಯನ್ನು ಸೇರಿದೆವು, ನಿಜ! 'ಮುಂದೇನು?' ಎಂಬ ಪ್ರಶ್ನೆ ಬಂತು. ಇದೂ ಅಲ್ಲದೆ ಶತ್ರುಗಳ ಸೂಕ್ಷ್ಮದೃಷ್ಟಿಯ ಮೇರೆಯಲ್ಲಿ ನಮ್ಮ ಚಲನವಲನ ಸಾಗಬೇಕಾಗಿತ್ತು. ಅಮ್ಮ ಮನೆಯಲ್ಲಿದ್ದಿದ್ದರೆ ಇಂತಹ ಪ್ರಸಂಗವೇ ಬರುತ್ತಿರಲಿಲ್ಲ. ಸಗುಣಾಬಾಯಿ ತನ್ನ ಮಗಳೊಂದಿಗೆ ನಮ್ಮ ಮೇಲೆ ಪಹರೆಮಾಡುವಳೆಂಬುದು ಸಿದ್ಧವಾದದ್ದು. ನಾನು ಮೆಲ್ಲಗೆ ಪರದೆಯಿಂದ ಕಿಟಕಿಯನ್ನು ಮುಚ್ಚತೊಡಗಿದೆ. ಸರಲೆ ತಟ್ಟನೆ ಮುಂದೆ ಬಂದು "ಓಹೋ, ಪರದೆ ಎಳೆದು ಮರೆಮಾಡುವುದಕ್ಕಿಂತ ಕಿಟಕಿಯನ್ನು ಹಾಗೆಯೇ ತೆರೆದಿಟ್ಟರೆ ನಮಗೆ ಕ್ಷೇಮ, ತಿಳಿಯಿತೇನು?" ಸರಲೆ ಅನುಮಾನ ಪಡುತ್ತ ಮತ್ತೆ ಹೇಳಿದಳು:

"ಅಲ್ಲ—"

"ಏನು?" ಪರದೆಯನ್ನು ಬದಿಗೊತ್ತಿ ನಾನು ಕೇಳಿದೆ.

"ನಾನು ಈ ಛತ್ರಿಯನ್ನು ತಕ್ಕೊಂಡು ಮನೆಗೆ ಹೋಗಿಬಿಡುತ್ತೇನೆ. ನಾಳೆ ನಾದಿದ್ದು, ತಿರುಗಿ ಕೊಡುವ ನಿಮಿತ್ತಮಾಡಿಕೊಂಡು ಮತ್ತೆ ಬರುತ್ತೇನೆ. ಹೇಗೆ?"

ಈ ಮಾರ್ಗವು ಯೋಗ್ಯವಾದದ್ದು. ಆದರೆ ಸರಲೆ ಬರುವುದೆಂದರೇನು? ಬಂದ ಕಾಲಿನಲ್ಲೆ ಹೋಗುವುದೆಂದರೇನು? ನನ್ನ ಮನಸ್ಸು ಒಪ್ಪಲಿಲ್ಲ. ನನಗೆ ಇನ್ನೂ ಹೆಚ್ಚುಕಾಲ ಸರಲೆಯ ಸಹವಾಸದಲ್ಲಿರಬೇಕೆಂಬ ಆಶೆ ಬಲವಾಯಿತು. ಸರಲೆ ನಮ್ಮ ಮನೆಯಲ್ಲೆ ಇದ್ದುಬಿಡುವುದಂತೂ ಸಾಧ್ಯವಿರಲಿಲ್ಲ. ಅಂತೂ ಒಂದು ಕಪ್ಪು ಚಹಾ ತೆಗೆದುಕೊಂಡ ಹೊರತು ಬಿಡಬಾರದು. ಅದನ್ನೂ ಯಜಮಾನಿತಿಯ ರೀತಿಯಲ್ಲಿ ಅವಳ ಕೈಯಿಂದಲೆ ಮಾಡಿಸಿ.—

"ಸರಲೆ, ಹೇಗಾದರೂ ಬಂದಿದ್ದೀಯೆ. ಚಹಾ ಕುಡಿದು ಹೋಗಬಹುದಲ್ಲ?"

"ಎಂದರೆ ಮಾಡಿಕೊಡು ಎಂದರ್ಥವೇನು? ಏನು ಬೆಲ್ಲದಂತಹ ಮಾತಾಡ್ತೀರಿ!"

ತನ್ನ ಮಾತನು ಕೇಳಿ, ತನಗೇ ನಾಚಿಕೆಯಾಯಿತು ಸರಲೆಗೆ. ಲಜ್ಜೆಯ ಮುದ್ರೆಯಿಂದ,ಹೊರಗೆ ಮೃದುರವದಿಂದ ಉದುರುತ್ತಿದ್ದ ಮಳೆಯ ಹನಿಗಳ ಕಡೆಗೆ ದೃಷ್ಟಿಯನ್ನು ತಿರುಗಿಸಿದಳು.

"ಇಂದಲ್ಲ, ಮುಂದಾದರೂ ಈ ಮನೆಗೆ ನೀನು ಬರುವವಳೆ. ಎಂದಮೇಲೆ ಈಗಲೇ ಈ ಮನೆಯ ಭೂಗೋಲಜ್ಞಾನ ಮಾಡಿಕೊಂಡರೆ ಏನು ಕೆಡುಕು? ನಡುನಡುವೆ ಕೊಂಚ ಇತಿಹಾಸವನ್ನೂ ಹೇಳುವೆನು, ಬೇಕಾದರೆ!" ಎನ್ನುತ್ತ ನಾನು ಕೋಟು ತೆಗೆಯತೊಡಗಿದೆ.

ತಲೆನೋವು, ನೆಗಡಿ, ಕಾಲರಾ,
ಉರಿ ಮುಂತಾದ ಶಾರೀರಿಕ
ರೋಗಗಳ ಮೇಲೆ

"ರಜಿಸ್ಟರ್ಡ"

ನೀಲಗಿರಿ ಅರ್ಕ
NILGIR ARK

ಪ್ರತಿ ಒಂದು ಹನಿ ಗುಣದ ಪ್ರಭಾವ
ತೋರಿಸುತ್ತದೆ.

ಬಾಟಲಿ ಕಿಮ್ಮತ್ತು ೪ ಆಣೆ.

ಸ್ಟಾರ್ ಕಂಪನಿ, ಬೆಳಗಾಂವ

“ಎಂದರೆ ನೀವು ಅಡಿಗೆಮನೆಯಲ್ಲಿ ಬಂದು ಕೂಡುತ್ತೀರೊ? ಆ ತಾಯಿ-ಮಕ್ಕಳು ಮಧ್ಯದಲ್ಲಿ ಬಂದುಬಿಟ್ಟರೆ—” ಸರಲೆ ಹುಬ್ಬುಗಳನ್ನು ಬಿಲ್ಲಾಗಿಸಿ ಕೇಳಿದಳು.

“ಒಳ್ಳೆಯದು; ನಿನಗೆ ಎಲ್ಲಾ ತೋರಿಸಿ,ಲಗ್ನವಾಗಿ ನಾಲ್ಕೈದು ವರ್ಷವಾದ—ಬುರುಸುಹಿಡಿದ ಹಳೆಯ—ಗಂಡನ ಹಾಗೆ ಹೊರಗೆ ಬಂದು, ಸಂಯುಕ್ತ ಕರ್ನಾಟಕದ ಅಗ್ರಲೇಖವನ್ನೋದುತ್ತ ಕೂಡುತ್ತೇನೆ.” ಎಂದು ನುಡಿದು, ಸರಲೆಯ ರಟ್ಟೆಯನ್ನು ಹಿಡಿದು ಅವಳನ್ನು ಒಳಕ್ಕೆ ದೂಡಿದೆ. ರಟ್ಟೆಯ ಮೇಲಿದ್ದ ನನ್ನ ಕೈಯನ್ನು ಸರಲೆ ಕೊಡಹದೆ ಇದ್ದುದನ್ನು ನೋಡಿ, ನನಗೆ ಅದೆಷ್ಟೋ ಸಂತೋಷವಾಯಿತು.

ಮನೆಯೊಳಗಿನ ಎಲ್ಲ ಕಿಟಕಿ– ಬಾಗಿಲುಗಳನ್ನು ಪೂರ್ತಿಯಾಗಿ ತೆರೆದಿಟ್ಟು- ನಮ್ಮ ನಿರ್ಮಲತೆಯ ಸಾಕ್ಷಿಯೆಂದು ಜಗತ್ತಿಗೆ ಆಹ್ವಾನಕೊಟ್ಟು–ನಾನು, ಸರಲೆಗೆ ಅಡಿಗೆಮನೆಯೊಳಗಿನ ಆವಶ್ಯಕ ವಸ್ತುಗಳನ್ನು ತೆಗೆದುಕೊಟ್ಟು ಹೊರಗೆ ಬಂದು ಕುಳಿತೆ.

ನಮ್ಮ ಶತ್ರುಗಳು ಎದುರಿನ ಗ್ಯಾಲರಿಯ ಮೇಲಿಂದ ಸೂಕ್ಷ್ಮವಾದ ಅವಲೋಕನವನ್ನು ನಡೆಯಿಸಿದ್ದರು. ಮನೆಗೆಲಸವನ್ನು ತಪ್ಪಿ ಸಹ ಸ್ಪರ್ಶಮಾಡದ ಸಗುಣಾಬಾಯಿ, ಕವಾಟಿನಲ್ಲಿ ಹೇರಳವಾಗಿದ್ದ ಜಿರಲೆಗಳನ್ನು ಹೊಡೆದೋಡಿಸುವ ನೆಪದಿಂದ ಗ್ಯಾಲರಿಯ ಮೇಲೆಯೆ ಬೀಡಾರ ಹೂಡಿದಿದ್ದಳು! ಅವಳ ಹಿಂದೆಯೆ ಗುಂಡಕ್ಕ, ಪುಸ್ತಕದ ಸಹಾಯದಿಂದ ಮುಂಬಯಿ ಇಲಾಖೆಯ ಭೂಗೋಲವನ್ನು ಓದುವುದರದಲ್ಲಿದ್ದಳು.

ಕುಳಿತಲ್ಲಿಂದಲೆ ನಮ್ಮ ತಾಯಿಯ ಹಾದಿನೋಡುವುದೇ ನನಗುಳಿದ ಕೆಲಸವಾಗಿತ್ತು. ಕೆಲವು ಸಮಯಕ್ಕೆ ಮುಂಚೆ, ಆಕೆಯ ಸಹವಾಸವೇ ಬೇಡವೆಂದು ನಾನು ಬಿಸಿಲಲ್ಲೇ ಹೊರಟುಹೋಗಿದ್ದೆ. ಈಗ ಅದೇ ತಾಯಿಯ ಬರುವಿಕೆಯನ್ನು ಚಾತಕಪಕ್ಷಿಯಂತೆ ಕೋರುತ್ತಿದ್ದೆ. ಪಡಸಾಲೆಯಿಂದ– ಅಡಿಗೆಮನೆಯೊಳಗಿದ್ದ–ಸರಲೆಯ ಬೆನ್ನುನೋಡುವುದು; ಕೋಟಿನಮೇಲೆ ಇರದಿದ್ದ ಧೂಳನ್ನು ಸುಮ್ಮಗೆ ಬೆರಳಿನಿಂದ ಹಾರಿಸುವುದು; ಮತ್ತೆ–ಅಮ್ಮನ ಬಟುಮೂರ್ತಿಯ ದರ್ಶನವಾಗುವುದೇ—ಎಂದು ಮುಂಬಾಗಿಲ ಕಡೆಗೆ ನೋಡುವುದು; ಇದೇ ನನ್ನ ಕಾರ್ಯಕ್ರಮವಾಗಿತ್ತು.

ಒಮ್ಮಿಂದೊಮ್ಮೆ ನನಗೆ ಅನಪೇಕ್ಷಿತ ಆಘಾತವಾದಂತಾಯಿತು. ನಾನು ವಿಚಾರಮಾಡುವ ಪರಿಸ್ಥಿತಿಯಲ್ಲಿಲ್ಲದ್ದರಿಂದ ಏನು ಮಾಡಬಾರದಿತ್ತೋ ಅದನ್ನೇ ಮಾಡಿದೆ– ಓಡುತ್ತಹೋಗಿ, ‘ಜನರು ಬಂದಿದ್ದಾರೆ- ಹೊರಗೆ ಬರಬೇಡ!’ ಎಂದು ಪಟ್ಟನೆ ಸರಲೆಗೆ ಹೇಳಿ, ಅಡಿಗೆಮನೆಯ ಬಾಗಿಲುಹಾಕಿ, ಧಡಧಡಿಸುವ ಎದೆಯ ಮೇಲೆ ಕೈಯಾಡಿಸುತ್ತ ಹೊರಕ್ಕೆ ಬಂದು ಕುಳಿತೆ. ಬರುತ್ತಿದ್ದವ ಸರಲೆಯ ಅಣ್ಣನಾಗಿದ್ದ. ಮಿತ್ರನಾಗಿದ್ದರೂ ಅವನನ್ನು ನಾನು ಚೆನ್ನಾಗಿ ಬಲ್ಲೆ. ನಾನೊಬ್ಬನೇ ಅಲ್ಲ, ಕಾಲೇಜಿನ ಬಹುಶಃ ಎಲ್ಲ ವಿದ್ಯಾರ್ಥಿಗಳೂ ‘ಗೂಬೆ ಗೋಪಾಲರಾಯ’ ನನ್ನು ಬಲ್ಲರು. ನನ್ನ ವಯಸ್ಸಿನವನೇ ಆಗಿದ್ದರೂ ಗೋಪಾಲರಾಯ, ಕಾಲೇಜಿನ ಹೊರಗಿನ ಪ್ರಪಂಚದಲ್ಲಿ ಕಾಲಿಡುವುದರಲ್ಲಿ ಕಟ್ಟುನಿಟ್ಟು ನಿರಾಕರಿಸಿದ್ದ. ತಂದೆಯ ಪೆನ್ಶನ್ನಿನ ಪುಣ್ಯವಿರುವ ತನಕ ಅವನಾದರೂ ಈ ಕಠೋರಜಗತ್ತಿನ ಕಡೆಗೆ ಯಾಕೆ ಕಣ್ತೆರೆದು ನೋಡಬೇಕು? ಗೋಪಾಲರಾಯ ಒಳಗೆ ಬರುವುದಕ್ಕಿಂತ ಮೊದಲೇ ಸರಲೆಯ ಪುಸ್ತಕದ ರಾಶಿಯನ್ನು ಕವಾಟಿನೊಳಗೆ ಒಗೆದುಬಿಟ್ಟಿದ್ದೆ.

ಗೋಪಾಲರಾಯ ರೇನ್‌ಕೋಟಿನ ಐಶ್ವರ್ಯವನ್ನು ಕಿಟಕಿಯ ಬಾಗಿಲಮೇಲೆ ಹೊರಿಸಿ, ಕೈವಸ್ತ್ರದಿಂದ ಮೋರೆ ಒರಸಿಕೊಳ್ಳುತ್ತ ಬಂದು, ಆರಾಮ ಖುರ್ಚಿಯಮೇಲೆ ಬಿದ್ದುಕೊಂಡ.

ಮನೆ ತನ್ನದೆಯೆ ಏನೋ ಎಂಬಂತೆ– ಅದರಲ್ಲಿ ಕಾರ್ಯಕಾರಣ ಪರಂಪರೆಯ ಪ್ರಶ್ನೆಯೆಲ್ಲಿಯದು ಎಂಬ ಭಾವನೆಯಿಂದ–ಏನೊಂದೂ ಮಾತನಾಡದೆ, ಕಿಸೆಯೊಳಗಿಂದ ಒಂದು ಸಿಗರೇಟನ್ನು ತೆಗೆದು ಹೊತ್ತಿಸಹತ್ತಿದ. ಹೊಗೆಯ ದೊಡ್ಡ ಬಿಳಿಮೋಡವೊಂದನ್ನು ಹವೆಯಲ್ಲಿ ಬಿಡುತ್ತ, ಒಮ್ಮಿಂದೊಮ್ಮೆ ಏನೋ ಜ್ಞಾಪಕವಾದವನಂತೆ ಹೇಳಿದ:

“ಎಂತೆಂಥಾ ಜನರು ಇರ್ತಾರೆ, ನೋಡ್ರಿ! ಆ ನಮ್ಮ ಕೋಸಂಬರಿಯ ಸ್ಪರ್ಧೆಯ ಸೆಕ್ರೆಟರಿಯ ಬಳಿಗೆ ಹೋಗಿದ್ದೆ. ಕಾಲೇಜಿನಲ್ಲಿ ನನ್ನ ಕಾಲಿಗೆ ಬಿದ್ದು ಮತಬೇಡುವ ಹುಡುಗಿ, ಮನೆಗೆ ಹೋದರೆ ಮಾತನಾಡುವುದು ಹಾಗಿರಲಿ, ಭೇಟಿಯಾಗಲಿಕ್ಕೂ ಕಬೂಲಿಲ್ಲ!” ಮತ್ತೊಂದು ಬಿಳಿಮೋಡ ಹೊರಬಿತ್ತು.

“ಆಗ ನಿಮ್ಮ ಮತವನ್ನು ಬೇಡಲಿಕ್ಕೆ ಬಂದಿರಬಹುದು. ಈಗ ನಿಮ್ಮ ಮತವನ್ನು ಕೇಳಿಕೊಳ್ಳುವ ಇಚ್ಛೆ ಅವಳಿಗಿರಲಿಕ್ಕಿಲ್ಲ!” ಎಂದು ನಾನು ಏನೇನೋ ಹೇಳಿದೆ. ನನ್ನ ಲಕ್ಷ್ಯವೆಲ್ಲ ಅಡಿಗೆಮನೆಯ ಬಾಗಿಲ ಕಡೆಗಿತ್ತು. ಈ ಶನಿ ಯಾವಾಗ ಹೋದೀತೆಂದು ನನಗೆ ಯೋಚನೆ. “ಮಿಸ್ ಮೀನಾಕ್ಷಿ ಕುಂದಾಪೂರ್ ಅಂತೆ—” ಗೋಪಾಲರಾಯ ಸಿಗರೇಟಿನ ಬೂದಿಯನ್ನು ಕೊಡಹುತ್ತ ನಿರಾಶೆಯ ಸಾಕ್ಷಾತ್ಕಾರಹೊಂದಿದಂತೆ ಉಸಿರುಬಿಟ್ಟ.

“ಎಂದಮೇಲೆ ಸುಮ್ಮನೆ ಯಾಕೆ ಎದೆಯೊಡೆದುಕೊಳ್ಳುತ್ತೀರಿ? ಅವಳ ಹತ್ತಿರ ಯಾಕೆ ಹೋಗಬೇಕು?”

“ಯಾಕೆ ಹೋಗ್ತೀರೀ ಅಂದರೆ? ಒಳ್ಳೆಯ ಪ್ರಶ್ನೆ! ನಿಮ್ಮದೆಲ್ಲ ಸರಿ. ನೀವು ನಮ್ಮ ಸರಲೆಯನ್ನು ಕಂಡುಕೊಂಡಿದ್ದೀರಿ. ನಮ್ಮ ಪಾಡೇನು? ಏನ್ರೀ, ಜಗತ್ತಿನಲ್ಲಿ ರೊಟ್ಟಿ, ನಿರುದ್ಯೋಗ, ರಾಜಕಾರಣ.. ಇವುಗಳ ಹೊರತು ಮತ್ತೇನೂ ಇಲ್ಲವೇನು? ಇದರಲ್ಲೂ ಹೆಂಗುಸರ ವಿನಾ ಹೇಗೆ ನಡೆಯುತ್ತದೆ? ಎಲ್ಲರೂ ಕಳ್ಳರು! ಅರುವತ್ತು ವರುಷದ ಹಣ್ಣುಮುದುಕನು ಕೂಡ ಹೆಂಗುಸರ ಎದೆಯ ಮೇಲಿನ ಸರಿದ ಸೀರೆಯ ಕಡೆಗೆ ಕದ್ದುನೋಡುವುದನ್ನು ಬಿಡುವುದಿಲ್ಲ. ನಾವು ಒಬ್ಬಳ ಕಡೆಗೆ ಹೋಗುವುದೂ ಬೇಡವೆ?” ಇದಾವ ನ್ಯಾಯ.. ಎಂಬರ್ಥದ ಮುದ್ರೆಮಾಡಿದ.

“ಹೋಗಿರಿ, ಯಾರು ಬೇಡವೆಂತಾರೆ? ಆದರೆ ಅದೇ ಹುಡುಗಿ ಯಾಕೆ? ಮತ್ತೊಬ್ಬಳನ್ನು ನೋಡಿರಿ—” ಎಂದು ನಗುತ್ತ ನಾನು ಹೇಳಿದೆ.

“ಛಾ, ಮಿಂಚು ಮೋಡಗಳನ್ನೇ ಚುಂಬಿಸುವುದೇಕೆ? ನಾನಂತೂ ನಿಶ್ಚಯಮಾಡಿಬಿಟ್ಟಿದ್ದೇನೆ— ಅವಳು ಮಿಸೆಸ್

ಗೋಪಾಲರಾವ್ ಎಂಬ ಹೆಸರನ್ನು ಧರಿಸಲಿಕ್ಕೆ ಸಿದ್ಧಳಿಲ್ಲದಿದ್ದರೆ ನಾನೇ 'ಮಿಸ್ಟರ್ ಮೀನಾಕ್ಷಿ ಕುಂದಾಪುರ್' ಎಂದು ಕರೆಯಿಸಿಕೊಳ್ಳಲಿಕ್ಕೆ ಸಿದ್ಧನಿದ್ದೇನೆ. ಎಂತಹ ಹುಡುಗಿ! 'ಮಾರಡಾಲಾ' ಎಂತಾರಲ್ಲ. ಆ ಪೈಕಿ. ಲೈನ್‌ಬಜಾರದ ದೂಧಪೇಢೆ! ಅಲ್ಲ್ರೀ, ನಿಮಗೆ ಹೃದಯವೇನಾದರೂ ಉಂಟೆ?"

"ಆ ಸಂಶಯವೇಕೆ?"

"ಅಂತಹ ಉತ್ಕೃಷ್ಟ ಹುಡುಗಿಯನ್ನು ಬಿಟ್ಟು ನಮ್ಮ ಸರಲೆಯ ಮೇಲೆ ಹ್ಯಾಗೆ ನಿಮ್ಮ ಕಣ್ಣು ಹೋಯಿತು? ಬಾಸುಂದಿ ಬಿಟ್ಟು ಬದನೆಕಾಯಿ ಬಜ್ಜಿಗೆ ನಿಮ್ಮ ಮನಸ್ಸು ಹೇಗೆ ಹರಿಯಿತು?"

"ಇರಲಿ, ಗೋಪಾಲರಾಯರೆ, ನನಗೆ ಸ್ವಲ್ಪ— ಸ್ವಲ್ಪ ಹೊರಗೆ ಹೋಗಬೇಕು" ಎಂದು ಗಡಬಡಿಯಿಂದ ಹೇಳಿದೆ. ಒಳಗಿನಿಂದ ಕಪ್ಪು-ಬಸಿಗಳ ಸಪ್ಪಳವಾಗುತ್ತಿತ್ತು.

"ನಾವಿಬ್ಬರೂ ಹೋಗೋಣ, ಹಾಗಾದರೆ!" ಎನ್ನುತ್ತ ಗೋಪಾಲರಾಯ ಎದ್ದ.

"ಹಾಗಲ್ಲ; ನೀವು ಮುಂದಾಗಿರಿ, ನನಗೆ ಸ್ವಲ್ಪ ಕೆಲಸವಿದೆ!"

"ಅಂದರೆ ಮನೆಯಲ್ಲಿಯೇ ತಾನೆ? ಹಾಗಾದರೆ ನಾ ಕುಳಿತೆ!"

ಇಂತಹ ಸಿಟ್ಟು ಬಂದಿತ್ತು ನನಗೆ, ಆದರೆ ವಿಧಿಯಿರಲಿಲ್ಲ!

"ನಿಮಗೆ ಏನು ಬೇಕು, ಹೇಳಿದರೆ—"

"ನಿಮ್ಮಿಂದ ಒಂದು ಕೆಲಸವಾಗಬೇಕು!"

"ಏನು?"

"ಮೀನಾಕ್ಷಿಗೆ ಒಂದು ಚೀಟಿಕೊಡಿರಿ."

"ಏನೆಂದು ಚೀಟಿ? ಚೀಟಿ-ಗೀಟಿಯೆಂದಕೂಡಲೆ ನನ್ನ ಮೈ ಮುಳ್ಳಾಗುವುದು!"

ಇದೇ ಸಮಯಕ್ಕೆ ಅಡಿಗೆಮನೆಯಿಂದ 'ಆಽಽಕ್ ಛೀಽಽಽಯ್' ಎಂದು ಸೀನಿನ ಶಬ್ದ ಕೇಳಿಸಿತು. ಆಶ್ಚರ್ಯಪಟ್ಟವನಂತೆ ಗೋಪಾಲರಾಯ ಕೇಳಿದ:

"ಮಾತೃಶ್ರೀಯವರು ಮನೆಯಲ್ಲೇ ಇದ್ದಾರಷ್ಟೆ? ಹಾಗಾದರೆ ಅಡಿಗೆಮನೆಗೆ ಚಿಲಕ ಯಾರು ಹಾಕಿದರು?"

"ಗೋಪಾಲರಾಯರೇ, ಸಿಟ್ಟಾಗಬೇಡಿರಿ. ಆದರೆ ಈಗ ಏನೊಂದನ್ನೂ ಕೇಳಬೇಡಿರಿ ನನಗೆ — ಅಂ — ಮತ್ತೊಂದಾದರೂ ಭೆಟ್ಟಿಯಾಗೋಣ" ಎಂದು ಅವನ ರೇನ್‌ಕೋಟನ್ನು ಅವನ ಕೈಗೆ ಕೊಡುತ್ತ ನಾನು ಹೇಳಿದೆ.

ಬೆಕ್ಕಿನಂತೆ ಒಂದುಬಾರಿ ಅಡಿಗೆಮನೆಯ ಕಡೆಗೆ ನೋಡಿ, ಗೋಪಾಲರಾಯ ಸುಮ್ಮನೆ ಹೊರಟುಹೋದ. ಆದರೆ ಅವನಿಗೆ ಸಮಾಧಾನವಾಯಿತೆಂದು ತೋರಲಿಲ್ಲ. ಅವನು ಕಾಣದಂತಾದ ಮೇಲೆ ನಾನು ಸರಲೆಯನ್ನು ಬಂಧಮುಕ್ತಳನ್ನಾಗಿಮಾಡಿದೆ. ಸರಲೆ ಮುಗುಳುನಗೆ ನಗುತ್ತ ಚಹದಿಂದ ತುಂಬಿದ ಕಪ್ಪುಗಳೊಡನೆ ಹೊರಕ್ಕೆ ಬಂದಳು.

"ಏನು ಹೊಗೆ! ಮನೆಗೆ ಬೆಂಕಿಹತ್ತಿದೆಯೋ ಎಂದು ಯಾರಾದರೂ ಭಾವಿಸಬೇಕು! ಇರಲಿ; ಯಾರು ಬಂದಿದ್ದರು?" ನನಗೊಂದು ಕಪ್ಪು ಕೊಡುತ್ತ ಸರಲೆ ಕೇಳಿದಳು.

"ಮೀನಾಕ್ಷಿಯ ಪ್ರಿಯಕರ! ನಿನ್ನ ಅಣ್ಣ!"

"ಅಣ್ಣನೆ! ಹಾಗಾದರೆ ನನ್ನನ್ನೇಕೆ ಬಂಧಿಸಿದುದು? ನಾನು ಅವನಿಗೆ ಅಂಜುತ್ತೇನೆಂದು ತಿಳಿದಿರೊ?"

"ನೀನು ಕೇಳಿ ಸಂಶಯಗ್ರಸ್ತನಾಗಿದ್ದಾನೆ!"

"ನಾನೇನು ಮಾಡಲಿ? ನೋಡಿದಿರೊ, ಮೈಮೇಲೆ ಒದ್ದೆ ಬಟ್ಟೆ! ಒಳ್ಳೆಯದು, ಇನ್ನು ನಾನು ಹೊರಡಬೇಕು. ಬರ್ತೇನೆ........"

ಮಳೆ ನಿಂತಿತ್ತು. ಆಕಾಶದಲ್ಲಿ ಓಕಳಿಯಾಡಿದಂತೆ ಬಣ್ಣಬಣ್ಣದ ಪಟ್ಟೆಗಳು ಕಾಣಿಸುತ್ತಿದ್ದುವು. ಕತ್ತಲೆಯು ತಲೆಯೆತ್ತಹತ್ತಿತು. ನಾನು ದೀಪಹಚ್ಚಿದೆ. ಅನಂತರ-ನದಿಯಲ್ಲಿ ಮುಳುಗಿ ಮಿಂದು ಬಂದಳೇನೋ ಎಂಬಂತೆ—ನಮ್ಮ ತಾಯಿ ಒದ್ದೆಯ ಮುದ್ದೆಯಾಗಿ ಮನೆಯನ್ನು ಪ್ರವೇಶಿಸಿದಳು.

ಆ ದಿವಸ ನನಗೆ ಅಮ್ಮನ ವಿಷಯಕವಾದ ಕಾರ್ಯಾತುರ ಎಷ್ಟೆಂದು ಹೇಳಲಿ! ಗಾಬರಿಯಿಂದ ಗಳದ ಮೇಲಿನ ಒಣಸೀರೆ ಎಳೆದುಕೊಟ್ಟೆ! ಒಣಬಟ್ಟೆ ಉಡೆಂದು ಆಗ್ರಹಮಾಡಿದೆ! ಶುಂಠಿ ಹುಲ್ಲಿನ ಕಷಾಯಮಾಡಿಕೊಟ್ಟೆ! ಒಲೆ ಹೊತ್ತಿಸಿ ಡಬ್ಬಿಯೊಳಗಿಂದ ಅಕ್ಕಿ ತೆಗೆದು ಕೊಟ್ಟೆ! ಎಲ್ಲವೂ ವಿಲಕ್ಷಣ! ತನ್ನ ಮಗ ಹೇಗೆ ಒಮ್ಮಿಂದೊಮ್ಮೆ ಇಷ್ಟು ಮಾತೃಭಕ್ತಿಯನ್ನು ಹೊಂದಿಬಿಟ್ಟ ಎಂದುಕೊಂಡಿರಬೇಕು ಆಕೆ. ಅಲ್ಲದೆ ಇದರಲ್ಲಿ ಏನಾದರೂ ಗೂಢ ವಿರಬೇಕೆಂದೂ ಅವಳಿಗೆ ಹೊಳೆಯದೆ ಹೋಗಲಿಲ್ಲ. ಮನೆಗೆಲಸದಲ್ಲಿ

ಗಜಕರ್ಣ, ಹುರುಕು, ತದ್ದು ಮುಂತಾದ
ತ್ವಚರೋಗದಿಂದ ಪೀಡಿತರಾದ
ಜನರಿಗೆ

ರಜಿಸ್ಟರ್ಡ್

ಗೋವಾ ಮಲಮು
GOA OINTMENT

ಗುಣ ಬಾರದಿದ್ದಲ್ಲಿ
ಹಣ ತಿರುಗಿ ಕೊಡುವ ಗ್ಯಾರಂಟಿಯಿಂದ
ಮಾರಲ್ಪಡುತ್ತದೆ.

ಬಾಟಲಿ ಕಿಮ್ಮತ್ತು ೪ ಆಣೆ.

ಸಪ್ಫೈರ್ ಕಂಪನಿ, ಬೆಳಗಾಂವ

ನಾನು ನೆರವಾದುದರಿಂದ ತಾಯಿಗೆ ಸಂತೋಷವಾಯಿತೆಂದು ಆಕೆಯ ಮೋರೆಯೇ ಹೇಳುತ್ತಿತ್ತು. ಆ ದಿವಸ ವಿಶೇಷವೇನೂ ನಡೆಯಲಿಲ್ಲ.

ಆದರೆ ಮರುದಿವಸ ಎಲ್ಲವೂ ಸ್ಫೋಟವಾಯಿತು. ಅಪರಾಹ್ನ ದಲ್ಲಿ ಮಾತಿನ ಮದ್ದುಗುಂಡಿಗೆ ಮೊದಲಾಯಿತು. ಚಾಚೂ ತಪ್ಪದೆ ನಾನು ಇದ್ದುದೆಲ್ಲವನ್ನೂ ಹೇಳಿಕೊಂಡೆ. ತಾಯಿ ಗದ್ದರಿಸಿದಳು:

"ಹಾಡೇಹಗಲು ಪ್ರಾಯದ ಹುಡುಗಿಯರನ್ನು ಮನೆಗೆ ತರುವದೂಂದ್ರೇನು? ನಾಚಿಕೆ ಇಲ್ಲ! ಪರದೆ ಮುಚ್ಚುವ ದೂಂದ್ರೇನು, ಅಥವಾ ಬಾಗಿಲು ಹಾಕಿಕೊಳ್ಳುವದೂಂದ್ರೇನು? ಒಂದಿಷ್ಟಾದರೂ ಮನಸ್ಸಿನ–"

"ಅಮ್ಮಾ, ಇಲ್ಕೇಳು—"

"ಏನು ಕೇಳಲಿ? ಇಬ್ಬರೂ ಏನೇನು ಮಾತಾಡಿದಿರಿ, ಹ್ಯಾಗೆ ಹಲ್ಲು ಕಿರಿದಿರಿ, ಹ್ಯಾಗೆ ಥೈಥೈ ಕುಣಿದಿರಿ ಎಂಬುದನ್ನು ಕೇಳಲೇ? ಅದಕ್ಕೇ ಅಂತ ಕಾಣ್ತದೆ, ರಾತ್ರಿ ಅಷ್ಟೊಂದು ನನ್ನ ಬಗ್ಗೆ ತತ್ಪರತೆ!"

"ನಿನಗೆ ಎದುರುಮನೆಯ ಹೆಂಗುಸರು ಹೇಳಿದ್ದೇ ನಿಜ. ನಿನ್ನ ಸ್ವಂತದ ಮಗ ಹೇಳೋದನ್ನು ನಿನಗೆ ಕೇಳಲಿಕ್ಕೂ ಬೇಡ. ಹೋಗಲಿ! ನಿನ್ನದನ್ನೇ ನಡೆಯಿಸಿಬಿಡು!"

* * *

ಛಿದ್ರ ಮತ್ತಿಷ್ಟು ಬಲವಾಯಿತು. ಇದಾಗಿ ಎಂಟೇ ದಿವಸದಲ್ಲಿ ಸರಲೆಯ ತಂದೆಯ ಕಡೆಯಿಂದ ಬಂದ ಪತ್ರದಿಂದ ಕಳಸವಿಟ್ಟಂತಾಯಿತು. ಒಂದು ಕ್ಷುಲ್ಲಕ ಘಟನೆ ಇಷ್ಟು ವಿಪರ್ಯಾಸಹೊಂದುವುದೆಂದು ನಾನು ಎಣಿಸಿರಲಿಲ್ಲ. ಇದರಲ್ಲಿ ನಮ್ಮ ತಾಯಿಯ ಅಂಗ ವಿದ್ದಿತೆಂಬ ವಿಚಾರವಂತೂ ಮನೋಹರವಾಗಿತ್ತು. ಆ ಪತ್ರವನ್ನು ಪುನಃಪುನಃ ಓದಿದೆ. ಓದಿದ ಪ್ರತಿಯೊಂದು ಬಾರಿಗೂ ಹೆಚ್ಚು ಹೆಚ್ಚು ತೊಡಕಿನಲ್ಲಿ ಬೀಳತೊಡಗಿವೆ. ಪತ್ರ ಹೀಗೆ ಇದ್ದಿತು:

"ಮೇ ತಿಂಗಳಲ್ಲಿ ತಾವು ಹುಡುಗಿಯನ್ನು ನೋಡಿದಿರಿ. ಹುಡುಗಿ ತಮ್ಮ ಮನಸ್ಸಿಗೂ ಬಂದಳು. ಅನಂತರ ತಾವು ಲಗ್ನದ ವಿಷಯದಲ್ಲಿ ಮೌನತಾಳಿದುದರಿಂದ ನಮಗೆ ಆಶ್ಚರ್ಯವೆನಿಸುತ್ತಿತ್ತು. ಆದರೆ ಈಗ ಎಲ್ಲವೂ ವಿಶದವಾಯಿತು. ಲಗ್ನದ ವಿಚಾರ ತಮಗೆ ಅಷ್ಟೊಂದು ಸೇರುವುದಿಲ್ಲವೆಂದು ತಿಳಿಯುತ್ತೇನೆ. ಒಂದು ಮೋಜು ಎಂದು ಕನ್ಯೆ ನೋಡುವ ಫಾರ್ಸು ಮಾಡಿದಿರೆಂದು ಕಾಣುತ್ತದೆ; ಇರಲಿ!

"ಕಳೆದ ಶನಿವಾರ ನಮ್ಮ ಹಿರಿಯ ಮಗ ಗೋಪಾಲರಾಯ, ಸಂಸ್ಕೃತದೊಳಗಿನ ಕೆಲವು ಸಂದೇಹಾತ್ಮಕ ವಿಷಯವನ್ನು ಕೇಳಲಿಕ್ಕೆಂದು ತಮ್ಮಲ್ಲಿಗೆ ಬಂದಿದ್ದನೆಂದು ತಿಳಿದುಬರುತ್ತದೆ. ಆಗ ತಮ್ಮ ವರ್ತನದಲ್ಲಿ ಸ್ವಲ್ಪ ಅನುಚಿತತೆಯ ಅಂಶ ಕಂಡುಬಂದಿತೆಂದೂ ಆತನಿಂದ ತಿಳಿಯಿತು.

"ತಮ್ಮ ಆಪ್ತೇಷ್ಟರಲ್ಲಿಯ ಯಾವಳೊಬ್ಬ ಹುಡುಗಿ, ತಮ್ಮ ತಾಯಿ ಮನೆಯಲ್ಲಿಲ್ಲದಾಗ ಭೇಟಿಗೆ ಬಂದರೆ ಅದರಲ್ಲಿ ಅಪ್ರಶಸ್ತ ಪ್ರಕಾರವಾಯಿತೆಂದು ಯಾರೂ ಹೇಳಲಾರರು. ಆದರೆ ಅವಳನ್ನು ಮನೆಯಲ್ಲಿ ಬಂಧಿಸುವುದು ಅಷ್ಟೊಂದು ಉಚಿತವೇ? ಅಲ್ಲವೆಂದು ನನ್ನ ಅಲ್ಪಮತಿಗೆ ತೋರುತ್ತದೆ. ತಾವು ಇದರ ಸ್ಪಷ್ಟೀಕರಣ ಮಾಡಬೇಕೆಂದು ನನ್ನ ಇಚ್ಛೆಯಿಲ್ಲ. ಯಾಕೆಂದರೆ ತಮ್ಮ ನೆರೆಮನೆಯಲ್ಲಿರುವ ಸಗುಣಾಬಾಯಿ ಎಂಬವರಿಂದ ನಮ್ಮ ಸೌಭಾಗ್ಯವತಿಗೆ ಎಲ್ಲ ಸಮಾಚಾರ ಗೊತ್ತಾಗಿದೆ. ಹಾಗೂ ಈ ವಿಷಯದಲ್ಲಿ ತಮ್ಮ ಮಾತೃಶ್ರೀಯವರದೂ ಅಷ್ಟು ಸ್ವಚ್ಛಮತವಿಲ್ಲವೆಂದು ತಿಳಿಯುತ್ತದೆ. ಈ ಮೂವರಿಂದಲೂ ಬಂದ ಸಾಕ್ಷಿಯು ಅವಿಶ್ವಸನೀಯವೆನ್ನುವುದಕ್ಕೆ ಯಾವ ಕಾರಣವೂ ಇಲ್ಲ.

"ಆದುದರಿಂದಲೇ ತಾವು ಮೇ ತಿಂಗಳಲ್ಲಿ ಬಂದಿರಲಿಕ್ಕಿಲ್ಲವೆಂದು ಇಟ್ಟುಕೊಂಡು ನಡೆಯುತ್ತೇನೆ. ಹೊಟ್ಟೆಯ ಮಗಳನ್ನು ಕತ್ತಲೆಯಲ್ಲಿ ತಳ್ಳುವುದು ನಮ್ಮ ಕೈಯಿಂದಾಗುವುದಿಲ್ಲ. ಹುಡುಗಿಯನ್ನು ಸಮಾಧಾನಪಡಿಸುವುದು ಸ್ವಲ್ಪ ಕಠಿನವಾದೀತು. ಆದರೂ ತಾವು ನಕಾರವನ್ನು ತಿಳಿಸಿದ್ದೀರಿ ಎಂದು ಹೇಳಿ, ಅವಳನ್ನು ಸುಮ್ಮನಿರಿಸುವೆವು. ಈ ಮುಂದೆ ನಮ್ಮ ನಿಮ್ಮ ಸಂಬಂಧ ಈ ಪತ್ರದೊಂದಿಗೆ ಮುಗಿಯಿತೆಂದು ತಿಳಿಯಬೇಕು. ತಪ್ಪು ತಿಳಿದುಕೊಳ್ಳಬಾರದು—"

ಯಾರು ತಪ್ಪು ತಿಳಿದುಕೊಳ್ಳುತ್ತಿದ್ದಾರೆಂಬುದು ಒಡೆದು ಕಾಣುತ್ತಿತ್ತು. ನಿಜವಾಗಿ ನಡೆದ ಸಂಗತಿಗಳೇನು ಎಂಬುದನ್ನು ಸಿದ್ಧಪಡಿಸಬೇಕೆಂಬ ತೀವ್ರವಾದ ಇಚ್ಛೆ ನನಗುಂಟಾಯಿತು. ಸಾಯಂಕಾಲ ಹೆದರುತ್ತ ನಮ್ಮ ತಾಯಿಯನ್ನು ಕೇಳಿದೆ:—

"ನನ್ನ ಬಗೆಗೆ ಏನನಾದರೂ ಕೇಳಲಿಕ್ಕೆ, ಯಾರಾದರೂ ಬಂದಿದ್ದರೇನು?"

"ನಿತ್ಯವೂ ಯಾರಾದರೂ ಕೇಳಿಯೇ ಕೇಳುತ್ತಾರೆ. ಮೊನ್ನೆ ಹಳೆಯ ತಳಕವಾಡಿಯ ಹೆಂಗುಸೊಬ್ಬಳು 'ನಿಮ್ಮ ಮಗನ ವಿಷಯ ಏನೋ ಬಹಳ ಕೇಳೇನೆ, ಹೌದೋ?' ಎಂದು ಕೇಳಿದಳು. ನಿನ್ನ ದೊಡ್ಡಸ್ತಿಕೆ ಕೊಚ್ಚಬೇಕೂ ಅಂತ ಸಗುಣಾಬಾಯಿ, ನಿನ್ನ ಕಡೆಗೆ ಹುಡುಗಿಯರು ಬರ್ತಿರ್ತಾರೆ, ನೀನು ಅವರೊಡನೆ ತಿರುಗಾಟ ಪರಗಾಟ ಮಾಡ್ತೀಯೆ—ಎಂದು ಹೇಳಿದಳು. ಬಿಡು; ನಮ್ಮ ಕಾಲಲ್ಲಿ ಸಗಣಿ ಇರುವಾಗ ಬೇರೆಯವರಿಗೆ ಏನು ಹೇಳೋದು!"

"ಅಮ್ಮಾ ಸಗುಣಾಬಾಯಿ ಸ್ವಾರ್ಥಸಾಧಿಸುವವಳು—"

"ವಿನಾಕಾರಣ ಜನರನ್ನೇಕೆ ಬೈತೀ? ಅವರ ಮಗಳು ನಿನಗೆ ಬೇಡವೆಂದಮೇಲೆ ನಿನ್ನ ವಿಷಯ ತಕ್ಕೊಂಡು ಅವರು ಪಡೆಯುವ ಪಾಡರೂ ಏನು?"

"ಮುಯ್ಯಿ, ಮತ್ತೇನೂ ಅಲ್ಲ, ಮುಯ್ಯಿ! ಮೂಗು ಕೊಯ್ಯಲ್ಪಟ್ಟ ಶೂರ್ಪನಖಿ ಸುಮ್ಮನೆ ಕುಳಿತಾಳೇ?"

ನಮ್ಮ ತಾಯಿ ನಿರುತ್ತರಳು. ಆದರೆ ಇಷ್ಟುಮಾತ್ರ ಊಹಿಸಬಹುದಾಗಿತ್ತು: ಅವಳು ಒಂದಕ್ಕೊಂದು ವಿರೋಧವಾದ ವಿಚಾರಗಳ ಸುಂಟರಗಾಳಿಯಲ್ಲಿ ಸಿಕ್ಕಿದ್ದಳು. ತಪ್ಪು ಅವಳದಲ್ಲ, ಯಾರೂ ದೋಷಿಯಲ್ಲ, ನನ್ನ ಅಳ್ಳೆದೆಯೇ ಇಷ್ಟೆಲ್ಲ ತೊಡಕಿಗೆ ಮೂಲವಾಗಿತ್ತು. ಆದರೂ ಸರಲೆ ಹೇಗೆ ಸುಮ್ಮಗೆ ಕುಳಿತಳು? ಅಥವಾ ಅವಳಿಗೆ ಇದರೊಳಗಿನ ಒಂದಕ್ಷರವೂ ಗೊತ್ತಿಲ್ಲವೆ? ತುಂಬ ಕಷ್ಟಕ್ಕಿಟ್ಟುಕೊಂಡಿತು. ಸರಿ, ಆಗಿರುವ ರಂಬಾಟ ಸಾಕು; ನಾಳೆ ಹೇಗಾದರೂ ಮಾಡಿ ಈ ಕಪ್ಪುಮೋಡವನ್ನು ತೊಲಗಿಸಿ ಬೆಳಕು ಬೀರಬೇಕೆಂದು ನಿಶ್ಚಯಿಸಿ, ಮುಂದಿನ ಕೆಲಸವೇನೆಂದು ಯೋಚಿಸುತ್ತ ಕೋಣೆಯ ಒಂದು ತುದಿಯಿಂದ ಇನ್ನೊಂದು ತುದಿಗೆ ತಿರುಗಾಡುತ್ತಲಿದ್ದೆ.

ಅಷ್ಟರಲ್ಲಿ ಬೆವರೊರಸಿಕೊಳ್ಳುತ್ತ, ಹೆದರುತ್ತ, ಅನುಮಾನ ಪಡುತ್ತ ಸರಲೆ ಮನೆಯೊಳಗೆ ಬಂದಳು. ಪುನಃ ತಪ್ಪುತಿಳಿವಳಿಕೆ ಯಾಗಬಾರದೆಂದು ನಮ್ಮ ತಾಯಿಯನ್ನು ನಾನಾಗಿಯೆ ಅಲ್ಲಿಗೆ ಕರೆದೆ.

"ಇದೊ, ನಾನು ಕಳೆದ ಶನಿವಾರ ಒಯ್ದ ಕೊಡೆ. ಇನ್ನು ಮುಂದೆ ಎಂಟು ಕಡ್ಡಿಯ ಕೊಡೆ ಬಿಟ್ಟು, ಹದಿನಾರು ಕಡ್ಡಿಯ ಕೊಡೆ ಉಪಯೋಗಿಸಿರಿ. ಆ ದಿವಸ ನನಗೆ ಒಳ್ಳೆಯ ಅಭಿಷೇಕ ವಾಯಿತು. ಈ ಕೊಡೆಯಿರದಿದ್ದರೂ ನಡೆಯುತ್ತಿತ್ತು" ಮೂಲೆಯ ಗೂಟಕ್ಕೆ ಕೊಡೆಯನ್ನು ತೂಗುಹಾಕುತ್ತ ಸರಲೆ ಹೇಳಿದಳು.

ಅಮ್ಮ ಅವಳನ್ನು ಕೌತುಕದಿಂದ ನೋಡಿ, ಅವಳ ಮುತ್ತಿನಂತಹ ಮಾತುಗಳನ್ನು ಆಲಿಸುತ್ತಿದ್ದಳು. ಸರಲೆಯ ಬಗೆಗೆ ಅವಳಿಗೆ ಒಂದು ಬಗೆಯ ಆದರವುಂಟಾಯಿತೆಂದು ಕೂಡಲೆ ಹೇಳಬಹುದಾಗಿತ್ತು. ಆದರೆ ಸರಲೆಯ ಮಾತಿನಲ್ಲಿ ಅವಳಿಗೆ ಯಾವುದೂ ಅರ್ಥವಾಗದ್ದರಿಂದ, ನನ್ನ ಕಡೆಗೆ ಪ್ರಶ್ನಾರ್ಥಕದೃಷ್ಟಿಯಿಂದ ನೋಡಿದಳು. ಆದರೆ ನಾನು ಏನನೂ ಮಾತನಾಡಲಿಲ್ಲ. ಯಾಕೆ ಮಾತನಾಡಲಿ, ತಾನಾಗಿಯೆ ಅವರಲ್ಲಿ ಪರಸ್ಪರ ಪರಿಚಯವಾಗುತ್ತಿರುವಾಗ? ಅಮ್ಮನು ಮುಂದೆ ಮಾಡಿದ್ದ ಕುರ್ಚಿಯ ಮೇಲೆ ಕುಳ್ಳಿರದೆ, ಅದನ್ನು ಆಧಾರವಾಗಿ ಹಿಡಿದುಕೊಂಡು ಸರಲೆ ಹೇಳಿದಳು :

"ಅತ್ತೆಯೆಂದು ತಮ್ಮ ಸೊಸೆ, ತಮಗೆ ಮೊದಲನೆಯ ನಮಸ್ಕಾರ ಮಾಡ್ತೇನೆ!"

"ತುಂಬ ಉತ್ಕಂಠೆಯಿಂದ ಮಾಡಿದಂತಿದೆ, ಈ ನಮಸ್ಕಾರ!" ಎಂದು ನಾನು ನಗುತ್ತ ಹೇಳಿದೆ.

"ನೋಡಿ, ಹೀಗೆಯೆ ಮುಂದೆಯೂ ನನ್ನನ್ನು ಪೀಡಿಸಿದರೆ ನಾಳೆಯೆ ನನ್ನನ್ನು ನೋಡಲಿಕ್ಕೆ ಬರಲಿರುವ ಇನ್ನೊಬ್ಬರ ಕೊರಳಿಗೆ ಮಾಲೆಹಾಕಿ ಪಾರಾಗಿಬಿಡ್ತೇನೆ! ಇಷ್ಟಾಗಿ, ನಾನು ನಿಮಗೆಲ್ಲಿ ಬೇಕು ಹೇಳಿ! ಒಳ್ಳೆಯ ಸಜ್ಜನರು ತಾವು! ಆ ದಿವಸ ನನಗೆ ಇತಿಹಾಸ-ಭೂಗೋಲದ ಪಾಠ ಹೇಳಿ ಹೀಗೆ ನನ್ನನ್ನು ನಾಪಾಸ್ ಮಾಡುವುದೇನು! ಗುರುವಿನಂತೆ ಶಿಷ್ಯ, ಗೊತ್ತೊ? ಹುಡುಗಿ ಮನಸ್ಸಿಗೆ ಬರಲಿಲ್ಲವಂತೆ!" ಅರ್ಧ ನನ್ನನ್ನುದ್ದೇಶಿಸಿ, ಅರ್ಧ ತಾಯಿಯನ್ನುದ್ದೇಶಿಸಿ ಸರಲೆ ಹೇಳಿದಳು.

"ನಿನ್ನನ್ನು ನಪಾಸ್ ಮಾಡಲಿಕ್ಕೆ ನಾನೆಲ್ಲಿ ಸಿದ್ಧನಿದ್ದೇನೆ? ನಿಮ್ಮಪ್ಪನೇ ಹಾಗೆ ತಪ್ಪು ಗ್ರಹಿಕೆಯನ್ನು ನಿನ್ನ ತಲೆಯಲ್ಲಿ ತುಂಬಿದರೆ ನಾನೇನು ಮಾಡಲಿ?"

"ಹೀಽಽಽಗೇನು? ಓಹೊ, ತಿಳಿಯಿತು! ನಕಾರ ಹೇಳುವುದಿದ್ದರೆ ಸಮಕ್ಷಮ ಕೇಳೋಣ ಎಂದು ಬಂದೆ. ಅದೂ ಅಲ್ಲದೆ ನಮ್ಮ ಅತ್ತೆ ನನ್ನನ್ನು ಎಲ್ಲಿ ನಿರಾಕರಿಸಿದ್ದಾರೆ? ಈ ಹೊತ್ತು ಬೆಳಿಗ್ಗೆ ನಮ್ಮ ತಂದೆ ನಿಮ್ಮ ನಕಾರದ ಸಂಗತಿ ಹೇಳಿದಾಗ, ಏನೋ ತಿಳಿವಳಿಕೆಯ ವಿಪರ್ಯಾಸವಾಗಿದೆಯೆಂದು ತರ್ಕಮಾಡಿದೆ. ಗೂಬೆ ಗೋಪಾಲರಾಯನೂ ತಂದೆಯ ಕಿವಿಯನ್ನು ಊದಿರಬೇಕು. ಮಧ್ಯಾಹ್ನ ಅವನನ್ನು ಹಿಡಿದು ಅಲುಗಾಡಿಸಿ, ಎದೆಗೆ ತಬ್ಬಿಕೊಂಡಿದ್ದ ನಿಮ್ಮ ಭಾವಿ ಪತ್ನಿಯ ಫೋಟೊವನ್ನು ಚೂರುಚೂರು ಮಾಡಿ ಕೇಳಲಾಗಿ, ಇರಲಿ, . . ಈಗ ಅವರಿಬ್ಬರೂ ಬರ್ತಾರೆ. ನಾನು ಅವರಿಗಿಂತ ಮೊದಲು ಸಾಯ್ಕಲ್ಮೇಲೆ ಬಂದೆ—" ಎಂದು ಕೊಂಚ ವಿಶ್ರಾಂತಿಗೋಸುಗ ಸರಲೆ ಸುಮ್ಮಗಾದಳು . . . .

ಎಷ್ಟು ವೇಗದಿಂದ ಕಾರ್ಮೋಡಗಳು ಕವಿದಿದ್ದುವೊ ಅಷ್ಟೇ ತ್ವರೆಯಿಂದ ಆ ದಿವಸ ಸಾಯಂಕಾಲ ಅವು ಇಲ್ಲದಂತಾದುವು. ನಮ್ಮ ತಾಯಿ ಸರಲೆಯ ಮೇಲೆ ಹದಿನಾರಾಣೆ ಖುಷಿಯಾಗಿಬಿಟ್ಟಳು. ಆ ದಿವಸ ಎಲ್ಲರೂ ಉಪನ್ಯಾಸಮಾಡುವವರೆ! ಅಮ್ಮ ಮಾತ್ರ "ನನಗಂತೂ ಇನ್ನು ಮಾರ್ಗಸಿರದಲ್ಲೇ ಮುಹೂರ್ತ ಇಡ್ಬೇಕೂ ಅಂತ ಅನಸ್ತದೆ" ಎಂದು ಭಾಷಣವನ್ನು ಮುಗಿಸಿದಳು.

ನನ್ನ ಆನಂದಕ್ಕೆ ಪಾರವೇ ಇರಲಿಲ್ಲ. ಸರಲೆಯದೇ ಅನುಮಾನ ನನಗಿತ್ತು. ಅವಳ ಪರೀಕ್ಷೆ ಎಲ್ಲಿ ಅಡ್ಡಬರುವುದೋ ಎಂದಿದ್ದೆ. ಆದರೆ ಸರಲೆ ಅದನ್ನು ತನ್ನ ಪುಟ್ಟ ಭಾಷಣದಲ್ಲಿ ನಿವಾರಿಸಿದಳು :

"ನನ್ನ ಪರೀಕ್ಷೆ? ನನಗೆಲ್ಲಿ ಅಭ್ಯಾಸದಲ್ಲಿ ಲಕ್ಷ್ಯ? ಪ್ರತಿ ವರ್ಷವೂ ನಾನು ನಪಾಸಾಗ್ತಾ ಇರ್ತೇನೆ. ಪ್ರತಿವರ್ಷವೂ ನಮ್ಮಪ್ಪ ಮುಖ್ಯ ಮಾಸ್ತರಿಣಿಯನ್ನು ಕಂಡು ಮೇಲಿನ ವರ್ಗಕ್ಕೆ ಹಾಕಿಸುತ್ತಾರೆ. ಮತ್ತೆ ನಾಪಾಸು ಆದೇನು! ಅದಕ್ಕಿಂತಲೂ ನಾಳೆನಿಂದ ಇಲ್ಲಿಯೆ, ಹನ್ನೊಂದರಿಂದ ೫ ರ ತನಕ, ಅತ್ತೆ ಮನೆಯ ಈ ಶಾಲೆಯಲ್ಲೇ ಅಭ್ಯಾಸ ಹೇಳಿಸಿಕೊಳ್ಳುವೆನು. ಲಗ್ನವಾಗದ ಹುಡುಗಿಯರು ಪರೀಕ್ಷೆ ಕೊಡಬೇಕು. ಲಗ್ನವಾಗುವ ಸಂಭವ ವಿರುವವರು ಕೂಡಲೆ ಲಗ್ನಮಾಡಿಕೊಳ್ಳಬೇಕು. ಹಾಗಾದ ಪಕ್ಷದಲ್ಲಿ, ಇಂತಹ ಹಗ್ಗ ಹಾವಾಗುವ ಪ್ರಮೇಯ ಬರಲಿಕ್ಕಿಲ್ಲ!"

ನಾನು ಆ ನವರಸಪೂರಿತವಾದ ವ್ಯಾಖ್ಯಾನವನ್ನು ಭಕ್ತಿಭಾವದಿಂದ ಕೇಳುತ್ತಿದ್ದೆ; ನನ್ನ ಸರಲೆಯ ಮುದ್ದುಮಾತಿಗಾಗ ಮಾರುಹೋಗಿದ್ದೆ.

ಧನ್ವಂತರಿ ಕಾರ್ಯಾಲಯ, ಅಂಕೋಲಾ
ಉತ್ತರಕನ್ನಡ ಇವರ
ರಜಿಸ್ಟರ್ಡ್
ಅರ್ಧಾಂಗವಾಯು
ಹೊನ್ನಿ ಎಣ್ಣೆ
ಮತ್ತು
ವಾತಾರಿ ತೊಪ್ಪಲ
ಅರ್ಧಿತವಾಯು, ಕೈ-ಕಾಲು-ಮೋರೆ ನಡುಗುವುದು,
ಪಕ್ಷವಾತ, ಸಂಧಿವಾತ ಮುಂತಾದ ರೋಗಿಗಳು
ನಿರಾಶರಾಗದೆ ಒಮ್ಮೆ ಉಪಯೋಗಿಸಿರಿ;
ಖಂಡಿತ ಗುಣವಾಗುವುದು.
ಬಾ. ಬೆ. ೧ ರೂ. ★ ತೊ. ಬೆ. ೧೦ ಆಣೆ.
ಸ್ಟಾರ್ ಕಂಪನಿ, ಬೆಳಗಾಂವ

ಮಾಯಕೊಂಡದ ಮುತ್ತಿಗೆ

★

— ಅಥವಾ —

ರಣಧೀರ ಹಿರೇಮದಕರಿ ನಾಯಕ

ಶ್ರೀ. ಹುಲ್ಲೂರು ಶ್ರೀನಿವಾಸ ಜೋಯಿಸ, ವಕೀಲರು

★

ಮಾಯಕೊಂಡದಾ ಮುಟ್ಟಿಯ ಮೇಲೆ
ಮಾಯವಾದನು ಮಹಾಕವಿ ಭೂಪ
ಎಂತು ಮರೆಯಬಹುದೊ ನಿನ್ನ !

ಇಂದಿನ ಕನ್ನಡ ನಾಡನ್ನು ನೋಡಿದರೆ ನಮ್ಮ ಜನ ಹಿಂದೆ ಎಂದಾದರೂ ಯುದ್ಧವಾಡಿರ ಬಹುದೇ ಎಂದು ಸಂದೇಹ ಪಡುವಂತಿದೆ. ಆದರೆ ಇನ್ನೂರು ಇನ್ನೂರೈವತ್ತು ವರ್ಷಗಳ ಹಿಂದಿನ ಇತಿಹಾಸದಲ್ಲಿ ಸ್ವಲ್ಪ ಹಣೆಯಿಕ್ಕಿದರೂ ಹಿರಿಯ ಮದಕರಿನಾಯಕನಂತಹ ಸ್ವಾಭಿಮಾನಿಗಳಾದ ವೀರರು ಸಾವಿರಾರು ಜನ ಸಿಕ್ಕುತ್ತಾರೆ. ಅವರ ವಂಶಜರೆ ಆದ ಇಂದಿನ ಕನ್ನಡಿಗರ ಶೌರ್ಯ, ಭಾರತದ ಸಂರಕ್ಷಣೆಯ ಕಾರ್ಯದಲ್ಲಿ ಸಹಕಾರಿಯಾಗಿ ನಿಲ್ಲದೆ?

★

ಮತ್ತಿ ತಿಮ್ಮಣ್ಣನಾಯಕನಿಂದ ಸ್ಥಾಪಿತವಾದ ರಾಜಮನೆತನದಲ್ಲಿ ವೀರರಾದ ಅನೇಕ ಜನ ಪಾಳೆಯಗಾರರು ಪ್ರಸಿದ್ಧರಾಗಿರುವರು. ಅವರು ಧೀರರಾಗಿದ್ದಂತೆ ಧರ್ಮಾಭಿಮಾನಿಗಳೂ ಆಗಿದ್ದರು. ರಾಜ್ಯವು ಸುಭಿಕ್ಷದಿಂದ ಇದ್ದು, ಪ್ರಜೆಗಳು ರಾಜನಿಷ್ಠರಾಗಿದ್ದರು. ಆದುದರಿಂದಲೇ ಈ ನಾಯಕರು, ಅನೇಕ ಜನ ಶತ್ರುಗಳ ಮಧ್ಯದಲ್ಲಿದ್ದರೂ ಯಾರಿಗೂ ಸೊಪ್ಪುಹಾಕುತ್ತಿರಲಿಲ್ಲ.

ಶಾ. ಶಕ ೧೬೪೩ ನೆಯ ಪ್ಲವನಾಮ ಸಂವತ್ಸರದ ಜ್ಯೇಷ್ಠಶುದ್ಧ ೧೩ ಸ್ಥಿರವಾರದಲ್ಲಿ, ಹಿರೇ ಮದಕರಿನಾಯ್ಕನಿಗೆ ಚಿತ್ರದುರ್ಗದ ಬೆಟ್ಟದ ಮೇಲಿರುವ ಸಂಪಿಗೆ ಸಿದ್ಧೇಶ್ವರನ ದೇವಸ್ಥಾನದಲ್ಲಿ ಪಟ್ಟಾಭಿಷೇಕವಾಯಿತು. ಶ್ರೀರಂಗಪಟ್ಟಣದ ದೊಡ್ಡ ಕೃಷ್ಣರಾಜ ಒಡೆಯರು ತಮ್ಮ ಸರಿಸಮಾನನಾದ ಮದಕರಿ ನಾಯ್ಕನಿಗೆ, ಪಟ್ಟಾಭಿಷೇಕದ ಮಹಾಸಮಾರಂಭ ಸಮಯದಲ್ಲಿ 'ರಾಜಗೋಪಾಲ' ಎಂಬ ಒಂದು ಆನೆಯನ್ನೂ, ಒಂದು ಕುದುರೆಯನ್ನೂ ಒಂದು ಫಿರಂಗಿಯನ್ನೂ ನಜರನ್ನಾಗಿ ಕಳುಹಿಸಿದರು. ಸೀರ್ಯದ ಸುಭೇದಾರನು ಬಾಗೂರು ಮತ್ತು ಹೊದಿಗೆರೆ ಗ್ರಾಮಗಳನ್ನು ನಜರನ್ನಾಗಿ ಕೊಟ್ಟನು.

ಧೀರನಾದ ಹಿರಿಯ ಮದಕರಿ ನಾಯಕನು, ತನ್ನ ಸುತ್ತಣ ದೇಶದ ರಾಜರು ಮತ್ತು ಪಾಳೆಯಗಾರರೊಂದಿಗೆ ಆಗಾಗ ಯುದ್ಧ ಮಾಡಲೇ ಬೇಕಾಗಿತ್ತು. ಮಲೆನಾಡಿನ ಒಡೆಯರಾದ ಬಿದನೂರು ಅರಸರೂ, ಸೀರ್ಯದ ನವಾಬರೂ, ಮರಾಠೆಯ ಸಿದ್ದೋಜಿಯೂ ಮುಖ್ಯರಾದ ಶತ್ರುಗಳಾಗಿದ್ದರು. ರಾಯದುರ್ಗ, ಹರಪನಹಳ್ಳಿ, ರತ್ನಗಿರಿ, ಹಾವನೂರು, ಆನೆಗೊಂದಿ ಮತ್ತು ಹಾಗಲವಾಡಿ ಪಾಳೆಯಗಾರರೂ, ಸವಣೂರು ನವಾಬನೂ, ಚಿತ್ರದುರ್ಗದ ಅರಸರ ಮೇಲೆ ಆಗಾಗ ಇತರರ ಸಹಾಯದಿಂದ ಏರಿಬರುತ್ತಿದ್ದರು. ಇವರೆಲ್ಲರನ್ನೂ ಎದುರಿಸಿ ಸಮಯದೊರೆಕಿದಾಗಲೆಲ್ಲಾ ತನ್ನ ರಾಜ್ಯವನ್ನು ವಿಸ್ತಾರಮಾಡುತ್ತಾ ಧರ್ಮದಿಂದ ರಾಜ್ಯಭಾರ ಮಾಡುತ್ತಿದ್ದ ಹಿರಿಯ ಮದಕರಿ ನಾಯ್ಕನನ್ನು ಸೋಲಿಸಬೇಕೆಂದು ಇವನ ಶತ್ರುಗಳು ಹಾತೊರೆಯುತ್ತಿದ್ದರು.

ಹಿರಿಯ ಮದಕರಿ ನಾಯ್ಕನು ಬೆಳನಡು ಎಂಬ ಗ್ರಾಮದಲ್ಲಿ ಶಿಬಿರವನ್ನು ಬಿಟ್ಟಿದ್ದಾಗ, ಶಕ ವರ್ಷ ೧೬೭೦ನೆಯ ರುಧಿರೋದ್ಗಾರಿ ಸಂವತ್ಸರ ಚೈತ್ರಮಾಸದಲ್ಲಿ, ಚಿತ್ರದುರ್ಗದ ರಾಜನಿಗೆ ಸೇರಿದ್ದ ರಾಮಗಿರಿ ದುರ್ಗವನ್ನು, ಮಲೆನಾಡಿನವರೂ, ಹರಪನಹಳ್ಳಿಯವರೂ ಆನೆಗೊಂದಿ ಮತ್ತು ರಾಯದುರ್ಗದವರೂ ಒಟ್ಟಾಗಿ ಸೇರಿ ಮುತ್ತಿಗೆಹಾಕಿದರು. ಈ ವರ್ತಮಾನವನ್ನು ಮದಕರಿ ನಾಯ್ಕನು ಕೇಳಿದ ಕೂಡಲೆ ಚಿತ್ರದುರ್ಗಕ್ಕೆ ಬಂದು, ಸಣ್ಣ ಸೈನ್ಯ ಸಮೇತ ರಾಮಗಿರಿಗೆ ಹೋಗಿ, ಶತ್ರುಗಳೊಡನೆ ಕಾದಾಡಿದನು. ಮದಕರಿ ನಾಯ್ಕನು ಸೈನ್ಯವನ್ನು ಸ್ವತಃ ನಡೆಯಿಸುತ್ತ ಯುದ್ಧ ಮಾಡುತ್ತಿರುವಾಗ, ಶತ್ರುಗಳ ಅಂಬು ತಗಲಿ, ನಾಯ್ಕನ ಬಲಗಡೆಯ ದವಡೆಯ ಮೇಲೆ ಘಾಯವಾಯಿತು. ನಾಯ್ಕನು ಕೂಡಲೆ ತನ್ನ ಡೇರೆಗೆ ಹೋಗಿ ಘಾಯವನ್ನು ಕಟ್ಟಿಸಿಕೊಂಡು, ಅಂಬಾರಿ ಸಹಿತವಾದ ಆನೆಯನ್ನೇರಿ, ತನ್ನ ನೋವನ್ನು ಲಕ್ಷ್ಯಿಸದೆ ರಣರಂಗವನ್ನು ಪುನಃ ಹೊಕ್ಕನು. ಆಗ ನಡೆದ ಕಾಳಗದಲ್ಲಿ ರಣರಂಗವೆಲ್ಲಾ ಹೆಣಮಯವಾಯಿತು. ಹರಪನಹಳ್ಳಿಯ ಸೋಮಶೇಖರನಾಯ್ಕನ ವಿನಾ ಉಳಿದವರು ಹಿಮ್ಮೆಟ್ಟಿದರು. ಸೋಮಶೇಖರನಾಯ್ಕನು ತನ್ನ ಸೈನ್ಯಕ್ಕೆ ಧೈರ್ಯವನ್ನು ಹೇಳುತ್ತಾ ಆನೆಯನ್ನೇರಿ ಮದಕರಿಯನ್ನು ಎದುರಾದನು. ಆನೆಯ ಕಾಳಗದಲ್ಲಿ ಚತುರರಾದ ಇವರಿಬ್ಬರಿಗೂ ಕೆಲವು ಘಳಿಗೆಯ ಪರ್ಯಂತ ಯುದ್ಧವು ನಡೆಯಿತು. ಮದಕರಿ ಭೂಪನು ಶತ್ರುವಿನ ಕೈಯಲ್ಲಿದ್ದ ಕೊರಲಗು ಹಾಕಿದ್ದ ಕರೋಲ (ಕರವಾಲ)ನ್ನು ಹಿಡಿದು ಎಳೆದುಕೊಂಡನು. ಅವನ ಕೈಯಲ್ಲಿದ್ದ ಕೋವಿಯನ್ನು ಕಸಿದುಕೊಂಡನು. ತನ್ನನ್ನು ಹೊಡೆಯಲೆತ್ತಿದ ಕತ್ತಿಯನ್ನು ಸೋಮಶೇಖರನಾಯಕನ ಕೈಯಿಂದ ಕಿತ್ತುಕೊಂಡನು. ನಿರಾಶನಾದ ಸೋಮಶೇಖರ

ನಾಯ್ಕನು ಕಠಾರಿಯನ್ನು ಮದಕರಿಯ ಕಡೆಗೆ ಎಸೆಯಲು, ನಾಯಕನು ಹೊಡೆತವನ್ನು ತಪ್ಪಿಸಿಕೊಂಡನು. ಕಠಾರಿಯು ನಾಯಕನ ವಶವಾಯಿತು. ಇನ್ನು ಪಲಾಯನವೇ ಸೂಕ್ತವೆಂದು ಸೋಮಶೇಖರನಾಯ್ಕನು ಹಿಮ್ಮೆಟ್ಟಲು, ಹಿರಿಯ ಮದಕರಿ ನಾಯ್ಕನು ಚಿನ್ನಗಹಳೆಯನ್ನು ಹಿಡಿಸಿಕೊಂಡು, ರಾಮಗಿರಿಯ ಕೋಟೆಯನ್ನು ಪ್ರವೇಶಿಸಿದನು.

ಈ ದ್ವೇಷವನ್ನು ಮನಸ್ಸಿನಲ್ಲಿಟ್ಟುಕೊಂಡು **ನಗರದವರೂ ಹರಪನಹಳ್ಳಿಯವರೂ ಸವಣೂರು** ಕರೀಂಖಾನನೂ, ರಾಯ-ದುರ್ಗದವರೂ ಸೇರಿ, ದೊಡ್ಡ ಸೈನ್ಯಸಮೇತವಾಗಿ ಕ್ರಿ.ಶ. ೧೭೪೮ ರಲ್ಲಿ ಚಿತ್ರದುರ್ಗದ ರಾಜಧಾನಿಗೆ ಸೇರಿದ್ದ **ಮಾಯಕೊಂಡದ** ಕೋಟೆಯನ್ನು ಮುತ್ತಿದರು. ಮೂರುತಿಂಗಳಾದರೂ ಕೋಟೆಯು ಶತ್ರುಗಳ ವಶವಾಗಲಿಲ್ಲ. ಮದಕರಿ ನಾಯ್ಕನು ಸೈನ್ಯಸಮೇತನಾಗಿ ಮಾಯಕೊಂಡದ ಮುತ್ತಿಗೆಯನ್ನೆಬ್ಬಿಸಲು ಹೊರಟನು. ಇದೇ ಸಮಯದಲ್ಲಿ ನಡೆದ ಒಂದು ಸಂಗತಿಯು ಕರ್ನಾಟಕದ ಇತಿಹಾಸದಲ್ಲಿ ಗಮನಾರ್ಹವಾದುದಾಗಿದೆ. ಯೂರೋಪಿನಿಂದ ಭರತಖಂಡಕ್ಕೆ ವ್ಯಾಪಾರಕ್ಕಾಗಿ ಬಂದಿದ್ದ ಬಿಳಿಯ ವೈಶ್ಯರು, ಈ ನಾಡಿನ ರಾಜರುಗಳ ಕಲಹಗಳಲ್ಲಿ ಪ್ರವೇಶಿಸಲು ಆಗ ತಾನೆ ಪ್ರಾರಂಭಿಸಿದ್ದರು. ಆರ್ಕಾಟದ ನವಾಬನ ಗದ್ದುಗೆಗಾಗಿ ಇಬ್ಬರು ವಾರಸುದಾರರು ಹೊಡೆದಾಡಲಾರಂಭಿಸಿದರು. ಮಹಮ್ಮದಾಲಿಯ ಪಕ್ಷವನ್ನು ಇಂಗ್ಲಿಷರೂ, ಚಂದಾಸಾಹೇಬನ ಪಕ್ಷವನ್ನು ಫ್ರೆಂಚರೂ ಹಿಡಿದರು. ಆಗ ಸಾತಾರೆಯಲ್ಲಿ ಸೆರೆಹಿಡಿಯಲ್ಪಟ್ಟಿದ್ದ ಚಂದಾಸಾಹೇಬನು ಮರಾಟೆಯವರಿಂದ ಬಿಡುಗಡೆಹೊಂದಿ ಹಿಂದಿರುಗುತ್ತಿದ್ದನು. ಅವನೂ ಮದಕರಿಯ ಪಕ್ಷವನ್ನು ವಹಿಸಿದನು. ಆದರೆ ದುರ್ದೈವದಿಂದ ನವಾಬನ ಮಗನು ಮಡಿದುದಲ್ಲದೆ ಚಂದಾಸಾಹೇಬನೂ ಬಿದನೂರಿನವರಿಗೆ ಸೆರೆ ಸಿಕ್ಕಿದನು. ಆದರೆ ಚಂದಾಸಾಹೇಬನ ತಂತ್ರದಿಂದ ಮುಸಲ್ಮಾನ ಕಾವಲುಗಾರರು ಅವನನ್ನು ಫ್ರೆಂಚರಿಗೆ ಒಪ್ಪಿಸಿದರು.

ರಣಧೀರ ಹಿರಿಯ ಮದಕರಿನಾಯಕ

ಹಿರಿಯ ಮದಕರಿ ನಾಯಕನು ಸ್ವಂತವಾಗಿ ಸೈನ್ಯವನ್ನು ನಡೆಯಿಸುತ್ತಾ ಶತ್ರುಗಳ ಮೇಲೆ ಬಿದ್ದು ಮಾರಾಮಾರಿ ಯುದ್ಧ ಮಾಡಲು, ಶತ್ರುಸೈನ್ಯವೆಲ್ಲಾ ಚೆದರಿ ಪಲಾಯನಮಾಡಿತು. ಆಗ ಚಿತ್ರದುರ್ಗದ ಸೈನಿಕರು ಲೂಟಿಗೆ ಬಿದ್ದು, ಲೂಟಿ ಮಾಡುತ್ತಿರುವಾಗ, ಹಿಮ್ಮೆಟ್ಟಿದ್ದ ಹರಪನಹಳ್ಳಿಯವರು ಹಿಂದಕ್ಕೆ ತಿರುಗಿ ಚಿತ್ರದುರ್ಗದವರನ್ನು ನಾಲ್ಕುಕಡೆಯಿಂದಲೂ ಮುತ್ತಿದರು. ಆಗ ಲೂಟಿಯ ಭರದಲ್ಲಿದ್ದ ಚಿತ್ರದುರ್ಗದ ಫೌಜು ಅರೆಪೆಟ್ಟಿನಿಂದ ಊರಪಾರಿ ಹಿಡಿಯಿತು. ಆನೆಯನ್ನೇರಿದ್ದ ಮದಕರಿ ನಾಯ್ಕನು ಶತ್ರುಗಳ ಆಗಮನವನ್ನೂ, ತನ್ನ ದಂಡಿನವರು ಓಡ್ಡಾಡುತ್ತಿರುವುದನ್ನೂ ನೋಡಿ, ತನ್ನ ಮಾವುತನಾದ **ಶಂಕರನಿಗೆ** ತನ್ನ ಆನೆಯನ್ನು ಹರಪನಹಳ್ಳಿಯ ಸೋಮಶೇಖರನಾಯ್ಕನು ಇದ್ದೆಡೆಗೆ ನಡೆಯಿಸಿಕೊಂಡು ಹೋಗುವಂತೆ ಅಪ್ಪಣೆಮಾಡಿದನು. ಆಗ ಮಾವುತನು ನುಡಿದುದೇನೆಂದರೆ " ಸ್ವಾಮಿ ! ಈ ದಿವಸ ಆನೆಯ ಕಾಳೆಗವು ಯುಕ್ತಕಾಣುವುದಿಲ್ಲ; ನಮ್ಮ ಸೈನ್ಯ ಯಾವತ್ತೂ ಮುರಿದುಹೋಯಿತು; ಅವರ ಫೌಜು ನಾಲ್ಕುಕಡೆಯಿಂದಲೂ ಘೇರಾಯಿಸುತ್ತಾ ಇದ್ದಾರೆ. ನಮ್ಮ ಕೋಟೆಯು ಸಮೀಪದಲ್ಲಿಯೇ ಇದೆ. ಮಾಯಕೊಂಡ ಕೋಟೆಗೆ ಆನೆಯನ್ನು ತಿರುಗಿಸುತ್ತೇನೆ." ಇದನ್ನು ಕೇಳಿ ಮಹಾರಾಜನು ಈ ರೀತಿ ಅಪ್ಪಣೆ ಮಾಡಿದನು : " ಈಶ್ವರನ ಕೃಪೆಯಿಂದ ನಾವು ಲಢಾಯಿ ಮಾಡಲು ಪ್ರಾರಂಭಮಾಡಿದ ಲಾಗಾಯಿತು ಶತ್ರುಗಳಿಗೆ ಬೆನ್ನುಕೊಟ್ಟಿಲ್ಲ. ಈ ವರೆಗೂ ಭಗವಂತನ ಕೃಪೆಯಿಂದ ಎಲ್ಲಾ ಯುದ್ಧಗಳಲ್ಲಿಯೂ ಯಶಸ್ಸು ದೊರಕಿದೆ. ಈ ದಿವಸ ಹರಪನಹಳ್ಳಿಯವರಿಗೆ ಬೆನ್ನುಕೊಟ್ಟು ಪ್ರಾಣಸಂರಕ್ಷಣೆಮಾಡಿಕೊಂಡು, ನಾವು ಇನ್ನೆಷ್ಟು ದಿವಸ ಬದುಕಬೇಕು ? ನಾವು ಈಶ್ವರನ ಪೂಜೆ ಮಾಡಿದ್ದಕ್ಕೆ ಈಶ್ವರನ ಬಳಿಯ ವೀರಸ್ವರ್ಗವನ್ನಾದರೂ ಹೊಂದಬೇಕು; ಇಲ್ಲವಾದರೆ ಶತ್ರುಜನಗಳು ಕೃಶರಾಗುವಂತೆ ಮಾಡಬೇಕು. ಇವೆರಡನ್ನೂ ಬಿಟ್ಟು ಎಂದಿಗೂ ಹಿಮ್ಮೆಟ್ಟುವು-ದಿಲ್ಲ. ಧೀರರು ಮಾತ್ರವೇ ವೀರಸ್ವರ್ಗವನ್ನು ಅನುಭವಿಸುವರು. ನಿನಗೇನಾದರೂ ಭಯವಾದರೆ ನೀನು ಆನೆಯನ್ನಿಳಿದು ಹೋಗುವುದು. ನಾನೇ ಮಾವುತನಾಗಿಯೂ; ಯೋದ್ಧನಾಗಿಯೂ ಯುದ್ಧ ಮಾಡುತ್ತೇನೆ. ಸರ್ವಥಾ ಹಿಂದಕ್ಕೆ ತಿರುಗುವುದಿಲ್ಲ." "ಮಹಾರಾಜಾ ! ಛತ್ರಪತಿ ! ತಾವು ಹೋದ ಮೇಲೆ ನಾನು ಹಿಂತಿರುಗಿ ಹೋಗಿ ಯಾರಿಗೆ ಮುಖವನ್ನು ತೋರಿಸಲಿ ! ತಮ್ಮ ಪಾದದ ಹತ್ತಿರವೇ ನನ್ನ ಪ್ರಾಣವು" ಎಂದು ತನ್ನ ನಿರ್ಧಾರವನ್ನು ಹೇಳಿ ಮಾವುತನು, ಆನೆಯನ್ನು ನೆಟ್ಟಗೆ ಸೋಮಶೇಖರರಾಯನ ಆನೆಯ ಹತ್ತಿರಕ್ಕೆ ನಡೆಯಿಸಿದನು. ಆತನೂ ಇವರು ಬರುವುದನ್ನು ನೋಡಿ ತನ್ನ ಆನೆಯನ್ನು ಇವರ ಆನೆಯ ಮೇಲೆ ನಡೆಯಿಸಿದನು. ಎರಡು ಆನೆಗಳೂ ಎದುರಾದುವು. ಉಭಯಪಕ್ಷದ ಸೈನಿಕರೂ ನೋಡುತ್ತಿರುವಲ್ಲಿ, ಉಭಯ ವೀರರೂ ಎದುರು ನಿಂತು, ಒಂದು ಜಾವಪರಿಯಂತರ ತರಖಷ್ ಕಮಾನಿನ (ಬಾಣ–ಬಿಲ್ಲು) ಲಢಾಯಿ ಮಾಡಿದರು. ಗೋಲಿ ಮುಂತಾದುವು ಖಾಲಿಯಾದುವು. ಸೋಮಶೇಖರನಾಯಕನು ನುಸ್ವಾಗಿ, ಒಂದು ಹಯಮುಖದ ಥಳಥಳ ಪ್ರಕಾಶಮಾಯವಾದ ಭರ್ಜಿಯನ್ನು ತೆಗೆದುಕೊಂಡು, ಆನೆಯಮೇಲಿನಿಂದ ಬಗ್ಗಿ ಮಸ್ತಕದ ಮೇಲೆ ಕಾಲಿಟ್ಟು, ಹಿರಿಯ ಮದಕರಿನಾಯ್ಕನಿಗೆ ಗುರಿಯಿಟ್ಟು

(೧೩೪ನೆಯ ಪುಟ ನೋಡಿರಿ)

ಬಾಳ್ - ಸಂಜೆ

ಶ್ರೀ. ಟಿ. ಎಸ್. ಶ್ರೀನಿವಾಸಮೂರ್ತಿ, ಮೈಸೂರು.

೧

ಬಾಲ್ಯ ಹರೆಯಗಳವು ಮೀರಿ,
ತಾರುಣ್ಯದ ಬಿಸುಪು ಆರಿ,
ಬಾಳಿನಂತ, ಕೊನೆಯ ಅಂಕ
ಬರಲು, ಎನಿತು ಸೊಗವದು:
ಉಷೆಯ ವೇಳೆ ಹೊನ್ನತೂರಿ,
ಮಧ್ಯಾಹ್ನದಿ ಕೆಂಡಕಾರಿ,
ಸಂಜೆ ಅಸ್ತಶಿಖರ ಸೇರಿ
ಮೆರೆವ ರವಿಯ ಸೊಗಸದು!

೨

ತಲೆಯ ತುಂಬ ಬೆಳ್ಳಿನರೆ,
ಕೆನ್ನೆ, ಹಣೆಯು–ಸುಕ್ಕು ನೆರೆ,
ದೊಣ್ಣೆಯೂರಿ ಬರುವ ಜರೆ
ಅಹಾ, ಎನಿತು ಚೆಲುವದು:
ಬಿರುಸುಗಾಳಿಗುದಧಿ ತೆರೆ
ಕುಣಿದು, ಬಡಿದು, ಬಳಲಿ ನೆರೆ,
ಗಾಳಿ ನಿಲಲು, ಶಾಂತಿಗುರೆ
ಸಂದು ನಿಲುವ ಚೆಲುವದು!

೩

ದುಃಖ-ಸೌಖ್ಯಗಳನು ಉಂಡು,
ಗೆಲವು-ಸೋಲುಗಳನು ಕಂಡು,
ದಣಿದು, ತಣಿದು, ಬವಣೆಯುಳಿದು
ನಿಲುವ ಮುಪ್ಪು ಇನಿದದು!
ತಲೆಯ ತುಂಬ ನೀತಿಯಿರೆ,
ಕೈಯೊಳೊಂದು 'ಗೀತೆ'ಯಿರೆ,
ಮೃತ್ಯು ನನಿಹಿಸುತ್ತ ಬರೆ,
ಅಹಾ, ಎನಿತು ಸವಿಯದು!

೪

ಹಸಿರು ಬನದೊಳೊಂದು ಗುಡಿ,
ಅಲ್ಲಿ ಒಂದು ಕೊಳದ ತಡಿ:
ಉಲಿವ ಹಕ್ಕಿ, ಮಿರುಪ ಚಿಕ್ಕಿ
ಇರಲು, ಎನಿತು ಸುಂದರ!
ಬೈಗು–ಉಷೆಯ ರವಿಯ ಛವಿ,
ಬಳಿಯೊಳೊರ್ವ ರಸಿಕ ಕವಿ,
ಶಾಂತಿಗೀತದಮಲ ಸ್ರೋತ
ಹರಿಸಲೆನಿತೊ ಬಂಧುರ!

೫

ಸಂಜೆಯಳಿಪ ಇರುಳಿನಂತೆ,
ರವಿಯನಡರ್ವ ಮುಗಿಲಿನಂತೆ,
ಮೃತ್ಯು ಬರಲು ಕಳ್ಳನಂತೆ,
ಮರೆಸಿ, ಭ್ರಮಿಸಿ, ಮರೆಯಲಿ;
ಅಡಗಿಕೊಳದೆ ಹೇಡಿಯಂತೆ,
ಕೂಗಿ ಕರೆದು, ಚಾಗಿಯಂತೆ,
ಅತಿಥಿಗೆತ್ತು, ಮಣೆಯನಿತ್ತು,
ಆದರಿಸುತ ಮುದದಲಿ;

೬

ಬಳಿಕ ಕೈಗೆ-ಕೈಯ ಕೊಟ್ಟು,
ಜೀವರಂಗವನ್ನು ಬಿಟ್ಟು,
ನಿಷ್ಕ್ರಮಿಸಲು ಮೌನಿಯಂತೆ
ಅದರ ಸೊಗಕೆ ಏಂ ಕೊರೆ?
ಚೈತ್ರ-ಸಂಧ್ಯೆ ಎಲರಿನಂತೆ,
ಜೊನ್ನ-ಸೊದೆಯ ಸೋನೆಯಂತೆ,
ಬಾಳ ಬವಣೆಯಳಿಸಿ, ಸೊಗವ
ತರುವ ಜರೆಯ ಜರೆವರೆ?

ರಸಭಂಗ

(ಕಿರುಗತೆ)

ನಮ್ಮ ಸಮಾಜದಲ್ಲಿ ಶೀಲೆಯ ಜೀವನದಂತೆ ರಸಭಂಗಹೊಂದಿದ ಸ್ತ್ರೀ ಜೀವನಗಳೆಷ್ಟೋ ಏನೋ! ಇಲ್ಲದ ಒಳ್ಳೆಯ ಆಹಾರಕ್ಕೆ ಮನಸ್ಸು ಎಳಸಿದರೆ ಶೀಲಕ್ಕೆ ಬಾಧೆಯಿಲ್ಲ; ಇಲ್ಲದ ಸಮಾನಶೀಲದ ಸಖ್ಯಕ್ಕೆ ಮನಸ್ಸು ಎಳಸಿದರೆ ಶೀಲಕ್ಕೆ ಉಳಿಗಾಲವಿಲ್ಲ! ನೀತಿನಿಯಮ ನಿಸರ್ಗನಿಯಮ ವನ್ನು ಮೀರಿ ನಡೆಯಬಲ್ಲದೆ?

★

ಶ್ರೀ. ದತ್ತಾತ್ರೇಯ ಕುಲಕರ್ಣಿ

'ಶ್ರೀಲಾ!'

ಮೌನ.

'ಶೀಲಾ, ಏ ಶೀಲಾ!'

ಮತ್ತೂ ಮೌನ. ಶೀಲೆ ರಾಮನ ತೋಳ ಸೆರೆಯಲ್ಲಿದ್ದಳು. ಕೂಗು ಕೇಳಿ ರಾಮನ ಕೈ ಸಡಿಲಿತು; ಮುಖ ವಿವರ್ಣವಾಯಿತು; ಹಣೆ ಹನಿಹನಿಯಾಯಿತು. ಅವನ ಕಂಪಿಸುತ್ತಿರುವ ದೇಹಕ್ಕೆ ಶೀಲೆ ಆಧಾರವಾಗಿದ್ದವಳು, ಇವನ ಹಣೆಯ ಬೆವರು ಒರಸಿದಳು. ರಾಮನ ಕಣ್ಣುಗಳು ಕೃತಜ್ಞತೆ ಸೂಚಿಸಿದುವಷ್ಟೇ ಏನಾ ನೋಟ ಬಾಗಿಲಕಡೆಗೇ ಇತ್ತು; ಗಾಬರಿಗೊಂಡಿತ್ತು.

ಮತ್ತೆ ಕೂಗು. ಕಾಲಸಪ್ಪಳ ಹತ್ತಿರಹತ್ತಿರ ಕೇಳಬಂತು. ರಾಮ ಇನ್ನೂ ದಿಗಿಲುಗೊಂಡ. ಶೀಲೆಯ ನಿಶ್ಚಲತೆಯನ್ನು ನೋಡಿ ತಾನೆ ಕಾಲ್ತೆಗೆದ; ಬಾಗಿಲಲ್ಲಿಯೆ ಶೀಲೆಯ ತಾಯಿ. ಉಸಿರೆಳೆಯದೆ ಮುಂದರಿದ; ಹೊರಗೆ ನಡೆದ. ಶೀಲೆ ಸೆರಗಿನ ತುದಿ ಕೈಯ ಬೆರಳಿಗೆ ಸುತ್ತುತ್ತ ಅಲ್ಲೇ ನಿಂತಿದ್ದಾಳೆ, ತಾಯಿ ಬಾಗಿಲಲ್ಲೇ.

ರಾಮ ಶೀಲಾ ದೂರದ ಆಪ್ತರು. ಚಿಕ್ಕಂದಿನಲ್ಲಿ ಕೂಡಿ ಆಡಿ ಬೆಳೆದವರು. ನಡುವೆ ರಾಮ ತನ್ನ ವಿದ್ಯಾಭ್ಯಾಸಕ್ಕೆ ಹೋದ. ಆಗಲೆ ಶೀಲೆಯ ಮದುವೆಯಾಗಿ ಆಕೆ ಗಂಡನ ಮನೆ ಸೇರಿದ್ದಳು.

ಈಗ ರಾಮ ತನ್ನ ಅಭ್ಯಾಸ ನಿಲ್ಲಿಸಿ ಬಂದಿದ್ದಾನೆ. ಶೀಲಾ ತವರುಮನೆಗೆ ತನ್ನ ತಂಗಿಯ ಮದುವೆಗೆ ಬಂದಿದ್ದಾಳೆ. ಶೀಲಾನ ಮದುವೆಯಾದ ಮೇಲೆ ಪರಸ್ಪರರು ಭೆಟ್ಟಿಯಾದುದು ಇದೇ ಮೊದಲು.

ಹೀಗಿರುವಾಗ ಒಮ್ಮೆ ಶೀಲಾನ ಗಂಡ ಬಂದುಹೋದ. ಹಳೆಯ ಮನುಷ್ಯನಾತ. ಉದ್ದಕೋಟು, ಹೇಗೋ ಸುತ್ತಿದ ರುಮಾಲು, ಕಣಕಾಲು ಕಾಣುವ ಉಡಿಗೆ, ಇಂದಿನ ಆಡಂಬರ ಒಂದೂ ಇಲ್ಲ. ಆದರೂ ಹಸುವಿನಂತಹ ಪ್ರಾಣಿ. ಯಾರು ಏನು ಆಡಿದರೂ ತನ್ನದೊಂದೇ ತಿಳಿವು ಅವನಿಗೆ. ಯಾರಲ್ಲಿಯೂ ಸಿಟ್ಟು-ಗೊಂಡವನಲ್ಲ.

ರಾಮನಿಗೆ ಇದೇ ಮಾತಾಯಿತು. ಶೀಲೆಗೆ ಗಂಡನನ್ನು ನೆನಪು ಮಾಡಿಕೊಟ್ಟು ನಗೆಯಾಡುವುದು. 'ಇವರು ಈಗ ಇಲ್ಲಿಗೇಕೆ ಬಂದು ಹೋದರು'– ಎನಿಸಿತವಳಿಗೆ. ಶೀಲಾ ಇಂದಿನ ಹುಡುಗಿ, ಕಲಿತದ್ದೊ ಕನ್ನಡ ನಾಲ್ಕು ಅಕ್ಷರ. ಒಮ್ಮೆ ನೆರೆಯವರ ಮದುವೆಗಾಗಿ ಪಟ್ಟಣಕ್ಕೆ ಹೋಗಿ ಬಂದಳಂತೆ; ತೀರಿತು. ನಡುಹಣೆಯ ಕುಂಕುಮ ನಡುಹುಬ್ಬಿಗೆ ಇಳಿಯಿತು. ನಡುದಲೆಯ ಬೈತಲೆ ಎಡಕ್ಕೆ ಸರಿಯಿತು. ಮೊಣಕೈ ವರೆಗಿನ ಕುಪ್ಪಸ ಸಡಿಲಿ ಝುಂಪರಿನಿಂದ ಭುಜವಷ್ಟೇ ಮುಚ್ಚಿತು. ಮೊಣಕಾಲ ಕೆಳಗನ್ನಷ್ಟೇ ಮುಚ್ಚಿಕೊಳ್ಳುತ್ತಿದ್ದ ಸೀರೆ ನೆಲ ಉಡುಗತೊಡಗಿತು. ಹುಡುಗಿಯ ಬಣ್ಣ ಕಪ್ಪು. ಆದರೆ ಅವಳ ತುಂಬಿದ ಮುಖಕ್ಕೆ ತೀಡಿದಂತಿರುವ ಹುಬ್ಬಿನ ಕೆಳಗೆ, ಸದಾ ಕಳೆಗೊಂಡಿರುವ ಕಣ್ಣುಗಳು; ಮಾತು ಮಾತಿನ ಜೊತೆಯ ಮಂದಹಾಸ; ನಗೆಯೊಡನೆ ಗಲ್ಲ ನಡುವೆ ತಗ್ಗುವುದು; ಇವೇಸಾಕು ಅವಳು ಕುರೂಪಿಯಲ್ಲ-ಎನ್ನುವುದಕ್ಕೆ.

ರಾಮ ಕಾಲೇಜಿನ ಸಂಸ್ಕಾರ ಪಡೆದವನೆಂದರೆ ಸಾಲದೇ?

ಮನೆಯಲ್ಲಿ ಮದುವೆಯ ಗಲಾಟೆ. ಹಿಂದಿನ ಮದುವೆಗಳ ಮಾತುಗಳು: 'ಶೀಲಾನ ಮದುವೆಯಲ್ಲಿ ಹಾಗಾಯಿತು ಹೀಗಾಯಿತು' 'ರಾಮನಿದ್ದಿದ್ದರೆ ಅವಳನ್ನು ಬಹಳ ಗೋಳಾಡಿಸುತ್ತಿದ್ದ' 'ಅವನಿಲ್ಲದ್ದೇ ಒಳ್ಳೆಯದಾಯಿತು' ಎಂದು ಶೀಲೆ ಬಿಂಕದಿಂದ ನುಡಿಯುವಳು. 'ನಾನಿದ್ದಿದ್ದರೆ' ಎನ್ನುವನು ರಾಮ. ಇಬ್ಬರೂ ನಗುವರು. ರಾಮನೆಂದರೆ ಮನೆಯಲ್ಲಿ ಎಲ್ಲರಿಗೆ ಅಚ್ಚುಮೆಚ್ಚು. ಹೆಣ್ಣುಮಕ್ಕಳಿಗಂತೂ ತೀರಿತು. ಅವರ ಕೆಲಸ ನಡೆದಾಗ ಏನನಾದರೂ ಓದುವುದು–ಯಾವುದಾದರೂ ಸುದ್ದಿ ಹೇಳುವುದು, ಕೇಳುವುದು. ಒನ್ನೊಮ್ಮೆ ಹೆಂಗುಸರಿಂದ ಹಾಡಿಸುವುದು. ಕತೆ ಹೇಳಿಸಿಕೊಳ್ಳುವುದು. ಶೀಲಾನನ್ನು ಗೋಳಾಡಿಸಿ ನಿತ್ಯವೂ ಗಂಡನ ಹೆಸರು ಕೇಳುವುದು. ಹೀಗೆಲ್ಲ ನಡೆಯುತ್ತಿತ್ತು.

ಸಂಜೆ ಹಿರಿಯರಿಗೆಲ್ಲ ಕೆಲಸ. ಹುಡುಗರೆಲ್ಲ ಬೆಳುದಿಂಗಳ ಅಂಗಳದಲ್ಲಿ ಕುಳಿತು ಆಡುವುದು; ಹಾಡುವುದು; ಒಗಟ ಹೇಳುವುದು; ಕತೆ ಹೇಳುವುದು; ಗೆಲ್ಲುವುದು- ನಗುವುದು. ಸೋತಾಗಲೂ ನಗುವುದು. ಶೀಲಾ ಒಗಟಕ್ಕೆ ಬಹಳ ಗಟ್ಟಿ. ರಾಮ ಯಾವಾಗಲೂ ಸೋಲುವುದೇ. ಒಮ್ಮೆ ಸೋತವರಿಗೆ ಸೋಲಿಗೊಂಬು ಗುದ್ದು ಎಂದು ಗೊತ್ತಾಯಿತು. ಶೀಲಾ ಗೆದ್ದು ಗುದ್ದು ಕೊಡಬೇಕಾಗಿರುವಾಗ ರಾಮ ಒಂದು ಕತೆ ಹೇಳಿದ. ಅದರಲ್ಲಿ ನಾಯಕಿ ಶೀಲಾನೇ. ಅದಕ್ಕೆ ಪ್ರತಿಯಾಗಿ ಕತೆ ಹೇಳು ಎಂದ ರಾಮ. ಈಗ ಶೀಲೆಗೆ ಸೋಲು.

ಶೀಲಾ ಅತ್ತೆಮನೆಯಿಂದ ಬಂದವಳೆಂದು ಅವಳಿಗೆ ಕೆಲಸ ಕಡಿಮೆ. ಅವಳನ್ನು ಕಂಡರೆ ಎಲ್ಲರಿಗೆ ಪ್ರೀತಿ. ಚಂಪಾ—ಶೀಲಾನ ತಂಗಿ—ಮದುಮಗಳು. ಕೇಳುವುದೇನು ? ಇವರ ಕಾಲಹರಣಕ್ಕೆ ರಾಮನೊಬ್ಬ ಸಹಾಯ.

ಒಂದುದಿನ ರಾಮು, ಚಂಪಾ, ಶೀಲಾ ಒಂದೆಡೆ ಕುಳಿತಿದ್ದಾರೆ. ಸುತ್ತುವರಿದು ಚಿಕ್ಕಮಕ್ಕಳು ಚಿನ್ನಾಟವಾಡುತ್ತಿದ್ದಾರೆ. ರಾಮು **ಆನಂದರ** ಕತೆ ಓದುತ್ತಿದ್ದಾನೆ. ನಡು-ನಡುವೆ ನಗೆ. ಅಂಥಲ್ಲಿ ಶೀಲಾ ಮತ್ತೊಮ್ಮೆ 'ಓದು' ಎನ್ನುತ್ತಾಳೆ. ಇವರು ನಕ್ಕಾಗ ಚಂಪಾ ತಾನೂ ನಗುತ್ತಾಳೆ.

ಒಂದು ಕತೆ ಮುಗಿಯಿತು. 'ಇನ್ನೊಂದು' ಎಂದಳು ಶೀಲಾ. ಚಂಪಾನ ಲಕ್ಷ್ಯ ಮಕ್ಕಳ ಆಟದ ಕಡೆಗಿತ್ತು. 'ಯಾವುದು?' ಎಂದ ರಾಮು. ಶೀಲಾ ಮುಂದೆ ಸರಿದು ಪುಸ್ತಕ ಮಗುಚಿ ಮತ್ತೊಂದನ್ನು ತೋರಿಸಿದಳು; ರಾಮು ಆರಂಭಿಸಿದ. ಶೀಲಾ ಮೊದಲಿಗಿಂತ ಹತ್ತಿರದಲ್ಲಿದ್ದಾಳೆ; ಚಂಪಾಗೇನೂ ತಿಳಿಯದು. ಇವರಿಬ್ಬರು ತನಗಿಂತ ದೊಡ್ಡವರು; ಅನುಭವ ಉಳ್ಳವರು. ಸುತ್ತಲೂ ತಿರುಗುತ್ತ ಚಿನ್ನಾಟವಾಡುವ ಮಕ್ಕಳೊಡನೆ ಆಡ ಬೇಕೆಂದು ಮನಸ್ಸು. ಆದರೆ ತಾನು ಮದುವೆಯಾಗುವಷ್ಟು ದೊಡ್ಡವಳಾಗಿದ್ದಾಳೆ. ಅಕ್ಕನಂತೆ ಇನ್ನೂ ದೊಡ್ಡವಳಾಗಬೇಕು—ಎನಿಸುವುದು. ಹಾಗೇ ಕೂತಿರುವಳು.

ರಾಮು ಸಲೀಲವಾಗಿ ಓದುತ್ತಿದ್ದಾನೆ. ಶೀಲಾ ಹತ್ತಿರ ಇದ್ದಾಳೆ. ರಾಮು ಓದುತ್ತೋದುತ್ತ ಕೈ ಮುಂದೆಮಾಡಿ ಏನಾದರೂ ಹೇಳುತ್ತಾನೆ. ಓದುವ ಭರದಲ್ಲಿ ಇವನ ಕೈ ಶೀಲಾನ ಕೈಯಮೇಲೆ ಬೀಳುವುದು. ಅವನಿಗೆ ಅತ್ತ ಲಕ್ಷ್ಯವಿಲ್ಲ. ಕತೆ ಸ್ವಾರಸ್ಯವುಳ್ಳದ್ದು. ಪರಸ್ಪರರಿಗೆ ತಿಳಿಯದಂತೆ ಕೈ-ಬೆರಳುಗಳು ಕೂಡಿ ಆಡುವುವು. ತೊಡುಕುವುವು; ಬಿಡುವುವು. ಒಂದು ಕೈ ಇನ್ನೊಂದರ ಬೆರಳು ತೀಡುವುದು. ಇನ್ನೊಂದು ಮತ್ತೊಂದರ ಬೆರಳು ಮುರಿದು ಸಪ್ಪಳಮಾಡುವುದು. ಕತೆಯು ಒಂದು ಒಳ್ಳೆಯ ಸನ್ನಿವೇಶ ಬಂತು. ರಾಮು ಶೀಲಾನನ್ನು ನೋಡಿದ. ಅವಳೂ ಇವನನ್ನು ನೋಡಿದಳು. ಕಣ್ಣು ಕಿರಣಗಳು ಬಳ್ಳಿಗೂಡಿದಂತೆ ಹೊಸೆದುವು. ಇಬ್ಬರೂ ಕಂಪನಗೊಂಡರು. ಚಂಪಾ ಇತ್ತ ನೋಡುತ್ತಲಿಲ್ಲ. ಶೀಲಾ ಮುಖ ಮುಂದೆ ಮಾಡಿ, ತನ್ನ ಅಂಗೈಯಲ್ಲಿರಿಸಿಕೊಂಡು ಕೇಳುತ್ತಿದ್ದಳು. ರಾಮು ಓದಲಾರದೆ ಓದುತ್ತಿದ್ದಾನೆ. ಶೀಲಾ ಕೇಳಲಾರದೆ ಕೇಳುತ್ತಿದ್ದಾಳೆ.

ರಾಮು ತನ್ನ ಕೈ ಶೀಲಾನ ಭುಜದ ಮೇಲಿರಿಸಿದ್ದ. ಶೀಲಾ ಮತ್ತೂ ಬಾಗಿದಳು. ಕೈ ಬೆನ್ನಮೇಲಾಡಿತು. ಜಡೆಯ ಮೇಲೂ ಆಡಿತು.

ಒಳಗೆ ಮದುವೆಗಾಗಿ ತಿನಿಸುಮಾಡುತ್ತಿದ್ದಾರೆ—ಹಿರಿಯರು. ಮನೆಯಲ್ಲಿಯ ಗಂಡಸರು ಹೊರಗೆ ಹೋಗಿದ್ದಾರೆ. ಹುಡುಗರಲ್ಲೊಬ್ಬ ಸುಸುಳಿ 'ಉಂಡಿ ಕಟ್ಟುತ್ತಿದ್ದಾರೆ' ಎಂದ. ಹಿಂಡಿಗೆ ಹಿಂಡೇ ಓಡಿತು. ಚಂಪಾನೂ ಅವರೊಡನೆ ಓಡಿದಳು. ಉಳಿದವರೆಂದರೆ ಶೀಲಾ-ರಾಮು; ರಾಮು-ಶೀಲಾ.

ರಾಮುನ ಕೈಯ ಪುಸ್ತಕ ಜಾರಿ ಬಿತ್ತು. ಅವನು ಅದನ್ನು ಎತ್ತಲು ಪ್ರಯತ್ನಿಸಲಿಲ್ಲ. ಆ ಕೈ ಶೀಲೆಯ ಗದ್ದವನ್ನು ಹಿಡಿದೆತ್ತಿತು. ಮತ್ತೆ ನೋಟ ಒಂದಾದುವು. ಶೀಲೆಯ ಮುಖ ಇನ್ನೂ ಬಾಗಿತು. ಎರಡೂ ಮುಖಕೂಡಿ ಸವಿಯುಂಡವು.

ಒಂದು ಹಲ್ಲಿ ನುಡಿಯಿತು. ಶೀಲಾ ಎದ್ದಳು, ರಾಮುನೂ ಎದ್ದ. ಶೀಲೆಯ ಕಾಲು ಕಂಪಿಸುತ್ತಿದ್ದುವು. ರಾಮು ತನ್ನ ತೋಳಿನಲ್ಲಿ ತಕ್ಕೈಸಿದ—ಅವಳನ್ನು. ಶೀಲಾನ ಮುಖ ರಾಮುನ ಎದೆಯಲ್ಲಿದೆ. ರಾಮು ಬಾಗಿ ಮುತ್ತಿಡುವಷ್ಟರಲ್ಲಿ ಒಳಗಿನಿಂದ ಕೂಗು: 'ಶೀಲಾ ಏ ಶೀಲಾ'.

(೧೩೦ನೆಯ ಪುಟದಿಂದ ಮುಂದುವರಿದುದು.)

ಹೊಡೆದನು. ಈ ವೀರನೂ ಆ ಭಾಲೆಯನ್ನು ತೆಗೆದುಕೊಳ್ಳಬೇಕೆಂದು ಬಗ್ಗಿ ತನ್ನ ಆನೆಯ ಮಸ್ತಕದ ಮೇಲೆ ಕಾಲಿಟ್ಟು ಭರ್ಜಿಗೆ ಕೈಹಾಕಿ ಹಿಡಿದನು. ರಣಪರಾಕ್ರಮಿಯಾದ ಸೋಮಶೇಖರ ನಾಯಕನು ತನ್ನ ಶತ್ರುವಿಗೆ ಭರ್ಜಿಯನ್ನು ವಶಮಾಡದೆ ಹಿರಿದುಕೊಳ್ಳಲು ಹಿಂದಕ್ಕೆ ರಭಸದಿಂದ ಎಳೆದುಕೊಳ್ಳುವಾಗ, ಮದಕರಿ ನಾಯಕನ ಬಟ್ಟುಗಳಿಗೆ ತುಂಬಾ ಘಾಯಗಳಾಯಿತು. ಮದಕರಿ ನಾಯಕನು ಆದರೂ ಭರ್ಜಿಯನ್ನು ಬಿಡದೆ ಹಿರಿದುಕೊಂಡನು. ಉಭಯ ಮಾವ್ತರು ಬಿದ್ದರು. ಉಭಯ ದೊರೆಗಳಿಗೂ ಭಾರಿ ಘಾಯಗಳಾದುವು. ಸೋಮಶೇಖರ ನಾಯ್ಕನು ಆದ ನೋವಿನಿಂದ ಮೂರ್ಛೆಬಂದು ಮಲಗಿದನು. ಮದಕರಿನಾಯಕನಿಗೂ ಬಹಳ ಘಾಯಗಳಾದುದರಿಂದ ಇವನ ಪ್ರಾಣವು ಸೂರ್ಯಮಂಡಲವನ್ನು ಭೇದಿಸಿ ವೀರಸ್ವರ್ಗವನ್ನೇರಿತು.

ಚಿತ್ರದುರ್ಗದ ಸೈನ್ಯವು—ತಮ್ಮ ಯಜಮಾನನು ಮಡಿದುದನ್ನು ಕಂಡು—ಹಿಮ್ಮೆಟ್ಟಿತು. ಶತ್ರುಗಳಿಗೆ ನಾಲ್ಕು ಆನೆ, ಎರಡು ಫಿರಂಗಿಗಳು, ಮಹಾರಾಜರ ಬಳಿಇದ್ದ — ತಿಮ್ಮಣ್ಣನಾಯಕನ ಕಾಲದಿಂದಲೂ ಬಂದ— ಶಿಲಾಛತ್ರ ಮತ್ತು ಗುರುಬಾ ಕತ್ತಿ ಸಹ ವಶವಾದುವು. ನೀರ್ಥಡಿ ಬಳಿ ಶಿಬಿರಮಾಡಿದ್ದ ನಾಗತಿಯರು (ನಾಯಕತಿಯರು) ಮತ್ತು ಪರಿವಾರದವರು ಚಿತ್ರದುರ್ಗಕ್ಕೆ ಹೊರಟುಹೋದರು. ಮಹಾರಾಜರ ಶವವನ್ನು ಮಾಯಕೊಂಡದ ಬಳಿಯಲ್ಲಿಯೇ ಶಾಸ್ತ್ರೋಕ್ತವಾಗಿ ರಾಜಮರ್ಯಾದೆಯಿಂದ ದಹನ ಮಾಡಿ, ಅಸ್ಥಿಗಳನ್ನು ಚಿತ್ರದುರ್ಗಕ್ಕೆ ತಂದು ಭರಮಣ್ಣನಾಯಕನ ಗುಡ್ಡೆಯಬಳಿಯಲ್ಲಿ ಗುಡ್ಡೆಯನ್ನು ಮಾಡಿದರು.

ಧಾರವಾಡದಲ್ಲಿ ಧನಂಜಯರು

(ವ್ಯಂಗ್ಯಪ್ರಬಂಧ) ★ ಶ್ರೀ. ಎಚ್. ಎಸ್. ಪಾಟೀಲ ಎಂ.ಎ.

ಅನೇಕ ವ್ಯಾಪಾರಗಳಲ್ಲಿ ಕೈಹಾಕಿ ನಿರಾಶೆಯ ಅನುಭವನನ್ನು ಹೊಂದಿದ ಧನಂಜಯ ರಾಯರಿಗೆ, ರಾಜಕಾರಣವೆ ಒಳ್ಳೆಯದೆಂದು ಬೀದಿ ಬೀದಿ ಪ್ರಚಾರಮಾಡುವಂತಹ ಸಂದರ್ಭವೊದಗಿತು. ಹೀಗಿದ್ದರೂ ದೇಶವು ವ್ಯಾಪಾರದಿಂದಲೆ ಮುಂದುವರಿಯುವು ದೆಂದು ಕಿರುಚುವ ಅವ್ಯವಹಾರಿ ಅರ್ಥಶಾಸ್ತ್ರಜ್ಞರು ಇದ್ದೆ ಇದ್ದಾರೆ.

★

ಮೊನ್ನೆಯ ಮೇ ತಿಂಗಳ ಉರಿಬಿಸಿಲು. ಅದರಲ್ಲಿಯೂ ಆಗ ಧಾರವಾಡದಲ್ಲಿ ಕೆ. ಪಿ. ಸಿ. ಸಿ. ಸಭೆಯು ಇದ್ದುದರಿಂದ, ಊರಲ್ಲಿ ಬೇರೆ ಬೇರೆ ಕಡೆಯ ಜನರು ಬಂದು ಸೆಕೆಯು ಹೆಚ್ಚಾಗಿತ್ತು. ಸಭೆಯ ಮೊದಲನೆಯ ದಿನವಂತೂ ಎಲ್ಲರ ಮೈಯಲ್ಲಿ ಬೆವರು ಸುರಿಯಹತ್ತಿತ್ತು— ಹೊಸಲು ಹೊಸಲಾಗಿ. ಅದೇ ದಿನದ ಹಗಲು ೬ ಗಂಟೆಯ ಸಮಯ. ಆಗ ಗಾಂಧೀಚೌಕಿನ ಬಳಿಯ ಒಂದು ಮೂಲೆಯಿಂದ 'ಓಹೋ, ಧನಂಜಯರಾಯರು, ಧನಂಜಯರಾಯರು' ಎಂಬ ಕೂಗು ಕೇಳಿಸಿತು. ಮರುಕ್ಷಣವೇ ಅಲ್ಲಿರುವ ಇಲೆಕ್ಟ್ರಿಕ್ ದೀಪದ ಬಳಿಯಲ್ಲಿ ಐದಾರು ಜನರು ನೆರೆದರು. ನೋಡುತ್ತಲೆ ಅಲ್ಲಿ ರಾಯ್‌ಪಾಯಜಮಾ, ನೇಹರು-ಶರ್ಟು, ಬೋಸ್‌ಶಾಲು, ಗಾಂಧೀ ಟೊಪ್ಪಿಗೆ ಹಾಗೂ ಪಠಾಣ ಸ್ಯಾಂಡಲ್ಸ್‌ಗಳನ್ನು ಧರಿಸಿದ ಒಂದು ಆಜಾನುಬಾಹು ವ್ಯಕ್ತಿಯು ಜನರ ಮಧ್ಯದಲ್ಲಿ ಗೋಚರವಾಯಿತು. ತುಸು ವೇಳೆಯಲ್ಲಿಯೆ ಅಲ್ಲಿ ಆ ವ್ಯಕ್ತಿಯ ಸುತ್ತಲೂ ನೆರೆದವರು, ವೃತ್ತಪತ್ರಗಳ ಪ್ರತಿನಿಧಿಗಳೆಂಬುದು ತಿಳಿದುಬಂದಿತು. ಅಷ್ಟರಲ್ಲಿ ಮೊದಲು ಆ ವ್ಯಕ್ತಿಯನ್ನು ಗುರುತಿಸಿ ಕೂಗಿದವನು ಮಾತನಾಡಿದ :

"ಪ್ರತಿನಿಧಿಗಳೆ, ನಿಮ್ಮಲ್ಲಿ ಕೆಲವರಿಗೆ ಇವರ ಪರಿಚಯವಿರಲಿಕ್ಕಿಲ್ಲ. ಕಾರಣ ಎಲ್ಲರಿಗೂ ಒಟ್ಟಾಗಿ ನಾನು ಇವರ ಪರಿಚಯವನ್ನು ಮಾಡಿಕೊಡುತ್ತೇನೆ. ಇವರು ಹೆಸರುಹೊಂದಿದ ಕನ್ನಡಿಗರಾದ ಶ್ರೀಮಾನ್ ಧನಂಜಯರಾಯರು. ಇವರು ಕನ್ನಡದಲ್ಲಿ ಸುಪ್ರಸಿದ್ಧ ಸಾಹುಕಾರರೆಂದೂ, ಶ್ರೇಷ್ಠರಾದ ಶ್ರೇಷ್ಠಿಗಳೆಂದೂ ವ್ಯವಹಾರಕುಶಲ ವ್ಯಾಪಾರಿಗಳೆಂದೂ ಖ್ಯಾತಿಯಿದೆ. ಇದೀಗ ಇವರು ತಮ್ಮ ಉದ್ಯೋಗದ, ಅನುಭವದ, ದುಡ್ಡಿನ ಹಾಗೂ ಕರ್ತೃತ್ವ-ಶಕ್ತಿಯ ಉಪಯೋಗವನ್ನು ನಮ್ಮ ನಾಡಿನ, ದೇಶದ ಸೇವೆಗಾಗಿ ಮಾಡಿಕೊಡಬೇಕೆಂಬ ಉತ್ಕಟೇಚ್ಛೆಯಿಂದ ಕಾಂಗ್ರೆಸಿನಲ್ಲಿ ಸೇರಿರುವರು" ಎಂದು ಹೇಳಿದನು. ಕೂಡಲೆ ಕೆಲವರು ಪತ್ರಿಕಾಪ್ರತಿನಿಧಿಗಳು ಅವರ ಫೋಟೋ ತೆಗೆದುಕೊಂಡರು; ಕೆಲವರು ಅವರ ಸ್ವಾಂಕಿತ (Autograph) ಕ್ಕಾಗಿ ತಮ್ಮ ಚಿಕ್ಕ ಪುಸ್ತಕಗಳನ್ನು ಒಡ್ಡಿದರು. ಇನ್ನು ಕೆಲವರು ತಮ್ಮ ಎಕ್ಸರ್‌ಸಾಯಿಜ್ ತೆಗೆದು ಅವರನ್ನು 'ಇಂದಿನ ಸಭೆಯಲ್ಲಿ ಏನಾಯಿತು?' ಎಂದು ಕೇಳಿ ಬರೆದುಕೊಳ್ಳಲು ಉದ್ಯುಕ್ತರಾದರು. ಮತ್ತೆ ಕೆಲವರು "ಇಂದಿನ ಕನ್ನಡರಾಜಕಾರಣದ ಬಗೆಗೆ ತಮ್ಮ ಅಭಿಪ್ರಾಯವೇನಿದೆ?" ಎಂದು ಕೇಳಿದರು. ಇತ್ತ ಆ ಮೊದಲಿಗನು "ಈ ಸಲದ ಕೆ. ಪಿ. ಸಿ. ಸಿ. ಸಭೆಯ ಫಲಿತಾಂಶವೇನಾಗಬಹುದೆಂದು ತಮ್ಮ ಅಭಿಪ್ರಾಯವಿದೆ?" ಎಂದು ಕೇಳಿದನು. ಇದೆಲ್ಲವನ್ನೂ ಕೇಳಿ, ಉತ್ತರ ಕೊಡಬೇಕೆಂದು ಅಪೇಕ್ಷಿಸಿದರೂ ಅವಕಾಶ ಕೊಡದ ಅವರನ್ನು ನೋಡಿ, ಧನಂಜಯರಿಗೆ ದಿಗಿಲು ಬಿದ್ದಂತಾಯಿತು. ರಣದಲ್ಲಿ ಒಂದು ಹೆಣ ಬಿದ್ದಕೂಡಲೆ ಹದ್ದುಗಳು ಮುಕುರುವಂತೆ ಮುಕುರಿದ ಆ ಪ್ರತಿನಿಧಿಗಳನ್ನು ನೋಡಿ, ರಾಯರು ಕೊಂಚ ಕಳವಳಗೊಂಡರು. ಕೊನೆಗೆ ಅವರು ತಮ್ಮ ಎರಡೂ ಕೈಗಳನ್ನು ಮೇಲಕ್ಕೆತ್ತಿ, ಅವರೆಲ್ಲರಿಗೂ ಸುಮ್ಮನಿರಲಿಕ್ಕೆ ಹೇಳಿ, ಮಾತನ್ನು ಪ್ರಾರಂಭಿಸಿದರು :

"ಇಂದಿನ ಕನ್ನಡದಲ್ಲಿ ಯಾರೂ ಯಾವ ಬಗೆಯ ವ್ಯಾಪಾರೋ-ದ್ಯಮಗಳನ್ನೂ ಮಾಡಬಾರದು. . ಇದು ನನ್ನ . ." ಎಂದು ಮುಂದೆ ಹೇಳುವವರು; ಅಷ್ಟರಲ್ಲಿಯೆ ಸುತ್ತಲಿನ ಜನರ ಮೋರೆಯಮೇಲೆ ಮೂಡಿದ ನಿರಾಶೆ, ಅಸಮಾಧಾನ, ಅತೃಪ್ತಿಯ ಚಿನ್ಹಗಳನ್ನು ಕಂಡು ಕೊಂಚ ತಡೆದರು. ಆದರೆ ಆ ಪ್ರತಿನಿಧಿಗಳು ಕೂಡಲೆ ಆ ವಾಕ್ಯವನ್ನು ಬರೆದುಕೊಂಡು, ಕೇಳಿದುದಕ್ಕೆ ಹಾಗೆಯೆ ಬಿಡಲಾರದೆ, ಮುಂದೆ ಮೋರೆಯನ್ನು ಮೇಲಕ್ಕೆತ್ತಿದ್ದರು. 'ರಾಜಕಾರಣದ ವಿಷಯದಲ್ಲಿ ನಾವು ಕೇಳಿದರೆ ಇವರೇನು ಪ್ರಾರಂಭಮಾಡಿದರು— ತಮ್ಮ ಕೃತಿಯನ್ನು?' ಎಂದು ಕೆಲವರು ಅನುಮಾನಿಸಿದರು. ಹಿಂದಿನ ಸಾಲಿನಲ್ಲಿದ್ದ ಒಬ್ಬ ಗಿಡ್ಡ ಪ್ರತಿನಿಧಿಯು ತನ್ನ ಬದಿಯವನ ಭುಜದಲ್ಲಿ ಮೆಲ್ಲನೆ 'ಬೆಕ್ಕನ್ನು ಎಲ್ಲಿ ಒಯ್ದು ಬಿಟ್ಟುಬಂದರೂ, ಅದು ಮತ್ತೆ ತನ್ನ ಸಾಕಿದ ಮನೆಗೇ ಬರುವುದು' ಎಂದು ಸಾಂಕೇತಿಕ ಮಾತನ್ನು ಉಸುರಿ ನಸುನಕ್ಕ. ಅಷ್ಟರಲ್ಲಿ ಅರ್ಧಕ್ಕೇ ಮುರಿದುಬಿಟ್ಟ ತಮ್ಮ ಎರಡನೆಯ ವಾಕ್ಯವನ್ನು ಪೂರ್ಣಮಾಡುವ ಉದ್ದೇಶದಿಂದ ಧನಂಜಯರು ಮಾತನ್ನು ಮುಂದುವರಿಸಿದರು :

"ಹುಂ, ಬರೆದುಕೊಳ್ಳಿರಿ. ಇಂದಿನ ಕನ್ನಡದಲ್ಲಿ ಯಾರೂ—

ಡೋಂಗರೆ ಇವರ ಬಾಲಾಮೃತವು

ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಎಂದರೆ ಯಾವ ಕೆಚ್ಚೆದೆಯ ಕನ್ನಡಿಗನೂ—ಯಾವುದೇ ಬಗೆಯ ವ್ಯಾಪಾರೋದ್ಯಮಗಳನ್ನು ಕೈಕೊಳ್ಳಬಾರದು. ಇದು ನನ್ನ ಅನುಭವದ ಮಾತು. ಇಂದಿನ ರಾಜಕೀಯ ಪರಿಸ್ಥಿತಿಯನ್ನು ಚೆನ್ನಾಗಿ ಲಕ್ಷ್ಯದಲ್ಲಿ ತಂದುಕೊಂಡು ನಾನು ಹೇಳುತ್ತಿರುವ ನನ್ನ ಸಂದೇಶವಿದು. ಕಾರಣ ಜೋಕೆ!" ಎಂದವರೇ ಅಲ್ಲಿಂದ ಕಾಲ್ತೆಗೆದರು. ಅಲ್ಲಿ ನೆರೆದ ಎಲ್ಲ ಲೇಖಕರಿಗೂ ಅದೊಂದು ಅಚ್ಚರಿ. 'ದೊಡ್ಡವರೆಂದು ರಾಜಕೀಯ ವಿಷಯಕ ಸಂದೇಶವನ್ನು ಕೇಳಿದರೆ ಇವರು ಮತ್ತೊಂದಾವುದೋ ವಿಷಯವನ್ನು ಕುರಿತು ಹೇಳಿದರು. ಈಗ ಏನು ಮಾಡಬೇಕು?' ಎಂಬ ಇತಿಮಿತಿಯಲ್ಲಿ ಬಿದ್ದರು ಕೆಲವರು. "ಏನೇ ಇರಲಿ, ಬರೆದು ಪತ್ರಿಕೆಗಳಿಗೆ ಕಳಿಸಿದರಾಯಿತು. ನಮ್ಮ ಬರೆಹ ಎಂದೇನು ಅದು ಬರುವುದಿಲ್ಲ, ಅವರ ಹೇಳಿಕೆ ಎಂದು ಬರುವುದು" ಎಂದು ಬರೆದುಕೊಳ್ಳ ಹತ್ತಿದರು ಬೇರೆಯವರು. ಆದರೆ ಅಷ್ಟರಲ್ಲಿಯೆ ಅಲ್ಲಿಂದ ಹೊರಟ ಧನಂಜಯರನ್ನು ಅವರೆಲ್ಲರೂ ಬೆಂಬತ್ತಿ ಹೋಗುವುದನ್ನೇನೂ ಬಿಡಲಿಲ್ಲ.

ಮೊದಲು ಅವರನ್ನು ಗುರುತಿಸಿ ಕೂಗಿದವನು, ತಮ್ಮೆಲ್ಲರನ್ನೂ ಧನಂಜಯರಾಯರು ಹಾಲಗೆರೆಯ ಒಡ್ಡಿನ ಮೇಲೆ ಕರೆದೊಯ್ಯಬಹುದೆಂದು ತಿಳಿದಿದ್ದನು. ಆ ಮೇಲೆ ಮೆಲ್ಲಗೆ ಅಂದಿನ ಸುದ್ದಿಗಳನ್ನೂ ಅವರ ಸಂದೇಶವನ್ನೂ ಎಳೆದುಕೊಂಡರಾಯಿತು ಎಂದು ಅವನು ಎಣಿಕೆ ಹಾಕಿದ್ದನು. ಆದರೆ ಅವರು ಹಾಗೆ ಮಾಡದೆ, ಮೆಲ್ಲ ಮೆಲ್ಲನೆ ನಡೆಯುತ್ತ ಒಂದೊಂದಾಗಿ ತಮ್ಮ ವಿಚಾರಗಳನ್ನು ಹೇಳಹತ್ತಿದರು:

"ಮೊತ್ತಮೊದಲು ನಾನು 'ವ್ಯಾಪಾರವೇ ಎಲ್ಲ ಬಗೆಯ ದೇಶ-ಸೇವೆಯಲ್ಲಿ ಹೆಚ್ಚಿನದು' ಎಂದು ತಿಳಿದುಕೊಂಡು, ಬೆಳಗಾಂವಿಯಲ್ಲಿ ಒಂದು ಕಿರಾಣಿ ಅಂಗಡಿಯನ್ನು ಹಾಕಿದೆ. ಅಂಗಡಿಯಲ್ಲಿ ದುಡಿಯಲಿಕ್ಕೆಂದು ನಿಯಮಿಸಿದವನನ್ನು ಮೊದಲುಮಾಡಿಕೊಂಡು, ನನ್ನ ಮನೆಯವರು, ಗುರುತಿನವರು ಎಲ್ಲರೂ ಕೊಬ್ಬರಿ-ಬೆಲ್ಲ, ಪುಠಾಣಿ-ಸಕ್ಕರಿ, ಕೇರುಬೀಜ-ಕಲ್ಲುಸಕ್ಕರೆ, ಬದಾಮಿ-ಗೋಡಂಬಿ ಮೊದಲಾದ ಜಿನಸುಗಳನ್ನು ತಿಂದೇತೀರಿಸಹತ್ತಿದರು. ಸುತ್ತಲಿನ ನಮ್ಮ ನಮ್ಮ ಗಿರಾಕಿಗಳು, ಮಧ್ಯಾಹ್ನದ ಊಟದ ಹೊತ್ತಿಗೆ ಬಂದು ಉದ್ದರಿಯಾಗಿ ಊಟದೆಲೆ ಒಯ್ಯಹತ್ತಿದರು; ಸಂಜೆಗೆ ಸಮೀಪದವರು ಬಂದು ಹಣಕೊಡದೆ ಕಲ್ಲೆಣ್ಣೆ ತೆಗೆದುಕೊಂಡು ಹೋಗುತ್ತಿದ್ದರು. ತಲೆಮಾಡಿಸಿಕೊಂಡು ಬಂದು ಅನೇಕರು ಪುಕ್ಕಟೆಯಾಗಿ ತಲೆಗೆ ಕೊಬ್ಬರಿ ಎಣ್ಣೆಯನ್ನು ಹಚ್ಚಿಕೊಂಡು ಹೋಗಹತ್ತಿದರು. ಹೀಗಾಗಿ ಎಲ್ಲರಿಂದ ಹೊಗಳಿಸಿಕೊಳ್ಳುತ್ತ, ಹೌದೆನಿಸಿಕೊಳ್ಳುತ್ತ, ನಾನು ಮುಂದೆರಡು ತಿಂಗಳಲ್ಲಿ ಆ ಊರನ್ನು ಬಿಡಬೇಕಾಯಿತು." ಇಷ್ಟರಲ್ಲಿಯೇ ಒಬ್ಬನು, ಆ ಗಿಡ್ಡ ಗೃಹಸ್ಥನು ಸುಮ್ಮನೆ ನಿಂತುದನ್ನು ನೋಡಿ "ಯಾಕರಿ ಬರೆದುಕೊಳ್ಳುವುದಿಲ್ಲವೇನು?" ಎಂದು ಕೇಳಿದ. 'ಇಲ್ಲ, ನೀವು ಬರೆದುಕೊಂಡುದನ್ನೇ ನಾನೂ ಒಯ್ಯುತ್ತೇನೆ" ಎಂದು ಅವನು ಉಸಿರಿದ. "ನಮ್ಮ ಕನ್ನಡದಲ್ಲಿ ಲಘುಲಿಪಿಯಿಲ್ಲ ನೋಡಿರಿ.. ಇದ್ದರೆ ನಾನೂ ಈಗ ಬರೆದುಕೊಳ್ಳುತ್ತಿದ್ದೆ" ಎಂದು ಜೋಡಿಸಿದ. ಅದಕ್ಕೆ ಮೊದಲಿನವನು "ಹಾಗಲ್ಲರಿ, ನಮ್ಮಲ್ಲಿ ತೀವ್ರವಾಗಿ ಮಾತನಾಡುವವರೇ ಇಲ್ಲ—ಯಾವುದೇ ರಂಗದಲ್ಲಿ; ಅದಕ್ಕೆಂತಲೇ ಅಂತಹ ಲಿಪಿಯೂ ಹೊರಟಿಲ್ಲ" ಎಂದು ಹೇಳಿದ. ಅಷ್ಟರಲ್ಲಿಯೆ ಧನಂಜಯರು ಮತ್ತೆ ಆರಂಭಮಾಡಿದುದರಿಂದ ಅವರು ತಡೆದರು:

"ಆಮೇಲೆ ನಾನು—ದೇಶಸೇವೆಯ ದಿವ್ಯ ಪ್ರತಿಜ್ಞೆಯನ್ನೆ ಮಾಡಿದ ನಾನು—ಜನರನ್ನು ಜಾಗ್ರತಿಗೊಳಿಸಬೇಕಾದರೆ ಅವರಿಗೆ ಜ್ಞಾನವು ಆವಶ್ಯಕ ಎಂಬುದನ್ನು ಕಂಡುಹಿಡಿದು, ಬೆಂಗಳೂರಲ್ಲಿ ಒಂದು ಪುಸ್ತಕಾಲಯವನ್ನು ತೆರೆದೆ. ಸುದೈವದಿಂದ ವರ್ಷದ ಒಂದೆರಡು ತಿಂಗಳಲ್ಲಿ ಹತ್ತಿಪ್ಪತ್ತು ರೂಪಾಯಿಯ ವ್ಯಾಪಾರವಾಗುತ್ತಿತ್ತು. ಆದರೆ ಕ್ರಮೇಣ, ಅಲ್ಲಿಗೆ ಪ್ರತಿದಿನ ಪತ್ರಿಕೆಗಳನ್ನೋದಲೆಂದು ಬಂದು ರಾಜಕಾರಣದ ಚರ್ಚೆಯನ್ನು ಮಾಡಿ ಹೋಗುವ ಜನರೇ ಹೆಚ್ಚಾದರು. ಹೊಸ ಪುಸ್ತಕಗಳನ್ನು ತರಿಸಿದಾಗ ಅದನ್ನು ವಿಮರ್ಶಿಸಲೆಂದು ಓದಲು ಒಯ್ದ ಪುಸ್ತಕಗಳು ಮರಳಿಬಾರದಂತಾದುವು. ಶಾಲೆ-ಕಾಲೇಜುಗಳಲ್ಲಿ ಹಚ್ಚಿದ ಪುಸ್ತಕಗಳನ್ನು ಎರವಲಾಗಿ ಕೆಲದಿನ ಹಾಗೆಯೆ ಒಯ್ಯುವ ಜನರ ಅಂಕಿ ದೊಡ್ಡದಾಯಿತು. ಇತ್ತ ಮಾಸಿಕ, ಪಾಕ್ಷಿಕಗಳಂತೂ ಅಂಗಡಿಗೆ ಬರುವ ಮುಂಚಿತವಾಗಿಯೆ ಮಾಯವಾಗುತ್ತಿದ್ದುವು. 'ಹೇಗಾದರೂ ಜನರಲ್ಲಿ ಜ್ಞಾನಪ್ರಸಾರವಾಗಲಿ' ಎಂದು ಸುಮ್ಮನಿದ್ದೆ. ನಾನು ಸುಮ್ಮನೆ ಅಲ್ಲಿಂದ ಹೊರಡಬೇಕಾಯಿತು." ಹೀಗೆ

ಹೇಳುತ್ತ ಹೊರಟಾಗ ಒಬ್ಬ ಹಾವುಡದ ಲೆಕ್ಕಣಿಗನು ಮೆಲ್ಲಗೆ ಹಿಂದುಳಿದ. ಅದಕ್ಕೆ ಇನ್ನೊಬ್ಬ ಟೊಪ್ಪಿಗೆಯವನು "ಯಾಕರೀ ಹೊರಟಿರಿ?" ಎಂದ. "ಯಾಕಿಲ್ಲ ಇದೊಂದು ಪುಸ್ತಕ ತಂದಿದ್ದೆ ಆ ಬುಕ್‌ಡಿಪ್ಪೋದಿಂದ ಓದಲಿಕ್ಕೆ! .. ಅದನ್ನ ಕೊಟ್ಟು ಬರತೇನಿ" ಎನ್ನುತ್ತ ಮೆಲ್ಲಗೆ ಸರಿದನು. ಅಲ್ಲಿಂದ ಕೂಡಲೆ ಆ ಟೊಪ್ಪಿಗೆಯವನು ಮತ್ತೆ ಧನಂಜಯರಾಯರ ನುಡಿಗಳನ್ನು ಬರೆದುಕೊಳ್ಳಹತ್ತಿದನು:

"ಇಷ್ಟರಿಂದಲೇ ನಾನು ಎದೆಗುಂದದೆ, ಮುಂದೆ ಸ್ವದೇಶಿಯ ವ್ರತವನ್ನು ಧಾರಣಮಾಡಿ, ಕಾರವಾರದಲ್ಲಿ ಒಂದು ಕಬ್ಬಿಣದ ವಖಾರ, ಸೊಲ್ಲಾಪುರದಲ್ಲಿ ಒಂದು ಬಳೆಯ ಮಳಿಗೆ, ಬಳ್ಳಾರಿಯಲ್ಲಿ ಒಂದು ಬೇಳೆಯ ಅಂಗಡಿ ತೆಗೆದು, ಕೊನೆಗೆ ಮೊನ್ನೆ-ಮೊನ್ನೆ ಮಂಗಳೂರಿನಲ್ಲಿ ಒಂದು ವಸ್ತ್ರ-ಭಾಂಡಾರವನ್ನೂ, ಇದೇ ಊರಲ್ಲಿ ಬೇರೆ ಹೆಸರಿಟ್ಟುಕೊಂಡು ಒಂದು ಸ್ಟೇಶನರಿ ಶಾಪನ್ನೂ ತೆಗೆದು, ದೇಶಸೇವೆಯನ್ನು ಮಾಡಿದೆನು. ಆದರೆ ಕೊನೆಯ ಎರಡು ಬಗೆಯ ಅಂಗಡಿಗಳಲ್ಲಿ ನಾನು ಪಡೆದ ಅನುಭವದ ಮೇಲಿಂದ, ನಾನು ಇಂದು ಈ ಬಗೆಯ ಅಭಿಪ್ರಾಯದವನಾಗಿದ್ದೇನೆ: ಅವುಗಳಲ್ಲಿ ಹಿಂಡು ಹಿಂಡು ತರುಣರು ಬಂದು ಕುಳಿತು, ಯಾವ ಬಗೆಯ ನಿಶ್ಚಿತವಾದ ರಾಜಕೀಯ ಧೋರಣೆಯೂ ಇಲ್ಲದೆ, ತಾನುತಾನು ಹರಟೆಹೊಡೆಯುವ ಬಗೆಯನ್ನು ನೋಡಿ ಬೆಂದು, ರಾಜಕೀಯ ರಂಗದಲ್ಲಿ ಯುಂತೆ ವ್ಯಕ್ತಿಗಳನ್ನು ಪೂರ್ಣವಾಗಿ ಮುಳುಗಿಸಿ ಬಿಡದೆ 'ಇಂದು ಕೊಡುವೆ ನಾಳೆ ಕೊಡುವೆ' ಎಂದು 'ತೇಲು-ಮುಳುಗು' ಎನ್ನುತ್ತ ಹಾಗೆಯೆ ಸರಕು ಒಯ್ಯುವವರನ್ನು ನೋಡಿ ಕರಗಿ, ಕೊನೆಗೆ ಜರ್ಜೆಮಾಡಲು ಯಾವ ಅಂಗಡಿಗಳೂ ಸಾಲದೆ ಕೂಟು-ಕೂಟುಗಳಿಗೆ ಜನರು ಬಂದು ನಿಲ್ಲುವುದನ್ನು ನಿರೀಕ್ಷಿಸಿ ಹೌಹಾರಿ, ನಾನು ಇಂದು ಈ ಬಗೆಯ ಸಂದೇಶವನ್ನು ಕೊಡುತ್ತಿರುವೆ" ಎನ್ನುತ್ತ ಧನಂಜಯರಾಯರು ತಮ್ಮ ಬಿಳಿಯ ಟೊಪ್ಪಿಗೆಯನ್ನು ಸರಿಮಾಡಿಕೊಳ್ಳುತ್ತ, ಗಂಟಲನ್ನು ಹಸನು ಮಾಡಿಕೊಂಡು, ನಾಲಗೆಯನ್ನು ಬಾಯಿಯೊಳಗೆಯೆ ಹದನುಮಾಡಿಕೊಂಡರು. ಅಷ್ಟರಲ್ಲಿ ಅವರೆಲ್ಲರೂ ಟಾವರ್‌ಕ್ಲಾಕಿನ ಬಳಿಯಲ್ಲಿ ಬಂದು, ಮೆಲ್ಲನೆ ಮೋಟಾರ್‌ಸ್ಟ್ಯಾಂಡಿನ ಕಡೆಗೆ ನಡೆದಿದ್ದರು. ಆಗ ಆ ಗಿಡ್ಡ ಲೆಕ್ಕಣಿಗನು ತನ್ನ ಬಳಿಯಲ್ಲಿದ್ದ ಉದ್ದಂಗಿಯವನೊಂದಿಗೆ ಹೇಳಿದನು:

"ಅಲ್ಲರೀ, ಇವರು ಹೇಳುವ ರೀತಿಯ ಜನರು ಇವರಿಗಷ್ಟೆ ಗಂಟುಬಿದ್ದಿಲ್ಲ-ನಮ್ಮೂರಲ್ಲಿ ಕೂಡ ತುಂಬಾ ಬೆಳೆದಿದ್ದಾರೆ" ಎಂದು ಉಸಿರಿದ. ಅದಕ್ಕೆ ಅಲ್ಲಿಂದಲೇ ಕಿವಿಗೊಟ್ಟ ಪಾವುಡದವನು "ತಮ್ಮೂರು ಯಾವುದಾಯ್ತು?" ಎಂದು ಕೇಳಿದ. "ಅವರದು ಹುಬ್ಬಳ್ಳಿ" ಎನ್ನುತ್ತ ಟೊಪ್ಪಿಗೆಯವನು ಮುಂದೆ "ಆದರೆ ಇದು ಎಲ್ಲಕಡೆಯಲ್ಲಿ ಇದ್ದರೂ, ಅದಕ್ಕೆ ಧನಂಜಯರಾಯರು ಏನು ಹೇಳುತ್ತಾರೆ ಅದನ್ನಾದರೂ ಕೇಳುವಿರೊ ಇಲ್ಲವೊ?" ಎಂದು ಗದ್ದರಿಸಿದ. ಆಗ ಎಲ್ಲರೂ ತಮ್ಮ ಕಾಗದಗಳನ್ನು ಸರಿಪಡಿಸಿ, ಕಿವಿಗಳಂತೆ, ಲೆಕ್ಕಣಿಕೆಗಳನ್ನೂ ಜಾಗ್ರತಗೊಳಿಸಿ ಸಜ್ಜಾದರು. ಧನಂಜಯರಾಯರು ಹೇಳತೊಡಗಿದರು:

"ಇಂತಹ ಪರಿಸ್ಥಿತಿಯಲ್ಲಿ ಯಾವ ಕನ್ನಡಿಗನೂ ವ್ಯಾಪಾರ, ಉದ್ಯೋಗ, ಉದ್ಯಮ-ದಂದುಗ, ಬೇಸಾಯ, ಕಾಯಕಗಳ ಗೊಡವೆಗೆ ಹೋಗದೆ, ಮೊದಲು ತಮ್ಮದೇ ಆದ, ಕನ್ನಡಿಗರ ವೈಶಿಷ್ಟ್ಯವು ಮೈಗೊಂಡ ಒಂದು ರಾಜಕೀಯ ಮತವನ್ನು ಮಾಡಿಕೊಳ್ಳಬೇಕು; ಅದಕ್ಕೆಂದರೆ ನಮ್ಮಲ್ಲಿ ಮಾತನಾಡುವ ಚಟವು ಇನ್ನೂ ಬೆಳೆಯಬೇಕು. ಅದಕ್ಕಾಗಿ ಎಲ್ಲರೂ, ಯಾವುದೇ ಆಗಲಿ ಒಂದು ಪಕ್ಷವನ್ನು ಸೇರಿ, ಕೊನೆಗೆ ತಮ್ಮದೇ ಆದ ಒಂದು ಸ್ವತಂತ್ರಪಕ್ಷವನ್ನು ಮಾಡಿಕೊಂಡು, ರಾಜಕಾರಣಪಟುಗಳಾಗಬೇಕು. ಇದು ಪ್ರತಿಯೊಬ್ಬ ಕನ್ನಡಿಗನು ಕಡ್ಡಾಯವಾಗಿ ಮಾಡತಕ್ಕ ಕರ್ತವ್ಯ: ಕಾಂಗ್ರೆಸ್, ಮುಸ್ಲೀಮ್‌ಲೀಗ್, ಹಿಂದೂಮಹಾಸಭೆ,

(೧೪೦ನೆಯ ಪುಟ ನೋಡಿರಿ)

ಸರಸ್ವತೀ ಸಂಘ ಗೋಕಾಕ

ಕನ್ನಡ ಸಂಸ್ಕೃತಿಯ ಸಂರಕ್ಷಣೆ ಸಂವರ್ಧನೆಗಳ ದೃಷ್ಟಿಯಿಂದ ಗೋಕಾಂವಿಯ ನಾಡಿನಲ್ಲಿ ಕಾರ್ಯಪ್ರಾರಂಭಿಸಿದ ಈ ಸಂಸ್ಥೆ, ಅಲ್ಲಿಯ ವಿದ್ಯಾರ್ಥಿಗಳಲ್ಲಿ ಕನ್ನಡನುಡಿಯ ಪ್ರೀತಿಯನ್ನೂ ಕನ್ನಡ ಸಾಹಿತ್ಯದ ಬಗೆಗೆ ಆಸಕ್ತಿಯನ್ನೂ ಉಂಟುಮಾಡುತ್ತಲಿದೆ. ಕಳೆದ ಜೂನ್ ೨೩ನೆಯ ತಾರೀಖಿನ ದಿನ ಈ ಸಂಸ್ಥೆಯ ೩ನೆಯ ವಾರ್ಷಿಕೋತ್ಸವ ಸಮಾರಂಭ ಜರುಗಿತು.
ಆಗ ಜಯಂತಿಯ ಸಂಪಾದಕರಾದ
ಶ್ರೀ. ಬೆಟಗೇರಿ ಕೃಷ್ಣಶರ್ಮರು ಮುಖ್ಯ ಅತಿಥಿಗಳಾಗಿದ್ದರು.

ನಾಝೀ ಜೀವನ

ಪ್ರೊ. ಎನ್. ಎಮ್. ಕುಲಕರ್ಣಿ ಎಂ.ಎ.

ನಾಝೀ ಜರ್ಮನರಿಗೆ ರಾಜಕಾರ್ಯದಲ್ಲಿ ಕಿಂಚಿತ್ತಾದರೂ ಆಸಕ್ತಿಯಿಲ್ಲವಂತೆ. ಅವರಿಗೆ ಬೇಕಾದುದು ಸಾಮಾಜಿಕ ಜೀವನದ ಸೊಗಸಂತೆ. ಅದನ್ನು ಸಂಪಾದಿಸುವುದಕ್ಕಾಗಿಯೆ ಅವರು ತಮ್ಮ ವೇಳೆಯನ್ನು ವೆಚ್ಚಮಾಡುವರಂತೆ. ಆದರೆ ಇಂತಹರು ಇಂದಿನ ಈ ಪಾಶವ ಕ್ರೌರ್ಯವೃತ್ತಿಯನ್ನು ತಳೆದು ಯುದ್ಧಕ್ಕೆ ಸಿದ್ಧರಾದುದರ ಕಾರಣವನ್ನೇನು ಕಲ್ಪಿಸಬೇಕು? ಸಾಮ್ರಾಜ್ಯಲಾಲಸೆಯ ಭೂತಬಾಧೆಯೆಂದೇ ಅಲ್ಲವೆ?

(೪)

— ಬಾಳಿನ ಕೆಲವು ಚಿತ್ರಗಳು —

ನಾಝೀ ಜೀವನದ ಕೆಲವೊಂದು ದೈನಂದಿನದ ಚಿತ್ರಗಳನ್ನು ಹಿಂದಿನ ಲೇಖನದಲ್ಲಿ ಕೊಟ್ಟದ್ದಾಗಿದೆ. ಪ್ರಸ್ತುತ ಆದೇ ಜೀವನದ—ಬಹುಜನರು ಕಾಣದ—ಕೆಲವು ರಹಸ್ಯಗಳನ್ನು ಅರುಹಬೇಕೆಂದಿದ್ದೇನೆ. ಸದ್ಯದ ನಾಝೀಜನರು ಒಂದುರೀತಿಯಲ್ಲಿ ಮಾತ್ರ ಎಲ್ಲರಿಗೂ ಮಾದರಿಯವರಾಗಿದ್ದಾರೆ. ಅದೇನೆಂದರೆ: ಅವರಿಗೆ ರಾಜಕಾರಣ ವಿಷಯದಲ್ಲಿ ನಂಬಿಗೆಯಿಲ್ಲ. ನೂರಕ್ಕೆ ೯೮ ರಂತೆ ಜರ್ಮನರು ತಮ್ಮ ನಿತ್ಯದ ಕಾರ್ಯಗಳಲ್ಲಿ ತೊಡಗಿರುವರು. ಅವರಿಗೆ ಹಿಟ್ಲರನು ಸರ್ವಾಧಿಕಾರಿಯಾದರೂ ಸರಿಯೆ, ಹಿಮ್ಲರನು ಸರ್ವಾಧಿಕಾರಿಯಾದರೂ ಸರಿಯೆ. ಅವರಿಗೆ ಬೇಕಾದುದು ದುಡಿತ. ಅದಾದ ಬಳಿಕ ವಿಶ್ರಾಂತಿ. ಈ ವಿಶ್ರಾಂತಿಯಲ್ಲಿಯೆ ಜರ್ಮನರು ತಮ್ಮ ಸಾಂಸ್ಕೃತಿಕ ಜೀವನವನ್ನು ಬೆಳೆಯಿಸುವರು. ಮುಖ್ಯವಾಗಿ ಜರ್ಮನರಿಗೆ ಸಂಗೀತದಲ್ಲಿ ಹೆಚ್ಚು ಆದರ, ಪ್ರೀತಿ. ಜಗತ್ಪ್ರಸಿದ್ಧವಾದ ಪಾಶ್ಚಾತ್ಯ ಸಂಗೀತವಿದ್ವಾಂಸರೆಲ್ಲ ಜರ್ಮನಿಯಿಂದಲೇ ಬಂದವರು. ತೀರ ಬಡವನಾದರೂ ಪ್ರತಿಯೊಬ್ಬ ಜರ್ಮನನು ಈ ವಿದ್ಯೆಯಲ್ಲಿ ತುಂಬ ಆಸಕ್ತಿಯುಳ್ಳವನಾಗಿರುತ್ತಾನೆ. ಸಂಗೀತದ ನಂತರ ಜರ್ಮನರ ಆಸಕ್ತಿ ಪ್ರಕೃತಿಸೌಂದರ್ಯ ನಿರೀಕ್ಷಣೆಯಲ್ಲಿ. ಪ್ರತಿಯೊಂದು ಪಟ್ಟಣದಲ್ಲಿಯೂ ಅಲ್ಲಲ್ಲಿಗೆ ಹಸುರಿನಿಂದೊಪ್ಪುವ ಹುಲ್ಲುಗಾವಲುಗಳೂ ಅದರ ಮಧ್ಯೆ ಹೂವಿನ ಗಿಡಗಳೂ ಕಂಡುಬರುತ್ತವೆಂದು ಪ್ರವಾಸಿಕರು ಹೇಳುತ್ತಾರೆ. ಈ ಪ್ರಕೃತಿಸೌಂದರ್ಯಾಭಿರುಚಿಯು ನಾಝೀಜೀವನದಲ್ಲಿ ಇನ್ನೂ ಹೆಚ್ಚಾಗಿ ಬೆಳೆದಿದೆ. ಸ್ವತಃ ಹಿಟ್ಲರನೇ ಇದಕ್ಕೆಲ್ಲ ಕಾರಣ. ಅಲ್ಲದೆ ಪ್ರತಿಯೊಬ್ಬ ಜರ್ಮನನು ತನ್ನ ಚಿಕ್ಕ ಹೂದೋಟದಲ್ಲಿ ತನ್ನ ಕೈಯಿಂದಲೆ ಕೆಲಸಮಾಡುವನು. ಯಾರಾದರೂ ಪರಸ್ಥಳದವರು ಆ ಕಾಲಕ್ಕೆ ಅವನನ್ನು ಸಂದರ್ಶಿಸಿದರೆ, ಅವನು ಯಾವನಾದರೂ ಒರ್ವ ಜರ್ಮನ್ ಕವಿಯ ಯಾವುದಾದರೊಂದು ಕವಿತೆಯಿಂದ ಅವನನ್ನು ಇದಿರುಗೊಳ್ಳುವುದು ರೂಢಿಯಾಗಿ ಬಿಟ್ಟಿದೆ. ಇಂತಹ ಸ್ವಾಭಾವಿಕ ಮತ್ತು ಅಕೃತ್ರಿಮ ರೀತಿಯ ಜರ್ಮನರ ಜೀವನವು, ಇಂದು ಕೆಲವೊಂದು ಕಾರಣಗಳಿಂದ ಪರರಿಗೆ ವಿಪರೀತವಾಗಿ ಕಾಣಿಸಿಕೊಂಡಿದೆ. ಆ ಕಾರಣಗಳಲ್ಲಿ ಮುಖ್ಯವಾದುದೆಂದರೆ ಪರಸ್ಥಳದವರ ಅಜ್ಞಾನ ಮತ್ತು ಒಂದುಬಗೆಯ ಅವ್ಯಕ್ತವಾದ ಅಸೂಯೆ.

ನಾಝೀ ಜೀವನದಲ್ಲಿ ರಾಜಕಾರಣಾಸಕ್ತಿ ಇಲ್ಲವೆಂದು ಹೇಳಿದೆಯಷ್ಟೆ? ಆದರೆ ಕೆಲವು ವಿಮರ್ಶಕರು ಈ ಆಸಕ್ತಿಯ ಅಭಾವದ ಸಲುವಾಗಿ ಹೀಗೆ ಅಭಿಪ್ರಾಯಪಡುತ್ತಾರೆ: 'ಸದ್ಯ ಸಾಗುತ್ತಿರುವ ಹಿಟ್ಲರನ ಆಡಳಿತದಲ್ಲಿ ರಾಜಕಾರಣದ ವಿಷಯವಾಗಿ ಮಾತನಾಡಲು ಅವಕಾಶವಿಲ್ಲ, ಉತ್ತೇಜನವಿಲ್ಲ' ಎಂದು. ಎಂದರೆ ಹಿಟ್ಲರನ ಗುಪ್ತಪೋಲೀಸರ ಭಯದಿಂದಲೆ ಇಂದಿನ ನಾಝಿಗಳು ತಮ್ಮ ರಾಜಕಾರಣಾಸಕ್ತಿಯನ್ನು ತೋರಿಸಲು ಹಿಂದುಮುಂದು ನೋಡುವುದು ಎಂದಿವರ ಅಭಿಪ್ರಾಯ. ಇದಕ್ಕೆ ಉದಾಹರಣೆಯಾಗಿ ಒಬ್ಬ ಅಮೇರಿಕನ್ ಮಹಿಳೆಯು ತನ್ನ ಪ್ರವಾಸ ವೃತ್ತಾಂತದಲ್ಲಿ ಒಂದು ಸಂಗತಿಯನ್ನು ವಿಸ್ತರಿಸಿದ್ದಾಳೆ: ಅವಳು ಒಂದು ಜರ್ಮನ್ ಹೋಟಲಿನಲ್ಲಿ ಹೋದಾಗ, ಅಲ್ಲಿಯ ಮಾಲೀಕನು ತನ್ನ ಕೋಣೆಯ ಬಾಗಿಲು ಮತ್ತು ಕಿಟಕಿಗಳ ಸಂದುಗಳಿಗೆಲ್ಲ ತಲೆದಿಂಬುಗಳನ್ನು ಇಟ್ಟು, ಟೆಲಿಫೋನ್ ತಂತಿಯನ್ನು ಹರಿದು, ಯಾವುದೋ ಒಂದು ಅತಿ ಗುಪ್ತವಾದ ರಹಸ್ಯಕರ್ಮಮಾಡುವವನಂತೆ ಮಾತನಾಡುತ್ತಿದ್ದನಂತೆ. ಅದು ಇವಳಿಗೆ ತುಂಬ ಆಶ್ಚರ್ಯವೆನಿಸಿತಂತೆ. ಅನಂತರ ಅದರ ಇಂಗಿತವೇನೆಂದು ಕೇಳಿದಾಗ ಆ ಮಾಲೀಕನು ಹೇಳಿದ್ದೇನೆಂದರೆ: ತಾನು ಹಿಂದಿನ ದಿನ ಹಿಟ್ಲರನು ಮಾಡಿದ ಭಾಷಣದ ಮೇಲೆ ಅಭಿಪ್ರಾಯ ಕೊಡುವುದಿತ್ತಂತೆ; ಅದಕ್ಕಾಗಿ ಅವನು ಅಷ್ಟು ಹೆದರಿ, ಸೂಕ್ಷ್ಮರೀತಿಯಿಂದ ಅಷ್ಟೊಂದು ಬಂದೋಬಸ್ತು ಮಾಡಿಕೊಂಡು, ತನ್ನ ಅಭಿಪ್ರಾಯ ಕೊಡುತ್ತಿದ್ದನಂತೆ. ಇಂತಹ ವರ್ಣನೆಗಳಲ್ಲಿ ಅತಿರೇಕವು ತುಂಬಿದೆಯೆಂಬುದು ಮೇಲೆಯೆ ತೋರಿಬರುತ್ತದೆ. ಒಂದು ವೇಳೆ ಅದು ನಿಜವಿದ್ದರೂ ಅದರ ಕಾರಣವು ಸದ್ಯದ ಹಿಟ್ಲರನ ಸೂಕ್ಷ್ಮವಾದ ಅಧಿಕಾರಸ್ಥಾನವೇ ಎಂದು ಹೇಳಬಹುದು. ತನ್ನ ಆಡಳಿತವು ಹೊಸದಿದ್ದು ಅದನ್ನು ಫಲದಾಯಿಯಾಗಿ ಕೊನೆಗಾಣಿಸಲಿಕ್ಕೆ ಒಂದುಬಗೆಯ ಗೌಪ್ಯವನ್ನೂ ಒಕ್ಕಟ್ಟನ್ನೂ ಆತನಿಗೆ

ಂದುಕೊಳ್ಳಬೇಕಾಗಿದೆಯಷ್ಟೇ! ಅದೇ ಕಾರಣದಿಂದ ಅವನು ತನ್ನ ಗುಪ್ತಪೋಲೀಸರಿಗೆ ಅಷ್ಟೊಂದು ಜಾಗೃತರಾಗಿರಲು ಅಪ್ಪಣೆಮಾಡಿರಬಹುದು. ಇದರ ಹೊರತು ಇಂದಿನ ನಾಝೀ ಜರ್ಮನರಿಗೆ ನಿಜವಾಗಿಯೂ ರಾಜಕಾರಣದಲ್ಲಿ ಕಿಂಚಿತ್ತಾದರೂ ಆಸಕ್ತಿಯಿಲ್ಲ. ಅವರಿಗೆ ಬೇಕಾದುದು ಸಾಮಾಜಿಕ ಜೀವನದ ಸೊಗಸು. ಅದನ್ನು ಸಂಪಾದಿಸುವುದಕ್ಕಾಗಿಯೇ ಅವರು ತಮ್ಮ ವೇಳೆಯನ್ನೆಲ್ಲ ವೆಚ್ಚಮಾಡುವರು.

ಇಂತಹ ಮಾದರಿಯು ನಮ್ಮಲ್ಲಿ ಇಂದು ಬೇಕಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಒಂದು ರೀತಿಯಲ್ಲಿ ಇಂದಿನ ಭಾರತೀಯರ ಸಮಸ್ಯೆಯೂ, ನಾಝೀ ಜರ್ಮನರ ಸಮಸ್ಯೆಯೂ ಒಂದೇಬಗೆಯದಾಗಿರುವುದೆಂದು ಹೇಳಬಹುದು. ತಮಗೆ ತೀರ ಅಪರಿಚಿತವಾದ—ಹೊಸಬಗೆಯ—ರಾಜಕಾರ್ಯದಲ್ಲಿ ನುರಿತ ಪಾಶ್ಚಾತ್ಯರೊಡನೆ ಭಾರತೀಯರು ಇಂದು ಹೋರಾಡಹತ್ತಿದ್ದಾರೆ. ಅನೇಕ ಶತಮಾನಗಳಿಂದಲೂ ರಾಜಕಾರಣಪಟುಗಳೆಂದು ಎನಿಸಿಕೊಂಡ— ನಮ್ಮನ್ನಾಳುವ— ಜನರನ್ನು ನಾವು ಆ ರೀತಿಯಲ್ಲಿ ಸರಿಗಟ್ಟುವುದು ಶಕ್ಯವಿಲ್ಲ; ಸೋಲಿಸಲಿಕ್ಕಂತೂ ಬರುವಂತೆಯೆ ಇಲ್ಲ. ಕಾರಣ ನಾವಾದರೂ ಹೆಚ್ಚಾಗಿ ನಮ್ಮ ಕಾರ್ಯನಿರ್ವಾಹಕಶಕ್ತಿಯನ್ನು ರಾಜಕಾರಣದ ಗೊಂದಲದಿಂದ ಬಿಡಿಸಿ, ವಿಶೇಷವಾಗಿ ಸಾಮಾಜಿಕಸುಧಾರಣೆಯಲ್ಲಿ ಉಪಯೋಗಿಸಹತ್ತಿದರೆ ಅದರಿಂದ ನಮಗೆ ಹೆಚ್ಚಿನ ಫಲವು ಸಿಕ್ಕುವುದು. ಏನೇ ಇರಲಿ, ಇಂದಿನ ನಾಝೀ ಜರ್ಮನರು ಮಾತ್ರ ತಮ್ಮ ದಿನಚರ್ಯದ ಕಾರ್ಯಗಳನ್ನು ಈ ದೃಷ್ಟಿಯಿಂದಲೇ ಕಾಣುತ್ತಿರುವರು.

ಮೇಲೆ ಹೇಳಿದ ರೀತಿಯ ಜೀವನವು, ಜರ್ಮನಿಯ ಮಿಕ್ಕೆಲ್ಲ ಪ್ರಾಂತಗಳಿಗಿಂತ ರ್‍ಹಾಯಿನ್ ಪ್ರಾಂತದಲ್ಲಿ ವಿಶೇಷವಾಗಿ ಕಂಡುಬರುತ್ತದೆ. ರ್‍ಹಾಯಿನ್ ಪ್ರದೇಶವು ಎಲ್ಲರಿಗೂ ಗೊತ್ತಿದ್ದಂತೆ ಜರ್ಮನಿಯ ಔದ್ಯೋಗಿಕ ಕೇಂದ್ರವಷ್ಟೇ? ಆದರೆ ಇಲ್ಲಿರುವ ಜನರ ರಕ್ತದಲ್ಲಿ ಕೇವಲ ಸುರಾದೇವಿಯ ಪ್ರವಾಹವಿದೆಯೆಂದೂ, ಅವರು ತಮ್ಮ ನಿತ್ಯದ ಕಾರ್ಯಗಳಲ್ಲಿ ಮಾತ್ರ ಪ್ರವೃತ್ತರಾಗಿರುವರೆಂದೂ ಹೇಳುತ್ತಾರೆ. ಕವಿಯ ಕಲ್ಪನೆಯುಳ್ಳ ಒಬ್ಬ ಪ್ರವಾಸಿಕನು ಈ ಜನರ ವಿಷಯವಾಗಿ ಹೇಳುವುದೆಂದರೆ: "ರ್‍ಹಾಯಿನ್ ಪ್ರದೇಶದ ಜನರಿಗೆ ಬೆಳುದಿಂಗಳೊಂದನ್ನು ಕೊಟ್ಟುಬಿಟ್ಟರೆ ಅವರು ಇನ್ನೇನನ್ನೂ ಬೇಡಲಾರರು; ಯಾವನು ಅರಸನಾದರೇನು? ಅವರಿಗೆ ಸಂಗೀತ, ಸುರೆ, ಬೆಳುದಿಂಗಳು ಇಷ್ಟಿದ್ದರೆ ತೀರಿತು!" ಇಂತಹ ಅಕೃತ್ರಿಮ ಸ್ವಭಾವವುಳ್ಳ ಜರ್ಮನರನ್ನು ಸತ್ಪಥದಲ್ಲಿರಿಸುವುದೆಂದರೆ ಕಷ್ಟವಿಲ್ಲ. ಅವರು ಸ್ವಾಭಾವಿಕವಾಗಿಯೇ ಶಾಂತಿಪ್ರಿಯರು. ಆದರೆ ಶಾಂತಿಗೂ ಮೇರೆಯುಂಟು. ಜೀವದ ಮೇಲೆ ಪ್ರಸಂಗ ಬಂದಾಗ ಸಾಮಾನ್ಯ ಪ್ರಾಣಿಗಳು ಕೂಡ ತಮ್ಮ ಮಕ್ಕಳು-ಮರಿಗಳನ್ನು ಆಹುತಿಕೊಡುತ್ತವೆಂದು ಜಾಣನಾದ ಬೀರಬಲ್ಲನು ಅಕಬರನಿಗೆ ತೋರಿಸಿಕೊಟ್ಟ ಉದಾಹರಣೆ ನಮಗೆಲ್ಲ ತಿಳಿದಿದೆಯಷ್ಟೇ. ಅಂತೆಯೇ ಸದ್ಯದ ಜರ್ಮನಿಯ ಯುದ್ಧಪ್ರಿಯತೆಯು ಕೇವಲ ಕ್ಷಣಿಕವಾದದ್ದು. ಎಷ್ಟೇ ಕಷ್ಟಬಂದರೂ ಕಣ್ಮುಚ್ಚಿ ಕುಳಿತು 'ಅಹಿಂಸಾ ಪರಮೋ ಧರ್ಮಃ' ಎಂದು ಹೇಳುವಷ್ಟು ಆಧ್ಯಾತ್ಮಿಕ ತಾಳ್ಮೆ ಜರ್ಮನರಿಗಿನ್ನೂ ಬಂದಿಲ್ಲ.

ತಮ್ಮ ಸರ್ವಾಧಿಕಾರಿಯಾದ ಹಿಟ್ಲರನ ವಿಷಯದಲ್ಲಿ ಇಂದಿನ ನಾಝೀಜರ್ಮನರಿಗೆ ಒಂದುಬಗೆಯ ಅದ್ವಿತೀಯ ವಿಶ್ವಾಸವೂ, ಪ್ರೀತಿಯೂ ಇರುವುದು. ಇದು ಅವರ ಪ್ರತಿಯೊಂದು ಕಾರ್ಯದಲ್ಲಿಯೂ ಕಂಡುಬರುವುದು. ಹಿಟ್ಲರನು ಯಾವ ಕಾರ್ಯಕ್ಕೆ ಮೊದಲುಮಾಡಿದರೂ ಅದು ಯಶಸ್ವಿಯಾಗಲಿಕ್ಕೆ ಇದೇ ಕಾರಣ. ಎಂದರೆ ಅವನ ವಿಷಯಕ್ಕೆ ಭಿನ್ನಾಭಿಪ್ರಾಯವುಳ್ಳವರಿಲ್ಲವೆಂದಲ್ಲ; ಆ ತರದ ಮತದವರೂ ಇದ್ದಾರೆ. ಆದರೆ ಆ ಬಗೆಯ ಸ್ವವಿಮರ್ಶಕ ಬುದ್ಧಿಯು ಕೇವಲ ವಿಚಾರಜೀವಿಗಳಲ್ಲಿ ಮಾತ್ರವಿದೆ. ಅಂತೆಯೇ ಹಿಟ್ಲರನು ತಾನು ಯಾವುದಾದರೊಂದು ಪರಂಪರಾವಿರುದ್ಧವಾದ ಕಾರ್ಯವನ್ನು ಜರ್ಮನಿಯಲ್ಲಿ ತರಲು ಯತ್ನಿಸುವ ಪೂರ್ವದಲ್ಲಿ, ಮೊದಲು ಈ ವಿಚಾರಜೀವಿಗಳ ಬಾಯನ್ನು ಕಟ್ಟಿಬಿಡುತ್ತಾನೆ. ನಮಗೆ ಕೇಳಬರುವ ಗುಪ್ತಪೋಲೀಸ ಬಂಧನ ಮತ್ತೂ ತುರಂಗವಾಸ ವೃತ್ತಾಂತಗಳೆಲ್ಲ ಬಹುಶಃ ಇಂತಹ ಜನರವೇ ಇರುತ್ತವೆ. ಉದಾಹರಣೆಗಾಗಿ ಎಂದರೆ: ೧೯೩೫ನೆಯ ಮಾರ್ಚ್ ತಿಂಗಳಲ್ಲಿ ಹಿಟ್ಲರನು ಜರ್ಮನಿಯಲ್ಲಿ ಬಲವಂತದ ಮಿಲಿಟರಿ ಅಭ್ಯಾಸಕ್ರಮವನ್ನು ಪ್ರಚಾರದಲ್ಲಿ ತಂದಾಗ, ದೇಶವೆಲ್ಲವೂ ಏಕಮುಖವಾಗಿ ಅದನ್ನು ಬರಮಾಡಿಕೊಂಡಿತು. ಆದರೂ ಆಗ ಕೆಲವು ಜನ ಜರ್ಮನರು ಭಿನ್ನಾಭಿಪ್ರಾಯದವರಿರದೆ ಇರಲಿಲ್ಲ; ಇಂತಹ ಕಾರ್ಯಕ್ರಮದಿಂದ ನಿರುದ್ಯೋಗಸಮಸ್ಯೆಯೊಂದು ಮಾಯವಾಗುವುದೆಂದು ಕೆಲವರ ಗೃಹಿಕೆಯಿತ್ತು. ಹಿಟ್ಲರನ ಕಾರ್ಯವಿಧಾಯಕ ನಿಯಮಗಳ ವಿಮರ್ಶೆನಡೆದಾಗ—ಹಿಟ್ಲರನು ಮಾಡುವುದೆಲ್ಲ ಜರ್ಮನಿಯ ಕ್ಷೇಮದಸಲುವಾಗಿ ಎಂತಲೂ ಮತ್ತು ಅಲ್ಲಿ ಇಲ್ಲಿ ನಡೆಯುವ ಕೆಲವೊಂದು ಅನ್ಯಾಯಗಳು ಅವನ ಪರೋಕ್ಷದಲ್ಲಿ ಮಾತ್ರ ನಡೆಯುವುವೆಂತಲೂ ಅವನಿಗೆ ಈ ಅನ್ಯಾಯಗಳು ತಿಳಿದ ಕೂಡಲೆ ಅವುಗಳನ್ನು ನಿಲ್ಲಿಸಿಬಿಡುವನೆಂತಲೂ ಹಲವರು ಹೇಳುತ್ತಾರೆ. ಮುಖ್ಯವಾಗಿ ಎಂತಹ ಕಠಿನ ಕಾರ್ಯಕ್ರಮವನ್ನು ಹಿಟ್ಲರನು ಜರ್ಮನರಿಗೆ ಹಚ್ಚಿಕೊಟ್ಟರೂ ಅವರು ಅದನ್ನು ಏಕಮನಸ್ಕರಾಗಿ ಕಾರ್ಯಭೂಮಿಯಲ್ಲಿ ತಂದುಕೊಳ್ಳುತ್ತಾರೆ. ಈ ಐಕ್ಯವೇ ಇಂದಿನ ನಾಝೀಪಂಥದವರ ಅಮಾನುಷ ಕಾರ್ಯಗಳಿಗೆ ಕಾರಣೀಭೂತವಾಗಿರುತ್ತದೆ. ವಿಚಾರಜೀವಿಗಳಿಗೆ ಮಾತ್ರ ಇಂತಹ ಸ್ಥಿತಿಯಲ್ಲಿ ತೊಂದರೆ; ಎಂದರೆ ಕೇವಲ ತರ್ಕ-ವಿತರ್ಕದಲ್ಲಿ ಕಾಲಕಳೆಯುವವರಿಗೆ ಜರ್ಮನಿಯಲ್ಲಿ ಇಂದು

ಹೊಸ ಕಾನೂನಿನ ಪ್ರಕಾರ ಟ್ರೇಡ್‌ಮಾರ್ಕುಗಳನ್ನು
ರಜಿಸ್ಟರ್ ಮಾಡಿಸುವುದು ಅನಿವಾರ್ಯವಾಗಿದೆ.
ವಿವರಗಳಿಗಾಗಿ ಕೂಡಲೆ ಬರೆಯಿರಿ.
ಸಿ. ಜಿ. ಅಸುಂದ್ ಆ್ಯಂಡ್ ಕಂಪನಿ
೧೪ ಹೇರಸ್ಟ್ರೀಟ್, ಕಲಕತ್ತಾ
ವೆಚ್ಚ ಕಡಿಮೆ! ಹೆಚ್ಚಿನ ಸಂರಕ್ಷಣೆ!

ಪುಖವಿಲ್ಲ. ಈ ತರದ ತತ್ತ್ವವು ಮಾನ್ಯವಾದುದೇ? ಯಾವ ರಾಷ್ಟ್ರದ ಮೇಲೆ ಗಂಡಾಂತರಗಳು ಬಂದಿವೆಯೋ, ಯಾವ ರಾಷ್ಟ್ರದಲ್ಲಿ ಬಡತನ, ನಿರುದ್ಯೋಗಸಮಸ್ಯೆ ಮುಂತಾದುವುಗಳು ಹೆಚ್ಚಾಗಿವೆಯೋ ಅಂತಹ ರಾಷ್ಟ್ರದಲ್ಲಿ ಈ ರೀತಿಯ ಬಲಾತ್ಕಾರ ದಿಂದ ಕಾರ್ಯಮಾಡಿಸುವ ವಿಧಾನವು ಉಚಿತವಾದುದೇ? ರಾಷ್ಟ್ರಗಳ ಸಾಂಸ್ಕೃತಿಕ ಜೀವನವು ವಿಮರ್ಶಾ ಬಾಹ್ಯವಾಗ ಬೇಕಾದರೆ ಆ ರಾಷ್ಟ್ರಗಳು ಒಂದುಬಗೆಯ ಉನ್ನತಿಯಲ್ಲಿ ದ್ದಾಗಲೇ ಅದು ಶಕ್ಯವಿದೆಯೆಂಬುದನ್ನು ನಾವು ಮರೆಯಬಾರದು.

ನಾಝೀಪಂಥದವರ ವಿಷಯವಾಗಿ ದಿನಾಲು ನಾವು ಕೇಳು ತ್ತಿರುವ ಇನ್ನೊಂದು ಅಭಿಪ್ರಾಯವು ವಿಚಾರಾರ್ಹವಾಗಿದೆ; ಅದೇನೆಂದರೆ: ಇಂದಿನ ಜರ್ಮನಿಯಲ್ಲಿಯ ಕಾಯಿದೇ ವಿಚಾರಣಾ ಸಭೆಗಳ ವಿಷಯ. ಜರ್ಮನಿಯಲ್ಲಿ ಇಂದು ವಿಚಾರಣೆಯಿಲ್ಲದೆ ಶಿಕ್ಷೆ ಕೊಡುತ್ತಾರೆಂದು ಕೇಳುತ್ತೇವೆ; ಇದು ನಿಜ. ಆದರೆ ಇಂತಹ ಶಿಕ್ಷೆ ಹೊಂದಿದವರು ಜನಸಾಮಾನ್ಯರಲ್ಲ. ಅವರು ನಾಝೀ ಪಂಥದ ವಿರುದ್ಧವಾಗಿ ಕೆಲಸಮಾಡುವವರು. ಇಂಥವರಿಗೆ ಶಿಕ್ಷೆ ಯಾಗುವ ಕಾರಣವೆಂದರೆ ಅವರ ದೇಶದ್ರೋಹಿತ್ವ. ಅವರನ್ನು ಜರ್ಮನಿಯ ನಾಗರಿಕರೆಂದೇ ಭಾವಿಸಲಾಗುವುದಿಲ್ಲ. ಈ ರೀತಿಯ ನಡತೆಯು ಎಲ್ಲ ದೇಶದ ಸರಕಾರಗಳಲ್ಲಿಯೂ ಕಂಡುಬರುತ್ತದೆ ಯಲ್ಲವೆ? ಯಾವುದೇ ಸರಕಾರವು ತನ್ನ ಮತಕ್ಕೆ ವಿರುದ್ಧವಾಗಿ ನರ್ತಿಸುವ ಎಲ್ಲ ವ್ಯಕ್ತಿಗಳನ್ನೂ ಬಂಧನದಲ್ಲಿಡುತ್ತದೆ. ಇದು ಕೇವಲ ನಾಝೀ ಜರ್ಮನಿಯ ಸರಕಾರದ ವೈಶಿಷ್ಟ್ಯವಲ್ಲ. ಇನ್ನು ಜನಸಾಮಾನ್ಯರಲ್ಲಿ, ನಡೆಯುವ ಕಾಯಿದೆಗಳನ್ನು ಭಂಗಮಾಡಿದವ ರಿಗೆ ಯಥೋಚಿತವಾಗಿ ವಿಚಾರಣೆ, ಶಿಕ್ಷೆ ನಡೆಯುತ್ತದೆ. ನಿಜ ವಾಗಿಯೂ ಹೇಳಬೇಕೆಂದರೆ ಜಗತ್ತಿನಲ್ಲಿ ಜರ್ಮನರಷ್ಟು ಕಾಯಿದೆ-ಪ್ರಿಯರೂ ಇನ್ನೆಲ್ಲಿಯೂ ಇಲ್ಲವೆಂದೇ ಹೇಳಬಹುದು. ಅವರ ಸ್ವಭಾವವೇ ಅಂತಹದು. ಅವರಿಗೆ ಕಾಯಿದೆಯಲ್ಲಿ ವಿಶ್ವಾಸ ಬಹಳ, ಅಂತೆಯೇ ಅವರ ಕಾಯಿದೇಪುಸ್ತಕಗಳು ಜಗತ್ತಿನ ಎಲ್ಲ ರಾಷ್ಟ್ರ ದಲ್ಲಿರುವ ಪುಸ್ತಕಗಳಿಗಿಂತ ಹೆಚ್ಚಾಗಿ ನ್ಯಾಯವುಳ್ಳವುಗಳಾಗಿವೆ. ಅಲ್ಲದೆ ಇಂದಿನ ಕೆಲವು ಇಂಗ್ಲಿಷ್ ಕಾಯಿದೆಗಳು ಜರ್ಮನರ ಕಾಯಿದೇಪುಸ್ತಕಗಳಿಂದಲೆ ತೆಗೆದುಕೊಂಡುವುಗಳಾಗಿವೆ. ನಾಝೀ ಪಂಥವು ಪ್ರಾರಂಭವಾದನಂತರ ಒಂದು ಪ್ರತ್ಯೇಕ ನ್ಯಾಯನಿರ್ಣಯ ಸಮಿತಿ ಸ್ಥಾಪಿತವಾಗಿ, ಈ ಸಮಿತಿಯವರು ಇಂದಿನ ಸರಕಾರದ ಕಾಯಿದೆಗಳನ್ನೂ ಅವುಗಳನ್ನು ಭಂಗಿಸಿದವರಿಗೆ ತಕ್ಕ ಶಿಕ್ಷೆ ಗಳನ್ನೂ ಯೋಜಿಸಿ ತಯಾರಿಸಿದ್ದಾರೆ. ಸದ್ಯದ ಜನಸಾಮಾನ್ಯರ ಅನಾಗರಿಕತೆಯ ಕಾರ್ಯಗಳೆಲ್ಲ ಈ ಕಾಯಿದೆಗಳಿಗನುಸಾರ ವಾಗಿಯೆ ವಿಚಾರಿಸಲ್ಪಡುತ್ತವೆ.

ಈ ಎಲ್ಲ ವಿಷಯವೂ ಇಂದಿನ ನಾಝೀಜೀವನದ ಚಿತ್ರವನ್ನು ಸಾಮಾನ್ಯವಾಗಿ ವಾಚಕರಿಗೆ ತಂದುಕೊಡುವುದೆಂದು ಆಶೆ. ಇದಕ್ಕೆ ಒಂದುಮಾತ್ರ ಕೊರತೆಯಾಗಿದೆ. ಅದೇನೆಂದರೆ ಲಗ್ನಕಾರ್ಯದ ವಿಷಯ. ಅದೊಂದನ್ನು ವರ್ಣಿಸಿ ಮುಂದಿನ ಲೇಖನದಲ್ಲಿ ಈ ವಿಷಯವನ್ನು ಸದ್ಯ ಮುಗಿಸುವ ಯೋಚನೆ ಮಾಡಿರುವೆನು. ನಾನು ಈ ರೀತಿಯಲ್ಲಿ ಜರ್ಮನರ ವಿಷಯವಾಗಿ ಬರೆಯುವುದರಿಂದ ಕೆಲವರಲ್ಲಿ ನಾನು ಹಿಟ್ಲರನ ಪ್ರತಿನಿಧಿಯೆಂದು ಕಲ್ಪನೆ ಬರಬಹುದು. ಅದರಂತೆ ಒಂದು ಪತ್ರವೂ ನನಗೆ ಬಂದಿತ್ತು. ಆದರೆ ನಾನು ಬರೆದಿರು ವುದು ಯಾವ ಪಕ್ಷದ ಪರವಾಗಿಯೂ ಇಲ್ಲ. ಕೇವಲ ಕುತೂಹಲ ಕ್ಕಾಗಿ ಪರರಾಷ್ಟ್ರಗಳಲ್ಲಿ ನಡೆಯುವ ಜೀವನವನ್ನು ಅಭ್ಯಸಿಸುತ್ತಿ ರುವಾಗ, ಇಂದಿನ ಜರ್ಮನಿಯ ಜನಜೀವನವು ಗಮನಾರ್ಹವಾಗಿ ಕಂಡುಬಂದುದರಿಂದ ಈ ರೀತಿ ಬರೆದಿರುವೆ. ಮುಂದಿನ ಲೇಖನ ದಲ್ಲಿ ವಿವಾಹವಿಷಯದೊಂದಿಗೆ ಈ ಲೇಖನಮಾಲೆಯನ್ನು ಮುಗಿಸಬೇಕೆಂದಿದ್ದೇನೆ.

(೧೩೭ನೆಯ ಪುಟದಿಂದ ಮುಂದುವರಿದುದು.)

ಮುನ್ನಡೆ ಪಕ್ಷ, ಸಮತಾವಾದ, ಪ್ರಗತಿಪಕ್ಷ, ಕಿಸಾನಸಂಘ, ಹರಿಜನರು..ಹೀಗೆ ಯಾವುದಾದರೊಂದು ಪಕ್ಷ ಹಿಡಿದು,ಮೊದಲು ರಾಜಕೀಯ ರಂಗದಲ್ಲಿ ಧುಮುಕಬೇಕು; ಎಂದರೆ ಎಲ್ಲವೂ ಒಂದು ಕ್ಷಣದಲ್ಲಿ ನಮ್ಮ ಕೈವಶವಾಗುವುದು. ಯಾಕೆಂದರೆ ಇಡಿಯ ಪ್ರಪಂಚದಲ್ಲಿಯೆ ಹೆಸರಾದ ವ್ಯಾಪಾರಿಗಳೆಂದು ಪ್ರಸಿದ್ಧರಾದ ಇಂಗ್ಲೀಷರು. ಈಗ ಅದರಲ್ಲಿ ಏನೂ ಹುರುಳಿಲ್ಲವೆಂಬುದನ್ನು ಕಂಡುಹಿಡಿದು ಜಗತ್ತಿನ ರಾಜಕಾರಣದಲ್ಲಿ ಧುಮುಕಿದ್ದಾರೆ. ಆದುದರಿಂದಲೇ ಮುಂದೆ ಬಂದಿದ್ದಾರೆ. ಅದರಂತೆಯೆ 'ಭಾರತದ ಹಿರಿಯ ಬಣಜಿಗರು' ಎಂದು ಹೆಸರುಪಡೆದ ಗುಜರಾತದ ಮಹಾತ್ಮಾಗಾಂಧಿಯವರು, 'ವ್ಯಾಪಾರವೆಂದರೆ ಕೊರಳಲ್ಲಿ ಕೊರಡನ್ನು ಕಟ್ಟಿಕೊಂಡಂತೆ, ಮನೆಯಲ್ಲಿ ಬಾಜೆಹಸುವನ್ನು ಸಾಕಿದಂತೆ' ಎಂಬುದನ್ನು ಕಂಡುಹಿಡಿದು, ಈಗ ಹಿಂದುಸ್ಥಾನದ ರಾಜಕಾರಣದಲ್ಲಿ ಧುಮುಕಿ ಮಹಾತ್ಮರೆಂದೆನಿಸಿಕೊಂಡರು, ಅದಕ್ಕಾಗಿ ಇಂದು ನಾನು ಜಗತ್ತಿನ ಇತಿಹಾಸದ ಕೂಲಂಕಷ ಅಭ್ಯಾಸದಿಂದಲೂ, ಸ್ವಂತದ 'ಅಮೌಲ್ಯ' ವಾದ ಅನುಭವ ದಿಂದಲೂ ಹೇಳುವುದೇನೆಂದರೆ: ಯಾವ ಕನ್ನಡಿಗರೂ ಸ್ವತಂತ್ರ ಉದ್ಯೋಗಗಳನ್ನು ಮಾಡಬೇಡಿರಿ; ಕರ್ನಾಟಕಕ್ಕೆ ಏಕೀಕರಣ, ಭಾರತಕ್ಕೆ ಸ್ವಾತಂತ್ರ್ಯ ಇವು ಸಿಕ್ಕಬೇಕಾದರೆ ಎಲ್ಲರೂ ರಾಜಕಾರಣ ಧುರಂಧರರಾಗಿರಿ' ಎಂದವರೇ ಅಲ್ಲಿಂದ ಗಾಳಿಯಂತೆ ಮುಂದೆ ಸಾಗಿದರು.

ಇತ್ತ ಆ ಲೆಕ್ಕಣಿಗರು ಮರುಮಾತನಾಡದೆ ತಮ್ಮ ತಮ್ಮ ಹೊತ್ತಗೆ ಲೆಕ್ಕಣಿಕೆಗಳನ್ನು ಮುಚ್ಚಿಕೊಂಡು, ಕೆಲವರು ಸಮೀಪದ ಅಂಗಡಿಯಲ್ಲಿ ಟೆಲಿಫೋನಿಗೆ ಓಡಿದರು; ಕೆಲವರು ಕೂಡಲೆ ತಂತಿಯ ಕಟ್ಟೆಯ ಕಡೆಗೆ ಧಾವಿಸಿದರು; ಬೇರೆ ಕೆಲವರು ನಿಲ್ದಾಣದ ಕಡೆಗೆ, ಇನ್ನಿತರರು 'ಕಾರ'ನಲ್ಲಿ ಹೀಗೆ ತಮ್ಮ ತಮ್ಮ ಅನುಕೂಲತೆ ಯಂತೆ, ಆ ಸಂದೇಶವನ್ನು ಪ್ರಪಂಚದ ಪ್ರತಿಯೊಂದು ಮೂಲೆಗೂ ಕಳಿಸಲೆಂದು ಅಲ್ಲಿಂದ ಮಾಯವಾದರು.

" ಆವೊತ್ತು ನೀನು ಹೇಳಿದ ಕತೆ ಎಲ್ಲಿ ನೋಡಿದೆ ? "

ಯು ★ ಗಾ ★ ದಿ

(ಸಣ್ಣ ಕತೆ)

ಶ್ರೀ. ಸಿ. ರಂಗನಾಥರಾವ್

ಬೆಂಗಳೂರು

★

ವಾಸುವು ಹೇಳಿದ ಮಾತು ಎಷ್ಟೊಂದು ಸತ್ಯವಾಗಿದೆಯಲ್ಲವೆ? ನಮ್ಮಲ್ಲಿ ಡಿಗ್ರಿ ಇಲ್ಲದವನ ವಿದ್ಯೆಗೂ ವಿಧವೆಯ ರೂಪಿಗೂ ಬಡವನ ಗುಣಕ್ಕೂ ಹೊಲೆಯನ ದೈವಭಕ್ತಿಗೂ ಏನಾದರೂ ಸ್ಥಾನ-ಮಾನಗಳಿವೆಯೆ ?

★

ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ ಮೈಸೂರಿನಲ್ಲಿ ಒಂದು ಹೋಟೆಲಿನಲ್ಲಿದ್ದೆ; ಅದು ಊಟದ ಹೋಟೆಲು ಮಾತ್ರ; ಎಂದ ಮೇಲೆ ನಮ್ಮ ಹೋಟೆಲಿನ ಎದುರಿನಲ್ಲಿದ್ದ ' ಈಶ್ವರೀ ಭವನ ' ಎಂಬ ತಿಂಡಿಯ ಹೋಟೆಲಿನವರು ನನಗೆ ಪರಿಚಯಸ್ಥರಾದುದರಲ್ಲಿ ಆಶ್ಚರ್ಯವೇನು ? ಒಂದು ದಿನಕ್ಕೆ ಎರಡು ಅಥವಾ ಮೂರು ಸಲ ಆ ಹೋಟೆಲಿಗೆ ಹೋಗಬೇಕಾಗಿತ್ತು. ಆದುದರಿಂದ ಅಲ್ಲಿದ್ದ ' ಮಾಣಿ'ಗಳು ಬಹುತರ ನನಗೆ ಪರಿಚಯದವರಾಗಿದ್ದರು. ಅವರಲ್ಲಿ ಒಬ್ಬನಾದ **ವಾಸು**ವಂತೂ ನನಗೆ ಪರಿಚಯದವನಷ್ಟೇ ಅಲ್ಲ, ಮಿತ್ರನ ಸ್ಥಾನದ ವರೆಗೂ ಏರಿದ್ದನು. ಅದಕ್ಕೆ ಕಾರಣವಿಲ್ಲದಿರಲಿಲ್ಲ.

ಒಂದು ದಿನ ಸಾಯಂಕಾಲ ನಾನೂ, ನನ್ನ ಸಹಪಾಠಿ ನಾರಾಯಣನೂ ' ಈಶ್ವರೀಭವನ'ಕ್ಕೆ ಹೋದೆವು. ಅಂದು ನಾನು ನಾರಾಯಣನನ್ನು ಕೇರಂ ಆಟದಲ್ಲಿ ' ಲೊವ್'ಸೆಟ್ ' ಹೊಡೆದು ಸೋಲಿಸಿದ್ದೆ. ಆದುದರಿಂದ ಅವನು ನನಗೆ ಸಿಹಿ, ಕಾರ, ಕಾಫಿ ಕೊಡಿಸಬೇಕಾಗಿದ್ದಿತು. ಭವನಕ್ಕೆ ಹೋಗಿ ಬೀರೂ ನೋಡಿ ' ಸುರುಳೀಪೂರಿ ಎರಡು ' ಎಂದ ನಾರಾಯಣ. ಅವನು ಹೇಳಿದ ತಿಂಡಿಗೆ ಸರಿಯಾದ ಹೆಸರು ' ಫಾಲ್‌ಫರೋಟ್ ' ಎಂದು ನಾನೆಂದೆ. ಸರಿ; ನಮ್ಮಿಬ್ಬರಿಗೂ ವಾಗ್ವಾದವು ಮೊದಲಾಯಿತು. ಆಗ ಆ ಮೇಜಿನಲ್ಲಿದ್ದವರಿಗೆ ತಿಂಡಿ ಕೊಡಬೇಕಾದ ವಾಸುವು ಬಂದು " What is in a name, sir ? ' (ಹೆಸರಿನಲಿ ಏನಿಹುದು ?) ನಿಮಗೆ ಬೇಕಾಗಿದ್ದುದು ಅದು ತಾನೆ ? " ಎಂದು ನಮಗೆ ಬೇಕಾಗಿದ್ದ ತಿಂಡಿಯನ್ನು ತೋರಿಸಿದ ! ನಾನೂ ನಾರಾಯಣನೂ ಒಬ್ಬರ ಮುಖವನ್ನೊಬ್ಬರು ನೋಡುತ್ತ ತಿಂಡಿ-ಕಾಫಿಗಳನ್ನು ಮುಗಿಸಿದೆವು.

ಆ ರಾತ್ರಿ ನನಗೊಂದು ಯೋಚನೆ ಬಂದಿತು; ವಾಸುವಿನ ಬಾಯಲ್ಲಿ ಷೇಕ್ಸ್ಪಿಯರ್ ಕವಿಯ ಮಾತುಗಳನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ತಾನಾಡಿದ ಮಾತಿನ ಮಹತ್ವವು ವಾಸುವಿಗೆ ತಿಳಿದಿತ್ತೆ ? ಏನೋ ! ಅಂದಿನಿಂದ ವಾಸುವನ್ನು ಕೇವಲ ಒಬ್ಬ ' ಮಾಣಿ ' ಎಂದು ಹೇಳಲು ನಾನು ಹಿಂಜರಿಯುತ್ತಲಿದ್ದೆ.

* * *

ಮೇಲ್ತರಗತಿಯ

ಹಳಕು (Concentreted) ಬಣ್ಣಗಳು

- ಬರೆಯುವ ಮಸಿಗಳು
- ಟಾಯಿಪ್‌ರಾಯಿಟಿಂಗ್ ರಿಬನ್ನುಗಳು
- ಸಾಬೂನುಗಳು
- ಮಿಠಾಯಿಗಳು

ಇವುಗಳನ್ನೆಲ್ಲ ತಯಾರಿಸುವುದಕ್ಕೆ ಬಳಸುವ ಬಣ್ಣಗಳು. ವಿಶೇಷವಿವರಗಳಿಗಾಗಿ ಇಂಗ್ಲಿಷ್ ಭಾಷೆಯಲ್ಲಿ ಬರೆದು ಕೇಳಿಕೊಳ್ಳಿರಿ.

ಕ್ರಿಪಾಗ್ ಲಿಮಿಟೆಡ್

ಪೋ, ಬಾ, ನಂ, ೨೧೦, ಮುಂಬಯಿ.

ಇನ್ನೊಂದು ದಿನ ಭವನಕ್ಕೆ ಹೋಗಿದ್ದಾಗ ನಾನೂ ನನ್ನ ಮಿತ್ರರನೇಕರೂ, ಹಿಂದಿನ ದಿನ ಸಾಯಂಕಾಲ ನಮ್ಮ ಕಾಲೇಜಿನಲ್ಲಿ ಆಗಿದ್ದ ಒಂದು ಭಾಷಣವನ್ನು ನೆನಪಿಗೆ ತಂದುಕೊಂಡು, ಭಾಷಣ ಕಾರರ ಹಾಸ್ಯರಸವನ್ನು ಹೊಗಳಿದೆವು. ವಾಸುವು ಎಂದಿನಂತೆ, ಕಾಫಿಯನ್ನು ಕೊಟ್ಟು ಹತ್ತಿರ ನಿಂತು "ಅಯ್ಯೊ, ಇದೆಲ್ಲಾ ಏನ್ಸಾರ್; ಸ್ವಿಫ್ಟ ಮಾಡಿದ ತಮಾಷೆಯ ಮುಂದೆ ಇವೆಲ್ಲಾ ಏನ್ ಸಾರ್?" ಎಂದ. ಅವನ ಬಾಯಲ್ಲಿ 'ಸ್ವಿಫ್ಟ' ಎಂಬ ಹೆಸರನ್ನು ಕೇಳಿ ನಾವೆಲ್ಲರೂ ಚಕಿತರಾದೆವು. ಆ ತಮಾಷೆಯು ಯಾವುದೆಂದು ಕೇಳಲು ಎಲ್ಲರಿಗೂ ಕುತೂಹಲ; ಆದರೆ ನಾವೆಲ್ಲ ಡಿಗ್ರಿ ತರಗತಿಯಲ್ಲಿದ್ದುಕೊಂಡು (ನಮ್ಮಲ್ಲಿ ಸಾಹಿತ್ಯವನ್ನು ಐಚ್ಛಿಕ ಭಾಗವನ್ನಾಗಿ ತೆಗೆದುಕೊಂಡಿದ್ದವರಿಬ್ಬರಿದ್ದರು!) ಆ 'ಮಾಣಿ' ಯನ್ನು ಸ್ವಿಫ್ಟ ವಿಚಾರವಾಗಿ ಕೇಳುವುದೇ– ಎಂಬ ಬಿಗುಮಾನ ನಮಗೆ. ಆದರೆ ನಾನು ವಾಸುವನ್ನು ಮಾಣಿಯ ಸ್ಥಾನದಿಂದ ಮೇಲಕ್ಕೆ ಏರಿಸಿದ್ದೆನಾದುದರಿಂದ, 'ಅದೇನಯ್ಯಾ ವಾಸು, ಅಂತಹ ತಮಾಷೆ?' ಎಂದೆ. ಆಗ ಅವನ ಮುಖದಲ್ಲಿ ಆಶ್ಚರ್ಯವು ಮನೆಮಾಡಿತು: "ನಿಮಗೆ ಗೊತ್ತಿಲ್ಲವೆ ಸಾರ್?" ಎಂದ. ನಾನು ಇಲ್ಲವೆಂದಮೇಲೆ ವಾಸು ಹೇಳಲು ಪ್ರಾರಂಭ ಮಾಡಿದ: "ನೋಡಿ ಸಾರ್; ಬಹಳ ದಿನಗಳ ಹಿಂದೆ ಒಂದು ಮಾಧ್ಯಾಹ್ನಸೂರ್ಯ-ಗ್ರಹಣವನ್ನು ನೋಡಲು, ಅನೇಕ ಮಂದಿ ಒಂದು ಪ್ರಾರ್ಥನಾಲಯದ ಹತ್ತಿರ ಸೇರಿದ್ದರು. ಕೆಲವರು ದುರ್ಬೀನುಗಳನ್ನು ಸಹ ತಂದಿದ್ದರು. ಗ್ರಹಣದ ಸಮಯವು ಸಮೀಪಿಸಿದಂತೆಲ್ಲಾ ಜನ ಸಂದಣಿಯು ಹಿರಿದಾಗುತ್ತ ಬಂದಿತು. ಸ್ವಿಫ್ಟ್‌ಗೆ ಕುಚೋದ್ಯ ಮಾಡುವುದೆಂದರೆ ಅತಿ ಪ್ರೀತಿ. ಅಷ್ಟು ಜನರ ಉತ್ಸುಕತೆಯನ್ನು ನೋಡಿ, ಅವನು ಒಂದು ತಮಾಷೆ ಮಾಡಿದ. ಒಬ್ಬ ಜವಾನನ ಕಡೆಯಿಂದ 'ಈ ದಿನ ಮುಖ್ಯ ಪಾದ್ರಿಯ ಅಪ್ಪಣೆಯ ಪ್ರಕಾರ ಗ್ರಹಣವನ್ನು ಕೊಂಚಕಾಲ ಮುಂದುವರಿಸಿದೆ' ಎಂದು ಹೇಳಿ ಕಳುಹಿಸಿದ. ಆಗ, ಏನಂತೀರ್ಸಾರ್, ಜನಸಂದಣಿ ಎಲ್ಲಾ ಕರಗಿ ಹೋಯಿತಂತೆ!" ಎಂದು ವಾಸು ಹೇಳಿದ.

ನಾನು ಗಹಗಹಿಸಿ ನಕ್ಕೆ; ಆದರೆ ಇಬ್ಬರು ಮಾತ್ರ ಇವನ ಬಾಯಲ್ಲಿ ಬಂದ ತಮಾಷೆಗೇನು ನಗುವುದೆಂದೋ ಏನೋ, ಬಂದ ನಗುವನ್ನು ಕಾಫಿಯಡಿಯಲ್ಲಿ ಹಾಕಿ ಮುಚ್ಚಿಬಿಟ್ಟರು.

ಅಂದಿನಿಂದ ವಾಸುವಿನ ವಿಷಯದಲ್ಲಿ ನನಗೆ ಗೌರವವು ಉತ್ಪನ್ನ ವಾಯಿತು.

* * *

ಕೆಲವು ದಿನಗಳ ನಂತರ ಯುಗಾದಿ ಹಬ್ಬವು ಬಂದಿತು. ಯುಗಾದಿ ಎಂದರೆ ಎಲ್ಲರಿಗೂ ಸಂತೋಷದ ಸುಗ್ಗಿ ತಾನೇ? ಪರೀಕ್ಷೆ ಮುಗಿದಿದ್ದರೂ ಕೆಲವು ದಿನ ಮೈಸೂರಿನಲ್ಲಿರಬೇಕೆಂಬ ಹಂಬಲದಿಂದ ನಾನು ಹೋಟೆಲಿನಲ್ಲಿಯೇ ಇದ್ದೆ. ಹಬ್ಬದ ದಿನ ಬೆಳಿಗ್ಗೆ ಫಲಾಹಾರದ ನಂತರ ಕೊಂಚ ಸುತ್ತಾಡಿ ಕೊಂಡು ಬರೋಣವೆಂದು ಹೊರಟೆ. ದಾರಿಯಲ್ಲಿ ಇಕ್ಕೆಲಗಳಲ್ಲಿಯೂ ಕುಣಿದಾಡುತ್ತಿದ್ದ ತೋರಣಗಳ ಸಾಲುಗಳೂ, ನಮ್ಮ ದೇಶದ ಹೆಂಗೆಳೆಯರ ಕಲಾಪ್ರತಿಭೆಯನ್ನು ಪ್ರದರ್ಶಿಸುತ್ತಿದ್ದ ರಂಗವಲ್ಲಿಯ ಚಿತ್ರಗಳೂ, ಅನೇಕದಿನದಿಂದ ಮನೆಯೆಂದರೇನೆಂಬು ದನ್ನು ಮರೆತಿದ್ದ ನನಗೆ ಸಂತೋಷವನ್ನಿತ್ತುವು. ಆದರೆ ಅದನ್ನು ಸವಿಯುವ ಸಮಯವು ನನಗೆ ಇಲ್ಲದುದರಿಂದ, ಒಂದು ವೇದನೆಗೂ ಎಡೆ ಇತ್ತುವು. ಹೀಗೆ ಸುಖ-ದುಃಖಗಳ ಮಧ್ಯೆ ನಡೆಯುತ್ತಿದ್ದ ನನಗೆ ಒಂದು ಮನೆಯಲ್ಲಿ ಮಗುವೊಂದು ಅತ್ತ ಶಬ್ದವು ಕೇಳಿಸಿತು. ಕೂಡಲೆ ಒಂದು ಹೆಣ್ಣುಧ್ವನಿಯು "ರಾಗ ತೆಗಿಬೇಡೊ, ಇನ್ನ; ಈವೊತ್ತತ್ತರೆ ಈ ವರ್ಷ ಎಲ್ಲಾ ಅಳ್ತಾನೇ ಇರ್ತಿಯ ನೋಡ್ಕೊ" ಎಂದಿತು. ಕೂಡಲೆ ಮಗುವಿನ ರೋದನವು ನಿಂತಿತು! ಎಂತಹ ನಂಬಿಕೆ!

ಹೀಗೆ "ಇಂದು ಯುಗಾದಿ" ಎಂದು ಮನಸ್ಸಿಗೆ ತಂದು ಕೊಡುತ್ತಿದ್ದ ಅನೇಕ ಸನ್ನಿವೇಶಗಳನ್ನು ನೋಡಿಕೊಂಡು, ಕೊಠಡಿಗೆ ಬಂದು ಊಟಮಾಡಿ ಮಲಗಿದೆ. ಬೆಳಿಗ್ಗೆ ಊಟ ಹೊತ್ತಾದುದರಿಂದಲೂ ಬಲವಾದುದರಿಂದಲೂ ರಾತ್ರಿ ಊಟ ಮಾಡುವುದಿಲ್ಲವೆಂದು ಹೇಳಿ, 'ಭವನ'ಕ್ಕೆ ಹೋಗಿ, ವಾಸುವಿಗೆ "ರಾತ್ರಿಯ ಎಂಟು ಘಂಟೆಯ ಸಮಯಕ್ಕೆ ನನ್ನ ರೂಮಿಗೆ ಎರಡು ಕಪ್ ಕಾಫಿ ತೆಗೆದುಕೊಂಡು ಬಾ" ಎಂದು ಹೇಳಿ, ಸಂಜೆ ತಿರುಗಾಡಿಕೊಂಡು ಮರಳಿ ಬಂದೆ. ಬರಬೇಕಾದರೆ ಸರಿಯಾಗಿ ಎಂಟುಗಂಟೆ ರಾತ್ರಿಯಾಗಿದ್ದಿತು. ನಾನಿನ್ನೂ ನನ್ನ ಡ್ರೆಸ್ ಬದಲು

ಮಾಡದೆ ಹಾಗೆಯೆ ಕುರ್ಚಿಯ ಮೇಲೆ ಕುಳಿತುಕೊಂಡಿದ್ದೆ. ಅಷ್ಟರಲ್ಲಿಯೆ ನಾನು ಕಿಟಲಿ ಕಪ್ಪುಗಳನ್ನು ಕೈಯಲ್ಲಿ ಹಿಡಿದುಕೊಂಡು ಬಂದ; ನಾನು ನಾನುವಿಗೆ ಕೂಡುವಂತೆ ಹೇಳಿದೆ. ಅವನಿಗಾದ ಆಶ್ಚರ್ಯವನ್ನು ಅವನ ಮುಖಭಂಗಿಯಿಂದ ಅರಿತೆ. ಅವನಿಗೊಂದು ಕಪ್ಪು ಕಾಫಿಯನ್ನು ಕೊಟ್ಟು ನಾನೊಂದನ್ನು ಕುಡಿಯುತ್ತಾ ಮೊದಲು ಮಾಡಿದೆ.

" ಆವೊತ್ತು ನೀನು ಹೇಳಿಗ ಕತೆ ಎಲ್ಲಿ ನೋಡಿದೆ ? "

" ಅದು ಒಂದು '...... ಕರ್ನಾಟಕ ' ದ ಸಂಚಿಕೆಯಲ್ಲಿ ಬಂದಿತ್ತು, ಸಾರ್! "

ಅವನು ' ಸಾರ್ ' ಎಂದುದು ನನಗೆ ಅಷ್ಟಾಗಿ ರುಚಿಸಲಿಲ್ಲ.

" ನೀನು ಹಿಂದೊಂದು ದಿವಸ ಹೇಳಿದ ' What's in a name ? ' ಎಲ್ಲಿದೆಯೆಂದು ಗೊತ್ತೊ ? "

" ಗೊತ್ತು ಸಾರ್, ಷೇಕ್ಸ್ಪಿಯರ್‌ನ 'Romeo and Juliet' ನಲ್ಲಿವೆ."

" ನೀನು ಇದನ್ನೆಲ್ಲ ಯಾವಾಗ ಓದಿದೆ ? "

" ಕಾಲೇಜಿನಲ್ಲಿದ್ದಾಗ ಸಾರ್ ! "

ಆಶ್ಚರ್ಯವೂ ಕುತೂಹಲವೂ ಒಮ್ಮೆಲೆ ನನ್ನಲ್ಲಿ ಕೂಡಿಬಂದುವು. ಇದೇನೋ ಸ್ವಾರಸ್ಯವಾಗಿದೆ ಎಂದುಕೊಂಡು, ಮತ್ತೆ ಕೇಳಿದೆ :

" ಹಾಗಾದರೆ ನೀನು ಕಾಲೇಜಿನಲ್ಲಿ ಓದುತ್ತಿದ್ದೆಯಾ ? "

" ಇದ್ದೆ ಸಾರ್, ಆದರೆ ಅದರದೊಂದು ದೊಡ್ಡ ಕತೇನೆ ಇದೆ!"

" ಅದೇನು ಹೇಳಪ್ಪ, ಸ್ವಲ್ಪ ಕೇಳೋಣ!"

" ಕ್ಷಮಿಸಿ ಸಾರ್, ಹೊತ್ತಾಗುತ್ತೆ; ಯಜಮಾನ್ರು ಬೈತಾರೆ "

" ಇರ್ಲಿ ಹೇಳಯ್ಯಾ, ಇನ್ನೇನು ಇನ್ನೊಂದು ಅರ್ಧ ಗಂಟೆಗೆ ಬಾಗಿಲು ಹಾಕುತ್ತಾರೆ; ಇಷ್ಟು ಹೊತ್ತಿನ ಮೇಲೆ ಯಾರು ಬರ್‍ತಾರೆ, ನಿಮ್ಮ ಹೋಟಲಿಗೆ ? "

" ಇನ್ನು ಮೇಲೆ ಯಾರೂ ಬರುವುದಿಲ್ಲವೆನ್ನಿ..ಆದರೂ..! ಹಾಗಾದರೆ ಕೇಳಿ ಸಾರ್ ! ನಾನೂ ಎಲ್ಲರಂತೆ ಒಂದು ಮಗುವಾಗಿ ಹುಟ್ಟಿದೆ. ನಾನು ಹೀಗೇಕೆ ಹೇಳುತ್ತೇನೆಂದು ನೀವು ಅನುಮಾನಿಸಬಹುದು. ಅನೇಕ ಜನರ ಮನಸ್ಸಿನಲ್ಲಿ ನಾನು ಹುಟ್ಟುತ್ತಲೇ ಒಬ್ಬ 'ಮಾಣಿ' ಯಾಗಿ ಹುಟ್ಟಿದೆನೆಂಬ ನಂಬಿಕೆಯು ಮೂಡಿದಂತಿದೆ. ಎಲ್ಲ ತಾಯಿಯರಂತೆಯೇ ನನ್ನ ತಾಯಿಯೂ ನನಗೆ ಅಕ್ಷರಗಳನ್ನೂ ಅಂಕೆಗಳನ್ನೂ ಮನೆಯಲ್ಲಿಯೇ ಕಲಿಸಿದರು. ಆದರೆ ಆ ಅಂಕೆಗಳನ್ನು ಹೋಟೆಲ್ ಬಿಲ್ಲುಗಳನ್ನು ಬರೆಯಲು ಉಪಯೋಗಿಸುವೆನೆಂದು ಅವರೇನು ತಿಳಿದಿರಬಾರರು. ನನ್ನ ಗತಿಯು ಹೀಗಾಗುವುದೆಂದು ಅವರು ಕನಸಿನಲ್ಲಿಯೂ ಎಣಿಸಿರಲಿಕ್ಕಿಲ್ಲ. ಆದರೆ ನನ್ನ ದುರದೃಷ್ಟದಿಂದ, ನಾನು ಚಿಕ್ಕವನಿದ್ದಾಗಲೇ ತಾಯಿ ತೀರಿಕೊಂಡರು. ನಮ್ಮ ತಂದೆಯವರು ಎಂತಹವರೆಂದು ನಾನು ಹೇಳಲಾರೆ; ನನ್ನ ವಿದ್ಯೆಗೆ ಕೊಂಚ ಶ್ರಮವಹಿಸಿಯೇ ಸಹಾಯಮಾಡಿದರೆನ್ನಬೇಕು. ಆದರೆ ನಾನು ಅದೃಷ್ಟಹೀನ ಸಾರ್; ಇಂಟರ್ ಮಿಡಿಯೆಟ್ ಪರೀಕ್ಷೆಯಲ್ಲಿ ಫೇಲಾದೆ. ನನಗೆ ಅತಿ ಇಷ್ಟವಾದ ಸಾಹಿತ್ಯಕ್ಕೆ ನಾನು ಗಮನಕೊಟ್ಟುಬಿಟ್ಟೆ. ಆದುದರಿಂದ ಎರಡನೆಯ ಗ್ರೂಪ್ ಕೈಕೊಟ್ಟಿತು. ಇದರಿಂದ ನಮ್ಮ ತಂದೆಯವರಿಗೆ ಬಹು ಜುಗುಪ್ಸೆಯಾಯಿತು. ಅಂದಿನಿಂದ ನನ್ನನ್ನು ಕಂಡರೆ ಅವರು ಅಲ್ಲಗಳೆಯಲು ಮೊದಲಿಟ್ಟರು; ನಮ್ಮ ಹಿರಿಯರೆಲ್ಲರೂ ಗಣಿತದಲ್ಲಿ ಬಹು ಗಟ್ಟಿಗರಂತೆ; ಅಂತಹ ವಂಶಕ್ಕೆ ಮಸಿ ಬಳಿದವನೆಂದು ನನಗೆ ಛೀಮಾರಿ ಮಾಡಿದರು. ನನಗೆ ಆಗ ಕೈಲಾಸಂ ಅವರ ' ಹಿರಿಯಣ್ಣಯ್ಯ ' ನ ನೆನಪಾಗುತ್ತಿದ್ದಿತು. ಆ ಸಂಕಟವನ್ನು ನಾನು ಸಹಿಸಲಾರದೆ, ಅವರ ಮೇಲೆ ಅನ್ನಕ್ಕೆ ಭಾರವಾಗಿರಬಾರದೆಂದೆಣಿಸಿ ನಾನು, ಬೆಂಗಳೂರನ್ನು ಬಿಟ್ಟು ಹತ್ತಿರದ ಹಳ್ಳಿಗೆ ಹೋದೆ. ಆ ಹಳ್ಳಿಯಲ್ಲಿ ನಮಗೆ ಗುರುತು ಕಂಡವರೊಬ್ಬರಿದ್ದರು. ಗುಂಡೂರಾಯರೆಂದು ಅವರ ಹೆಸರು. ಅವರ ಮಗ ಮಾಧುವೂ ನಾನೂ ಚಿಕ್ಕವರಾಗಿದ್ದಾಗ ಒಟ್ಟಿಗೆ ಆಟವಾಡಿ ಬೆಳೆದವರು. ಆದರೆ ಮಾಧುವು ಈಗ ಹಣದ ಹೆಮ್ಮೆಯಿಂದ ನನ್ನನ್ನು ಕಡೆಗಣಿಸಿದ. ಆದರೂ ನಾನು ಹೊಟ್ಟೆಹೊರೆಯುವ ದೆಸೆಯಿಂದ ಅವರ ಮನೆಯಲ್ಲಿಯೇ ಕೆಲಸಕ್ಕೆ ಸೇರಬೇಕಾಯಿತು. ಅವರು ಹೇಳಿದ ಕೆಲಸ ಮಾಡಿಕೊಂಡಿರುವುದು; ಅವರು ನನಗೆ ಒಪ್ಪತ್ತು ಅನ್ನ ಹಾಕಿ, ಮೇಲೆ ತಿಂಗಳಿಗೊಂದು ರೂಪಾಯಿ ಕೊಡುವುದೆಂದು ಗೊತ್ತಾಯಿತು. ಬರುಬರುತ್ತಾ ಮಾಧುವಿನ ಮನಸ್ಸಿನಲ್ಲಿ ನಾನೊಬ್ಬ ಜೀತದಾಳು ಎಂಬ ಭಾವನೆಯೆ ಬೆಳೆಯಿತು. ನಾನು ಕೆಲಸಕ್ಕೆ

ಕೊಕ್ಕೋಕ ಕಳಾಶಾಸ್ತ್ರ

64 ರಹಸ್ಯ ಚಿತ್ರಪಠಗಳು ಸಹ ರೂ. 1. ಇದರಲ್ಲಿ ಸ್ತ್ರೀಪುರುಷರನ್ನು

ಪ್ರೀತಿಸುವ ರಹಸ್ಯಗಳು, ಮುದ್ದಿಡುವ ವಿಧಗಳು, ಆಲಿಂಗನಮಾಡುವ ರೀತಿಗಳು, ಕನ್ಯೆಯರ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಶೃಂಗಾರರಹಸ್ಯಗಳು, ಪ್ರಪಂಚದಲ್ಲೆಲ್ಲ ಗುಟ್ಟಾಗಿ ಇಡಲ್ಪಟ್ಟ ಕಾಮಶಾಸ್ತ್ರದ ವಿಷಯ ಇವುಗಳನ್ನು ಪ್ರತಿಯೊಬ್ಬ ರಸಿಕನಿಗೆ ಉಲ್ಲಾಸವಾಗುವಂತೆ ಬರೆಯಲ್ಪಟ್ಟಿದೆ. ಬಹಿರಂಗವಾಗಿ ಇಂಥ ಪುಸ್ತಕವು ಯಾರಿಂದಲೂ ಪ್ರಚುರಿಸಲ್ಪಡಲಿಲ್ಲ. 264 ಪುಟಗಳುಳ್ಳ ದೊಡ್ಡ ರಹಸ್ಯ ಕನ್ನಡ ಪುಸ್ತಕ; ಕ್ರಯ ರು. 1; ಪೋಸ್ಟೇಜ್ 5 ಆಣೆ.

ಸರಸ್ವತೀ ಬುಕ್ ಡಿಪೋ,

ಅರುಣಾಚಲ ಮೊದಲಿ ಬೀದಿ, ಜಿ. ಟಿ. ಮದರಾಸು.

ರಿಜಿಸ್ಟರ್ ಲೀವರ್ ಇಲ್ಲವೆಂದು ತಿಳಿಯಪಡಿಸುವವರಿಗೆ ಹಣ ಮರತ



ಕೆಂಪುಗಳು ಕೆತ್ತಲ್ಪಟ್ಟ ರಿಜಿಸ್ಟರ್ ಲೀವರ್, ರೋಲ್ಡುಗೋಲ್ಡು ಪ್ಲೇಟ್, ರಿಸ್ಟು ಗಡಿಯಾರ ದೃಢವಾದದ್ದು ಮತ್ತು ಅಂದವಾದದ್ದು.

5 ಸಂವತ್ಸರ ಗ್ಯಾರಂಟಿ ಸಹಾ ಬೆಲೆ ರೂ. 5-8-0.

ರಾಜನ್ ವಾಚ್ ಕಂಪೆನಿ.

27ನೆಯ ಬೀಟ್ ಜಿ. ಒ. ಒ. ಮದರಾಸು.

ಸೇರಿರುವುದನ್ನು ತಿಳಿಸಿ, ನಮ್ಮ ತಂದೆಯವರಿಗೊಂದು ಕಾಗದ ಬರೆದೆ. ಹೀಗಿರಲು ಒಂದು ದಿನ ಮಧ್ಯಾಹ್ನ ನನಗೆ ಬಟ್ಟೆಯೊಗೆದು ತುಂಬ ಆಯಾಸವಾಗಿದ್ದುದರಿಂದ ಮನೆಯ ಮುಂದಿನ ಜಗುಲಿಯ ಮೇಲೆ ಕುಳಿತಿದ್ದೆ. ಊಟವಿನ್ನೂ ಆಗಿರಲಿಲ್ಲ. ಒಳಗಿನಿಂದ 'ಎಲ್ಲಿ ಅವನು ?' ಎಂದು ಕೋಪದಿಂದ ಕಂಪಿಸುತ್ತಿದ್ದ ಮಾಧುವಿನ ಮಾತು ಕೇಳಿಸಿತು. ನಾನು ಗಾಬರಿಯಿಂದ ಮೇಲಕ್ಕೇಳುವಷ್ಟರಲ್ಲಿ ಮಾಧುವೇ ಹೊರಕ್ಕೆ ಬಂದ. ಕೋಪದಿಂದ ಅವನ ಮುಖ ಕೆಂಪಾಗಿದ್ದಿತು. ಹಲ್ಲುಗಳನ್ನು ಕಟಕಟನೆ ಕಡಿಯುತ್ತಾ, ಕೈಯಲ್ಲಿದ್ದ ಪಂಚೆಯನ್ನು ನನ್ನ ಮುಖದ ಮೇಲೆ ಬೀಸಾಡಿದ. ನಾನು ಭಯದಿಂದ ನಡಗುತ್ತಾ ಅದನ್ನು ಪರೀಕ್ಷಿಸಿದೆ. ಕೊನೆಯಲ್ಲಿ ಕೊಂಚ ಮಣ್ಣಿನ ಕಲೆಯಿದ್ದಿತು. "ಇದೇ ಅಲ್ಲೇನೋ ನೀನು ಸರಿಯಾಗಿ ಕೆಲಸಮಾಡುವುದು ? ಕತ್ತೆ!" ಎಂದ. ಅವನ ಹೆಮ್ಮೆಯ ಮಾತುಗಳು ನನಗೆ ಕಣ್ಣಲ್ಲಿ ನೀರನ್ನು ತಂದುವು. 'ಚಿಕ್ಕವನಿದ್ದಾಗ ಹೆಗಲಮೇಲೆ ಕೈಹಾಕಿ ಆಡುತ್ತಿದ್ದ 'ಮಾಧುವೂ' ಇವನೂ ಒಂದೇ ವ್ಯಕ್ತಿಯೇ ?' ಎಂದು ನನಗೆ ಅನುಮಾನವಾಯಿತು. ನಾನೆಂದೆ: 'ಇದು ನಾನು ಮಾಡಿದುದಲ್ಲ; ನಾನು ಒಣಗಹಾಕಿದ ಮೇಲೆ ಮಕ್ಕಳು ಎಲ್ಲೋ ಆಟವಾಡುತ್ತಾ ಮಣ್ಣು ಹಾರಿಸಿರಬಹುದು'; ನಿಜವಾಗಿ, ಹೇಳ್ತೀನೆ ಸಾರ್, ನಾನು ಅದನ್ನು ಮಣ್ಣು ಮಾಡಿರಲಿಲ್ಲ. ಆದರೆ ಕೋಪದಲ್ಲಿ ತನ್ನನ್ನೇ ತಾನು ಮರೆತಿದ್ದ ಮಾಧುವಿಗೆ ನನ್ನ ಮಾತು ಸತ್ಯವೆಂದೆನಿಸಲಿಲ್ಲ. "Men in a passion are heedless of argument" (ಕೋಪದಲ್ಲಿರುವ ಮನುಷ್ಯರಿಗೆ ಕಾರಣವು ತಿಳಿಯುವುದೆ ?) ಎಂಬುದರ ಸತ್ಯಾಂಶ ನನಗಂದು ಮನಸ್ಸಿಗೆ ಬಂತು ಸಾರ್ ! ನಾನು ಪಂಚೆಯನ್ನು ಮುದುರಿ, ನಲ್ಲಿಯ ಹತ್ತಿರ ಹೊರಡಬೇಕೆಂದು ಹವಣಿಸುತ್ತಿದ್ದೆ. ಆದರೆ ನನ್ನ ಉತ್ತರದಿಂದ ಮಾಧುವಿನ ಕೋಪವು ಮಿತಿ ಮೀರಿದ್ದಿತು. ನಾನು ಹೇಳಿದುದು ಸುಳ್ಳೆನೆಂದು ತರ್ಕಿಸಿದ್ದ ಮಾಧುವು 'ಮಾಡಿರೋ ಮಣ್ಣಿನ್ನೂ ಕೆಲಸದ ಜೊತೇಲಿ ಸುಳ್ಳು ಬೇರೆ ಬೊಗಳುತ್ತೀಯೇನು?' ಎಂದು ನನ್ನ ಕೆನ್ನೆಗೆ ಛಳೀರನೆ ಒಂದು ಏಟು ಬಿಟ್ಟು, ಅಸತ್ಯಕ್ಕಿದ್ದ ಅಸಹ್ಯೆಯನ್ನು ವ್ಯಕ್ತಪಡಿಸಿದ ಸಾರ್! ನಾನು ಬಡತನದಲ್ಲಿದ್ದುದೇನೋ ನಿಜ; ಆದರೆ ಆತ್ಮಗೌರವಕ್ಕೆ ಕುಂದುಬರುವ ಕೆಲಸವನ್ನು ನಾನೆಂದಿಗೂ ಸಹಿಸುತ್ತಿರಲಿಲ್ಲ. 'ಹಾಗಾದರೆ ಮಾಣಿಯ ಕೆಲಸವು ಗೌರವಯುತವಾದುದೊ ?' ಎಂದು ನೀವು ಕೇಳಬಹುದು. ಅದಕ್ಕೆ ನಾನು ಹೇಳುವುದು 'Honour and shame under no condition arise; Act well your part there all the honour lies' ಎಂದು. ನಾನು ಕೆಲಸವನ್ನು ಸರಿಯಾಗಿ ಮಾಡಿದರೂ ಅವನು ನನ್ನನ್ನು ಹೊಡೆದುದು ನನ್ನ ಸಹನೆಯನ್ನು ಮೀರಿಸಿತು. ನೋಡಿ ಸಾರ್; ಊಟವಿಲ್ಲ, ಬಿಸಿಲುಹೊತ್ತು, ಆಯಾಸ, ಇಂತಹ ಸ್ಥಿತಿಯಲ್ಲಿ ಅವನಾಡಿದ ಮಾತುಗಳೂ, ಕೊಟ್ಟ ಏಟೂ ನನ್ನನ್ನು ಸಜೀವ ಹೆಣವನ್ನಾಗಿ ಮಾಡಿದುವು. ಅವನನ್ನು ಒಮ್ಮೆ ದುರುದುರನೆ ನೋಡಿದೆ. ಅದೇನು ಕಾರಣದಿಂದಲೋ ಅವನು ಹಿಂದು ಹಿಂದಕ್ಕೆ ಸರಿದ. ನಾನೂ ಮುಂದು ಮುಂದಕ್ಕೆ ನಡೆದೆ. ಅವನ ಹತ್ತಿರ ಹೋಗಿ, ಮುಂದೆ ನಿಂತು, ನನ್ನ ಬಲಗೈಯನ್ನು ಅವನ ಎಡಹೆಗಲ ಮೇಲೆ ತಟ್ಟಿ, 'ಮಾಧೂ, ದಯೆಯಿಟ್ಟು ಕ್ಷಮಿಸು' ಎಂದಷ್ಟು ಮಾತ್ರ ಹೇಳಿ, ಅವನ ಪಂಚೆಯನ್ನು ಅವನ ಹೆಗಲಮೇಲೆ ಹಾಕಿ, ಅವರ ಮನೆಯನ್ನು ಬಿಟ್ಟು ಹೊರಟೆ. ಅವರ ಮನೆಯನ್ನು ಬಿಟ್ಟು, ಅವರು ಅದುವರೆಗೆ ಕೊಡುತ್ತಿದ್ದ ಸಂಬಳದಲ್ಲಿ ಕೊಂಚ ಹಣ ಉಳಿದ್ದುದರಿಂದ, ಹೋಟೆಲಿನಲ್ಲಿ ಊಟಮಾಡೋಣವೆಂದು ಹೊರಟೆ. ಆದರೆ ಅಷ್ಟರಲ್ಲಿ ಅಂಚೆಯವನು ಬಂದು ಪತ್ರವನ್ನು ತಂದುಕೊಟ್ಟ. ಅದು ನಮ್ಮ ತಂದೆಯವರದು. ಅವರು '—ನನಗೆ ಬಹಳ ಸಾಲವಾಗಿದೆ; ಇದೆಲ್ಲಾ ನಿನ್ನ ವ್ಯಾಸಂಗಕ್ಕೋಸ್ಕರ ಮಾಡಿದುದೆಂದು ಬೇರೆ ಹೇಳಬೇಕಾಗಿಲ್ಲ; ಆದರೆ ನನಗೆ ಬರುವ ಅಲ್ಪ ಪೆನ್‌ಷನ್‌ನಲ್ಲಿ ಅದನ್ನು ತೀರಿಸಲು ಸಾಧ್ಯವಿಲ್ಲ. ಆದುದರಿಂದ ಅದನ್ನು ನೀನೇ ತೀರಿಸಬೇಕಾಗಿದೆ—' ಎಂದು ಬರೆದಿದ್ದರು. ಸರಿ; ನಾನು ಊಟವನ್ನು ಕೂಡ ಮಾಡದೆ, ಆ ಅಲ್ಪ ಹಣದಿಂದಲೇ—ಬೆಂಗಳೂರಿಗೆ—ನಿಜಾಂಶವೆಲ್ಲವನ್ನೂ ತಿಳಿಯಲು— ಹೊರಟೆ.

ಬೆಂಗಳೂರಿನಲ್ಲಿ ನಮ್ಮ ತಂದೆಯವರು, ನಮ್ಮ ಚಿಕ್ಕಪ್ಪನ ಮನೆಯಲ್ಲಿ ಊಟಮಾಡಿಕೊಂಡಿದ್ದಾರೆಂದು ತಿಳಿದುಬಂದಿತು. ಅವರ ಮನೆಗೆ ಹೋದೆ. ಅಂದು ಅವರ ಮನೆಯಲ್ಲಿ ಅವರ ಮಗುವಿನ ಹುಟ್ಟಿದ ಹಬ್ಬ. ಅವರ ಮನೆಗೆ ಹೋದಾಗ ಸಾಯಂಕಾಲ ಸುಮಾರು ನಾಲ್ಕು ಗಂಟೆಯಾಗಿದ್ದಿತು. ಇನ್ನೂ ನನಗೆ ಊಟವಾಗಿರಲಿಲ್ಲ. ಅವರೆಲ್ಲರೂ ಊಟಮಾಡಿ ಒಂದು ಕೊಠಡಿಯಲ್ಲಿ ಇಸ್ಪೀಟ್ ಆಟವಾಡುತ್ತಿದ್ದರು. ನಾನು ಒಳಗೆ ಹೋದಕೂಡಲೆ, ಎಲ್ಲರ ಮುಖದ ಮೇಲೆಯೂ ಅಸಹ್ಯೆಯೂ, ಜುಗುಪ್ಸೆಯೂ ಮೂಡಿದುವು. ಆದರೂ ನಾನು ನಮ್ಮ ತಂದೆಯವರ ಜೊತೆಯಲ್ಲಿ ಮಾತನಾಡಬೇಕಾಗಿದ್ದುದರಿಂದ ಅಲ್ಲಿಯೇ ಕುಳಿತೆ.

ನಮ್ಮ ಚಿಕ್ಕಪ್ಪನಿಗೊಬ್ಬ ಮಗನಿದ್ದಾನೆ; ರಾಜನೆಂದು ಅವನ ಹೆಸರು. ನಾನು ಫೇಲಾದರೂ ನನ್ನನ್ನು ತಿರಸ್ಕರಿಸದಿದ್ದವನೆಂದರೆ ಅವನೊಬ್ಬ. ಅವನು ಬಹಳ ಬುದ್ಧಿವಂತ; ಅವನೂ ನಾನೂ ನಿಜವಾಗಿಯೂ ಒಳ್ಳೆಯ ಗೆಳೆಯರಾಗಿದ್ದೆವು. ಆದರೆ ಅವನ ತಂದೆಯವರಿಗೆ ಮಾತ್ರ ಅವನು ನನ್ನೊಡನೆ ಸೇರುವುದು ಸಹಿಸುತ್ತಿರಲಿಲ್ಲ. ನಮ್ಮ ತಂದೆಯವರೂ ಅನೇಕ ಸಲ ರಾಜನನ್ನು ಹೊಗಳಿ, ನನ್ನನ್ನು ಅಲ್ಲಗಳೆದಿದ್ದರು.

ಆ ದಿನ ಅಲ್ಲಿ ಸೇರಿದ್ದವರ ಮಾತು ನಮ್ಮಿಬ್ಬರ ವಿಚಾರಕ್ಕೆ ತಿರುಗಿತು. ನಾನು ಅಲ್ಲಿರುವುದು ಅವಿವೇಕವೆಂದು ತಿಳಿದು ಹೊರಗೆ ಬಂದೆ. ಆದರೂ ಅವರ ಮಾತನ್ನು ಕೇಳಬೇಕೆಂದು ಆಶೆಯಾದುದರಿಂದ ಬಾಗಿಲಹತ್ತಿರ ನಿಂತೆ. ಆಟಗಾರರಲ್ಲೊಬ್ಬನು "ಏನ್ರೀ, ಗೋಪಾಲರಾಯರೆ (ನಮ್ಮ ಚಿಕ್ಕಪ್ಪ) ನಿಮ್ಮ ಮಗ ಏನ್ಮಾಡ್ತಾನೆ ?" ಎಂದರು. ಅದಕ್ಕೆ ನಮ್ಮ ಚಿಕ್ಕಪ್ಪನವರು "ಬಿ.ಎಸ್‌ಸಿ. ಆಯ್ತು, ಮುಂದಕ್ಕೆ ಟಾಟಾ ಇನ್‌ಸ್ಟಿಟ್ಯೂಟಿಗೆ ಸೇರ್ಬೇಕೂಂತಿದಾನೆ" ಎಂದರು. ಅದಕ್ಕೆ ಮೂರ್ತಿರಾಯರು "ನಿಮ್ಮ ಮಗ ?" ಎಂದು ನಮ್ಮ ತಂದೆಯವರನ್ನು ಕೇಳಿದರು. "ಅವನೊಬ್ಬ ಪೋಲಿ; ಬಿಡಿ ಅವನ ಮಾತು; ಅವನಿಗೆ ಬರುವ

ವಿದ್ಯೆ ಎಂದರೆ ಅಡಿಗೆಮಾಡುವುದು'' ಎಂದರು. ಅದಕ್ಕೆ ನಮ್ಮ ಚಿಕ್ಕಪ್ಪನವರು "ಬಿಡೊ, ನಮ್ಮ ರಾಜ ನಾಳೆ ಎಂಜಿನಿಯರ್ ಆಗಿ ಬರ್‍ತಾನಲ್ಲ! ಆಗ ನಿಮ್ಮ ವಾಸೂ, ಅವನ ಹತ್ತಿರ ಅಡಿಗೆ ಮಾಡಿಕೊಂಡಿರ್‍ತಾನೆ'' ಎಂದರು. ಆಗ ನೋಡಿ ಸಾರ್, ನನಗೆ ಮಾಧುವು ಕೊಟ್ಟ ಏಟಿಗಿಂತಲೂ ಮಿಗಿಲಾದ ಯಾತನೆಯಾಯಿತು. ಅಂದಿನಿಂದ ರಾಜನಿಗೆ ಮುಖತೋರಿಸಬೇಕೆಂದರೆ ನನಗೆ ಆಗುವು ದಿಲ್ಲ. ಇವರುಗಳ ಮಾತಿನಿಂದ ನನಗೂ ರಾಜನಿಗೂ ಇದ್ದ ಮೈತ್ರಿಯು ಅಂದು ಮುರಿಯಿತು. ನಾನು ಹೋಗಿದ್ದ ಕೆಲಸ ವನ್ನು ಬಿಟ್ಟು, ಈ ಊರಿಗೆ ಬಂದೆ. ಇಲ್ಲಿಯೂ ಅನೇಕ ಕಡೆ ಅಲೆದು, ಕೊನೆಗೆ ಈ ಹೋಟೆಲಿಗೆ ಬಂದೆ.

ನಾನು ಇಲ್ಲಿಗೆ ಬಂದ ದಿವಸ, ಹೋಟೆಲಿಗೆ ಹೋಗಿ ಕೆಲಸ ಕೇಳಲು ಬಾಗಿಲ ಬಳಿ ನಿಂತೆ. ಸಾಹುಕಾರರು ಬಹಳ ಯೋಚನೆ ಯಲ್ಲಿದ್ದಂತೆ ತೋರಿತು. ನನ್ನನ್ನು ನೋಡಿ 'ನಿನಗೆ ಬರೆಯುವು ದಕ್ಕೆ ಬರುತ್ತದೆಯೆ ?' ಎಂದರು. ನಾನು 'ಬರುತ್ತದೆ' ಎಂದೆ. 'ಹಾಗಾದರೆ ದೀಪದ ಆಫೀಸಿಗೊಂದು ಅರ್ಜಿ ಬರೆದುಕೊಡು' ಎಂದರು. ನಾನು ಬರೆದೆ; ಆಗ ಅವರು ನನಗೆ ಕೆಲಸ ಕೊಟ್ಟರು. ನಾನು ಆಗ ಈ ಕೆಲಸಕ್ಕೆ ಸೇರುವುದಕ್ಕೆ ಕೊಂಚ ಹಿಂಜರಿದರೂ, ಕೂಡಲೆ ತಂದೆಯವರ ಸಾಲದ — ನನಗಾಗಿ ಮಾಡಿದ ಸಾಲದ— ನೆನಪಾಗಿ, ಋಣವಿಮುಕ್ತನಾಗುವುದಕ್ಕಾಗಿ, ಈ ಕೆಲಸಕ್ಕೆ ಸೇರಿದೆ. ಅಂದಿನಿಂದ ಇಂದಿನ ವರೆಗೂ— ಎಂದರೆ ಸುಮಾರು ಎರಡು ವರ್ಷ ಕಾಲ— ಇಲ್ಲಿದ್ದೇನೆ ನೋಡಿ ಸಾರ್! ಇದೇ ನನ್ನ ಕಥೆ-" ಎಂದು ವಾಸುವು ತನ್ನ ಕತೆಯನ್ನು ಮುಗಿಸಿದ.

ಇದೇ ವಾಸುವು ಒಂದುವಾರದ ಕೆಳಗೆ ಹೇಳಿದ ಕಥೆಗೂ ಈ ಕಥೆಗೂ ಅದೆಷ್ಟು ಅಂತರವಿದ್ದಿತು !! ಬಡತನಕ್ಕೆ ಸಿಲುಕಿ ನರಳಿದ ವಾಸುವಿನ ಮುಖದ ಮೇಲೆ ಚಿಂತೆಯ ಮುದ್ರೆಯು ಬಿದ್ದಿದ್ದಿತು.

ವಾಸುವಿನ ಕಣ್ಣುಗಳು ನನ್ನ ಪುಸ್ತಕಗಳ ಕಪಾಟಿನ ಕಡೆಗೆ ಹೊರಳಿದುವು. ಅಲ್ಲಿದ್ದ 'Golden Treasury' ಯನ್ನು ಕಂಡು "ದಯವಿಟ್ಟು ಒಂದು ದಿನದ ಮಟ್ಟಿಗೆ ಅದನ್ನು ಕೊಟ್ಟಿರಿ ಸಾರ್" ಎಂದ. ನಾನು ಧಾರಾಳವಾಗಿ ಆಗಬಹುದೆಂದು ಕೊಟ್ಟೆ. ಅವನು ಅದರ ಹಾಳೆಗಳನ್ನು ತಿರುವಿ ಹಾಕುತ್ತ "ಒಂದು ದಿನದ ಮಟ್ಟಿಗಾದರೂ ಸಾಹುಕಾರನಾಗೋಣ" ಎಂದನು. ನನಗೆ ಅರ್ಥವಾಗಲಿಲ್ಲ; "ಏನು ವಾಸು, ಹಾಗಂತೀಯಾ?" ಎಂದೆ. ಅದಕ್ಕೆ ಅವನು ಅದರ ಮುನ್ನುಡಿಯಲ್ಲಿಯ ಒಂದು ವಾಕ್ಯವನ್ನು ತೋರಿಸಿದ. ಅದರಲ್ಲಿ 'Poetry gives treasures, more golden than gold' ಎಂದಿತ್ತು. ವಾಸುವಿನ ಪ್ರತಿಭೆಯನ್ನೂ ಸಾಹಿತ್ಯಪ್ರೇಮವನ್ನೂ ಕಂಡು ಬೆರಗಾದೆ.

ಇಷ್ಟು ಅವನು ಹೇಳುವ ಹೊತ್ತಿಗೆ ಒಂಭತ್ತು ಗಂಟೆಯನ್ನು ಸೂಚಿಸುವ ದೀಪವಾರಿತು. "ಇದನ್ನು ಓದುವುದಕ್ಕೆ ನಿನಗೆ ಬೇರೆ ಒಂದು ಕೊಠಡಿ ಇದೆಯೆ?" ಎಂದು ಕೇಳಿದೆ. "ಸಾಹುಕಾರರು ಬಹಳ ದಯೆ ತೋರಿಸಿ ಒಂದು ಕೊಠಡಿ ಕೊಟ್ಟಿದ್ದಾರೆ ಸಾರ್" ಎಂದ. "ನಾನು ನೋಡಬಹುದೊ?" ಎಂದೆ; "ಅವಶ್ಯವಾಗಿ ಸಾರ್" ಎಂದ. ನಾನು ಅವನ ಕೊಠಡಿಗೆ ಹೋಗಿ ನೋಡಿದೆ. ಒಂದು ಪೆಟ್ಟಿಗೆಯ ಮೇಲೆ ವಾಸು ತನ್ನಲ್ಲಿದ್ದ ಪುಸ್ತಕಗಳನ್ನು ಜೋಡಿಸಿಟ್ಟಿದ್ದ. ಒಟ್ಟು ಎಂಟು ಪುಸ್ತಕಗಳು ಇದ್ದುವು. ಒಂದೊಂದನ್ನಾಗಿ ತೆರೆದು ನೋಡಿದೆ. ಅವುಗಳಲ್ಲಿ ಮೂರು, ವಾಸುವು ಕಾಲೇಜಿನಲ್ಲಿದ್ದಾಗ ಡಿಬೇಟಿನಲ್ಲಿ ಮೊದಲನೆಯ ಬಹುಮಾನವಾಗಿ ಪಡೆದಿದ್ದುವು. ಇನ್ನು ಮೂರು Elocution ನಲ್ಲಿ ಮೊದಲನೆಯ ಬಹುಮಾನ. ಇನ್ನೆರಡು, 'ಪ್ರಬುದ್ಧ ಕರ್ಣಾಟಕ' ದ ಸಂಚಿಕೆಗಳು; ಅವನ್ನು ವಾಸುವು ದುಡ್ಡು ಕೊಟ್ಟು ಕೊಂಡಿದ್ದ.

ಇಷ್ಟು ವಿದ್ಯೆ ಇದ್ದ ವಾಸುವು ಈ ಕೆಲಸಕ್ಕೇಕೆ ಬಂದನೆಂಬುದು ನನಗೊಂದು ಸಮಸ್ಯೆಯಾಯಿತು.

ಮರುದಿನ ರಾತ್ರಿ ವಾಸುವು 'Golden Treasury' ತಂದ. ಆಗ ನಾನು "ನೀನು ಇಷ್ಟು ಓದಿದುದು ವ್ಯರ್ಥವಾಯಿತಲ್ಲಾ ವಾಸು" ಎಂದೆ. ಅದಕ್ಕೆ ಅವನು "ನಮ್ಮಲ್ಲಿ ಡಿಗ್ರಿ ಇಲ್ಲದವನ ವಿದ್ಯೆಗೂ, ವಿಧವೆಯ ರೂಪಿಗೂ, ಬಡವನ ಗುಣಕ್ಕೂ, ಹೊಲೆಯನ ದೈವಭಕ್ತಿಗೂ ಸ್ಥಾನ-ಮಾನಗಳಿಲ್ಲಾ ಸಾರ್" ಎಂದು, "ಬರ್‍ತೀನ್ ಸಾರ್" ಎಂದು ಹೊರಟ.

ನಾನು ಪುಸ್ತಕದ ಹಾಳೆಗಳನ್ನು ತಿರುವಿ ಹಾಕುತ್ತಿದ್ದೆ. ಅದರಲ್ಲಿ ವಾಸುವಿನ ಅಕ್ಷರದ ಒಂದು ಚೀಟಿ ಇದ್ದಿತು. ಅದನ್ನು ಇಟ್ಟಿದ್ದ ಹಾಳೆಯಲ್ಲಿ:

"God's in his heaven
And all's right in the World"

ಎಂದಿತ್ತು.

ಆದರೆ ಚೀಟಿಯಲ್ಲಿ ವಾಸುವು:

"Gods perchance in heaven
But naught's right in the World"*

ಎಂದು ಬರೆದಿದ್ದ.

ವಾಸುವಿನ ಮತವೇ ನಮ್ಮವರ ಜೀವನದ ಪಲ್ಲವಿ.

ಯುಗಾದಿಯ ದಿನದ ಸಂಗತಿಗಳು ನಿಜವಾಗಿ ವರ್ಷವೆಲ್ಲಾ ನಡೆಯುವುವಾದರೆ, ಈ ಸಲದ ಯುಗಾದಿಯೇ ನಿಜವಾದ ಯುಗಾದಿ.

---

* ದೇವನಿರಬಹುದೇನೊ ಸ್ವರ್ಗದಲ್ಲಿ
ಆದರವ ಜಗದೊಳೆಲ್ಲಿಯು ಇಲ್ಲವಿಲ್ಲಿ!

ಬಾರು ★

★ ರಾಜಾರಾವ್

'ಹರಟೆಮಲ್ಲ'

ಅಖಿಲಭಾರತ ರಾಷ್ಟ್ರಸಭೆಯ ಕಾರ್ಯದರ್ಶಿಗಳಾಗಿ ಹಲವುಕಾಲ ಕೆಲಸಮಾಡಿದ ರಾಜಾರಾಯರ ಹೆಸರನ್ನು ಅನೇಕರು ಕೇಳಿರಬಹುದು; ಆದರೆ ಅವರ ದಿವ್ಯ ವ್ಯಕ್ತಿತ್ವವನ್ನು ಅರಿತುಕೊಂಡವರು ತೀರ ಕಡಿಮೆ ಜನರು. ರಾಜಾರಾಯರಂತಹ ಜೀವಿಗಳು ಬೆಳಗಿಸಿದ ಆತ್ಮ-ಜ್ಯೋತಿಗಳು, ಮಾನವಕೋಟಿಗಾಗಿ ಹಚ್ಚಿದ ಹಣತೆಗಳು.

★

'Rajarao, it seems you have topped the polls' –ಏನು ರಾಜಾರಾವ್', ಚುನಾವಣೆಯಲ್ಲಿ ನೀನು ಎಲ್ಲರಿಗಿಂತ ಮೇಲೆ ಬಂದೆಯಂತೆ! — ಎಂದು ಒಮ್ಮೆ ಸರಸವಾದ ಮಾತಿನಲ್ಲಿ, ೧೯೩೭ರ ಕಾಂಗ್ರೆಸ್-ಚುನಾವಣೆಗಳ ಕಾಲದಲ್ಲಿ ಆಂಧ್ರ ನಾಯಕರ ಗುಂಪಿನಲ್ಲಿದ್ದ ಸಾಮಾನ್ಯ ವ್ಯಕ್ತಿಯೊಬ್ಬರನ್ನು ಮುಗುಳುನಗೆ ನಗುತ್ತ ಅಭಿನಂದಿಸಿದರು. ಆ ಕಾಲದಲ್ಲೇ ಹಿಂದುಸ್ಥಾನದ ಕಣ್ಣಿಗೆ ಬಾರು ರಾಜಾರಾವು* ಬಿದ್ದುದು. ಆಂಧ್ರರಾದರೂ ಅಷ್ಟೆ; ಆಗಲೆ ಅವರನ್ನು ಗುರುತಿಸಿಕೊಂಡುದು.

ಪ್ರತ್ಯಕ್ಷವೇ ಪ್ರಮಾಣವೆಂಬ ಚಾರ್ವಾಕ ಸಿದ್ಧಾಂತವು ವೇದಾಂತದಲ್ಲಿ ಅಲ್ಲಗಳೆಯಲ್ಪಟ್ಟಿದ್ದರೂ, ವ್ಯವಹಾರದಲ್ಲಿ ಮಾತ್ರ ಅದರದೇ ಏಕಚ್ಛತ್ರಾಧಿಪತ್ಯ. ಜನರಿಗೆ ಎಲ್ಲಕ್ಕಿಂತ ಕಣ್ಣೇ ಪ್ರಧಾನವಾದ ಇಂದ್ರಿಯ. ಗುಣಕ್ಕಿಂತ ರೂಪಕ್ಕೇ ಬೆಲೆ ಕೊಡುವ ಬುದ್ಧಿಗೆ ಇದೇ ಮೂಲ. ಅದರಲ್ಲೂ ಪರಸ್ಪರ ಗುಣಗ್ರಹಣದ ಸಂದರ್ಭವಾದರೆ ಸರಿ, ಆನೆಯ ಕಣ್ಣೇ ನಮ್ಮದು. ಆ ಮಾತಿಗೆ ಬಂದರೆ, ನಮ್ಮ ಕಣ್ಣು ಕಿರಿದಿದ್ದಷ್ಟೇ ಬುದ್ಧಿಯೂ ಮಂದ. ನಾಟಕರಂಗದಲ್ಲಿ ನಿಂತು ಗೆಜ್ಜೆಗಾಲಿನಿಂದ ಕುಣಿವ ನಟಿಯನ್ನು ನಾವು ತಿಳಿದುಕೊಂಡಂತೆ ಸೂತ್ರಧಾರನನ್ನು ಅರಿತುಕೊಳ್ಳುತ್ತೇವೆಯೆ? ಪವಾಡ ಮೆರೆಯಿಸುವ ತನಕ ಯಾವ ಭಕ್ತನನ್ನು ನಾವು ಒಪ್ಪಿದ್ದೇವೆ?

ಬಾರು ರಾಜಾರಾವು ಈ ಸೂತ್ರಕ್ಕೆ ಸರಿಯಾದ ಸಾಕ್ಷಿ. ೧೯೧೮ರಿಂದ ೧೯೩೪ರ ವರೆಗೆ ಅವಿಚ್ಛಿನ್ನವಾಗಿ ಅವರು ಕಾಂಗ್ರೆಸ್ಸಿಗೆ ಸಹಾಯಕ ಕಾರ್ಯದರ್ಶಿಯಾಗಿಯೋ ಕಾರ್ಯದರ್ಶಿಯಾಗಿಯೋ, ಅಂತು ಕಾಂಗ್ರೆಸ್ಸಿನ ಮುಖ್ಯಕಾರ್ಯಾಲಯದ ಸೂತ್ರಗಳನ್ನು ತಮ್ಮ ಕೈಯಲ್ಲಿ ಹಿಡಿದಿದ್ದರು. ಅಷ್ಟು ದೀರ್ಘಕಾಲ ಅದನ್ನು ತಮ್ಮದೇ ಗುತ್ತಿಗೆಮಾಡಿರುವುದು ಸಣ್ಣಮಾತಲ್ಲ, ಹಗುರಾದ ಕೆಲಸವಲ್ಲ. ಅದರಲ್ಲೂ ಆ ಹದಿನಾರು ವರ್ಷದ ಕಾಂಗ್ರೆಸ್ಸಿನ ಇತಿಹಾಸ ಸಾಧಾರಣವಾದುದಲ್ಲ. ಅದೊಂದು ಹಿಂದುಮುಂದು ಇಲ್ಲದ ಕೋಲಾಹಲದ ರಣಕೇಳಿ, ಅತಿರಥ ಮಹಾರಥರು ಕಾಂಗ್ರೆಸ್ಸುರಥವನ್ನೇರಿ ತಮತಮಗೆ ತೋರಿದತ್ತ ನಡೆಯಿಸಿದರು. ಇವರೆಲ್ಲರ ಉತ್ಸಾಹ ಉದ್ರೇಕಗಳ ಗದ್ದಲದಲ್ಲಿ, ರಥವನ್ನು ಮುರಿಯದೆ ಮಣ್ಣಾಗದೆ ಕಾಪಾಡುತ್ತ ಅವರವರಿಗೆ ನೆರವಾಗುವ ಸಾರಥ್ಯ ಬಲುಬಿಗುವಿನ ಕೆಲಸವೇ ಸರಿ. ರಾಜಾರಾಯರು ಆ ಮಹಾಸಾಹಸಮಾಡಿ ಗೆದ್ದ ಧೀರರು. ಆ ಶ್ರದ್ಧೆ, ಆ ಸ್ಥೈರ್ಯಕ್ಕೆ ಭಾರತೀಯರೆಲ್ಲರೂ – ಮುಖ್ಯವಾಗಿ ಕಾಂಗ್ರೆಸ್ಸು ಪ್ರೇಮಿಗಳೆಲ್ಲ— ಮುಟ್ಟಿಸಬೇಕಾದ ಸಾಲ ತೀರಲಾರದಂಥದು; ಅಮರವಾದುದು.

ಆ ಹದಿನಾರು ವರ್ಷದಲ್ಲಿ ಅವರಿಗೆ ಪರಿಚಯವಾಗದ ನಾಯಕರಿಲ್ಲ. ಅವರು ಕಾಣದ ವಿಶೇಷಪ್ರಸಂಗವಿಲ್ಲ. ಪಂಡಿತ ಮದನಮೋಹನ ಮಾಳವೀಯರ ಪವಿತ್ರ ವರ್ತನೆ, ಮೋತಿಲಾಲರ ಅಖಂಡ ವೈಭವ, ಚಿತ್ತರಂಜನದಾಸರ ತ್ಯಾಗಜೀವನ, ಜವಹರಲಾಲರ ಧೀರೋದಾತ್ತತೆ, ವಲ್ಲಭಭಾಯಿಯ ಚತುರೋಪಾಯ ಸಮರ್ಥತೆ,– ಎಲ್ಲಕ್ಕಿಂತ ಹಿರಿದಾಗಿ ಗಾಂಧೀಜಿಯ ಪ್ರಶಾಂತ ರಮಣೀಯ ಜೀವನ– ಎಲ್ಲದರ ಅನುಭವವೂ ಅವರಿಗೆ ಆಯಿತು. ಎಲ್ಲರ ಅಭಿಮಾನ ಆದರಗಳೂ ದೊರೆತಿದ್ದುವು. ಮೋತಿಲಾಲರಿಗಂತೂ ರಾಜಾರಾವು ಮನೆಯ ಮಂದಿ. ಅಷ್ಟು ಅಭಿಮಾನ. 'Raja Rao is the power behind the throne' – ಈ ಸಿಂಹಾಸನದ ಆಧಾರ ಶಕ್ತಿ ರಾಜಾರಾವೇ – ಎನ್ನುತ್ತಿದ್ದರಂತೆ ಅವರು.

* ಇವರ ಚಿತ್ರದ ಪಡಿಯಚ್ಚನ್ನೂ ಇದರೊಂದಿಗೆ ಪ್ರಕಟಿಸಬೇಕೆಂದು ತುಂಬ ಪ್ರಯತ್ನ ಮಾಡಲಾಯಿತು. ಆದರೆ ಸಿಕ್ಕಲಿಲ್ಲ.

—ಸಂ. ಜ.

ಎಲ್ಲಕ್ಕಿಂತ ಅಗ್ಗ ! ಎಲ್ಲಕ್ಕಿಂತ ಉತ್ತಮ !
ಮಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ !



೮ ಆಣೆಗೆ ೧೦ ಬ್ಲೇಡು !

ಹೀಗಿದ್ದರೂ ರಾಜಾರಾವು ಚುನಾವಣೆಗೆ ನಿಂತರೆ ಸ್ಪರ್ಧೆ ತಪ್ಪಲಿಲ್ಲ. ಇತರ ದೇಶಗಳಲ್ಲಿ ಇಂಥ ತ್ಯಾಗಕ್ಕೆ ಆ ರೀತಿಯ ಗೌರವ ಮುಡಿಪಾಗಿ ಸಲ್ಲುತ್ತಿತ್ತು. ನಮ್ಮದು ಏನೆಂದರೂ ಭಾರತದೇಶ, ಧರ್ಮಭೂಮಿ. ರಾಜಾರಾವನ್ನು ಶಾಸನ ಸಭೆಗೆ ಹುರಿಯಾಳಾಗಿ ನಿಲ್ಲಬೇಕೆಂದು ಕಾಂಗ್ರೆಸ್ ನಾಯಕರು ಕೇಳಲಿಲ್ಲ. ರಾಜಮಹೇಂದ್ರದ ಮುಂದಾಳುಗಳು ಕೆಲವು ಜನ ಹಾಗೆ ಮಾಡಿರೆಂದು ಪಟೇಲರಿಗೆ ಬಿನ್ನಹ ಕಳಿಸಬೇಕಾಯಿತು. ಚುನಾವಣೆಯಲ್ಲಿ ಪ್ರತಿಸ್ಪರ್ಧಿಗಳು, ಇವರ ೧೭ವರ್ಷದ ಸೇವೆಯನ್ನೇ ಒಂದು ಕೊರತೆಯಾಗಿ ಕಾಣಿಸುವಂತೆ ಅರ್ಥಮಾಡಿದರು. 'ಬಹಳ ಕಾಲದಿಂದ ಅವರು ತಮ್ಮ ಪ್ರಾಂತದಲ್ಲಿರಲಿಲ್ಲ. ಅವರಿಗೆ ತೆಲುಗೇ ಸರಿಯಾಗಿ ಬಾರದು' ಎಂದರು. ಬಲ್ಲದ ಗಂಡನಿಗೆ ಮೊಸರಿನಲ್ಲಿ ಕೂಡಾ ಕಲ್ಲೇ. 'ಇವರನ್ನು ನಿಲ್ಲಿಸಿದುದೇನೋ ಆಯಿತು; ಆದರೆ ಮತ ಬಿದ್ದಾವೋ ಇಲ್ಲೋ; ಇವರನ್ನು ಯಾರೂ ಇಲ್ಲಿ ಅರಿಯರಲ್ಲ' ಎಂಬ ಹೆದರಿಕೆ ಕಾಂಗ್ರೆಸ್ಸು ಕಾರ್ಯಕರ್ತರಿಗೂ ಇಲ್ಲದಿರಲಿಲ್ಲ.

ಅದು ನಿಜ. ಚುನಾವಣೆಗಳಿಗೆ ಮೊದಲು ಒಂದೆರಡು ಪ್ರಸಂಗ ನಡೆಯದೆ ಇದ್ದಿದ್ದರೆ ಆ ಹೆದರಿಕೆ ಹಣ್ಣೇ ಆಗಬಹುದಾಗಿತ್ತೋ ಏನೋ! ರಾಜಮಹೇಂದ್ರಕ್ಕೆ ಆ ನಡುವೆ ಜವಾಹರಲಾಲರು ಬಂದರು. ಅವರು ಬಂದಾಗ ವಿಶಾಲವಾಗಿರಲೆಂದು ಕಾಂಗ್ರೆಸು-ಸಮಿತಿಯವರು ಅಲ್ಲಿಯ ಕಾಗದದ ಕಾರಖಾನೆಯ ಯಜಮಾನನಾದೊಬ್ಬ ಜಮೀನುದಾರನ ಮನೆಯಲ್ಲಿ ಬಿಡಾರಕ್ಕೆ ಏರ್ಪಾಡು ಮಾಡಿದರು. ರೈಲಿನಿಂದ ಇಳಿದವರೇ ಜವಾಹರರು ಬಿಡಾರ ಸುದ್ದಿ ವಿಚಾರಿಸಿದರು. ಇದು ಕೇಳಿ 'ರಾಜಾರಾವು ಈ ಊರಲ್ಲೇ ಅಲ್ಲವೆ ಇರುವುದು?' ಎಂದು ಕೇಳಿದರಂತೆ. ಹೌದೆಂದು ಯಾರೋ ಹೇಳಿದರು. 'ಹಾಗಾದರೆ ಅಲ್ಲೇಕೆ ಇಳಿಯುವ ಏರ್ಪಾಟು ಮಾಡಲಿಲ್ಲ?' ಎಂದು ಮತ್ತೆ ಕೇಳಿದರು. 'ಅವರ ಮನೆಯಲ್ಲಿ ಸ್ಥಳ ಬಹಳ ಸಂಕೋಚ. ತಮಗೆ ಅಸೌಕರ್ಯವಾದೀತೇನೋ ಎಂದು ಹೀಗೆ ಮಾಡಿದೆ' ಎಂದು ಏರ್ಪಾಟು ಮಾಡಿದ್ದವರು ಹೇಳಿದರು. ಕೂಡಲೆ ಜವಾಹರರು ತೀವ್ರತೆಯಿಂದ 'ಇದ್ದಷ್ಟೇ ಸ್ಥಳ ಸಾಕು ನನಗೆ. ರಾಜಾರಾವೇ ತನ್ನ ಮನೆಯಲ್ಲಿ ಸ್ಥಳವಿಲ್ಲೆಂದರೆ ನೋಡೋಣ. ಇಲ್ಲದಿದ್ದರೆ ನಾನು ಅಲ್ಲೇ ಇಳಿಯುತ್ತೇನೆ'– ಎಂದರಂತೆ. ರಾಜಾರಾವು ಈ ಅಭ್ಯಾಗತನನ್ನು ಬೇಡವೆಂದಾರೆ! ಇಬ್ಬರೂ ಒಂದು ಓರಗೆಯವರು. ಬಹಳ ಕಾಲ ಒಟ್ಟಿಗೆ ಕೆಲಸಮಾಡಿದವರು. ಒಂದೇ ಕುಟುಂಬದವರಂತೆ ಇದ್ದವರು.

ಕೆಲವು ದಿನದ ಮೇಲೆ ಸರೋಜಿನಿ ಅಲ್ಲಿಗೆ ಬಂದಳು. ಊರಲ್ಲಿ ಸಭೆ ಸೇರಿತು. **ರಾಜಾರಾವು** ಊರಲ್ಲಿರಲಿಲ್ಲ. 'ಓಟಿನ ಬೇಟೆಗೆ ಬಿಜ-ಯ್ಗೈದಿದ್ದರು. ಆ ಸಭೆಯಲ್ಲಿ ಸರೋಜಿನಿ ಅವರನ್ನು ಹೊಗಳಿದುದು ಉತ್ಪ್ರೇಕ್ಷೆಯೇನೋ ಎಂಬ ಹಾಗಿತ್ತು.

ಕಡೆಗೆ ರಾಜಾರಾವು ಗೆದ್ದರು; ಎಲ್ಲರಿಗಿಂತ ಮೊದಲನೆಯವರಾಗಿ ಗೆದ್ದರು.

'ರಾಜಕಾರಣವು ಮಧ್ಯಮ ಜಾತಿಯ ಸಾಧನೆ'– Politics is second best—ಎಂದು ರಾಧಾಕೃಷ್ಣನ್ ಒಮ್ಮೆ ಹೇಳಿದರು. 'ರಾಜಕೀಯದಲ್ಲಿ ಧರ್ಮ-ನೀತಿಗಳ ಗೊಂದಲವೇಕೆ?' ಎಂದು ಶ್ರೀನಿವಾಸಯ್ಯಂಗಾರ್ಯರೂ ಸುಭಾಷಬಾಬುವೂ ಹೇಳುತ್ತಲೇ ಇದ್ದಾರೆ. ಕರಟಕ-ದಮನಕರಾಗದೆ ರಾಜ್ಯಾಂಗ ನಿರ್ವಹಣ ಸಾಧ್ಯವಿಲ್ಲವೆಂಬ ಸಂಪ್ರದಾಯವೂ ನಮ್ಮಲ್ಲಿದೆ. ಈ ಎಳೆಗಳನ್ನು ಜೋಡಿಸಿ ಬಾಳನ್ನು ನೇಯುವದಾದರೆ ರಾಜಾರಾವು ಗಾಂಧೀಜೀಗಿಂತಲೂ ಗೂಢಪ್ರಶ್ನೆಯೇ ಸರಿ.

ಕರಟಕಶಾಸ್ತ್ರಿಯ ಬ್ರಹ್ಮಾಸ್ತ್ರವಾದ 'ನುಡಿಜಾಣ'ತನ ಇವರಲ್ಲಿರಲಿಲ್ಲ. 'ನಡೆ ಬೇರೆ ನುಡಿ ಬೇರೆ ಮನವ ಶಿವನೇ ಬಲ್ಲ' ಎಂಬ ಹಾದಿ ಇವರದಲ್ಲ. ರಾಮಬಾಣಕ್ಕಿದ್ದಂತೆ ಇವರಿಗೆ ತ್ರಿಕರಣ ಲಕ್ಷ್ಯ ಶುದ್ಧಿ. 'ಸಿಕ್ಕರೆ ಮುಡಿ ಸಿಗದಿರೆ ಅಡಿ' ಎಂಬ ನಡೆಜಾಣರೂ ಅಲ್ಲ. ಸದಾ ಸ್ವತಂತ್ರ ವೃತ್ತಿ. ಒಬ್ಬರಿಗೆ ಅಡಿಯಾಳಾಗಿ ಬಾಳುವುದು ಅವರ ಸ್ವಭಾವದಲ್ಲೇ ಇರಲಿಲ್ಲ. ಮಾತಿನಲ್ಲಿ ವಿಲಕ್ಷಣ ರಾಜಸ. ಹಿರಿಯರಾಗಲಿ ಕಿರಿಯರಾಗಲಿ ಮಾತನಾಡಿದರೆ ಅಧಿಕಾರವಾಣಿಯೇ. ನುಡಿಯಲ್ಲಿ ನಿರ್ದಾಕ್ಷಿಣ್ಯ. ಪ್ರಿಯವಿರಲಿ ಅಪ್ರಿಯವಿರಲಿ ತಮ್ಮ ಅಭಿಪ್ರಾಯವನ್ನು ಅವರವರ ಮೇರೆಗೇ ಗಂಟೆಬಾರಿಸಿದಂತೆ ಅನ್ನುವುದೇ. ಜವಾಹರರಂಥವರು 'ರಾಜಾರಾವ್, ಇಷ್ಟು ನಿಷ್ಕಪಟನಾದರೆ ನಡೆಯುವುದಿಲ್ಲಯ್ಯ' ಎಂದು ಇವರಿಗೆ ಬುದ್ಧಿ ಹೇಳುತ್ತಿದ್ದರಂತೆ.

ಒಮ್ಮೆ ರಾಜಾರಾವು ಕಲಕತ್ತೆಗೆ ಹೋಗಿದ್ದರು. ಅಲ್ಲಿ ಚಿತ್ತರಂಜನ ದಾಸರ ಮನೆಯಲ್ಲೇ ಇವರ ಬಿಡಾರ. ಆ ಮಾತು ಈ

ವೀರಪ್ಪ ಶಿವಪ್ಪ ಅರಬಳ್ಳಿ, ರಬಕವಿ

ಬಣ್ಣದ ನೂಲು ಮತ್ತು ಇರಕಲ್

ನಮೂನೆಯ ರಬಕವಿ ಸೀರೆಯ ವ್ಯಾಪಾರಿಗಳು

ನಮ್ಮಲ್ಲಿ ಕೈಮಗ್ಗಗಳ ಮೇಲೆ ಇರಕಲ್ ಧನವಡೀ
ಮತ್ತು ನಾರಾಯಣಪೇಟೆ ಅಂಚಿನ ಉತ್ತಮ
ಮತ್ತು ಬಣ್ಣದ ಪಾತ್ರಿಯ ಸೀರೆಗಳು
ಯೋಗ್ಯಬೆಲೆಗೆ ಸಿಕ್ಕುತ್ತವೆ.

ಮಾತು ಆಡುತ್ತ ಕಲಕತ್ತೆಯ ರಾಮಕೃಷ್ಣಮಠದ ಬಗ್ಗೆ, ಪರಮಹಂಸರ ಶಿಷ್ಯರ ಬಗ್ಗೆ ಇವರು ಪ್ರಸ್ತಾಪಮಾಡಿದರು. ದಾಸರು ಬಿಡುವಾದರೆ ತಾವೂ ಮಠವನ್ನು ನೋಡಬೇಕೆಂದು ಬಯಸಿದರಂತೆ. 'ಇಷ್ಟು ದಿನದಿಂದ ಇದೇ ಊರಿನಲ್ಲಿದ್ದು ಈ ಮಠದ ಬಗ್ಗೆ ನೀವು ಕೇಳಲೇ ಇಲ್ಲವೇ; ಆಶ್ಚರ್ಯ!' ಎಂದರಂತೆ ಇವರು. ರಾಜಾರಾವಲ್ಲದೆ ಬೇರೆಯವರಾಗಿದ್ದರೆ ಹೀಗೆ ಅನ್ನುತ್ತಿದ್ದರೆ? ಆದರೆ ರಾವಿನ ಚರಿತ್ರೆ ಅಕಳಂಕವಾದುದು. ಅದೇ ಇವರ ಸರ್ವಸ್ವ.

ರಾಮಕೃಷ್ಣ ಪರಮಹಂಸರ ಮಾತು ಬಂತು. ರಾಜಾರಾವಿಗೆ ಪರಮಹಂಸರಲ್ಲಿ ಅನನ್ಯ ಭಕ್ತಿ. ಇವರ ಕಾಲೇಜು ಓದು ಕಲಕತ್ತೆಯಲ್ಲಿ ಆಯಿತು. ಆಗ ಇವರಿಗೆ ರಾಮಕೃಷ್ಣ ಮಠದ ಸಂನ್ಯಾಸಿಗಳ ಸಾಂಗತ್ಯ ದೊರೆಯಿತು. ಆಗ ಇನ್ನೂ ಪರಮಹಂಸರ ಹೆಂಡತಿ ಶಾರದಾಮಣಿದೇವಿ ಬದುಕಿದ್ದಳು. ಪರಮಹಂಸರ ಶಿಷ್ಯರಲ್ಲಿ ವಿವೇಕಾನಂದರ ನಂತರ ಹೇಳಬಹುದಾದ ಸ್ವಾಮಿ ಬ್ರಹ್ಮಾನಂದರು (ರಾಖಾಲ) ಮಠಕ್ಕೆ ಹಿರಿಯರು. ಇವರಿಬ್ಬರನ್ನೂ ರಾಜಾರಾವು ಚೆನ್ನಾಗಿ ಬಲ್ಲರು. ಉಳಿದ ಶಿಷ್ಯರೂ ಇವರನ್ನು ಅಕ್ಕರೆಯಿಂದ ಕಾಣುತ್ತಿದ್ದರು. ರಾಮಕೃಷ್ಣ ಪರಮಹಂಸರೆಂದರೆ ರಾವಿಗೆ ಭಗವದವತಾರವೆಂದೇ ನಂಬುಗೆ. ಕಾಂಗ್ರೆಸ್ ಕೆಲಸದಲ್ಲಿ ಸ್ವಲ್ಪ ಬಿಡುವು ದೊರೆತರೆ ಸಾಕು, ಇವರು ಮಠಕ್ಕೆ ಓಡಿಹೋಗುತ್ತಿದ್ದರು.

ಆ ನಂಬಿಗೆಯೇ ಅವರ ಬಾಳಿನ ಭಂಡಾರ. ಅದೇ ಅವರ ತಾರಕ ಮಂತ್ರ.

'ಪರಿಸ್ಥಿತಿ ಅನುಕೂಲವಾಗಿಲ್ಲವಲ್ಲ' ಎಂದು ಅವರ ಗೆಳೆಯರು ಪೇಚಾಡಿದರೆ 'ಏಕೆ ಅಂಜಬೇಕು! ಎಲ್ಲಕ್ಕೂ ಠಾಕೂರು ಇದ್ದಾನೆ' ಎಂದು ಧೈರ್ಯವಾಗಿ ಹೇಳುತ್ತಿದ್ದರಂತೆ. ರಾಮಕೃಷ್ಣರನ್ನು ಬಂಗಾಲದಲ್ಲಿ ಠಾಕೂರ್ ಎಂದು ಕರೆಯುತ್ತಾರೆ. ಠಾಕೂರ್ ಎಂದರೆ ದೇವರು. ಆ ನಂಬಿಗೆಯಿಲ್ಲದೆ ಬಾಳಿನಲ್ಲಿ ರಾಜಾರಾವು ತೋರಿಸಿದ ಧೈರ್ಯ ತೋರುವುದು ಸಾಧ್ಯವಿಲ್ಲ. ಇವರ ಕುಟುಂಬ ದೊಡ್ಡದು. ಮನೆತುಂಬ ಮಕ್ಕಳು. ನಲವತ್ತಾರನೆಯ ವಯಸ್ಸಿನಲ್ಲಿ ಕಾಂಗ್ರೆಸ್ ಕಾರ್ಯದರ್ಶಿಯ ಉದ್ಯೋಗಬಿಟ್ಟರು. ಬಿಟ್ಟಾಗ ಏನಿದೆ? ಒಂದು ಕಾಸೂ ಇಲ್ಲ. ಚುನಾವಣೆಗೆ ನಿಲ್ಲಬೇಕಾಯಿತಲ್ಲ; ದುರ್ಭಿಕ್ಷದಲ್ಲಿ ಅಧಿಕಮಾಸ. ಯಾರೂ ಒಂದು ಕವಡೆ ಕೊಡಲಿಲ್ಲ. ಸಾಲಮಾಡಬೇಕಾಯಿತು. ಹೀಗಿದ್ದರೂ ಅವರು ಎಂದೂ ಮೋರೆ ಗಂಟಿಕ್ಕಲಿಲ್ಲ. ಅದರಲ್ಲಿ ಸುಕ್ಕು ಕಾಣುತ್ತಿರಲಿಲ್ಲ. ಮುಂದೇನು ಎಂಬ ತಾಕಲಾಟವಿಲ್ಲ. ಯಾವಾಗಲೂ ಮುಗುಳು ನಸುನಗುತ್ತ ಮಾತನಾಡುತ್ತಿದ್ದರು. ಸದಾ ವಿನೋದವಾಗಿ ಏನಾದರೊಂದು ಮಾತು ಆಡುವರೇ ಹೊರತು, ಕೊರಗು-ಕಷ್ಟದ ಮಾತಿಲ್ಲ. ನಿರುತ್ಸಾಹವೆಂಬುದೇ ಅವರಿಗೆ ಗೊತ್ತಿರಲಿಲ್ಲ.

ಬರೀ ಒಣನಂಬಿಗೆಯ ಬಾಳಲ್ಲ ಅವರದು. ನಿರಂತರವೂ ಅವರ ಅಧ್ಯಾತ್ಮಸಾಧನೆ ನಡೆದಿತ್ತು. ಅವರಿಗೆ ಕೆಲವು ವಿಲಕ್ಷಣ ಅನುಭವಗಳೂ ಆಗಿದ್ದುವೆಂದು ತಿಳಿದಿದೆ. ಅಲಹಾಬಾದಿನಲ್ಲಿದ್ದಾಗ ಒಮ್ಮೆ ಇವರಿಗೆ ಆಮಶಂಕೆಗೆ ಇಟ್ಟುಕೊಂಡಿತು. ಒಂದೊಂದು ಸಲ ಬರೀ ರಕ್ತವೇ ಬರುತ್ತಿತ್ತು. ಎಲ್ಲರೂ ಇವರ ಆಸೆ ಬಿಟ್ಟರು. ತಾವೇ ಸ್ವತಃ ಆಸೆ ಬಿಟ್ಟುಕೊಂಡರಂತೆ. ಆಗ, ರಾತ್ರಿ ಪರಮಹಂಸರ ದಿವ್ಯದರ್ಶನ ಇವರ ಭಾವದೃಷ್ಟಿಗೆ ಆಗಿ, ಪರಮಹಂಸರು ಇವರಿಗೆ ಅಭಯ ಕೊಟ್ಟರಂತೆ. ಮರುದಿನವೇ ಗುಣಮುಖವಾಯಿತಂತೆ. ಇಂಥವು ಹಲವಾರು ಅನುಭವಗಳು.

ಭಾವ ಸಮಾಧಿ, ದಿವ್ಯದರ್ಶನಗಳನ್ನೂ ಇಂಥ ಅನುಭವಗಳನ್ನೂ ನಂಬುವವರುಂಟು, ನಂಬದವರೂ ಉಂಟು. ನಂಬಲಿ ಬಿಡಲಿ, ಈ ಅನುಭಾವಿಜೀವದ ಪವಿತ್ರತೆಯನ್ನೂ ಆಧ್ಯಾತ್ಮ ಪಿಪಾಸೆಯನ್ನೂ ಅರಿತುಕೊಳ್ಳಲಾರದವರುಂಟೆ? ವಿಶ್ವದ ಸತ್ಯಶೋಧನೆಯ ಹಾದಿಯಲ್ಲಿ ಇಂಥ ಜೀವಿಗಳು ಬೆಳಗಿಸಿದ ಆತ್ಮಜ್ಯೋತಿಗಳು ಮಾನವ ಕೋಟಿಗಾಗಿ ಹಚ್ಚಿದ ಹಣತೆಗಳೆಂದು ತಿಳಿಯದವರುಂಟೆ?

ರಾಜಾರಾವು ಬಹಳ ಅನುಭವಶಾಲಿ. ಕಾಂಗ್ರೆಸಿನ ಮುಂದಿನ ಕಾರ್ಯರಂಗದಲ್ಲಿ ಅವರಿಂದ ಬಹಳ ಕೆಲಸವಾಗಬೇಕು. ನಾಡಿಗೆ ನಾಡೇ ಹೀಗೆ ಬಯಸಿ ಕೂತಿತ್ತು. ಆದರೆ ನಾಡಿನ ಕೋರಿಕೆ ಈಡೇರಲಿಲ್ಲ. ಶಾಸನ ಸಭೆಗೆ ಆರಿಸಿಬಂದ ವರ್ಷದೊಳಗಾಗಿಯೇ ರಾಜಾರಾವು ಅಮರರಾದರು. ಅವರು ಕೀರ್ತಿಕಾಯರಾಗುವ ಮೊದಲು– ೮-೧೦ ದಿನಗಳ ಮುಂಚೆ– ಅವರಿಗೆ ಭಾವಸಮಾಧಿಯೊಂದಾಗಿ, ಅದರಲ್ಲಿ ಒಂದು ಉರಿಯುತ್ತಿದ್ದ ಚಿತೆಯೂ ಅದರ ಪಕ್ಕದಲ್ಲೇ ಕೊಳಲೂದುತ್ತ ನಿಂತ ಕೊಳಲಕೃಷ್ಣನೂ ಕಂಡರಂತೆ.

ಹಿಂದುಸ್ಥಾನದ ಶ್ರೇಷ್ಠತರಗತಿಯ ವಿಮಾಸಂಸ್ಥೆಗಳಲ್ಲಿ ಒಂದಾದ

ದಿ ಏಶಿಯಾಟಿಕ್ ಗವರ್ನ್‌ಮೆಂಟ್ ಸೆಕ್ಯೂರಿಟಿ

ಲೈಫ್ ಅಶ್ಯೂರನ್ಸ್ ಕಂಪನಿ, ಲಿ. ಬೆಂಗಳೂರು

ಇದುವರೆಗೆ ರೂ. ೨,೫೦,೦೦೦,೦೦ ವಿಮಾಕಾರ್ಯ ಮಾಡಿದೆ. ★ ೨೫,೦೦೦ ಸಂಸಾರಗಳಿಗೆ ವಿಮಾರಕ್ಷಣೆ ದೊರಕಿಸಿದೆ.

ಕಡಿಮೆದರದ ಹಪ್ತೆಯ ಮೇಲೆ ವಿಮಾ ಇಳಿಸಬಹುದು.

ಏಶಿಯಾಟಿಕ್ ಕಂಪನಿಯ ಪ್ರಗತಿಯು ಕನ್ನಡಿಗರು ಹೆಮ್ಮೆ ಪಡತಕ್ಕದ್ದಾಗಿದೆ. ವಿಮೆ ಇಳಿಸಲು ಸುರಕ್ಷಿತವಾದ, ಭದ್ರವಾದ ಪ್ರೈಸೂರಿನ ವಿಮಾ ಸಂಸ್ಥೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ಏಜನ್ಸಿ ಸುಪರಿಂಟೆಂಡೆಂಟ್,

ಏಶಿಯಾಟಿಕ್ ಲೈಫ್ ಆಫೀಸ್, ಧಾರವಾಡ.

ಅಖಿಲ ಕರ್ನಾಟಕ ವ್ಯಾಯಾಮ ಪರಿಷತ್ತು

'ವಿಹಂಗಮ' ಬರೆದುದು

★

ತಮ್ಮ ಪ್ರಾಂತದ ಕಾರ್ಯಕಲಾಪಗಳನ್ನು ಅಭಿಮಾನಪೂರ್ವಕವಾಗಿ ಇನ್ನೊಂದು ಭಾಷೆಯಲ್ಲಿ ನಡೆಯಿಸುವವರು, ಕನ್ನಡಿಗರನ್ನು ಬಿಟ್ಟು ಬೇರೆ ಯಾರಾದರೂ ಇರಬಹುದೇ ಜಗತ್ತಿನಲ್ಲಿ? ಕನ್ನಡದ ಜಾಗೃತಿಯಾಗಿ ಐವತ್ತು ವರ್ಷಗಳಾಗಿ ಹೋಗಿದ್ದರೂ, ಇನ್ನೂ ಅಭಿಮಾನಭಂಗವನ್ನು ತಾಳಿಕೊಂಡಿರಲು ಹೇಳುವ ಹಿರಿಯರಿಗೆ ಏನೆನ್ನಬೇಕು?

ಕಳೆದ ಜೂನ್ ೪-೫-೬ ನೆಯ ತಾರೀಖಿಗೆ ಚಿಕ್ಕೋಡಿಯಲ್ಲಿ ಅ. ಕ. ವ್ಯಾಯಾಮ ಪರಿಷತ್ತು ಜರುಗಿತು. "ಅಂತೂ ಒಮ್ಮೆ ಪರಿಷತ್ತು ಆಯಿತು" ಎಂದು ಉಸುರಿದವರೆ ಬಹಳ ಜನ. ಏಕೆಂದರೆ ಬಹುಕಾಲದ ವರೆಗೆ ಪರಿಷತ್ತಿನ ದಾರಿಯನ್ನು ಕಾಯಬೇಕಾಗಿ ಬಂದಿತ್ತು. ಮೊದಲು ಪರಿಷತ್ತು ೧೯೪೯ನೆಯ ಡಿಸೆಂಬರ್ ತಿಂಗಳ ಕೊನೆಯ ವಾರದಲ್ಲಿ ನಡೆಯುವುದಾಗಿ ಪ್ರಕಟನೆ ಬಂದಿತು; ಆದರೆ ಅದು ಒದಗಿ ಬರಲಿಲ್ಲ. ಅದರ ಕಾರಣ ಮೊದಮೊದಲು ತಿಳಿಯಲಿಲ್ಲ. ಚಳಿಗಾಲ ದಾಟಿ ಬೇಸಗೆ ಬಂದಿತು; ಅದರೊಂದಿಗೆ ಮಾರ್ಚ್ ತಿಂಗಳಲ್ಲಿ ಪರಿಷತ್ತಿನ ದಿನಗಳು ಬಂದುವು. ಕಂಡಹಾಗಾಗಿ, ಸಿಕ್ಕದೆ ಹೋಗುವ ಮೃಗಜಲದಂತೆ ಪರಿಷತ್ತು ಮಾರ್ಚ್ ತಿಂಗಳಿಂದಲೂ ಮುಂದೂಡಲ್ಪಟ್ಟಿತು. ಮೇ ತಿಂಗಳ ಮೊದಲನೆಯ ವಾರದಲ್ಲಿ ಯೆಂದು ಆಗಲೆ ನಿಶ್ಚಿತವಾಯಿತು; ಎಲ್ಲರಿಗೂ ಆನಂದ. ಅಲ್ಲಲ್ಲಿಯ ಜನರು ಹೊರಡುವ ಸಿದ್ಧತೆಯನ್ನು ಮಾಡತೊಡಗಿದರು. ಆದರೆ ಒಂದು ದಿನ ಬೆಳಗು—ಪರಿಷತ್ತು ಮುಂದೆ ಬಿದ್ದಿದೆಯೆಂದೂ, ಅದರ ತಾರೀಖನ್ನು ಸಕಾಲದಲ್ಲಿ ತಿಳಿಸುವುದಾಗಿಯೂ ಪತ್ರಿಕೆಯಲ್ಲಿ ಪ್ರಕಟನೆ ಬಂದಿತು. ಜನರ ಹುರುಪು ಜರ್‍ರನೆ ಇಳಿಯಿತು 'ಈಗ ಎಲ್ಲರಿಗೂ ಬಿಡುವು ಇದೆ, ಈಗಲೆ ಆಗಿದ್ದರೆ ಚೆನ್ನಾಗುತ್ತಿತ್ತು' ಎಂದು ಅಭಿಪ್ರಾಯ ಪಟ್ಟವರನೇಕರು. ಮೇ ೧೯–೨೦ ಕ್ಕೆಂದು ಹಾರುಸುದ್ದಿಯೊಂದು ಹವೆಯಲ್ಲಿ ತೇಲಾಡುತ್ತಿತ್ತು. ಅದನ್ನು ಹೊಡೆದೋಡಿಸಲು ಅಧಿಕೃತವಾದ ಪ್ರಕಟನೆಯೂ ಬಂದಿತು: 'ಪರಿಷತ್ತು ಜೂನ್ ೪-೫-೬ ನೆಯ ತಾರೀಖುಗಳಲ್ಲಿ ನಡೆಯುವುದು!'

ತಡವಾದುದಕ್ಕೆ ವ್ಯಾಯಾಮಪ್ರಿಯ ಜನವು ತಾಳ್ಮೆಗೆಟ್ಟಿತು. ಏತಕ್ಕಾಗಿ ಹೀಗೆ ಮುಂದೂಡಬೇಕಾಯಿತು ಗೊತ್ತೋ? ದೊಡ್ಡವರ ಗುದ್ದಿಯನ್ನು ಪರಿಷತ್ತಿನ ಕೊರಳಿಗೆ ಕಟ್ಟಿದುದಕ್ಕಾಗಿ. ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಕೊಲ್ಹಾಪುರದ ಛತ್ರಪತಿ ಶ್ರೀರಾಜಾರಾಮ ಮಹಾರಾಜರು ಅಲಂಕರಿಸುವವರಿದ್ದರು. ಅವರ ಅನೇಕ ಅಡಚಣಿಗಳೆಲ್ಲ ಮುಗಿದು ಅವರಿಗೆ ಬಿಡುವು ದೊರೆತಾಗ ಪರಿಷತ್ತು ನೆರೆಯಬೇಕು. ಆಕಾಶದಲ್ಲಿ ಆಡ್ಡಾಡುವವರಿಗೆ ಕೆಳಗಿನ ಜನತೆಯ ಅನನುಕೂಲತೆಯ ಅರಿವು ಇರುತ್ತದೆಯೆ? ಮಹಾರಾಜರವರಿಗೆ ಆಮಂತ್ರಣವನ್ನು ಕೊಟ್ಟುದಾಯಿತು. ಅವರು ಗೊತ್ತುಪಡಿಸಿದ ತಾರೀಖಿಗೆ ಬರಲೊಲ್ಲರು; ಪರಿಷತ್ತಿನ ಕಾರ್ಯಕರ್ತರು ಅವರನ್ನು ಬಿಡಲೊಲ್ಲರು. ಅಂತೂ ಕೊನೆಗೆ ಪರಿಷತ್ತಿನವರು ತಮ್ಮ ಹಂಬಲವನ್ನು ಸಾಧಿಸಿ ಕೃತಕೃತ್ಯರಾದರು. ಪರಿಷತ್ತು ಜರುಗುವ ಯೋಗ ಒದಗಿಬಂತು. ೬ ತಿಂಗಳು ಬೇನೆ ತಿಂದು ತಿಂದು ಹೆರಿಗೆಯಾಯಿತು.

ಜೂನ್ ತಿಂಗಳಲ್ಲಿ ಶಾಲೆ-ಕಚೇರಿಗಳು ಪ್ರಾರಂಭವಾದುದರಿಂದ ಬಹುಜನರಿಗೆ ಬರಲು ಸಾಧ್ಯವಾಗಲಿಲ್ಲ. ಅಂತಹರಿಗೆ ಚಿಕ್ಕೋಡಿಯಲ್ಲಿ ನಡೆದುದೆಲ್ಲ ಹೇಗೆ ಗೊತ್ತಾಗಬೇಕು? ಇತ್ತೀಚಿನ ಯುದ್ಧದ ವಾತಾವರಣದ ಮೂಲಕ ಕಾಗದ ತುಟ್ಟಿಯಾಗಿದ್ದುದರಿಂದ ವೃತ್ತಪತ್ರಿಕೆಗಳಲ್ಲಿ ಕೂಡ ವಿಶದವಾಗಿ ಪರಿಷತ್ತಿನ ವೃತ್ತಾಂತವು ಬರಲಿಲ್ಲ. ಬಂದುದು ಕೇವಲ ಏಕಪಕ್ಷೀಯವಾದ ಪ್ರಶಂಸಾತ್ಮಕ ವರ್ತಮಾನ.

ಚಿಕ್ಕೋಡಿಯು ಚಿಕ್ಕೋಡಿ ರೋಡ್ ಸ್ಟೇಶನಿನಿಂದ ೧೬ ಮೈಲು ದೂರದಲ್ಲಿದೆ. ಇಲ್ಲಿಂದ ದಿವಸಕ್ಕೆ ಒಮ್ಮೆ ಒಂದು ಮೋಟಾರು ಹೋಗಿಬರುತ್ತದೆ. ಪರಿಷತ್ತಿನ ಸಮಯದಲ್ಲಿಯಾದರೂ ಹೆಚ್ಚು ಸಲ ಮೋಟರುಗಳನ್ನು ಹೊರಡಿಸಬೇಕಾಗಿತ್ತು. ಪತ್ರಿಕೆಗಳಲ್ಲಿ ಜಾಹೀರಾತು ಕೊಟ್ಟ ಪರಿಷತ್ತಿನವರು, ರೇಲ್ವೆ ನಿಲ್ದಾಣದಲ್ಲಿ ಒಬ್ಬನೆ ಒಬ್ಬ ಸ್ವಯಂಸೇವಕನನ್ನಾದರೂ ಇಟ್ಟಿರಬಾರದೆ! ಸ್ವಯಂಸೇವಕರಿಲ್ಲದ ಮೂಲಕ, ಬಂದ ಅತಿಥಿಗಳು ಸ್ವಯಂಸ್ಫೂರ್ತಿಯಿಂದಲೆ ಚಳಿಯಿಂದ ನಡುಗಿ, ಬೆಳಗು ಬರುವವರೆಗೆ ಜೀವ ಕಾಯ್ದುಕೊಂಡಿರಬೇಕಾಗಿ ಬಂತು. ಪರಿಷತ್ತಿನ ಬಗೆಗೆ ೧೦೦ ಕ್ಕೆ ೧೦೦ ರಷ್ಟು ಆಸ್ಥೆಯಿದ್ದವರೇ, ಈ ಪರಿಸ್ಥಿತಿಯ ಸಂಕಟವನ್ನು ದಕ್ಕಿಸಿಕೊಂಡು ಪಾರಾಗಿ ಪರಿಷತ್ತನ್ನು ಕಂಡರು. ಅಂತಹರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ಆದರೂ ಪರಿಷತ್ತಿನವರು ತಮ್ಮ ಊರಿನ ರೇಲ್ವೆ ನಿಲ್ದಾಣದ ಈ ಅನವಸ್ಥೆಯನ್ನು ಅರಿತವರಾದುದರಿಂದ, ಬರುವ ಅತಿಥಿಗಳಿಗಾಗಿ ವ್ಯವಸ್ಥೆಮಾಡಿದ್ದರೆ ಚೆನ್ನಾಗುತ್ತಿದ್ದಿತೆಂದು ಅನೇಕರು ಮಾತನಾಡುತ್ತಿದ್ದರು.

ಚಿಕ್ಕೋಡಿಯ ಊರು ಚಿಕ್ಕದು; ೫-೬ ಸಾವಿರ ಜನವಸತಿ ಇರಬೇಕು. ಊರ ಮಧ್ಯದಲ್ಲಿ ಹಳ್ಳವೊಂದು ಹಾಯ್ದುಹೋಗಿದೆ. ನಾವು ಹೋದಾಗ ಹಳ್ಳದಲ್ಲಿ ನೀರು ಇರಲಿಲ್ಲ. ಹಳ್ಳವು ಊರನ್ನು ಎರಡು ಭಾಗಗಳನ್ನಾಗಿ ಮಾಡುತ್ತದೆ. ಹಳ್ಳದ ಪಶ್ಚಿಮದಂಡೆಯಲ್ಲಿಯ ಊರು ಸ್ವಲ್ಪಮಟ್ಟಿಗೆ ಚೆನ್ನಾಗಿದೆ. ಬೀದಿಗಳು ಸಾಕಷ್ಟು ಅಗಲವಾಗಿವೆ. ಮನೆಗಳಾದರೂ ವ್ಯವಸ್ಥಿತವಾಗಿವೆ. ಆದರೆ ಈಚೆಯ ದಂಡೆಯಲ್ಲಿಯ ಊರು-ಊರು ಎನ್ನಬಹುದೆ?-ಅಹುದು ಕೋಲು ಊರು—ಇಲ್ಲದಿದ್ದರೆ ಬಿದ್ದುಬಿಡಬೇಕಾಗುವುದು. ಸಂದಿಗಳಲ್ಲಿ ಮನುಷ್ಯರ ಹೊರತು ಬೇರೆ ವಾಹನಗಳು ಬರಲಾರವು. ಎಳೆ ಎಳೆಯ ಕಲ್ಲಗಳು ಸಂದಿಗಳಲ್ಲೆಲ್ಲ ಬಿದ್ದುಕೊಂಡಿವೆ. ಯಾರಾದರೂ ಎಡವಿದರೆಯೆ ಅವು ಸ್ಥಾನಭ್ರಷ್ಟವಾಗುವುವು. ಅಲ್ಲಿಯ ಗ್ರಾಮಪಂಚಾಯತಿಯವರು (ಮ್ಯುನಿಸಿಪಾಲಿಟಿಯಿಲ್ಲ) ಮಾತ್ರ ಆ ಕಲ್ಲುಗಳಿಗೆ, ೬೦ ವರುಷದ ಬಳಕೆಯ ಹಕ್ಕನ್ನು ಕೊಟ್ಟಂತೆ ಕಾಣುತ್ತದೆ.

ಊರ ಹೊರಕ್ಕೆ ಒಂದು ಗುಡ್ಡದ ಮಗ್ಗುಲಲ್ಲಿ ಭವ್ಯವಾದ ಕಟ್ಟಡವಿದೆ; ಅದುವೆ ಆ ಊರ ಇಂಗ್ಲಿಷ್ ಶಾಲೆ; ಆರ್. ಡಿ. ಹಾಯ್‌ಸ್ಕೂಲು. ಅದರ ಪಟಾಂಗಣದಲ್ಲಿಯೆ ಪರಿಷತ್ತಿನ ಅಧಿವೇಶನ ನೆರೆಯುವ ಮಂಟಪ. ನಾವು ಹೋದ ದಿನ—೩ನೆಯ ತಾರೀಖು—ಮಂಟಪದ ಅಲಂಕಾರ ಇನ್ನೂ ನಡೆದೆ ಇದ್ದಿತು. ಮಹಾರಾಜರವರ ಸಲುವಾಗಿ, 'ಖಾಸ್' ಕೊಲ್ಲಾಪುರದಿಂದ ಎರಡು ದೊಡ್ಡ ರಾಹುಟಿ (ಡೇರೆ) ಗಳು ಬಂದಿದ್ದು, ಅದರ ಹೋಗುವ ಬರುವ ವೆಚ್ಚವನ್ನೂ ನಿಲ್ಲಿಸುವ ವೆಚ್ಚವನ್ನೂ ಕೆಲಸಗಾರರ ಕೂಲಿಯನ್ನೂ ಪರಿಷತ್ತಿನವರೆ ವಹಿಸಬೇಕಾಗಿ ಬಂದಿತಂತೆ.

ಹೊರಗಿನಿಂದ ಬಂದ ಅತಿಥಿಗಳಿಗೆ ಊರಲ್ಲಿಯ ಮನೆ-ಮಠಗಳಲ್ಲಿ ಅನುವು ಮಾಡಿಕೊಟ್ಟಿದ್ದರು. ಶ್ರೀವೆಂಕಟೇಶ ದೇವಸ್ಥಾನದಲ್ಲಿ ಊಟದ ವ್ಯವಸ್ಥೆ ಮಾಡಿದ್ದರು—ವ್ಯವಸ್ಥೆ ಚೆನ್ನಾಗಿತ್ತು. ಪರಿಷತ್ತಿನ ವ್ಯವಸ್ಥಾಪಕರು, ಹೊರಗಿನಿಂದ ಬಹುಜನರು ಬರಬಹುದೆಂದು ವ್ಯವಸ್ಥೆಮಾಡಿದ್ದರು. ಆದರೆ ಸಾಕಷ್ಟು ಜನರು ಬಾರದೆ ಇದ್ದುದರಿಂದ ಅವರಿಗೆ ಸ್ವಲ್ಪ ಗಾಬರಿ ಎನಿಸಿರಬೇಕು. ಧಾರವಾಡದಿಂದ ಬಂದವರು ಸುಮಾರು ೨೫ ಜನ, ಹಾನಗಲ್ಲಿನಿಂದ ಸುಮಾರು ೧೦ ಜನ, ಇವರನ್ನುಬಿಟ್ಟರೆ ಉಳಿದ ಕಡೆಯವರು ತಂಡಗೊಂಡು ಬಾರದೆ ೪-೮ ಜನರ ಗುಂಪು ಕಟ್ಟಿಕೊಂಡು ಬಂದಿದ್ದರು. ಅಥಣಿ, ಹುಬ್ಬಳ್ಳಿ, ಗದಗು, ಹೊಸೂರು ಮುಂತಾದ ಊರುಗಳಿಂದ ಕೆಲವು ಪ್ರತಿನಿಧಿಗಳೂ ಬಂದಿದ್ದರು. ಹಿರಿಯರಲ್ಲಿ ಭವ್ಯವಾಗಿ ಕಾಣುವವರು ಶ್ರೀ. ಮುದವೀಡು ಕೃಷ್ಣರಾಯರು.

ಪರಿಷತ್ತಿನ ಮೊದಲನೆಯ ದಿನ ಪಂದ್ಯಾಟಗಳು ನಡೆಯಲಿದ್ದುವು. ಕಾರ್ಯಕ್ರಮದ ಪಟ್ಟಿಯಂತೆ ಅವು ಬೆಳಗಿನ ೬-೩೦ಕ್ಕೆ ಪ್ರಾರಂಭವಾಗಬೇಕಿತ್ತು; ಆದರೆ ಪರಿಷತ್ತಿನ ಪಂದ್ಯಾಟಗಳ ಉದ್ಘಾಟಕರಾದ ಶ್ರೀ. ಕಾಡಾದಿಯವರು, ಮಧ್ಯಾಹ್ನ ಸುಮಾರು ೨ ಗಂಟೆಗೆ ಬಂದರು. ಅಧ್ಯಕ್ಷ ಮಹಾರಾಜರಿಗೆ ೬ ತಿಂಗಳು ವಿಲಂಬವಾಗಿರುವಾಗ, ಉದ್ಘಾಟಕರಾದ ಸಾವುಕಾರರು ೬ ಗಂಟೆ ವಿಲಂಬ ಮಾಡಬಾರದೇ? ಆಟ-ಪಂದ್ಯಾಟಗಳು ಪ್ರಾರಂಭವಾದುವು—ನಡೆದುವು. ಆ ದಿನದ ಕೊನೆಯ ಕಾರ್ಯಕ್ರಮದಲ್ಲಿ ಕನ್ನಡಿಗರನೇಕರಿಗೆ ವಿಸ್ಮಯವೆನಿಸಹತ್ತಿತು. "ಅಖಿಲ ಕರ್ನಾಟಕ ವ್ಯಾಯಾಮ ಪರಿಷತ್ತು" ಎಂಬ ಅಭಿಧಾನವನ್ನು ಹೊತ್ತುದು, ಅದರ ಕಾರ್ಯಕಲಾಪಗಳೆಲ್ಲ ಮರಾಟಿಭಾಷೆಯಲ್ಲಿ ನಡೆಯತೊಡಗಿದ್ದಿತು. ಅಚ್ಚರಿ—ಅದರ ಸಂಗಡ ರೋಷವೂ ಅನೇಕರಲ್ಲಿ ತುಂಬಿತ್ತು. ಆದರೇನು? ಕನ್ನಡಿಗರ ಹಿರಿಯರಾದ ಶ್ರೀ. ಮುದವೀಡು ಅವರೇ ಸುಮ್ಮನೆ ಕುಳಿತಿರುವಾಗ ಹುಡುಗರ ಗೊಣಗಾಟವನ್ನು ಕೇಳುವವರಾರು? ಅಥವಾ 'ಹಿರಿಯ ಹುಲಿಯನ್ನೆ ಬಲಿಗೆ ಹಾಕಿರುವಾಗ ಮರಿಹುಲಿಗಳನ್ನು ಬೆದರಿಸುವುದೆಷ್ಟೊತ್ತು?' ಎಂಬ ಹುಂಬ—ಹುಚ್ಚು—ಧೈರ್ಯದಿಂದಲೇನೋ, ಸಮ್ಮೇಲನ ಸಂಚಾಲಕರು ಶ್ರೀ. ಮುದವೀಡು ಅವರನ್ನು ತಮ್ಮ ಢಾಲನ್ನಾಗಿ ಮಾಡಿಕೊಂಡು, ಕಾರ್ಯಕ್ರಮಗಳನ್ನು ಮರಾಟಿಯಲ್ಲಿಯೆ ಸಾಗಿಸಹತ್ತಿದರು. ಶ್ರೀ. ಕಾಡಾದಿಯವರ ಭಾಷಣವು, ಮರಾಟಿಯಲ್ಲಿಯೆ ಆಯಿತು. ಶ್ರೀಯುತರು ಕೊಲ್ಹಾಪುರದವರಿದ್ದು ಅವರಿಗೆ ಕನ್ನಡ ಚೆನ್ನಾಗಿ ಮಾತನಾಡಲಿಕ್ಕೆ ಬರುವುದೆಂದು ಹಿಂದುಗಡೆ ತಿಳಿದುಬಂದಿತು. ಆದರೇನು, ಹಿರಿಯರು ಸುಮ್ಮನೆ ಕುಳಿತು ನಾಟಕವಾಡಿಸುತ್ತಿದ್ದಾಗ ಮಾಡುವುದೇನು? ಕನ್ನಡಿಗರಲ್ಲಿ ಮಾತ್ರ ಆಗ ಅಸಹನೆ ತುಂಬಿಹೋಗಿತ್ತು.

* * *

ಮರುದಿನ ಬೆಳಗಾಯಿತು. ಬೆಳಗಿನ ಹಾದಿಯನ್ನು ಕಾಯುತ್ತಿದ್ದವರು ಹುರುಪಿನಿಂದ ಹೊರಕ್ಕೆ ಬಂದರು. ಹಿರಿಯರ ಮೇಲೆ ಹೊಣೆಹಾಕಿ ಕಾರ್ಯವನ್ನು ಹದಗೆಡಿಸಬಾರದೆಂದು, ಅಭಿಮಾನಿಗಳಾದ ತರುಣರು ತಿಳಿದುಕೊಂಡರು. ಆ ದಿನವೂ ಕೆಲವು ಪಂದ್ಯಾಟಗಳಿದ್ದುವು. ಪಂದ್ಯಾಟದಲ್ಲಿ ನಿರ್ಣಯಕೊಡುವವರು ಮರಾಟಿಗರು. ಸ್ವಯಂಸೇವಕರನೇಕರು ಮರಾಟಿಗರು. ಹುರಿಯಾಳುಗಳನ್ನು ಕರೆಯುವುದು ಮರಾಟಿಯಲ್ಲಿ. ನಮ್ಮ ಕೆಚ್ಚು-ಕನ್ನಡನಾಡವರಾದ ಹಾನಗಲ್ಲಿನವರಿಗೆ, ಮರಾಟಿಯಲ್ಲಿ ಮಾತನಾಡಿದರೆ ತಿಳಿಯಬೇಕೇನು? ಆ ಹುರಿಯಾಳುಗಳನ್ನು ಲೆಕ್ಕಿಸದೆ ತಮ್ಮ ಧ್ವನಿಯಲ್ಲಿಯೆ ಸಾಗಿದ್ದರು ಪರಿಷತ್ತಿನ ಯೋಜಕರು. ಹದಿನಾರಾಣೆಯ ಕನ್ನಡಿಗರಿಗೆ ತುಂಬ ತಲೆ ತಿರುಗಿತು. ಯಾವುದೊಂದರಲ್ಲಿಯೂ ಆತ್ಮೀಯತೆ ಕಂಡು ಬರಲಾರದಾಯಿತು. 'ಪರಿಷತ್ತು ನಮ್ಮದೊ ಹೆರವರದೊ?' ಎಂಬುದೇ ಗೊತ್ತಾಗದಂತಾಯಿತು. ಕೆಲವು ದಿನಗಳ ಹಿಂದೆ ಈ ಪರಿಷತ್ತನ್ನು "ದಕ್ಷಿಣ ಮಹಾರಾಷ್ಟ್ರ ವ್ಯಾಯಾಮ ಪರಿಷತ್ತು" ಎಂಬುದಾಗಿ ಕರೆಯಬೇಕೆಂದು ಗೊತ್ತುವಳಿಯೊಂದು ಬಂದುದೂ, ಅದಕ್ಕಾಗಿಯೆ ಕಾರ್ಯದರ್ಶಿಗಳಾದ ಶ್ರೀ. ಕೋಟಿ ಶ್ರೀನಿವಾಸರಾಯರು ರಾಜೀನಾಮೆ ಕೊಟ್ಟುದೂ ನಮ್ಮ ಕಿವಿಯತನಕ ಬಂದಿದ್ದಿತಾದುದರಿಂದ, ಈಗ ನಡೆದುದೆಲ್ಲ ಮುಸುಕಿನೊಳಗಿನ ದೊಣ್ಣೆಯೆಂದೆನಿಸಹತ್ತಿತು. ಹೆಸರಿನಲ್ಲಿ 'ಕರ್ನಾಟಕ' ಕಾರ್ಯದಲ್ಲಿ 'ಮರಾಟ'! ಕನ್ನಡಿಗರ ರಕ್ತ ಕಾಯಲಾರಂಭಿಸಿತು.

ಅಷ್ಟರಲ್ಲಿಯೆ ಅಲ್ಲೊಂದು ಗಲಭೆ ಎದ್ದಂತೆ ಕಂಡಿತು. ಒಬ್ಬ ದಪ್ಪಗಿನ ಕರಿಯ, ಇನ್ನೊಬ್ಬ ಸಣ್ಣ ಕರಿಯ, ಇಬ್ಬರೂ ಶ್ರೀ. ಕೋಟಿ ಶ್ರೀನಿವಾಸರಾಯರನ್ನು ಮುತ್ತಿಗೆ ಹಾಕಿದುದು ಕಂಡು ಬಂದಿತು. ಅವರು ಏತಕ್ಕಾಗಿ ಅಲ್ಲಿಗೆ ಹೋಗಿದ್ದಾರೆಂಬುದು ಆಮೇಲೆ ತಿಳಿಯಿತು. ಅವರು ಶ್ರೀ. ಕೋಟಿಯವರಿಗೆ ಹೇಳಿದರಂತೆ: "ರಾಯರೆ ನಿನ್ನೆ ಆದುದು ಆಯಿತು. ಇಂದು ಮಾತ್ರ ಪರಿಷತ್ತಿನ ಎಲ್ಲ ಕಾರ್ಯಕಲಾಪಗಳು ಕನ್ನಡದಲ್ಲಿಯೆ ನಡೆಯಬೇಕು. ಮರಾಟಿಯಲ್ಲಿ ನಡೆದರೆ, ಕನ್ನಡಿಗರೆಲ್ಲ 'ಫಾಲ್ಗುಣವಾದ್ಯ' ವನ್ನು ಮಾಡಿ ನಿಷೇಧವನ್ನು ವ್ಯಕ್ತಮಾಡುವುದು ಖಂಡಿತ" ಎಂದು. ಶ್ರೀನಿವಾಸರಾಯರಿಗೆ ದಿಗಿಲು ಬಿದ್ದಿತೆಂದು ಕಾಣುತ್ತದೆ. 'ಇದೇನು ಶಿವಪೂಜೆಯಲ್ಲಿ ಕರಡಿ ಬಿಟ್ಟಂತೆ ಆಯಿತು' ಎಂದುಕೊಂಡಿರಬೇಕು ಅವರು. ಅವರ ಸಂಗಡ ಇದ್ದ ಇನ್ನೊಬ್ಬರು ಕೂಡ ಆ ಇಬ್ಬರು ಕರಿಯರ ಮಾತನ್ನೇ ಸಮರ್ಥಿಸಿದರು. ಆಗಂತೂ ಕೋಟಿಯವರು ಕಂಗೆಟ್ಟು ಹೋದರು. ಆ ಸ್ಥಿತಿಯಿಂದ ಪಾರಾಗುವುದಕ್ಕೆ ಅವರು "ಮುದವೀಡು ಅವರು ಏನು ಹೇಳುತ್ತಾರೋ ಅದರಂತೆ ನಡೆಯೋಣ!" ಎಂದರು; ಅದಕ್ಕೆ ಆ ಯುವಕರು ಅಸಮ್ಮತಿಸಲಾರದೆ 'ಆಗಲಿ' ಎಂದರು.

ಕೆಲವು ಹೊತ್ತಿನ ಮೇಲೆ ಕೃಷ್ಣರಾಯರು ಅಲ್ಲಿಗೆ ಬಂದರು. ಆಗ 'ಹುತುತು' ಆಟ ಪ್ರಾರಂಭವಾಗುವುದರಲ್ಲಿತ್ತು. ಅಲ್ಲಿಯೂ ಗಲಾಟೆಯೊಂದು: ಆ ಆಟಕ್ಕೆ ನಿರ್ಣಾಯಕರೆಂದು ನಿಯಮಿಸಲ್ಪಟ್ಟ ಶ್ರೀ. ಗೋಖಲೆಯವರು ಕನ್ನಡದಲ್ಲಿ ಆಟದ ಕಟ್ಟಳೆಗಳನ್ನು ಹೇಳಿ, ಆಮೇಲೆ ಮರಾಠಿಯಲ್ಲಿಯೂ ಹೇಳಬೇಕೆಂದು ಹವಣಿಸಿದರು— ಒಮ್ಮೆಲೆ ಕೂಗು: "ಎಲ್ಲರಿಗೂ ಕನ್ನಡ ತಿಳಿಯುತ್ತದೆ." ಅವರಿಗೆ ಸಿಟ್ಟು ಬಂದಿರಬೇಕು. ಏಕೆಂದರೆ ಮುಂದೆ ಅವರ ಬಾಯಿಂದ ಬಂದ ಶಬ್ದಗಳೆಲ್ಲವೂ ಆಂಗ್ಲಭಾಷೆಯಲ್ಲಿಯವು. ಅಲ್ಲ! ಅದೆಂತಹ ಹಟ! ಶ್ರೀ. ಗೋಖಲೆಯವರು ಹುಬ್ಬಳ್ಳಿಯಲ್ಲಿದ್ದು ಕನ್ನಡನಾಡಿನಲ್ಲಿಯೆ ಬಾಳಿ ಬದುಕಬೇಕೆಂಬವರು, ಕನ್ನಡ ಚೆನ್ನಾಗಿ ಮಾತನಾಡಲು ಬರುತ್ತಿದ್ದವರು, ಅಖಿಲ ಕರ್ನಾಟಕ ವ್ಯಾಯಾಮ ಪರಿಷತ್ತಿನಲ್ಲಿ ಪಾಗವಹಿಸಿದವರು. 'ಕನ್ನಡ ಮಾತನಾಡಿರಿ' ಎಂದಮಾತ್ರಕ್ಕೆ ಪರಭಾಷೆಗೆ ತಕ್ಕೆಬಿದ್ದುದು ಏತರ ದ್ಯೋತಕ? ಇದು ಮರಾಟಿಗರು ಕನ್ನಡನುಡಿಗೆ ಕೊಡುತ್ತಿರುವ ತಿರಸ್ಕಾರದ ಕಾಣಿಕೆಯ ಮಾದರಿ. ಕನ್ನಡಿಗರು ಮಾತ್ರ ತಮ್ಮ ಸ್ವಸಹಜವಾದ ಉದಾರವೃತ್ತಿಯಿಂದ ಮರಾಟಿಗರಿಗೆ ಅನುವುಕೊಡುತ್ತಿರುವುದು ನಡೆದೇ ಇದೆ. ಈ ಸನ್ನಿವೇಶವೂ ಮೊದಲು ನಡೆದ ಕತೆಗೆ ಪುಟಕೊಟ್ಟಿತು.

ಹಿಂದೆ ಹೇಳಿದ ಯುವಕರಿಬ್ಬರು, ಶ್ರೀ. ಮುದವೀಡು ಕೃಷ್ಣರಾಯರೊಂದಿಗೆ ಅವರ ಬಿಡಾರಕ್ಕೆ ನಡೆದರು. ಅಲ್ಲಿ ಶ್ರೀ. ಕೋಟಿಯವರೂ (ಕಾರ್ಯದರ್ಶಿಗಳು) ಇದ್ದರು. ಅಲ್ಲಿ ಯಾರ ಪರಿಚಯವೂ ಇಲ್ಲದ್ದರಿಂದ ನಾನು ಮಾತ್ರ ಅಲ್ಲೇನು ನಡೆಯುತ್ತದೆಂಬುದನ್ನು ತಿಳಿದುಕೊಳ್ಳಬೇಕೆಂಬ ಲವಲವಿಕೆಯಿಂದ ಕಿಟಕಿಯಲ್ಲಿ ಹಣಿಯಿಟ್ಟು ನಿಂತೆನು.

"ನೀ ಏನಂತೀಯಪಾ?" ಎಂದರು ಮುದವೀಡು ಕೃಷ್ಣರಾಯರು.

"ನಾನು ಹೆಚ್ಚಿಗೇನೂ ಅನ್ನುವುದಿಲ್ಲ: ಇಂದಿನ ಕಾರ್ಯಕಲಾಪಗಳೆಲ್ಲ ಕನ್ನಡದಲ್ಲಿಯೆ ಆಗಬೇಕು." ಒಬ್ಬ ಯುವಕನೆಂದ.

"ಅಂದರೆ ಹೀಂಗೆ: ನಾವು ಸ್ವಲ್ಪ ಇಲ್ಲಿಯ ಸ್ಥಳೀಯ ಪರಿಸ್ಥಿತಿಯನ್ನು ವಿಚಾರಿಸಬೇಕಾಗತದ!.." ಕೃಷ್ಣರಾಯರು ಹೇಳತೊಡಗಿದರು; ನಡುವೆಯೆ ಆ ಯುವಕ ಹೇಳಿದ: "ಮೊದಲು ಕನ್ನಡ; ಆ ಮೇಲೆ ಉಳಿದ ವಿಚಾರ!"

"ನನಗೇನು ಕನ್ನಡದ ಅಭಿಮಾನವಿಲ್ಲವೇನು? ನಿಮಗಿಂತ ನೂರುಪಾಲು ಇದೆ. ನೀವಿನ್ನೂ ಸಣ್ಣವರು; ನಿಮಗೆ ಗೊತ್ತಿಲ್ಲ.

ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಮೊದಲಿಗರು.

ಶ್ರೀ. ಗಂಗಾಧರ ವಿಟ್ಠಲ ಚಿತ್ತಾಲರು

ಈ ಸಲದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ೭೦೦ಕ್ಕೆ ೬೭೯ ಗುಣಗಳನ್ನು ಪಡೆದು, ಮುಂಬಯಿ ವಿಶ್ವವಿದ್ಯಾನಿಲಯಕ್ಕೆ ಮೊದಲನೆಯವರಾಗಿ ತೇರ್ಗಡೆ ಹೊಂದಿದ್ದಾರೆ. ಕಾರವಾರ ಜಿಲ್ಲೆಯ ಹೊನೆಹಳ್ಳಿ ಇವರ ಹುಟ್ಟಿದೂರು. ಪ್ರಾಥಮಿಕಶಿಕ್ಷಣ ಬಂಕಿಕೊಡ್ಲ ಗ್ರಾಮದಲ್ಲಿ ಆಯಿತು. ಮಾಧ್ಯಮಿಕಶಿಕ್ಷಣ ೫ನೆಯ ತರಗತಿ ಮುಗಿಯುವ ವರೆಗೆ ಕುಮಟಾ ಹೈಸ್ಕೂಲಿನಲ್ಲಾಯಿತು. ೬-೭ನೆಯ ತರಗತಿಯ ಅಭ್ಯಾಸ ಧಾರವಾಡದ ಕರ್ನಾಟಕ ಹೈಸ್ಕೂಲಿನಲ್ಲಿ ಆಯಿತು. ಇವರು ಮೊದಲಿಗರಾಗಿ ಬಂದು ಕರ್ನಾಟಕ ಹೈಸ್ಕೂಲಿನ ಅದರಂತೆಯೆ ಧಾರವಾಡದ ಕನ್ನಡಿಗರ ಹೆಮ್ಮೆಗೆ ಕಾರಣರಾಗಿದ್ದಾರೆ. ಶ್ರೀ. ಚಿತ್ತಾಲರು ಕನ್ನಡಿಗರು; ಕನ್ನಡದ ವಿಷಯದಲ್ಲಿ ತುಂಬ ಪ್ರೀತಿಯುಳ್ಳವರು. ಇವರ ಯಶಸ್ಸು ಇವರಿಗೆ ಅನೇಕ ವಿದ್ಯಾರ್ಥಿವೇತನಗಳನ್ನೂ ಒದವಿಸಿಕೊಟ್ಟಿದೆ. ಇವರ ಜೀವನದ ಭವಿಷ್ಯತ್ತು ಕನ್ನಡನಾಡಿನ ಹಿತಕ್ಕೂ ಹೆಮ್ಮೆಗೂ ಕಾರಣವಾಗುವುದೆಂದು ನಂಬಬಹುದು. ನಮ್ಮ ಭಾಗ್ಯವಿಧಾತ ಶ್ರೀ. ಚಿತ್ತಾಲರಿಗೆ ಸಾಕಷ್ಟು ಆಯುರಾರೋಗ್ಯಗಳನ್ನು ದಯಪಾಲಿಸಿ, ತನ್ನ ಕಾರ್ಯಕ್ಕೆ ಉಪಯೋಗಿಸಿಕೊಳ್ಳಲಿ! ಇಂತಹ ಒಳ್ಳೆಯ ವಿದ್ಯಾರ್ಥಿಗಳನ್ನು ನಾಡಿಗೆ ಸಿದ್ಧಗೊಳಿಸಿಕೊಡಲು ತುಂಬ ಕೆಲಸಮಾಡುತ್ತಿರುವ ಕರ್ನಾಟಕ ಹೈಸ್ಕೂಲಿನ ಸಂಚಾಲಕರೂ ನಮ್ಮ ಅಭಿನಂದನೆಗೆ ಪಾತ್ರರಾಗಿದ್ದಾರೆ

ಸಂ. ಜ.

೧೯೧೭ರಲ್ಲಿ, ಇದೇ ಚಿಕ್ಕೋಡಿಯಲ್ಲಿ, ಬಹಿರಂಗವಾಗಿ ಕನ್ನಡ ಭಾಷಣ ಮಾಡಲು ನನಗೆ ಕೂಡ ಅನುವು ಸಿಕ್ಕಿರಲಿಲ್ಲ. ಇಂದಿನ ಪರಿಸ್ಥಿತಿ ನೋಡಿದರೆ ನಮ್ಮ ಕಾರ್ಯ ೧೦೦ಕ್ಕೆ ೮೦ರಷ್ಟು ಆಗಿದೆ; ಅದಕ್ಕಾಗಿ ನನ್ನ ಅಂತಃಕರಣ ಆಗಾಗ ಉಕ್ಕಿ ಉಕ್ಕಿ ಬರುತ್ತದೆ." ನಿಜವಾಗಿಯೂ ಕಣ್ಣಲ್ಲಿ ನೀರೂರಿತ್ತು ಕೃಷ್ಣರಾಯರಿಗೆ.

"ಕೃಷ್ಣರಾಯರೇ! ನಿಮ್ಮ ಕೆಲಸ ಎಲ್ಲಿ ಮುಗೀತದೋ ಅಲ್ಲಿ ನಮ್ಮ ಕಾರ್ಯ ಸುರುವಾಗತದ! ಅಂದಮ್ಯಾಲ ಹೊಂದುಗೂಡುವುದು ಹ್ಯಾಂಗ? ೧೦೦ಕ್ಕೆ ೮೦ರಷ್ಟು ಕನ್ನಡ ಆಗಿದೆಯಲ್ಲಾ ಎಂದು ನಿಮಗೆ ಸಮಾಧಾನವಾಗಿದ್ದರೆ, ಇನ್ನೂ ೨೦ರಷ್ಟು ಉಳಿದಿದೆಯಲ್ಲಾ.. ಎಂದು ನಮಗೆ ಅಸಮಾಧಾನ ಆಗತದ ಅಲ್ಲಾ! ಇದಕ್ಕ ಏನದ ನಿಮ್ಮ ಉತ್ತರ?"

"ಏಽಽ, ನಿನ್ನಂಥವನೊಬ್ಬ ನನಗೆ ಪ್ರೈವೇಟ ಸೆಕ್ರೆಟರಿ ಬೇಕು ನೋಡು!" ಎಂದರು ಕೃಷ್ಣರಾಯರು.

ಹೊರಗೆ ನಿಂತ ನನಗೆ ಸೋಜಿಗವೆನಿಸಿತು. 'ಇದೇನು ಅಪ್ರಸ್ತುತ ವಿಷಯ ಮಾತನಾಡುತ್ತಿರುವರಲ್ಲ ಕೃಷ್ಣರಾಯರು! ಪಾಪ, ವಯಸ್ಸಾಗಿದೆ; ಮಾತಿನಲ್ಲಿ ಅರಿವು ಮರೆವು ಆಗುವ ಸಂಭವವಿದೆ' ಎಂದು ನಾನೆ ನಾನು ಎಂದುಕೊಂಡೆ.

"ಒಟ್ಟಿನಲ್ಲಿ ನೀ ಏನು ಅನ್ನುವವ?" ಎಂದು ತರುಣನಿಗೆ ಸವಾಲು ಹಾಕಿದರು ಕೃಷ್ಣರಾಯರು. 'ಮರಾಟಿಗರು ಕೃಷ್ಣರಾಯರಿಗೆ ವಕೀಲಿ ಕೊಟ್ಟಿರಬಹುದೇ?' ಎನ್ನಿಸಿತು ನನಗೆ. ಥೇ! ಎಂತಹರ ಬಗ್ಗೆ ಏನು ವಿಚಾರಮಾಡುತ್ತಿರುವೆನಲ್ಲ.. ಎಂದು ಗಲ್ಲ-ಗಲ್ಲ ಬಡಿದುಕೊಂಡೂ ಆಯಿತು. ಯುವಕನೆಂದ: "ಎಲ್ಲ ಕಾರ್ಯ-ಕ್ರಮಗಳು ಕನ್ನಡದಲ್ಲಿ ನಡೆಯಬೇಕು. 'ಇಲ್ಲಿ ಕನ್ನಡ ಬಾರದವರಿದ್ದರೆ, ಅದರ ಹೊಣೆಹೊತ್ತು ನಾವು ಕಾರ್ಯಕ್ರಮ ಸಾಗಿಸುತ್ತೇವೆ. 'ಅಖಿಲ ಕರ್ನಾಟಕದ ವ್ಯಾಯಾಮ ಪರಿಷತ್ತು' ಎಂದಮೇಲೆ ಕನ್ನಡಕ್ಕೆ ಸ್ಥಾನವಿಲ್ಲದಿದ್ದರೆ ಏನು?"

"ಇಲ್ಲಿ ನೋಡು; ಇಂದಿನ ಕಾರ್ಯಕ್ರಮವನ್ನು ನಾನೇ ಸಿದ್ಧಮಾಡೇನಿ." ಎಂದು ಒಂದು ಪ್ರತಿಯನ್ನು ಕೊಟ್ಟರು ಕೃಷ್ಣರಾಯರು. ಆ ಪ್ರತಿಯನ್ನು ನೋಡಿ ಬೆಚ್ಚಿಬಿದ್ದ ಯುವಕ. ಕಾರ್ಯಕ್ರಮದಲ್ಲಿ ಮೊದಲನೆಯದಾಗಿ, ಹಿಂದೀ ಭಾಷೆಯದೊಂದು 'ಈಶಸ್ತವನ'! ಕರ್ನಾಟಕದ ರಾಷ್ಟ್ರಗೀತೆಗೆ ಸ್ಥಾನವೆ ಇರಲಿಲ್ಲ. "ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು"! "ಕೃಷ್ಣರಾಯರೆ, ನಾನು ನಿಮಗೆ ದುಷ್ಟನಂತೆ ಕಾಣಬಹುದು." ಯುವಕ ಮಾತನ್ನು ಮುಂದುವರಿಸಿದ: "ಇಂದು ಮೊದಲು ಉದಯ-ವಾಗಲಿ ನಮ್ಮ ಚೆಲುವ ಕನ್ನಡನಾಡು" ಆಗಲೇ ಬೇಕು. ಇಲ್ಲಿ ಅದನ್ನು ಹೇಳುವವರು ಸಿಕ್ಕದಿದ್ದರೆ ನಾನೇ ಹೇಳುತ್ತೇನೆ. ಆಮೇಲೆ ಉಳಿದ ಎಲ್ಲ ಕಾರ್ಯಕ್ರಮಗಳು, ಮುಖ್ಯ ಅತಿಥಿಯೊಬ್ಬರನ್ನು ಬಿಟ್ಟು ಉಳಿದವರೆಲ್ಲರೂ ಕನ್ನಡದಲ್ಲಿಯೆ ಮಾತನಾಡಬೇಕು. ಮುಖ್ಯ ಅತಿಥಿಗಳು ಬೇರೆ ಪ್ರಾಂತೀಯರಿರಬಹುದು; ಅವರು ಕನ್ನಡದಲ್ಲಿಯೆ ಮಾತನಾಡಬೇಕೆಂಬ ಹಟವೇನೂ ನಮಗಿಲ್ಲ!"

"ಆದರೆ.." ಸಂಶಯದಿಂದ ಮುಂದುವರಿದರು ಕೃಷ್ಣರಾಯರು: "ಸ್ವಾಗತಾಧ್ಯಕ್ಷರಿಗೆ ಕನ್ನಡ ಬರುವುದಿಲ್ಲವಲ್ಲ!"

ನನಗೆ ನಿಜವಾಗಿಯೂ ಹೇಸಿಗೆ ಎನ್ನಿಸಿತು. ಅಖಿಲ ಕರ್ನಾಟಕ ವ್ಯಾಯಾಮ ಪರಿಷತ್ತಿನ ಸ್ವಾಗತಾಧ್ಯಕ್ಷರಿಗೆ ಕನ್ನಡ ಬರುವುದಿಲ್ಲವೆ? ಯಾವ ಮಟ್ಟವನ್ನು ಹಿಡಿದು ಅವರ ಆಯ್ಕೆಯಾಗಿದೆಯಲ್ಲ! ಕನ್ನಡ ಬಾರದವರಿಗೆ ಕರ್ನಾಟಕದ ಪರಿಷತ್ತಿನಲ್ಲಿ ಹಿರಿಯ ಸ್ಥಾನದ ಹಂಬಲವೇಕೆ. ಕನ್ನಡವನ್ನು ಕಲಿಯಬೇಕು; ಇಲ್ಲವೆ ಆ ಹಂಬಲವನ್ನಾದರೂ ಬಿಡಬೇಕು.. ಎಂದುಕೊಂಡೆ ನಾನು. "ಕೃಷ್ಣರಾಯರೆ! ನೀವು ಮೊದಲು ಬಂದು ಸ್ವಾಗತಾಧ್ಯಕ್ಷರಿಗೆ ಕನ್ನಡ ಬರುವುದಿಲ್ಲವೆಂದು ಸಾರ್ವಜನಿಕವಾಗಿ ಹೇಳಿರಿ" ಎಂದ ಆ ಯುವಕ. ಬಳಿಕ ಆ ಯುವಕನೂ ಕೃಷ್ಣರಾಯರೂ ಶ್ರೀನಿವಾಸರಾಯರೂ ಕೂಡಿ ಹೊಸದೊಂದು ಕಾರ್ಯಕ್ರಮದ ಪಟ್ಟಿಯನ್ನು ಸಿದ್ಧಗೊಳಿಸಿದರು. ಒಂದು ಪ್ರತಿಯನ್ನು ಅಲ್ಲಿಯ ಸ್ಥಳೀಯ ಮುಖಂಡರಾದ ಶ್ರೀ. ಮಜಲಿ ವಕೀಲರ ಸಮ್ಮತಿಗಾಗಿ ಕಳುಹಲಾಯಿತು.

ಈ 'ಮಜಲಿ ಮಹಾಶಯರಿಗೇಕೆ ಇಷ್ಟೊಂದು ಮಹತ್ವದ ಸ್ಥಾನ?' ಎಂಬುದು ನನಗೆ ತಿಳಿಯಲಿಲ್ಲ. ಅವರೇನು ಕನ್ನಡಕ್ಕೆ ವಿರೋಧಿಗಳಲ್ಲ; ತಲೆತಲಾಂತರದಿಂದಲೂ ಅವರು ಕನ್ನಡ ಸಂಸ್ಕೃತಿಯವರೆ! ಅಂತೂ ಹೊಸದೊಂದು ಕಾರ್ಯಕ್ರಮ ಕನ್ನಡಮುಖ್ಯವಾಗಿ ಆಯಿತು.

ಮಧ್ಯಾಹ್ನ ಎರಡುವರೆಗೆ ಬರಬೇಕಾಗಿದ್ದ ಮಹಾರಾಜರು ೩॥ಗೆ ಬಂದರು. ತಮ್ಮ ಮೇಲ್ಮೆಯ ಮೋಹದಲ್ಲಿ ಲೋಲಾಡುವವರಿಗೆ ಉಳಿದವರ ವೇಳೆಯ ಬೆಲೆಯು ಹೇಗೆ ತಿಳಿಯಬೇಕು? "ಇಂತಹ ಸಾಮಾಜಿಕ ಕಾರ್ಯಗಳಿಗೆ, ಇಂತಹ ಆಡಂಬರದ ಮಹಾರಾಜ ಮುಂತಾದವರನ್ನು ಕರೆಯುವುದೇ ಶುದ್ಧ ತಪ್ಪು! ಅವರಿಗೂ ಜನಸಾಮಾನ್ಯರಿಗೂ ಅಜಗಜಾಂತರ. ಮೇಲಿನಿಂದ ನೋಡುವವರಿಗೆ ಕೆಳಗಿನದೆಲ್ಲ ಕೀಳು, ಚಿಕ್ಕದು. ಅವರ ಕಣ್ಣಲ್ಲಿ ಇವೆಲ್ಲ ಗಣನೆಯೆ ಇರುವುದಿಲ್ಲ" ಎಂದು ಆಡಿಕೊಳ್ಳುವ ಜನ ಅಲ್ಲಿ ಕಡಿಮೆಯಿರಲಿಲ್ಲ.

ಊರಲ್ಲಿ ಮೆರೆವಣಿಗೆಯಾದನಂತರ ಶ್ರೀಮಹಾರಾಜರವರ ಸ್ವಾರಿ ಸಭಾಮಂಟಪಕ್ಕೆ ನಾಲ್ಕುವರೆ ಗಂಟೆಗೆ ಬಂದಿತು. ಮೊದಲು ಶ್ರೀ. ಗದಗಕರ್ ಅವರು 'ಉದಯವಾಗಲಿ' ಪದ್ಯವನ್ನು ಸುಸ್ವರದಲ್ಲಿ ಹೇಳಿದರು. ಅನಂತರ ಸ್ಥಳೀಯ ಬಾಲಿಕೆಯರು 'ಈಶಸ್ತವನ' 'ಸ್ವಾಗತ ಗೀತೆ' 'ಮಹಾರಾಜರ ಗುಣಗಾನ' ಇವನ್ನೆಲ್ಲ ಹೇಳಿದರು. ಶ್ರೀ. ಮುದವೀಡು ಅವರು ಮೊದಲು ಎದ್ದು, ಕನ್ನಡದಲ್ಲಿಯೆ ಅಖಿಲ ಕರ್ನಾಟಕದ ಪರವಾಗಿ ಅತಿಥಿಗಳನ್ನು ಸ್ವಾಗತಿಸಿ, ಸ್ವಾಗತಾಧ್ಯಕ್ಷರಿಗೆ ಕನ್ನಡ ಬಾರದೆ ಇದ್ದುದರಿಂದ ಅವರು ಮರಾಟಿಯಲ್ಲಿ ಭಾಷಣ ಮಾಡುವರೆಂದೂ, ಅದನ್ನು ತಾವೇ ಕನ್ನಡಿಸಿ ಹೇಳುವೆವೆಂದೂ ಹೇಳಿದರು. ಅನಂತರ ಶ್ರೀ. ಮುರಾರರಾವ ಮುತಾಲಿಕ ದೇಸಾಯಿ, ಶಿರಗಾಂವಕರ್ ಅವರು ತಮ್ಮ ಭಾಷಣವನ್ನು ಮರಾಟಿಯಲ್ಲಿ ಓದಿದರು.

ಸಭಾಮಂಟಪದಲ್ಲಿ ಕುಳಿತವರು ಗುಜು-ಗುಜು ಮಾತನಾಡುತ್ತಿದ್ದುದು ಕೇಳ ಬಂತು:

" ಇದೇನಿದು ಭಾಷಣ ಪೂರ್ಣ ಮರಾಟಿಯೂ ಅಲ್ಲ; ಪೂರ್ಣ ಕನ್ನಡವೂ ಅಲ್ಲ!" ಎಂದನೊಬ್ಬ. ಮತ್ತೊಬ್ಬ " ಇದೆಲ್ಲಾ ಆ ಮುಜಲೀ ವಕೀಲರ ಆಟೋ, ಈ ಮಹಾ-ರಾಜರವರನ್ನು ಕರಿಸಿದ್ದು, ಕನ್ನಡ ಬಾರದೆ ಇದ್ದರೂ ಶಿರಗಾಂವಕರರನ್ನು ಸ್ವಾಗತಾ-ಧ್ಯಕ್ಷರನ್ನಾಗಿ ಮಾಡಿದ್ದು ಎಲ್ಲಾ ಅವರದೇ!" ಎಂದು ಹೇಳಿದ. ನನಗೆ ಮೋಜೆನಿಸಿತು. ತಲೆಯಲ್ಲಿ ಏನೇನನೊ ಹೆಣೆಯುತ್ತಲಿದ್ದೆ. ಮುಂದಿನ ಅಧಿವೇಶನಗಳನ್ನು ಮಾತ್ರ ಚೆನ್ನಾಗಿ ಮಾಡತಕ್ಕದ್ದು ಎಂದು. ಅಷ್ಟರಲ್ಲಿಯೆ ಅಲ್ಲಿ ನಡೆದ ಮಾತು ನನ್ನ ಮನಸ್ಸನ್ನೆಳೆದುವು. ಕೊನೆಗೆ ಇಡಿಯೆ ಪರಿಷತ್ತಿನ ಕಥಾನಕವು ಹೀಗೆ ತಿಳಿದು ಬಂದಿತು:

ಕೊಲ್ಲಾಪುರದ ಮಹಾರಾಜರವರು ತಮ್ಮ ಆಡಳಿತದಲ್ಲಿದ್ದ ಶ್ರೀ. ಶಿರಗಾಂವಕರರ ಆಸ್ತಿಯನ್ನೆಲ್ಲ ಖಾಲಸಾ ಮಾಡಿದ್ದುದರಿಂದ, ಮಹಾರಾಜರವರಿಗೂ ಶಿರಗಾಂವಕರರಿಗೂ ಒಪ್ಪಂದ ಮಾಡಿಸಿ, ಅವರ ಆಸ್ತಿಯನ್ನು ತಿರುಗಿ ಕೊಡಿಸುವ ಹೊಣೆಯನ್ನು ವಕೀಲರಾದ ಶ್ರೀ. ಮುಜಲಿಯವರು ಹೊತ್ತಿರುವರೆಂದೂ, ಅದರಲ್ಲಿ ತಮ್ಮ ವಕೀಲಿಯ ಪಾಲು ಇದೆಯೆಂದೂ, ಅವರ ಕೈವಾಡ ಸ್ವಾಗತಾಧ್ಯಕ್ಷತನದಲ್ಲಿ ಇದೆಯೆಂದೂ ಸ್ಥಳೀಯಜನರ ಪಿಸು ಮಾತುಗಳ ಮೂಲಕ ಗೊತ್ತಾಯಿತು. 'ಇದು ಹಾರಿಕೆಯ ಸುದ್ದಿಯಾದರೂ ಸತ್ಯಾಂಶವಿರದೆ ಇರಬಹುದೇ? ಎಂದು ಉದ್ಗಾರ ತೆಗೆಯುವವರನ್ನೂ ಅಲ್ಲಿ ನೋಡಿದೆ.

" ಅಲ್ಲ! ಎಂತಹ ನೀಚತನ, ಒಬ್ಬ ವ್ಯಕ್ತಿಯ ಸುಖದುಃಖದ ಸಲುವಾಗಿ ಜನತೆಯ ದುಡ್ಡು, ಸಂಸ್ಕೃತಿ, ಹುರುಪು ವಿನಿಯೋಗಿಸಿಕೊಳ್ಳುವುದು ಅನ್ಯಾಯವಲ್ಲವೆ?" ಎಂದು ಮಾತನಾಡುವ ತಲೆ-ತಿರುಕರು ಕೆಲವರೂ ಅಲ್ಲಿ ಇದ್ದರು.

"ಅಂದಿನ ಕಾರ್ಯಕ್ರಮದಲ್ಲಿ ಕೃಷ್ಣರಾಯರು ತಾವೇ ಎದ್ದು, ಶ್ರೀ. ಶಿರಗಾಂವಕರರ ಮರಾಟೀ ಭಾಷಣವನ್ನು ಕನ್ನಡದಲ್ಲಿ ಓದಿದ್ದು ಸರ್ವಥಾ ತಪ್ಪು" ಎಂದು ಉಸುರಿದವರು ಕೆಲವರು. " ಶ್ರೀ. ಮುದವೀಡು ಕೃಷ್ಣರಾಯರು ಇಡಿಯೆ ಕನ್ನಡ ನಾಡಿನ ಮುಂದಾಳುಗಳು; ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು. ಇಂತಹ ಗೌರವಸ್ಥಾನದಲ್ಲಿದ್ದವರು ಈ ಸಾಧಾರಣ ಕಾರ್ಯವನ್ನು ತಾವೆ ಮಾಡಿದುದು ತಪ್ಪು. ಭಾಷಾಂತರವನ್ನು ಓದುವ ಹಂಬಲವೇಕೆ ಕೃಷ್ಣರಾಯರಿಗೆ?" ಎಂಬ ವಿಚಾರದಿಂದ ನನ್ನ ಅಂತರಾಳದಲ್ಲಿ ಕಸಿವಿಸಿಯಾಯಿತು. ಕೃಷ್ಣರಾಯರಿಗೆ ಈ ಮಾತನ್ನು ಹೇಳೋಣವೆನ್ನಿಸಿತು. ಆದರೆ—ನನಗೆ ಅವರ ಪ್ರತ್ಯಕ್ಷ ಪರಿಚಯವಿರಲಿಲ್ಲ. ನೋಡಿದ್ದೇನೆ. ಅವರ ಮಾತನ್ನು ಕೇಳಿದ್ದೇನೆ. ಅವರಿಂದ ಸ್ಫೂರ್ತಿ ಪಡೆದಿದ್ದೇನೆ. ಆದರೆ ಸವಿಾಪಕ್ಕೆ ಹೋಗಿ ಮಾತನಾಡುವಷ್ಟು ಸಲುಗೆ ಇಲ್ಲ. ಸಲುಗೆ ಇದ್ದರೆ ಹೀಗೆ ಸ್ಪಷ್ಟವಾಗಿ ಹೇಳಬಿಡುತ್ತಿದ್ದೆ: " ಕೃಷ್ಣರಾಯರೆ! ನೀವು ಮಾಡಬೇಕಾದ ಕಾರ್ಯವನ್ನು ಮಾಡಿದಿರಿ; ಇನ್ನು ನಿಜವಾಗಿಯೂ ನೀವು ವಿಶ್ರಾಂತಿಯನ್ನು ಪಡೆಯಬೇಕು. ಅರೆಮರೆವಿನ ಅರುವತ್ತು ವರುಷ

ಕೊಲ್ಹಾಪುರದಲ್ಲಿಯ
ಹೆಸರಾದ ಟೊಪ್ಪಿಗೆಯ ವ್ಯಾಪಾರಿಗಳು.
ಬೋಂಗಾಳೇ ಬ್ರದರ್ಸ್, ಕ್ಯಾಪ್ ಮೇಕರ್ಸ್
ಮಹಾದ್ವಾರ ರೋಡ್, ಕೊಲ್ಹಾಪುರ ಸಿಟಿ.
* ಎಲ್ಲ ಮಾದರಿಯ ಟೊಪ್ಪಿಗೆಗಳೂ ಸರಿಯಾದ ಬೆಲೆಗೆ ಸಿಕ್ಕುವುವು. ಕರ್ನಾಟಕದಲ್ಲಿಯ ಗೋಕಾಕ, ಚಿಕ್ಕೋಡಿ, ರಾಮದುರ್ಗ ಮೊದಲಾದ ಮುಖ್ಯಸ್ಥಳಗಳಲ್ಲೆಲ್ಲ ಪ್ರಸಿದ್ಧಿಯಿದೆ. ತಾವೂ ವಿಚಾರ ಮಾಡಿರಿ, ನಿಮ್ಮ ಟೊಪ್ಪಿಗೆಗಳನ್ನು ತರಿಸಿ ಅನುಭವ ಪಡೆಯಿರಿ.

ವಾಗಿದೆ. ಹೊಸ ಕಾಲದ ತರುಣರ ಧ್ಯೇಯ-ಧೋರಣೆಗಳಷ್ಟು ನಿಮ್ಮ ಧ್ಯೇಯವೂ ನಿಮ್ಮ ಹುರುಪೂ ತೀಕ್ಷ್ಣವಾಗಿಲ್ಲ. ನೀವು ನಿಮ್ಮ ತಾರುಣ್ಯದಲ್ಲಿ ಪುಟಿದೆದ್ದು ಕೆಲಸ ಮಾಡುತ್ತಿದ್ದಂತೆ ಮಾಡಲು ಈಗ ತರುಣರು ಮುಂದೆ ಬಂದಿದ್ದಾರೆ. ನೀವು ಅವರ ಬಲವಾದ ಹೆಗಲುಗಳ ಮೇಲೆ ಹೊಣೆ ಹೇರಿ, ಶಾಂತವಾಗಿ ನಿಮ್ಮ ದಿನಗಳನ್ನು ಕಳೆಯಿರಿ. ಹೆಚ್ಚಾಗಿ ಸಮಾಜದಲ್ಲಿ ಬಂದು ಶ್ರಮ ವಹಿಸಿ ಕಾರ್ಯಮಾಡಲು ಹೆಣಗಬೇಡಿರಿ. ಎಲ್ಲರೂ ನಿಮ್ಮ ಬಗ್ಗೆ ಅಷ್ಟೇ ಆದರವುಳ್ಳವರಿರುವುದಿಲ್ಲ. ಎಲ್ಲರೂ, ನಿಮ್ಮಿಂದ ಆಗಬಹುದಾದ ತಪ್ಪು—ವಯಸ್ಸಿನ ಮೂಲಕ—ಗಳನ್ನು ಮನ್ನಿಸುವಷ್ಟು ತಾಳ್ಮೆಯುವರಿರುವುದಿಲ್ಲ. 'ಕೃಷ್ಣರಾಯರಿಗೆ ಹುಚ್ಚು-ಮುಪ್ಪು ಕೂಡಹತ್ತಿದೆ' ಎಂದು ಯಾರಾದರೂ ಎಂದರೆ ನಮ್ಮ ಅಂತಃಕರಣಕ್ಕೆ ಉರಿಹಚ್ಚಿದಂತಾಗುವುದು. ಕ್ಷಮಿಸಿರಿ, ಕೃಷ್ಣರಾಯರೆ, ನೀವು ಮಾಡಬೇಕಾದ ಕಾರ್ಯವೊಂದಿದೆ. ಅದನ್ನು ಬೇರೆ ಯಾರೂ ಮಾಡಲಾರರು: ನೀವು ಕಣ್ಣಾರೆ ಕಂಡು ಅನುಭವಿಸಿದ, ಕಳೆದ ೫೦ ವರುಷದ ಕರ್ನಾಟಕದ ವ್ಯಕ್ತಿಗಳ ಜೀವನ ಚರಿತ್ರೆ, ಸಾಹಸ, ಇತಿಹಾಸಗಳನ್ನು ಬರೆದಿಟ್ಟರೆ ನಿಮ್ಮಿಂದ ಕರ್ನಾಟಕಕ್ಕೆ ಆಗುವ ಲಾಭ ದೊಡ್ಡದು. ಒಂದು ವೇಳೆ ನೀವು ನಿಮ್ಮ ಇಳಿವಯಸ್ಸಿನ ಹುರುಪನ್ನು ಇತರ ಮಾನಗಳಿಸುವ ಕಾರ್ಯಕ್ಕೆ ವಿನಿಯೋಗಿಸಬೇಕೆಂದು ಹಂಬಲಿಸಿದರೆ, "Like an unwelcomed guest" ಅಸಹ್ಯ ವೇದನೆಯಾಗಿ, ಮಾಡುವ ಕಾರ್ಯವೂ ಆಗುವುದಿಲ್ಲ. ಇಷ್ಟು ದಿನ ಗಳಿಸಿಕೊಂಡ ಕೀರ್ತಿಗೂ ಭಂಗಬರಬಹುದು. ಅಲ್ಲದೆ ಕನ್ನಡ ನಾಡಿನ ಕಳೆದ ೫೦ ವರುಷಗಳ ಇತಿಹಾಸವೂ ಕನ್ನಡಿಗರಿಗೆ ಸಿಕ್ಕದೆ ಹೋಗುವುದು."

ಹೀಗೆ ಸ್ಪಷ್ಟವಾಗಿ ಹೇಳಬೇಕೆಂದು ಮನದಲ್ಲಿ ಮುಂಡಿಗೆ ಮಾಡಿಯೆ ಮಾಡಿದೆ. ಕೊನೆಗೆ ಸುಮ್ಮನೆ ಕಣ್ಣೊರಸಿಕೊಂಡು ಮನೆಗೆ ಹೋದೆ.

ಕೊನೆಯ ದಿನವು ಮಾತ್ರ ಮನಬಿಚ್ಚಿ ಮಾತನಾಡಿದ ದಿನ. ವಿಷಯನಿಯಾಮಕ ಸಭೆಯಲ್ಲಿ ಒಂದೆರಡು ಗೊತ್ತುವಳಿಗಳು ಬಂದುವು. ಒಬ್ಬರು 'ಈ ಪರಿಷತ್ತಿನ ಪರವಾಗಿ ಅಖಿಲ ಕರ್ನಾಟಕದ ವ್ಯಾಪ್ತಿಯುಳ್ಳ ಕೇಂದ್ರಸಂಸ್ಥೆಯೊಂದನ್ನು ಸ್ಥಾಪಿಸಬೇಕು' ಎಂದರು. 'ಅಖಿಲ ಕರ್ನಾಟಕ ವ್ಯಾಯಾಮ ಪ್ರಚಾರಕ ಸಂಘವೆಂಬುದೊಂದಿದೆಯಲ್ಲ!' ಎಂದರು ಇನ್ನೊಬ್ಬರು. 'ಅದು ಈಗ ಕಾರ್ಯ ಮಾಡಬೇಕಾದಷ್ಟು ಮಾಡಿಲ್ಲ' ಎಂದರು ಮೊದಲಿನವರು. 'ಇದು ಯಾವಾಗಲೂ ಆಗುವ ವಿಷಯ; ಆಕ್ಷೇಪಿರಿದಾದುದೇ ಇರುವುದು. ಅದನ್ನು ಸಾಧಿಸಬೇಕಾದರೆ ಎಡರುಗಳು ಬರುವುವು. ಅದಕ್ಕೇ ಆಗಬೇಕಾಗಿದ್ದ ಕಾರ್ಯವಾಗುವುದು ಅಸಾಧ್ಯವಾಗುವುದು' ಎಂದರು ಎರಡನೆಯವರು. ಆ ತುದಿಯವರೊಬ್ಬರು ಎದ್ದು 'ಪರಿಷತ್ತಿನಿಂದ ಗೊತ್ತುವಳಿಯೊಂದನ್ನು ಪಾಸು ಮಾಡಲೇಬೇಕು' ಎಂದರು. ಧಾರವಾಡದ ನಾಡಿಗೇರ ಕೃಷ್ಣರಾಯರು ಎದ್ದು "ಪ್ರತಿವರುಷ ಪರಿಷತ್ತು ನೆರೆಯುವುದು; ವರುಷಕ್ಕೊಂದು ಸಂಸ್ಥೆಯನ್ನು ನಿರ್ಮಿಸಿದರೆ, ಪ್ರಾಂತದ ತುಂಬ ಬರಿಯೆ ಸಂಸ್ಥೆಗಳೇ ಏರ್ಪಟ್ಟು, ಈಗ ಆಗುವಷ್ಟೂ ಕಾರ್ಯ ಆಗುವುದಿಲ್ಲ. 'ಅಖಿಲ ಕರ್ನಾಟಕ ವ್ಯಾಯಾಮ ಪ್ರಚಾರಕ ಸಂಘವು' ಏನೂ ಮಾಡಿಲ್ಲವೆಂದರೂ ಅನೇಕ ಶಿಬಿರಗಳನ್ನು ಏರ್ಪಡಿಸಿದೆ, ೩ ಪರಿಷತ್ತುಗಳನ್ನು ನೆರೆಯಿಸಿದೆ; ವ್ಯಾಯಾಮ ಪ್ರಸಾರ ಮಾಡಿದೆ, ಕನ್ನಡ ನಾಡಿನಲ್ಲಿ ಅನೇಕ ಹೊಸ ವ್ಯಾಯಾಮಶಾಲೆಗಳನ್ನು ಸ್ಥಾಪಿಸಲು ಹುರುಪು ಕೊಟ್ಟಿದೆ ಎಂದರು."

ಕೊನೆಗೆ ಒಂದು ಉಪಸಮಿತಿಯ ನಿರ್ಮಾಣವಾಗಿ, ಆ ಉಪ-ಸಮಿತಿಯು ವ್ಯಾಯಾಮ ಪ್ರಚಾರಕ ಸಂಘದ ಕಾರ್ಯವನ್ನು ನಿರೀಕ್ಷಿಸಿ, ಅದು ಹೆಚ್ಚು ಪ್ರಾತಿನಿಧಿಕವಾಗುವಂತೆ ಕಟ್ಟಳೆಗಳನ್ನೂ ನಿಯಮಗಳನ್ನೂ ಯೋಚಿಸಬೇಕೆಂದು, ಮುಖ್ಯ ಗೊತ್ತುವಳಿಯೊಂದಾಯಿತು.

ಉಳಿದ ಸಾಮಾನ್ಯ ಗೊತ್ತುವಳಿಗಳು ಈಗಾಗಲೇ ವೃತ್ತಪತ್ರಿಕೆಯಲ್ಲಿ ಬಂದಿವೆ. ಅಲ್ಲದೆ ಅವು ಪ್ರಾಮುಖ್ಯವಾಗಿ ಅಭಿನಂದನಪರವಾದುವಿರುವುದರಿಂದ, ಅವುಗಳ ಮೇಲೆ ಹೆಚ್ಚಾಗಿ ಚರ್ಚಿಸಬೇಕಿಲ್ಲ.

ಅಂತೂ ಒಮ್ಮೆ ಪರಿಷತ್ತು ಆಯಿತು. ಅದರ ನಿಮಿತ್ತ ಕನ್ನಡ ಚಳವಳಕ್ಕೆ ಪುಟ ಸಿಕ್ಕಿತು. ಅನೇಕ ಎಡರುಗಳನ್ನು ಎದುರಿಸಿ, ಪರಿಷತ್ತನ್ನು ಸುಖಾಂತ ಮಾಡಿದುದಕ್ಕೆ ಸ್ಥಳಿಯ ಕಾರ್ಯಕರ್ತರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ಕುಂದು-ಕೊರತೆಗಳು ಎಲ್ಲಿಯೂ ಇರುವುದು ಸಹಜ. ಅವುಗಳನ್ನು ಅಭ್ಯಸಿಸಿ ಮುಂದೆ ಹಾಗಾಗದಂತೆ ನೋಡಿಕೊಳ್ಳುವುದೆ ನಮ್ಮ ಜಾಣ್ಮೆ. 'ಅಖಿಲ ಕರ್ನಾಟಕ ವ್ಯಾಯಾಮ ಪರಿಷತ್ತು ಕನ್ನಡ ಪ್ರಾಮುಖ್ಯವಾಗಿಯೆ ಸಾಗಿತು' ಎಂಬುದು ಇದ್ದದ್ದರಲ್ಲಿಯೆ ಸಮಾಧಾನದ ಸಂಗತಿ.

ಕೊರಚರ ಕೇರಿಯಲ್ಲಿ*

ಶ್ರೀ. "ರಾಮು"

ಬೆಂಗಳೂರು, ಚಾಮರಾಜಪೇಟೆಯ ಆ ಕಡೆಯೇ ಕೊರಚರ ಕೇರಿ ಇದೆ. ಅಲ್ಲಿ ಸುಮಾರು ಇಪ್ಪತ್ತು ಇಪ್ಪತ್ತೈದು ಗುಡಿಸಿಲುಗಳು ಮಾತ್ರ ಇವೆ. ಅವುಗಳನ್ನು ಚೆನ್ನಾಗಿಯೇ ಕಟ್ಟಿದ್ದಾರೆ. ಮಧ್ಯದಲ್ಲಿ ವಿಶಾಲವಾದ ವೃತ್ತಾಕಾರದ ಬಯಲನ್ನು ಬಿಟ್ಟುಕೊಂಡು ಸುತ್ತಲೂ ಗುಡಿಸಿಲುಗಳನ್ನು ನಿರ್ಮಿಸಿದ್ದಾರೆ. ಅವುಗಳೆಲ್ಲದರ ಬಾಗಿಲುಗಳು ಈ ಬಯಲಿಗೆ ಅಭಿಮುಖವಾಗಿವೆ. ರಾತ್ರಿ ಏಳೆಂಟು ಗಂಟೆಯ ಸಮಯಕ್ಕೆ ಆ ಕೇರಿಯವರು ತಮ್ಮ ತಮ್ಮ ಊಟಗಳನ್ನು ಮುಗಿಸಿಕೊಂಡು, ಎಲ್ಲರೂ ಹೊರಗಡೆ ಅವರವರ ಗುಡುಲುಗಳ ಮುಂದೆ ಕುಳಿತುಬಿಡುತ್ತಾರೆ. ಸರಿ, ಹತ್ತು ಹನ್ನೆರಡರ ವರೆಗೆ ಪ್ರತಿ ರಾತ್ರಿ ವಿನೋದ, ಜಗಳ, ಹರಟೆ, ಲಾವಣಿ, ಹೀಗೆ ಏನಾದರೊಂದು ನಡೆಯುತ್ತಲೇ ಇರುತ್ತದೆ. ಬೆಳುದಿಂಗಳ ಕಾಲವೆಂದರೆ, ಇವೆಲ್ಲವೂ ಸ್ವಲ್ಪ ಹೆಚ್ಚಾಗಿಯೇ ನಡೆಯುತ್ತವೆ.

ಎಡಗಡೆ ಮಧ್ಯದ ಗುಡಿಸಿಲೇ ಮಾರಣ್ಣನದು. ಆ ದಿನ ರಾತ್ರಿ ಒಂಭತ್ತುಗಂಟೆಯಾಗಿದ್ದರೂ ಮಾರಣ್ಣನು ಇನ್ನೂ ಗುಡಿಸಿಲಿಗೆ ಹಿಂದಿರುಗಿರಲಿಲ್ಲ. ಅವನ ಹೆಂಡತಿ ಮಾದವ್ವನು ಮುದ್ದೆ ಬೇಯಿಸಿಟ್ಟು ಅವನಿಗಾಗಿ ಕಾಯುತ್ತಿದ್ದಳು. ಬಹಳ ಬೇಜಾರಾಗಿದ್ದುದರಿಂದ ಅವಳು ಹೊರಗಡೆಯ ಹರಟೆಗೆ ಸೇರಿರಲಿಲ್ಲ. ಗುಡಿಸಿಲಲ್ಲೇ ಮಾರಣ್ಣನಿಗಾಗಿ ಕಾಯುತ್ತಾ ತೂಕಡಿಸುತ್ತಿದ್ದಳು. ಮಾಡಿಟ್ಟಿದ್ದ ಮುದ್ದೆ ತಣ್ಣಗಾಗುತ್ತಾ ಬಂದಿತು. ಅದರ ಬಿಸಿ ಎಲ್ಲವೂ ಮಾದವ್ವನ ಹೊಟ್ಟೆಯೊಳಗೆ ಸೇರಿಕೊಳ್ಳುತ್ತಿತ್ತು.

ಹತ್ತುಗಂಟೆಗೆ ಸರಿಯಾಗಿ ಮಾರಣ್ಣನು ಕೇರಿಗೆ ಹಿಂದಿರುಗಿದನು. ಪದ್ಧತಿಯಂತೆ, ತನ್ನ ಹರಕು ಅಂಗಿಯನ್ನು ಎಡಭುಜಕ್ಕೆ ನೇತುಹಾಕಿಕೊಂಡು, ಕೈಯಲ್ಲಿ ಮುಂಡಾಸನ್ನು ಹಿಡಿದುಕೊಂಡು, ನೆರೆಹೊರೆಯವರನ್ನು ಮಾತನಾಡಿಸುತ್ತಾ ಬಂದನು: "ಮುದ್ದಿ ತಿಂದಾಯ್ತೇನು, ಗಿಡ್ಡಜ್ಜಿ ?".. "ಪಿಳ್ಳೆ ಹೇಗಿದೆ ಕ್ಯಾತ?".. "ಬಟವಾಡೆ ಎಷ್ಟಾಯ್ತು ಬೇಲಣ್ಣ ?".. "ಮೊನ್ನೆ ಲಗ್ನ ಆದ್ರೆ ಇವತ್ತೂ ಕೂಲಿಗೆ ಬರಬೇಕಾ ನೀನು ದಾಸಪ್ಪ!" "ನಿನ್ನ ಗಂಡನ್ನ ದುಡಿಯೋಕೂ ಬಿಡೋಹಾಗೆ ಕಾಣೋಲ್ಲಾ ನೀನು ಸಣ್ಣವ್ವ!"....

ತನ್ನ ಗುಡಿಸಿಲ ಬಳಿ ಬಂದು ಬಾಗಿಲಿಗೆ ಇಳಿಬಿದ್ದಿದ್ದ ಈಚಲ ಚಾಪೆಯನ್ನು ಮೆಲ್ಲಗೆ ಓರೆಮಾಡಿಕೊಂಡು, ಹುಷಾರಾಗಿ ಒಳಹೊಕ್ಕ ಮಾರನು ಆಶ್ಚರ್ಯಗೊಂಡನು. ತನ್ನ ಹೆಂಡತಿಯು ಕೋಪದಿಂದ ಗುರಿಯಿಟ್ಟು ಎಸೆಯುತ್ತಿದ್ದ ಮಡಕೆಯ ಚೂರುಗಳ ಬದಲು, ಆ ರಾತ್ರಿ ಅವನಿಗೆ ಅವನ ಹೆಂಡತಿಯ ಮಾತುಗಳು ಮಾತ್ರ ಸ್ವಾಗತವಿತ್ತುವು. ಹೊರಗೆ ಚೆಲ್ಲಿದ್ದ ಹಾಲಿನ ಬೆಳುದಿಂಗಳು ತನ್ನ ಹೆಂಡತಿಯ ಎದೆಯನ್ನು ಸ್ವಲ್ಪ ಹೆಣ್ಣೆದೆಯನ್ನಾಗಿ ಮಾಡಿರಬಹುದೆಂದುಕೊಂಡನು.

"ಕೇಳಿಸಿತು, ನೀನು ಬಂದದ್ದು! ಎಲ್ಲರೊಡನೆ ಬಿನ್ನಾಣದ ಮಾತಾಡ್ತಾ ಬಂದದ್ದು! 'ಮುದ್ದೀ ತಿಂದಾ ಗಿಡ್ಡಜ್ಜಿ'! ತಿನ್ನದೇ ಏನು ? ಕೂತಿರುತ್ತಾಳೇನು ನನ್ನಹಾಗೆ ನಿನ್ನ ಕಾಯ್ತಾ? ನನ್ನ, ಒಂದು ಹಗಲೂ, ನಿನ್ನ ಗತಿ ಏನೂ ಎಂದು ಕೇಳ್ತೀಯಾ ? ಸತ್ತಾ, ಬದುಕ್ದಾ, ಅಂತ ಕೇಳಿದ್ದೀಯಾ ? ಮಾತಾಡಿಸ್ತಾನೆ ಎಲ್ರನ್ನೂ ಮಹಾ, ದೊಡ್ಡ ಮನುಷ್ಯನ ಹಾಗೆ ? ಏಕೆ ಹೊತ್ತಾಗಿ ಬಂದಿ. ಎಲ್ಲಿಗೆ ಹೋಗಿದ್ದೀ? ಕೂಲೀ ಎಲ್ಲೀ ? ಕುಡಿದುಹಾಕಿಬಿಟ್ಯಾ ?"

★

ನಮ್ಮಲ್ಲಿರುವ ಕೀಳುಕುಲದವರ ಕಿರುಕುಳಗಳ ವಾಸ್ತವಚಿತ್ರವನ್ನು ಇದರಲ್ಲಿ ನೋಡಬಹುದು. ಕೀಳುಕುಲದ ಮಾರ-ಮಾದಿಯರ ದಾಂಪತ್ಯ ಜೀವನದ ಸುಧಾರಿಸಿದ ಆವೃತ್ತಿಯನ್ನೇ ಅಲ್ಲವೇ, ನಾವು ಮೇಲುಕುಲದ ಮಾಧವ-ರಾಧೆಯರಲ್ಲಿ ನೋಡುವುದು ?

★

"ಕತ್ತೆ ! ನೀನು ಬಾಯಿಬಿಟ್ರೆ ನನಗೆ ಛಳಿಜರಾ ಬರ್ತ್ತಾದೆ. ತಲೆ ನೋಯುತ್ತೆ. ಬಾಯಿಗೆ ಬೀಗ ತಗಲಿಸ್ಕೊಂಡು ಮುದ್ದೆ ಮಡಗು! ಹೂಂ. ಹಾಂಗೆ ಏಕೆ ನಿಂತೀ, ಕೋತೀ ಮುಸುಡಿ ಮಾಡಿಕೊಂಡು."

ಮಾದಿಯ ತುಟಿಗಳೆರಡೂ ಗಲ್ಲದ ಕಡೆ ಬಿಲ್ಲಿನಂತೆ ಬಾಗಿದುವು. ಎನ್ನು ಕಂಭದಂತೆ ನಿಂತುಕೊಂಡು, ಮಾದಣ್ಣನನ್ನು ಅವಳು ದುರದುರನೆ ನೋಡಿದಳು. ಮಾರನು ಕೂಡಲೇ ಸಿದ್ಧನಾದನು. ಬಿಲ್ಲಿನಂತೆ ಅವಳ ತುಟಿ ಗಲ್ಲದಕಡೆ ಬಗ್ಗಿದರೆ, ಮಾರನಿಗೆ ಗೊತ್ತು ಅದರ ಫಲಿತಾಂಶ: ತನ್ನ ಮೇಲೆ ಅವಳು ಮಡಕೆಯ ಚೂರುಗಳ, ಬೈಗಳ ಮಳೆಸುರಿಸುತ್ತಾಳೆಂಬುದು.

"ಏನೂ, ಕೋತಿಮುಸುಡೀನೇ? " ಎಂದು ಗೊಣಗುಟ್ಟುತ್ತಾ ಮಾದವ್ವನು ಹತ್ತಿರದಲ್ಲಿದ್ದ ಒಂದು ಮಣ್ಣಿನ ತಟ್ಟೆಯನ್ನು ತೆಗೆದುಕೊಂಡು, ಮಾರನಿಗೆ ಗುರಿಯಿಟ್ಟು ಹೊಡೆದಳು. ಈ ತರಹದ್ದರಲ್ಲಿ ಹೆಚ್ಚಾಗಿ ಪಳಗಿದ್ದರಿಂದ, ಮಾರನು ಓರೆಯಾಗಿ ನಿಂತು ಹೊಡೆತವನ್ನು ತಪ್ಪಿಸಿಕೊಂಡನು. ತಟ್ಟೆಯು ಅವನ ಹಿಂದಿದ್ದ

---

* ಓ. ಹೆನ್ರಿಯವರ, Between Rounds, ಎಂಬ ಕಥೆಯ ಅನುವಾದ.

ತಡಿಕೆಗೆ ತಗುಲಿ ಕೆಳಗೆ ಬಿದ್ದು ಪುಡಿಪುಡಿಯಾಯ್ತು. ಮಾರನು ಆ ಚೂರುಗಳ ಪೈಕಿ ನಾಲ್ಕೈದನ್ನು ತೆಗೆದುಕೊಂಡು ಮಾದವ್ವನಿಗೆ ಹಿಂದಿರುಗಿಸಿಬಿಟ್ಟನು. ಒಂದೆರಡು ಚೂರುಗಳು ಮಾದಿಯನ್ನು ತಗುಲಿದವು. ಮುಂದೇನು ಬರಬಹುದೆಂದು ಊಹಿಸಿದ್ದ ಮಾರಣ್ಣನು, ಮಾದವ್ವನು ಮೂಲೆಯಲ್ಲಿದ್ದ ಮಡಕೆಯನ್ನು ತನ್ನೆಡೆಗೆ ಎಸೆಯುತ್ತಲು ಅದನ್ನು ಚೆಂಡಿನಂತೆ ಹಿಡಿದು, ಬಂದ ದಾರಿಯಲ್ಲೇ ಅದನ್ನು ರವಾನಿಸಿಬಿಟ್ಟನು. ಗುರಿತಪ್ಪಿ ಮಡಕೆಯು ಮಾದವ್ವನ ಬಳಿ ಬಿದ್ದು ಚೂರುಚೂರಾಯಿತು. ಆ ರಾತ್ರಿಗೆ ಸಾಕಾಗುವಷ್ಟು ಬೋಕಿಗಳು ಇಬ್ಬರಿಗೂ ಒದಗುತ್ತಲು, ಅವರ ಕದನವು ಹೆಚ್ಚಿನ ಮಟ್ಟಕ್ಕೇ ಏರಿತು. ಎಂದಿಗಿಂತಲೂ ಹೆಚ್ಚಾಗಿಯೇ ಹೊಡೆತವನ್ನು ತಿಂದಿದ್ದರಿಂದ ಮಾದವ್ವನು ಬಹಳ ಕುಪಿತಳಾಗಿ, ಹತ್ತಿರದಲ್ಲಿ ಮತ್ತೇನೂ ಸಿಗದಿದ್ದರಿಂದ, ಮುದ್ದೆಯನ್ನು ಇಟ್ಟಿದ್ದ ತಟ್ಟೆಗೇ ಕೈಹಾಕಿ ಎಳೆಯುತ್ತಿರುವಷ್ಟರಲ್ಲಿ, ಎದುರು ಗುಡಿಸಿಲಿನಿಂದ ಬಂದ ಚೀತ್ಕಾರಶಬ್ದವು ಅವಳನ್ನು ತಡೆಗಟ್ಟಿತು.

ಇದಾಗುವುದಕ್ಕೆ ಒಂದೆರಡು ನಿಮಿಷಗಳ ಹಿಂದೆ, ಅವರ ಗುಡಿಸಿಲ ಹಿಂದೆ ಬೀಟುತಿರುಗಲು ಬರುತ್ತಿದ್ದ ಪೋಲೀಸ್ ಕಾನ್‌ಸ್ಟೇಬಲು ಭೀಮಣ್ಣನು, ಮಾರ–ಮಾದವ್ವನವರ ಗುಡಿಸಿಲಿನಿಂದ ಕೇಳಿಬರುತ್ತಿದ್ದ ಮಡಕೆಗಳು ಒಡೆಯುವ ಶಬ್ದ, ಕೂಗಾಟ, ಗುದ್ದಾಟವನ್ನು ಕೇಳಿ "ಮಾದವ್ವ, ಮಾರಣ್ಣ ಕಾದಾಡುತ್ತಾ ಇದ್ದಾರೆ. ಹೋಗಿ ನಿಲ್ಲಿಸಲೆ? ಛೆ! ಪಾಪ. ಜಗಳಾಡಿಯಾಯ್ತು ವಾಗಲೇ ಹವರು ಒಬ್ಬರಿಗೊಬ್ಬರು ಮಾತಾಡುವುದು. ಏನು ಹಾಗುತ್ತೆ! ನಾಳೆ ಹವರು ಒಸ ಗಡಿಗೆಗಳನ್ನು ಕೊಳ್ಳಬೇಕಾಗುತ್ತೆ, ಹಷ್ಟೆ" ಎಂದುಕೊಂಡನು. ಅವನ ಆತ್ಮಗತವು ಮುಗಿಯುವ ವೇಳೆಗೆ ಸರಿಯಾಗಿ, ಮಾದವ್ವನನ್ನು ತಡೆಗಟ್ಟಿದ್ದ ಆ ಚೀತ್ಕಾರಧ್ವನಿಯು, ಅವನ ಹೆಜ್ಜೆಯನ್ನೂ ತಡೆಯಿತು. ಅವನ ಮುಖವು ಕೂಡಲೇ ಬಿಳುಪೇರಿ, ಮೈಬೆವರಿ, ದೇಹವು ಕಂಪಿಸಲು, ಅವನು ಕೂಡಲೇ ಹಿಂದಕ್ಕೆ ತಿರುಗಿ "ಹ-ಹ-ಹಾ! ಬೆಕ್ಕು— ಬೆಕ್ಕಿನಮರಿ ಕೂಗಿರಬಹುದು ಹಷ್ಟೆ ಹಷ್ಟೆ" ಎಂದು ತನ್ನ ಕರ್ತವ್ಯಕ್ಕೆ ಸಮಾಧಾನ ಹೇಳಿ, ಊರಿನ ಕಡೆಗೆ ಸರಸರನೆ ಹೊರಟು ಹೋದನು.

ಆ ಚೀತ್ಕಾರವು ಕೊರಚರ ಕೇರಿಯಲ್ಲಿ ಅವರವರ ಗುಡಿಸಿಲ ಮುಂದೆ ನಿಂತು, ಕುಳಿತು, ಮಲಗಿ, ಮಾತಾಡುತ್ತಾ, ತೂಕಡಿಸುತ್ತಾ ನಿದ್ರಿಸುತ್ತಾ, ಇದ್ದವರೆಲ್ಲರನ್ನೂ ಬೆಚ್ಚಿಸಿತು. ಪೋತಣ್ಣನು ಚೌಹಾರಿ ನಿಂತು, ಅನಂತರ ಆಕಳಿಸಿ ಮೈಮುರಿದು, ತನಿಖೆಗೆ ಹೊರಟನು— ಅವನಿಗೆ ಪೋಲೀಸ್ ಹುದ್ದೆಯಿಂದ ವಜಾ ಆಗಿತ್ತು. ಸ್ವಲ್ಪ ಹೊತ್ತಿನಲ್ಲೇ ಅವನು ಎಲ್ಲವನ್ನೂ ವಿಚಾರಿಸಿ, ಸಮಾಚಾರವನ್ನು ಎಲ್ಲರಿಗೂ ತಿಳಿಸಿದನು. ಗಿಡ್ಡಜ್ಜಿಯ ಕಡೆಯ ಮಗುವು ತಪ್ಪಿಸಿಕೊಂಡಿತ್ತು. ಅದಕ್ಕೇ ಗಿಡ್ಡಜ್ಜಿ ಚೀರಿದ್ದು. ಪೋತಣ್ಣನು ಸಮಾಚಾರವನ್ನು ವ್ಯಕ್ತಗೊಳಿಸುತ್ತಿರುವಷ್ಟರಲ್ಲಿ, ತನ್ನ ಗುಡಿಸಿಲಿನಿಂದ ಗಿಡ್ಡಜ್ಜಿ, ಗಿಡ್ಡಕ್ಕೆ, ದಪ್ಪಕ್ಕೆ, ಗುಂಡಕ್ಕ, ಮುಗ್ಗರಿಸುತ್ತಾ ಬೀಳುತ್ತಾ ಏಳುತ್ತಾ, ಅರಚುತ್ತಾ ಬಿಕ್ಕುತ್ತಾ ಅಳುತ್ತಾ, ಬಂದಳು— ಎರಡುನೂರಾ ಇಪ್ಪತ್ತೆರಡು ಪೌಂಡು ತೂಕದ ಆಸಾಮಿ. ಬಿಕ್ಕಿಬಿಕ್ಕಿ ಅಳುತ್ತಿದ್ದಳು, ಅರುವತ್ತೈದು ಪೌಂಡು ತೂಕದ ಎಲುಬಿನ ಚೀಲವು 'ಗ್ರೈರ್ ಎಲೆ'ಯಾದುದಕ್ಕಾಗಿ. ವಿಷಾದ, ರೌದ್ರ, ಕಾರುಣ್ಯ, ಎಂದು ಹೇಳುತ್ತಾರಲ್ಲಾ, ಆ ರಸಗಳೆಲ್ಲವೂ ಕಣ್ಣೀರು, ಬೆವರು, ಜೊಲ್ಲಿನ ರೂಪದಿಂದ ಗಿಡ್ಡಜ್ಜಿಯ ದೇಹದಿಂದ ಹೊರಸೂಸುತ್ತಿದ್ದುವು. ಒಂದು ಸಲ ಅವಳು ಬಿಕ್ಕಿಸಿದಳು ಅಂದರೆ 'ಲಾಲ್‌ಬಾಗಿ'ನ ಹಿಂದಿರುವ ಗುಡ್ಡ ನಡುಗಿದ ಹಾಗಾಗುತ್ತಿತ್ತು.

ಹೊಸ ಹೆಂಡತಿಯ ಪಕ್ಕದಲ್ಲಿ ಕುಳಿತು ಪಿಸುಪಿಸು ಮಾತನಾಡುತ್ತಿದ್ದ ಬೈಲಣ್ಣನೂ, ಗಂಡನ ಮಾತಿಗೆ ನಿಗಾಕೊಡದೆ ಅವನನ್ನೇ ನೋಡುತ್ತಿದ್ದ ನಾರವ್ವನೂ, ಒಬ್ಬರನ್ನೊಬ್ಬರು ತಬ್ಬಿಕೊಂಡು, "ಹಯ್ಯೊ, ಹಯ್ಯೋ," ಎಂದು ತಮ್ಮ ಸಹಾನುಭೂತಿಯನ್ನು ವ್ಯಕ್ತಗೊಳಿಸಿದರು. ಎಡಕ್ಕಿದ್ದ ಗುಡಿಸಿಲ ಅವಳಿಜವಳಿ ಮುದುಕಿಯರು, ಮುತ್ತಜ್ಜಿ, ಭೂತಜ್ಜಿ, ಇಬ್ಬರೂ ಒಂದೇ ಕಂಠದಲ್ಲಿ, ನಿಧಾನವಾಗಿ, "ಕಂಬ್ಳೀ ಕೆಳಗಡೆ– ನೋಡ್ದೇ–ನವ್ವಾ" ಎಂದು ಪದ್ಯಕ್ಕೂ ಗದ್ಯಕ್ಕೂ ನಡುವೆ, ಹೆಚ್ಚು ಕಡಿಮೆಯ ರಗಳೆಯಲ್ಲಿ ಹೇಳಿದರು. ಬಲಗಡೆ ಗುಡಿಸಿಲ ಮುಂದೆ ಒಣಗಿಕೊಂಡು, ಹೆಂಡತಿಗೆ ಹೆದರಿಕೊಂಡು ಮೈಮುದುರಿ ಬಿದ್ದುಕೊಂಡಿದ್ದ ದಾಸಪ್ಪನು, ಸರಸರನೆ ಎದ್ದು ಕುಳಿತುಕೊಂಡು, ಗಂಭೀರವಾಗಿ, ಹರಕನ್ನು ತಲೆಗೆ ಸುತ್ತುತ್ತಾ "ಹೆದರಬೇಡ ಗಿಡ್ಡಜ್ಜಿ, ಈ ರಾತ್ರೆಯೆಲ್ಲಾ ಬೆಂಗಳೂರನ್ನೆಲ್ಲಾ ಬಗೆದು ನಿನ್ನ ಪಿಳ್ಳೇನ ಹುಡುಕ್ಕೊಂಡು ಬರ್ತೀನಿ." ಎಂದು ಸಿಂಹನಾದ ಮಾಡಿದನು. ಅವನ ಹೆಂಡತಿ, ಬಟವಾಡೆ ದಿವಸ ಗಂಡನ ಜತೆ ಹೋಗಿ ಅವನಿಗೆ ಬಂದಿದ್ದ ಕೂಲಿ ಹಣವೆಲ್ಲವನ್ನೂ ಕಿತ್ತುಕೊಂಡು ಬಿಡುತ್ತಿದ್ದವಳು, "ಹೋಗು, ದಾಸ; ಗಾಡ ಹೋಗು. ಏಟುಹೊತ್ತಾದ್ರೂ ನಾನು ನಿಂಗೆ ಕಾಯ್ತಾ ಇರ್ತೀನಿ." ಎಂದಳು.

"ಮತ್ತೆ ಬೇಗ ನಾಕಾಣೆ ಕೊಡು. ಬಸ್ಸಿಗೆ ಬೇಕಾಗುತ್ತೆ. ದಾರಿ ತಪ್ಪಿದ ಮಕ್ಕಳು 'ಬಲುದೂರನಾಗ್ತವೆ" ಎಂದು, ಹೆಂಡದಂಗಡಿಯನ್ನು ನೆನಸುತ್ತಾ ದಾಸನು ಹೆಂಡತಿಯಿಂದ ನಾಲ್ಕಾಣೆಯನ್ನು ಗಿಟ್ಟಿಸಿಕೊಂಡು ಓಡಿದನು.

ಕಾಟಜ್ಜ, ಹಳೆಯ ಮುದುಕ, ಕೇಕರಿಸಿ ಉಗುಳಿ, ಗಂಟಲನ್ನು ಸರಿಮಾಡಿಕೊಂಡು "ನೀನು ಪಿಳ್ಳೇನ ಯಾವಾಗ ನೋಡ್ದೀ?" ಎಂದು ವಿಚಾರಿಸಿದನು. "ನಾನೇ! ಸಂಜೇಲಿ ನೋಡ್ದೆ. ಅಲ್ಲ–ಅಲ್ಲ–ಸಂಜೇಲಿ ನೋಡಿದ್ದು ಸಣ್ಣಸಿದ್ದನ್ನ. ಪಿಳ್ಳೇನ ವತಾರೆ ಕೂಲಿಗೆ ಹೋಗ್ತಾಗ ನೋಡಿದ್ದೆ. ಅಲ್ಲಿ ಮಣ್ಣಾಗೆ ಉರುಳಾಡ್ತಾ ಇದ್ದ. ರಾತ್ರೆ ನಾನು ಬಂದಾಗ ಎಲ್ರೂ ಮುದ್ದೆತಿಂದು ಮಲಗಿದ್ರು. ನಾನು ಈಗ ಮಲಗೋಕೆ ಹೋಗ್ತೀನೆ, ಪಕ್ಕದಾಗ ಪಿಳ್ಳೇನೆ ಇಲ್ಲ ಅಯ್ಯೋ–ಅಯ್ಯೋ–ಹೋ–ಹೋ–ನನ್ನ ಮಗು–. . . ."

ಮಗು ತಪ್ಪಿಸಿಕೊಂಡಿದೆ ಎನ್ನುವ ಸಮಾಚಾರ ಎಂತಹ ಕಠಿಣ ಹೃದಯವನ್ನೂ ಕರಗಿಸುತ್ತೆ. ಯಾರೇ ಆಗಲೀ, ಯಾವ ಕೆಲಸಕ್ಕೇ ಹೋಗುತ್ತಿರಲಿ, ಒಂದು ಕ್ಷಣ ನಿಂತುಕೊಂಡು "ಅಯ್ಯೋ ಪಾಪ" ಎಂದು ತಮ್ಮ ಮರುಕವನ್ನು ಸೂಚಿಸುತ್ತಾರೆ.

ಮಗುವನ್ನು ಹುಡುಕಲು ಗುಂಪು-ಗುಂಪೇ ಹೊರಡುತ್ತಿತ್ತು. ಆದ್ದರಿಂದಲೇ ಈ ಸಮಾಚಾರವನ್ನು ಕೇಳಿ ಮಾರಣ್ಣ, ಮಾದವ್ವ ತಮ್ಮ ಕದನಕ್ಕೆ ವಿರಾಮವನ್ನು ಕೊಟ್ಟು, ಗುಡಿಸಿಲ ಹೊರಗೆ ಬಂದು ನಿಂತರು.

"ಪಾಪ! ಗಿಡ್ಡಜ್ಜಿಯ ಪಿಳ್ಳೆ ತಪ್ಪಿಸಿಕೊಂಡಿದೆಯಂತೆ!" ಎಂದು ಮಾದವ್ವನು ಮುಲುಗಿದಳು.

"ಪಿಳ್ಳೆ ತಪ್ಪಿಸಿಕೊಂಡಿರುವುದರಿಂದ ನಾನೂ ಅಯ್ಯೋ ಅಂತೀನಿ. ಆದ್ರೆ ಹೆಂಡತೀರು ಯಾರಾದ್ರೂ ತಪ್ಪಿಸಿಕೊಂಡಿದ್ರೆ 'ಹೋಗ್ಲಿ ಪೀಡೆ' ಅಂತಿದ್ದೆ. ಪಿಳ್ಳೆ ತಪ್ಪಿಸಿಕೊಂಡಿದೆ–ಅಯ್ಯೋ ಪಾಪ."

ಮಾದವ್ವನು, ಮಾರಣ್ಣನ ಮಾತಿನಲ್ಲಿದ್ದ ಕೆಣಕಿಗೆ ನಿಗಾ ಕೊಡಲಿಲ್ಲ. ಅವಳ ಮನಸವೆಲ್ಲವೂ, ತಪ್ಪಿಸಿಕೊಂಡಿದ್ದ ಮಗುವಿಗಾಗಿ ಹಾತೊರೆಯುತ್ತಿದ್ದ ಗಿಡ್ಡಜ್ಜಿಯ ದುಃಖದಲ್ಲಿ ಬೆರೆತಿತ್ತು. ಆದ್ದರಿಂದ ಸೌಮ್ಯವಾಗಿಯೇ "ಮಾರ, ಗಿಡ್ಡಜ್ಜಿಯ ಪಿಳ್ಳೆ ತಪ್ಪಿಸಿಕೊಂಡಿದ್ದು ಅನ್ಯಾಯ ಆಯ್ತು. ಈ ಊರು ಬಲು ದೊಡ್ದು ಮಾರ! ರೈಲು, ಮೋಟರು, ಬೈಸ್ಕಲ್ಲು ಇವರ ಹಾವಳಿ ಇದ್ದೇ ಇರುತ್ತೆ–ನೋಡು ಮಾರ, ನಮಗೂ ಈಗ ಎಂಟು ವರಸದ ಹಿಂದೆ ಮಗ ಆಗಿದ್ರೆ ಅದಕ್ಕೂ ಈಗ ಎಂಟು ವರಸ ಆಗ್ತಿತ್ತು ಅಲ್ವೇ?" ಎಂದಳು– ಮೆಲ್ಲನೆ ನುಡಿದಳು.

"ನಮಗೆ ಆಗ್ಲೇ ಇಲ್ವಲ್ಲಾ!" ಎಂದು ವಾಸ್ತವಕ್ಕೇ ಜೋತು ಬಿದ್ದಿದ್ದ ಮಾರನು ಹೇಳಿದನು.

"ಆಗ್ಲಿಲ್ಲ ಸರಿ. ಆಗಿದ್ರೇ, ಮಾರ, ಆ ನಮ್ಮ ಪಿಳ್ಳೆ,— ನಮ್ಮ ಪುಟ್ಟಮಾದ— ಈ ರಾತ್ರಿ ತಪ್ಪಿಸಿಕೊಂಡಿದ್ರೆ ನಮಗೆ ಹೊಟ್ಟ್ಯಾಗೆ ಹೆಂಗಾಗ್ತಿತ್ತು?"

"ಏನು ಹುಚ್ಚು ಮಾತು ನಿಂದು! ಅದರ ಹೆಸರು 'ಮಾದ' ಅಂತ ಆಗ್ತಿರಲಿಲ್ಲ. ಖಂಡಿತ ಇಲ್ಲ. ಆ ಹೆಸರು ಕಂಡ್ರೆ ನನಗೆ ಆಗಲ್ದು. ಸಣ್ಣ ಮಾರ ಅಂತ ಕರೀತಿದ್ದೆ, ತಿಳೀತೇ."

"ನಿನ್ನ ತಲೆ. ಮಾರ ಅನ್ನೋ ಹೆಸ್ರು ತಿರುಗಿ ನಮ್ಮ ಗುಡ್ಲಾಗೆ ನುಳಿಯೋಕೆ ಆಗಲ್ದು. ಇಕೋ, ಒಂದು ಹೆಸರ ಕಾಟ ಸಾಕಾಗಿದೆ!"

ಅನಂತರ ಇಬ್ಬರೂ ಸ್ವಲ್ಪ ಹೊತ್ತು ತಮ್ಮ ಗುಡಿಸಿಲ ಮುಂದೆಯೇ ನಿಂತು, ಗಿಡ್ಡಜ್ಜಿಯು ಹೂಡಿದ್ದ ಗೋಳಾಟವನ್ನು ಗಮನಿಸುತ್ತಿದ್ದರು. ಆಮೇಲೆ ಮಾದವ್ವನು, ಪುನಃ "ಮಾರ, ಇವತ್ತು ನಾನು ನಿನ್ನ ಮೇಲೆ ಬಾಳ ಸಿಟ್ಟುಮಾಡ್ದೆ ಅಲ್ವೆ! ನೀನು ಹೊತ್ತಾಗಿ ಬಂದಿ; ಅದಕ್ಕೆ ನಂಗೆ ಸಿಟ್ಟುಬಂತು. ಇನ್ನುಮೇಲೆ ಜಗಳ ಕಾಯೊಲ್ಲಾ" ಎಂದಳು.

ಮಾರನು, ಮಾದವ್ವನ ಹೆಗಲ ಮೇಲೆ ಕೈಯಿಟ್ಟು "ನಾನೂ ಜಗಳ ಕಾಯೊಲ್ಲಾ ಮಾದಿ! ನೀ ಏನಂದ್ರೂ ಸುಮ್ಕಿರ್ತೀನಿ!" ಎಂದನು.

ಪ್ರಶಾಂತವಾದ ಬೆಳುದಿಂಗಳು ಅವರ ಮುಂದೆ ನಲಿಯುತ್ತಿತ್ತು. ಮಾದಿಯು "ಗಿಡ್ಡಜ್ಜಿಯ ಗೋಳು ಕೇಳಲಾರೆ ನಾನು. ಆ ಪಿಳ್ಳೇನ ಕಳಕೊಂಡು ಅವಳು ಹೇಗೆ ಬದುಕಿರುತ್ತಾಳೆ? ನಮ್ಮ ಪುಟ್ಟಮಾದ ಏನಾರೆ ತಪ್ಪಿಸಿಕೊಂಡಿದ್ರೆ ನನ್ನ ಗತಿ ಏನಾಗ್ತಿತ್ತು?" ಎಂದು ನಿಟ್ಟುಸಿರು ಬಿಟ್ಟಳು.

ಮಾದಿಯ ಭುಜದ ಮೇಲಿಟ್ಟಿದ್ದ ತನ್ನ ಕೈಯನ್ನು ಮಾರನು ಮೆಲ್ಲನೆ ಕೆಳಗಿರಿಸಿ, ಅವಳ ಹತ್ತಿರಕ್ಕೆ ಬಂದು, ಅದೇ ಕೈಯಿಂದ ಅವಳ ನಡುವನ್ನು—ಅದಷ್ಟು—ಸುತ್ತಿ "ನಿನ್ನ ಗತಿ ಹಾಗಿರ್ಲಿ ಮಾದಿ! ನನಗೆ ಹಾಗಾಗಿದ್ರೆ—ನಮ್ಮ ಪಿಳ್ಳೆ— ನನ್ನ ಸಣ್ಣ ಮಾರ—ತಪ್ಪಿಸಿಕೊಂಡಿದ್ರೆ—ಆ ಮಗನ ಕಳವು ಮಾಡಿದವರನ್ನ— ಈ ರಾತ್ರೀನೆ ಕಡಿದುಹಾಕ್ತಿದ್ದೆ, ನಾನು!" ಎಂದನು.

ಅನಂತರ, ಇಬ್ಬರೂ ಒತ್ತಾಗಿ ನಿಂತು, ಬೆಳುದಿಂಗಳ ಸ್ನಾನ ಮಾಡುತ್ತಾ, ತಮ್ಮೆದುರಿಗೆ ನಡೆಯುತ್ತಿದ್ದ ಗಿಡ್ಡಜ್ಜಿಯ ಮಗುವು ತಪ್ಪಿಸಿಕೊಂಡಿದ್ದ ಪ್ರಕರಣವನ್ನು ನೋಡುತ್ತಾ ನಿಂತರು.

ಇದ್ದಕ್ಕಿದ್ದ ಹಾಗೆ ಅಲ್ಲಲ್ಲಿ ಗುಜುಗುಜು ಎದ್ದಿತು. ಕೆಲವರು ಗಿಡ್ಡಜ್ಜಿಯ ಗುಡಿಸಿಲ ಕಡೆಗೆ ನುಗ್ಗಿದರು.

ಸಾಕವ್ವ, ಮುತ್ತಜ್ಜಿ ಇಬ್ಬರೂ, ಒಟ್ಟಿಗೆ ಒಂದೇ ಸ್ವರದಲ್ಲಿ, ನಿಧಾನವಾಗಿ "ಏನದೂ, ಪಿಳ್ಳೇ ಸಿಕ್ತೇ?" ಎಂದು ನುಡಿದರು.

ತನಿಖೆ ನಡೆಯಿಸುತ್ತಿದ್ದ ಪೋತಣ್ಣನು, ಹೆಮ್ಮೆಯಿಂದ ಅರಳಿದ ಮೊಖದವನಾಗಿ ಗಿಡ್ಡಜ್ಜಿಯ ಗುಡಿಸಿಲಿನಿಂದ ಹೊರಕ್ಕೆ ಬಂದು "ನನಗೆ ಅನುಮಾನ ಆಯ್ತು. ಆದ್ದರಿಂದ ಈಗ ಅರ್ಧಗಂಟೆಯಿಂದ ನಾನು ಗಿಡ್ಡಜ್ಜಿಯ ಗುಡ್ಲಾಗೇ ನಿಧಾನವಾಗಿ ಒಂದುಕಡೆಯಿಂದ ಹುಡುಕಿಕೊಂಡು ಬಂದೆ. ಹಿಂದುಗಡೆ ಮೂಲೇಲಿ, ಪಿಳ್ಳೆ, ಕಂಬಳೀನ ಮೈಗೆ ಸುರುಳಿಸುತ್ತಿ ಬಿದ್ದುಕೊಂಡಿದೆ. ನನಗೆ ಅನುಮಾನ ಆಗಿತ್ತು!" ಎಂದು ತನ್ನ ಬುದ್ಧಿವಂತಿಕೆಯನ್ನು ಪ್ರದರ್ಶಿಸಿದನು.

ಮಾರಣ್ಣನು ಮಾದವ್ವನಿಗೆ ವ್ಯಂಗ್ಯವಾಗಿ "ನೋಡಿದು, ನಿನ್ನ ಮಾದ ಆಗಿದ್ರೆ ಎಂಥಾ ಅಲ್ಕಾ ಕೆಲಸಮಾಡ್ತಿದ್ದಾ ಅಂತ! ಅಲ್ಕಾ ಕೆಲಸ. ಕಂಬ್ಳೀಲಿ ಮೈಸುತ್ತಿ, ಮೂಲೇಲಿ ಬಿದ್ದುಕೊಂಡು ಗದ್ದಾಲ ಹೂಡೋದು. ನನ್ನ ಸಣ್ಣ ಮಾರ ಆಗಿದ್ರೆ, ಹಾಗೆ, ನಿನ್ನ ಮಾದನ ಹಾಗೆ, ನಾಯಿಕುನ್ನೀ ಹಾಗೆ, ಮೂಲೇಲಿ ಬಿದ್ದಿರುತ್ತಿದ್ನೆ?" ಎಂದನು.

ಮಾದಿಯ ಮುಖವು ಕಲ್ಲಿನಂತಾಯಿತು. ಮಾರನ ಮಾತುಗಳು 'ಮುಗಿಯುವ ಹೊತ್ತಿಗೆ ಅವಳ ತುಟಿಗಳು ಗಲ್ಲದ ಕಡೆಗೆ ಬಿಲ್ಲಿನಂತೆ ಬಗ್ಗಿದುವು. ಒಂದು ನಿಮಿಷ ಮಾರನನ್ನು ದುರದುರನೆ ನೋಡಿ, 'ಏನೂ, ನಾಯೀಕುನ್ನೀನೇ, ನನ್ನ ಮಾದ?' ಎಂದು ಗೊಣಗುಟ್ಟುತ್ತಾ, ಸಿಟಿಡುಕೊಂಡು ಗುಡಿಸಿಲಒಳಗೆ ಹೋದಳು. ಕದನಕ್ಕೆ ಸಿದ್ಧನಾಗಿ ಮಾರನು ಹೆಂಡತಿಯನ್ನು ಹಿಂಬಾಲಿಸಿದನು.

* * *

ಎರಡನೆಯ ಸಲ ಅಲ್ಲಿಗೆ ಬೀಟು ತಿರುಗಲು ಬರುತ್ತಿದ್ದ ಭೀಮಣ್ಣನು, ಮಾದವ್ವ-ಮಾರಣ್ಣನ ಗುಡಿಸಿಲಹಿಂದೆ ಬರುತ್ತಿದ್ದಾಗ, ಅವರ ಗುದ್ದಾಟವನ್ನು ಕೇಳಿ, ಆಶ್ಚರಿಗೊಂಡು, "ಹಯ್ಯೋ ದೇವ್ರೆ! ಹಾಗ್ಲಿಂದ ಇನ್ನೂ ಗುದ್ದಾಡ್ತಾರೆ. ಇವತ್ತು ಭಾಳ ಮಾತಾಡಬೇಕೆಂದಿದ್ದಾರೋ? ಪಥ್ವಾ, ಮಾರ, ಮುಂದಲ ವಾರದ ಕುಸ್ತಿಗೆ ತಯಾರಿ ತಗೋತಾ ಇದ್ದಾನೋ!" ಎಂದುಕೊಂಡನು.

ಹೆಂಗುಸರಿಗಾಗಿ ವ್ಯಾಯಾಮಕ್ರಮ

ಶ್ರೀ. ಶ್ರೀ. ಜ. ಬಾಪಟ ಬಿ. ಪಿಎಚ್. ಸಿ.

★

೩ನೆಯ ಬರೆಹ

ಹೆಂಗುಸರ ಅನಾರೋಗ್ಯಕ್ಕೆ ಕಾರಣಗಳು

ಮೇರುದಂಡ

ಮೇರುದಂಡ (ಬೆನ್ನಹುರಿಯ ಮೂಳೆ) ವನ್ನು ಕುರಿತ ವಿವರಣೆ ಕಳೆದಸಂಚಿಕೆಯಲ್ಲಿ ಕೆಲವು ಭಾಗ ಬಂದಿದೆಯಷ್ಟೇ? ಅದನ್ನೇ ಇಲ್ಲಿ ಪೂರ್ಣವಾಗಿ ವಿವರಿಸಿ ಹೇಳಬೇಕೆಂದಿದ್ದೇನೆ.

ಮೇರುದಂಡವು ಚಿಕ್ಕ ಚಿಕ್ಕ ಎಲುವಿನ ತುಂಡುಗಳಿಂದ ಕೂಡಿದುದಾಗಿದೆ. ಚಿಕ್ಕತನದಲ್ಲಿ ಈ ತುಂಡುಗಳ ಸಂಖ್ಯೆ ೩೩ ಇರುವ್ರವಾದರೂ, ದೇಹದ ಸಂಪೂರ್ಣ ಬೆಳೆವಣಿಗೆಯಾದಮೇಲೆ ಎಣಿಸುವಾಗ ಆ ಸಂಖ್ಯೆ ೨೬ ಮಾತ್ರ ಆಗುವುದು. ಎಂದರೆ ಮಿಕ್ಕ ೭ ತುಂಡುಗಳು ಸಂಪೂರ್ಣವಾಗಿ ಇಲ್ಲದಂತಾಗುವುವೆಂದು ಇದರ ಅರ್ಥವಲ್ಲ. ಸೊಂಟದ ಕೆಳಬದಿಯ ಮೇರುದಂಡದ ಕೆಲವು ತುಂಡುಗಳು ಒಂದರಲ್ಲೊಂದು ಬೆರೆತುಹೋಗುವುವು. ಆ ಬೆರೆತ ಎಲುವುಗಳದೊಂದು ಸ್ವತಂತ್ರ ಸಮುದಾಯವು, ಒಂದೆ ಒಂದು ಎಲುವಿನಂತೆ ರೂಪುಗೊಳ್ಳುವುದು.

ಮೇರುದಂಡವನ್ನು ನಿರ್ಮಿಸಿದ ಸಣ್ಣಸಣ್ಣ ತುಂಡೆಲುವುಗಳನ್ನು ಕಳಿಗೆಗಳೆಂಬ ಹೆಸರಿನಿಂದಲೂ ಕರೆಯಬಹುದು. ಸಾಮಾನ್ಯವಾಗಿ ಮೇರುದಂಡವು ನಾಲ್ಕುಭಾಗಗಳಲ್ಲಿ ವಿಭಾಗಿತವಾಗುವುದು ಕೊರಳ ಹಿಂಬದಿಯ ಭಾಗ ೧ನೆಯದು. ಇದರಲ್ಲಿ ತಲೆಯ ಪರಟಿಯಿಂದ ಪ್ರಾರಂಭವಾಗುವ ಮೊದಲಿನ ೭ ಕಳಿಗೆಗಳು ಸೇರುವುವು. ಎದೆಯ ಹಿಂಬದಿಯ ಭಾಗ ೨ನೆಯದು. ಇದರಲ್ಲಿ ಮುಂದಿನ ೧೨ ಕಳಿಗೆಗಳು ಬರುವುವು. ಪಕ್ಕೆಲುವುಗಳು ಹಿಂಬದಿಗೆ ಹೋಗಿ ಬೆನ್ನ-ಹುರಿಗೆ ಸಂಬಂಧಿಸಿರುವುದು ಇದೇ ಭಾಗದ ಕಳಿಗೆಗಳೊಂದಿಗೆ. ಸೊಂಟದ ಭಾಗವು ಮೂರನೆಯದು. ಈ ಭಾಗದಲ್ಲಿ ಎರಡನೆಯ ಭಾಗಕ್ಕೆ ಸೇರಿದುವುಗಳಿಗೆ ಮುಂದಿನ ೫ ಕಳಿಗೆಗಳು ಬರುವುವು. ಇದರ ಮುಂದಿನ ಆಸನಪ್ರದೇಶದ ವರೆಗಿನ ೯ ಕಳಿಗೆಗಳು ನಾಲ್ಕನೆಯ ಭಾಗದಲ್ಲಿ ಬರುವುವು. ದೇಹವು ಸಂಪೂರ್ಣವಾಗಿ ಬೆಳೆವಣಿಗೆ ಹೊಂದಿದಾಗ ಈ ಕಳಿಗೆಗಳೂ ಆಸನದ ಎಲುವೂ ಕೂಡಿ ಗಟ್ಟಿಗೊಂಡು ಒಂದೇ ಒಂದು ಆಗಿ ಬಿಡುತ್ತವೆ. ಇದರ ಆಕಾರವು ಸ್ತ್ರೀ-ಪುರುಷರಲ್ಲಿ ಬೇರೆಬೇರೆಯಾಗಿರುವುದೆಂಬುದು ನಿಜವಾದ ಸಂಗತಿ. ಸ್ತ್ರೀಯರ ಕಟಿಪ್ರದೇಶದ ಎಲುವು ಅಗಲವಾಗಿರುವುದಲ್ಲದೆ ಅದರ ಒಳಪೊಳ್ಳು ಹೆಚ್ಚು ಆಳವಾಗಿರುವುದಿಲ್ಲ. ಸ್ತ್ರೀಯರ ಗರ್ಭವನ್ನು ಸುರಕ್ಷಿತವಾಗಿ ಇರಿಸುವುದೂ ಕೊನೆಯವರೆಗೆ ಗರ್ಭದ ಭಾರವನ್ನು ಸಹಿಸುವ ಹೊಣೆಯುಳ್ಳುದೂ ಇದೇ ಭಾಗವು.

ಮೇರುದಂಡದ ಪ್ರತಿಯೊಂದು ಕಳಿಗೆಯಲ್ಲಿಯೂ ಒಂದೊಂದು ತೂತು ಇರುತ್ತದೆ. ಮೆದುಳಿನಿಂದ ಹೊರಕ್ಕೆ ಹೊರಡುವ ಜ್ಞಾನತಂತುಗಳ ಗುಂಪು ಈ ಕಳಿಗೆಯ ತೂತುಗಳಲ್ಲಿ ಹಾಯ್ದು ಹೆಣಿಕೆಗೊಂಡು ಹೊರಬೀಳುತ್ತದೆ. ಪ್ರತಿಯೊಂದು ಕಳಿಗೆಯಿಂದಲೂ ಕೆಲವೊಂದು ಜ್ಞಾನತಂತುಗಳು ಹೊರಕ್ಕೆ ಹೊರಟು, ದೇಹದ ಬೇರೆ ಬೇರೆಯ ಭಾಗಗಳಲ್ಲಿ ಹಬ್ಬುತ್ತ ಹೋಗುವುವು. ಹೀಗೆ ದೇಹದುದ್ದಕ್ಕೂ ಅವು ಹಬ್ಬುತ್ತಲಿರುವಾಗ, ಅಲ್ಲಲ್ಲಿ ಬೇರೆ ಬೇರೆ ಜ್ಞಾನತಂತುಗಳು ಒಂದರಲ್ಲೊಂದು ತೊಡಕಿಕೊಳ್ಳುವುವು. ಇದರಿಂದ ಮೇರುದಂಡದ ಆಧಾರವನ್ನು ಪಡೆದುಕೊಂಡ ಅನೇಕ ಜ್ಞಾನತಂತುಕೇಂದ್ರಗಳು ಅಲ್ಲಲ್ಲಿ ಉಂಟಾಗುವುವು. ಆದುದರಿಂದಲೇ ಮೇರುದಂಡದ ಸುರಕ್ಷಿತತೆಯನ್ನೂ ಸುಸ್ಥಿತಿ-ಕಾರ್ಯಕ್ಷಮತೆಗಳನ್ನೂ ಜ್ಞಾನತಂತುಗಳ ಕಾರ್ಯವು ಸಂಪೂರ್ಣವಾಗಿ ಅವಲಂಬಿಸಿಕೊಂಡಿರುವುದೆಂದು ಹೇಳಲಾಗುವುವು.

ಬೆನ್ನಹುರಿ

ಮೇರುದಂಡದ ಮಹತ್ತ್ವವು ಇಷ್ಟೊಂದು ಇರುವುದರಿಂದಲೆ ಅದು ಕಾರ್ಯಕ್ಷಮವಾಗುವಂತೆ ನೋಡಿಕೊಳ್ಳಬೇಕಾದುದು ಅತ್ಯಗತ್ಯದ ಸಂಗತಿಯಾಗಿದೆ. ಇದಕ್ಕೆ ಒಂದೆ ಒಂದು ಉಪಾಯವೆಂದರೆ: ಮೇರುದಂಡವನ್ನು ಹೆಚ್ಚು ಚುರುಕಾಗಿಯೂ ಸ್ಥಿತಿಸ್ಥಾ-ಪಕ ಶಕ್ತಿಯುಳ್ಳದ್ದನ್ನಾಗಿಯೂ ಮಾಡಬೇಕಾದುದು. ಸ್ತ್ರೀಯರ ಶಾರೀರಿಕ ಶಿಕ್ಷಣದ ಮುಖ್ಯಾಂಗಗಳಲ್ಲಿ ಮೇರುದಂಡವನ್ನು ವ್ಯವ-ಸ್ಥಿತವಾಗಿರಿಸುವುದು ಒಂದು ಮಹತ್ತ್ವದ ಭಾಗವಾಗಿದೆ.

ಮೇರುದಂಡಕ್ಕೆ ಸ್ಥಿತಿಸ್ಥಾಪಕತ್ವ ಶಕ್ತಿಯನ್ನು ಹೇಗೆ ಬೆಳೆಯಿಸಿಕೊಡಬೇಕೆಂಬುದರ ಬಗೆಗೆ ನಾವೀಗ ವಿಚಾರಮಾಡೋಣ. ಮೇರು-ದಂಡದ ಬೇರೆ ಬೇರೆ ಕಳಿಗೆಗಳಲ್ಲಿ ಆದಷ್ಟು ಹೆಚ್ಚಿನ ಪ್ರಮಾಣದಿಂದ ಚಲನವಲನವನ್ನುಂಟುಮಾಡುವುದರಿಂದ ಅದರ ಸ್ಥಿತಿಸ್ಥಾಪ-ಕತೆಯೂ ಚುರುಕುತನವೂ ಹೆಚ್ಚುವುವು. ಆದುದರಿಂದ ಆ ಕಳಿಗೆಗಳನ್ನು ಹಿಂದಕ್ಕೆ ಮುಂದಕ್ಕೆ ಎಡಕ್ಕೆ ಬಲಕ್ಕೆ ಸರಿದಾಡಿಸುವಂತಹ ವ್ಯಾಯಾಮವೂ ಮೇರುದಂಡವನ್ನು ಜಗ್ಗಿ ಹಿಗ್ಗಿಸುವ ಅದರಂತೆಯೆ ಕುಗ್ಗಿಸುವ ವ್ಯಾಯಾಮವೂ ಸ್ತ್ರೀಯರಿಗೆ ಅತ್ಯಾವಶ್ಯಕವಾಗಿದೆ.

ಸ್ತ್ರೀಯರ ಅನಾರೋಗ್ಯದ ಕಾರಣವನ್ನು ಇದುವರೆಗೆ ಅವರ ಪ್ರಾಕೃತಿಕದೃಷ್ಟಿಯಿಂದ ವಿವರಿಸಿದುದಾಯಿತು. ಮಾನಸಿಕದೃಷ್ಟಿಯಿಂದ ವಿಚಾರಮಾಡಿದರೆ, ಇಂದಿನ ಮನೋವಿಶ್ಲೇಷಣಾತ್ಮಕ ವಾಙ್ಮಯವಾಚನವೂ ಸುಶಿಕ್ಷಿತ ಸ್ತ್ರೀಯರ ಅನಾರೋಗ್ಯಕ್ಕೆ ಒಂದು ಮಹತ್ತ್ವದ ಕಾರಣವಾಗಿದೆಯೆಂದು ಹೇಳಬೇಕಾಗುವುದು. ಇಂತಹ ವಾಙ್ಮಯದ ವಾಚನ, ಶ್ರವಣ, ಮನನ, ಚರ್ಚೆ–ವಿಚರ್ಚೆ ಮೊದಲಾದುವುಗಳಿಂದ ಮನಸ್ಸಿನಮೇಲೆ ವಿಪರೀತ ಪರಿಣಾಮವಾಗುವುದು. ಅದರಲ್ಲಿಯೂ ಸ್ತ್ರೀಯರು ಇದರ ವಿಪರೀತ ಪರಿಣಾಮವನ್ನು ಬಹಳವಾಗಿ ಅನುಭವಿಸುವರು. ಇದರಿಂದ ಅವರ ಆರೋಗ್ಯದಮೇಲೆ ಬಲವಾದ ಆಘಾತವುಂಟಾಗುವುದಲ್ಲದೆ ಮನಸ್ಸಿನ ಸ್ವಾಧೀನತೆ ತಪ್ಪಿಹೋಗುವುದು. ಮನಸ್ಸು ಯಾವಾಗಲೂ ಅತೃಪ್ತಿ-ಚಾಂಚಲ್ಯಗಳ ನಿವಾಸವಾಗುವುದು. ಇದರ ಫಲವಾಗಿ ಮನದ ಕೊರಗು ಬೆಳೆಯುವುದಲ್ಲದೆ, ದೇಹದ ಉತ್ಸಾಹ-ಶಕ್ತಿಗಳ ಹ್ರಾಸವಾಗುವುದು. ಮದುವೆಯಾಗಿರದ ತರುಣಿಯರಲ್ಲಿ ಹೆಚ್ಚಾಗಿ ಕಂಡುಬರುತ್ತಿರುವ ಉತ್ತೇಜಕ ಚೇಷ್ಟೆ - ಚಲನವಲನಗಳಿಗೂ, ಬಾಡಿಬತ್ತಿದ ಕಳೆಗೂ ನಿರುತ್ಸಾಹಕ್ಕೂ ಮನೋವಿಶ್ಲೇಷಣಾತ್ಮಕ ಲೈಂಗಿಕ ವಾಙ್ಮಯವೇ ಮುಖ್ಯ ಕಾರಣವಾಗಿದೆ. ಉದ್ವಿಗ್ನತೆ ಮತ್ತು ಅತೃಪ್ತಭಾವನೆಗಳು ಶರೀರ ಸ್ವಾಸ್ಥ್ಯ, ಶಾರೀರಿಕ ವ್ಯಾಪಾರ, ಜ್ಞಾನತಂತುಗಳ ಕೇಂದ್ರ ಇವೆಲ್ಲವುಗಳ ಮೇಲೆ ತುಂಬ ಘಾತುಕವಾದ ಪರಿಣಾಮಗಳನ್ನುಂಟುಮಾಡುತ್ತವೆ. ಸ್ತ್ರೀಯರಿಗೆ ಪಚನೇಂದ್ರಿಯದ ಸಾಮರ್ಥ್ಯವು ಕಡಿಮೆಯಾದಲ್ಲಿ ಮಲಬದ್ಧತೆ, ವಾತವಿಕಾರ ಮೊದಲಾದ ಬೇನೆಗಳು ತಲೆದೋರುವುವು. ಈ ಬೇನೆಗಳು ಗಂಡುಸರಿಗಿಂತ ಹೆಂಗುಸರಿಗೆ ಹೆಚ್ಚಾಗಿ ತೊಂದರೆ ಕೊಡುವುವು. ಹೀಗಾಗುವುದಕ್ಕೆ ಹೆಂಗುಸರ ದೇಹರಚನೆಯಲ್ಲಿಯ ವಿಶಿಷ್ಟಪ್ರಕಾರದ ತೊಡಕುಗಳೆ ಕಾರಣ. ಅಸ್ವಾಭಾವಿಕವಾದ ಚಟಗಳೂ ರೂಢಿಗಳೂ ಈ ತೊಡಕುಗಳಿಗೆ ಸಾಕಷ್ಟು ಸಹಾಯ ಮಾಡುವುವು. ಇದರಿಂದ ಮೊದಲೇ ಸೂಕ್ಷ್ಮವಾಗಿದ್ದ ದುರ್ಬಲ ಅಂಗಾಂಗಗಳ ಮೇಲೆ ಹೆಚ್ಚಿನ ಕಾರ್ಯದ ಹೊರೆಬೀಳುತ್ತದೆ.

ಸ್ತ್ರೀಯರಿಗೆ ಕೊಡಬೇಕಾದ ಶಾರೀರಿಕ ಶಿಕ್ಷಣದಲ್ಲಿ ಕೆಳಹೊಟ್ಟೆಯ ಆರೋಗ್ಯವನ್ನು ಕುರಿತು ಹೆಚ್ಚಿಗೆ ಲಕ್ಷ್ಯಕೊಡಬೇಕಾಗುವುದು. ಏಕೆಂದರೆ ಗರ್ಭಕೋಶವಿರುವುದು ಈ ಕೆಳಹೊಟ್ಟೆಯಲ್ಲಿಯೆ; ಆದುದರಿಂದ ಈ ಭಾಗವು ಚೆನ್ನಾಗಿ ಕಾರ್ಯಕ್ಷಮವಾಗುವಂತೆ ಇಲ್ಲಿ ರಕ್ತಾಭಿಸರಣ ಸರಿಯಾಗಿ ನಡೆಯುವ ಉಪಾಯ ಮಾಡಬೇಕು. ಅಲ್ಲದೆ ಸೊಂಟದ ಸುತ್ತುಮುತ್ತಣ ಸ್ನಾಯುಗಳ ಆರೋಗ್ಯವನ್ನೂ ಸುದೃಢತೆಯನ್ನೂ ಹೆಚ್ಚಿಸುವ ಏರ್ಪಾಡು ನಡೆಯಬೇಕು.

ರಕ್ತಾಭಿಸರಣವು ಹೆಚ್ಚಾಗಿ ನಡೆದು ಕೆಳಹೊಟ್ಟೆಯ ಭಾಗವು ಹೆಚ್ಚು ಕಾರ್ಯಕ್ಷಮವಾಗುವಂತೆ ಮಾಡಬೇಕಾದರೆ ಆ ಭಾಗಕ್ಕೆ ಹಲವುಬಗೆಯ ಚಲನವಲನಗಳನ್ನು ಕೊಡಬೇಕಾಗುವುದು. ವಿಶೇಷತಃ ಯಕೃತ್ತು, ಪ್ಲೀಹ, ಮೂತ್ರಪಿಂಡ ಇವುಗಳನ್ನು ಕಾರ್ಯಕ್ಷಮಗೊಳಿಸಲಿಕ್ಕೆ ಅವುಗಳಲ್ಲಿ ಒಂದುಬಗೆಯ ವಿಸ್ತರಣ ಸಂಕೋಚನಗಳನ್ನು ಉಂಟುಮಾಡಬೇಕಾದ ಆವಶ್ಯಕತೆಯಿದೆ. ಹೀಗೆ ಯಥಾಯುಕ್ತವಾದ ಚಲನವಲನಗಳಿಂದ ಕೆಳಹೊಟ್ಟೆಯ ಭಾಗವನ್ನು ಕೆಲಸಕ್ಕೆ ತಕ್ಕುದನ್ನಾಗಿ ಮಾಡುವುದರಿಂದ, ದೇಹದ ಇನ್ನುಳಿದ ಭಾಗಗಳಿಗೆ ಕೂಡ ತಂತಾನೆ ಅದರ ಲಾಭವು ಸಿಕ್ಕುವುದು; ಎಂದರೆ ಆದ್ಯಂತ ದೇಹದಲ್ಲಿ ರಕ್ತಾಭಿಸರಣವು ಉಚಿತರೀತಿಯಲ್ಲಿ ಸಾಗುವುದಲ್ಲದೆ ಕೆಳಹೊಟ್ಟೆಯು ಒಳಪ್ರೊಳ್ಳು ಕೂಡ ಸಶಕ್ತವಾಗುವುದು.

ಸ್ತ್ರೀಯರ ಆರೋಗ್ಯವು ಹಲವುಸಲ ಅವರ ಗ್ರಂಥಿಮಂಡಲವನ್ನು ಅವಲಂಬಿಸಿಕೊಂಡೂ ಇರುವುದು. ಗ್ರಂಥಿಮಂಡಲದ ಕೆಲಸಗೇಡಿತನದ ಮೂಲಕವೆನ್ನಿ, ಅಸಾಮರ್ಥ್ಯದ ಮೂಲಕವೆನ್ನಿ, ದೇಹದಲ್ಲಿ ಬೇರೆ ಬೇರೆ ವಿಕೃತಿಗಳು ಮೊಳೆದೋರುವುವು. ವಿಶೇಷತಃ 'ಥೈರಾಯಿಡ್' ಗ್ರಂಥಿಯೂ 'ಪಿಟ್ಯುಟರಿ' ಗ್ರಂಥಿಯೂ ಸರಿಯಾಗಿ ಕಾರ್ಯಮಾಡದಂತಹವಿದ್ದಲ್ಲಿ ಶರೀರವೆಲ್ಲವೂ ಭಾರವಾಗಿ ಪರಿಣಮಿಸುವುದು. ಪಿಟ್ಯುಟರಿಗ್ರಂಥಿಯ ಕೆಲಸಗೇಡಿತನದ ಫಲವಾಗಿ ಬರಿಯೆ ಸೊಂಟದ ಸುತ್ತುವಳೆ ಬಳೆದುನಿಲ್ಲುವುದು. ಇನ್ನುಳಿದ ದೇಹವು ಮಾತ್ರ–ಇದ್ದಂತಿರೋ ಸಿದ್ಧೇಶ್ವರಾ!–ತನ್ನ ಸ್ವಾಭಾವಿಕ ಆಕಾರದಲ್ಲಿಯೆ ಉಳಿಯುವುದು. ಇದೇಬಗೆಯಾಗಿ ಇನ್ನೂ ಬೇರೆ ಗ್ರಂಥಿಗಳ ಕಾರ್ಯಕ್ಷಮತೆಯ ಅಭಾವವು ಇನ್ನೂ ಬೇರೆ ಬೇರೆ ಬಗೆಯ ದೈಹಿಕ ವಿಕಾರಗಳನ್ನು ಹುಟ್ಟಿಸುವುದು; ಬೆಳೆಯಿಸುವುದು.

ಸ್ತ್ರೀಯರ ಶಾರೀರಿಕ ಶಿಕ್ಷಣದ ಲಕ್ಷ್ಯವು ಅವರ ದೇಹದ ಸೌಂದರ್ಯ-ಸೌಷ್ಠವಗಳನ್ನು ಬೆಳೆಯಿಸುವುದರ ಕಡೆಗೆ ಇರಬೇಕಾದುದೂ ಅಗತ್ಯ. ದೇಹದ ಸೌಂದರ್ಯವೆಂದರೆ ಅದು ಹೊರಮಿಂಚಿನ ಅಗ್ಗದ ಒಡವೆಗಳನ್ನು ಅವಲಂಬಿಸಿಕೊಂಡಿರುವ ನಾಟಕಾದಿ ಸೌಂದರ್ಯವಾಗಿರದೆ, ದೇಹದಲ್ಲಿ ಅಖಂಡವಾಗಿ ನಡೆಯುವ ಶುದ್ಧ ರಕ್ತದ ಅಭಿಸರಣದ ಮೂಲಕ ಸಿಕ್ಕುವ ಸಹಜಸೌಂದರ್ಯವಾಗಿದೆ. ಇಂತಹ ಸಹಜಸೌಂದರ್ಯದ ಪ್ರಾಪ್ತಿಗೆ ಉಚಿತ ವ್ಯಾಯಾಮವಲ್ಲದೆ ದೈಹಿಕ–ಮಾನಸಿಕ ವಿಶ್ರಾಂತಿಯೂ ಆವಶ್ಯಕವಾಗಿದೆ. ಮೈಕೈಗಳನ್ನು ಸಡಿಲುಸಡಿಲಾಗಿ ಇರಿಸಿಕೊಳ್ಳುವುದರಿಂದಲೂ ಅಂಗಮರ್ದನದಿಂದಲೂ ಸಹಜಸೌಂದರ್ಯವನ್ನು ಸಾಧಿಸಬಹುದು.

ಈ ಮೊದಲು ವಿವೇಚಿಸಿದ ಎಲ್ಲ ಸಂಗತಿಗಳಿಂದಲೂ, ಸ್ತ್ರೀಯರಿಗಾಗಿ ಇರುವ ಶಾರೀರಿಕ ಶಿಕ್ಷಣದಲ್ಲಿ, ಮುಖ್ಯವಾಗಿ ಈ ಮೂರು ಮಾತುಗಳನ್ನು ಸಾಧಿಸಬೇಕಾದುದು ಅನಿವಾರ್ಯವೆಂಬ ಸಂಗತಿ ಸಿದ್ಧವಾಗುವುದು:

೧. ಜ್ಞಾನತಂತುಗಳ ಕಾರ್ಯಕ್ಷಮತೆಯೊಂದಿಗೆ ಮೇರುದಂಡದ ಸ್ಥಿತಿಸ್ಥಾಪಕತ್ವ.

೨. ಗ್ರಂಥಿಮಂಡಲ ಸಹಿತವಾದ ಕೆಳಹೊಟ್ಟೆಯ ಸಂಪೂರ್ಣ ಆರೋಗ್ಯ.

೩. ಸಂಪೂರ್ಣವಾದ ಶಾರೀರಿಕ ಮಾನಸಿಕ ವಿಶ್ರಾಂತಿ.

ಇವೆಲ್ಲವೂ ಸಾಧಿಸಬೇಕಾದರೆ ಕೇವಲ ಶಾಸ್ತ್ರಶುದ್ಧ ವ್ಯಾಯಾಮವೊಂದೇ ಖಂಡಿತವಾದ ಉಪಾಯ. ಅಂತಹ ವ್ಯಾಯಾಮಕ್ರಮಗಳಾವುವೆಂಬುದನ್ನು ಮುಂದಿನ ಸಂಚಿಕೆಯಿಂದ ಒಂದೊಂದನ್ನೇ ಬೇರೆಬೇರೆ ಸಚಿತ್ರವಾಗಿ ವಿವರಿಸಲಾಗುವುದು.

ಮನೆಯಲ್ಲಿಯೆ ಹೊಲಿಗೆ

ಇಂದಿನ ಜಂಪರು

★

ಶ್ರೀ. ಹಳಪೇಟೆ ಚಿಂತಾಮಣಿರಾಯರು, ಟಿ. ಸಿ. ಡಿ.

★

ಬೆಡಗಿನ ಜಂಪರುಗಳಲ್ಲಿ ಇದೊಂದು ತೀರ ಹೊಸ ಮಾದರಿಯದು. ಗಂಡುಸರು ತೊಡುತ್ತಿರುವ ತೆರೆದ ಕೊರಳಿನ (ಓಪನ್ ಕಾಲರ್) ಶರ್ಟಿನಂತೆ ಈ 'ಇಂದಿನ ಜಂಪರು' ಗಾದರೂ ತೆರೆದ ಕೊರಳಿದೆ. ತೋಳುಗಳನ್ನು ಭುಜದ ಮೇಲೆ ಅಲೆದಾಡುವಂತೆ (ಫ್ರಿಲ್ಲಿನವು) ಹಚ್ಚಿರುವುದರಿಂದ, ಇನ್ನುಳಿದ ಜಂಪರುಗಳಿಗಿಂತಲೂ ಇದು ಹೆಚ್ಚು ಶೋಭೆ ತರುವಂತಹದಾಗಿದೆ. ಸಾಮಾನ್ಯವಾಗಿ ಇದನ್ನು ರೇಶಿಮೆಯ, ಜಾರ್ಜೆಟ್ಟಿನ, ವಾಯಿಲಿನ ಇಲ್ಲವೆ ಶಾಮೋಸಾಟಿನಿನ ಬಟ್ಟೆಗಳಿಂದ ತಯಾರಿಸುವುದೇ ಹೆಚ್ಚು. ಪ್ರತಿದಿನ ತೊಡುವ ಸಾದಾ ಬಟ್ಟೆಯಿಂದಲೂ ಹೊಲಿಯಬಹುದು; ಆದರೆ ಬಟ್ಟೆಯಲ್ಲಿ ಕೊಂಚ ಬಿರುಸುತನವಿರಬೇಕಾಗುವುದು. ಎಂತಹ ಸಾದಾಬಟ್ಟೆಯನ್ನು ಕೂಡ ಅಚ್ಚುಕಟ್ಟುತನದಿಂದ ಹೊಲಿದಲ್ಲಿ, ಅದು ಬೆಲೆಯುಳ್ಳ ಬಟ್ಟೆಯಷ್ಟೇ ಶೋಭೆ ಕೊಡಬಲ್ಲುದು. ಇದನ್ನರಿತರೆ ಹೊಲಿಗೆಯ ಕೆಲಸಮಾಡುವುದರಲ್ಲಿಯೆ ಚೆಲುವಿನ ಬಗೆಯೊಂದು ಅಡಕವಾಗಿದೆಯೆಂಬುದು ಗೊತ್ತಾಗುವುದು.

ಅಳತೆ:— ೩೨ ಇಂಚು ಎದೆ, ೨೬ ಇಂಚು ನಡು, ೧೫ ಇಂಚು ನಡು-ಉದ್ದ, ೨೯ ಇಂಚು ಪೂರ್ಣ ಉದ್ದ, ೭½ ಇಂಚು ಭುಜ, ೫½ ಇಂಚು ತೋಳು.

ಚಿತ್ರಿಸುವುದು:— ಬ, ಅ, ಕ ಕಾಟ-ಕೋನವಿರಲಿ!
ಅ, ನ=೭½ ಇಂಚು ಎಂದರೆ ಎದೆಯ¼–½″
ಅ, ಚ=೧೫″ ನಡುವಿನ ಉದ್ದ.
ಅ, ಕ=೧೯″ ಪೂರ್ಣ ಉದ್ದ.
ನ, ಚ, ಕ ಬಿಂದುಗಳನ್ನು ಮುಂದೆ ಬೆಳಿಸು.
ಅ, ಇ=೩′ ಎಂದರೆ ಎದೆಯ ೧½+¼″
ಅ, ಡ=¾″ ಡ, ಇ ಕೊರಳಿನ ಹಿಂಬದಿ ಕೂಡಿಸು.



ಅ, ಫ=೨″ ಎಂದರೆ ಅ ಗಿಂತ ೧″ ಕಡಿಮೆ.
ಫ, ಇ. ಚಿತ್ರದಂತೆ ಕೊರಳಿನ ಮುಂಬದಿ ಕೂಡಿಸು.
ಅ, ಬ=೭½″ ಭುಜ+¼″ ಹೊಲಿಗೆಗಾಗಿ.
ಬ ವನ್ನು ಸರಳವಾಗಿ ಕೆಳಕ್ಕಿಳಿಸು.
ಬ, ಲ=೧½″
ಇ, ಲ ಕೂಡಿಸು.



ನ, ರ=೯½″ ಎಂದರೆ ಎದೆಯ ¼+೧½″
ಟ, ಗ=೧″
ಲ, ಗ, ರ ಚಿತ್ರದಂತೆ ಮುಂಬದಿಯ ಬಗಲನ್ನು ತೆಗೆ.
ಲ, ರ ಜಂಪರಿನ ಹಿಂಬದಿಯ ಬಗಲಿನ ಭಾಗನ್ನು ತೆಗೆ.
ರ ವನ್ನು ಸರಳವಾಗಿ ಕೆಳಕ್ಕಿಳಿಸು.
ಚ, ಜ=ನ, ರ ಕ್ಕಿಂತ ½″ ಕಡಿಮೆ ಎಂದರೆ ೯″

ರ, ಜ ರೇಷೆಯನ್ನು ಹಾಗೆಯೆ ಕೆಳಕ್ಕಿಳಿಸು. ಜ, ಚ ರೇಷೆಗುಂಟ, ನಡುವಿನ ಅಳತೆಗಿಂತ ೨″ ಕಡಿಮೆ ಅಳತೆಯ ರಬ್ಬರ ಪಟ್ಟಿಯನ್ನು ಹಚ್ಚಬೇಕು. ಮುಂಭಾಗಕ್ಕೆ ಇ ಯಿಂದ ಫ, ಚ ೨, ೧ ಈ ಆಕಾರದ ಎರಡು ಒಳಪಟ್ಟಿಗಳು ಬೇರೆ ಬೇಕಾಗುವುವು. ಕೊರಳ ಪಟ್ಟಿಯು ಹೊರಳಿಬೀಳುವುದು. ಠ ದ ವರೆಗೆ ಹೊಲಿಬೇಕು. ಠ ದಿಂದ ಕೆಳಕ್ಕೆ ಗುಂಡಿಗಳನ್ನು ಹಚ್ಚಬೇಕು. ಫ, ಠ=೩″ ಇರುತ್ತದೆ. ಫ, ಇ ರೇಷೆಗುಂಟ ಕೊರಳುಪಟ್ಟಿಯನ್ನು (ಕಾಲರನ್ನು) ಹೊರಳಿಸಿ, ಇಸ್ತ್ರಿ ಮಾಡಬೇಕು.

(೧೩೧ ನೆಯ ಪುಟದ ಅಡಿಯಲ್ಲಿ ನೋಡಿರಿ.)

ಸಾದರ ಸ್ವೀಕಾರ

೧೭. **ಹೈದರಾಬಾದ್ (ದಕ್ಷಿಣ)** ಕರ್ನಾಟಕ ಸಾಹಿತ್ಯ ಮಂದಿರದ ನಾಲ್ಕನೆಯ ವಾರ್ಷಿಕ ವರದಿ. ಕಾರ್ಯದರ್ಶಿಗಳು ಶ್ರೀಮಾನ್ ವೈ. ಅಚ್ಯುತರಾಯರು ಬಿ. ಎ.

೧೮. **ಬ್ಯಾಂಕುಗಳೂ ಮತ್ತು ಅವುಗಳ ವ್ಯವಹಾರವೂ** (ಅರ್ಥಶಾಸ್ತ್ರ ವಿಷಯಕ ಗ್ರಂಥ). ಮೂಲ ಮರಾಟಿಯಿಂದ ಅನುವಾದಿಸಿ ಪ್ರಕಟಿಸಿದವರು ಶ್ರೀಮಾನ್ ಎಸ್. ವಿ. ಅಡ್ಡಣಗಿ ಬಿ. ಎ., ಎಲ್. ಎಲ್. ಬಿ. ವಕೀಲರು ಬೆಳಗಾಂವಿ. ಕ್ರಾ. ಅ. ೧೭೮ ಪುಟ. ಬೆಲೆ ೧-೦-೦.

೧೯. **ಗದಗ-ಬೆಟಗೇರಿಯ ಶ್ರೀ-ಬನಶಂಕರಿ ವಾಚನಾಲಯದ** ೧೯೩೯-೪೦ರ ವಾರ್ಷಿಕ ವರದಿ, ಮತ್ತು ಆಯವ್ಯಯಪತ್ರಿಕೆ.

೨೦. **ಗ್ರಾಮಪಂಚಾನನ** (ಸಾಮಾಜಿಕ ಕಾದಂಬರಿ). ಲೇಖಕರು ಶ್ರೀಮಾನ್ ಬಾ. ಕೃ. ಲಕ್ಷ್ಮೇಶ್ವರ. ಧಾರವಾಡದ ಮನೋಹರ ಗ್ರಂಥಮಾಲೆಯ ೪೧ನೆಯ ಪ್ರಕಟನೆ. ಕ್ರಾ. ಅ. ೧೧೨ ಪುಟ. ಬೆಲೆ ೦-೧೨-೦.

೨೧. **ಕೃಷ್ಣಾಷ್ಟಕ ಸಹಿತ ದಶಾವತಾರಸ್ತೋತ್ರ**:— ಸಂಪಾದಕರು ಸಾಹಿತ್ಯವಿದ್ವಾನ್— ವೇದಾಂತ ಶಿರೋಮಣಿ ಪಿ. ಶ್ರೀನಿವಾಸ ತಂತ್ರಿಗಳು. ಪ್ರಕಾಶಕರು ಪಿ. ಎ. ಉಪಾಧ್ಯಾಯ, ಪ್ರೊಪ್ರೈಟರ್ ಉಡುಪಿ ಸ್ಟೋರ್ಸ್, ಎ. ಎಸ್. ಸ್ಟ್ರೀಟ್, ಬೆಂಗಳೂರು ಸಿಟಿ. ಕ್ರಾ. ಅ. ೨೦ ಪುಟ. ಬೆಲೆ ೦-೨-೬.

೨೨. **ಶ್ರೀಮಂತಿ ಪುರಾಣಿಕ ಭಾಗೀರಥಿಬಾಯಿಯವರ ಚರಿತ್ರೆ**:— ಪ್ರಕಾಶಕರು ಡಾ. ಅ. ವಿ. ಮಳಿಬಸ್ನೂರ, ಕಾರ್ಯದರ್ಶಿ ವನಿತಾಸೇವಾ ಸಮಾಜ ಧಾರವಾಡ. ಕ್ರಾ. ಅ. ೮೬+೨೬ ಪುಟ. ಬೆಲೆ ೦-೮-೦.

೨೩. **ಪ್ರಸಾದ** (ಪದ್ಯಗ್ರಂಥ) ಲೇ. ಶ್ರೀ. ರಾಮಾಚಾರ್ಯ ಕಾಖಂಡಿಕಿ, ಗಲಗಲಿ. ಇವರೇ ಪ್ರಕಾಶಕರು. ಡೆ. ೧೬ದ ೩೦ ಪುಟಗಳು. ಬೆಲೆ ೦-೧-೩.

ಶ್ರೀಸಮರ್ಥ ರಾಮದಾಸರು ಮರಾಟಿಯಲ್ಲಿ ರಚಿಸಿದ 'ಮನಾಚೇ ಶ್ಲೋಕ' ಎಂಬುದರ ಭಾಷಾಂತರವಿದು. ಮೂಲದ ಭುಜಂಗಪ್ರಯಾತ ವೃತ್ತವನ್ನು ಬಿಟ್ಟು ಅದರಂತೆಯೆ ಕಾಣಬಹುದಾದ ನಾಲ್ಕುಚರಣದ ಅಕ್ಷರವೃತ್ತವನ್ನು ಭಾಷಾಂತರಕಾರರು ಉಪಯೋಗಿಸಿಕೊಂಡಿದ್ದಾರೆ. ಭಾಷಾಶುದ್ಧಿ, ಛಂದಶ್ಶುದ್ಧಿಯ ಕಡೆಗೆ ಅನುವಾದಕರು ಅಷ್ಟೊಂದು ಲಕ್ಷ್ಯವನ್ನಿತ್ತಂತೆ ಕಾಣುವುದಿಲ್ಲ; ಸರಳಾರ್ಥಬೋಧೆಯನ್ನೆ ಗುರಿಯಾಗಿಟ್ಟುಕೊಂಡು ತಮ್ಮ ಗುರಿಯನ್ನು ಸಾಧಿಸಿದ್ದಾರೆ.

೨೪. **ಕಾಂಗ್ರೆಸ್ ಪ್ರಕಟನೆ** (ಸತ್ಯಾಗ್ರಹ ಸಂಚಿಕೆ). ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಚೇರಿಯಿಂದ ಪ್ರಕಟವಾದುದು. ಡೆ.೮. ೨೬ ಪುಟ. ಶ್ರೀ. ಸಿ. ಬಿ. ಅಂಬಲಿ, ಜನರಲ್ ಸೆಕ್ರೆಟರಿ ಕೆ. ಪಿ. ಸಿ. ಸಿ. ಧಾರವಾಡ ಅವರು ಪ್ರಕಾಶಕರು.

೨೫. **ಶರೀರಶಿಕ್ಷಣ** (ವ್ಯಾಯಾಮ ವಿಷಯಕ ಗ್ರಂಥ) ಲೇಖಕರು ಶ್ರೀಮಾನ್ ನಾಡಗೀರ ಕೃಷ್ಣರಾಯರು, ಧಾರವಾಡ. ಕ್ರಾ. ಅ. ೧೦+೧೧೨ ಪುಟ. ಬೆಲೆ ೦-೮-೦. ಪ್ರಕಾಶಕರು. ಮಲ್ಲಸಜ್ಜನ ವ್ಯಾಯಾಮ ಶಾಲಾ, ಧಾರವಾಡ.

೨೬. **ಮುಳ್ಳುಬೇಲಿ** (ಅನುವಾದಿತ ಕಾದಂಬರಿ). ಶ್ರೀಮಾನ್ 'ಚಾಲುಕ್ಯ' ಅವರು ಅನುವಾದಕರು. ಧಾರವಾಡದ ಮನೋಹರ ಗ್ರಂಥಭಾಂಡಾರದವರು ಪ್ರಕಾಶಕರು. ಕ್ರಾ. ಅ. ೧೫೪ ಪುಟಗಳು. ಬೆಲೆ ೧-೦-೦.

೨೭. **ಭಾರತಮಾರ್ಗ** (ಅನುವಾದಿತ ಕಾದಂಬರಿ). ಶ್ರೀ. ಗು. ಭಿ. ಜೋಶಿ ಎಂ. ಎ., ಬಿ. ಟಿ. ಅವರು ಅನುವಾದಕರು. ಧಾರವಾಡದ ಮನೋಹರ ಗ್ರಂಥಪ್ರಕಾಶನ ಸಮಿತಿಯವರ ಪ್ರಕಟನೆ. ಕ್ರಾ. ಅ. ೮+೪೧೪ ಪುಟ. ಬೆಲೆ ೨-೮-೦.

೨೮. **ನಮ್ಮ ಆರ್ಥಿಕ ದೃಷ್ಟಿ** (ವಿವೇಚನಾತ್ಮಕ ಪ್ರಬಂಧ). ಲೇಖಕರು. ಶ್ರೀ. ಎಸ್. ಗೋಪಾಲಸ್ವಾಮಿ ಎಂ. ಎ. ಮೈಸೂರು ವಿ. ವಿ. ನಿಲಯದ ಪ್ರಚಾರ ಪುಸ್ತಕ ಮಾಲೆಯ ೧೫ನೆಯ ಗ್ರಂಥ. ಫೂ. ಕ್ಯಾ. ಅ. ೬೫ ಪುಟ. ಬೆಲೆ ೦-೨-೦.

(೯೬೦ನೆಯ ಪುಟದಿಂದ ಮುಂದುವರಿದುದು)

ಕೊರಳುಪಟ್ಟಿ:—ಮುಂಭಾಗ, ಹಿಂಭಾಗಗಳ ಡ, ಇ, ಪ ಕೊರಳನ್ನು ಅಳೆದು, ಅದಕ್ಕಿಂತಲೂ ೩" ಹೆಚ್ಚು ಅಗಲ, ೩½" ಉದ್ದವುಳ್ಳ ಒಂದು ಬಟ್ಟೆಯ ತುಂಡನ್ನು ಅಗಲದಲ್ಲಿ ಮಡಿಕೆಮಾಡಿ, ಎ, ಕ ದ ಕಡೆಗೆ ಬರುವಂತೆ ಇಡು. (ಚಿತ್ರ ನೋಡು) ಅದು ಸ, ಎ, ಕ, ಧ ದಂತೆ ಚೌಕಾಗುವುದು.

ಯ, ಕ, ಧ ದ ೩

ಧ, ಲ=೧" ಲ, ಯ ಚಿತ್ರದಂತೆ ಕೂಡಿಸು.

ಸ, ರ=೪" ಲ, ರ ಕೂಡಿಸು

ಎ, ಫ=೪" ರ, ಪ ಕೂಡಿಸು

ಬಟ್ಟೆಯನ್ನು ಪ, ರ, ಲ, ಯ ರೇಷೆಗುಂಟ ಕತ್ತರಿಸು.

ತೋಳು :— ಜ, ಫ ರೇಷೆಯ ಮೇಲೆ ಗ, ಬ ಸರಳರೇಷೆ (ಲಂಬ) ತೆಗೆ.

ಗ, ಬ=೫½" ಎಂದರೆ ಎದೆಯ ½ + ೧½"

ಗ ಬಿಂದುವಿನಿಂದ ಗ, ಬ ಅಳತೆಯಷ್ಟು ವರ್ತುಳ ತೆಗೆ. ಅದು ಅ, ಬ, ಕ ವರ್ತುಳವಾಗುವದು.

ಅ, ಡ ಮತ್ತು ಕ, ಫ ಪ್ರತಿಯೊಂದು ೩" ಬ, ಇ-೫½" ತೋಳಿನ ಉದ್ದ+೩" ಹೊಲಿಗೆಗೆ, ಅಂದರೆ ೬". ಡ, ಇ, ಫ ದೀರ್ಘವರ್ತುಳ ತೆಗೆ. ಇಂತಹ ಎರಡು ತುಂಡುಗಳೆಂದರೆ ಎರಡು ತೋಳುಗಳು. ಅ, ಬ, ಕ ಭಾಗವನ್ನು ಬಗಲಿನ ಭಾಗಗೆ ಹಚ್ಚಬೇಕು. ತೋಳಿನ, ಅ, ಬ, ಕ ಅಳತೆಯು ಅಂಗಿಯ ಬಗಲಿಗಿಂತ ಹೆಚ್ಚಾದಷ್ಟು ಬಟ್ಟೆಯನ್ನು ಲಿ ಭುಜದ ಬದಿಗೆ ನೀರಿಗೆ ಮಾಡಬೇಕು.

ಬೇಕಾಗುವ ಬಟ್ಟೆ :— ೩೭ ಇಂಚು ಅಗಲವುಳ್ಳ ಬಟ್ಟೆ ೧ ವಾರ ೬ ಗೆರೆಯಷ್ಟು ಬೇಕು.



೧೪. ವರ್ಧಾಯಾತ್ರೆ

ಶ್ರೀ. ಸಿದ್ಧವ್ವನ ಹಳ್ಳಿ ಕೃಷ್ಣಶರ್ಮರು ಬರೆದುದು. ಬೆಲೆ ೧-೦-೦

ಕನ್ನಡದಲ್ಲಿ ದೈನಂದಿನ ಅನುಭವಗಳನ್ನು ಸ್ವಾರಸ್ಯವಾದ ಭಾಷೆಯಲ್ಲಿ ಬರೆದು ಸಂಗ್ರಹಗೊಂಡ ಗ್ರಂಥಗಳು ತೀರಕಡಿಮೆ. ಈ ಬಗೆಯ ಗ್ರಂಥಗಳು ಕತೆ-ಕಾದಂಬರಿಗಳಂತೆ ಮನೋರಂಜನೆಯನ್ನೂ ಮಾಡುವುವು. ಉದ್ಬೋಧಕ ಪ್ರಬಂಧಗಳಂತೆ ಬುದ್ಧಿ ಹೃದಯಗಳನ್ನೂ ತಿದ್ದುವುವು. ಪಶ್ಚಿಮಖಂಡದ ಆಧುನಿಕ ಸಾಹಿತ್ಯದಲ್ಲಿ ಇಂತಹ ಗ್ರಂಥಗಳಿಗೆ ಹೆಚ್ಚಿನ ಮನ್ನಣೆಯಿರುವುದು. ಆದರೆ ಇಂತಹ ವಾಸ್ತವ ಗ್ರಂಥಗಳನ್ನು ಬರೆಯುವ ಲೇಖಕರು ತುಂಬ ಪ್ರಾಮಾಣಿಕರಾಗಿರಬೇಕು. ಹಾಗೆ ಇರದಿದ್ದಲ್ಲಿ ಅಸತ್ಯವನ್ನು ಸತ್ಯವೆಂದು ತಿಳಿಯುವ ಭ್ರಮೆಯಲ್ಲಿ ಜನತೆಯನ್ನು ಕೆಡಹಿದಂತಾಗುವುದು. ಅದರ ಕಟುಫಲವನ್ನೂ ಅದು ಅನುಭವಿಸಬೇಕಾಗುವುದು.

ಈ 'ವರ್ಧಾಯಾತ್ರೆ' ಲೇಖಕರ ಕೆಲವೊಂದು ಜೀವನಕಾಲದಲ್ಲಿಯ ಕೆಲವೊಂದು ಘಟನೆಗಳ ವಾಸ್ತವವರ್ಣನೆಯನ್ನು ಒಳಗೊಂಡ ಗ್ರಂಥ. ಕನ್ನಡದಲ್ಲಿ ಎಲ್ಲ ವಿಧದಲ್ಲಿಯೂ ಇದೊಂದು ಹೊಸವಾದರಿ. ಲೇಖಕರು ಮಹಾತ್ಮರ ಸಾನ್ನಿಧ್ಯವನ್ನು ಬಯಸಿ ವರ್ಧಾಕ್ಕೆ ಹೋಗಿದ್ದರು. ವರ್ಧಾ ಸ್ಟೇಷನಿನಲ್ಲಿ ಇಳಿದ ದಿನದಿಂದ ಮೊದಲು ಮಾಡಿ (೨೪-೧೧-೩೮), ತಾ. ೧೫-೧೦-೩೯ರ ವರೆಗಿನ ತಮ್ಮ ಕೆಲವು ಅನುಭವಗಳನ್ನೂ, ಆ ಅವಧಿಯಲ್ಲಿ ಸಂದರ್ಶಿತರಾದ ಕೆಲವೊಂದು ವ್ಯಕ್ತಿಗಳ ಚಿತ್ರಗಳನ್ನೂ ಇದರಲ್ಲಿ ಕತೆಮಾಡಿ ಹೇಳಿದ್ದಾರೆ. ಹೇಳಿದ ಮಾತು ಸಜೀವವಾಗಿದೆ. ಒಂದೊಂದು ವಾಕ್ಯವೂ ವಾಚಕರ ಮನಸ್ಸನ್ನು ಕುತೂಹಲದಿಂದ ಕೆರಳಿಸುತ್ತದೆ. ಪ್ರತಿಯೊಂದು ಪ್ರಸಂಗದ ವರ್ಣನೆ ವಾಚಕರನ್ನು ಆ ಪ್ರಸಂಗದಲ್ಲಿ ಪ್ರತ್ಯಕ್ಷವಾಗಿ ನಿಲ್ಲಿಸಿದಂತೆ ಮಾಡುತ್ತದೆ. ಇದಕ್ಕೆ ಉದಾಹರಣೆಯಾಗಿ 'ವರ್ಧಾಯಾತ್ರೆ' 'ಬಜಾಜವಾಡಿ' 'ಮಗನ್ ಸಂಗ್ರಹಾಲಯ' 'ಸೇಗಾಂವ ಹಾದಿ' 'ಸೇಗಾಂವ' 'ವರ್ಕಿಂಗ್ ಕಮಿಟಿ' ಮೊದಲಾದ ಭಾಗಗಳನ್ನು ಹೇಳಬಹುದು. ಮನುಷ್ಯರೆಂಬ ಭಾವನೆಯನ್ನು ಜಾಗೃತವಾಗಿ ಇರಿಸಿಯೆ, ಅನೇಕ ರಾಜಕೀಯ ಮಹಾವ್ಯಕ್ತಿಗಳನ್ನು ಕುರಿತು ವಾಚಕರಲ್ಲಿ ಪೂಜ್ಯಾದರವು ಹುಟ್ಟುವಂತೆ ಅವರವರ ಸ್ವಭಾವಚಿತ್ರಗಳನ್ನಿಲ್ಲಿ ಲೇಖಕರು ತುಂಬ ಚಾತುರ್ಯದಿಂದ ತೆಗೆದಿದ್ದಾರೆ. ಏನೇನನಾದರೂ ಪವಾಡಗಳನ್ನು ನಿರ್ಮಿಸಿ ಹೇಳಿ ದೊಡ್ಡವರನ್ನಾಗಿ ಮಾಡಿತೋರಿಸಿ, ಜನಸಾಮಾನ್ಯರಲ್ಲಿ ಕುರುಡು ನಂಬುಗೆ ಹುಟ್ಟಿಸುವ ವ್ಯಕ್ತಿಪರಿಚಯಗಳದೇ ಒಂದು ದಾರಿ; ಈ ಲೇಖಕರು ಮಾಡಿಕೊಡುವ ವ್ಯಕ್ತಿಪರಿಚಯಗಳದೇ ಒಂದು ದಾರಿ. ಇಲ್ಲಿ ನಮಗೆ ಪರಿಚಿತರಾಗುವ ಮಹಾವ್ಯಕ್ತಿಗಳ ಸಾಮಾನ್ಯ ವ್ಯಕ್ತಿತ್ವದಲ್ಲಿಯೆ ಹುದುಗಿಕೊಂಡಿರುವ ಅಸಾಮಾನ್ಯ ವ್ಯಕ್ತಿತ್ವವನ್ನು ಲೇಖಕರು ಚೆನ್ನಾಗಿ ಹೊರಕ್ಕೆ ಎಳೆದುತೋರಿಸಿದ್ದಾರೆ. ಇದಕ್ಕೆ ಉದಾಹರಣೆಯಾಗಿ 'ರಾಜರ ರಾಜ' 'ಗಾಂಧೀಮತದ ಮಹಂತ' 'ಸಂಯಮಿಶ್ರೇಷ್ಠ' 'ಪಟ್ಟಶಿಷ್ಯ' ಎಂಬ ಪ್ರಕರಣಗಳನ್ನೂ ಅಲ್ಲಲ್ಲಿ ಮುಖತೋರಿಸಿ ಹೋಗುವ ದೀನಬಂಧು ಅಂಡ್ರ್ಯೂಜ್, ಕುಮಾರಪ್ಪ, ಔಂಧದ ಅರಸರು, ಜವಾಹರಲಾಲ, ಸುಭಾಷ ಬಾಬು ಶಂಕರಲಾಲ ಬ್ಯಾಂಕರ್, ಪಟ್ಟಾಭಿ ಮೊದಲಾದವರ ಪರಿಚಯ ಪ್ರಸಂಗಗಳನ್ನೂ ಹೇಳಬಹುದು. ಈ ಮಹಾ ಮಹಾ ವ್ಯಕ್ತಿಗಳಲ್ಲದೆ ದಾಮು, ಕವಡುಬಾಯಿ, ಬುಲನ್ ಮೊದಲಾದವರಂತಹ ಸಾಧಾರಣ ವ್ಯಕ್ತಿಗಳಲ್ಲಿಯ ಅಸಾಧಾರಣತೆಯನ್ನೂ ಹೊರಕ್ಕೆ ಹಾಕಿ, ಅವರಲ್ಲಿ ವಾಚಕರ ಆತ್ಮೀಯತೆ ಬೆಳೆಯುವಂತೆ ಮಾಡಿದ್ದಾರೆ. . ಈ ಗ್ರಂಥದ ಲೇಖಕರು. ಎಲ್ಲೆಲ್ಲಿಯೂ ಪ್ರಾಮಾಣಿಕತೆ ಆಟವಾಡುತ್ತಲಿದೆ; ಎಂತಲೆ ಈ ಗ್ರಂಥಕ್ಕೊಂದು ವೈಶಿಷ್ಟ್ಯ ಬಂದುಬಿಟ್ಟಿದೆ.

ಇದಕ್ಕೆ ಮುನ್ನುಡಿಗಳನ್ನು ಬರೆದ ಬೆಂಗಳೂರಿನ ಶ್ರೀಮಾನ್ ಟಿ.ಟಿ. ಶರ್ಮರೂ ಶ್ರೀಮಾನ್ ಬೇಂದ್ರೆಯವರೂ ಒರಿಯೆ 'ಮುನ್ನುಡಿ'ಯನ್ನು ಬರೆದಿರದೆ, ವಿಮರ್ಶಕರ ಒರೆಗೆ ಹತ್ತಿನಿಲ್ಲುವ ಈ ಗ್ರಂಥದ ಬಣ್ಣ-ಬೆಲೆಗಳನ್ನೆ ಹೇಳಿರುವರೆನ್ನಬಹುದು. ಶ್ರೀ. ಟಿ. ಟಿ. ಶರ್ಮರು ಎಂದಿರುವುದು ಹೀಗೆ:-

"ಈ ಪುಸ್ತಕವು ಕನ್ನಡಿಗರಿಗೆ ದೊರೆತ ಅಪೂರ್ವ ಲಾಭವೆನ್ನಬೇಕು. ಗಾಂಧೀಜಿಯವರ ಸತ್ಯಶೋಧನೆ, ಜವಾಹರಲಾಲರ ಆತ್ಮಕಥೆ, ಪಟ್ಟಾಭಿಯವರ ಕಾಂಗ್ರೆಸ್ ಇತಿಹಾಸ ಈ ಗ್ರಂಥಗಳ ಜತೆಯಲ್ಲಿ ಈ ಪುಟ್ಟ ಪುಸ್ತಕವನ್ನು ಓದಬೇಕು."

ಶ್ರೀಮಾನ್ ಬೇಂದ್ರೆಯವರು ಈ ಗ್ರಂಥದ ಬೆಲೆಯ ವಿಚಾರದಲ್ಲಿ ಹೀಗೆ ಹೇಳಿದ್ದಾರೆ:

"ವರ್ಧಾಯಾತ್ರೆಯು ತಿಳಿವಿನಲ್ಲಿ ತಾತ್ತ್ವಿಕ ಗ್ರಂಥ, ರೀತಿಯಲ್ಲಿ ಉತ್ತಮ



ಸಾಹಿತ್ಯ. ಚಿತ್ರಿಕನ ಚಿತ್ರಕರ್ಮಕೌಶಲ್ಯ ದೊಡನೊಡನೆ ನಾಟಕಕಾರನ ಪಾತ್ರಾವಿಷ್ಕರಣದ ಪ್ರಾವೀಣ್ಯವು ಇಲ್ಲಿ ಮಸಗಿದೆ. 'ವರ್ಧಾಯಾತ್ರೆ'ಯು ಇಂದಿನ ಮಹಾಭಾರತದ ಜಾಗ್ರತ ಜೀವನದ ಇತಿಹಾಸದ ಸೆರಗು. ಕಾಲನಟನು ಕುಣಿದು ಕುಣಿಸುತ್ತಿರುವ ಹಲವು ಘಾತಗಳ ಕೆಲವು ಭಂಗಿಗಳು ಇಲ್ಲಿ ನಿರೂಪಿತವಾಗಿವೆ. ಕಥನಕೌಶಲ, ತತ್ತ್ವಗ್ರಥನ, ವರ್ಣನ, ವಿನೋದ ವಿಲಾಸ ಮೊದಲಾದ ಅನೇಕ ಗುಣಗಳು ಕೃಷ್ಣ-ಶರ್ಮರ ಮನಃಶಕ್ತಿಯ ಪರಿಪಾಕದೊಡನೆ ಸ್ವಚ್ಛಂದವಾಗಿ ಇಲ್ಲಿ ಬಂದಿವೆ. ಇವೆಲ್ಲಕ್ಕೂ ವಿಹಾರದಯಾತ್ರಿಕನ ಮನೋಭಾವವೊಂದು, ಹೊಸದಾಗಿ ಮೂಡಿದ ಅಹಂಕಾರ ತಗ್ಗಲಿರುವ ವಿನಯದಲ್ಲಿ ಅಲ್ಪತ್ವದಲ್ಲಿ ಹುದುಗದ ಪ್ರೌಢಿಯೊಂದು ಬೆರೆತು ನವರಸಾಯನವಾಗಿದೆ. ."

'ವರ್ಧಾಯಾತ್ರೆ' ಅಕ್ಷರಬಲ್ಲ ಕನ್ನಡಿಗರೆಲ್ಲರೂ ಓದತಕ್ಕುದಾಗಿದೆ. ಎಲ್ಲರೂ ಒಂದೊಂದು ಬಗೆಯ ಸಮಾಧಾನವನ್ನು ಇದರಿಂದ ಪಡೆಯಬಹುದು. ಶ್ರೀಮಾನ್ ಬೇಂದ್ರೆಯವರು ಹೇಳಿರುವಂತೆ 'ವರ್ಧಾಯಾತ್ರೆಯನ್ನು ಓದಿದವರಿಗೆ ತೃಪ್ತಿಗಿಂತ ಅತೃಪ್ತಿಯೆ ಹೆಚ್ಚಾಗುವುದು' ಎಂದು ನಾವೂ ಹೇಳುವೆವು. ಕಾರಣವೆಂದರೆ ಈ ರೀತಿಯ ಗ್ರಂಥಗಳು ಇಷ್ಟೊಂದು ಸಣ್ಣ ಪುಟಸಂಖ್ಯೆಯಲ್ಲಿ ಮುಗಿದಿರದೆ ಸಂಪುಟ ಸಂಪುಟಗಳಲ್ಲಿ ತುಂಬಿ ತುಂಬಿ ಬರಬೇಕು. ಕನ್ನಡನಾಡು ಅಂತಹ ಕಾರ್ಯಮಾಡಿಸಿಕೊಳ್ಳಲಿಕ್ಕೆ ಕೃಷ್ಣಶರ್ಮರಿಗೆ ಅನುಕೂಲತೆಯನ್ನು ಒದಗಿಸಿಕೊಡಬೇಕಿಷ್ಟೆ !

—'ಕುಂಜವಿಹಾರಿ'

೨೫. ಶರೀರ ಶಿಕ್ಷಣ

ಬರೆದವರು : ಧಾರವಾಡದ ಮಲ್ಲಸಜ್ಜನ ವ್ಯಾಯಾಮಶಾಲೆಯ ಗೌರವ ಸಂಚಾಲಕರೂ ವ್ಹಿಕ್ಟೋರಿಯಾ ಹೈಸ್ಕೂಲಿನಲ್ಲಿ ಅಧ್ಯಾಪಕರೂ ಆದ ಶ್ರೀಮಾನ್ ನಾದಗೀರ ಕೃಷ್ಣರಾಯರು.

ಜೀವನಕ್ಕೆ ಅರ್ಥ (ಧನ) ದ ಆವಶ್ಯಕತೆಯಿದ್ದಂತೆ ಬಲದ ಆವಶ್ಯಕತೆಯೂ ಇದೆ. ಸದ್ಯದ ಜಗತ್ತಿನಲ್ಲಿ, ವಿಶೇಷತಃ ಹಿಂದುಸ್ಥಾನದಲ್ಲಿ ಎರಡಕ್ಕೂ ತುಂಬ ಅಭಾವವಿದೆ. ಹಿಂದುಸ್ಥಾನದಲ್ಲಿ ಇದುವರೆಗೆ ನಡೆದ ಚಳವಳಿಗಳೆಲ್ಲ ಆರ್ಥಿಕ ವಿಚಾರವನ್ನು ಗುರಿಯಿಟ್ಟುಕೊಂಡು ಹೊರಟುವುಗಳಾಗಿವೆ, ಹೊರತು ದೇಹಬಲದ ವಿಚಾರವನ್ನು ಗುರಿಯಾಗಿಟ್ಟುಕೊಂಡುವು ಒಂದೂ ಇರಲಿಲ್ಲ. ಇಂದು ಜಗತ್ತಿನಲ್ಲಿ ನಡೆದಿರುವ ಆಕ್ರಮಣವೃತ್ತಿಯ ಮೇಲುಗೈಯನ್ನು ನೋಡಿದರೆ, ಪ್ರತಿಯೊಂದು ಜನಾಂಗಕ್ಕೂ ದೇಹಬಲಯುಕ್ತವಾದ ಸಂಘಟನೆ ಬೇಕಾಗಿದೆ. ಪರಾಧೀನ ಭಾರತಕ್ಕಂತೂ ತನ್ನ ಸ್ವಾತಂತ್ರ್ಯದ ಗುರಿಯನ್ನು ಸಾಧಿಸಿಕೊಳ್ಳುವುದಕ್ಕೂ, ಸ್ವಸಂರಕ್ಷಣೆ ಮಾಡಿಕೊಳ್ಳುವುದಕ್ಕೂ, ಬಲದ ಆವಶ್ಯಕತೆ ತುಂಬ ಇದೆ. ಇದನ್ನರಿತೆ ಬೇರೆಬೇರೆಯ ಕಾಂಗ್ರೆಸ್ ಮಂತ್ರಿಮಂಡಲಗಳು ತಮ್ಮ ಆಡಳಿತಕ್ಕೆ ಸೇರಿದ ವಿದ್ಯಾಶಾಲೆಗಳಲ್ಲಿ ಶರೀರಶಿಕ್ಷಣ (ವ್ಯಾಯಾಮ)ಕ್ಕೆ ವಿಶಿಷ್ಟಸ್ಥಾನವೊಂದನ್ನು ಕಲ್ಪಿಸಿಕೊಟ್ಟುವು. ಅಂದಿನಿಂದಲೂ ಬೇರೆ ಬೇರೆ ಭಾರತೀಯ ಭಾಷೆಗಳಲ್ಲಿ ಆ ವಿಷಯಕ ಗ್ರಂಥಗಳು ಸಾಕಷ್ಟು ಹೊರಡುತ್ತಲಿವೆ. ಕನ್ನಡದಲ್ಲಿ ಹೊರಟ ಮೊತ್ತಮೊದಲಿನ ಒಂದೆರಡು ಗ್ರಂಥಗಳಲ್ಲಿ ಈ 'ಶರೀರ-ಶಿಕ್ಷಣ' ಒಂದು. ಸುಪ್ರಸಿದ್ಧ ವ್ಯಾಯಾಮಶಾಸ್ತ್ರ ತಜ್ಞರಾದ ಪ್ರೊ. ಕೆ. ವಿ. ಐಯರ್ ಅವರು ಇದಕ್ಕೆ ಚಿಕ್ಕ ಮುನ್ನುಡಿಯೊಂದನ್ನು ಬರೆದಿದ್ದಾರೆ. ಅದರಲ್ಲಿ ಲೇಖಕರನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸಿದುದು ಹೀಗೆ :

"ಪುಸ್ತಕ ಬರೆದವರು ವ್ಯಾಯಾಮ ವಿಷಯವನ್ನು ಚೆನ್ನಾಗಿ ಅರಿತವರು, ಅದರಲ್ಲಿ ನುರಿತವರು. ಇದಕ್ಕಿಂತ ಹೆಚ್ಚಾಗಿ ಪೌರ್ವಾತ್ಯ ಪಾಶ್ಚಾತ್ಯ ಪದ್ಧತಿಗಳೆರಡನ್ನೂ ಬಲ್ಲವರು. ಅವುಗಳ ಗುಣಬಣ್ಣಗಳನ್ನು ತಮ್ಮ ಮೈ-ಒರೆಗಲ್ಲಿಗೆ ಹಚ್ಚಿ ನೋಡಿರುವರು. ಇದಕ್ಕೆ ಅವರ ತುಂಬಿದ ಮೈಕಟ್ಟೇ ಸಾಕ್ಷಿ. ಇಷ್ಟು ಅಚ್ಚುಕಟ್ಟಿನ ಮೈಯುಳ್ಳವರೂ, ಮಲ್ಲಸಾಧನ ಪ್ರೇಮಿಗಳೂ, ಶರೀರದ ನಿಯಮಗಳನ್ನು ಮನಗಂಡವರೂ ಕನ್ನಡನಾಡಿನಲ್ಲಿ ಬಹು ಕಡಿಮೆ."

ಪ್ರೊ. ಅಯ್ಯರರ ಈ ಅಧಿಕಾರವಾಣಿ ಲೇಖಕರಲ್ಲಿರುವ ವ್ಯಾಯಾಮವಿಷಯಕ ಪ್ರಭುತ್ವವನ್ನು ಚೆನ್ನಾಗಿ ವ್ಯಕ್ತಪಡಿಸುತ್ತಿದೆ. ಈ ಗ್ರಂಥ ವ್ಯಾಯಾಮದ ವಿಷಯದಲ್ಲಿ ಬರಿಯೆ ಲೇಖಕನೊಬ್ಬ ಬರೆದ ಗಾಳಿ-ಮಾತು ಆಗಿರದೆ, ವ್ಯಾಯಾಮ ತಜ್ಞನೊಬ್ಬನು ಅನುಭವಿಸಿ ಬರೆದ ಪ್ರತ್ಯಕ್ಷಜ್ಞಾನದ ಕೈಪಿಡಿಯಾಗಿದೆ. ಶರೀರ ಶಿಕ್ಷಣದ ವಿಷಯದಲ್ಲಿ ಈ ಲೇಖಕರು ಬರೆಯಲಿರುವ ಅನೇಕ ಗ್ರಂಥಗಳಲ್ಲಿ ಮೊದಲನೆಯ ಗ್ರಂಥ ಪ್ರಕಟನೆಯಿದು; ಇಂಗ್ಲಿಷಿನಲ್ಲಿದ್ದ ಬೇರೆ ಬೇರೆ ೧೬ ಗ್ರಂಥಗಳ ಪ್ರಾಮಾಣ್ಯವನ್ನವಲಂಬಿಸಿ ಈ ಗ್ರಂಥವು ರಚಿತವಾಗಿದೆ.

ಇದರಲ್ಲಿ 'ವಿಷಯ ಪ್ರವೇಶ' ಎಂಬ ಪ್ರಾಸ್ತಾವಿಕ ಭಾಗ ಮುಗಿದ ಬಳಿಕ 'ಶರೀರ ಶಿಕ್ಷಣ' 'ಶರೀರ ಸಂಸ್ಕೃತಿ' 'ಅಂಗಸಾಧನ' 'ವ್ಯಾಯಾಮ' ಎಂಬ ಪರಿಭಾಷಾ ಪದಗಳಲ್ಲಿಯ ಅರ್ಥವ್ಯಾಪ್ತಿಯನ್ನು ಕುರಿತು ವಿಚಾರಮಾಡಿ, ತಮಗೆ ಇಷ್ಟವಾದ ಪೂರ್ಣಾರ್ಥವು 'ಶರೀರ ಶಿಕ್ಷಣ' ಎಂಬುದರಲ್ಲಿಯೆ ಸಿಕ್ಕುವುದೆಂದು ಲೇಖಕರು ಒಪ್ಪಿಕೊಂಡಂತಿದೆ. 'ವ್ಯಾಯಾಮ' ಎಂಬ ಪದದ ವ್ಯುತ್ಪತ್ತ್ಯರ್ಥವು ಕೇವಲ 'ಹಿಗ್ಗಿಸುವುದು' ಎಂದಿದ್ದರೂ, ಅದರ ಪರಿಭಾಷಾರ್ಥವು ವಿಶೇಷ ವ್ಯಾಪ್ತಿಯನ್ನೊಳಗೊಂಡುದಾಗಿದೆ. ಮಹರ್ಷಿ ಚರಕಾಚಾರ್ಯರು ವ್ಯಾಯಾಮದ ವ್ಯಾಪ್ತಿಯನ್ನು ಹೀಗೆ ಹೇಳಿರುತ್ತಾರೆ:

"ಶರೀರ ಚೇಷ್ಟಾ ಯಾ ಚೇಷ್ಟಾ
ಸ್ಥೈರ್ಯಾರ್ಥ ಬಲವರ್ಧಿನೀ,
ದೇಹವ್ಯಾಯಾಮ ಸಂಖ್ಯಾತಾ. . . . "

ಎಂದರೆ, 'ಶರೀರದ ಸ್ಥೈರ್ಯ-ಬಲಗಳನ್ನು ಬೆಳೆಯಿಸುವುದಕ್ಕಾಗಿ ಮಾಡುವ ದೇಹದ ಅಲುಗಾಟಗಳಿಗೆ ವ್ಯಾಯಾಮ ಎನ್ನುವರು' ಎಂದರ್ಥ. ಈ ವ್ಯಾಯಾಮದ ಗಮ್ಯವಾವುದೆಂಬುದನ್ನು ಕುರಿತು ವಾಗ್ಭಟಾಚಾರ್ಯರು ಹೀಗೆ ಹೇಳುತ್ತಾರೆ:

"ಲಾಘವಂ ಕರ್ಮಸಾಮರ್ಥ್ಯಂ
ದೀಪ್ತೋಗ್ನಿರ್ಮೇದಸಃ ಕ್ಷಯಃ ।
ವಿಭಕ್ತ ಘನಗಾತ್ರತ್ವಂ ವ್ಯಾಯಾಮಾದು-
ಪಜಾಯತೇ ॥"

ಎಂದರೆ ಚುರುಕುತನ, ಕಾರ್ಯಮಾಡುವ ಶಕ್ತಿ, ಜೀರ್ಣಶಕ್ತಿ, ಕೊಬ್ಬಿಲ್ಲತನ ಇವೆಲ್ಲ ವ್ಯಾಯಾಮದಿಂದ ಸಿಕ್ಕುವುವಲ್ಲದೆ ದೇಹದ ಒಂದೊಂದು ಅಂಗವೂ ಯುಕ್ತ ಪ್ರಮಾಣದಲ್ಲಿ ಘನತೆಯನ್ನು ಪಡೆಯುವುವು. 'ಸ್ಥೈರ್ಯ' ಎಂದರೆ ಮನಸ್ಸು-ಬುದ್ಧಿಗಳ ಸಹನಶಕ್ತಿ. 'ಬಲ' ಎಂದರೆ ಕೇವಲ ಶರೀರಶಕ್ತಿ. ಇವೆರಡೂ ಶಕ್ತಿಗಳನ್ನು ಬಳೆಯಿಸುವ ಶರೀರಕ್ರಿಯೆಯೇ ವ್ಯಾಯಾಮವೆಂದಮೇಲೆ 'ವ್ಯಾಯಾಮ' ಎಂಬ ನಮ್ಮ ಪರಂಪರಾಗತ ಪರಿಭಾಷೆಯಲ್ಲಿ 'Physical Training' ಎಂಬ ಇಂಗ್ಲಿಷ್ ಪದಗಳಿಂದ ಬೋಧವಾಗುವ ಎಲ್ಲ ಅರ್ಥವೂ ಸಿಕ್ಕುವುದು. ಹೀಗಿರುವಾಗ 'ವ್ಯಾಯಾಮ' ಎಂಬುದನ್ನು ಬಿಟ್ಟು 'ಶರೀರ ಶಿಕ್ಷಣ' ಎಂಬ ಭಾಷಾಂತರಿತ ಪದದ ಬೆನ್ನನ್ನೆ ನಾವು ಏತಕ್ಕಾಗಿ ಹಿಡಿಯಬೇಕು !

'ಶರೀರ ಶಿಕ್ಷಣದ ಪೂರ್ವಾಪರ' ಎಂಬ ಭಾಗದಲ್ಲಿ ಲೇಖಕರು ಮಾನವಜೀವನದಲ್ಲಿ ಕ್ರಮವಾಗಿ ಬಳೆದುಬಂದ ವ್ಯಾಯಾಮ ಕ್ರಮವನ್ನೂ, ಪೌರ್ವಾತ್ಯ ಪಾಶ್ಚಾತ್ಯ ದೇಶಗಳಲ್ಲಿಯ ವ್ಯಾಯಾಮದ ಪ್ರಾಚೀನೇತಿಹಾಸವನ್ನೂ, ಬೇರೆ ಬೇರೆ ಪಾಶ್ಚಾತ್ಯ ದೇಶಗಳಲ್ಲಿಯ ವ್ಯಾಯಾಮ ಪ್ರಚಾರ ಪ್ರಾರಂಭಕರ ಅಲ್ಪಪರಿಚಯಗಳನ್ನೂ, ಪಾಶ್ಚಾತ್ಯ ರಾಷ್ಟ್ರಗಳಲ್ಲಿಯ ಇಂದಿನ ವ್ಯಾಯಾಮಪದ್ಧತಿಗಳನ್ನೂ ಸ್ವಲ್ಪಸ್ವಲ್ಪದಲ್ಲಿಯೆ ಹೇಳಿದ್ದಾರೆ. ಬಳಿಕ ವ್ಯಾಯಾಮ ಶಿಕ್ಷಣದ ಗುರಿ, ಉದ್ದೇಶ, ಸಾಧ್ಯ, ಮೂಲತತ್ತ್ವ ಮೊದಲಾದುವುಗಳನ್ನು ವಿವರಿಸುವ ಔಪಪತ್ತಿಕ ಭಾಗವಿದ್ದು, ಮುಂದಿನ ೫೦ ಪುಟಗಳೆಲ್ಲ ವ್ಯಾಯಾಮ ಶಿಕ್ಷಣದ ಸಂಘಟನೆ, ಆಡಳಿತ, ಶಿಕ್ಷಣ-ಕ್ರಮ, ಉಪಕರಣ ಇವುಗಳ ಬಗ್ಗೆ ಕೂಲಂಕಷವೂ ಉಪಯುಕ್ತವೂ ಆದ ವಿವೇಚನೆಯಿರುವುದು. ಶರೀರಶಿಕ್ಷಣಕ್ಕಾಗಿ ಬೇಕಾಗುವ ಶಾಲೆಯ ರಚನೆಯೆಂತಹದಿರಬೇಕೆಂಬುದನ್ನು ಮೊದಲುಮಾಡಿ, ಅಲ್ಲಿ ಶಿಕ್ಷಣಹೊಂದಲಿರುವವರ ಆಹಾರ, ವಿಹಾರ, ಆಚಾರ, ವಿಚಾರಗಳು ಹೇಗೆ ಹೇಗೆ ಇರಬೇಕೆಂಬುದನ್ನೂ ವಿವರಿಸಲಾಗಿದೆ. ಪ್ರಸ್ತುತಗ್ರಂಥದಲ್ಲಿ ಪ್ರಾಥಮಿಕ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಆವಶ್ಯವಾದ ಶರೀರಶಿಕ್ಷಣಕ್ರಮವೆಲ್ಲವೂ ಸುಸಂಗತವಾಗಿ ಅಡಕಗೊಂಡಿದೆ. ವಿಷಯವು ಸುಲಭವಾಗಿ ತಿಳಿಯುವಂತೆ ಭಾಷೆ ಸರಳವಾದುದಾಗಿದೆ. ಆದರೂ ಮುಂದಿನ ಮುದ್ರಣದಲ್ಲಿ ಅಲ್ಲಲ್ಲಿ ಕಾಣುವ ಶಬ್ದ ಪ್ರಯೋಗ, – ವಾಕ್ಯಪ್ರಯೋಗ ದೋಷಗಳನ್ನು ತಿದ್ದಬೇಕಾದ ಆವಶ್ಯಕತೆಯೂ ಇದೆ. ಕನ್ನಡನಾಡಿನಲ್ಲಿಯ ಬೇರೆ ಬೇರೆ ಸರಕಾರದ ವಿದ್ಯಾಖಾತೆಯ ಅಧಿಕಾರಿಗಳು, ಈ ಗ್ರಂಥದ ಮಹತ್ತ್ವವನ್ನರಿತುಕೊಂಡು, ಪ್ರತಿಯೊಂದುಶಾಲೆಯ ವ್ಯಾಯಾಮಶಿಕ್ಷಕನಿಗೂ ಪ್ರಮಾಣಗ್ರಂಥವನ್ನಾಗಿ ಇದನ್ನು ನಿಯಮಿಸಿದರೆ, ತುಂಬ ಪ್ರಯೋಜನವಾಗಬಹುದಾಗಿದೆ. ಹಾಗಾಗಬೇಕಾದುದು ಅತ್ಯಂತ ಆವಶ್ಯಕ. ಶ್ರೀ. ನಾಡಗೀರ ಕೃಷ್ಣರಾಯರ ಬೇರೆ ಗ್ರಂಥಗಳೂ ಬೇಗನೆ ಬೆಳಕನ್ನು ಕಂಡು, ಕನ್ನಡ ತರುಣರ ದೇಹ-ಬಲಸಿದ್ಧಿಗೆ ಸಾಧನಗಳಾಗಿ ಪರಿಣಮಿಸಲಿ !

—ದಿ. ಪಾ. ಸಾ ರಾವ್

೧೧. ರಾಘವಾಂಕ

ಶ್ರೀ. ಎಚ್. ಎಂ. ಶಂಕರನಾರಾಯಣರಾವ್, ಎಂ. ಎ. ಮೈಸೂರು ಅವರು ಬರೆದುದು.

ಇದರಲ್ಲಿಯ 'ಮೊದಲ ಮಾತು' 'ಉಪಕಾರಸ್ಮರಣೆ' ಎಂಬ ಸ್ವವಿಷಯದ ಭಾಗಗಳನ್ನು ಬಿಟ್ಟರೆ ಮಿಕ್ಕ ಐದು ಭಾಗಗಳಲ್ಲಿ ಹರಿಶ್ಚಂದ್ರಕಾವ್ಯದಿಂದ ಪರಿಚಿತನಾಗುವ ರಾಘವಾಂಕನ ಅಲ್ಪಚರಿತ್ರೆಯನ್ನೂ ಆ ಕಾವ್ಯದ ವಿಮರ್ಶೆಯನ್ನೂ ಕುರಿತು ಬರೆದ 'ಲೇಖನಮಾಲೆ' ಅಡಕವಾಗಿರುವುದು. ಪುಸ್ತಕಕ್ಕೆ 'ಕವಿರಾಘವಾಂಕ' ಎಂಬ ಹೆಸರಿದ್ದರೂ, ಈ ಕವಿಯ ಮಿಕ್ಕ ಗ್ರಂಥಗಳ ವಿಚಾರ, ವಿಮರ್ಶೆ ಇದರಲ್ಲಿ ಬಂದೇ ಇಲ್ಲ. ಇಷ್ಟೇ ಅಲ್ಲ, ಸಂಪೂರ್ಣ ಹರಿಶ್ಚಂದ್ರ ಕಾವ್ಯದ ವಿಮರ್ಶೆಯೂ ಇದರಲ್ಲಿ ಆಗಿದೆಯೆಂದು ಹೇಳಲು ಬರುವಂತಿಲ್ಲ. ಲೇಖಕರು ತಮ್ಮ ಮೊದಲಮಾತಿನಲ್ಲಿ "ಹರಿಶ್ಚಂದ್ರ ಕಾವ್ಯಸಂಗ್ರಹವನ್ನೆ* ದೃಷ್ಟಿಯಲ್ಲಿಟ್ಟುಕೊಂಡು ಈ ಲೇಖನಗಳನ್ನು ಬರೆದಿರುವೆನೆಂಬ ಅಂಶವನ್ನು ಒತ್ತಿ ನುಡಿಯಬೇಕಾಗಿದೆ" ಎಂದು ದಪ್ಪಕ್ಷರಗಳಿಂದ ಹೇಳಿರುವರು. 'ಕವಿಯ ಇತರ ಗ್ರಂಥಗಳ ಕಡೆಗೆ ಮನಸ್ಸು ಹರಿದಿಲ್ಲ' ಎಂಬುದನ್ನು ಒಪ್ಪಿಕೊಂಡಿರುವರು. ಇದನ್ನೆಲ್ಲ ನೋಡಿದರೆ ಇದಕ್ಕೆ 'ಕವಿರಾಘವಾಂಕ' ಎಂಬ ಹೆಸರಿರುವುದಕ್ಕಿಂತ 'ಹರಿಶ್ಚಂದ್ರ ಕಾವ್ಯದ ಪ್ರಶಸ್ತಿ' ಎಂದಿದ್ದರೆ ಔಚಿತ್ಯವಿರುತ್ತಿದ್ದಿತೇನೋ !

ಕಾವ್ಯವಿಮರ್ಶೆಯ ಬಗೆಗಿರುವ ನಾಲ್ಕು ಲೇಖನಗಳಲ್ಲಿ ಮೊದಲನೆಯದು 'ಹರಿಶ್ಚಂದ್ರ ಕಾವ್ಯದ ಕಥಾಸಂಗ್ರಹ'. ಎರಡನೆಯದರಲ್ಲಿ 'ಪಾತ್ರಪರಿಶೀಲನೆ' ಇದೆ. ಮೂರನೆಯದರಲ್ಲಿ ಕಾವ್ಯದಲ್ಲಿ ಹುದುಗಿರುವ 'ನೀತಿ'ಯ ಬಗೆಗೆ ಚರ್ಚೆಯಿದೆ. ನಾಲ್ಕನೆಯದರಲ್ಲಿ ಕಾವ್ಯದಲ್ಲಿಯ ಸಂದರ್ಭ, ಪಾತ್ರ ಇವುಗಳಲ್ಲಿ ಕಂಡುಬರುವ ಗುಣ-ದೋಷಗಳನ್ನು, 'ಕೆಲವು ಸಾಹಿತ್ಯಸಮಸ್ಯೆಗಳು' ಎಂಬ ಶಿರೋಲೇಖನದಡಿಯಲ್ಲಿ ಬರೆಯಲಾಗಿದೆ. ಹರಿಶ್ಚಂದ್ರ ಕಾವ್ಯದ ರಹಸ್ಯವನ್ನರಿತು ಸಂಗ್ರಹಿಸಿದ—ದಿವಂಗತ ಟಿ. ಎಸ್. ವೆಂಕಣ್ಣಯ್ಯನವರ ಹತ್ತಿರದಲ್ಲಿಯೆ ಇದ್ದವರು ಈ ಲೇಖಕರು. ಎಂತಲೆ ವಿವಿಧ ಮುಖದಿಂದ ಆ ಕಾವ್ಯವನ್ನಿಲ್ಲಿ ವಿಮರ್ಶಿಸಿರುವರು. ಈಗ 'ಹರಿಶ್ಚಂದ್ರ ಕಾವ್ಯಸಂಗ್ರಹ' ಹಲವು ವಿದ್ಯಾಸಂಸ್ಥೆಗಳಲ್ಲಿ ಪಠ್ಯಪುಸ್ತಕವಾಗಿದೆ. ವಿದ್ಯಾರ್ಥಿಗಳು ಅದರೊಂದಿಗೆ ಇದನ್ನೂ ಓದಿದರೆ, ಪರೀಕ್ಷೆಯ ದೃಷ್ಟಿಯಿಂದಲೂ ಕಾವ್ಯಾಭ್ಯಾಸದ ದೃಷ್ಟಿಯಿಂದಲೂ ಖಂಡಿತ ಪ್ರಯೋಜನವುಂಟು. ಪ್ರಸ್ತುತ ಲೇಖಕರು 'ಕನ್ನಡ ಕವಿಕಾವ್ಯಮಾಲೆ' ಹೊರಡಿಸಿದ್ದು, ಅದರಲ್ಲಿ ಇನ್ನೂ ಹಲವು ಗ್ರಂಥಕುಸುಮಗಳನ್ನು ಹೆಣೆಯಲಿದ್ದಾರೆ. ಕನ್ನಡಿಗರು ಆದರದಿಂದ ಇವರ ಕಾರ್ಯವನ್ನು ಸ್ವಾಗತಿಸಬೇಕು.

ಸಂ.........ಕ.

* ಮೈಸೂರು ವಿ. ವಿ. ನಿಲಯದ ಪ್ರಕಟನೆ.



ಅವಸ್ಯ ಹಾಕಿ ಬಾ !

ಆಕೆ:— ಹೊರಗ ಭಿಕ್ಷಾದಂವ ಬಂದಾನ. ದೊಂದು ಭಕ್ಕರೀ ಹಾಕಿ ಬರತೀನಿ ಅಂವಗ!

ಆತ:— ಹ್ವಾಂಗs? ಹೋಗು ಅವಶ್ಯ ಗಿ ಹಾಕಿ ಬಾ! ಒಬ್ಬನದಾದ್ರೂ ಉಪದ್ರ ವಿತನಕಾ ತಪ್ಪಿಹೋದೀತು !

*　　*　　*

ಹೊಸಾ ಗುಣಧರ್ಮ

ಶಿಕ್ಷಕ:— ನೀರಿದ್ದದ್ದು ಬರ್ಫ ಆಯಿ ಂದರೆ, ಆಗ ಆದರಲ್ಲಿ ಉಂಟಾಗುವ ಹೊಸಾ ಣಧರ್ಮ ಯಾವುದೋ ಗುಂಡ್ಯಾ ?

ಗುಂಡ:— ನೀರಿಗೆ ಕಿಮ್ಮತ್ತು ಇರೂದಿಲ್ರಿ; ರ್ಫಕ್ಕ ಕಿಮ್ಮತ್ತು ಕೊಟ್ಟು ತೊಗೋಬೇಕಾ ತ್ತsದರಿ !

*　　*　　*

ಕಂಬಳಿಯ ನೆನಪು

“ ಈಗ ನನ್ನ ಕಂಬಳಿ ನನಗ ತಿರಿಗಿ ಸಿಕ್ಕಿ ಂದರ ಏನ್ ಹೇಳ್ಲೀ ಮೋಜಾನ ! ”

“ಯಾಕಲೇ ಎಲ್ಲಿ ಹೋತು ನಿನ್ನ ಕಂಬಳಿ?”

“ ಹೋಗತೈತಿ ಎಲ್ಲೀಲೇ ! ನೆರೆದಂಗಡಿಗೆ ಕಾಕ್ಕೆ ಕೊಡೂದಿತ್ತು .... ಕಂಬಳೀ ಮಾರಿ ಕೊಟ್ಟು ಬಿಟ್ಟೆ ! ”

“ ಭಪ್ಪರೆ ಹುಡುಗಾ ! ಈಗ ತಂಡಿ ತ್ತಲಿಕ್ಕೆ ಹತ್ತ್ಯಾಣಾ ಕಂಬಳೀ ನೆನಪು ಆತ ಣಾತೈತ, ಅಲ್ಲs ? ”

“ ಎಲ್ಲೀ ತಂಡ್ಯೋ ನಮ್ಮಪ್ಪಾ ! ಹಿಂತಾ ಂದಿನ್ನೆಲ್ಲಾ ನಾ ಆಕ್ಕನಬೇಕಾದರ ತೀರಿ ಕೋತು! ಈಗ ಕುಡಿಯೂ ತಲಬಾಗೇತೀ ಂತ,ಕಂಬಳಿ ನೆನಪಿಗೆ ಬರಲಾಕ ಹತ್ತೇತಿ!”

*　　*　　*

ಸತ್‌ಕಾರ್ಯಕ್ಕೆ ಶಿಕ್ಷೆಯೋ ?

“ ಏನಪಾ, ತುರಂಗಕ್ಕ ಯಾಕ ಬಂದಿ ೀನು ? ”

“ನಾಯಾತಕ್ಕ ಬರಲಿರೀ, ಸರಕಾರದವರು ಕಳಿಸಿದರೂ ಅಂತ ಬಂದೆ !”

“ ನಾನೂ ಅದನ್ನs ಕೇಳತೀನಿ ! ಆದ್ಯಾಕ ಕಳಿಸಿದರು ಸರಕಾರದವರು ? ”

“ ದೊಡ್ಡವರು ಮಾಡಿದ್ಹಾಂಗ ಮಾಡಿದರ ತುರಂಗವಾಸ ಭೋಗಿಸಬೇಕಾಗತsದಂಬೂದು ನನಗೇನೂ ಗೊತ್ತಾಗಲಿಲ್ಲ ಬಿಡ್ರಿ ! ”

“ ದೊಡ್ಡವರು ಮಾಡಿದ್ಹಾಂಗ ಏನು ಮಾಡಿದಿ ನೀನು ? ”

“ಸರಕಾರದವರು ಮಾಡಿದ್ಹಾಂಗ ನೋಟು ರುಪಾಯಿ ಮಾಡಬೇಕಂತ ಪ್ರಯತ್ನಮಾಡಿ ದಿನೇನ್ರೆಪಾ ! ಇನ್ನೇನೂ ಇಲ್ಲ !”

*　　*　　*

ಬುದ್ಧಿವಂತಿಕೆ–ಬೆದರುಗುಳಿತನ

“ ಬುದ್ಧಿವಂತಿಕೆ-ಬೆದರುಗುಳಿತನ ಇವ ರೊಳಗ ಏನಾದರೂ ವ್ಯತ್ಯಾಸ ಅದs ಅಂತೀ ರೇನು ? ”

“ ಓಹೋ, ಇರದೇ ಏನ್ರೀ ! ”

“ ಅದು ಹ್ಯಾಂಗರೆಪಾ ! ”

“ ನೋಡ್ರಿ, ಈಗ ನಾವು ಒಂದು ಕಾಡಿ ನೊಳಗ ಇದ್ದೀವೀ ಅಂತ ತಿಳೀರಿ. ನಮ್ಮೆದು ರಿಗೆ ಒಂದು ಹುಲಿ ಬಂತು. ಕೂದಲೆ ನಾನು ಒಂದು ಗಿಡಾ ಹತ್ತಿ ನಿಲ್ಲತೇನೆ; ಇದು ಬುದ್ಧಿವಂತಿಕೆ. ಇನ್ನು ಹುಲಿಗೆ ಅಂಜಿ ನೀವೂ ಒಂದು ಗಿಡಾ ಹಿಡಿದಿರನ್ರಿ; ಅದು ಬೆದರು-ಗುಳಿತನ ! ”

*　　*　　*

ಮದುವೆಯಾಗಿರಬಹುದೇ ?

“ ಮಾಧವರಾವ್, ನಿಮ್ಮನ್ನು ಕಂಡರೆ ನನಗೆ ತುಂಬ ಸಂತೋಷ ? ನಿಮಗೆ ನನ್ನ ಮಗಳನ್ನು ಕೊಟ್ಟು ಮದುವೆಮಾಡಬೇಕೆಂಬ ನನ್ನ ಸಂಕಲ್ಪ ದಿನದಿನಕ್ಕೆ ದೃಢವಾಗ ತೊಡಗಿದೆ ! ”

“ ಆನಂದದ ಸಂಗತಿ! ರಾಯರೆ, ತಮ್ಮನ್ನು ನೋಡಿದ ದಿನವೆ ನನಗೆ ಅನಿಸಿತು: ನಾನು ತಮಗೆ ಸಂಬಂಧಿಕನಾಗಬೇಕೂ ಎಂದು. ”

“ ಹಹಹ! ಬಹಳೇ ಸಂತೋಷ! ಆದರೆ ಒಂದು ವಿಷಯ: ನಿಮಗೆ ಮಗಳನ್ನು ಕೊಡಲು ಒಪ್ಪುವೆನಾದರೂ, ನಿಮ್ಮ ಸಾಲತೀರುವವರೆಗೆ ಮದುವೆಮಾಡಿಕೊಡಲು ಬರುವಂತಿಲ್ಲ ! ”

“ ನಾನೂ ಸಾಲತೀರಿಸುವುದಕ್ಕೆ ಒಪ್ಪುವೆ ನಾದರೂ ಮದುವೆಮಾಡಿಕೊಟ್ಟ ಹೊರತು ಸಾಲತೀರಿಸಲಿಕ್ಕೆ ಬರುವಂತಿಲ್ಲ ! ”

*　　*　　*

ಕೊಡತಿರೂದೇನು ?

“ನಾ ಕೊಟ್ಟದ್ದನ್ನ ಸ್ವೀಕಾರಮಾಡಬೇಕಾ ದರ ಪ್ರತಿಯೊಬ್ಬರೂ ಸಾಕುಸಾಕು ಅಂತಿರ ತಾರ ! ಎಷ್ಟೆಷ್ಟು ಕಡಿಮಿ ಕೊಡತೀನೋ ಅಷ್ಟಷ್ಟು,ಜನರಿಗೆ ಸಂತೋಷ ಆಗತಿರತsದ!”

“ ತಾವು ಯಾರು ? ಜನರಿಗೆ ತಾವು ಕೊಡ ತಿರೂದೇನು? ”

“ ನಾನು ಮ್ಯಾಜಿಸ್ಟ್ರೇಟ್; ಬಂದವರಿ ಗೆಲ್ಲಾ ಶಿಕ್ಷಾ ಕೊಡತಿರತೀನಿ ! ”

*　　*　　*

ನಾಟಕದ ಪ್ರಶಂಸೆ

“ ನನ್ನ ಮೊದಲನೇ ನಾಟಕಕ್ಕಂದರ ನೋಡ್ರೀ, ಜನಾ ಟಿಕೇಟ್ ಆಫೀಸರನ ಮ್ಯಾಲ ಹಾಂಗs ಮುತ್ತಿಗೀ ಹಾಕಿ ಬಿಟ್ಟಿತ್ತು. ”

“ ಅಯ್ಯೋ ಪಾಪ ! ರೊಕ್ಕಾ ಎಲ್ಲಾ ತಿರಿಗಿ ಕೊಡಬೇಕಾಗಿ ಬಂದಿರಬಹುದು ಅಲ್ಲವೇ ? ”

ಅನುಭವದ ವಿಷಯ

ಇಬ್ಬರು ಕಾರಕೂನರು ಕಚೇರಿಯಲ್ಲಿ ಕುಳಿತು ಮಾತನಾಡುತ್ತಿದ್ದರು:

ಒಬ್ಬ:— ನೋಡ್ರೆಪಾ ಈ ಆಫೀಸಿನ ತ್ರಾಸು ಮನೀಗೆ ನಾ ಎಂದೂ ಒಯ್ಯುತಿರೂ ದಿಲ್ಲ.

ಇನ್ನೊಬ್ಬ:— ನನಗೂ ಅನುಭವ ಅದs ಬಿಡ್ರಿ ! ಮನ್ಯಾಗಿನ ತ್ರಾಸು ಮನಿತುಂಬಾ ಆಗಿ ಬಿಟ್ಟಿರುವಾಗ, ಈ ಆಫೀಸಿನ ತ್ರಾಸಿಗೆ ಸ್ಥಳಾ ಆದರೂ ಹ್ಯಾಂಗ ಸಿಗಬೇಕು, ಮ್ಯಾಳ್ಯಾ ಆದರೂ ಎಲ್ಲೀದು ಸಿಗಬೇಕು !

*　　*　　*



ಫ್ರಾನ್ಸದ ಪ್ರಾಣ ಹಾರಿತು

ಹಿಟ್ಲರನ ಹಾವಳಿಗೆ ಒಂಬತ್ತನೆಯ ಆಹುತಿ ದೊರಕಿತು. ಬಲಿಷ್ಠ ಸಾಮ್ರಾಜ್ಯವೆಂದು ಹೆಸರುಪಡೆದ, ಸ್ವಾತಂತ್ರ್ಯಪ್ರಿಯತೆಗಾಗಿ ಪ್ರಾಣವನ್ನು ಕಳೆದುಕೊಂಡು ಹಿಂದೊಮ್ಮೆ ಇತಿಹಾಸದಲ್ಲಿ ಪ್ರಸಿದ್ಧವಾದ ಫ್ರಾನ್ಸವು, ಇಂದು ಪ್ರಾಣಪ್ರಿಯತೆಗಾಗಿ ಸ್ವಾತಂತ್ರ್ಯವನ್ನು ಕಳೆದುಕೊಂಡಿದೆ! ಕಳೆದ ಎರಡು ತಿಂಗಳಲ್ಲಿ ಫ್ರಾನ್ಸದ ಜನ-ಧನಗಳಿಗೆ ಅಪಾರ ನಷ್ಟವಾಗಿದೆ ಎಂಬುದು ನಿಜ. ಆದರೆ ನಾರ್ವೆ-ಹಾಲಂಡ್-ಬೆಲ್ಜಂ ಮೊದಲಾದ ದೇಶಗಳಲ್ಲಿ ನಡೆದ ತತ್ತ್ವದ್ರೋಹಕ್ಕಾಗಿ ಆರ್ಭಟಿಸಿದ ಫ್ರಾನ್ಸವು, ಇಂದು ತಾನೇ ಈ ರೀತಿ ನೆಲ ನೆಕ್ಕುವುದು ಸಮಂಜಸವಾದುದೆ ಎಂದು ಸಂದೇಹ. ಇದಲ್ಲದೆ ಕಳೆದ ಅನೇಕ ವರ್ಷಗಳಿಂದ ಇಂಗ್ಲಂಡ್-ಫ್ರಾನ್ಸುಗಳು ಪರಸ್ಪರ ವಚನಬದ್ಧವಾಗಿವೆ. 'ಒಬ್ಬರ ಸಮ್ಮತಿ ಇಲ್ಲದೆ ಇನ್ನೊಬ್ಬರು ಹೋರಾಟವನ್ನು ನಿಲ್ಲಿಸಬಾರದು. ಎಂತಹ ಒಪ್ಪಂದವನ್ನೂ ಮಾಡಿಕೊಳ್ಳಬಾರದು' ಎಂದೂ ಕರಾರುಗಳಾಗಿವೆ. ಹೀಗಿರುವಾಗ ದೇಶಪ್ರಿಯವಾದ ರೇನೊಮಂತ್ರಿಮಂಡಳದ ವಿರುದ್ಧ ಸಂಚು ಹೂಡಿದಂತೆ ಮಾಡಿ, ವೀರಪಕ್ಷದವರನ್ನು ಒಬ್ಬೊಬ್ಬರನ್ನು ತಳ್ಳಿ, ಕೊನೆಗೆ ಮಾರ್ಶಲ್ ಪೆತಾಁ ಅವರು ಹಿಟ್ಲರನ 'ಅಡಿದಾವರೆ'ಯಲ್ಲಿ ಮುಪ್ಪಿನಿಂದ ನಡುಗುವ ತಮ್ಮ ತಲೆಯನ್ನಿಟ್ಟರು! ಯುರೋಪದ ಹೊರಗಿದ್ದ ಫ್ರೆಂಚ್ ಸಾಮ್ರಾಜ್ಯಭಾಗವೆಲ್ಲ, ಈ ಶಸ್ತ್ರಸಂನ್ಯಾಸಕ್ಕೆ ತನ್ನ ಒಪ್ಪಿಗೆಯನ್ನು ಎಂದಿಗೂ ಕೊಡಲಿಕ್ಕಿಲ್ಲವೆಂದು ಸಾರಿದೆ! ಮುದುಕ ಮಾರ್ಶಲರು ಶರಣುಹೋಗುವುದಕ್ಕೆ ಕೆಲವು ತಾಸು ಮುಂಚೆ, ಆಗ ಮುಖ್ಯಮಂತ್ರಿಗಳಾಗಿದ್ದ ರೇನೊ ಅವರು, ಏನಾದರೂ ಯುದ್ಧವನ್ನು ತಡೆಯಲಿಕ್ಕಿಲ್ಲ ಎಂದು ಸಾರಿದ್ದರು!

ಚರ್ಚಿಲ್‌ರ ಚಾಣಾಕ್ಷತೆ

ಮಾರ್ಶಲ್ ಪೆತಾಁ ಇವರು ತಾವು ಯುದ್ಧ ನಿಲ್ಲಿಸಿದ ಕಾರಣಗಳನ್ನು ವಿವರಿಸುತ್ತ ಪ್ರಕಟನೆಯನ್ನು ಹೊರಡಿಸಿದ್ದಾರೆ. 'ಇಂದು ನಮ್ಮ ಸೈನ್ಯಸಂಗ್ರಹ ಕಡಮೆ, ಶಸ್ತ್ರಸನ್ನಾಹ ಕಡಮೆ, ಸಹಾಯಕ ರಾಷ್ಟ್ರದ ಸಹಾಯ ಕಡಮೆ, ಜನ-ಧನ ಹಾನಿ ಅಪಾರ; ಆದಕ್ಕಾಗಿ ನಾವು ಯುದ್ಧವನ್ನು ನಿಲ್ಲಿಸಿದೆವು' ಎಂದು ಅವರು ಹೇಳುವುದು. ಇದಕ್ಕೆ ಚರ್ಚಿಲ್‌ರು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ರೇನೊ ಮಂತ್ರಿಮಂಡಳವು ರಾಜೀನಾಮೆ ಕೊಡುವ ಮುಂಚೆಯೆ ಇಂಗ್ಲಂಡ್-ಫ್ರಾನ್ಸುಗಳ ಸರಕಾರಗಳನ್ನು ಏಕತಂತ್ರಮಾಡಿ ಯುದ್ಧಸಾಗಿಸುವ ಸಲಹೆಯನ್ನಷ್ಟೆ ಅಲ್ಲ, ಯೋಜನೆಯನ್ನು ಕೂಡ ಸಿದ್ಧಪಡಿಸಿ ಒಪ್ಪಿಸಿದ್ದಾರೆ. ಅದಕ್ಕೆ ಫ್ರಾನ್ಸದ ಉತ್ತರವಿಲ್ಲ. ದೇಶದಲ್ಲಿ ಅಪಾರವಾದ ಜನ-ಧನ ಹಾನಿಯಾಗಿದೆ ಎಂಬುದನ್ನು ಒಪ್ಪೋಣ. ಆದರೆ ಇನ್ನು ಮುಂದಾಗಬಹುದಾದ ಯಾತನೆಯನ್ನು ತಪ್ಪಿಸುವ ಉಪಾಯ ಯಾವುದು? ಶಸ್ತ್ರಸಂನ್ಯಾಸಮಾಡಿ ಶತ್ರುವಿಗೆ ಶರಣುಹೋಗುವುದು, ಬ್ರಿಟನ್ನಿನೊಡನೆ ಏಕತಂತ್ರತೆಯನ್ನು ಸಾಧಿಸುವುದು. ಇವೆರಡೂ ಉಪಾಯಗಳು ತಮ್ಮೆದುರಿನಲ್ಲಿದ್ದಾಗ, ಫ್ರಾನ್ಸವು ಮೊದಲನೆಯದನ್ನಾರಿಸಿಕೊಂಡಿತು! ಎಂದರೆ ಶತ್ರುವಿಗೆ ಶರಣುಹೋಗುವುದು ಬ್ರಿಟನ್ನಿನೊಡನೆ ಸಹಕಾರ್ಯದ ಕಿಂತ ಹೆಚ್ಚು ಸುರಕ್ಷಿತವೆನಿಸಿರಬಹುದೆ? ಎಂದಿಗೂ ಶಕ್ಯವಿಲ್ಲ. ನಾಝಿ ತತ್ತ್ವಗಳನ್ನು, ನಾಝಿ ಆಚರಣೆಯನ್ನು, ಫ್ರಾನ್ಸ್-ಜರ್ಮನ ದ್ವೇಷವನ್ನು ಲಕ್ಷ್ಯದಲ್ಲಿಟ್ಟುಕೊಂಡರೆ ಆ ಮಾತು ಅಸಂಭವನೀಯವೆನಿಸುವುದು; ಆದರೂ ಅದೇ ಮಾತು ಫ್ರಾನ್ಸಕ್ಕೆ ಅಭಿಮತವೆನಿಸಿತಲ್ಲ! ಈ ಗೂಢದ ಉತ್ತರವು ಚರ್ಚಿಲ್‌ರ ಒಂದೆರಡು ವಾಕ್ಯಗಳಲ್ಲಿದೆ. "ಸಕಾಲಕ್ಕೆ ಯೋಗ್ಯವಾದ ಉಪಾಯಗಳನ್ನು ಫ್ರೆಂಚ್ ಸೇನಾನಾಯಕತ್ವವು ಕೈಕೊಳ್ಳಲಿಲ್ಲ.. ಶತ್ರುವನ್ನು ಎದುರಿಸಲು ಅಷ್ಟೊಂದು ಹುಮ್ಮಸವಿರಲಿಲ್ಲ.." ಈ ಮಾತು ನಿಜವಿದ್ದ ಪಕ್ಷದಲ್ಲಿ, ಮಾರ್ಶಲ್ ಪೆತಾಁ ಇವರ ವ್ಯವಹಾರವು ಸಯುಕ್ತಿಕವೆನಿಸುವುದು. ಅವರಿಗೆ ಯುದ್ಧವನ್ನು ನಿಲ್ಲಿಸುವ ಆತುರ ಹೆಚ್ಚಾಗಿತ್ತು; ಭೂಮಿದಳದ ಅಧಿಕಾರವು ಸರ್ವಸ್ವವಾಗಿ ಅವರಿಗೇ ಇದೆ; ಹೀಗಿರುವಾಗ ಅವರು ಯಾವಾಗ ಯುದ್ಧನಿಲ್ಲಿಸಬಹುದೆಂಬ ಭರವಸೆ ಇಲ್ಲದಂತಾಗಿ, ತಮ್ಮ ಸೈನ್ಯವು ಮತ್ತೊಮ್ಮೆ ವಿಷಾರಿದ ಗಂಡಾಂತರದಲ್ಲಿ ಸಿಲುಕಬಾರದೆಂದು ಚಾಣಾಕ್ಷರಾದ ಚರ್ಚಿಲ್‌ರು ತಮ್ಮ ಸೈನ್ಯವನ್ನು ಆದಷ್ಟು ಹಿಂದೆಗೆದುಕೊಂಡರು. ಈಗ ಪೆತಾಁ ಇವರು ಚರ್ಚಿಲ್‌ರ ಮೇಲೆಯೆ ಆರೋಪಹೊರಿಸುವುದು ನಾಝೀ ನ್ಯಾಯಶಾಸ್ತ್ರದ ತರ್ಕಕ್ಕೆ ಹೊಂದಿದೆಯಲ್ಲದೆ, ಫ್ರಾನ್ಸದ ಗೌರವಕ್ಕೆ ತಕ್ಕುದಲ್ಲ.

ಪೆತಾಁ ಇವರ ಪಾಶ

ಪೆತಾಁ ಇವರ ಪಾಶವೆಂದರೆ ದೇಶಕ್ಕೆ ದಾಸ್ಯದ ಸಂಕೋಲೆ

ಎಂಬುದು ಈಗ ಸ್ಪಷ್ಟವಾಯಿತಷ್ಟೆ. ಸದ್ಯದ ಸೇನಾವಿಶ್ರಾಂತಿ (armistice) ಯ ಶರ್ತುಗಳೆಂದರೆ, ಸರ್ವಾಂಗ ಬಿಗಿದು ಹಾಕುವ ಬೇಟೆಗಾರನ ಬಲೆಯಾಗಿದೆ. ಬೇಟೆಗಾರನ ನಾಯಿಯಾದ ಇಟಲಿಗೂ ಒಂದೆರಡು ತುಣುಕುಗಳನ್ನು ಚೆಲ್ಲಿದೆ. ಆದರೂ ಮುಖ್ಯವಾಗಿ ಫ್ರಾನ್ಸವು ಹಿಟ್ಲರನ ದಾಸ್ಯವನ್ನು ಸರ್ವಸ್ವವಾಗಿ ಒಪ್ಪಿಕೊಂಡಿದೆ. ಫ್ರಾನ್ಸದ ಕೆಲವೆಡೆಯಲ್ಲಿ ಬಿಡಾರಹಾಕುವ ಕಾವಲುಗಾರ—ಜರ್ಮನ—ಸೈನ್ಯದ ವೆಚ್ಚವನ್ನು ಫ್ರಾನ್ಸವು ಹೊರಬೇಕು ! ತನ್ನ ಭಂಡಾರ-ಕಾರ್ಖಾನೆ-ಬಂದರಗಳನ್ನು ಜರ್ಮನಿಗೆ ಒಪ್ಪಿಸಬೇಕು ! ಹಿಟ್ಲರನ ಹೊರತಾಗಿ ಮಿಕ್ಕವರನ್ನು ನೋಡಲು ಕಣ್ಣೆತ್ತುವಂತಿಲ್ಲ, ಮಾತಾಡಲು ತುಟಿ ಮಿಟುಕಿಸುವಂತಿಲ್ಲ ! ಇಂತಹ ದಾಸ್ಯನರಕದಲ್ಲಿ ಬೆಳೆಯಿಸಲು ಪೆತಾ ಇವರು ಫ್ರಾನ್ಸದ ಮಕ್ಕಳನ್ನು ಉಳಿಸಿದರೆನಬಹುದೆ ? ಮ್ಯಾಜಿನೊ ವ್ಯೂಹವು ಶತ್ರುವಿನಿಂದ ರಕ್ಷಿಸಲಿಲ್ಲ, ವೇಗಾ ವ್ಯೂಹವು ಶತ್ರುವನ್ನು ಎದುರಿಸಲಿಲ್ಲ — ಆದರೆ ಪೆತಾ ವ್ಯೂಹವು ಶತ್ರುವನ್ನು ಬರಮಾಡಿಕೊಳ್ಳುವ ಬಾಗಿಲಾಯಿತು ! 'ಪೆತಾ ಇವರ ಒಲವು ಫಾಸಿಸ್ಟ ಪಕ್ಷಗಳ ಕಡೆಗಿದೆ' ಎಂದು ಸ್ವಾತಂತ್ರ್ಯಪ್ರಿಯರಾದ ಫ್ರೆಂಚರು ದೂರುವುದೇನಾಶ್ಚರ್ಯ ?

ಬ್ರಿಟನ್ನಿನ ಭರವಸೆ

'ಕೊನೆಗೆ ಅವಶ್ಯವೆನಿಸಿದರೆ ನಾವೊಬ್ಬರೇ ಹೋರಡುವೆವು' ಎಂದು ಅನೇಕ ದಿವಸ ಮುಂಚಿತವಾಗಿಯೆ ಚರ್ಚಿಲ್‌ರು ಘೋಷಿಸಿದ್ದರು. ಈಗ ಸಾಕ್ಷಾತ್ತಾಗಿ ಅದೇ ಪ್ರಸಂಗಬಂದಾಗ 'ನಾವು ಸಿದ್ಧರಿದ್ದೇವೆ' ಎಂದು ತೊಡೆಚಪ್ಪರಿಸಿದ್ದಾರೆ ! ಇದರಲ್ಲಿ ಆಶ್ಚರ್ಯವೇನೂ ಇಲ್ಲ. 'ಇಂದಿಗಾಗಿ ಜೀವಬೇಕೊ, ಎಂದಿಗಾಗಿ ಸ್ವಾತಂತ್ರ್ಯಬೇಕೊ ?' ಎಂಬ ಪ್ರಶ್ನೆ ಜಗತ್ತಿನೆದುರು ನಿಂತಿದೆ. 'ಇಂದಿಗಾಗಿ ಜೀವಬೇಕು' ಎಂದು ಹಂಬಲಿಸುವವರು ಹಿಟ್ಲರನ ರಕ್ತಸಂಸ್ಕೃತಿಯಲ್ಲಿ ಸದ್ಯಕ್ಕೆ ಬೆಚ್ಚಗಿದ್ದಾರೆ. ಆದರೆ 'ಎಂದಿಗಾಗಿ ಸ್ವಾತಂತ್ರ್ಯಬೇಕು, ಸ್ವಾತಂತ್ರ್ಯ ಇಲ್ಲವೆ ಸರ್ವನಾಶ'— ಎಂದು ಚರ್ಚಿಲ್ಲರು ಧೋರಣೆಯನ್ನು ಘೋಷಿಸಿದ್ದಾರೆ. ಯುರೋಪದ ಹೊರಗಿದ್ದ ಫ್ರೆಂಚ್ ಸಾಮ್ರಾಜ್ಯದ ಸಹಾನುಭೂತಿಯು ಬ್ರಿಟನ್ನಿಗಿದೆ, ಸ್ವಾತಂತ್ರ್ಯಪ್ರಿಯವಾದ ಅಮೇರಿಕೆಯ ಸಾಮಗ್ರಿ-ಸಹಾಯವು ಬ್ರಿಟನ್ನಿಗಿದೆ. ಶತ್ರುವಿನ ಸಾಮರ್ಥ್ಯ-ಸಾಮಗ್ರಿಗಳು ದಿನೇ ದಿನೇ ಬೆಳೆಯುತ್ತಲಿದ್ದುದು ನಿಜ; ಆದರೆ ಅದೇ ದಿನ ಕಳೆದಂತೆ ಬ್ರಿಟನ್ನಿನ ಸಿದ್ಧತೆಯೂ ಹೆಚ್ಚುವುದೆಂಬುದನ್ನು ಮರೆಯುವಂತಿಲ್ಲ. ಶಕ್ತಿಗೆ ಜಯವಾದರೆ ಶಾಂತಿ ಇಲ್ಲ; ತತ್ತ್ವಕ್ಕೆ ಜಯವಾಗುವ ಮುಂಚೆ ತಪೋದಂಡ ಹೆಚ್ಚು. 'ತತ್ತ್ವಕ್ಕೆ, ಸತ್ಯಕ್ಕೆ ಜಯವು ತಪ್ಪಿದ್ದಲ್ಲ ಎಂಬ ಮಂತ್ರವನ್ನು ಗೊಣಗುವುದಕ್ಕಿಂತ ಜಯವನ್ನು ತಪ್ಪಿಸತಕ್ಕದ್ದಲ್ಲ' ಎಂಬ ಚರ್ಚಿಲ್‌ರ ಹಟವೆ ಯೋಗ್ಯ ಧೋರಣೆಯಾಗಿದೆ.

ಹಿಂದುಸ್ತಾನದ ಹೊಣೆಗಾರಿಕೆ

ಇಟಲಿಯು ಯುದ್ಧದಲ್ಲಿ ಸೇರಿದಂದಿನಿಂದ ಯುದ್ಧವು ಹಿಂದುಸ್ತಾನಕ್ಕೆ ಸಮೀಪಿಸಿದೆ ಎನಬಹುದು. ಅಲ್ಲಿಯವರೆಗೂ ಬ್ರಿಟಿಶ ಪ್ರಜೆಗಳೆಂಬ ನಿಮಿತ್ತಕಾಗಿ ನಮಗೆ ಯುದ್ಧದ ಸಂಬಂಧವಿದ್ದಿತಾದರೂ, ಇಂದು ಸಾಕ್ಷಾತ್ತಾದ ಯುದ್ಧದ, ಅದರ ಹಾವಳಿಯ, ಅದರ ಕೊಲೆ-ಕೊಳ್ಳೆಗಳ ಸಂಬಂಧವೂ ಸಂಭವವೂ ಹೆಚ್ಚಿವೆ. ಈ ವಿಷಯವಾಗಿ ಇಲ್ಲಿ ಹೆಚ್ಚಾಗಿ ಬರೆಯಬೇಕಾಗಿಲ್ಲ. ಆದರೆ ಇಂತಹ ಪರಿಸ್ಥಿತಿಯಲ್ಲೂ ನಮ್ಮ ರಾಜಕೀಯ ಪಕ್ಷೋಪಪಕ್ಷಗಳು ಅನಿಶ್ಚಿತವಾದ, ಅಸಂಬದ್ಧವಾದ, ಇಲ್ಲವೆ ಅವ್ಯವಹಾರ್ಯವಾದ ಧೋರಣೆಯನ್ನು ಸ್ವೀಕರಿಸಿದ್ದು ಶೋಚನೀಯವಿದೆ ಎಂದು ಮಾತ್ರ ಸ್ಪಷ್ಟವಾಗಿ ಹೇಳಬೇಕಾಗಿದೆ. ನಮ್ಮ ಕಾಂಗ್ರೆಸ್ಸಾಗಲಿ, ನಮ್ಮ ಮುಸ್ಲಿಂಲೀಗು ಆಗಲಿ, ನಮ್ಮ ಹಿಂದುಮಹಾಸಭೆಯಾಗಲಿ ಈ ಸಂದರ್ಭದಲ್ಲಿ ಏನು ಮಾಡಲಿವೆ ಎಂಬುದು ಪರಮಾತ್ಮನಿಗೂ ತಿಳಿಯದ ಗೂಢವಾಗಿದೆ. ಇಪ್ಪತ್ತು ವರ್ಷಗಳವರೆಗೆ ಅಹಿಂಸೆಯ ತತ್ತ್ವವನ್ನು ಸಾರಿ ಇಂದು (ಕೇವಲ) ಪರದಾಳಿಯಿಂದ ರಕ್ಷಿಸುವುದಕ್ಕಾಗಿ ಆ ತತ್ತ್ವವನ್ನು ಬಿಟ್ಟುಕೊಟ್ಟ ಕಾಂಗ್ರೆಸ್ಸು ನಮಗೆ ಯಾವ ಸುರಕ್ಷಿತತೆಯ ಆಶ್ವಾಸನೆಯನ್ನು ಕೊಟ್ಟಿದೆ ಎನಬಹುದು ? ಇಲ್ಲವೆ— 'ವೈಸರಾಯರ ಸ್ಪಷ್ಟೀಕರಣ ಸಮಾಧಾನಕಾರಕವೆನಿಸುವ ವರೆಗೆ ನಮ್ಮ ಸಹಕಾರ ದೊರೆಯದು' ಎಂಬ ಮುಸ್ಲಿಂ ಲೀಗು ನಮಗೆ ಯಾವ ಕವಚವನ್ನು ತೊಡಿಸಿದೆ ? ನಮ್ಮನ್ನು ನಾವೇ ರಕ್ಷಿಸಿಕೊಳ್ಳಬೇಕೆಂಬ ಗುಡ್ಡದಂತಹ ತತ್ತ್ವವನ್ನೆ ಹೇಳುವ ಹಿಂದು ಮಹಾಸಭೆಯು, ನಾಮಾನ್ಯರಿಗೆ ಎಷ್ಟು ಉಪಕಾರಿ ಎನಿಸಬಹುದಾಗಿದೆ ? ಇಂತಹ ಪರಿಸ್ಥಿತಿಯಲ್ಲೂ ಶಬ್ದಜಾಲವನ್ನು ದಾಟಿ ರಾಷ್ಟ್ರಕ್ಕೆ ಸುರಕ್ಷಿತತೆಗಾಗಿ, ಸ್ವಾತಂತ್ರ್ಯಕ್ಕಾಗಿ ದಾರಿಯನ್ನು ತೋರಿಸುವ ಪಕ್ಷವಿಲ್ಲವೆಂದರೆ ಹಿಂದುಸ್ತಾನದ ಮುತ್ಸದ್ದಿತನಕ್ಕೆ ಗ್ರಹಣ ತಗುಲಿದೆ ಎನಬೇಕಾಗಿದೆ.

ಮುಂದಾಗಿರಿ, ಮುಂದಾಳಾಗಿರಿ

ನಮ್ಮ ಮುಂದಾಳುಗಳೆಲ್ಲ ಇನ್ನೂ ತಮ್ಮ ತತ್ತ್ವದ ಚರ್ಚಾಸಭೆಯಲ್ಲಿ, ಮಾನಾಪಮಾನಗಳ ಮಡುವಿನಲ್ಲಿ, ಜಾತಿಸಂಕುಚಿತ ದ್ವೇಷಾಸೂಯೆಗಳಲ್ಲಿ ತಲ್ಲೀನರಾಗಿದ್ದಾರೆಯೆ ? ಇಲ್ಲವಾದರೆ, ಮುಂದಾಗಿ ಹೊಣೆಗಾರಿಕೆಯಿಂದ, ದೇಶದ ಸ್ವಾಸ್ಥ್ಯ—ಸ್ವಾತಂತ್ರ್ಯಗಳ ದೃಷ್ಟಿಯಿಂದ, ಹೋರಾಟದಲ್ಲಿ ಸಿಲುಕಿದ ತತ್ತ್ವದ ಅಭಿಮಾನದಿಂದ, ತಮ್ಮ ಧೋರಣೆಯನ್ನು ಸ್ಪಷ್ಟವಾಗಿ ಯಾಕೆ ಸಾರಬಾರದು ? ವೈಸರಾಯರು ಕರೆಯದಿದ್ದರೆ, ಸ್ವತಃ ನಿಮಂತ್ರಿತರಾಗಿ ಹೋಗಲು ಸಿದ್ಧತೆ, ಧೈರ್ಯ ಇಂದು ಬೇಕಾಗಿದೆ. 'ನಮ್ಮ ದೇಶದ, ನಮ್ಮ ಜನರ, ನಮ್ಮ ನಿಧಿ-ಸಂಪತ್ತುಗಳ ಸುರಕ್ಷಿತತೆಗಾಗಿ ಕೈಕೊಂಡ ಉಪಾಯ ಯಾವುವು ? ಅವು ಸಮರ್ಪಕವಾಗಿವೆಯೆ ? ನಮ್ಮ ದೃಷ್ಟಿಯಿಂದ ಈ ಉಪಾಯಗಳೇ ಸಮರ್ಪಕವಾದುವು. ನಮ್ಮ ಸಹಾಯಕ್ಕೆ ನಾವು ಬೆಲೆಯನ್ನು ಕೇಳುವುದಿಲ್ಲ. ನಮ್ಮ ಸುರಕ್ಷಿತತೆಗಾಗಿ ಹೋರಾಡಲು ನಾವಾಗಿಯೆ ಮುಂದೆ ಬರಬೇಕಾಗಿದೆ. ನಮ್ಮ ಸಹಾಯ ನೀವು ತೆಗೆದುಕೊಳ್ಳಲೇಬೇಕು. ಅದಕಾಗಿ ನಮ್ಮ ನಿಮ್ಮ ಪರಸ್ಪರ ವಿಶ್ವಾಸ ಬೇಕು. ಇಂದು ಚರ್ಚಿಲ್‌ರ ಮಾತನ್ನು ಕೇಳಿ ಯುದ್ಧದ ನಂತರ ಎಲ್ಲರಂತೆ ನಮ್ಮನ್ನು ನೀವು ಸ್ವತಂತ್ರರಾಷ್ಟ್ರವಾಗಿ ಒಪ್ಪುವಿರಿ ಎಂದು ನಮ್ಮ ಗ್ರಹಿಕೆಯಾಗಿದೆ ಅದರಲ್ಲಿ ನಾವು ವಿಶ್ವಾಸವನ್ನೂ

ಇಟ್ಟಿದ್ದೇವೆ. ನಮ್ಮಲ್ಲಿ ನಿಮ್ಮ ವಿಶ್ವಾಸವಿದೆಯೊ- ಇಲ್ಲವೆ ನಾವು ಸಹಕಾರವಿಲ್ಲದೆ ಸಹಾಯವನ್ನು ಮಾಡಬೇಕಾಗುವುದೊ? ಹಾಗೆ ಮಾಡಿದರೆ ಪರಸ್ಪರ ಲಾಭ ಕಡಿಮೆ. ಸದ್ಯಕ್ಕೆ ಈ ನಿರ್ಣಯ ವನ್ನು ಕೂಡಲೇ ಮಾಡಬೇಕಾಗಿದೆ' ಎಂದು ಮುಂತಾಗಿ ಸಾರ ಬಹುದಲ್ಲವೆ? ಒಂದೇ ಒಂದು ಆಶೆ ಇದೆ: ರಾಷ್ಟ್ರಪತಿಗಳಾದ ಮೌಲಾನಾ ಆಝಾದರು ಜಾತಿಸಂಘಟನೆಗಾಗಿ ಯತ್ನಿಸುತ್ತಿರುವ ರಂತೆ. ಆ ಯತ್ನಕ್ಕೆ ಯಶಸ್ಸು ತೋರಿತರೆ ನಮ್ಮಲ್ಲಿ ಧೈರ್ಯ, ಆತ್ಮವಿಶ್ವಾಸ ಹೆಚ್ಚಬಹುದು.

ಆಲೂರು ವೆಂಕಟರಾಯರಿಗೆ ಷಷ್ಟ್ಯಬ್ದ ಪೂರ್ತಿ

ಇದೇ ಜುಲೈ ಹನ್ನೆರಡನೆಯ ತಾರೀಖಿಗೆ ಕನ್ನಡ ನಾಡಿನ ಕುಲಪುರೋಹಿತರಾದ ಶ್ರೀಮಾನ್ ಆಲೂರು ವೆಂಕಟರಾಯರಿಗೆ ೬೦ ವರ್ಷ ತುಂಬಿ ೬೧ನೆಯ ವರ್ಷ ಪ್ರಾರಂಭವಾಗುತ್ತದೆ. ಆ ದಿನ ವಿಶಿಷ್ಟ ರೀತಿಯಲ್ಲಿ 'ಶಾಂತಿ ಸಮಾರಂಭ'ವೊಂದನ್ನು ಜರುಗಿಸ ಬೇಕೆಂದು ಧಾರವಾಡದ ಕೆಲವು ಜನ ಕನ್ನಡಿಗರು ಸೇರಿ ನಿರ್ಣಯಿಸಿ, ಕಾರ್ಯಕ್ಕೆ ಪ್ರಾರಂಭವನ್ನೆ ಮಾಡಿದ್ದಾರೆಂಬುದು ಸಂತೋಷದ ಸಂಗತಿ. ಮಹಾರಾಷ್ಟ್ರದ ಮುಂದಾಳುಗಳಲ್ಲಿ ಒಬ್ಬರಾದ ಶ್ರೀಮಾನ್ ಭೋಪಟಕರರ ೬೦ ವರ್ಷದ ಆಯುಃಪೂರ್ತಿಯ ಸಮಾರಂಭವು, ಮೊನ್ನೆಮೊನ್ನೆಯೆ ಪುಣೆಯಲ್ಲಿ ಅಭೂತಪೂರ್ವವಾಗಿ ನೆರವೇರಿತು. ಅಖಿಲ ಮಹಾರಾಷ್ಟ್ರವೂ ಸೇರಿ ಇಪ್ಪತ್ತೈದು ಸಾವಿರ ರೂಪಾಯಿಗಳ ಧನನಿಧಿಯನ್ನವರಿಗೆ ಅರ್ಪಿಸಿತಲ್ಲದೆ, ಆದರ ಪೂರ್ವಕವಾದ ಪ್ರೀತಿಯ ಹೊಳೆಯನ್ನೆ ಹರಿಸಿಬಿಟ್ಟಿತು. ನಿಜವಾಗಿ ನೋಡಿದರೆ ಶ್ರೀ. ಭೋಪಟಕರರು ಉತ್ತು ಹದಗೊಳಿಸಿದ ಕ್ಷೇತ್ರ ದಲ್ಲಿ ಬಿತ್ತಿ ಬೆಳೆ ತೆಗೆದವರು, ತೆಗೆಯುತ್ತಿರುವವರು. ಅಂತಹರನ್ನೂ ಮಹಾರಾಷ್ಟ್ರವು ಕೃತಜ್ಞತೆಯ ಕಡಲಲ್ಲಿ ತೇಲಾಡಿಸಿಬಿಟ್ಟಿತು. ನಮ್ಮ ಕನ್ನಡ ಕುಲಪುರೋಹಿತರು ಮಾಡಿದ ಕಾರ್ಯವನ್ನು ನೋಡಿದರೆ, ಕರ್ನಾಟಕ ಪ್ರಾಂತೀಯ ಹಿತದ ದೃಷ್ಟಿಯಿಂದ ಶ್ರೀ. ಭೋಪಟಕರರು ಮಹಾರಾಷ್ಟ್ರಕ್ಕೆ ಮಾಡಿದ ಕೆಲಸಕ್ಕಿಂತ ಮಹತ್ವದ್ದೆಂದು ಯಾರೂ ಹೇಳಬಹುದಾಗಿದೆ. ಶ್ರೀ. ವೆಂಕಟ- ರಾಯರು ಹೊಸ್ಸದಲ್ಲಿ ಸ್ವರೂಪವೊಂದನ್ನು ನಿರ್ಮಾಣಮಾಡಿದ ವರು. ಕಗ್ಗಾಡನ್ನು ಕಡಿದು ಬಿತ್ತಲು ತಕ್ಕುದಾದ ಹದವೊಲವನ್ನು ಗೆಯ್ದವರು. ಕಗ್ಗತ್ತಲೆಯಲ್ಲಿ ತಿರುಗುತ್ತಿರುವವರಿಗೆ ದೂರದ ದೀಪವೊಂದನ್ನು ತೋರಿಸಿಕೊಟ್ಟವರು. 'ಕನ್ನಡಿಗ' 'ಕರ್ನಾಟಕ' ಎಂಬ ಭಾವನೆಯನ್ನವರು ಎಚ್ಚರುಗೊಳಿಸದೆ ಹೋಗಿದ್ದರೆ ಕನ್ನಡಿ ಗರಿಗೂ ಕರ್ನಾಟಕಕ್ಕೂ ಉಳಿಗಾಲವೆ ಇರಲಿಲ್ಲ. ತರುಣ ಕನ್ನಡಿ ಗರು ತಮ್ಮ ಕನಸಿನಲ್ಲಿ ಕಾಣುತ್ತಿರುವ ಏಕೀಕೃತ ಕರ್ನಾಟಕದ ಮಧುರದೃಶ್ಯಕ್ಕೆ ಅವಕಾಶವೆ ಇರಲಿಲ್ಲ. ಆ ಕನಸಿನ ದೃಶ್ಯವನ್ನು ದಿಟದ ಲೋಕಕ್ಕೆ ತಂದು ತೋರಬೇಕೆಂದು ಹಲವು ವಿಧದಿಂದ ಕೃಷಿಮಾಡುತ್ತಿರುವ ಇಂದಿನ ಕನ್ನಡಿಗರನ್ನು ಕಾಣುವ ಯೋಗ ಇಷ್ಟರಲ್ಲಿಯೆ ಒದಗುತ್ತಿರಲಿ ಇಲ್ಲ. ಶ್ರೀಮಾನ್ ಆಲೂರರವರು '**ಕರ್ನಾಟಕ ಗತವೈಭವ**'ದ ಗೀತೆಯನ್ನು ಹೇಳಿದರು. ದೀರ್ಘ ಕಾಲದ ನಿದ್ರೆಯಲ್ಲಿದ್ದ ಕನ್ನಡ ರಾಷ್ಟ್ರಪುರುಷನ ನರನರಗಳ ಲ್ಲಿಯೂ ಜಾಗೃತಿಯ ಸಂಚಾರವಾಯಿತು. ಕಣ್ಣು ಹೊಸಗಿ ಮೇಲಕ್ಕೆದ್ದ. ತನಗಿಂತ ಮುಂದೆ ಹೋದವರನ್ನು ಹಿಂಬಾಲಿಸ ಬೇಕೆಂದು ಅಡಿಯಿಡತೊಡಗಿದ. ಆಗ ಆತನ ಕೈಯನ್ನು ಹಿಡಿದು ಒಂದೊಂದು ಹಜ್ಜೆ ನಡೆಯಿಸತೊಡಗಿದವರು ಶ್ರೀಮಾನ್ ಆಲೂರು ವೆಂಕಟರಾಯರೇ.

ಧಾರವಾಡದಲ್ಲಿ ಹೋಮರೂಲ್ ಲೀಗ್ ಸ್ಥಾಪನೆಯಾಯಿತು. ಬೇರೆ ಬೇರೆ ಗ್ರಂಥಮಾಲೆಗಳು ತಲೆದೋರಿದುವು. ಕರ್ನಾಟಕ ಇತಿಹಾಸ ಸಂಶೋಧಕ ಮಂಡಲ ಉದಯಕ್ಕೆ ಬಂದಿತು. ಅಖಿಲ ಕರ್ನಾಟಕದ ರಾಜಕೀಯ ಏಕೀಕರಣದ ಕಲ್ಪನೆ ಮುಂದೆಬಂದಿತು. ಕರ್ನಾಟಕ ರಾಜಕೀಯ ಪರಿಷತ್ತಾಯಿತು. ಅಖಿಲ ಕರ್ನಾಟಕ ಸಾಂಸ್ಕೃತಿಕ ಏಕೀಕರಣದ ಪ್ರಯತ್ನ ನಡೆಯಿತು. ಸಾಹಿತ್ಯ ಪರಿಷತ್ತು ಎದ್ದು ನಿಂತಿತು. 'ಜಯಕರ್ನಾಟಕ' ಮಾಸಪತ್ರಿಕೆ ಬಂದಿತು. 'ನವಜೀವನ ಗ್ರಂಥಮಾಲೆ' ಕಾರ್ಯ ಮಾಡತೊಡ ಗಿತು. ಇವೆಲ್ಲ ಹೊಸ ಕನ್ನಡನಾಡನ್ನು ಕಟ್ಟುವ ಆದರ್ಶದಿಂದ ವೆಂಕಟರಾಯರು ಪ್ರಾರಂಭಿಸಿದ ಕಾರ್ಯಗಳು. ಸ್ವಲ್ಪ ದೊಡ್ಡ ದಾದ ಮಾತಿನಲ್ಲಿಯೆ ಹೇಳಬೇಕಾದರೆ ವೆಂಕಟರಾಯರು ನವಕರ್ನಾಟಕ ಮಂತ್ರದ ದ್ರಷ್ಟಾರರು, ನಮ್ಮ ನಾಡಿನ ವಿಭೂತಿ ಪುರುಷರು. ಇಂತಹರಿಗಾಗಿ ಕನ್ನಡಿಗರು ತಮ್ಮ ಕೃತಜ್ಞತೆಗಳನ್ನು ಎಷ್ಟೊಂದು ರೀತಿಯಲ್ಲಿ ಸಲ್ಲಿಸಬೇಡ? ಆದರೆ ದುರ್ದೈವದ ಸಂಗತಿ ಯೊಂದು: ನಮ್ಮಲ್ಲಿ ಗುಣೈಕದೃಷ್ಟಿಯಿಂದ ನೋಡಿ ಮನುಷ್ಯನ ಯೋಗ್ಯತೆಯನ್ನು ತಿಳಿದುಕೊಳ್ಳುವ ಜನ ಕಡಿಮೆ. ಒಂದೆ ಒಂದು ದೋಷವೂ ನಮ್ಮ ಜನದ ದೃಷ್ಟಿಯಲ್ಲಿ ನೂರರಷ್ಟು ಗುಣಗಳನ್ನೂ ಸಾರಿಸಿಬಿಡುವುದು. ಭಾರತದ ಬೇರೆ ನಾಡುಗಳಲ್ಲಿ ವಿಭೂತಿ ಪುರುಷರೆಂದು ಪೂಜೆಗೊಳ್ಳುತ್ತಿದ್ದ ಮುಂದಾಳುಗಳು, ಕೇವಲ ದೋಷರಹಿತರಾಗಿದ್ದರೆಂದು ಹೇಳಲಿಕ್ಕಾಗದು. ಆದರೆ ಅನುಯಾಯಿ ವರ್ಗ ಗುಣೈಕದೃಷ್ಟಿಯಿಂದ ಕಂಡು, ಅವರನ್ನು ಮನ್ನಣೆಯ ಸ್ಥಾನಕ್ಕೇರಿಸಿತು. ಕನ್ನಡ ನಾಡಿನ ಭವಿಷ್ಯಕಾಲದ ಹಿತದ ಸಲುವಾಗಿ, ನಮ್ಮ ಜನರಲ್ಲಿಯೂ ಮುಂದಾಳುಗಳನ್ನು ಗುಣೈಕಭಾವನೆಯಿಂದ ನೋಡುವ ನೋಟದ ಆವಶ್ಯಕತೆಯಿದೆ. ಸಮಕಾಲೀನರಿಗಲ್ಲದಿದ್ದರೂ ನಮ್ಮ ಮುಂದಿನವರಿಗೆ 'ತಮ್ಮ ಹಿರಿಯರು' ಎಂದು ಹೆಮ್ಮೆಯಿಂದ ಹೆಸರನ್ನೆತ್ತಿ ಹೇಳುವುದಕ್ಕೆ ಕೆಲವು ವಿಭೂತಿಗಳ ಹೆಸರು ಬೇಕೆಬೇಕಾಗುವುವು. ಈಗ ಅಂತಹ ಹೆಸರುಗಳನ್ನು ನಾವು ನಿರ್ಮಿಸಿ ಇಡದಿದ್ದರೆ ನಮ್ಮ ಮುಂದಿನ ಪೀಳಿಗೆ ಯಾರ ಹೆಸರನ್ನು ಅಭಿಮಾನದಿಂದ ಹೇಳಬೇಕು? ಕನ್ನಡಿ ಗರಿಗೆ ಅಂತಹ ಹೆಮ್ಮೆಯ ವಿಷಯವಾಗಲಿಕ್ಕೆ ಶ್ರೀಮಾನ್ ಆಲೂರು ವೆಂಕಟರಾಯರು ಸಂಪೂರ್ಣವಾಗಿ [illegible] ರ್ಹವರು. ಕನ್ನಡ ನಾಡಿಗೆ ಹಿರಿಯರಾಗಿರುವವರ ದೊಡ್ಡ ಯೋಗ್ಯತೆಗೆ ತಕ್ಕಂತೆ, ಈ ಉತ್ಸವ ಕಾಲದಲ್ಲಿ ಅವರಿಗೆ ಅಖಿಲಕರ್ನಾಟಕದ ಮನ್ನಣೆಯು ಕಾಣಿಕೆ ಸಲ್ಲಲೆ ಬೇಕು. ಅವಕಾಶ ಕಡಿಮೆಯಿದ್ದರೂ ನಾಡಿನ ಮೂಲೆ ಮೂಲೆಯಿಂದಲೂ ಕೃತಜ್ಞತೆಯ ಮುದಿಪು ಸಿಕ್ಕುವಂತೆ ಏರ್ಪಾ ಡಾಗಲೆ ಬೇಕು.

ಶ್ರೀ. ವೆಂಕಟರಾಯರು ಇನ್ನೂ ಬಹು ಕಾಲ ಬದುಕಲಿ. ಅವರ ಇನ್ನು ಮುಂದಿನ ಬದುಕೂ ಕನ್ನಡಿಗರ ಹೆಮ್ಮೆಗೆ ಕವಳವನ್ನೊದ ಗಿಸಲಿ!

ಕರ್ನಾಟಕ ಕುಲಪುರೋಹಿತ

ಆಲೂರು ವೆಂಕಟರಾಯರ

೬೦ ವರ್ಷಪೂರ್ತಿಯ ಶಾಂತಿಸಮಾರಂಭ.

ಕರ್ನಾಟಕದಲ್ಲಿ ಸ್ವತಂತ್ರವೃತ್ತಿಯ ರಾಷ್ಟ್ರೀಯತ್ವದ ಜಕ್ಕಡಿಯೊಂದಿಗೆ "ಕರ್ನಾಟಕತ್ವ"ದ ಬೀಜವನ್ನು ಬಿತ್ತಿ, ಅನೇಕ ವಿಧವಾದ ತಮ್ಮ ಚಟುವಟಿಕೆಗಳಿಂದ ಕನ್ನಡ ಜನಾಂಗವನ್ನು ಎಚ್ಚರಿಸಿ, ಆತ್ಮೋದ್ಧಾರದ ಕೆಲಸಕ್ಕೆ ತೊಡಗಿಸಿ, ಅದನ್ನು ಇಂದಿನ ಸ್ವತಂತ್ರ ವಿಚಾರದ ಮೇಲುಮಟ್ಟಕ್ಕೆ ಮುಟ್ಟಿಸಿ, ಭಾರತೀಯ ಪ್ರಪಂಚದಲ್ಲಿ ಅದಕ್ಕೊಂದು ವಿಶಿಷ್ಟವಾದ, ಸ್ಪೃಹಣೀಯವಾದ, ಹೆಮ್ಮೆಪಡುವಂಥ ಸ್ಥಾನವನ್ನು ಸಂಪಾದಿಸಿಕೊಟ್ಟ ಶ್ರೇಯಸ್ಸಿನ ಹೆಚ್ಚಿನ ಭಾಗವು ಶ್ರೀಮಾನ್ ಆಲೂರ ವೆಂಕಟರಾಯರಿಗೇ ಸಲ್ಲತಕ್ಕದ್ದೆಂಬ ಮಾತನ್ನು, ಇಂದಿನ ಪ್ರಬುದ್ಧ ಕರ್ನಾಟಕದೊಳಗಿನ ವಿಚಾರವಂತರೆಲ್ಲರೂ ಬಲ್ಲರು. ಶ್ರೀಮಾನ್ ವೆಂಕಟರಾಯರು ಈ ಹಿಂದಿನ ಮೂರು ತಪಗಳ ಕಾಲದಲ್ಲಿ ಕನ್ನಡನಾಡಿಗೆ ಅಖಂಡವಾಗಿ ಸಲ್ಲಿಸಿದ ಅದ್ಭುತವಾದ ಸೇವೆಯನ್ನು ಅಂತಃಕರಣಪೂರ್ವಕವಾಗಿ ಸ್ಮರಿಸಿಕೊಂಡು, ಕನ್ನಡ ಜನಾಂಗವು ಅವರಿಗೆ ತನ್ನ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸಬೇಕಾದುದು ಅತ್ಯಂತ ಇಷ್ಟವೂ ಸದಭಿಮಾನಪ್ರೇರಕವೂ ಆದ ಸಂಗತಿಯಾಗಿರುವುದೆಂಬುದನ್ನು ಯಾರೂ ಅಲ್ಲಗಳೆಯಲಾರರು.

ಹೀಗೆ ಹೊಸಗನ್ನಡನಾಡನ್ನು ನಿರ್ಮಿಸುವ ಕಾರ್ಯದಲ್ಲಿ ಕಳೆದ ೩೬ ವರ್ಷಗಳಿಂದಲೂ ತಮ್ಮ ಆಯುಷ್ಯವನ್ನೇ ಧಾರೆಯೆರೆದು, ತಮ್ಮ ಸರ್ವಸ್ವವನ್ನು ಸೂರೆಗೈದು, ತಮ್ಮ ದೇಹವನ್ನೇ ಚಂದನದ ಕೊರಡಿನಂತೆ ಸವಿಸಿ ಸಣ್ಣಾಗಿರುವ ಶ್ರೀಮಾನ್ ಆಲೂರ ವೆಂಕಟರಾಯರಿಗೆ, ಕನ್ನಡ ಜನಾಂಗವು ಎಷ್ಟೊಂದು ಬಗೆಯಿಂದ ಕೃತಜ್ಞವಾಗಿರಬೇಕಾಗಿರುವುದೆಂಬುದನ್ನು ಬೇರೆ ಹೇಳುವ ಕಾರಣವಿಲ್ಲ. ಆದುದರಿಂದಲೇ ಅಖಂಡ ಕನ್ನಡಜನಾಂಗವು ಅವರ ಅರುವತ್ತೊಂದನೆಯ ಹುಟ್ಟಿದ ಹಬ್ಬವನ್ನು ಸಾರ್ವಜನಿಕವಾಗಿ ಆಚರಿಸಿ, ಅವರ ಋಣವನ್ನು ಅಂಶಮಾತ್ರದಿಂದಲಾದರೂ ಪೂರೈಸಿತೆಂಬ ಅಂತಃಸಮಾಧಾನವನ್ನು ಹೊಂದಲು ಪ್ರಯತ್ನಿಸುವುದು ಅದರ ಪರಂಪರಾಪ್ರಾಪ್ತವಾದ ಉದಾರಚಾರಿತ್ರ್ಯಕ್ಕೆ ಒಪ್ಪತಕ್ಕಮಾತಾಗಿದೆ. ಆರ್ಯಮಾನ ಪದ್ಧತಿಯಿಂದ ಬರುವ ಆಷಾಢ ಶುದ್ಧ ೫ ಬುಧವಾರವೂ, ಪಾಶ್ಚಿಮಾತ್ಯಮಾನದಿಂದ ಬರುವ ಜುಲೈ ೧೨ನೆಯ ತಾರೀಖು ಶುಕ್ರವಾರವೂ ಶ್ರೀ. ವೆಂಕಟರಾಯರ ಜನ್ಮಪರ್ವದ ೬೦ ವರ್ಷಗಳನ್ನು ಪೂರ್ಣಗೊಳಿಸಿ, ೬೧ನೆಯ ವರ್ಷಕ್ಕೆ ಆರಂಭಮಾಡುವ ಸುದಿನವಾಗಿದೆ. ಆದುದರಿಂದ ೧೨ನೆಯ ತಾ. ಶುಕ್ರವಾರ ದಿವಸ, ಕನ್ನಡನಾಡಿನಲ್ಲೆಲ್ಲ ಕಡೆಗೆ ಸಾರ್ವಜನಿಕ ಸಭೆಗಳನ್ನು ಕೂಡಿಸಿ, ವೆಂಕಟರಾಯರು ಕನ್ನಡಜನಾಂಗಕ್ಕೆ ಸಲ್ಲಿಸಿದ ಸೇವೆಗಾಗಿ ಎಲ್ಲರೂ ಕೃತಜ್ಞತೆಗಳನ್ನರ್ಪಿಸುವುದಲ್ಲದೆ, ಪರಮಾತ್ಮನು ಅವರಿಗೆ ಇನ್ನೂ ದೀರ್ಘಾಯುರಾರೋಗ್ಯಗಳನ್ನು ಕೊಟ್ಟು ಅವರಿಂದ ಕನ್ನಡನಾಡ ಸೇವೆಯು ಇನ್ನೂ ಹೆಚ್ಚಾಗಿ ನೆರವೇರುವಂತೆ ಭಗವಂತನನ್ನು ಪ್ರಾರ್ಥಿಸಬೇಕೆಂದು ಈ ಮೂಲಕ ಎಲ್ಲ ಕಡೆಯ ಕನ್ನಡನಾಡಭಕ್ತರಿಗೆ ವಿನಯಪೂರ್ವಕ ಪ್ರಾರ್ಥನೆಯುಂಟು.

ಹೀಗೆ ಸಾರ್ವಜನಿಕರೀತಿಯಿಂದ ಶ್ರೀ. ಆಲೂರ ವೆಂಕಟರಾಯರ ನಾಡಸೇವೆಯನ್ನು ಅಭಿನಂದಿಸುವುದಲ್ಲದೆ, ಅವರ ನಿರ್ಹೇತುಕವಾದ ಸೇವೆಯನ್ನು ಮನದಂದು, ಕನ್ನಡ ಜನಾಂಗವು ಅವರಿಗೆ ತನ್ನ ಕೈಲಾದಮಟ್ಟಿಗಿನ ನಿಧಿಯೊಂದನ್ನು ಸಮರ್ಪಿಸಬೇಕೆಂದೂ, ಅವರ ಚಿರರಮ್ಯವಾದ ಸ್ಫೂರ್ತಿದಾಯಕವಾದ ಜೀವನರಹಸ್ಯವನ್ನು ಚಿಕ್ಕದೊಂದು ಪುಸ್ತಕರೂಪದಿಂದ ಪ್ರಕಟಿಸಿ, ಕನ್ನಡನಾಡಿನ ತರುಣ ತರುಣಿಯರಿಗೆಲ್ಲ ಪರಿಶುದ್ಧ ಆದರ್ಶವಾಗಿರುವ ಅವರ ಪವಿತ್ರತಮವಾದ ಚರಿತ್ರೆಯ ಅಲ್ಪಪರಿಚಯವನ್ನು ಮಾಡಿಕೊಟ್ಟು, ಅವರೆಲ್ಲರೂ ಶ್ರೀ. ವೆಂಕಟರಾಯರ ದಿವ್ಯ ಆದರ್ಶದಂತೆ ನಡೆಯಲು ಅಣಿಯಾಗುವಂತೆ ಪ್ರಯತ್ನಿಸಬೇಕೆಂದೂ ಗೊತ್ತಾಗಿದೆ. ಈ ಮಹತ್ಕಾರ್ಯಕ್ಕೆ ಕನ್ನಡ ಜನಾಂಗದ ಕೊಡುಗೈ ಬಾಂಧವರೆಲ್ಲರೂ ಸಡಿಲುಗೈಯಿಂದ ಹಣವನ್ನು ಸಲ್ಲಿಸಿ, ಕನ್ನಡಿಗರ ಔದಾರ್ಯಕ್ಕೆ ಅನುರೂಪವಾಗುವ ತೆರದಲ್ಲಿ ಈ ಸಂಕಲ್ಪವನ್ನು ನೆರವೇರಿಸುವುದಕ್ಕೆ ಸಹಾಯಮಾಡಬೇಕೆಂದು ಈ ಮೂಲಕವೇ ಬೇಡಿಕೊಳ್ಳಲಾಗಿದೆ. ಈ ನಿಧಿಗೆ ಧನಸಹಾಯವನ್ನು ಕಳಿಸಬಯಸುವವರು, ಶಾಂತಿಸಮಾರಂಭಸಮಿತಿಯ ಪ್ರಮುಖ ಕಾರ್ಯದರ್ಶಿಗಳಾದ, "ಜಯಕರ್ನಾಟಕ" ಮಾಸಪತ್ರಿಕೆಯ ಸಂಪಾದಕರೂ ಸಂಚಾಲಕರೂ ಆಗಿರುವ ಶ್ರೀ. ಬೆಳಗಾಂವಿ ರಾಮಚಂದ್ರರಾಯರ ವಿಳಾಸಕ್ಕೆ, ಧಾರವಾಡಕ್ಕೆ ಕಳಿಸುವ ಅನುಗ್ರಹ ಮಾಡಬೇಕು. ಬಂದ ಹಣದ ವಿವರವಾದ ಒಪ್ಪಿಗೆಯನ್ನು ದೈನಿಕ ಸಂಯುಕ್ತ ಕರ್ನಾಟಕದಲ್ಲಿ ಪ್ರಕಟಿಸಲಾಗುವುದು. ದಿವಸಗಳು ತೀರ ತುಸು ಉಳಿದಿರುವುದರಿಂದ; ಎಲ್ಲ ಕಡೆಗೂ ವೈಕ್ತಿಕ ಪತ್ರಗಳನ್ನು ಬರೆದು ಬೇಡಿಕೊಳ್ಳುವುದು ಶಕ್ಯವಾಗುವಂತಿಲ್ಲವಾದ್ದರಿಂದ, ಈ ಸಾರ್ವಜನಿಕ ವಿನ್ನಹವನ್ನೇ ಎಲ್ಲರೂ ತಮಗೆ ಮಾಡಿದ ವಿನ್ನಹವೆಂದು ಬಗೆದು, ಬೇಗನೇ ಹಣ ಕಳಿಸುವ ಪುಪಾರ್ಪಡು ಮಾಡಬೇಕೆಂದು ವಿನಯಪೂರ್ವಕ ಪ್ರಾರ್ಥಿಸಲಾಗಿದೆ.

ಶಾಂತಿಸಮಾರಂಭ ಸಮಿತಿಯ ಕಾರ್ಯಾಲಯ, ಧಾರವಾಡ ೨೦—೬—೪೦	ಮುದವೀಡು ಕೃಷ್ಣರಾಯ ಕಾರ್ಯಾಧ್ಯಕ್ಷ ಬೆಳಗಾಂವಿ ರಾಮಚಂದ್ರರಾಯ ಪ್ರಮುಖ ಕಾರ್ಯದರ್ಶಿ

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ — ಧಾ ರ ವಾ ಡ.

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ ಎಲ್ಲರ ಸಂಸಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೆ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :—

ಎಮ್. ಗೋವರ್ಧನರಾವ್ ಮ್ಯಾನೇಜರ್

The United Karnatak Insurance Co Ltd., DHARWAR.

★ ತಲೆಗೂದಲು ಚೆನ್ನಾಗಿದ್ದರೆ ಚೆಲುವಿಗೊಂದು ಬೆಲೆ!

ಹಾಗೆ ಚೆನ್ನಾಗಿರುವುದೆಂದರೇನು?

ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಳವಾಗಿ ಇರಬೇಕು!

ಹಾಗಾಗಬೇಕಾದರೆ ‘ಮುಕುಲ’ ಉಪಯೋಗಿಸಿರಿ!

ತರುಣ-ತರುಣಿಯರು ಒರಿಯೆ ಕಣ್ಣು-ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು! ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಚೆಲುವಿಕೆಯಿದ್ದರೂ ಅದು ವ್ಯರ್ಥವೆನಿಸುವುದು. ಅದಕ್ಕಾಗಿಯೆ

ಆಯುರ್ವೇದ ತಜ್ಞರಿಂದ ಶುದ್ಧ ಕೊಬ್ಬರಿಎಣ್ಣೆಯಲ್ಲಿ ತಯಾರಿಸಲಾದ ‘ಮುಕುಲ’ ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ್ಮ ಚೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ., ಅಹಮ್ಮದನಗರ

ಕರ್ನಾಟಕ ಶಾಖೆ: ಸ್ಟೇಶನ್‌ರೋಡು, ಹುಬ್ಬಳ್ಳಿ.

Printed by V. Y. Jathar, B. Sc. Karnatak Printing Works, Dwr. Edited and published by M. G. Patil at Jayanti Office Dharwar

S.N.KULKARNI
ಅಗಸ್ಟ್ ೧೯೪೦
೩ನೆಯ ವರ್ಷ
೪ನೆಯ ಸಂಚಿಕೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚಸೇರಿ ೩—೦—೦ ...... ವ್ಹಿ. ಪಿ. ಯಿಂದ ೩–೫–೦ ...... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಪಾಟೀಲ ಮಾಧವರಾಯರು ಬೆಟಗೇರಿ ಕೃಷ್ಣಶರ್ಮರು

೩ನೆಯ ವರ್ಷ	ಅಗಸ್ಟ ೧೯೪೦	೪ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಶರವದ ಸೃಷ್ಟಿಗೆ (ಕವನ)	ಶ್ರೀ. ರಾಮಚಂದ್ರ, ವಿಜಾಪುರ	೧೬೯
ಸಂಪಾದಕೀಯ	ಸಂಪಾದಕರು	೧೭೦
ಮಂಗಸ ಮಲ್ಲಿನಾಥತಪ	ಶ್ರೀ. 'ಮಲ್ಲಿನಾಥ'	೧೭೧
ಫ್ರಾನ್ಸ್‌ದೇಶದ ಪ್ರಾಣಸ್ವರೂಪ (ವ್ಯಕ್ತಿಪರಿಚಯ)	ಶ್ರೀ. ಜಾರ್‌ಪುನಿಯ 'ತಂತ್ರಿ'	೧೭೩
ಸಂಪಾದಕರ ಟಿಪಾಲು	.. ..	೧೭೬
ವಾಳಕೇಶ್ವರದ ಕೊಳಿ (ಸಣ್ಣಕತೆ)	ಶ್ರೀ. ವಿಶ್ವನಾಥ ಹೆಗಡೆ, ಮುಂಬಯಿ	೧೭೭
ಶಿಯಾ-ಸುನ್ನಿಗಳಲ್ಲಿ ಕಲಹವೇಕೆ? (ಪರಿಚಯಾತ್ಮಕ) ..	ಶ್ರೀ. ಬಿ. ಪಾರ್ಥಸಾರಥಿರಾವ್	೧೮೪
ನಗುತಲಿರು, ನಗುತಲಿರು! (ಕವನ)	ಶ್ರೀ. ಮೊಗೇರಿ ಗೋಪಾಲಕೃಷ್ಣ ಅಡಿಗ	೧೯೦
ಚುಂಬಿಸಿರದ ಚುಂಬನ (ಹಾಸ್ಯಕಥೆ)	ಶ್ರೀ. ಟಿ. ಆರ್. ಭಟ್ಟ, ಮುಲ್ಕಿ	೧೯೧
ಗಾಂಧೀಜಿ–ಕಲೆ (ವ್ಯಕ್ತಿತ್ವ ಚಿತ್ರಣ)	ಶ್ರೀ. ಸಿಸ್ತವ್ವನ ಹಳ್ಳಿ ಕೃಷ್ಣಶರ್ಮ	೧೯೪
ನಾಜೀ ತತ್ತ್ವಜ್ಞಾನ (ವಿವೇಚನಾತ್ಮಕ)	ಪ್ರೊ. ಸಿ. ಡಿ. ದೇಶಪಾಂಡೆ ಎಂ. ಎ.	೧೯೯
ಎರಡು ನೊಂದ ಜೀವಗಳು (ಜೀವನ ಚಿತ್ರ)	ಶ್ರೀ. 'ಭಾರತೀಸುತ' ಪೈಸಾಹು	೨೦೧
ಉರಿ (ವಿಚಾರ ತರಂಗ)	ಶ್ರೀ. ಕುಲಕರ್ಣಿ ದತ್ತಾತ್ರೇಯ, ಮುಂಬೈ	೨೦೩
ಜೀವನ ಸಂಗ್ರಾಮ (ವ್ಯಂಗ್ಯಪ್ರಬಂಧ)	'ಶ್ರೀರಂಗ'	೨೦೬
ವಿಮೋಚಾರರ ಹಿತಕ್ಕಾಗಿ (ಪರಿಚಯಾತ್ಮಕ)	ಶ್ರೀ. ಎಮ್. ಪಿ. ಭಾಗವತ, ಮುಂಬೈ	೨೦೮
ಕನ್ನಡ ಪುತ್ರ (ಸಣ್ಣ ಕತೆ)	ಶ್ರೀ. ಬಿ. ಕೆ. ರಾಮಚಂದ್ರರಾವ್ ಎಲ್‌ಎಲ್. ಬಿ.	೨೧೧
ಬೆಂಗಳೂರಲ್ಲಿ ನಡೆದ ಬೆಳ್ಳಿಯ ಹಬ್ಬ (ವರದಿ)	ಹೋಗಿಬಂದವರೊಬ್ಬರು	೨೧೪
ಹೆಂಗುಸರಿಗಾಗಿ ವ್ಯಾಯಾಮಕ್ರಮ	ಶ್ರೀ. ಶ್ರೀ. ಜ. ಬಾಪಟ ಬಿ. ಪಿಎಚ್. ಸಿ.	೨೧೯
ಪುಸ್ತಕವಿಮರ್ಶೆ	ಬೇರೆ ಬೇರೆಯ ವಿಮರ್ಶಕರು	೨೨೦
ನಗೀಗೆ ನೇವಿದ್ಯ	ಶ್ರೀ. 'ಸಕಲೀ ನಾರಾಯಣಾಚಾರಿ'	೨೨೩
ನಾಲ್ಕು ನಿಟ್ಟಿನ ನೋಟ	'ನಿರೀಕ್ಷಕರು'	೨೨೪
ಸಾದರ ಸ್ವೀಕಾರ	ಮೇಲೋಲೆಯ ೩ನೆಯ ಪುಟದಲ್ಲಿ.	



೭ನೆಯ ವರ್ಷ | ಅಗಸ್ಟ್ ೧೯೪೦ | ೪ನೆಯ ಸಂಚಿಕೆ

ಶರದದ ಸೃಷ್ಟಿಗೆ

ಶ್ರೀ. ರಾಮಚಂದ್ರ

೧

ಶರದ ಸುಂದರಿ ನಿನ್ನ ಚಾಪ-ಕ್ಶೈಚಳಕದಲಿ
ಮನುಲೋಕ ಮುಳುಗುತಿದೆ ಮೋಹದಲ್ಲಿ;
ಕುಳಿರ ಶರಘಾತದಲಿ ಮನಮುದುಡಿಕೊಂಡರೂ
ಹೊಸ ಉಸಿರು ಹರಿಯುತಿದೆ ದೇಹದಲ್ಲಿ.

೨

ಈ ಗಾಳಿ, ಕಂಪುಸಿರು, ತಿಂಗಳಿನ ಹಾಲ್ಬೆಳಕು
ಎದೆಯ ಹುಚ್ಚನ್ನೇಕೊ ಹೆಚ್ಚಿಸಿಹವು;
ಸೊಬಗಿನೀ ಸಾಗರದಿ ಮುಳುಗಿ ಮಿಂದೆದ್ದರೂ
ನಿನ್ನ ನೆಲೆ ಬೆಲೆ ಮಾತ್ರ ತಿಳಿಯದಿಹವು.

೩

ಬಾನ ಬೆಳ್ಳಿಯ ದೀಪ ನಿನ್ನ ವೈತಾಳಿಕನು,
ತರುಲತಾಕುಂಜಗಳು ಚಮರವಾಗಿ,
ಹೂಹುಡಿಯ ಹಾರಿಸುತ ಜಲಕೇಳಿಯಾಡಿಸುತ
ತಂಗಾಳಿ ಬೀಸುತಿದೆ ಮೈಗಾವಲಾಗಿ.

೪

ಜೀವದುಂಬಿಯದಿಂದು ಮುಗಿಲಾಚೆ ನೆಗೆಯುತಿದೆ
ನಿನ್ನ ತಾಣವನರಸಿ ಅಮೃತಕಾಗಿ;
ನಿನ್ನ ಮಧುಕುಂಭದಾ ಒಂದು ಬಿಂದುವಿಗೆಂದು
ಮೂಲೋಕವಲೆಯುತಿದೆ ಶೋಧಕಾಗಿ.

೫

ಬೆಳೆಯ ಕಳೆಯಲಿ ತಾಯಿ ಭೂದೇವಿ ನಗುತಿಹಳು
ನಿನ್ನ ಪಾದಸ್ಪರ್ಶಯೋಗದಿಂದ;
ಲಕ್ಷನಂದಾದೀಪ ಮುಗಿಲಿನಲಿ ಮಿಣುಕುತಿವೆ
ಭೂ-ನಾಕ ಬೆಳಗುತಿವೆ ನಿನ್ನೆಸಕದಿಂದ.

೬

ತಂಗದಿರ ಬೆಂಗದಿರ ಬಂದರೇನದು ಬಾಳು
ಬಿಸಿಲು ನೆರಳಾಟದಲಿ ಸೋಲಬೇಕು.
ಭೂ-ವ್ಯೋಮದಲ್ಲೆಲ್ಲ ಸಿರಿಸೂರೆಗೊಂಡರೂ
ಹರಣ ಸಂತಸವಿಲ್ಲದಳುಕಬೇಕು!



ಕರ್ನಾಟಕದ ಅಭಿಮಾನ

ಪ್ರಾಂತದ ಅಭಿಮಾನವನ್ನು ಹಿಡಿಯುವುದು ಸಂಕುಚಿತವೃತ್ತಿಯ ಲಕ್ಷಣವೆಂದೂ ಅದಕ್ಕಾಗಿ ವಿಶಾಲಭಾರತದ ಅಭಿಮಾನದಿಂದ ಕಾರ್ಯಮಾಡುವುದು ಅವಶ್ಯವೆಂದೂ, ಹಲವು ಜನ ಹೊರಗಿನವರೂ ಒಳಗಿನವರೂ ಕೂಡಿಯೆ ಕನ್ನಡಿಗರಿಗೆ ಬುದ್ಧಿಯನ್ನು ಕಲಿಸಲಿಕ್ಕೆ ಬರುತ್ತಾರೆ. ಯಾವುಯಾವುದೊ ಸ್ವಾರ್ಥದಿಂದ ಪ್ರೇರಿತರಾದ ನಮ್ಮ ನೇತಾರರು ಕೆಲವರೂ ಇದೇ ಬಗೆಯ ಉಪದೇಶವನ್ನು ಕನ್ನಡಿಗರಿಗೆ ಸಮಯದೊರೆತಾಗಲೆಲ್ಲ ಮಾಡುತ್ತಿರುತ್ತಾರೆ. ಪ್ರತಿಯೊಬ್ಬ ಮನುಷ್ಯನ ಮನಸ್ಸು ದೊಡ್ಡದಾಗಿರಬೇಕೆಂದೂ ದೃಷ್ಟಿ ವಿಶಾಲವಾಗಿರಬೇಕೆಂದೂ ಹೃದಯ ಉದಾರವಾಗಿರಬೇಕೆಂದೂ ನಮಗೆ ಹೊಸತಾಗಿ ಯಾರೂ ಕಲಿಸಬೇಕಾಗಿಲ್ಲ. ಕನ್ನಡಿಗರು ಆ ಮಾತನ್ನು ಭೂತಕಾಲದಲ್ಲಿ ಭೂಮಂಡಲಕ್ಕೇ ಬೋಧಿಸುವ ಕಾರ್ಯವನ್ನು ಮಾಡಿದ್ದಾರೆ. ಇಂದಿನ ವಿಪರೀತಕಾಲದಲ್ಲಿ ಕೂಡ ಅಂತಹ ಕಾರ್ಯವನ್ನೇ ಮಾಡಬೇಕೆಂಬ ಅಪೇಕ್ಷೆಯಿಟ್ಟುಕೊಂಡು, ನಿಲ್ಲಲು ನೆಲೆಗಾಣದೆ ತೊಡಕಾಡುತ್ತಿದ್ದಾರೆ. ಕಾಲವು ಬದಲಾಗುತ್ತ ನಡೆದಂತೆ ಮನುಷ್ಯ ತನ್ನ ಪ್ರೇಯ-ಶ್ರೇಯಗಳ ಸಾಧನೆಗಾಗಿ ಗುರಿಯನ್ನೂ ಬದಲಿಸಿಕೊಳ್ಳಬೇಕಾಗುತ್ತದೆಂಬುದನ್ನು ಭಾರತೀಯರೆಲ್ಲರೂ— ಅವರಲ್ಲಿಯೂ ಹೆಚ್ಚಾಗಿ ಕನ್ನಡಿಗರು— ಮರೆತು ನಡೆದಿರುವುದರಿಂದಲೆ, ನಾವೆಲ್ಲ ನೂರಾರು ವರ್ಷದ ಪರಾಧೀನ ಜೀವನದಲ್ಲಿ ಬಿದ್ದು ಮರುಗುತ್ತಿದ್ದೇವೆ. ಬೇಸಗೆಯ ಧಗೆಯನ್ನು ಬರಿಮೈಯಿಂದಿದ್ದು ನಿವಾರಿಸಿಕೊಳ್ಳಲು ಬರುವುದೆಂದು, ಮಾಗಿಯ ಚಳಿಯ ನಿವಾರಣೆಗೂ ಅದೇ ಉಪಾಯವನ್ನೆ ಕೈಕೊಳ್ಳಬಹುದೇ? ನಮಗಿಂದು ಕರ್ನಾಟಕದ ಅಭಿಮಾನ ಕೇವಲ ಭಾವನೆಯನ್ನು ಉದ್ರೇಕಿಸಿಕೊಳ್ಳುವ ಮಾದಕಶಕ್ತಿಯಾಗಿ ಬೇಕಾಗಿಲ್ಲ. ಬದುಕನ್ನು ಶಾಂತಿ-ಪುಷ್ಟಿ-ತುಷ್ಟಿಗಳಿಂದ ತುಂಬುವುದಕ್ಕೆ ಆವಶ್ಯಕ ಸಾಧನವೆಂದು ಬೇಕಾಗಿದೆ. ಅದಿಲ್ಲದೆ ಹೋದರೆ ಕನ್ನಡಿಗರಿಗೆ ಒಳ್ಳೆಯ ಭವಿಷ್ಯವಿಲ್ಲ ವಿಷ್ಟೇ ಅಲ್ಲ; ಬರಲಿರುವ ಕಾಲದಲ್ಲಿ ಅವರ ಅಸ್ತಿತ್ವವೂ ಇಲ್ಲದಂತಾಗುವುದು ಖಂಡಿತ.

ಮಿಕ್ಕ ಭಾರತೀಯರಂತೆ ಕನ್ನಡಿಗರೂ ಪರಾಧೀನ ಜೀವನದ ಕಹಿಗೂಳನ್ನು ಉಂಡೇ ಉಣ್ಣುತ್ತಲಿದ್ದಾರೆ. ಭಾರತೀಯರೆಲ್ಲರಿಗೂ ಸಾಮಾನ್ಯವಾಗಿರುವ ಕಷ್ಟ-ನಷ್ಟಗಳಲ್ಲಿ ಕನ್ನಡಿಗರು ತಮ್ಮ ಪಾಲಿಗೆ ಬರುವುದರ ಹೊರೆಯನ್ನು ಹೊತ್ತೇ ಹೊರುತ್ತಾರೆ. ಅದರ ಜೊತೆಯಲ್ಲಿಯೆ ಸ್ವದೇಶೀಯರಿಂದ ದೊರೆಯುವ ತಿರಸ್ಕಾರ, ಅಸಹಾನುಭೂತಿ, ಆಕ್ರಮಣವೃತ್ತಿ ಇವುಗಳ ಏಟುಗಳನ್ನೂ ಅವರು ತಿಂದು ಸಹಿಸಿಕೊಂಡಿರಬೇಕಾಗಿದೆ. ಇದಕ್ಕೆ ಕಾರಣವೆಂದರೆ ಕರ್ನಾಟಕದ ನೆರೆಹೊರೆಯ ಪ್ರಾಂತಗಳ ಅಖಂಡಸ್ಥಿತಿ, ಕರ್ನಾಟಕದ ಖಂಡ-ಖಂಡಸ್ಥಿತಿ. ಅಖಂಡಪ್ರಾಂತಗಳು ಬೇಗನೆ ಎಚ್ಚತ್ತು ಕಾರ್ಯ-ಪ್ರವಣತೆಯಿಂದ ಮುಂದುವರಿದುವು. ವಿಖಂಡಿತ ಕರ್ನಾಟಕದಲ್ಲಿ ಸಜೀವತೆಯ ಕುರುಹೇ ಇರದುದರಿಂದ, ಅದರ ಪುನರುಜ್ಜೀವನಕ್ಕೆ ಸಂಜೀವಿನಿಯನ್ನೆ ಸಂಪಾದಿಸಬೇಕಾಯಿತು. ಅದಕ್ಕಾಗಿಯೆ ಕರ್ನಾಟಕ ಎಚ್ಚತ್ತು ಕಾರ್ಯಪ್ರವೃತ್ತನಾಗಲು ವಿಲಂಬವಾಯಿತು. ಮುಂದುವರಿದ ಪ್ರಾಂತಗಳು ಅದುವರೆಗೆ ಕನ್ನಡನಾಡನ್ನು ಗಣಿಸಿರಲೆ ಇಲ್ಲ, ಅದರ ಕಳೇವರದ ಮೇಲೆ ನಿಃಸಂಕೋಚವಾಗಿ ನಿಂತು ಕುಣಿಯುತ್ತ ತಂತಮ್ಮ ಹಿತಸಾಧಿಸಲು ಹೆಣಗತೊಡಗಿದ್ದುವು. ಕರ್ನಾಟಕವು ಪುನರುಜ್ಜೀವಿತನಾಗಿ ತನ್ನ ದೇಹವನ್ನು ಅಲುಗಾಡಿಸತೊಡಗಲು, ಆಗ ಅದು ನೆರೆಹೊರೆಯ ಪ್ರಾಂತಗಳಿಗೆ 'ಕನ್ನಡಿಗರ ಕಿಡಿಗೇಡಿತನ' ಎಂದು ಕಾಣತೊಡಗಿತು. ಎಂತಲೆ ಅವು ಕನ್ನಡಿಗರನ್ನು ಅಸಹನೆ, ತಿರಸ್ಕಾರಗಳಿಂದ ನೋಡಲಾರಂಭಿಸಿದುವು. ಕನ್ನಡಿಗರ ವಿಷಯವಾಗಿ ಅಲ್ಲದ ಸಲ್ಲದ ಅಪರಾಧ ಅಪವಾದಗಳನ್ನು ಲೋಕದಲ್ಲಿ ಹರಡಿ, ಅವರ ಎತ್ತಿದ ತಲೆಗಳನ್ನು ಮೆಟ್ಟತೊಡಗಿದುವು. 'ಕನ್ನಡಿಗರು ಹುಂಬರು, ಸಂಸ್ಕೃತಿವಿಹೀನರು' ಎಂದುವು. 'ಅವರ ನುಡಿ ಬಿರುಸು; ನಡೆ ಒರಟು; ಅವರು ಜಡವಾದ ಬುದ್ಧಿಯವರು' ಎಂದು ಪ್ರಚಾರ ಮಾಡಿದುವು. ಅವು ಹಾಗೆಲ್ಲ ಮಾಡಿದ ಪ್ರಚಾರಕಾರ್ಯವು, ಆಗ ತಾನೆ ಕಣ್ಣುಬಿಡುತ್ತಲಿದ್ದ ಕನ್ನಡಿಗರಲ್ಲಿ 'ತಾವು ಕೀಳರಿರಬೇಕು' ಎಂಬ ಭಾವನೆ (ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್) ಯನ್ನು— ಅವರಿಗೆ ತಿಳಿಯದಹಾಗೆಯೆ— ಬಿತ್ತಿಬಿಟ್ಟಿತು. ನಮ್ಮಲ್ಲಿಯ ಕೆಲವು ಜನರು ಆ ಭಾವನೆ ಬೆಳೆದು ವಿಷಫಲಬಿಡುವುದಕ್ಕೆ ಸಹಕಾರವನ್ನು ಕಲ್ಪಿಸಿಕೊಟ್ಟರು.

ಯಾವುದೇ ಒಂದು ಶಕ್ತಿ ಪ್ರಕಟವಾಯಿತೆಂದರೆ— ಮೊದಲನೆಯದಾಗಿ ಅದಕ್ಕೆ ವಾಸಿಸಲು ಅಧಿಷ್ಠಾನ ಬೇಕು, ತಿಂದು ಬಲಗೊಳ್ಳಲಿಕ್ಕೆ ಆಹಾರ ಬೇಕು. ಕರ್ನಾಟಕ ಎಚ್ಚತ್ತಾಗ ಅದಕ್ಕೆ ಅಧಿಷ್ಠಾನದ ಆವಶ್ಯಕತೆಯೆನಿಸಿತು; ಆಹಾರದ ಆವಶ್ಯಕತೆಯೆನಿಸಿತು. ತಾನು ವಾಸಿಸಬೇಕಾದಲ್ಲಿ ಅನ್ಯರು ವಾಸಿಸುವುದೂ ತನ್ನ ದೇಹಕ್ಕೆ ಪೋಷಣೆಯನ್ನೊದಗಿಸುವ ಜೀವಸತ್ತ್ವ ಇನ್ನೊಬ್ಬರ ಪಾಲಾಗುತ್ತಿದ್ದುದೂ ಖೇದವೆನಿಸಿತು. ಈ ಅವಕಾಶ-ಆಹಾರಗಳನ್ನು ಸಂರಕ್ಷಿಸಿಕೊಳ್ಳಲಿಕ್ಕೆ ಕರ್ನಾಟಕವು ತೋರಿಸಿದ ಚಟುವಟಿಕೆ 'ನೆರೆಯ ಪ್ರಾಂತಗಳ ದ್ವೇಷ' ಎಂಬ ಹೆಸರನ್ನು ಪಡೆಯಿತು. ಕನ್ನಡಿಗರೆಂದರೆ 'ತುಂಟರು, ಹೊಟ್ಟೆಕಿಚ್ಚಿನವರು, ದ್ವೇಷಮಾಡುವವರು' ಎಂಬ ಪರಕೀಯರ ಪ್ರಚಾರಕ್ಕೆ ಕಾರಣವಾಯಿತು. ಸ್ವಕೀಯರಲ್ಲಿ ಕೆಲವರೂ ಈ ಪ್ರಚಾರಕ್ಕೆ ದನಿಗೂಡಿಸಿದರು. ಎಂತಲೆ ನೆರೆಯ ಪ್ರಾಂತಗಳಿಗೆ ಕನ್ನಡಿಗರ ಅಸ್ತಿತ್ವ, ಕನ್ನಡಿಗರ ಜಾಗ್ರತಿ, ಕನ್ನಡಿಗರ ಜೀವನ ಬೇಕಾಗಿಲ್ಲ. ಅವರ ಅಪೇಕ್ಷೆಗೆ ರಾಜಕೀಯ ದೃಷ್ಟಿಯಿಂದ ಖಂಡಖಂಡವಾದ ಕರ್ನಾಟಕದ ಪರಿಸ್ಥಿತಿ ಅನುಕೂಲವಾಗಿದೆ. ಎಲ್ಲ ಕಡೆಯಲ್ಲಿಯೂ ಕನ್ನಡಿಗರೆಂಬ ಹೆಸರಿನ ಮೇಲೆ ಆಘಾತಗಳು ಬೀಳುತ್ತಲಿವೆ. ಕನ್ನಡ ಮಾತನಾಡುವ ಜನರು ಇಂದು ಎಲ್ಲ ಕ್ಷೇತ್ರಗಳಲ್ಲಿಯೂ ಹಾನಿಯನ್ನು ಸಹಿಸಬೇಕಾಗಿರುವುದಕ್ಕೆ ಕಾರಣ, ಅವರು ಯಾವುದಾದರೊಂದು ವಿಶಿಷ್ಟ ಜಾತಿಯವರೆಂದಲ್ಲ; ಯಾವುದಾದರೊಂದು ವಿಶಿಷ್ಟ ಪಂಥದವರೆಂದಲ್ಲ; ಯಾವುದಾದರೊಂದು ವಿಶಿಷ್ಟ ಪಕ್ಷದವರೆಂದಲ್ಲ; ಕೇವಲ ಭಾಷಾಭಿನ್ನತೆಯ

(೧೭೬ ನೆಯ ಪುಟಕ್ಕೆ ಮುಂದುವರಿದಿದೆ.)

ಕುಡಿಯಿರಿ ! ಕುಡಿಯಿರಿ ! ಕುಡಿಯಿರಿ !

ಮುಂಬಯಿಯಲ್ಲಿ ಸುರಾದೇವಿಯ ಪುನಃ-ಪ್ರವೇಶೋತ್ಸವ ಜರುಗಲಿದೆಯಂತೆ. ಅದಕ್ಕಾಗಿ ಮಂಗರಾಯನಿಗೂ ಔತಣ ಬಂದಿದೆ. ಮಂಗರಾಯನಿಗೂ ಮದ್ಯಕ್ಕೂ ಇರುವ ಸುಭಾಷಿತ-ಸಂಬಂಧ ನಮ್ಮ ವಾಚಕರಿಗೆ ಗೊತ್ತೇ ಇದೆ. ಈ ಉತ್ಸವಕಾಲದಲ್ಲಿ ಒಂದು ಭಾಷಣಮಾಡಬೇಕೆಂದೂ ಮುಂಬಯಿಯ ಮದ್ಯಭಕ್ತರು ಮಂಗರಾಯನನ್ನು ಕೇಳಿಕೊಂಡಿದ್ದಾರೆ. ಅದನ್ನು ಸಂತೋಷದಿಂದ ಒಪ್ಪಿ ಮಂಗರಾಯನು ಈ ಬಗೆಯ 'ಸ್ಪೀಚ್' ಒಂದನ್ನು ತಯಾರಿಸಿದ್ದಾನೆ.

"ನನ್ನ ಮನದೊಲವನ್ನು ಕದ್ದ ಮುಂಬಯಿಯ ಮದ್ಯಪ್ರಿಯರೆ, ನಿಮಗೆ ಒಳ್ಳೆಯ ಕಾಲ ಬಂದುದು ನನಗೆ ತುಂಬ ಆನಂದದ ವಿಷಯವಾಗಿದೆ. ಅತ್ತೆಯದೊಂದು ಕಾಲ, ಸೊಸೆಯದೊಂದು ಕಾಲ! ಕಾಂಗ್ರೆಸ್‌ಸರಕಾರದ ಸೊಸೆ ಬಂದು, ಕಾರಭಾರದಲ್ಲಿ ಕೈಹಾಕಿ, ಕಚೇರಿತುಂಬ ಮಡಿಮಾಡಿ ಇಟ್ಟಿದ್ದಳು. ಅದೇನೋ ಅಂತಾರಲ್ಲಾ ಹಾಗೆಯ ಕೈಯಲ್ಲಿ ಕಾರಭಾರ ಕೊಟ್ಟರೆ.... ಅಂತ. ಈಗ ಮತ್ತೆ ಅನುಭವಿಕ ಅತ್ತೆಯ ಕೈಗೆ ಅಧಿಕಾರ ಬಂದಿತು. ಆ ಅಜ್ಜಿಗೆ ಮಕ್ಕಳು-ಮರಿಗಳನ್ನು ಹೇಗೆ ಹೇಗೆ ಸಲಹಿ ಸಮಾಧಾನಪಡಿಸಬೇಕೆಂಬುದು ಸಂಪೂರ್ಣವಾಗಿ ಗೊತ್ತು. ನನ್ನ ಕಿರಿಯ ಕುಡುಕರೆ, ಇದುವರೆಗೆ ಒಂದು ಗುಟುಕು ಸೆರೆಗಾಗಿ ನೀವು ಎಷ್ಟೊಂದು ನೊಂದಿರಿ, ಎಷ್ಟೊಂದು ಬೆಂದಿರಿ, ಎಷ್ಟೊಂದು ಬಳಲಿ ಬಾಯ್ಬಿಟ್ಟಿರಿ? ಸತ್ಯವಂತರಾದರೂ ನಿಮಗೆ ಸುಳ್ಳು ಮಾತನಾಡಬೇಕಾಯಿತು. ಕಳ್ಳರಲ್ಲದಿದ್ದರೂ ನೀವು ಪಾಕಿ-ಡಗಳೆಯುವರಿಗೆ ಹೆದರಬೇಕಾಯಿತು! ಅಯ್ಯೋ, ಸೆರೆಯಿಲ್ಲದುದಕ್ಕಾಗಿ ನಿಮ್ಮ ನರನರಗಳೆಲ್ಲ ಶಿಥಿಲಗೊಂಡು ನಾಲಗೆ ಸೇದುತ್ತಿರುವಾಗ, ನೀವೆಷ್ಟು ವ್ಯಥೆಗೊಂಡಿರಬೇಡ! ಮಾಡುವುದೇನು? ಪ್ರಾರಬ್ಧವಾರನ್ನು ಬಿಟ್ಟಿದೆ? ಚಕ್ರನೇಮಿಕ್ರಮದಂತೆ ಈಗ ಮರಳಿ ನಿಮಗೆ ಶುಭಕಾಲದ ಸೂರ್ಯೋದಯವಾಗಿದೆ. ಆದುದರಿಂದ ಕುಡಿಯಿರಿ, ಕುಡಿಯಿರಿ! ಒಂದೆ ಗುಟುಕಿಗೆ ಬಾಟ್ಲಿ ಬಾಟ್ಲಿಗಳನ್ನು ಹೊಡೆಯಿರಿ! ಬಡವರೆನ್ನದೆ, ಬಲ್ಲಿದರೆನ್ನದೆ ಎಲ್ಲರೂ ಸಮತಾಭಾವದಿಂದ, ವಿಲಾಯತಿಯ ಬೆಲೆಯುಳ್ಳ ಮದ್ಯವನ್ನು ಗಟಗಟನೆ ಕುಡಿಯಿರಿ. ನಿಮ್ಮ ಇಷ್ಟಸುಖವನ್ನು ಪಡೆಯಿರಿ! ವಿಲಾಯತಿಗೂ ನಿಮಗೂ ಗೆಳೆತನದ ಗಂಟುಹಾಕುವ ಈ ನಂಟನನ್ನು ಕಂಠಮಟ್ಟ ಕುಡಿಯಿರಿ. ಕುಡಿದು ಬೇಕಾದಲ್ಲಿ ಬಿದ್ದುಕೊಳ್ಳಿರಿ, ಬಿದ್ದಲ್ಲಿ ನಿಮಗೆ ನಿದ್ದೆ ಕಟ್ಟಿಟ್ಟದ್ದೇ, ಕಾಂಗ್ರೆಸ್ ಸರಕಾರದ ಕತ್ತೆಗೆ ಈ ಮತ್ತೇಕಾಳಿನ ರುಚಿಯೇನು ಗೊತ್ತು? ಬಲ್ಲವ ಬಲ್ಲ ಬೆಲ್ಲದ ಸಿಹಿ! 'ಭಾರತಮಾತಾಕೀ ಜಯ್! ಬಾಯ್ಲಾಗ ಬ್ರಾಂಡೀ-ಬೀರ್ ಹುಯ್!!"

ಇದೇ ಮಂಗರಾಯನ ಸ್ಪೀಚು. ಇದರಲ್ಲಿ ಏನಾದರೂ ಹೆಚ್ಚುಕಡಿಮೆ ಮಾಡಬೇಕೆಂದು ಯಾರಾದರೂ ಸೂಚಿಸಿದರೆ ಮಂಗರಾಯನು ಕೃತಜ್ಞತೆಯಿಂದ ಸ್ವೀಕರಿಸುವನು.

* * *

ತೊಗಲುಬಾವಲಿಗಳ ತೊಂದರೆ

ಕನ್ನಡನಾಡಿನಲ್ಲಿ ಇತ್ತೀಚೆಗೆ ತೊಗಲುಬಾವಲಿಗಳ ಉಪದ್ರವ ಬಹಳವಾಗತೊಡಗಿದೆ. ಹಿಂದೆ ಇಸೋಪನ ತೊಗಲುಬಾವಲಿ ಕಾಳಗದಲ್ಲಿ ಮೈ ಉಳಿಸಿಕೊಳ್ಳಲು ಅತ್ತಿತ್ತ ಓಡಾಡಿತಂತೆ. ಇಂದಿನ ಕನ್ನಡ ತೊಗಲುಬಾವಲಿಗಳು ಬಾಳುವೆಯಲ್ಲಿ ಮಾನ ಗಳಿಸಲಿಕ್ಕೆ ಅತ್ತಿತ್ತ ಓಡಾಡುತ್ತಿರುವವು. ಕನ್ನಡಿಗರಿಂದ ಮನ್ನಣೆ ಸಿಕ್ಕುವ ಸಂದರ್ಭದಲ್ಲಿ 'ಕಟ್ಟಾ ಕನ್ನಡಿಗ'ನಾಗಲಿಕ್ಕೂ ಸಿದ್ಧ. ಮರಾಟಿಗರಿಂದ ಮಾನ ದೊರೆಯುವ ಸಂದರ್ಭವಿರುವಲ್ಲಿ 'ಮರ್ದ್ ಮರಾಠಾ' ಆಗಲಿಕ್ಕೂ ಸಿದ್ಧ. ಈ ಮನ್ನಣೆಗಾಗಿ ಹೋರಾಡುವ ಬಾವಲಿಗಳು, ಕನ್ನಡಿಗರಿಗೆ ದೊರೆಯಬೇಕಾಗಿರುವ ಪಾಡು-ಗಾಯಿಗಳನ್ನೆಲ್ಲ ತಾವೆ ಬಾಯಾಡಿಸಿಬಿಡುತ್ತಲಿವೆ. ಹಾರಲಿಕ್ಕೆ ಪಕ್ಕವಿವೆ, ತಿನ್ನಲಿಕ್ಕೆ ಹಲ್ಲುಗಳಿವೆ; ಆದುದರಿಂದ ಎಲ್ಲೆಲ್ಲಿಯೂ ತೊಗಲುಬಾವಲಿಗಳು ಸಂಧಿಸಾಧಿಸಿಕೊಳ್ಳುತ್ತಲಿವೆ. ಈ ಸಂಧಿಸಾಧನೆಯ ಹಾರಾಟದಲ್ಲಿ, ಯಾರಾರಿಗೆ ಎಂತೆಂತಹ ತೊಂದರೆಯಾಗುವುದೆಂಬುದನ್ನು ಅವು ಎಂದೂ ಲಕ್ಷಿಸವು.... ಮಂಗರಾಯ ಇದೇನು ಒದರುತ್ತಲಿದ್ದಾನೆಂದು ಯಾರೂ ಗಾಬರಿಗೊಳ್ಳುವ ಕಾರಣವಿಲ್ಲ. ನಮ್ಮ ಬೆಳಗಾಂವಿಯ ಪಿತಾಮಹರಾದ ಬೆಳವೀ ದತ್ತರಾಯರ ಬಳಿಗೆ ಹೋಗಿ ಅವರ ನಡೆ-ನುಡಿಗಳನ್ನು ಅಭ್ಯಾಸಿಸಿರಿ; ಎಂದರೆ ಈ ಮಾತಿನ ಅರ್ಥ ಸುಲಭವಾಗಿ ತಿಳಿಯುವುದು. ಕನ್ನಡಿಗರಾಗಿ ಕೌನ್ಸಿಲಿಗೆ ಆರಿಸಿಹೋಗಿರುವ ಈ ಬಹುರೂಪಿಗಳು, ಈಗ ಮಹಾರಾಷ್ಟ್ರದಲ್ಲಿ ಮೊನ್ನೆ ಮೊನ್ನೆ ಸಂಸ್ಥಾಪಿತವಾದ 'ಅಣೇ ನಿಧಿ-ಮಂಡಲ'ಕ್ಕೆ ಉಪಾಧ್ಯಕ್ಷರಾಗಿರುವರು. ಈ ನಿಧಿ-ಮಂಡಲದವರ ಮಹಾರಾಷ್ಟ್ರದ ವ್ಯಾಪ್ತಿಯಲ್ಲಿ ಬೆಳಗಾಂವಿ ಜಿಲ್ಲೆಯೂ ಅಡಕಗೊಂಡಿರುವುದು. ಆದರೂ ಹಿರಿಯ ಬೆಳವಿಯವರು, ಯಾವ ಮಾತನ್ನೂ ಆಡದೆ ತಮಗೆ ದೊರೆತ ಉಪಾಧ್ಯಕ್ಷರ ಮನ್ನಣೆಯ ಸ್ಥಾನವನ್ನು ಸ್ವೀಕರಿಸಿರಬಹುದು. 'ಹಾಲು ಹರಿದರೇನು? ಕೋಲು ಮುರಿದರೇನು? ತಮ್ಮ ಬೇಳೆಯೊಂದು ಬೆಂದರಾಯಿತು' ಎಂದು ಹೇಳುವ ಶ್ರೀ. ಬೆಳವಿಯವರಂತಹರೆ ಬದುಕಲು ತಕ್ಕವರು. ಎಂತಲೇ ಅಂತಹರನ್ನು ಮಂಗರಾಯ ಭಲೇ ಎಂದು ಬೆನ್ನು ತಟ್ಟಲೆ ಬೇಕು.

ಭಲೆ ಭಲೆ ಬೆಳವೀ ದತ್ತಾತ್ರೇಯ ರಾಯಾ!
ತಿಳಿಯದು ಯಾರಿಗೂ ನಿನ್ನಯ ಮಾಯಾ!

* * *

ರೇಡಿಯೋ ನಾವ್ ನಿಮಗೆ ಕೇಳ್ಸೋದೇ ಇಲ್ಲಾ !

'ರೇಡಿಯೋ ಮುಖಾಂತರ ಕನ್ನಡದಲ್ಲಿ ಸುದ್ದಿ-ಸಂಗತಿಗಳನ್ನು ಹೇಳುವುದಕ್ಕೆ ಸಾಧ್ಯವಿಲ್ಲ' ಎಂದು ಅಧಿಕಾರಿಗಳು ಖಂಡಿತವಾದ ಉತ್ತರವನ್ನು ಕನ್ನಡಿಗರಿಗೆ ಕೊಟ್ಟರಂತೆ. ಇದಕ್ಕಾಗಿ ಕನ್ನಡದ ಅಭಿಮಾನಿಗಳು ಕೆಲವರು ನೊಂದು ನಿಟ್ಟುಸಿರಿಡುತ್ತಲಿದ್ದಾರೆ. ಮಂಗರಾಯನ ದೃಷ್ಟಿ

ಯಲ್ಲಿ ಅಧಿಕಾರಿಗಳು ಕೊಟ್ಟ ಉತ್ತರವು ಯಥಾ-ಯೋಗ್ಯವಾಗಿದೆ. ಯಾಕೆಂದರೆ ಆಡಳಿತವೆಂದರೆ ತಂದೆಯಿದ್ದಂತೆ; ಜನತೆಯೆಂದರೆ ಮಕ್ಕಳಿದ್ದಂತೆ, ಮಕ್ಕಳು ಶಾಲೆಗೆ ಹೋಗದೆ ವಿದ್ಯಾಭ್ಯಾಸದ ಕಡೆಗೆ ಲಕ್ಷ್ಯಕೊಡದೆ ಇದ್ದು, ನಾಟಕ-ಸಿನೇಮಾಗಳಿಗೆ ಮಾತ್ರ ಹೋಗುವೆವೆಂದು ರೊಕ್ಕಕ್ಕಾಗಿ ಪೀಡಿಸತೊಡಗಿದರೆ, ತಂದೆ ಅವರನ್ನು ಬೈದು ಮನೆಯೊಳಗೆ ಕೂಡಿಸುವುದು ಸಹಜವಾದ ಮಾತು. ಅದರಂತೆಯೆ ಜಾಣರಾದ ಮಕ್ಕಳಿಗೆ ಬೇಕಾದ ಅನುಕೂಲತೆಗಳನ್ನು ಒದಗಿಸಿಕೊಡುವುದೂ ಸ್ವಾಭಾವಿಕ ಸಂಗತಿ. ಕನ್ನಡಿಗರೆಂದರೆ ಕೈಲಾಸಂ ಅವರ 'ಟೊಳ್ಳುಗಟ್ಟಿ' ನಾಟಕದಲ್ಲಿಯ ಪುಟ್ಟುವಿದ್ದಂತೆ. ಜನರಿಗೆ ಸಾಕಷ್ಟು ಉಪಕಾರ ಇವನಿಂದಾದರೂ ತಂದೆಗೆ ಅವರ ಬೆಲೆಯಿಲ್ಲ. ಮಾಧೂ ಪರೀಕ್ಷೆಯಲ್ಲಿ ಪಾಸಾಗಿದ್ದಾನೆ. ಅವನಿಗೆ ಹೋಟೆ-ಮನೆ ಮಾರಿಯಾದರೂ ಹಣ ಒದಗಿಸಿ ಕೊಡಲೇ ಬೇಕು. ಮನೆಗೆ ಬೆಂಕಿ ಹತ್ತಿದಾಗ ತನ್ನ ಜೀವ ಮಾತ್ರ ಉಳಿಸಿಕೊಳ್ಳಲು ಓಡಿಹೋದ ಮಾಧೂನ ಮೇಲೆ ಇನ್ನಾರಲ್ಲಿಯೂ ಇಲ್ಲದಂತಹ ಅಭಿಮಾನ ತಂದೆಗೆ. ತನ್ನ ಜೀವವನ್ನು ಸಾವಿನ ದವಡೆಯಲ್ಲಿ ನೂಕಿ ಮನೆಯವರನ್ನೆಲ್ಲ ಬದುಕಿಸಿದ ಪುಟ್ಟುವಿಗೆ ಮಲಗಲಿಕ್ಕೆ 'ದಿಂಬುಥಾವು' ಸಿಕ್ಕಲಾರದು; 'ಸಾರೂ ಅನ್ನಕ್ಕೆ ತುಪ್ಪ' ದೊರೆಯಲಾರದು. ಯಾಕೆಂದರೆ ಪುಟ್ಟು ಪರೀಕ್ಷೆಯಲ್ಲಿ ಪಾಸಾಗಿಲ್ಲ. ಹಾಗೆಯೆ ಕನ್ನಡ ಜನತೆ ಆಡಳಿತದ ತಂದೆಯ ದೃಷ್ಟಿಯಲ್ಲಿ ಪರೀಕ್ಷೆ ಪಾಸಾಗಿಲ್ಲ. ಆದುದರಿಂದಲೆ ಅದಕ್ಕೆ ರೇಡಿಯೋ ಇಲ್ಲ; ಇನ್ನಾವ ಅನುಕೂಲತೆಯೂ ಇಲ್ಲ. ಯಾವ ಪರೀಕ್ಷೆ ಪಾಸಾಗಬೇಕೆಂದು ಯಾರಾದರೂ ಆತುರದಿಂದ ಕೇಳಲು ಬರಬಹುದು. ಅವರಿಗೆ ಮಂಗರಾಯನ ಉತ್ತರವಿಷ್ಟು: 'ಅದು ನನಗೆ ಗೊತ್ತಿಲ್ಲ; ಯಾವ ಪರೀಕ್ಷೆಯಲ್ಲಿ ಪಾಸಾಗಬೇಕೆಂಬುದನ್ನು ಪುಸ್ತೋ ಮಾತನಾಡುವ ಪಠಾಣರನ್ನು ಕೇಳಿರಿ, ಅವರು ಹೇಳುವರು!'

" ರೇಡಿಯೋ ಬ್ಯಾಡವೆಂದೆನ್ಹದು
ಮೂಢ ಕನ್ನಾಡ ಮಾನವಾ! "

* * *

ಸ್ಮಾರಕಕ್ಕಾಗಿ ಸುಳ್ಳು ಕಥೆ

ಹಾಲ್‌ವೆಲ್ ಸಾಹೇಬರು ತಮ್ಮ ಮಂಗತನದಿಂದ ಮುಂದೆ ಬಂದವರು. ಅದರ ಮೂಲಕವಾಗಿಯೆ ಸರಕಾರದವರಿಂದ ಸ್ಮಾರಕಸ್ತಂಭದ ಮಾನಕ್ಕೆ ಪಾತ್ರರಾದರು. ಅವರಿಗೆ ಮಾನಸಿಕ್ಕುದು ಏಕೆಂದರೆ-ಅವರ ಮಾತಿನಂತೆಯೆ-ಹವೆಯಿಲ್ಲದೆ ನೀರಿಲ್ಲದೆ ಹಲವರು ಸಾಯುತ್ತಿರುವಾಗ ತಾವು ನೋಡುತ್ತ ಬದುಕಿ ಉಳಿದರೆಂದು; ಬಾಯಾರಿಕೆ ಬಹಳವಾದಾಗ ನೀರಿನ ಬದಲು ಬೆವರನ್ನು ಕುಡಿದು ಬದುಕಿದರೆಂದು. ಸ್ಮಾರಕಕ್ಕೆ ಎಷ್ಟೊಂದು ದೊಡ್ಡ ಕಾರಣ. ಎಂತಹ ಸುಂದರವಾದ ಕಟ್ಟು-ಕತೆ. ಇಂತಹ ಕತೆಕಟ್ಟಿದುದಕ್ಕೆಲ್ಲ ಸ್ಮಾರಕವಾಗುತ್ತಿದ್ದರೆ ಮಂಗರಾಯನು ತನ್ನ ಸ್ಮಾರಕದ ಸಲುವಾಗಿಯೂ ಏತಕ್ಕಾಗಿ ಆಸೆ ಪಡಬಾರದು? ಆದುದರಿಂದ ಅವನೂ ತನ್ನದೊಂದು ಕತೆಯನ್ನು ಇಲ್ಲಿ ಬರೆದಿದ್ದಾನೆ. ಯಾರಾದರೂ ಸ್ಮಾರಕಮಾಡುವವರು ಮಾಡಬಹುದು. ಆ ಕಥೆ ಹೀಗಿದೆ:—

ಮಂಗರಾಯ ಒಂದು ಮಾತಿನ ಯುದ್ಧಕ್ಕೆ ಹೋಗಿದ್ದ. ಜೊತೆಯಲ್ಲಿ ಅವನ ಪರಿವಾರವೂ ಸಾಕಷ್ಟು ಇದ್ದಿತು. ಮೂರು ದಿನಗಳವರೆಗೂ ಮಾತಿನ ಯುದ್ಧ ನಡೆದೇ ಇದ್ದಿತು. ಕೊನೆಗೆ ಮೋಸಗಾರರಾದ ಎದುರಾಳಿಗಳು ಎಲ್ಲರನ್ನೂ ಸೆರೆಹಿಡಿದರು. ಮಂಗರಾಯನಿಗೂ ಉಪವಾಸ, ಅವನ ಪರಿವಾರಕ್ಕೂ ಉಪವಾಸ. ನಾಲ್ಕನೆಯ ದಿನ ಮಂಗರಾಯನಿಗಾಗಿ ಪಂಚಪಕ್ವಾನ್ನದಿಂದ ತುಂಬಿದ ತಾಟೊಂದು ಆಕಾಶದಿಂದ ಅವನೆದುರು ಬಿತ್ತು. ಮಂಗರಾಯ ತನ್ನ ಪರಿವಾರಕ್ಕೆಲ್ಲ ಬೆರಳಿನಿಂದ ಅಣಕಿಸಿ ಆಸೆದೋರಿಸುತ್ತ ಹೊಟ್ಟೆ ತುಂಬ ಹೊಡೆದ. ಸ್ವರ್ಗದಿಂದ ಬಂದ ಅಮೃತಾನ್ನವದು. ಉಂಡು ಮಂಗರಾಯ ಬದುಕಿದ. ಮಿಕ್ಕ ಪರಿವಾರ ಉಪವಾಸದಿಂದ ಕಂಗೆಟ್ಟು ಕುಳಿತಲ್ಲಿಯೆ ಜೀವಬಿಟ್ಟಿತು. ಮಂಗರಾಯ ಎಂತಹ ದೊಡ್ಡ ಕೆಲಸಮಾಡಿದ? ಮಾಡಿರಿ ಅವನ ಸ್ಮಾರಕವನ್ನು!

" ಹಾಡಿರಯ್ಯ ಹಾಡಿರಯ್ಯ ಮಂಗಣ್ಣನ ಕಾರಕ!
ಮಾಡಿರಯ್ಯ ಎಲ್ಲ ಬಿಟ್ಟು ಅವನದೊಂದು ಸ್ಮಾರಕ! "

* * *

ದಿಕ್ಕುತಪ್ಪಿದೆಯೋಕೆ ಹಕ್ಕಮಂತ್ರಿಗಳೆ!

ಹಾಲ್‌ವೆಲ್ಲರ ಸಲುವಾಗಿ ಬಂಗಾಲ ಮಂತ್ರಿ ಹಕ್ಕರಿಗೆಷ್ಟು ಅಭಿಮಾನ, ಎಷ್ಟೊಂದು ಆತ್ಮೀಯತೆ? ಆ ಸ್ಮಾರಕ ನಿಜವಾಗಿ ಮುಸ್ಲಿಂ ಅರಸನೊಬ್ಬನ ಮುಖಕ್ಕೆ ಕಪ್ಪುಹಚ್ಚಲು ಹೊರಟದ್ದು. ಆದರೆ ಅದನ್ನು ತೆಗೆಯಲಿಕ್ಕೆಂದು ಅಚ್ಚಕೆಚ್ಚಿನ ಹಿಂದುಗಳಾದ ಸುಭಾಸಬೋಸರು ಸತ್ಯಾಗ್ರಹ ಹೂಡಿದರು. ಸ್ಮಾರಕದ ಸಜಾತೀಯರಾದ ಗ್ರಿಫ್ತ್ ಸಾಹೇಬರು ಕೂಡ ಅದನ್ನು ತೆಗೆದೊಗೆಯಲು ಸಲಹೆಕೊಟ್ಟರು. ಆದರೂ ಮುಸ್ಲಿಂ ಲೀಗಿನ ಮುಂದಾಳುಗಳೂ ಇಸ್ಲಾಂಧರ್ಮದ ಅನುಯಾಯಿಗಳೂ ಆದ ಹಕ್ಕ ಮುಖ್ಯಮಂತ್ರಿಗಳು ೩೦೦ ಜನರನ್ನು ಸೆರೆಮನೆಗೆ ಹಾಕಿದರು. ಇದೇತಕ್ಕೆ ಹೀಗಾಗಬೇಕು?... ವಿಚಾರಮಾಡಿ ಮಾಡಿ ಮಂಗರಾಯನ ತಲೆ ತಿರುಗತೊಡಗಿದೆ. ಹಕ್ಕರು ತಮ್ಮ ಮಂತ್ರಿತ್ವಕ್ಕಾಗಿ ಮುಸ್ಲಿಂ ಧರ್ಮಾಭಿಮಾನವನ್ನೇ ಬೆಲೆಯಾಗಿ ಕೊಟ್ಟಿದ್ದಾರೆಯೊ ಅಥವಾ ಹಾಲವೆಲ್‌ಸಾಹೇಬರ ಸಮಾಧಿಯಲ್ಲಿಯ ಪ್ರೇತಾತ್ಮ ಅವರಿಗೆ ಬಡಿದುಕೊಂಡಿದೆಯೊ ಎಂದು ಹಲವರಂತೆ ಮಂಗರಾಯನಿಗೂ ಸಂದೇಹವಿದ್ದಿತು. ಅದೇನೋ, ಈಗ ಹಕ್ಕರು ಹಲವರ ಸಂದೇಹವನ್ನು ಸುಳ್ಳುಮಾಡಿ, ಹಾಲ್-ವೆಲ್ ಸಾಹೇಬರ ಸ್ಮಾರಕವನ್ನು 'ಹಲಾಯಿಸುವ' ಘೋಷಣೆ ಮಾಡಿದ್ದಾರೆ. ಮುನ್ನೂರು ಜನರನ್ನು ತುರಂಗಕ್ಕೆ ತಳ್ಳಿ ಅವರು ಮಾಡಬೇಕೆಂದುದನ್ನೆ ಈಗ ತಾವು ಮಾಡಲು ಸಿದ್ಧರಾದ ಹಕ್ಕ ಮುಖ್ಯಮಂತ್ರಿಗಳನ್ನು, ಈಗ ಯಾರು ಎಲ್ಲಿಗೆ ಕಳಿಸಬೇಕು? ಯಾರಾದರೂ ಇದರ ವಿಚಾರ ಮಾಡಿ ಮಂಗರಾಯನಿಗೆ ತಿಳಿಸಬೇಕು.

ದಿಕ್ಕು ತಪ್ಪಿದೆಯೋಕೆ ಹಕ್ಕ ಮಂತ್ರಿಗಳೇ!
ಸಿಕ್ಕಂತೆ ಹಾರಾಡಿ ಕುಕ್ಕರಿಸಿ ಬಿದ್ದಿರಲೆ?

ಮಂತ್ರಿಪದದ ಮೋಹಕ್ಕಾಗಿ

ಹಿಂದೊಮ್ಮೆ ಮಂಗರಾಯ ಶ್ರೀಮಾನ್ ಪಂಡಿತಪ್ಪ ಚಿಕ್ಕೋಡಿಯವರ ವಿಷಯದಲ್ಲಿ ಬರೆದುದನ್ನು ಜಯಂತಿಯ ವಾಚಕರು ಮರೆತಿರಲಾರರು. ಸಾಂಗಲಿಯ ಅರಸನಂತಹ ಮರಾಟಿಗರೂ ಪ್ರಜಾಭಾಷೆಯಾದ ಕನ್ನಡಕ್ಕೆ ತಾತ್ತ್ವಿಕ ದೃಷ್ಟಿಯಿಂದ ಮನ್ನಣೆಕೊಟ್ಟರು. ಆದರೆ ಅಚ್ಚ ಕನ್ನಡಿಗರಾದ ಚಿಕ್ಕೋಡಿ ಪಂಡಿತಪ್ಪನವರು ಜಮಖಂಡಿಯ ಸರಕಾರದ ಹೊಸಯೋಜನಾ ಸಮಿತಿಯೆದುರು ಸಾಕ್ಷಿ ನುಡಿಯುವಾಗ, ರಾಜ-ಭಾಷೆಯೆಂದು ಮರಾಟಿಗೇ ಮನ್ನಣೆಯ ಸ್ಥಾನವೆಂದು ನುಡಿದಿದ್ದರು. 'ಇದು ಮಂತ್ರಿಪದದ ಮೋಹಕ್ಕಾಗಿ' ಎಂದು ಅಂದೆಯೆ ಮಂಗರಾಯ ಭವಿಷ್ಯನುಡಿದಿದ್ದ. ಇಂದು ಆ ಭವಿಷ್ಯವನ್ನು ಪಂಡಿತಪ್ಪನವರು ನಿಜಮಾಡಿತೋರಿಸಲು ಹೊರಟಿದ್ದಾರೆ. ಮಂಗರಾಯನ ಅಭಿನಂದನೆ ಅವರಿಗೆ.

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ,
೬ ಆಣೆಗೆ ಒಂದು ಸೆಟ್ಟು.

೧ ಬ್ಲೇಡಿಗೆ ೬ ಉತ್ತಮ ಕ್ಷೌರ!
೫ ಬ್ಲೇಡಿಗೆ ೬ ಆಣೆ.

ಫ್ರಾನ್ಸ್ ದೇಶದ ಪ್ರಾಣಸ್ವರೂಪ!

ನಿವೃತ್ತ ಮುಖ್ಯಮಂತ್ರಿ ಪಾಲ್ ರೆನಾ!

ಜಾರ್ಮನಿಯ 'ತಂತ್ರಿ' ಬರೆದುದು.

★

ರೆನಾ ಅವರಿಗೊಂದು ವಿಶಿಷ್ಟವಾದ ವ್ಯಕ್ತಿತ್ವವನ್ನು ತಂದುಕೊಟ್ಟುದು, ಅವರ ಪ್ರಪಂಚ-ಪರ್ಯಟನದ ವಿಶಾಲ ಅನುಭವ. ಇಂಗ್ಲೆಂಡಿಗೆ ಚರ್ಚಿಲರಿರುವಂತೆ ಫ್ರಾನ್ಸಿಗೆ ರೆನಾ ಇದ್ದರು. ಆದರೆ ಯಾವಾಗಲೂ ವರ್ತಮಾನಕಾಲವು ಮಿಕ್ಕೆಲ್ಲ ಶಕ್ತಿಗಳಿಗಿಂತ ಭೌತಿಕಶಕ್ತಿಗೇ ತಲೆಬಾಗಿಸಹಚ್ಚುವುದು. ರೆನಾ ಅವರಂತಹ ಕುಶಲಮತಿಗಳೂ ಆ ಶಕ್ತಿಗೆ ತಲೆಬಾಗಿಸಿದರು.

★

ಫ್ರಾನ್ಸ್‌ದೇಶದ ನಿವೃತ್ತಮಂತ್ರಿ ರೆನಾ

★

ಕೆಲವು ದಿನಗಳಿಗೆ ಹಿಂದೆ ಎಂದರೆ ಫ್ರಾನ್ಸ್ ಜರ್ಮನಿ ಒಪ್ಪಂದವಾಗುವುದಕ್ಕೆ ಮುಂಚೆ, ಫ್ರಾನ್ಸದ ಬಗ್ಗೆ ಅತ್ಯಂತ ಕಳವಳದ ಮಾತುಗಳು ಕೇಳಬರುತ್ತಿದ್ದುವು. ಫ್ರಾನ್ಸಿನಿಂದ ಅಮೇರಿಕೆಯವರಿಗೆ ಕಳಿಸಿದ ಕಳವಳದ ಕೂಗು, ನಮ್ಮ ಕರುಳುಗಳನ್ನು ಕೂಡ ಎತ್ತೆತ್ತಿ ಹಾಕುತ್ತಿದ್ದುವು. ರೇನಾ ಅವರು ಫ್ರಾನ್ಸದ ಪೂರ್ವದ ವೈಭವವನ್ನು ನೆನಹಿಗೆ ತಂದು, ಮುಂದೆ ಬರಬಹುದಾದ ಒಪ್ಪಂದದ ಅಸಹ್ಯವೇದನೆಯನ್ನು ಕಂಡುಕೊಂಡು, ಕೊನೆಯ ಮಾತಾಗಿ ಅಮೇರಿಕೆಯ ಸಹಾಯವನ್ನು ಕೇಳಿದರು. ಅವರು ಅಪೇಕ್ಷಿಸಿದ ಸಹಾಯ ಆ ಅವಧಿಯಲ್ಲಿ ಸಿಕ್ಕಲಿಲ್ಲ. ಕೊನೆಗೆ ಮಂತ್ರಿಪದದಿಂದ ರೇನಾ ಅವರು ರಾಜೀನಾಮೆ ಕೊಡಬೇಕಾಯಿತು.

ಫ್ರಾನ್ಸದಲ್ಲಿಯ ಬೆಸೆಸ್ ಆಲ್ಪ್ಸ್ ಭಾಗದಲ್ಲಿಯ ಬಾರೆಸೆಲೋನೆ ಎಂಬ ಊರಲ್ಲಿ ೧೮೭೮ನೆಯ ಇಸವಿಯ ಅಕ್ಟೋಬರ್ ೧೫ನೆಯ ತಾರೀಖಿಗೆ ರೇನಾ ಅವರ ಜನ್ಮವಾಯಿತು. ಚಿಕ್ಕಂದಿನಲ್ಲಿಯೆ ಇವರು ಅಜ್ಜನ ಕೂಡ ಮೆಕ್ಸಿಕೋಕ್ಕೆ ಹೋಗಿದ್ದನು. ಅಲ್ಲಿ ಇವರ ಅಜ್ಜನು ತನ್ನ ದೈವಪರೀಕ್ಷೆಯನ್ನು ಮಾಡಲು ಹೋಗಿದ್ದನಂತೆ! ಆ ದೈವ-ಪರೀಕ್ಷೆಯಾಯಿತು; ಮುಂದೆ ಸ್ವಲ್ಪದಿನಗಳಲ್ಲಿಯೇ ಅವನಿಗೆ ಭಾಗ್ಯಲಕ್ಷ್ಮಿಯು ಒಲಿದು, ಆ ಸಂಪತ್ತಿನಿಂದ ಸಹಿತನಾಗಿ ಮಾತೃ-ಭೂಮಿಗೆ ಬಂದನು. ರೇನಾ ಅವರ ತಂದೆಯಾದರೋ ಒಕ್ಕಲತನದಲ್ಲಿ ನಿಷ್ಣಾತರು. ಆ ನಿಷ್ಣಾತತೆಯ ಮೂಲದ ಮೂಲಕವಾಗಿಯೆ ಮುಂದೆ ಬೆಸೆಸ್ ಅಲ್ಪ್ಸ್ ಭಾಗದಿಂದ ಅವರು ಕೌನ್ಸಿಲರಾಗಿ ಆರಿಸಿ ಬಂದರಂತೆ.

ರೇನಾ ಅವರ ಶಿಕ್ಷಣಕ್ರಮವು ಪ್ಯಾರಿಸಿನಲ್ಲಿಯ ಒಂದು ಶಾಲೆಯಲ್ಲಿ ಪ್ರಾರಂಭವಾಯಿತು. ಮತ್ತು ಬಿ. ಎ. ಪದವಿಗೆ ಸಮಾನವಾದ ಲಾಯಸೆನ್ಸ ಪದವಿಯನ್ನವರು ಸಂಪಾದಿಸಿದರು. ಆನಂತರ ಪ್ಯಾರಿಸ್ ವಿಶ್ವವಿದ್ಯಾನಿಲಯದಲ್ಲಿ ಕಾಯಿದೆಯ ಅಭ್ಯಾಸವನ್ನು ಮೊದಲು ಮಾಡಿದರು; ಕಾಯಿದೆಯಲ್ಲಿ ಒಳ್ಳೆಯ ನಿಷ್ಣಾತರೆನಿಸಿಕೊಂಡರು. ಅಲ್ಲದೆ ಇವರಿಗೆ "ಡಾಕ್ಟರ್ ಆಫ್ ಲಾ" ಎಂಬ ಪದವಿಯೂ ಸಿಕ್ಕಿತು. ಕೆಲವು ದಿನಗಳವರೆಗೆ ಒಬ್ಬ ಸಾಲಿಸೀಟರನಲ್ಲಿ ಉಮೇದುವಾರಿಕೆಯನ್ನು ಮಾಡಿದರು; ಆದರೆ ಮುಂದೆ ಜಗತ್ತಿನ ಪ್ರವಾಸವನ್ನು ಕೈಕೊಂಡುದರಿಂದ, ಅದು ಅಲ್ಲಿಯೆ ಉಳಿಯಿತು. ಜಗತ್ತಿನ ಪ್ರವಾಸದಿಂದ ಜಗತ್ತಿನ ಒಳ್ಳೆಯ ಅನುಭವವನ್ನವರು ಸಂಪಾದಿಸಿದರು. ಪ್ರವಾಸದಿಂದ ಅನೇಕ ವಿಷಯ

ಗಳು ಗೊತ್ತಾಗುವುವು. ಆ ಅನುಭವದ ಉಪಯೋಗವನ್ನು ರೇನಾ ಅವರು ಯಥಾಯೋಗ್ಯವಾಗಿ ಮಾಡಿಕೊಳ್ಳುತ್ತಿದ್ದರು.

ಅದೇನೊ, ವಕೀಲಿ ಉದ್ಯೋಗವೂ ಪಾರ್ಲಿಮೆಂಟಿನ ಸದಸ್ಯತ್ವವೂ ಒಂದನ್ನೊಂದು ಹೊಂದಿಕೊಂಡಿರುವಂತೆ ಕಾಣುತ್ತದೆ. ಉಳಿದ ದೇಶಗಳಿಗಿಂತ ಫ್ರಾನ್ಸದಲ್ಲಿ ವಕೀಲಿ ವ್ಯವಸಾಯದವರೇ ಹೆಚ್ಚಾಗಿ ಪಾರ್ಲಿಮೆಂಟನ್ನು ಸೇರುವರು. ಪ್ರತಿಯೊಬ್ಬ ಪ್ರಸಿದ್ಧ ರಾಜಕಾರಣಿಯೂ ತನ್ನ ಮೊದಲ ಜೀವನದಲ್ಲಿ ವಕೀಲಿಯನ್ನು ಮಾಡಿದವನೇ; ಅಥವಾ ವೃತ್ತಪತ್ರ ವ್ಯವಸಾಯದಲ್ಲಿ ತಲೆಹಾಕಿದವನೇ. ಪಾ. ಅ. ನಿ ಕೇ ಯ ಇವನೂ ಬ್ಯಾರಿಸ್ಟರ್ ಇದ್ದನು. ಬ್ರಿಯಾಂಡ್‌ನು ಕಾಯಿದೆಯಲ್ಲಿ ವಿಶಾರದನು. ಸುಪ್ರಸಿದ್ಧರಾದ ಕ್ಲೆಮೆನ್ಸೊ ಇವರಾದರೂ ಮೊದಲು 'ಎಮ್. ಡಿ' ವರೆಗೆ ವೈದ್ಯಕದ ಅಭ್ಯಾಸವನ್ನು ಮಾಡಿದ್ದರೆಂಬುದೇನೋ ನಿಜ; ಆದರೆ ಕೆಲಕಾಲ ಅವರು ವೃತ್ತಪತ್ರದ ವ್ಯವಸಾಯವನ್ನು ಮಾಡಿದರೆಂಬುದನ್ನು ಮರೆಯುವಂತಿಲ್ಲ. ಇಂದಿನ ಸದಸ್ಯರಲ್ಲಿ ಬಹುಶಃ ಎಲ್ಲರೂ ಬ್ಯಾರಿಸ್ಟರರೇ. ಪಾಲ್ ರೇನಾ ಆದರೂ ಒಳ್ಳೆಯ ಬ್ಯಾರಿಸ್ಟರರೆಂಬುದನ್ನು ನಾವು ಬಲ್ಲೆವು. ಇನ್ನೊಂದು ಮೋಜಿನ ಮಾತೆಂದರೆ: ಅವರು ಒಬ್ಬ ಹೆಸರಾದ ಬ್ಯಾರಿಸ್ಟರರ ಅಳಿಯರಾಗಿರುವರಲ್ಲದೆ ತಮ್ಮ ಅಳಿಯನನ್ನಾಗಿ ಕೂಡ ಒಬ್ಬ ಬ್ಯಾರಿಸ್ಟರನನ್ನೇ ಆರಿಸಿದ್ದಾರೆ. ಇವರ ಅಳಿಯನ ಹೆಸರು ರೋಜರ್ ಡೆರನಿಸ್. ಅವನು ಪ್ಯಾಗಿನೋ ವ್ಯೂಹದಲ್ಲಿ ಸೈನಿಕನಂತೆ ಕೆಲಸಮಾಡುತ್ತಿದ್ದಾನೆ. ಫ್ರಾನ್ಸದಲ್ಲಿ ಬ್ಯಾರಿಸ್ಟರರ ಹಾವಳಿ ಬಹಳ ಕಾಣುತ್ತದೆ. ರೇನಾ ಅವರು ಮಾರ್ಚ ೨೧ಕ್ಕೆ ಮುಖ್ಯಪ್ರಧಾನರಾದರು. ಅದೇನು ಯೋಗಾಯೋಗವೋ ತಿಳಿಯದಾಗಿದೆ: ಮೂವತ್ತುನಾಲ್ಕು ಜನ ಸದಸ್ಯರಲ್ಲಿ ಹದಿನಾರು ಜನರು ಬ್ಯಾರಿಸ್ಟರರಿರಬೇಕೇ? ರೇನಾ ಅವರು ಒಳ್ಳೆಯ ವಕ್ತಾರರು; ಕೇಳುವವರ ಮೇಲೆ ಒಮ್ಮೆಲೆ ಪರಿಣಾಮ ಮಾಡುವಂತೆ ಮಾತನಾಡುವವರು. ಅವರ ಮಾತುಗಾರಿಕೆಯ ರೀತಿಯು ಫ್ರಾನ್ಸದವರನ್ನು ಹೋಲದೆ, ಇಂಗ್ಲಿಷ ಪದ್ಧತಿಯನ್ನನುಸರಿಸುತ್ತದೆ. ಮಂತ್ರಿಮಂಡಲದಲ್ಲಿಯ ಇವರ ಭಾಷಣಗಳೆಂದರೆ ಸ್ಪಷ್ಟವಾದುವೂ ತುಂಬ ಮಾಹಿತಿಯುಳ್ಳುವುಗಳೂ ಇರುತ್ತಿದ್ದುವು. ಉತ್ತರಕೊಡುವ ಕಾಲಕ್ಕಾದರೂ ಪ್ರತಿಯೊಂದು ಶಬ್ದವೂ ಇವರ ತೀಕ್ಷ್ಣವಾದ ಜಾಣ್ಮೆಯನ್ನು ತೋರುತ್ತಿದ್ದಿತು. ಇವರ ಮಾತನ್ನು ಕೇಳುವುದೆಂದರೆ ಸದಸ್ಯರಿಗೊಂದು ಸವಿಯೂಟವಿದ್ದಂತೆ.

ಈ ಎಲ್ಲ ಅನುಭವವು ರೇನಾ ಅವರಿಗೆ ಜಗತ್ತಿನ ಪ್ರವಾಸದಿಂದಲೇ ಬಂದಿರಬೇಕು. ಪ್ರವಾಸವನ್ನು ಮುಗಿಸಿಕೊಂಡು ಬಂದು ತಮ್ಮ ವಕೀಲಿಯ ಉದ್ಯೋಗವನ್ನವರು ಪ್ರಾರಂಭಮಾಡಿದರು. ಮುಂದೆ ಸ್ವಲ್ಪ ದಿವಸಗಳಲ್ಲಿಯೇ ಕೂಡಲಿದ್ದ ಬ್ಯಾರಿಸ್ಟರರ ಪರಿಷತ್ತಿಗೆ ಕಾರ್ಯದರ್ಶಿಯಾಗುವ ಪ್ರಸಂಗವು—ವಯಸ್ಸು ಚಿಕ್ಕದಾದರೂ—ರೇನಾ ಅವರಿಗೆ ಬಂತು. ೧೯೧೨ನೆಯ ಇಸ್ವಿಯಲ್ಲಿ ನಡೆದ ಪ್ರಸಿದ್ಧವಾದ "ರೋನೊ" ಗ್ಯಾಂಗ್ ಖಟ್ಲೆಯಲ್ಲಿಯ ವಕೀಲಿಪತ್ರವು ರೇನಾ ಅವರಿಗೇ ಸಿಕ್ಕಿತ್ತು. ಫ್ರೆಂಚ್ ವಕೀಲರಲ್ಲಿ ಅಗ್ರಗಣ್ಯನೆನಿಸಿದ "ಹೆನ್ರಿ ರಾಬರ್ಟ"ನೇ ರೇನಾ ಅವರಿಗೆ ಹೆಣ್ಣು ಕೊಟ್ಟ ಮಾವ. ರೇನಾ ಅವರು ರಾಜಕಾರಣದಲ್ಲಿ ಪ್ರವೇಶಮಾಡುವುದಕ್ಕೆ ಮುನ್ನವೇ ೧೯೧೪ರ ಮಹಾಯುದ್ಧವು ಪ್ರಾರಂಭವಾಗಿತ್ತು. ೧೯೧೮ರಲ್ಲಿ ಫ್ರೆಂಚ್‌ಸೇನಾಪತಿಯಾದ "ಫ್ಲೋಕ" ಇವರೊಂದಿಗೆ ಸೈಬೇರಿಯಾ ಭಾಗದಲ್ಲಿ ರೇನಾ ಅವರು ತುಂಬ ಕೌಶಲದ ಕಾರ್ಯವನ್ನು ಮಾಡಿದರು. ಅವರ ಸಂಗಡ ಮುಂದೆ "ವ್ಲಾಡಿವೋಸ್ಟಾಕ"ದ ವರೆಗೆ ಪ್ರವಾಸ ಬೆಳಸಿದರು. ಈ ಸಂಗತಿಯು ರತಿಯದ ರಾಜ್ಯಕ್ರಾಂತಿಗಿಂತ ಮೊದಲೇ ನಡೆದುದು. ಮುಂದೆ ಜಪಾನ್ ಅಮೇರಿಕಾ ಮಾರ್ಗವಾಗಿ ಫ್ರಾನ್ಸಿಗೆ ಮರಳಿಬಂದರು.

೧೯೩೦ರಲ್ಲಿ "ಟಾರ್ಡಿಯೋ" ಮಂತ್ರಿಮಂಡಲದ ಅರ್ಥಸಚಿವರೆಂದು ರೇನಾ ಅವರು ನೇಮಿಸಲ್ಪಟ್ಟರು. ೧೯೩೧—೩೨ನೆಯ ಇಸವಿಯಲ್ಲಿ "ಲೋವ್ಹಲ್" ಇವರ ಕ್ಯಾಬಿನೆಟ್ಟಿನಲ್ಲಿ ವಸಾಹತಿನ ಮಂತ್ರಿಗಳೆಂದು ಇವರು ಕಾರ್ಯಮಾಡಿದರು. ಆ ಕಾಲಕ್ಕೆ ಫ್ರಾನ್ಸವು ಅಂತರರಾಷ್ಟ್ರೀಯ ವಸಾಹತುಗಳ ಪರವಾಗಿ ಒಂದು ದೊಡ್ಡ ಪ್ರದರ್ಶನ ನೆರೆಯಿಸುವ ತಯಾರಿಯಲ್ಲಿತ್ತು. ಆ ವೇಳೆಯಲ್ಲಿ ರೇನಾ ಅವರು ಮಾಡಿದ ಕಾರ್ಯವನ್ನು ಯಾರೂ ಎಂದೂ ಮರೆಯುವಂತಿಲ್ಲ. ೧೯೩೧ರ ಜುಲೈ ತಿಂಗಳಲ್ಲಿ ನಡೆದ ಮಾತು: ಪ್ರದರ್ಶನದ ತಯಾರಿಯು ತಂಬ ಭರದಿಂದ ಸಾಗಿದೆ; ಆ ವೇಳೆಯಲ್ಲಿ 'ಫ್ರ್ಯಾಂಕೋ ಬ್ರಿಟನ್ ಅಸೋಸಿಯೇಶನ್' ಪರವಾಗಿ ಮಿ. ರಡ್ಯಾರ್ಡ್ ಕಿಪ್ಲಿಂಗ್ ಅವರು ಪಾರಿಸಕ್ಕೆ ಭೆಟ್ಟಿ ಕೊಟ್ಟರು. ಅವರ ಸನ್ಮಾನಾರ್ಥವಾಗಿ ಏರ್ಪಡಿಸಿದ 'ಸವಿಯೂಟದ ಕಾಲಕ್ಕೆ ಮಾಡಿದ' ಪಾಲ್ ರೇನಾ ಅವರ ಭಾಷಣವು ವಿದ್ವತ್‌ಪ್ರಪೂರ್ಣವಾದುದಾಗಿದ್ದಿತು. ಗ್ರೇಟ್‌ಬ್ರಿಟನ್ ಮತ್ತು ಬ್ರಿಟನಿನಲ್ಲಿಯ ಸಂಸ್ಥೆಗಳ ಬಗೆಗೆ ಅವರಿಗೆ ಸಾಕಷ್ಟು ಆದರವಿದ್ದರೂ, ಗ್ರೇಟಬ್ರಿಟನಿನವರು, ಪ್ರದರ್ಶನದಲ್ಲಿ ಅಂಗಡಿಯಿಡಲು ಒಲ್ಲೆವೆಂದಕಾರಣ, ಕಿಪ್ಲಿಂಗ್ ಅವರ ಸಮಕ್ಷಮವೇ ರೇನಾ ಅವರು ಖಂಡಿತವಾದ ಟೀಕೆಯನ್ನು ಮಾಡಿದರು. ಅದರೊಂದಿಗೆಯೇ ತಮ್ಮ ಪ್ರದರ್ಶನದ ಕಾರ್ಯದ ಸಲುವಾಗಿ ರಾಜರು ತಮಗೆ "ಗ್ರ್ಯಾಂಡ್ ಕ್ರಾಸ್ ಆಫ್ ರಾಯಲ್‌ವ್ಹಿಕ್ಟೋರಿಯನ್ ಆರ್ಡರ್" ಎಂದು ಬಿರುದು ಕೊಟ್ಟದ್ದಕ್ಕಾಗಿ ಅವರ ಆಭಾರಮನ್ನಿಸಿದರು.

ಕಳೆದೈದು ವರ್ಷಗಳಿಂದ ರೇನಾ ಅವರ ಹೆಸರು ಹೆಚ್ಚಾಗಿ ಕೇಳಬರುತ್ತಿದ್ದರೂ, ಅವರು ಅಲ್ಲಿಯ ಯಾವುದೊಂದು ಪಕ್ಷಕ್ಕೆ ಅಂಟಿಕೊಂಡಿರಲಿಲ್ಲ. ಅವರು ಕೇವಲ ಸ್ವತಂತ್ರವೃತ್ತಿಯವರು. ಫ್ರಾನ್ಸದ ನಾಣ್ಯವಾದ ಫ್ರ್ಯಾಂಕಿನ ಬೆಲೆಯ ಬಗೆಗೆ ಅನೇಕ ಜನರು ವಿರೋಧಿಸಿದರೂ, ಬದಲಾವಣೆಯಾಗಲೇಬೇಕೆಂದು ಮಂಡಿಸಿದರು. ಕೊನೆಗೆ 'ಬ್ಲೂಮ್' ಅವರ ಮಂತ್ರಿಮಂಡಲದ ಸಹಾಯದಿಂದ ಫ್ರ್ಯಾಂಕಿನ ಬೆಲೆಯು ಬದಲುಮಾಡಲ್ಪಟ್ಟಿತು. ಸಾಮಾನ್ಯವಾಗಿ ರೇನಾ ಅವರನ್ನು ಚರ್ಚಿಲ್ಲರಿಗೆ ಹೋಲಿಸುವುದು ಹೆಚ್ಚಾಗಿ ಕಂಡುಬರುತ್ತದೆ. ಅದು ಸರಿಯೆಂದೂ ತೋರುವುದು. ಚರ್ಚಿಲ್‌ರಂತೆ ರೇನಾ ಅವರಾದರೂ ತಮ್ಮ ರಾಷ್ಟ್ರಕ್ಕೆ ಧಕ್ಕೆ ತಗಲಬಹುದೆಂಬ

ಎಚ್ಚರಿಕೆಯನ್ನು ಆಗಾಗ ಕೊಡುತ್ತಲೆ ಬಂದಿದ್ದರು. "ಹೇರ್ ಲೋವ್ಹೆಲ್" ಒಪ್ಪಂದವು ಹಾನಿಕಾರಕವಿದೆಯೆಂದು ರೇನಾ ಅವರಿಗೆ ತಿಳಿದಕೂಡಲೆ, ತನಗೆ ಸ್ವತಃ ಜಡ್ಡಾಗಿದ್ದರೂ ಪಾರ್ಲಿಮೆಂಟಿನವರೆಗೆ ಬಂದು, ತುಂಬ ರಸವತ್ತಾದ ಭಾಷಣವನ್ನು ಮಾಡಿದರು.

ರೇನಾ ಎಂದರೆ ಫ್ರಾನ್ಸದ ಧೈರ್ಯವೆಂದು ಹೇಳಬಹುದು. ಆದರೆ ಆ ಧೈರ್ಯವು ಕಾರಣಾಂತರದಿಂದ ಕುಗ್ಗಿದಂತೆಯಾಯಿತು. ಯಾವ ವೇಳೆಯಲ್ಲಿ ಮಿತ್ರಪಕ್ಷದವರು ಯೋಗ್ಯ ಉಪಾಯ ಕೈಕೊಳ್ಳಬೇಕಾಗಿದ್ದಿತೋ ಆ ವೇಳೆಯಲ್ಲಿ ಅವರು ವಿಲಂಬ ಮಾಡಿದುದರಿಂದ ಕಾರ್ಯವೆಲ್ಲ ಕೆಂದಿಹೋಯಿತು. ರೇನಾ ಅವರು ಒಮ್ಮೆ ಭಾಷಣ ಮಾಡುತ್ತ ಹೀಗೆಂದರು: "ತಡೆದು ಉಪಯೋಗವಿಲ್ಲ; ಈ ಪರಿಸ್ಥಿತಿಯನ್ನು ಅನುಸರಿಸಿ ಫ್ರಾನ್ಸಿನಲ್ಲಿಯ ಪ್ರತಿಯೊಬ್ಬ ನಾಗರಿಕನೂ ದೇಶಭಕ್ತನಾಗಬೇಕು. ಸಾಧ್ಯವಿದ್ದ ಎಲ್ಲ ಸ್ವಾರ್ಥತ್ಯಾಗವನ್ನೂ ಮಾಡಬೇಕು."

ದಲಾದಿಯರ್ ಮಂತ್ರಿಮಂಡಲದ ನಂತರ ಬಂದುದೇ ರೇನಾ ಅವರ ಮಂತ್ರಿಮಂಡಲ. ಇದು ಲೋಕಸತ್ತಾತ್ಮಕ ಪದ್ಧತಿಯಲ್ಲಿಯ ಒಂದುನೂರಾ ಐದನೆಯ ಮಂತ್ರಿಮಂಡಲವು. ಕಳೆದ ಎಪ್ಪತ್ತು ವರ್ಷಗಳಲ್ಲಿ ಈಬಗೆಯ ಸಂಯುಕ್ತಮಂತ್ರಿಮಂಡಲವು ಮೂರನೆಯದಿದು. ಅನೇಕ ಮಂತ್ರಿಮಂಡಲಗಳು ಬದಲಾದರೂ ಮೂಲಭೂತವಾದ ತತ್ತ್ವವು ಬದಲಾಗಿಲ್ಲ. ಫ್ರಾನ್ಸದವರಾಗಲಿ, ಇಂಗ್ಲಂಡಿನವರಾಗಲಿ, ತಮ್ಮ ಮಂತ್ರಿಮಂಡಲದವರು ಮಾಡುವ ಅಪರಾಧಗಳನ್ನು ನುಂಗಿಕೊಳ್ಳಲು ಸದಾ ಸಿದ್ಧರಿರುತ್ತಾರೆ. ರೇನಾ ಅವರು ಮುಖ್ಯಪ್ರಧಾನರಾದ ಕೂಡಲೆ ಪರರಾಷ್ಟ್ರೀಯ ಖಾತೆಯನ್ನು ತಾವು ತೆಗೆದುಕೊಂಡು, ದಲಾದಿಯರರ ಮೇಲೆ ಯುದ್ಧ ಮತ್ತು ಸಂರಕ್ಷಣೆಯ ಹೊಣೆಯನ್ನು ಹೊರಸಿದರು. ಇಲ್ಲಿಯೇ ಅನರ್ಥಕ್ಕೆ ಪ್ರಾರಂಭವಾಯಿತು. ಮುಂದೆ ಆಕಸ್ಮಿಕ ಘಟನೆಗಳ ಮೂಲಕ ಯುದ್ಧರಂಗದ ರೂಪವು ಬದಲಾಗಿ, ಭಿನ್ನಾಭಿಪ್ರಾಯಗಳು ಬರಹತ್ತಿದುವು. ಫ್ರಾನ್ಸ್ ದೇಶವು ಬದುಕಬೇಕಾದರೆ ತನ್ನ ಸರ್ವಸ್ವವನ್ನೂ ತ್ಯಾಗಮಾಡಬೇಕೆಂದೂ, ಆ ತ್ಯಾಗಬುದ್ಧಿಯಿಂದಲೆ ತಮ್ಮನ್ನು ರಕ್ಷಿಸಿಕೊಳ್ಳಬೇಕೆಂದೂ ಅವರ ಅಭಿಮತ. ಯುದ್ಧದ ದಿನಗಳಲ್ಲಿ ಒಂದು ದಿನ—ಅದೇಕೆ ಒಂದು ಗಂಟೆಕಾಲ—ವಿಲಂಬವಾದರೂ ಅನೇಕ ದುರ್ಘಟನೆಗಳು ಉದ್ಭೂತವಾಗುವುವು. ಅವುಗಳ ಮೂಲಕ ತಾಳ್ಮೆಯಿಲ್ಲದ ಸಾಮಾನ್ಯ ಜನತೆಯು ಕಂಗೆಡುವುದು. ಕಂಗೆಟ್ಟ ಜನತೆಯನ್ನು ಅಂಕಿತದಲ್ಲಿಡುವುದೂ ತುಂಬ ಕಠಿನವಾಗುವುದು. ಈ ಸನ್ನಿವೇಶಗಳ ಮೂಲಕ ರೇನಾ ಮಂತ್ರಿಮಂಡಲವು ರಾಜೀನಾಮೆ ಕೊಡಬೇಕಾಯಿತು.

ಇವರ ನಂತರ ಬಂದ 'ಪೆಟಾನ್' ಮಂತ್ರಿಮಂಡಲವು ಜರ್ಮನಿಯ ಸಂಗಡ ಒಪ್ಪಂದ ಮಾಡಿಕೊಂಡದ್ದು ಸರ್ವಶ್ರುತವಾಗಿದೆ. ಸೋಲು-ಗೆಲವಿನ ಮೇಲೆ ಯಾವುದೊಂದು ವ್ಯಕ್ತಿಯ ಬೆಲೆಯನ್ನು ಕಟ್ಟುವುದು ಯೋಗ್ಯವಲ್ಲ. ಕಾರ್ಯಶಕ್ತಿಯೇ ಆವರವರ ಯೋಗ್ಯವಾದ ಒರೆಗಲ್ಲು. ಅಚಲವಾದ ಶ್ರದ್ಧೆಯಿದ್ದ ದೇಶಭಕ್ತರಾದ ರೇನಾ ಅವರ ಬೆಲೆಯನ್ನು, ಅವರು ಹಿಂದೆ ಮಾಡಿದ ಕಾರ್ಯದಿಂದಲೇ ಅಳೆಯಬೇಕಲ್ಲವೇ ?

ಅಮಾವಾಸ್ಯೆ

"ಶ್ರೀಹರ್ಷ" ಬೆಂಗಳೂರು

೧

ಗಗನದೇವಿ ಹಾಲ ಸುರಿಯೆ
ಬುವಿಯ ಸುತರ ತಾನೆ ಪೊರೆಯೆ
ಬಾನೊಳಿಟ್ಟ ರಜತಪಾತ್ರೆ
ಮಾಯವಾಗಿದೆ;
ತಿರೆಯ ಪೋಷಿಸಿದ್ದ ಮಂತ್ರ
ಕಾಣದಾಗಿದೆ!—

೨

ಜಗದಿ ಜನಿಸಿ ತಮಸ್ಸೆಲ್ಲ
ಮೇಲಕೇರಿ ಬಾನನೆಲ್ಲ
ನುಂಗಿದಂತೆ ಕರಿಯ ಛಾಯೆ
ತುಂಬಿಹೋಗಿದೆ;
ಅಂಧಕಾರದಸುರನಾಯೆ
ಜಂಬಹೊಂದಿದೆ!

೩

ಅಮಿತಜ್ಯೋತಿ ಚಂದಿರನೆ,
ಅಮಲಕಾಂತಿಸುಂದರನೆ,
ಕೋಟಿಭದ್ರವಾಗಿ ಹೊಳೆವ
ಮಂತ್ರನಾದಿಯೆ;
ತಾರೆಯಾಗಿ ಹುಸಿಯ ನಗುವ
ತಂತ್ರವಾದಿಯೆ!

೪

ಚಂದ್ರನಿರದ ರಾತ್ರಿಯಲ್ಲಿ
ತಾರೆಯಿರಲು ವ್ಯೋಮದಲ್ಲಿ
ಪ್ರಣಯಿಯೊಲುಮೆ ತವಕಗೊಳದೆ
ಶೂನ್ಯವಾಗಿದೆ ;
ಚೋಕಗಮುವೆ ತೊಡಕೆಇರದೆ
ಮಾನ್ಯವಾಗಿದೆ!

(೧೭೦ ನೆಯ ಪುಟದಿಂದ ಮುಂದುವರಿದುದು.)

ಮೂಲವಾಗಿಯೆ ಅವರು ಅನೇಕವಿಧದ ತೊಂದರೆಗೆ ಗುರಿಯಾಗುತ್ತಲಿದ್ದಾರೆ. ಹಲವು ಜನರ ಹಾನಿಗೆ ಒಂದೆಒಂದು ಸಾಮಾನ್ಯಕಾರಣವು ಕಾರಣವಾಗುತ್ತಲಿದ್ದರೆ, ಆಗ ಆ ಹಲವರು ಒಂದೆಡೆ ಸೇರಿ ಸಮೂಹ-ಗೊಂಡು ನಿಂತು, ಹಾನಿಯಾಗದಂತೆ ಪ್ರಯತ್ನಿಸಬೇಕಾಗುತ್ತದೆ. ಆ ಸಾಮೂಹಿಕ ಪ್ರಯತ್ನದ ಮೂಲಕ ಕಷ್ಟ-ನಷ್ಟಗಳನ್ನು ನೀಗಬೇಕಾಗುತ್ತದೆ.

ಕರ್ನಾಟಕದ ರಾಜಕೀಯ ಪರಿಸ್ಥಿತಿಯ ವೈಪರೀತ್ಯದ ಮೂಲಕ ಇಂದು ಕನ್ನಡಿಗರು ಇಮ್ಮಡಿ ಮುಮ್ಮಡಿ ಗುಲಾಮರಾಗಿ ಬಾಳಬೇಕಾಗಿದೆ. ಸರಕಾರದಲ್ಲಿ ಬಹುಮತದ ಬೆಂಬಲವಿಲ್ಲ; ಪೇಟೆಗಳಲ್ಲಿಯ ವ್ಯಾಪಾರ ಇವರ ಕೈಯಲ್ಲಿಲ್ಲ; ಆಡಳಿತದಲ್ಲಿ ಹೊಣೆಗಾರಿಕೆಯ ಅಧಿಕಾರಗಳು ಸಾಕಷ್ಟುಸಂಖ್ಯೆಯಲ್ಲಿ ಸಿಕ್ಕುವುದಿಲ್ಲ. ತಾವು ದುಡಿದು ಬೆವರು ಹರಿಸಿ ಸಂಪಾದಿಸಿದ ಸಂಪತ್ತು ಯಾರ ಯಾರ ಬಾಯಲ್ಲಿಯೋ ಬೀಳುತ್ತಲಿದೆ. ನಾಡಿನಲ್ಲಿ ಆರ್ಥಿಕಸ್ವಾಸ್ಥ್ಯವಿರದುದರಿಂದ, ಸಮಾಜದಲ್ಲಿ ಸಂಘಟನೆಯಿಲ್ಲದಂತೆಯಾಗಿದೆ. ಸಂಘಟನೆ ಮಾಡಬೇಕೆಂದು ಪ್ರಯತ್ನ ಪಡುವವರಿಗೆ ಜನತೆಯ ಅಜ್ಞಾನ ತಡೆಯೊಡ್ಡುತ್ತಲಿದೆ. ಯಾವ ಕ್ಷೇತ್ರದಲ್ಲಿಯೂ ಕನ್ನಡಿಗರಿಗೆ ಸ್ವಾಯತ್ತತೆ ಇರದುದರಿಂದ ಜನರಲ್ಲಿ ಜ್ಞಾನಪ್ರಸಾರಮಾಡಲು ತಡೆಯಾಗುತ್ತಲಿದೆ. ಇಂತಹ ಸಂದರ್ಭದಲ್ಲಿ ನಮಗೆ ತಾರಕಸಾಧನವೆಂದು ತೋರುವುದು ಕನ್ನಡ ನಾಡಿನ ಅಭಿಮಾನ ಒಂದೇ ಒಂದು. ಕನ್ನಡಶಾರದೆಯ ವೀಣೆಯ ಇನಿದನಿಯೆ ನಮ್ಮೆಲ್ಲರನ್ನು ಒಂದುಗೂಡಿಸಬೇಕು. ಕನ್ನಡನುಡಿ-ತಾಯಿಯೆ ನಮ್ಮಲ್ಲಿ ಬಂಧುಭಾವನೆಯನ್ನು ಜಾಗೃತಿಗೊಳಿಸಬೇಕು. 'ನಾವೆಲ್ಲ ಕನ್ನಡಿಗರು' ಎಂಬ ಭಾವನೆ ಎಲ್ಲರೆದೆಯಲ್ಲಿ ನೆಲೆಗೊಂಡು ನಿಂತಾಗಲೆ ಕರ್ನಾಟಕಕ್ಕೂ ಕನ್ನಡಿಗರಿಗೂ ಉಳಿಗಾಲವಿದೆ. ಆ ಭಾವನೆ ಬಲಿತು ನಾವೆಲ್ಲ ಒಂದಾದರೆ, ಈಗ ಕಾಡುವವರೆಲ್ಲ ಕೊಂಡಾಡುತ್ತ ಬರುವುದು ಖಂಡಿತವಾದ ಮಾತು. ಲೋಕದ ಸ್ವಭಾವವನ್ನರಿತ ನಮ್ಮ ದಾಸರೊಬ್ಬರು:

" ಶಕ್ತನಾದರೆ ನೆಂಟರೆಲ್ಲ ಹಿತರು !
ಅಶಕ್ತನಾದರೆ ಆಪ್ತಜನರೆ ವೈರಿಗಳು ! "

ಎಂದು ನೈಸರ್ಗಿಕಸತ್ಯವೊಂದನ್ನು ಸ್ವಾಭಾವಿಕ ಉದಾಹರಣೆಗಳೊಂದಿಗೆ ಸಾರಿಸಾರಿ ಹೇಳಿದ್ದಾರೆ. ಕನ್ನಡಿಗನು ಶಕ್ತನಾಗುವುದಕ್ಕೆ ಅವನಿಗೆ ಕರ್ನಾಟಕದ ಅಭಿಮಾನಬೇಕು. ಕನ್ನಡಿಗನೆಂದು ಕರೆಯಿಸಿಕೊಳ್ಳುವುದಕ್ಕೆ ಅವನು ಹೆಮ್ಮೆ ಪಡಬೇಕು.

ಕೃತಜ್ಞತೆ

ಈ ಸಂಚಿಕೆಯಲ್ಲಿ ಪ್ರಕಟವಾದ ಕ. ಸಾ. ಪರಿಷತ್ತಿನ ಬೆಳ್ಳಿಯ ಹಬ್ಬದ ವರದಿಯಲ್ಲಿ ಪ್ರಕಟಿಸಿದ ಪಡಿಯಚ್ಚುಗಳಿಗಾಗಿ ಮೂಲ-ಚಿತ್ರಗಳನ್ನು ಒದಗಿಸಿಕೊಟ್ಟ ಶ್ರೀಮಾನ್ ಎಸ್. ಎಸ್. ಕಟ್ಟಿ ಫೋಟೊ ಆರ್ಟಿಸ್ಟ್ ಬೆಳಗಾಂವಿ ಅವರಿಗೆ ನಮ್ಮ ಕೃತಜ್ಞತೆಯ ವಂದನೆಗಳು.

—ಸಂಪಾದಕರು.



(ಸಂಪಾದಕ ಮಂಡಲಿಯಿಂದ ಸ್ವೀಕೃತವಾದ ಲೇಖನಗಳಿವು.)

ಇಜ್ಜೋಡಿ (ಸಣ್ಣಕತೆ)
ಶ್ರೀ. ಸಿ. ರಂಗನಾಥರಾವ್, ಬೆಂಗಳೂರು
ಬೆಳಕು (ಕವನ)
ಶ್ರೀ. ವೆಂಕಪ್ಪಯ್ಯ ಗುರಿಕಾರ್
ವೈದಿಕರ ವೇದಾಂತ (ನಾಟ್ಯಛಟಾ)
ಶ್ರೀ. ಡಿ. ಬಿ. ದೇಸಾಯಿ, ಹುಬ್ಬಳ್ಳಿ
ಕೋಶಾಧ್ಯಕ್ಷ (ನಾಟಕ)
ನನಗೆ ಮಕ್ಕಳೇ ಇಲ್ಲಾ (ಹರಟೆ)
ಶ್ರೀ. ಆರ್. ಬಿ. ದೇಶಪಾಂಡೆ, ರಾಜೂರು
ಜನತೆ ಹಾಳಾದುಂದೇ? (ಕವನ)
ಶ್ರೀ. ಸಿ. ಕೆ. ತಿರುಮಲೇಶ ವಿದ್ವಾನ್
ಇನ್ನೇನು ಮಾಡಲಿ? (ಸಣ್ಣಕತೆ)
ಶ್ರೀ. ತಿರುಮಲೇಶ್ವರ ಅಲಂಗಾರು
ಮಾನವನ ಕೃತ್ರಿಮ ಸಂಧಾನ (ಸಣ್ಣಕತೆ)
ಕವಿ (ಕವನ)
ಶ್ರೀ. ಬಿ. ಎಚ್. ರಂಗರಾವ, ತುಮಕೂರು
ಹುಚ್ಚ ಯಾರು? (ಸಣ್ಣಕತೆ)
ಶ್ರೀ. ಜಯರಾವ್ ದೇಸಾಯಿ, ಗುಲ್‌ಬರ್ಗಾ
ದುಃಖದ ಆಚೆ (ಸಣ್ಣಕತೆ)
ಶ್ರೀ. ಎ. ಎ. ಡಿಸಿಲ್ವಾ, ಬೆಳಗಾಂವಿ
ಗಾಳಿಪಟರೆ (ಕವನ)
ಶ್ರೀ. ಕೃ. ಗು. ಜೇಡರ
ಅವಳ ಪ್ರಣಯ (ಸಣ್ಣಕತೆ)
ಶ್ರೀ. ಕು. ಶಿವರಾಯ, ನೀಲೇಶ್ವರ
ಕನ್ಯಾ ಬಂಧನ (ಕವನ)
ಶ್ರೀ. ನಾರಾಯಣ ಆರ್. ಕಿನ್ನಾಳ, ಗುಲ್‌ಬರ್ಗಾ
ಕಿಡಿ (ಸಣ್ಣಕತೆ)
ಶ್ರೀ. ಪಿ. ಸೀತಾರಾಮಾಧವರಾವ್, ಮದರಾಸ್
ಕನ್ಯಾರ್ಥಿ (ಸಣ್ಣಕತೆ)
ಶ್ರೀ. ಜಿ. ಬಿ. ಶಾಸ್ತ್ರಿ, ಕೊಪ್ಪಳ
ಯಕ್ಷ (ಕವನ)
ಶ್ರೀ. ಬಾಲಪುರಂದರ, ಮೈಸೂರು

ವಾಳಕೇಶ್ವರದ ಕೊಲೆ

(ಸಣ್ಣ ಕತೆ)

ಶ್ರೀ. ವಿಶ್ವನಾಥ ಹೆಗಡೆ, ಮುಂಬಯಿ

★

ನಟಿ ಮದುವೆ ಮಾಡಿಕೊಂಡರೇನಾಯಿತು? ನಟಿಯು ನಟಿಯೇ ಸರಿ! ಕಳ್ಳನ ಕಣ್ಣಿಗೂ ಇಂಗು ಹಚ್ಚಿ, ತನಗೆ ಬೇಕಾದುದನ್ನು ಮಾಡಿಸಿಕ್ಕೊಳ್ಳುವುದು ಸಾಮಾನ್ಯ ಹೆಂಗುಸರಿಗೆ ಸಾಧ್ಯವಿರುವ ಮಾತೇ?

★

" ಹುಚ್ಚ, ಇದಕ್ಕೋಸ್ಕರವೇ ಬಂದವ ನೀನು; ಈಗ ಬೇಡವೆನ್ನುತ್ತೀಯಲ್ಲ, ಇದೇನು ?. . . ."

" ನನ್ನನ್ನು ಹಿಡಿದಾಗ ನಿಜವನ್ನು ಹೇಳಿದೆ. ನ್ಯಾಯಸ್ಥಾನದಲ್ಲೂ ಅದನ್ನೇ ಬಿನ್ನವಿಸಿಕೊಂಡೆ— ಎಲ್ಲಾ ಹೇಗೆ ನಡೆದಿತ್ತೋ ಹಾಗೆ. ಅದರಲ್ಲಿ ಒಂದಿಷ್ಟೂ ಉಪ್ಪುಕಾರವಾಗಲಿ, ಸುಳ್ಳಾಗಲಿ ಇಲ್ಲಿಲ್ಲ. ಫೂಲಚಂದ ಮಾರವಾಡಿಯ ಹೆಂಡತಿ ಹೇಳಿದ್ದು, ಆಕೆ ಮಾಡಿದ್ದು; ನಾನು ಕೇಳಿದ್ದು. ನಾನು ಮಾಡಿದ್ದು; ಎಲ್ಲವನ್ನೂ ಒಂದೂ ಬಿಡದೆ ಹೇಳಿಕೊಂಡೆ. ಆದರೂ ಯಾರಿಗೂ ನಂಬುಗೆ ಹುಟ್ಟಲಿಲ್ಲ. ಈಗಲಾದರೂ 'ಫೂಲಚಂದನ ಕೊಲೆಯಾದದ್ದನ್ನು ಕಣ್ಣಾರೆ ಕಂಡಿದ್ದೇನೆ; ಅದಕ್ಕೂ ನನಗೂ ಏನೂ ಸಂಬಂಧವಿಲ್ಲ; ತಮ್ಮೆಲ್ಲರಂತೆ ನಾನೂ ನಿರಪರಾಧಿ' ಎಂದೇ ಹೇಳುವೆನು.

ಪೂಜ್ಯರೆ, ಬಡಕೈದಿಗಳ ಅರಿಕೆಯನ್ನು ಕೇಳುವವರು ತಾವು. ಎಲ್ಲವೂ ತಮ್ಮ ಕೈಯಲ್ಲಿದೆ. ನಾನು ಬೇಡಿಕೊಳ್ಳುವುದೇನೆಂದರೆ:— ಈ ನನ್ನ ಅರ್ಜಿಯನ್ನು ದಯೆಯಿಟ್ಟು ಓದಿನೋಡಿ, ಯೋಗ್ಯವಾದ ಶೋಧ ನಡೆಯಿಸಿ ವಿಚಾರಣೆ ಮಾಡಬೇಕು. ಈ ಫೂಲಚಂದ ಮಾರವಾಡಿಯ ಹೆಂಡತಿಯ ಸ್ವಭಾವವು ಎಂತಹದ, ಆವಳ ಪೂರ್ವದ ಇತಿಹಾಸವೇನು...ಎಂಬುದು ವಿಶದವಾದರೆ ನಾನು ಅರಿಕೆ ಮಾಡಿಕೊಳ್ಳುತ್ತಿರುವುದು ನಿಜವೆಂದು ತಿಳಿಯುವುದು. ಶಿಕ್ಷೆಗೆ ಗುರಿಯಾದ ನಿರಪರಾಧಿಯನ್ನು ಬದುಕಿಸಿದ ಶ್ರೇಯಸ್ಸು ತಮಗೆ ಬರುವುದು. ನಾನು ಪರದೇಶಿ; ತಮ್ಮಂಥವರಿಗೆ ನಾನು ಏನನ್ನೂ ಕೊಡಲಾರೆ. ನಿರ್ದೋಷಿಯಾದ ಬಡವನನ್ನು ತುರಂಗದಲ್ಲಿ ಕೊಳೆಯಗೊಟ್ಟರೆ ತಮಗೆಂದೂ ಸುಖವಾಗಲಿಕ್ಕಿಲ್ಲ.

ಆ ಗುನ್ಹೆಯಿಂದ ಆವಳೊಬ್ಬಳಿಗಲ್ಲದೆ ಮತ್ತಾರಿಗೂ ಲಾಭವಾಗಿಲ್ಲ. ಇದರಿಂದಾಗಿ, ಮಾರವಾಡಿಯ ಹೆಂಡತಿಯಾಗಿದ್ದ ಆ ಹೆಂಗುಸು ಜನರ ಕಣ್ಣಿಗೆ ದುಃಖಿತೆಯಾದುದಲ್ಲದೆ, ಬಹು ಹಣವುಳ್ಳ ತರುಣ ವಿಧವೆಯಾಗಿ ಪರಿಣಮಿಸಿದಳು. ಇದುವೆ ಈ ನಾಟಕದ ಮುಖ್ಯ ಸೂತ್ರ. ಇದನ್ನು ಹಿಡಿದುಕೊಂಡು ನಡೆದರೆ, ಎಲ್ಲವೂ ತಾನೇ ಬಯಲಾಗುವುದು.

ತಾವು ನೆನಪಿನಲ್ಲಿಡತಕ್ಕ ಸಂಗತಿಯೆಂದರೆ, ನಾನು ಕಳವಿನ ಅಪಾದನೆಯ ವಿಷಯದಲ್ಲಿ ಏನೊಂದನ್ನೂ ಪ್ರತಿಪಾದಿಸುವುದಿಲ್ಲ. ಕಳವು ಮಾಡಿದವನು ನಾನು; ಇದು ನಿಜ. ಆ ಬಗೆಗೆ ಶಿಕ್ಷೆಯಾದುದಕ್ಕೂ ನನಗೆ ಕೆಡುಕೆನಿಸುವುದಿಲ್ಲ. ೩ ವರ್ಷ ಅನುಭೋಗಿಸಿದೆನೆಂದು ಪಶ್ಚಾತ್ತಾಪವಿಲ್ಲ. ಆದರೆ ಕೊಲೆಯಮಟ್ಟಿಗೆ ನಾನು ಸಂಪೂರ್ಣ ನಿರ್ದೋಷಿ!

ಹಿಂದೊಮ್ಮೆ ಇರಾಣಿ ಅಂಗಡಿಯ ದರೋಡೆಯಲ್ಲಿ ನನ್ನ ಭಾಗವಿತ್ತೆಂಬ ಸಂಗತಿಯನ್ನು, ನನ್ನ ವಿಚಾರಣೆ ನಡೆದಾಗ ಹೇಳಲಾಗಿತ್ತು. ಆದುದರಿಂದ ನನ್ನ ಮಾತಿಗೆ ಅಷ್ಟೊಂದು ಬೆಲೆ ಬರಲಿಲ್ಲ. ಆರೋಪಿಯು ಮೊದಲೊಮ್ಮೆ ಗುನ್ಹೆ ಮಾಡಿದವನೆಂದು ತಿಳಿದಿದ್ದರೆ

ಅವನಿಗೆ ನಿಜವಾದ ನ್ಯಾಯ ಸಿಕ್ಕುವುದು ಅಸಂಭವ. ನಾನು ಮಾರವಾಡಿಯ ಮನೆಯಲ್ಲಿ ತುಡುಗುಮಾಡಿದ್ದು ಹೌದು; ಆದರೆ ಕೊಂದವನೂ ನಾನೇ ಎಂದು ಆರೋಪ ಹೊರಿಸಿ ನನಗೆ ಮರಣಾಂತ ತುರಂಗವಾಸದ ಶಿಕ್ಷೆಯನ್ನು ವಿಧಿಸಿದ್ದು ಘೋರ ಅನ್ಯಾಯವಾಗಿದೆಯೆಂದು ಎದೆತಟ್ಟಿ ಹೇಳುತ್ತೇನೆ. ಆ ಕೊಲೆಗೂ ನನಗೂ ಏನೂ ಸಂಬಂಧವಿಲ್ಲ. ಆಹೊತ್ತು ರಾತ್ರಿ ನಡೆದ ಸಂಗತಿಯನ್ನು ಯಥಾವತ್ತಾಗಿ ಹೇಳುವೆನು. ಇದರಲ್ಲಿ ಸುಳ್ಳುಗಿಳ್ಳು ಇದ್ದರೆ ಆ ದೇವರು ನನ್ನನ್ನು ಈಗಿಂದೀಗ ಭಸ್ಮಮಾಡಲಿ!

ಲಾಲಚಿಮಣಿ ಗಿರಣಿಯಲ್ಲಿ ನಾನು ಕೆಲವು ವರ್ಷ ದುಡಿದೆ. ನನಗೂ ನಮ್ಮ ಮುಕಾದಮನಿಗೂ ಒಗ್ಗಲಿಲ್ಲ; ಏನೇನೋ ಕೆಲವು ಮಾತಾಡಿದುದರ ಸಲುವಾಗಿ ಅವನು ನನ್ನನ್ನು ಕೆಲಸದ ಮೇಲಿಂದ ಕೀಳಿಸಿದ. ನಾನು ಕೆಲವು ಕಾಲ ಮೇಸ್ತ್ರಿಯಾಗಿದ್ದುದರಿಂದ ನನಗೆ ಎಷ್ಟೋ ಚಿಕ್ಕಪುಟ್ಟ ಕೈಗೆಲಸ ಮಾಡಲಿಕ್ಕೆ ಬರುತ್ತದೆ. ಹೊಟ್ಟೆಯ ಪಾಡಿಗಾಗಿ ಅಡ್ಡದಾರಿಗೆ ಬೀಳದೆ, ಅಲ್ಲಿ ಇಲ್ಲಿ ದುಡಿದು, ನಾಲ್ಕು ಕಾಸು ಸಂಪಾದಿಸುತ್ತಿದ್ದೆ. ಈ ಮೊದಲೇ ತುರಂಗವಾಸದ ಕಹಿ ನನಗೆ ಗೊತ್ತಾಗಿದ್ದುದರಿಂದ, ಪ್ರಾಮಾಣಿಕತನದಿಂದಲೇ ಸಿಕ್ಕಷ್ಟು ಸಂಪಾದನೆಮಾಡಿ ಬದುಕಬೇಕೆಂದು ಶಕ್ತಿಮೀರಿ ಯತ್ನಿಸುತ್ತಿದ್ದೆ. ಆದರೆ ಹೀಗೆಯೇ ಎಷ್ಟುದಿನವೆಂದು ನೂಕಲಾಗುವುದು? ಈಚೆಗೆ ಏನು ಮಾಡಿದರೂ ಕೆಲಸವೇ ಸಿಕ್ಕುತ್ತಿರಲಿಲ್ಲ. ಹೆಸರಿಗೆ ಮಸಿಬಣ್ಣ ಹತ್ತಿದರೆ ಕೆಲಸಸಿಕ್ಕುವುದು ಅದೆಷ್ಟು ಕಠಿನವೆಂಬುದು ತಮಗೆ ಗೊತ್ತೇ ಇದೆ. ಕೊನೆಗೆ ೮-೧೦ ದಿವಸ ಹಮಾಲಿ ಮಾಡಿ, ಒಟ್ಟು ೧॥ ರೂಪಾಯಿ ದುಡಿದೆ. ಮತ್ತೆ ಕೆಲಸ ಸಿಕ್ಕದೆಹೋಯಿತು. ಇದ್ದ ಹಣವೆಲ್ಲ ನೀರಾಗುತ್ತಾ ಬಂದಿತು. ಅನಂತರ, ವಾಳಕೇಶ್ವರದಲ್ಲಿ ಲಕ್ಷ್ಮೀಪುತ್ರರಿರುವರು—ಅವರಲ್ಲಿ ಎಲ್ಲಾದರೂ ಚಾಕರಿಹುಟ್ಟೀತೆಂಬ ಆಶೆಯಿಂದ, ಆ ಹೊತ್ತು ವಾಳಕೇಶ್ವರಕ್ಕೆ ಹೋದೆ. ಅಲ್ಲಿಯ ಬಂಗಲೆಗಳೇನು; ಮೋಟಾರುಗಳೇನು; ಬಣ್ಣ ಬಣ್ಣದ ಬಟ್ಟೆ-ಬರೆಗಳೇನು; ಠೀವಿಯೇನು! ಇಷ್ಟೆಲ್ಲ ದುಡ್ಡು ಸೂರೆ ಮಾಡುವವರಲ್ಲಿ ಒಬ್ಬಿಬ್ಬರಾದರೂ ನನಗೆ ಕೆಲಸ ಕೊಟ್ಟಾರೆಂಬ ಭರವಸೆಯಿದ್ದಿತು.

ಆ ದಿವಸ ಹೊತ್ತುಮುಳುಗುವವರೆಗೂ ಅತ್ತಿತ್ತ ಸುತ್ತಾಡಿದೆ. ಬಳಿಕ ಒಬ್ಬ ಮಂಗಳೂರಿನವರ ಚಹದ ಅಂಗಡಿಯನ್ನು ಹೊಕ್ಕೆ. ಆಗ ಸುಮಾರು ೮ ಘಂಟೆಯಾಗಿರಬಹುದು. ಒಂದು ಆಣೆಯ ತಿಂಡಿ ತರಿಸಿ ತಿನ್ನುತ್ತ ಕುಳಿತೆ. ಮತ್ತೆರಡು ಮೂರು ಜನರು ಅಲ್ಲಿ ಇದ್ದರು. ಒಬ್ಬ ಮೋಟಾರ್ ಡ್ರೈವರು ಎಂತ ಕಾಣುತಿತ್ತು. ಇನ್ನೊಬ್ಬ ಯಾವುದೋ ಶ್ರೀಮಂತರ ಮನೆಯ ಆಳು ಇರಬಹುದೆಂದು ಯೋಚಿಸಿಕೊಂಡೆ. ಮತ್ತೊಬ್ಬನಾರೋ, ಅವನು ಬಹಳ ಬಥಾಯಿ ಹೊಡೆಯುತ್ತಿದ್ದ. ಅಂಗಡಿಯ ಮಾಲಿಕನೂ ಮಾತುಕತೆಗೆ ಮೆಚ್ಚಿದ್ದವನೆಂದು ಕಾಣುತ್ತದೆ. ಯಾವಾಗಲೂ ಏನಾದರೂ ಹರಟುತ್ತಲೇ ಇರುತ್ತಿದ್ದ. ಆ ಸುದ್ದಿ ಈ ಸುದ್ದಿ ಆಗಿ, ಕೊನೆಗೆ ಮಾತಿನ ಹೊಳೆ ಫೂಲಚಂದ ಮಾರವಾಡಿಯ ಮೇಲೆ ಹರಿಯಿತು. 'ಅವನು ಮುಂಬಯಿಯಲ್ಲಿ ದೊಡ್ಡ ಶ್ರೀಮಂತ—ಅವನ ಹೆಂಡತಿ ಅಂತಹ ಚೆಲುವೆ—ಫೂಲಚಂದ ದಮಡಿ ಬಿಚ್ಚದ ಕಾಸುಗಳ್ಳ—ಅವನು ಬಂಗಲೆಗೇ ಒಂದು ಲಕ್ಷರೂಪಾಯಿ ಹಾಕಿದ್ದು—ಬಂಗಲೆ ಅಂಗಡಿಯಿಂದ ಇಂತಿಷ್ಟು ದೂರ,ರಸ್ತೆಯ ಬಲಗಡೆ ಸ್ವಲ್ಪತಗ್ಗಿನಲ್ಲಿ. ಅವನಲ್ಲಿ 'ಇಂತಿಷ್ಟು ಚಿನ್ನ ಬೆಳ್ಳಿ—ಇಂತಿಷ್ಟು ನಗದು ಹಣ' ಎಂದು ಏನೆಲ್ಲಾ ಹೇಳತೊಡಗಿದ್ದ. ನನಗೆ ಆ ಮಾತು ಕೇಳಬಾರದೆಂದು ಎನಿಸಿದ್ದರಿಂದ ಬೇರೆ ಮಾತೆತ್ತಿದೆ. ಸ್ವಲ್ಪ ಕಾಲವಾಗುವುದರೊಳಗೆ ಪುನಃ ಮಾರವಾಡಿಯ ವಿಷಯಕ್ಕೇ ಹೋಗಿ ಬಿಡುತ್ತಿದ್ದ, ಆ ಮಹಾರಾಯ. ನನ್ನ ದುರದೃಷ್ಟ! 'ಶಾಂತಿನಿವಾಸ! ಅಷ್ಟೆಲ್ಲ ಕಟ್ಟಿಕೊಂಡು ಏನು ಮಾಡ್ತಾನೊ?' ಎಂದು ಶುರುಮಾಡಿಬಿಟ್ಟ, ಆ ಮಾಲಿಕ. 'ಆ ಬಡ್ಡೀಮಗ ಹೇಗೆ ಸಂಪಾದನೆ ಮಾಡಿದನೋ! ಸಣ್ಣ ಪ್ರಾಯದಲ್ಲೇ ಜಿಪುಣನೆಂದು ಲೌಕಿಕನಿತ್ತಂತೆ. ಈಗಂತೂ ಇಳಿವಯಸ್ಸಿನಲ್ಲಿ ಹೇಗಿರಬೇಕೆಂಬುದನ್ನು ನೀವೇ ಊಹಿಸಿರಿ. ತಾನು ಜಿಪುಣನಾಗಿದ್ದರೂ ತನ್ನ ಹಣದಿಂದ ಫಾಯಿದೆ ಪಡೆಯದೆ ಬಿಡಲಿಲ್ಲ!'

'ಏನು ಮಣ್ಣು ಫಾಯಿದೆ! ಅವನಿಗೆಲ್ಲಿಯ ಸುಖ?' ಡ್ರೈವರ್‌ವರು ಹೇಳಿದ.

'ಹೌದು ಎಲ್ಲಿಯದು .. ಒಂದು ಬಿಲ್ಲಿಯನ್ನೂ ಖರ್ಚು ಮಾಡದಿದ್ದವನಿಗೆ?' ಎಂದು ನಾನೆಂದೆ.

'ಹಾಗಲ್ಲ—ಆದರಿಂದ ಅವನಿಗೆ ಅತಿ ಚೆಲುವೆಯಾದ ಹೆಣ್ಣು ಸಿಕ್ಕಿತು—ಅದೇ ಫಾಯಿದೆ. ಆಕೆ ಇವನ ಹಣವನ್ನು ಬೇಕಾದಂತೆ ದುಂದುಮಾಡಿ ಸುಖಪಡಬೇಕೆಂದು ಮಾಡಿಕೊಂಡಿದ್ದಳಂತೆ. ಈಗ ಅವಳಿಗೆ ಒಂದು ಕಾಸೂ ಸಿಕ್ಕುವುದಿಲ್ಲ. ಈಗ ಬುದ್ಧಿ ಬಂದಿದೆ ಅವಳಿಗೆ' ಎಂದು ಮಾಲಿಕನು ಧ್ವನಿಗೂಡಿಸಿದ.

'ಅವಳಾರು? ಅವಳು ಎಲ್ಲಿಯವಳು?' ಎಂದು ಕೇಳಿದೆ. 'ಏನೋ ಒಂದು ಫಿಲಿಮ್ ಕಂಪನಿಯಲ್ಲಿ ನಟಿಯಾಗಿದ್ದಳಂತೆ. ಮಾರವಾಡಿಯು ಕಲಕತ್ತೆಗೆ ಹೋದಾಗ ಅವಳನ್ನು ನೋಡಿ ಮರುಳಾದನಂತೆ. ಬರುವಾಗ ಅವಳನ್ನು ಕರಕೊಂಡು ಬಂದೇಬಿಟ್ಟ! ಯಾರಿಗೆ ಗೊತ್ತು ಈ ದೊಡ್ಡವರ ಸಮಾಚಾರ!' ಮಾಲಿಕನೆಂದ: 'ಅವಳಂತಹ ರೂಪವತಿಯನ್ನು ತಾನು ಇದುವರೆಗೆ ನೋಡಿರಲಿಲ್ಲ ಎಂದು ಅವರ ಆಳೇ ಹೇಳುತ್ತಿದ್ದ. ಒಂದು ಒಂದೆರಡು ತಿಂಗಳು ನೆಮ್ಮದಿಯಿಂದ ಇದ್ದಳಂತೆ; ಕ್ರಮೇಣ ಫೂಲಚಂದನ ಜಿಪುಣತನ, ಅವನ ಹೀನ-ದೀನ ನಡತೆ, ಚುಚ್ಚುವ ಮಾತು—ಇವುಗಳಿಂದ ಅವಳ ಬಾಳುವೆ ವಿಷಮಯವಾಗಿ ಹೋಯಿತು. ಅವಳಿಗೆ ಇನ್ನೊಬ್ಬ ಪ್ರಿಯಕರನಿದ್ದ ಎಂದು ಹೇಳುತ್ತಾರೆ. ದುಡ್ಡಿನ ಆಸೆಗೆ ಮನಸೋತು, ಪ್ರಿಯನನ್ನು ಬಿಟ್ಟು ಬಿಟ್ಟು ಈ ಮಾರವಾಡಿಯನ್ನು ಆಕೆ ಲಗ್ನವಾದಳಂತೆ. ಮಾರವಾಡಿಯಾದರೊ ಒಬ್ಬರನ್ನೂ ಮನೆಗೆ ಕರೆಯುತ್ತಿರಲಿಲ್ಲ. ಅವಳಿಗೆ ಬಾಳು ಬೇಸರವಾಗಿ, ದುಃಖದಿಂದ ಕೊರಗಿ, ಸೊರಗಿ ಹೋದಳು. ಇತ್ತ ದುಡ್ಡೂ ಇಲ್ಲ, ಅತ್ತ ಪ್ರಿಯನೂ ಇಲ್ಲ!'

ಇದನ್ನೆಲ್ಲ ತೆಗೆದುಕೊಂಡು ನನಗೆ ಆಗಬೇಕಾದದ್ದೇನು? ಮಾರವಾಡಿ ಜಿಪುಣನಿದ್ದರೇನು; ಅವನ ಹೆಂಡತಿ ಎಷ್ಟು ಚೆಲುವೆಯಾಗಿದ್ದರೇನು? ಅಥವಾ ಪ್ರಿಯನನ್ನು ಕಳೆದುಕೊಂಡು ಕಂಬನಿಗರೆದರೇನು? ನನ್ನ ಮನಸ್ಸಿಗೆ ನಾಟಿದ್ದೆಂದರೆ ಮಾರವಾಡಿಯ

ಸಂಪತ್ತು. ಆ ದುಡ್ಡಿನ ಗುಡ್ಡದ ವರ್ಣನೆ ಕೇಳಿ ನನ್ನ ಬಾಯಲ್ಲಿ ನೀರೊಡೆಯಿತು. ಇವೆಲ್ಲ ಸಂಗತಿಗಳನ್ನೂ, ನನ್ನ ಆಗಿನ ಕಠಿನ ಪರಿಸ್ಥಿತಿಯನ್ನೂ ನೆನೆದರೆ ಅದೆಂತಹ ಪ್ರಲೋಭನವಾಗಿದ್ದಿತೆಂದು ತಾವೇ ನೋಡಬೇಕು. ಕೆಲಸವೂ ಇಲ್ಲದೆ—ಬದುಕಿನಲ್ಲಿ ಒಂದು ಆಶೆಯೂ ಇಲ್ಲದೆ--ಕೈಯಲ್ಲಿ ಬಿಡಿಗಾಸೂ ಇಲ್ಲದೆ—ನಾನು ಕಂಗಾಲಾಗಿ—ಹೋಗಿದ್ದೆ. ಪ್ರಾಮಾಣಿಕತನದಿಂದ ಇರಬೇಕೆಂದು ಎಷ್ಟೊಂದು ಪ್ರಯತ್ನಮಾಡಿದರೂ, ಪ್ರಾಮಾಣಿಕರೆನಿಸಿಕೊಳ್ಳುವವರು ನನ್ನನ್ನು ಹೀಯಾಳಿಸಿ, ವಕ್ರದೃಷ್ಟಿಯಿಂದ ನೋಡುತ್ತ, ನನ್ನನ್ನು ನಿಂದೆಮಾಡಿ ಪೀಡಿಸುತ್ತಿದ್ದರು. ದುರ್ಮಾರ್ಗಕ್ಕೆ ಅವರೇ ನನ್ನನ್ನು ತಳ್ಳುತ್ತಿದ್ದರು. ಮಡುವಿನಲ್ಲಿ ಸಿಕ್ಕಿಬಿದ್ದು ಹೊರಗೆ ಬರಲಾರದವನಂತಿದ್ದೆ, ಆಗ ನಾನು. ಆ ಕೆಯ ಕೈ ಮೇಲಾಗಿ, 'ಮಾರವಾಡಿಯ ಹಣವನ್ನು ಎತ್ತಿಬಿಟ್ಟು ಇನ್ನು ಪಾಪಕೃತ್ಯಕ್ಕೆ ಶರಣು ಹೊಡೆಯಬೇಕು, ಇಲ್ಲವೆ ಮತ್ತೆ ತುರಂಗಕ್ಕೆ ಹೋಗಬೇಕು' ಎಂದು ನಿರ್ಧರಿಸಿದೆ.

ಇಷ್ಟಕ್ಕೆ ರಾತ್ರಿ ಸರಾಸರಿ ೧೦॥ ಘಂಟೆಯಾಗಿರಬಹುದು. ಎಲ್ಲರೂ ಅಂಗಡಿಯಿಂದ ಹೊರಟರು. ಮಾಲಿಕನು ಅಂಗಡಿಯ ಬಾಗಿಲಿಕ್ಕುವಂತೆ ಆಳಿಗೆ ಹೇಳಿದ. ನಾನೂ ಅಲ್ಲಿಂದ ಹೊರಬಿದ್ದೆ. ಕೆಲವು ಹೊತ್ತು ಅತ್ತಿತ್ತ ಸುಳಿದಾಡಿದೆ. ಕಾಲವು ಬೇಗನೆ ಕಳೆಯುವಂತೆ ಕಾಣಲಿಲ್ಲ.

ಬಳಿಕ ಮಧ್ಯರಾತ್ರಿ ಮೀರಿದಮೇಲೆ, ದಾರಿಯಲ್ಲಿ ಜನರ ಸುಳಿವು ಅಡಗುತ್ತಲೆ, ಪೂಲಚಂದನ ಮನೆಯ ಕಡೆಗೆ ತೆರಳಿದೆ. ಹೋಗುವಾಗ ಒಂದು ಹುಳುವೂ ಅಡ್ಡಬರಲಿಲ್ಲ. ಚಂದ್ರಮನು ಆಕಾಶದಲ್ಲಿ ಬೆಳಗುತ್ತಿದ್ದನು. ಮಾರವಾಡಿಯ 'ಶಾಂತಿನಿವಾಸ'ವು ಹೂಗಿಡಗಳ, ಎಲೆಬಳ್ಳಿಗಳ ಮಧ್ಯದಲ್ಲಿ ಒಪ್ಪುತ್ತಿತ್ತು. ಅದರ ಒಂದು ಮಗ್ಗುಲಿಗೆ ಹೋಗಿ, ಹೊರಗೋಡೆಯನ್ನೇರಿ ಕೆಳಗಿಳಿಯುವುದು ನನಗೆ ಪ್ರಯಾಸವಾಗಲಿಲ್ಲ. ಹೆಜ್ಜೆಯಮೇಲೆ ಹೆಜ್ಜೆಯಿಡುತ್ತ, ಆ ಸಣ್ಣಪುಟ್ಟ ಗಿಡಗಳ ಮರೆಯಲ್ಲಿ ಅಡಗಿಕೊಳ್ಳುತ್ತ, ಬಂಗಲೆಯ ಎಡಮಗ್ಗುಲ ಗೋಡೆಯ ಬಳಿ ಬಂದೆ. ನಾಯಿಯೊಂದು ಕಟ್ಟಿದ ಸರಪಣಿಯನ್ನು ಅಲುಗಾಡಿಸಿತು. ನನ್ನ ಎದೆ ಧಸ್ಸೆಂದಿತು. ಅದು ಸುಮ್ಮನಾಗುವವರೆಗೂ ಸ್ತಬ್ಧನಾಗಿ ನಿಂತುಕೊಂಡೆ. ಅನಂತರ ಅತ್ತಿತ್ತ ನೋಡಿ, ಒಂದು ಸಾದಾ ಕಿಡಕಿಯನ್ನು ಕಂಡು, ಗೋಡೆಗೆ ತಾಗಿಬಂದ ನೀರಿನ ಕೊಳವೆಯ ಆಧಾರದಿಂದ, ಕಿಡಕಿಯ ತನಕ ಏರಿದೆ. ವಿಶೇಷ ಉಪಯೋಗದಲ್ಲಿರದ ಭಾಗವಾದ್ದರಿಂದ ಅದರ ಬಾಗಿಲುಗಳನ್ನು ಒಂದು ಚಿಲಕ ಹಾಕಿ ಮುಚ್ಚಿದ್ದರು. ಇಂತಹ ಅಜಾಗರೂಕತೆ ಎಲ್ಲೆಡೆಯಲ್ಲೂ ಆಗುತ್ತದೆ. ನನ್ನ ಚಾಕುವಿನ ಅಲಗಿನಿಂದ ಹೀಗೆ ಒಂದು ಸಲ ಕೈಯಾಡಿಸಿದೊಡನೆ ಚಿಲಕ ತೆಗೆಯಿತು. ಬಾಗಿಲನ್ನು ಮೆಲ್ಲಗೆ ಸರಿಸಿ ಕೆಳಗಿಳಿದು ಒಳಕ್ಕೆ ಬಂದೆ.

'ನಮಸ್ಕಾರ! ದಯೆಮಾಡಬೇಕು!' ಎಂದು ಹೆಣ್ಣುಧ್ವನಿಯೊಂದು ನುಡಿಯಿತು. ನನಗೆ ಜನ್ಮದಲ್ಲಿಯೆ ಅಂತಹ ಆಶ್ಚರ್ಯವಾಗಲಿ ಹೆದರಿಕೆಯಾಗಲಿ ಆಗಿರಲಿಲ್ಲ. ನೋಡುತ್ತೇನೆ, ಸ್ವಲ್ಪ ಹೆಜ್ಜೆಬಿಟ್ಟು, ಕೈಯಲ್ಲಿ ಬ್ಯಾಟರಿದೀಪ ಹಿಡಿದುಕೊಂಡು, ಹೆಂಗುಸೊಬ್ಬಳು ನನ್ನಿದಿರು ನಿಂತಿದ್ದಾಳೆ! ಅವಳ ತಿಳಿಯಾದ ಮೈಯನ್ನೂ, ಬಿಳಿಯ ಪತ್ತಲವನ್ನೂ, ಅಸ್ತವ್ಯಸ್ತವಾದ ಕೂದಲುಗಳ ಕಟ್ಟಿನಲ್ಲಿ ಮೆರೆಯುತ್ತಿದ್ದ ಅವಳ ಸುಂದರವಾದ ಮೋರೆಯನ್ನೂ ನೋಡಿ, ಅವಳೊಬ್ಬ ದೇವತೆಯಿರಬೇಕೆಂಬ ಭಾವನೆ ಒಂದು ಕ್ಷಣ ಹೊಳೆಯಿತು. ನನ್ನ ಮೈ ಬೆವರತೊಡಗಿತು, ಕೈಕಾಲುಗಳು ನಡುಗಹತ್ತಿದುವು. ಆಧಾರಕ್ಕೆಂದು ಒಂದು ಕೈಯಿಂದ ಕಿಡಕಿಯ ಬಾಗಿಲನ್ನು ಹಿಡಿದುಕೊಂಡೆ. ಆಗ ನನ್ನಲ್ಲಿ ಶಕ್ತಿಯಿದ್ದಿದ್ದರೆ ಕೆಳಕ್ಕೆ ಹಾರಿ ಓಡಿಹೋಗಿಬಿಡುತ್ತಿದ್ದೆ. ಹಾಗೆ ಏನನ್ನೂ ಮಾಡಲಾರದೆ ಹೋಗಿ, ಅವಳನ್ನೆ ಮಿಕಮಿಕನೆ ನೋಡಹತ್ತಿದೆ. ಅವಳೇ ಚೆದರಿಹೋದ ಧೈರ್ಯವನ್ನು ನನಗೆ ತಿರುಗಿ ತಂದುಕೊಟ್ಟಳು; 'ಹೆದರಬೇಡ!' ಎಂದಾಕೆ ಹೇಳಿದಳು. ಆಶ್ಚರ್ಯ! ಮನೆಯ ಮಾಲಿಕಳಾಗಿ ಕಳ್ಳನಿಗೆ ಈ ರೀತಿ ಹೇಳುವುದೆಂದರೇನು? 'ನೀನು ಆ ಗಿಡ-ಮರಗಳ ಮರೆಯಲ್ಲಿ ಸುಳಿದಾಡುತ್ತಿದ್ದುದನ್ನು, ಮೇಲಿನ ಮಲಗುವ ಕೋಣೆಯ ಕಿಡಕಿಯಿಂದ ನೋಡಿದೆ. ಕೆಳಕ್ಕೆ ಬರಲು, ಇಲ್ಲಿ ಸಪ್ಪಳವಾಯಿತು. ಇಲ್ಲಿ ಬಂದು, ನಿನಗೋಸ್ಕರ ನಾನೇ ಕಿಡಕಿಯನ್ನು ತೆರೆಯಬೇಕೆಂದಿದ್ದೆ; ಅಷ್ಟರಲ್ಲಿ ನೀನು ಒಳಗೆ ಬಂದಿದ್ದಿ' ನನಗೆ ಕಿವಿಗಳನ್ನು ನಂಬಬೇಕೋ— ಬಾರದೋ ಎಂಬುದು ತೋಚಲಿಲ್ಲ.

ಕಿಡಕಿಯನ್ನು ತೆರೆಯಲು ಉಪಯೋಗಿಸಿದ ಚಾಕು ಇನ್ನೂ ನನ್ನ ಕೈಯಲ್ಲೇ ಇತ್ತು. ೫-೬ ದಿವಸ ಸ್ನಾನ-ಕ್ಷೌರವಿಲ್ಲದೆ

ಧನ್ವಂತರಿ ಕಾರ್ಯಾಲಯ, ಅಂಕೋಲಾ
ಉತ್ತರಕನ್ನಡ ಇವರ
ರಜಿಸ್ಟರ್ಡ
ಅರ್ಧಾಂಗವಾಯು
ಹೊನ್ನಿ ಎಣ್ಣೆ
ಮತ್ತು
ವಾತಾರಿ ತೂಪ್ಪಲ
ಅರ್ಧಾಂಗವಾಯು, ಕೈ-ಕಾಲು-ಮೋರೆ ನಡುಗುವುದು,
ಪಕ್ಷವಾತ, ಸಂಧಿವಾತ ಮುಂತಾದ ರೋಗಿಗಳು
ನಿರಾಶರಾಗದೆ ಒಮ್ಮೆ ಉಪಯೋಗಿಸಿರಿ;
ಖಂಡಿತ ಗುಣವಾಗುವುದು.
ಬಾ. ಬೆ. ೧ ರೂ. ★ ತೊ. ಬೆ. ೧೦ ಆಣೆ.
ಸ್ಟಾರ್ ಕಂಪನಿ, ಬೆಗಾಂವ

ನಾನು ಭೀಕರನಾಗಿ ತೋರುತ್ತಿದ್ದೆ. ಒಟ್ಟೊಂಟಿಗರಾಗಿ ಆ ಅಪರಾತ್ರಿಯಲ್ಲಿ ಯಾರಿಗೂ ನನ್ನ ಇದಿರು ನಿಲ್ಲುವ ಎದೆಯಾಗುತ್ತಿದ್ದಿಲ್ಲ. ಅಂತಹದರಲ್ಲಿ ಈ ಹೆಂಗುಸು ತನ್ನ ಪ್ರಿಯನನ್ನು ಆದರಿಸಿ ಬರಮಾಡಿಕೊಳ್ಳುವಂತೆ ನನ್ನನ್ನು ಸ್ವಾಗತಿಸುವುದರಲ್ಲಿದ್ದಳು. ಅವಳಾಗ ಒಂದು ಕೈಯನ್ನು ನನ್ನ ತೋಳಿನ ಮೇಲಿಟ್ಟು ಒಳಗಡೆ ಕರೆದೊಯ್ದಳು.

'ಇದರ ಅರ್ಥವೇನು? ಯಾವ ಕುತಂತ್ರ ಹೂಡಿದ್ದೀರಿ?' ಎಂದು ನಾನು ಕೇಳಿದೆ. 'ಮೋಸಗೀಸ ಮಾಡಿದರೆ ಒಳಿತಾಗಲಿಕ್ಕಿಲ್ಲ' ಎಂದು ಚಾಕುವನ್ನು ಜಳಪಿಸುತ್ತ ಬಿರುಸಿನಿಂದ ಹೇಳಿದೆ.

'ಮೋಸದ ಮಾತು ಹಾಗಿರಲಿ, ನಿಜವಾಗಿಯೂ ನಾನು ನಿನ್ನ ಸ್ನೇಹಿತೆಯೆಂದು ತಿಳಿ. ನಿನಗೆ ಸಹಾಯಮಾಡಬೇಕೆಂದಿದ್ದೇನೆ.'

'ಅದನ್ನು ನಾನು ನಂಬಲಾರೆ; ನನಗೆ ಸಹಾಯಮಾಡಲಿಕ್ಕೆ ಏನು ಕಾರಣ!'

'ಕಾರಣ ಗೀರಣ ನಿನಗೇಕೆ!— ನಾನು ಅವನನ್ನು ದ್ವೇಷಿಸುತ್ತೇನೆ. ಈಗ ತಿಳಿಯಿತೆ?'

ದ್ವೇಷವೆಂಬುದು ಹೇಗಿರುತ್ತದೆಯೆಂಬುದು ಅವಳ ಆಗಿನ ಭೀಕರ ಮೋರೆಯನ್ನು ನೋಡಿದ ಮೇಲೆ ನನಗೆ ಪೂರ್ತಿಯಾಗಿ ತಿಳಿಯಿತು. ಮಾರವಾಡಿಗೆ ಪಂಚಪ್ರಾಣವಾದ ಹಣಕ್ಕೇ ಕೊಡಲಿಯಿಕ್ಕಿ ಸೇಡುತೀರಿಸಿಕೊಳ್ಳಬೇಕೆಂದು ಹವಣಿಸುತ್ತಿದ್ದಳು ಅವಳು. ತನ್ನ ಆಕಾಂಕ್ಷೆಯನ್ನು ಈಡೇರಿಸಿಕೊಳ್ಳಲಿಕ್ಕೆ ನನ್ನಂತಹ ಕ್ಷುದ್ರ ಮನುಷ್ಯನ ಬೆನ್ನುಬೀಳುವಂತೆ ಮಾಡಿಸಿತು ಅವಳ ಆ ಹಗೆ. ಸಮಾಧಾನದಿಂದ ಮತ್ತೆ ಅವಳು ಕೇಳಿದಳು :

'ಇನ್ನಾದರೂ ನನ್ನ ಮೇಲೆ ವಿಶ್ವಾಸವಿಲ್ಲವೆ?'

'ಇದೆ.'

'ನಿನ್ನ ಹತ್ತಿರ ಚೀಲಗೀಲ ಇದೆಯೇ?'

'ಇಲ್ಲ!'

'ಆ ಬಾಗಿಲು ಹಾಕು. ಆಳುಗಳೆಲ್ಲ ಇನ್ನೊಂದು ಕಡೆಯಲ್ಲಿ ನಿದ್ದೆ ಹೋಗಿದ್ದಾರೆ. ನಿನಗೆ ಯಾವ ಭಯವೂ ಇಲ್ಲ.' ಸಮೀಪದಲ್ಲಿದ್ದ ಒಂದು ಚೀಲ ಹುಡುಕಿ 'ಇದು ಪರವಾ ಇಲ್ಲ, ನನ್ನ ಜತೆಯಲ್ಲಿ ನಡೆ. ಅವನು ಕೂಡಿಟ್ಟ ಹಣವನ್ನು ತೋರಿಸುವೆನು' ಎನ್ನುತ್ತ ನನ್ನನ್ನು ಇನ್ನೊಂದು ಕೋಣೆಗೆ ಕರೆದೊಯ್ದಳು.

ಆ ಕೋಣೆಯ ಸಿಂಗಾರವನ್ನೂ ಹೆಚ್ಚಳವನ್ನೂ ನೋಡಿ ನನ್ನ ಕಣ್ಣುಗಳರಳಿದುವು. ಆಕೆ ಉಕ್ಕಿನ ಪೆಟ್ಟಿಗೆಯೊಂದರ ಬೀಗವನ್ನು ತನ್ನ ಕೊರಳೊಳಗಿನ ಕೈಯಿಂದ ತೆಗೆದು, ಅದರೊಳಗಿನ ಚಿನ್ನ-ಬೆಳ್ಳಿಯ ಒಡವೆಗಳು ನನಗೆ ಕಾಣುವಂತೆ ಬಾಗಿಲನ್ನು ತೆರೆದು ಹಿಡಿದಳು. ಅದರಲ್ಲಿ ಇನ್ನೊಂದು ಸಣ್ಣ ಪೆಟ್ಟಿಗೆಯಿತ್ತು. ಅದನ್ನು ತೆರೆಯುವ ಮಾರ್ಗ ತೋರಲಿಲ್ಲ. ಕೊನೆಗೆ ನನ್ನ ಕೈಯಲ್ಲಿದ್ದ ಚಾಕುವಿನಿಂದ ತೆಗೆಯಬೇಕೆಂದು ನಾನು ಹೆಣಗಾಡುತ್ತಿರಲು, ಅರೆನಿಮಿಷ ಯೋಚಿಸಿದಂತೆ ಮಾಡಿ ಅವಳೆಂದಳು :

'ಅಲ್ಲ, ಹೀಗೆ ಮಾಡಿದರೇನು?'

'ಏನು? ನನಗೆ ಈ ಚಿನ್ನ-ಬೆಳ್ಳಿ ಸಾಕು. ತಮ್ಮ ಉಪಕಾರ ಬಹಳವಾಯಿತು!'

'ಹಾಗಲ್ಲ, ಇದಕ್ಕಿಂತ ರೂಪಾಯಿ ಸಿಕ್ಕರೆ ನಿನಗೆ ಹೆಚ್ಚು ಪ್ರಯೋಜನವಾಗುವದಿಲ್ಲವೆ?'

'ಹೌದು!'

'ಅವನ ತಲೆಗಿಂಬಿನ ಕೆಳಗೆ ರೂಪಾಯಿಗಳಿಂದ ತುಂಬಿದ ಒಂದು ಚೀಲವೇ ಇದೆ. ನಮ್ಮ ತಲೆಯ ಮೇಲೆ, ಇದೇ ಅಟ್ಟದ ಮೇಲಿನ ಕೋಣೆಯಲ್ಲಿ ಅವನು ಮಲಗುತ್ತಿರುವುದು!'

'ಅವರಿಗೆ ಎಚ್ಚರಿಕೆಯಾಗಿಬಿಟ್ಟರೆ?'

'ಆದರೇನು? ಅವನು ಕೂಗಿಕೊಳ್ಳದಂತೆ ನೀನು ನೋಡಿಕೊಳ್ಳಬಲ್ಲೆ.'

'ಇಲ್ಲ ತಾಯಿ! ಅದು ನನ್ನಿಂದಾಗದು!'

'ಹಾಗಾದರೆ ಹಾಗೆ! ಏನೋ, ನೀನು ಎದೆಗಾರನಾದ ಗಂಡು ಎಂದುಕೊಂಡಿದ್ದೆ. ಇಂತಹ ಕೆಲಸಕ್ಕೆ ನೀನು ಯೋಗ್ಯನಲ್ಲ ಎಂದು ಕಾಣುವುದು. ಹಾಗಾದರೆ ನೀನು ರೂಪಾಯಿಯ ಆಶೆಯನ್ನು ಬಿಟ್ಟುಬಿಡು!'

'ಕೊಂದ ಪಾಪ ಕಟ್ಟಿಕೊಳ್ಳಲಾರೆ!'

'ಕೊಲ್ಲಬೇಕೆಂದು ನಾನು ಹೇಳುವುದಿಲ್ಲ. ಏನಾದರೂ ಗಲಭೆ ಮಾಡಿದರೆ, ನೀನು ಅವನನ್ನು ತೀರಿಸಬಹುದು ಎಂದೆ. ಬಿಡು, ಅಂತಹ ಅಂಜುಕುಳಿಯಾದ ಪಕ್ಷಕ್ಕೆ ಯತ್ನಮಾಡದಿರುವುದು ಒಳ್ಳೆಯದು!'

ಆ ಲಂಕಿಣಿಯು ತಿರಸ್ಕಾರದಿಂದಲೂ ಹಣದಾಶೆಯಿಂದಲೂ ನನ್ನನ್ನು ತನ್ನ ಸೇಡು ತೀರಿಸಿಕೊಳ್ಳುವ ಸಾಮಗ್ರಿಯನ್ನಾಗಿ ಮಾಡಿಕೊಳ್ಳಬೇಕೆಂದು ಬಯಸಿದ್ದಳು. ಅವಳ ಇಂಗಿತವು ನನಗೆ ತಿಳಿಯಿತೆಂದು ಅವಳಿಗೆ ಹೊಳೆದೊಡನೆ, ಚಿತ್ತವೃತ್ತಿಯನ್ನು ಮಾರ್ಪಡಿಸಿ ಮುಗುಳು ನಗುತ್ತ ಅವಳೆಂದಳು :

'ಒಳ್ಳೆಯದು, ಈ ಒಡವೆಗಳನ್ನೆ ತೆಗೆದುಕೊ!'

ನಾನು ಚೀಲದ ಬಾಯನ್ನು ಅಗಲಮಾಡಿ ಅವುಗಳಿಗೆ ಕೈಹಾಕುವುದರಲ್ಲಿದ್ದೆ. ಆಗ ಅವಳು ನಸುವೆ ಬೆದರಿ ಬೆರಳನ್ನೆತ್ತಿ 'ಶ್-ಶ್ ಅದೇನು?' ಎಂದು ಪಿಸುಗುಟ್ಟಿದಳು.

ಅಲ್ಲಿಯ ಶಾಂತತೆಯನ್ನು ಭೇದಿಸಿಕೊಂಡು ಹೆಜ್ಜೆಯ ಸಪ್ಪಳು ಕೇಳಬರಹತ್ತಿತು. ಅವಳು ಪೆಟ್ಟಿಗೆಯ ಬಾಯಿ ಮುಚ್ಚಿ 'ನನ್ನ ಯಜಮಾನರು! ಗಾಬರಿಗೊಳ್ಳದಿರು! ನಾನಿದ್ದೇನೆ; ನೀನು ಹಾಗೆ ಆ ಪರದೆಯ ಹಿಂದೆ—' ಎನ್ನುತ್ತ ನನ್ನನ್ನು ಪರದೆಯ ಮರೆಗೆ ನೂಕಿ, ನಡುವಿನ ಕೋಣೆಗೆ ಸರ್ರನೆ ಹೋದಳು.

ನನಗೆ ಅಡಗಿಕೊಂಡಲ್ಲಿಂದ ಎಲ್ಲ ಕಾಣಿಸುತ್ತಿತ್ತು.

'ಯಾರು? ನೀವೋ?' ಎಂದು ಆಕೆ ಮೊದಲುಮಾಡಿದಳು. ಯಾಕೆಂದರೆ ಬಾಗಿಲಲ್ಲಿ, ನಿರಿಗೊಂಡ ದಪ್ಪ ಮೋರೆಯ, ನೆರೆತ

ಕೂದಲಿನ,—ರಣಹದ್ದಿನ ಮೂಗಿನ ಮಾರವಾಡಿಯ ಆಕೃತಿಯು ಕಾಣಿಸಿಕೊಂಡಿತ್ತು.

ಮಾರವಾಡಿಯು ಬಾಗಿಲ ಬಳಿಯ ವಿದ್ಯುದ್ದೀಪವನ್ನು ಹಚ್ಚಿದ. ಅವನ ನೋಟದಲ್ಲಿ ಅಸೂಯೆಯ ಮೆರುಗು ಸ್ವಾಭಾವಿಕವಾಗಿ ಎದ್ದು ಕಾಣುತ್ತಿದ್ದಿತು. ಅವರಿಬ್ಬರಿಗೆ ಎಣ್ಣೆ-ಸೀಗೆಯ ಹಾಗೆಂದು ತಿಳಿದುಕೊಳ್ಳಲು ನನಗೆ ಬಹಳ ಸಮಯ ಹಿಡಿಯಲಿಲ್ಲ.

‘ಇದೇನು ? ಮನೆತುಂಬ ತಿರುಗಾಡುತ್ತಿರುವೆಯಲ್ಲ ! ಇಷ್ಟು ರಾತ್ರಿಯಾದರೂ ನಿನಗೆ ನಿದ್ದೆ-ಗಿದ್ದೆ ಇಲ್ಲವೇನು?’

‘ನನಗೆ ನಿದ್ದೆ ಹತ್ತಲಿಲ್ಲ’ ಎಂದು ಆಯಾಸಗೊಂಡವಳಂತೆ ನಟಿಸುತ್ತ ಅವಳೆಂದಳು.

‘ನಿರ್ಮಲವಾದ ಮನಸ್ಸು ನಿದ್ರೆಗೆ ಒಳ್ಳೆ ಸಹಕಾರಿ!’

‘ಆದರೆ ನಿಮಗೆ ಚೆನ್ನಾಗಿ ನಿದ್ದೆ ಬರುತ್ತದೆಯಲ್ಲ ?’

ಫೂಲಚಂದನು ಸಿಟ್ಟಿನಿಂದ ಕಿಡಿಕಿಡಿಯಾದ. ಅವನೆಂದ—

‘ನಿನ್ನನ್ನು ಕಟ್ಟಿಕೊಂಡ ಪಾಪದ ಫಲವಾಗಿ—ಈಗ ಅನುಭೋಗಿಸುತ್ತಲಿದ್ದೇನೆ!’

‘ನೀವೊಬ್ಬರೇ ಅಲ್ಲ—ನಾನೂ ಮಾಡಿದ್ದನ್ನು ಉಣ್ಣುತ್ತಿದ್ದೇನೆ!

‘ನಿನಗೇನು ಧಾಡಿ ? ಉಪಕಾರ ಮಾಡಹೋಗಿ—’

‘ನೀವೇನು ಮಾಡಿದ್ದು, ಮಹಾ ?’

‘ಯಃಕಶ್ಚಿತ್ ನಟಿಯಾದ ನೀನು ಈ ಶ್ರೀಮಂತಿಕೆಗೆ ಒಡತಿಯಾದೆ; ನಿನ್ನನ್ನು ಕಂಪನಿಯಿಂದ ತಂದುದೇ ತಪ್ಪಾಯಿತು !’

‘ಈಗಲಾದರೂ ಏನಾಗಿದೆ ? ಬಿಟ್ಟುಬಿಡಬಹುದಲ್ಲ ನನ್ನನ್ನು ?

‘ಜನರಲ್ಲಿ ನಾಚಿಕೆಗೇಡು ಮಾಡಿಸಿಕೊಳ್ಳುವುದಕ್ಕಿಂತ ದುಃಖವನ್ನು ನುಂಗಿಕೊಂಡಿರುವುದು ಮೇಲು. ಮತ್ತೇನೆಂದರೆ ನೀನು ಇಲ್ಲಿದ್ದರೆ, ನಿನ್ನ ಪ್ರಿಯಕರನೆಡೆಗೆ ಹೋಗಲಾರೆ. ಇಷ್ಟಕ್ಕೇ..’

‘ಪಾಪಿ ! ದುಷ್ಟಾ !’

‘ಸರಿ, ಸರಿ, ನನಗೇನು ಗೊತ್ತಿಲ್ಲವೇ ನಿನ್ನ ಮಾಟ? ನಾನು ಬದುಕಿರುವವರೆಗೂ ನಿನ್ನ ಪ್ರಿಯಕರನನ್ನು ಕೂಡಲಾರೆ. ನನ್ನ ಹಣಕಾಸು ಹಾಳುಮಾಡುವುದಂತೂ ಹಾಗಿರಲಿ ! ಇರಲಿ, ಆ ಕಿಡಕಿ ತೆಗೆದಿರುವ ಕಾರಣ ?’

‘ಬಹಳ ಸೆಖೆ ಆಗುತ್ತದೆಯೆಂದು..’

‘ಕಳ್ಳಗಿಳ್ಳರು ಬಂದರೆ ಏನು ಮಾಡ್ತೀಯೆ?’

‘ನಾನು ಇಲ್ಲಿಯೇ ಇದ್ದೇನಲ್ಲ!’

‘ಅದು ನನಗೆ ಗೊತ್ತು. ಏನೋ ಸಪ್ಪಳವಾದದ್ದರಿಂದಲೇ ನಾನು ಇಲ್ಲಿಗೆ ಬಂದದ್ದು ! ನೀನು ಮಾಡುತ್ತಿರುವುದೇನು ?’

‘ಆ ಒಡವೆಗಳನ್ನು ನೋಡುತ್ತಿದ್ದೆ !’

‘ಓಹೊ ! ಇದೀಗ ಹೊಸ ಉತ್ಸುಕತೆ !’ ಎನ್ನುತ್ತ ಮಾರವಾಡಿಯು ಸಂಶಯಪಡುತ್ತ ಒಳಗಿನ ಕೋಣೆಗೆ ನಡೆದನು. ಆಕೆಯೂ ಅವನ ಮಗ್ಗುಲಲ್ಲಿಯೆ ನಡೆದಳು.

ಈ ಹೊತ್ತಿಗೆ ಒಂದು ಸಂಗತಿಯನ್ನು ನೋಡಿ ನನಗೆ ಗಾಬರಿಯಾಯಿತು. ನನ್ನ ಚಾಕುವು ಆ ಪೆಟ್ಟಿಗೆಯ ಮೇಲೆ ಬಿದ್ದುಕೊಂಡಿತ್ತು. ಅದು ಅವನ ಕಣ್ಣಿಗೆ ಬೀಳುವುದಕ್ಕಿಂತ ಮೊದಲು, ಅವಳು ಮರೆಯಾಗಿ ಬಂದು, ಎಡಗೈಯಿಂದೆತ್ತಿ ಸೀರೆಯ ಪದರಿನೊಡನೆ ಹಿಡಿದುಕೊಂಡು ಬಿಟ್ಟಳು. ಮಾರವಾಡಿಯು ಒಂದೊಂದು ಪೆಟ್ಟಿಗೆಯನ್ನೂ ಸೂಕ್ಷ್ಮವಾಗಿ ನೋಡಿ, ಎಲ್ಲ ಸರಿಯಾಗಿದ್ದದ್ದನ್ನು ಕಂಡರೂ, ಬುಸುಗುಟ್ಟುತ್ತ ಮೊದಲಿನ ಕೋಣೆಗೆ ಬಂದನು. ಅವಳೂ ಆತನ ಹಿಂದೆಯೆ ಬಂದಳೆಂದು ತೋರುತ್ತದೆ. ಫೂಲಚಂದನು ಒಂದು ಕುರ್ಚಿಯನ್ನು ಎಳೆದು ಕುಳಿತನು. ಇವಳು ಅವನ ಹಿಂದುಗಡೆ ಬಂದು ನಿಂತಳೆಂದು ಕಾಣುತ್ತದೆ. ಈಗ ಅವರು ನನಗೆ ಕಾಣಿಸದಿದ್ದರೂ ಅವರ ಮಾತುಕತೆಯ ಮೇಲಿಂದಲೂ ನೆರಳಿನ ಮೇಲಿಂದಲೂ ಅಲ್ಲಿ ನಡೆಯುತ್ತಿದ್ದುದು ತಿಳಿಯುತ್ತಿತ್ತು.

ಮಾರವಾಡಿಯು ಪುನಃ ಆಕೆಯ ಪ್ರಿಯನ ವಿಷಯ ಮಾತಾಡಲಾರಂಭಿಸಿದನು. ವಿಂಡ ಮೊದಲಾದ ಶಬ್ದಗಳು ಕಾದ ಎಣ್ಣೆಯಂತೆ ಅವಳ ಕಿವಿಗಳ ಮೇಲೆ ಬೀಳತೊಡಗಿದುವು. ಆಕೆಯೂ ಕೆಲವು ಬಿರುನುಡಿಗಳನ್ನು ಎಸೆದಳು. ಅವಳ ಮಾತು ಮುಗಿಯುವುದರೊಳಗೆ ಇವನು ಮತ್ತೆ ಅದನ್ನೇ, ಹೀಯಾಳಿಸುವ—ಕೆಣಕುವ ಧ್ವನಿಯಲ್ಲಿ ಎತ್ತಿದ. ಅವನ ಆ ಮಾತಿನ ಬಗೆಯನ್ನು ಇವಳು ಹೇಗೆ ಸಹಿಸಿಕೊಂಡಿದ್ದಳೋ !

ಡಾಕ್ಟರ್ ಪಿ. ಸಿ. ರಾಯರು ಕೊಂಡಾಡಿದ

ರುಚಿಕರ ಮತ್ತು ಪಾಚಕ ವನಸ್ಪತಿಜನ್ಯ

ರಜಿಸ್ಟರ್ಡ್ **ಚಮನ** ಟ್ರಾ. ಕಿ. ೪೬.

CHAMAN

ಇದರಿಂದ ಹಸಿವೆಯಾಗಿ ಪಚನಶಕ್ತಿಯು ಬೆಳೆಯುತ್ತದೆ; ಮತ್ತು ದುರ್ಘಟ ಅಜೀರ್ಣವನ್ನು ಗುಣಪಡಿಸುತ್ತದೆ.

ಇದಲ್ಲದೆ ಥಂಡಿಯಿಂದ ಹೊಟ್ಟೆನೋಯೋಣ, ಅಪಚನ, ಕೆಮ್ಮು, ದಮ್ಮು, ಕಫ ಮುಂತಾದುವುಗಳ ಮೇಲೆ

ಚಮನವು

ಅತ್ಯಂತ ಗುಣಕಾರಿಯಿದೆ.

ಸ್ಟ್ಯಾರ್ ಕಂಪನಿ, ಬೆಳಗಾಂವ

ಡೋಂಗರೆ ಇವರ ಬಾಲಾಮೃತವು
ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಅಷ್ಟರಲ್ಲಿ ' ಬಿಡು!ಅಲ್ಲಿಂದೇಳು!-ಬಿಡು ! ಅಂಗಿಯನ್ನು!—ಹೊಡೆಯಲಿಕ್ಕೂ ಹಿಂಜರಿಯೆಯಾ ? ' ಎಂಬ ಮಾತುಗಳು ನನ್ನನ್ನು ದಿಗಿಲುಗೊಳಿಸಿದುವು. ಮತ್ತೊಮ್ಮೆ ಮಾರವಾಡಿ ಕೂಗಿಕೊಂಡ: ' ದೇವರೇ ! ರಕ್ಷ! '—ಹೊಡೆದ ಶಬ್ದ ! ಅವನು ಅತ್ತಿತ್ತ ಜಡಪಡಿಸುತ್ತಿದ್ದ ಸದ್ದು.

' ಅಯ್ಯೋ—ಚಾಂಡಾಲಿನಿ ! ' ಮಾರವಾಡಿಯು ಅಸಹಾಯತೆಯಿಂದ ಅರಚಿದ.

ಇದನ್ನೆಲ್ಲ ಕೇಳಿದ ನಾನು ಹೌಹಾರಿ, ಗಡಗಡನೆ ನಡುಗುತ್ತ, ಪರದೆಯ ಮರೆಯಿಂದ ಹೊರಬಿದ್ದು ಆ ಸ್ಥಳಕ್ಕೆ ಬಂದೆ. ನೋಡಲಾಗಿ, ಮಾರವಾಡಿಯು ಮುದ್ದೆಯಾಗಿ, ತಲೆತಗ್ಗಿಸಿ, ಕೈಗಳನ್ನು ಇಳಿಬಿಟ್ಟು, ನಿಃಸ್ಸತ್ತ್ವನಾಗಿ ಕುರ್ಚಿಯಮೇಲೆ ಒರಗಿಕೊಂಡಿದ್ದ. ಅವನ ಬಾಯಿಯು ಸತ್ತ ಪಿಶಾಚಿನ ಬಾಯಂತೆ ತೆರೆದಿತ್ತು. ಎಲ್ಲಿಂದ ಹರಿಯುತ್ತಿತ್ತೊ ಏನೊ, ರಕ್ತವು ಕುರ್ಚಿಯ ಮೇಲೂ ಕೆಳಗೆ ಸುತ್ತುಮುತ್ತಲೂ ಕೋಡಿಯಾಗಿ ಬೀಳುತ್ತಿತ್ತು. ಆ ಕುರ್ಚಿಯ ಬೆನ್ನನ್ನು ಹಿಡಿದು, ಅವಡುಗಚ್ಚಿಕೊಂಡು, ಬಿಸಿಯುಸಿರು ಬಿಡುತ್ತ, ಮಿಂಚುವ ಕಣ್ಣುಗಳಿಂದ ಕೂಡಿ, ಆ ಪಾಪಿನಿಯು ಇಹಲೋಕವನ್ನು ಬಿಡುತ್ತಿದ್ದ ತನ್ನ ಗಂಡನನ್ನು ಒಂದು ಬಗೆಯ ಸಮಾಧಾನ-ಚಿತ್ತದಿಂದ ನೋಡುತ್ತಿದ್ದಳು.

' ಎಂತಹ ಕೆಲಸ ಮಾಡಿದಿರಿ! ' ಎಂದು ನಾನೆಂದೆ.

' ಹೌದು, ಮಾಡಿದೆ ! ' ಎಂದಳಾಕೆ.

' ಮುಂದೇನು ? ಕೊಲೆಗಾತಿಯೆಂದು ಹಿಡಿಯುವರಲ್ಲ ನಿಮ್ಮನ್ನು—'

' ಆ ಯೋಚನೆ ನನಗಿಲ್ಲ. ನಾನು ಬದುಕಿ ಇದ್ದಾದರೂ ಏನು ಪ್ರಯೋಜನ ? ಇಕೊ, ಇವನನ್ನು ಸರಿಯಾಗಿ ಕುಳ್ಳಿರಿಸೋಣ; ಹೀಗೆ ಮುದ್ದೆಯಾಗಿದ್ದುದನ್ನು ನೋಡಲಾರೆ! '

ನಾವಿಬ್ಬರೂ ಕೂಡಿ ಅವನನ್ನು ನೆಟ್ಟಗೆ ಕುಳ್ಳಿರಿಸಿದೆವು. ಅವನ ಮೈ ಮುಟ್ಟುತ್ತಲೆ ನನ್ನ ಮೈ ಜುಮ್ಮೆಂದಿತು. ಕೈಮೇಲೆ ಇಷ್ಟು ರಕ್ತ ಬಿತ್ತು. ನನಗೆ ತೀರ ಅಸಹ್ಯವಾಯಿತು.

' ಇನ್ನು ನೀನು ಆ ಒಡವೆಗಳನ್ನೂ ರೂಪಾಯಿಗಳನ್ನೂ ತಕೊಂಡು ಹೋಗಬಹುದು! ' ಎಂದು ಅವಳು ಹೇಳಿದ್ದಕ್ಕೆ ನಾನು ಉತ್ತರವಿತ್ತೆ:—

" ಅದೊಂದೂ ಬೇಡ ನನಗೆ. ಇಂತಹ ಕೆಲಸದಲ್ಲಿ— "

' ಹುಚ್ಚ ! ಇದಕ್ಕೋಸ್ಕರವೇ ಬಂದವ ನೀನು: ಈಗ ಬೇಡವೆನ್ನುತ್ತೀಯಲ್ಲ ! ಇದೇನು ? ನೀನು ಹೂಂ ಎನ್ನುವುದೇ ತಡ ! '

ಚೀಲವು ನನ್ನ ಕೈಯಲ್ಲೇ ಇದ್ದಿತು. ಆ ಚೀಲದಲ್ಲಿ ಅವಳು ಕೆಲವು ಒಳ್ಳೊಳ್ಳೆಯ ಒಡವೆಗಳನ್ನು ತುಂಬಿದಳು. ರೂಪಾಯಿಯ ಚೀಲವನ್ನೂ ತರುವುದರಲ್ಲಿದ್ದಳು. ಆದರೆ ನನಗೆ ಹೆಚ್ಚು ಹೊತ್ತು ಅಲ್ಲಿ ಇರಲು ಮನಸ್ಸಿರಲಿಲ್ಲ. ಅಷ್ಟನ್ನೇ ತಕೊಂಡು ಕಿಡಕಿಯ ಕಡೆಗೆ ನಡೆದೆ. ಒಂದು ಬಾರಿ ಹಿಂತಿರುಗಿ ನೋಡಲಾಗಿ ಅವಳಿನ್ನೂ ಅಲ್ಲಿಯೇ ನಿಂತು, ಮಂದಹಾಸದಿಂದ, ಹೋಗೆಂದು ಕೈಸನ್ನೆ ಮಾಡುತ್ತಿದ್ದಳು. ನಾನು ಕೆಳಗಿಳಿದೆ.

ಅಹ ! ಆ ಮುಗುಳುನಗೆಯ ಮರೆಯಲ್ಲಿ ಯಾವ ಕುವಿಚಾರಗಳಿದ್ದುವೆಂಬುದು ನನಗೆ ತಿಳಿದಿದ್ದರೆ—! ಹೇಗಾದರೂ ಮಾಡಿ ಅಲ್ಲಿಂದ ಹೊರಬಿದ್ದರೆ ಸಾಕೆಂದು ತವಕಪಡುತ್ತಿರುವಾಗ ಅವಳು ನನ್ನ ಕತ್ತಿಗೆ ನೇಣುಹಾಕಲೆಳಸುತ್ತಿದ್ದುದು ನನಗೆ ತಿಳಿಯುವುದೆಂತು ?

ನಾನು ಕೆಲವು ಹೆಜ್ಜೆಗಳನ್ನಿಟ್ಟಿದ್ದೇ ತಡ, ಸುತ್ತುಮುತ್ತಲಿನ ಪ್ರದೇಶವನ್ನೆಲ್ಲ ದಿಗ್ಭ್ರಮೆಗೊಳಿಸುವಂತೆ ಅಲ್ಲಿಯ ಶಾಂತತೆಯ ಪರದೆಯನ್ನು ಹರಿದೊಗೆದು ದೊಡ್ಡ ಚೀತ್ಕಾರವು ಮೇಲಕ್ಕೆದ್ದಿತು: ' ಕೊಲೆ—ಅಯ್ಯೋ, ಯಾರಾದರೂ ಓಡಿ ಬನ್ನಿ !'

ಹೆದರಿದ ಮೊಲದಂತೆ ನಾನು ಮುಂಬಾಗಿಲ ಕಡೆಗೆ ಓಡತೊಡಗಿದೆ. ಆದರೇನು ? ಆಚೆಯಿಂದ ಬಾಗಿಲನ್ನು ಮುಚ್ಚಿಕೊಂಡ ಶಬ್ದವಾಯಿತು. ೫–೬ ಜನರು ದೊಣ್ಣೆ, ಬ್ಯಾಟರೀ ದೀಪಗಳನ್ನು ಹಿಡಿದುಕೊಂಡು, ಎರಡು ನಾಯಿಗಳನ್ನು ಛೂ ಬಿಡುತ್ತ ಅತ್ತಿತ್ತ ಹುಡುಕಾಡಹತ್ತಿದರು. ಅಲ್ಲಿಯೇ ಒಂದು ಪೊದೆಯ ಹಿಂದೆ ಹೋಗಿ ನಾನು ಅವಿತುಕೊಂಡೆ. ಆ ನಾಯಿಗಳು ನಾನಿದ್ದಲ್ಲಿಗೇ

ಬಂದುಬಿಟ್ಟುವು. ಅವು ನನ್ನನ್ನು ಹರಿದು ತಿನ್ನುವುದಕ್ಕಿಂತ ನಾನಾಗಿಯೇ ಅವರ ಕೈಗೆ ಸಿಕ್ಕುವುದು ಲೇಸೆಂದು ಅಲ್ಲಿಂದೆದ್ದೆ. ಅವರು ನಾಯಿಗಳನ್ನು ಹಿಂದಕ್ಕೆ ಜಗ್ಗಿ, ನನ್ನ ರಟ್ಟೆಯನ್ನು ಹಿಡಿದೆಳೆದು ಆ ಕೊಲೆಯಾದ ಕೋಣೆಗೆ ಕರೆದೊಯ್ದರು.

'ಇವನೇ ಏನು ತಾಯಿ?' ಎಂದು ಅವರೊಳಗಿನವನೊಬ್ಬ ಕೇಳಿದ.

ಆಗ ಹೆಂಗುಸು ಕೈವಸ್ತ್ರದಿಂದ ಕಣ್ಣುಗಳನ್ನೊರಸುತ್ತ ಶೋಕಿಸುತ್ತಿರುವಂತಿದ್ದಳು. ಆ ಮಾತನ್ನು ಕೇಳಿದೊಡನೆ ಭಯಂಕರ ಕೋಪವನ್ನು ತಳೆದು ಅವಳೆಂದಳು:—

'ಹೌದು, ಹೌದು, ಇವನೇ ಆ ಪಾಪಿ! ಅಯ್ಯೋ, ಮುದುಕನನ್ನು ಕೊಂದುಬಿಟ್ಟೆಯಲ್ಲ!'

ಅವಳ ಆ ನಟನೆಯನ್ನು ಕಂಡು ನನಗೆ ಅಳಬೇಕೊ, ನಗಬೇಕೊ, ಅಥವಾ ಸಿಟ್ಟು ಮಾಡಬೇಕೊ, ಎಂಬುದು ತಿಳಿಯದೆ ಹೋಯಿತು. ನನ್ನ ಚಿತ್ತವು ಕದಡಿದ ಹೊಂಡದಂತಿದ್ದಿತು.

ಇನ್ನೊಬ್ಬ ಮುಷ್ಟಿಯನ್ನು ತೋರುತ್ತ 'ಏನೊ? ಏ!' ಎಂದ.

'ನಾನಲ್ಲ, ಸ್ವಾಮಿ, ಅವರೇ ಕೊಂದವರು!'

'ಅಂ! ಸುಳ್ಳು ಬೊಗಳಬೇಡ!'

'ಸುಳ್ಳೇಕೆ ಹೇಳಲಿ? ಕೊಂದದ್ದನ್ನು ಕಣ್ಣಾರೆ ನೋಡಿದೆ!'

'ಎಲಾ, ಸೂಳೇಮಗನೆ!'

'ಬೈಯಿರಿ! ಆದರೆ ಅವರು ಚೂರಿಯಿಂದ ಎರಡು ಮೂರು ಬಾರಿ ಇರಿದು ಕೊಂದರು. ಮೊದಲು ಒಡವೆಗಳನ್ನು ಕದಿಯಲಿಕ್ಕೆ ಸಹಾಯಮಾಡಿ—'

ಆಳುಗಳಲ್ಲೊಬ್ಬನು ನನ್ನನ್ನು ಒದೆಯಲಿಕ್ಕೆಂದು ಕಾಲೆತ್ತಿದನು. ಅವನನ್ನು ತಡೆಯುತ್ತ ಆ ಹೆಂಗುಸು ಹೇಳಿದಳು: 'ಬೇಡ! ಅವನನ್ನು ಹೊಡೆಯಬೇಡಿ; ಪೋಲೀಸರಿಗೆ ಒಪ್ಪಿಸಿ ಬಿಡಿ ಅವನನ್ನು!'

ಅಲ್ಲಿ ಬಂದ ಪೋಲೀಸ ಸಿಪಾಯಿಯೊಬ್ಬನು 'ಅದೇ ಸರಿ, ತಾವು, ತಾವು ಸ್ವತಃ ಈ ದುಷ್ಟನ ಪಾಪಕೃತ್ಯವನ್ನು ನೋಡಿದ್ದೀರಲ್ಲವೆ?'

'ಅಯ್ಯೋ ದೇವರೆ! ಕಣ್ಣುಗಳನ್ನು ನಂಬಲಾರೆನೆ? ಹಾ! ಎಷ್ಟು ಭಯಂಕರ! ಅವನ ಕೈಯಲ್ಲಿ ಒಂದು ಚೀಲ ಇದ್ದಿತು. ಅದರಲ್ಲಿ ಅವನು ಒಡವೆಗಳನ್ನು ತುಂಬುತ್ತಿದ್ದ. ಅದನ್ನು ನೋಡಿ ಅವರು ಈ ಪಾಪಿಯನ್ನು ಹಿಡಿದರು. ಕೈಗೆ ಕೈ ಹತ್ತಿತು. ಕೊನೆಗೆ ಇವನು ಚಾಕುವಿನಿಂದ ಇರಿದ! ಅಯ್ಯೋ! ನೋಡಿರಿ, ಅವನ ಕೈಯ ಮೇಲಿನ ರಕ್ತವನ್ನು!'

ಅಷ್ಟರಲ್ಲಿ ಇನ್ನೊಬ್ಬ ಆಳು, ನಾನು ಓಡಿಹೋಗುತ್ತಿದ್ದಾಗ ಕೆಡಹಿದ ಚೀಲವನ್ನು ತಂದು ತೋರಿಸಿ 'ಇದೇಯೋ, ತಾವು ಹೇಳಿದ ಚೀಲ?' ಎಂದು ಕೇಳಿದ.

'ಹೌದು.'

'ಇದರಲ್ಲಿ ಒಡವೆಗಳೂ ಇವೆ.'

'ಹಾಗಾದರೆ, ಇವನನ್ನು ಸದ್ಯ ನಮ್ಮ ಠಾಣೆಗೆ ಒಯ್ದು ಬೆಳಗಾಗುವ ತನಕ ಕಾಯುತ್ತೇವೆ. ನಾಳೆ ತಕ್ಕ ಮರ್ಯಾದೆ ಆಗುತ್ತದೆ.' ಎಂದು ಪೋಲೀಸಿನವ ಹೇಳಿದ.

ಆಗ ಆ ಹೆಂಗುಸು ಕನಿಕರವನ್ನು ತೋರಿಸುತ್ತ, ಹೀಗೆಂದಳು: 'ಪಾಪ! ಯಾವ ಆಶೆಯಿಂದ ಈ ಕೆಟ್ಟ ಕೆಲಸ ಮಾಡಿದನೊ! ನಾವು ಬಯ್ದು, ಹೊಡೆದು, ಬಡಿದು ಪ್ರಯೋಜನವೇನು? ಕಾಯಿದೆಯಂತೆ ಅವನಿಗೆ ಯಾವ ಶಿಕ್ಷೆಯಾಗಬೇಕೋ ಅದು ಆಗಲಿ!'

ಒಂದು ಚಕಾರವನ್ನು ಆಡಲಿಕ್ಕೂ ನನ್ನ ನಾಲಗೆ ಏಳಲಿಲ್ಲ; ಅವಳ ಆ ಅಭಿನಯದಿಂದ ನಾನು ದಿಕ್ಕುಗೆಟ್ಟು ಹೋದೆ. ಆ ಮಾಟಗಾರ್ತಿಯು ಆ ರೀತಿ ಮಂಕುಬೂದಿ ಬಳಿದದ್ದನ್ನು ನೋಡಿ ನಾನು ಅಪ್ರತಿಭನಾದೆ.

ಇದೇ ನಿಜವಾಗಿ ನಡೆದ ಸಂಗತಿ; ಎಲ್ಲವನ್ನೂ ವಿವರಿಸಿದ್ದೇನೆ. ಇದನ್ನೆಲ್ಲ ತಾವು ಲಕ್ಷ್ಯಪೂರ್ವಕವಾಗಿ ಪರಿಶೀಲಿಸಿ ವಿಚಾರಣೆ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ"

ತಲೆನೋವು, ನೆಗಡಿ, ಕಾಲರಾ,
ಉರಿ ಮುಂತಾದ ಶಾರೀರಿಕ
ರೋಗಗಳ ಮೇಲೆ

"ರಜಿಸ್ಟರ್ಡ್"

ನೀಲಗಿರಿ ಅರ್ಕ
NILGIR ARK

ಪ್ರತಿ ಒಂದು ಹನಿ ಗುಣದ ಪ್ರಭಾವ
ತೋರಿಸುತ್ತದೆ.

ಬಾಟಲಿ ಕಿಮ್ಮತ್ತು ೪ ಆಣೆ.

ಸ್ಟಾರ್ ಕಂಪನಿ, ಬೆಳಗಾಂವ

ಶಿಯಾ-ಸುನ್ನಿಗಳಲ್ಲಿ ಕಲಹವೇಕೆ?

ಶ್ರೀ. ಬಿ. ಪಾರ್ಥಸಾರಥಿರಾವ್ *

★

ಹಿಂದೂ ಮುಸಲ್ಮಾನರು ನೈಸರ್ಗಿಕ ಶತ್ರುಗಳೆಂದೂ ಅದಕ್ಕಾಗಿ ತಮಗೆ ಪ್ರತ್ಯೇಕ 'ಪಾಕಿಸ್ತಾನ್' ಬೇಕೆಂದೂ ಜೀನಾ ಸಾಹೇಬರು ಘೋಷಿಸುತ್ತ ನಡೆದಿರುವರು. ತಮ್ಮ ಧರ್ಮದಲ್ಲಿಯೆ ಹುಟ್ಟುಹಗೆತನದಿಂದ ಬಾಳುವ ಈ ಶಿಯಾ, ಸುನ್ನೀ ಪಂಗಡಗಳಿಗಾಗಿ ಯಾವ ಸಮಾಧಾನವನ್ನು ಹೇಳುವರು?

★

ಕನ್ನಡನಾಡಿನಲ್ಲಿರುವಷ್ಟು ಮತಮತ-ಪಂಥಪಂಥಗಳ ಜಗಳಾಟ ಇನ್ನೆಲ್ಲಿಯೂ ಇಲ್ಲ. ಮತಮತಗಳಲ್ಲಿಯ ಜಗಳಾಟಗಳಲ್ಲದೆ, ಒಂದೊಂದು ಮತಗಳಲ್ಲಿಯ ಒಳಜಗಳಗಳೂ ಇಲ್ಲಿ ಉಂಟು. ಉದಾಹರಣೆಗಾಗಿ ಹೇಳಬೇಕೆಂದರೆ: ಒಂದೆ ವೀರಶೈವ ಪಂಥದಲ್ಲಿ 'ಪಂಚಾಚಾರ್ಯ ಪಂಥ' 'ಬಸವೇಶ್ವರನ ಪಂಥ' ಎಂಬ ಇಬ್ಬಣಗಳಾಗಿ ಹೊಡೆದಾಟ ನಡೆಯುವುದನ್ನು ನೋಡುತ್ತಿದ್ದೇವೆ. ದ್ವೈತಮತದವರಲ್ಲಿ ಕೂಡ ಉತ್ತರಾದಿಮಠ, ರಾಘವೇಂದ್ರಸ್ವಾಮಿಗಳ ಮಠ ಎಂಬ ಇಬ್ಬಣದಲ್ಲಿ ಸಹಕಾರ ಸಹಾನುಭೂತಿಗಳು ಏನೂ ಇಲ್ಲ. ವಿಶಿಷ್ಟಾದ್ವೈತಮತದಲ್ಲಿ 'ತೆಂಗಲೆ' 'ವಡಗಲೆ' ಜಗಳಾಟ ಇದ್ದೆ ಇದೆ. ಶಾಂಕರಾದ್ವೈತಮತದಲ್ಲಿಯೂ ಜ್ಞಾನ-ಪ್ರಾಧಾನ್ಯ, ಕರ್ಮಪ್ರಾಧಾನ್ಯಗಳ ವಾದ ನಡೆದೇ ನಡೆದಿರುವುದು. ಇವುಗಳಲ್ಲಿಯ ಕೆಲವೊಂದು ಜಗಳಾಟಗಳು, ಸರಕಾರದ ನ್ಯಾಯಾಲಯದ ಕಟ್ಟೆಯನ್ನು ಹತ್ತಿಬಂದಿರುವುವಾದರೂ ಸತ್ಯಾಗ್ರಹ-ಕೈಗೆ ಕೈ-ಸೆರೆಮನೆಗಳವರೆಗೆ ಯಾವುವೂ ಸಾಹಸ ತೋರಿಸಿಲ್ಲ. ಆದರೆ ನಮ್ಮೆಲ್ಲರಿಗೂ ಒಂದೆ ಪಂಥದವರಾಗಿ ಕಾಣುವ—ಎಲ್ಲರೂ ತೀರ ಒಕ್ಕಟ್ಟಾಗಿರುವರೆಂದು ತಿಳಿವಳಿಕೆಯಿರುವ—ಇಸ್ಲಾಂ (ಶಾಂತಿ) ಧರ್ಮದಲ್ಲಿಯ 'ಶಿಯಾ' 'ಸುನ್ನಿ' ಪಂಥಗಳ ಒಳಜಗಳವು ಕೈಗೆ ಕೈಹಚ್ಚುತ್ತಲಿದೆ; ಕೆಲವರ ಪ್ರಾಣಗಳನ್ನೂ ತೆಗೆದುಕೊಂಡಿದೆ; ಸಾಮೂಹಿಕ—ಸತ್ಯಾಗ್ರಹ ಮಾಡಿಸುತ್ತಲಿದೆ. ಈಗಾಗಲೆ ಅದೆಷ್ಟೋ ಜನರನ್ನು ಸರಕಾರದ ಸೆರೆಮನೆಗಳಿಗೆ ಕೂಡ ಕಳಿಸಿಬಿಟ್ಟಿದೆ. ಇಂತಹ ಉಗ್ರವಾದ ತಾತ್ತ್ವಿಕ (?) ಅಂತಃಕಲಹಕ್ಕೆ ಮೂಲಕಾರಣ ಏನಿರಬಹುದೆಂಬುದರ ಸ್ಪಷ್ಟ ಕಲ್ಪನೆ ನಮ್ಮಲ್ಲಿ ಅನೇಕರಿಗೆ ಇರಲಾರದು. ಅದನ್ನು ಸ್ವಲ್ಪ ವಿವರವಿವರವಾಗಿ ತಿಳುಹಿಸಬೇಕೆಂಬುದೆ ಈ ಲೇಖನದ ಉದ್ದೇಶವಾಗಿದೆ.

ಶಿಯಾ-ಸುನ್ನಿಗಳ ಜಗಳಾಟವು ಹಿಂದುಸ್ತಾನದ ಇನ್ನಾವ ಭಾಗದಲ್ಲಿಯೂ ಹೆಚ್ಚಾಗಿ ಇರದೆ, ಸಂಯುಕ್ತ ಪ್ರಾಂತ್ಯದಲ್ಲಿಯ ಲಖನೌನಗರದಲ್ಲಿಯೆ ಇದು ಶಿಖರಕ್ಕೇರಿ ನಿಂತಿದೆ. ಎರಡು ಪಂಥದವರೂ, ಮುಹಮ್ಮದ ಪೈಗಂಬರರಿಂದ ಪ್ರಸ್ಥಾಪಿತವಾದ ಒಂದೆ ಇಸ್ಲಾಂ ಧರ್ಮದವರಾದರೂ, ಕುಲಶತ್ರುಗಳು ಹೊಡೆದಾಡದಷ್ಟು ಇಂದು ಹೊಡೆದಾಡುತ್ತಲಿದ್ದಾರೆ. ಈ ಹೊಡೆದಾಟಕ್ಕೆ ಮೂಲಕಾರಣ ಎರಡು ಗೀತಗಳು—ಶಿಯಾ ಪಂಥದವರ 'ತಬರ್ರಾ'; ಸುನ್ನೀಪಂಥದವರ 'ಮಧೇಸಾಹಬಾ'! ತಬರ್ರಾ ಗೀತ ಹಾಡುವುದಕ್ಕೆ ತಮಗೆ ತಡೆಯಾವುದೂ ಇರಬಾರದೆಂದು ಶಿಯಾಗಳೆನ್ನುವರು; ಅದನ್ನು ಹಾಡಿದರೆ ತಮ್ಮ ಮನಸ್ಸು ಅಳುಕುವುದೆಂದು ಸುನ್ನಿಗಳು ಹೇಳುವರು. ಆದುದರಿಂದಲೆ ಬಹಿರಂಗವಾಗಿ 'ತಬರ್ರಾ' ಗೀತವನ್ನು ಅಲ್ಲಿಯ ಸರಕಾರ ಹೇಳಗೊಡುವುದಿಲ್ಲ. ಈ ತಡೆವಳಿಯ ಹುಕುಮನ್ನು ಮುರಿದು ಹಲವು ಶಿಯಾಗಳು ಸೆರೆಮನೆಯನ್ನು ಸೇರಿದ್ದಾರೆ. ಸುನ್ನೀಪಂಥದವರು ತಮ್ಮ 'ಮಧೇಸಾಹಬಾ' ಗೀತವನ್ನು ಮೋಹರಮ್ ಹಬ್ಬದ ಮೆರೆವಣಿಗೆಯಲ್ಲಿ ಹೇಳಬೇಕೆಂದು ಹವಣಿಸುತ್ತಾರೆ. ತಮ್ಮ ಧರ್ಮಭಾವನೆಗೆ ಆಘಾತ ಮಾಡುವ ಉದ್ದೇಶವಿದೆಯೆಂದು ಶಿಯಾಪಂಥಿಗಳು ಅದನ್ನು ವಿರೋಧಿಸುವರಾದುದರಿಂದ, ಅಲ್ಲಿಯ ಸರಕಾರವು ಅದನ್ನೂ ಹೇಳದಂತೆ ಹುಕುಮು ಮಾಡಿದೆ. ಆದರೂ ಶಿಯಾಗಳಂತೆ ಸುನ್ನೀಪಂಥದವರು ಸತ್ಯಾಗ್ರಹಮಾಡುವ ಮನಸ್ಸನ್ನು ಇದುವರೆಗಂತೂ ಮಾಡಿಲ್ಲ. ಮೂಕನ ಮುಂದೆ ಮೂಗುತುರಿಸಿಕೊಂಡಂತೆ ಪರಸ್ಪರರನ್ನು ಕೆಣಕಿ ಕೆರಳಿಸುವ ಈ 'ತಬರ್ರಾ'— 'ಮಧೇಸಾಹಬಾ' ಗೀತಗಳಲ್ಲಿ ಅಂತಹ ರಹಸ್ಯವೇನು ಅಡಗಿರಬಹುದು?

ಇಸ್ಲಾಂ ಧರ್ಮದಲ್ಲಿ 'ಶಿಯಾ' – 'ಸುನ್ನಿ' ಗಳೆಂದು ಎರಡು ಭಿನ್ನ ಭಿನ್ನ ಪಂಥಗಳಾದ ಕತೆಯನ್ನು ಇಲ್ಲಿ ಮೊದಲು ವಿವರಿಸ-

---

* ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದಿದ್ದ ವಿಷಯವನ್ನು ಸಂಗ್ರಹಿಸಿ ಈ ಲೇಖನ ಬರೆಯಲಾಗಿದೆ.
—ಲೇಖಕ

ಬೇಕಾಗಿದೆ. ಏಕೆಂದರೆ ಇಂದಿನ ಜಗಳಾಟದ ಮೂಲ ಆ ಕತೆಯಲ್ಲಿಯೆ ಕಾಣಸಿಕ್ಕುವುದು. ತಮಗೆ ದೇವರು ಕೊಟ್ಟ 'ಕುರಾಣ'ವನ್ನು ಜಗತ್ತಿನಲ್ಲಿ ಬೆಳಕಿಗೆ ತಂದು, ಹಜರತ್ ಮಹಮ್ಮದ ಪೈಗಂಬರರು ಇಸ್ಲಾಂ ಧರ್ಮವನ್ನು ಸಂಸ್ಥಾಪಿಸಿದುದು ಸರಿಯಷ್ಟೆ? ಮೊದಮೊದಲು ಅವರಿಗೆ ವಿರೋಧ ಹೆಚ್ಚಾಗಿ ತೋರಿದರೂ ಬರುಬರುತ್ತ ಅವರ ಅನುಯಾಯಿವರ್ಗ ಬೆಳೆದು, ಆ ಧರ್ಮದ ಪ್ರಚಾರ ಹೆಚ್ಚಾಗುತ್ತ ನಡೆಯಿತು. ಮಾನವಕುಲದಲ್ಲಿ ಸಮಾನತೆ, ಬಂಧುಭಾವಗಳು ನೆಲೆಗೊಳ್ಳಬೇಕೆಂಬುದು ಇಸ್ಲಾಂ ಧರ್ಮದ ಉದ್ದೇಶವಾದುದರಿಂದ, ತಾವು ಜಗತ್ತನ್ನು ಬಿಡುವ ಕಾಲದಲ್ಲಿ ಹಜರತ್ ಮಹಮ್ಮದ ಪೈಗಂಬರರು, ತಮ್ಮ ತರುವಾಯ ಖಲೀಫಾ (ಧರ್ಮಾಧಿಕಾರಿಗಳು)ಯಾರು ಇರಬೇಕೆಂಬುದನ್ನು ಗೊತ್ತುಮಾಡಿ ಹೇಳಿರಲಿಲ್ಲ. ಅವರಿಗೆ ಗಂಡುಸಂತಾನವಿರಲಿಲ್ಲ; ಒಬ್ಬಳೆ ಒಬ್ಬಳು ಮಗಳಿದ್ದಳು. ಅವಳನ್ನು ಸೈಯದ್ ಮನೆತನದಲ್ಲಿಯ ಹಜರತ್ ಅಲಿ ಎಂಬವನಿಗೆ ಕೊಟ್ಟು ಮದುವೆಯಾಗಿದ್ದಿತು. ಪೈಗಂಬರರ ತರುವಾಯ ಇಸ್ಲಾಂ ಧರ್ಮಪೀಠಕ್ಕೆ ಯಾರಾದರೊಬ್ಬರು ಅಧಿಕಾರಿಗಳಾಗಿ ಇದ್ದೇ ಇರಬೇಕೆಂದು ಅನುಯಾಯಿವರ್ಗ ಏಕಕಂಠದಿಂದ ನಿರ್ಣಯಿಸಿತಾದರೂ, ಆ ಧರ್ಮಾಧಿಕಾರಿತ್ವ ಯಾರ ಕಡೆಗೆ ಇರಬೇಕೆಂಬುದರ ಬಗ್ಗೆ ವಾದಬಿದ್ದು ಇಬ್ಬಣವಾಯಿತು. 'ಪೈಗಂಬರರ ತೀರ ಹತ್ತಿರದ ಸಂಬಂಧಿಕರನ್ನೆ ಆ ಪೀಠಕ್ಕೆ ಆರಿಸಬೇಕು' ಎಂದು ಒಂದು ಬಣದವರ ಅಭಿಪ್ರಾಯ; ಎಂತಲೆ ಇವರು ಪೈಗಂಬರರ ಅಳಿಯನಾದ ಹಜರತ್ ಅಲಿಯ ಹೆಸರನ್ನು ಎತ್ತಿಹಿಡಿದರು. ಇನ್ನೊಂದು ಬಣದಲ್ಲಿರುವ ಬಹುಜನ ಸಮಾಜಕ್ಕೆ, ಈ ಹತ್ತಿರಸಂಬಂಧದ ಹಕ್ಕು ಒಪ್ಪಿಗೆಯಾಗಲಿಲ್ಲ. ಅವರೆಂದುದು ಹೀಗೆ: 'ಇಸ್ಲಾಂ ಧರ್ಮತತ್ತ್ವದಂತೆ ಎಲ್ಲರೂ ಸಮಾನರು, ಎಲ್ಲರೂ ಪರಸ್ಪರ ಸಂಬಂಧಿಕರು; ಆದುದರಿಂದ ಧರ್ಮಾಧಿಕಾರಿಯನ್ನು ನಾವೆಲ್ಲರೂ ಸೇರಿ ನಿರ್ಣಯಿಸಬೇಕು'. ಈ ರೀತಿಯ ಅಭಿಪ್ರಾಯವಿದ್ದ ಬಹುಸಂಖ್ಯಾಕ ಪಕ್ಷದವರು, ಮಹಮ್ಮದ ಪೈಗಂಬರರ ತರುವಾಯ ಒಬ್ಬರಹಿಂದೆ ಒಬ್ಬರಂತೆ ಅಬೂಬಕರ್, ಉಮ್ಮರ್, ಉಸ್ಮಾನ್ ಎಂಬ ಹೆಸರಿನ ಮೂವರು (ಖಲೀಫಾ) ಧರ್ಮಾಧಿಕಾರಿಗಳನ್ನಾರಿಸುತ್ತ ಬಂದರು. ಅವರೆಲ್ಲ ವಯಸ್ಸು ಕಳೆದವರಾಗಿದ್ದುದರಿಂದ ಹೆಚ್ಚು ಹೆಚ್ಚು ದಿನ ಆಡಳಿತ ನಡೆಯಿಸಲಿಕ್ಕೆ ಸಮರ್ಥರಾಗಲಿಲ್ಲ. ನಾಲ್ಕನೆಯ ಧರ್ಮಾಧಿಕಾರಿಯನ್ನಾರಿಸುವಾಗ ಮೂಲ ಪೈಗಂಬರರ ಅಳಿಯನಾದ ಅಲಿಯನ್ನೇ ಆರಿಸಿ 'ಖಲಿಫಾ'ನನ್ನಾಗಿ ಮಾಡಿದರು. ಆಗ ಮೊದಲಿನಿಂದಲೂ ಅಲಿಯನ್ನು ಎತ್ತಿಹಿಡಿದಿದ್ದ ಅಲ್ಪಸಂಖ್ಯಾಕರ ಪಕ್ಷಕ್ಕೆ ತುಂಬ ಆನಂದವಾಯಿತು. ಅಲಿಗೆ ಹಸನ್, ಹುಸೇನ್ ಎಂಬಿಬ್ಬರು ಮಕ್ಕಳಿದ್ದರು.

ಅಲಿಯ ತರುವಾಯ ಖಲೀಫಾ ಪಟ್ಟಕ್ಕಾಗಿ ಮತ್ತೆ ಜಗಳಾಟ ಪ್ರಾರಂಭವಾಯಿತು. ಮೊದಲಿನಿಂದಲೂ ಅಲಿಯ ಪಕ್ಷದವರಾದ ಶಿಯಾಗಳು 'ಪೈಗಂಬರರ ಮಗಳ ಮಗ ಎಂದರೆ ಅಲಿಯ ಮಗ ಮುಂದೆ ಖಲೀಫಾ ಆಗಬೇಕು' ಎಂದರು. ಅವರ ವಿರೋಧಿಗಳಾದ ಸುನ್ನಿಗಳು 'ಬಹುಮತದಿಂದ ಆರಿಸಿಬಂದವರು ಖಲೀಫಾ ಆಗಬೇಕು' ಎಂದರು. ಆದರಂತೆ ಅವರು ಬೇರೆಯವನೊಬ್ಬನನ್ನು ಆಯ್ದುಕೊಂಡುದೂ ಆಯಿತು. ಇದರಿಂದ ಎರಡೂ ಪಕ್ಷಗಳಲ್ಲಿ ಜಗಳದ ಕಿಡಿಯೆದ್ದುದು, ಯುದ್ಧದ ಉಗ್ರಜ್ವಾಲೆಯಾಗಿ ಪರಿಣಮಿಸಿತು. ಈ ಯುದ್ಧದಲ್ಲಿ ಅಲಿಯ ಮಕ್ಕಳಿಬ್ಬರೂ ಮರಣ ಹೊಂದಿದರು. ಮೊಹರ್ರಮ್ ತಿಂಗಳ ೯-೧೦ನೆಯ ದಿನಗಳು ಈ ಧರ್ಮಯುದ್ಧದ ಕೊನೆಯ ದಿನಗಳಾದುವು. ಆದುದರಿಂದಲೆ ಶಿಯಾಪಂಥದ ಮುಸಲ್ಮಾನರು, ಈ ದಿನಗಳನ್ನು — ಪ್ರತಿ ವರ್ಷವೂ— ದುಃಖದ ದಿನಗಳೆಂದು ತಿಳಿದು ಶೋಕಪ್ರದರ್ಶನ ಮಾಡುವ ರೂಢಿಯನ್ನು ಪ್ರಾರಂಭಿಸಿದರು. ಸುನ್ನೀಪಂಥದವರು ಆ ಯುದ್ಧದಲ್ಲಿ ಜಯಶಾಲಿಗಳಾಗಿದ್ದರೂ, ಆ ಯುದ್ಧದಿನಗಳನ್ನು ತಮ್ಮ ವಿಜಯದಿನಗಳನ್ನಾಗಿ ತಿಳಿಯಬೇಕೆಂಬ ವಿಚಾರವನ್ನೇನೂ ಪ್ರಕಟಿಸಲಿಲ್ಲ.

ಹಿಂದುಸ್ಥಾನಕ್ಕೆ ಶಿಯಾ, ಸುನ್ನೀ ಎರಡು ಪಂಥದ ಜನರೂ ಬಂದರು. ಇಬ್ಬರೂ ರಾಜ್ಯಗಳನ್ನೂ, ದೊಡ್ಡ ದೊಡ್ಡ ಅಧಿಕಾರಗಳನ್ನೂ ಗಳಿಸಿದರು. ಮೊಗಲ್ ರಾಜಮನೆತನದವರು ಸುನ್ನೀ ಪಂಥದ ಅನುಯಾಯಿಗಳು. ವಿಜಾಪುರದ ಆದಿಲ್‌ಶಾಹಿ ಮನೆತನದವರು ಶಿಯಾಪಂಥದ ಪುರಸ್ಕರ್ತರುಗಳು. ಅಯೋಧ್ಯೆಯ ನವಾಬನೂ ಶಿಯಾಪಂಥದವನಾಗಿ ಇದ್ದುದರಿಂದ, ಹೆಚ್ಚಾಗಿ ಆತನ ದರ್ಬಾರಿನಲ್ಲಿಯ ಅಧಿಕಾರಿವರ್ಗವೆಲ್ಲ ಶಿಯಾಪಂಥಕ್ಕೆ ಸೇರಿದುದೆ ಆಗಿದ್ದಿತು. ಅದಕ್ಕಾಗಿಯೆ ಲಖನೌ ನಗರವು ಇಂದು ಶಿಯಾಪಂಥೀಯ ಬಹುಸಂಖ್ಯಾಕರಿಗೆ ನೆಲೆವೀಡಾಗಿದೆ. ಎಂತಲೆ

ಗಜಕರ್ಣ, ಹುರುಕು, ತದ್ದು ಮುಂತಾದ
ತ್ವಚರೋಗದಿಂದ ಪೀಡಿತರಾದ
ಜನರಿಗೆ
ರಜಿಸ್ಟರ್ಡ
ಗೋವಾ ಮಲಮ
GOA OINTMENT
ಗುಣ ಬಾರದಿದ್ದಲ್ಲಿ
ಹಣ ತಿರುಗಿ ಕೊಡುವ ಗ್ಯಾರಂಟಿಯಿಂದ
ಮಾರಲ್ಪಡುತ್ತದೆ.
ಬಾಟಲಿ ಕಿಮ್ಮತ್ತು ೪ ಆಣೆ.
ಸ್ಟಾರ್ ಕಂಪನಿ, ಬೆಳಗಾಂವ

ಅಲ್ಲಿ ನಡೆಯುವ ಮೊಹರ್ರಮ್ ಹಬ್ಬವು ಶೋಕಪ್ರದರ್ಶನಾರ್ಥ ವಾಗಿಯೆ ನೆರವೇರುತ್ತಿರುತ್ತದೆ.

ಮೂಲ ಪೈಗಂಬರರ ಮೊಮ್ಮಕ್ಕಳಾದ ಹಸನ್, ಹುಸೇನ್ ಇವರ ಮರಣವು ದುಃಖದಾಯಕವಾದ ಕೊಲೆಯ ಮೂಲಕ ವಾದುದರಿಂದ, ಸುನ್ನೀಪಂಥದವರಿಗೂ ಅದರಿಂದ ವ್ಯಥೆಯೆನಿಸುತ್ತಿರುವುದು ಸಹಜವಾಗಿದೆ. ಆದುದರಿಂದಲೆ ಅವರೂ ಈ ಮೊಹರ್ರಂ ಹಬ್ಬದಲ್ಲಿ ಭಾಗವಹಿಸುವರು. ಶೋಕಪ್ರದರ್ಶನಕ್ಕಾಗಿಯೆ ಈ ಹಬ್ಬವಿರುವುದರಿಂದ, ಆಗ ಹೇಳಬೇಕಾದ ಗೀತಗಳೆಲ್ಲ ಕರುಣಾರಸದಿಂದ ಕೂಡಿದುವುಗಳೆ ಇರುವುವು. ಆದುದರಿಂದ ಮಿಕ್ಕ ಕಡೆಗಳಲ್ಲಿ ಎಲ್ಲಿಯೂ, ಮೊಹರ್ರಂ ಕಾಲದಲ್ಲಿ ಶಿಯಾ-ಸುನ್ನೀ ಹೊಡೆದಾಟವೆದ್ದುದನ್ನು ನಾವು ಕಾಣಲಾರೆವು.

ಸ್ವಮತ, ಸ್ವಪಂಥಗಳ ಅಭಿಮಾನ ಅನಿವಾರ್ಯವಾದುದು. ಬುದ್ಧನ ಮತವನ್ನು ನಿಂದಿಸಿದ ಅದ್ವೈತಗ್ರಂಥಗಳೂ ಅದ್ವೈತರನ್ನು ನಿಂದೆಮಾಡಿ ಬರೆದ ದ್ವೈತಗ್ರಂಥಗಳೂ ಇವರಿಬ್ಬರನ್ನೂ ನಿಂದೆ ಮಾಡಿ ಬರೆದ ಜೈನ-ವೀರಶೈವ ಗ್ರಂಥಗಳೂ ನಮ್ಮಲ್ಲಿ ಹೇರಳವಾಗಿ ಸಿಕ್ಕುವುವು. ಇವೆಲ್ಲ ಸತ್ಯದೃಷ್ಟಿಯಿಂದ ಬರೆದುವುಗಳಲ್ಲ. ಮತಾಭಿನಿವೇಶದ ಅಂಧಶ್ರದ್ಧೆಯಿಂದ. ಇದರಂತೆಯೇ ಶಿಯಾ-ಪಂಥದ ಹುಚ್ಚು ಅಭಿಮಾನವಿದ್ದ ಕವಿಯೊಬ್ಬನು ಯಾವನೋ 'ತಬರ್ರಾ' ಗೀತವನ್ನು ರಚಿಸಿದನು; ಅದರಲ್ಲಿ ಮಹಮ್ಮದ ಪೈಗಂಬರರ ತರುವಾಯ ಬಂದ ಮೂವರು ಖಲೀಫರಿಗೆ ಅಪಮಾನವಾಗುವಂತಹ ಮಾತುಗಳನ್ನು ಹೆಣೆದನು. ಸಾಮಾನ್ಯವಾಗಿ ಶಿಯಾಪಂಥೀಯರೆಲ್ಲರೂ ಅಭಿಮಾನದಿಂದ ಅದನ್ನು ಹಾಡಲು ತೊಡಗಿದರು. ಇದಕ್ಕೆ ಪ್ರತಿಯಾಗಿ ಸುನ್ನೀಪಂಥದವರಾರೋ— ಆ ಮೂವರು ಖಲೀಫರ ಸ್ತುತಿಯಿಂದೊಡಗೂಡಿದ ಕವಿತೆಗಳನ್ನು ರಚಿಸಿದರು. ಆ ಕವಿತೆಗಳೆ 'ಮಧೇಸಾಹಬಾ' ಎಂಬ ಹೆಸರಿನಿಂದ ಪ್ರಸಿದ್ಧಿಗೊಂಡಿರುವುವು. 'ತಬರ್ರಾ' ಕಿವಿಗೆ ಬಿದ್ದರೆ ಸುನ್ನಿಗಳಿಗೆ ಕೋಪ ಕೆರಳುವುದು. ಮಧೇಸಾಹಬಾ ಕಿವಿಗೆ ಬಿದ್ದರೆ ಶಿಯಾಗಳಿಗೆ ಸಂತಾಪ ಉಕ್ಕುವುದು. ಜನಸಾಮಾನ್ಯರಲ್ಲಿ ತಮ್ಮಲ್ಲಿಯ ಶಕ್ತಿಪ್ರದರ್ಶನದ ಅಪೇಕ್ಷೆ ಅನಿವಾರ್ಯವಾಗಿರುವುದು. ಭಾರತದ ಪರಾಧೀನಜೀವನದಲ್ಲಿ ಅದಕ್ಕೆ ಯೋಗ್ಯ ಅವಕಾಶ ಎಲ್ಲಿ ದೊರೆಯಬೇಕು? ಆದುದರಿಂದಲೆ ಮತ-ಮತಾಂತರ ಕಲಹಗಳ ಮೂಲಕ, ಮತ-ಪಂಥಗಳ ಅಂತಃಕಲಹಗಳ ಮೂಲಕ, ತಮ್ಮ ಬಲವನ್ನು ಪ್ರದರ್ಶಿಸಬೇಕಾಗುವುದು. ದೇಶದ ದುರ್ದೈವ!

ಸಂಯುಕ್ತಪ್ರಾಂತವೂ ಲಖನೌನಗರವೂ ಭಾರತದಲ್ಲಿ ಶಿಯಾಪಂಥೀಯರಿಗೆ ತವರೂರಾಗಿದೆ. ಅಲ್ಲಿ ಅವರ ಸಂಖ್ಯಾಬಲವೂ ಸಾಕಷ್ಟು ಇದೆ. ಆದುದರಿಂದ ಶಿಯಾ-ಸುನ್ನಿಗಳ ಜಗಳಾಟದ ತವರುಮನೆಯೂ ಅಲ್ಲಿಯೆ ಇರಬೇಕಾದುದು ಸಹಜವೆ. ಭಾರತ-ರಾಷ್ಟ್ರೀಯ ಮಹಾಸಭೆ ಹುಟ್ಟಿದ ವರ್ಷವೆ ಎಂದರೆ ಕ್ರಿ. ಶ. ೧೮೮೫ ರ ಸುಮಾರು ಶಿಯಾ ಸುನ್ನಿಗಳ ಕಲಹಕ್ಕೆ ಪ್ರಾರಂಭವಾಯಿತು. ನಮಾಜಿನ ವೇಳೆಯನ್ನು ಸೂಚಿಸುವುದಕ್ಕಾಗಿ ಮಸೀದೆಯಲ್ಲಿ, ಅಧಿಕೃತನಾದ ಮನುಷ್ಯನೊಬ್ಬನು ಕೆಲವೊಂದು ಶಬ್ದಸಮೂಹಗಳನ್ನು ಕೂಗಿ ಕೂಗಿ ನುಡಿಯುವುದು ಮುಸ್ಲಿಂ ಧರ್ಮದಲ್ಲಿಯದೊಂದು ಸಂಪ್ರದಾಯ. ಹಾಗೆ ಕೂಗಿನುಡಿಯುವವನು 'ಮುಅಝಿಾನ್'! ಕೂಗುವ ಶಬ್ದಸಮೂಹಕ್ಕೆ 'ಅಝಾನ್' ಎನ್ನುವರು. ಶಿಯಾ-ಸುನ್ನಿಗಳಿಬ್ಬರಿಗೂ ಅದುವರೆಗೆ 'ಅಝಾನ್' ಒಂದೇ ಬಗೆಯದಾಗಿದ್ದಿತು; ಆದರೆ ೧೮೮೫ ನೆಯ ಇಸವಿಯ ಸುಮಾರಿಗೆ ಶಿಯಾಪಂಥದ ಮುಅಝಿಾನನು 'ಹಜರತ್‌ಅಲಿ'ಯ ಹೆಸರನ್ನು ಹೇಳುವಾಗ, ಹೆಸರಿನ ಮುಂದೆ "ಖಲೀಫತ್ ಹೂ ಬಿಲಾ ಫಸಲ್" ಎಂದರೆ "ಹಜರತ್ ಪೈಗಂಬರರ ತರುವಾಯ ಖಲೀಫನಾಗಿ ಬಂದವ" ಎಂಬ ಹೊಸ ಶಬ್ದಗಳನ್ನು ಸೇರಿಸಿ, ಅಝಾನ್ ಕೂಗಿಹೇಳಲು ತೊಡಗಿದನು. ಇದರಿಂದ ಮೊದಲಿನ ಮೂವರು ಖಲೀಫರು ಅನಧಿಕೃತರೆಂಬುದನ್ನು ಲೋಕಕ್ಕೆ ಸಾರಿಹೇಳಿದಂತಾಗಲಿಲ್ಲವೆ? ಅದಕ್ಕಾಗಿಯೆ ಸುನ್ನಿಗಳು ಮರ್ಮಾಹತರಾದಂತಾಗಿ, ಹೀಗೆ ಕೂಗುವುದನ್ನು ಕುರಿತು ಅಡ್ಡಿಯನ್ನೊಡ್ಡಿದರು. ಕೊನೆಗೆ ೧೮೮೮ ರಲ್ಲಿ ಈ ಪ್ರಕರಣವು ಕೋರ್ಟಿನ ಕಟ್ಟೆಯನ್ನೇರಿತು. ನಿರ್ಣಯವು ಸುನ್ನಿಗಳಿಗೆ ಅನುಕೂಲವಾಗಿ ದೊರೆತಿರಲಿಕ್ಕಿಲ್ಲ, ಆ ಮಾತು ಬೇರೆ. ಇದರಿಂದ ಇಬ್ಬರಲ್ಲಿಯ ದ್ವೇಷಾಗ್ನಿ ದಿನದಿನಕ್ಕೆ ಬೆಳೆಯುತ್ತಲೆ ನಡೆಯಿತು. ಲಖನಾ ನಗರದಲ್ಲಿ ಮೊಹರ್ರಂ ಹಬ್ಬವು ತುಂಬ ವಿಜೃಂಭಣೆಯಿಂದ ಜರುಗುವುದು. ಈ ಹಬ್ಬದ ಕಾಲದ ಮೆರೆವಣಿಗೆಗೆ 'ಕರ್‌ಬಲಾ' ಎಂದು ಹೇಳುತ್ತಾರೆ. ಮೊದಲು ಶಿಯಾ-ಸುನ್ನಿಗಳಿಬ್ಬರ ಕರ್‌ಬಲಾಗಳು ಕೂಡಿಯೆ ಹೊರಡುತ್ತಿದ್ದುವು, ಆದರೆ ಈ ಅಂತಃಕಲಹ ಪ್ರಾರಂಭವಾಗಿ ಬಳೆದ ಮೇಲೆ ಎಂದರೆ ೧೯೦೫ನೆಯ ಇಸ್ವಿಯಲ್ಲಿ, ಸುನ್ನಿಗಳು ತಮ್ಮ 'ಕರ್‌ಬಲಾ'ವನ್ನು ಪ್ರತ್ಯೇಕವಾಗಿ ಜರುಗಿಸಿದರು.

ಹೀಗೆ ಮೋಹರ್ರಂ ಕರ್‌ಬಲಾಗಳು ಎರಡಾಗಲಿಕ್ಕೆ ಕಾರಣವೂ ಇಲ್ಲದೆ ಇಲ್ಲ. ಶಿಯಾಪಂಥಿಗಳು ನೆರವೇರಿಸುವ ಮೋಹರ್ರಂ ಉತ್ಸವ ಕೇವಲ ದುಃಖಪ್ರದರ್ಶನಪ್ರಧಾನವಾದುದು. ಆಗಿನ ಹತ್ತು ದಿನಗಳಲ್ಲಿಯೂ ಅವರು ದುಃಖಪೂರ್ಣವಾದ ಪೂರ್ವೇತಿಹಾಸವನ್ನು ಪುನಃಪುನಃ ಸ್ಮರಣೆಗೆ ತಂದುಕೊಳ್ಳುವರು. ಪೈಗಂಬರರ ಮೊಮ್ಮಕ್ಕಳಿಬ್ಬರಿಗೂ ಒದಗಿದ ಸಂಕಟಪ್ರಸಂಗವನ್ನೂ, ಅವರು ಅನ್ನಾಹಾರಗಳಿಲ್ಲದೆ ಹಸಿವೆಯಿಂದ ಕಂಗೆಡಬೇಕಾಗಿ ಬಂದ ಕಷ್ಟದ ಕಥೆಯನ್ನೂ, ಕೊಲೆಗೊಂಡ ಬಗೆಯನ್ನೂ ಶೋಕಗೀತಗಳಲ್ಲಿ ಹಾಡಿಹಾಡಿ ಎದೆಎದೆ ಬಡಿದುಕೊಳ್ಳುತ್ತಿರುತ್ತಾರೆ. ಸುನ್ನಿಗಳು ಶೋಕಗೀತಗಳನ್ನು ಹೇಳುವರಾದರೂ ಶಿಯಾಗಳಷ್ಟು ಕರುಳನ್ನು ಕರಗಿಸುವಂತಹ ದುಃಖ ಅವರಿಗಾಗಿರುವುದಿಲ್ಲ. ಆದುದರಿಂದಲೆ ಸುನ್ನೀಪಂಥದವರು ನಡೆಯಿಸುವ ಮೋಹರ್ರಂ ಉತ್ಸವಗಳಲ್ಲಿ ದೊಡ್ಡದೊಡ್ಡ ಮೆರೆವಣಿಗೆಗಳೇಳತೊಡಗಿದುವು. ಮೆರೆವಣಿಗೆಯಲ್ಲಿ ಮನೋರಂಜಕ ಕಾರ್ಯಕ್ರಮಗಳಿಗೆ ತುಂಬ ಎಡೆದೊರೆಯಿತು. ಬಣ್ಣಬಣ್ಣದ ವೇಷಗಳು ಬಂದುವು. ಸೂಳೆಯರ ಕುಣಿತ ಬಂದಿತು. ದೊಡ್ಡದೊಡ್ಡ ಸಂತೆ ಕೂಡತೊಡಗಿತು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಸುನ್ನಿಗಳ ಮೋಹರ್ರಂ ಉತ್ಸವ

ಶೋಕಪ್ರದರ್ಶನವೆನಿಸದೆ ಉತ್ಸವದಿನವಾಗಿ ಪರಿಣಮಿಸಿತು. ಹೀಗಿರುವಾಗ ಶಿಯಾ-ಸುನ್ನೀ ಕರ್‌ಬಲಾಗಳಲ್ಲಿ ಮೇಳಹೊಂದಬೇಕು ಹೇಗೆ! ಎಂತಲೆ ಶಿಯಾಪಂಥದ ಕಟ್ಟಾಳುಗಳಿಗೆ ಈ ರೀತಿ ಸರಿಯೆನಿಸಲಿಲ್ಲ. ಕರ್‌ಬಲಾದ ಕಾರ್ಯಕ್ರಮ ಗಂಭೀರಸ್ವರೂಪದ್ದಾಗಿರಬೇಕೆಂದೂ, ಆದುದರಿಂದ ಅದರೊಡನಿರುವ ಮನೋರಂಜಕ ಭಾಗವನ್ನೆಲ್ಲ ಇಲ್ಲದಂತಾಗಿಸಬೇಕೆಂದೂ ಅವರು ಚಳವಳಿಯನ್ನಾರಂಭಿಸಿದರು. ಇದಕ್ಕಾಗಿಯೆ ‘ಇಮಾಮಿಯಾ’ ಎಂಬ ಹೆಸರಿನ ಸಂಸ್ಥೆಯೊಂದನ್ನು ಸ್ಥಾಪಿಸಿದರು. ‘ಕರ್‌ಬಲಾದಲ್ಲಿ ನಡೆಯುತ್ತಿದ್ದ ಅಸಭ್ಯವರ್ತನದ ಗೊಂದಲವನ್ನು ತೆಗೆದುಹಾಕಿ, ಮೊದಲಿನಂತೆ ಅದರ ಪಾವಿತ್ರ್ಯ-ಗಾಂಭೀರ್ಯಗಳನ್ನು ಸಂರಕ್ಷಿಸಿಕೊಂಡು ಹೋಗಬೇಕು’ ಎಂಬುದೇ ಈ ಸಭೆಯ ಉದ್ದೇಶವಾಗಿದ್ದುದರಿಂದ, ಸರಕಾರವೂ ಈ ಸಂಸ್ಥೆಗೆ ಅನುಕೂಲವಾಯಿತು. ಕರ್‌ಬಲಾದ ವ್ಯವಸ್ಥೆಯ ಸಲುವಾಗಿ ಇಮಾಮಿಯಾ ಸಭೆಯು ಕೆಲವೊಂದು ನಿಯಮಗಳನ್ನು ಗೊತ್ತುಪಡಿಸಿತು. ಉದ್ದೇಶವು ಚೆನ್ನಾಗಿದ್ದಿತಾದರೂ ಉತ್ಸಾಹದ ಭರದಲ್ಲಿ ಗೊತ್ತುಪಡಿಸಿದ ಈ ಸಭೆಯ ನಿಯಮಗಳು ಸ್ವಲ್ಪ ಉಗ್ರಸ್ವರೂಪದುವಾದುವು. ಕ್ರಮಕ್ರಮವಾಗಿ ಬರಿಯೇ ಕೀಳುತರಗತಿಯ ರೀತಿ-ನಡತೆಗಳನ್ನು ತೆಗೆದು ಹಾಕುವ ಕೆಲಸವನ್ನೇ ಈ ಸಭೆ ಕೈಕೊಂಡಿದ್ದರೆ ಇದರ ಉದ್ದೇಶ ಸಫಲವಾಗುತ್ತಿದ್ದಿತಷ್ಟೇ ಅಲ್ಲ; ಶಿಯಾ-ಸುನ್ನಿಗಳಲ್ಲಿ ಸ್ನೇಹಬಳೆದು ಅದು ಕೊನೆಯವರೆಗೆ ಉಳಿಯಬಹುದಾಗಿತ್ತು. ಆದರೆ ಒಂದೆ ಒಂದು ಹವಣಿಕೆಯಲ್ಲಿಯೆ ಎಲ್ಲ ಬಗೆಯಿಂದಲೂ ಮೊಹರ‍್ರಂ ಹಬ್ಬವನ್ನು ಶುದ್ಧಗೊಳಿಸುವ ಗಡಬಡಿಯನ್ನು ಈ ಇಮಾಮಿಯಾ ಸಭೆಯು ನಡೆಯಿಸಿತು. ಅದರ ಪರಿಣಾಮವಾಗಿ ಹಲವು ದಿನಗಳಿಂದ ನಡೆದುಕೊಂಡು ಬಂದಿದ್ದ ಆಟ-ಮೋಜುಗಳಿಗೂ, ಸೋಗು-ತಮಾಷೆಗಳಿಗೂ, ಕತ್ತಿವರಸೆಯಾಟ-ಕಸರತ್ತಿನಾಟಗಳಿಗೂ ತಡೆಯುಂಟಾಯಿತು. ಇವುಗಳಲ್ಲಿಯ ಅನೇಕ ಆಟ-ನೋಟಗಳೂ ಕಸರತ್ತುಗಳೂ ಕೇವಲ ಮನೋರಂಜಕವಾದುವಾಗಿರದೆ, ಜನತೆಯ ದೃಷ್ಟಿಯಿಂದ ಉಪಯುಕ್ತವಾಗಿದ್ದುವು. ಎಂತಲೆ ಅವು ಜನಸಾಮಾನ್ಯರಿಗೆಲ್ಲ ಬೇಕೆನ್ನುವಂತಹವಾಗಿದ್ದುವು; ಆದರೂ ಅವೆಲ್ಲ ನಿಂತುಹೋದುವು. ತಿಂಡಿತಿನಿಸುಗಳ ಕೆಲವೊಂದು ಅಂಗಡಿಗಳಲ್ಲದೆ ಮಿಕ್ಕ ಯಾವ ಅಂಗಡಿಗಳೂ ಸಂತೆಗೊಳಬಾರದೆಂದಾಯಿತು. ಇಷ್ಟೇ ಅಲ್ಲ; ಕರ್‌ಬಲಾದ ಕಾಲದಲ್ಲಿ ಯಾರೂ ತಂಬಾಕು ಸೇದಬಾರದೆಂದೂ, ಅಡಿಕೆಲೆ ತಿನ್ನಬಾರದೆಂದೂ ಗೊತ್ತಾಯಿತು. ಕರ್‌ಬಲಾ ಕಾಲದಲ್ಲಿ ಗಾಂಭೀರ್ಯವು ನೆಲೆಯೂರಿ ನಿಲ್ಲಬೇಕೆಂಬ ಅಪೇಕ್ಷೆಯಿಂದ, ಒಬ್ಬರ ಕೂಡೊಬ್ಬರು ಚೇಷ್ಟೆಯ ನುಡಿಯಾಡಿ ನಗೆಯಾಡುವುದಕ್ಕೂ ತಡೆಯೊದಗಿತು. ಈ ನಿಯಮಗಳಂತೆ ನಡೆಯದವರನ್ನೆಲ್ಲ ಉತ್ಸವ-ಸ್ಥಳದಿಂದ ಹೊರಕ್ಕೆ ಅಟ್ಟಲಾಗುತ್ತಿದ್ದಿತು.

ಇಮಾಮಿಯಾ ಸಭೆಯು ಮಾಡಿದ ನಿಯಮಗಳೇನು ತಪ್ಪಾಗಿ ಇರಲಿಲ್ಲ; ಆದರೆ ಎಲ್ಲ ನಿಯಮಗಳನ್ನೂ ಓದಿ ಮನನಮಾಡಿಕೊಳ್ಳುವವರು ಎಷ್ಟು ಜನ! ಯಾವುದೇ ನಿಯಮಗಳ ಬಗೆಗೆ ತಪ್ಪುಕಲ್ಪನೆಯನ್ನು ಹಬ್ಬಿಸಬೇಕೆಂದರೆ, ಅದೇನು ತೊಂದರೆಯ ಕೆಲಸವೂ ಅಲ್ಲ. ‘ಕರ್‌ಬಲಾದ ವ್ಯವಸ್ಥೆಮಾಡುವ ಅಧಿಕಾರವೆಲ್ಲ ಇಮಾಮಿಯಾ ಸಭೆಯ ಕಡೆಗೆ ಬಂದಿದೆ’ ಎಂಬ ಸುದ್ದಿ ಇದ್ದುದಿದ್ದ ಹಾಗೆಯೆ ಹಬ್ಬಿ ಹರಿಗೊಂಡಿತು. ಕರ್‌ಬಲಾದೊಂದಿಗೆ ಬಕ್ಕತಲೆ-ಬರಿಗಾಲುಗಳಿಂದ ಹೋಗಲಿರುವ ಶಿಯಾಗಳಂತೆಯೆ ಮಿಕ್ಕ ಜನರೂ ಹೋಗಬೇಕಾಗುವುದೆಂದು ಹಲವರು ತಿಳಿದುಕೊಂಡರು. ಗೊತ್ತುಮಾಡಿದ ನಿಯಮಗಳೆಲ್ಲ ಶಿಯಾ ಜನರ ಆಚಾರ-ವಿಚಾರಗಳನ್ನು ಪಾಲಿಸುವುದಕ್ಕಾಗಿಯೆ ಇದ್ದುದರಿಂದ, ‘ಇಮಾಮಿಯಾ ಸಭೆಯಿದು ಸುನ್ನಿಗಳಿಗೆ ವಿರೋಧಿಯಾದುದು’ ಎಂಬ ಕಲ್ಪನೆ ಅತ್ತಿತ್ತ ಅಟವಾಡತೊಡಗಿತು. ಇದರಿಂದ ಎರಡೂ ಪಂಥಗಳಲ್ಲಿಯ ವೈಮನಸ್ಯ ಹೆಚ್ಚತೊಡಗಿತು. ಇದರ ಪರಿಣಾಮವಾಗಿಯೆ ೧೯೦೬ನೆಯ ಇಸವಿಯಲ್ಲಿ ಸುನ್ನೀಪಂಥೀಯರು ತಮ್ಮದೊಂದು ಸ್ವತಂತ್ರ ಕರ್‌ಬಲಾ ಹೊರಡಿಸಿದರು. ಹಾಗೆ ಹೊರಡಿಸಿದ ಸ್ಥಳಕ್ಕೆ ‘ಫೂಲ್ ಕಟೋರಾ’ ಎಂದು ಹೆಸರನ್ನಿರಿಸಿದರು. ಮೊಹರ‍್ರಂ ಡೋಲಿಗಳು ಶಿಯಾ ಜನರದೊಂದು ಕಡೆ, ಸುನ್ನಿಗಳದಿನ್ನೊಂದು ಕಡೆ ಹೋಗತೊಡಗಿದುವು. ಅವರವರ ಮೆರೆವಣಿಗೆಗಳಲ್ಲಿಯೂ ಹೆಚ್ಚುಕಡಿಮೆ ಆಗಲಾರಂಭಿಸಿತು. ಸುನ್ನಿಯವರ ಮೆರೆವಣಿಗೆಯಲ್ಲಿ ಅವರ ಧರ್ಮಾಚಾರಗಳ ಪ್ರದರ್ಶನವು ವ್ಯಕ್ತರೀತಿಯಲ್ಲಿ ಆಗತೊಡಗಿತು. ಸುನ್ನಿಗಳ ಡೋಲಿಯ ನಾಲ್ಕೂ ಮೂಲೆಗಳಿಗೆ ನಾಲ್ವರು ಖಲೀಫಾಗಳ ಹೆಸರು ಮೆರೆಯತೊಡಗಿದುವು.

ಶಿಯಾ ಜನರ ತಿಳಿವಳಿಕೆಯಂತೆ ನಾಲ್ಕುಜನ ಖಲೀಫಾಗಳಿಗೆ ಸ್ಥಾನ-ಮಾನಗಳೆ ಇಲ್ಲ. ಇವರು ಹಸನ್ ಹುಸೇನ್ ಅವರ ಹೆಸರಿನ ನಿಶಾನಿಗೆ ‘ಆಲಮ್’ ಎಂದು ಕರೆಯುವರಲ್ಲದೆ, ಅದರ ಮೆರೆವಣಿಗೆಯನ್ನೂ ತೆಗೆಯುವರು. ಸುನ್ನಿಗಳು ತಮ್ಮ ಮೆರೆವಣಿಗೆಯಲ್ಲಿ ‘ಆಲಮ್’ನ್ನು ನಿಲ್ಲಿಸಿಬಿಟ್ಟರಲ್ಲದೆ, ಅದಕ್ಕೆ ಬದಲು ತಮ್ಮ ಧ್ವಜವನ್ನು ಮೆರೆಯಿಸತೊಡಗಿದರು. ಶಿಯಾ ಜನರು ‘ಮರ್ಶಿಯಾ’ ಎಂಬ ಹೆಸರಿನ ಶೋಕಗೀತಗಳನ್ನು ಹೇಳುವರು. ಸುನ್ನೀ ಜನರು ಈ ಶೋಕಗೀತಗಳೊಂದಿಗೆ ನಾಲ್ವರು ಖಲೀಫರ ಸ್ತೋತ್ರಗೀತಗಳನ್ನು ಹೇಳುವುದಕ್ಕೆ ಮೊದಲುಮಾಡಿದರು. ಈ ನಾಲ್ವರು ಖಲೀಫಾಗಳನ್ನು ಮನ್ನಿಸದೆ ಇರುವವರನ್ನು—ಶಿಯಾಗಳನ್ನು—ಬೈಯುವಂತಹ ಕೆಲವು ಹಾಡುಗಳನ್ನೂ ಹೊಂದಿಸಿಕೊಂಡರು. ಹೀಗೆ ಲಖನೌನಗರದಲ್ಲಿ ಶಿಯಾ-ಸುನ್ನಿಗಳ ನಡುವೆ ಮೊಹರ‍್ರಮ್ಮಿನ ಜಗಳ ಬಳೆಯುತ್ತ ಬಂದಿತು. ಅದರ ಫಲವಾಗಿ ದೊಂಬಿ-ಹೊಡೆದಾಟಗಳಾದುವು; ಪೋಲೀಸರ ಬಳಿ ದೂರುಗಳೂ ಹೋದುವು.

ಶಿಯಾ ಮುಂದಾಳುಗಳು ಸರಕಾರದಿಂದ ಸಂರಕ್ಷಣೆಯನ್ನು ಅಪೇಕ್ಷಿಸಿದರು. ೧೯೦೮ರಲ್ಲಿ ಅದರಂತೆ ಬಿನ್ನವತ್ತಳೆಯನ್ನು ಬರೆದುಕೊಂಡಾಯಿತು. ಸರಕಾರದವರು ಮಿ. ಪಿಗಟ್, ಜೂಡಿಸಿಯಲ್ ಕಮಿಶನರ್ ಲಖನೌ ಅವರ ಅಧ್ಯಕ್ಷತೆಯಲ್ಲಿ, ಕಮಿಟಿಯೊಂದನ್ನು ಏರ್ಪಡಿಸಿದರು. ಈ ಕಮಿಟಿಯಲ್ಲಿ ಇಬ್ಬರು ಹಿಂದುಗಳನ್ನೂ ಇಬ್ಬರು ಶಿಯಾಗಳನ್ನೂ ಇಬ್ಬರು ಸುನ್ನಿಗಳನ್ನೂ ಸದಸ್ಯರನ್ನಾಗಿ ನಿಯಮಿಸಲಾಯಿತು. ಒಬ್ಬ ಸುನ್ನೀ ಸಭಾಸದ

ಮೊದಲನೆಯ ಸಲದ ಒಂದೆಒಂದು ಸಭೆಗೆ ಬಂದಿದ್ದ. ಈ ಕಮಿಟಿಯ ಸಭೆಗಳು ಅನೇಕ ಸಲ ಸೇರಿ ವರದಿಯು ಸಿದ್ಧವಾಯಿತು. ವರದಿಯಲ್ಲಿಯ ಕೆಲವು ವಿಷಯ ಸರ್ವಾನುಮತದಿಂದ ಗೊತ್ತಾದುದಿದ್ದಿತು. ಇನ್ನು ಕೆಲವು ವಿಷಯುಗಳ ಬಗೆಗೆ ಶಿಯಾಸಭಾಸದರ ಮತಭೇದದ ಪತ್ರಿಕೆಯನ್ನು ಜೋಡಿಸಲಾಗಿದ್ದಿತು. ಒಬ್ಬನೆ ಒಬ್ಬನಾಗಿ ಉಳಿದ ಸುನ್ನೀಸಭಾಸದನೂ ಅವರ ಅಡಿಯಲ್ಲಿಯೆ ಅಡಿಯಿಟ್ಟಿದ್ದ. ಅಧ್ಯಕ್ಷರೂ ಇಬ್ಬರು ಹಿಂದುಗಳೂ ಎಲ್ಲೆಲ್ಲಿಯೂ ಒಂದೆಬಗೆಯ ಅಭಿಪ್ರಾಯದವರಾಗಿದ್ದರು. ಈ ಮೂವರು ಒಪ್ಪಿ ನಿರ್ಣಯಿಸಿದುದನ್ನೆ ಸರಕಾರದವರು ಪುರಸ್ಕರಿಸಿದರು. ಅಲ್ಲದೆ ಆ ನಿರ್ಣಯದಲ್ಲಿ ಹೇಳಿದಂತೆ ಅವರವರ ಹಕ್ಕುಗಳನ್ನು ಸಂರಕ್ಷಿಸಲಾಗುವುದು ಎಂಬುದನ್ನೊಪ್ಪಿ, ಆಗಾಗ ಆ ನಿರ್ಣಯವನ್ನನುಸರಿಸಿಯೆ ನ್ಯಾಯಕೊಡುತ್ತ ಬಂದರು. ಆದುದರಿಂದಲೆ ಆ ವರದಿಯಲ್ಲಿಯ ನಿರ್ಣಯಕ್ಕೆ ತುಂಬ ಮಹತ್ತ್ವ ಬಂದುಬಿಟ್ಟಿತು. ಆ ನಿರ್ಣಯದಲ್ಲಿಯ ಮುಖ್ಯಮುಖ್ಯ ಕಲಮುಗಳು ಈ ರೀತಿಯಲ್ಲಿವೆ:

(೧) ಕ್ರಿ. ಶ. ೧೯೦೫ನೆಯ ವರ್ಷ ಶಿಯಾ-ಸುನ್ನಿಗಳ ಕರ್ಬಲಾಗಳು ಬೇರೆಬೇರೆಯಾಗಿ ಹೊರಡಲಾರಂಭಿಸಿದಂದಿನಿಂದ, ಡೋಲಿಗಳ ಮೆರೆವಣಿಗೆಯ ಕಾಲದಲ್ಲಿ ಸುನ್ನೀ ಜನರು 'ಚಾರ್‌ಯಾರ್ (ನಾಲ್ವರು ಖಲೀಫಾಗಳ ಸ್ತೋತ್ರ)' ಗೀತಗಳನ್ನು ಹೇಳುವ ಪರಿಪಾಠವನ್ನು ಹಾಕಿದುದು ಯುಕ್ತವಾದುದಲ್ಲ. ಏಕೆಂದರೆ ಮೊಹರ್ರಮ್ ಹಬ್ಬದ ಮುಖ್ಯ ಉದ್ದೇಶವು ಧರ್ಮವೀರರಿಬ್ಬರ ದುಃಖದಾಯಕ ಮರಣದ ಬಗ್ಗೆ ಶೋಕಪ್ರದರ್ಶನಮಾಡುವುದಾಗಿದೆ. ಆದುದರಿಂದ ಈ ಉದ್ದೇಶಕ್ಕೆ ಭಂಗತರುವಂತಹ ಯಾವ ನಡತೆಗೂ ಅವಕಾಶವಿರುವುದು ಸರಿಯಾದುದಲ್ಲ.

(೨) ಡೋಲಿಗಳ ಮೇಲಾಗಲಿ, ನಿಶಾನಿಗಳ ಮೇಲಾಗಲಿ ಯಾವ ಒಗೆದು ಬರೆಹವೂ ಇರಕೂಡದು.

(೩) ಹಜರತ್ ಹುಸೇನ್ ಅವರ ಧ್ವಜವಾಹಕನಾದ ಹಜರತ್ ಅಬ್ಬಾಸನು ಕರ್ಬಲಾ ಯುದ್ಧದಲ್ಲಿ ಹಿಡಿದ 'ಅಲಮ್' ಎಂಬ ಧ್ವಜವನ್ನಲ್ಲದೆ, ಮಿಕ್ಕ ಯಾವ ಧ್ವಜವೂ ಮೊಹರ್ರಮ್ ಮೆರೆವಣಿಗೆಯಲ್ಲಿ ಇರಲಾಗದು.

(೪) ನಾಲ್ವರು ಖಲೀಫಾಗಳನ್ನು ಮನ್ನಿಸದಿರುವವರನ್ನು ಕುರಿತು ಹಾಡುವ ನಿಂದಾಗೀತಗಳನ್ನು, ಮೆರೆವಣಿಗೆಯ ಕಾಲದಲ್ಲಿ ಅನ್ನಗೊಡಲಾಗದು.

(೫) ಅಶ್ರಾ (ಮೊಹರ್ರಮ್ ತಿಂಗಳ ೧೦ನೆಯ ತಾರೀಖು), ಚೇಲ್ಲುಮ್, ರಮುಝಾನ್ ತಿಂಗಳ ೨೧ನೆಯ ತಾರೀಖು ಈ ಮೂರು ದಿನಗಳಲ್ಲಿ ನಡೆಯುವ ಮೆರೆವಣಿಗೆಗಳಲ್ಲಿ ಅಥವಾ ಈ ಮೆರೆವಣಿಗೆಗಳಲ್ಲಿರುವ ಜನರ ಕಿವಿಗೆ ಬೀಳುವಂತೆ, ನಾಲ್ವರು ಖಲೀಫಾಗಳ ಸ್ತೋತ್ರಗೀತಗಳನ್ನು ಹೇಳುವುದಕ್ಕೂ ತಡೆಯಿರಬೇಕು.

ಈ ತಡೆಯು ೩ ತಿಂಗಳು ೧೦ ದಿನಗಳವರೆಗಿರಬೇಕೆಂದು ಶಿಯಾಪಂಥದವರ ಬೇಡಿಕೆಯಿದ್ದಿತು. ಈ ಮೂರು ದಿನಗಳಲ್ಲಿ ಕೂಡ ಖಲೀಫಾಗಳ ಸ್ತೋತ್ರಗೀತಗಳನ್ನು ಹಾಡುವುದಕ್ಕೆ ತಡೆಯಿರಲಾಗದೆಂದು ಸುನ್ನೀಪಂಥದವರ ಬೇಡಿಕೆಯಿದ್ದಿತು. ಇಬ್ಬರ ಬೇಡಿಕೆಗಳನ್ನೂ ಅಸಮ್ಮತಿಸಲಾಯಿತು. ಮಿಕ್ಕ ದಿನಗಳಲ್ಲಿ 'ಚಾರ್‌ಯಾರ್' ಗೀತಗಳನ್ನು ಹೇಳುತ್ತ ಖಲೀಫಾಗಳ ಮೆರೆವಣಿಗೆ ತೆಗೆಯಲಿಕ್ಕೆ ಶಿಯಾಗಳದೇನೂ ಅಡ್ಡಿಯಿರಲಿಲ್ಲ. ಆದರೆ ಆಗ ಹಾಡುವ ಹಾಡುಗಳಲ್ಲಿ ಖಲೀಫಾಗಳನ್ನು ಮನ್ನಿಸದಿರುವವರ ಬಗ್ಗೆ ನಿಂದೆ-ಶಾಪಗಳೇನೂ ಇರಲಾಗದೆಂದು ಅವರ ಅಭಿಪ್ರಾಯವಿತ್ತು.

ಎರಡೂ ಪಂಗಡಗಳಲ್ಲಿ ಇದರ ಬಗೆಗೆ ದುಸುಮುಸಿ ನಡೆದಿದ್ದಿತು. ಪ್ರತಿವರ್ಷವೂ ಮೇಲೆ ಹೇಳಿದ ಮೂರು ದಿನಗಳಲ್ಲಿ 'ಚಾರ್‌ಯಾರ್' ಗೀತಗಳನ್ನು ಹಾಡಲಾಗದೆಂದು ಪ್ರಕಟನೆ ಹೊರಡಿಸಲಾಗುತ್ತಿತ್ತು. ಕ್ರಿ. ಶ. ೧೯೩೫ನೆಯ ವರ್ಷದ ಚೆಲ್ಲುಮ್ ಹಬ್ಬದ ದಿನ ಕೆಲವು ಸುನ್ನಿಗಳು ಸೇರಿ ಸರಕಾರದ ಅಪ್ಪಣೆಯನ್ನು ಮುರಿದರು. ಅದಕ್ಕಾಗಿ ಅವರಿಂದ ಜಾಮೀನು ತೆಗೆದುಕೊಳ್ಳಲಾಯಿತು. ೧೯೩೬ನೆಯ ಇಸ್ವಿಯಲ್ಲಿ ಮೊಹರ್ರಮ್ ೧೦ನೆಯ ತಾರೀಖಿನ ದಿನವೂ ಕೆಲವರು ಈ ಅಪ್ಪಣೆ ಮುರಿದರಾದುದರಿಂದ, ಅವರನ್ನು ಸೆರೆಮನೆಗೆ ಕಳುಹಲಾಯಿತು. ಮುಂದಿನ ಚೆಲ್ಲುಮ್ ಹಬ್ಬದ ಕಾಲದಲ್ಲಿ ಕೂಡ ಹದಿನಾಲ್ಕು ಜನರು 'ಚಾರ್‌ಯಾರಿ' ಗಳನ್ನು ಹೇಳಿ ಸೆರೆಯಾಳಾದರು. ಸುನ್ನೀಪಂಥಿಯರು ಹೀಗೆ ಶಾಸನಭಂಗವನ್ನು ಪ್ರಾರಂಭಿಸುವುದಕ್ಕೆ ಕಾರಣವೂ ಒಂದು ಒದಗಿದ್ದಿತು. ಅದೇನೆಂದರೆ: ಪಿಗಟ್ ಕಮಿಟಿಯ ವರದಿಗನುಸಾರವಾಗಿ ನಾಲ್ವರು ಖಲೀಫರ ಧ್ವಜವನ್ನು ಮೆರೆಯಿಸುವುದಕ್ಕೂ 'ಚಾರ್‌ಯಾರ್' ಗೀತಗಳನ್ನು ಹೇಳುವುದಕ್ಕೂ ವರ್ಷದಲ್ಲಿಯ ಮೂರುದಿನ ಮಾತ್ರ ಪ್ರತಿಬಂಧವಿದ್ದಿತು. ಮಿಕ್ಕದಿನ ಮೆರೆವಣಿಗೆ ತೆಗೆಯಬಹುದೆಂದೂ ಸ್ತೋತ್ರಗೀತಗಳನ್ನು ಹೇಳಬಹುದೆಂದೂ ಸರಕಾರವು ತನ್ನ ಸ್ಪಷ್ಟವಾದ ನಿರ್ಣಯ ಕೊಟ್ಟಿದ್ದಿತು. ಆದರೆ ೧೯೩೭ನೆಯ ಇಸ್ವಿಯಲ್ಲಿ 'ಬಾರಾವಫಾತ್' ಹಬ್ಬದ ದಿನ ಹಾಗೆ ಮೆರೆವಣಿಗೆ ತೆಗೆಯಬೇಕೆಂದು ಸುನ್ನೀಪಂಥೀಯರು ಗೊತ್ತುಮಾಡಿದಾಗ, ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಕ್ರಿ. ಪ್ರೊ. ಕಾಯಿದೆಯ ೧೪೪ನೆಯ ಕಲಮಿನ ಪ್ರಕಾರ ಹುಕುಂ ತೆಗೆದು, ಮೆರೆವಣಿಗೆಯೊಂದಿಗೆ ಖಲೀಫರ ಸ್ತೋತ್ರಗೀತಗಳನ್ನು (ಚಾರ್‌ಯಾರೀ) ಹಾಡಲಾಗದೆಂದು ತಡೆಯೊಡ್ಡಿದರು. ಆದುದರಿಂದಲೆ ಅಂದಿನ ಮೆರೆವಣಿಗೆ ನಿಂತುಹೋಯಿತು. ಮುಂದೆ ತಾ|| ೧೨-೬-೩೭ನೆಯ ದಿನ ಈ ಮೆರೆವಣಿಗೆ ಹೊರಟಾಗ, ಅದರೊಂದಿಗೆ ಕೇವಲ 'ಕುರಾಣ ಶರೀಫ್'ನೊಳಗಿನ ಖಲೀಫರ ಸ್ತುತಿಯಿರುವ ಗೀತಗಳನ್ನು ಮಾತ್ರ ಹೇಳಬೇಕೆಂದು ಅಪ್ಪಣೆಯಾಗಿದ್ದಿತು. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು 'ಈ ಮೆರೆವಣಿಗೆಯಲ್ಲಿ ಖಲೀಫರ ಹೆಸರನ್ನೇ ಉಚ್ಚರಿಸಗೊಟ್ಟಿಲ್ಲ' ಎಂಬುದಾಗಿ ಶಿಯಾ ಮುಖಂಡರಿಗೆ ತಿಳುಹಿದರು. ಇದೆಲ್ಲವನ್ನು ಮನವರಿಕೆ ಮಾಡಿಕೊಂಡ ಸುನ್ನೀಪಂಥೀಯರು, ತಮಗಿನ್ನು ಕೊನೆಯವರೆಗೂ ಖಲೀಫರ ಹೆಸರನ್ನು ಎತ್ತಲಿಕ್ಕಾಗದಂತಹ ಪ್ರಸಂಗ ಬರಬಹುದೇನೋ ಎಂದು ಒಳಗೊಳಗೆ ಬೆದರಿದ್ದರು. ಈ ಬೆದರಿಕೆಯೆ ಅವರಿಗೆ ಪ್ರತಿ ಶುಕ್ರವಾರಕ್ಕೊಮ್ಮೆ ಮೆರೆವಣಿಗೆ ಹೊರಡಿಸುವಂತೆ ಪ್ರೇರೇಪಿಸಿತು. ಹೀಗೆ ಹೊರಡುವ ಮೆರೆವಣಿಗೆಯನ್ನವರು 'ಮಧೇ ಸಾಹಬಾ' ಎಂದು ಕರೆಯತೊಡಗಿದರು. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ೧೪೪ನೆಯ ಕಲಮಿನ ಪ್ರಕಾರ ಈ ಮೆರೆವಣಿಗೆ

ಗಳನ್ನೂ ತಡೆಹಿಡಿಯ ತೊಡಗಿದರಲ್ಲದೆ, ೧೦೭ನೆಯ ಕಲಮಿನಂತೆ ಸುನ್ನೀ ಮುಂದಾಳುಗಳ ಕಡೆಯಿಂದ ಶಾಂತತೆಯನ್ನು ಕಾಯ್ದು ಕೊಂಡು ಹೋಗುವಂತೆ ಜಾಮೀನುಗಳನ್ನು ಕೇಳತೊಡಗಿದರು. ಅನೇಕರು ಈ ತಡೆಯ ಹುಕುಮನ್ನು ಭಂಗಿಸಿದರು. ಅವರೆಲ್ಲರನ್ನೂ ವಿಚಾರಣೆಗೆ ಗುರಿಮಾಡಿಯೂ ಆಯಿತು.

ತಾ|| ೧೪-೧೧-೧೯೩೭ನೆಯ ದಿನ ಸುನ್ನೀಜನರು ತಮಗೆ ನ್ಯಾಯದೊರೆಯಬೇಕೆಂದು ನಾಮದಾರ್ ಗವರ್ನರ್ ಸಾಹೇಬರ ಕಡೆಗೆ ಬಿನ್ನವತ್ತಳೆಯೊಂದನ್ನು ಕಳುಹಿದರು. ಅದರಲ್ಲಿ ಪಿಗಟ್ ಕಮಿಟಿಯ ನಿರ್ಣಯವನ್ನೂ, ಅದನ್ನು ಸರಕಾರವು ಒಪ್ಪಿಕೊಂಡು ದನ್ನೂ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅದನ್ನು ಗಾಲಕೆಳಗೆ ಹಾಕಿ ಮೆಟ್ಟಿರುವುದನ್ನೂ ಯಥಾವತ್ತಾಗಿ ಅರಿಕೆಮಾಡಿಕೊಂಡಿದ್ದರು. ತಾ|| ೧೯-೧೨-೧೯೩೭ರಲ್ಲಿ ಶಿಯಾಜನರು ಕೂಡ ತಮ್ಮದೊಂದು ಬಿನ್ನವತ್ತಳೆಯನ್ನು ಗವರ್ನರರ ಕಡೆಗೆ ಕಳುಹಿದರು. ಅದರಲ್ಲಿ ಅವರು 'ಮಧೇಸಾಹಬಾ ಮೆರವಣಿಗೆ ತೆಗೆಯುವುದರಲ್ಲಿಯ ಉದ್ದೇಶವೆಂದರೆ ಶಿಯಾಪಂಥಿಯರ ಧಾರ್ಮಿಕಭಾವನೆಯನ್ನು ಕೆಣಕುವುದೇ ಆಗಿದೆ' ಎಂಬ ಮಾತನ್ನು ಸ್ಪಷ್ಟವಾಗಿ ತಿಳುಹಿದ್ದರು.

ಈ ಬಿನ್ನವತ್ತಳೆಗಳ ವಿಚಾರಣೆಗಾಗಿ ಮೂವರು ಯೂರೋಪಿಯನ್ ಸದಸ್ಯರಿಂದ ಕೂಡಿದ ಕಮಿಟಿಯೊಂದು ನಿರ್ಮಾಣವಾಯಿತು. ಈ ಕಮಿಟಿಯು ೧೯೦೮ನೆಯ ಇಸ್ವಿಯಲ್ಲಾದ ಪಿಗಟಕಮಿಟಿಯ ನಿರ್ಣಯವನ್ನೂ ಅದನ್ನು ಕುರಿತು ಗೊತ್ತು ಮಾಡಿದ ಸರಕಾರದ ಠರಾವನ್ನೂ ಎತ್ತಿಹಿಡಿದು, ಮೂರು ದಿನ ಮಾತ್ರ ಬಿಟ್ಟು ಮಿಕ್ಕದಿನಗಳಲ್ಲಿ ಖಲೀಫರ ಸ್ತೋತ್ರಗೀತಗಳನ್ನು ಸುನ್ನಿಗಳು ಬೇಕಾದಹಾಗೆ ಹೇಳಬಹುದೆಂಬುದನ್ನು ಒಪ್ಪಿಕೊಂಡಿತು. 'ಆದರೂ ಸಾರ್ವಜನಿಕ ಶಾಂತತೆಯನ್ನು ಕಾಯುವ ಇಚ್ಛೆಯಿಂದ ಡಿ. ಮ್ಯಾಜಿಸ್ಟ್ರೇಟರು ತಡೆಯ ಹುಕುಮು ಹೊರಡಿಸಿದುದು ಸರಿಯಾದುದು' ಎಂದು ನಿರ್ಣಯವಿತ್ತಿತು.

'ಚಾರಯಾರ್' ಗೀತಗಳಲ್ಲಿ ನಾಲ್ವರು ಖಲೀಫಾಗಳ ಸ್ತುತಿಯಿರುವುದಲ್ಲದೆ, ಆ ಖಲೀಫರನ್ನು ಮನ್ನಿಸದಿರುವವರ ನಿಂದೆಯೂ ಇದ್ದಿತು. ಈ ನಿಂದೆಯಿರುವ ಗೀತಭಾಗವು ಅಯುಕ್ತವಾಗಿದೆಯೆಂಬುದನ್ನು ಪಿಗಟ್ ಕಮಿಟಿಯಲ್ಲಿದ್ದ ಸುನ್ನೀಸಭಾಸದ— ಮೌಲಾನಾ ಅಬ್ದುಲ್ ಶಕ್ಕುರ್ ಅವರೇ—ಒಪ್ಪಿಕೊಂಡಿದ್ದರು. ಆದುದರಿಂದಲೆ ಅಂದಿನಿಂದಲೂ ಚಾರಯಾರ್ ಗೀತಗಳಲ್ಲಿಯ ನಿಂದೆಯ ಭಾಗವನ್ನು ತೆಗೆದುಹಾಕಿದ್ದಾರೆ. ಆದರೆ ಶಿಯಾಗಳು ಹೇಳುವ ತಬರ್ರಾ ಗೀತವು ಮಾತ್ರ ವಿಲಕ್ಷಣರೀತಿಯದಾಗಿದೆ. ಅದರಲ್ಲಿ ಖಲೀಫರನ್ನು ಅವಮಾನಗೊಳಿಸುವಂತಹ ಮಾತುಗಳಿದ್ದುದರಿಂದ, ಅದನ್ನು ಕೇಳಿದ ಸುನ್ನೀಜನರು ಕೆರಳಿಸಿಲ್ಲುವುದು ತೀರ ಸ್ವಾಭಾವಿಕ. ನಾಲ್ವರು ಖಲೀಫಾಗಳೂ ಒಳ್ಳೆಯ ಆಚಾರಶೀಲರಾಗಿದ್ದರೆಂಬುದರಲ್ಲಿ ಯಾವ ವಾದವೂ ಇಲ್ಲ. ಅವರೆಲ್ಲ ಇಸ್ಲಾಂಧರ್ಮದ ಸೇವೆಯನ್ನು ಉತ್ತಮರೀತಿಯಲ್ಲಿ ಮಾಡಿರುವರೆಂಬ ಸಂಗತಿಯನ್ನೂ ಎಲ್ಲರೂ ಒಪ್ಪುವರು. ಆದರೆ ಶಿಯಾಜನರಿಗೆ ಅವರನ್ನು ಖಲೀಫರನ್ನಾಗಿ ಆರಿಸಿದುದು ಒಪ್ಪಿಗೆಯಿಲ್ಲ ಇಷ್ಟೇ. ಹೀಗಿರುವಾಗ ಸುನ್ನಿಗಳು ಅವರನ್ನು ಕುರಿತ ಸ್ತೋತ್ರಗೀತಗಳನ್ನು ಹಾಡಿದಾಗ, ಅದನ್ನು ಕೇಳಿ ಶಿಯಾಪಂಥೀಯರ ಏತಕ್ಕಾಗಿ ಕೋಪಗೊಳ್ಳಬೇಕು ? ೧೯೦೮ ರಲ್ಲಾದ ಪಿಗಟ್ ಕಮಿಟಿಯ ವರದಿಯಲ್ಲಿ, ಸುನ್ನಿಗಳು ಚಾರಯಾರ್ ಗೀತಗಳನ್ನು ಹೇಳುವುದೂ, ಶಿಯಾಗಳು ಪ್ರಾರ್ಥನಾಪೂರ್ವದ ಕೂಗಿನಲ್ಲಿ 'ಖಲೀಫತ ಹೂ ಬಿಲಾ ಫಸಲ್' ಎಂದು ಉಚ್ಚರಿಸುವುದೂ ಒಂದೆ ತರಗತಿಗೆ ಸೇರಿದುವುಗಳೆಂದು ನಿರ್ಣಯಿಸಲಾಗಿದೆ.

ಸುನ್ನೀ ಜನರು ತಮ್ಮ ಚಳವಳಿಯನ್ನು ಬಿತ್ತರದಿಂದ ನಡೆಯಿಸಿ ತಮ್ಮ ಬೇಡಿಕೆಗಳು ಎಷ್ಟೊಂದು ನ್ಯಾಯ್ಯವಾಗಿವೆಯೆಂಬುದನ್ನು ಮನವರಿಕೆ ಮಾಡಿಕೊಟ್ಟರು. ಸರಕಾರದವರಿಗೂ ಇದು ಸರಿಯಾದುದೆಂದೆನಿಸಿ, ತಾ. ೩೧-೩-೧೯೩೯ನೆಯ ದಿನ ಒಂದು ನಿರ್ಣಯವನ್ನು ಪ್ರಕಟಿಸಿದರು. ಅದರಲ್ಲಿ ೧೯೦೮ರಲ್ಲಿ ಸರಕಾರದವರು ಮಾಡಿದ ಠರಾವಿನಲ್ಲಿದ್ದ ಸುನ್ನೀಜನರ ಹಕ್ಕುಗಳ ಬಹುಭಾಗಕ್ಕೆಲ್ಲ ಮನ್ನಣೆ ಕೊಡಲಾಗಿದೆ. ಈ ನಿರ್ಣಯವು ಹೊರಡುವುದಕ್ಕಿಂತ ಮೊದಲೆ ಶಿಯಾಜನರು ತಮ್ಮ ತಬರ್ರಾ ಚಳವಳಿಯನ್ನು ತುಂಬ ರಭಸದಿಂದ ನಡೆಯಿಸಿ, ಸವಿನಯಶಾಸನಭಂಗವನ್ನು ಕೂಡ ಮಾಡಿದರು. ೧೯೩೯ನೆಯ ನಿರ್ಣಯದನ್ವಯ ಸುನ್ನೀಜನರಿಗೆ 'ಮಧೇ ಸಾಹಬಾ' ಮೆರವಣಿಗೆ ತೆಗೆಯಲಿಕ್ಕೆ ಸರಕಾರದ ಒಪ್ಪಿಗೆ ದೊರೆತಂತೆಯೆ ತಮಗೆ 'ತಬರ್ರಾ' ಗೀತಗಳನ್ನು ಹೇಳುವುದಕ್ಕೆ ಒಪ್ಪಿಗೆ ದೊರೆಯಬೇಕೆಂದು ಶಿಯಾಜನರ ಬೇಡಿಕೆಯಿದೆ. ಆದರೆ ತಬರ್ರಾ ಗೀತಗಳಲ್ಲಿ ಬರಿಯೆ ಖಲೀಫರನ್ನು ನಿಂದಿಸಿದ ಮಾತುಗಳಿವೆ. ಎಂದಮೇಲೆ ಸರಕಾರ ಇವರ ಬೇಡಿಕೆಯನ್ನು ಮನ್ನಿಸಬೇಕು ಹೇಗೆ ?

ನಿಜವಾಗಿ ನೋಡಿದರೆ ಎಷ್ಟೋಕಾಲದ ಹಿಂದೆ ಹುಟ್ಟಿಕೊಂಡು, ಸದ್ಯದ ಜೀವನಕ್ಕೆ ಯಾವಬಗೆಯಿಂದಲೂ ಸಾಹಾಯ್ಯಕವಾಗಿರದ ಮತಧರ್ಮಗಳನ್ನು ಇನ್ನು ಮೇಲೆಯೂ ಉಳಿಸಿಕೊಂಡಿರಬೇಕೆ?— ಎಂಬ ಪ್ರಶ್ನೆಯು ಈಗ ನಮ್ಮೆದುರು ನಿಂತಿದೆ. ಹೀಗಿರುವಾಗ ಆ ಧರ್ಮದ ಸಣ್ಣ ಪುಟ್ಟ ಆಚಾರಭಿನ್ನತೆಗಳನ್ನು ಕುರಿತ ಪೊಳ್ಳು ಅಭಿಮಾನಕ್ಕಾಗಿ ನಮ್ಮ ಕಾಲವನ್ನೂ ಶ್ರಮವನ್ನೂ ಬುದ್ಧಿಯನ್ನೂ ಹಣವನ್ನೂ ವೆಚ್ಚಮಾಡಬೇಕೇ ನಾವು ? ಶಿಯಾ-ಸುನ್ನಿಗಳಲ್ಲಿಯಂತಹ ಹುಚ್ಚು ವಿಚಾರದ ಬಡಿದಾಟ ಇಂದು ಹಿಂದೂ ಮುಸಲ್ಮಾನರಲ್ಲಿಯೂ ಬೆಳೆದು ಭೂತವಾಗಿ ನಿಂತಿದೆ. ಎರಡೂ ಪಕ್ಷದ ಮುಂದಾಳುಗಳು ವಿಶೇಷವಾಗಿ ಮುಸ್ಲಿಂ ಲೀಗಿನವರು—ಈ ಭೂತವು ಬೆಳೆದು ಬಾಳುವುದಕ್ಕೆ ತಕ್ಕ ಬಲಿಗಳನ್ನು ಒದಗಿಸುತ್ತಿದ್ದಾರೆ. ಜಿನಾಸಾಹೇಬರಂತೂ 'ಪಾಕಿಸ್ತಾನ'ದ ಸರ್ವಾಧಿಕಾರಿಗಳಾಗುವ ಸವಿಗನಸನ್ನು ಕಾಣುವ ಗಾಢನಿದ್ರೆಯಲ್ಲಿದ್ದಾರೆ. 'ಹಿಂದೂ-ಮುಸಲ್ಮಾನರಲ್ಲಿ ನೈಸರ್ಗಿಕವಾದ ಭಿನ್ನ-ಭೇದಗಳುಂಟು' ಎಂದು ಹೇಳುವ ಬ್ಯಾ. ಜಿನಾಸಾಹೇಬರು, ಶಿಯಾ-ಸುನ್ನಿಗಳ ಹುಟ್ಟುಹಗೆತನವನ್ನು ಹೇಗೆ ಬಗೆಹರಿಸಿಕೊಳ್ಳಲಿರುವರೋ ತಿಳಿಯದಾಗಿದೆ.

ನಗುತಲಿರು, ನಗುತಲಿರು!

ಶ್ರೀ. ಮೊಗೇರಿ ಗೋಪಾಲಕೃಷ್ಣ ಅಡಿಗ, ಮೈಸೂರು

★

ನಗುತಲಿರು, ನಗುತಲಿರು, ಎಲೆ ಮುದ್ದು ಮಗುವೆ !
ನಿನ್ನ ನಗೆಹೊಳೆಯೊಳೆದೆಯನು ತೇಲಿಬಿಡುವೆ !

* * *

೧

ನಗಲೆಂದು ನೀ ಬಾಯ ತೆಗೆದರೇ ಸಾಕು, ಹೊಸ-
ಜಗವೆ ಮೊಗದೋರುವುದು ನಗದ ಬಗೆಗೆ;
ಹಗೆಯು ಹೊಲೆಯಾರುವುದು, ಸೊಗಳೆ ನೆಲೆಯೇರುವುದು,
ಮಗುತನದ ಸಗ್ಗಕ್ಕೆ ಬಗೆ ನೆಗೆವುದು !

೨

ಮಲ್ಲಿಗೆಯ ಮುಗುಳುಗಳ ಸಾಲ ಸುಲಿಹಲ್ಲುಗಳ
ಮೆಲ್ನಗೆಯ ನಲ್ನಗೆಯ ಹೊನಲಿನಲ್ಲಿ,
ಮುಳುಮುಳುಗಿ ಮಿಂದು ಸುಂದರವಾಗುತಿದೆ ಹೃದಯ,
ಮಳೆಯು ಸಿಡುವನಿ ತೊಳೆದ ತಳಿರಿನಂತೆ !

೩

ನಕ್ಕ, ನಗುವಿನ ಹಿಂದೆ ಉಕ್ಕಿಹರಿಯುವ ನಲುಮೆ-
ಯುಕ್ಕಂದವನು ನಾನು ಕಂಡುಕೊಳುವೆ !
ಅಕ್ಕರೆಯ ಮುಕ್ಕುಗಳ ನನಗುಣಿಸು ದಿನದಿನವು
ದಕ್ಕಿಸುವೆನಾದನಿತನವುಗಳೊಳಗೆ.

೪

ಹರಯದೀ ಬಗೆಹರಿಯದಿರುವ ತೊಡಕಿನ ಮುಂದೆ
ಮರುಳನಂದದಲಿ ಮರವಡುತಲಿರಲು,
ಸರಿದ ಬಾಲ್ಯದ ಸುಖದ ಸಿರಿಯ ಭಾಂಡಾರವನೆ
ತೆರೆದಪುದು ನಿನ್ನ ನುಣ್ದುಟಿಯ ಮುಗುಳು !

೫

ತೊದಲುಲಿಯೊಳೆನಿತೊಂದು ಸೊಂಪು ಸೆರೆಯಾಗಿಹುದೊ,
ಕಲರುತಿಯೊಳೆನಿತೊಂದು ಪೆಂಪಿರುವುದೋ!
ಉದಿಪ ಕೇಕೆಯೊಳಾವ ದಿವ್ಯಲೋಕದ ಕರೆಯು
ಪದವಿಡುತ ಅವಲಂಪನು ಮಿಡಿವುದೋ !

೬

ನೋಡಿದನಿತೂ ನಿನ್ನ ಮೊಗದೊಳುನ್ನತ ಸುಖದ
ಬೀಡುಕಾಣಿಪುದು ನಿನ್ನರೆಗಂಗಳ
ನಾಡಿನೊಳಗೀ ಭವದ ಗೂಢಕ್ಕೆ ಲಸದರ್ಥ
ಮೂಡಿಬರುವುದು, ನನ್ನೆದೆಗೆ ಮಂಗಳ !

೭

ನಾಕಲೋಕದ ಸುಖದ ಶಾಂತಿರಸದೇಕೈಕ-
ಪಾಕವಿದು ನೋಡೆ ನಿನ್ನಧರಾಮೃತ !
ಸೋಕಿ ಸಾಕನಿತನುಂಡವರ ತನುಮನಕೆ ರಸ-
ಪಾಕ ದೊರೆಕೊಂಬುದತಿಶಯ ಸಂಸ್ಕೃತ !

೮

ಒಂದೆ ಸಲ ನಗು ಸಾಕು ಮಗುವೆ, ನನ್ನೆದೆಮನೆಯ
ಅಂಧಕಾರವು ತೊಲಗಿ ಬೆಳಕುಬರಲು !
ಒಂದೆಸಲ ತೊದಲು ಸಾಕೆನ್ನೆದೆಯ ಮೂಕತೆಯ
ಕೊಂದು ಹೊಸಹಾಡ ಹೊನಲಾಗಿ ತರಲು !

೯

ನಿನ್ನ ನಗೆಗಂಗೆಯಲಿ ಮಿಂದ ಬಗೆ ಪಾವನವು
ನಿನ್ನಧರ ಸುಧೆಯ ನವರಸವನುಂಡ
ಜನ್ಮವೇ ಪುಣ್ಯವೈ ನಿನ್ನ ಕಣ್ಣಿನ ಕರೆಗೆ
ತನ್ನನೇ ಮಾರಿಕೊಂಡವ ಧನ್ಯನು !

೧೦

ಅಕಟಕಟ ಹರಯದೀ ಕರಕರೆಯು ಸಾಕೆನಗೆ,
ವಿಕಟಮನದೇರಿಳಿತದುಬ್ಬು ಮಬ್ಬುಗಳು.
ಸುಖದ ನಿಧಿ ಮಗುತನವು ದೊರೆಕೊಂಡೊಡಿನ್ನೊಮ್ಮೆ
ಅಕಲಂಕನಾಗಿ ಮೆರೆದಾಡಲಿಹೆನು !

* * *

ನಗುತಲಿರು, ನಗುತಲಿರು, ಎಲೆ ಮುದ್ದು ಮಗುವೆ !
ನಿನ್ನ ನಗೆವೊನಲೊಳೆದೆಯನು ತೇಲಿಬಿಡುವೆ !

'ಯಾರಯ್ಯಾ ಇಷ್ಟು ಜೋರಾಗಿ ಮುದ್ದು ತಕ್ಕೊಂಡವರು ?'
ಎಂದು……ರಾಮಣ್ಣ ಮಾಸ್ತ್ರು ಉದ್ಗಾರ ತೆಗೆದರು.

ಚುಂಬಿಸಿರದ ★ ★ ಚುಂಬನ

(ಒಂದು ಹಾಸ್ಯಕಥೆ)

★

ಶ್ರೀ. ಟಿ. ಆರ್. ಭಟ್ಟ ಮುಲ್ಕಿ

ಪಾಪ, ಹಸುವಿನಂತಹ ಶ್ರೀಧರಮಾಸ್ತರ ಮೇಲೆ ಎಂತಹ ದುರಾಪಾದನೆ? ಈ ಆಪಾದನೆ ಹಬ್ಬಲಿಕ್ಕೆ ಕಾರಣರಾರೆಂಬುದೆ ಶ್ರೀಧರಮಾಸ್ತರಿಗೆ ಬಗೆಹರಿಯದ ತೊಡಕಾಗಿದೆ.

★

ಶ್ರೀಧರಮಾಸ್ತರ ಮನೆಯಲ್ಲಿ ಗಲಾಟೆ ಎದ್ದಿತ್ತು. ಅವರು ತಮ್ಮ ಮಗಳ ಮದುವೆಯ ಪ್ರೀತ್ಯರ್ಥವಾಗಿ ತನ್ನ ಸಹೋದ್ಯೋಗಿ ಉಪಾಧ್ಯಾಯರಿಗೆಲ್ಲ ಒಂದು 'ಟೀ ಪಾರ್ಟಿ'ಯನ್ನೇರ್ಪಡಿಸಿದ್ದರು.

ಅವರ ಮನೆ ಸ್ವಲ್ಪ ಚಿಕ್ಕದು. ಕೇವಲ ಕೋಣೆಗಳು. ಹೊರಗೆ ಬೈತಕುಕೋಣೆ; ಅದಕ್ಕೆ ತಾಗಿಯೇ ಅಡಿಗೆಯ ಕೋಣೆ. ಬೈತಕುಕೋಣೆ ಸ್ವಲ್ಪ ದೊಡ್ಡದಿದ್ದರೂ ಇಂದು ಮಾಸ್ತರುಗಳೆಲ್ಲಾ ಒಟ್ಟುಗೂಡಿ, ಅದು ಇಕ್ಕಟ್ಟಾಗಿದ್ದಿತು. ಅಲ್ಲಿ ನಡೆಯುವ 'ಪಂಚಾಯಾತಿ'ಗಳ ಗಲಭೆಯೂ ಹೊರಗೆ ಒಂದೇ ಸಮನೆ ಕೇಳಿಬರುತ್ತಿತ್ತು. ಒಂದು ಕಡೆಗೆ ಇಂಗ್ಲೀಷಿನ ಮಾಸ್ತರು, ಲೆಕ್ಕದ ಮಾಸ್ತರು, ಮತ್ತು ರಿಜಿಸ್ಟರ ಆಫೀಸಿನ ಒಬ್ಬ ಕ್ಲಾರ್ಕರು ಕುಳಿತುಕೊಂಡು, ಮಲಬಾರಿನ ಮಂತ್ರವಾದಿಗಳ ಮತ್ತು ಭೂತಚೇಷ್ಟೆಗಳ ವಿಷಯಕ್ಕೆ ನಾನಾ ಸಂಗತಿಗಳನ್ನು, ಸುತ್ತಲಿದ್ದವರಿಗೆ ರೋಮಾಂಚವಾಗುವಂತೆ ಬಣ್ಣಿಸಿ ಬಣ್ಣಿಸಿ ಮಾತನಾಡುತ್ತಿದ್ದರು. ರಾಜಕೀಯದ ಮೇಲೂ ನಡುನಡುವೆ ಮಾತುಬರುತ್ತಿದ್ದುವು. ಒಟ್ಟಾರೆ ಒಬ್ಬರಿಗಿಂತಒಬ್ಬರು, ಮೊದಲು ತಮ್ಮ ಅನುಭವಗಳನ್ನು ಅತಿಥಿಗಳಿಗೆ ಹೇಳುವುದಕ್ಕಾಗಿ ಎಲ್ಲರೂ ಪಡುವ ತವಕವೆಂದರೆ ಹೇಳಲಸಾಧ್ಯ. ಇನ್ನೊಂದು ಮೂಲೆಯಲ್ಲಿ ಸಂಸ್ಕೃತ ಪಂಡಿತರು 'ಬೆಂಕಿಯಲ್ಲಿ ಸುಟ್ಟು ಬಂದ ಮನುಷ್ಯನ ಚರ್ಮದ ಬಣ್ಣವು ಹೇಗೆ ಬದಲಾವಣೆಯಾಗುವುದಿಲ್ಲ' ಎಂಬುದನ್ನು ಕೆಲವು ಶ್ರೋತೃಗಳಿಗೆ ವಿವರಿಸಿ ಹೇಳುತ್ತಿದ್ದರು.

ಈ ರೀತಿಯಾಗಿ ಭಯಂಕರ ಸಂಗತಿಗಳು ಅಲ್ಲಿ ಚರ್ಚಿಸಲ್ಪಡುತ್ತಿದ್ದು, ಅತಿಥಿಗಳೆಲ್ಲಾ ಬಹಳವಾಗಿ ಅವುಗಳಲ್ಲಿ ಮಗ್ನರಾಗಿದ್ದರು. ಕೆಲವು ಭಿಕಾರಿಗಳು ಮಾತ್ರ ಹೊರ ಅಂಗಳದಲ್ಲಿ ನಿಂತು ಕಿಟಕಿಗಳಿಂದ ಒಳಗೆ ಇಣಿಕಿ ಇಣಿಕಿ ನೋಡುತ್ತಿದ್ದರು.

ಒಳಗಿನ ಕೋಣೆಯಲ್ಲಿ ಮೈಮೇಲೆ ಬೆವರಿನ ಧಾರೆ ಸುರಿಯುತ್ತಲಿರುವ ಗೌರಮ್ಮನು, ನಾನಾತರದ ಖಾದ್ಯಪದಾರ್ಥಗಳನ್ನು ತಯಾರಿಸುವುದರಲ್ಲಿ ತೊಡಗಿದ್ದಳು. ಈ ದಿನ ಬೆಳಗು ಎದ್ದವರೇ ಶ್ರೀಧರಮಾಸ್ತರ ಪತ್ನಿ— ಭಾಗೀರಥಿಬಾಯಿಯವರು—ಹೊರಗೆ ಕುಳಿತುದರಿಂದ ಬಹಳ ಕಷ್ಟಕ್ಕಿಟ್ಟಿತ್ತು. ಆದಕ್ಕಾಗಿ ಅವರು ನೆರೆಮನೆಯ ಗೌರಮ್ಮನನ್ನು ಅಡಿಗೆಗೆ ಹೇಳಿಕಳಿಸಿದ್ದರು. ಗೌರಮ್ಮನ ಚರಿತ್ರೆಯೋ ಅಷ್ಟೇನೂ ಚೆನ್ನಾಗಿರಲಿಲ್ಲ. ಆದಕ್ಕಾಗಿ ಅವರಿಗೆ ಹೇಳುವ ಮನಸ್ಸಿಲ್ಲದಿದ್ದರೂ, ಉಪಾಯವಿಲ್ಲದೆ ಕರೆಯಬೇಕಾಗಿತ್ತು.

ಚಟಾಟಿ, ಬಾಳೆಹಣ್ಣು ಮುಂತಾದುವುಗಳ ಬೋಂಡಗಳು, ಭಾಜಿ, ಅವಲಕ್ಕಿ, ಉಪ್ಪಿಟ್ಟು ಮುಂತಾದ ರುಚಿಕರವಾದ ಪದಾರ್ಥಗಳನ್ನು ಗೌರಮ್ಮನು ಒಳ್ಳೇ ಆಸ್ಥೆಯಿಂದ ತಯಾರಿಸುತ್ತಿದ್ದಳು. ಅವುಗಳ ವಿಧವಿಧದ ಪರಿಮಳಗಳು ಅಡಿಗೆಯ ಕೋಣೆಯಲ್ಲಿ ಸುಳಿದಾಡುತ್ತಿದ್ದುವು. ಗೌರಮ್ಮನ ಸ್ಥೂಲವಾದ ದೇಹವು ಬೆವರಿನಿಂದ ವಿಹಾಯಿಸಿದಂತಾಗಿತ್ತು.

'ಐದುಗಂಟೆಯಾದರೂ ಫಲಾಹಾರದ ಸಿದ್ಧತೆ ಏತಕ್ಕಾಗ ಲ್ಲವೊ?' ಎಂದು ನೋಡುವ ಸಲುವಾಗಿ ಶ್ರೀಧರಮಾಸ್ತ್ರು ಎದ್ದು, ಅಡಿಗೆಕೋಣೆಗೆ ಹೋದರು. ಹೋದದ್ದೇ ತಡ- ನಾನಾ ತರದ ಪರಿಮಳಗಳು 'ಘಮ್ಮೆಂ'ದು ಅವರ ಮೂಗಿಗೆ ತಾಗಿದುವು. ಕ್ಷಣಮಾತ್ರ ತಮ್ಮ ಅಸ್ತಿತ್ವವನ್ನೇ ಮರೆತು ಅವರು ತಟಸ್ಥರಾದರು.

'ಗೌರಮ್ಮಾ, ಏನೆಲ್ಲಾ ತಯಾರಿಸಿದ್ದೀ; ನಾವೂ ಸ್ವಲ್ಪ ನೋಡಬಹುದೇ?' ಎಂದು ಮಾಸ್ತ್ರು ಸಸ್ಮಿತರಾಗಿ ನುಡಿದರು. ಗೌರಮ್ಮನು 'ಅಂಬೊಡೆ'ಗಳನ್ನು ಎಣ್ಣೆಯ ಕಥಾಯಿಯಲ್ಲಿ ಬಿಡುತ್ತಿದ್ದಳು. ಅವರು ಮೈಮರೆತರು, ಮುಖಪರಳಿತು. ಮಾಸ್ತ್ರು ನಾಲಗೆಯು ನೀರೂರಿತು. ಮತ್ತು ಆ ನಾಲಗೆಯ ನೀರು ಅನಾವರವಾಗಲು ಅವರು ಅತ್ತಿತ್ತ ಒಮ್ಮೆ ತಿರುಗಿ 'ಪಚ್' ಎಂದು ಗಟ್ಟಿಯಾಗಿ ಶಬ್ದಮಾಡಿದರು.

"ಯಾರಯ್ಯಾ, ಇಷ್ಟು ಜೋರಾಗಿ ಮುದ್ದುತಕ್ಕೊಂಡರು?" ಎಂದು, ಅಡಿಗೆಕೋಣೆಯ ಬಾಗಿಲಿಗೆ ಹತ್ತಿರವೇ ಗೋಡೆಗೆ ತೂಗು ಹಾಕಿರುವ ಒಂದು ಫೋಟೋವನ್ನು ನೋಡುತ್ತಿದ್ದ ರಾಮಣ್ಣ-ಮಾಸ್ತ್ರು ಉದ್ಗಾರತೆಗೆದರು.

ಇಷ್ಟರಲ್ಲಿ ಶ್ರೀಧರಮಾಸ್ತ್ರೇ ಟಾವೆಲಿನಿಂದ ಮುಖ ಒರಸಿ ಕೊಳ್ಳುತ್ತ ಹೊರಕ್ಕೆ ಬಂದರು.

"ಓಹೋ, ನೀವೇಯೇನೊ!" ರಾಮಣ್ಣ ಮಾಸ್ತ್ರು ಕಣ್ಣು ಮಿಟುಕಿಸಿ ಮುಂದೆ ನುಡಿದರು: "ನಮಗೆಲ್ಲಾ ಎಲ್ಲಿ ಗೊತ್ತು ಈ ಗಮ್ಮತ್ತು?"

"ನಾನು ಮುದ್ದುತೆಗೆದುಕೊಂಡೆನೆಂದು ನಿಮಗೆ ತೋರು ವುದೇ?" ಶ್ರೀಧರಮಾಸ್ತ್ರು ಸ್ವಲ್ಪ ಕೋಪದಿಂದಲೇ ಕೇಳಿದರು: "ಬಹಳ ಬುದ್ಧಿವಂತರು ನೀವು ರಾಮಣ್ಣಾ! ನಾನು ಯಾರ ಮುದ್ದು ತೆಗೆದುಕೊಂಡೇನು? ಅಂಬೊಡೆಯ ಪರಿಮಳದಿಂದ ನಾಲಗೆಗೆ ನೀರೂರಿ ನಾನು ಬಾಯಿ ಚಪ್ಪರಿಸಿದೆ ಅಷ್ಟೇ.."

ರಾಮಣ್ಣನಿಗೆ ನಗುತಡೆಯದು. ಆದರೂ ಹೇಗೋ ಅದನ್ನು ತಡೆದುಕೊಂಡು, ಮೂಲೆಯಲ್ಲಿ ಹರಟೆಹೊಡೆಯುತ್ತಿರುವ ಬೇರೆ ಮಾಸ್ತ್ರುಗಳೊಡನೆ ಹೋಗಿ ಕುಳಿತರು.

"ಇದೊಂದು ದೊಡ್ಡ ಕತ್ತೆ!" ಶ್ರೀಧರ ಮಾಸ್ತ್ರು ತನ್ನಲ್ಲೇ ಆಲೋಚಿಸಿದರು: "ಈಗ ಈ ಆಸಾಮಿ ಅಲ್ಲಿಗೆ ಹೋಗಿ ನನ್ನ ವಿಷಯ ತನ್ನ ಎಲ್ಲಾ ಸಂಶಯಗಳನ್ನು ಹೇಳಿಬಿಡುವನು. ಈ ಸಂಗತಿಯನ್ನು ಹೀಗೇ ಬಿಟ್ಟರೆ ಚೆನ್ನಾಗದು. ಒಬ್ಬರಿಬ್ಬರು ಎನ್ನುವಾಗಲೇ ಊರೆಲ್ಲಾ ನನ್ನ ಬಗೆಗೆ ತರ್ಕ-ಕುತರ್ಕಗಳನ್ನು ಮಾಡಬಹುದು!"

'ರಾಮಣ್ಣ ಮಾಸ್ತ್ರು ಮಾತುಗಳನ್ನು ಯಾರಾದರೂ ಕೇಳಿರ ಬಹುದೇ?' ಎಂಬ ಹೆದರಿಕೆಯಿಂದ ಸುತ್ತುಮುತ್ತಲೂ ನೋಡುತ್ತ, ಅವನು ಕುಳಿತುಕೊಂಡ ಸ್ಥಳಕ್ಕೆ ಹೋಗುವುದಕ್ಕಾಗಿ ಆ ಕಡೆ ತಿರುಗಿದರು. ರಾಮಣ್ಣ ನಗುನಗುತ್ತ ಗುಂಡಪ್ಪನವರ ಕಿವಿಯಲ್ಲಿ ಏನನೋ ಉಸುರುತ್ತಿದ್ದನು. ಗುಂಡಪ್ಪನವರು ಮುಗುಳುನಗೆ ನಗುತ್ತ ಕೇಳುತ್ತಲಿದ್ದರು:

"ನನ್ನ ವಿಷಯವಾಗಿಯೇ ಹೇಳುತ್ತಾನೆ ಇವನು" ಎಂದು ಶ್ರೀಧರ ಮಾಸ್ತ್ರಿಗೆ ಖಂಡಿತವಾಯಿತು. "ಏನು ಮೂರ್ಖನಪ್ಪಾ, ಆ ಗುಂಡಪ್ಪನವರಿಗೂ ಹಾಗೆ ನಗೆಯಾಡಲು ಏನಾಗಿದೆ? ನನ್ನಷ್ಟು ವಯಸ್ಸಾದಂಥಾ ಮತ್ತು ನನ್ನಂಥಾ ಮನುಷ್ಯನ ಸಂಬಂಧವಾಗಿ ಅಲ್ಲದ ಸಲ್ಲದ ಮಾತುಗಳ ಮೇಲೆ ನಂಬುಗೆಯಿಡಲು ಬುದ್ಧಿಯಿ ಲ್ಲವೇ ಇವರಿಗೆ?.... ಛೇ, ಛೇ, ಈ ಸಂಗತಿಯನ್ನು ಹೀಗೆ ಬಿಟ್ಟು ಬಿಡುವುದು ಸರಿಯಲ್ಲ.... ಇಂಥಾ ದುಷ್ಟತನವನ್ನು ತಡೆಯಲೇ ಬೇಕು....ನಾನೇ ಎಲ್ಲಾ ಸಂಗತಿಯನ್ನೂ ಎಲ್ಲರಿಗೂ ಹೇಳಿ ಬಿಡುತ್ತೇನೆ. ಅಂದರೆ ಈ ರಾಮಣ್ಣ ಹೇಗೆ 'ಊರಿಗೆ ಮಾರಿ' ಎಂಬುದು ಎಲ್ಲರಿಗೂ ತಿಳಿದು ಬಂದೀತು...."

ತಲೆ ತುರಿಸುತ್ತಾ ಸ್ವಲ್ಪ ಭೀತಿಯಿಂದಲೇ—ರಂಗರಾಯರು ಕೂತೆಡೆಗೆ ಶ್ರೀಧರ ಮಾಸ್ತ್ರು ಹೋದರು:

"ನೋಡಿದಿರಾ, ರಂಗರಾಯರೇ, ಫಲಾಹಾರ ಸಿದ್ಧವಾ ಗಿದೆಯೋ ಎಂದು ನೋಡಲಿಕ್ಕಾಗಿ ನಾನು ಸಹಜವಾಗಿ ಆಗ ಅಡಿಗೆಕೋಣೆಗೆ ಹೋಗಿದ್ದೆ. ನಿಮಗೆ ಶ್ರೀಖಂಡದಲ್ಲಿ ಪ್ರೀತಿಯಿದೆ ಯಲ್ಲವೇ? ಈವೊತ್ತಿನ ಶ್ರೀಖಂಡವು ಹೇಗಿದೆಯೆಂದು ಬೇರೆ ಕೇಳಬೇಡಿ. ಅದರ ಪರಿಮಳ ಎಷ್ಟೆಂದರೆ, ಅದು ಮೂಗಿಗೆ ತಾಗಿ ದೊಡನೆ ಬಾಯಲ್ಲಿ ನೀರೂರಿ, ನಾನು ಸ್ವಲ್ಪ ಜೋರಾಗಿಯೇ ನಾಲಗೆ ಚಪ್ಪರಿಸಿದೆನು. ಹೊರಗೆ ಬರುವಾಗ ಆ ರಾಮಣ್ಣ 'ಹ್ಹಾ, ಹ್ಹಾ' ಎಂದು ನಗೆಯಾಡಲಾರಂಭಿಸಿದ, ಮತ್ತು 'ಏನಯ್ಯಾ, ಯಾರಿಗೆ ಮುದ್ದುಕೊಟ್ಟಿರಿ ಶ್ರೀಧರ ಮಾಸ್ತ್ರೇ?' ಎಂದು ಕೇಳಿದ. ಇವನಿಗೇನಾದರೂ ಲಜ್ಜೆಯಿದೆಯೇ? .. ಅಂದರೆ, ನಾನು.. ಆ ಮುದುಕಿಯಾಗಲು ಸಿದ್ಧಳಾದ ಗೌರಮ್ಮನನ್ನು ಮುದ್ದಿಸಿದ್ದೇ ನೆಂದು ಅವನ ಸಂಶಯ..; ಸಂಶಯಪಡುವುದರಲ್ಲಿ ಕೂಡ ಏನಾದರೂ ಬುದ್ಧಿಯಿರಬೇಡವೇ? .... ಆ ಎಮ್ಮೆಯಂಥಾ ಶೂರ್ಪಣಖಿಗೆ ಯಾರಪ್ಪಾ ಮುದ್ದುಕೊಡುವವರು?..ಅವನಿಷ್ಟು ಮೂರ್ಖನೆಂದು ನಾನೆಣಿಸಿರಲಿಲ್ಲ!.."

"ಯಾರು? ಯಾರು ಮೂರ್ಖನೆಂದಿರಿ?" ಎಂದು ಹತ್ತಿರದ ಇನ್ನೊಬ್ಬ ಅತಿಥಿಗಳು ಇತ್ತ ಸರಿದು ಕೇಳಿದರು.

"ಆ ರಾಮಣ್ಣ!" ಶ್ರೀಧರ ಮಾಸ್ತ್ರು ಪುನಃ ಆದ್ಯಂತವಾಗಿ ತನ್ನ ಕಂತೆಯನ್ನು ಬಿಚ್ಚಿದರು. ನಾನು ಸಹಜವಾಗಿ ಅಡಿಗೆ-ಕೋಣೆಗೆ ಹೋಗಿದ್ದೆ.." ಇಷ್ಟರಲ್ಲಿ ಏನು ಮಾತುನಡೆದಿದೆ ಯೆಂದು ಕೇಳಲು ರಾಘವ ಮಾಸ್ತ್ರು ಅಲ್ಲಿಗೆ ಬಂದರು.

"ಏನಿಲ್ಲ; ಆ ರಾಮಣ್ಣನ ವಿಷಯ ಮಾತನಾಡುತಿದ್ದೆವು ನಾವು" ಶ್ರೀಧರ ಮಾಸ್ತ್ರಿಗೆ ಆವೇಶ ಅಧಿಕವಾಯಿತು, "..ಅಡಿಗೆ ಕೋಣೆಗೆ ಇಣಿಕಿ, ಅಲ್ಲಿ ಗೌರಮ್ಮನ ಹತ್ತಿರ ನಿಂತಿದ್ದ ನನ್ನನ್ನು ನೋಡಿ: ನನಗೆ ತಮಾಷೆಮಾಡಿ ಹೇಳುತ್ತಾನಲ್ಲ, ಏನಯ್ಯಾ ಶ್ರೀಧರ ಮಾಸ್ತ್ರು 'ಗಮ್ಮತ್ತು' ಮಾಡುತ್ತೀರಲ್ಲ!.. ಏನು ಭಂಗೀ ಎಳೆಯುತ್ತಾನೋ ಅವನು!.. ಆ ಗೌರಮ್ಮನನ್ನು

ಮುದ್ರಿಸುವ ಬದಲಾಗಿ ಒಂದು ಕತ್ತಿಯನ್ನು ಮುದ್ರಿಸಬಾರದೇಕೆ? ನಾನು ಅವನಿಗೆ ಹೀಗೆ ಕೂಡ ಹೇಳಿದೆ: 'ಏನಯ್ಯಾ, ನಾನು ಸಂಸಾರಿಕನಿದ್ದೇನೆ. ನನ್ನ ವಯಸ್ಸೇನು! ಹೀಗೆಲ್ಲಾ ಈ ವಯಸ್ಸಿನಲ್ಲಿ ಮಾಡಬಹುದೇ? ..' ಎಂದು. ಆದರೂ ಅವನಿಗೆ ಹಾಗೇ ತೋರುತ್ತದೆ!..ಶತಮೂರ್ಖ!"

"ಯಾರು ಮೂರ್ಖ?" ಆ ಕಡೆಗೆ ಯಾವುದಕ್ಕೋ ಬಂದಿದ್ದ ಬೇರೊಬ್ಬ ಉಪಾಧ್ಯಾಯ ಕೇಳಿದ.

"ಆ ರಾಮಣ್ಣನಯ್ಯಾ! .. ನಾನು ಅಡಿಗೆ ಕೋಣೆಗೆ ಹೋಗಿದ್ದೆ....!"

ಗಂಟೆಯ ಕಾಲ; ಅಲ್ಲಿ ಜಮೆಯಾದ ಎಲ್ಲಾ ಅತಿಥಿಗಳಿಗೆ ಶ್ರೀಧರ-ಮಾಸ್ಟ್ರ ಈ ಕರ್ಮಕಥೆಯು ಮುಖೋದ್ಗತವಾಯಿತು.

"ಈಗ ಊರೆಲ್ಲಾ ಹೇಳುತ್ತಾ ಹೋಗಲಿ ನೋಡುವಾ!" ಶ್ರೀಧರ ಮಾಸ್ಟ್ರು ಮನಸ್ಸಿನಲ್ಲೇ ಎಂದುಕೊಂಡರು. "ಈಗ ಹೇಳಲಿಕ್ಕಾರಂಭಿಸಿದರೆ ಜನರೆಲ್ಲ ಕೂಡಲೇ 'ಗೊತ್ತುಂಟಯ್ಯ, ಎಲ್ಲಾ; ಸಾಕುಮಾಡು!' ಎಂದು ಹೇಳದೆ ಬಿಡುವರೆ!"

ಈ ವಿಚಾರದಿಂದ ಶ್ರೀಧರಮಾಸ್ಟ್ರಿಗೆ ಎಷ್ಟು ಖುಷಿಯಾಯಿತೆಂದರೆ ಅತಿಥಿಗಳೊಡನೆ ಸರಿಯಾಗಿ ಫಲಾಹಾರ ಹೊಡೆದರು; ರಾತ್ರಿಯಲ್ಲಿ ಸರಿಯಾಗಿ ನಿದ್ದೆಮಾಡಿದರು. ಮರುದಿನ ಏಳುವಾಗ ಮುಂಚಿನ ದಿನದ ಎಲ್ಲಾ ಸಂಗತಿಗಳನ್ನೂ ಮರೆತುಹೋಗಿದ್ದರು. ಮಾಸ್ಟ್ರು ಮರೆತದ್ದು ನಿಜ; ಆದರೆ ದುರ್ದೈವವು ಮಾತ್ರ ಮಾಸ್ಟ್ರನ್ನು ಮರೆತಿರಲಿಲ್ಲ. ಹತ್ತಿಪ್ಪತ್ತು ತೆಳುವಾದ ನಾಲಗೆಗಳು ಊರೆಲ್ಲಾ ಆಡಿಕೊಳ್ಳುತ್ತಿದ್ದುವು. ಈ ಸಂಗತಿಗೆ ಒಂದು ವಾರವಾಗಿತ್ತು. ಶ್ರೀಧರಮಾಸ್ಟ್ರು ಲೆಕ್ಕದ ಪಾಠಹೇಳಿಕೊಡುತ್ತಿದ್ದರು. ಒಬ್ಬ ಹುಡುಗನ ದುರ್ವರ್ತನಕ್ಕಾಗಿ ಅವನ ವಿಚಾರಣೆಯಾಗುತ್ತಿತ್ತು. ಇಷ್ಟರಲ್ಲಿ ಹೆಡ್‌ಮಾಸ್ಟ್ರು ಅವರನ್ನು ಕರೆದರು:

"ನೋಡಿ..ಶ್ರೀಧರರಾಯರೇ, ನನಗೆ ಈ ಸಂಗತಿಯಲ್ಲೇನೂ ಸಂಬಂಧವಿಲ್ಲ. ಆದರೂ ಅದು ನನ್ನ ಕರ್ತವ್ಯವೆಂದೆಣಿಸಿ ಹೇಳುತ್ತೇನೆ. ನಿಮಗೆ ತಿಳಿದೇ ಇರಲು ಸಾಕು, ಊರೆಲ್ಲಾ ಏನು ಹೇಳುತ್ತಾರೆಂಬುದು....ನಿಮಗೂ ಆ ಗೌರಮ್ಮನಿಗೂ ಏನೋ ಸಂಬಂಧ....ನಾನೇನೂ ಹಾಗೆ ಹೇಳುವುದಿಲ್ಲ, ನಿಮ್ಮ ಸ್ವಂತದ ಸಂಬಂಧದಲ್ಲಿ ನೀವು ಬೇಕಾದ್ದು ಮಾಡಬಹುದು. ಆದರೆ ಜಗತ್ತಿಗೆಲ್ಲಾ ತೋರುವಂತೆ ಮಾಡಬೇಡಿ. ನೀವು ಉಪಾಧ್ಯಾಯರಿದ್ದೀರಿ ಎಂಬುದನ್ನು ಮರೆಯಬಾರದು!" ಎಂದು ಹೇಳಿದರು.

ಶ್ರೀಧರಮಾಸ್ಟ್ರಿಗೆ ತಲೆತಿರುಗಿದಂತಾಯಿತು, ತಲೆಗೆ ಯಾರೋ ತಣ್ಣೀರು ಎರಚಿದಂತಾಯಿತು. ನೂರಾರು ಸಿಡಿಲುಬಡಿದಂತೆ ಅವರ ಹೃದಯಕ್ಕೆ ವೇದನೆಯಾಯಿತು. ಅವರು ಮನೆಗೆ ಹೋಗುವಾಗ 'ತನ್ನ ಮೈಯೆಲ್ಲಾ ಕೆಸರಾಗಿದೆ, ಊರೆಲ್ಲಾ ತನ್ನನ್ನೇ ನೋಡುತ್ತದೆ' ಎಂಬಂತೆ ಅವರಿಗೆ ತೋರುತ್ತಿತ್ತು.

ಮನೆಗೆ ಹೋಗಿ ಊಟಕ್ಕೆ ಕುಳಿತಿದ್ದಾಗ ಅವರ ಪತ್ನಿ ಹೇಳಿದರು: "ಎಂದಿನಂತೆ ಊಟಮಾಡಲಿಕ್ಕೆ ನಿಮಗೇನಾಗಿದೆ? ನನಗೆ ಗೊತ್ತುಂಟು..ದೂರದ ಆಲೋಚನೆಯಲ್ಲಿರುವಿರೆಂಬುದು. ಆ ಗೌರಮ್ಮ ಬೇಕೆಂದು ತೋರುತ್ತದೆ ಊಟಮಾಡಲಿಕ್ಕೆ. ನನಗೆಲ್ಲಾ ಗೊತ್ತಾಗಿದೆ ಈ ದಿನ. ನಿಮಗೇನು ಲಜ್ಜೆ ಇಲ್ಲವೇ?"

ಎಲ್ಲಕ್ಕಿಂತ ಅಗ್ಗ! ಎಲ್ಲಕ್ಕಿಂತ ಉತ್ತಮ!
ಮಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ!



೫ ಆಣೆಗೆ ೧೦ ಬ್ಲೇಡು!

ಮಾಸ್ಟ್ರು ಶೂನ್ಯಮನಸ್ಕರಾಗಿ ಎಲ್ಲವನ್ನೂ ಕೇಳುತ್ತಿದ್ದರು. ಊಟವಾದ ಕೂಡಲೇ–ಕೋಟನ್ನು ಕೂಡ ಹಾಕದೆ— ಸೀದಾ ರಾಮಣ್ಣನ ಮನೆಗೆ ನಡೆದರು. ರಾಮಣ್ಣ ಮನೆಯಲ್ಲೇ ಇದ್ದ.

"ಚಾಂಡಾಳಾ," ರಾಮಣ್ಣನನ್ನು ನೋಡುತ್ತಲೇ ಮಾಸ್ಟ್ರು ಕೂಗಿದರು: "ಏನೂ ಕಾರಣವಿಲ್ಲದೆ ನನ್ನ ವಿಷಯ ಊರಲ್ಲೆಲ್ಲ ಕಂಡಾಬಟ್ಟೆ ಬೊಗಳುತ್ತಿದ್ದೀಯಲ್ಲವೆ? ನಿನಗೇನು ಮಾಡಿದ್ದೇನೆ ನಾನು?"

"ಏನು, ಏನು ಹೇಳುತ್ತೀರಿ ನೀವು ಶ್ರೀಧರಮಾಸ್ಟ್ರೆ?" ಆಶ್ಚರ್ಯಚಕಿತನಾಗಿ ರಾಮಣ್ಣ ನುಡಿದನು. "ನನಗೇನೂ ಗೊತ್ತಿಲ್ಲ. ನಿಮ್ಮ ವಿಷಯ ನಾನೇನೂ ಹೇಳಿಲ್ಲವಲ್ಲ! ನೀವು ಏನು ಮಾತನಾಡುತ್ತೀರಿ?"

"ಹಾಗಾದರೆ ನನ್ನ ವಿಷಯ ಮತ್ತು ಆ ಗೌರಮ್ಮನ ವಿಷಯ ಈ ಗಾಳೀ ಸುದ್ದಿಗಳನ್ನು ಪಸರಿಸಿದವರಾರು? ಆ ದಿನ ನೀವು ಗುಂಡಪ್ಪನವರ ಕಿವಿಯಲ್ಲಿ ಆ ಸಂಗತಿಯನ್ನು ಹೇಳುತ್ತಿದ್ದಿರಲ್ಲ?"

"ಇಲ್ಲ! ಶ್ರೀಧರರಾಯರೆ, ನಾನು ಆದಿನ ಹೆಡ್‌ಮಾಸ್ಟ್ರ ವಿಷಯ ಅವರೊಡನೆ ಹೇಳುತ್ತಿದ್ದೆ. ನಿಮಗೆ ತಮಾಷೆಮಾಡಿ ಇನ್ನೊಂದು ಕ್ಷಣದಲ್ಲೇ ಅದನ್ನು ಮರೆತುಹೋಗಿದ್ದೇನೆ. ದೇವರಾಣೆ ಮಾಡಿ ಹೇಳುತ್ತೇನೆ; ಈ ವಿಷಯ ನಾನು ಯಾರೊಡನೆಯೂ ಹೇಳಿದ್ದರೆ ನನ್ನ ಮುಖಕ್ಕೆ ಹುಳುಬೀಳಲಿ!"

ರಾಮಣ್ಣನ ಮೇಲೆ ಈಗ ಸಂಶಯಪಡಲಿಕ್ಕೆ ಕಾರಣವಿಲ್ಲ, ಇದನ್ನು ಬೇರೆ ಯಾರೋ ಮಾಡಿರಬೇಕು.

"ಮತ್ತೆ ಯಾರಾಗಿರಬಹುದು?" ಎಂದು ಶ್ರೀಧರಮಾಸ್ಟ್ರು ತನ್ನಲ್ಲೇ ಯೋಚಿಸಿದರೂ ಏನೂ ಬಗೆಹರಿಯಲಿಲ್ಲ. ನಿರಾಶೆಯಿಂದ ಅವರು ಪುನಃ ಪುನಃ ತನ್ನ ಮನಸ್ಸಿಗೆ ಕೇಳಿದರು:

"* ಯಾರಾಗಿರಬಹುದು ಆ ದುಷ್ಟನು?"

---

* ಸುಪ್ರಸಿದ್ಧ ರಷ್ಯನ್ ಕತೆಗಾರ ಚೆಖಾವ್ ಬರೆದ 'The Scandal Mongeor' ಎಂಬ ಕತೆಯ ಭಾಷಾನುವಾದವಿದು. —ಲೇಖಕ.

ಗಾಂಧೀಜೀ-ಕಲೆ

★

ಶ್ರೀಮಾನ್ ಸಿ. ಕೃಷ್ಣಶರ್ಮಾ

ಗಾಂಧೀಜೀ ಮೈಸೂರಿನಲ್ಲಿ ಆರೋಗ್ಯಕ್ಕಾಗಿ ಕೆಲಕಾಲ ತಂಗಿದ್ದರು. ಗುಣವಾದಮೇಲೆ ಮೈಸೂರನ್ನೆಲ್ಲ ಸುತ್ತಿದರು. ಪ್ರಭುತ್ವವೇ ಅವರ ಸೇವೆಗೆ ನಿಂತಿತ್ತು. ಮೈಸೂರಲ್ಲಿ ಮಲೆನಾಡು ಅಂದವಾದ ಸೀಮೆ. ಅದರಲ್ಲಿ ಗೇರುಸೊಪ್ಪೆಯ ಜಲಪಾತವಂತೂ ಅತಿ ರಮಣೀಯವಾದುದು. ಅದರ ಚೆಲುವು ಜಗತ್ತಿಗೇ ಒಂದು ಸಳೆತವಾಗಿದೆ. ಹಿಂದುಸ್ಥಾನಕ್ಕೆ ಬಂದ ಪ್ರವಾಸಿಗಳು ಜೋಗವನ್ನು ನೋಡದೆ ಹಿಂದಿರುಗುವುದಿಲ್ಲ. ಗಾಂಧೀಜೀ ಸಾಗರಕ್ಕೆ ಹೋದರು. ಅಲ್ಲಿಂದ ಗೇರುಸೊಪ್ಪೆ ಆರೇ ಹರದಾರಿ. ಮೋಟಾರಿನಿಂದ ಅದೊಂದು ದೂರವೇ ಅಲ್ಲ. ಆದರೂ ಗಾಂಧೀಜೀ ಸಾಗರದಿಂದ ತೀರ್ಥಹಳ್ಳಿಗೆ ನೇರಾಗಿ ನಡೆದುಬಿಟ್ಟರು. ಗೇರುಸೊಪ್ಪೆಯ ಸೊಬಗಿಗೆ ಅವರು ಮನಸುಗೊಡಲಿಲ್ಲ.

ಮುಂದೆ ಹಾಸನ ಜಿಲ್ಲೆಗೆ ಹೋದರು. ಅಲ್ಲಿ ಬೇಲೂರಿಗೆ ಹೋದರು. ಹೋದುದು ಬೇಲೂರಿನ ಶಿಲ್ಪಕಲಾಸೌಂದರ್ಯವನ್ನು ನೋಡಲಿಕ್ಕಲ್ಲ. ಜಕಣಾಚಾರಿ ಕಲ್ಲಿನೊಳಗೆ ಹರಿಯಿಸಿದ ಆನಂದಾಮೃತವನ್ನು ಸವಿಯಲಲ್ಲ. ಅಲ್ಲಿದ್ದ ಜನ ಅವರಿಗೆ ಚೆನ್ನಕೇಶವನ ದಿವ್ಯದೇವಾಲಯದ ಮೂಲೆ-ಮೂಲೆಯನ್ನೂ ಸಂದಿ-ಗೊಂದಿಯನ್ನೂ ಹಿಗ್ಗಿನಿಂದ ಹೆಮ್ಮೆಯಿಂದ ತೋರಿಸುತ್ತಿದ್ದರು. ಗಾಂಧೀಜೀ ಎಲ್ಲ ವಿಗ್ರಹಗಳ ಮೇಲೂ ಕೆತ್ತನೆಯ ಮೇಲೂ ಕಣ್ಣಾಡಿಸಿದರು. ಅವರ ಮನಸು ಮಾತ್ರ ಅಲ್ಲಿರಲಿಲ್ಲ. ಆ ಸೊಬಗನ್ನು ದಂಗುಬಡಿದು ನೋಡುತ್ತಿದ್ದ ಸುತ್ತಲಿನ ಜನರನ್ನು ನೋಡಿ 'ದೇವರೆ, ಜನರ ಮಂದಬುದ್ಧಿಗೆ ಮದ್ದುಂಟೆ?' ಎಂದು ಒಳಗೊಳಗೆ ಅವರ ಎದೆ ಮಿಡುಕುತ್ತಿದ್ದಿರಬೇಕು. ಕಡೆಗೆ ಆ ಮಿಡುಕು ಹೊರಗೆ ಹರಿಯಿತು: 'ಭಾರತೀಯ ಶಿಲ್ಪಕಲೆಯ ಅದ್ಭುತ ಕೀರ್ತಿಧ್ವಜವಾದ ಈ ಗುಡಿಯ ಸೆಳೆತಕ್ಕೆ ಸಿಕ್ಕದವರು ಯಾರು? ದರಿದ್ರನಾರಾಯಣನ ಭಕ್ತನಾದ ನಾನು, ಇಂಥ ಕಣ್ಣುಹಬ್ಬ ಸವಿಯುತ್ತ ಕಾಲಕಳೆಯಲು ಬಹುದೇ? ನನ್ನ ಬದುಕೆಲ್ಲ—ಗಳಿಗೆಗಳಿಗೆಯೂ—ಬಡವರ ಸೇವೆಗಾಗಿಯೇ ಮೀಸಲಾಗಿದೆ, ಮುಡಿಪಾಗಿದೆ. ಕೇಶವದಾಸರು ೫೦೦ ರೂಪಾಯಿಯ ನಿಧಿ ಕೂಡಿಸಿಕೊಡುವ ಮಾತು ಕೊಟ್ಟಿರದಿದ್ದರೆ ನಾನು ಇಲ್ಲಿಗೆ ಬರುತ್ತಲೇ ಇರಲಿಲ್ಲ.' ಭದ್ರಾವತಿಗೂ ಹೋಗಿದ್ದರು. ಅಲ್ಲಿಯ ಯಂತ್ರವೈಭವವನ್ನು ನೋಡಲಲ್ಲ, ಖಾದಿಯನ್ನು ತೊಡಿರೆಂದು ಅಲ್ಲಿಯ ಕೆಲಸಗಾರರಿಗೆ ಹೇಳಲಿಕ್ಕೆ.

ಇಂಥ ಪ್ರಸಂಗ ಗಾಂಧೀಜಿಯ ಬಾಳಿನಲ್ಲಿ ದಿನಾಲೂ ಕಂಡು ಬರುತ್ತವೆ. ಅವರ ಜೀವನದಲ್ಲಿ ಸರಲತೆ ತಾನೇತಾನಾಗಿ ಹರಡಿಕೊಂಡಿದೆ. ಅಸ್ವಾಮ್ಯ-ಅಪರಿಗ್ರಹದ ತಾಪಸವ್ರತವನ್ನು ತೊಟ್ಟವರಿಗೆ, ಕಲೆಯಕ್ಷೇತ್ರ ಸಹಜವಾಗಿಯೇ ಹಿಗ್ಗುತ್ತದೆ. ಅಂಥ ಬಾಳಿನಲ್ಲಿ ಅಲಂಕಾರ ಪ್ರೀತಿಗೆ ಅವಕಾಶವಿಲ್ಲ; ಅಂದವಾದ ವಸ್ತುಗಳನ್ನು ಶೇಖರಿಸುವ ರುಚಿಯಿಲ್ಲ. ಆ ನಿಷ್ಠೆಗೆ ಲಕ್ಷ್ಯಶುದ್ಧಿಯಿದೆ; ಆ ಕಣ್ಣಿಗೆ ಗುರಿಯ ರೂಪ ಕಟ್ಟಿ ಉಳಿದುದು ಯಾವುದಕ್ಕೂ ಎಡೆಕೊಡದು. ಶ್ರೀರಾಮಚಂದ್ರನೊಮ್ಮೆ ತನ್ನ ಕೊರಲ ಸರವನ್ನು ತೆಗೆದು ಹನುಮಂತನಿಗೆ ಕೊಟ್ಟನಂತೆ ಅಭಿಮಾನದಿಂದ. ದಾನಕೊಟ್ಟ ದನದ ಹಲ್ಲು ಹಿಡಿದು ನೋಡಬಾರದೆಂಬ ವ್ಯವಹಾರಧರ್ಮವಿರಲಿ, ಕೊಟ್ಟವನ ಇದಿರಿಗೇ ನಿರ್ದಾಕ್ಷಿಣ್ಯದಿಂದ ಆ ಸರದ ಮುತ್ತನ್ನು ಒಡೆದುನೋಡಲು ತೊಡಗುವುದೇ! ಒಂದೊಂದಾಗಿ ಅವನ್ನೆಲ್ಲ ಒಡೆದು ಪುಡಿಮಾಡಿದ ಹನುಮಂತ. ಸೀತಾದೇವಿಗೆ ಹನುಮಂತನ ಹುಡುಗಾಟ ಒಗ್ಗಲಿಲ್ಲ. ಭಕ್ತನನ್ನು ಬಿರುಗಣ್ಣಿನಿಂದ ನೋಡಿದಳು. ಹನುಮಂತ ವಿನಯದಿಂದ ಹೇಳಿದ: 'ರಾಮನಾಮ ಇದರಲ್ಲಿಲ್ಲ. ರಾಮನಾಮವಿಲ್ಲದ ವಸ್ತು ರಾಮನ ಕತ್ತಿನದೇ ಆದರೂ ನನಗೆ ಬೇಡ.'

★

ಕಲೆಯ ವಿಷಯದಲ್ಲಿ ಗಾಂಧೀಜಿಯವರು ಹೇಳುವುದು ಹೀಗೆ:—'ಜೀವನವು ಎಲ್ಲ ಕಲೆಗಳಿಗಿಂತ ಶ್ರೇಷ್ಠವಾದುದು. ಯಾವನು ಉತ್ತಮರೀತಿಯಲ್ಲಿ ಬಾಳಬಲ್ಲನೋ ಅವನೇ ಉತ್ತಮ ಕಲಾಭಿಜ್ಞ. ಉತ್ತಮ ಜೀವನದ ಅನುಭೂತಿಯಿಲ್ಲದವರಿಂದ ಉತ್ತಮ ಕಲಾನಿರ್ಮಿತಿ ಹೇಗೆ ಆಗಬೇಕು?' ಕಲೆಯ ವಿಮರ್ಶೆಯ ಜೀವ-ಜೀವಾಳದ ಮಾತೇ ಇದಲ್ಲವೇನು?

★

ಆ ಏಕಾಗ್ರಚಿತ್ತಕ್ಕೆ ಮತ್ತೊಂದು ಹೇಗೆ ರುಚಿಸಬೇಕು! ಬಯಸಬಹುದಾದ ಅಖಂಡಸೌಂದರ್ಯ, ಸಮಸ್ತಸಂತೋಷ ಅಲ್ಲೇ ಹೆಪ್ಪುಗಟ್ಟಿರುವಾಗ ಉಳಿದುದು ಹೇಗೆ ಅದಕ್ಕೆ ಒಗ್ಗೀತು! ತುಲಸೀದಾಸ ರಾಮಭಕ್ತ. ಅವನಿಗೆ ಕೃಷ್ಣವಿಗ್ರಹದಲ್ಲೂ ಕೂಡ ರಾಮನೇ ಕಾಣುತ್ತಿದ್ದನಂತೆ. ಗಾಂಧೀಜಿಯ ತಾಪಸಜೀವನದಲ್ಲಿ ಇಂಥ ವಿಲಕ್ಷಣ ಅನುಭವವೊಂದು ಕಾಣಬರುತ್ತದೆ. ತಮ್ಮ ನಿಷ್ಠೆಗೆ ನಿಯಮಕ್ಕೆ ಹೊಂದಬಹುದಾದುದೇ ಅವರಿಗೆ ಸತ್ಯ. ಆ ಸತ್ಯವೇ ಸೊಗಸು. ಒಮ್ಮೆ ಗಾಂಧೀಜೀ ಹೇಳಿದರು : 'ನನಗೆ ದೇವರನ್ನು ಪ್ರತ್ಯಕ್ಷವಾಗಿ ನೋಡಬೇಕೆಂಬಾಶೆಯಿದೆ. ಸತ್ಯದ ಮೂಲಕ ಅಹಿಂಸೆಯನ್ನು ಸಾಧಿಸುವ ಬದುಕೆಯಿದೆ. ಸತ್ಯವಲ್ಲದ ಮಾರ್ಗದಿಂದ ಅಹಿಂಸೆಯನ್ನು ಸಾಧಿಸುವ ಉಪಾಯ ಇದ್ದರೂ ನನಗೆ ಬೇಡ. ನಾನು ದೇವರನ್ನು ಕಾಣಲಾಶಿಸುತ್ತೇನೆ. ನನ್ನ ದಾರಿಯಲ್ಲಿ ನನಗೆ ದೇವರು ಕಾಣುವುದಾದರೆ ಕಾಣಲಿ. ದೇವರಿಗೆ ಮನಸೊಪ್ಪಿದ

ಬೆಲೆ ಕೊಡಬೇಕೆಂದರೆ ನಾನು ಆ ದೇವರನ್ನೇ ನೋಡುವುದಿಲ್ಲ. ನಾನು ಕಟ್ಟುವ ಬೆಲೆಗೆ ದೇವರು ಸಿಗಲಿ, ಅವನ ಬೆಲೆಗಲ್ಲ. ಹಾಗೆಲ್ಲಾ ಚೌಕಾಸಿಮಾಡಿದರೆ ಆ ಬೆಡಗಿಗೆ ನಾನು ಸೋಲುವುದಿಲ್ಲ. ಸತ್ಯವಲ್ಲದ ಉಪಾಯದಿಂದ ದೇವರು ಕಾಣಬರುವುದಾದರೆ ನನಗೆ ಆ ಉಪಾಯವೂ ಬೇಡ, ಆ ದೇವರೂ ಬೇಡ. ಇದಿರಿಗೆ ಬಂದರೂ ನಾನು ನೋಡಲಿಕ್ಕಿಲ್ಲ. ನನ್ನ ಬೆಲೆ, ನನ್ನ ಹಾದಿ—ಕಂಡುಬಂದರೆ ಬರಲಿ, ಇಲ್ಲದಿದ್ದರೆ ಬಿಡಲಿ. ದೇವರು ಕಟ್ಟಿದ ಬೆಲೆಗೆ ನನಗೆ ಮೋಕ್ಷಬೇಕಾಗಿಲ್ಲ, ನಾನು ಕಟ್ಟಿದ ಬೆಲೆಗೆ ಪಡೆದರೆ ಸರಿ.' ಬರಬಾರದ ವೇಷದಲ್ಲಿ ಬಂದರೆ ದೇವರಿಗೂ ಅಲ್ಲಿ ಒಳಗೆ ಬರಲು ಅಪ್ಪಣೆಯಿಲ್ಲ. ಪರ್ಣಕುಟಿಗೆ ಬರಬೇಕಾದರೆ ದೇವರಾದರೂ ಖಾದೀತೊಟ್ಟು ಬರಬೇಕು. ತಾನು ದೇವರೆಂದು ಹೇಳಬರಬೇಕು. ವೇಷ ಮರೆಯಿಸಿ ಬರುವ ಅಸತ್ಯಕ್ಕೆ ಅಲ್ಲಿ ಮನ್ನಣೆಯಿಲ್ಲ. ಗರುಡಗರ್ವಭಂಗದಲ್ಲಿ ಕೃಷ್ಣನ ಹೆಸರನ್ನು ಹೇಳಿದರೆ ಆಂಜನೇಯ 'ಯಾರೊ ಗೊತ್ತಿಲ್ಲ ಹೋಗು!' ಎಂದನಂತೆ. ರಾಮನ ಹೆಸರು ಹೇಳಿದರೆ ಆಗ ಪದಕ್ಕೆ ಬಂದನಂತೆ. ಏಕಾಂತಭಕ್ತಿಯ ಏಕಾಗ್ರನಿಷ್ಠೆಯ ಪರಿಪಾಕ ಅದು.

ಗಾಂಧೀಜೀ ಒಮ್ಮೆ ಸೀತೆಯ ಚೆಲುವನ್ನು ವಿಮರ್ಶಿಸಿದರು. ಅದು ಹೆಂಗುಸರ ಸಭೆ: 'ನಿಮ್ಮ ಹಾಗೆ ಒಡವೆ ವಸ್ತ್ರ ಮೈತುಂಬ ಹೇರಿಕೊಂಡಿದ್ದಳೇ ಸೀತೆ! ಆಕೆಯ ಒಡವೆಯಲ್ಲ ಆಕೆಗೆ ಒಪ್ಪಿದ್ದುದು; ಆಕೆ ಉಟ್ಟಿದ್ದ ನಾರುಸೀರೆ. ನಿಮಗೂ ಖಾದೀ ಸೀರೆ ಒಪ್ಪಿದಷ್ಟು ಈ ಚೀನಾಂಬರ ಒಪ್ಪಲಾರವು.' ಅವರಿಗೆ ಒರಟು ಖಾದೀ ಕಂಡಷ್ಟು ಅಂದವಾಗಿ ಕಿನಖಾಪು ಬಟ್ಟೆಯೂ ಕಾಣದು. ಖಾದಿಯ ಎಳೆಗಳಲ್ಲಿ ಅವರಿಗೆ ವಿಧವೆಯೊಬ್ಬಳ ಕರುಣ-ಕಥೆ ಕೇಳುತ್ತದೆ. ಅನಾಥೆಯೊಬ್ಬಳ ದೀನ-ಚಿತ್ರ ಕಾಣುತ್ತದೆ, ದಿಕ್ಕಿಲ್ಲದ ಮುದುಕಿಯ ಹರಕೆಯ ಅನುಭವವಾಗುತ್ತದೆ. ಆ ಚಿತ್ತವೃತ್ತಿಗೆ ಅವಿದಿತ ವೇದ್ಯಾಂತರವಾದ ಏಕಸ್ಥಾಯಿ ಇದೆ. ಅದಕ್ಕೆ ಆನಂದ ಹೊರಗಣ ಪದಾರ್ಥಗಳಲ್ಲಿಲ್ಲ, ಒಳಗಣ ಭಾವನೆಯಲ್ಲಿದೆ. ಆನಂದವೆಂದರೆ ಸುಖವಲ್ಲ. ಸುಖ ಇಂದ್ರಿಯ ಭೋಗ್ಯವಾದುದು. ಆನಂದ ಆಧ್ಯಾತ್ಮಿಕವಾದುದು. ನಾಮ-ರೂಪಗಳು ಸುಖದ ಸಾಮಗ್ರಿ. ಬಹುಭೇದಗಳಿಂದ ಭಿನ್ನಭಿನ್ನವಾದ ಈ ಪ್ರಪಂಚದಲ್ಲಿ ಅಭೇದಾನುಭವದ ಆತ್ಮರತಿ ಆನಂದ ಸಾಮಗ್ರಿ. ಅದೇ ಆನಂದ.

ಆದರೆ ತಲೆಗೆಲ್ಲಾ ಒಂದೇ ಮಂತ್ರವೇ? ರಾಯರೂ ರೈತರೂ ಇಬ್ಬರೂ ನೂಲಬೇಕೆ! ಎಲ್ಲರೂ ಸರಲತೆ ಸರಲತೆಯೆಂದರೆ ಸೌಂದರ್ಯ ಅಡವಿಪಾಲಾಗಬೇಕಾದೀತು. ಗಾಂಧೀಜಿಗೆ ಸರಲತೆಯ ಹುಚ್ಚು ಹಿಡಿದಿದೆ. ಅವರು ಗುಡಿಸಿಲು ಕಟ್ಟಿಕೊಂಡರೆ ನಾವೇಕೆ ನಮ್ಮ ಭವ್ಯಪ್ರಾಸಾದಗಳನ್ನು ಜರಿಯಬೇಕು. ಅವರು ಹಾಸಿಕೊಳ್ಳುವ ಈಚಲ ಚಾಪೆಯಿಂದ ಸಿಗುವ ಆನಂದ ಚಪ್ಪರಮಂಚದಲ್ಲಿ ಸಿಗಲಾರದೇನು! ಅವರ ಗುಡಿಸಿಲಿನ ಮಣ್ಣು ಮೆತ್ತಿದ ಗೋಡೆ, ಸಗಣಿಸಾರಿಸಿದ ನೆಲ, ಬೋಳು ಅಂಗಳ ಇವೇಯೇನು ನಮ್ಮ ಆದರ್ಶ! ಗೋಡೆಗೆ ನಾಲ್ಕು ಪಟ ತೂಗುಹಾಕಬಾರದೆ, ನಯವಾದ ರೇಸಿಮೆ ಉಡಬಾರದೆ, ರುಚಿಯಾಗಿ ಊಟ ಮಾಡಬಾರದೆ? ಬೇಲೂರಿನ ಗುಡಿಯತನಕ ಹೋಗಿ ಅಲ್ಲಿಯ ಸೊಬಗನ್ನು ಸವಿಯದೆ ಬರುವುದು ರಸಿಕತೆಯೆ; ಈತರದ ಬಾಳಿನಲ್ಲಿ ಕಲೆಗೇನು ಬೆಲೆಯಿದೆ? ಹೀಗೆ ಎಷ್ಟೋ ಜನ ಕೇಳುತ್ತಾರೆ. ಅವರ ತುಂಡುಪಂಚೆ, ಬಕ್ಕತಲೆ ನೋಡಿ 'ಗಾಂಧೀ ಬರೀಗೊಡ್ಡು, ನೀರಸ' ಎಂದಿದ್ದಾರೆ. 'ಗಾಂಧೀಜಿಗೂ ಕಲೆಗೂ ಏನಯ್ಯಾ ಸಂಬಂಧ, ಗೋಕುಲಾಷ್ಟಮಿಗೂ ಇಮಾಂಸಾಬಿಗೂ ಇದ್ದಹಾಗೆ!'—ಎಂದು ನನ್ನ ಗೆಳೆಯರೊಬ್ಬರು ಹೇಳಿದರು. ಅವರು ಕಲಾವಿದರು, ಸಾಹಿತಿ. ಅವರೇ ಏಕೆ, ನೂರಕ್ಕೆ ತೊಂಬತ್ತೊಂಬತ್ತು ಜನ ಹಾಗೆಯೆ ತಿಳಿದಿದ್ದಾರೆ.

ಮಹಾತ್ಮಾ ಗಾಂಧಿ

ಗಾಂಧೀಜಿಗೆ ಈ ವಾದದಲ್ಲಿ ಹುರುಳು ಕಾಣುವುದಿಲ್ಲ. ಗುರಿಯನ್ನು ಬಿಟ್ಟು ಸುತ್ತಾಡುವುದು ವೃಥಾ ಕಾಲಹರಣ. ಅವರು ದರಿದ್ರನಾರಾಯಣನ ಭಕ್ತರು. 'ಏನೇ ಮಾಡಲಿ, ಏನೇ ಆಡಲಿ, ನಾನು ನಮ್ಮ ಮೂವತ್ತುಮೂರು ಕೋಟಿ ಜನರನ್ನು ಮರೆಯಲಾರೆ. ಹಗಲಿರುಳು ಅವರ ಚಿಂತೆಯೇ ಚಿಂತೆ ನನಗೆ. ಚೆಲುವನ್ನು ನೋಡಿ ಆ ಚೆಲುವಿನ ನಡುವೆ ಸತ್ಯವನ್ನು ಕಾಣುವ ಹಾಗೆ ನಮ್ಮ ಜನಕೋಟಿಗೆ ನಾವು ಕಲಿಸಬಲ್ಲೆವೆ? ಆ ರೀತಿ ಶಿಕ್ಷಣಕೊಡುವುದು ಸಾಧ್ಯವೆ! ಅವರಿಗೆ ಮೊದಲು ಸತ್ಯ ತೋರಿಸುವ. ಅವರೇ ಅದರಲ್ಲಿ ಚೆಲುವನ್ನು ಆ ಮೇಲೆ ನೋಡಿಯಾರು. ಕನಸಿನಲ್ಲೂ ಎಚ್ಚರದಲ್ಲೂ ನನಗೆ ಉತ್ಕಲದ ಚಿತ್ರ ಕಣ್ಣಿಗೆ ಕಟ್ಟಿ ಕಾಣುತ್ತದೆ. ಆ ಹತಭಾಗ್ಯ ಜೀವಚ್ಛವಗಳಿಗೆ ಯಾವುದರಿಂದಲಾದರೂ ಲಾಭವಾಗುವುದಾದರೆ ಅದೇ ನನ್ನ ಪಾಲಿಗೆ ಚೆಲುವು. ಮೊದಲು ಹೊಟ್ಟೆಗೆ ಹಿಡಿಹಿಟ್ಟು, ಆಮೇಲೆ ಉಳಿದುದು. ಸದ್ಯ ಬದುಕಲಿಕ್ಕೆ ಅತ್ಯಗತ್ಯವಾದುದನ್ನು ಮೊದಲು ಕೊಡೋಣ. ಅನಂತರ ಅಂದ-ಚೆಂದಗಳೆಲ್ಲ ತಾವೇ ಬಂದಾವು!' ಅವರ ಜೀವನರಾಗದ ಶ್ರುತಿ ತಿಳಿಯದೆ ಅವರ ರಸಜೀವನ ತಿಳಿಯುವುದಿಲ್ಲ.

'ನಿಮ್ಮ ಬಾಳಿನ ರೀತಿಯಲ್ಲಿ ಕಲೆ ಕಾಣುವುದಿಲ್ಲ. ಕಲೆಗೆ ಬಹಿಷ್ಕಾರ ಹಾಕಿದೀರೇನು ನೀವು?' ಎಂದು ಒಬ್ಬರು ಆಪ್ತವರ್ಗದವರು, ಗಾಂಧೀಜಿಯನ್ನು ಕೇಳಿಯೇ ಬಿಟ್ಟರು ಒಂದುಸಲ.

ಗಾಂಧೀಜೀ ಹೇಳಿದರು: 'ಈ ವಿಷಯದಲ್ಲಿ ಜನ ನನ್ನ ಬಗ್ಗೆ ಬಹಳ ತಪ್ಪುತಿಳಿದುಕೊಂಡಿದ್ದಾರೆ. ಎಲ್ಲ ವಸ್ತುಗಳಿಗೂ ಎರಡು ಅಂಗಗಳಿವೆ— ಅಂತರಂಗ, ಬಹಿರಂಗ. ಇವೆರಡರಲ್ಲಿ ನಾವು ಯಾವುದರ ಮೇಲೆ ಕಾಲೂರಿ ನಿಲ್ಲುತ್ತೇವೆಂಬುದೇ ಮುಖ್ಯ. ನಮಗೆ ಯಾವುದರಲ್ಲಿ ಅಭಿರುಚಿಯೆಂಬುದು ಪ್ರಶ್ನೆ. ಅಂತರಂಗ ವಿಕಾಸಕ್ಕೆ ನೆರವಾಗದಿದ್ದರೆ ಬಹಿರಂಗವು ವ್ಯರ್ಥ. ಅದಕ್ಕೆ ಬೆಲೆಯಿಲ್ಲ. ಸತ್ಯವಾದ ಕಲೆ ಅಂತರಂಗದಿಂದ ಒಡಮೂಡಿ ಬಂದುದು; ಆ ವಿಕಾಸದ ಆವಿರ್ಭಾವ. ಒಳಗಿರುವ ಬೆಳಕನ್ನು ಎಷ್ಟೆಷ್ಟು ದೂರ ಹೊರಗೆ ಹರಿಯಿಸಬಲ್ಲವೋ ಅಷ್ಟಷ್ಟು ಬೆಲೆ ಹೊರಗಿನ ರೂಪಕ್ಕೆ. ಮಾನವನ ಅಂತರಂಗದ ಪ್ರತಿಬಿಂಬವಾದಷ್ಟು ಪ್ರಮಾಣದಲ್ಲೇ ಬಹಿರಂಗಕ್ಕೆ ಬೆಲೆ. ಆ ತರದ ಕಲೆ ನನಗೆ ತುಂಬಾ ಇಷ್ಟ. ಆದರೆ ಈಗೇನು, ಎಲ್ಲರೂ ಕಲಾವಿದರೇ! ಅವರ ಕಲೆಯಲ್ಲಿ ಮಾತ್ರ ಆತ್ಮೋನ್ನತಿಯ ಪ್ರಯತ್ನವೂ ಇಲ್ಲ, ಆತ್ಮವಿಕಾಸದ ಗುರುತೂ ಇಲ್ಲ.'

ಸ್ವಭಾವವಾದ, ವಾಸ್ತವವಾದ ಇವು ಇಂದು ಕಲೆಯ ರಾಜ್ಯದಲ್ಲಿ ಕಾಲುಹಾಕಿವೆ. 'ಕಲೆ ಕಲೆಗಾಗಿ' ಎಂಬ ವಾದವೊಂದು ಎದ್ದಿದೆ. ಸತ್ಯವನ್ನು ಕಾಣಬೇಕೆಂಬುದಕ್ಕಿಂತ ಕಂಡದ್ದೇ ಸತ್ಯವೆಂಬ ಪಂಥ ಮೊದಲಾಗಿದೆ. ಕೆಲವು ಕಡೆ ಅಶ್ಲೀಲತೆ ಕಲೆಯ ಹೆಸರಿನಲ್ಲಿ ತಾನೇತಾನಾಗಿ ಮೆರೆಯುತ್ತಿದೆ. 'ಅಂತರಂಗ ಹೇಗಾದರೂ ಇರಲಿ, ಬಹಿರಂಗ ಅಂದವಾಗಿದ್ದರೆ ಸಾಕು' ಎಂಬ ಅರ್ಥವಿಲ್ಲದ ತೃಪ್ತಿಯುಂಟಾಗಿದೆ. ಇಂಥ ಕಲೆ ಗಾಂಧೀಜಿಗೆ ಹಿಡಿಸುವುದಿಲ್ಲ.

'ಜೀವಿಗೆ ತನ್ನ ಅಂತರಾತ್ಮದರ್ಶನ ಮಾಡಿಸಿಕೊಡಲು ನೆರವಾಗದ ಕಲೆ ಕಲೆಯಲ್ಲ. ನನ್ನ ಮಟ್ಟಿಗೆ ಕಲಾಸಾಮಗ್ರಿಯೆನಿಸಿಕೊಂಡಿರುವ ಹೊರಗಣ ರೂಪ-ವಸ್ತುಗಳ ಸಹಾಯ ನನ್ನ ಆತ್ಮ-ಸಾಧನೆಗೆ ಅಗತ್ಯವಿಲ್ಲ. ನನ್ನ ಬಳಿ ಕಲಾಕೃತಿಗಳಾಗಲಿ ಕಲಾವಸ್ತುಗಳಾಗಲಿ ಕಾಣದಿದ್ದರೂ, ನನ್ನ ಜೀವನವು ಕಲಾಪರಿಪೂರ್ಣವೆಂದು ನಾನು ಹೇಳುತ್ತೇನೆ. ನನ್ನ ಗುಡಿಸಿಲ ಗೋಡೆಗಳು ಶೂನ್ಯವಾಗಿರಬಹುದು. ನೆತ್ತಿಯ ಮೇಲೆ ನೀಳಾಗಿ ಕವಿದಿರುವ ಅನಂತ ಸೌಂದರ್ಯದಿಂದ ತುಂಬಿದ ತಾರಾಮಂಡಲವನ್ನು ನೋಡಬೇಕೆಂದು ಗುಡಿಸಿಲಿನ ಚಪ್ಪರವನ್ನೂ ನಾನು ತೆಗೆದೇನು. ಮೇಲೆ ನೋಡಿದರೆ ಕಾಣುವ ನಕ್ಷತ್ರ-ಗ್ರಹಗಳ ಅಲೌಕಿಕ ಲೀಲೆಯ ಆನಂದವನ್ನೂ ಆ ರಮಣೀಯದೃಶ್ಯಗಳನ್ನೂ ಯಾವ ಮಾನವ ಕಲಾಕೃತಿ ಕೊಡಬಲ್ಲದು? ಹೀಗೆಂದರೆ ನಾನು ಸಾಮಾನ್ಯ ಕಲಾ-ವಸ್ತುಗಳನ್ನೆಲ್ಲ ಬಹಿಷ್ಕರಿಸಿದ್ದೇನೆಂದು ತಿಳಿಯಬಾರದು. ನಿಸರ್ಗ ಸೌಂದರ್ಯದ ಚಿರಂತನ ಪ್ರತೀಕಗಳೆದುರು ಇವು ಎಷ್ಟು ನಿಸ್ಸಾರವೆಂಬುದನ್ನು ತೋರಿಸಿದೆ, ಅಷ್ಟೇ. ಮಾನವನ ಕಲಾಕೃತಿಗೆ ಬೆಲೆ ಸಿಕ್ಕಬೇಕಾದರೆ, ಅವು ಆತ್ಮವಿಕಾಸಕ್ಕೆ ಸಹಾಯವಾಗಬೇಕು.'

ಕಲೆ ಇಂದ್ರಿಯಾನುಭೂತಿಯಲ್ಲ, ಭಾವಾನುಭೂತಿ. ರೂಪವಲ್ಲ ಕಲೆಯ ರಾಜ್ಯ, ಗುಣ. ಸ್ಥೂಲಶರೀರವಲ್ಲ ಅದರ ಲಕ್ಷ್ಯ, ಸೂಕ್ಷ್ಮಶರೀರ. ಅದರಲ್ಲಿ ವ್ಯಕ್ತಿವಿಕಾರಕ್ಕೆ ಎಡೆಯಿರಬಾರದು. ಸಮಷ್ಟಿವಿಕಾಸಕ್ಕೆ ಹಾದಿಯಿರಬೇಕು. 'ಸರ್ವೋತ್ಕೃಷ್ಟವಾದ ಕಲೆ ಸರ್ವಭೋಗ್ಯವಾದೀತು; ವ್ಯಕ್ತಿಭೋಗ್ಯವಾಗದು. 'ಬೇರೆ ಬೇರೆ ರುಚಿಗಳಿರುವಾಗ ಇದು ಸಾಧ್ಯವೆ?' ಬಾಹ್ಯಾವಲಂಬನೆ ಕಡಮೆಯಾದರೆ ಕಲೆ ಸರ್ವಭೋಗ್ಯವಾಗುವುದು. ಎಂತಲೇ ನಾನು ಪದೇಪದೇ ಅನ್ನುತ್ತೇನೆ. ಲೆಕ್ಕವಿಲ್ಲದ ಚಿಕ್ಕೆಗಳೂ ಚಂದ್ರನೂ ಬೆಳಗುವ ಮುಗಿಲನ್ನು ನೋಡಿ ಯಾರು ಜಗತ್ಕರ್ತನ ಲೀಲೆಯಲ್ಲಿ ತಲ್ಲೀನರಾಗಬಲ್ಲರೋ ಅವರಿಗೆ ಚಿತ್ರಕಾರನು ಬರೆದ ಮುಗಿಲು ನಸುಕು-ಸಂಜೆಗಳನ್ನು ನೋಡುವ ಅಗತ್ಯವೇನು? ಗಳಿಗೆ-ಗಳಿಗೆಗೂ ಹೊಚ್ಚಹೊಸ ಬಣ್ಣ ತೋರುತ್ತ ಹೊಸಹೊಸ ಸೊಬಗನ್ನು ಬೀರುವ ಆಕಾಶದಿಂದಲೇ ಅವರು ತಮಗೆ ಬೇಕಾದುದನ್ನು ಹೀರಿಕೊಳ್ಳಬಲ್ಲರು.'

'ವಿಚಾರಮಾಡಿ ನೋಡಿ. ಎಲ್ಲಿ ಸೃಷ್ಟಿದೇವಿ ನಮ್ಮ ಕಣ್ಣಿಗೆ ಹಬ್ಬವಾಗಿ ರಮಣೀಯವಾದ ಸೂರ್ಯೋದಯವನ್ನು ರಚಿಸಿಲ್ಲವೋ ಅಲ್ಲಿ ಮನುಷ್ಯ ಬರೆದ ಚಿತ್ರ ಕೊಂಚ ತೃಪ್ತಿಕೊಟ್ಟೀತು. ವರುಷದಲ್ಲಿ ಹನ್ನೆರಡೂ ತಿಂಗಳು, ನಿಸರ್ಗದ ಸೂರ್ಯೋದಯ ಸೂರ್ಯಾಸ್ತಗಳ ಲೀಲೆ ನೋಡಲು ಸಿಕ್ಕುವಲ್ಲಿ, ಚಿತ್ರದ ಸೂರ್ಯೋದಯ-ಸೂರ್ಯಾಸ್ತಗಳನ್ನು ನೋಡಲು ಮನುಷ್ಯ ಕಾತರನಾದಾನೆ? ವರುಷದಲ್ಲಿ ಆಗೊಮ್ಮೆ ಈಗೊಮ್ಮೆ ಅದರ ನೋಟ ಲಭಿಸುವ ಸ್ಥಳದಲ್ಲಿ ತನಗಾಗಿ, ತನ್ನಂಥವರಿಗಾಗಿ ಚಿತ್ರಕಾರ ಚಿತ್ರ ಬರೆಯುತ್ತಾನೆ; ಮೂರ್ತಿಯೊಂದನ್ನು ನಿರ್ಮಿಸುತ್ತಾನೆ. ಮೂರ್ತಿಯ ಒಳಗಿನ ಭಗವಂತನ ಚಿಂತನೆ-ದರ್ಶನಗಳಿಲ್ಲದೆಯೆ ಮೂರ್ತಿಯನ್ನು ಮೂಡಿಸಬಲ್ಲವರ ಮಾತೇ ಬೇಡ. ತನ್ನಹೃದಯದಲ್ಲೇ ಸದಾ ಭವ್ಯಾಕಾಶದ ಲೀಲೆಯನ್ನು ನೋಡಬಲ್ಲವನಿಗೆ ಹೊರಗಣ ಮುಗಿಲಿನ ಚಂದ್ರ-ನಕ್ಷತ್ರಗಣವನ್ನು ನೋಡುತ್ತಿರಬೇಕಾದ ಅಗತ್ಯವೂ ಕೂಡ ಕಡಮೆಯಾಗುತ್ತದೆ.'

ನಿಜವಾಗಿ ನೋಡಿದರೆ ಒಳಗೆ ಇಲ್ಲದುದು ಹೊರಗೆ ಉಂಟೆ? ದೃಷ್ಟಿಯಲ್ಲಿಲ್ಲದುದು ಸೃಷ್ಟಿಯಲ್ಲಿದೆಯೆ? ಕಬೀರದಾಸ ಹಾಡಿದಾನೆ ಆ ಅನುಭವಾಮೃತ:

ಯಾ ಘಟ ಭೀತರ್ ಸಾತ್ ಸಮುಂದರ್ ಯಾಹೀಮೇ ನದ್ದೀ ನಾರಾ
ಯಾ ಘಟ ಭೀತರ್ ಕಾಸೀ ದ್ವಾರಕಾ ಯಾಹೀಮೇ ಠಾಕೂರ ದ್ವಾರಾ
ಯಾ ಘಟ ಭೀತರ್ ಚಂದ್ರಸೂರ್ ಹೈ ಯಾಹೀಮೇ ನವಲಖ್ ತಾರಾ
ಕಹೇ ಕಬೀರ್ ಸುನೋಭಾಯಿ ಸಾಧೋ ಯಾಹೀಮೇ ಸತ್ ಕಿರತಾರಾ||

'ಈ ಮೈಯೊಳಗೇ ಸಪ್ತಸಮುದ್ರಗಳಿವೆ. ಹೊಳೆ ಕಾಲುವೆ ಇವೆ. ಕಾಶಿ-ದ್ವಾರಕೆ-ಠಾಕುರದ್ವಾರ ಎಲ್ಲ ತೀರ್ಥಗಳೂ ಇವೆ. ಇದರಲ್ಲೇ ಚಂದ್ರ-ಸೂರ್ಯರೂ ನವಲಕ್ಷ ನಕ್ಷತ್ರಗಳೂ ಎಲ್ಲ ಸೃಷ್ಟಿಯೂ ಇವೆ' ಇದನ್ನು ಹಾಡಿದಾಗ ಕಬೀರನ ಹೃದಯದಲ್ಲಿ ಶಬ್ದ-ಸ್ಪರ್ಶ-ರೂಪ-ಗಂಧಗಳ ಸರ್ವಸೃಷ್ಟಿಯೂ ಮೂಡಿತ್ತು. ಅವನಿಗೆ ಬಾಹ್ಯಾಕಾಶದ ಅಗತ್ಯವೇ ಇರಲಿಲ್ಲ. ಇಂಥ ಅವಸ್ಥೆಯಲ್ಲೇ ಆತ ಹೀಗೆ ಹಾಡಿದ್ದು.

ಇದೆಲ್ಲ ಯೋಗಾನಂದದ ಕಲೆ. ವಿಷಯಾನಂದದಲ್ಲಿ ಮುಳುಗಿ ಬಾಳನ್ನು ಹೋಳಿಯ ಹಬ್ಬದ ಭೀಭತ್ಸದಲ್ಲಿ ಹರಿಯಿಸುವ ಕಲೆ ಕಲೆಯಲ್ಲ, ಅದು ಸಂಕೋಲೆ. ಕಲೆ ನಮ್ಮನ್ನು ಮೇಲ್ಮಟ್ಟಕ್ಕೇಳಿಯಬೇಕು, ಕೆಳಗೆ ಸೆಳೆಯಬಾರದು. ನರ್ತಕಿಯ ರೂಪಲಾವಣ್ಯದಲ್ಲಿ

ಹುಡುಕಬೇಕಾದುದಿಲ್ಲ ಕಲೆಯನ್ನು. ಅವಳ ಕಾಲಿನ ಲಯದಲ್ಲಿ ಆ ಗತಿಯಲ್ಲಿ ಕಾಣಬೇಕು. ನೈಜವನ್ನು ಬಿಟ್ಟು ಬಾಹ್ಯದ ಸೆಳೆತಕ್ಕೆ ಸಿಕ್ಕರೆ ಕಲೆ ರಾಗ-ದ್ವೇಷಮಯವಾಗುತ್ತದೆ. ಕೃತ್ರಿಮವಾಗಿ ಕಂಟಕವಾಗುತ್ತದೆ. ವಿನೋದ-ವಿಲಾಸಗಳ ಸಾಮಗ್ರಿಯಾಗಿದ್ದ ಕಲೆಯನ್ನು ಗಾಂಧೀಜಿ ವಿಕಾಸದ ಉಪಾಯವನ್ನಾಗಿ ಮಾಡಿದಾರೆ. ಸಿಂಗಾರ ಒಯ್ಯಾರಗಳ ಕಸದ ಗುಂಡಿಯಲ್ಲಿ ಬಿದ್ದಿದ್ದ ಕಲೆಯನ್ನು ಗಾಂಧೀಜೀ ಜೀವನಸಿಂಹಾಸನದ ಮೇಲೆ ಕೂಡಿಸಿದ್ದಾರೆ. 'ಕಲೆ ಮಾಯಾಭ್ರಾಂತಿಯ ಜಾಲವಾಗದಿರಲಿ, ಸತ್ಯಸಾಕ್ಷಾತ್ಕಾರದ ಸೋಪಾನವಾಗಲಿ' ಎಂಬುದೇ ಅವರ ಕಲಾಭಿಮಾನದ ಗುಟ್ಟು. 'ಮೊದಲು ಸತ್ಯ ಆ ಮೇಲೆ ಸೌಂದರ್ಯ' ಎಂಬುದು ಅವರ ಹಾದಿ.

ಅಂದ-ಚೆಂದಗಳು ಸತ್ಯವಲ್ಲವೆ? ಅದೂ ದೈವಸೃಷ್ಟಿಯೇ ತಾನೆ? ಸವಿಯಾದ ಸಂಗೀತ ಕೇಳಿದಾಗ ನಮ್ಮ ಮನಸ್ಸು ಮೊಗ್ಗಾಗಿ ಮುದುಡಿಕೊಳ್ಳುತ್ತದೆ; ಆ ಚೆಲುವಿನಲ್ಲಿ ಸತ್ಯವಿಲ್ಲವೆ? ಇರದಿದ್ದರೆ ತಾನೆ ಏನು ನಷ್ಟ? ಕಲಾವಿದರೆಲ್ಲ 'ರಸಾನಂದವೇ ಕಲೆಯ ಗುರಿ' ಯೆಂದಿದ್ದಾರೆ. 'ರಮಣೀಯಾರ್ಥಪ್ರತಿಪಾದನೆಯೇ ಕಲೆಯೆಂದಿದಾರೆ. ಚೆಲುವಿನಲ್ಲಿ ಸತ್ಯ ಕಾಣದೆ? ಚೆಲುವೇ ಸತ್ಯವಲ್ಲವೆ?

'ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ' ಎಂದು ಇಂಗ್ಲೀಷು ಕವಿಯೊಬ್ಬ ಹಾಡಿದ. ಹಾಗೆ ಹಾಡಿದಾಗ ಕವಿಯ ಮನಸ್ಸಿನಲ್ಲಿ ಕಣ್ಣಿಗೆ ಕಂಡ ಸೊಗಸಾದ ವಸ್ತುವೆಲ್ಲ ಸತ್ಯವೆಂದಿರಲಾರದು. ಬೆಳ್ಳಗಿರುವುದೆಲ್ಲ ಹಾಲಲ್ಲ. ಕವಿಯ ಕಣ್ಣು ನಾಮ-ರೂಪದ ಬಲೆಯಲ್ಲಿ ಸೆರೆ ಸಿಕ್ಕುವುದಿಲ್ಲ. ಕಣ್ಣಿಗೆ ಕಾಣುವ ಸೊಗಸು ಚೆಲುವು ಎಲ್ಲಾ ಸತ್ಯದ ಮೇಲೆ ಮುಚ್ಚಿದ ಬಂಗಾರದ ಮುಚ್ಚಳ. ಆ ಮಿರುಗುವ ಮುಚ್ಚಳ ತೆಗೆದು ಪಾತ್ರೆಯೊಳಗಿನ ನಿತ್ಯಸತ್ಯದಲ್ಲಿ ಕೈಯಿಡುತ್ತಾನೆ ಕವಿ. ವಿಕಲಾಂಗನಾಗಿ ಕುರೂಪಿಯಾದ ಭಿಕಾರಿಯನ್ನು ಬೀದಿಯಲ್ಲಿ ಕಂಡಾಗ ದೂರ ಸರಿಯುತ್ತೇವೆ. ಮನಸ್ಸು ಆ ರೂಪಿಗೆ ಹೇಸಿಕೊಳ್ಳುತ್ತದೆ. ಆದೇ ಚಿತ್ರಕಾರನೊಬ್ಬ ಅವನ ಚಿತ್ರ ಬರೆದು ಆದರಲ್ಲಿ ಅವನ ಬಾಳಿನ ದೈನ್ಯವನ್ನು ಕೋಡಿಹರಿಯಿಸಿದರೆ ಆ ಚಿತ್ರ ಸುಂದರವಾದುದಾಗುತ್ತದೆ; ಅದನ್ನು ನಡುಮನೆಯಲ್ಲಿ ತೂಗುಹಾಕುತ್ತೇವೆ. ರಂಭೆ- ಉರ್ವಶಿಯರಿಗಿಂತ ಚೆಲುವೆಯರುಂಟೆ? ಅವರ ಚೆಲುವಿಗೆ ನಮ್ಮ ಜನ ಮರುಳಾಗಲಿಲ್ಲ. ಇವರು ಗದ್ದುಗೆಗೇರಿಸಿದ ಹೆಣ್ಣು, ಕರಾಳ ಸ್ವರೂಪಿಣಿಯಾದ ಕಾಳಿ. ರವಿ ಕಾಣದುದ ಕವಿ ಕಾಣುವನಂತೆ. ರವಿಗೆ ಕಾಣುವುದೆಲ್ಲ ಹೊರಗಿನ ರೂಪ. ಅವನು ಕಾಣಲಾರದುದು ಆ ವಸ್ತುವಿನ ಭಾವ, ಅದರೊಳಗಿನ ಮಿಡಿತ. ಅದನ್ನು ಕಾಣುವವ ಕವಿ. ಆ ನೈಜದ ಆನಂದವನ್ನು ಬೀರುವುದು ಕಲೆಯ ಕೆಲಸ.

ಯಾರಿಗೆ ಏನಾದರೂ ಆಗಲಿ, ಗಾಂಧೀಜಿಗೆ ಮಾತ್ರ ಸತ್ಯವೇ ಸೌಂದರ್ಯ. ಈ ಪ್ರಪಂಚವೊಂದು ದೊಡ್ಡ ಅರಮನೆ. ಅದರ ರಾಣಿಯನ್ನು ಎಲ್ಲರೂ ಅರಸುತ್ತಿದ್ದಾರೆ. ಅರಮನೆಗೆ ಲೆಕ್ಕವಿಲ್ಲದಷ್ಟು ಬಾಗಿಲವೆ. ಆ ಬಾಗಿಲೆಲ್ಲ ರಾಣಿಯ ಬಳಿಗೇ ಒಯ್ಯುವುದಿಲ್ಲ. ರಾಣಿ ಸತ್ಯದ ಬಾಗಿಲಲ್ಲಿ ಕೂತಿದಾಳೆ. ಅಲ್ಲೇ ಆಕೆಯ ದರ್ಶನ. ಸತ್ಯದ ಬೆಳಕನ್ನು ಕನ್ನಡಿಸುವ ಎಲ್ಲ ವಸ್ತುವೂ ಚೆಲುವೇ. ನಿಜವಾದ

ಮೇಲ್ತರಗತಿಯ

ಹಳುಕು (Concentreted) ಬಣ್ಣಗಳು

- ಬರೆಯುವ ಮಸಿಗಳು
- ಟಾಯಿಪ್‌ರಾಯಿಟಿಂಗ್ ರಿಬನ್ನುಗಳು
- ಸಾಬೂನುಗಳು
- ಮಿಠಾಯಿಗಳು

ಇವುಗಳನ್ನೆಲ್ಲ ತಯಾರಿಸುವುದಕ್ಕೆ ಬಳಸುವ ಬಣ್ಣಗಳು. ವಿಶೇಷವಿವರಗಳಿಗಾಗಿ ಇಂಗ್ಲಿಷ್ ಭಾಷೆಯಲ್ಲಿ ಬರೆದು ಕೇಳಿಕೊಳ್ಳಿರಿ.

ಕ್ರಿಪಾಗ್ ಲಿಮಿಟೆಡ್

ಪೋ. ಬಾ. ನಂ. ೨೧೦, ಮುಂಬಯಿ.

ಚಿತ್ರ, ನಿಜವಾದ ರೂಪ, ನಿಜವಾದ ಗೀತ—ಎಲ್ಲವೂ ತುಂಬಾ ಚೆನ್ನು. ಸಾಧಾರಣ ಮನುಷ್ಯನಿಗೆ ಸತ್ಯದಲ್ಲಿ ಚೆಲುವು ಕಾಣಿಸದು. ಅವನಿಗೆ ಸತ್ಯ ಭೀಕರವಾಗಿ ಕಾಣುತ್ತದೆ. ಅದರ ಚೆಲುವನ್ನು ಅರಿಯಲಾರದೆ ಬರಿಯ ಭೀಷಣತೆಯನ್ನು ಕಂಡು ಓಡಿಹೋಗುತ್ತಾನೆ. ಅವನ ಪಾಲಿಗೆ ಆ ಸೌಂದರ್ಯ ಇಲ್ಲದೆ ಹೋಗುತ್ತದೆ. ಸತ್ಯದಲ್ಲಿ ಸೌಂದರ್ಯವನ್ನು ಕಾಣಲು ಎಂದು ಮನುಷ್ಯ ಸಮರ್ಥನಾಗುತ್ತಾನೆಯೋ ಅಂದು ಅವನು ಕಲೆಯನ್ನು ಕಾಣಲರಿತ, ಕಲಾದರ್ಶನ ಮಾಡಲರಿತ, ರಸಿಕನಾದ.'

ಬದುಕು ಇಷ್ಟು ನಿಕರವಾಗಿಲ್ಲ. ಬೇರೆ ಬೇರೆ ಬಾಗಿಲಲ್ಲಿ ನುಗ್ಗಿದ ಜನರೂ ರಾಣಿಯನ್ನು ಕಂಡಂತೆ ಹೇಳುತ್ತಾರೆ. ಹೊಲಸು ಬಾಳು ಬದುಕಿದವರು ಕೆಲವರೂ ಉತ್ತಮೋತ್ತಮ ಕಲಾಕೃತಿಗಳನ್ನು ಜಗತ್ತಿಗೆ ನೀಡಿದಾರೆ. ಹಿಂದಿನ ಮಹಾಕವಿಗಳು ಎಲ್ಲರೂ ಪವಿತ್ರರಾಗಿರಲಿಲ್ಲ, ಸತ್ಯವನ್ನು ಬಿಟ್ಟು ರೂಪಕ್ಕೇ ಮರುಳಾಗಿದ್ದವರೂ ಇದ್ದರು. ಹಾಗೆ ನೋಡಿದರೆ ಕಲೆಗೆ ಮುಖ್ಯವಾದ ಭಾವಾನುಭೂತಿಗೆ ಸತ್ಯ, ಸೌಂದರ್ಯ ಎರಡೂ ಎರಡು ದಾರಿಗಳೆನ್ನಬಾರದೆ?

ಗಾಂಧೀಜೀ ಎರಡನೆಯ ಬಾಗಿಲಲ್ಲಿ ಕಾಣುವುದು ಬರೀ ಭ್ರಾಂತಿಯೆಂದಾರು. 'ಬಾಳಿನಲ್ಲಿ ಸತ್ಯ ಅಸತ್ಯಗಳು ಕಲಬೆರಕೆಯಾಗಿವೆ. ಎರಡೂ ಒಟ್ಟಿಗೆ ಇರುತ್ತವೆ. ಕವಿ ಕಲಾಕಾರರಲ್ಲೂ ಈ ಎರಡೂ ಬುದ್ಧಿಗಳಿವೆ. ಅವನ ನೋಟ ಸತ್ಯದಲ್ಲಿ ಸುಳಿದರೆ ಅದು ರಸವಾಗಿ

ರಮಣೀಯವಾಗಿ ಕಾವ್ಯಕಲೆ ಆಗುತ್ತದೆ. ಅಂಥ ರಸನಿಮಿಷಗಳು ಬಾಳಿನಲ್ಲಿ ಅಪರೂಪವಾದರೆ ಕಲೆಯಲ್ಲೂ ಅಷ್ಟೆ. ' ಚೆಲುವು ಬರೀ ನೆಳಲು, ಸತ್ಯವೇ ನಿಜವಾದ ವಸ್ತು. ಪದಾರ್ಥವಿಲ್ಲದೆ ನೆಳಲುಂಟೆ? ' ಸತ್ಯವಿಲ್ಲದೆ ಸೌಂದರ್ಯಕ್ಕೆ ಇರವೆಲ್ಲಿಯದು ? '

ಇವೆರಡಕ್ಕೂ ಇರುವ ಈ ಗಂಟು ಸುಲಭವಾಗಿ ತಿಳಿಯುವುದಿಲ್ಲ. ದೊಡ್ಡ ದೊಡ್ಡ ವಿದ್ವಾಂಸರಿಗೆ ಇದು ಬಿಡಿಸಲು ಬಾರದ ಒಗಟಾಗಿದೆ. ತಂಪಾದ ಶರತ್ಕಾಲದ ಬೆಳುದಿಂಗಳು ಸೊಬಗಿನ ಮಳೆಯಲ್ಲವೆ, ಹೊತ್ತುಮುಳುಗುವಾಗ ಅನುಭವವಾಗುವ ಸಂಧ್ಯಾರಾಗದ ಚೆಲುವು ಸತ್ಯವಲ್ಲವೆ? ಕಾಮನಬಿಲ್ಲು ಎಷ್ಟು ಚೆನ್ನಾಗಿರುತ್ತದೆ? ಫಲ—ಪುಷ್ಪಗಳಿಂದ ತುಂಬಿದ ಮರ ಮನಸ್ಸು ಸೆಳೆವುದಿಲ್ಲವೇ? ಇವುಗಳಲ್ಲಿ ಪವಿತ್ರ ಅಪವಿತ್ರ ಭಾವನೆಗಳಿಗೆ ಎಡೆಯೇ ಇಲ್ಲ. ಇವುಗಳ ಮಾತು ಹೇಗೆ ?

' ಈ ನೋಟಗಳೆಲ್ಲ ಸೃಷ್ಟಿಕರ್ತನ ಅಗಾಧಲೀಲೆಯ ಗುರುತು. ಆ ಲೀಲೆಯ ನೆನಪಾದರೆ ಇವು ಚೆಲುವು. ಸೃಷ್ಟಿಯ ಮಹಾಸತ್ಯದ ಹಣತೆಗಳೆಂತಲೇ ಇವು ಚೆಲುವಾಗಿವೆ; ಇಲ್ಲದಿದ್ದರೆ ಆ ಚೆಲುವೆಲ್ಲಿಂದ ಬರಬೇಕು ! ಬೆಳುದಿಂಗಳ ಸೊಬಗನ್ನಾಗಲಿ ಮುಳುಗುವ ಸೂರ್ಯನ ಅಂದವನ್ನಾಗಲಿ ಆನಂದಿಸುವಾಗ, ಸೃಷ್ಟಿಕರ್ತನ ಧ್ಯಾನದಲ್ಲಿ ಮುಳುಗಿ ನನ್ನ ಮನಸ್ಸು ತುಂಬಿಹೋಗುತ್ತದೆ. ಸರ್ವಸೃಷ್ಟಿಯಲ್ಲೂ ಆತನ ಕೈವಾಡವನ್ನೂ ಆತನನ್ನೂ ಗುರುತಿಸಿಕೊಳ್ಳುತ್ತೇನೆ. ಆವನ ನೆನಪೇ ಕೂಡದೆ ಹೋದರೆ ಸೂರ್ಯೋದಯ, ಸೂರ್ಯಾಸ್ತಗಳಿಂದ ಆಗಬೇಕಾದುದೇನು? ಅವೂ ಒಂದು ಆತಂಕವೇ. ಆತ್ಮೋನ್ನತಿಗೆ ಅಡ್ಡವಾದುದೆಲ್ಲ ಬರೀ ಬಯಲು, ಭ್ರಾಂತಿ; ಒಂದು ಜಾಲ. ನಮ್ಮ ಮೈಯಿದ್ದ ಹಾಗೆ; ಅನೇಕ ಸಲ ನಮ್ಮ ಮೈಯೇ ನಮ್ಮ ಮುಕ್ತಿಗೆ ಅಡ್ಡಿ ' ಕಲೆಯ ದೇವಿ ಮೂರು ಮೊಗದಾಕೆ. ಸತ್ಯ,ಶಿವ,ಸುಂದರ ಮೂರು ಮುಖಗಳು. ನಡುವಿನ ಮುಖ ಸತ್ಯ. ಕಲಾಸರಸ್ವತಿ ವೆಂಕಟಪ್ಪನವರನ್ನು ಕರ್ನಾಟಕದಲ್ಲಿ ಅರಿಯದವರು ಯಾರು? ಅವರ ಅರ್ಧನಾರೀಶ್ವರ, ಸಿದ್ಧಾರ್ಥನ ತ್ಯಾಗದ ಚಿತ್ರಗಳು ಪ್ರಬುದ್ಧ ಕರ್ನಾಟಕದ ಪ್ರಯತ್ನದಿಂದ ಕನ್ನಡ ಜನರಿಗೆ ಪರಿಚಯದುವಾಗಿವೆ. ಕನಸಿನಲ್ಲಿ ಎಚ್ಚತ್ತಂತೆ ಅವರ ಬಗ್ಗೆ ಎಲ್ಲಿಯಾದರೂ ಮಾತುಬರುವುದುಂಟು. ಅಷ್ಟು ಹುದುಗಿಕೊಂಡಿರುವ ಜೀವ ಅವರದು. ಅವರ ರೇಖಾವರ್ಣವಿನ್ಯಾಸ ಅದ್ಭುತವಾದುದು. ನಸುಕು, ಬೆಳಗು, ಮೂರುಸಂಜೆ, ಕೊಳ ಮುಂತಾದ ಅವರ ಚಿತ್ರಗಳನ್ನು ನೋಡಿದವರು ತುಂಬಾ ಹೊಗಳಿದ್ದಾರೆ.

ವೆಂಕಟಪ್ಪನವರ ಕಲೆಯಬಗ್ಗೆ ಇಲ್ಲಿ ಬರೆಯುತ್ತಿಲ್ಲ. ಅದಕ್ಕೆ ಇದು ಠಾವೂ ಅಲ್ಲ. ಗಾಂಧೀಜೀ ಮೈಸೂರಿಗೆ ಹೋದಾಗ ವೆಂಕಟಪ್ಪನವರೂ ಒಂದು ಮಹಾತ್ಮನನ್ನು ನೋಡಿದರು. ತಮ್ಮ ಕಲಾಕೃತಿಗಳನ್ನೆಲ್ಲ ತೋರಿಸಿದರು. ತಮ್ಮ ಶಿಲ್ಪಕೃತಿಗಳನ್ನೂ ತೋರಿಸಿದರು. ಆ ಕಲೆಯಲ್ಲಿ ಅವತರಿಸಿದ್ದ ಶಾಂತಿರಸವನ್ನು ಗಾಂಧೀಜೀ ತುಂಬಾ ಮೆಚ್ಚಿಕೊಂಡರು. ' ತುಂಬಾ ಸಂತೋಷವಾಯಿತು. ಇದೇ ರೀತಿ ಬೆಳೆದುಬರಲಿ ನಿಮ್ಮ ಕಲೆ. ಆದರೆ ಒಂದು ಮಾತು; ರಾಟೆ ನಿಮಗೆ ಹಿಡಿಸಿದರೆ ಅದಕ್ಕೆ ಜನಜೀವನದಲ್ಲಿ ಎಂಥ ಸ್ಥಾನವಿದೆಯೆಂಬುದನ್ನು ಚಿತ್ರಿಸಿದರೆ ತುಂಬಾ ಸಂತೋಷ. ನಿಮಗೆ ರಾಟೆ ಹಿಡಿಸಿದರೆ ಆ ಮಾತು ' ಎಲ್ಲಿ ಹೋದರೂ ತನ್ನ ಶಂಖವನ್ನೇ ಊದುವ ದಾಸಯ್ಯನಂತೆ ಗಾಂಧಿಜೀ.

ಗಾಂಧೀಜಿಗೆ ಬಾಳಿನಲ್ಲಿ ತಪಸ್ಸೇ ಪ್ರಧಾನ. ತಪೋಜೀವನವೇ ನಿಜವಾದ ಕಲೆ. ಹೆಸರಾದ ಕಲಾಕೋವಿದರೆನಿಸಿದ ದಿಲೀಪ-ಕುಮಾರರಾಯರೊಡನೆ ಮಾತಾಡುತ್ತ ಒಮ್ಮೆ ಗಾಂಧೀಜೀ ಇದನ್ನೇ ಹೇಳಿದರು. ' ಬಾಳಿನಲ್ಲಿ ತಪಸ್ಸು ಎಲ್ಲಕ್ಕಿಂತ ಹೆಚ್ಚಿನ ಕಲೆಯೆಂದು ನನ್ನ ಅಭಿಪ್ರಾಯ. ' ಈ ತಪಸ್ಸಿನ ಗೊಂದಲದಲ್ಲಿ ಸಂಗೀತಕ್ಕೆ ಗಾಂಧೀಜೀ ಬಹಿಷ್ಕಾರಹಾಕಿದಾರೆಯೋ ಏನೋ ಎಂದು ದಿಲೀಪಕುಮಾರನಿಗೆ ಗಾಬರಿ. ಆತನಿಗೆ ಸಂಗೀತವೇ ಪ್ರಾಣ. ಆತನ ಅಳುಕನ್ನು ತೀರಿಸಿ ಹೇಳಿದರು ಗಾಂಧಿಜೀ: ' ಅಲ್ಲ, ಸಂಗೀತಕ್ಕೆ ನಾನು ವಿರೋಧಿಯಾಗಬಲ್ಲೆನೆ ! ಸಂಗೀತವಿಲ್ಲದೆ ಭಾರತದ ಧಾರ್ಮಿಕ ಜೀವನ ವಿಕಾಸಗೊಂಡೀತೆಂಬ ಕಲ್ಪನೆ ಕೂಡ ಮಾಡಲಾರೆನಲ್ಲ ನಾನು ! ಸಂಗೀತ ಇದ್ದಂತೆ ಎಲ್ಲ ಕಲೆಗಳು ನನಗೆ ಇಷ್ಟವೇ; ಆದರೆ ಕಲೆಯ ಹೆಸರಿನಲ್ಲಿ ಈಗ ಪ್ರಪಂಚದ ಮುಂದೆ ಬರುವ ಅನೇಕ ಪದಾರ್ಥ ನನಗೆ ಸರಿಬರುವುದಿಲ್ಲ. ಅವನ್ನು ನಾನು ಅಗತ್ಯವಾಗಿ ವಿರೋಧಿಸುತ್ತೇನೆ. ಕಲೆಗೆ ಹೃದಯವಿರಬೇಕು.'

ದಿಲೀಪಕುಮಾರನೆಂದ:— ' ಕಲೆ ಜೀವನಕ್ಕಿಂತ ಹೆಚ್ಚಾದುದೆಂದು ನಾನೂ ಒಪ್ಪುವುದಿಲ್ಲ. '

ಗಾಂಧೀಜೀ ಮುಂದುವರಿಸಿದರು: ' ಜೀವನವು ಸಮಸ್ತ ಕಲೆಗಳಿಗಿಂತ ಶ್ರೇಷ್ಠವಾದುದು. ಯಾರು ಉತ್ತಮರೀತಿಯಲ್ಲಿ ಬಾಳಬಲ್ಲನೋ ಅವನೇ ಉತ್ತಮ ಕಲಾಕಾರ. ಉತ್ತಮ ಜೀವನದ ತಳಹದಿಯಿಲ್ಲದೆ ಕಲಾಕೃತಿ ಆದೀತು ಹೇಗೆ? ಬಾಳನ್ನು ಹಸನು ಮಾಡುವುದು ಮೇಲುಮಟ್ಟಕ್ಕೆ ಏರಿಸುವುದೇ ಕಲೆಯ ಬೆಲೆ. ಜೀವನವೇ ಶ್ರೇಷ್ಠಕಲೆ. ಕಲೆ ವಿಶ್ವವನ್ನು ಜೀವನವನ್ನು ಅರಿತುಕೊಳ್ಳಬೇಕು ! ' ಆದರಲ್ಲಿ ರಸವನ್ನು ಹೀರಬೇಕು.

' ಋಷಿಯಾಗದವ ಕವಿಯಾಗಲಾರ ' ಎಂದು ಹಿರಿಯರು ಹೇಳಿದ್ದಾರೆ. ಇಂದು ಗಾಂಧೀಜೀ ಅದನ್ನೇ ಮತ್ತೆ ಹೇಳುತ್ತಿದ್ದಾರೆ. ಕವಿಯಾಗುವವನು ಮೊದಲು ಋಷಿಯಾಗಬೇಕು. ಆಗ ನುಡಿಯಲ್ಲಿ ನುಡಿದೇವಿ ಮೂಡಿ ಬಂದಾಳು, ಆಡಿದುದೇ ಕಲೆ ಕಾವ್ಯವಾದೀತು. ಜೀವನವೇ ಒಂದು ರಸಕಾವ್ಯವಾದೀತು.

ಗಾಂಧೀಜೀ ಸ್ವತಃ ಅದಕ್ಕೊಂದು ಉದಾಹರಣೆ *

* (ಬೇಗನೆ ಪ್ರಕಟವಾಗಲಿರುವ ' ಪರ್ಣಕುಟಿ ' ಎಂಬ ಪುಸ್ತಕದಿಂದ)

ನಾಜೀ-ತತ್ತ್ವಜ್ಞಾನ

★

ಪ್ರೊ. ಸಿ. ಡಿ. ದೇಶಪಾಂಡೆ, ಎಂ. ಎ.

"ರಂಟೆಯಿದ್ದುದು ಖಡ್ಗವಾಗುವುದು; ಯುದ್ಧದ ಕಣ್ಣೀರಿನಲ್ಲಿಯೆ ಮುಂಬರುವ ದಿನಗಳ (ಭವಿಷ್ಯದ) ಸುಗ್ಗಿಯನ್ನು ಕಾಣುವೆವು."

—"ನನ್ನ ಹೋರಾಟ"

"ಜರ್ಮನಿಯಲ್ಲಿಯ ಟ್ಯೂಟೋನಿಕ್ ಆರ್ಯನ್ನರೆ ಜಗತ್ತಿನಲ್ಲಿ ಸಂಸ್ಕೃತಿಯ ದೀವಿಗೆಯನ್ನು ಬೆಳಗಬಲ್ಲರು. ಮಿಕ್ಕವರೆಲ್ಲರೂ ಅನಾಗರಿಕರು. ಯಹೂದ್ಯರ ಮೂರ್ಖತನವಾದ 'ಸಂಘವಾದ' ವಂತೂ ಜಗತ್ತನ್ನು ಕಗ್ಗತ್ತಲೆಯಲ್ಲಿ ಕೆಡಹುವಂತಹದು!" ಎಂಬೀ ಮಾತು ದುರಾಗ್ರಹವಲ್ಲದೆ ಇನ್ನೇನು?

ಹೆರ್ ಹಿಟ್ಲರ್

ಹಿಟ್ಲರನ "ನನ್ನ ಹೋರಾಟ" ಎಂಬ ಪುಸ್ತಕವು 'ಪವಿತ್ರ' ಗ್ರಂಥವಾಗಿದ್ದರೂ, ಅದರ ೨೫ ಲಕ್ಷ ಪ್ರತಿಗಳು ಮಾರಾಟವಾಗಿದ್ದರೂ ಅದು ನಾಜೀತತ್ತ್ವವನ್ನು ವಿವೇಚಿಸುವುದೆಂದು ತಿಳಿದುಕೊಳ್ಳುವುದು ಶುದ್ಧ ತಪ್ಪು; ಹಾಗೆ ನೋಡಿದರೆ, ನಾಜೀ ಚಳವಳಿಗೆ, ತತ್ತ್ವಜ್ಞಾನದ ತಳಹದಿಯಿರಲಿಲ್ಲ. ಕಾಲಾಂತರದಿಂದ ಅದು ದೊರಕಿಸಿದ ಯಶಸ್ಸು, ನಡೆದುಕೊಂಡು ಬಂದಿರುವ ಚಳವಳಿಯಲ್ಲಿ ಕೆಲವು ತತ್ತ್ವಗಳ ಪ್ರಭಾವವನ್ನು ಹುಡುಕಿ ತೆಗೆದಿದೆ.

ಹಿಟ್ಲರನ ಮೂಲಗುರುವು— ಡಾಕ್ಟರ್ ಇಖಾರ್ಟನು ಯಹೂದ್ಯರ ವಿರೋಧವನ್ನೂ, ವರ್ಸೇಲದ ಒಪ್ಪಂದದ ಕೀಳ್ಮೆಯನ್ನೂ ಬೋಧಿಸಿದನು. ಅದು ಅವನ ಪುಸ್ತಕದಲ್ಲಿ ಪ್ರಚಾರ ಹೊಂದಿದೆ. ಆದರೆ, ವಾನ್, ಡೇನ್‌ಬ್ರುಂಕ್ ಎಂಬವನು ಹೆಚ್ಚು ಒತ್ತಾಯದಿಂದಲೂ ಉತ್ಕಟತೆಯಿಂದಲೂ ನಾಜೀತತ್ತ್ವಗಳನ್ನು ಇವನ ತಲೆಯಲ್ಲಿ ಹಾಕಿದನು. ಹಿಟ್ಲರನು ತನ್ನ ಪುಸ್ತಕದಲ್ಲಿ— "ಮೂರನೆಯ ರೀಕ್ಷವು (೧೯೨೩ರಲ್ಲಿ ಪ್ರಸಿದ್ಧಿಸಿದ್ಧ)" ಎಂಬ ಪುಸ್ತಕದಲ್ಲಿ— ವರ್ಸೇಲದ ಬೂದಿಯಲ್ಲಿ ಹೊಸ ಜರ್ಮನಿಯು ಉದಯವಾಗಲೆ ಬೇಕೆಂದು ಸಾಧಿಸಿದ್ದಾನೆ. ಅದಕ್ಕಾಗಿ, ಜರ್ಮನಿಯ ಸಲುವಾಗಿ— ತಂದೆನಾಡಿನ ಸಲುವಾಗಿ— ಎಲ್ಲ ಜರ್ಮನರೂ ಒಮ್ಮತದವರಾಗಿ, ಒಂದೇ ಧ್ವಜದ ಕೆಳಗೆ ಬಂದು ಸೇರಬೇಕೆಂದು ಕಹಳೆಯನ್ನು ಊದಿದನು. ವರ್ಗಭೇದವ್ಯತ್ಯಾಸದ ತಿಕ್ಕಾಟವಿಲ್ಲದ ರಾಷ್ಟ್ರೀಯ ಸಮತಾವಾದವನ್ನು ಮಂಡಿಸಿದನು. ದೇಶವೆಲ್ಲವೂ ಪ್ರಗತಿಪರಪಕ್ಷದ ನೇತೃತ್ವದಲ್ಲಿ ಒಟ್ಟುಗೂಡಬೇಕೆಂಬ ಈ ಭಾವನೆಯೆ ನಾಜೀಪಕ್ಷದವರಿಗೂ, ಹಿಟ್ಲರನಿಗೂ ಮಾಡಿಟ್ಟ ಮಾರ್ಗದಂತೆ ಆಯಿತು. 'ಇಡಿಯೆ ಜರ್ಮನ್ ರಾಷ್ಟ್ರವು ಒಂದಾಗಿ, ಅತಿಮಾನುಷರೆನಿಸಿಕೊಳ್ಳುವ ನಾಜೀಪಕ್ಷದವರ ಹೇಳಿಕೆಯಂತೆ ನಡೆಯಬೇಕು. ಮತ್ತು ಇಡಿ ರಾಷ್ಟ್ರದ ಮೋಕ್ಷಕ್ಕೆ ಹೆಣಗುವುದರ ಸಲುವಾಗಿ ಒಬ್ಬ ಸರ್ವಾಧಿಕಾರಿಯನ್ನವಲಂಬಿಸಬೇಕು' ಎಂಬುದಾಗಿ ಜರ್ಮನ್ ಜನತೆ ನಿರ್ಣಯಿಸಿತು.

ಮುಂದೆ ಅನೇಕ ರಾಜಕೀಯ ಬರೆಹಗಾರರಿಂದ ಬದಲಾವಣೆಗಳು ಬಂದುವು. ಆದರೆ ಇಂದಿನ ಉನ್ಮತ್ತಪ್ರವೃತ್ತಿಯು ಬಂದುದು ೧೯೩೦ರಲ್ಲಿ ಪ್ರಸಿದ್ಧವಾದ ಆಲ್ಫ್ರೆಡ್ ರೋಸೆನ್‌ಬರ್ಗನು ಬರೆದ, "೨೦ನೆಯ ಶತಮಾನದ ದಂತಕಥೆ" ಪುಸ್ತಕದ ಮೂಲಕವೆ. ಇಂದಿನ ಧ್ಯೇಯವಾದದ ಅರ್ಥವನ್ನು ಮಾಡಿದುದರ ಹೊಣೆಯೂ

PHOTO ENLARGEMENTS
Punctulity is our Motto;
SEND YOUR PHOTO; GET IT ENLARGED.
We Guarantee faithful reproduction.
Colouring our speciality.
Cheap Rates! *Satisfactory Work!!*
Even for Cinema Slides
Approach: GOVARIKAR & SONS,
Photographic dealers, KOLHAPUR.

ಕೇವಲ ರೂಸೆನ್ ಬರ್ಗನದೇ. ಅವನು ಹಿಟ್ಲರನ ಪ್ರಥಮ ಅನು-ಯಾಯಿಗಳಲ್ಲಿ ಒಬ್ಬನು; ಮತ್ತು ತನ್ನ ಬರೆವಣಿಗೆಯ ವೈವಿಧ್ಯದಿಂದ ನಾಜೀ ವಿಚಾರವನ್ನು ಪ್ರಚಾರಗೊಳಿಸಿದ್ದಾನೆ. ಇವನ ಬರೆಹಗಳಲ್ಲಿ ಒಂದು ವಿಲಕ್ಷಣ ಕಾಠಿಣ್ಯವು ಕಂಡುಬರುವುದು. ಯಹೂದಿಗಳ ವಿಷಯದಲ್ಲಿ ತಿರಸ್ಕಾರವು, ಮಿಶ್ರಜನಾಂಗದ ಬಗೆಗೆ ಹೇಸಿಕೆಯು ಎದ್ದುಕಾಣುವುದು. ಇಡಿಯ ಜಗತ್ತಿನಲ್ಲಿ ಎಲ್ಲ ಜನಾಂಗಗಳಿಗಿಂತ ಜರ್ಮನಿಯ ಆರ್ಯನ್ ಜನಾಂಗವೇ ಮೇಲೆಂದೂ, ಅವರೇ ಜಗತ್ತನ್ನಾಳುವುದಕ್ಕೆ ಯೋಗ್ಯರೆಂದೂ ಸಾರುತ್ತಿದೆ. ಪ್ರತಿಯೊಬ್ಬ ಜರ್ಮನನು ಜಗತ್ತಿಗೇ ಸಂಸ್ಕೃತಿಯ ಬೆಳಕನ್ನು ತೋರುವವನೆಂದೂ, ಟ್ಯುಟೊನಿಕ್ ಆರ್ಯನ್ನರು ಜಗತ್ತನ್ನು ಗೆದ್ದರೆಯೆ ಜಗತ್ತಿನ ಕಲ್ಯಾಣವಾಗುವುದೆಂದೂ ಇವನ ಮತ! ಪ್ರತಿಯೊಬ್ಬ ಜರ್ಮನನು ರಕ್ತ—ನೆಲ ಸಂಬಂಧದಿಂದ ತಂದೆನಾಡಿಗೆ ಅಂಟಿಕೊಂಡಿದ್ದಾನೆ; ರಾಷ್ಟ್ರಸೇವೆಯನ್ನು ಮಾಡುವುದರಿಂದ ಪ್ರತಿಯೊಬ್ಬನೂ ತನ್ನ ವ್ಯಕ್ತಿತ್ವವನ್ನು ಪರಿಪೋಷಿಸಿಕೊಳ್ಳುವನು. ಕಾಯಾ ವಾಚಾ ಮನಸಾ ಅವನು ತನ್ನ ಹಿತಸಂಬಂಧಗಳನ್ನು ಜನತೆಯ ಹಿತಕ್ಕೆ ಅಧೀನವಾಗಿಡುತ್ತಾನೆ. ವ್ಯಕ್ತಿಸ್ವಾತಂತ್ರ್ಯವೆಂದರೆ, ಅಪ್ಪಣೆಪಡೆದಂತೆ; ಇಡಿಯ ಜನಾಂಗವು ಸ್ವತಂತ್ರವಾಗುವುದರ ಸಲುವಾಗಿ ಅವನು ತನ್ನ ಸ್ವಾತಂತ್ರ್ಯವನ್ನು ಅಡವಾಗಿ ಇಡಬೇಕು. 'ಜನಾಂಗಸುಖ'ವೇ ವ್ಯಕ್ತಿಯ ಗುರಿಯಾಗಿರಬೇಕು; ಅದುವೆ ಅವನ ಧರ್ಮ, ಅವನ ರಾಜಕಾರಣ— ಅವನ ಪುರುಷಾರ್ಥ— ಜೀವನದ ಗುರಿ! ವ್ಯಕ್ತಿ ಕ್ಷುಪದಾರ್ಥ; ಸಮಾಜವೇ ಸರ್ವಸ್ವ. ರಾಷ್ಟ್ರೀಯ ಸಮತಾವಾದ—ನಾಜೀವಾದ— ವೇ ಮೂಲಮಂತ್ರ. ಪ್ರಜಾಸತ್ತೆ ಮುರಿದು ಹೋದ ಪದ್ಧತಿ; ಸಂಘನಾದವು ಯಹೂದ್ಯರ ಜಾಡ್ಯ; ನಾಜೀವಾದವೊಂದೇ ಜಗತ್ತಿನ ನಾಗರಿಕತೆಗೆ ಹಾಕಿದ ಹೆದ್ದಾರಿ. "ನನ್ನ ಹೋರಾಟ" ವೇ ಪವಿತ್ರ ಗ್ರಂಥವು; ಬಾಯ್‌ಬಲ್, ಕುರಾನು! ಹಿಟ್ಲರನೇ ಈ ಯುಗದ ಪ್ರವಾದಿಪುರುಷ!

ಹಿಟ್ಲರನ ಉದಯವನ್ನೂ, ನಾಜೀಪಕ್ಷದ ಪ್ರಾರಂಭವನ್ನೂ, ಜರ್ಮನ್ ರಾಷ್ಟ್ರದ ಆಕ್ರಮಣಶೀಲವೃತ್ತಿಯನ್ನೂ ಈ ಧ್ಯೇಯವಾದದಿಂದ ಚೆನ್ನಾಗಿ ತಿಳಿಸಬಹುದು. ಬಿದ್ದ ದೇಶವು ಚೇತರಿಸಿಕೊಂಡು ಬಲಶಾಲಿಯಾಗುವ ಘನಪ್ರಯತ್ನವಿದು. ಇದರಿಂದ ಹೊರಬಿದ್ದ ಯಹೂದಿವಿರೋಧಕ ಚಳವಳಿಯಿಂದಲೂ ಜನಾಂಗದ ಮೇಲ್ಮೆಯಿಂದಲೂ ರಾಷ್ಟ್ರೀಯತೆಗೆ ಪುಟವನ್ನು ಕೊಟ್ಟಂತೆ ಆಯಿತು.

ಹಿಟ್ಲರನ ಮುಂದಾಳುತನದಲ್ಲಿ ಈ ವಿಚಾರವು ಜರ್ಮನ್‌ಜನತೆಯ ಮನಸ್ಸನ್ನು ಹಿಡಿದು, ಅವರನ್ನು ಕರ್ತವ್ಯಕ್ಕೆ ಪ್ರಚೋದಿಸಿತು. ಆದರೆ, ಸಂಧಾನವಿಲ್ಲದ ವೃತ್ತಿ ಜನಾಂಗಶ್ರೇಷ್ಠತೆಯ ಸಾರುವಿಕೆಯಿಂದ ನಸುವೆ ಕ್ರಮತಪ್ಪಿ ಅವರನ್ನು ಯುದ್ಧದಲ್ಲಿ ಸೆಳೆದಿದೆ. ಟ್ಯುಟೊನಿಕ್ ಆರ್ಯನ್ನರೇ ಜಗತ್ತನ್ನು ಸುಧಾರಿಸಬಹುದೆಂಬ ತತ್ತ್ವವು ಜಗತ್ತನ್ನು ಗೆಲ್ಲುವ ವಿಚಾರವನ್ನು ಸಮರ್ಥಿಸುವುದು— ಈ ತತ್ತ್ವದ ಹಿಂದೆ ಇದ್ದ ಗಂಡಾಂತರಗಳು ಜಗತ್ತನ್ನೇ ಎಚ್ಚರಿಸುವುವು. ಒಂದೆಡೆ ಅದು ಭಿನ್ನ ಜನಾಂಗದವರ ಸಂಗಡ ಯುದ್ಧ ಮಾಡುವುದನ್ನು ಸಮರ್ಥಿಸುವುದು, ಇನ್ನೊಂದೆಡೆ ತಾವೇ ಶ್ರೇಷ್ಠರೆಂಬ ಭ್ರಮೆಯನ್ನು ತುಂಬಿ, ಅಧಿಕಾರಲಾಲಸೆಯಿಂದ ಶಸ್ತ್ರಕ್ಕೆ ಕೈಹಾಕಲು ಮನಸ್ಸೆಳೆಯುವುದು. ನಾಜೀವಾದವು ನಿಜವಾಗಿಯೂ ಜರ್ಮನ್ ಜನತೆಗೆ ಉತ್ತೇಜನಕಾರಿಯಾಗಿ ಪರಿಣಮಿಸಿತ್ತು; ಆದರೆ, ಆ ನಾಜೀವಾದದ ಮಬ್ಬಿನಲ್ಲಿದ್ದ ಜರ್ಮನ್ ರಾಷ್ಟ್ರವು ಹಿಟ್ಲರವಾದದ ಅತಿಸೇವನೆಯಿಂದ ಬಳಲಿದೆಯಲ್ಲದೆ, ಸತ್ಯಸೃಷ್ಟಿಯಲ್ಲಿ ಸಿಡಿಯಹತ್ತಿದೆ, ಕುಸಿಯಹತ್ತಿದೆ ಕುಗ್ಗಹತ್ತಿದೆ. ಯಾವ ರಭಸದಿಂದ ಮೇಲೇರಿತೋ ಅದಕ್ಕೂ ಹೆಚ್ಚು ವೇಗದಿಂದ ಬೀಳಹತ್ತಿದೆ; ಬಿದ್ದುದು ಎದ್ದೇಳಬಹುದೊ?

ಕೊಲ್ಹಾಪುರದಲ್ಲಿಯ
ಹೆಸರಾದ ಟೊಪ್ಪಿಗೆಯ ವ್ಯಾಪಾರಿಗಳು.
ಬೋಂಗಾಳೇ ಬ್ರದರ್ಸ್, ಕ್ಯಾಪ್ ಮೇಕರ್ಸ್
ಮಹಾದ್ವಾರ ರೋಡ್, ಕೊಲ್ಹಾಪುರ ಸಿಟಿ.
*ಎಲ್ಲ ಮಾದರಿಯ ಟೊಪ್ಪಿಗೆಗಳೂ ಸರಿಯಾದ ಬೆಲೆಗೆ ಸಿಕ್ಕುವುವು. ಕರ್ನಾಟಕದಲ್ಲಿಯ ಗೋಕಾಕ, ಚಿಕ್ಕೋಡಿ, ರಾಮದುರ್ಗ ಮೊದಲಾದ ಮುಖ್ಯಸ್ಥಳಗಳಲ್ಲೆಲ್ಲ ಪ್ರಸಿದ್ಧಿಯಿದೆ. ತಾವೂ ವಿಚಾರ ಮಾಡಿರಿ, ಒಮ್ಮೆ ಟೊಪ್ಪಿಗೆಗಳನ್ನು ತರಿಸಿ ಅನುಭವ ಪಡೆಯಿರಿ.

ಕನ್ನಡ ನಾಡಿನಲ್ಲಿ ಜಯಂತಿ ಬಹುಜನರ ಮನಸ್ಸನ್ನು ಸೆಳೆದುಕೊಂಡಿದೆ!
ಆದುದರಿಂದಲೇ ಅದು ಎಲ್ಲರ ಕೈಗಳಲ್ಲಿಯೂ ಓಡಾಡುತ್ತದೆ!
ಅದಕ್ಕಾಗಿಯೆ ಜಾಹೀರಾತನ್ನು ಕೊಡುವವರಿಗೆ ತಕ್ಕ ಪತ್ರಿಕೆ ಎನ್ನಿಸಿಕೊಳ್ಳುತ್ತದೆ!

ಎರಡು ನೊಂದ ಜೀವಗಳು

★ ★

(ಒಂದು ಜೀವನಚಿತ್ರ)*

ಶ್ರೀ. 'ಭಾರತೀಸುತ' ವೈನಾಡು

ನಾಯಿ ತಿಂದು ಬದುಕಬೇಕಾದ ಆಹಾರವನ್ನು ತಿಂದು ಬದುಕುವೆನೆಂದರೂ ನಂಜನಿಗೆ ಸಾಧ್ಯವಾಗಲಿಲ್ಲ. ಬಡತನವೆಂಬುದು ಲೋಕದಲ್ಲಿ ಇರದಿದ್ದರೆ 'ಕಳವು' ಎಂಬ ಶಬ್ದಕ್ಕೆ ಕೋಶದಲ್ಲಿ ಸ್ಥಾನವಾದರೂ ಸಿಕ್ಕುತ್ತಿದ್ದಿತೆ?

★

ಅದನ್ನು ಒಂದು ಮನೆಯೆಂದು ಹೇಳುವ ಬದಲು ಗುಹೆಯೆಂದು ಕರೆಯುವುದು ಒಳ್ಳೆಯದು. ಅಗಲ ಕಿರಿದಾದ ಬಾಗಿಲುಗಳು; ಚಿಕ್ಕದೊಂದು ಕಿಡಕಿ. ಕೋಣೆಯೊಳಕ್ಕೆ ಬೆಳಕು ಹಾಯುವಂತಿಲ್ಲ. ಅದೊಂದು ಕತ್ತಲೆಯ ಗವಿ. ಆ ಕಟ್ಟಡದಲ್ಲಿರುವ ಕೋಣೆಗಳೆಲ್ಲ ಈ ತರಗತಿಗೆ ಸೇರಿದುವುಗಳೇ. ತೋಟಗಾರರ ಭಾಷೆಯಲ್ಲಿ ಇದಕ್ಕೆ 'ಲಾಯ್ನ್' ಎಂದು ಹೆಸರು. ತೋಟದಲ್ಲಿ ಕೆಲಸ ಮಾಡುವ ಕೂಲಿಯ ಆಳುಗಳು ವಾಸಿಸಲಿರುವ ವಸತಿಯದು.

ನೇಸರು ಉದಿಸಿದ್ದ; ಕೂಲಿಯ ಆಳುಗಳು ತಮ್ಮ ಬೆಳಗಿನ ಆಹಾರವನ್ನು ಮುಗಿಸಿಕೊಂಡು ಕೂಲಿಗೆ ತೆರಳಲು ಹೊರಟಿದ್ದರು. ಬೇಗನೆ ಕೆಲಸಕ್ಕೆ ಹೊರಡಬೇಕೆಂದು ಆಳುಗಳನ್ನು ಮೇಸ್ತ್ರಿ ನಿರ್ಬಂಧಿಸುತ್ತಿದ್ದ. ಆಳುಗಳು ತಮ್ಮ ಕೋಣೆಗಳ ಕದಗಳನ್ನು ಮುಚ್ಚಿ ಕೂಲಿಗೆ ಹೋಗತೊಡಗಿದರು.

ಎಲ್ಲರೂ ಲಾಯ್ನಿನಿಂದ ತೆರಳಿದರು. ಆದರೆ ಒಂದು ಕೋಣೆಯವರು ಮಾತ್ರ ಕೆಲಸಕ್ಕೆ ಹೋಗಲಿಲ್ಲ. ಮೇಸ್ತ್ರಿ ಆ ಕೋಣೆಯ ಬಾಗಿಲಿಗೆ ಬಂದು ಒಳಕ್ಕೆ ಇಣಿಕಿನೋಡಿದನು. ಹೆಂಗುಸೊಬ್ಬಳು ಚಾಪೆಯ ಮೇಲೆ ಮಲಗಿದ್ದಳು. ಅವಳ ಮುಖಭಾವವು ಅವಳು ಕಾಹಿಲೆಗೆ ತುತ್ತಾಗಿರುವಳೆಂಬುದನ್ನು ಸೂಚಿಸುತ್ತಿದ್ದಿತು. ಕಳೆಯಿಲ್ಲದ ಮೋರೆ, ಗುಳಿಬಿದ್ದ ಕಣ್ಣುಗಳು, ಸೊರಗಿ ಕಡ್ಡಿಯಂತಾದ ಮೈ—ಇವುಗಳೆಲ್ಲ, ಆಕೆಯು ರೋಗಕ್ಕೆ ಬಲಿಯಾಗಿ ಹಾಸಿಗೆ ಹಿಡಿದಿರುವಳೆಂಬುದನ್ನು ಅರುಹುತಿದ್ದುವು. ಅವಳ ಹಾಸಿಗೆಯ ಪಕ್ಕದಲ್ಲಿ ಕುಳಿತಿದ್ದ ಗಂಡುಸು ಆಕೆಗೆ ಗಂಜಿಯನ್ನು ಕುಡಿಸುತ್ತಿದ್ದ. ಅವನ ಮೊಗದಲ್ಲಿಯೂ ರಕ್ತಚ್ಛಾಯೆಯಿಲ್ಲ. ಕಣ್ಣುಗಳು ತುಸ ಹಳದಿಬಣ್ಣವನ್ನು ತಳೆದಿದ್ದುವು. ಕಾಲುಗಳಿಗೆ ನೀರು ಇಳಿದಿದ್ದುದರಿಂದ ಅವು ಬಾತುಕೊಂಡಿದ್ದುವು. ಒಂದೇ ಮಾತಿನಲ್ಲಿ ಹೇಳುವುದಾದರೆ ಅವನು ಕಾಮಾಲೆರೋಗಕ್ಕೆ ಒಳಗಾಗಿದ್ದ. ಆತನಿಗೆ ಪ್ರಾಯ ಹೆಚ್ಚಾಗಿರಲಿಲ್ಲ; ಆದರೆ ದೇಹವು ಬಲಹೀನವಾದುದು. ಮಲೆಜ್ವರದಿಂದ ಅವನ ಆರೋಗ್ಯವು ಶಿಥಿಲವಾಗಿದ್ದಿತು.

ಕೋಣೆಯಲ್ಲಿ ಹೆಚ್ಚಿನ ಸಾಮಾನುಗಳಿರಲಿಲ್ಲ. ಒಂದೆರಡು ಕುಡಿಕೆ-ಮಡಿಕೆಗಳು; ನೀರುತರಲಿಕ್ಕಿರುವ ಒಂದು ಗಡಿಗೆ; ಒಂದೆರಡು ಬಟ್ಟಲುಗಳು; ಎರಡು ಚಾಪೆಗಳು ಮತ್ತು ಹರಿದು ಚಿಂದಿಯಾಗಿ ಹೋದ ಎರಡು ಕಂಬಳಿಗಳು; ಇವಿಷ್ಟೇ ಆ ಕೋಣೆಯೊಳಗಿದ್ದ ಒಡವೆಗಳು. ಕಂಬಳಿಗಳಲ್ಲಿ ಒಂದನ್ನು ಹೊದೆದುಕೊಂಡು ರೋಗಿ ಮಲಗಿದ್ದಳು. ಇನ್ನೊಂದು ಗಂಡುಸಿನ ಶರೀರವನ್ನು ಆಚ್ಛಾದಿಸಿದ್ದಿತು.

'ಸಂಜಾ!' ಬಾಗಿಲ ಬಳಿಯಲ್ಲಿ ನಿಂತಿದ್ದ ಮೇಸ್ತ್ರಿ ಕೂಗಿದ. ರೋಗಿಗೆ ಗಂಜಿಯನ್ನು ಕುಡಿಸುತ್ತಿದ್ದ ಸಂಜ– ಗಂಡುಸಿನ ಹೆಸರು ಇದು— ಗಂಜಿಯ ಬಟ್ಟಲನ್ನು ನೆಲದ ಮೇಲೆ ಮಡಗಿ, ತನ್ನ ದೃಷ್ಟಿಯನ್ನು ಕದಗಳ ಕಡೆಗೆ ಹೊರಳಿಸಿದ. ಅವನ ದೃಷ್ಟಿಗೆ ಮೇಸ್ತ್ರಿಯು ಗೋಚರಿಸಿದ. 'ಏನು?' ಎಂಬ ಪ್ರಶ್ನೆಯು ಸಂಜನ ತುಟಿಗಳಿಂದ ಹೊರಟಿತು.

'ನೀನು ರೂಲಿಗೆ * ಬರುವುದಿಲ್ಲವೇ?'

'ನೋಡಿ, . . ಚೆನ್ನಿ ಕಾಹಿಲೆಯಿಂದ ಹಾಸಿಗೆ ಹಿಡಿದಿದ್ದಾಳೆ; ಆಕೆಗೆ ಅನ್ನನೀರು ಕೊಡಲು ನಾನಲ್ಲದೆ ಬೇರೆ ಇನ್ನಾರೂ ಇಲ್ಲ. ನಾನು ಬಂದರೆ ಚೆನ್ನಿಗೆ ಒಂದಿಷ್ಟು ಗಂಜೀ ಬೇಯಿಸಿಕೊಡುವವರಾರು? ಸಾಲದುದಕ್ಕೆ ನಿನ್ನೆ ಮಧ್ಯಾಹ್ನದಿಂದ ನಾನು ಊಟಮಾಡಿಲ್ಲ. ಹಸಿವೆಯಿಂದ ನನ್ನ ತಲೆತಿರುಗುವಂತಾಗಿದೆ. ಇವತ್ತು ನನಗೆ ಒಂದು ಎಂಟಾಣೆಗೆ ಅಂಗಡಿಗೆ ಚೀಟಿಯನ್ನು ಕೊಡಿ. ಸಾಮಾನು ತಂದುಕೊಳ್ಳುವೆನು; ನಾಳೆಯಿಂದ ಕೆಲಸಕ್ಕೆ ಬರುವೆನು.'

'ಹಾಗೆ ಹೇಳಿದರಾಗದು, ಕೆಲಸಕ್ಕೆ ಬಾರದ ನಿಮಗೆ ಇನ್ನು ನಾನು ಖರ್ಚಿಗೆ ಕೊಡುವಂತಿಲ್ಲ: ಈಗಲೆ ನಿನ್ನ ಲೆಕ್ಕದಲ್ಲಿ ಹದಿನೈದು ರೂಪಾಯಿಗಳಿಗಿಂತ ಹೆಚ್ಚಾಗಿದೆ!'

---

* ಈ ವಾಸ್ತವಚಿತ್ರವನ್ನು ವೈನಾಡಿನ ಚಹಾತೋಟಗಳಲ್ಲಿಯ ಕೂಲಿ-ಆಳುಗಳ ಜೀವನವನ್ನು ನಿರೀಕ್ಷಿಸಿ ಬರೆಯಲಾಗಿದೆ.

—ಭಾ. ಸು.

* ರೂಲ್:— ತೋಟದಲ್ಲಿ ಬೆಳಗ್ಗೆ ಕೂಲಿ ಆಳುಗಳನ್ನು, ಬೇರೆ ಬೇರೆ ಕೆಲಸಗಳಿಗೆ ತೋಟದ ಉದ್ಯೋಗಸ್ಥರು ವಿಂಗಡಿಸಿಬಿಡುವ ಕೆಲಸಕ್ಕೆ, ಕೂಲಿಆಳುಗಳ ಭಾಷೆಯ ಹೆಸರು 'ರೂಲ್' ಎಂದಾಗಿದೆ.

—ಭಾ. ಸು.

'ಮೇಸ್ತ್ರೀ, ನಮ್ಮ ಸ್ಥಿತಿಯು ನಿಮಗೆ ಕಾಣಿಸುವುದಿಲ್ಲವೇ? ನನ್ನ ಮೈ ಚೆನ್ನಾಗಿಲ್ಲ; ಈಕೆಗೂ ಕಾಹಿಲೆ— ದಯೆತೋರಿಸಿ; ಸದ್ಯ ಎಂಟಾಣೆಯನ್ನು ಖರ್ಚಿಗೆ ಕೊಡಿ.'

'ಆಗುವುದಿಲ್ಲ!' ಮೇಸ್ತ್ರಿಯ ನಿಷ್ಠುರಧ್ವನಿಯು ಕೇಳಿಸಿತು. ಲೂಲಿಗೆ ತೆರಳಲು ಹೊತ್ತಾದುದರಿಂದ ಮೇಸ್ತ್ರಿ ಅಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ; ಅವನು ಅಲ್ಲಿಂದ ತೆರಳಿದ.

ನಂಜನ ಎದೆಯಿಂದ ನಿಟ್ಟುಸಿರೊಂದು ಹೊರಟಿತು. ಅವನ ದೃಷ್ಟಿಯು ರೋಗಿಯ ಕಡೆಗೆ ತಿರುಗಿತು. 'ಚೆನ್ನೀ, ಮಾಡುವುದೇನು? ನಿನ್ನೆಯಿಂದ ಊಟವಿಲ್ಲ. ನಿನಗೆ ಕಾಹಿಲೆ; ನಾನು ನಿತ್ರಾಣಿ. ಈ ನರಕದಿಂದ ಪಾರಾದರೆ ಸಾಕಾಗಿತ್ತು!'

'ಮೇಸ್ತ್ರಿಯ ಸಾಲತೀರಬೇಕಲ್ಲ!' ಚೆನ್ನಿಯ ಗುಳಿಬಿದ್ದ ಕಣ್ಣುಗಳಲ್ಲಿ ಕಂಬನಿಗಳು ತೋರಿದುವು. ಸಾಯುವ ತನಕ ನಾವಿಬ್ಬರು ದುಡಿದರೂ ಈ ಸಾಲ ತೀರದು. ಈ ಕೆಸರ ಹೊಂಡದಲ್ಲಿಯೇ ಕೊಳೆಯಬೇಕು!

'ಚೆನ್ನೀ ಹೆದರದಿರು. ನಿನ್ನ ಕಾಹಿಲೆ ತುಸ ವಾಸಿಯಾಗಲಿ. ಒಂದು ರಾತ್ರಿ ಯಾರಿಗೂ ಹೇಳದೆ ನಾವಿಲ್ಲಿಂದ ಹೊರಟು ಹೋಗೋಣ!'

'ಮೇಸ್ತ್ರಿ ಹಗಲು ರಾತ್ರಿಯೆನದೆ ನಮ್ಮನ್ನು ಕಾಯುತಿದ್ದಾನೆ. ಈ ಹುಲಿಯ ಬಾಯಿಂದ ಪಾರಾಗಬೇಕಲ್ಲ! ಇಲ್ಲಿಂದೊಮ್ಮೆ ಹೋದರೆ ಸಾಕು; ನಮ್ಮ ಜೀವಗಳು ಉಳಿದಂತಾಗುವುವು!'

'ಮೇಲಿದ್ದಾನಲ್ಲ,—ಆ ದೇವರು ಕಾಪಾಡಲಿ ನಮ್ಮನ್ನು!' ನಂಜ ತನ್ನ ದೃಷ್ಟಿಯನ್ನು ತಲೆಯ ಮೇಗಡೆ ಹೊರಳಿಸಿದ. 'ಚೆನ್ನೀ, ಈ ದಿನ ನಿನ್ನ ಮೈ ಹೇಗಿದೆ?'

'ವಾಸಿಯಿಲ್ಲ; ಎದೆ ನೋಯುತ್ತಿದೆ. ನಾವಿಬ್ಬರೂ ಕಾಹಿಲೆ ಹಿಡಿದು ನರಳಬೇಕಾಗಿ ಬಂದಿತಲ್ಲ!' ಚೆನ್ನಿಯ ಎದೆಯಿಂದ ಬಿಸಿಯುಸಿರೊಂದು ಹೊರಟಿತು.

'ನೋಡು' ಅಕ್ಕಿ ಎಲ್ಲಾ ತೀರಿದೆ. ಮಧ್ಯಾಹ್ನದ ಊಟಕ್ಕೆ ಏನು ಮಾಡಬೇಕೆಂಬುದು ತಿಳಿಯದಾಗಿದೆ. ಅಂಗಡಿಗೆ ಹೋಗಿ, ಒಂದು ಸೇರು ಅಕ್ಕಿ ಸಾಲ ದೊರೆಯುವುದೇ ಎಂದು ನೋಡುತ್ತೇನೆ. ಹಿಂದಿರುಗಿ ಬರುವಾಗ ದಾಕ್ತರರಿಂದ ಮದ್ದು ತೆಗೆದುಕೊಂಡು ಬರುವೆ. ಸಾಧ್ಯವಾದರೆ ಅವರನ್ನು ಕರೆದುತರುತೇನೆ. ನಾನು ಹೊರತೆರಳುವುದರಿಂದ ನಿನಗೆ ತೊಂದರೆಯಾಗದಷ್ಟೆ? ನೋಡು, ಈ ಕುಡಿಕೆಯಲ್ಲಿ ಗಂಜಿಯನ್ನು ಮುಚ್ಚಿಡುವೆ; ಬಾಯಾರಿದರೆ ಇದನ್ನು ತೆಗೆದುಕೋ!'

'ನೀನೇನೂ ತೆಗೆದುಕೊಳ್ಳಲಿಲ್ಲವಲ್ಲ? ನಂಜ, ನಿನ್ನೆಯಿಂದ ನೀನು ಉಪವಾಸವಿದ್ದೀ!' ಚೆನ್ನಿಯು ಬಳಲಿದ ಸ್ವರದಲ್ಲಿ ನುಡಿದಳು: 'ನೀನು ಹಸಿವೆಯಿಂದ ಕಂಗಾಲಾಗಿರಬಹುದು; ಉಳಿದ ಗಂಜಿಯನ್ನು ನೀನು ತೆಗೆದುಕೋ.'

'ಒಲ್ಲೆ' ಬಾಯಾರಿಕೆಯಿಂದ ನಿನಗೆ ತೊಂದರೆಯಾಗಬಹುದು ಚಹಾ ಅಂಗಡಿಯಲ್ಲಿ ಏನಾದರೂ ತೆಗೆದುಕೊಳ್ಳುತ್ತೇನೆ!' ನಂಜನು ಹೇಳಿದ.

'ನಂಜಾ, ನನ್ನ ಕೊರಳಾಣೆ,—ಹಸಿದು ಬರಿಹೊಟ್ಟೆಯಿಂದ ಹೋಗಬೇಡ. ಆ ಗಂಜಿಯನ್ನು ನೀನು ತೆಗೆದುಕೊ; ಮಧ್ಯಾಹ್ನ ತನಕ ನನಗೆ ನೀರಡಿಕೆಯಾಗುವಂತಿಲ್ಲ!'

ಹೀಗೆ ಆಕೆ ಒತ್ತಾಯಪಡಿಸಿದುದರಿಂದ ನಂಜ ಗಂಜಿಯ ಪಾತ್ರೆಯನ್ನು ತೆಗೆದು ಅರ್ಧದಷ್ಟು ಗಂಜಿಯನ್ನು ಕುಡಿದ. ಉಳಿದುದನ್ನು ಒಂದು ಚಿಟ್ಟಿಯಿಂದ ಮುಚ್ಚಿ ಮಡಗಿದುದಾಯಿತು.

'ಚೆನ್ನೀ, ತುಸು ಗಂಜಿಯಿದೆ. ಬಾಯಾರಿದರೆ ಅದನ್ನು ಕುಡಿ. ನಾನು ಅಂಗಡಿಗೆ ಹೋಗಿ ಬೇಗ ಬರುತ್ತೇನೆ!'

'ಹಿಂದಿರುಗಿ ಬರುವಾಗ ದಾಕ್ತರರನ್ನು ಕಂಡು, ಅವರನ್ನು ಕರೆತರಲು ಮರೆಯಬಾರದು.'

'ಇಲ್ಲ, ಕರೆತರುತೇನೆ!' ಹರಿದು ಚಿಂದಿಯಾದ ಶಾಲನ್ನು ತಲೆಗೆ ಸುತ್ತಿದ ನಂಜ. ಔಷಧಿಯ ಕುಪ್ಪಿಯನ್ನು ತೆಗೆದು ತನ್ನ ಜೇಬಿಗೆ ಸೇರಿಸಿದುದಾಯಿತು. ಮೂಲೆಯಲ್ಲಿದ್ದ ದೊಣ್ಣೆಯು ಆತನ ಕೈಯನ್ನು ಅಲಂಕರಿಸಿತು. ನಂಜ ಪುನಃ ಚೆನ್ನಿಯ ಕಡೆಗೆ ತನ್ನ ದೃಷ್ಟಿಯನ್ನು ಹೊರಳಿಸಿದ. 'ಚೆನ್ನೀ, ಅಂಗಡಿಗೆ ಹೋಗಿಬರುತ್ತೇನೆ. ಕಂಬಳಿಯನ್ನು ಸರಿಯಾಗಿ ಹೊದೆದುಕೋ! ಇಲ್ಲದಿದ್ದರೆ ಗಾಳಿ ತಗಲಿ ನಿನಗೆ ಚಳಿಯಾಗಬಹುದು.'

'ಹೂಂ, ಬೇಗ ಬಾ!' ಈ ಮಾತುಗಳು ಚೆನ್ನಿಯ ತುಟಿಗಳಿಂದ ಉದುರಿದುವು. ತಾನು ಹೊದೆದ ಕಂಬಳಿಯನ್ನು ಅವಳು ಸರಿಪಡಿಸಿಕೊಂಡಳು. ಅವಳ ಎದೆಯಿಂದ ಹೊರಟ ದೀರ್ಘ ನಿಶ್ವಾಸವು ಗಾಳಿಯಲ್ಲಿ ಬೆರತಿತು.

* * * *

ಅಂಗಡಿಯ ಮುಂದೆ ಹೋಗಿ ನಿಂತುದಾಯಿತು. ಸಾಹುಕಾರ ಕುರ್ಚಿಯ ಮೇಲೆ ಕುಳಿತು ವೀಳ್ಯದೆಲೆ ಅಡಿಕೆಗಳನ್ನು ಹಾಕಿಕೊಳ್ಳುತ್ತಿದ್ದ. ನೌಕರನು ಪುಸ್ತಕವನ್ನು ಬಿಚ್ಚಿ, ದಿನದ ಲೆಕ್ಕಗಳನ್ನು ಬರೆಯುತ್ತಿದ್ದ. ಸಂಬಳದವರು ಗಿರಾಕಿಗಳಿಗೆ ಸಾಮಾನುಗಳನ್ನು ಅಳೆದು, ತೂಕಮಾಡಿ, ಕಟ್ಟಿಕೊಡುತ್ತಿದ್ದರು. ನಂಜ ತನ್ನ ಶರೀರವನ್ನು ಗೇಣುದ್ದ ಮಾಡಿಕೊಂಡು ಒಂದು ಮೂಲೆಯಲ್ಲಿ ನಿಂತು, ಸಾಹುಕಾರನು ತನ್ನ ಕಡೆಗೆ ಕೃಪಾದೃಷ್ಟಿಯನ್ನು ಬೀರುವ ಸಂದರ್ಭವನ್ನು ಇದಿರುನೋಡಹತ್ತಿದ.

ಕೊನೆಗೆ ಸಾಹುಕಾರನ ದೃಷ್ಟಿಯು ನಂಜನ ಕಡೆಗೆ ತಿರುಗಿತು. ನಂಜ ತನ್ನ ತಲೆ ಬಗ್ಗಿಸಿ, ಸಾಹುಕಾರನಿಗೆ ನಮಿಸಿದ. ಮೆಲ್ಲಗೆ ಸಾಹುಕಾರನ ಹತ್ತಿರಕ್ಕೆ ಹೆಜ್ಜೆ ಹಾಕಿದ.

'ಏನು? ನೀನಾರು?' ಸಾಹುಕಾರನ ಸವಾಲು.

'ನಾನಾರು ತಿಳಿಯದೇ? ನಂಜನ ಗುರುತು ತಮಗಿಲ್ಲವೇ?'

‘ ಓಹೋ, ನಂಜನೋ ! ’ ಸಾಹುಕಾರ ನುಡಿದ: ‘ ಏನು ಬಹಳ ಬಡವಾಗಿರುವೆ? ’

‘ ಕಾಹಿಲೆ, ನೋಡಿ ಕೈಕಾಲುಗಳಲ್ಲಿ ನೀರು ಬಂದಿದೆ. ಒಡೆಯರೇ, ನನ್ನಾಕೆಗೂ ಕಾಹಿಲೆ. ನಿನ್ನೆಯಿಂದ ಊಟವಿಲ್ಲ. ಒಂದು ಸೇರು ಅಕ್ಕಿ ಸಾಲ ಕೊಡಿ; ನಾಳೆ ಮೇಸ್ತ್ರಿಯಿಂದ ಖರ್ಚಿಗೆ ಚೀಟಿಯನ್ನು ತಂದು ಈ ಸಾಲವನ್ನು ತೀರಿಸುವೆನು ! ’

‘ ಊಂ ಹೂಂ, ಸಾಲಕೊಡುವುದಿಲ್ಲ!’

‘ ನಿನ್ನೆಯಿಂದ ಉಪವಾಸ; ಮೇಸ್ತ್ರಿ ಚೀಟಿ ಕೊಡಲಿಲ್ಲ. ಈ ದಿನ ಒಂದು ಸೇರು ಅಕ್ಕಿ ಸಾಲಕೊಟ್ಟರೆ ತುಂಬಾ ಉಪಕಾರವಾಗುವುದು!’

‘ ನಿನಗೆ ಖರ್ಚಿಗೆ ಕೊಟ್ಟು ಕಾಪಾಡುವ ಕೆಲಸ ನಿನ್ನ ಮೇಸ್ತ್ರಿಯದು. ನನ್ನನ್ನೇಕೆ ಪೀಡಿಸುವೆ? ನಿನ್ನಂಥ ಭಿಕಾರಿಗಳಿಗೆ ಇಲ್ಲಿ ಕಡ ಕೊಡಲಾಗುವುದಿಲ್ಲ.’ ನಂಜನಿಗೆ ಸಾಹುಕಾರನ ನಿರ್ದಾಕ್ಷಿಣ್ಯವಾದ ಉತ್ತರವು ದೊರೆಕಿತು.

ನಂಜನ ಮೋರೆಯು ಬಿಳುಪೇರಿತು. ಅವನು ಅಲ್ಲಿ ನಿಲ್ಲಲಿಲ್ಲ, ಚಹಾ ಅಂಗಡಿಯ ಕಡೆಗೆ ಹೆಜ್ಜೆ ಹಾಕಿದ. ಅಲ್ಲಿ ಚಹಾ-ತಿಂಡಿಗಳನ್ನು ಸಾಲ ಕೇಳಿದುದಾಯಿತು. ಒಂದಾಣೆಗೆ ತಿಂಡಿಯನ್ನು ಸಾಲ ಕೊಡಬೇಕೆಂದು ಕೇಳಿದ; ನಾಳೆ ಅದನ್ನು ತೀರಿಸಿಕೊಡುವೆನೆಂದು ಹೇಳಿದ. ಉಪವಾಸ ಬಿದ್ದ ತನಗೆ ಈ ಉಪಕಾರ ಮಾಡಿದರೆ ಪುಣ್ಯಬರುವುದೆಂದು ನಂಜ ಅಲ್ಲಿ ಬೇಡಿದ.

‘ ಸಾಲ ಕೊಡಲು ಇದು ನಿನ್ನ ಅಪ್ಪ ಸಂಪಾದಿಸಿ ಮಡುಗಿದುದಲ್ಲ. ಮೇಸ್ತ್ರಿಯ ಚೀಟಿಯಿದ್ದರೆ ಕೊಡುವೆನು; ಇಲ್ಲದಿದ್ದರೆ ಬೇಗ ಇಲ್ಲಿಂದ ತೊಲಗು ! ’ ಚಹಾ ಅಂಗಡಿಯ ಮಾಲಿಕ ಬೆದರಿಸಿದ.

ಇನ್ನೇನು ಮಾಡುವುದೆಂಬುದು ನಂಜನಿಗೆ ತಿಳಿಯಲಿಲ್ಲ. ‘ ಸಾಲ ಸಿಕ್ಕದು; ಹಸಿವೆಯನ್ನು ಅಡಗಿಸುವುದೆಂತು ? ಚೆನ್ನಿ ಕಾಹಿಲೆಯಿಂದ ಹಾಸಿಗೆ ಹಿಡಿದಿದಾಳೆ. ಆಕೆಗೆ ಆಹಾರ ಒದಗಿಸಬೇಕಲ್ಲ ! ’ ಹೀಗೆ ಹಲವು ಚಿಂತೆಗಳು ನಂಜನ ಮೆದುಳಿನಲ್ಲಿ ಮೂಡಿದುವು; ಅವನ ಎದೆಯ ಭಾರವನ್ನು ಹೆಚ್ಚಿಸಿದುವು.

ಒಂದು ಉಪಾಯವು ಅವನ ಮೆದುಳಿನಲ್ಲಿ ಮಿಂಚಿತು. ಒಂದು ಹೊಳಪು ಅವನ ಬಾಡಿದ ಮೋರೆಯಲ್ಲಿ ಕಾಣಿಸಿತು. ನಂಜ ಮೆಲ್ಲನೆ ಜಿನಸು ಅಂಗಡಿಯ ಕಡೆಗೆ ಹೆಜ್ಜೆಗಳನ್ನು ಹಾಕಿದ. ಅಲ್ಲಿ ಗಿರಾಕಿಗಳು ಹೆಚ್ಚು ಮಂದಿ ನೆರೆದಿದ್ದರು. ಸಂಬಳಗಾರರು ಗಿರಾಕಿಗಳಿಗೆ ಸಾಮಗ್ರಿಗಳನ್ನು ಕೊಡುವುದರಲ್ಲಿ ನಿರತರಾಗಿದ್ದರು. ನಂಜ ಸದ್ದು ಮಾಡದೆ ಅಂಗಡಿ ಜಗುಲಿಯಲ್ಲಿ ಅಕ್ಕಿ ಚೀಲವಿದ್ದೆಡೆಗೆ ಸರಿದ. ಬಳಿಕ ನಾಲ್ಕು ಪಾರ್ಶ್ವಗಳಿಗೂ ತನ್ನ ದೃಷ್ಟಿಯನ್ನು ಹೊರಳಿಸಿದ. ಅಂಗಡಿಯಲ್ಲಿ ಹೆಚ್ಚು ಗಲಾಟೆಯಿದ್ದುದರಿಂದ ಅಕ್ಕಿಯ ಚೀಲದ ಕಡೆಗೆ ಸಂಬಳಗಾರರ ದೃಷ್ಟಿಯು ಓಡಲಿಲ್ಲ.

ಅವನ ಎದೆ ನಡುಗಿತು. ಚೀಲದಿಂದ ನಾಲ್ಕು ಬೊಗಸೆಗಳಷ್ಟು ಅಕ್ಕಿಯನ್ನು ತೆಗೆದು ತನ್ನ ಕಂಬಳಿಯಲ್ಲಿ ಕಟ್ಟಿದುದಾಯಿತು. ಅತ್ತಿತ್ತ ನೋಡಿ, ಬೇಗನೆ ಅಲ್ಲಿಂದ ಹೆಜ್ಜೆಗಳನ್ನು ಕಿತ್ತುದಾಯಿತು. ಇನ್ನೇನು, ತಾನು ಕದ್ದ ಅಕ್ಕಿಯೊಡನೆ ಅಂಗಡಿಯಿಂದ ಜಾರಬೇಕು !

ಆದರೆ ತಾನು ಅಪಹರಿಸಿದ ಅಕ್ಕಿಯನ್ನು ಲಾಯ್‌ನಿಗೆ ತೆಗೆದುಕೊಂಡು ಹೋಗಿ ಬೇಯಿಸಿ ತಿನ್ನುವ ಭಾಗ್ಯವು ನಂಜನಿಗಿರಲಿಲ್ಲ. ನಂಜನು ಅಂಗಡಿ ಬಿಟ್ಟು ನಾಲ್ಕು ಹೆಜ್ಜೆಗಳಷ್ಟು ದೂರ ಹೋಗಿರಲಿಲ್ಲ; ಅಷ್ಟರಲ್ಲಿ ನಂಜನ ಕಡೆಗೆ ಸಾಹುಕಾರನ ದೃಷ್ಟಿಯು ಹರಿಯಿತು. ಕಂಬಳಿಯ ತುದಿಯಲ್ಲಿ ಕಟ್ಟಿ ಕಂಕುಳಿನಲ್ಲಿ ಸಿಕ್ಕಿಸಿದ್ದ ಅಕ್ಕಿಯ ಗಂಟು ಸಾಹುಕಾರನ ದೃಷ್ಟಿಗೆ ಬೀಳದಿರಲಿಲ್ಲ. ‘ ನಂಜಾ, ಇಲ್ಲಿ ಬಾ ! ’ ಎಂದು ಸಾಹುಕಾರನು ನಂಜನನ್ನು ಕೂಗಿದ. ನಂಜನ ಕೈಕಾಲುಗಳು ನಡುಗಿದುವು. ಎದೆಯು ಡಬಡಬನೆ ಹೊಡೆದುಕೊಳ್ಳಲಾರಂಭಿಸಿತು. ಆದರೆ ಅವನು ಹಿಂದಿರುಗಿ ನೋಡದೆ ಮುಂದಕ್ಕೆ ನಾಲ್ಕು ಹೆಜ್ಜೆಗಳನ್ನು ಇಡಗಿದ.

ಇಷ್ಟರಲ್ಲಿ ಸಂಬಳಗಾರನೊಬ್ಬನು ಸಾಹುಕಾರನ ಅಣತಿಯಂತೆ, ಅಂಗಡಿಯಿಂದ ಬಂದು, ನಂಜನ ಕೈ ಹಿಡಿದು ನಿಲ್ಲಿಸಿದ. ಅವನ ಕಂಕುಳಿನಲ್ಲಿದ್ದ ಗಂಟನ್ನು ಕಿತ್ತು ಬಿಚ್ಚಿ ನೋಡಿದುದಾಯಿತು. ಸಂಬಳದವನು ಗಂಟಿನಲ್ಲಿದ್ದ ಅಕ್ಕಿಯನ್ನು ಕಂಡು ಹೀಗೆ ನುಡಿದ: ‘ ಯಜಮಾನರೇ, ಈತ ಅಂಗಡಿಯಿಂದ ಅಕ್ಕಿ ಕದ್ದಿದಾನೆ! ’

‘ ಏನು ನೋಡುತ್ತಿರುವಿರಿ ? ಕಳ್ಳನ ಬೆನ್ನ ಮೂಳೆ ಮುರಿಯದೆ ಏಕೆ ಸುಮ್ಮನಿರುವಿರಿ ? ಕುರ್ಚಿಯ ಮೇಲೆ ಆಸೀನನಾಗಿದ್ದ ಸಾಹುಕಾರನು ಗರ್ಜಿಸಿದ.

ಎರಡು ಮೂರು ಮಂದಿ ಅಂಗಡಿಯಿಂದ ಇಳಿದುಬಂದರು. ಅಕ್ಕಿಯ ಗಂಟನ್ನು ನಂಜನಿಂದ ಕಸಿದಾತನು ಕಳ್ಳನನ್ನು ಕೈ ಹಿಡಿದು ನಿಲ್ಲಿಸಿದ್ದ. ಆದುದರಿಂದ ತನ್ನ ಕಾಲುಗಳಿಗೆ ಬುದ್ಧಿ ಹೇಳಲು ನಂಜನಿಗೆ ಸಾಧ್ಯವಾಗಲಿಲ್ಲ. ಈ ಜನರು ತಮ್ಮ ಮುಷ್ಟಿಗಳನ್ನು ಗಟ್ಟಿಹಿಡಿದು ನಂಜನ ಎದೆ, ಬೆನ್ನು, ಹಣೆ, ಕೆನ್ನೆ ಮೊದಲಾದ ಅವಯವಗಳ ಮೇಲೆ ಗುದ್ದಿದರು; ಹೊಡೆದರು. ಈ ಪ್ರಹಾರವರ್ಷವನ್ನು ಸಹಿಸಲು ನಂಜನಿಗೆ ತ್ರಾಣವಿರಲಿಲ್ಲ. ಅವನು ನೆಲದಲ್ಲಿ ಉರುಳಿದ. ‘ ಅಯ್ಯೋ, ನನ್ನನ್ನು ಕೊಲ್ಲಬೇಡಿರಿ. ಇನ್ನು ಕದಿಯುವದಿಲ್ಲ. ಎಂದು ಸಂಬಳಗಾರರ ಕಾಲುಗಳನ್ನು ಹಿಡಿದು ರೋದಿಸಿದ.

‘ ನಾಯಿಮಗನೇ, ಇನ್ನು ಕದಿಯುವಿಯೇನು ! ನಿನ್ನನ್ನು ಕೊಲ್ಲುವೆವು ನೋಡು ! ’ ತಮ್ಮ ಪಾದಗಳನ್ನು ಹಿಡಿದಿದ್ದ ನಂಜನನ್ನು ಅವರು ತುಳಿದರು; ಅವನನ್ನು ಕೈ ಹಿಡಿದು ಎಬ್ಬಿಸಿ ರಸ್ತೆಗೆ ದೂಡಿದರು.

ಅಂಗಡಿಯಿಂದ ಕದ್ದ ಅಕ್ಕಿಯನ್ನು ದಕ್ಕಿಸಿಕೊಳ್ಳಲಾಗಲಿಲ್ಲ. ಆದರೆ ಪ್ರಹಾರಾದಿ ಕಷಾಯಸೇವನೆಯನ್ನು ಚೆನ್ನಾಗಿ ಮಾಡಬೇಕಾಗಿ ಬಂದಿತು. ಮೈ-ಕೈಗಳಿಗೆ ನೋವಾಯಿತು; ವೇದನೆಯಿಂದ ದೇಹವನ್ನು ಅಲುಗಿಸಲಾಗಲಿಲ್ಲ. ಕಣ್ಣೀರು ಸುರಿಸುತ್ತಾ ಅವನು ಅಲ್ಲಿಂದ ತೆರಳಿದ. ಅವನ ಎದೆಯಿಂದ ಹೊರಟ ಬಿಸಿಯುಸಿರುಗಳು ಗಾಳಿಯಲ್ಲಿ ಬೆರತುವು.

* * *

‘ ಡಾಕ್ಟರ ಸಾಹೇಬ, ನಿನ್ನೆಯ ಮದ್ದಿನಿಂದ ನನ್ನ ಹೆಂಡತಿಯ ಕಾಹಿಲೆ ಭೇದವಾಗಿಲ್ಲ. ’ ನಂಜ ಡಾಕ್ಟರರ ಮುಂದೆ ಕೈಮುಗಿದು ನಿಂತುಕೊಂಡು ವಿಜ್ಞಾಪಿಸಿದ.

‘ಮೂರು ಹೊತ್ತು ಮದ್ದು ಕುಡಿದ ಮಾತ್ರಕ್ಕೆ ಕಾಹಿಲೆ ವಾಸಿಯಾಗುವುದೇನು ? ಹನ್ನೆರಡು ಹೊತ್ತುಗಳಷ್ಟಾದರೂ ಔಷಧ ಕುಡಿದರೆ ರೋಗವು ಕಡಿಮೆಯಾಗಬಹುದು ! ’ ಮೂಗಿನ ಮೇಲಿನ ಸುಲೋಚನವನ್ನು ಕೆಳಕ್ಕಿಳಿಸುತ್ತಾ ಡಾಕ್ಟರರು ನುಡಿದರು.

‘ ತಾವು ಈ ಬಡವರ ಮೇಲೆ ದಯೆ ತೋರಿಸಬೇಕು. ನನ್ನ ಚೆನ್ನಿಯ ಕಾಹಿಲೆ ಜಾಸ್ತಿಯಾಗಿದೆ. ಕೆಮ್ಮಲು ಸುರುವಾಗಿದೆ; ಎದೆ ನೋಯುವುದೆಂದು ಅನ್ನುತ್ತಿದ್ದಾಳೆ. ’ ಅಂಜುತ್ತಾ ನಂಜನು ನುಡಿದ. ‘ ತಾವು ಒಮ್ಮೆ ನಮ್ಮ ಲಾಯನಿನ ತನಕ ದಯಮಾಡಿಸಬೇಕು. ಅವಳ ಮೈ ಪರೀಕ್ಷೆ ಮಾಡಿ ನೋಡಿ, ನನ್ನ ಚೆನ್ನಿಯನ್ನು ಉಳಿಸಿಕೊಡಬೇಕು. ಆಕೆಗೆ ಬಹು ನಿತ್ರಾಣ; ನಡೆಯಲಾಗುವುದಿಲ್ಲ; ಇಲ್ಲದಿದ್ದರೆ ಆಕೆಯನ್ನು ಇಲ್ಲಿಗೆ ಕರೆದುಕೊಂಡು ಬರುತಿದ್ದೆ!’

‘ನಾಲ್ಕು ದಿವಸ ಮಲೆಜ್ವರ ಬಂದರೆ ಏಕೆ ಇಷ್ಟು ಬೆದರುವುದು; ಮೂರು ದಿವಸ ಮದ್ದು ಕುಡಿದರೆ ಕಾಹಿಲೆ ವಾಸಿಯಾಗುವುದು. ನಾನು ಬರಬೇಕಾದುದಿಲ್ಲ. ಇಗೋ, ಔಷಧಿಚೀಟಿಯನ್ನು ತೆಗೆದುಕೊ !’ ಡಾಕ್ಟರರು ಪ್ರಿಸ್ಕ್ರಿಪ್‌ಷನ್ ಬರೆದುಕೊಟ್ಟರು.

‘ ಸಾಹೇಬರೇ, ಬಡವರ ಮೇಲೆ ದಯವಿರಬೇಕು. ಚೆನ್ನಿ ಬಹಳ ಕಂಗಾಲಾಗಿದ್ದಾಳೆ. ತಾವು ಒಮ್ಮೆ ಬಂದು ಆಕೆಯನ್ನು ನೋಡಬೇಕೆಂದು ನನ್ನ ಬೇಡಿಕೆಯು ’ ನಂಜನ ಕೊರಳಿಂದ ದೈನ್ಯ-ಸ್ವರವು ಹೊರಟಿತು.

‘ ಈಗ ಬಿಡುವಿಲ್ಲ; ಫಾಕ್ಸ್ ಸಾಹೇಬರಲ್ಲಿಗೆ ಹೋಗಬೇಕಾಗಿದೆ. ನಾಳೆ ನೋಡುವಾ !’

‘ ನಾಳೆಗೆ ಆಕೆ ಇರುವಳೋ, ಇಲ್ಲವೋ ಎಂಬುದನ್ನು ಯಾರು ಬಲ್ಲರು ? ’

‘ ನಿನ್ನ ಅಧಿಕಪ್ರಸಂಗ ನಿಲ್ಲಿಸಯ್ಯಾ ! ಮದ್ದು ತೆಗೆದುಕೊಂಡು ಹೋಗು. ಫಾಕ್ಸ್ ಸಾಹೇಬರಲ್ಲಿಗೆ ಹೋಗುವುದನ್ನು ನಿಲ್ಲಿಸಿ ಇವನ ಹೆಂಡತಿಯನ್ನು ಕಾಣತೆರಳಬೇಕಂತೆ ! ಇವನೊಬ್ಬ ದೊಡ್ಡ ಶ್ರೀಮಂತ ! ’ ಡಾಕ್ಟರರು ಕಣ್ಣು ಕೆಂಪುಮಾಡಿ ಗರ್ಜಿಸಿದರು.

‘ ದೊಡ್ಡವರು ನಮ್ಮ ಕಡೆಗೆ ತಿರುಗಿ ನೋಡುವಂತಿಲ್ಲ! ’ ಒಂದು ದೀರ್ಘನಿಶ್ವಾಸವನ್ನು ಹೊರಚೆಲ್ಲಿ, ಆಸ್ಪತ್ರೆಯಿಂದ ಔಷಧಿಯನ್ನು ತೆಗೆದುಕೊಂಡು ನಂಜ ತನ್ನ ಲಾಯ್‌ನಿನ ಕಡೆಗೆ ತೆರಳಿದ.

* * *

ತೋಟದ ಮ್ಯಾನೇಜರ್ ಕೃಷ್ಣರಾಯರ ಮನೆಯಲ್ಲಿ ಆ ದಿನ ಔತಣ. ರಾಯರ ಬಂಧು-ಮಿತ್ರರು, ನೆಂಟರಿಷ್ಟರು, ಎಲ್ಲರೂ ಆ ದಿನ ರಾಯರ ಮನೆಯಲ್ಲಿ ನೆರೆದಿದ್ದರು. ರಾಯರು ತಮ್ಮ ಮನೆಗೆ ಬಂದ ಅತಿಥಿಗಳನ್ನು ಆದರದಿಂದ ಸತ್ಕರಿಸಿದರು; ಮೃಷ್ಟಾನ್ನದೂಟದಿಂದ ಅವರನ್ನು ಸಂತೃಪ್ತಿಗೊಳಿಸಿದರು.

ಬಂಧುಜನರು ಊಟಮಾಡಲು ಉಪಯೋಗಿಸಿದ ಎಂಜಲು ಎಲೆಗಳನ್ನು ಹೆಕ್ಕಿ ಸೇವಕರು ಮನೆಯ ಹಿಂಬದಿಯ ತೋಟದಲ್ಲಿ ಎಸೆದರು. ಎಂಜಲು ಎಲೆಗಳಲ್ಲಿರುವ ಅನ್ನಕ್ಕಾಗಿ, ಹೊರಗೆ ಹತ್ತೆಂಟು ನಾಯಿಗಳು ಅಲ್ಲಿ ನೆರೆದಿದ್ದುವು. ಎಲೆಗಳನ್ನು ಹೊರಗೆ ತಂದು ತೋಟದಲ್ಲಿ ಎಸೆದೊಡನೆಯೇ, ಆ ಶುನಕಗಳು ಎಂಜಲು-ಅನ್ನಕ್ಕೋಸುಗ ಪರಸ್ಪರ ಕಲಹಗಳನ್ನು ಹೂಡಿದುವು. ಈ ನಾಯಿಗಳ ಜಗಳದ ಕೋಲಾಹಲವು ಆಸ್ಪತ್ರೆಯಿಂದ ಹಿಂದಿರುಗಿ ಬರುತಿದ್ದ ನಂಜನ ಕಿವಿಗಳಲ್ಲಿ ಹರಿಯಿತು. ಅವನು ತನ್ನ ದೃಷ್ಟಿಯನ್ನು ಆ ಕಡೆಗೆ ಹೊರಳಿಸಿದ. ಎಂಜಲುಅನ್ನಕ್ಕಾಗಿ ನಾಯಿಗಳು ಕಾದುತ್ತಿರುವ ಚಿತ್ರವು ಅವನಿಗೆ ಗೋಚರಿಸಿತು.

ಬೆಳಗಿನಿಂದಲೇ ಬರಿದಾಗಿದ್ದ ತುತ್ತಿನ ಚೀಲದೊಳಗಿನಿಂದ ಒಂದು ಸ್ವರವು ಹೊರಟಿತು. ಆದರೆ ಒಂದು ಸಂಶಯ:‘ಎಂಜಲು ಅನ್ನವನ್ನು ತಿನ್ನುವುದು ಹೇಗೆ ? ಹೇಸಿಗೆ ’–ಆದರೆ ಈ ಭಾವನೆಯು ಅವನಲ್ಲಿದ್ದುದು ಒಂದು ಕ್ಷಣದ ತನಕ ಮಾತ್ರ. ಹಸಿವೆಯ ಗರ್ಜನೆಯೇ ಬಲವಾಯಿತು. ಹೇಗಾದರೂ ತುತ್ತಿನ ಚೀಲವನ್ನು ತುಂಬಬೇಕು; ಎಂಜಲನ್ನವಾದರೆ ಅದೇ ಸಾಕು; ಹೇಗಾದರೂ ದೇಹದಲ್ಲಿ ಜೀವ ಉಳಿದರೆ ಸಾಕು !

ಅವನು ನಾಯಿಗಳ ಗುಂಪಿಗೆ ಸೇರಿದ. ಎಂಜಲುಎಲೆಗಳಲ್ಲಿದ್ದ ಅನ್ನ, ತಿಂಡಿಗಳನ್ನು ತೆಗೆದು ಒಂದು ಎಲೆಯಲ್ಲಿ ಸಂಗ್ರಹಿಸಿದ. ಆ ಎಂಜಲು ಅನ್ನವನ್ನು ತೆಗೆದು ತನ್ನ ಕಂಬಳಿಯಲ್ಲಿ ಕಟ್ಟಿದುದಾಯಿತು. ಅವನ ಈ ಕೃತ್ಯವು ಶುನಕಸೇನೆಯಲ್ಲಿ ನಿರಾಶೆಯನ್ನು ಹುಟ್ಟಿಸಿತು. ಪ್ರಾಣಿಗಳು ಅವನ ಸುತ್ತಲೂ ನೆರೆದು ಬೊಗುಳುವುದರ ಮೂಲಕ ತಮ್ಮ ಪ್ರತಿಷೇಧವನ್ನು ಪ್ರಕಟಿಸಿದುವು.

* * *

ಕೊನೆಗೆ ಲಾಯ್‌ನಿಗೆ ತಲುಪಿದುದಾಯಿತು. ಚೆನ್ನಿ ಎದೆನೋವನ್ನು ಸಹಿಸಲಾಗದೆ ತನ್ನ ಹಾಸಿಗೆಯ ಮೇಲೆ ಹೊರಳಾಡುತಿದ್ದಳು. ನಂಜ ತಾನು ತಂದ ಮದ್ದನ್ನು ಆಕೆಗೆ ಕುಡಿಸಿದ. ಅವಳ ಹಾಸಿಗೆಯ ಪಕ್ಕದಲ್ಲಿ ಕುಳಿತು, ತನ್ನ ಆ ದಿನದ ಕತೆಯನ್ನು ನಂಜ ತನ್ನ ಕೈಹಿಡಿದಾಕೆಗೆ ಉಸುರಿದ. ಅವನ ವೃತ್ತಾಂತವನ್ನು ಕೇಳಲು ಆಕೆಯ ಕಣ್ಣುಗಳಲ್ಲಿ ಅಶ್ರುಕಣಗಳು ತುಳುಕಿದುವು. ಒಂದು ನಿಟ್ಟುಸಿರು ಅವಳ ಎದೆಯಿಂದ ಹೊರಚೆಲ್ಲಿತು. ‘ಬಡವರಾಗಿ ಹುಟ್ಟಬಾರದು !’ ಎಂಬ ಮಾತುಗಳು ಮಾತ್ರ ಆಕೆಯ ತುಟಿಗಳಿಂದ ಉದುರಿದುವು.

ಚೆನ್ನಿ ಆ ದಿನ ಯಾವ ಆಹಾರವನ್ನೂ ತೆಗೆದುಕೊಳ್ಳಲಿಲ್ಲ. ನಂಜ ಕುದಿಸಿಕೊಟ್ಟ ಬಿಸಿನೀರನ್ನು ಮಾತ್ರ ಕುಡಿದು, ತನ್ನ ಹಸಿವೆಯನ್ನು ಅಡಗಿಸಿಕೊಂಡಳು. ರಾಯರ ಮನೆಯಿಂದ ದೊರಕಿದ ಎಂಜಲುಅನ್ನದಿಂದ ನಂಜ ತನ್ನ ಹಸಿವೆಯನ್ನು ಇಲ್ಲದಾಗಿಸಿದ. ಬಡವನಾಗಿ ಹುಟ್ಟಿದ ತಪ್ಪಿಗಾಗಿ,– ಎಂಜಲು ಅನ್ನದಿಂದಲಾದರೂ, ಹೊಟ್ಟೆಯನ್ನು ತುಂಬಿಸಿಕೊಳ್ಳಬೇಕು !

ಮಡದಿಯ ಹಾಸಿಗೆಯ ಪಕ್ಕದಲ್ಲಿ ಕುಳಿತು ಆಕೆಯನ್ನು ಉಪಚರಿಸುವುದರಲ್ಲಿ ನಂಜ ಆ ದಿನವನ್ನು ವಿನಿಯೋಗಿಸಿದ.

*   *   *

ಬೆಳಕು ಹರಿಯಿತು. ನಂಜನನ್ನು ರೂಲಿಗೆ ಕರೆಯಲು ಮೇಸ್ತ್ರಿ ಬೆಳಗ್ಗೆ ನಂಜನ ಕೋಣೆಗೆ ಬಂದ. 'ನಂಜಾ, ರೂಲಿಗೆ ಹೊರಡು!' ಎಂದು ಕೂಗಿದುದಾಯಿತು. ಆದರೆ ಅವನ ಕೂಗಿಗೆ ಒಳಗಿನಿಂದ ನಂಜ 'ಓ' ಕೊಡಲಿಲ್ಲ. ಮೇಸ್ತ್ರಿ ಕದಗಳನ್ನು ದೂಡಿದ. ಒಳಗಿನಿಂದ ಅಗಣಿ ಹಾಕಿರಲಿಲ್ಲ. ಆದುದರಿಂದ ಕದಗಳು ಬಿಚ್ಚಲ್ಪಟ್ಟುವು. ಒಳಗೆ ಆ ದಂಪತಿಗಳಿಬ್ಬರೂ ಒಂದೇ ಹಾಸಿಗೆಯ ಮೇಲೆ ಮಲಗಿದ್ದರು.

'ನಂಜಾ, ಏಳು ಹೊತ್ತಾಯಿತು! ಮೇಸ್ತ್ರಿ ನಾಲ್ಕಾರು ಸಲ ನಂಜನನ್ನು ಕೂಗಿದ.

ಆದರೆ ನಂಜ ತನ್ನ ನಿದ್ದೆಯಿಂದ ಎಚ್ಚರುಗೊಳ್ಳಲಿಲ್ಲ. ಮೇಸ್ತ್ರಿಗೆ ದಿಗಿಲಾಯಿತು. ನಂಜನ ಎದೆಯನ್ನು ಅವನು ಮುಟ್ಟಿ ನೋಡಿದು ದಾಯಿತು. ಅದು ಆಲಿಕಲ್ಲಿನಂತೆ ತಣ್ಣಗಾಗಿದ್ದಿತು. ಚೆನ್ನಿಯ ದೇಹದಲ್ಲಿಯೂ ಉಸಿರಿರಲಿಲ್ಲ.

ನಂಜನ ತೋಳುಗಳು ಮಡದಿಯನ್ನು ತಬ್ಬಿಕೊಂಡಿದ್ದುವು. ಒಬ್ಬರ ಕೆನ್ನೆ ಇನ್ನೊಬ್ಬರದಕ್ಕೆ ತಗಲಿದ್ದುವು. ಆ ದಂಪತಿಗಳ ಜೀವಗಳು ಈ ಭೂಮಿಯನ್ನು ಬಿಟ್ಟು ಶೋಕಸಂತಾಪಗಳಿಲ್ಲದ ಕಡಲಾಚೆಗೆ ತಮ್ಮ ಪಯಣವನ್ನು ಬೆಳಸಿದ್ದುವು. ಇಲ್ಲಿಯ ನರಕದ ಬಾಳನ್ನು ಪರಿತ್ಯಜಿಸಿ ಅತೀತಕ್ಕಿರುವ ಆಹ್ವಾನವನ್ನು ಸ್ವೀಕರಿಸಲು ಅವರು ಮರುಗಿರಲಾರರು!

ಡಾಕ್ಟರರು ಬಂದು ಹೆಣಗಳನ್ನು ಪರಿಶೋಧಿಸಿದರು. ಅವರ ಪರಿಶೋಧನೆಯಿಂದ ಈ ಸಂಗತಿಗಳು ವ್ಯಕ್ತವಾದುವು: ಚೆನ್ನಿಯು ಅಸುವನ್ನು ನೀಗಿದುದು ಮಲಿಜ್ವರ ಮತ್ತು ನ್ಯುಮೋನಿಯ ಗಳಿಂದ. ನಂಜನ ಸಾವಿಗೆ ಕಾರಣವು ಹೃದಯಸ್ತಂಭನವಾಗಿದ್ದಿತು. ತೋಟದ ಕೂಲಿಯ ಆಳುಗಳು ಆ ಎರಡು ದೇಹಗಳನ್ನೂ ಮಣ್ಣುಗೂಡಿಸಿದರು.

— ಉರಿ —

★

೧ನೆಯ ನಾಲಗೆ

ಕಂಡವರು: ಶ್ರೀ. ಕುಲಕರ್ಣಿ ದತ್ತಾತ್ರೇಯ

ಎಲ್ಲಿಯೊ ಹುಟ್ಟಿ, ತನ್ನ ಶಕ್ತಿಯ ಉನ್ಮಾದದಲ್ಲಿ ಸಾಗರದಲ್ಲಿ ಆನೆತೆರೆಗಳನ್ನು ಎಬ್ಬಿಸಿ, ನಿಧಾನವಾಗಿ ಸಾಗಿದ ನೌಕೆಗಳನ್ನು ಹೊರಳಿಸಿ ಮುಳುಗಿಸಿ, ಇಡಿಯ ವಿಶ್ವವನ್ನು ವ್ಯಾಪಿಸಿದ ಮಹಾಸಾಗರವನ್ನು ಕೆಲಕಾಲ ನಡುಗಿಸಿ, ತಾರುಣ್ಯದ ಸೊಕ್ಕಿನಿಂದ ಕಾಡಿನಲ್ಲಿ ನುಗ್ಗಿ ಮರಗಳನ್ನು ಉರುಳಿಸಿ ಕಿಚ್ಚಿಟ್ಟು, ಮೃಗಗಳನ್ನು ಕಿಚ್ಚಿಗೆ ಆಹುತಿಯಾಗಿಟ್ಟು, ತೃಪ್ತಿಹೊಂದದೆ ಕಲ್ಲುಬಂಡೆಯ ಅಡಿಯಲ್ಲಿ ಮುದಿಮರಗಳ ಆಶ್ರಯದಲ್ಲಿ ಬೆಳೆದ ಸುಕುಮಾರ ಹೂಗಳ ಕತ್ತನ್ನು ಮುರಿದು, ಸಿಕ್ಕಿದುದನ್ನು ತೂರುತ್ತ ಸಾಗುವ ಬಿರುಗಾಳಿಯು, ತನ್ನ ಶಕ್ತಿಕುಂದಿದಕಾಲದಲ್ಲಿ ಮೆಲ್ಲಗೆ ಚಿಗುರು ಗಳನ್ನು ಕುಲುಕಿಸಿ ಹೂಗಳನ್ನು ನಗಿಸಿ ಅವುಗಳ ಧೂಳಿಸುಗಂಧ ವನ್ನು ಕದ್ದು ರಸಿಕರಿಗೆ ಹಂಚುವುದು. ಈಗ ಅದು ಮಲಯಾನಿಲ!

ಮಲಯಾನಿಲನ ಹಿರಿಯತನವನ್ನು ನೆನೆದರೆ!......

ನಮ್ಮಲ್ಲಿಯೇ ಹುಟ್ಟಿ. ತನ್ನ ಯೌವನದ ಭರದಲ್ಲಿ ದುಡ್ಡಿನ ಬೆಂಬಲದಿಂದ— ಶಾಂತವಾಗಿ ಸಂಸಾರವನ್ನು ಸಾಗಿಸುವ ಬಡ ಕುಟುಂಬಗಳನ್ನು ಮಣ್ಣುಪಾಲುಮಾಡಿ, ಬಡರೈತರ ಕುತ್ತಿಗೆ ಮುರಿದು, ಪವಿತ್ರವಾದ ಬಾಳನ್ನು ಸಾಗಿಸುವ ಎಷ್ಟೋ ರಮಣಿಯರ ಬಾಳನ್ನು ಹಾಳುಗೆಡಹಿ, ಹಿರಿಯತನ ಮರೆಯಾದಾಗ ಅವರಿಂದಲೇ ಕದ್ದು ತಂದುದರಲ್ಲಿಯ ಎರಡು ಕಾಸನ್ನು ಅವರಿಗೇ ಕೊಡುವಂತಹ ಸಿರಿವಂತ ಕರ್ಣನಂತೆ ದಾನಿ!

ಈತನ ಸೊಕ್ಕಿನ ದಿನಗಳನ್ನು ಕಣ್ಣಮುಂದೆ ತಂದರೆ!......

"ಬಡತನ ನನಗಿರಲಿ ಎಂದು ಬೇಡಿಕೊಳ್ಳುವ ವೈರಾಗಿ, ನಿನಗೆ ಬದುಕಬೇಕಾಗಿಲ್ಲವೆ ಭೂಮಿಯಲ್ಲಿ? ನಿನ್ನ ವೈರಾಗಿತನದ ಬೂಟಾಟಿಕೆಯ ಮಾತು ಬಡವರನ್ನು ಬಿಕ್ಕರಿಸುವುದಕ್ಕಲ್ಲದೆ ಬೇರೆಯೇತಕ್ಕಿಲ್ಲ! ಸಿರಿವಂತನು ನಿನ್ನ ಕಡೆಗೆ ಹೊರಳಿ ಕೂಡ ನೋಡರು. ಬಡವರ ಬರಿಹೊಟ್ಟೆಯಲಿ ಬೀಳಲಿರುವ ಕಿರುದುತ್ತನ್ನು ನಿನ್ನ ವೈರಾಗ್ಯದ ಬೋಧೆ ಕಸಿದುಕೊಳ್ಳುವುದು. ಬಡವರಿಗೆ ನಿಲುವಾವುದು ಹೇಳಾ ವೈರಾಗಿತಂದೆ!"

—ಕಳವಳದ ಕಣ್ಣಯ್ಯ



ಜೀವನ ಸಂಗ್ರಾಮ ಅರ್ಥಾತ್

ಗ್ರಾಮಸಂಜೀವನ

(ವ್ಯಂಗ್ಯ ಪ್ರಬಂಧ)

ಇಂದು ನಮಗೆ ಹಳ್ಳಿಗಳನ್ನು ಪುನರುಜ್ಜೀವನಗೊಳಿಸಬೇಕಾಗಿದೆ. ಹಳ್ಳಿಗಳು ಉಜ್ಜೀವಿತವಾಗಿದ್ದುವೆಂದೇ ಹಿಂದೆ ನಮ್ಮ ದೇಶ ಸುವರ್ಣಭೂಮಿಯಾಗಿದ್ದಿತು. ಇಂದು ಆ ಸ್ಥಿತಿ ಉಳಿದಿದೆಯೆ? ಇಲ್ಲ! ಆದುದರಿಂದಲೆ ಇದ್ದ ನಾಗರಿಕತೆಯನ್ನೆಲ್ಲ ಹಳ್ಳಿಗಳಲ್ಲಿ ತುಂಬಬೇಕು. ಎಂದರೆ ಹಳ್ಳಿಗಳಲ್ಲಿ ತಗ್ಗು ತೋಡಿ ನಗರಗಳನ್ನು ತುಂಬಬೇಕು!

ಪುರಾತನಕಾಲದ ಸಹಸ್ರಾವಧಿ ವರ್ಷಗಳ ಪ್ರಾರಬ್ಧ—ಅಲ್ಲಲ್ಲ—ಪ್ರಾರಭ್ಯ—ಅಥವಾ, ಕನ್ನಡದಲ್ಲಿಯೆ ಬರೆಯೋಣ; ಯಾಕೆಂದರೆ, ಈಗ ನಾನು ಬರೆಯುವುದು 'ಗ್ರಾಮಸಂಜೀವನ ಎಂದರೆ ಹಳ್ಳಿಗಳ ಹೊಸ ಜೀವನ' ಎಂಬ ವಿಷಯವಾಗಿ. ಎಂದಮೇಲೆ ಹಳ್ಳಿಗರಿಗೂ ತಿಳಿಯುವಂತಹ ಭಾಷೆಯಲ್ಲಿಯೆ ಬರೆಯಬೇಕಲ್ಲವೆ? 'ಪ್ರಥಮ-ಗ್ರಾಸೇ ಮಕ್ಷಿಕಾಪಾತಃ' ಎಂಬಂತೆ ಇಲ್ಲಿಂದಲೆ ನಮ್ಮ ಪ್ರಶ್ನೆಯ ತೊಡಕಿಗೆ ಪ್ರಾರಂಭವಾಯಿತು. ಹಳ್ಳಿಗರ ಭಾಷೆ ಬೇರೆ, ನಾಗರಿಕರ ಭಾಷೆ ಬೇರೆ! ಹಳ್ಳಿಗಳಲ್ಲಿ ಹೊಸತನವನ್ನು ತರುವ ಮುಂಚಿತ, ಅಥವಾ ಹೊಸತನದ ಮೊದಲ ಹೆಜ್ಜೆ ಎಂದು ಹಳ್ಳಿಗರ ಭಾಷೆಯನ್ನು ಸುಧಾರಿಸಬಾರದೇಕೆ? ಇಲ್ಲವಾದರೆ ನಾವು—ಎಂದರೆ ನಾಗರಿಕರು—ಬರೆದದ್ದೆಲ್ಲ ಮುನಿಸಿಪಾಲಿಟಿಯ ಮೇಲೆ ಮಳೆಗರೆದಂತಾದೀತು. ಹಿಂದುಸ್ಥಾನವು ಹಳ್ಳಿಗಳಿಂದ ತುಂಬಿದ ದೇಶ, ಆದ್ದರಿಂದ ನಾಗರಿಕರಿಗಿಂತ ಹಳ್ಳಿಗರ ಸಂಖ್ಯೆ ಬಹಳೇ ದೊಡ್ಡದು; ಅದಕಾಗಿ ನಾಗರಿಕರೇ ಹಳ್ಳಿಗರ ಭಾಷೆಯನ್ನು ಕಲಿಯುವುದು ಸುಲಭ ಮತ್ತು ತೀವ್ರಸಾಧ್ಯವಾದುದು .. ಎಂಬುದೊಂದು ಪಕ್ಷವು ಉಪಸ್ಥಿತವಾಗುವುದು. ಇದಲ್ಲವೆ ತೊಡಕು?

ಭಾಷೆಯ ವಿಷಯ ಕೆಲಹೊತ್ತು ಬದಿಗಿಟ್ಟು, ಗ್ರಾಮಪುನರು-ದ್ಧಾರದ ವಿಷಯವಾಗಿ ವಿಚಾರ ಮಾಡೋಣ. ಪುನರುದ್ಧಾರವು ಅವಶ್ಯವೆಂದು ಎಲ್ಲರೂ ಅಭಿಪ್ರಾಯಪಡುವುದರಿಂದ, ಸದ್ಯಕ್ಕೆ ಹಳ್ಳಿಗಳ ಸ್ಥಿತಿ ಕೆಟ್ಟಿದೆ ಎಂದಂತಾಯಿತು. ಅದಕಾಗಿ ಯಾವ ಯಾವ ವಿಷಯಗಳಲ್ಲಿ ಕೆಟ್ಟಿದೆ ಎಂಬುದನ್ನು ನೋಡೋಣ, ಎಂದರೆ ಯಾವ ಯಾವ ರೀತಿಗಳಲ್ಲಿ ಪುನರುದ್ಧಾರವಾಗಬೇಕಾಗುವು ದೆಂಬುದು ತಾನಾಗಿಯೆ ಹೊಳೆಯುವುದು.

ಮೊದಲಮಾತೆಂದರೆ ಹಳ್ಳಿಗರಿಗೆ ಉತ್ತಮಜೀವನಕ್ಕೆ ಅವಶ್ಯವಿದ್ದ ಆರೋಗ್ಯಜ್ಞಾನವಿಲ್ಲ. ಅದಕಾಗಿ ಪ್ರತಿಯೊಬ್ಬ ಹಳ್ಳಿಗನು ಇಂದು ವೈಯಕ್ತಿಕವಾಗಿ ತನ್ನ ಹಳ್ಳಿಯ ಹೊಲಸಿಗೆ ಹೊಣೆಗಾರನಾಗಿದ್ದಾನೆ. ಈ ಅಜ್ಞಾನವನ್ನು ಹೋಗಲಾಡಿಸಬೇಕು. ಈ ಹೊಣೆಗಾರಿಕೆಯನ್ನು ತಪ್ಪಿಸಬೇಕು. ಇದಕಾಗಿ ನಗರಗಳ ಮಾದರಿಯನ್ನು ಅವನ ಮುಂದಿಡಬೇಕು. ನಗರದ ಸ್ಥಿತಿಯನ್ನು ಬಲ್ಲಿರಾ? ಪ್ರತಿಯೊಬ್ಬ ನಾಗರಿಕನಿಗೆ ಆರೋಗ್ಯಜ್ಞಾನದ ಮೂಲ ಸಂಗತಿಗಳು ಗೊತ್ತಿವೆ. ಅದಕಾಗಿ ಯಾವ ನಾಗರಿಕನೂ ತನ್ನ ನಗರದ ಹೊಲಸಿಗಾಗಿ ಹೊಣೆಗಾರನಾಗುವುದಿಲ್ಲ. ಇಷ್ಟೇಕೆ? ತನ್ನ ಸುತ್ತಲು ಹೊಲಸನ್ನು ಹರಡುವ ತನ್ನ ಅಧಿಕಾರವನ್ನೆ ಅವನು ಬಿಟ್ಟುಕೊಟ್ಟಿದ್ದಾನೆ. ಇಂತಹ ಸಂದರ್ಭದಲ್ಲಿ ಒಮ್ಮೆ ಹೊಲಸಿನ ಆವಶ್ಯಕತೆ ಎನಿಸಿತೆಂದು ತಿಳಿಯೋಣ. ಆಗ ಸಾಂಘಿಕವಾಗಿ ಮುನಿಸಿಪಾಲಿಟಿ ಎಂಬ ಸಂಸ್ಥೆಯನ್ನು ಸಿದ್ಧಪಡಿಸುತ್ತಾನೆ. ಹಳ್ಳಿಗನಿಗೂ ನಾಗರಿಕನಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ ಇದು. ಹಳ್ಳಿಗನಿಗೆ ತನ್ನ ಅಜ್ಞಾನವನ್ನಾಗಲಿ ದುರ್ಗುಣವನ್ನಾಗಲಿ ತಪ್ಪಿಸಿಕೊಳ್ಳುವ ಶಕ್ತಿಯಾಗಲಿ ಉಪಾಯವಾಗಲಿ ಇಲ್ಲವೇ ಇಲ್ಲ; ಆದರೆ ನಾಗರಿಕನು ಮಾತ್ರ ಇಂತಹ ಎಲ್ಲ ಸಂದರ್ಭಗಳಿಗೆ ರಾಮಬಾಣದಂತೆ ಮುನಿಸಿ-ಪಾಲಿಟಿ ಎಂಬ ಶಸ್ತ್ರವನ್ನಿಟ್ಟುಕೊಂಡಿದ್ದಾನೆ; ಪ್ರತಿಯೊಂದು ವ್ಯಕ್ತಿಯ ಪಾಪಶಕ್ತಿಯನ್ನು ಹೊಡೆದೋಡಿಸುವುದೂ ಸುಲಭವಾಗುವುದು. ಮುನಿಸಿಪಾಲಿಟಿಯ ರೂಪದಿಂದ ಅದೆಲ್ಲ ಒಂದೆಡೆ ಸೇರಿದ್ದರಿಂದ ಅದೊಂದನ್ನು ಹೊಡೆದರೆ ಸಾಕು; ಇಡಿಯ ನಗರದ ಕಿಡಿಗೇಡಿತನವನ್ನು ಹೊಡೆದೋಡಿಸಿದಂತಾಗುವುದು. ತಾತ್ಪರ್ಯವೇನೆಂದರೆ, ಹಳ್ಳಿಗರ ಪುನರುದ್ಧಾರವೆಂದರೆ ಪ್ರತಿಯೊಂದು ಹಳ್ಳಿಗೆ ಒಂದು ಮುನಿಸಿಪಾಲಿಟಿ ಬೇಕು.

ಇನ್ನೊಂದು ಮಾತು: ಎಂದಿನಿಂದಲೂ ನಮ್ಮ ಹಳ್ಳಿಗಳು—ಹೆಸರಾದುದು ಅವುಗಳಲ್ಲಿ ಕಂಡುಬರುವ ಪ್ರಾಮಾಣಿಕತನಕ್ಕಾಗಿ. ಆದರೇನು? ಹಾಯ್! ಹಾಯ್! ಇಂದು ಎಲ್ಲಿದೆ ಆ ಪ್ರಾಮಾಣಿಕತನ? ಪಾಪ! ಬಡಹಳ್ಳಿಗನಿಗೆ ತನ್ನ ಪ್ರಾಮಾಣಿಕತನವನ್ನು ತೋರಿಸಬೇಕಾದರೆ ಸಮೀಪದ—ಅವಶ್ಯಬಿದ್ದರೆ ದೂರದ—ನಗರಕ್ಕೇ ಹೋಗಬೇಕಾಗುವುದು. ಹಳ್ಳಿಗನಾದರೂ ಮಾಡುವನೇನು?

ತನ್ನ ಹುಟ್ಟುಗುಣವಾದ, ತನ್ನಲ್ಲಿ ಹೊಟ್ಟೆತುಂಬಿ ಹೊರಸೂಸ ಬಹುದಾದ ಪ್ರಾಮಾಣಿಕತನವನ್ನು ತೋರಿಸದೆ ಅವನಿಗೆ ಗತ್ಯಂತರ ವಿಲ್ಲ. ಅದಕ್ಕಾಗಿ ಮೇಲಿಂದ ಮೇಲೆ ನಗರಕ್ಕೆ ಹೋಗದೆ ನಡೆಯು ವಂತಿಲ್ಲ. ಹಳ್ಳಿಯ ಪುನರುದ್ಧಾರವನ್ನು ಕೈಕೊಳ್ಳುವುದಾದರೆ ನಾವು ಹಳ್ಳಿಗನಿಗೆ ಹಳ್ಳಿಯಲ್ಲಿಯೆ ತನ್ನ ಪ್ರಾಮಾಣಿಕತನವನ್ನು ತೋರಿಸಲು ಅವಕಾಶವನ್ನುಂಟುಮಾಡಿಕೊಡಬೇಕು, ಅರ್ಥಾತ್ ಪ್ರತಿಯೊಂದು ಹಳ್ಳಿಯಲ್ಲಿ ಕೋರ್ಟು-ಕಚೇರಿಗಳನ್ನು ಸ್ಥಾಪಿಸ ಬೇಕು. ಹಾಗೆ ಮಾಡಿದರೆ ಮೇಲಿಂದಮೇಲೆ ನಗರಕ್ಕೆ ನಡೆದು ಅಲ್ಲಿಯ ಕೋರ್ಟು-ಕಚೇರಿಗಳಲ್ಲಿ ವ್ಯಾಜ್ಯವನ್ನೂ ಸಾಕ್ಷ್ಯವನ್ನೂ ನಡೆಯಿಸುವ ತೊಂದರೆ ತಪ್ಪಿ, ಇದ್ದಲ್ಲಿಯೆ ದಿನಾಲು ಆಣೆಯ ನಿಮಿತ್ತದಿಂದಾದರೂ ದೇವರ ನಾಮವನ್ನು ಸ್ಮರಿಸಿ, ತನ್ನ ಜೀವನದ ಪ್ರಾಮಾಣಿಕತನವನ್ನು (ಅಥವಾ ಪ್ರಾಮಾಣಿಕತನದ ಜೀವನ ವನ್ನು- ಎನ್ನಿರಿ) ಬಯಲಿಗಿಡಬಹುದು.

ಮೇಲಿನಂತೆ ವ್ಯವಸ್ಥೆಯನ್ನು ಮಾಡಿದರೆ ಹಳ್ಳಿಗಳ ಪುನರುದ್ಧಾರ ಕಾರ್ಯದಲ್ಲಿ ಇನ್ನೊಂದು ಲಾಭದ ಸಂಗತಿ ತಾನಾಗಿಯೆ ಜರುಗುವುದೆಂಬುದು ತಮಗೆ ಹೊಳೆದಿರಬಹುದಲ್ಲವೆ? ಸದ್ಯಕ್ಕೆ ನಮ್ಮ ಹಳ್ಳಿಗಳೆಲ್ಲ ಬಯಲಾಗುತ್ತಿವೆ. ಅನೇಕ ಮನೆತನಗಳಲ್ಲಿ ಮಕ್ಕಳು ಇಂದಿನ ನಾಗರಿಕ 'ಶಿಕ್ಷಣ'ವನ್ನು ಪಡೆದು, ಆ ಮೇಲೆ, ಹಳ್ಳಿಯ ಜೀವನಕ್ಕೆ ಬೇಸತ್ತು ನಗರಗಳಲ್ಲಿಯೆ ಉಳಿದುಕೊಳ್ಳು ವರು. ಒಂದು ವೇಳೆ ಕೋರ್ಟು ಕಚೇರಿಗಳನ್ನೆ ಪ್ರತಿಯೊಂದು ಹಳ್ಳಿಯಲ್ಲಿ ಸ್ಥಾಪಿಸಿದರೆ ಈ 'ಸುಶಿಕ್ಷಿತ'ರೆಲ್ಲ ತಂತಮ್ಮ ಹಳ್ಳಿಗಳಿಗೆ ತಿರುಗಬಹುದಲ್ಲವೆ? ಸದ್ಯಕ್ಕೆ ಇವರಿಗೆ ಹಳ್ಳಿಯ ಜೀವನವು ಬೇಜಾರಾಗಲು ಮುಖ್ಯಕಾರಣವೆಂದರೆ ಹಳ್ಳಿಯಲ್ಲಿ ಹೊತ್ತು-ಗಳೆಯುವ ಸಾಧನಗಳಿಲ್ಲ. ವಿಶೇಷವಾಗಿ ವೃತ್ತಪತ್ರಗಳನ್ನು ಓದಲು, ಉದ್ದರಿ ಉಪಾಹಾರ ಮಾಡಲು, ಮಧ್ಯಾಹ್ನದ ಬಿಸಿಲಿ ನಲ್ಲಿ ಶಾಂತವಾಗಿ ನಿದ್ದೆಮಾಡಲು ಕೋರ್ಟು-ಕಚೇರಿಗಳು ನಗರ ಗಳಲ್ಲಿ ಅತ್ಯಂತ ಅನುಕೂಲವಾದ ಸ್ಥಳಗಳಾಗಿರುತ್ತವೆ. ಅವನ್ನು ಹಳ್ಳಿಗಳಿಗೆ ಸ್ಥಳಾಂತರಿಸಿದರೆ ಸಾಕು, ನಮ್ಮ ತರುಣ ಸುಶಿಕ್ಷಿತರೂ ಅವುಗಳೊಡನೆಯೆ ಸ್ಥಳಾಂತರಿಸುವರು. ಹೀಗಾಗಿ ಹಳ್ಳಿಗಳಲ್ಲಿ ಮತ್ತೆ ಚೈತನ್ಯದ ಕಲಕಲ ಪ್ರಾರಂಭವಾಗುವುದು; ಹಳ್ಳಿಗಳ ಜನಸಂಖ್ಯೆಯೂ ಹೆಚ್ಚುವುದು.

ಕ್ಷಮಿಸಬೇಕು; ಆಧುನಿಕರಾದ, ಸುಶಿಕ್ಷಿತರಾದ, ನನ್ನ ತರುಣ ಬಂಧುಗಳೆ, ಕ್ಷಮಿಸಿರಿ ನನ್ನನ್ನು. ತಮ್ಮ ಅವಹೇಳನೆಗಾಗಿ ನಾನು ಈ ಮಾತನ್ನು ಹೇಳುವುದಿಲ್ಲ. ನಮ್ಮ, ನಿಮ್ಮ—ಅದೇಕೆ?—ನಮ್ಮೆಲ್ಲರ ತಾಯ್ನಾಡಾದ ಭರತಭೂಮಿಯ ಭಾವೀ ವೈಭವದ ದೃಷ್ಟಿಯಿಂದ ನಾನೀ ಮಾತನ್ನು ಹೇಳುತ್ತಿರುವೆ. ಹಿಂದೊಮ್ಮೆ ನಮ್ಮ ನಾಡು ಸುವರ್ಣಭೂಮಿಯಾಗಿತ್ತು. ಯಾಕೆ? ಆಗಿನ ನಮ್ಮ ಹಳ್ಳಿಗಳಲ್ಲಿ ಚೈತನ್ಯವಿತ್ತೆಂದು. ಇಂದು ನಮ್ಮ ನಾಡು ಬಡತನದ ಬಯಲುಭೂಮಿಯಾಗಿದೆ. ಯಾಕೆ? ನಮ್ಮ ಹಳ್ಳಿಗಳ ಜೀವನದಲ್ಲಿ ಚೈತನ್ಯವಿಲ್ಲವೆಂದು. ಅರ್ಥಾತ್, ಇನ್ನು ಮುಂದೆ ನಮ್ಮ ನಾಡು ಮತ್ತೊಮ್ಮೆ ಸುವರ್ಣಭೂಮಿಯಾಗಬೇಕಾದರೆ ಹಳ್ಳಿಗಳಲ್ಲಿ ಚೈತನ್ಯ ತುಂಬಬೇಕಲ್ಲವೆ, ಎಂದರೆ ನಗರಗಳನ್ನು ತಗ್ಗು ತೋಡಿ ತುಂಬಬೇಕಲ್ಲವೆ, ಎಂದರೆ . . . .

ಕ್ಷಮೆ ಇರಲಿ. ಏನನ್ನೊ ಬರೆಯಲು ಹೋಗಿ ಮತ್ತೇನನ್ನೊ ಬರೆಯತೊಡಗಿದೆ ಈ ಲೆಕ್ಕಣಿಕೆ. ನೋಡಿದಿರಾ ನಾಗರಿಕ ಸಂಸ್ಕೃತಿಯ ಕಿಡಿಗೇಡಿತನವನ್ನು! ಈ ಹಾಳು ನಾಗರಿಕ ಸಂಸ್ಕೃತಿಯ ಕತೆಯೆ ಹೀಗೆ! ಈ ಸಂಸ್ಕೃತಿಯಲ್ಲಿ ಬುದ್ಧಿಗೆ ಲಗಾಮು ಇಲ್ಲ. ಆದರೆ ಹಳ್ಳಿಗಳಲ್ಲಿ ಬುದ್ಧಿಯ ಹಂಗಾಮೇ ಇಲ್ಲ. ಅದಕಾಗಿಯೆ ಹಳ್ಳಿಗಳ ಪುನರುದ್ಧಾರವನ್ನು ಕೈಕೊಳ್ಳ ಬೇಕಾಗಿದೆ. ಬುದ್ಧಿಯ ಸೊಕ್ಕನ್ನು ಅಡಗಿಸಬೇಕಾಗಿದೆ, ಸಂಕ-ತನದ ಸಂಪತ್ತನ್ನು ನಡೆಯಿಸಬೇಕಾಗಿದೆ. ಸಾರಾಂಶವೇನೆಂದರೆ, ಹಳ್ಳಿಗಳ ಪುನರುದ್ಧಾರ ಮಾಡಬೇಕಾದರೆ ಬುದ್ಧಿಯನ್ನು ಬಿಗಿ ದಿಟ್ಟು ಬಂಧಿಸಬೇಕು. ಯಾಕೆಂದರೆ, ಪರಮಾತ್ಮನಿರುವುದು ಎಲ್ಲರ ಹೃದಯದಲ್ಲಿ, ಬುದ್ಧಿಯಲ್ಲಲ್ಲ. ಹಳ್ಳಿಯ ಜೀವನಕ್ಕೆ ಪರ ಮಾತ್ಮನ ವಾತಾವರಣವು ಸಮಿಾಪಿಸಿದೆ.

ಆದ್ದರಿಂದ, ನಡೆಯಿರಿ. ನಾವೆಲ್ಲರೂ ಹಳ್ಳಿಗೇ ಹೋಗೋಣ, ಬುದ್ಧಿಯ ಜೀವನವನ್ನು ಬಿಡೋಣ. ಹಾಗೆ ಮಾಡುವುದರಿಂದಾ ದರೂ ಲೇಖಗಳಿಗಾಗಿ ಸಂಪಾದಕರ ಕಾಟ ತಪ್ಪೀತು, ನಿಮಗೂ ಓದುವ ಬೇಸರು ತಪ್ಪೀತು.

ರಾಜಯೋಗಿ

★

'ಆನಂದಕಂದ'ರ ಐತಿಹಾಸಿಕ ಕಾದಂಬರಿಯ

ಎರಡನೆಯ ಆವೃತ್ತಿ

ಇದೀಗ ಪ್ರಕಟವಾಗಿದೆ. ಬೆಲೆ ೧ ರೂಪಾಯಿ.

ಬೆಳಗಾಂವಿ ಜಿಲ್ಲೆಯ ಹಲವು ಹೈಸ್ಕೂಲುಗಳಲ್ಲಿ ಇದನ್ನು, ಈ ವರ್ಷ ೪ನೆಯ ತರಗತಿಗೆ ಕನ್ನಡ ಪಠ್ಯಪುಸ್ತಕ ವೆಂದು ನಿಯಮಿಸಲಾಗಿದೆ.

ಬೆಳಗಾಂವಿಯ ಏಜಂಟರು:—

ಶ್ರೀ. ಪ್ಯಾಟೀ ರಾಮರಾಯರು
ಕಥಾಕುಂಜ ಕಾರ್ಯಾಲಯ

ಧಾರವಾಡದ ಮಾರಾಟಗಾರರು:—

ಮನೋಹರ ಗ್ರಂಥಭಾಂಡಾರ
ಮೋಟಾರ್ ಸ್ಟ್ಯಾಂಡಿನ ಬಳಿ

ವಿಮೇದಾರರ ಹಿತಕ್ಕಾಗಿ:—

ಶ್ರೀ. ಎಸ್. ಪಿ. ಭಾಗವತ, ಮುಂಬಯಿ

ಇಂದು ಜೀವವಿಮೆ ಮಾಡಿರುವವರೂ ಮಾಡಬೇಕೆನ್ನುವವರೂ ಬಹುಜನರು. ವಿಮೆಯ ಸಲುವಾಗಿ ಬೇಟೆಯಾಡುತ್ತ ತಿರುಗುವ ಏಜಂಟರಿಗಂತೂ ಲೆಕ್ಕವೆ ಇಲ್ಲ. ಆದರೆ ವಿಮೆಯ ಕಷ್ಟ-ಸುಖಗಳೇನೆಂಬುದರ ತಿಳಿವಳಿಕೆಯಿದ್ದವರು ತೀರ ಕಡಿಮೆ. ಆ ತಿಳಿವಳಿಕೆಯ ಪ್ರಸಾರವೇ ಈ ಲೇಖನದ ಉದ್ದೇಶ.

★

ಯಾವುದೊಂದು ವಿಷಯದ ಬಗ್ಗೆ ಲೇಖನಗಳನ್ನು ಬರೆಯುವುದಕ್ಕೆ ಆ ವಿಷಯವನ್ನರಿತ ತಜ್ಞರೇ ಅರ್ಹರೆಂಬ ತಿಳಿವಳಿಕೆಯು ಸರ್ವಸಾಮಾನ್ಯವಾಗಿ ರೂಢವಾಗಿದೆ; ಹೀಗಿರುವುದು ಸ್ವಾಭಾವಿಕವೇ. ಆದರೆ ವ್ಯವಹಾರದ ಪ್ರತಿಯೊಂದು ವಿಷಯದಲ್ಲಿಯೂ ಇದೇ ತತ್ತ್ವವನ್ನು ಅನುಸರಿಸಿ ನಡೆಯುವ ಹಾಗಿಲ್ಲ. ಕೇವಲ ಶಾಸ್ತ್ರಗಳ ಅಭ್ಯಾಸವು ಕೂಡ— ಅದಕ್ಕೆ ಅನುಭವದ ಜೋಡಿಯಿರದಿದ್ದರೆ— ವಿಶೇಷ ಪ್ರಯೋಜನಕಾರಿಯಾಗದು; ಆಂಗ್ಲಭಾಷೆಯೊಳಗಿನ "Experience is the best teacher" ಎಂಬ ಸೂಕ್ತಿಯಂತೆ ಅನುಭವದಂತಹ ಗುರುವು ಇನ್ನೊಬ್ಬನಿರಲಾರನೆಂಬ ಮಾತು ಸತ್ಯವೇ. ಈ ವಿಚಾರವನ್ನೇ ಅನುಸರಿಸಿ ಪ್ರಸ್ತುತ ಲೇಖನವನ್ನು ಬರೆಯಲೆಳಸಿದೆ.

ಈಗಿನ ಕಾಲದಲ್ಲಿ 'ಜೀವವಿಮೆ'ಯ ವಿಷಯವನ್ನು ಕುರಿತಾದ ಅನೇಕ ಪ್ರಕಾರದ ಲೇಖನಗಳು ಕನ್ನಡದಲ್ಲಿ ಅಲ್ಲದಿದ್ದರೂ ಇತರ ಭಾಷೆಗಳಲ್ಲಿಯ ವೃತ್ತಪತ್ರಗಳಲ್ಲಿಯೂ ಮಾಸಿಕವಹಿಗಳಲ್ಲಿಯೂ ಪ್ರಸಿದ್ಧವಾಗುತ್ತಿರುತ್ತವೆ. ಆದರೆ ಅವುಗಳಲ್ಲಿ ವಿಮಾಕಂಪನಿಗಳ ಜಾಹೀರಾತುಗಳಿಗೆ ಪೋಷಕಗಳಾದ ಲೇಖನಗಳೇ ಹೆಚ್ಚಾಗಿ ಬರುತ್ತಿರುವುದರಿಂದ, ಈ ವಿಮಾಸಂಬಂಧದ ಲೇಖನಗಳನ್ನು ಓದುವ ಪ್ರವೃತ್ತಿಯೇ ವಾಚಕರಲ್ಲಿ ಕಡಮೆಯೆನ್ನಬಹುದು. ಇಂತಹ ಲೇಖನಗಳಿಂದ ವಿಮೇದಾರರಿಗೆ ಬೇಕಾಗುವ ಮಾಹಿತಿಯು ಸರಿಯಾಗಿ ದೊರಕುವ ಸಂಭವವೇ ಇರದುದರಿಂದ, ಅವನ್ನು ಓದುವ ಇಚ್ಛೆಯೂ ಜನರಿಗೆ ಆಗದಿದ್ದರೆ ಅದೇನು ಆಶ್ಚರ್ಯವಲ್ಲ.

ಬರಿಯ "ಜೀವವಿಮೆ"ಯ ಗುಣಗಾನಗಳನ್ನೇ ಮಾಡುತ್ತಿರುವ ಲೇಖನಗಳನ್ನೋದಿ, ವಿಮೇದಾರರನ್ನು ದೊರಕಿಸುವ ಉದ್ಯೋಗ ಮಾಡುವವರಿಗೆ ಮಾತ್ರ ಅತ್ಯಾನಂದವಾಗಬಹುದು. ಆದರೆ ವರ್ತಮಾನಪತ್ರಗಳ ಅಥವಾ ಮಾಸಿಕಪತ್ರಗಳ ವಾಚಕವರ್ಗದಲ್ಲಿ ವಿಮೆಯ ಉದ್ಯೋಗಮಾಡುವವರಿಗಿಂತಲೂ ವಿಮೆ ಇಳಿಸಲಿರುವ ಇಲ್ಲವೆ ವಿಮೆ ಇಳಿಸಿದ ವಿಮೇದಾರರ ಸಂಖ್ಯೆಯು ಸಾವಿರಾರು ಪಾಲು ಹೆಚ್ಚಿಗೆ ಇರಬಹುದಾದುದರಿಂದ, ಇಂತಹ ಜನರಿಗೆ ಉಪಯೋಗಕ್ಕೆ ಬೀಳುವಂತಹ ಮತ್ತು ಅವರ ಪಕ್ಷವನ್ನು ಹಿಡಿದು ಸಾಧಿಸುವಂತಹ ಲೇಖನಗಳು ಪ್ರಸಿದ್ಧವಾಗಲು ತೊಡಗಿದ ವಿನಾ ಯಾವುದೊಂದು ಪ್ರಯೋಜನವೂ ಸಾಧಿಸಲಾರದು.

ನಮ್ಮ ಹಿಂದುಸ್ಥಾನದಲ್ಲಿ ತಾವಾಗಿ ವಿಮೆ ಇಳಿಸುವವರಿಗಿಂತಲೂ ಇನ್ನೊಬ್ಬರ ಒತ್ತಾಯಕ್ಕೆ ಒಳಪಟ್ಟು ವಿಮೆ ಇಳಿಸುವವರ ಸಂಖ್ಯೆಯೇ ಹೆಚ್ಚೆಂದರೆ ಅತಿಶಯೋಕ್ತಿಯಾಗಲಾರದೆಂದು ತೋರುತ್ತದೆ. ಈ ಕಾರಣದಿಂದಲೇ ವಿಮಾ ಕಂಪನಿಯವರಿಗೆ ಏಜಂಟರನ್ನಿಡಬೇಕಾಗುತ್ತದೆ. ವಿಮೆಯ ಬಗ್ಗೆ ಬೇಕಾದ ಯೋಗ್ಯ ಮಾಹಿತಿಯು ಜನರಿಗೆ ದೊರೆತರೆ ಅವರು ತಾವಾಗಿಯೇ ವಿಮೆ ಇಳಿಸುವ ಪ್ರಯತ್ನಕ್ಕೆ ತೊಡಗುವರು. ಆದರೆ ಅಂತಹ ಮಾಹಿತಿಯು ಸರಿಯಾಗಿ ಜನತೆಗೆ ದೊರೆಯುವುದೇ ಇಲ್ಲ. ಕಂಪನಿಗಳೂ ಅದನ್ನು ಪೂರ್ಣವಾಗಿ ಪ್ರಸಿದ್ಧಮಾಡುವುದಿಲ್ಲ, ಮತ್ತು ಏಜಂಟರೂ ತಿಳಿಸುವುದಿಲ್ಲ. ಎಲ್ಲರೂ ತಮ್ಮ ಕೆಲಸಕ್ಕೆ ಬೇಕಾಗುವಷ್ಟೇ ಮಾಹಿತಿಯನ್ನು ಕೊಡುತ್ತಾರೆ. ವಿಮೆಯನ್ನು ಇಳಿಸಲಿಚ್ಛಿಸುವವರಲ್ಲಿ ಅನೇಕರು ಸರಿಯಾದ ಮಾಹಿತಿಯನ್ನು ದೊರಕಿಸುವ ಗೋಜಿಗೇ ಹೋಗುವುದಿಲ್ಲ. ವಿಮಾಕಂಪನಿಯ ಪ್ರಾಸ್ಪೆಕ್ಟಸನ್ನು ಸಹ ಸರಿಯಾಗಿ ಓದದೆ, ಬರಿಯ ಏಜಂಟರು ಹೇಳುವ ಮಾತುಗಳಿಂದಲೇ ಸಮಾಧಾನಪಟ್ಟು ವಿಮೆ ಇಳಿಸುವವರು ಅನೇಕರಿದ್ದಾರೆ.

ಜೀವವಿಮೆಯ ಬಗ್ಗೆ ಸರ್ವಸಾಧಾರಣವಾಗಿ ಸರಿಯಾದ ಮಾಹಿತಿಯನ್ನು ಮಾಡಿಕೊಳ್ಳದೆ ವಿಮೆ ಇಳಿಸಿದರೆ, ಮುಂದೆ ಒಂದು ವೇಳೆ ನಾನಾತರದ ತೊಂದರೆಗಳನ್ನು ಅನುಭವಿಸಬೇಕಾಗಬಹುದೆಂಬುದರ ಕಲ್ಪನೆಯು ಸಹ ಅನೇಕರಿಗಿರುವುದಿಲ್ಲ. ಆದುದರಿಂದ ವಿಮೇದಾರರಿಗೆ ಮತ್ತು ವಿಮೆ ಇಳಿಸಲಿರುವ ವಿಮೇಚ್ಛುಗಳಿಗೆ ಉಪಯೋಗಕ್ಕೆ ಬೀಳುವಂತಹ ಮಾಹಿತಿಯನ್ನು ಈ ಲೇಖನದಲ್ಲಿ ಕೊಡುವ ಸಣ್ಣ ಪ್ರಯತ್ನಮಾಡಲಾಗಿದೆ.

ವಿಮೇಚ್ಛುಗಳು ಎಂದರೆ ವಿಮೆ ಇಳಿಸುವವರು, ಮೊದಲಿಗೆ ಪ್ರಾಸ್ಪೆಕ್ಟಸ (ಮಾಹಿತಿಯ ಪುಸ್ತಕ)ನ್ನು ಲಕ್ಷ್ಯವಿಟ್ಟು ಓದಲೇಬೇಕು. ಏಜಂಟರು ಗಂಟುಬಿದ್ದರೆ, ತಮಗೆ ಸ್ಪಷ್ಟವಾಗದ

ವಿಷಯಗಳನ್ನು ಅವರೊಡನೆ ಚರ್ಚಿಸಿ ತಿಳಿದುಕೊಳ್ಳಬೇಕು. ಕೇಳುವ ಪ್ರಶ್ನೆಗಳಿಗೆ ಏಜಂಟರು ಉತ್ತರಕೊಡಲು ಶಕ್ತರಾಗದಿದ್ದರೆ, ಕಂಪನಿಯಿಂದ ಉತ್ತರವನ್ನು ತರಿಸಿಕೊಡುವಂತೆ ಅವರನ್ನು ಒತ್ತಾಯಪಡಿಸಬೇಕು. ದೊರೆಯುವ ಮಾಹಿತಿಯಿಂದ ಪೂರ್ಣ ಸಮಾಧಾನವಾದ ವಿನಾ ವಿಮೆ ಇಳಿಸುವ ಕೆಲಸವನ್ನು (ಎಂದರೆ ಅರ್ಜಿ, ಡಾಕ್ಟರ ಪರೀಕ್ಷೆ ಮೊದಲಾದುವನ್ನು) ಪ್ರಾರಂಭಿಸ ಬಾರದು.

ತಮ್ಮ ಆಯುಷ್ಯದ ವಿಮೆ ಇಳಿಸುವುದು ಪ್ರತಿಯೊಬ್ಬನ ಆದ್ಯ-ಕರ್ತವ್ಯವೆಂಬುದು ನಿಜವಾಗಿದ್ದರೂ, ವಿಮೇಚ್ಛುಗಳು ಮೊದಲಿಗೆ ತಮ್ಮ ಆರ್ಥಿಕಪರಿಸ್ಥಿತಿಯ ವಿಚಾರಮಾಡಿಯೇ ಮಾಡತಕ್ಕದ್ದು; ಅಲ್ಲದೆ ಮುಂದೆ ಸಹ ಹೊತ್ತಿಗೆ ಸರಿಯಾಗಿ ಪ್ರೀಮಿಯಂ ಹಣ ಸಲ್ಲಿಸುವ ಯೋಗ್ಯತೆಯು ತಮಗೆ ಇರಬಹುದೋ ಇಲ್ಲವೋ ಎಂಬುದನ್ನು ಕೂಡ ವಿಚಾರಮಾಡಲೇ ಬೇಕು. ಯಾಕೆಂದರೆ, ಸರಿಯಾದ ಹೊತ್ತಿಗೆ ಪ್ರೀಮಿಯಂ ಕೊಡಲಾರದವರ ವಿಮೆಯು ಮುಂದೆ ವ್ಯರ್ಥವಾಗುವ ಸಂಭವವಿದೆ.

ವಿಮೇಚ್ಛುಗಳು ಮುಂದೆ ಬರೆದ ವಿಷಯಗಳ ಬಗೆಗೆ ಚೆನ್ನಾಗಿ ವಿಚಾರಮಾಡಿಯೇ ಅನಂತರ ಆರೋಗ್ಯದ ಪರೀಕ್ಷೆ ಮೊದಲಾದುವುಗಳಿಗೆ ಸಿದ್ಧರಾಗುವುದು ಹಿತಕರವು.

೧. ವಿಮೆ ಇಳಿಸಿದ ಮೇಲೆ ಎಷ್ಟು ವರ್ಷಗಳ ಪರಿಯಂತರ ತಾರೀಖು ತಪ್ಪಿಸದೆ ಪ್ರೀಮಿಯಂ ಕೊಡಬೇಕಾಗುವುದೆಂಬುದನ್ನು ಮೊದಲಿಗೆ ತಿಳಿದುಕೊಳ್ಳಬೇಕು. ಈ ಅವಧಿಯು ಕೆಲವು ಕಂಪನಿಗಳಲ್ಲಿ ಮೂರು ವರ್ಷದ್ದೂ ಇನ್ನು ಕೆಲವುಗಳಲ್ಲಿ ಎರಡು ವರ್ಷದ್ದೂ ಇದೆ. ಈ ಅವಧಿಯೊಳಗೆ ಯಾವುದೇ ಒಂದು ಪ್ರೀಮಿಯಮ್ಮನ (ಅದು ವರ್ಷದ್ದಾಗಲಿ ಆರುತಿಂಗಳಿನದಾಗಲಿ ಮೂರು ತಿಂಗಳಿನದಾಗಲಿ) ಕಂತುಕೊಡದೆ ತಪ್ಪಿಸಿದರೂ, ವಿಮೆಯ ಪಾಲಿಸಿಯು ರದ್ದಾಗಿ, ಅದನ್ನು ಪುನಃ ಚಾಲು ಮಾಡುವುದಕ್ಕೆ ಸರ್ವಸಾಧಾರಣವಾಗಿ ಆರೋಗ್ಯದ ದಾಖಲೆ, ಡಾಕ್ಟರರ ಸರ್ಟಿಫಿಕೇಟು ಮೊದಲಾದ ನಾನಾತರದ ತೊಂದರೆಗಳಿಗೆ ವಿಮೇದಾರರು ಒಳಗಾಗಬೇಕಾಗುತ್ತದೆ.

೨. ಮುಂದೆ ಒಂದು ವೇಳೆ ತಾರೀಖು ತಪ್ಪಿದರೆ, ಎಷ್ಟು ದಿನಗಳ ತನಕ ದಂಡ ಇಲ್ಲವೆ ಬಡ್ಡಿಯನ್ನು ಕೊಟ್ಟು ಪ್ರೀಮಿಯಂ ತುಂಬಲಿಕ್ಕೆ ಬರಬಹುದೆಂಬುದನ್ನು ತಿಳಿದುಕೊಳ್ಳಬೇಕು.

೩. ಬೋನಸ್ (ಎಂದರೆ ಲಾಭದ ರಕಮು) ನ ಬಗ್ಗೆ ನಿಃಸಂದಿಗ್ಧವಾದ ಸ್ಪಷ್ಟ ಮಾಹಿತಿಯನ್ನು ದೊರೆಕಿಸಬೇಕು. ಯಾಕೆಂದರೆ, ಈ ಲಾಭದ ರಕಮಿನ ವಿಷಯಕ್ಕೆ ಜನರಲ್ಲಿ ತಪ್ಪು ತಿಳಿವಳಿಕೆಗಳುಂಟು. ಈ ಮಾಹಿತಿಯನ್ನು, ಬೇಕೆಂತಲೆ ಕೇಳಿದ ಹೊರತು ಏಜಂಟರಾಗಲೀ ಕಂಪನಿಯವರಾಗಲೀ ಸ್ಪಷ್ಟವಾಗಿ ಕೊಡುವುದಿಲ್ಲ. ಲಾಭದ ರಕಮನ್ನು ಪ್ರೀಮಿಯಮ್ಮನಲ್ಲಿ ವಜಾ ಮಾಡಿ, ಉಳಿದ ಹಣ ತುಂಬಲಿಕ್ಕೆ ಬರುತ್ತದೆಂದು ತಿಳಿಯುವವರು ಅನೇಕರಿದ್ದಾರೆ. ಆದರೆ ವಸ್ತುಸ್ಥಿತಿಯು ಹಾಗಿಲ್ಲ. ಲಾಭದ ಹಣವು ಠರಾಯಿಸಿದ ಕೆಲವು ವರ್ಷಗಳನಂತರವೇ ದೊರಕುವುದಿರುತ್ತದೆ.

೪. ವಿಮಾಪಾಲಿಸಿಯನ್ನು ಒತ್ತಿಯಾನಿ ಇಟ್ಟುಕೊಂಡು ವಿಮಾ ಕಂಪನಿಯವರು ತಮ್ಮ ಉಮೇದ್ವಾರರಿಗೆ ಸಾಲಕೊಡುತ್ತಾರೆಂಬುದು ಬಹುಶಃ ಎಲ್ಲರಿಗೂ ತಿಳಿದ ವಿಷಯವೇ ಸರಿ. ಇದರ ಬಗ್ಗೆ ಏಜಂಟರೂ ಹೇಳುತ್ತಿರುತ್ತಾರೆ. ಆದರೆ ಯಾವ ಹೊತ್ತಿಗೆ ಎಷ್ಟು ಸಾಲವು ದೊರೆಯಬಹುದೆಂಬುದು ಮಾತ್ರ ಸಹಜವಾಗಿ ತಿಳಿಯುವ ವಿಷಯವಲ್ಲ. "Surrender Value ಎಂದರೆ ಸಾಲ ಕೇಳುವ ಕಾಲದ ವಿಮಾಪಾಲಿಸಿಯ 'ಬಿಡು ಬೆಲೆ' (ಎಂದರೆ ವಿಮೆಯ ಕರಾರನ್ನು ನಿಲ್ಲಿಸಿದರೆ ದೊರೆಯುವ ಪಾಲಿಸಿಯ ಬೆಲೆಯ ರಕಮು) ಯ ಕೆಲವೊಂದು ಭಾಗದ ಪರಿಯಂತರ ಸಾಲವು ದೊರೆಯುವುದು" ಎಂಬುದರ ಅರ್ಥವು ಸರ್ವಸಾಮಾನ್ಯವಾಗಿ ಎಲ್ಲ ವಿಮೇದಾರರಿಗೂ ತಿಳಿಯುವುದು ಶಕ್ಯವಿಲ್ಲ. "ಸಾಲವು ದೊರೆಯುವುದು" ಎಂಬ ವಾಕ್ಯದ ಅರ್ಥವು "ಬೇಡಿದಷ್ಟು ಸಾಲವು ದೊರೆಯುವುದು" ಎಂದು ಸರ್ವಥಾ ಅಲ್ಲ. ಆದುದರಿಂದ ಈ ವಿಷಯದ ಬಗ್ಗೆ ಪೂರ್ಣ ಚರ್ಚೆಮಾಡಿ ತಿಳಿದುಕೊಳ್ಳುವುದು ಅತ್ಯವಶ್ಯವಿದೆ.

೫. ವಿಮಾಕಂಪನಿಯ ಕಡೆಯಿಂದ ಸಾಲತಕ್ಕೊಳ್ಳುವ ಪ್ರಸಂಗ ಬಂದರೆ ಆ ಬಗ್ಗೆ ಕಂಪನಿಯ ಶರ್ತುಗಳು ತಮ್ಮ ಪರಿಸ್ಥಿತಿಗೆ ಅನುಕೂಲವಾಗಿವೆಯೋ ಪ್ರತಿಕೂಲವಾಗಿವೆಯೋ ಎಂಬುದನ್ನು ಪೂರ್ಣ ವಿಚಾರ ಮಾಡತಕ್ಕದ್ದು. ಯಾಕೆಂದರೆ, ಸಾಲ ತಕ್ಕೊಂಡ ಮೇಲೆ, ಪಾಲಿಸಿಯ 'ಬಿಡುಬೆಲೆ' (Surrender Value) ಯು ಕಡಮೆ ಅಥವಾ ಇಲ್ಲದಂತಾಗುವುದರಿಂದ, ಮುಂದೆ ಪ್ರೀಮಿಯಂ ಮತ್ತು ಬಡ್ಡಿ ಸಹ, ತಾರೀಕುಗಳನ್ನು ತಪ್ಪದೇ ತುಂಬಬೇಕೆಂಬ ನಿಯಮವು ಇದೆ. ಹೀಗೆ ಮಾಡದಿದ್ದರೆ ಪಾಲಿಸಿಯು ರದ್ದಾಗುವುದು. ಸಾಲ ತಕ್ಕೊಂಡ ಮೇಲೆ ಮುಂದೆ ಎಷ್ಟು ವರ್ಷಗಳ ವರೆಗೆ ಪ್ರೀಮಿಯಂ ಮತ್ತು ಬಡ್ಡಿ ಸಹ, ತಾರೀಕು ವಿರಾದೇ ಕೊಡಬೇಕಾಗುವುದೆಂಬದರ ಬಗ್ಗೆ ಯೋಗ್ಯವಾದ ಮಾಹಿತಿಯನ್ನು ದೊರಕಿಸುವುದು ಅವಶ್ಯವಾದದ್ದು. ಒಂದುವೇಳೆ ತಾರೀಕು ತಪ್ಪಿಹೋಗಿ ಪಾಲಿಸಿಯು ರದ್ದಾದರೆ, ಅದನ್ನು ತಿರುಗಿ ಚಾಲೂ ಮಾಡುವುದಕ್ಕೆ ಏನು ಮಾಡಬೇಕಾಗುವುದೆಂಬುದನ್ನೂ, ಕಂಪನಿಯ ಡಾಕ್ಟರರ ಕಡೆಯಿಂದ ಪುನಃ ಮೆಡಿಕಲ್ ಸರ್ಟಿಫಿಕೇಟು (ಆರೋಗ್ಯದ ದಾಖಲೆ) ದೊರಕಿಸುವ ಪ್ರಸಂಗ ಬಂದರೆ, ಮತ್ತು ಹೀಗೆ ಪುನಃ ದೊರಕಿಸಿದ ಸರ್ಟಿಫಿಕೇಟು ಸಮಾಧಾನಕಾರಕವಿರದಿದ್ದರೆ, ಪಾಲಿಸಿಯನ್ನು ತಿರುಗಿ ಚಾಲೂ ಮಾಡಲಿಕ್ಕೆ ಬರುವುದೋ ಅಥವಾ ಅದು ರದ್ದಾಗಿಯೇ ಬಿಡುವುದೋ— ಎಂಬುದನ್ನೂ ತಿಳಿದುಕೊಳ್ಳಬೇಕು. ಈ ವಿಷಯವು ಬಹಳ ಮಹತ್ವದ್ದಿದೆ.

೬. ಸಾಲತಕ್ಕೊಂಡ ವಿಮೇದಾರರ ಕಡೆಯಿಂದ ಮುಂಗಡವಾಗಿ ಬಡ್ಡಿ ವಸೂಲುಮಾಡುವ ಅನ್ಯಾಯದ ಪದ್ಧತಿಯು ಕೆಲವು ಕಂಪನಿಗಳಲ್ಲಿದೆ. ಇದರಬಗೆಗೂ ವಿಚಾರಮಾಡಿ ತಿಳಿದುಕೊಳ್ಳಬೇಕು. ವಿಮಾಕಂಪನಿಗೆ ಮುಂಗಡವಾಗಿ ಬಡ್ಡಿ ವಸೂಲುಮಾಡುವ ಅಧಿಕಾರವು ಯಾವಕಾಯಿದೆಯಿಂದ ದೊರಕಿದೆಯೆಂಬುದು ತಿಳಿಯುವುದಿಲ್ಲ. ಈ ಇಪ್ಪತ್ತನೆಯ ಶತಮಾನದಲ್ಲಿಯೂ ಕೆಲವು ವಿಮಾ-

(೨೧೧ ನೆಯ ಪುಟಕ್ಕೆ ಮುಂದುವರಿದಿದೆ.)

ಕನ್ನಡಪುತ್ರ

ಇಂದು 'ಕರ್ನಾಟಕ' 'ಕನ್ನಡ' ಎಂದು ಹೆಮ್ಮೆಯಿಂದ ಹಿಗ್ಗುವವರನ್ನು ಸಂಕುಚಿತ ದೃಷ್ಟಿಯುವರೆಂದು ಹೇಳುವ ವಿಶ್ವಬಂಧುಗಳು ನಮ್ಮಲ್ಲಿ ಹೆಚ್ಚುಹೆಚ್ಚಾಗಿ ಕಂಡುಬರುತ್ತಿದ್ದಾರೆ. ಅವರೆಲ್ಲರ ವಿಶ್ವಬಂಧುತ್ವ ಏತರ ಮೇಲೆ ಕುಳಿತಿದೆಯೆಂಬುದನ್ನು ಇಲ್ಲಿಯ ಕನ್ನಡಪುತ್ರರ ಕತೆ ಚೆನ್ನಾಗಿ ವಿವರಿಸುವುದು.

★

(ಸಣ್ಣ ಕಥೆ) *

ಶ್ರೀ. 'ರಾಮು'



★

★

ಎಂದಿನಂತೆ ಆ ಸಂಜೆಯೂ ಆ ಉದ್ಯಾನದ ಫಲಾಹಾರ ಮಂದಿರವು ಗಿರಾಕಿಗಳಿಂದ ತುಂಬಿತ್ತು. ಗ್ರಾಮಾಫೋನು ವಿಶ್ರಾಂತಿ ಇಲ್ಲದೆ ಧ್ವನಿಮಾಡುತ್ತಿತ್ತು. ಮೂಲೆಯಲ್ಲಿದ್ದ ಸಣ್ಣದೊಂದು ಮೇಜು ಯಾರ ಗಮನಕ್ಕೂ ಬಂದಿರಲಿಲ್ಲವಾದುದರಿಂದ ಅದು ಖಾಲಿಯಾಗಿತ್ತು. ನಾನು ಅದರ ಹತ್ತಿರ ಕುಳಿತುಕೊಂಡೆನು. ನನ್ನ ಪಕ್ಕದಲ್ಲಿದ್ದ ಇನ್ನೆರಡು ಕುರ್ಚಿಗಳು ತಮ್ಮ ಬಾಹುಗಳಿಂದ ಸ್ವಾಗತವೀಯುತ್ತಿದ್ದರೂ, ಆ ಸ್ವಾಗತದ ಮರ್ಯಾದೆಗೆ ಯಾರೂ ಮನಸ್ಸು ಮಾಡಿರಲಿಲ್ಲ.

ಸ್ವಲ್ಪಹೊತ್ತಿನಲ್ಲಿಯೆ ಆ ಕುರ್ಚಿಗಳಲ್ಲಿಯ ಒಂದರಲ್ಲಿ, ಅಪರಿಚಿತರೊಬ್ಬರು—ಆ ಕುರ್ಚಿಯ ಆದರವನ್ನು ಸ್ವೀಕರಿಸಿ—ಕುಳಿತುಕೊಂಡರು. ಅವರು ಕನ್ನಡಿಗರು.

ನಾವಿದ್ದ ಸನ್ನಿವೇಶಗಳನ್ನು ತಾವು ದಯೆಯಿಟ್ಟು ಕಲ್ಪಿಸಿಕೊಳ್ಳಬೇಕು. ಕರ್ನಾಟಕದಲ್ಲೆಲ್ಲಾ ಸುಪ್ರಸಿದ್ಧವಾದುದು ಆ ಉದ್ಯಾನ. ಅದರಲ್ಲಿಯ ಫಲಾಹಾರ ಮಂದಿರವದು. ಗ್ರಾಮಾಫೋನಿನ ಗದ್ದಲ; ಬಿಳಿಯ ಕಲ್ಲನ್ನು ಹಾಸಿದ ಮೇಜುಗಳು; ಮೇಜಿನ ಸುತ್ತಲೂ ಉಪಾಹಾರವನ್ನು ಸೇವಿಸುತ್ತಿರುವ ಜನರು. ಕರ್ನಾಟಕದ ನಾನಾ ಭಾಗಗಳಿಂದ ಉದ್ಯಾನಕ್ಕೆ ವಿಹಾರಕ್ಕೆ ಬಂದ ಕನ್ನಡಿಗರು ಅಲ್ಲಿ ಫಲಾಹಾರಕ್ಕೆಬಂದು ಕುಳಿತಿದ್ದರು; ತಮ್ಮ ಊರಿನವರು ಅಥವಾ ಊರ ಕಡೆಯವರು ಯಾರಾದರೂ ಸಿಕ್ಕುವರೇನೋ ಎಂಬ ಅಭಿಮಾನದ ಬಣ್ಣವುಳ್ಳ ಕುತೂಹಲದಿಂದ ಸುತ್ತಲೂ ಜನಸಂದಣಿಯನ್ನು ಒಳಹೊಕ್ಕು ನೋಡುತ್ತಿದ್ದರು. ಇವುಗಳ ಮೇಲೆ ಎಲ್ಲವನ್ನೂ ಮರೆಯಿಸುವ ಉಪಾಹಾರಗಳು, ಪಾನೀಯಗಳು ಇತ್ಯಾದಿ.

ನನ್ನ ಪಕ್ಕದಲ್ಲಿ ಬಂದು ಕುಳಿತಿದ್ದವರನ್ನು ನಿಟ್ಟಿಸಿ ನಿಟ್ಟಿಸಿ ನೋಡಿದೆನು. ಅವರು ಉಟ್ಟ ತೊಟ್ಟ ಬಟ್ಟೆಗಳು ನನ್ನ ಮನವನ್ನು ಸೆಳೆದುವು. ಅವುಗಳಲ್ಲಿ ಏನೋ ಒಂದು ವೈಶಿಷ್ಟ್ಯ ಎದ್ದು ಕಾಣುತ್ತಿದ್ದರೂ, ಆ ವೈಶಿಷ್ಟ್ಯವೇನು ಎಂಬುದನ್ನು ಕಂಡುಹಿಡಿಯಲಿಕ್ಕಾಗಲಿಲ್ಲ. ಅಂತು ನನಗೆ ಅದೊಂದು—ಒಂದುಬಗೆಯಿಂದ—ಸೋಜಿಗವೆಂದೇ ಕಂಡುಬಂದಿತು. ಅವರ ಪರಿಚಯವನ್ನು ಹೊಂದುವ ಆಕಾಂಕ್ಷೆಯು ನನ್ನಲ್ಲಿ ಮೂಡಿ, ಅದರ ಸಫಲತೆಗಾಗಿ ನಾನು ಅವರನ್ನು ಕೇಳಿದೆ:

" ತಾವು ಯಾವ ಕಡೆಯವರು ? "

ನನ್ನ ಪ್ರಶ್ನೆಯು ಬಹಳ ಕೀಳುತರಗತಿಯದೆಂಬುದನ್ನು, ಸೂಚಿಸುವ ತಿರಸ್ಕಾರಧ್ವನಿಯಿಂದ ಆ ಅಪರಿಚಿತರು ನುಡಿದರು:

" ಯಾವ ಕಡೆ ! ಯಾವ ಕಡೆಯಾದರೇನು ? ನಾನು ಯಾವ ಕಡೆಯವನೂ ಅಲ್ಲ ! ಕರ್ನಾಟಕದಲ್ಲಿ ಆ ಕಡೆ, ಈ ಕಡೆ, ಎಂಬ ಭೇದವಿಲ್ಲ. ಒಂದು ಅವಿಚ್ಛಿನ್ನ ಪೂರ್ಣತೆ ಇದೆ ಕರ್ನಾಟಕಕ್ಕೆ. ಕರ್ನಾಟಕದ ಘಟನೆಗಳನ್ನು ಪ್ರಸ್ತಾಪಿಸುವಾಗ ಅವುಗಳು ಅಖಿಲ—ಅಖಿಲ ಕರ್ನಾಟಕಕ್ಕೆ ಸಂಬಂಧಪಟ್ಟವುಗಳೇ ಆಗಿರಬೇಕು, ಹಾಗೆಂದು ತಿಳಿದುಕೊಳ್ಳಬೇಕು. ನೀರಿನ ಮೇಲೆ ನೀರು ಹರಡುವಂತೆ ಕರ್ನಾಟಕದಲ್ಲಿ ನಡೆಯುವ ಪ್ರತಿಯೊಂದು ವಿದ್ಯಮಾನವೂ ಕರ್ನಾಟಕಕ್ಕೆಲ್ಲಾ ಪಸರಿಸಬೇಕು. ಇಲ್ಲದಿದ್ದಲ್ಲಿ ಆ ಬಗ್ಗೆ ಮಾತೇ ಕೂಡದು. ಯಾವುದೊಂದು ಪ್ರಾಂತ್ಯದ, ಕಡೆಯ, ಊರಿನ ಸಂಕುಚಿತ ದುರಭಿಮಾನವು ನನಗಿಲ್ಲ ! "

ನನಗೆ ಬಹಳ ಆಶ್ಚರ್ಯವೇ ಆಯಿತು. ಆ ಭಾಗದ ಈ ಭಾಗದ, ಉತ್ತರದ ದಕ್ಷಿಣದ ಪೂರ್ವದ ಪಶ್ಚಿಮದ, ಹಳೆಯಗುಂಪಿನ ಹೊಸಗುಂಪಿನ, ನ ಪಕ್ಷದ ಣ ಪಕ್ಷದ, ಆ ಜಾತಿಯ ಈ ಜಾತಿಯ ಎಂದು ಹುಮ್ಮಸ್ಸಿನಿಂದ ಅಹೋರಾತ್ರಿ ಹೋರಾಡುತ್ತಿರುವ ಈ ಕ್ರಾಂತಿಕಾಲದಲ್ಲಿ, ಪೂರ್ಣವಾದ ಅಖಿಲಕರ್ನಾಟಕದವನೆಂದು, ಪೂರ್ಣ ಕರ್ನಾಟಕದ ಹಿರಿಯ ಹೆಮ್ಮೆಯನ್ನೇ ಹಿಡಿದೆತ್ತಿ, ಒಳವಿಭಾಗಗಳನ್ನೂ ಪಂಗಡಗಳನ್ನೂ ಮರೆತಿರುವ ಕನ್ನಡಿಗನನ್ನು ನಾನು ಕಂಡದ್ದು ಅದೇ ಮೊದಲು. ಅದುವರೆಗೂ ಅರ್ಥವಾಗದಿದ್ದ ಅವರ ಬಟ್ಟೆಗಳ ವೈಶಿಷ್ಟ್ಯವು, ಅವರು ಅಷ್ಟು ಮಾತನಾಡಿದ ಮೇಲೆಯೆ ನನಗೆ ಹೊಳೆದದ್ದು. ಅವರು ಮೈಸೂರಿನ ರುಮಾಲನ್ನೂ

---

* ಒ. ಹೆನ್ರಿಯವರ 'A Cosmopolite in a Cafe' ಎಂಬುದರ ಅನುಸರಣ.

ಧಾರವಾಡದ ಕಸೆ ಅಂಗಿಯನ್ನೂ, ಮಂಗಳೂರಿನವರ ತೆರದ ಪಂಚೆಯನ್ನೂ, ಮದ್ರಾಸಿನ ಕಡೆಯವರಂತೆ ಮೇಲೆ ವಲ್ಲಿಯನ್ನೂ ಧರಿಸಿದ್ದರು.

ನಮ್ರತೆಯಿಂದ ನಾನು ಅವರನ್ನು " ತಮ್ಮ ಹೆಸರೇನು ? " ಎಂದು ಕೇಳಿದೆನು.

" ಈಗ ಮೂರು ವರ್ಷಗಳ ಕೆಳಗೆ ನಾನು ಅಖಿಲಕರ್ನಾಟಕ ಏಕೀಕರಣ ಸೇವಾಶ್ರಮವನ್ನು ಸ್ವೀಕರಿಸಿ, 'ಕನ್ನಡ ಪುತ್ರ' ಎಂದು ನಾಮಕರಣ ಮಾಡಿಕೊಂಡಿದ್ದೇನೆ. ಅದರ ಹಿಂದಿನ— ಪೂರ್ವಾಶ್ರಮದ—ಹೆಸರು, ಕುಲ, ಗೋತ್ರ, ಜಾತಿ, ಮತ, ಊರು, ಭಾಗ, ಕಡೆ ಇವೆಲ್ಲವನ್ನೂ ಮರೆತಿದ್ದೇನೆ " ಎಂದರು, ಕನ್ನಡಪುತ್ರರು.

ನನ್ನ ಕುತೂಹಲವೂ, ಭಕ್ತಿಯೂ, ಶತಗುಣವಾದುವು. ನಾನು ಅವರೊಡನೆ ದೊಡ್ಡ ಸಂಭಾಷಣೆಯನ್ನೇ ಬೆಳೆಯಿಸಿದೆನು. ತಮ್ಮ ಧ್ಯೇಯವು ಅಖಿಲಕರ್ನಾಟಕದ ಏಕೀಕರಣವೆಂದು ಅವರು ಸಾರಿ ಸಾರಿ ಹೇಳಿದರು. ಚೋಟುದ್ದ ಇರುವ ಕರ್ನಾಟಕದಲ್ಲಿ ಒಳಪಂಗಡಗಳಿಗೆ ವಿಭಾಗಗಳಿಗೆ, ಒಳಹೋರಾಟಕ್ಕೆ, ಅಂತಃಕಲಹಕ್ಕೆ ಎಡೆ ಇದ್ದುದಕ್ಕಾಗಿ ಅಧಿಕ ವ್ಯಸನವನ್ನು ಸೂಚಿಸಿದರು. ಅವುಗಳನ್ನೆಲ್ಲಾ ಖಂಡಿಸಿದರು. ಅಖಿಲ ಕರ್ನಾಟಕವನ್ನು ಹಿಡಿದೆತ್ತಿ ತಮ್ಮ ಹಸ್ತದಲ್ಲಿ ಇಟ್ಟುಕೊಳ್ಳುವವರಂತೆ, ಒಂದುತರದ ಆಸಕ್ತಿಯಿಂದ, ಇಂಥ ಚಿಕ್ಕ ಪ್ರದೇಶದಲ್ಲಿ ಇವುಗಳಿಗೆಲ್ಲಾ ಸ್ಥಳವಿದೆಯೇ ಎಂದು ಆಶ್ಚರ್ಯಪಟ್ಟರು. ಸಾಂಗ್ಲಿಯಿಂದ ಉದಕಮಂಡಲದಾಚೆ, ಮಂಗಳೂರಿನಿಂದ ಮದ್ರಾಸಿನ ಹತ್ತಿರ ಹತ್ತಿರದವರೆಗೆ, ಹಕ್ಕಿಯೋಪಾದಿಯಲ್ಲಿ, ಈ ಪ್ರದೇಶವೆಲ್ಲವೂ ಒಂದೇ ಊರಂತೆ ಹಾರಾಡಿದರು. ಮಂತ್ರವಾದಿಯು ಒಂದೊಂದು ಕ್ಷಣಕ್ಕೆ ಒಂದೊಂದು ವಿಧದ ಸಾಮಾನನ್ನು ತನ್ನ ಚೀಲದಿಂದ ತೆಗೆಯುವಂತೆ, ಕನ್ನಡಪುತ್ರರು, ಒಂದೊಂದು ಸಲಕ್ಕೆ ಒಂದೊಂದು ಊರಿನ ವಿವಿಧ ವಿಷಯವನ್ನೆತ್ತಿ ಅವೆಲ್ಲವೂ ಒಂದೇ ಪುರದ ಬೀದಿಗಳೆಂಬಂತೆ, ಮಾತನಾಡಿದರು. ಬೆಂಗಳೂರಿನ ಲಾಲ್‌ಬಾಗು, ಮೈಸೂರಿನ ಲಲಿತಾದ್ರಿ, ಗೇರುಸೊಪ್ಪದ ಜಲಪಾತ, ಧಾರವಾಡದ 'ಜಯಂತಿ' ಸಾಂಗ್ಲಿಯಲ್ಲಿಯ ಶಾಲೆಗಳು, ಮಂಗಳೂರಿನ ತೆಂಗಿನ ಮರಗಳು, ಕಾರವಾರದ ಕಡಲಕರೆ, ಎಲ್ಲವೂ ತಮ್ಮದೆಂಬಂತೆ, ತಾವು ಅವುಗಳೆಲ್ಲದರವರಂತೆ, ಒಡಕಿಲ್ಲದೆ ಹರುಕಿಲ್ಲದೆ, ಭೇದವಿಲ್ಲದೆ, ಪೂರ್ಣವಾದ ಹೆಮ್ಮೆಯಿಂದ, ಸಮಾನ ಮಮತೆಯಿಂದ, ಎಲ್ಲದರ ವಿಷಯಗಳನ್ನೂ ಪ್ರಸ್ತಾಪಿಸಿದರು— ತಮ್ಮ ಮನೆಯ ವಿವಿಧ ಕೊಠಡಿಗಳಲ್ಲಿಯ ವಿಷಯಗಳನ್ನು ಹೇಳುವಂತೆ, ಹೆತ್ತತಾಯಿಯು ತನ್ನ ಎಲ್ಲಾ ಮಕ್ಕಳಲ್ಲೂ ಸಮಾನ ವಾತ್ಸಲ್ಯವಿಡುವಂತೆ. ಅವರು ಆಡಿದ ಮಾತುಗಳನ್ನು ಕೇಳಿದರೆ, ಅವರಿಗೆ ಪತ್ರಬರೆಯುವವರು, " ಕನ್ನಡ ಪುತ್ರರು, ಕರ್ನಾಟಕ " ಎಂದು ವಿಳಾಸ ಬರೆದರೂ, ಆ ಪತ್ರವು ಅವರ ಕೈಸೇರುತ್ತಿತ್ತೆಂದು ತೋರುತ್ತದೆ. ಕರ್ನಾಟಕವು ಜನ್ಮವೆತ್ತಿದಂದಿನಿಂದ, ಸ್ವಜವಾದ, ಶುದ್ಧವಾದ, ಅಂತರ್ವಿಭಾಗದ ಸೋಂಕು ಕೊಂಚಮಾತ್ರವೂ ಇಲ್ಲದ, ಪೂರ್ಣ ಕರ್ನಾಟಕದ ಅಭಿಮಾನವುಳ್ಳ ಪೂರ್ಣ ಕನ್ನಡಿಗನು ಈ ಮಹಾನುಭಾವನೇ, ಈತನೊಬ್ಬನೇ. . ಎಂಬ ದೃಢನಂಬಿಕೆಯು ನನ್ನಲ್ಲಿ ಉತ್ಪನ್ನವಾಯಿತು. ಆದುದರಿಂದಲೇ ಅವರು ಮಾತನಾಡುತ್ತಿರುವಾಗ, ಅಕಸ್ಮಾತ್ ಒಂದು ಒಡಕಿನ, ಒಂದು ಪ್ರಾಂತ್ಯದ ಹೆಮ್ಮೆಯ ಒಂದು ಭಾಗದ ವಾತ್ಸಲ್ಯದ ಕುರುಹು ಕಂಡುಬಂದು, ನನ್ನ ಆ ನಂಬಿಕೆಯನ್ನು ಎಲ್ಲಿ ತಪ್ಪಿಸುತ್ತದೆಯೋ ಎಂಬ ಭಯವೂ ನನ್ನಲ್ಲಿ ತಲೆದೋರಿತು. ಆದರೆ ಆ ತರದ ಶಂಕೆಗೆ ಕಾರಣವೇ ಇರಲಿಲ್ಲ. ಅವರ ಮಾತುಗಳು, ಅಭಿಪ್ರಾಯಗಳು, ಹೆಮ್ಮೆ-ಆನಂದಗಳು, ಅಭಿಮಾನ-ವಿಶ್ವಾಸಗಳು, ಸ್ಫೂರ್ತಿ-ಅಗ್ಗಳಿಕೆಗಳು, ಅಖಿಲ ಕರ್ನಾಟಕದುವೇ ಆಗಿರುತ್ತಿದ್ದುವಲ್ಲದೆ ಒಂದು ಪ್ರಾಂತ್ಯದ, ಒಂದು ಕಡೆಯದರ, ಊರುಮನೆಯದಾಗಿರುತ್ತಿರಲಿಲ್ಲ. "ಅಖಿಲಕರ್ನಾಟಕದ ಹೆಮ್ಮೆಯ ಚರಿತ್ರೆ" ಎಂಬ ಪುಸ್ತಕವನ್ನು ಬರೆದು " ನನ್ನ ಊರಿಗೆ " ಎಂದು ಅರ್ಪಣೆಯನ್ನು ಬರೆದು, ಆಚಾರ-ಬದನೆಕಾಯಿ ಶಾಸ್ತ್ರವನ್ನು ಅನುಸರಿಸಿದ್ದ ಗ್ರಂಥಕರ್ತರು ಕನ್ನಡಪುತ್ರರನ್ನು ಕಂಡಿದ್ದರೆ, ನಾಚಿ ಜುಟ್ಟನ್ನು ಕಚ್ಚಿಕೊಳ್ಳುತ್ತಿದ್ದರು.

(೨೦೯ ನೆಯ ಪುಟದಿಂದ ಮುಂದುವರಿದುದು.)

ಕಂಪನಿಗಳು ಈ ಪದ್ಧತಿಯನ್ನು ಅನುಸರಿಸುವುದು ಅತ್ಯಂತ ಕೆಡಕು ಇದೆ. ಇದರ ಬಗ್ಗೆ ಸದ್ಗೃಹಸ್ಥರಾದರೂ ಸರಕಾರದ ಕಡೆಗೆ ಪ್ರಯತ್ನಮಾಡಿ, ಈ ಕೆಟ್ಟ ಪದ್ಧತಿಯನ್ನು ನಿಲ್ಲಿಸಿದರೆ ಒಳ್ಳೆಯದಾಗುವುದು.

೭. 'Assign' ಎಂದರೆ ಇನ್ನೊಬ್ಬರ ಹೆಸರಲ್ಲಿ ಮಾಡಿದ (ಅದು ಮಕ್ಕಳ ಹೆಸರಲ್ಲಿಯೆ ಆದರೂ) ಪಾಲಿಸಿಗಳ ಮೇಲೆ ಕೆಲವು ಕಂಪನಿಗಳು ಸಾಲವನ್ನು ಕೊಡುವುದಿಲ್ಲವೆಂದು ತೋರುತ್ತದೆ. Assignment (ಹೆಸರಲ್ಲಿ) ಮಾಡದಿದ್ದರೆ ಮುಂದೆ ವಿಮೇದಾರರ ವಾರಸದಾರರಿಗೆ ಕೋರ್ಟಿನಿಂದ Orobate (ಅಧಿಕಾರ ಪತ್ರ) ಮೊದಲಾದುವುಗಳನ್ನು ದೊರಕಿಸುವ ಪ್ರಸಂಗ ಬಂದು ಹಣವನ್ನೂ ಕಾಲವನ್ನೂ ವೃಥಾ ಖರ್ಚುಮಾಡಬೇಕಾಗುತ್ತದೆ. Assign (ಹೆಸರಲ್ಲಿ) ಮಾಡಿದರೆ ಸಾಲ ದೊರೆಯುವುದಿಲ್ಲ. ಹೀಗೆ ಪರಿಸ್ಥಿತಿಯಿರುವುದರಿಂದ ಈ ವಿಷಯದ ಬಗ್ಗೆ ಚೆನ್ನಾಗಿ ತರ್ಕವಿತರ್ಕ ಮಾಡಿ ತಿಳಿದುಕೊಳ್ಳಬೇಕು.

೮. ವಿಮೇದಾರನು ಇನ್ನೊಬ್ಬರ ಬಳಿ ನೌಕರನಿದ್ದರೆ, ಅವನ ಮರಣದನಂತರ ಪಾಲಿಸಿಯ ಹಣವನ್ನು ಪಾವತಿಮಾಡುವ ಮೊದಲು ಮಾಲಕರ ಸರ್ಟಿಫಿಕೇಟನ್ನು ಬೇಡುವ ಅನಾವಶ್ಯಕ ಮತ್ತು ತ್ರಾಸದಾಯಕ ಪದ್ಧತಿಯು ಕೆಲವು ಕಂಪನಿಗಳಲ್ಲಿದೆ. ಈ ಸರ್ಟಿಫಿಕೇಟು ದೊರಕಿಸುವ ಕೆಲಸವು ವಾರಸದಾರರಿಗೆ ಕಷ್ಟತರವಾದುದರಿಂದ, ಇಂತಹ ನೌಕರಿಯಲ್ಲಿರುವವರು ವಿಮೆ ಇಳಿಸುವಮೊದಲು ಯೋಗ್ಯವಿಚಾರದಿಂದ ಕಂಪನಿಯನ್ನು ಆರಿಸಬೇಕು.

ಈ ಮಾಲಕರ ಸರ್ಟಿಫಿಕೇಟಿನ ವಿಷಯವು ಸವಿಸ್ತಾರವಾಗಿ ಮುಂದೆ ಬರುವುದು.

ನಮ್ಮ ಪಕ್ಕಸಲ್ಲಿದ್ದ ಇನ್ನೊಂದು ಕುರ್ಚಿಯನ್ನು ತುಂಬಿಕುಳಿತಿದ್ದ ಆಗಂತುಕನೊಬ್ಬನ ಬರುವಿಕೆಯು ನಮ್ಮಿಬ್ಬರ ಸಂಭಾಷಣೆಯನ್ನು ನಿಲ್ಲಿಸಿ, ನಮ್ಮ ಸನ್ನಿವೇಶಗಳನ್ನು ನಮಗೆ ನೆನಪುಮಾಡಿಕೊಟ್ಟಿತು. ಗ್ರಾಮಾಫೋನು "ರಾಧೇಕೃಷ್ಣ ಬೋಲೊ...." ಎಂಬ ಹಾಡನ್ನು ಹಾಡುತ್ತಿತ್ತು. ಅದು ಮುಗಿದೊಡನೆ ನಮ್ಮ ಪಕ್ಕದಲ್ಲಿದ್ದವನು ಎಲ್ಲರಿಗೂ ಹೆಚ್ಚಾಗಿ ಕೈತಟ್ಟಿ ತನ್ನ ಪ್ರಶಂಶೆಯನ್ನು ಸಲ್ಲಿಸಿದನು. ಆತನು ಸೂಟನ್ನು ಧರಿಸಿ, ಫೆಲ್ಟ್ ಹ್ಯಾಟನ್ನು ಕೈಯಲ್ಲಿ ಹಿಡಿದುಕೊಂಡು ಬಂದು "ಓವಲ್ಟೀನನ್ನು ಕೊಡು" ಎಂದು ಮಾಣಿಗೆ ಹೇಳಿದುದರಿಂದ, ಆತನು ಯಾವಕಡೆಯವನೆಂಬುದು ನನಗೆ ಗೊತ್ತಾಗಲಿಲ್ಲ. ಊಹಿಸುವುದೂ ಕಷ್ಟವೇ ಆಯ್ತು. ನನ್ನ ಹೊಸ ಪರಿಚಯಸ್ಥರಾದ ಕನ್ನಡಪುತ್ರರ ಸತ್ವವನ್ನು ಒರೆಹಚ್ಚುವ ಸಮಯ ಬಂದಿತೆಂದು, ನಾನು ಹೊಸತಾಗಿ ಬಂದು ಕುಳಿತಿದ್ದವರಿಗೆ "ನೀವು ಯಾವ ಕಡೆ—" ಎಂದು ಕೇಳುತ್ತಿರುವಷ್ಟರಲ್ಲಿಯೇ ಕನ್ನಡ ಪುತ್ರರು, ತಮ್ಮ ಮುಷ್ಟಿಯಿಂದ ಮೇಜಿನಮೇಲೆ ಬಲವಾಗಿ ಗುದ್ದಿ, ಕೆಂಪನೆಯ ಕಣ್ಣುಗಳಲ್ಲಿ ಕೋಪವನ್ನು ಕಿಡಿಯಿಡುತ್ತಾ, ನನ್ನ ಪ್ರಶ್ನೆಯನ್ನು ಅಲ್ಲಿಗೇ ನಿಲ್ಲುವಂತೆ ಮಾಡಿ, ನಾನು ಹೂಡಿದ್ದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಅವರ ಮುಷ್ಟಿಪ್ರಹಾರಕ್ಕೆ ಮೇಜಿನ ಮೇಲಿದ್ದ ಲೋಟಾಗಳು 'ಜಣ್' ಎಂದು ನಡುಗಿದುವು. ಕನ್ನಡಪುತ್ರರು ನರಸಿಂಹಾವತಾರವು ಪುನರಪಿ ಆಯ್ತೆಂಬಂತೆ "ಕ್ಷಮಿಸಿ! ನನ್ನ ಸಮಕ್ಷಮದಲ್ಲಿ, ಈ ತರದ ನೀಚಪ್ರಶ್ನೆಯನ್ನು ಉಚ್ಚರಿಸುವುದಕ್ಕೂ ನಾನು ಬಿಡುವುದಿಲ್ಲ. ಯಾವ ಕಡೆಯಿಂದ ಬಂದರೇನು! ಅವರ ವಿಳಾಸದಮೇಲೆ ಅವರ ಯೋಗ್ಯತೆಯನ್ನು ಕಂಡುಹಿಡಿಯುವಿರೇನು? ಇದು ನ್ಯಾಯವೆ? ಸರಿಯೆ? ಇಲ್ಲಿ ಕೇಳಿ. ಹತ್ತಿಯ ಮುಖಕಾಣದ ದಾವಣಗೆರೆಯವರನ್ನು ಬಲ್ಲೆ! ಛತ್ರದ ಮರ ಹದಿನೆಂಟು ಅಡಿಯುಂಟೆಂದು ಹೇಳಿದ ಕಾವೇರಿ ತಟ ನಿವಾಸಿಗಳನ್ನು ಬಲ್ಲೆ. 'ಜಯಂತಿ'ಯೆಂಬುದು ಸಾಂಗ್ಲಿಯ ಮಹಾರಾಣಿಯ ಗಿಳಿಯ ಹೆಸರೆಂದು ಹೇಳಿದ ತರುಣ ಧಾರವಾಡದವರನ್ನೂ ಬಲ್ಲೆ. ಸಮುದ್ರದ ಹೆಸರನ್ನರಿಯದ ಮಂಗಳೂರಿನವರನ್ನೂ ಬಲ್ಲೆ. ಊರು, ಪ್ರದೇಶ, ಪ್ರಾಂತ್ಯದ ಮೇಲೆ ಮನುಷ್ಯನ ಗುಣವನ್ನು ಕಂಡುಹಿಡಿಯುತ್ತೀರಾ? ಸಾಧ್ಯವಿಲ್ಲ. ಕನ್ನಡಿಗನು ಕನ್ನಡಿಗನಾಗಿಯೆ ಇರಲಿ. ಆ ಕಡೆ ಈ ಕಡೆಯವನಾಗಿರುವುದು ಬೇಡ. ಇಂತಹ ಕಡೆಯವನೆಂದು, ಮೊದಲನೆಯ ಮುಖಮುದ್ರೆಯನ್ನು ಮೆತ್ತುವ ಮಾತನ್ನು ಮುಂದಕ್ಕೆ ಮರೆಯಿರಿ" ಎಂದು ಆರ್ಭಟಿಸಿದನು.

ನಾನು ನಮ್ರನಾಗಿ "ದಯವಿಟ್ಟು ಕ್ಷಮಿಸಿರಿ, ಸ್ವಾಮಿ! ತಮಗೆ ಇಷ್ಟು ಕೋಪಬರುತ್ತದೆ ಎಂದು ತಿಳಿದಿದ್ದರೆ, ನಾನು ಆ ಪ್ರಶ್ನೆಯ ಗೊಡವೆಗೇ ಹೋಗುತ್ತಿರಲಿಲ್ಲ. ಕರ್ನಾಟಕದ ಐಕ್ಯತೆಯಲ್ಲಿ, ಪೂರ್ಣತೆಯಲ್ಲಿ, ತಮಗೆ ಇಷ್ಟು ಪ್ರೇಮ-ಶ್ರದ್ಧೆಗಳಿರುತ್ತವೆಂಬುದು ನನಗೆ ತಿಳಿದೂ ಇರಲಿಲ್ಲ. ಅದರ ಒಳವಿಭಾಗದ ಅಂತಃಕಲಹಕ್ಕೆ—ಕಾಲಪುರುಷರಾಗಿ ತಾವು ಕೈಗೆ ಕಂಕಣಕಟ್ಟಿರುವುದನ್ನೂ ಕಾಣಲಿಲ್ಲ. ನನ್ನ ಉದ್ದೇಶವೇ ಬೇರೆ ಇತ್ತು. ಸಾಧಾರಣವಾಗಿ, 'ರಾಧೇಕೃಷ್ಣ ಬೋಲೋ' ಹಾಡನ್ನು ಮೆಚ್ಚುವವರು ಮಿರಜ ಸಾಂಗ್ಲಿ ಕಡೆಯವರಿರಬಹುದೆಂದು ನಾನು ಊಹಿಸಿ, ನನ್ನ ತರ್ಕವು ಸರಿಯೋ ತಪ್ಪೋ ತಿಳಿಯೋಣವೆಂದು ಆ ರೀತಿ ಕೇಳಿದೆನು, ಅಷ್ಟೇ! ಕರ್ನಾಟಕವನ್ನು ಹೋಳುಮಾಡುವುದಕ್ಕಲ್ಲ" ಎಂದು ಕ್ಷಮೆಬೇಡಿದೆನು.

"ಹಾಡು ಚೆನ್ನಾಗಿತ್ತು; ಸಂಗೀತಕಲೆಯನ್ನು ಮೆಚ್ಚಿದೆನು." ಎಂದು ಸೂಟಿನವರು ಹೇಳಿ, ಅನುಮಾನವನ್ನು ಸಂದಿಗ್ಧತೆಯಲ್ಲಿಯೆ ಇರಿಸಿದರು.

ಆ ಜವಾಬು ಕನ್ನಡಪುತ್ರರಿಗೆ ಹೆಚ್ಚು ಹುರುಪನ್ನು ಕೊಟ್ಟಂತೆ ತೋರುತ್ತದೆ. ಅವರು ನನಗೆ, "ನಿಮ್ಮದು ತಪ್ಪು ಅಭಿಪ್ರಾಯ; ಚೌಡಯ್ಯನವರನ್ನು ಹೊಗಳುವ ಸಾಂಗ್ಲಿಯವರಿದ್ದಾರೆ. ಬೇಂದ್ರೆಯವರನ್ನು ಮೆಚ್ಚಿದ ಮಂಗಳೂರಿನವರಿದ್ದಾರೆ. 'ಜಯಂತಿ'ಯನ್ನು ಒಪ್ಪಿದ ಮೈಸೂರಿನವರಿದ್ದಾರೆ. ದಸರೆಗೆ ಮೈಸೂರಿಗೆ ಹೋಗುವ ಸಹಸ್ರಾರು ಜನ ಉತ್ತರಕನ್ನಡಿಗರಿದ್ದಾರೆ. ನಿಮ್ಮದೆಲ್ಲಾ ಅವಿವೇಕತನ. ಕರ್ನಾಟಕ ಬಹಳ ಸಣ್ಣದರೀ. ಒಳವಿಭಾಗಕ್ಕೆ ಜಾಗವೇ ಇಲ್ಲ. ದ್ರಾಕ್ಷೆಯನ್ನು ಕೊಯ್ದು ತಿನ್ನುತ್ತಾರೆಯೆ? ನೋಡಿರಿ; ನಾನು ಬೆಂಗಳೂರು, ಧಾರವಾಡ, ಮಂಗಳೂರು ಈ ಮೂರೂ ಕಡೆ ಮನೆಮಾಡಿದ್ದೇನೆ. ನಮ್ಮ ನಾಡಲ್ಲಿರುವ ಅಂತಃಕಲಹವು ತಪ್ಪಿದ ದಿನವೇ ಕರ್ನಾಟಕವು ಚೆಲುವಾಗುವುದು. ಅಲ್ಲಿಯವರೆಗೂ ಕರ್ನಾಟಕವು ಸಿಡುಬೆದ್ದ ಸುಂದರಿ" ಎಂದರು.

"ನಿಮ್ಮಂತಹ ಶ್ರದ್ಧಾವಂತರಾದ ಏಕೀಕರಣಭಕ್ತರನ್ನು ನಾನು ಇದುವರೆಗೂ ನೋಡಿರಲಿಲ್ಲ. ಆದರೆ, ಆ ಶ್ರದ್ಧೆ ಮಿತಿಮೀರಿದರೆ, ಸ್ವಭಾವವಾಗಿ ಇರಬೇಕಾದ ಊರಿನ, ಪ್ರದೇಶದ, ಮಮತೆ ಮಣ್ಣಾಗುವುದಿಲ್ಲವೆ?" ಎಂದು ಕೇಳಿದೆನು.

ನನ್ನ ಪ್ರಶ್ನೆಗೆ ತಾತ್ಸಾರವೇ ಮದ್ದೆಂಬಂತೆ, ಅವರು ನಿರ್ಲಕ್ಷ್ಯದಿಂದ, "ಅಂಥ ಸ್ವಭಾವವುಳ್ಳ ಪ್ರಾಣಿಗೆ ನಾಯಿ ಎಂದು ಹೆಸರು. ಒಂದೇ ಮನೆಗೆ, ಒಬ್ಬ ಯಜಮಾನನಿಗೆ ಸೇರಿದುವುಗಳಾದಾಗ್ಯೂ, ಅವುಗಳು ತಾವು ಕೂಡುವ ಸ್ಥಳಕ್ಕೆ ಕಚ್ಚಾಡುತ್ತವೆ. ಧಾರವಾಡದವರು, ಮೈಸೂರಿನವರು, ಮಂಗಳೂರಿನವರು, ಮದ್ರಾಸಿನ ಕಡೆಯವರು ಎಲ್ಲರೂ ಒಂದೇ ಕನ್ನಡತಾಯಿಯ ಮಕ್ಕಳು. ಒಂದಲ್ಲಾ ಒಂದು ದಿವಸ ಈ ತರದ ವಿಭಾಗಗಳು ಮಾಯವಾಗುತ್ತವೆ" ಎಂದರು.

"ಆದರೂ, ನಿಮಗೆ ಊರಿನ, ನಿಮ್ಮ ಕಡೆಯ ನವಿರ್ನ ಹೆಮ್ಮೆ, ಆಗುವುದೇ ಇಲ್ಲವೇ, ಎಂದಾದರೂ—ಒಮ್ಮೆ ಕೂಡ—ಆಗುವುದಿಲ್ಲವೇ?" ಎಂದು ಕೇಳಿದೆನು.

"ಎಲ್ಲಿ ನನ್ನ ಊರು? ನನ್ನ ಊರೇ ಇಲ್ಲ! ನನ್ನದು ಕನ್ನಡನಾಡು, ಅಷ್ಟೇ! ಮುಗಿಲಾಕಾರವುಳ್ಳ ಅಖಿಲ ಕರ್ನಾಟಕದವನು ನಾನು. ತಮ್ಮ ಊರಿನ, ಪ್ರಾಂತ್ಯದ, ವಿಭಾಗದ ಪ್ರತಿಷ್ಠೆಗಳನ್ನೇ ಕೊಚ್ಚಿಕೊಂಡು ಭುಜತಟ್ಟುವ ಕನ್ನಡಿಗರನ್ನು ನೋಡಿದ್ದೇನೆ.

ಕೇಳಿರಿ ; ' **ಬೃಂದಾವನ** 'ದಲ್ಲಿ ಕುಳಿತು ಕೊಂಡು ತಮ್ಮ ಊರಿನ ಮುನಿಸಿಪಾಲಿಟಿ ಕೈತೋಟವು ಹೆಚ್ಚು ಅಂದವುಳ್ಳದ್ದೆಂದು ಹರಟಿದ ಉತ್ತರದವರನ್ನು ಬಲ್ಲೆ. ಇದು ' ಕನ್ಯಾರಾಶಿ 'ಯಲ್ವೇ? . . ಎಂದು ಉತ್ತರ ದವರ ಕನ್ನಡವನ್ನು ' ಕನ್ನಡಾಂಗ್ಲೋ ' ಭಾಷೆಯಲ್ಲಿ ಹೀಯಾಳಿಸಿದ ದಕ್ಷಿಣದವ ರನ್ನೂ ಬಲ್ಲೆ. ' ಮಂಗಳೂರು ಸಮುದ್ರದ ನೀರು ಎಷ್ಟೋ ಸಿಹಿ ' ಎಂದು ಹೇಳಿ ಕಾವೇರಿಯ ನೀರಿನ್ನು ಹಂಗಿಸಿದ ಮಂಗ-ಳೂರಿನವರನ್ನೂ ಬಲ್ಲೆ. ' ಕ. . . . ಗ ' ದಂತಹ ಪ್ರಸಿದ್ಧ ಪತ್ರಿಕೆಯ ಸಮಾನವೇ ಆ ' ಪ್ರಬುದ್ಧ ಕರ್ನಾಟಕ ' ಎಂದು ಧಿಟ್ಟತನದಿಂದ ನುಡಿದ ಧಾರವಾಡದವ ರನ್ನೂ ಬಲ್ಲೆ. ಇವರೆಲ್ಲರನ್ನೂ ಹುಚ್ಚ ರೆಂದೇ ಹೇಳಬೇಕು. ಇದೇ, ನೀವು ಕೇಳಿದ ಊರಿನ, ಪ್ರಾಂತ್ಯದ, ವಿಭಾಗದ ಹೆಮ್ಮೆಯ ನುಡಿಗಳು " ಎಂದರು.

ಇಷ್ಟು ಮಾತನಾಡುವ ಹೊತ್ತಿಗೆ ಆ ಮಂದಿರದ ಇನ್ನೊಂದು ಮೂಲೆಯಲ್ಲಿದ್ದವ ರೊಬ್ಬರು, ಕನ್ನಡ ಪುತ್ರರನ್ನು ಗುರುತು ಹಿಡಿದು ಕೈತಟ್ಟಿ ಕರೆದರು. ಕನ್ನಡ ಪುತ್ರರು ನನಗೆ ದೀರ್ಘಪ್ರಣಾಮಗಳನ್ನು ಮಾಡಿ— ಎಷ್ಟು ವಿನಯ ! – ಆ ಕಡೆಗೆ ಹೊರಟರು.

ಅವರು ಆ ಕಡೆಗೆ ಹೊರಟುಹೋದ ನಂತರ ಮಾಣಿಗೆ ಪುನಃ ಕಾಫಿಯನ್ನು ತರಲುಹೇಳಿ, ನಾನು ಯೋಚನಾತರಂಗ ಗಳಲ್ಲಿ ತೇಲಿಕೊಂಡು ಹೋಬೆನು; ' ನನಗೆ ಎಂಥವರ ದರ್ಶನವಾಯ್ತು ! ಅವರು ಅದೆಂತಹ ದೇಶಭಕ್ತರು !! ಇದುವರೆಗೂ ನಾನು ವೇಷಧಾರಿಗಳನ್ನೇ ಕಂಡದ್ದು. ಆದರೆ ಕನ್ನಡಪುತ್ರರು ಅಂತಹವರಲ್ಲ. ಅವರ ಮಾತು ಗಳೂ, ಅಷ್ಟೇಕೆ, ಅವರು ಉಟ್ಟಿದ್ದ ಏಕೀಕರಣದ ಬಟ್ಟೆಗಳೂ ಅದಕ್ಕೆ ನಿದರ್ಶನ. ಅವರು ಶ್ರದ್ಧಾಳುಗಳು . . . . '

ನನ್ನ ಯೋಚನಾತರಂಗಗಳನ್ನು ಎದುರು ಮೂಲೆಯಿಂದ ಉದ್ಭವಿಸಿಬಂದ ಗಲಾಟೆಯು ಕತ್ತರಿಸಿಬಿಟ್ಟಿತು. ಆ ಕಡೆಗೆ ನೋಡು ತ್ತೇನೆ, ಕನ್ನಡಪುತ್ರರೂ ಅವರನ್ನು ಆ ಕಡೆಗೆ ಕರೆದ ಅವರ ಮಿತ್ರರೂ ಕುಸ್ತಿಯಾಡುತ್ತಿದ್ದಾರೆ. ಜನರೆಲ್ಲರೂ ಅವರ ಕಡೆ ನುಗ್ಗು ತ್ತಿದ್ದಾರೆ. ಕುರ್ಚಿಗಳು ಮೇಜುಗಳು ಉರುಳುತ್ತಿವೆ. ಲೋಟಾ ಗಳು ಏಕ್ಕಾಸಾಲಾಗುತ್ತಿವೆ. ಗಾಜಿನಸಾಮಾನುಗಳು ಒಡೆಯು ತ್ತಿವೆ. ನನಗೆ ಕಾಫಿಯನ್ನು ತಂದುಕೊಟ್ಟ ಮಾಣಿಯನ್ನು ಗಲಭೆಗೆ ಕಾರಣವೇನೆಂದು ವಿಚಾರಿಸಿದೆನು. ಅವನು " ಇಲ್ಲಿ ನಿಮ್ಮ ಹತ್ತಿರ ಮಾತನಾಡುತ್ತಾ ಕುಳಿತಿದ್ದರಲ್ಲಾ, ಅವರು ಅಲ್ಲಿಗೆ ಹೋಗಿ ಕುಳಿತುಕೊಂಡರು. ಅವರ ಹತ್ತಿರದ ಊರಿನವರಾದ ಇನ್ನೊಬ್ಬರು– ಹೂ, ಇಲ್ಲಿಂದ ಅವರನ್ನು ಕೈತಟ್ಟಿ ಕರೆದವರು–ಇಲ್ಲಿದ್ದವರ ಊರಿನ ಮುನಿಸಿಪಾಲಿಟಿಯ ಆಡಳಿತವನ್ನು ಹೀನಾಮಾನಾ ಬೈದರು. ಇವರೂ ಒಬ್ಬ ಕೌನ್ಸಿಲರಂತೆ. ಇವರಿಗೆ– ನಿಮ್ಮ ಜತೆ ಕುಳಿತಿದ್ದವ ರಿಗೆ—ಸಿಟ್ಟು ಬಂದು ' ನನ್ನ ಊರು ಮುನಿಸಿಪಾಲಿಟಿಯನ್ನು ಬಯ್ಯುತ್ತೀಯಾ ? ' ಎಂದು ಅವರ ಕೆನ್ನೆಗೆ ಹೊಡೆದರು " ಎಂದನು.

ದಿವಸ ಎಂಥದಿದ್ದರೂ
ಧಷ್ಟಪುಷ್ಟ ಪ್ರಕೃತಿ ಬೇಕು

ಕೆಲವರಿಗೆ ಬಿಸಿಲಿನ ಬಾಧೆ, ಕೆಲವರಿಗೆ ಚಳಿಯ ಬಾಧೆ, ಮತ್ತೆ ಕೆಲವರಿಗೆ ಮಳೆಗಾಲದಲ್ಲಿ ಮೇಲಿಂದ ಮೇಲೆ ಬೇನೆ—

ಇದಕ್ಕೆ ಕಾರಣವೆಂದರೆ, ಋತುಮಾನದಂತೆ ಹವೆಯಲ್ಲಿಯ ಬದಲಾವಣೆಗಳನ್ನು ಸಹನಮಾಡಲು ಸಾಕಷ್ಟು ಶಕ್ತಿಯಿಲ್ಲದ್ದು.

ಯಾವ ಋತುವಿನಲ್ಲಿಯೂ ಪ್ರಕೃತಿಯನ್ನು ಧಷ್ಟಪುಷ್ಟ ಇಡಲು ಪರ್ಲ ಕಾಢೆಯು ಬಹಳೇ ಹಿತಕರವು. ಮೈ ಮೊದ್ದಾಗುವುದು, ಹಸಿವೆ ಹಾರಿಹೋಗುವುದು, ಹೊಟ್ಟೆ ಹಸನಾಗದ್ದು, ಕೈಕಾಲು ಕಣ್ಣು ಉರಿಯುವುದು, ಹುಳಿಸುಡುವುದು ಮುಂತಾದ ವಿಕಾರಗಳಿಂದ ಬಳಲುವ ಜನರು, ಕೆಲವು ದಿವಸ ಪರ್ಲಕಾಢೆಯನ್ನು ತೆಗೆದುಕೊಂಡರೆ ಅವರ ಮೈನೋವುಗಳು ದೂರವಾಗುವವು, ಹಸಿವೆ ಹತ್ತುವುದು, ಪ್ರಕೃತಿಯು ನೆಟ್ಟಗಾ ಗುವುದು, ಮತ್ತು ಮೈಯಲ್ಲಿ ಹೊಸ ಶಕ್ತಿ, ಹೊಸ ಸ್ಫೂರ್ತಿ, ಹೊಸ ಉತ್ಸಾಹ ಹುಟ್ಟಿದ ಅನುಭವ ಬರುವುದು.

ಪರ್ಲಕಾಢೆಯು ನಿಮ್ಮ ಸನಿಯ ಔಷಧದ ಅಂಗಡಿಯಲ್ಲಿ ಸಿಗುವುದು. ಒಮ್ಮೆ ಸ್ವತಃ ಉಪಯೋಗಿಸಿ ನಿಮ್ಮ ಪ್ರಕೃತಿಯು ಹ್ಯಾಗೆ ನೆಟ್ಟಗೆ ಆಗುವುದು ಎಂಬುದರ ಪ್ರತ್ಯಕ್ಷ ಅನುಭವ ಪಡೆಯಿರಿ.



ಬೆಂಗಳೂರಲ್ಲಿ ನಡೆದ ಬೆಳ್ಳಿಯ ಹಬ್ಬ

‘ ಹಬ್ಬಕ್ಕೆ ಹೋಗಿ ಬಂದವರು ’

★

ಹಬ್ಬದಲ್ಲಿರಬೇಕಾದುದೆಲ್ಲ ಅಲ್ಲಿ ಇದ್ದಿತು. ಸಮಾರಂಭದ ಸಡಗರ, ಉಡಿಗೆ-ತೊಡಿಗೆಯ ಬೆಡಗು, ಊಟ-ತಿಂಡಿಗಳ ಸೊಗಸು, ನಾಟಕ-ನರ್ತನ-ಸಂಗೀತಗಳ ನಲವು, ಇಷ್ಟ-ಮಿತ್ರರ ಒಡನಾಟ ಇವೆಲ್ಲ ಬೆಳ್ಳಿಯ ಹಬ್ಬದ ಕಾಲದಲ್ಲಿ ನಮಗೆ ದೊರೆಯುತ್ತಿದ್ದುವು.

★

ಜೂನ್ ತಿಂಗಳ ಕೊನೆಯ ವಾರದಲ್ಲಿ ಎಲ್ಲಿ ನೋಡಿದಲ್ಲಿ, ಯಾರು ಕಾಣಲು ಸಿಕ್ಕಿದರೂ, ಸಾಹಿತ್ಯಪರಿಷತ್ತಿನ ಬೆಳ್ಳಿಯ ಹಬ್ಬದ ಮಾತೇ. ‘ ಹಬ್ಬಕ್ಕಾಗಿ ನೀವು ಬರುತ್ತೀರಾ? ನಾವಂತೂ ಹೋಗುವವರಿದ್ದೇವೆ. ಅನೇಕ ಜನರು ಹೊರಡುವವರಿದ್ದಾರೆ. ’ ಎಂದುಕೊಂಡು ಹೊರಟವರನೇಕರು. ಬೆಳ್ಳಿಯ ಹಬ್ಬದ ಬೆಳಕಿಗೆ ಮೋಹಪಟ್ಟವರು ಕೆಲವರು. ದೊಡ್ಡಸ್ತನವನ್ನು ತೋರಿಸಿಕೊಳ್ಳಬೇಕೆಂದು ಹೊರಟವರೆಷ್ಟೋ ! ಏನೂ ಇಲ್ಲದೆ-ಎಂದರೆ ಸಾಹಿತಿಗಳಲ್ಲದೆ-ಅಲ್ಲಿ ಏನು ನಡೆಯಬಹುದು ಎಂಬ ಕುತೂಹಲಬುದ್ಧಿಯಿಂದ ಹೊರಟ ಮಹಾಜನರ ಸಂಗಡ ಪುಸ್ತಕವ್ಯಾಪಾರಿಗಳು ಛಾಯಾಚಿತ್ರಕಾರರು ಕೂಡ ಇದ್ದರು. ಒಂದೆರಡು ದಿನ ಮೊದಲು ಹೋದವರೂ ಇದ್ದರು. ಆದರೆ ಜೂನ್ ೨೯ ನೆಯ ತಾರೀಖಿಗೆ ಹೊರಟ ಮಹನೀಯರೇ ಬಹಳ.

ನಿಜವಾಗಿಯೂ ನೀವು ಅಂದು ಸಂಜೆಯ ೮-೨೦ ಕ್ಕೆ ಹೂಬಳ್ಳಿಯ ನಿಲ್ದಾಣಕ್ಕೆ ಬರಬೇಕಿತ್ತು. ಕವಿಗಳು ಕಾರ್ಯಕರ್ತರು ಎನ್ನದೆ, ಹಿರಿಯರು ಹುಡುಗರು ಎಂಬ ಭೇದಭಾವವಿಲ್ಲದೆ, ಒಂದೇ ಕುಟುಂಬದವರಂತೆ ಎಮ್. ಎಸ್. ಎಮ್. ಗಾಡಿಯ ಮೂರನೆಯ ತರಗತಿಯ ಡಬ್ಬಿಗಳಲ್ಲಿ ಹಲವರು ಹುದುಗಿಕೊಂಡಿದ್ದರು. ‘ ಸಾಹಿತ್ಯದಲ್ಲಿಯಷ್ಟೇ ಸಮತೆಯ ಪ್ರಚಾರವಿಲ್ಲ ’ ಎಂಬುದನ್ನು ಸಿದ್ಧಮಾಡಿ ತೋರಲು ಹಿರಿಯ ಸಾಹಿತಿಗಳೆಷ್ಟೋ ಸಾಮಾನ್ಯ ಜನರೊಡನೆ ಕೂಡಿಕೊಂಡಿದ್ದರು. ಅಂತೂ ಭೇದಭಾವವಿಲ್ಲದೆ— ತೋರಗೊಡದೆ— ಒಂದೆಂಬ ವಿಚಾರದಿಂದ ಎಲ್ಲರೂ ಹೊರಟಿದ್ದರು. ಉಗಿಬಂಡಿ ಸಾಹಿತ್ಯದ ಭಾರದಿಂದ ೫ ನಿಮಿಷ ತಡವಾಗಿತ್ತು. ಗಾಡಿಯ ‘ ಧಕಧಕ ಧಡಧಡ ’ ಸಪ್ಪಳದೊಂದಿಗೆ ಸಾಹಿತ್ಯದ ಚರ್ಚೆಯೂ ಅಲ್ಲಲ್ಲಿ ನಡೆದುದು ಕೇಳಬರುತ್ತಿತ್ತು. ನಾಟಕಮಾಡುವ ನಾಟ್ಯವಿಲಾಸಿಗಳು ತಮ್ಮ ಮಾತುಗಳನ್ನು ಗಟ್ಟಿಮಾಡುತ್ತಿದ್ದುದು, ಗಾಡಿಯು ಒಂದೊಂದು ನಿಲ್ದಾಣದಲ್ಲಿ ನಿಂತಾಗ ಆ ಡಬ್ಬಿಗೆ ಜನರನ್ನು ಬರಗೊಡದಂತೆ ತಡೆಯುತ್ತಿತ್ತು. ಬೆಳ್ಳಿಯ ಹಬ್ಬದ ಮೊದಲನೆಯ ಸಭೆ ಮರುದಿನ ಕೂಡುವುದಿದ್ದಿತಾದರೂ, ಅದರ ವೇಧವು ನಾವೆಲ್ಲ ಹೂಬಳ್ಳಿಯಲ್ಲಿರುವಾಗಿನಿಂದಲೆ ಪ್ರಾರಂಭವಾಗಿದ್ದಿತು.

* * *

ಬೆಂಗಳೂರಿನ ಅಥವಾ ಮೈಸೂರಿನ ವಾಸನೆಯು ಹರಿಹರದವರೆಗೂ ಬಂದಿತ್ತು. ಸಾಯಂಕಾಲದ ಊಟದ ಹೊತ್ತಿಗೆ ನಮ್ಮ ಗಾಡಿ ಹರಿಹರಕ್ಕೆ ತಲುಪಿತು. ಹರಿಹರ ಬಂದೊಡನೆಯೆ— ಅದೇನು ಸ್ವಾಭಾವಿಕಶಕ್ತಿಯ ಬಲವೋ, ವಾತಾವರಣದ ಪ್ರಭಾವವೋ ತಿಳಿಯದಂತಾಗುತ್ತದೆ—ದಿನಕ್ಕೆ ಹದಿನೆಂಟು ಸಲ ಚಹ ಕುಡಿಯುವ ಲಿಪ್ಟನ್ ಸಾಹೇಬರ ಭಕ್ತಜನರೂ, ಕಾಫಿಗಾಗಿ ಜೊಲ್ಲುಸುರಿಸತೊಡಗುವರು. ಗೇಣಗಲ ಬಾಯ್ದೆಗೆದು ‘ ಕಾಫಿ ಕೊಡಲೇನು ಸಾರ್ ’ ಎಂದು ಕೇಳುವ ಕಾಫಿ ಅಂಗಡಿಯವನ ಕೂಗು ಹೃದಯಭೇದಕವೂ, ಚಿತ್ತವೇಧಕವೂ ಆಗುವುದು. ‘ ಇಡ್ಲಿ ಇದೇ ಏನ್ ಸ್ವಾಮಿಾ ’ ಎಂದು ಮರುಮಾತನಾಡುತ್ತ ಅನೇಕರು ಅವನು ಕೊಟ್ಟ ಕಾಫಿಯ ಪಾತೇಲಿಯನ್ನು ಕೈಕೊಳ್ಳುತ್ತಿದ್ದರು. “ ಇಡ್ಲಿ, ದೋಸೆ ಬೆಳಿಗ್ಗೆ ಸಿಕ್ಕುತ್ತೆ ಸರ್; ಈಗ ಬೇಕಾದರೆ ಒಳ್ಳೆಯ ಉದ್ದಿನ ಒಡೆಯಿದೆ ಕೊಡ್ಲಾ ” ಎಂದನವ. ತಿನ್ನಾಸಕರಾದ ಧಾರವಾಡ ಕನ್ನಡಿಗರಿಗೆ—ಕೇಳುವುದೊಂದೇ ತಡ, ಒಬ್ಬೊಬ್ಬರು ಒಂದೋ, ಎರಡೋ, ಮೂರೋ-ಆ ಅಂಗಡಿಕಾರನಿಗೆ ಲೆಕ್ಕ ತಪ್ಪಿಸುವ ಹವಣಿಕೆಯಿಂದಲೋ ಏನೋ ಎನ್ನುವಂತೆ—ಹೊಟ್ಟೆ ತುಂಬುವಷ್ಟು ಒಡೆಗಳನ್ನು ತಿಂದ ಜನರೆಷ್ಟೋ ! ಹೊಸಕಾಲದ ಹುಡುಗರು, ಮಡಿಮೈಲಿಗೆ- ವಿಧಿ-ನಿಷೇಧವಿಲ್ಲದೆ ನಿಲ್ದಾಣದ ಅಂಗಡಿಗಳಲ್ಲಿ ರುಚಿಕರವಾದ ರಸವತ್ಸ್ವಾದ ತಿಂಡಿಗಳನ್ನು ತಿಂದು ತೇಗಿದರು. ಧರ್ಮವಂತರು ತಾವು ಕೃಷ್ಣಾಜಿನದಲ್ಲಿ ಮುಚ್ಚಿಕೊಂಡು ತಂದಿದ್ದ ಮನೆಯ ರಸಗಹಿತ ಫಳಾರವನ್ನು, ನಿಲ್ದಾಣದ ಹಸರಿನ ಹಲಗೆಯ ಮರೆಗೆ ನಿಂತು— ಜನರ ಸುಳಿವನ್ನು ತಪ್ಪಿಸಿ— ತಿಂದರು. ‘ ಒಪ್ಪತ್ತು ಉಪವಾಸದಿಂದಿದ್ದರೆ ಸಾಯುವುದಿಲ್ಲ’ ಎಂಬ ಧೈರ್ಯವಿದ್ದವರು, ಒಂದೆರಡು ಬಾಳೆಹಣ್ಣುಗಳನ್ನು ನುಂಗಿ ಕಂಬಳಿಹೊತ್ತುಕೊಂಡು ನೆಮ್ಮದಿಯಾಗಿದ್ದರು. ಕಾಫಿಯ ಮಬ್ಬಿನಿಂದಲೂ, ಒಡೆಗಳ

ವಾಸನೆಯ ಸವಿನೆನಪಿನಿಂದಲೂ, ಮನೆಯ ಫಳಾರದ ಮೋಹದಿಂದಲೂ, ಮರುದಿನದ ಹಬ್ಬವನ್ನು ನೋಡುವ ಉಬ್ಬಿನಿಂದಲೂ, ರಾತ್ರಿಯ ಹತ್ತುಹೊಡೆಯುವುದರೊಳಗಾಗಿ ಅದೆಷ್ಟೋ ಜನರಿಗೆ ಎಚ್ಚರು ತಪ್ಪಿತ್ತು. ಮಲಗಿದಲ್ಲಿಯೆ ನಾಟಕದ ಪಾತ್ರಗಳ ಮಾತುಗಳನ್ನು ಬಡಬಡಿಸುವುದನ್ನು ಕೇಳಿ, ಗಾರ್ಡನು ಒಮ್ಮೆ ಎಚ್ಚರು ಕೊಟ್ಟಿದ್ದನಂತೆ. ಬೆಳಗು ಬಂದಾಗ 'ಯ ಶ ವ ಂ ತ ಪ್ರೂ ರ್' ನಿಲ್ದಾಣವು ನಮ್ಮ ದೃಷ್ಟಿಪಥದಲ್ಲಿತ್ತು. ಪ್ರಾತರ್ವಿಧಿಗಳನ್ನು ತೀರಿಸಿಕೊಂಡು, ಮುಖತೊಳೆದುಕೊಂಡು, ಬೆಂಗಳೂರು ನಿಲ್ದಾಣ ಬರುವ ಮುನ್ನ ಎಲ್ಲರೂ ಸಿದ್ಧರಾಗಿದ್ದರು. ಏಳುಗಂಟೆ, ಬೆಂಗಳೂರು ನಿಲ್ದಾಣ ಬಂದಿತು.

ನಿಲ್ದಾಣದಲ್ಲಿ ಮೈಸೂರಿನ ಸ್ಕೌಟುಗಳು ಒಳ್ಳೆಯ ವ್ಯವಸ್ಥೆಯನ್ನು ಇರಿಸಿದ್ದರು. ಬಂದ ಜನಗಳನ್ನೆಲ್ಲ ಮೆತ್ತಗೆ ಮಾತನಾಡಿಸಿ, ಹೊಸಬರಿಗೆ ಕೂಡ ಅನಾನುಕೂಲವಾಗದಂತೆ, ಎಲ್ಲ ಸಾಮಾನುಗಳನ್ನೂ ಹೊರಗೆ ಸಾಗಿಸಿದರು. ನಿಲ್ದಾಣದ ಹೊರಗೆ ಮೋಟರ್ ಬಸ್ಸುಗಳು ನಮಗಾಗಿ ಕಾದಿದ್ದುವು. ಬೆಂಗಳೂರು ನಗರವು ವಿಸ್ತೀರ್ಣವಾಗಿದೆ. ಊರು ಬಿಡಿಬಿಡಿಯಾಗಿದೆ. ಒಂದು ತುದಿಯಿಂದ ಮತ್ತೊಂದು ತುದಿಯವರೆಗೆ ಹೋಗಲು ಬಸ್ಸಿನ ವ್ಯವಸ್ಥೆ ಇದೆ. ಅಲ್ಲದೆ ವಿಶಿಷ್ಟವಾದ ಕುದುರೆಯ ಬಂಡಿ–ಜಟಕಾ–ಗಳೂ ಇವೆ.

ನಿಲ್ದಾಣ ಬಿಟ್ಟವರು ನಾವು **ಸಜ್ಜನರಾಯರ ಛತ್ರಕ್ಕೆ** ಸರಿಯಾಗಿ ಎಂಟುಗಂಟೆಗೆ ಸೇರಿದೆವು. ಬಂದ ಮಹನೀಯರೆಲ್ಲರಿಗೂ ಇಳಿದುಕೊಳ್ಳಲು ಅಲ್ಲಿಯೆ ವ್ಯವಸ್ಥೆಮಾಡಿದ್ದರು. ಛತ್ರವು ಸಾಕಷ್ಟು ದೊಡ್ಡದಿದೆ. ಎಡಬದಿಗೆ ಕೋಣೆಗಳು, ಅವುಗಳ ಮೇಲೆ ಮಹಡಿ, ಅಲ್ಲಿಯೂ ಕೆಲವು ಕೋಣೆಗಳು. ಹಿಂಭಾಗಕ್ಕೆ ಅಡಿಗೆಮನೆ ಇದೆ. ಹಿತ್ತಲಲ್ಲಿ ಒಂದೆರಡು ಸ್ನಾನದ ಮನೆಗಳೂ ನಲ್ಲಿಗಳೂ ಇವೆ. ಛತ್ರದ ಬಲಕ್ಕೆ ಒಂದು ದೇವಸ್ಥಾನವಿದೆ; ಅದು ಸುಬ್ರಹ್ಮಣ್ಯಂ ದೇವಸ್ಥಾನ. ಸಜ್ಜನರಾಯರು ಜಾತಿಯಿಂದ ಮರಾಟಿಗರಂತೆ, ಅವರ ತಾಯಿಯ ಸ್ಮರಣಾರ್ಥ ಆ ದೇವಸ್ಥಾನವನ್ನು ಕಟ್ಟಿಸಿದರೆಂದು ಅಲ್ಲಿರುವ ಒಂದು ಹೊಸಗನ್ನಡ ಶಿಲಾಶಾಸನದಿಂದ ಗೊತ್ತಾಗುತ್ತದೆ. ನಾವು ಹೋದಾಗ ಹೊರಗಿನ ಗೋಪುರವು ಇನ್ನೂ ಕಟ್ಟುವುದರಲ್ಲಿತ್ತು. ಅದರ ಮಾದರಿ ನಮ್ಮ ಹಂಪೆಯಲ್ಲಿಯ ಗೋಪುರಗಳಂತಿದೆ. ಬಿಡಿದಿನಗಳಲ್ಲಿ ಆ ಛತ್ರದಲ್ಲಿ ಮದುವೆಗಳ ಸಮಾರಂಭಕ್ಕೆ ಅನುಕೂಲವಾಗುವ ವ್ಯವಸ್ಥೆ ಇದೆಯಂತೆ. ಯೋಗ್ಯವಾದ ಸ್ಥಾನ.

ಬೆಳ್ಳಿಯ ಹಬ್ಬಕ್ಕಾಗಿ ಕನ್ನಡಹೊರೆಗಳ ಆಗಮನ

*　　　*　　　*

ಒಂಬತ್ತುಹೊಡೆಯುವುದರೊಳಗಾಗಿಯೆ ಪ್ರಾರಂಭದ ಉತ್ಸವಕ್ಕಾಗಿ ಸಿಂಗಾರಾದ ಜನರು, **ಸರ್ ಪುಟ್ಟಣ್ಣಸೆಟ್ಟರ ಪುರಭವನದೆಡೆಗೆ** ಸಾಗಿದ್ದರು. ಆ ಪುರಭವನವು ಛತ್ರದಿಂದ ಸುಮಾರು ಮುಕ್ಕಾಲು ಮೈಲಿ. ಕಟ್ಟಡವು ಭವ್ಯವಾಗಿದೆ; ಇದರ ಮುಂಭಾಗವು ಗ್ರೀಕ್‌ವಾಸ್ತುಶಿಲ್ಪದ ಮಾಟವನ್ನು ಹೋಲುತ್ತದೆ. ಎದುರು ಕಾರಂಜಿಗಳು ಪುಟನೆಗೆಯುತ್ತಿದ್ದುವು. ಹೊರಗನ್ನೂ ಒಳಗನ್ನೂ ಅಲಂಕರಿಸಿದ್ದರು. ಆ ಭವನದ ಒಳಗೆ ಕಾಲಿಟ್ಟ ಕೂಡಲೆ ಆಹಾ! ಅದೆಂತಹ ದೃಶ್ಯ! ಸಂಸ್ಥಾನದ ಆಶ್ರಯದಲ್ಲಿದ್ದ ಪ್ರತಿಯೊಬ್ಬರೂ ಕರಿಯ ಉದ್ದನೆಯ ಕೋಟು, ಸೊಂಟಕ್ಕೆ ಜರಿಯ ಧೋತರ, ತೊಟ್ಟು ಸುತ್ತಿ ಕುಳಿತಿದ್ದರು. ಅದರಲ್ಲಿಯೂ ವೈಶಿಷ್ಟ್ಯವಂತೆ. ಏಳುನೂರಾ ಐವತ್ತು ರೂಪಾಯಿಗಿಂತ ಕಡಿಮೆ ಸಂಬಳ ಸಿಕ್ಕುವವರೆಲ್ಲ ಹಾಗೆಸೊಂಟಕಟ್ಟಿಕೊಳ್ಳಬೇಕಂತೆ. ಅದಕ್ಕೆ ಮೇಲಿನವರಲ್ಲ ಧೋತರವನ್ನು ಹೆಗಲಮೇಲೆ ಹಾಕಿಕೊಳ್ಳಬೇಕಂತೆ. ಉತ್ತರ ಕನ್ನಡಿಗರಿಗೆ ಎಲ್ಲಕ್ಕೂ ಮನೋಹರವಾಗಿ ಕಾಣುವುದು ಆ ತುರುಬಿನ ರುಮಾಲಿನ ಸಾಗರ. ವರ್ಷವಲ್ಲವೂ ಬೇರೆ ತರದ ಶಿರೋಭೂಷಣ ಹಾಕಿದ್ದವರೂ ಅಂದು ತುರುಬಿನ ರುಮಾಲನ್ನು ತಲೆಗೇರಿಸಿಕೊಂಡು ಬಂದುದು ಅಚ್ಚರಿಯ ವಿಷಯ. ಆ ತುರುಬಿನ ಸಮೂಹವನ್ನು ನೋಡಿ ನಮ್ಮಲ್ಲಿಯವನೊಬ್ಬ ದನಿ ತೆಗೆದ:– "ತುರುಬಿನ ರುಮಾಲು ಹಾಕುವ ತನಕಾ **ದೊರೆಯುದಣ್ಣ ಖುರಚಿ**" ಪರಿಸ್ಥಿತಿಯೂ ಹಾಗೆಯೆ ಇರಬಹುದೇನೊ! ಬೆಂಗಳೂರಲ್ಲಿ ಕೂಡ ಕನ್ನಡ ಹಾಡು ಕೇಳಿಸಬಾರದೆಂದರೇನು? 'ಆಳುವ ಮಹಾಸ್ವಾಮಿಯುವರು' ಬರುವುದಕ್ಕೆ ಮುಂಚಿತ ಅಲ್ಲಿ ಕುಳಿತ ಜನರ ಮನರಂಜನೆಗಾಗಿ ನಾಲ್ಕಾರು ಗಾನ-ದೋಸೆಗಳನ್ನು ಹಚ್ಚಿದರು. ಆದರೆ ಅವೆಲ್ಲವೂ ಹಿಂದಿಯಲ್ಲಿಯೇ ಕಿಲಕಿಲಾಟ ಮಾಡಿದುವು. ಕನ್ನಡದ ಸೊಲ್ಲಿಗಾಗಿ ಹಂಬಲಿಸಿ ಬಾಯ್ದೆರೆದು ಹೋದ ಜನರಿಗೆ ಮೊದಲನೆಯ ತುತ್ತಿಗೇ ನೊಣ. ಆದರೆ ಮುಂದಿನ ಕಾರ್ಯಕಲಾಪಗಳನ್ನು ನೋಡಿ,

ಆನಂದಪಟ್ಟು, ಆ ನೋಣವು ಕುರುಡುನೋಣವಾಗಿ ತಪ್ಪಿ ಬಂದಿದ್ದಿತೆಂದು ತಿಳಿದು ಬಂದಿತು.

ಒಂಬತ್ತು ಹೊಡೆದು ಮೂರು ನಿಮಿಷವಾಗಿರಲಿಕ್ಕಿಲ್ಲ. ಸಭಾಸ್ಥಾನದಲ್ಲಿ ಸ್ತಬ್ಧತೆ ಪಸರಿಸಿತು. ಜನಗಳ ಉತ್ಕಂಠಾಭಾವವನ್ನು ಅವರ ಕುಳಿತೇಳುವುದರಲ್ಲಿ ಕಾಣಬಹುದಾಗಿತ್ತು. ಕೂಡಲೆ ರಾಯಭಟ್ಟಂಗಿಯು ಮಹಾಸ್ವಾಮಿಯವರ ಆಗಮನವನ್ನು ಸೂಚಿಸಿದನು. **ಕರ್ನಾಟಕ ಸಿಂಹಾಸನಾರೂಢರಾದ ಮಹಾಸ್ವಾಮಿಯವರು** ಸಭಾಸ್ಥಾನದಲ್ಲಿ ಕಾಲಿಟ್ಟ ಕೂಡಲೆ, ಜನರು ತಾವಾಗಿಯೇ ಎದ್ದುನಿಂತು ಬಿಟ್ಟಿದ್ದರು. ಕನ್ನಡಿಗರ ರಾಜವೈಭವದ ಬಗೆಯನ್ನು ನಾವಂದು ಅಲ್ಲಿ ಕಾಣಬಹುದಾಗಿತ್ತು. ವಯಸ್ಸಿನ ಮೂಲಕವಾಗಿಯೊ, ಅದೊಂದು ಸಾಂಪ್ರದಾಯಿಕ ಗಾಂಭೀರ್ಯವೊ, ಮಹಾಸ್ವಾಮಿಯವರು ಮಂದವಾಗಿ ಹೆಜ್ಜೆಗಳನ್ನಿಕ್ಕುತ್ತಿದ್ದರು. ಅವರ ಹಿಂದೆ 'ಪುಟ್ಟ ಸ್ವಾಮಿ (ಯುವರಾಜರು)' ಯವರು ಗಂಭೀರವಾಗಿ ನಡೆದಿದ್ದರು. ಮಹಾಸ್ವಾಮಿಯವರು ಕನ್ನಡಿಗರ ಪೊಡಮಡಿಕೆಗಳನ್ನು ಸ್ವೀಕರಿಸುತ್ತ, ತಮಗಾಗಿ ಏರ್ಪಡಿಸಿದ ಭವ್ಯವಾದ ಉಚ್ಚಾಸನದ ಮೇಲೆ ಕುಳಿತರು. ಸಭೆಯಲ್ಲಿಯ ಜನರೂ ಕುಳಿತರು. ವ್ಯಾಸಪೀಠದ ಮೇಲೆ ಮೊದಲು ಬಂದವರು ಶ್ರೀ. ಸಂಪತ್ಕುಮಾರಾಚಾರ್ಯರು. ಅವರು ತಮ್ಮ ಗಂಭೀರವಾದ ಗುಡುಗಿನ ದನಿಯಿಂದ ದೊರೆಗಳವರ ಗುಣಗಾನವನ್ನು ಮಾಡಿದರು. ಅನಂತರ ಸಾಹಿತ್ಯಪರಿಷತ್ತಿನ ಉಪಾಧ್ಯಕ್ಷರೂ ಕನ್ನಡನಾಡಿನ ಸಾಹಿತ್ಯಾಚಾರ್ಯರೂ ಆದ **ರಾಜಸೇವಾಸಕ್ತ** ಶ್ರೀ. ಬಿ. ಎಮ್. **ಶ್ರೀಕಂಠಯ್ಯನವರು**, ಸ್ವಾಗತಭಾಷಣವನ್ನು ಮಾಡಿದರು. ಒಂದು ಬೆಳ್ಳಿಯ ಕರಂಡಕದಲ್ಲಿ ಮಹಾಸ್ವಾಮಿಯವರಿಗೆ ಬಿನ್ನವತ್ತಳೆಯನ್ನೂ ಶ್ರೀಕಂಠಯ್ಯನವರೇ ಸಮರ್ಪಿಸಿದರು. ಮಹಾಸ್ವಾಮಿಯವರು ಬಿನ್ನವತ್ತಳೆಗೆ ಉತ್ತರರೂಪವಾಗಿ ಭಾಷಣ ಮಾಡಿದರು. ಈ ವೇಳೆಯಲ್ಲಿ ಮಾತ್ರ ಸಂಸ್ಥಾನದ ಪದ್ಧತಿಗಳನ್ನರಿಯದವರು ಗುಜುಗುಜು ಮಾತನಾಡುತ್ತಿದ್ದುದು ಕೇಳಬಂತು: "ಮಹಾಸ್ವಾಮಿಯವರು ಎದ್ದುನಿಂತಾಗ ಉಳಿದ ಸಭಾಸದರೂ, ಅವರ ಭಾಷಣ ಮುಗಿಯುವವರೆಗೂ ಎದ್ದು ನಿಲ್ಲಬೇಕೆಂಬುದು ಸ್ವಲ್ಪ ವಿಚಿತ್ರದ ವಿಷಯ." "ಏನೋ ಸಂಸ್ಥಾನದ ಪದ್ಧತಿ ಇರಬಹುದು" ಎಂದವರನೇಕರು. "ಅದಕ್ಕೇ ಸಂಸ್ಥಾನಿಕರಾದವರಿಗೆ ಸಾಮಾನ್ಯಜನತೆಯ ಗೋಳು ಗೊತ್ತಾಗುವುದಿಲ್ಲ ಎನ್ನುವುದು" ಎಂದು ಕೆಲವರು ಗೊಣಗಿದರು. ಆದರೆ ವಿಜಯನಗರದ ವೈಭವವನ್ನು ಪುಸ್ತಕದಲ್ಲಿ ಓದಿ ಅದರ ಆಳತೆಯನ್ನು ತಿಳಿದುಕೊಳ್ಳಲಾಗದೆ ಹೋದವರು, ಇದನ್ನು ಕಂಡು, ಸೂರ್ಪಡಿಮಾಡಿ ಅದರ ಪ್ರಮಾಣವನ್ನು ತಿಳಿಯಬಹುದಾಗಿತ್ತು. ಇರಲಿ, ಮಹಾರಾಜರವರು ತಮ್ಮ ಭಾಷಣದಲ್ಲಿ ಸಾಹಿತ್ಯದ ಬಗೆಗಿರುವ ತಮ್ಮ ಮನೆತನದ ಉಜ್ವಲ ಪರಂಪರೆಯ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಿದರು. ಕನ್ನಡ ಸಾಹಿತ್ಯಕ್ಕೆ ಮಹಾರಾಜರವರಿಂದ ದೊರೆತ ಆಶ್ರಯವು ಅಪಾರವಾಗಿದೆ. ಮಹಾರಾಜರವರು ಅಂದು ಸ್ಪಷ್ಟವಾಗಿ ತಾಯ್ನುಡಿಯಾದ ಕನ್ನಡದಲ್ಲಿ ಭಾಷಣ ಮಾಡಿದಾಗಲೂ, ಕೊನೆಗೆ 'ಸಿರಿಗನ್ನಡಂಗೆಲ್ಗೆ' ಎಂದು ಉದ್ಘೋಷಿಸಿದಾಗಲೂ ಅನೇಕರ ಮೈಮನ ಜುಮ್ಮೆಂದಿತು. ಆದರೆ ಏತಕ್ಕಾಗಿಯೊ ಏನೋ, ಅವರ ಭಾಷಣದ ಪ್ರತಿಗಳು ಮಾತ್ರ ಇಂಗ್ಲಿಷಿನಲ್ಲಿದ್ದುವು. ಒಂಭತ್ತು ಐವತ್ತಕ್ಕೆ ಪ್ರಾರಂಭೋತ್ಸವದ ಕಾರ್ಯಕಲಾಪಗಳು ಮುಗಿದುವು.

*　　*　　*

ಮಧ್ಯಾಹ್ನ ಸೊಗಸಿನ ಊಟವಾಯಿತು. ಕೊಂಚ ತಡವಾಯಿತೇನೋ ನಿಜ; ಹಾಗಾದುದೂ ಒಳ್ಳೆಯದೆ ಆಯಿತು. ಏಕೆಂದರೆ ಬೆಳಗಿನ ಉಪ್ಪಿಟ್ಟು-ಕಾಫಿಗಳು ಊಟವನ್ನು ಬೇಗ ಬಯಸದಂತೆ ಮಾಡಿದ್ದುವು. ಊಟವು ಅಲ್ಲಿಯವರ ರೀತಿಯದೇ ಇತ್ತು. ಅನ್ನ, ಸಾರು, ಪಲ್ಯ, ಪಳಿದ್ಯ, ಚಟ್ನಿ, ಕೋಸಂಬರಿ, ಕಲಸನ್ನ ಇವೆಲ್ಲ ಒಂದರಹಿಂದೊಂದು ಸಾವಕಾಶವಾಗಿ ಬರುತಲಿದ್ದುವು. ಆ ಸಾರಿನ-ಹುಳಿಯ ಮಸಾಲೆಯ ಮೋಹಕ್ಕೆ ಬಿದ್ದವರು, ನಿಜವಾಗಿಯೂ ತಾವು ಮೋಸಹೋದೆವೆಂದು ಮಾತನಾಡಿದರು. ಅಲ್ಲಿಯ ಪದ್ಧತಿಯು ಅರಿವಿಲ್ಲದೆ ಹೊಟ್ಟೆತುಂಬ ಹುಳಿಯನ್ನವನ್ನುಂಡವರು, ಕೊನೆಗೆ ಬಂದ ಹಾಲು-ಚಿರೋಟೀಯನ್ನು ಕಂಡು ಬೆಚ್ಚಿದರು. ಒಳಗೊಳಗೇ ಮರುಗಿದರು. ಅಂತೂ ಯಥಾನುಶಕ್ತಿ ಸೇವನೆಯಾಯಿತು. ಮಧ್ಯಾಹ್ನ ಮೂರೂ ಮೂವತ್ತಕ್ಕೆ **ಶ್ರೀ**ಕೃಷ್ಣರಾಜಪರಿಷನ್ಮಂದಿರದಲ್ಲಿ ಕಾರ್ಯಕ್ರಮ ಪ್ರಾರಂಭವಾಯಿತು. ಕನ್ನಡ ನಾಡಗೀತೆ ಸ್ವಾಗತಗೀತೆಗಳಾದಮೇಲೆ, ಶ್ರೀ. ಡಿ. ವಿ. ಗುಂಡಪ್ಪನವರು ಗ್ರಂಥಪ್ರದರ್ಶನದ ಉದ್ಘಾಟನವನ್ನು ಮಾಡಿದರು. ಸುಮಾರು ಎಂಟುನೂರು ಗ್ರಂಥಗಳೂ, ಹಲವು ಪತ್ರಿಕೆ-ನಿಯತಕಾಲಿಕಗಳೂ ಪ್ರದರ್ಶಿಸಲ್ಪಟ್ಟಿದ್ದುವು. ನಾಲ್ಕುಗಂಟೆಗೆ ಶ್ರೀ. ಕೃಷ್ಣಗಿರಿ ಕೃಷ್ಣರಾಯರು ಗಮಕವನ್ನು ನಡೆಯಿಸಿದರು. ಸಭಾಗೃಹವು ಸಾಕಷ್ಟು ದೊಡ್ಡದಾಗಿರದೆ ಇದ್ದುದರಿಂದ, ಬಹುಜನರು ಸ್ಥಳದೊರೆಯದೆ ನಿರಾಶೆಹೊಂದಿದರು. ಅಂದಿನ ಗಮಕವು ಮನಸ್ಸನ್ನು ಹಿಡಿಯುವಂತಹದಿದ್ದಿತು.

*　　*　　*　　*

ಯಕ್ಷಗಾನವನ್ನು ಕೇಳದೆ ಇದ್ದವರಿಗೆ ಅದೊಂದು ಸುಸಂಧಿ. ಲಂದು ಕೆ. ಮಹಾಬಲನೊಂಪರು ಅವರ ನೇತೃತ್ವದಲ್ಲಿ, ಅವರ ಮಿತ್ರಮಂಡಲದವರು **ಕೃಷ್ಣಸಂಧಾನ** ಪ್ರಸಂಗವನ್ನು ಪ್ರದರ್ಶಿಸಿದರು. ಸಾವಧಾನವಾಗಿ ಮನದಣಿಯುವಂತೆ ಯಕ್ಷಗಾನ ಪ್ರಸಂಗವನ್ನು ಪ್ರದರ್ಶಿಸಬೇಕಾಗಿದ್ದರೆ ಏನಿಲ್ಲೆಂದರೂ ಮೂರು ತಾಸುಗಳ ಅವಧಿ ಬೇಕಂತೆ. ಅಂತಹ ಉತ್ಸವದಲ್ಲಿ ಮೂರು ಮೂರು ತಾಸಿನ ಅವಧಿ ಸಿಕ್ಕುವ ಬಗೆ ಹೇಗೆ? ಯಕ್ಷಗಾನದಲ್ಲಿ ಆಶೆಯಿದ್ದವರು ಅಂದೆಯೆ ರಾತ್ರಿ ಛತ್ರದಲ್ಲಿ ತಮ್ಮ ಮನತಣಿಸಿಕೊಂಡರು. ಸಾಯಂಕಾಲ ಶ್ರೀಸಂಪತ್ಕುಮಾರಾಚಾರ್ಯರ ಸಂಗೀತವಾದ ನಂತರ, **ಶ್ರೀಮಾನ್. ಯಮ್. ಎಸ್. ಕೃಷ್ಣರಾವ್** M. sc ಅವರಿಂದ ನರ್ತನಕಾರ್ಯಕ್ರಮವು ಆಯಿತು. ಅವರ **ನಟರಾಜನರ್ತನ**ವು ಬಹುಜನರ ಮನಸ್ಸನ್ನು ಸೆಳೆಯಿತು.

ನಾಟಕದ ಸಲುವಾಗಿ ರಾತ್ರಿ ಎರಡು ತಾಸುಗಳನ್ನು ಕಾದಿಟ್ಟಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಕಲಾಸಂಘದವರು

‘ವೈದ್ಯನ ಜಾಡ್ಯ’ ‘ನಮ್ಮ ಕಂಪನಿ’ ಎಂಬ ಎರಡು ಏಕಾಂಕಗಳನ್ನೂ, ಧಾರವಾಡದ ನಾಟ್ಯವಿಲಾಸಿಗಳು ಶ್ರೀರಂಗರ ‘ಸಂಧ್ಯಾಕಾಲ’ವನ್ನೂ ಪ್ರದರ್ಶಿಸಿದರು. ಕಲಾಸಂಘದ ನಾಟಿಕೆಗಳಲ್ಲಿ ಶ್ರೀಯುತರಾದ **ರಾಜರತ್ನಂ** ಅವರೂ, ಕಸ್ತೂರಿಯವರೂ ಭಾಗವಹಿಸಿದ್ದರೆಂದಮೇಲೆ ಕೇಳುವುದೇನು? ಉತ್ತರ ಕರ್ನಾಟಕದ ಭಾಷೆಯ ಶೈಲಿಯಲ್ಲಿ ಬರೆದುದರಿಂದ ಸಂಧ್ಯಾಕಾಲವು ಎಷ್ಟರಮಟ್ಟಿಗೆ ಅಲ್ಲಿಯವರ ಮನಹಿಡಿಯಬಹುದೋ. . ಎಂಬ ಸಂಶಯವು ಶ್ರೀರಂಗರಿಗಿತ್ತಂತೆ. ಆದರೆ ಅಂದಿನ ಪ್ರೇಕ್ಷಕವೃಂದವು ನಕ್ಕು ನಕ್ಕು ಪಾತ್ರವರ್ಗದವರನ್ನು ಆಗಾಗ ತಡೆಯುವಂತೆ ಮಾಡುತ್ತಿದ್ದುದು, ಪ್ರೇಕ್ಷಕರ ಮತ್ತು ಪಾತ್ರವರ್ಗದವರ ಸಾಮರಸ್ಯವನ್ನು ಸೂಚಿಸುತ್ತಿದ್ದಿತು. ನಾಟಕದ ಕಾರ್ಯಕ್ರಮವು ಮುಗಿದಾಗ ರಾತ್ರಿಯು ಎರಡು ಗಂಟೆಯಾಯಿತು.

* * * *

ಮರುದಿನ ಎಂದರೆ ಜುಲೈ ೧ನೆಯ ತಾರೀಖಿನ ಬೆಳಗ್ಗೆ, ಪರಿಷತ್ತಿನವರು ಏರ್ಪಡಿಸಿದ ಸಾಹಿತ್ಯ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿದವರಿಗೆ ಪ್ರಶಸ್ತಿಪತ್ರಿಕೆಗಳನ್ನು ಸಲ್ಲಿಸಲಾಯಿತು. ಬಳಿಕ ಇಡಿಯ ಕನ್ನಡನಾಡಿನ ಹಬ್ಬವೆಂದು ತೋರಿಸುವಂತೆ ಆಯಾ ಪ್ರಾಂತದ ಪ್ರತಿನಿಧಿಗಳ ಬೇರೆ ಬೇರೆ ಭಾಷಣ ನಡೆದುವು.

ಅಂದಿನ ಊಟ ಮಾತ್ರ ಕೊನೆಯವರೆಗೆ ನೆನಪು ಉಳಿಯುವಂತಹದಾಯಿತು. ಪರಸ್ಥಳದಿಂದ ಬಂದವರಿಗೆ ಮೈಸೂರು ಸರಕಾರದ ಉದ್ಯೋಗಗಳನ್ನು ತೋರಿಸುವ ಏರ್ಪಾಡನ್ನು ಮಾಡಿದ್ದರು. ಬೆಂಗಳೂರಿಂದ ಸುಮಾರು ೫ ಮೈಲು ದೂರದಲ್ಲಿ ಮೈಸೂರು ಇಲೆಕ್ಟ್ರಿಕ್ ಲ್ಯಾಂಪ್ ಫ್ಯಾಕ್ಟರಿ ಇದೆ. ಮೂರು ಬಸ್ಸುಗಳಲ್ಲಿ ಅತಿಥಿಗಳೆಲ್ಲರನ್ನೂ ಅಲ್ಲಿಗೆ ಕರೆದೊಯ್ಯಲಾಯಿತು. ಅಲ್ಲಿಯೆ ಊಟದ ವ್ಯವಸ್ಥೆ ಮಾಡಿದ್ದರು. ಅಂದು ಬಯಲೂಟ. ಹಲವರಿಗೆ ಒಯಕೆಯ ಊಟವೂ ಆಗಿ ಪರಿಣಮಿಸಿರಬಹುದು. ಇದಿರುಬದಿರಾಗಿ ಎರಡು ಸಾಲುಗಳಲ್ಲಿ ಜನರು ಕುಳಿತಿದ್ದರು. ಹರವಾದ ಮುತ್ತಲೆಲೆಯು ಒಬ್ಬೊಬ್ಬರ ಮುಂದೆಯೂ ಮಂಡಿಸಲ್ಪಟ್ಟಿತ್ತು. ಆ ಕಾರ್ಖಾನೆಯ ಸಂಚಾಲಕರಾದ **ಶ್ರೀ. ರಾಮಸ್ವಾಮಿಅಯ್ಯಂಗಾರ್ಯರು** ಮುಂದೆ ಬಂದು— “ನೀವು ಊಟಮಾಡುತ್ತಿರುವಾಗಲೇ ಕಾರ್ಖಾನೆಯಲ್ಲಿ ನಡೆಯುವ ವಿವಿಧ ಕಾರ್ಯರೀತಿಗಳನ್ನು ತಿಳಿಸುವೆನೆಂದರು; ಸ್ವಲ್ಪದರಲ್ಲಿಯೇ ಎಲ್ಲವನ್ನೂ ಹೇಳಿದರು. ಇಷ್ಟಾಗುವುದರೊಳಗೆ ಒಂದು ಮೂಲೆಯಲ್ಲಿ ಯುದ್ಧ ನಡೆದಿತ್ತು. ಯುದ್ಧವೆಂದು ಗಾಬರಿಯಾಗಬೇಡಿ, ಮೊದಲಿಗೇ ಎಚ್ಚರಿಕೆಯನ್ನು ಕೊಟ್ಟಿದ್ದಾಗಿದೆ. “ನಮಗೆ ಕದಂಬ ಬೇಕು” ಎಂದೊಬ್ಬರು ಗರ್ಜಿಸಿದರು; “ಇಲ್ಲ ಇಲ್ಲ ಚಾಲುಕ್ಯ” ಎಂದು ಪ್ರತಿಭಟಿಸಿದರು ಮತ್ತೊಬ್ಬರು. ಈ ಯುದ್ಧದ ಒಪ್ಪಂದವಾಗಿ ಕೆಲವು ಕರಾರುಗಳು ಹೊರಬಿದ್ದುವು. ಅವು ಇಂತಿವೆ. ಅಂದಿನ ಊಟದ ಮಾದರಿಯು ಅಯ್ಯಂಗಾರ್ಯರ ಪದ್ಧತಿಯದಂತೆ. ಹುಳಿಯನ್ನಕ್ಕೆ ‘ಕದಂಬ’ವೆಂತಲೂ, ನಾವು ಚಿತ್ರಾನ್ನವೆಂದು ಹೇಳುವುದಕ್ಕೆ ‘ಪುಳಿಯೋಗರ’ವೆಂತಲೂ ಅನ್ನಬೇಕು. ಈ ಪುಳಿಯೋಗರವು ಯೋಗ್ಯವಿಧಾನದಿಂದ ಮಾಡಲ್ಪಟ್ಟದ್ದಾದರೆ ಎಂಟು ದಿನಗಳವರೆಗೆ ಕೆಡದೆ ಉಳಿಯುವುದಂತೆ. ಇದಕ್ಕೇ ಒಬ್ಬ ಮಹನಿಯರು ‘ಚಾಲುಕ್ಯ’ ಎಂದುದು. ಇವೆರಡಲ್ಲದೆ ಪೊಂಗಲು (ಸಕ್ಕರೆಯನ್ನ), ಮೊಸರನ್ನ (ಅದಕ್ಕೆ ಏನೆಂದು ಹೆಸರು ಹೇಳಿದರೋ ನೆನಪಿಲ್ಲ.) ಆ ಐತಿಹಾಸಿಕ ಊಟವನ್ನು ಮೂಗುಮಟ್ಟಕ್ಕೆ ಉಂಡು, ತೇಲ್ಗಣ್ಣು ಹಾಕುತ್ತ ಕಾರ್ಖಾನೆಯ ಒಳಕ್ಕೆ ಸೇರಿದೆವು. ಕಣ್ಣು ಕುಕ್ಕುವಂತಹನೋಟ. ಮನಸೆಳೆಯುವಂತಹದು, ಅಭಿಮಾನಪಡುವಂತಹದು.



ಬೆಳ್ಳಿಯ ಹಬ್ಬದ ಪ್ರಾರಂಭೋತ್ಸವ ನಡೆದ ಸರ್ ಪುಟ್ಟಣ್ಣಸೆಟ್ಟರ ನಗರಭವನ

ನಮ್ಮ ದೇಶದಲ್ಲಿ, ನಮ್ಮ ಪ್ರಾಂತದಲ್ಲಿ, ಈ ಹೊಸಬಗೆಯ ಉದ್ಯೋಗಗಳು ಹುಟ್ಟಿ ಬೆಳೆಯುತ್ತಿರುವುದನ್ನು ನೋಡಿ, ಯಾವ ಕನ್ನಡಿಗನಿಗೆ ಅಭಿಮಾನವೆನಿಸಲಿಕ್ಕಿಲ್ಲ? ಶ್ರೀ. ರಾಮಸ್ವಾಮಿಯವರ ಮಾತಿನಲ್ಲಿ ಹೇಳುವುದಾದರೆ: ನಮ್ಮ ಜನತೆಯು ನೋಡಿ ಅಭಿಮಾನಪಟ್ಟು ಸುಮ್ಮನೆ ಕುಳಿತರಲ್ಲ; ನಮ್ಮ ದೇಶದಲ್ಲಿ ಸಿದ್ಧವಾಗುತ್ತಿರುವ ಸಾಮಾನುಗಳನ್ನು ನಮ್ಮದೆಂಬ ಅಭಿಮಾನದಿಂದ ಕೊಂಡುಕೊಳ್ಳಬೇಕು.

ಅಲ್ಲಿಂದ ಹೊರಟವರು ನೆಟ್ಟಗೆ ಮೈಸೂರುಸರಕಾರದ **ಪೋರ್ಸ್ಲೇನ್** ಕಾರಖಾನೆಗೆ ಬಂದೆವು. ಅಲ್ಲಿ ಅದು ಸಿದ್ಧವಾಗುತ್ತಲಿರುವ ರೀತಿಗಳನ್ನು ನೋಡಿ, ಪ್ರತಿಯೊಬ್ಬರೂ ಅಚ್ಚರಿಪಟ್ಟರು. ಮಣ್ಣುಸೋಸಿ ಸ್ವಚ್ಛಮಾಡುವ ಅವಸ್ಥೆಯಿಂದ ಮೆರುಗುಪಡೆದು ಪಾತ್ರೆಗಳಾಗುವವರೆಗೆ ಎಲ್ಲ ಅವಸ್ಥೆಗಳನ್ನೂ ಅಲ್ಲಿಯ ಸಂಚಾ-,

ಆನಂದಪಟ್ಟು, ಆ ನೋಣವು ಕುರುಡುನೋಣವಾಗಿ ತಪ್ಪಿ ಬಂದಿದ್ದಿತೆಂದು ತಿಳಿದು ಬಂದಿತು.

ಒಂಬತ್ತು ಹೊಡೆದು ಮೂರು ನಿಮಿಷವಾಗಿರಲಿಕ್ಕಿಲ್ಲ. ಸಭಾಸ್ಥಾನದಲ್ಲಿ ಸ್ತಬ್ಧತೆ ಪಸರಿಸಿತು. ಜನಗಳ ಉತ್ಕಂಠಾಭಾವವನ್ನು ಅವರ ಕುಳಿತೇಳುವುದರಲ್ಲಿ ಕಾಣಬಹುದಾಗಿತ್ತು. ಕೂಡಲೆ ರಾಯಭಟ್ಟಂಗಿಯು ಮಹಾಸ್ವಾಮಿಯವರ ಆಗಮನವನ್ನು ಸೂಚಿಸಿದನು. **ಕರ್ನಾಟಕ ಸಿಂಹಾಸನಾರೂಢರಾದ ಮಹಾಸ್ವಾಮಿಯವರು** ಸಭಾಸ್ಥಾನದಲ್ಲಿ ಕಾಲಿಟ್ಟ ಕೂಡಲೆ, ಜನರು **ತಾವಾಗಿಯೇ** ಎದ್ದು ನಿಂತು ಬಿಟ್ಟಿದ್ದರು. ಕನ್ನಡಿಗರ ರಾಜವೈಭವದ ಬಗೆಯನ್ನು ನಾವಂದು ಅಲ್ಲಿ ಕಾಣಬಹುದಾಗಿತ್ತು. ವಯಸ್ಸಿನ ಮೂಲಕವಾಗಿಯೊ, ಅದೊಂದು ಸಾಂಪ್ರದಾಯಿಕ ಗಾಂಭೀರ್ಯವೊ, ಮಹಾಸ್ವಾಮಿಯವರು ಮಂದವಾಗಿ ಹೆಜ್ಜೆಗಳನ್ನಿಕ್ಕುತ್ತಿದ್ದರು. ಅವರ ಹಿಂದೆ, 'ಪುಟ್ಟ ಸ್ವಾಮಿ (ಯುವರಾಜರು)' ಯವರು ಗಂಭೀರವಾಗಿ ನಡೆದಿದ್ದರು. ಮಹಾಸ್ವಾಮಿಯವರು ಕನ್ನಡಿಗರ ಪೊಡಮಡಿಕೆಗಳನ್ನು ಸ್ವೀಕರಿಸುತ್ತ, ತಮಗಾಗಿ ಏರ್ಪಡಿಸಿದ ಭವ್ಯವಾದ ಉಚ್ಚಾಸನದ ಮೇಲೆ ಕುಳಿತರು. ಸಭೆಯಲ್ಲಿಯ ಜನರೂ ಕುಳಿತರು. ವ್ಯಾಸಪೀಠದ ಮೇಲೆ ಮೊದಲು ಬಂದವರು ಶ್ರೀ. ಸಂಪತ್ಕುಮಾರಾಚಾರ್ಯರು. ಅವರು ತಮ್ಮ ಗಂಭೀರವಾದ ಗುಡುಗಿನ ದನಿಯಿಂದ ದೊರೆಗಳವರ ಗುಣಗಾನವನ್ನು ಮಾಡಿದರು. ಅನಂತರ ಸಾಹಿತ್ಯಪರಿಷತ್ತಿನ ಉಪಾಧ್ಯಕ್ಷರೂ ಕನ್ನಡನಾಡಿನ ಸಾಹಿತ್ಯಾಚಾರ್ಯರೂ ಆದ **ರಾಜಸೇವಾಸಕ್ತ ಶ್ರೀ. ಬಿ. ಎಮ್. ಶ್ರೀಕಂಠಯ್ಯನವರು**, ಸ್ವಾಗತಭಾಷಣವನ್ನು ಮಾಡಿದರು. ಒಂದು ಬೆಳ್ಳಿಯ ಕರಂಡಕದಲ್ಲಿ ಮಹಾಸ್ವಾಮಿಯವರಿಗೆ ಬಿನ್ನವತ್ತಳೆಯನ್ನು ಶ್ರೀಕಂಠಯ್ಯನವರೇ ಸಮರ್ಪಿಸಿದರು. ಮಹಾಸ್ವಾಮಿಯವರು ಬಿನ್ನವತ್ತಳೆಗೆ ಉತ್ತರರೂಪವಾಗಿ ಭಾಷಣ ಮಾಡಿದರು. ಈ ವೇಳೆಯಲ್ಲಿ ಮಾತ್ರ ಸಂಸ್ಥಾನದ ಪದ್ಧತಿಗಳನ್ನರಿಯದವರು ಗುಜುಗುಜು ಮಾತನಾಡುತ್ತಿದ್ದುದು ಕೇಳಬಂತು: "ಮಹಾಸ್ವಾಮಿಯವರು ಎದ್ದುನಿಂತಾಗ ಉಳಿದ ಸಭಾಸದರೂ, ಅವರ ಭಾಷಣ ಮುಗಿಯುವವರೆಗೂ ಎದ್ದು ನಿಲ್ಲಬೇಕೆಂಬುದು ಸ್ವಲ್ಪ ವಿಚಿತ್ರದ ವಿಷಯ." "ಏನೋ ಸಂಸ್ಥಾನದ ಪದ್ಧತಿ ಇರಬಹುದು" ಎಂದವರನೇಕರು. "ಅದಕ್ಕೇ ಸಂಸ್ಥಾನಿಕರಾದವರಿಗೆ ಸಾಮಾನ್ಯಜನತೆಯ ಗೋಳು ಗೊತ್ತಾಗುವುದಿಲ್ಲ ಎನ್ನುವುದು" ಎಂದು ಕೆಲವರು ಗೊಣಗಿದರು. ಆದರೆ ವಿಜಯನಗರದ ವೈಭವವನ್ನು ಪುಸ್ತಕದಲ್ಲಿ ಓದಿ ಅದರ ಅಳತೆಯನ್ನು ತಿಳಿದುಕೊಳ್ಳಲಾಗದೆ ಹೋದವರು, ಇದನ್ನು ಕಂಡು, ಸೂರ್ಮಾಡಿ ಮಾಡಿ ಅದರ ಪ್ರಮಾಣವನ್ನು ತಿಳಿಯಬಹುದಾಗಿತ್ತು. ಇರಲಿ, ಮಹಾರಾಜರವರು ತಮ್ಮ ಭಾಷಣದಲ್ಲಿ ಸಾಹಿತ್ಯದ ಬಗೆಗಿರುವ ತಮ್ಮ ಮನೆತನದ ಉಜ್ವಲ ಪರಂಪರೆಯ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಿದರು. ಕನ್ನಡ ಸಾಹಿತ್ಯಕ್ಕೆ ಮಹಾರಾಜರವರಿಂದ ದೊರೆತ ಆಶ್ರಯವು ಅಪಾರವಾಗಿದೆ. ಮಹಾರಾಜರವರು ಅಂದು ಸ್ಪಷ್ಟವಾಗಿ ತಾಯ್ನುಡಿಯಾದ ಕನ್ನಡದಲ್ಲಿ ಭಾಷಣ ಮಾಡಿದಾಗಲೂ, ಕೊನೆಗೆ 'ಸಿರಿಗನ್ನಡಂಗೆಲ್ಗೆ' ಎಂದು ಉದ್ಘೋಷಿಸಿದಾಗಲೂ ಅನೇಕರ ಮೈಮನ ಜುಮ್ಮೆಂದಿತು. ಆದರೆ ಏತಕ್ಕಾಗಿಯೊ ಏನೋ, ಅವರ ಭಾಷಣದ ಪ್ರತಿಗಳು ಮಾತ್ರ ಇಂಗ್ಲಿಷಿನಲ್ಲಿದ್ದುವು. ಒಂಬತ್ತು ಐವತ್ತಕ್ಕೆ ಪ್ರಾರಂಭೋತ್ಸವದ ಕಾರ್ಯಕಲಾಪಗಳು ಮುಗಿದುವು.

* * *

ಮಧ್ಯಾಹ್ನ ಸೊಗಸಿನ ಊಟವಾಯಿತು. ಕೊಂಚ ತಡವಾಯಿತೇನೋ ನಿಜ; ಹಾಗಾದುದೂ ಒಳ್ಳೆಯದೆ ಆಯಿತು. ಏಕೆಂದರೆ ಬೆಳಗಿನ ಉಪ್ಪಿಟ್ಟು-ಕಾಫಿಗಳು ಊಟವನ್ನು ಬೇಗ ಬಯಸದಂತೆ ಮಾಡಿದ್ದುವು. ಊಟವು ಅಲ್ಲಿಯವರ ರೀತಿಯದೇ ಇತ್ತು. ಅನ್ನ, ಸಾರು, ಪಲ್ಯ, ಪಳಿದ್ಯ, ಚಟ್ನಿ, ಕೋಸಂಬರಿ, ಕಲಸನ್ನ ಇವೆಲ್ಲ ಒಂದರಹಿಂದೊಂದು ಸಾವಕಾಶವಾಗಿ ಬರುತಲಿದ್ದುವು. ಆ ಸಾರಿನ-ಹುಳಿಯ ಮಸಾಲೆಯ ಮೋಹಕ್ಕೆ ಬಿದ್ದವರು, ನಿಜವಾಗಿಯೂ ತಾವು ಮೋಸಹೋದೆವೆಂದು ಮಾತನಾಡಿದರು. ಅಲ್ಲಿಯ ಪದ್ಧತಿಯ ಅರಿವಿಲ್ಲದೆ ಹೊಟ್ಟೆತುಂಬ ಹುಳಿಯನ್ನವನ್ನುಂಡವರು, ಕೊನೆಗೆ ಬಂದ ಹಾಲು-ಚಿರೋಟಿಯನ್ನು ಕಂಡು ಬೆಚ್ಚಿದರು. ಒಳಗೊಳಗೇ ಮರುಗಿದರು. ಅಂತೂ ಯಥಾಸುಶಕ್ತಿ ಸೇವನೆಯಾಯಿತು. ಮಧ್ಯಾಹ್ನ ಮೂರೂ ಮೂವತ್ತಕ್ಕೆ **ಶ್ರೀಕೃಷ್ಣರಾಜ ಪರಿಷನ್ಮಂದಿರದಲ್ಲಿ** ಕಾರ್ಯಕ್ರಮ ಪ್ರಾರಂಭವಾಯಿತು. ಕನ್ನಡ ನಾಡಗೀತೆ ಸ್ವಾಗತಗೀತೆಗಳಾದಮೇಲೆ, ಶ್ರೀ. ಡಿ. ವ್ಹಿ. ಗುಂಡಪ್ಪನವರು ಗ್ರಂಥಪ್ರದರ್ಶನದ ಉದ್ಘಾಟನವನ್ನು ಮಾಡಿದರು. ಸುಮಾರು ಎಂಟುನೂರು ಗ್ರಂಥಗಳೂ, ಹಲವು ಪತ್ರಿಕೆ-ನಿಯತ ಕಾಲಿಕಗಳೂ ಪ್ರದರ್ಶಿಸಲ್ಪಟ್ಟಿದ್ದುವು. ನಾಲ್ಕುಗಂಟೆಗೆ ಶ್ರೀ. ಕೃಷ್ಣಗಿರಿ ಕೃಷ್ಣರಾಯರು ಗಮಕವನ್ನು ನಡೆಯಿಸಿದರು. ಸಭಾಗೃಹವು ಸಾಕಷ್ಟು ದೊಡ್ಡದಾಗಿರದೆ ಇದ್ದುದರಿಂದ, ಬಹುಜನರು ಸ್ಥಳದೊರೆಯದೆ ನಿರಾಶೆಹೊಂದಿದರು. ಅಂದಿನ ಗಮಕವು ಮನಸ್ಸನ್ನು ಹಿಡಿಯುವಂತಹದಿದ್ದಿತು.

* * * *

ಯಕ್ಷಗಾನವನ್ನು ಕೇಳದೆ ಇದ್ದವರಿಗೆ ಅದೊಂದು ಸುಸಂಧಿ. ಅಂದು ಕೆ. **ಮಹಾಬಲನೊಂಪರು** ಅವರ ನೇತೃತ್ವದಲ್ಲಿ, ಅವರ ಮಿತ್ರಮಂಡಲದವರು **ಕೃಷ್ಣಸಂಧಾನ** ಪ್ರಸಂಗವನ್ನು ಪ್ರದರ್ಶಿಸಿದರು. ಸಾವಧಾನವಾಗಿ ಮನದಣಿಯುವಂತೆ ಯಕ್ಷಗಾನ ಪ್ರಸಂಗವನ್ನು ಪ್ರದರ್ಶಿಸಬೇಕಾಗಿದ್ದರೆ ಏನಿಲ್ಲೆಂದರೂ ಮೂರು ತಾಸುಗಳ ಅವಧಿ ಬೇಕಂತೆ. ಅಂತಹ ಉತ್ಸವದಲ್ಲಿ ಮೂರು ಮೂರು ತಾಸಿನ ಅವಧಿ ಸಿಕ್ಕುವ ಬಗೆ ಹೇಗೆ? ಯಕ್ಷಗಾನದಲ್ಲಿ ಆಶೆಯಿದ್ದವರು ಅಂದಿಯೆ ರಾತ್ರಿ ಛತ್ರದಲ್ಲಿ ತಮ್ಮ ಮನತಣಿಸಿಕೊಂಡರು. ಸಾಯಂಕಾಲ ಶ್ರೀಸಂಪತ್ಕುಮಾರಾಚಾರ್ಯರ ಸಂಗೀತವಾದ ನಂತರ, **ಶ್ರೀಮಾನ್. ಯು. ಎಸ್. ಕೃಷ್ಣರಾವ್** M. sc ಅವರಿಂದ ನರ್ತನಕಾರ್ಯಕ್ರಮವು ಆಯಿತು. ಅವರ **ನಟರಾಜ ನರ್ತನವು** ಬಹುಜನರ ಮನಸ್ಸನ್ನು ಸೆಳೆಯಿತು.

ನಾಟಕದ ಸಲುವಾಗಿ ರಾತ್ರಿ ಎರಡು ತಾಸುಗಳನ್ನು ಕಾದಿಟ್ಟಿದ್ದರು. **ಮೈಸೂರು ವಿಶ್ವವಿದ್ಯಾನಿಲಯದ ಕಲಾಸಂಘದವರು**

'ವೈದ್ಯನ ಜಾಡ್ಯ' 'ನಮ್ಮ ಕಂಪನಿ' ಎಂಬ ಎರಡು ಏಕಾಂಕಗಳನ್ನೂ, **ಧಾರವಾಡದ ನಾಟ್ಯವಿಲಾಸಿಗಳು** ಶ್ರೀರಂಗರ 'ಸಂಧ್ಯಾಕಾಲ'ವನ್ನೂ ಪ್ರದರ್ಶಿಸಿದರು. ಕಲಾಸಂಘದ ನಾಟಕಗಳಲ್ಲಿ ಶ್ರೀಯುತರಾದ **ರಾಜರತ್ನಂ** ಅವರೂ, **ಕಸ್ತೂರಿಯವರೂ** ಭಾಗವಹಿಸಿದ್ದರೆಂದಮೇಲೆ ಕೇಳುವುದೇನು? ಉತ್ತರ ಕರ್ನಾಟಕದ ಭಾಷೆಯ ಶೈಲಿಯಲ್ಲಿ ಬರೆದುದರಿಂದ ಸಂಧ್ಯಾಕಾಲವು ಎಷ್ಟರಮಟ್ಟಿಗೆ ಅಲ್ಲಿಯವರ ಮನಹಿಡಿಯಬಹುದೋ..ಎಂಬ ಸಂಶಯವು ಶ್ರೀರಂಗರಿಗಿತ್ತಂತೆ. ಆದರೆ ಅಂದಿನ ಪ್ರೇಕ್ಷಕವೃಂದವು ನಕ್ಕುನಕ್ಕು ಪಾತ್ರವರ್ಗದವರನ್ನು ಆಗಾಗ ತಡೆಯುವಂತೆ ಮಾಡುತ್ತಿದ್ದುದು, ಪ್ರೇಕ್ಷಕರ ಮತ್ತು ಪಾತ್ರವರ್ಗದವರ ಸಾಮರಸ್ಯವನ್ನು ಸೂಚಿಸುತ್ತಿದ್ದಿತು. ನಾಟಕದ ಕಾರ್ಯಕ್ರಮವು ಮುಗಿದಾಗ ರಾತ್ರಿಯ ಎರಡು ಗಂಟೆಯಾಯಿತು.

* * * *

ಮರುದಿನ ಎಂದರೆ ಜುಲೈ ೧ನೆಯ ತಾರೀಖಿನ ಬೆಳಗ್ಗೆ, ಪರಿಷತ್ತಿನವರು ಏರ್ಪಡಿಸಿದ ಸಾಹಿತ್ಯ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರಿಗೆ ಪ್ರಶಸ್ತಿಪತ್ರಿಕೆಗಳನ್ನು ಸಲ್ಲಿಸಲಾಯಿತು. ಬಳಿಕ ಇಡಿಯ ಕನ್ನಡನಾಡಿನ ಹಬ್ಬವೆಂದು ತೋರಿಸುವಂತೆ ಆಯಾ ಪ್ರಾಂತದ ಪ್ರತಿನಿಧಿಗಳ ಬೇರೆ ಬೇರೆ ಭಾಷಣ ನಡೆದುವು.



ಬೆಳ್ಳಿಯ ಹಬ್ಬದ ಪ್ರಾರಂಭೋತ್ಸವ ನಡೆದ ಸರ್ ಪುಟ್ಟಣ್ಣಸೆಟ್ಟರ ನಗರಭವನ

ಅಂದಿನ ಊಟ ಮಾತ್ರ ಕೊನೆಯವರೆಗೆ ನೆನಪು ಉಳಿಯುವಂತಹದಾಯಿತು. ಪರಸ್ಥಳದಿಂದ ಬಂದವರಿಗೆ ಮೈಸೂರು ಸರಕಾರದ ಉದ್ಯೋಗಗಳನ್ನು ತೋರಿಸುವ ಏರ್ಪಾಡನ್ನು ಮಾಡಿದ್ದರು. ಬೆಂಗಳೂರಿಂದ ಸುಮಾರು ೫ ಮೈಲು ದೂರದಲ್ಲಿ ಮೈಸೂರು ಇಲೆಕ್ಟ್ರಿಕ್ ಲ್ಯಾಂಪ್ ಫ್ಯಾಕ್ಟರಿ ಇದೆ. ಮೂರು ಬಸ್ಸುಗಳಲ್ಲಿ ಅತಿಥಿಗಳೆಲ್ಲರನ್ನೂ ಅಲ್ಲಿಗೆ ಕರೆದೊಯ್ಯಲಾಯಿತು. ಅಲ್ಲಿಯೆ ಊಟದ ವ್ಯವಸ್ಥೆಮಾಡಿದ್ದರು. ಅಂದು ಬಯಲೂಟ. ಹಲವರಿಗೆ ಬಯಕೆಯ ಊಟವೂ ಆಗಿ ಪರಿಣಮಿಸಿರಬಹುದು. ಇದಿರುಬದಿರಾಗಿ ಎರಡು ಸಾಲುಗಳಲ್ಲಿ ಜನರು ಕುಳಿತಿದ್ದರು. ಹರವಾದ ಮುತ್ತಲೆಲೆಯು ಒಬ್ಬೊಬ್ಬರ ಮುಂದೆಯೂ ಮಂಡಿಸಲ್ಪಟ್ಟಿತ್ತು. ಆ ಕಾರ್ಖಾನೆಯ ಸಂಚಾಲಕರಾದ **ಶ್ರೀ. ರಾಮಸ್ವಾಮಿಅಯ್ಯಂಗಾರ್ಯರು** ಮುಂದೆ ಬಂದು— "ನೀವು ಊಟಮಾಡುತ್ತಿರುವಾಗಲೇ ಕಾರ್ಖಾನೆಯಲ್ಲಿ ನಡೆಯುವ ವಿವಿಧ ಕಾರ್ಯರೀತಿಗಳನ್ನು ತಿಳಿಸುವೆನೆಂದರು; ಸ್ವಲ್ಪದರಲ್ಲಿಯೇ ಎಲ್ಲವನ್ನೂ ಹೇಳಿದರು. ಇಷ್ಟಾಗುವದರೊಳಗೆ ಒಂದು ಮೂಲೆಯಲ್ಲಿ ಯುದ್ಧ ನಡೆದಿತ್ತು. ಯುದ್ಧವೆಂದು ಗಾಬರಿಯಾಗಬೇಡಿ, ಮೊದಲಿಗೇ ಎಚ್ಚರಿಕೆಯನ್ನು ಕೊಟ್ಟಿದ್ದಾಗಿದೆ. "ನಮಗೆ ಕದಂಬ ಬೇಕು" ಎಂದೊಬ್ಬರು ಗರ್ಜಿಸಿದರು; "ಇಲ್ಲ ಇಲ್ಲ ಚಾಲುಕ್ಯ" ಎಂದು ಪ್ರತಿಭಟಿಸಿದರು ಮತ್ತೊಬ್ಬರು. ಈ ಯುದ್ಧದ ಒಪ್ಪಂದವಾಗಿ ಕೆಲವು ಕರಾರುಗಳು ಹೊರಬಿದ್ದುವು. ಅವು ಇಂತಿವೆ. ಅಂದಿನ ಊಟದ ಮಾದರಿಯು ಅಯ್ಯಂಗಾರ್ಯರ ಪದ್ಧತಿಯದಂತೆ. ಹುಳಿಯನ್ನಕ್ಕೆ 'ಕದಂಬ'ವೆಂತಲೂ, ನಾವು ಚಿತ್ರಾನ್ನವೆಂದು ಹೇಳುವುದಕ್ಕೆ 'ಪುಳಿಯೋಗರ'ವೆಂತಲೂ ಅನ್ನಬೇಕು. ಈ ಪುಳಿಯೋಗರವು ಯೋಗ್ಯವಿಧಾನದಿಂದ ಮಾಡಲ್ಪಟ್ಟದ್ದಾದರೆ ಎಂಟು ದಿನಗಳವರೆಗೆ ಕೆಡದೆ ಉಳಿಯುವುದಂತೆ. ಇದಕ್ಕೇ ಒಬ್ಬ ಮಹನಿಯರು 'ಚಾಲುಕ್ಯ' ಎಂದುದು. ಇವೇ ಅಲ್ಲದೆ ಪೊಂಗಲು (ಸಕ್ಕರೆಯನ್ನ), ಮೊಸರನ್ನ (ಅದಕ್ಕೆ ಏನೆಂದು ಹೆಸರು ಹೇಳಿದರೋ ನೆನಪಿಲ್ಲ.) ಆ ಐತಿಹಾಸಿಕ ಊಟವನ್ನು ಮೂಗುಮಟ್ಟಕ್ಕೆ ಉಂಡು, ತೇಲ್ಗಣ್ಣು ಹಾಕುತ್ತ ಕಾರ್ಖಾನೆಯ ಒಳಕ್ಕೆ ಸೇರಿದೆವು. ಕಣ್ಣು ಕುಕ್ಕುವಂತಹ ನೋಟ. ಮನಸೆಳೆಯುವಂತಹವು, ಅಭಿಮಾನಪಡುವಂತಹದು. ನಮ್ಮ ದೇಶದಲ್ಲಿ, ನಮ್ಮ ಪ್ರಾಂತದಲ್ಲಿ, ಈ ಹೊಸಬಗೆಯ ಉದ್ಯೋಗಗಳು ಹುಟ್ಟಿ ಬೆಳೆಯುತ್ತಿರುವುದನ್ನು ನೋಡಿ. ಯಾವ ಕನ್ನಡಿಗನಿಗೆ ಅಭಿಮಾನವೆನಿಸಲಿಕ್ಕಿಲ್ಲ? ಶ್ರೀ. ರಾಮಸ್ವಾಮಿಯವರ ಮಾತಿನಲ್ಲಿ ಹೇಳುವುದಾದರೆ: ನಮ್ಮ ಜನತೆಯು ನೋಡಿ ಅಭಿಮಾನಪಟ್ಟು ಸುಮ್ಮನೆ ಕುಳಿತರಲ್ಲ; ನಮ್ಮ ದೇಶದಲ್ಲಿ ಸಿದ್ಧವಾಗುತ್ತಿರುವ ಸಾಮಾನುಗಳನ್ನು ನಮ್ಮದೆಂಬ ಅಭಿಮಾನದಿಂದ ಕೊಂಡುಕೊಳ್ಳಬೇಕು.

ಅಲ್ಲಿಂದ ಹೊರಟವರು ನೆಟ್ಟಗೆ ಮೈಸೂರುಸರಕಾರದ ಪೋರ್ಸ್ಲೇನ್ ಕಾರಖಾನೆಗೆ ಬಂದೆವು. ಅಲ್ಲಿ ಅದು ಸಿದ್ಧವಾಗುತ್ತಲಿರುವ ರೀತಿಗಳನ್ನು ನೋಡಿ, ಪ್ರತಿಯೊಬ್ಬರೂ ಆಶ್ಚರ್ಯಪಟ್ಟರು. ಮಣ್ಣುಸೋಸಿ ಸ್ವಚ್ಛಮಾಡುವ ಅವಸ್ಥೆಯಿಂದ ಮೆರಗುಪಡೆದು ಪಾತ್ರೆಗಳಾಗುವವರೆಗೆ ಎಲ್ಲ ಅವಸ್ಥೆಗಳನ್ನೂ ಅಲ್ಲಿಯ ಸಂಚಾ-

ಲಕರು ತೋರಿಸಿ, ತಿಳಿಸಿ ಹೇಳಿದರು. ಮಧ್ಯಾಹ್ನ ಮೂರರಿಂದ ಒಂದು ಗಂಟೆಕಾಲ ಮಹಿಳಾ-ಗೋಷ್ಠಿ ನಡೆಯಿತಂತೆ. ಅದರ ಬಗೆಗೆ ಗೊತ್ತಾದುದು ಪರಿಷನ್ಮಂದಿರದ ಬಾಗಿಲಿಗೆ ತಗುಲಿಸಿದ ಭಯಸೂಚಕ ಹಲಗೆಯೊಂದು; "ಮಹಿಳೆಯರಿಗೆ ಮಾತ್ರ" ಎಂದಿದ್ದುದು. ಇಳಿಹೊತ್ತಿನಲ್ಲಿ **ಆಸ್ಥಾನವಿದ್ವಾನ್ ಶ್ರೀ. ದೇವೇಂದ್ರಪ್ಪನವರ ಸಂಗೀತವಾಯಿತು.** ಸಂಗೀತದ ರಸಲಹರಿಯನ್ನು ಬಣ್ಣಿಸಲು ನನ್ನಲ್ಲಿ ಮಾತುಗಳೆ ಇಲ್ಲ.

* * *

೬–೩೦ಕ್ಕೆ ಮತ್ತೆ ಥಕಥೈ. ಇಂದಿನ ನರ್ತನದ ಕಾರ್ಯಕ್ರಮವು ಕನ್ನಡನಾಡಿಗೆಲ್ಲ ಪರಿಚಿತರಾದ **ಶ್ರೀಮಾನ್ ಕುಲಕರ್ಣಿ ಶ್ರೀನಿವಾಸ ಮತ್ತು ಜೊತೆಗಾತಿ** ಅವರಿಂದ ಆಯಿತು. ಶ್ರೀನಿವಾಸರು ತಮ್ಮ ನರ್ತನಕಲೆಯನ್ನು ಸಾಕಷ್ಟು ವಿಕಾಸಗೊಳಿಸಿಕೊಂಡಿದ್ದಾರೆ. ಹಿಂದಿನಗಿಂತ ಇಂದು ಪ್ರೇಕ್ಷಕರನ್ನು ಹೆಚ್ಚು ತನ್ಮಯರನ್ನಾಗಿ ಮಾಡುತ್ತಾರೆ ಎಂದು ಹೇಳಬಹುದು.

ಆ ದಿನ ನಡೆದ ನಾಟಕಗಳು— ಜನಸಮುದಾಯದ ಮೂಲಕ— ನೋಡಲು ನಮಗೆ ದೊರೆಯಲಿಲ್ಲ. **ಪ್ರೊ॥ ವ್ಹಿ. ಜಿ. ಕುಲಕರ್ಣಿ** ಮತ್ತು ಮಿತ್ರರಿಂದ **ಗದಾಯುದ್ಧವೂ ನಾಗರಾಜರಾವ್** ಮತ್ತು ಮಿತ್ರರಿಂದ **'ಶಾಮಣ್ಣನ ಸಾಹಸ' 'ಸಂಶಯ'** ಎಂಬುವೂ ನಡೆದುವಂತೆ.

* * *

ವಿಷಯಗಳನ್ನು ಮುಗಿಸಿ, ವ್ಯಕ್ತಿಗಳಿಗೆ ಭೇಟಿಯಾಗಬಯಸುವೆ. ಈ ಹಬ್ಬಕ್ಕೆ ಸೂತ್ರಧಾರರಾಗಿ ಪರಿಣಮಿಸಿದವರೂ ಹೊಣೆಹೊತ್ತವರೂ ಎಂದು ಪ್ರತಿಯೊಬ್ಬರಿಗೆ ಅನಿಸಿದವರು ಮೂವರು. ಎಲ್ಲೆಲ್ಲಿಯೂ ಮುಂದುವರಿಯುವ ಶ್ರೀಕಂಠಯ್ಯನವರು; ಸ್ವಯಂಸೇವಕನಂತೆ ಸದಾಸಿದ್ಧರಾದ ಬಿ. ವೆಂಕೋಬರಾಯರು; ಕಾರ್ಯವನ್ನು ಮಾಡುವ ಹೊಣೆಹೊತ್ತು, ಬಯಲಿಗೆ ಬರಬಾರದೆಂದು ಹವಣಿಸುವ ಶ್ರೀ. ವ್ಹಿ. ಸೀ. ಯವರು. ಉಳಿದವರು ಇವರಷ್ಟೇ ಅದೇಕೆ ಒಂದುತೂಕ ಹೆಚ್ಚೇ ಕಾರ್ಯಮಾಡುತ್ತಿದ್ದರು. ಅವರ ಸ್ವಯಂಸೇವಕಭಾವನೆಗೆ ನಮಗೆ ತುಂಬ ಆದರ. ಹೆಸರು ಗೊತ್ತಿಲ್ಲದ ಮೂಲಕ ನಿರ್ದೇಶಿಸಿಲ್ಲ. ಅವರೆಲ್ಲ ನಮ್ಮನ್ನು ಕ್ಷಮಿಸಬೇಕು. ಬೆಳ್ಳಿಯ ಹಬ್ಬವು ಎಲ್ಲರಿಗೂ ಸೊಗಸನ್ನು ಬೀರಿತು. ಒಟ್ಟಿನಲ್ಲಿ ಯಶಸ್ವಿಯಾಯಿತೆಂದೇ ಹೇಳಬೇಕು. ಕನ್ನಡನಾಡಿನ ಎಲ್ಲ ಸಾಹಿತಿಗಳನ್ನು ನೋಡಬೇಕೆಂಬ ಹಂಬಲವಿದ್ದವರು ಇಂತಹ ಉತ್ಸವಗಳಿಗೆ ಬರಬೇಕಿತ್ತು. ಹಿರಿಯ ಸಾಹಿತಿಗಳೂ, ಕಿರಿಯ ಸಾಹಿತಿಗಳೂ ಪ್ರತ್ಯಕ್ಷವಾಗಿ ಭೇಟಿಯಾಗಿ ಒಬ್ಬರನ್ನೊಬ್ಬರು ತಬ್ಬಿಕೊಂಡ ದೃಶ್ಯಗಳೆಷ್ಟೋ. ಮಾತಿನಲ್ಲಿ ತಮ್ಮ ಜಾಣ್ಮೆಯನ್ನು ತೋರಿಸಬೇಕೆಂಬ ಸಹಜವಾದ ಬುದ್ಧಿಯು ಚರ್ಚಾಕೂಟದಲ್ಲಿ ಒಮ್ಮೊಮ್ಮೆ ಪ್ರದರ್ಶಿಸಲ್ಪಟ್ಟು ಭ್ರಮೆತರುತ್ತಿದ್ದಿತು. ಸಾಹಿತ್ಯಕ್ಷೇತ್ರದಲ್ಲಿ ಕೂಡ ಉಳಿದೆಲ್ಲ ಕ್ಷೇತ್ರಗಳಂತೆ ಒಬ್ಬರ ಏಳ್ಗೆಯನ್ನು ಕಂಡು ಇನ್ನೊಬ್ಬರು ಸಹಿಸಿಕೊಳ್ಳಲಾರದ ಪರಿಸ್ಥಿತಿಯೂ ಇರುವುದೆಂಬ ಮಾತು ಸಂಸ್ಕೃತಿಗೆ ಕಲಂಕತರುವಂತಹದಿದೆ.

ಬೆಳ್ಳಿಯ ಹಬ್ಬ ಪೂರ್ಣಚಂದ್ರನಂತೆ ಆಯಿತು. ಚಂದ್ರನಿಗೆ ದೃಷ್ಟಿತಾಗಬಾರದೆಂಬುದರ ಸಲುವಾಗಿಯೋ ಏನೋ, ಅವನ ಮೈಮೇಲೆ ಕಲಂಕಗಳು ಇದ್ದಂತೆ—ಚಿಕ್ಕಪುಟ್ಟ ಕೊರತೆಗಳಿದ್ದರೂ ಬೆಳ್ಳಿಯ ಹಬ್ಬವು ಬೆಳಕುಕೊಡುವಂತಾಯಿತು; ಹೊಸ ಬೆಳಕು ಕೊಡುವಂತಹದಾಯಿತು. ಚಿನ್ನದ ಹಬ್ಬಕ್ಕಾಗಿ ಹಂಬಲಿಸುವಂತಾಯಿತು.



ನಿಮ್ಮದು ಯಾಕೆ ಆಗಬಾರದು ?

ನಿಮಗೆ ನೆಟ್ಟಗಾದ ಕಾರಣ ಒಂದೇ. ಅಂದರೆ ಗುಣಪಡುವ ಆಶೆಯಿಂದ 'ನೀವು ಇಲ್ಲಿಯವರೆಗೆ ದೊರಕಿಸಿದ ಉಪಾಯಗಳೆಲ್ಲ ನಿರುಪಯೋಗಿಯಾಗಿದ್ದುವು. 'ಪುರೋಹಿತ ಶ್ವಾಸಹಾರಿ" ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೆ, ಬೇರುಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದನ್ನು ತೆಗೆದುಕೊಳ್ಳಹತ್ತಿದ ಕೂಡಲೆ ಕೆಮ್ಮು ನಿಲ್ಲುವುದು, ತೇಕು ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ, ಪಚನಕ್ರಿಯೆಯು ನೆಟ್ಟಗಾಗುವುದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಫುಪ್ಫುಸವು ಗಟ್ಟಿಮುಟ್ಟಾಗಿ, ದಮ್ಮು ಹೆಸರುಳಿಯದಂತೆ ನೆಟ್ಟಗಾಗುವುದು.

ಪುರೋಹಿತ ಶ್ವಾಸಹಾರಿಯು ೩ ಔ. ೬ ಔ. ಮತ್ತು ೧೨ ಔ. ಬಾಟ್ಲಗಳಲ್ಲಿ ಕ್ರಮವಾಗಿ ೨–೨ ರೂ. ೩–೧೨ ರೂ. ೬–೮ ರೂ. ಗಳಿಗೆ ಎಲ್ಲ ಕಡೆಗೆ ಸಿಗುವುದು.

ತರಿಸಿಕೊಳ್ಳುವ ವಿಳಾಸ :—

ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಇಲ್ಲವೆ ಮುಂಬಯಿ ಸೋಲ ಏಜಂಟರು :

ವನಮಾಳಿ, ಭಿಕಾ ಮತ್ತು ಕಂಪನಿ,

ಪ್ರಿನ್ಸೆಸ್ ಸ್ಟ್ರೀಟ, ಮುಂಬಯಿ.

ದಮ್ಮಿಗೆ ಯಶಸ್ವಿಯಾದ ಡಾಕ್ಟರರ ಉಪಾಯವು.



ಹೆಂಗುಸರಿಗಾಗಿ ವ್ಯಾಯಾಮಕ್ರಮ

ಶ್ರೀ. ಶ್ರೀ. ಜ. ಬಾಪಟ, ಬಿ. ಪಿಎಚ್. ಸಿ.

೪ನೆಯ ಬರೆಹ

೧ನೆಯ ವ್ಯಾಯಾಮ.

(ಮೇರುದಂಡದಲ್ಲಿರುವ ಸ್ಥಿತಿಸ್ಥಾಪಕತೆ, ಚುರುಕುತನಗಳ ಸಂವರ್ಧನೆಗಾಗಿ)

ಅಡಿಗಳೆರಡನ್ನೂ ಜೋಡಿಸಿ ಎದ್ದುನಿಂತುಕೊಳ್ಳಬೇಕು. ಕೈಗಳೆರಡನ್ನೂ ಜೋಲುಬಿಟ್ಟು ಹಸ್ತಗಳನ್ನು ತೊಡೆಗೆ ಹೊಂದಿಸಿ ಹಿಡಿಯಬೇಕು. ಬಳಿಕ ಮೂಗಿನಿಂದ ಮೆಲ್ಲಗೆ ಉಸಿರು ತೆಗೆದುಕೊಳ್ಳುತ್ತ, ಕೈಗಳೆರಡನ್ನೂ ಎದೆಯ ಎದುರಿನಿಂದ ಹಾಯಿಸಿ, ನೇರವಾಗಿ ತಲೆಯಮೇಲಕ್ಕೆ ಒಯ್ಯಬೇಕು. ಆಗ ಕೈಬೆರಳುಗಳು ಒಂದಕ್ಕೊಂದು ಹೊಂದಿಕೊಂಡಿರಬೇಕು. ನೋಟಗಳು ಎದುರನ್ನು ನಿಟ್ಟಿಸುತ್ತಿರಬೇಕು. ತಲೆಯು ಎರಡೂ ತೋಳುಗಳ ಮಧ್ಯದಲ್ಲಿ ಇರಬೇಕು. ಕೈಗಳನ್ನು ಮೆಲ್ಲಗೆಮೇಲಕ್ಕೆ ಎತ್ತುತ್ತಿರುವಾಗ ಹಾಗೆಯೆ ಹಿಮ್ಮಡಿಗಳನ್ನೂ ಮೇಲಕ್ಕೆ ಎತ್ತುತ್ತ ಹೋಗಬೇಕು. ಒಂದೆ ಮಾತಿನಲ್ಲಿ ಹೇಳುವುದೆಂದರೆ, ಹಸ್ತಗಳೆರಡೂ ಆದಷ್ಟು ಹೆಚ್ಚಿಗೆ ಮೇಲಕ್ಕೆ ನೀಡಿಕೊಂಡಿರುವಂತಾಗಬೇಕು. ಮೇರುದಂಡದಲ್ಲಿ—ಬೆನ್ನುಹುರಿಯ ಪ್ರತಿಯೊಂದು ಕಳಿಗೆಗೂ—ಸಾಕಷ್ಟು ಎಳೆತಬಿದ್ದಿದೆಯೆನಿಸಿದಾಗ, ಫುಪ್ಪುಸವು ಸಾಕಷ್ಟು ಹವೆಯಿಂದ ತುಂಬಿದೆಯೆಂದು ತೋರಿದಾಗ, ಮೂಗಿನಿಂದ ಮೆಲ್ಲಗೆ ಹವೆಯನ್ನು ಬಿಡುತ್ತ ಕೈಗಳನ್ನು ಚಾಚಿದ್ದಂತೆಯೆ ಕೆಳಕ್ಕಿಳಿಸುತ್ತ ಮೊದಲಿನಂತೆ ಜೋಲು ಬಿಡಬೇಕು. ಕೈಗಳೊಂದಿಗೆ ಮೇಲಕ್ಕೆತ್ತಿದ ಹಿಮ್ಮಡಿಗಳನ್ನು ಕೈಗಳೊಂದಿಗೇ ಕೆಳಕ್ಕಿಳಿಸುತ್ತ ನೆಲಕ್ಕೂರಬೇಕು. ಒಂದೆರಡು ಸೆಕಂದು ತಡೆದು ಮತ್ತೆ ವ್ಯಾಯಾಮವನ್ನು ಆರಂಭಿಸಬೇಕು.

೧ನೆಯ ವ್ಯಾಯಾಮದ ಚಿತ್ರ

ಮೊದಮೊದಲು ಈ ವ್ಯಾಯಾಮವನ್ನು ಮೂರುಸಲಮಾತ್ರ ಮಾಡಬೇಕು. ಮುಂದೆ ಹೆಚ್ಚಿಸುತ್ತ ಹೆಚ್ಚಿಸುತ್ತ ಹತ್ತುಸಲದ ವರೆಗೂ ಮಾಡಬಹುದು. ಈ ವ್ಯಾಯಾಮಕ್ಕೆ ಬೇಕಾಗುವ ವೇಳೆ ಸುಮಾರು ೧೦ ನಿಮಿಷಗಳು.

೨ನೆಯ ವ್ಯಾಯಾಮ.

ಅಡಿಗಳನ್ನು ಅಗಲಿಸಿ ಇರಿಸಬೇಕು. ಅಡಿಗಳ ನಡುವಿನ ಅಂತರ ಸುಮಾರು ಒಂದು ಮೊಳದಷ್ಟಿರಬೇಕು. ಮೊಣಕಾಲುಗಳನ್ನು ಮಣಿಸದೆ ಸರಳವಾಗಿ ಇರಿಸಿರಬೇಕು. ಸೊಂಟದ ಮೇಲಿನ ದೇಹವನ್ನು ಮುಂದಕ್ಕೆ ಬಾಗಿಸಬೇಕು. ಕೈಗಳೆರಡನ್ನೂ ನೀಗಿ ಎದೆಗೆ ಎದುರಾಗಿ ಹಾಯಿಸಿತಂದು, ಎರಡೂ ಅಡಿಗಳ ನಡುವೆ ನೆಲಕ್ಕೆ ಊರಬೇಕು. ತಲೆಯನ್ನು ಎರಡೂ ತೋಳುಗಳ ನಡುವೆ ಒಳಕ್ಕೆ ಎಳೆದುಕೊಳ್ಳಬೇಕಲ್ಲದೆ ಗದ್ದವು ಕುತ್ತಿಗೆಗೆ ಹೊಂದಿನಿಲ್ಲುವಂತೆ ಪ್ರಯತ್ನಿಸಬೇಕು. ಬಳಿಕ ಮತ್ತೆ ಮೊದಲಿನಂತೆ ನಿಂತುಕೊಳಬೇಕು. ಹೀಗೆ ನಿಂತುಕೊಳುವಾಗ ನೀಡಿದ ಕೈಗಳೆರಡನ್ನೂ ಎದೆಗೆ

೨ನೆಯ ವ್ಯಾಯಾಮದ ಚಿತ್ರ

ಎದುರಾಗಿ ಹಾಯಿಸಿ, ಹಾಗೆಯೆ ತಲೆಯಮೇಲೆ ತರಬೇಕು. ಬಳಿಕ ಹಾಗೆಯೆ ಹಿಂದೆ ಹಿಂದೆ ಬಾಗಿಸುತ್ತ ಸೊಂಟದವರೆಗಿನ ದೇಹವನ್ನೂ ಹಿಂದಕ್ಕೆ ಬಾಗಿಸಬೇಕು. ಹೀಗೆ ಮಣಿದಾಗ ಗದ್ದವು ಮೇಲಕ್ಕಾಗುವುದು. ಮುಂದಕ್ಕೆ ಬಾಗುವಾಗ ಉಸಿರನ್ನು ಬಿಡುತ್ತ ಹೋಗಬೇಕು. ಹಿಂದಕ್ಕೆ ಬಾಗುವಾಗ ಉಸಿರನ್ನು ತೆಗೆದುಕೊಳ್ಳುತ್ತ ಬಾಗಬೇಕು. ಉಸಿರಾಟದ ಕ್ರಮದನ್ನು ಹೀಗೆಯೆ ಇರಿಸಬೇಕು.

ಮೊದಮೊದಲು ಈ ವ್ಯಾಯಾಮವನ್ನು ಐದುಸಲ ಮಾಡಬೇಕು. ಮುಂದೆ ಹದಿನೈದು ಸಲದ ವರೆಗೂ ಬೆಳೆಯಿಸುತ್ತ ಹೋಗಬೇಕು. ಹಿಂದೆ ಬಾಗುವುದು ಮುಂದೆ ಬಾಗುವುದು ಇವೆರಡೂ ಕ್ರಿಯೆಗಳು ಸೇರಿ ಒಂದುಸಲದ ವ್ಯಾಯಾಮದ ಪೂರ್ತತೆಯಾಗುವುದು. ಬೇಕಾಗುವ ವೇಳೆ ಸುಮಾರು ೨ ನಿಮಿಷಗಳು.



೧೯. ಶರೀರಶಿಕ್ಷೆ

ಶ್ರೀಮಾನ್ ಶ್ರೀ. ಜ. ಬಾಪಟ ಮುದೀಶಾಳ-ಧಾರವಾಡ, ಅವರು ಬರೆದುದು. ಬೆಲೆ ೩-೦-೦.

ವ್ಯಾಯಾಮ, ಶಿಕ್ಷಣಕ್ಕೆ ಅನುಕೂಲತೆಯನ್ನೊದಗಿಸಿಕೊಡುವಂತಹ ಪುಸ್ತಕವಿದೊಂದು. ಅಮರಾವತಿಯ 'ಹನುಮಾನ ವ್ಯಾಯಾಮ ಪ್ರಸಾರಕ ಮಂಡಲದ ಪ್ರಧಾನಮಂತ್ರಿಗಳೂ, ಮಧ್ಯಪ್ರಾಂತ ಸರಕಾರದ 'ಸೆಂಟ್ರಲ್ ಬೋರ್ಡ್ ಆಫ್ ಫಿಜಿಕಲ್ ವೆಲ್ಫೇರಿನ ಸದಸ್ಯರೂ ಆದ ಶ್ರೀಮಾನ್ ಹರಿಹರ ವಾಮನ ದೇಶಪಾಂಡೆಯವರು ಈ ಪುಸ್ತಕಕ್ಕೆ ಮುನ್ನುಡಿ ಬರೆದು, ವಿದ್ಯಾರ್ಥಿಗಳಲ್ಲಿ ವ್ಯಾಯಾಮಪ್ರಚಾರವಾಗಬೇಕಿರುವ ಆವಶ್ಯಕತೆಯನ್ನೂ ಅದರ ಕ್ರಮವನ್ನೂ ಅರುಹಿರುವರಲ್ಲದೆ, ಪ್ರಸ್ತುತ ಪುಸ್ತಕದ ಉಪಯುಕ್ತತೆಯನ್ನು ಕುರಿತೂ ಹೇಳಿರುವರು. ಗ್ರಂಥಕರ್ತರು ತಮ್ಮ 'ನಿವೇದನ'ದಲ್ಲಿ ಈ ಗ್ರಂಥದಲ್ಲಿ ಒಳಗೊಂಡಿರುವ ವಿಷಯವನ್ನು ಕುರಿತು ಹೀಗೆ ಹೇಳಿರುವರು :—

“ಶಾರೀರಿಕ ಶಿಕ್ಷಣದಲ್ಲಿ ಸಾಮಾನ್ಯವಾಗಿ ಎರಡು ಭಾಗಗಳನ್ನು ಕಲ್ಪಿಸಬಹುದು. ಒಂದು ತಾತ್ತ್ವಿಕ ಭಾಗ, ಮತ್ತೊಂದು ಪ್ರಾತ್ಯಕ್ಷಿಕ ಭಾಗ. ಈ ಪುಸ್ತಕದೊಳಗೆ ಮುಖ್ಯವಾಗಿ ಪ್ರಾತ್ಯಕ್ಷಿಕ ಭಾಗದ ವಿವೇಚನೆ ಮಾಡಲಾಗಿದೆ, ಅದು ಪ್ರಾಥಮಿಕ ಶಾಲೆಗಳಿಗೆ ಉಪಯೋಗವಾಗುವ ದೃಷ್ಟಿಯಿಂದ. ಇದನ್ನು ಮುಂಬಯಿ ಸರಕಾರದ ಅಭಿಪ್ರಾಯಗಳ ಮೇರೆಗೆ ಮಾಡಲಾಗಿದೆ. ಮೇಲಾಗಿ ಹಳ್ಳಿಗಳಲ್ಲಿಯ ಶಾಲೆಗಳಿಗೂ ಇದರ ಉಪಯೋಗವಾಗಬೇಕೆಂದು ಹಾಗೆ ವಿಷಯಯೋಜನೆಯನ್ನೂ ಮಾಡಲಾಗಿದೆ.”

ಪ್ರಸ್ತುತ ಪುಸ್ತಕದಲ್ಲಿಯ ವಿಷಯಗಳು ೨೧ ಭಾಗಗಳಲ್ಲಿ ವಿಭಾಗಿತವಾಗಿದ್ದು, ಮೊದಲಿನ ಎರಡು ಭಾಗಗಳಲ್ಲಿ ವ್ಯಾಯಾಮದ ಆವಶ್ಯಕತೆ, ಅದನ್ನು ಪ್ರಚಾರಲ್ಲಿ ತರುವ ರೀತಿಗಳು, ಶರೀರದ ರಚನಾವೈಶಿಷ್ಟ್ಯ ಇವುಗಳ ವಿವೇಚನೆಯಿದೆ. ಮೂರನೆಯ ಭಾಗದಲ್ಲಿ 'ಕವಾಯತು' ಎಂಬ ವಿದ್ಯಾರ್ಥಿ-ವ್ಯಾಯಾಮದ ವಿವರಣೆಯಿರುವುದು. ಕವಾಯತಿಗೆ ಬೇಕಾಗುವ ಹಿಂದೀಭಾಷೆಯ 'ಹುಕುಮು'ಗಳೂ ಆ ಹುಕುಮುಗಳನ್ನನುಸರಿಸುವ ಬಗೆಯನ್ನು ಕುರಿತ—ಕನ್ನಡಭಾಷೆಯಲ್ಲಿಯ—ಸಚಿತ್ರ ವಿವೇಚನೆಯೂ ಈ ಭಾಗದಲ್ಲಿ ಅಡಕವಾಗಿವೆ. ನಾಲ್ಕನೆಯ ಭಾಗದಲ್ಲಿ ವ್ಯಾಯಾಮದ ಮೂಲತತ್ತ್ವಗಳ ವಿಚಾರವಿದೆಯಲ್ಲದೆ, ಮನುಷ್ಯದೇಹದಲ್ಲಿರುವ ೨೬ ಮುಖ್ಯಸ್ನಾಯುಗಳ ಪರಿಚಯವಿದೆ. ಮುಂದೆ ಕ್ರಮವಾಗಿ ಸಾಂಘಿಕ ವ್ಯಾಯಾಮ, ಆಸನಗಳು, ಶ್ವಸನವಿಶಿಷ್ಟ ಸಮಸ್ಕಾರ, ತಾಲದವ್ಯಾಯಾಮ, ಲಾಠಿಯ ವ್ಯಾಯಾಮ, ಲಾಠಿಯ ಕವಾಯತು, ಲಾಠಿಯ ಲಗ್ಗೆ, ಲಕಡಿ (ಛಡಿ), ಲೇಝೀಮ, ಲೋಡು, ಕೋಲಾಟ (ಟಿಪರಿ), ಆಟಗಳು (ಸಾಮಾನ್ಯ ಆಟ, ಸಾಂಘಿಕ ಬಯಲಾಟ) ಇವೆಲ್ಲವುಗಳನ್ನು ಕುರಿತ ಸಚಿತ್ರ ವಿವೇಚನೆಗಳು ಬಂದಿರುವುವು. ಕೊನೆಯಲ್ಲಿ ಶರೀರ-ಶಿಕ್ಷಣೋಪಯುಕ್ತವಾದ ಆರು ಪರಿಶಿಷ್ಟಗಳುಂಟು.

ಏವಂಗುಣ ವಿಶಿಷ್ಟವಾದ ಈ ಪುಸ್ತಕವು ಸದ್ಯದ ವ್ಯಾಯಾಮ ಶಿಕ್ಷಣ ಪ್ರಚಾರ-ಪ್ರಸಾರಗಳ ದೃಷ್ಟಿಯಿಂದ ತುಂಬ ಉಪಯುಕ್ತವಾಗಿದೆ. ಇದು ಪ್ರತಿಯೊಂದು ಹಳ್ಳಿಯ ಶಾಲೆಯ ಶಿಕ್ಷಕನ ಕಡೆಗೆ ಇರಲೇಬೇಕಲ್ಲದೆ ಹಳ್ಳಿಯ ಸುಧಾರಣೆಗೆಂದು ಕಾರ್ಯಮಾಡುವ ಸ್ವಯಂಸೇವಕರ ಬಳಿಯಲ್ಲಿಯೂ ಇದ್ದೇ ಇರಬೇಕು. ಇದರಲ್ಲಿಯ ವ್ಯಾಯಾಮಕ್ರಮಗಳೂ ಆಟಗಳೂ ಮನೋರಂಜಕವಾಗಿರುವುವಲ್ಲದೆ, ದೇಹಾರೋಗ್ಯಕ್ಕೆ ಆವಶ್ಯಕವಾಗಿರುವುವು. ಗ್ರಂಥದ ಭಾಷೆಮಾತ್ರ ಕನ್ನಡದ ಕಿವಿಯನ್ನು ಕೆಣಕದೆ ಬಿಡದು. ಪ್ರತಿಯೊಂದು ವಾಕ್ಯವೂ 'ಇದು ಕನ್ನಡದ ರೀತಿಯದಲ್ಲ' ಎಂದು ಎನ್ನಿಸಿಕೊಳ್ಳುವಂತಹದಾಗಿದೆ. 'ಇದೇನು ಸಾಹಿತ್ಯವಿಷಯವಲ್ಲ, ಶಾಸ್ತ್ರೀಯ ವಿಷಯ' ಎಂದು ವಿಮರ್ಶಕರ ಲೆಕ್ಕಣಿಕೆಗೆ ಧಾಲವನ್ನು ಒಡ್ಡಬಹುದು. ಆದರೆ ವಾಕ್ಯಗಳು ಸರಳಾರ್ಥವನ್ನಾದರೂ ಹೊತ್ತುಕೊಂಡು ಬಂದುವುಗಳಾಗಿರಬೇಕಲ್ಲವೆ? ಮುಂದಿನ ಆವೃತ್ತಿಯಲ್ಲಿ ಭಾಷೆಯ ತಿದ್ದುಪಡಿಯಾಗಬೇಕಾದುದು ತೀರ ಅಗತ್ಯ. ಮುದ್ರಣ ದೋಷಗಳೂ ಸಾಕಷ್ಟು ಉಳಿದುಕೊಂಡಿವೆ. ಈ ಪುಸ್ತಕಕ್ಕಿರುವ 'ಶರೀರ ಶಿಕ್ಷೆ' ಎಂಬ ಹೆಸರನ್ನೂ ಹಲವರು ಆಕ್ಷೇಪಿಸಬಹುದಾಗಿದೆ. ಏಕೆಂದರೆ 'ಶಿಕ್ಷೆ' ಎಂಬುದಕ್ಕೆ 'ಶಿಕ್ಷಣ' ಎಂಬರ್ಥ ಸಂಸ್ಕೃತದಲ್ಲಿ ಇದೆಯಾದರೂ, ಕನ್ನಡದಲ್ಲಿ ಈ ಪದಕ್ಕೆ 'ದಂಡನೆ' ಎಂಬರ್ಥ ರೂಢವಾಗಿದೆ. ರೂಢಾರ್ಥಕ್ಕೊಂದು ಭಾಷೆಯಲ್ಲಿ ಪ್ರಮುಖಸ್ಥಾನವಿದೆಯೆಂಬುದನ್ನು ಮರೆಯಲಾಗದು. ಪುಸ್ತಕದ ಉಪಯುಕ್ತತೆ, ಇದನ್ನು ಸಿದ್ಧಗೊಳಿಸಲಿಕ್ಕಾದ ವೆಚ್ಚ ಇವುಗಳ ದೃಷ್ಟಿಯಿಂದ ಇದಕ್ಕಿಟ್ಟ ೩-೦-೦ಗಳ ಬೆಲೆ ಹೆಚ್ಚಲ್ಲವಾದರೂ, ಕೊಳ್ಳುವ ಜನಸಾಮಾನ್ಯದ ದೃಷ್ಟಿಯಿಂದ ಈ ಬೆಲೆ ಹೆಚ್ಚೆನಿಸದಿರದು. ಶ್ರೀಮಾನ್ ಬಾಪಟರು ಕನ್ನಡಿಗರಿಗೆ ಈ ಪುಸ್ತಕವನ್ನೊದಗಿಸಿಕೊಟ್ಟು, ಅವರ ಅಭಿನಂದನೆಗೆ ಪಾತ್ರರಾಗಿದ್ದಾರೆ.

— ಬಿ. ಹಿ. ಎಸ್. ರಾವ್.

೨೦. ಗ್ರಾಮಪಂಚಾನನ

ಶ್ರೀ. ಬಾ. ಕೃ. ಲಕ್ಷ್ಮೇಶ್ವರ ಅವರು ಬರೆದುದು. ಮನೋಹರ ಗ್ರಂಥಮಾಲೆಯ ಪ್ರಕಟನೆ.

ಇದೊಂದು—ಇನ್ನೂ ಮುಂದುವರಿಯಲಿದ್ದ—ಹಳ್ಳಿಯ ಜೀವನವನ್ನು ಚಿತ್ರಿಸುವಂತಹ—ಕಾದಂಬರಿ. ಪ್ರೋ. ಗೋಕಾಕ ಅವರು ಮುನ್ನುಡಿ ಬರೆದಿದ್ದು ಅದರಲ್ಲಿ ಈ

ಕಾದಂಬರಿಯ ಆವಶ್ಯಕತೆಯನ್ನೂ ಗುಣಗಳನ್ನೂ ಚೆನ್ನಾಗಿ ಎತ್ತಿ ತೋರಿಸಿದ್ದಾರೆ. ಈ ಕಾದಂಬರಿಯಲ್ಲಿರುವ ಕಥಾವಸ್ತುವೆಂದರೆ ಇಷ್ಟು:—

ಬೊಮ್ಮಗೇರಿಯ ದೇಸಾಯಿ ಶ್ರೀಪತರಾಯರು ಮಧ್ಯಮ ವಯಸ್ಸಿನವರು. ಅವರ ಹೆಂಡತಿ ಚಂದ್ರಾವತಿಬಾಯಿ. ಬಹಳ ದಿನಗಳಾದರೂ ಈ ದಂಪತಿಗಳಿಗೆ ಮಕ್ಕಳಾಗಿರಲಿಲ್ಲ. ದೇಸಾಯರು ಉದಾರ ಮನಸ್ಸಿನವರು. ಚಂದ್ರಾವತಿ ಬಾಯಿಯಲ್ಲಿ ಸಾಂಪ್ರದಾಯಿಕ ಸ್ತ್ರೀಸಹಜ ಮುಗ್ಧತನ ತುಂಬಿ ಹೋಗಿರುವುದು. ದೇಸಾಯರು ಊರ ಜನರಿಗೆಲ್ಲ ಬೇಕಾಗಿದ್ದರು. ಅವರ ದಾಯಾದಿಯೊಬ್ಬರ ಹುಡುಗ ಒಡಕನೆಂಬನನು, ಪ್ರಾಥಮಿಕ ವಿದ್ಯಾಭ್ಯಾಸಕ್ಕೆಂದು ಬಂದು ದೇಸಾಯಿಯರ ಮನೆಯಲ್ಲಿಯೆ ಇರುವನು. ಮಕ್ಕಳಿಗಾಗಿ ಹಂಬಲಿಸುತ್ತಿರುವ ಚಂದ್ರಾವತಿಬಾಯಿಯನ್ನು ಈ ತುಂಟನಾದ ಒಡಕ ತನ್ನ ಕೈಗೊಂಬೆಯನ್ನಾಗಿ ಮಾಡಿಕೊಳ್ಳುವನು. ದೇಸಾಯರಿಗೆ ತಮ್ಮ ಮನೆಯಲ್ಲಿಯೆ ತಮಗೆ ಸ್ವಾತಂತ್ರ್ಯ ವಿಲ್ಲದೆ ಹೋಗುವುದು. ಚಂದ್ರಾವತಿ ಬಾಯಿಯನ್ನು ತನ್ನ ಕಡೆಗೆ ಒಲಿಸಿಕೊಳ್ಳಲಿಕ್ಕೆ ಒಡಕ ಅನೇಕ ಕುತಂತ್ರಗಳನ್ನು ಹೂಡುವನು. ಕೊನೆಗೆ ಹೆಂಡತಿಯ ಕಡೆಯಿಂದಲೆ ದೇಸಾಯರಿಗೆ ವಿಷಪ್ರಯೋಗ ಮಾಡಿಸುವನು. ಒಡಕನ ನೀಚತನವನ್ನರಿತ ದೇಸಾಯರು, ತಮ್ಮ ತರುವಾಯ ತಮ್ಮ ಆಸ್ತಿಯೆಲ್ಲ ಇನ್ನೊಬ್ಬ ದಾಯಾದಿಗೆ ಸಲ್ಲಬೇಕೆಂದು ಮೃತ್ಯುಪತ್ರಮಾಡಿಸಿಟ್ಟಿದ್ದರೂ, ಒಡಕಣ್ಣ ಅವರ ಮರಣದ ತರುವಾಯ ಚಂದ್ರಾವತಿಬಾಯಿಯವರ ದತ್ತಕ ಮಗನಾಗುವನು. ನ್ಯಾಯವು ಕೋರ್ಟಿಗೆ ಹೋಗುವುದು. ಅಲ್ಲಿ ದೇಸಾಯರ ಮಿತ್ರರು ಕೂಡ ಒಡಕಣ್ಣನಂತೆ ಸಾಕ್ಷಿ ಹೇಳಿದುದರಿಂದ, ನಿಜವಾದ ಮೃತ್ಯುಪತ್ರ ಸುಳ್ಳಾಗುವುದು. ಚಂದ್ರಾವತಿ ಬಾಯಿಯ ಅಣ್ಣನ ಮಗಳೊಂದಿಗೆ ಒಡಕಣ್ಣನ ವಿವಾಹವಾಗಿ ಕಾದಂಬರಿ ಕೊನೆಗೊಂಡಿದೆ. "ಜೋಯಿಸರ ತಂಗಿಯೊಡನೆ ತನ್ನ ಬ್ರಹ್ಮಚರ್ಯಾಶ್ರಮವನ್ನು ಆಚರಿಸಿದ ಒಡಕಣ್ಣನು ಈಗ ಅವರ ಮಗಳೊಡನೆ ಗಾರ್ಹಸ್ಥ್ಯವನ್ನು ಸ್ವೀಕರಿಸಲು ಸಿದ್ಧನಾದನು" ಎಂಬುದಾಗಿ ಕಾದಂಬರಿಯಲ್ಲಿ ಉಪಾಂತ್ಯ ವಾಕ್ಯವಿದೆ.

ಇದರಲ್ಲಿಯ ಕತೆ ಮನೋರಂಜಕವಾಗಿದೆ. ಸನ್ನಿವೇಶಗಳು ಕುತೂಹಲಪೂರ್ಣವಾಗಿವೆ. ದೇಸಾಯರ ಸ್ವಭಾವ ವಾಚಕರ ಮನಸ್ಸಿನಲ್ಲಿ ಆದರಯುಕ್ತ ಮರುಕವನ್ನು ಹುಟ್ಟಿಸುವುದು. ಚಂದ್ರಾವತಿಬಾಯಿಯ ಸ್ವಭಾವ ಮರುಕದಿಂದ ಕೂಡಿದ ತಿರಸ್ಕಾರವನ್ನು ಹುಟ್ಟಿಸುವಂತಹದು. ಒಡಕಣ್ಣನ ಸ್ವಭಾವ ಅವನೊಬ್ಬ ರಾಕ್ಷಸನೆಂದು ತಿಳಿದುಕೊಳ್ಳಲು ಹಚ್ಚುವುದು. ಆದರೆ ಪ್ರಾಥಮಿಕಶಾಲೆಯಲ್ಲಿ ಕಲಿಯಲೆಂದು ಬಂದ ಹುಡುಗ ಒಡಕಣ್ಣ, ಮದುವೆಯಾಗಿ ಕನಿಷ್ಠ ೧೦-೧೨ ವರ್ಷಗಳವರೆಗೆ ಸುಖದಿಂದ ಸಂಸಾರಮಾಡಿದ ಚಂದ್ರಾವತಿಬಾಯಿಯನ್ನು ವಶಪಡಿಸಿಕೊಂಡ ವಿಷಯ ತೀರ ಅಸ್ವಾಭಾವಿಕವೆಂದು ಯಾರಿಗೂ ಎನಿಸುವಂತಾಗಿದೆ. ಇದೊಂದು ದೋಷದ ಮೂಲಕ ಕಥೆಯಲ್ಲಿರುವ ಮಿಕ್ಕ ಯಾವ ಗುಣಗಳೂ ವಿಮರ್ಶಕರ ದೃಷ್ಟಿಯಲ್ಲಿ ಅಶಕ್ತವಾಗಿ ಕಾಣುವುವು. ಕಥಾವ್ಯಕ್ತಿಗಳ ಪರಿಚಯ ನಮಗೆ ಆ ವ್ಯಕ್ತಿಗಳ ಕ್ರಿಯೆಯ ಮೂಲಕವಾಗದೆ ಕಥೆಗಾರರ ಮಾತುಗಳಿಂದಲೆ ಹೆಚ್ಚಾಗಿ ಆಗುವುದು. ಪುಟಪುಟದಲ್ಲಿಯೂ ಮಾತುಮಾತಿನಲ್ಲಿಯೂ ವಾಚಕರಿಗೆ ಕತೆಗಾರರ ಮುಖ ಕಂಡೇ ಕಾಣುತ್ತದೆ. ಚಂದ್ರಾವತೀಬಾಯಿಯ ವಿಷಯವನ್ನೆ ಹೆಚ್ಚಾಗಿ ನಾವು ಓದುವೆವಾದರೂ, ಆಕೆಯ ಹೃದಯದ ಹೊಯ್ದಾಟ ನಮ್ಮ ಕಣ್ಣಿಗೆ ಕಾಣುವುದೇ ಇಲ್ಲ. ಈ ಬಗೆಯ ಮುಗ್ಧ ಹೆಂಗುಸರನ್ನು ಮೋಸಗೊಳಿಸಲಿಕ್ಕೆ ಒಡಕಣ್ಣನಂತಹ ತುಂಟನೆ ಏಕೆ, ಯಾವ ಸಾಮಾನ್ಯ ಮನುಷ್ಯನಿಂದಲೂ ಆ ಕೆಲಸ ಸಾಧ್ಯವಾಗಬಹುದು. ಆದುದರಿಂದಲೆ ಒಡಕಣ್ಣನ ತುಂಟತನವು ಅಷ್ಟೊಂದು ಉದ್ದೀಪನಗೊಂಡು ತೋರಲಾರದು. ಮನುಷ್ಯನ ತುಂಟತನ ಮನುಷ್ಯರಾಗಿರುವವರನ್ನು ವಶಪಡಿಸಿಕೊಂಡರೆಯೆ ಅದೊಂದು ಚಮತ್ಕೃತಿಯೆನಿಸುವುದು. ಚಂದ್ರಾವತಿಬಾಯಿಯಂತಹ ಕರೆದತ್ತ ಬರುವ ಮಾನವಪಶುವನ್ನು ವಶಪಡಿಸಿಕೊಳ್ಳುವ ತುಂಟತನದಲ್ಲಿ ಚಮತ್ಕೃತಿಯೇನು ಸಿಕ್ಕೀತು? ಆದರೂ ಹಳ್ಳಿಗಳಲ್ಲಿ ನಡೆಯುವ ಕೆಲವು ವಾಸ್ತವಚಿತ್ರಗಳು ಇದರಲ್ಲಿ ಸಾಕಷ್ಟು ಸಿಕ್ಕುವುವು. ಬರೆದ ಭಾಷೆ ಮಾತನಾಡುವ ಭಾಷೆಗೆ ಸಮೀಪದ್ದಿದೆಯಾದರೂ, ಶೈಲಿ ಕೀರ್ತನಕಾರರ ಅಥವಾ ಬಯಲಾಟದ ಭಾಗವತರ ರೀತಿಯದಾಗಿದೆ. ಪ್ರೊ. ಗೋಕಾಕ ಅವರ 'ಇಜ್ಜೋಡು' ಕಾದಂಬರಿಯ ಪಡಿನೆಳಲೂ ಇದರಲ್ಲಿ ಅಲ್ಲಲ್ಲಿ ನೋಡಲು ಸಿಕ್ಕುವುದು. ಲೇಖಕರು ಬೇಗನೆ ಒಡಕಣ್ಣನ ಗಾರ್ಹಸ್ಥ್ಯ ಜೀವನದ ಚಿತ್ರವನ್ನೂ ಕನ್ನಡಿಗರ ಕೈಯಲ್ಲಿ ಕೊಡಲಿ ಎಂದು ನಮ್ಮ ಹಾರಯಿಕೆ.

— ಬಿ. ಪಿ. ಎಸ್. ರಾವ್

೨೬. ಮುಳ್ಳುಬೇಲಿ

ಶ್ರೀ. 'ಚಾಲುಕ್ಯ' ಅವರು ಬರೆದು ಶ್ರೀ. ಕೃಷ್ಣಶರ್ಮ, ಹೈದರಾಬಾದ್ ಅವರು ಪ್ರಕಟಿಸಿದುದು.

ಮಿ. ವಾಲ್ಕೆನ್ ಎಂಬವರು ಇಂಗ್ಲಿಷಿನಲ್ಲಿ ಬರೆದ 'ಬಾರ್ಬ್ಡ್ ವಾಯರ್' ಎಂಬ ಹೆಸರಿನ ಕಾದಂಬರಿಯ ಭಾಷಾಂತರವಿದು. ವಿಶ್ವಬಾಂಧವ್ಯವನ್ನೂ ಯುದ್ಧನಿರೋಧವನ್ನೂ ಬೋಧಿಸುವ ಉದ್ದೇಶದಿಂದ ಮೂಲಲೇಖಕರು ಇದನ್ನು ಬರೆದಿದ್ದಾರೆ. ಯುದ್ಧದ ಮೂಲಕ ಪರಸ್ಪರ ರಾಷ್ಟ್ರಗಳಲ್ಲಿ ನೆಲಸಿಕೊಂಡು ಬರುವ ಜಾತಿವೈರವು, ಶುದ್ಧಮಾನುಷಜೀವನಕ್ಕೆ ಎಷ್ಟೊಂದು ಪ್ರತಿಬಂಧಕವಾಗುವುದೆಂಬುದನ್ನು, ಈ ಕಾದಂಬರಿಯಲ್ಲಿಯ ದುರಂತಕಥಾವಸ್ತುವು ತುಂಬ ಪರಿಣಾಮಕಾರಕವಾಗಿ ಚಿತ್ರಿಸಿ ತೋರಿಸುವುದು:

ಯುರೋಪಿನ ಕಳೆದ ಮಹಾಯುದ್ಧದ ಪ್ರಾರಂಭಕಾಲ. ಇಂಗ್ಲಿಷ್ ಜನರ ಆಡಳಿತಕ್ಕೆ ಸೇರಿದ 'ವ್ಯಾನ್' ಎಂಬ ನಡುಗಡ್ಡೆಯ ಪಶ್ಚಿಮದಲ್ಲಿ 'ನಾಕಾಲೊಘ್' ಎಂಬ ಕೃಷಿಪ್ರದೇಶವಿರುವುದು. ಅಲ್ಲಿ 'ರಾಬರ್ಟ್ ಕ್ರೈಟನ್' ಎಂಬ ಹೆಸರಿನ ಮುದುಕ ಒಕ್ಕಲಿಗನಿದ್ದ. ಅವನಿಗೆ 'ರಾಬಿ' ಹಿರಿಯಮಗ; 'ಮೋನಾ' ಇಪ್ಪತ್ತುಮೂರು ವರ್ಷದ ಸುಂದರಿಯಾದ ಮಗಳು. ಯುದ್ಧ ಪ್ರಾರಂಭವಾಯಿತು.

ರಾಬಿ ಬ್ರಿಟಿಷ್‌ಪಡೆಯಲ್ಲಿ ಸೇರಿ ರಣಾಂಗಣಕ್ಕೆ ಹೋದ. ಮೋನಾ ತಂದೆಯ ಕೆಲಸವನ್ನು ನೋಡಿಕೊಳ್ಳುತ್ತ ಮನೆಯಲ್ಲಿಯೆ ಇರುವಳು. ಮುಂದೆ 'ಈ ನಾಕಾಲೋಯ್' ಬಯಲನ್ನು ಸರಕಾರದವರು ಜರ್ಮನ್ ಕೈದಿಗಳನ್ನಿರಿಸುವ ಕ್ಯಾಂಪಿಗಾಗಿ ಬಾಡಿಗೆಹಿಡಿದರು. ಸುಮಾರು ೨೫೦೦೦ ದಷ್ಟು ಜರ್ಮನರನ್ನು ತಂದು ಅಲ್ಲಿ ಇರಿಸಿದರು. ಅವರಲ್ಲಿ 'ಓಸ್ಕಾರ್' ಎಂಬ ಹೆಸರಿನ ಜರ್ಮನ್ ತರುಣ ಒಂದು ದಿನ ಮೋನಾಳ ದೃಷ್ಟಿಗೆ ಬೀಳುವ. ಮೊದಲಿನಿಂದಲೂ ಜರ್ಮನರನ್ನು ಸಂಪೂರ್ಣವಾಗಿ ದ್ವೇಷಿಸುತ್ತಿದ್ದ ಆ ತರುಣಿಗೆ, ಇದ್ದುದಿದ್ದ ಹಾಗೆಯೆ ಪ್ರಥಮದರ್ಶನದಲ್ಲಿಯೆ ಓಸ್ಕಾರನಲ್ಲಿ ಒಲವು ತಲೆದೋರಿತು. ಯುದ್ಧದಲ್ಲಿ ಜರ್ಮನರ ಗುಂಡಿನೇಟಿನಿಂದ ರಾಬಿ ಸತ್ತ ವರ್ತಮಾನ ಬರುವುದು. ಇದರಿಂದ ಮುದುಕತಂದೆಯ ಸಮತಾಭಾವ ನಷ್ಟವಾಗಿ, ಅವನು ಜರ್ಮನರೆಂದರೆ ಕಿಡಿಯನ್ನು ಕಾರಲು ತೊಡಗುವನು. ಓಸ್ಕಾರನು ತನ್ನ ದಿವ್ಯಚಾರಿತ್ರ್ಯದಿಂದ ಮೋನಾಳ ಒಲವಿನ ಮೊಳಕೆಯನ್ನು ಬಳೆಯಿಸತೊಡಗುವನು. ಇದು ತಿಳಿದ ಮೋನಾಳ ತಂದೆ ಜರ್ಮನ್‌ದ್ವೇಷದಿಂದ ಮಗಳ ಪ್ರಣಯಜೀವನಕ್ಕೆ ವಿರೋಧಿಯಾಗುವನು. ಯುದ್ಧದ ಮೂಲಕ ಎರಡೂ ಪಕ್ಷಗಳಿಂದಾಗುವ ಅನ್ಯಾಯ ಕಾರ್ಯಗಳಿಗಾಗಿ ಮೋನಾಳ ಮನಸ್ಸು ಹೇಸುವುದು. 'ಮನುಷ್ಯತ್ವ ಜರ್ಮನರಲ್ಲಿ ಕೂಡ ಇರುವುದು, ಪಶುತ್ವ ಇಂಗ್ಲಿಷರಲ್ಲಿಯೂ ಕಡಿಮೆಯಿಲ್ಲ' ಎಂಬ ಮಾತು ಆಗಾಗ ಅವಳ ಅನುಭವಕ್ಕೆ ಬರುವುದು. ಓಸ್ಕಾರನಲ್ಲಿ ಮಗಳ ಪ್ರೇಮ ಬಳೆಯುವುದನ್ನು ಕಂಡು, ತಂದೆ ಎದೆಯೊಡೆದುಕೊಂಡು ಸಾಯುವನು. ಸ್ವದೇಶದಲ್ಲಿ ಎಲ್ಲಕಡೆಗೂ ಮೋನಾಳನ್ನು ಕುರಿತು ನಿಂದೆಯ ನುಡಿ ಕೇಳತೊಡಗುವುದು. ಆದರೂ ಓಸ್ಕಾರನಲ್ಲಿಯ ಆಕೆಯ ಪ್ರೀತಿಗೆ ಭಂಗಬರಲಿಲ್ಲ. ಕೊನೆಗೆ ಯುದ್ಧಮುಗಿದು ಶಾಂತಿಯಾಯಿತು. ತಾವಿನ್ನು ಮದುವೆ ಮಾಡಿಕೊಂಡು ಸುಖವಾಗಿ ಜೀವಿಸಬೇಕೆಂಬ ಸಂತೋಷದಲ್ಲಿ ಇಬ್ಬರೂ ಇದ್ದರು. ಆದರೆ ಜನಾಂಗದ್ವೇಷ, ಜರ್ಮನನಾದ ಓಸ್ಕಾರ್ ಇಂಗ್ಲಂಡಿನಲ್ಲಿ ಬೇಡವೆಂದಿತು; ಇಂಗ್ಲಿಷ್‌ಳಾದ ಮೋನಾ ಜರ್ಮನಿಯಲ್ಲಿ ಬೇಡವೆಂದಿತು. ಜನಾಂಗದ್ವೇಷವೇನೂ ಇಲ್ಲದಿರುವ ಅಮೇರಿಕೆಗೆ ಹೋಗಿ ಇಬ್ಬರೂ ಬದುಕಿರಬಹುದೆಂದು ಯೋಚಿಸಿದರು; ಆದರೆ ಹಣಗಾರರನ್ನಷ್ಟೇ ತನ್ನಲ್ಲಿ ಸ್ವಾಗತಿಸುವ ಅಮೇರಿಕೆ, ಈ ಬಡವರಿಗೆ ಬರಬೇಡವೆಂದಿತು. ಸ್ವಕೀಯರೇ ಆದ ಜಾನ್-ಕಾರ್ಲೆಟ್, ಅವನ ರೈತರು, ನಂಬುಗೆಯ ವಕೀಲ ಎಲ್ಲರೂ ಸೇರಿ ಮೋನಾಳ ಸಂಪತ್ತಿಯನ್ನು ಅಪಹರಿಸಿದರು. ಕೊನೆಗೆ ತಮ್ಮ ಪ್ರೇಮದ ವಿಕಾಸಕ್ಕೆ ಭೂತಳದಲ್ಲಿ ಎಲ್ಲಿಯೂ ಸ್ಥಳಸಿಕ್ಕದೆಂದು ಎನಿಸಲು, ಇಬ್ಬರೂ ಒಬ್ಬರನ್ನೊಬ್ಬರು ಬಿಗಿಯಾಗಿ ಬಂಧಿಸಿಕೊಂಡು, ಸಮುದ್ರದಲ್ಲಿ ಹಾರಿಕೊಳ್ಳುವರು. ಕತೆಯು ಕೊನೆಗೊಳ್ಳುವುದು.

ಅನುವಾದದ ಭಾಷೆ ಸರಳವಾಗಿದೆ. ಉತ್ತರಕರ್ನಾಟಕದ ಬಳಕೆಮಾತಿನಲ್ಲಿ ರೂಢವಾಗಿರುವ ವಾಕ್ಪ್ರಚಾರಗಳನ್ನೂ ಶಬ್ದಪ್ರಯೋಗ–ವಾಕ್ಯಪ್ರಯೋಗಗಳನ್ನೂ ಅನ್ಯದೇಶ್ಯಶಬ್ದಗಳನ್ನೂ ಹೆಚ್ಚಾಗಿ ಬಳಸಿಕೊಂಡುದರಿಂದ, ಮೈಸೂರು-ಮಂಗಳೂರತ್ತಕಡೆಯ ವಾಚಕರಿಗೆ ಅವುಗಳನ್ನು ತಿಳಿದುಕೊಂಡು ಓದಲು ತೊಂದರೆಯಾಗಬಹುದು. ಆದರೆ ಕತೆಯು ಅವುಗಳನ್ನು ತಿಳಿದುಕೊಂಡೇ ಮುಂದುವರಿಯಬೇಕೆಂದು ನಿಂತಲ್ಲಿ ನಿಂದಿರಿಸದೆ, ಪ್ರವಾಹವೇಗದಲ್ಲಿ ಮುಂದಕ್ಕೆ ಕರೆದುಕೊಂಡು ಹೋಗುವಷ್ಟು ಕುತೂಹಲಪೂರ್ಣವಾಗಿದೆ. ಇಂದಿನ ಈ ಯುದ್ಧಕಾಲದಲ್ಲಿಯಂತೂ ಈ ಕಾದಂಬರಿಯನ್ನು ಪ್ರತಿಯೊಬ್ಬನೂ ಓದಿಕೊಳಬೇಕು. ಯುದ್ಧದ ಅನರ್ಥಗಳನ್ನೂ ಮನುಷ್ಯತ್ವದಿಂದ ದೂರಕ್ಕೊಯ್ಯುವ ಹುಚ್ಚು ಅಭಿಮಾನಗಳ ದುಷ್ಪರಿಣಾಮಗಳನ್ನೂ ಪರಿಚಯಮಾಡಿಕೊಳ್ಳಬೇಕು.

—ಬೆಟಗೇರಿ ಕೃಷ್ಣಶರ್ಮ

೧೧೫. ಕನ್ನಡ ಸಾಹಿತ್ಯವಾಹಿನಿ.

ಬರೆದವರು: ಎನ್. ಕೆ. ಕುಲಕರ್ಣಿ ಎಂ. ಎ.

ಮಿಂಚಿನ ಬಳ್ಳಿಯಲ್ಲಿ ಪ್ರಕಟವಾಗಿದೆ.

ಪುಸ್ತಕದ ಹೆಸರನ್ನು ಕಂಡಕೂಡಲೆ, ಇದೊಂದು ಕನ್ನಡಸಾಹಿತ್ಯದ ಇತಿಹಾಸವಿರಬೇಕು ಎನಿಸುವುದು. ಕನ್ನಡದಲ್ಲಿ ಏನಿದೆಯೆಂದು ಮೂಗುಮುರಿಯುವವರು ದಯೆಯಿಟ್ಟು ಈ ಪುಸ್ತಕವನ್ನು ಓದಿ ನೋಡಬೇಕು. ಕನ್ನಡದ ಪ್ರಾಚೀನತೆ, ಕನ್ನಡದ ಪರಿವ್ಯಾಪ್ತಿ, ಕನ್ನಡ ವಾಙ್ಮಯದ ವಿಷಯವೈವಿಧ್ಯದ ಕಲ್ಪನೆ ಯಥಾರ್ಥವಾಗಿ ಆಗುವುದು ಈ ಪುಸ್ತಕದಿಂದ.

ಇದರಲ್ಲಿ ಕನ್ನಡವಾಙ್ಮಯದ ಇತಿಹಾಸವನ್ನು ಎರಡು ಮೂರುಬಗೆಯಾಗಿ ವಿಭಾಗಿಸಿದ್ದಾರೆ. ಮತಪ್ರಿಯರ ಸಾಹಿತ್ಯ–ಸಾಹಿತ್ಯಿಕರ ಮತ-ಮತಗಳಿಗನುಸಾರವಾಗಿ ಬೇರೆಬೇರೆ ಯುಗಗಳನ್ನು ಮಾಡಿದ್ದಾರೆ: ಜೈನಯುಗ, ವೀರಶೈವಯುಗ, ಬ್ರಾಹ್ಮಣಯುಗ. ಅಂತೆಯೆ ಸಾಹಿತ್ಯದ ರೂಪದಿಂದಲೂ ವಿಭಾಗಮಾಡಿದುದು ಕಾಣುವುದು. ಚಂಪೂಗ್ರಂಥಗಳ ಕಾಲ, ಷಟ್ಪದಿಗ್ರಂಥಗಳ ಕಾಲ, ವಚನಗಳ ಕಾಲ ಮುಂ. ಅಲ್ಲಲ್ಲಿ, ಆ ಆ ಸಾಹಿತ್ಯದ ರೂಪಗಳನ್ನೂ ಲಕ್ಷಣಗಳನ್ನು ಸ್ವಲ್ಪದರಲ್ಲಿ ಹೇಳಿದ್ದಾರೆ. ಕೆಲವಡೆಯಲ್ಲಿ ಈ ಲಕ್ಷಣಗಳನ್ನು ಇನ್ನಿಷ್ಟು ವಿಶದಮಾಡಿದ್ದರೆ ಸೊಗಸಾಗುತ್ತಿತ್ತು ಎನಿಸುವಂತಿದೆ.

ಕನ್ನಡ ಸಾಹಿತ್ಯದ ಅರಿವು ಇಲ್ಲದವರಿಗೆ— ಕನ್ನಡ ಸಾಹಿತ್ಯವನ್ನು, ತಿಳಿದುಕೊಳ್ಳಬೇಕೆನ್ನುವವರಿಗೆ ಇದೊಂದು ಚೆನ್ನಾದ ಮಾರ್ಗದರ್ಶಕಸೂಚಿಯಾಗಿದೆ.

—ನೆರಂಗ್,



ಸ್ಟೇಶನಿಗೆ ತಕ್ಕಸ್ಥಳ

ಪ್ರವಾಸಿಕ:—(ಪೋರ್ಟರನನ್ನು ಕುರಿತು):— ಏನು? ಸ್ಟೇಶನ್ನಿನಿಂದ ಊರು ಇಷ್ಟು ದೂರವೇ? ಊರಿಗೆ ಹತ್ತೀ ಸ್ಟೇಶನ್ ಮಾಡಿದ್ದರ ಎಷ್ಟು ಅನುಕೂಲ ಆಗತಿತ್ತು ಜನರಿಗೆ!

ಪೋರ್ಟರ್:—ಅದ್ಯಾಂಗ್ರೀ ರಾಯರs, ರೇಲ್ವೇ ಹಳೀ ಇರೂವಲ್ಲೆ ಟೇಸನ್ನ ಮಾಡೂದು ಬಿಟ್ಟು, ಸಿಕ್ಕಲ್ಲೆ ಮಾಡಿದರ ಹ್ಯಾಂಗ ನಡದೀತರೀ?

* * *

ಥೂ ಕತ್ತೆ!

ಮಗ:— ಅಪ್ಪಾ, ಅಣ್ಣಾನ್ನ ನೋಡೋ! ನನಗ ಅಂತಾನ 'ಕುದರೀಹಾಂಗ ಇದ್ದೀದಿ' ಅಂತ.

ತಂದೆ:— ಥೂ ಕತ್ತೇ! ಅಂವ ಕುದುರೀ ಹಾಂಗ ಇದ್ದೀದೀ ಅಂದಾಕ್ಷಣಕ್ಕ, ನೀ ಏನು ಕುದುರಿ ಹಾಂಗ ಆಗತೀ ಏನು?

* * *

ಮದುವೆಯಾದಂದಿನಿಂದ

ಗಂಡ ಹೆಂಡತಿ ಸೇರಿ ತಿರುಗಾಡಲು ಹೊರಟಿದ್ದರು. ಎದುರಿಗೊಂದು ಕತ್ತೆ ಬರಲು ನಗೆಯಾಡಬೇಕೆಂದು ಗಂಡ ಹೆಂಡತಿಗೆಂದ:

"ನೋಡಿದೆಯಾ, ನಿನ್ನ ಸ್ನೇಹಿತ ಬರತೊಡಗಿದ್ದಾನೆ!"

"ಅಯ್ಯs ಹೌದಲಾ, ನಾ ನೋಡೇ ಇಲ್ಲ!"

"ಗರ್ದಭರಾಯರಿಗೂ ನಿನಗೂ ಸ್ನೇಹ ವಾದುದು ಎಂದಿನಿಂದ?"

"ಗೊತ್ತೇ ಇಲ್ಲವೇನು ನಿಮಗೆ? ನನ್ನ ಮದುವೆಯಾದಂದಿನಿಂದ!"

ಸುಧಾರಕ ವರ

"ನಾ ಅಂತೂ ಆತನ್ನ ಮದಿವಿ ಆಗುವಾಕಿ ಅಲ್ಲ; ಆತ ಸಂಪೂರ್ಣ ಸುಧಾರಕ ಇದ್ದಾನ. ಸ್ವರ್ಗ, ನರಕ ಇವುಗಳ ಮ್ಯಾಲ ಅವನಿಗೆ ವಿಶ್ವಾಸವೇ ಇಲ್ಲ!"

ಮಗಳ ಮಾತನ್ನು ಕೇಳಿ ತಂದೆ ಹೇಳಿದ:

"ಮಗೂ, ನೀನು ಸ್ವಲ್ಪವೂ ಕಾಳಜೀ ಮಾಡಬ್ಯಾಡ. ನಿನ್ನ ಜೋಡೀ ಅವನ ಲಗ್ನ ಆಗಲಿ, ಸ್ವರ್ಗ ನರಕ ಎರಡೂ ಅವನ ಕಣ್ಣೆದಿರಿಗೇ ಕಟ್ಟುತಾವ; ಅವನ ವಿಶ್ವಾಸಾ ತಮ್ಮ ಮ್ಯಾಲ ಕೂಡಿಸಿಕೊಂಡೇ ಬಿಡತಾವ!

* * *

ಯಾರ ತಪ್ಪು?

ರಾಮರಾವ್:— ಯಾರ ಪಪ್ಪಾ ಆಕಿ; ತಾಸಿಂತಾಸಾತು ನೋಡತೀನಿ; ಹಾಂಗs ಪಟ-ಪಟಸಲಿಕ್ಕ ಹತ್ಯಾಳ!

ಭೀಮರಾವ್:— ಏನೋ? ಗೊತ್ತಿಲ್ಲೇನು ನಿನಗ? ಆಕಿ ನಮ್ಮ ರಾಣೀ ಸರಕಾರ!

ರಾಮರಾವ:— ಎತೆಲೇ.... ಹೀಂಗೇನು ತಪ್ಪಾಯಿತs ನಂದು!

ಭೀಮರಾವ:— ನಿಂದೆಲ್ಲೀ ತಪ್ಪೋ? ನನ್ನಿಂದs ತಪ್ಪಾಗೇದ ಮೊದಲ!

* * *

ವಕೀಲಿಯ ಜಾಣ್ಮೆ

ಆರೋಪಿಯ ಪರವಾಗಿದ್ದ ವಕೀಲರು ಹೀಗೆ ಹೇಳಿದರು:

"ನನಗ ಈ ಕೋರ್ಟಿನ ಮುಂದ ಹೀಂಗ ಹೇಳಬೇಕಾಗೇದಲ್ಲಾ— ಏನಂದರೆ ನನ್ನ ಪಕ್ಷಗಾರನ ಮೇಲೆ ಬಂದಿದ್ದ ಕನ್ನಾಕೊರಿದ ಆರೋಪ ಸಂಪೂರ್ಣ ನಿರಾಧಾರ ಅದ. ಅಂವ ಕನ್ನಾಕೊರಿದು ಮನೀ ಒಳಗ ಹೋಗೇ ಇಲ್ಲಾ ಅಂಬೂದು ನಿಜವಾದ ಸಂಗತಿ. ಅದರ ಇಷ್ಟೊಂದು ಮಾತ್ರ ಖರೇ ಅದs ಅಲ್ಲಾ: ತೆರೆದಿರೂ ಖಿಡಕೀ ಒಳಗಿಂದ ಅವನ ಬಲಗೈ ಒಳಸೇರಿತು, ಅಲ್ಲಿ ಕೈಗೆ ಸಿಕ್ಕ ವಸ್ತುಗಳನ್ನಷ್ಟು ಹೊರಗೆ ಎಳಕೊಂಡಿತು. ಏನಾದರೂ ಗುನ್ಹೇ ಆಗಿದ್ದರ ಆ ಒಂದು ಕೈಯಿಂದನs ಆಗೇದ; ಅಂದಮ್ಯಾಲ ಆ ಒಂದೇ ಒಂದು ಕೈಯ ತಪ್ಪಿನ ಸಲುವಾಗಿ ಸಂಪೂರ್ಣ ಮನುಷ್ಯನ್ನ ತಪ್ಪುಗಾರಾ ಅಂತ ನಿರ್ಣಯಿಸಿ ಶಿಕ್ಷಾಕೊಡೂದು ಸ್ವಲ್ಪವೂ ಸರಿಯಾದದ್ದಲ್ಲ!"

ವಕೀಲನನ್ನು ಚೇಷ್ಟೆಮಾಡಬೇಕೆಂದು ನ್ಯಾಯಾಧೀಶರು ಮುಗುಳುನಗೆ ನಗುತ್ತ ತಮ್ಮ ನಿರ್ಣಯ ಹೀಗೆ ಹೇಳಿದರು:

"ವಕೀಲರೆ, ನಿಮ್ಮ ಮಾತು ಸರಿಯಾದದ್ದು. ಹಾಗೇ ಆಗಲಿ! ನಿಮ್ಮ ಮಾತಿನಂತೆ ನಿಮ್ಮ ಪಕ್ಷಗಾರನ ಬಲಗೈ ಒಂದನ್ನೇ ಆರೋಪಿಯೆಂದು ನಿರ್ಣಯಿಸಿ, ಅದೊಂದಕ್ಕೇ ಎರಡು ವರ್ಷಗಳ ಸಶ್ರಮ ಶಿಕ್ಷೆಯನ್ನು ವಿಧಿಸಿದ್ದೇನೆ. ತಮ್ಮ ಪಕ್ಷಗಾರನಾದ ಸಂಪೂರ್ಣ ಮನುಷ್ಯನು, ತನಗೆ ಬೇಕೆನಿಸಿದರೆ ತನ್ನ ಕೈಯ ಜೊತೆಯಲ್ಲಿಯೆ ಇರಬಹುದು."

ತುಂಬ ಜಾಣತನದಿಂದ ಈ ನಿರ್ಣಯವನ್ನು ಕೊಟ್ಟೆವೆಂಬ ಅಭಿಮಾನದಿಂದ ನ್ಯಾಯಾಧೀಶರು ಅತ್ತಿತ್ತ ನೋಡುತ್ತಿರುವಾಗಲೆ ವಕೀಲನು ತನ್ನ ಪಕ್ಷಗಾರನಿಗೆ ಸನ್ನೆಯಿಂದ ಏನನೋ ತಿಳಿಸಿದ. ಕೂಡಲೆ ಪಕ್ಷಗಾರನು ಎದ್ದು, ತನ್ನ ಮರದ ಕೈಯನ್ನು ಕಳಚಿ ತೆಗೆದು ಕೋರ್ಟಿನ ಟೇಬಲ್ಲಿನ ಮೇಲೆ ಇರಿಸುತ್ತ ಹೇಳಿದ:

"ಶಿಕ್ಷಾದ ಗಡವು ಮುಗಿದ ಕೂಡಲೇನs ಇದನ್ನ ನನ್ನ ಕಡೆ ಕಳಿಸಿಕೊಡ್ರಿ ದೇವ್ರು! ಇದರ ಜೋಡೀ ಇದ್ದು ಬಿಡಲಿಕ್ಕ ನನಗ ಸದ್ಯಕ್ಕ ಸವಡನs ಇಲ್ಲದಾಂಗ ಆಗೇತಿ!"

ಆರ್ಥಿಕ ಪರಿಸ್ಥಿತಿ

ಆಕೆ:— ನನ್ನ ಮದಿವೀ ಮಾಡಿಕೊಳಲಿಕ್ಕೆ, ಎಷ್ಟೊಂದು ಜನರು ನಾಮುಂದೆ ನೀಮುಂದೆ ಅಂತ ಬಂದರು. ಅವರನೆಲ್ಲಾ ಬಿಟ್ಟು ನಿಮ್ಮನ್ನ ಮಾಡಿಕೊಂಡೆ. ಈಗ ನೋಡಿದರ ನಾನು ಯಾರನ್ನ ಬಿಟ್ಟೆನಲ್ಲಾ ಅವರ ಆರ್ಥಿಕ ಪರಿಸ್ಥಿತೀನs ಒಳ್ಳೇದದs ಅಂತ ನನಗ ಅನಿಸಲಿಕ್ಕೆ ಹತ್ತೇದ!

ಆತ:— ನಾನಾದರೂ ಎಲ್ಲಿ ಇಲ್ಲಾ ಅಂತೀನಿ. ಅವರೆಲ್ಲರ್ಹಾಂಗ ನನ್ನನ್ನೂ ನೀನು ಮದಿವ್ಯಾಗದೇಬಿಟ್ಟಿದ್ದರ, ನನ್ನ ಆರ್ಥಿಕ ಪರಿಸ್ಥಿತೀನೂ ಒಳ್ಳೇದಾಗೇ ಇರತಿತ್ತು!

* * *



ಮುಂದಾಳುತನದ ಮುನ್ನಡೆ

ಕೊನೆಗೊಮ್ಮೆ ಸದ್ಯದ ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ನಮ್ಮ ಮುಂದಾಳುಗಳು ಕಣ್ದೆರೆದು ನೋಡಿದರೆಂದು ಸಂತೋಷದಿಂದ ಒಪ್ಪಿಕೊಳ್ಳಬೇಕಾಗಿದೆ. ಹಿಟ್ಲರನ ಹಾವಳಿ ನಡೆದು ಒಂದು ವರ್ಷದ ಅವಧಿಯೀರಿದರೂ, ಜಗತ್ತಿನ ಜೀವನದ ಮತ್ತು ನೀತಿಯ ಮೇಲೆ ಅದರ ಪರಿಣಾಮವೇನಾಗಬಹುದೆಂದು ನಮ್ಮವರು ಇದುವರೆಗೆ ನೋಡಿರಲಿಲ್ಲ. ಹೋದ ತಿಂಗಳು ದಿಲ್ಲಿಯಲ್ಲಿ ವರ್ಕಿಂಗ್ ಕಮಿಟಿಯು ಮಾಡಿದ ನಿರ್ಣಯವು 'ಮುಂದಾಳುತನದ ಮುನ್ನಡೆಯ ಮೊಗಲ ಹೆಜ್ಜೆ' ಎಂದು ಹೇಳಬಹುದು. ಜಯಂತಿಯ 'ನಾಲ್ಕು ನಿಟ್ಟಿನ ನೋಟ'ದ ವಾಚಕರಿಗೆ ಈ ನಿರ್ಣಯದಿಂದ ಆಶ್ಚರ್ಯವಾಗುವಂತಿಲ್ಲ. ಸದ್ಯದ ಸ್ಥಿತಿಯಲ್ಲಿ ಇದೇ ಯೋಗ್ಯವಾದ ನಿರ್ಣಯ, ಇಂತಹ ನಿರ್ಣಯವನ್ನೆ ರಾಜಕಾರಣವನ್ನರಿತವರು ಕೈಕೊಳ್ಳಬೇಕಾಗುವುದು ಎಂದು ಅನೇಕ ತಿಂಗಳುಗಳಿಂದ ಹೇಳುತ್ತ ಬಂದಿದ್ದೇವೆ. ಕೊನೆಗೆ ಜುಲೈ ೧ಕ್ಕೆ ನಾವು ಬರೆದುದರಲ್ಲಿ, ಮುಂದೆ ೮-೧೦ ದಿವಸಗಳಲ್ಲಿ ವರ್ಕಿಂಗ್ ಕಮಿಟಿಯು ನಿರ್ಣಯಿಸಿದುದರಲ್ಲಿ, ಈ ೨೦ ದಿವಸಗಳವರೆಗೆ ಶ್ರೀ. ರಾಜಗೋಪಾಲಾಚಾರಿಯವರು ಹೇಳುತ್ತಿರುವುದರಲ್ಲಿ-ಅನೇಕ ಕಡೆಗೆ ಶಬ್ದಭೇದವೂ ಇಲ್ಲದಂತೆ-ವಿಚಾರಸಾಮ್ಯವಿದೆ. ಇರಲಿ. ಅಖಿಲ ಭಾರತದ ಪ್ರತಿನಿಧಿಯಾದ ಒಂದು ಸಂಸ್ಥೆಯು ಕೊನೆಗೊಮ್ಮೆ ತನ್ನ ಪಕ್ಷವನ್ನು ಅಸಂದಿಗ್ಧವಾಗಿ ಮಂಡಿಸಿದೆ.

ಮಹಾತ್ಮರ ತತ್ತ್ವಸತ್ಯಾಗ್ರಹ

(೧) ಸದ್ಯಕ್ಕೆ ಕೇಂದ್ರ ಸರಕಾರದಲ್ಲಿ ಅಖಿಲರಾಷ್ಟ್ರೀಯ ಮಂತ್ರಿಮಂಡಲವನ್ನು ಸ್ಥಾಪಿಸಬೇಕು, (೨) ಪ್ರಾಂತಗಳಲ್ಲಿ ಸ್ವಾಯತ್ತತೆ (autonomy) ಯ ಆಡಳಿತ ಮೊದಲಿನಂತೆ ನಡೆಯಬೇಕು, ಮತ್ತು (೩) ಹಿಂದುಸ್ಥಾನವು ಸ್ವತಂತ್ರರಾಷ್ಟ್ರವೆಂದು ಕೂಡಲೆ ಉದ್ಘೋಷಿಸಬೇಕು. ಇಷ್ಟಾದರೆ ಕಾಂಗ್ರೆಸು ಪೂರ್ತಿಯಾಗಿ ತನ್ನ ಸಹಕಾರವನ್ನು ಬ್ರಿಟಿಶರಿಗೆ ನೀಡುವುದು-ಎಂಬುದೆ ದಿಲ್ಲಿಯ ಗೊತ್ತುವಳಿಯ ಸಾರ. ಒಂದು ಮಾತನ್ನು ಇಲ್ಲಿ ಮರೆಯುವಂತಿಲ್ಲ. 'ಕಾಂಗ್ರೆಸಿನ ಸಹಕಾರ' ಎಂಬ ಶಬ್ದಗಳಿಗೆ ಈಗ ಮಹತ್ತ್ವದ ಅರ್ಥ ಬಂದಿದೆ. ಹೊರಗಿನ ಹಾವಳಿಯನ್ನು ತಡೆಯುವುದಕ್ಕಾಗಿ ಕಾಂಗ್ರೆಸು ತಾತ್ಪೂರ್ತಿಕವಾಗಿ ಅಹಿಂಸೆಯನ್ನು ಬಿಟ್ಟುಕೊಟ್ಟಿದೆ. ಅದಕಾಗಿಯೆ 'ಸಹಕಾರ ಎಂದರೆ ಶಸ್ತ್ರನಿರ್ಮಾಣ-ಸೈನ್ಯಸಿದ್ಧತೆ-ಯುದ್ಧರಂಗದಲ್ಲಿ ಪ್ರವೇಶ' ಎಂದು ಶ್ರೀ. ರಾಜಗೋಪಾಲಾಚಾರಿಯವರು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಈ ಸಂದರ್ಭದಲ್ಲಿ ಮಹಾತ್ಮರಿಗೂ ಅವರ ಅನುಯಾಯಿಗಳಿಗೂ ಭಿನ್ನಾಭಿಪ್ರಾಯವಾಗಿದೆ. ಇದುವರೆಗೂ ಮಹಾತ್ಮರು 'ಬೇಕಾದ ಪ್ರಸಂಗದಲ್ಲಿಯೂ ಅಹಿಂಸೆಯು ಸಬಲವಾದ ಶಸ್ತ್ರವಾಗಬಲ್ಲುದು' ಎಂದು ಪ್ರತಿಪಾದಿಸುತ್ತಿದ್ದಾರೆ. ಆದರೇನು? ಹತ್ತು ತಿಂಗಳ ಮುಂಚೆ 'ಯಾವ ಕರಾರನ್ನೂ ಹಾಕದೆ ಬ್ರಿಟಿಶರಿಗೆ ಸಹಾಯ-ಸಹಕಾರಗಳನ್ನು ನೀಡಿರಿ' ಎಂದು ಉಪದೇಶಿಸಿದ ಮಹಾತ್ಮರು ಈಗ 'ಅಹಿಂಸೆ'ಯ ಕರಾರಿನ ಮೇಲೆ ತಮ್ಮ ಪಕ್ಷವನ್ನು ಮಂಡಿಸುತ್ತಲಿದ್ದಾರೆ. ಅಹಿಂಸೆಯ ತಾತ್ತ್ವಿಕ ಶ್ರೇಷ್ಠತೆಯನ್ನು ಯಾರೂ ಅಲ್ಲಗಳೆದಿಲ್ಲ, ಅಲ್ಲಗಳೆಯುವಂತಿಲ್ಲ. ಆದರೆ ಆ ತತ್ತ್ವದ ಮೊದಲ ದೊಡ್ಡ ಪ್ರಯೋಗಕ್ಕೆ ಇದು ಅನುಕೂಲ ಸಮಯವಲ್ಲ ಎಂದು ವರ್ಕಿಂಗ್ ಕಮಿಟಿಯು ಧೈರ್ಯದಿಂದ ನಿರ್ಣಯಿಸಿದೆ.

ಕಾಂಗ್ರೆಸಿನ ಪ್ರತಿನಿಧಿತ್ವ

ಕಾಂಗ್ರೆಸಿನ ನಿರ್ಣಯದಿಂದ ನಮ್ಮ ರಾಜಕೀಯ ವಾತಾವರಣವೇ ಬದಲಾಯಿಸಿದೆ. ಎಲ್ಲಕ್ಕೂ ಮುಂಚೆ ಕಾಂಗ್ರೆಸ್ ವಿರೋಧಕರೆಬ್ಬಿಸಿದ ಗುಲ್ಲು ಕೇಳಬರುವುದು. 'ತನ್ನ ಕರಾರಿನಂತೆ ನಡೆದರೆ ಹಿಂದುಸ್ಥಾನವೆ ಬ್ರಿಟಿಶರಿಗೆ ಸಹಾಯಮಾಡುವುದೆಂದು ಹೇಳಲು ಕಾಂಗ್ರೆಸಿಗೆ ಯಾವ ಅಧಿಕಾರವಿದೆ? ಕಾಂಗ್ರೆಸು ಇಡಿಯೆ ದೇಶದ ಪ್ರತಿನಿಧಿಯೆ?' ಎಂದು ಇವರ ಆಕ್ಷೇಪ. ಈ ಆಕ್ಷೇಪಕ್ಕೆ ಒಮ್ಮೆ ಸಮರ್ಪಕ ಉತ್ತರವನ್ನು ಕೊಟ್ಟು ಇದು ಇನ್ನೊಮ್ಮೆ ತಲೆ ಎತ್ತದಂತೆ ಮಾಡಬೇಕಾದ ಸಮಯವೀಗ ಬಂದಿದೆ. ಕಾಂಗ್ರೆಸು ಇಡಿಯ ದೇಶದ ಪ್ರತಿನಿಧಿ ಎಂದಿಗೂ ಅಹುದು. (೧) ರಾಜಕೀಯ ಜೀವನದಲ್ಲಿ ಜಾತಿಭೇದವನ್ನು ಒಪ್ಪುವಂತಿಲ್ಲ, ತಾತ್ತ್ವಿಕವಾಗಿ ಕಾಂಗ್ರೆಸೂ ಇದುವರೆಗೆ ಒಪ್ಪಿಕೊಂಡಿಲ್ಲ. ಕಾಂಗ್ರೆಸೊಂದನ್ನು ಬಿಟ್ಟರೆ ಇಡಿಯ ಹಿಂದುಸ್ಥಾನದ ಬೇರೆಬೇರೆ ಪ್ರಾಂತಗಳಲ್ಲಿ ಬಹುಮತವಿದ್ದ ಇನ್ನೊಂದು ರಾಜಕೀಯ ಪಕ್ಷವೇ ನಮ್ಮಲ್ಲಿಲ್ಲ. (೨) ಕಳೆದ ಚುನಾವಣೆಯಲ್ಲಿ ಕಾಂಗ್ರೆಸು ಬಹುಮತದ ಪಕ್ಷವಾಗಿ ಜಯಶಾಲಿಯಾಗಿದೆ. ಎಂಟು ಪ್ರಾಂತಗಳಲ್ಲಿ ಕಾಂಗ್ರೆಸಿನ ಬಹುಮತ. ಮಿಕ್ಕುಳಿವುಗಳಲ್ಲಿ ಕಾಂಗ್ರೆಸಿನ ಪಕ್ಷಬಲವು ಬೇರೆ ಯಾವ

ಒಂದು ಪಕ್ಷಕ್ಕೂ ಇಲ್ಲ ಎಂಬುದನ್ನು ಮರೆಯಕೂಡದು. ಕೆಲವಂತೂ 'ಮಿಶ್ರ' ಮಂತ್ರಿಮಂಡಳಗಳಾಗಿವೆ. (೩) ಜನತೆಯಲ್ಲಿ ರಾಜಕೀಯ ಜಾಗೃತಿಯನ್ನೂ, ಹಳ್ಳಿಹಳ್ಳಿಗಳಲ್ಲಿ ಸ್ವಾತಂತ್ರ್ಯದ ಸಂದೇಶವನ್ನೂ, ಜನಜೀವನದಲ್ಲಿ ಒಂದು ಶಿಸ್ತನ್ನೂ, ಅಖಿಲಭಾರತದ ದೃಷ್ಟಿಯನ್ನೂ ಹುಟ್ಟಿಸಿ ಹೋರಾಡುತ್ತಿರುವ ಒಂದೇ ಒಂದು ಸಂಸ್ಥೆ ಎಂದರೆ ಕಾಂಗ್ರೆಸು. ಇನ್ನೂ ಅನೇಕ ಕಾರಣಗಳನ್ನು ತೋರಿಸಬಹುದಾದರೂ ಮೇಲಿನ ಮೂರು ಮುಖ್ಯ ಕಾರಣಗಳಿಗಾಗಿ ಕಾಂಗ್ರೆಸು ಇಡಿಯ ದೇಶದ ಪ್ರತಿನಿಧಿ ಎಂದು ಒಪ್ಪಬೇಕಾಗುವುದು. ಇಲ್ಲವಾದರೆ ನಮ್ಮದು ಇಡಿಯದಾದ, ಒಂದೇಒಂದಾದ ದೇಶವೇ ಅಲ್ಲ; ಹಿಂದು-ಮುಸಲ್ಮಾನ-ಶೀಖ-ಅಸ್ಪೃಶ್ಯ-ಬ್ರಾಹ್ಮಣ-ಬ್ರಾಹ್ಮಣೇತರ ಎಂಬ ಇಪ್ಪತ್ತೊಂದು ನರಕಗಳ ಭೌಗೋಲಿಕ ಅವ್ಯವಸ್ಥೆ ಎನಬೇಕಾದೀತು. ಆದ್ದರಿಂದ ಯಾವ ಭಾರತೀಯನೂ ಕಾಂಗ್ರೆಸಿನ ಪ್ರತಿನಿಧಿತ್ವವನ್ನು ಅಲ್ಲಗಳೆಯುವಂತಿಲ್ಲ.

ಸ್ವಾತಂತ್ರ್ಯದ ಘೋಷಣೆ

ಕೆಲವರು ಕಾಂಗ್ರೆಸಿನ ನಿರ್ಣಯದಲ್ಲಿ ಇನ್ನೊಂದು ದೃಷ್ಟಿಯಿಂದ ದೋಷವನ್ನು ತೋರಿಸುತ್ತಾರೆ. 'ಹಿಂದುಸ್ತಾನವು ಸ್ವತಂತ್ರ ದೇಶ ಎಂದು ಕೂಡಲೇ ಸಾರಬೇಕು-ಎಂಬುದರ ಅರ್ಥವೇನು ?' ಎಂದು ಇವರ ಆಕ್ಷೇಪ. ಸ್ವಾತಂತ್ರ್ಯವೆಂಬುದು ಯಾರೂ ಯಾರಿಗೂ ಕೈ ಎತ್ತಿ ಕೊಡತಕ್ಕ ವಸ್ತುವಲ್ಲ ಎಂಬುದು, ಸ್ಟೇಟ್ ಸೆಕ್ರೆಟರಿಯವರು ಹೇಳುವುದಕ್ಕೆ ಇಪ್ಪತ್ತು ವರ್ಷವಾದರೂ ಮುಂಚಿತ ಕಾಂಗ್ರೆಸಿಗೆ ಗೊತ್ತಿದೆ. ಆದಕಾರಣವೇ 'ಸ್ವಾತಂತ್ರ್ಯವನ್ನು ಕೊಡಬೇಕು' ಎಂಬ ಶಬ್ದಗಳನ್ನೇ ಆ ನಿರ್ಣಯದಲ್ಲಿ ಉಪಯೋಗಿಸಿಲ್ಲ. ಹಾಗೆ ಸಾರಬೇಕು ಎನ್ನುವುದರ ಉದ್ದೇಶವೆ ಬೇರೆಯಾಗಿದೆ. ಹಾಗೆ ಸಾರಿದರೆ ಸದ್ಯಕ್ಕೆ ಇಂಗ್ಲಂಡಿನ ನೈತಿಕಶಕ್ತಿ ಇನ್ನಿಷ್ಟು ಹೆಚ್ಚುವುದು. ತಾನು ಯಾವ ತತ್ತ್ವಕ್ಕಾಗಿ ಕೊನೆಯವರೆಗೂ ಹೋರಾಡಬೇಕೆಂದು ನಿರ್ಣಯಿಸಿದೆಯೊ ಆ ತತ್ತ್ವವನ್ನು ಇಂತಹ ಸಮಯದಲ್ಲಿ, ಜಗತ್ತಿನ ಸಾಕ್ಷ್ಯದಲ್ಲಿ ಆಚರಣೆಯಲ್ಲಿ ತಂದಂತಾಗುವುದು. ಅನೇಕ ವರ್ಷಗಳಿಂದ, ಅನೇಕ ಕಾರಣಗಳಿಗಾಗಿ ವಿಶ್ವಾಸವನ್ನೆ ಕಳೆದುಕೊಂಡ ಭಾರತೀಯರಿಗೆ, ಈ ಘೋಷಣೆಯಿಂದ ಇಂಗ್ಲಂಡಿನ ತತ್ತ್ವ ಪ್ರೇಮದಲ್ಲಿ (ಇಲ್ಲವೆ ಮಹಾತ್ಮರ ಪರಿಭಾಷೆಯಲ್ಲಿ ಹೇಳುವುದಾದರೆ—ಈ ಹೃದಯಪರಿವರ್ತನೆಗಾಗಿ-change of heart) ವಿಶ್ವಾಸ ಹುಟ್ಟುವುದು. ಇಷ್ಟಾದರೂ 'ಕೂಡಲೇ' ಎಂಬ ಶಬ್ದ ಯಾಕೆ, ಯುದ್ಧ ಮುಗಿದನಂತರ ಆ ಘೋಷಣೆಯನ್ನು ಮಾಡಿದರೆ ನಡೆಯುವುದಲ್ಲವೆ?— ಎಂದು ಕೆಲವರಿಗೆ ಸಂಶಯ. ಸದ್ಯ ಘೋಷಣೆಮಾಡುವುದರಲ್ಲಿಯೂ ಯುದ್ಧದ ತರುವಾಯ ಘೋಷಣೆಮಾಡುವುದರಲ್ಲಿಯೂ ತುಂಬ ಅಂತರವಿದೆ. ಈಗ ಸಾರಿದರೆ ಯುದ್ಧವನ್ನು ಸೇರುವಾಗ ನಮಗೂ ಒಂದು ಹುರುಪು ಬರುವುದು. ನಮಗೂ ಸ್ವಾತಂತ್ರ್ಯವಿದೆ ಎಂಬುದಕ್ಕಾಗಿ ಸ್ವಾತಂತ್ರ್ಯ-ಶತ್ರುವಾದ ಹಿಟ್ಲರನನ್ನು ನಾವೂ ಕೊನೆಯವರೆಗೂ ಎದುರಿಸಲು ಜೀವದ ಹಂಗುದೊರೆದು ಸಿದ್ಧರಾಗುವೆವು. ಈ ಸ್ಥಿತಿಯಲ್ಲಿ ನಮ್ಮ ಶಕ್ತಿ-ಸಹಾಯಗಳು ಇಮ್ಮಡಿಯಾಗುವುವು. ಆದಕಾರಣ 'ಕೂಡಲೆ ಸಾರಬೇಕು' ಎನ್ನುವುದು. ಆ ಶಬ್ದಗಳಿಂದ ಅವಿಶ್ವಾಸವನ್ನು ಸೂಚಿಸುವುದಿಲ್ಲ. ಯಾಕೆಂದರೆ ಹಿಟ್ಲರನು ಇಡಿಯ ಜಗತ್ತಿಗೇ ಸ್ವಾತಂತ್ರ್ಯಶತ್ರುವಾಗಿದ್ದಾನೆ. ಎಂದು ಪ್ರತಿಯೊಬ್ಬ ಕಾಂಗ್ರೆಸಿಗನು ಅರಿತಿದ್ದಾನೆ, ಅರಿತಿರುವನೆಂದೇ ಇದುವರೆಗೆ ಅಖಂಡವಾಗಿ ನಡೆದ ಜನ-ಧನ-ನಿಧಿ-ದಾನಗಳ ಸಹಾಯವನ್ನು ಯಾವ ಕಾಂಗ್ರೆಸಿಗನೂ ವಿರೋಧಿಸಿಲ್ಲ. ಇಂಗ್ಲಂಡಿನ ಹೃದಯಪರಿವರ್ತನ, ಭಾರತೀಯರ ಸಂಕಲ್ಪ ದೃಢೀಕರಣ—ಇವುಗಳಿಗಾಗಿ 'ಕೂಡಲೆ' ಎಂದು ಹೇಳಬೇಕಾಗಿತ್ತು.

ರಾಷ್ಟ್ರೀಯ ಮಂತ್ರಿಮಂಡಳ

ಮೇಲೆ ವಿವರಿಸಿದಂತೆ ಕಾಂಗ್ರೆಸಿನ ಅಭಿಪ್ರಾಯವನ್ನು ತಿಳಿದುಕೊಂಡರೆ, ಕೇಂದ್ರಸರಕಾರದಲ್ಲಿ 'ರಾಷ್ಟ್ರೀಯ ಮಂತ್ರಿಮಂಡಳ'ವೆ ಯಾಕೆ ಕಾಂಗ್ರೆಸಿಗೆ ಬೇಕಾಗಿದೆ ಎಂಬುದು ಸ್ಪಷ್ಟವಾಗುವುದು. ಬ್ರಿಟನ್ನಿಗೆ ಹಿಂದುಸ್ತಾನದ ಸ್ವಯಂಸ್ಫೂರ್ತವಾದ ಸಹಾಯವಿದೆ ಎಂದು ತೋರಿಸುವಾದರೆ ಆ ಸಹಾಯ ಕೊಡುವ ಅಧಿಕಾರ ಹಿಂದೀಯರಿಗೆ ಬೇಕಲ್ಲವೆ? ಸದ್ಯದ ವೈಸರಾಯರ ಎಗ್‌ಝಿಕ್ಯೂಟಿವ್ ಕೌನ್ಸಿಲರರೆಂದರೆ ದೇಶಕ್ಕೆ ಹೊಣೆಗಾರರಲ್ಲದ ಅಧಿಕಾರಿಗಳು. ಅವರು ಜನತೆಯಿಂದ ಅಧಿಕಾರಪಡೆದ ಮಂತ್ರಿಗಳಲ್ಲ. ಅದಕಾಗಿ ಜನರ ಸ್ವಯಂಪ್ರೇರಿತ ಸಹಾಯಕ್ಕೆ ಮೂರ್ತಸ್ವರೂಪವನ್ನು ಕೊಡಲು ಜನರ ಮಂತ್ರಿಗಳೇ ಬೇಕು. ಎರಡನೆಯದಾಗಿ, ಹಿಟ್ಲರನ ವಿಷಯವಾಗಿ ದೇಶದ ಪಕ್ಷಗಳಲ್ಲಿ ಭಿನ್ನಾಭಿಪ್ರಾಯವಿಲ್ಲ. ಸ್ವಾತಂತ್ರ್ಯವೆ ಧ್ಯೇಯವಾಗಿದ್ದ ನಮ್ಮ ಎಲ್ಲ ಪಕ್ಷಗಳಿಗೂ ಹಿಟ್ಲರನು ಶತ್ರುವಾಗಿದ್ದಾನೆ. ಆದುದರಿಂದ ಸಹಾಯದ ಕೆಲಸದಲ್ಲಿ ಎಲ್ಲರಿಗೂ ಸ್ಥಾನ ಬೇಕು. ಇದಲ್ಲದೆ ಇಂದಿನ ಯುದ್ಧರೀತಿಯನ್ನೂ ಹಿಟ್ಲರನ ಅಪಪ್ರಚಾರತಂತ್ರಗಳನ್ನೂ ನೋಡಿದರೆ ಎಲ್ಲರೂ ಒಂದುಗೂಡಿ ಅವನನ್ನು ಎದುರಿಸುವುದೆ ಜಾಣತನವಾಗುವುದು. ಹೀಗೆ ಸ್ವಯಂಪ್ರೇರಿತ ಸಹಾಯಕ್ಕಾಗಿ ಹೊಣೆಗಾರಿಕೆ, ಅನೈಕ್ಯ-ಅಪಪ್ರಚಾರಗಳನ್ನು ತಡೆಯಲು ಎಲ್ಲ ಪಕ್ಷಗಳ ಪ್ರತಿನಿಧಿತ್ವ, ಒಟ್ಟಾರೆ ರಾಷ್ಟ್ರೀಯ ಮಂತ್ರಿಮಂಡಳ (National Government) ಅವಶ್ಯವೆನಿಸುವುದು. ಯುದ್ಧ ಮುಗಿದನಂತರ ಈ ವ್ಯವಸ್ಥೆಯ ಲಾಭ ಮುಟ್ಟದೆ ಹೋಗುವಂತಿಲ್ಲ. ದೇಶದ ಅಸ್ತಿತ್ವಕ್ಕೆ, ಜನರ ಸ್ವಾತಂತ್ರ್ಯಕ್ಕೆ ಧಕ್ಕೆ ತಗುಲಿದ ಸಮಯದಲ್ಲಿ, ಭುಜಕ್ಕೆ ಭುಜ ತಟ್ಟಿ ದುಡಿದ ಬೇರೆಬೇರೆ ರಾಜಕೀಯ ಪಕ್ಷಗಳಲ್ಲಿ ಈ ಅನುಭವದಿಂದ ಪರಸ್ಪರ ಸಹಿಷ್ಣುತೆ-ಸೌಹಾರ್ದಗಳು ಬೆಳೆಯುವುದು ಖಂಡಿತ ಎನಬಹುದಲ್ಲವೆ? ಈ ನಿಮಿತ್ತವಾಗಿ ನಮ್ಮ ರಾಜಕೀಯ ಜೀವನವೆ ಸುವ್ಯವಸ್ಥಿತವಾಗುವ ಸಂಭವವಿದೆ. ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ರಾಷ್ಟ್ರೀಯ ಮಂಡಳವೂ ವರ್ಕಿಂಗ್ ಕಮಿಟಿಯ ನಿರ್ಣಯವೂ ಸಯುಕ್ತಿಕವೆನಿಸುವುವು.

ಕೊನೆ ಎಲ್ಲಿ?

ಸದ್ಯದ ಘಟನೆಗಳಿಂದ ಕಳೆದ ಒಂದು ವರ್ಷದಿಂದ ನಡೆದ ರಾಜಕಾರಣಗೊಂದಲವು ತಿಳಿಯಾಗುವುದೆಂದು ನಂಬುವಂತಿಲ್ಲ. ವರ್ಕಿಂಗ್ ಕಮೀಟಿಯ ನಿರ್ಣಯ ರಾಷ್ಟ್ರದ ಎದುರಿನಲ್ಲಿದೆ.

ಇದಕ್ಕೆ ಬ್ರಿಟಿಶ್ ಸರಕಾರದ ಪತಿಯಿಂದ ಯಾವ ಉತ್ತರ ಬರಬಹುದೆಂಬುದರ ಮಹತ್ತ್ವ ಹೆಚ್ಚಿದೆ. ಎಂದಿನಂತೆ ಹಳೆಯ ಧೋರಣೆಯನ್ನೇ ಎತ್ತಿಹಿಡಿದು, ಜಾತಿಭೇದವನ್ನೆ ತೋರಿಸಿ, ನೂರಾರು ಜಾತೀಯ ಸಂಸ್ಥೆಗಳನ್ನೊಪ್ಪಿ—ಆದಕಾಗಿ ಸ್ವಾತಂತ್ರ್ಯದ ಮಾತು ಅಸಂಭವನೀಯವಲ್ಲದಿದ್ದರೂ ಅಪ್ರಸ್ತುತವಾದುದು ಎಂಬ ಹಿರಿತನದ ಉಪದೇಶವನ್ನು ಬ್ರಿಟಿಶ ಸರಕಾರವು ಮತ್ತೆ ಮಾಡತೊಡಗಿದರೆ, ಸಂಧಾನದ ಆಶೆಯೆ ಮಾಯವಾಗುವುದು. ಕೇಂದ್ರ-ಸರಕಾರದಲ್ಲಿ ತಾತ್ಪೂರ್ತಿಕವಾಗಿ ಕಾಂಗ್ರೆಸ್-ನರೇಂದ್ರಮಂಡಳ-ಮುಸ್ಲಿಂ (ಜನಾಂಗ, ಲೀಗವಲ್ಲ) ಮೂವ್ವರ ಪ್ರತಿನಿಧಿಗಳನ್ನು ಹೊಣೆಗಾರ ಮಂತ್ರಿಪದಕ್ಕೆ ಆರಿಸುವ ಸಿದ್ಧತೆ ವೈಸರಾಯರಿಗಿದ್ದರೆ ಸಂಧಾನದ ಸಂಭವ ಹೆಚ್ಚುವುದು. ಒಬ್ಬರಿಗೆ ಹಿಂದೆ ಜಗ್ಗುವ ಹಟ, ಇನ್ನೊಬ್ಬರಿಗೆ ಮುಂದೆ ದುಡುಕುವ ಹಂಬಲ—ಇವೆರಡರ ನಡುವಿನ ದಾರಿಯನ್ನು ಹಿಡಿದರೆ ಮುತ್ಸದ್ದಿತನಕ್ಕೆ ಮೆರುಗುಕೊಟ್ಟಂತಾಗುವುದು.

ಹಿಟ್ಲರನ ಹಿಡಿತ

ಯುರೋಪದ ಯುದ್ಧದಲ್ಲಿ ಜರುಗುತ್ತಲಿರುವ ಅನೇಕ ಸಂಗತಿಗಳಿಂದ ಹಿಟ್ಲರನ ರಾಜನೀತಿಯ ಘಾತುಕತನವೆ ಹೆಚ್ಚೆಚ್ಚಾಗಿ ನಿದರ್ಶನಕ್ಕೆ ಬರುತ್ತಲಿದೆ. ಫ್ರಾನ್ಸದ ಕಂಗಾಲಾವಸ್ಥೆಯು ಪ್ರತಿಯೊಬ್ಬ ಸ್ವಾತಂತ್ರ್ಯಪ್ರಿಯನ ಕಣ್ದೆರೆಯುವಂತಿದೆ. ಕಳೆದ ೧೫೦ ವರ್ಷಗಳಿಂದ ಜಗತ್ತಿಗೇ ಸ್ವಾತಂತ್ರ್ಯದ ಸಂದೇಶವನ್ನೂ ಸ್ಫೂರ್ತಿಯನ್ನೂ ಕೊಟ್ಟ ಕ್ರಾಂತಿಭೂಮಿಯಾದ ಫ್ರಾನ್ಸವು ಇಂದು ಮದಿಗಂಡನ ತುಂಬುಜವ್ವನೆಯಾದ ಹೆಂಡತಿಯಂತೆ ಆತ್ಮವನ್ನೂ ದೇಹವನ್ನೂ ಮಾರಿಕೊಂಡು ನಿಂತಿದೆ. ಫ್ರಾನ್ಸಕ್ಕೆ ಸ್ವತಂತ್ರ ದೊರೆತನವಿಲ್ಲ; ಇದ್ದ ಸೋಗಿನ ದೊರೆತನದಲ್ಲೂ ಗೆದ್ದ ಹಿಟ್ಲರನ ಅನುಕರಣದ ಫಲವಾಗಿ ವಿಕೃತಸ್ವರೂಪದ ಸರ್ವಾಧಿಕಾರಿತ್ವವಿದೆ. ಇನ್ನು ದುಡಿಯುವುದಕ್ಕಿಷ್ಟೆ ಫ್ರೆಂಚ್‌ಜನರ ಹಕ್ಕು, ಸ್ವಾತಂತ್ರ್ಯ. ದುಡಿಮೆಯ ಹುಟ್ಟುವಳಿಯ ಸ್ವಾಮ್ಯವು ಜರ್ಮನರದು, ಜರ್ಮನ್ ಸೈನಿಕರದು, ನಾಝೀ ಸರಕದೊಡೆಯನದು. ಹಿಟ್ಲರನ ಹಿಡಿತದಲ್ಲಿ ಯಾರು ಸಿಕ್ಕರೂ ಅವರ ಹಣೆಬರೆಹವಿದೇ. ತನ್ನವರೆ ಆದ ಜರ್ಮನರಿಗೆ ಸ್ವಾತಂತ್ರ್ಯವನ್ನು ಕೊಡದ ಹಿಟ್ಲರನು, ತನ್ನ ಶತ್ರುಗಳಿಗೆ ಸ್ವಾತಂತ್ರ್ಯವನ್ನು ಒಪ್ಪಬಹುದೆ? ಆದರೂ ಒಂದು ಸುದೈವದ ಸಂಗತಿ: ಇಂದು ಇಡಿಯೆ ಜಗತ್ತೇ ಹಿಟ್ಲರನ ಶತ್ರುವಾಗಿದೆ. ಸ್ಟಾಲಿನನು ಕೂಡ ಹಿಟ್ಲರನಿಗೆ ಇನ್ನು ಮುಂದೆ ಸಹಾಯಮಾಡಲಿಕ್ಕಿಲ್ಲವೆಂಬುದು (೧) ರುಮಾನಿಯಾದಿಂದ ಬೆಸರೇ-ಬಿಯಾವನ್ನು ಕಸಿದುಕೊಂಡುದರಿಂದ, (೨) ಲಿಥುಯೇನಿಯಾ-ಎಸ್ಟೋನಿಯಾ—ಲಾತ್ವಿಯಾ ದೇಶಗಳನ್ನು ಸೋವಿಯೆಟ್ ಪದ್ಧತಿಗೆ ಒಳಪಡಿಸಿಕೊಂಡುದರಿಂದ, (೩) ಜಪಾನದಲ್ಲಿ ಫಾಸಿಸ್ಟ ವೃತ್ತಿಯ ಮಂತ್ರಿಮಂಡಳ ಆರೂಢವಾದುದರಿಂದ, ಮತ್ತು (೪) ತುರ್ಕಸ್ಥಾನದ ಧೋರಣೆಯಿಂದ ಸ್ಪಷ್ಟವಾಗುತ್ತಲಿದೆ. ಅಮೇರಿಕೆಯಲ್ಲಿ ಎ. ರೂಝುವೆಲ್ಟರು ಮತ್ತೆ ಅಧ್ಯಕ್ಷಪದಕ್ಕೆ ಹುರಿಯಾಳಾಗಿದ್ದಾರೆ; ಆದಕಾಗಿ ಅಮೇರಿಕೆಯು ಇಂಗ್ಲಂಡಿಗೆ ಇನ್ನೂ ಹೆಚ್ಚಾಗಿ ಸಹಾಯ ಮಾಡುವುದು. ಒಂದುವೇಳೆ ರೂಝುವೆಲ್ಟರ ಪ್ರತಿಸ್ಪರ್ಧಿಯಾದ ವಿಲ್‌ಕಿ ಎಂಬವರು ಆರಿಸಿ ಬಂದರೂ ಹಿಟ್ಲರನಿಗೆ ಹಿತವಿಲ್ಲ.

ಯುದ್ಧದ ಪರಿಸ್ಥಿತಿ

ಫ್ರಾನ್ಸವು ಮುಗ್ಗರಿಸಿದ್ದಕ್ಕಾಗಿಯೂ ಇಟಲಿಯು ಹಿಟ್ಲರನ ಪಕ್ಷಕ್ಕೆ ಸೇರಿಕೊಂಡುದಕ್ಕಾಗಿಯೂ ಯುದ್ಧವು ಸ್ವಲ್ಪಾವಧಿಯಲ್ಲಿಯೆ ಮುಗಿಯಬಹುದೆ—ಎಂದು ಅನೇಕರಿಗೆ ಹೆದರಿಕೆಯಾಗಿತ್ತು. ಆದರೆ ಇಟಲಿಯ ಸೈನ್ಯವು ಇಷ್ಟೊಂದು ಹೋಳಿಹಬ್ಬದ ಕಾಮಣ್ಣನಾಗಿದೆ ಎಂಬ ಕಲ್ಪನೆ ಯಾರಿಗಿದ್ದಿತು? ಸದ್ಯ ಶತ್ರುವಿಗೆ ಬೈಯುವುದಕ್ಕೆ ಮಾತ್ರ ಇಟಲಿಯ ಸೈನ್ಯ ನಿಮಿತ್ತವಾಗಿದೆ. ಮುಖ್ಯವಾಗಿ ಇಟಲಿಯ ನೌಕಾಸೈನ್ಯದ ಮೇಲೆ ಹಿಟ್ಲರನ ಭರವಸೆ ಇದ್ದಿತೇನೊ! ಇಟಲಿಗೆ ನಾಕಷ್ಟು 'ಪ್ರಬಲ'ವಾದ ನೌಕಾಸೈನ್ಯವಿದೆ. ಆದರೆ ಅದಕ್ಕೆ ಸಮುದ್ರ ಯುದ್ಧದ ರೂಢಿಯೆ ಇದ್ದಂತೆ ಕಾಣುವುದಿಲ್ಲ. ಬ್ರಿಟಿಶರ ಸಮುದ್ರ ವ್ಯವಹಾರವು ನಿರಾತಂಕವಾಗಿ ಸಾಗಿದೆ. ಒಂದು ಕಡೆ ಜಿಬ್ರಾಲ್ಟರು, ಒಂದು ಕಡೆ ಆಲೆಗ್‌ಝಾಂಡ್ರಿಯಾ——ಇವೆರಡರ ನಡುವೆ ಸಿಕ್ಕ ಇಟಲಿಯ ನೌಕೆಯು, ಭೂಮಧ್ಯ ಸಮುದ್ರದಲ್ಲಿ ಕೂಡ ಬಹಿರಂಗವಾಗಿ ಸಂಚರಿಸಲಾರದಂತಹ ಪರಿಸ್ಥಿತಿ ಇದೆ! ಇತ್ತ ಇಂಗ್ಲಂಡಿನ ಮೇಲೆ ಬೇಗ ದಾಳಿಯನ್ನಿಡದಿದ್ದರೆ ಹಿಟ್ಲರನಿಗೆ ಶಾಂತಿ ಸಮಾಧಾನಗಳು ದೊರಕುವಂತಿಲ್ಲ, ಎಷ್ಟೆಷ್ಟು ತಡವಾದೀತೊ ಅಷ್ಟಷ್ಟು ಪರಾಜಿತ ರಾಷ್ಟ್ರಗಳ ವಿರೋಧಕವೃತ್ತಿಗೆ ಕಸುವು ಬರುವುದಲ್ಲದೆ ಇಂಗ್ಲಂಡಕ್ಕೂ ಸಿದ್ಧತೆಗೆ ಹೆಚ್ಚು ಅವಕಾಶ ಕೊಟ್ಟಂತಾಗುವುದು. ಇನ್ನು ದಾಳಿಯನ್ನು ಮಾಡಬೇಕೆಂದರೆ ವಿಮಾನಗಳ ಹೊರತು ಬೇರೊಂದು ಉಪಾಯವಿಲ್ಲ. ಸದ್ಯಕ್ಕೆ ನಡೆದ ದಿನದಿನದ ವಿಮಾನ ಯುದ್ಧದಲ್ಲಿ ಹಿಟ್ಲರನಿಗೆ ಹುರುಪುತರುವಂತಹ ಘಟನೆ ಇಲ್ಲ. ಬ್ರಿಟಿಶ ಕರಾವಳಿಯನ್ನು ದಾಟಿ ಮುಂದಕ್ಕೆ ಇದುವರೆಗೆ ಜರ್ಮನ್ ವಿಮಾನಗಳನ್ನು ಬ್ರಿಟಿಶರು ಹೋಗಗೊಟ್ಟಿಲ್ಲ. ತದ್ವಿರುದ್ಧವಾಗಿ ಬ್ರಿಟಿಶರ ವಿಮಾನಗಳು ಪ್ರತಿನಿತ್ಯ ಜರ್ಮನರ ಶಸ್ತ್ರಾಸ್ತ್ರಸಂಗ್ರಹಗಳನ್ನೂ ಹಡಗುಗಳನ್ನೂ ಸುಡುತ್ತಲಿವೆ. ಇನ್ನೆರಡು ತಿಂಗಳ ಅವಧಿಯಲ್ಲಿ ಚಳಿಗಾಲ ಬಂದು, ಇಂಗ್ಲಂಡಾದೇಶವು ಮೇಲಿನ ವೈಮಾನಿಕರಿಗೆ ಕಾಣುವದೆ ಕಷ್ಟವಾಗುವುದು; ಅದೇ ಅವಧಿಯಲ್ಲಿ ಹಿಟ್ಲರನ ಎಣ್ಣೆಯ ಸಂಗ್ರಹವು ತೀರುವದೆಂದು ಅಮೇರಿಕೆಯ ತಜ್ಞರು ಹೇಳುತ್ತಿದ್ದಾರೆ. ಹೀಗೆ ಎಲ್ಲ ಕಾರಣಗಳಿಂದ ಹಿಟ್ಲರನು ಕುಂಠಿತನಾಗಿದ್ದಾನೆ.

ಬೆದರಿಕೆಯ ಬ್ರಹ್ಮಾಸ್ತ್ರ

ಹೀಗೆ ಹತಾಶನಾಗಿರುವನೆಂದೇ ಹಿಟ್ಲರನು ತನ್ನ 'ಗುಪ್ತ ಶಸ್ತ್ರ'ವನ್ನು ಬಯಲಿಗೆಳೆದಿದ್ದಾನೆ. ಅದೆಂದರೆ ಬೈಗಳ, ಬೆದರಿಕೆಯ ಬ್ರಹ್ಮಾಸ್ತ್ರ. ನಾನು ಜಯಶಾಲಿ ಎಂದು ಒಪ್ಪದಿದ್ದರೆ, ನಾನು ಹೇಳಿದಂತೆ ಮಾಡದಿದ್ದರೆ ಲಂಡನ್ ನಗರವನ್ನೂ ಇಂಗ್ಲಂಡನ್ನೂ ಸುಟ್ಟು ಬೂದಿ ಮಾಡುವೆ ಎಂದು ಕಿರುಚುತ್ತಲಿದ್ದಾನೆ. ಅದಕ್ಕೆ ಇಂಗ್ಲಂಡದ ಪರರಾಷ್ಟ್ರಮಂತ್ರಿಗಳಾದ ಲಾರ್ಡ್ ಹ್ಯಾಲಿಫಾಕ್ಸರು ಉತ್ತರವನ್ನು ಕೊಟ್ಟಿದ್ದಾರೆ. ಇಂಗ್ಲಂಡಿನ ಈ ನಿರ್ಧಾರಕ್ಕೆ ಇಡಿಯೆ ಸಾಮ್ರಾಜ್ಯವು ಏಕಹೃದಯವಾಗಿ ಒಪ್ಪಿಕೊಂಡಿದೆ. ಆದುದರಿಂದ ತೀವ್ರವೇ ಹಿಟ್ಲರನ ಆಳಿಗಾಲ ಒದಗುವುದೆಂದು ಎಲ್ಲ ಸ್ವಾತಂತ್ರ್ಯಪ್ರಿಯರೂ ಆಶಿಸಬಹುದಾಗಿದೆ.

ಸಾದರ ಸ್ವೀಕಾರ

೨೯. **ಸತ್ಯದೇವಚರಿತೆ** (ಪದ್ಯಗ್ರಂಥ). ಬರೆದವರು ಶ್ರೀ. ಗಮಕಿ ಎಂ. ರಾಘವೇಂದ್ರರಾವ, ಬೆಂಗಳೂರು ನಗರ. ಪ್ರಕಾಶಕರು ಶ್ರೀ. ಎಂ. ಎಸ್. ರಂಗಪ್ಪ, ಸರಕಾರಿ ಪುಸ್ತಕ ವ್ಯಾಪಾರಿಗಳು. ಎ. ಎಸ್. ಸ್ಟ್ರೀಟ್, ಬೆಂಗಳೂರು ಸಿಟಿ. ಕ್ರೌ. ಅ. ೬೬ ಪುಟ. ಬೆಲೆ ೦-೪-೦.

೩೦. **ಮಾರ್ಗದರ್ಶಕ** (ಕಥಾಸಂಗ್ರಹ). ಲೇಖಕರು ಶ್ರೀಮಾನ್ ಎಂ. ವಿ. ಸೀತಾರಾಮಯ್ಯನವರು, ಎಂ. ಎ.; ಧಾರವಾಡ ಮನೋಹರ ಗ್ರಂಥಮಾಲೆಯ ೪೨ನೆಯ ಗ್ರಂಥ. ಕ್ರೌ. ಅ. ೧೪೨ ಪುಟ. ಬೆಲೆ ೦-೧೪-೦.

೩೧. **ಗಾಂಧೀಜಿಯ ಹಾಸ್ಯಪ್ರವೃತ್ತಿ** (ವ್ಯಕ್ತಿಪರಿಚಯಾತ್ಮಕ ಗ್ರಂಥ). ಲೇಖಕರು ಶ್ರೀಯುತ ಕಂದಾಡೆ ಕೃಷ್ಣಯ್ಯಂಗಾರ್, ಬಿ. ಎ., ಪ್ರಕಾಶಕರು ಪ್ರಭಾಕರ ಬುಕ್‌ಡಿಪೋ, ಕೋಟೆ, ಬೆಂಗಳೂರು ನಗರ. ಕ್ರೌ. ಅ. ೬೪ ಪುಟ. ಬೆಲೆ ೦-೬-೦.

೩೨. **ಪಾರ್ವತಿಬಾಯಿ ಆಠವ್ಳೆ** (ಜೀವನಚರಿತ್ರೆ). ಲೇಖಿಕೆ ಶ್ರೀಮತಿ ಎಚ್. ವೈ. ಸರಸ್ವತಮ್ಮನವರು. ಪ್ರಕಾಶಕರು: ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು ನಗರ. ಕ್ರೌ. ಅ. ೧೦+೧೭೮ ಪುಟಗಳು. ಬೆಲೆ ೦-೧೦-೦.

೩೩. **ಹರಿಭಕ್ತಿಸಾರ** (ಪದ್ಯಗ್ರಂಥ). ಶ್ರೀಕನಕದಾಸರಿಂದ ರಚಿತವಾದುದನ್ನು ಶ್ರೀಮಾನ್ ಪಿ. ಶ್ರೀನಿವಾಸತಂತ್ರಿಗಳು ಪರಿಶೋಧಿಸಿದ್ದಾರೆ. ಶ್ರೀ. ಪಿ. ಎ. ಉಪಾಧ್ಯಾಯ ಬುಕ್‌ಡಿಪೋ. ಎ. ಎಸ್. ಸ್ಟ್ರೀಟ್, ಬೆಂಗಳೂರುನಗರ ಅವರು ಪ್ರಕಾಶಕರು. ಕ್ರೌ. ಅ. ೧೮ ಪುಟ. ಬೆಲೆ ೦-೨-೬.

ಶುದ್ಧವಾಗಿಯೂ ಮುದ್ದಾಗಿಯೂ ಪ್ರಕಟವಾಗಿದೆ. ಆವಶ್ಯಕತೆಯುಳ್ಳವರು ಇದನ್ನು ಉಪಯೋಗಿಸಿಕೊಳ್ಳಬೇಕು.

೩೪. **ಭಾರತದ ರಾಜಕೀಯ ಸಮಸ್ಯೆ:** ಮೂಲದಲ್ಲಿ ಪಿ. ಎಲ್. ಡಿ.ರಾಂಟಾ ಅವರು ಇಂಗ್ಲಿಷಿನಲ್ಲಿ ಬರೆದುದರ ಕನ್ನಡ ಭಾಷಾಂತರ. ಭಾಷಾಂತರಕಾರರು 'ಸ್ವಾತಂತ್ರ್ಯಪ್ರಿಯ'ರು. ಧಾರವಾಡ ಮಿಂಚಿನಬಳ್ಳಿಯ ಮೂರನೆಯ ವರ್ಷದ ೧ನೆಯ ಕುಡಿ. ಕ್ರೌ. ಅ. ೧೦+೨೭೪+೨೨ ಪುಟಗಳು. ಬೆಲೆ ೧-೦-೦.

೩೫. **ಸಣ್ಣಕತೆಗಾರರ ೨ನೆಯ ಸಮ್ಮೇಳನದ ವರದಿ.** ಕನ್ನಡ ಸಾಹಿತಿಗಳ ಸಂಘ, ಶ್ರೀಕೃಷ್ಣರಾಜ ಮಂದಿರ, ಚಾಮರಾಜ ಪೇಟೆ, ಬೆಂಗಳೂರು ನಗರ ಅವರು ಪ್ರಕಟಿಸಿದುದು. ಕ್ರೌ. ಅ. ೨೪ ಪುಟ.

ಕಳೆದ ಜನವರಿ ೨೦ ಮತ್ತು ೨೧ನೆಯ ತಾರೀಖುಗಳಲ್ಲಿ, ಬೆಂಗಳೂರು ನಗರದಲ್ಲಿ, ದಿವಂಗತರಾದ ಶ್ರೀಮಾನ್ ಎಂ. ಎನ್. ಕಾಮತರ ಅಧ್ಯಕ್ಷತೆಯಲ್ಲಿ ಸೇರಿದ ಕನ್ನಡ ಸಣ್ಣಕತೆಗಾರರ ಸಮ್ಮೇಳನದ ವಿಶದವಾದ ವರದಿಯಿದು. ಸಮ್ಮೇಳನಕ್ಕೆ ಹೋಗದಿದ್ದವರು ಇದನ್ನೋದಿ ಅಲ್ಲಿ ನಡೆದುದೇನೆಂಬುದನ್ನು ಸರಿಯಾಗಿ ಅರಿತುಕೊಳ್ಳಬಹುದಾಗಿದೆ,

೩೬. **ಕನ್ನಡನಾಡಿನ ಕಥೆಗಳು:** ಶ್ರೀಮಾನ್ ನಾರಾಯಣ ಶರ್ಮರು ಬರೆದುದನ್ನು ಧಾರವಾಡ ಕರ್ನಾಟಕ ಇತಿಹಾಸ ಸಂಶೋಧಕಮಂಡಲದವರು ತಮ್ಮ ರಜತ-ಮಹೋತ್ಸವ ಗ್ರಂಥಮಾಲೆಯ ೨ನೆಯ ಪ್ರಕಟನೆಯನ್ನಾಗಿ ಇದನ್ನು ಪ್ರಸಿದ್ಧಿಸಿದ್ದಾರೆ. ಕ್ರೌ. ಅ. ೨೦+೬೮ ಪುಟ. ಬೆಲೆ ಸಾದಾ ೦-೧೨-೦, ಕ್ಯಾಲಿಕೊ ೧-೦-೦.

೩೭. Jainism & Karnataka Culture (ಸಂಶೋಧನಾತ್ಮಕ ಗ್ರಂಥ). ಪ್ರೊ. ಎಸ್. ಆರ್. ಶರ್ಮ ಎಂ.ಎ., ವಿಲಿಂಗ್ಡನ್ ಕಾಲೇಜು, ಸಾಂಗಲಿ ಅವರು ಬರೆದುದು. ಧಾರವಾಡ ಕ. ಇ. ಸಂ. ಮಂಡಲದ ರಜತಮಹೋತ್ಸವ ಗ್ರಂಥಮಾಲೆಯ ೧ನೆಯ ಪ್ರಕಟನೆ. ಡೆ. ಅ. ೩೦+೨೧೪ ಪುಟಗಳು. ಬೆಲೆ ೫-೦-೦.

೩೮. **ಮನೋರಂಜಕ ವಾಕ್ಯಮಾಲೆ:**

(ಮೊದಲನೆಯ ಪುಸ್ತಕ)

೩೯. ,, (ಎರಡನೆಯ ಪುಸ್ತಕ)

೪೦. ,, (ಮೂರನೆಯ ಪುಸ್ತಕ)

ಈ ಮೂರು ಪುಸ್ತಕಗಳನ್ನೂ ರಚಿಸಿದವರು ಶ್ರೀಮಾನ್ ಕೆ. ಶ್ರೀನಿವಾಸಾಚಾರ್ಯ ಎಂ.ಎ., ಬಿ.ಟಿ. ತುಂಕೂರ ಅವರು. ಪ್ರಕಾಶಕರು ಆಕ್ಸ್‌ಫರ್ಡ ಯುನಿವರ್ಸಿಟಿ ಪ್ರೆಸ್, ಭಾರತ ಬಿಲ್ಡಿಂಗ್ಸ್. ಮೌಂಟರೋಡ್. ಮದ್ರಾಸ್. ಪ್ರತಿಯೊಂದೂ ಕ್ರೌ ೧೬ದ ೩೬ ಪುಟಗಳುಳ್ಳದ್ದು. ಬೆಲೆ ಕ್ರಮವಾಗಿ ೦-೩-೬; ೦-೪-೦ ; ೦-೪-೦.

೪೧. **ನವನೀತರಾಮಾಯಣ** (ಕಾವ್ಯ). ಶ್ರೀಮಾನ್ ಮುಳಿಯ ತಿಮ್ಮಪ್ಪಯ್ಯ ಮಂಗಳೂರು ಅವರು ಬರೆದುದು. ದ. ಕ. ಜಿಲ್ಲೆಯ ಅಮ್ಮೆಂಬಳ ಗ್ರಾಮದ ಕನ್ನಡಸೇವಾ ಸಂಘದಿಂದ ಪ್ರಕಟವಾಗಿದೆ. ಕ್ರೌ. ಅ. ೧೦೮ ಪುಟಗಳು; ಬೆಲೆ ೧-೦-೦.

೪೨. **ಕಂದನಹಾಡುಗಳು** (ಶಿಶುಗೀತಗಳ ಸಂಗ್ರಹ). ಶ್ರೀ. ದೊಡ್ಡೇರಿ ವೆಂಕಟಗಿರಿರಾಯರು, ದಾವಣಗೇರಿ ಅವರು ಸಂಪಾದಕರು. ಸಾಧನಪ್ರಕಟನಾಲಯ ಸಾಗರ–ಶಿವಮೊಗ್ಗ ಅವರು ಪ್ರಕಾಶಕರು. ಫ್ರೂ. ಕ್ರಾ ೧೬ದ ೨೦ ಪುಟಗಳು. ಬೆಲೆ ೦-೨-೦.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲಿ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :— ಎಮ್. ಗೋವರ್ಧನರಾವ್ ಮ್ಯಾನೇಜರ್

The United Karnatak Insurance Co. Ltd., DHARWAR.

ಜಯಂತಿ

ಚಿತ್ರಮಯ ಮಾಸಪತ್ರಿಕೆ! ★ **ಹೊಸಜೀವನಕ್ಕೆ ಮಾರ್ಗದರ್ಶಿಕೆ!**

ಮೈಸೂರು ಮುಂಬಯಿ ಸರಕಾರಗಳಿಂದ ಎಲ್ಲ ಶಾಲೆ-ಕಾಲೇಜುಗಳಿಗೆ ತರಿಸಿಕೊಳಬಹುದೆಂದು ಮನ್ನಣೆ ಪಡೆದಿದೆಯಲ್ಲದೆ ನಾಡಿನ ಮೂಲೆಮೂಲೆಯಲ್ಲಿಯೂ ಜಯಂತಿಯ ಕೊಂಡಾಟ ಕೇಳಬರುತ್ತಲಿದೆ. ಎಲ್ಲರೂ ಓದಿ ಪ್ರಯೋಜನ ಪಡೆಯಬಹುದಾದ ಪತ್ರಿಕೆಯೆಂದರೆ ಜಯಂತಿ ಒಂದೇ ಒಂದು!

ವಾರ್ಷಿಕ ಚಂದಾ ೩—೦—೦   ಬಿಡಿಸಂಚಿಕೆಗೆ ೦—೪—೦

ಹಿಂದುಸ್ಥಾನದ ಶ್ರೇಷ್ಠತರಗತಿಯ ವಿಮಾಸಂಸ್ಥೆಗಳಲ್ಲಿ ಒಂದಾದ

ದಿ ಏಶಿಯಾಟಿಕ್ ಗವ್ಹರ್ನಮೆಂಟ್ ಸೆಕ್ಯೂರಿಟಿ

ಲೈಫ್ ಅಶ್ಯೂರನ್ಸ್ ಕಂಪನಿ, ಲಿ. ಬೆಂಗಳೂರು

ಇದುವರೆಗೆ ರೂ. ೨,೫೦,೦೦೦,೦೦ ವಿಮಾಕಾರ್ಯ ಮಾಡಿದೆ. ★ ೨೫,೦೦೦ ಸಂಸಾರಗಳಿಗೆ ವಿಮಾರಕ್ಷಣೆ ದೊರಕಿಸಿದೆ.

ಕಡಿಮೆದರದ ಹಪ್ತೆಯ ಮೇಲೆ ವಿಮಾ ಇಳಿಸಬಹುದು.

ಏಶಿಯಾಟಿಕ್ ಕಂಪನಿಯ ಪ್ರಗತಿಯು ಕನ್ನಡಿಗರು ಹೆಮ್ಮೆ ಪಡತಕ್ಕದ್ದಾಗಿದೆ. ವಿಮೆ ಇಳಿಸಲು ಸುರಕ್ಷಿತವಾದ, ಭದ್ರವಾದ ಮೈಸೂರಿನ ವಿಮಾ ಸಂಸ್ಥೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ಏಜನ್ಸಿ ಸುಪರಿಂಟೆಂಡೆಂಟ್,

ಏಶಿಯಾಟಿಕ್ ಲೈಫ್ ಆಫೀಸ್, ಧಾರವಾಡ.

Printed by V. V. Tilhar B. Sc. Karnatak ... Works Dwr. Edited and published by M. G. Patil at Jayanti Office Dharwar

ಸಪ್ಟೆಂಬರ್ ೧೯೪೦

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚಸೇರಿ ೩—೦—೦ ...... ವ್ಹಿ. ಪಿ. ಯಿಂದ ೩-೫-೦ ...... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಪಾಟೀಲ ಮಾಧವರಾಯರು **ಬೆಟಗೇರಿ ಕೃಷ್ಣಶರ್ಮರು**

೩ನೆಯ ವರ್ಷ	**ಸಪ್ಟಂಬರ ೧೯೪೦**	**೫ನೆಯ ಸಂಚಿಕೆ**

ಮುಖ್ಯವಿಷಯಗಳ ಪರಿವಿಡಿ

ಪ್ರಳಯದ ಕಣಸು (ಕವನ)	ದಿವಂಗತ ' ವಿಜಯ ' ಬೆಟಗೇರಿ	೨೨೭
ಸಂಪಾದಕೀಯ	ಸಂಪಾದಕರು	೨೨೮
ಮಂಗನ ಮಲ್ಲಿನಾಥತನ	ಶ್ರೀ. ' ಮಲ್ಲಿನಾಥ '	೨೨೯
ರಾಜನೀತಿನಿಪುಣ ಲಾಯಿಡ್ ಜಾರ್ಜ್ (ವ್ಯಕ್ತಿಪರಿಚಯ) ..	ಶ್ರೀ. ಜಾರ್‌ಮನಿಯ ' ತಂತ್ರಿ '	೨೩೧
ಬೆಸ್ತಟ್ಟಿದ ವಿಧವಾಧವತ್ವ (ವಿನೋದಕಥೆ)	ಶ್ರೀ. ಬಿ. ಕೆ. ರಾಮಚಂದ್ರರಾವ್, ಎಲ್‌ಎಲ್. ಬಿ.	೨೩೫
ಜೀವನಕಲೆ (ವಿಚಾರಪ್ರಚೋದಕ)	ಶ್ರೀ. ವಿಶ್ವನಾಥ ಹೆಗಡೆ, ಮುಂಬಯಿ	೨೪೫
ಮರೆವಿಗೆ ಮದ್ದು (ಲಘುಪ್ರಬಂಧ)	ಶ್ರೀ. ಆರ್. ಪಿ. ಹುಯಿಲಿಗೋಳ, ಬಿ. ಎಸ್‌ಸಿ.	೨೪೭
ಪರಿಣಯದ ಪರಿ (ಕವನ)	ಶ್ರೀ. ಶ್ರೀಧರಶರ್ಮ, ಮೈಸೂರು	೨೪೯
ಕೊಲೆಗಡುಕ ಸ್ಟ್ಯಾಲಿನ್ (ಮನೋವಿಶ್ಲೇಷಣಾತ್ಮಕ ವ್ಯಕ್ತಿಚಿತ್ರ)	ಶ್ರೀ. ಆರ್. ಎಸ್. ಕುಲಕರ್ಣಿ ಬಿ. ಎ. (ಆನರ್ಸ್)	೨೫೧
ತಾಯಿ (ಸಣ್ಣಕತೆ)	ಶ್ರೀ. ' ಕುಮಾರಮಾಧವ '	೨೫೬
ಏಶಿಯಾ ಖಂಡದಲ್ಲಿಯ ಫ್ರೆಂಚ್ ಪ್ರದೇಶಗಳು (ಭೂಗೋಲಿಕ)	ಶ್ರೀ. ಬಿ. ಪಾರ್ಥಸಾರಥಿರಾಯರು	೨೬೦
ಚಟಪಿಂಬ ಚೋದಕ (ಹರಟೆ)	ಶ್ರೀ. ವ್ಹಿ. ಎಂ. ಇನಾಂದಾರ್ ಬಿ. ಎ. (ಆನರ್ಸ್)	೨೬೪
ದಿಗ್ದರ್ಶಕ ಸಮ್ಮೇಲನ್ತ್ಸವ (ಸಂದರ್ಶನ)	ಶ್ರೀ. ಎಚ್. ಎಸ್. ಪಾಟೀಲ ಎಂ. ಎ.	೨೬೭
ವಿಮೋಚಕರ ಹಿತಕ್ಕಾಗಿ (ಮಾಲಕರ ಸರ್ಟಿಫಿಕೇಟು) ..	ಶ್ರೀ. ಎಸ್. ಪಿ. ಬಾಗವತ, ಮುಂಬೈ	೨೭೩
ಪುಸ್ತಕವಿಮರ್ಶೆ	ಬೇರೆ ಬೇರೆಯ ವಿಮರ್ಶಕರು	೨೭೫
ಸಾದರ ಸ್ವೀಕಾರ	.. ..	೨೭೭
ಮನೆಯಾಕ್ಷಿಯ ಹೊಲಿಗೆ (ಅರೆಚೆಲ್ಲಣ)	ಶ್ರೀ. ಹಳಪೇಟೆ ಚಿಂತಾಮಣಿರಾಯರು ಟಿ. ಸಿ. ಡಿ.	೨೭೮
ನಗೀಗೆ ನೇವಿದ್ಯ	ಶ್ರೀ. ' ನಕಲೀ ನಾರಾಯಣಾಚಾರಿ '	೨೭೯
ನಾಲ್ಕೂ ನಿಟ್ಟಿನ ನೋಟ	' ನಿರೀಕ್ಷಕರು '	೨೮೦
ಕನ್ನಡವೀರರಿಗೆ ಅಭಿನಂದನೆಗಳು	ಮೇಲೋಲೆಯ ೩ನೆಯ ಪುಟದಲ್ಲಿ	



೩ನೆಯ ವರ್ಷ | ಸಪ್ಟೆಂಬರ್ ೧೯೪೦ | ೫ನೆಯ ಸಂಚಿಕೆ

ಪ್ರಳಯದ ಕಣಸು

ದಿವಂಗತ 'ವಿಜಯ' ಚಿಟಗೇರಿ

ಎತ್ತಲೂ ಮುತ್ತುತಿದೆ, ಸುತ್ತುತಿದೆ, ಅಮವಸಾ !
ಕಾವಳದ ಕರಿಮೆಯದು ತೆರೆಯನೆರೆಯುತಲಿರಲು,
ಕತ್ತಲಿಸಿಹವು ಕಣ್ಣು; ಚಿತ್ತರದ ಆಗಸವು—
ಕಮರ್ುಗಿಲುಗಳ ನಾಡು, ಕಾಳಿಮೆಯ ಬೀಡು....!

* * *

ಇದೊ ನೋಡಿ, ಹೊಗೆಯನುಗುಳುತಲಿರುವ ದೀಪಗಳು !
ಕಿಡಿಗಳೊಲು ಮಿಣುಕುತಿವೆ; ಆರುತುಂ ಜಾರುತುಂ
ಕತ್ತಲೆಯನಿನ್ನಿಷ್ಟು ಹೆಪ್ಪುಗಟ್ಟಿಸುತಲಿವೆ ;
ಕಣ್ಣುಗಳನಿನ್ನಿಷ್ಟು ಕುರುಡುಗೊಳಿಸುತ್ತಲಿವೆ !

* * *

ಎಲ್ಲಿಯೂ ನಿಶ್ಶಬ್ದ; ಮನದಿ ದುಗುಡದ ಗುಡುಗು !
ಎಲ್ಲಿಯೂ ಶಾಂತಿ, ಮನದೊಳು ಮಾತ್ರ ಕುದಿಯಧ್ವನಿ!
ಶಾಂತತೆ ಅಶಾಂತತೆಯು, ಶಬ್ದನಿಶ್ಶಬ್ದಗಳು
ಭೀಷಣದ ಬೆರಕೆಯನು ಎರೆಯುತಿವೆ, ಎರೆಯುತಿವೆ !

* * *

'ಘೂ'ಗುಟ್ಟುತಿದೆ ಗೂಗೆ ಶಾಂತತೆಯ ಒಡಲೊಡೆದು.
ಘನಘೋರ ಸಾಗರದ ತೆರೆಯಂದದಾ ಕೂಗು,
ಗಾಳಿಯಲಿ ಅಲೆದಲೆದು ಮತ್ತೆ ಮರೆಯಾಗುವುದು—
ಶಾಂತತೆಯೆ ನಿಟ್ಟುಸಿರನಿಟ್ಟಿಹುದೊ—ಎನಿಸುವುದು !

ಅದೊ ಅಲ್ಲಿ; ಧಡ್‌ಧಡಿಲ್‌ಧಡಿಲೆಂದು ಗುಡುಗುತಿದೆ !
ಎಲೆಲೆ, ಕೋಲ್ಮಿಂಚು ಕತ್ತಲ ಸೀಳಿ ಜಾರುತಿವೆ !
ಏನಿದಿದು ಬಾಣಗಳ ಸುರಿಮಳೆಯೊ ? ಬಿರುಮಳೆಯು
ಸುರಿಯುತಿದೆ; ಸುರಿಯುತಿದೆ! ನೀರೆ ಎಲ್ಲೆಲ್ಲಿಯೂ !

* * *

ಬಿರುಗಾಳಿ ! ಸುರಿಮಳೆಯು ! ತಿರೆಯೆ ಸಾಗರವಾಯ್ತು !
ಮುರಿದು ಬೀಳುತಲಿಹವು ಹಿರಿಮರಗಳೆನಿತೆನಿತೊ !
ಇದೊ ಇಲ್ಲಿ, ಹೊರಟಿಹವು ಮನೆಯ ನಾವೆಗಳಲ್ಲಿ !
ಆದೊ ಅಲ್ಲಿ ಬೀಳುತಿವೆ, ಮುಳುಗುತಿವೆ ಮಡುಗಳಲಿ !

* * *

ಮುಗಿಲ ಮೇಳವು ಸರಿದು, ಹಗಲ ಬೆಳಕನ್ನೊಗೆವ
ನಗೆಯ ತಿಂಗಳು ಬಂದ! .... ಚಿಕ್ಕೆಗಳು ಚಿಗಿಯುತಿವೆ !
ದುಗುಡದಲಿ ನಾನೇನೊ ತೇಲುತಿಹೆ ಮುಳುಗುತಿಹೆ—
ಮುಗುಳುನಗೆ ಸೂಸುತಿದೆ ಮುಗಿಲಿನಂಗಳದಿ !

ಶ್ರದ್ಧಾಂಜಲಿ

ಭಾರತದಲ್ಲಿಯ ರಾಜ-ಮಹಾರಾಜರುಗಳಲ್ಲಿ, ರಾಜನ ಕರ್ತವ್ಯ ನಾವು ದೆಂಬುದನ್ನು ಅರಿತುಕೊಂಡು ಅದರಂತೆ ಆಚರಿಸುವವರ ಸಂಖ್ಯೆ ತೀರಕಡಿಮೆ. ಒಂದೆ ಒಂದು ಕೈಯ ಬೆರಳುಗಳಿಂದ ಎಣಿಸುವಷ್ಟಾದರೂ ಹೊರಡುವರೊ ಇಲ್ಲವೊ ಎಂಬುದು ಸಂದೇಹದ ಸಂಗತಿ. ಇಂತಹದರಲ್ಲಿ ನಮ್ಮ ಕನ್ನಡ ದೊರೆಗಳೊಬ್ಬರು 'ಆದರ್ಶ ರಾಜರು' ಎಂದು ನಮ್ಮವರಿಂದಲೂ ಮಂದಿಯಿಂದಲೂ, ಪಂಡಿತರಿಂದಲೂ ಮಹಾಪುರುಷರಿಂದಲೂ, ರಾಜಕಾರ್ಯಕುಶಲರಿಂದಲೂ ಜನಸಾಮಾನ್ಯರಿಂದಲೂ, ಉಗ್ರವೃತ್ತಿಯ ದೇಶಾಭಿಮಾನಿಗಳಿಂದಲೂ ಸಾಮ್ರಾಜ್ಯ-ಸರಕಾರದಿಂದಲೂ ಹೊಗಳಿಸಿಕೊಳ್ಳುತ್ತಿದ್ದುದು ಕನ್ನಡಿಗರಿಗೆಲ್ಲ ಒಂದು ಆತ್ಯಂತಿಕ ಅಭಿಮಾನದ ಸಂಗತಿ. ಆ ದೊರೆಗಳಾರೆಂಬುದನ್ನು ಬೇರೆಯಾಗಿ ಹೇಳುವುದೆ ಬೇಕಿಲ್ಲ. ತಮ್ಮ ಅಗಲಿಕೆಯಿಂದ ಮೈಸೂರಿನ ಪ್ರಜಾಕೋಟಿಯನ್ನೂ ಅಖಿಲ ಕನ್ನಡಿಗರನ್ನೂ ಅಳಲು-ಅಸಮಾಧಾನಗಳಲ್ಲಿ ಚೆಲ್ಲಿ ಹೋಗಿರುವ ಶ್ರೀಮನ್ಮಾಲ್ವಡಿ ಕೃಷ್ಣರಾಜೇಂದ್ರ ಒಡೆಯರ ಉದಾರಚರಿತ್ರೆಯನ್ನು ಅರಿಯದವರಾರಿರುವರು ?

ದೇಶದ ಸುಖಸ್ವಾಸ್ಥ್ಯಗಳಿಗೆ ಆಹಾರಾಭಿವೃದ್ಧಿಯೂ ಆರ್ಥಿಕ-ಸ್ವಾತಂತ್ರ್ಯವೂ ಮುಖ್ಯಕಾರಣಗಳೆಂಬ ಮಾತು ದಿವಂಗತ ದೊರೆಗಳ ಎದೆಯಲ್ಲಿ ಅಚ್ಚೊತ್ತಿದಂತೆ ಮೂಡಿ ಹೋಗಿದ್ದಿತು. ಎಂತಲೆ ಇವರ ಆಡಳಿತದಲ್ಲಿ ಎಂತೆಂತಹ ಸಪ್ರಯೋಗ ಕೃಷಿಸುಧಾರಣೆಗಳು ? ಎಷ್ಟೊಂದು ಉದ್ಯಮ – ಕೈಗಾರಿಕೆಗಳ ಪ್ರಾರಂಭ-ಅಭಿವೃದ್ಧಿಗಳು ? ಚಿಕ್ಕದೊಡ್ಡ ಹೊಳೆ-ತೊರೆಗಳೆಲ್ಲ ಅಣೆಕಟ್ಟು ಕಟ್ಟಿಸಿಕೊಂಡು 'ಸಮುದ್ರ' 'ಸಾಗರ' ಗಳಂತಹ ಕೆರೆಗಳಾಗಿ, ಒಕ್ಕಲಿಗರ ಬರದ ಬಾಧೆಯನ್ನು ಹಿಂಗಿಸಿದುವು. ಬತ್ತ-ಕಬ್ಬುಗಳು ದೇಶಕ್ಕೆ ಪೂರಯಿಸಿ ಹೆಚ್ಚಾಗುವಷ್ಟು ಬೆಳೆಯತೊಡಗಿದುವು. ಪ್ರಯೋಗಕ್ಷೇತ್ರಗಳಲ್ಲಿ ಕಾಯಿ-ಪಲ್ಲೆ, ಹಣ್ಣು-ಹಂಪಲಗಳನ್ನು ಬೆಳೆಯಿಸುವ ಪ್ರಯೋಗ ನಡೆದು ಸಿದ್ಧಿಯನ್ನು ಪಡೆಯಿತು. ಒಳ್ಳೆಯ ಹೈನಕ್ಕಾಗಿಯೂ ಒಳ್ಳೆಯ ದನಗಳ ನಿರ್ಮಾಣಕ್ಕಾಗಿಯೂ ಪಶುಶಾಲೆಗಳೇರ್ಪಟ್ಟುವು. ರೇಷ್ಮೆಯ ವ್ಯವಸಾಯ ಭರದಿಂದ ಬೆಳೆಯುವಂತೆ ಪ್ರಚೋದನೆ ದೊರೆಯಿತು. ಅಲ್ಲದೆ ಸರಕಾರದ ನೇಗಿಯ ಕಾರಖಾನೆ, ಸಾಬೂನಿನ ಕಾರಖಾನೆ, ಸಕ್ಕರೆಯ ಕಾರಖಾನೆ, ಕಬ್ಬಿಣ-ಕಾಗದಗಳ ಕಾರಖಾನೆ, ಗಂಧದೆಣ್ಣೆಯ ಕಾರಖಾನೆ, ಹಿತ್ತಾಳೆಯ ಪಾತ್ರೆ–ಪೋರ್ಸ್ಲೇನ್ ಪಾತ್ರೆಗಳ ಕಾರಖಾನೆ, ಸಿಲೊಲ್ಯೈಡು-ಸೀಮೆಂಟುಗಳ ಕಾರಖಾನೆ ಹೀಗೆ ಒಂದೇ ಎರಡೇ ; ಜೀವನೋಪಯುಕ್ತವಾದ ಹಲವು ಉಪಕರಣಗಳ ಉತ್ಪತ್ತಿಯ ಕಾರ್ಯಗಳಾರಂಭವಾಗಿ, ಕಲಿತಜನರ ನಿರುದ್ಯೋಗಚಿಂತೆ ತಪ್ಪಿತು, ಕೂಲಿಜನರ ಬರಿಯ ಹೊಟ್ಟೆಗೆ ಕವಳ ದೊರೆಯತೊಡಗಿತು. 'ರಾಜಾ ಕಾಲಸ್ಯ ಕಾರಣಂ' ಎಂಬುದು ನಮ್ಮ ಪುರಾತನರ ಸೂಕ್ತಿ. ಶ್ರೀಕೃಷ್ಣರಾಜೇಂದ್ರರು ರಾಜರಾಗಿ ಬಂದಮೇಲೆ ತಮ್ಮ ಜನತೆಗೆ ಒಳ್ಳೆಯ ಕಾಲವನ್ನು ಒದಗಿಸಿಕೊಟ್ಟುದಕ್ಕೆ, ಮೇಲೆ ಹೇಳಿದ ಕಾರ್ಯಪರಂಪರೆಯು ಪ್ರತ್ಯಕ್ಷ ಉದಾಹರಣೆಯಾಗಿ ನಿಂತಿದೆ; ಇಷ್ಟೆ ಅಲ್ಲ, ಇಂದು ಮೈಸೂರಿನಿಂದ ಹರಿದುಹೋಗಿ ಪರದೇಶಗಳಲ್ಲಿ ಸೇರಬಹುದಾಗಿದ್ದ ಹಣದ ಹೊಳೆಗಳಿಗೂ ಬಲವಾದ ಅಣೆಕಟ್ಟುಗಳನ್ನು ಬಿಗಿದುಬಿಟ್ಟಿದೆ.

ಬರಿಯೆ ಆಹಾರನಿರ್ಮಾಣದ ಮಟ್ಟಿಗೆ ಈ ಮಹಾರಾಜರು ತಮ್ಮ ಕಾರ್ಯವನ್ನು ನಿಲ್ಲಿಸಲಿಲ್ಲ. ಸಂಸ್ಕೃತಿಯನ್ನು ನಾಡಿನಲ್ಲಿ ಹರಡುವ ಕಾರ್ಯದಕಡೆಗೂ ಪೂರ್ಣ ಲಕ್ಷ್ಯವನ್ನು ಕೊಟ್ಟರು. ಪುಕ್ಕಟೆಯ ಪ್ರಾಥಮಿಕ್ಕಶಿಕ್ಷಣವನ್ನು ಪ್ರಾರಂಭಮಾಡಿಸಿದರು. ಹಲವು ಬಗೆಯ ವಿದ್ಯಾರ್ಥಿವೇತನಗಳನ್ನಿರಿಸಿ, ಮಾಧ್ಯಮಿಕ ಶಿಕ್ಷಣವೂ ಉಚ್ಚ ಶಿಕ್ಷಣವೂ ಸುಲಭವಾಗಿ ದೊರೆಯುವಂತೆ ಏರ್ಪಾಡುಮಾಡಿಸಿದರು. ಅದಕ್ಕಾಗಿಯೆ ವಿಶ್ವವಿದ್ಯಾನಿಲಯದ ನಿರ್ಮಿತಿಯಾಯಿತು. ವಿಜ್ಞಾನ ಶಿಕ್ಷಣಪ್ರಧಾನವಾದ ಬೆಂಗಳೂರಿನ ಸೆಂಟ್ರಲ್ ಕಾಲೇಜೂ, ಕಲಾಶಿಕ್ಷಣಪ್ರಧಾನವಾದ ಮೈಸೂರಿನ ಮಹಾರಾಜಾ-ಮಹಾರಾಣೀ ಕಾಲೇಜುಗಳೂ, ಸುಸಂಸ್ಕೃತ ಯುವಕ-ಯುವತಿಯರನ್ನು ದೇಶಕ್ಕೆ ಒಪ್ಪಿಸಿಕೊಡತೊಡಗಿದುವು. ಸ್ತ್ರೀವಿದ್ಯಾಭ್ಯಾಸಕ್ಕೆ ವಿಶೇಷವಾದ ಪ್ರಚೋದನೆ ದೊರೆಯಿತು. ಸರಕಾರದ ನೆರವಿನಿಂದ ಅನೇಕ ತರುಣಪದವೀಧರರು ಪರದೇಶಗಳಿಗೆ ಹೋಗಿ, ವಿಜ್ಞಾನದ ಬೇರೆ ಬೇರೆ ಶಾಖೆಗಳಲ್ಲಿಯೂ, ವಿವಿಧವೃತ್ತಿ ವ್ಯವಸಾಯ ಶಿಕ್ಷಣಗಳಲ್ಲಿಯೂ ಪಾಂಡಿತ್ಯ ಪಡೆದುಕೊಂಡು ಬಂದರು. ಕನ್ನಡ ಸಾಹಿತ್ಯ ಪರಿಷತ್ತಿನ ಉದಯವಾಗಿ, ಕನ್ನಡ ಸಾಹಿತ್ಯದ ಹೊಸ ಬೆಳೆಗೆ ಪ್ರಾರಂಭವಾಯಿತು. ಮಹಾರಾಜರ ಪ್ರಾಚೀನ ಪರಂಪರೆಯ ಅಭಿಮಾನದ ಮೂಲಕ ಸಂಸ್ಕೃತಭಾಷಾಶಿಕ್ಷಣಕ್ಕೆ ವಿಶೇಷವಾಗಿ ಉತ್ತೇಜನ ದೊರೆಯಿತು. ಆಯುರ್ವೇದ ಶಿಕ್ಷಣಪ್ರಚಾರಕ್ಕೂ ಪುಷ್ಟಿ ಸಿಕ್ಕಿತು. ಇದರಿಂದ ಕನ್ನಡನಾಡಿನ ಮಿಕ್ಕ ಭಾಗಗಳಿಗಿಂತ ಮೈಸೂರು ದೇಶದಲ್ಲಿ ಸಂಸ್ಕೃತಿಯ ಮಟ್ಟ ಹೆಚ್ಚಾಗಿ ಬೆಳೆಯಿತೆಂಬುದನ್ನು ಯಾರೂ ಒಪ್ಪಿಕೊಳ್ಳುವಂತಾಯಿತು.

ಮಹಾರಾಜರಲ್ಲಿಯ ಕಲಾಭಿಮಾನದೃಷ್ಟಿ ಹಲವು ಕಲೆಗಳಿಗೆ ಸಂರಕ್ಷಣೆಯನ್ನಿತ್ತಿತಲ್ಲದೆ ಜನತೆಯಲ್ಲಿ ಕಲಾತ್ಮಕಜೀವನ ಬೆಳೆಯುವಂತೆ ಮಾಡಿತು. ಮೈಸೂರು ದೇಶದಲ್ಲಿಯ ಮೈಸೂರು, ಬೆಂಗಳೂರು ನಗರಗಳ ದಿವ್ಯಸೌಂದರ್ಯವನ್ನು ಬಿಟ್ಟುಬಿಡೋಣ. ಇನ್ನಾವ ಚಿಕ್ಕ ಪಟ್ಟಣವನ್ನು ತೆಗೆದುಕೊಂಡರೂ ಅಲ್ಲಿಯ ನೈರ್ಮಲ್ಯ, ಅಚ್ಚುಕಟ್ಟುತನ, ಓರಣ, ಅನುಕೂಲತೆ ಇವೆಲ್ಲ ನೋಡುವಂತಿರುವುವು. ಜನರ ಬದುಕಿನಲ್ಲಿಯೂ ಒಂದು 'ಸಿಸ್ತು' ನೆಲೆಮಾಡಿದುದು ಸ್ಪಷ್ಟವಾಗಿ ಕಾಣುವುದು. ಸಾಹಿತ್ಯದ ವಿವಿಧಭಾಗದಲ್ಲಿಯೂ ನಿರ್ಮಿತಿ ಅಲ್ಲಿ ನಡೆದಿದೆ. ಸಂಗೀತವು ರಾಜಮನ್ನಣೆಯಲ್ಲಿ ಬೆಳೆದು ಬಾಳುತ್ತಲಿದೆ. ಚಿತ್ರ-ಶಿಲ್ಪಗಳೂ ಪರಿಪೋಷಣೆ ಹೊಂದುತ್ತಲಿವೆ. ಇದೆಲ್ಲಕ್ಕೂ ಕಾರಣವೆಂದರೆ ದಿವಂಗತ ಶ್ರೀಕೃಷ್ಣರಾಜೇಂದ್ರರಲ್ಲಿ ಸದಾ ಜಾಗೃತವಾಗಿದ್ದುಕೊಂಡ ದೇಶಾಭ್ಯುದಯದ ದೃಷ್ಟಿ. ಇಂತಹ ದೃಷ್ಟಿಯ ಮೂಲಕವೆ ಅವರು ತಮ್ಮ ರಾಜ್ಯವನ್ನು 'ರಾಮರಾಜ್ಯ' ಎಂದು ಹಲವರಿಂದ ಕರೆಯಿಸಿಕೊಂಡರು. 'ರಾಮರಾಜ್ಯ' ಎಂದು

(೨೩೪ನೆಯ ಪುಟ ನೋಡಿರಿ)

೧. ಮಂಗರಾಯನಾಣೆ!

ವಾಚಕರೆ, ದಯವಿಟ್ಟು ನಗಬೇಡಿರಿ; ನಿಮಗೆ ಮಂಗರಾಯನಾಣೆಯಾಗಿದೆ. ಹೇಳಿದರೆ ನಂಬುವಿರೋ ಇಲ್ಲವೋ!— ಆದರೂ ಕಂಡವರನ್ನು ನಗೆಗೀಡುಮಾಡುವ ಮಂಗರಾಯನು ತಾನೇ ಪೆಚ್ಚಾಗುವ ಪ್ರಸಂಗವೊಂದು ಬಂದಿತ್ತು. ಹೋಗಲಿ— ಅಥವಾ, ಹೇಳಿಯೆ ಬಿಡೋಣ. ಇತ್ತೀಚೆಗೆ ಪತ್ರಿಕೆಗಳಲ್ಲಿ 'ಆಣೆನಿಧಿ' ಎಂದು ಬರುತ್ತಿತ್ತಲ್ಲವೆ? ಪಾಪ, ಕನ್ನಡದ ಹೊರತಾಗಿ ಏನನ್ನೂ ಅರಿಯದ ಮಂಗರಾಯನಿಗೆ ತಟ್ಟನೆ ಅದರರ್ಥ ಹೊಳೆಯಲಿಲ್ಲ. 'ನಮ್ಮದು, ಬಡದೇಶ, ಅದಕ್ಕೆ ಯಾರೋ ತಲೆಗೊಂದು ಆಣೆಯಂತೆ ನಿಧಿಯನ್ನು ಕೂಡಿಸುತ್ತಿರಬಹುದು, ಅದೇ ಆಣೆ-ನಿಧಿ' ಎಂದು ತಿಳಿದಿರುವಾಗ 'ಅರ್ಧಾಣೆ'ಯ ಪತ್ರಿಕೆಗಳಲ್ಲಿ ಏನೋ ಆ ವಿಷಯ ಗಲಾಟೆ ಎದ್ದಿತು. ಆಗ ತಿಳಿಯಿತು ಇದು ರೂಪಾಯಿಗೆ ಹದಿನಾರಾಣೆಯ ವಿಷಯವಲ್ಲ, ಆಣೆ ಎಂಬುದೊಂದು ಮಹಾರಾಷ್ಟ್ರ ಮುಂದಾಳಿನ ಹೆಸರು, ಆ ವ್ಯಕ್ತಿಗಾಗಿ ಬೆಳಗಾಂವಿ ಹದಿನೈದೇ ಆಣೆ ಕರ್ನಾಟಕವೆನಿಸಿ, ಇನ್ನುಳಿದ ಆಣೆ ನಿಧಿಯಾಗಿ ಹೋಗುವುದು—. ಮುಂತಾಗಿ ಮುಂತಾಗಿ! ಮಂಗನಾಣೆ, ಮಂಗನು ಹಲ್ಲುಕಿರಿದಾನೆ, ಈ ಅಂತರ್‌-ಪ್ರಾಂತೀಯ ತೊಡಕು ಹೊಳೆದಿರಲಿಲ್ಲ. ಆದರೂ ಒಂದು ಸಮಾಧಾನ ಬೊಟ್ಟೆ ರೂಪಾಯಿ-ನಾಣ್ಯಗಳ ಇಂದಿನ ಕಾಲದಲ್ಲಿ, ಬೆಳಗಾಂವಿ ೧೫ ಆಣೆ+೧ ಆಣೆ ಎಂದು ಚಿಲ್ಲರೆಯಾದುದು ಲಾಭವಲ್ಲವೆ? ಆದ್ದರಿಂದ, ಪಾಪ ತನಗೆ ಸಕಾಲದಲ್ಲಿ ಸದ್ಬುದ್ಧಿಯ ವಾರ್ತೆಯನ್ನು ಮುಟ್ಟಿಸಿದ ಆಣೆಯನ್ನು, ಮಂಗರಾಯನು ಭಜಿಸುವಂಥೂ—ಲ್ಲ, ಧಾ-ತ್ರನಾಗುತ್ತಾನಲ್ಲ—

ನಿನಗೂ 'ಆಣೇ', ಮಂಗಾ,

ನನಗೂ ಆಣೇ— |

ನಿನಗೂ ನನಗೂ ಇಬ್ಬರಿಗೂ

ಆಣೇಬಾಣೇ ||

* * *

ಚಂದಾದಾರರಲ್ಲಿ ಅರಿಕೆ

ಪ್ರತಿ ತಿಂಗಳ ಮೊದಲನೆಯ ತಾರೀಖಿಗೆ ಜಯಂತಿಯ ಸಂಚಿಕೆ ತಪ್ಪದೆ ಪ್ರಕಟವಾಗುತ್ತದೆ. ಪ್ರತಿತಿಂಗಳ ಮೊದಲಿನ ಒಂದೆರಡು ದಿನಗಳಲ್ಲಿಯೆ ತಲ್ಪುವಂತೆ ಚಂದಾದಾರರಿಗೆ ತಪ್ಪದೆ ಸಂಚಿಕೆಯನ್ನು ಕಳುಹಲಾಗುತ್ತದೆ. ಆದರೆ ಅಂಚೆಯಿಂದ ಸಂಚಿಕೆಗಳನ್ನು ಪಡೆಯುವವರನೇಕರಿಂದ ತಲ್ಪಲಿಲ್ಲವೆಂಬ ತಕರಾರುಗಳು ಬಂದಬರುತ್ತಿರುವುವು. ಅಂಚೆಯಾಳುಗಳ ಅಜಾಗರೂಕತೆಯ ಮೂಲಕವಾಗಿಯೊ ಇನ್ನಾವ ಕಾರಣದಿಂದಲೊ ಎಷ್ಟೋ ಸಂಚಿಕೆಗಳು ಸರಿಯಾಗಿ ತಲ್ಪದಿರುವ ಸಂಭವವೂ ಇದ್ದೇ ಇರುವುದು.. ಆದರೆ ಇನ್ನುಮೇಲೆ

ಹೀಗೊಂದು ನಮ್ಮ ಬಿನ್ನಹ:

ಪ್ರತಿತಿಂಗಳ ಮೊದಲನೆಯ ಮೂರು ನಾಲ್ಕು ದಿನಗಳವರೆಗೂ ಸಂಚಿಕೆ ನಿಮಗೆ ಬಾರದಿದ್ದರೆ, ಅದು ಎಲ್ಲಿಯೊ ಹಾಳಾಗಿದೆಯೆಂದು ತಿಳಿದುಕೊಳ್ಳಬೇಕು. ಕೂಡಲೆ ಕಾರ್ಯಾಲಯಕ್ಕೆ ಇನ್ನೊಂದು ಸಂಚಿಕೆ ಕಳುಹಲು ಕಾಗದ ಬರೆಯಬೇಕು. ೧೫ನೆಯ ತಾರೀಖಿಗೆ ಮೀರಿಬರುವ ಬೇಡಿಕೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಅನಿವಾರ್ಯವಾಗಿ ತಿಳಿಸಬೇಕಾಗಿದೆ ಜಯಂತಿಯ ಹಿತಾಕಾಂಕ್ಷಿಗಳಾದ ತಾವು, ಅದರ ಈ ನಿಯಮವನ್ನು ಪಾಲಿಸಬೇಕಾಗಿ ಪ್ರಾರ್ಥನೆ.

೨. ಕರ್ನಾಟಕದ ಆಕಾಶಪುಷ್ಪ—ಕ

ಕರ್ನಾಟಕಕ್ಕೇ ಒಂದು ವಿಮಾನಬೇಕೆಂದೂ ಅದಕಾಗಿ ಬೇಕಾಗುವ ಹಣದ ನಿಧಿಯು ಈಗಾಗಲೇ ಕೂಡಿದೆ ಎಂದೂ ಕೇಳಿ ಕನ್ನಡಿಗನಾದ ಮಂಗರಾಯನಿಗೆ ಕುಬೇರನ ಪದವಿ ದೊರೆತಂತಾಗಿದೆ (ಮಂಗರಾಯನ ಪುರಾಣ-ಸಾಹಿತ್ಯದಲ್ಲಿ ವಿಮಾನವಿದ್ದುದು ಕುಬೇರನೊಬ್ಬನಿಗೆಯೆ). ಮಂಗರಾಯನಿಗಾದ ಈ ಆನಂದವನ್ನು ತಡೆಯದ ಕೆಲವು ಕಿಡಿಗೇಡಿಗಳು ಇತ್ತೀಚೆಗೆ ಕೆಣಕುವಂತಹ ಪತ್ರಗಳನ್ನು ಬರೆಯುತ್ತಿದ್ದಾರೆ. 'ಕರ್ನಾಟಕದ ವಿಮಾನವೆಂದರೆ ಯಾವ ಕರ್ನಾಟಕದ ವಿಮಾನ' ಎಂದು ಗುಲ್ಲೆಬ್ಬಿಸುತ್ತಲಿದ್ದಾರೆ. "ಮುಂಬಯಿ ಕರ್ನಾಟಕದ ಮಂಗರಾಯನಿಗೆ 'ಬರಿಯ ಕರ್ನಾಟಕ' ವಿಮಾನಕ್ಕಾಗಿ ಆನಂದಬೇಡ, ಅಧಿಕಾರವಿಲ್ಲ" ಎನ್ನುತ್ತಲಿದ್ದಾರೆ. ಆದರೆ ಮಂಗರಾಯನು ಇಂತಹ ಕುಹಕತನಕ್ಕೆ ಬೆದರಿಲ್ಲ. ವಿಮಾನಕ್ಕಾಗಿ ನಿಧಿಯನ್ನು ಕೂಡಿಸುವವರಿಗೆ ಹರಿದುಹೋದ ಕರ್ನಾಟಕವನ್ನು ಕೂಡಿಸುವುದು ಅಸಾಧ್ಯವೆ? ಇದಲ್ಲದೆ, ಕರ್ನಾಟಕದ ಭೂಮಿ ಹರಿದುಹಂಚಿಹೋಗಿದೆ, ಕರ್ನಾಟಕದ ಆಕಾಶ ಹರಿದು ಹಂಚಿಹೋಗಲಿಲ್ಲವಲ್ಲ? ಇಷ್ಟಾಗಿಯೂ ಯಾರಿಗೂ ಬರಲಿಲ್ಲವೆಂದರೆ, ಇಂತಹ ಜನರೊಡನೆ ಭೂಮಿಯಲ್ಲಿ ಇರುವುದಕ್ಕಿಂತ ಆಕಾಶದಲ್ಲಿ ಹಾರಾಡುತ್ತಿರುವುದೆ ಯೋಗ್ಯವಲ್ಲವೆ? ಅಂತೂ ಕರ್ನಾಟಕದ ಆಕಾಶಪುಷ್ಪ— ಅಲ್ಲ, ಆಕಾಶಪುಷ್ಪಕವಿಮಾನಕ್ಕಾಗಿ ಮಂಗರಾಯನಿಗೆ ಆನಂದವಿದೆ, ಅಭಿಮಾನವಿದೆ— ಹೆಚ್ಚೇನು— ಗಿಡದಿಂದ ಗಿಡಕ್ಕೆ ನೆಗೆದು ನಿಧಿಯನ್ನು ಕೂಡಿಸಲೂ ಮಂಗರಾಯನು ಸಿದ್ಧನಿದ್ದಾನೆ.

* * *

೩. ಮಂಗಮಹಾವ್ಯಾಖ್ಯೆ

ಇಂದಿನ ಯುದ್ಧದಲ್ಲಿ ನಡೆದ ವಿಮಾನ ಹಾವಳಿಯನ್ನು ನೋಡಿ ಮಂಗರಾಯನಿಗೆ ಹೆದರಿಕೆಯಾಗುತ್ತಲಿದೆ. ಭದ್ರವಾದ ಕಟ್ಟಡಗಳೂ

ದಿವಸ ಎಂಥದಿದ್ದರೂ ಧಷ್ಟ ಪ್ರಕೃತಿ ಬೇಕು

ಕೆಲವರಿಗೆ ಬಿಸಿಲಿನ ಬಾಧೆ, ಕೆಲವರಿಗೆ ಚಳಿಯ ಬಾಧೆ, ಮತ್ತೆ ಕೆಲವರಿಗೆ ಮಳೆಗಾಲದಲ್ಲಿ ಮೇಲಿಂದ ಮೇಲೆ ಬೇನೆ—

ಇದಕ್ಕೆ ಕಾರಣವೆಂದರೆ, ಋತುಮಾನದಂತೆ ಹವೆಯಲ್ಲಿಯ ಬದಲಾವಣೆಗಳನ್ನು ಸಹನಮಾಡಲು ಸಾಕಷ್ಟು ಶಕ್ತಿಯಿಲ್ಲದ್ದು.

ಯಾವ ಋತುವಿನಲ್ಲಿಯೂ ಪ್ರಕೃತಿಯನ್ನು ಧಷ್ಟಪುಷ್ಟ ಇಡಲು ಪರ್ಲ ಬಾರ್ಲೆಯು ಬಹಳೇ ಹಿತಕರವು. ಮೈ ಮೊದ್ದಾಗುವುದು, ಹಸಿವೆ ಹಾರಿಹೋಗುವುದು, ಹೊಟ್ಟೆ ಹಸನಾಗದ್ದು, ಕೈಕಾಲು ಕಣ್ಣು ಉರಿಯುವುದು, ಹುಳಿಸುಡುವುದು ಮುಂತಾದ ವಿಕಾರಗಳಿಂದ ಬಳಲುವ ಜನರು, ಕೆಲವು ದಿವಸ ಪರ್ಲಬಾರ್ಲೆಯನ್ನು ತೆಗೆದುಕೊಂಡರೆ ಅವರ ಮೈನೋವುಗಳು ದೂರವಾಗುವವು, ಹಸಿವೆ ಹತ್ತುವುದು, ಪ್ರಕೃತಿಯು ನೆಟ್ಟಗಾಗುವುದು, ಮತ್ತು ಮೈಯಲ್ಲಿ ಹೊಸ ಶಕ್ತಿ, ಹೊಸ ಸ್ಫೂರ್ತಿ, ಹೊಸ ಉತ್ಸಾಹ ಹುಟ್ಟಿದ ಅನುಭವ ಬರುವುದು.

ಪರ್ಲಬಾರ್ಲೆಯು ನಿಮ್ಮ ನೆರೆಯ ಔಷಧದ ಅಂಗಡಿಯಲ್ಲಿ ಸಿಗುವುದು. ಒಮ್ಮೆ ಸ್ವತಃ ಉಪಯೋಗಿಸಿ ನಿಮ್ಮ ಪ್ರಕೃತಿಯು ಹ್ಯಾಗೆ ನೆಟ್ಟಗೆ ಆಗುವುದು ಎಂಬುದರ ಪ್ರತ್ಯಕ್ಷ ಅನುಭವ ಪಡೆಯಿರಿ.



ಬಾಂಬಿನ ಬಡಿತಕ್ಕೆ ಭಸ್ಮೀಭೂತವಾಗುತ್ತಿರುವಾಗ ಮಂಗರಾಯನ ಸಂಸಾರಮಂದಿರವಾದ ವೃಕ್ಷ-ಶಾಖೆಗಳ ಪಾಡೇನು? ಅದಕಾಗಿ ಮಂಗರಾಯನು ಬಾಂಬಿಗೆ ಬೀಳದಂತಹ ನಿವಾಸಸ್ಥಾನವನ್ನು ಮಾಡಿಕೊಳ್ಳಬೇಕೆಂದಿದ್ದಾನೆ. ಅದಕಾಗಿಯೆ ತನ್ನ ಮಿತ್ರರಿಂದ ಅಪದ್ಧನವನ್ನೂ ಕೂಡಿಸಬೇಕೆಂದಿದ್ದಾನೆ. ಆದರೆ 'ಪ್ರಥಮಗ್ರಾಸೇ ಕಂಡೂಯನಕಾಟಃ' ಎನ್ನುವಂತೆ 'ಅಪದ್ಧನ' ಎಂದರೇನು—ಎಂದು ಮೊದಲನೆಯ ಮಿತ್ರನೆ ಕೇಳಬೇಕೆ? ಧನದ ಆಪತ್ತು ಬಂದಾಗ ಬೇಕಾಗುವ ನಿಧಿ ಎಂದರೆ, 'ಧನದ ಆಪತ್ತು' ಎಂದರೆ 'ಪತ್ತೆ ಇಲ್ಲದ ಧನವೆ?' ಎಂದು ಅಸಂಬದ್ಧ ಸಂಶಯವನ್ನೆಬ್ಬಿಸಬೇಕೆ? ಧನವಿಲ್ಲದಿರುವುದೆ ಒಂದು ಆಪತ್ತು ಎಂದಾದರೂ ಈ ವ್ಯವಹಾರಿಗಳಿಗೆ ತಿಳಿಯಬಾರದೆ? ಧನವಿಲ್ಲದಿರುವುದೆ ಆಪತ್ತು, ಎಂದಾಗ 'ಆಪತ್ತಿ'ಗೆ 'ಪತ್ತು ಇಲ್ಲದಿರುವುದು' ಎಂದು ವ್ಯುತ್ಪತ್ತಿನಾಥೀಕರಣವನ್ನು ಮಾಡಿದ ಮಹಾಶಯರೂ ಇದ್ದಾರೆ. ಆದಕಾಗಿ ಈಗ ಪ್ರಕಟವಾಗಿ ಮಂಗರಾಯನು 'ಅಪದ್ಧನ' ಎಂಬುದನ್ನು ಹೀಗೆ ಸ್ಪಷ್ಟೀಕರಿಸಬೇಕಾಗಿದೆ. 'ಆಪತ್ತು ಬಂದವರು ಕೊಡುವ ಧನ-ಅಪದ್ಧನ'

* * *

೪. ಒಂದು ಕಥೆ

ಒಂದಾನೊಂದು ಊರಲ್ಲಿ ಒಬ್ಬ ಅಹಿಂಸಾ-ಭಕ್ತನಿದ್ದನು. ಅಹಿಂಸೆಗಾಗಿ ಅವನಲ್ಲಿದ್ದ ಅಚಲ-ಶ್ರದ್ಧೆ ಎಂದರೆ ಗಾದೆಯ ಮಾತಾಗಿತ್ತು. ಬೀದಿಯಲ್ಲಿ ನಡೆವಾಗ ಕಲ್ಲನ್ನು ಕೂಡ ಎಡವುತ್ತಿರಲಿಲ್ಲ, ಕಲ್ಲಿಗೆ ಹಿಂಸೆಯಾದೀತೆಂದು; ಅಷ್ಟಕ್ಕೂ ಎಡಹುವುದೆ ಆದರೆ ತನ್ನದೆ ಒಂದು ಕಾಲಿನಿಂದ ಇನ್ನೊಂದು ಕಾಲನ್ನು ಎಡಹುತ್ತಿದ್ದನು; ಆಚರಣೆಯಲ್ಲೂ ಇಷ್ಟು ಶ್ರದ್ಧಾಯುಕ್ತವಾಗಿದ್ದಿತು ಅವನ ಅಹಿಂಸೆ. ಹೀಗಿರಲು ಒಂದು ಬೆಳಗಿನಲ್ಲಿ ಮನೆಯಲ್ಲಿ ಅವನ ಹೆಂಡತಿಯು ಯಾವುದೊ ಕಾರಣಕ್ಕಾಗಿ ಬಹಳೇ ರಂಬಾಟವನ್ನು ಮಾಡಿದಳು. ಕೂಡಲೆ ಅವನ ಕಣ್ಣು ಕೆಂಪೇರಿದುವು, ಮೈ ನಡುಗತೊಡಗಿತು, ಕೈಗಳಂತೂ ಹೊಡೆಯಲು ಹಾತೊರೆಯುವವೇನೊ ಎಂದು ತೋರಿತು. ಆದರೆ ಅವನಿಂದ ಯಾವ ಪ್ರಮಾದವೂ ಘಟಿಸಲಿಲ್ಲ. ಒಂದು ಮಾತ್ರ; ಮನೆಗೆಲಸದಲ್ಲಿ ತೊಡಗಿದ ಹೆಂಡತಿ ನಿಂತಲ್ಲಿ, ನಡೆದಲ್ಲಿ ಅವಳನ್ನು ಹಿಂಬಾಲಿಸುತ್ತಿದ್ದನು. ಹೆಂಡತಿಗೂ ಆಶ್ಚರ್ಯ, ಬೆಳಗಿನ ಜಾವದಲ್ಲಿ ಇದೆಂತಹ ಹುಚ್ಚು ಎಂದು. ಇನ್ನೂ ಅವನು ಕೆಂಪೇರಿದ ಕಣ್ಣುಗಳಿಂದ ಅವಳನ್ನು ಒಂದೇಸವನೆ ದಿಟ್ಟಿಸುತ್ತಲಿದ್ದಾನೆ. ಕೊನೆಗೆ ಕೆಲಸದ ಭರದಲ್ಲಿ ಕೈತೊಳೆದುಕೊಳ್ಳಲು ಹೆಂಡತಿ ಹೊರಗಿನ ಹೊಸ್ತಿಲಿಗೆ ಬಂದಳು. ಅಹಿಂಸಾಭಕ್ತನು ಅಲ್ಲಿಯೂ ಅವಳನ್ನು ಹಿಂಬಾಲಿಸಿ ಬಂದು ನಿಂತನು. ಗಂಡನಿಗೆ ಹೊರಗೆ ಹೋಗಬೇಕಾಗಿರಬಹುದೆಂದು ಅವಳು ಹೊಸ್ತಿಲ ದಾಟಿ ತುಸು ಮುಂದೆ ಬದಿಗೆಹೋಗಿ ನಿಂತಳು. ಅದೊಂದೇ ತಡ, ಹಸಿದ ಹುಲಿಯಂತೆ ಹಾರಿ, ಆಡೆದ ಸಿಟ್ಟಿಗೆ ಇಮ್ಮಡಿ ಕಸುವಿನಿಂದ ಹೆಂಡತಿಯ ಕೆನ್ನೆಗೆ ಏಟುಕೊಟ್ಟನು. ಅಹಿಂಸಾವತಾರಪತಿದೇವ! ಪಾಪ, ಅವಳಿಗೆ ಪೆಟ್ಟಿಗಾಗಿ ನೋವಿಗಿಂತಲೂ ಆಶ್ಚರ್ಯವೆ

(೨೩೪ನೆಯ ಪುಟ ನೋಡಿರಿ.)

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ, ೬ ಆಣೆಗೆ ಒಂದು ಸೆಟ್ಟು.



೧ ಬ್ಲೇಡಿಗೆ ೬ ಉತ್ತಮ ಕ್ಷೌರ!
೫ ಬ್ಲೇಡಿಗೆ ೬ ಆಣೆ.

ಯುದ್ಧನೀತಿ ನಿಪುಣ—

ಲಾಯಿಡ್ ಜಾರ್ಜ್

ಜಾರ್ಮನಿಯ 'ತಂತ್ರಿ' ಬರೆದುದು

★

ಹಿಟ್ಲರ್ ತನ್ನ ಸಂಧಾನದ—ಮೊನ್ನೆಮೊನ್ನೆಯ—ಕರಾರುಗಳಲ್ಲಿ ಒಂದನ್ನು ಹಾಕಿದ್ದ; 'ಲಾಯಿಡ್ ಜಾರ್ಜರು ಮುಖ್ಯಪ್ರಧಾನರಾಗಿರುವ ಮಂತ್ರಿಮಂಡಳದ ಕೈಯಲ್ಲಿ ಇಂಗ್ಲೆಂಡಿನ ಆಡಳಿತವಿರಬೇಕು' ಎಂದು. ಲಾಯಿಡ್ ಜಾರ್ಜರ ವ್ಯಕ್ತಿತ್ವ ಜರ್ಮನಿಯ ಮರ್ಮಕ್ಕೆ ಬರೆಯನ್ನು ಎಳೆದಂತಹದು. ಅದರ ಮುಯ್ಯನ್ನು ತೀರಿಸಿಕೊಳ್ಳಲು ಹಿಟ್ಲರನಿಗೆ ಲಾಯಿಡ್ ಜಾರ್ಜರು ಬೇಕಾಗಿದ್ದರು.



ಲಾರ್ಡ್ ಲಾಯಿಡ್ ಜಾರ್ಜರು

★

★

ಇದೀಗ ಮತ್ತೆ ಕೇಳುತ್ತಲಿದೆ. ಯುದ್ಧ ಪ್ರಾರಂಭವಾದ ಕೂಡಲೆ ಎಲ್ಲರ ಲಕ್ಷ್ಯವೂ ಹೊರಳಿತ್ತು, ಹೋದ ಮಹಾಯುದ್ಧವನ್ನು ಜಾಣತನದಿಂದ ಪಾರುಮಾಡಿದವನಕಡೆಗೆ. ಈಗ ಕೂಡ ದೇಶ ನೋಡಹತ್ತಿದೆ ಆತನನ್ನೇ. ಆತನಾರು? ಸಂಕಟಕಾಲದಲ್ಲಿ ಸಂಜೀವಿನಿಯಂತೆ ಪರಿಣಮಿಸುವ — **ಡೇವಿಡ್ ಲಾಯಿಡ್ ಜಾರ್ಜ್.** ಇಂದಿನ ಈ ಅನಿಶ್ಚಿತಸಮಯದಲ್ಲಿ ಯಾವುದೊಂದು ವ್ಯಕ್ತಿಯ ವಿಷಯದಲ್ಲಿ ಶಾಂತವಾಗಿ ವಿಚಾರಿಸುವುದು ಕೈರಿಸವಾಗಿದೆ; ಆದರೆ ಒಂದು ಸಂಗತಿ ಮಾತ್ರ ನಿಜ. ಮುಂದೆ ಬರುವ ಇತಿಹಾಸಕಾರರು ಇಂಗ್ಲಂಡಿನ ಇತಿಹಾಸವನ್ನು ಬರೆಯುವಾಗ, 'ಈ ಕಾಲದ ಮಹಾಪುರುಷರಲ್ಲಿ ಮೊದಲನೆಯವನು ಲಾಯಿಡ್ ಜಾರ್ಜನು' ಎಂದು ಸಾರದೆ ಇರಲಾರರು. ಈ ವ್ಯಕ್ತಿಯ ಅಸಾಮಾನ್ಯತೆಯನ್ನರಿಯದವರು ಮಾತ್ರ ಕೊಂಚ ನಗಬಹುದು; ಆದರೆ ಇಂಗ್ಲಂಡಿನ ಮುಖ್ಯ ಪ್ರಧಾನನೆಂದು ಕಾರ್ಯಮಾಡಿದ ಲಾಯಿಡ್ ಜಾರ್ಜನ ಚಿತ್ರವನ್ನು ತಂದುಕೊಂಡರೆ, ಇಂಗ್ಲೆಂಡಿನ – ಅದೇಕೆ ಇಡಿಯ ಯುರೋಪದ ರಾಜಕಾರಣಿಗಳಲ್ಲಿ ಈತ ಮೇಲೆಂಬುದು ಗೊತ್ತಾಗುವುದು. ಇವನು ತನ್ನ ಜೀವನದ ಮೇಲ್ಘಟ್ಟದಲ್ಲಿದ್ದಾಗ ಇವನೊಂದಿಗೆ ಕಾರ್ಯಮಾಡಿದವರನ್ನು ವಿಚಾರಿಸಿದರೆ, ಇವನ ನಿಜವಾದ ಯೋಗ್ಯತೆ ತಿಳಿದುಬರುವುದು. ಆಗದವರು ಏನೇನನ್ನಾದರೂ ಆಡಿಕೊಳ್ಳಬಹುದು. ಲಾಯಿಡ್ ಜಾರ್ಜನು ಸಾಮಾನ್ಯ ವ್ಯಕ್ತಿಯಲ್ಲ.

ಒಮ್ಮೆ ಹೀಗಾಯಿತಂತೆ: ಸುಮಾರು ೧೪ ವರುಷಗಳ ಹಿಂದಿನ ಸಂಗತಿ—ಕೆಲವು ಜನ ಯುವಕ ರಾಜಕಾರಣಿಗಳು ಒಂದುಸಲ ಊಟದ ಕಾಲದಲ್ಲಿ ಮಾತುಕತೆ ನಡೆಯಿಸಿದಾಗ, ಮಾತಿನ ಓಘವು ಕಾರಣಾಂತರದಿಂದ ಲಾಯಿಡ್ ಜಾರ್ಜನ ವಿಷಯದ ಕಡೆಗೆ ಹೊರಳಿತು. ಒಬ್ಬನೆಂದ: 'ಹಾಂ! ಒಳ್ಳೇದು! ಈ ಲಾಯಿಡ್ ಜಾರ್ಜನು ಯಾವುದಾದರೊಂದು–ಒಂದೇ ಒಂದು–ವಿಧಾಯಕ ಕಾರ್ಯವನ್ನು ಮಾಡಿದ್ದಾನೆಯೆ? ತೋರಿಸಿರಿ!' ಅದೆ ಕೋಣೆಯ ಒಂದು ಮೂಲೆಯಲ್ಲಿ ನಿದ್ರೆಹೋದಂತಿದ್ದ ಲಾರ್ಡ್ ಬಾಲ್ಫರನು ಚೇತರಿಸಿಕೊಂಡು, ಜಂತಿಯ ಕಡೆಗೆ ಮೊಗತಿರುಹಿ, ವಿಚಾರಮಾಡುವ ತರದಲ್ಲಿ ನುಡಿದ: "ಮಾನವೇತಿಹಾಸದಲ್ಲಿಯ ದೊಡ್ಡದಾದ ಯುದ್ಧವನ್ನು ಗೆದ್ದಿದ್ದಾನೆ; ಅದು ನಿಜವಾಗಿಯೂ ದೊಡ್ಡದು." ಹಾಗೆಯೆ ಮುಂದುವರಿಯುತ್ತ "ನನ್ನ ಮಟ್ಟಿಗೆ ಹೇಳುವುದಾದರೆ, ಲಾಯಿಡ್ ಜಾರ್ಜನು ಇಲ್ಲದಿದ್ದರೆ, ೧೯೧೮ ರಲ್ಲಿ ಜರ್ಮನಿಯನ್ನು ಆ ರೀತಿ ಸೋಲಿಸುವುದು ಅಸಾಧ್ಯವಿತ್ತೆಂದು ಎನಿಸುತ್ತದೆ. ಹೀಗೆ ಮತ್ತಾವ ವ್ಯಕ್ತಿಯ ಬಗೆಗೂ ಅಭಿಪ್ರಾಯಪಡುವಂತಿಲ್ಲ!"

ಲಾಯಿಡ್ ಜಾರ್ಜನ ಚರಿತ್ರೆಯು ಅದ್ಭುತವಾಗಿದೆ; ಅರ್ಧಶತಮಾನಗಳಿಂದಲೂ ಬೆಳೆದುಬಂದಿರುವ ಆತನ ಕಾರ್ಯವನ್ನು ಈ ಚಿಕ್ಕ ಬರೆಹದಲ್ಲಿ ಹುದುಗಿಸುವುದು ಕಷ್ಟಸಾಧ್ಯ. ಆದಕ್ಕೆಂತಲೆ ಎದ್ದುಕಾಣುವ ಕೆಲವು ಸಂನಿವೇಶಗಳನ್ನಷ್ಟೆ ಕೊಟ್ಟು, ಆವನ ಜೀವನವು ಎಷ್ಟು ಅದ್ಭುತಪೂರ್ಣವಾಗಿದೆಯೆಂಬುದನ್ನು ತೋರಿಸಬೇಕೆಂದಿದ್ದೇನೆ.

ಲಾಯಿಡ್ ಜಾರ್ಜನ ಜೀವನವನ್ನು ಮೂರು ಭಾಗಗಳನ್ನಾಗಿ ಮಾಡಬಹುದು. ಮೊದಲನೆಯದು ಸಮಾಜಸುಧಾರಕನದು;

೧೯೧೫ರ ವರೆಗೆ. ಎರಡನೆಯದು ಮಹಾಯುದ್ಧದ ಮಂತ್ರಿಯೆಂದು; ಮೂರನೆಯದು ಯುದ್ಧದನಂತರ ಮುಖ್ಯಪ್ರಧಾನನ ಪಾತ್ರ ವಹಿಸಿದುದು.

ಒಂದೊಂದು ಸನ್ನಿವೇಶಕ್ಕೂ ಒಂದೊಂದು ಹಿನ್ನೆಲೆಯಿರುವುದು. ಲಾಯಿಡ್ ಜಾರ್ಜನು ಸಮಾಜಸುಧಾರಕನಾಗಿ ಪರಿಣಮಿಸುವುದಕ್ಕೆ ಕಾರಣವಿಲ್ಲದೆ ಇಲ್ಲ. ಪ್ರತಿಯೊಬ್ಬನ ಜೀವನದಲ್ಲಿಯೂ ಅಂತಹ ಸನ್ನಿವೇಶಗಳು ಕಾಣಬರುವವು. ಇವನ ಜನ್ಮವು ೧೮೬೩ರಲ್ಲಿ ಮಾಂಚೆಸ್ಟರ್‌ನಲ್ಲಿ ಆಯಿತು. ತಂದೆಯಾದ ವಿಲಿಯಮ್ ಜಾರ್ಜನು ಶಾಲೆಯಲ್ಲಿ ಶಿಕ್ಷಕನಾಗಿದ್ದನು. ಮನೆತನ ಮಧ್ಯಮ ತರಗತಿಯದು. ಆದರೂ ಸಾಗುತ್ತಿತ್ತು ಇವನ ವಿದ್ಯಾಭ್ಯಾಸ; ಆದರೆ ಇವನ ತಂದೆಯ ಅಕಾಲಿಕಮರಣದಿಂದ ಇಡಿಯ ಕುಟುಂಬದ ಮೇಲೆಯೆ ಆರ್ಥಿಕ ಆಘಾತ ಬಿದ್ದಿತು. ತಂದೆ ತೀರಿದ ನಂತರ ಮನೆಯ ವರೆಲ್ಲರನ್ನೂ ಆ ದಯಾಳು ರಿಚರ್ಡ್ ಲಾಯಿಡ್‌ನು ಕರೆದುಕೊಂಡು ಹೋಗಿ, ತನ್ನ ಮನೆಯಲ್ಲಿರಿಸಿಕೊಂಡನು. ಅವನೊಬ್ಬ ಪಾದ್ರಿ. ರಿಚರ್ಡನ ಸಹವಾಸ-ಸಾನಿಧ್ಯಗಳಿಂದಲೆ ಇವನಲ್ಲಿ ಸಮಾಜಸುಧಾರಣೆಯ ವಿಚಾರವು ಮೊಳೆದು ಬಳೆಯಿತು. ಲಾಯಿಡ್ ಜಾರ್ಜನಿಗೆ ರಿಚರ್ಡನ ಸಹಾಯ ಬಹಳವಾಗಿತ್ತು; ಇವನ ವಿದ್ಯಾಭ್ಯಾಸಕ್ಕೆ ಎಲ್ಲಬಗೆಯ ಅನುಕೂಲತೆಯನ್ನೂ ಆತ ಮಾಡಿಕೊಟ್ಟಿದ್ದನು. ಮೊದಲು ಲಾಯಿಡ್ ಜಾರ್ಜನು ಸಾಲಿಸಿಟರನ ವೃತ್ತಿಯನ್ನು ಪ್ರಾರಂಭಿಸಿದನು. ಆದರೆ ರಾಜಕಾರಣಕ್ಕೂ ತನ್ನಲ್ಲಿ ಸಾಕಷ್ಟು ಉತ್ಸಾಹ-ಜಾಣತನಗಳಿವೆಯೆಂಬ ಅರಿವುಂಟಾಗಿ, ಅದಕ್ಕೆ ಕೈಹಾಕಿದನು. ೧೮೮೮ರಲ್ಲಾದ ಅವನ ಮದುವೆಯೂ ಹೊಸ ಹುಮ್ಮಸ್ಸನ್ನು ತಂದಿತು. ೧೮೯೦ ರಲ್ಲಿ ಕಾರ್ನರ್ವಾನ್ ಭಾಗದಿಂದ ಪಾರ್ಲಿಮೆಂಟಿಗೆ ಆರಿಸಿ ಬಂದನು. ದಕ್ಷಿಣ ಆಫ್ರಿಕದಲ್ಲಿಯ ಬೋಅರ್‌ಯುದ್ಧವು ಇವನ ಮನವನ್ನು ಸೆಳೆಯಿತು. ಅದೇಕೋ, ಬೋಅರರಪರವಾಗಿಯೆ ಇವನು ಬೆಂಬಲಿಗನಾಗಿ ನಿಂತ. ಈ ಅಭಿಪ್ರಾಯಕ್ಕಾಗಿ ಬರ್ಮಿಂಗ್ಹ್ಯಾಮ ನಗರಭವನದಲ್ಲಿ ಜನರು ಇವನ ಮೇಲೆ ಮುತ್ತಿಗೆ ಹಾಕಿದರು. ಆದರೆ ವೇಲ್ಸ್ಯಾಪಕ್ಷದ ಇವನ ಮುಂದಾಳುತನವು ೧೯೦೫ ರಲ್ಲಿ ವ್ಯಾಪಾರಿಸಂಘದ (Board of Trade) ಅಧ್ಯಕ್ಷಪದವನ್ನು ಒದವಿಸಿಕೊಟ್ಟಿತು. ಮೂರು ವರುಷದನಂತರ ಆ್ಯಸ್ಕ್ವಿಥ್‌ನು ಅಧಿಕಾರಾರೂಢನಾದಕೂಡಲೆ, ಲಾಯಿಡ್ ಜಾರ್ಜನು ಹಣಕಾಸಿನ ಮಂತ್ರಿಯಾದನು— ೧೯೧೫ ರ ವರೆಗೆ ಆ ಸ್ಥಾನದಲ್ಲಿಯೆ ಇದ್ದನು.

ಶಾಂತತೆಯ ಕಾಲದಲ್ಲಿ ಆ್ಯಸ್ಕ್ವಿಥ್-ಲಾಯಿಡ್ ಜಾರ್ಜರಂತಹ ಜತೆಗಿಂತ ಬೇರೊಂದು ಒಳ್ಳೆಯದು ಸಿಕ್ಕಲಿಕ್ಕಿಲ್ಲ. ಒಬ್ಬನು ಮತ್ತೊಬ್ಬನಲ್ಲಿಯ ಕೊರತೆಯನ್ನು ಹೋಗಲಾಡಿಸುವಂತಹವನಿದ್ದನು. ಇವರಿಬ್ಬರ ಜಾಣಾಕ್ಷತನದಿಂದ ಹೊರಹೊಮ್ಮಿದ ಸಮಾಜಸುಧಾರಣೆಗಳು, ಇಂಗ್ಲಂಡನ್ನೂ ಇಂಗ್ಲಿಶ್ ಸಮಾಜವನ್ನೂ ೧೯೧೯-೨೧ರ ಅತ್ಯಂತ ನಿಕಟಪರಿಸ್ಥಿತಿಯಲ್ಲಿಯೂ ಕ್ರಾಂತಿಗೆ ತುತ್ತಾಗದಂತೆ ಪಾರುಮಾಡಿದುವು. ಬಡವರ ಬಗ್ಗೆ ಲಾಯಿಡ್‌ಜಾರ್ಜನ ಸಹಾನುಭೂತಿಯು ಎದ್ದುಕಾಣುತ್ತಿತ್ತು. ಹಣಕಾಸಿನ ಮಂತ್ರಿಯ ಸ್ಥಾನದಿಂದ ಸಂದರ್ಶನವನ್ನು ಕೊಟ್ಟಾಗ ಆತನ ಬಾಯಿಂದ ಬಂದ ಮಾತುಗಳಿವು: “ ಕಾರ್ಯವಾಗುವುದು ನನಗೆ ಬೇಕು. ಕನಸುಗಳೂ ಬೇಕು—ಅವು ನನಸಾಗುವ ಕನಸುಗಳಿರಬೇಕು; ಬರಿಯ ಗಾಳಿ ಗೋಪುರಗಳಲ್ಲ! ಮಾನವನಲ್ಲಿ ಆಶೆ, ಅಸಮಾಧಾನಗಳಿರಬೇಕು. ಆದರೆ ಅವು ಮಾನವಕುಲವನ್ನು ತರೆಯುವುದಕ್ಕಲ್ಲ; ಈ ಜಗತ್ತಿನಲ್ಲಿ ಶಾಂತತೆಯನ್ನು ನೆಲೆಗೊಳಿಸಿ, ಸ್ವರ್ಗಸುಖವನ್ನು ತಂದುಕೊಡುವಂತಹ ಆಶೆ ಬೇಕು. ಅದಕ್ಕಾಗಿ ಅಸಮಾಧಾನವೂ ಇರಬಹುದು. ಜೀವನವು ಸುಗಮವೂ ಸುಖಮಯವೂ ಸುರಕ್ಷಿತವೂ ಆಗಬೇಕೆಂಬಾಶೆ ನನಗಿದೆ. ದುಃಖವು ಮನೆಯ ಬಾಗಿಲಿಗೆ ಬಂದು ನಿಂತಿದೆ. ಅನ್ಯಾಯವು ಎದ್ದುಕಾಣುತ್ತಲಿದೆ. ಗಂಡಾಂತರವು ಬರಲಿದೆ. ”

ಆ ಕಾಲದಲ್ಲಿ ಇವನ ಬಗೆಗೆ ಸರದಾರ ಸಾವುಕಾರರಲ್ಲಿದ್ದ ಅಸಹನೆಯ ಆಳತೆಯನ್ನೂ ಇಂದಿನವರು ತಿಳಿಯಲಾರರು. ಅಂದು ಶ್ರೀಮಂತ ಸರದಾರರ ಮೇಲೆ ಈತ ಮಾಡಿದ ಟೀಕಾಪ್ರಹಾರವು ಇಂದು ತಿರುಗಿ ನೋಡಿದಾಗ ಮೆತ್ತಗೆ ಕಾಣಬಹುದು. ಇಂದು ಆ ಸರದಾರರು—ಸಾವುಕಾರರು ಮೆತ್ತಗಾಗಿದ್ದುದು ಲಾಯಿಡ್ ಜಾರ್ಜನ ಪ್ರಭಾವದಿಂದಲೆ “ ಸರದಾರ ಗೃಹ (House of Lords) ”ದ ರಾಜಕೀಯ ಅಧಿಕಾರವನ್ನು ಕಸಿದುಕೊಳ್ಳಲು ಮೂಲಶಕ್ತಿಯನ್ನು ಬದಲಿಸಿದವನು ಲಾಯಿಡ್ ಜಾರ್ಜನೆ! ತನ್ಮೂಲಕ ಸಾಮಾನ್ಯ ಜನತೆಯ ಅಧಿಕಾರವನ್ನು ಹೆಚ್ಚಿಸಿದನು. “ ಹೋಂರೂಲ್ ” ಚಳವಳಿಯಲ್ಲಿ ಅಷ್ಟೇನು ಇವನ ಅಂಗವಿರಲಿಲ್ಲ, ಅಲ್ಸ್ಟರದ ಚಳವಳಿಗೆ ಸಹಾನುಭೂತಿಯನ್ನು ತೋರಿಸಿದನು. ೧೯೧೧ರಲ್ಲಿ ಜರ್ಮನ್ ‘ ಗನ್ ಬೋಟ್ (Gun boat) ’ ಒಂದು, ಮೊರೊಕ್ಕೋಕ್ಕೆ ಹೊರಟುದನ್ನು ಕೇಳಿ, ಜರ್ಮನಿಗೆ ಹೀಗೆಂದು ಎಚ್ಚರಿಕೆ ಕೊಟ್ಟನು: “ ಅನೇಕ ಶತಮಾನಗಳವರೆಗೆ ಬ್ರಿಟನ್ನು ತನ್ನ ಧೈರ್ಯ ಸಾಹಸಗಳಿಂದ ಗಳಿಸಿದ ಶಾಂತತೆಯನ್ನೂ ಮಾನವನ್ನೂ ಅಚ್ಚಳಿಯದೆ ಉಳಿಸುವುದು ನಮ್ಮ ಕರ್ತವ್ಯವಾಗಿದೆ. ಅದಕ್ಕೆ ಧಕ್ಕೆ ತಗಲುವ ಪ್ರಸಂಗಬಂದರೆ, ಶಾಂತವಾಗಿ ಕುಳಿತುಕೊಳ್ಳುವ ನಾಚಿಗೇಡುತನ ನಮ್ಮಲ್ಲಿಲ್ಲ! ”

೧೯೧೪ರಲ್ಲಿ ಮಹಾಯುದ್ಧವು ಪ್ರಾರಂಭವಾದೊಡನೆಯೆ ಇಡಿಯ ದೇಶದ ಕಣ್ಣುಗಳು ಲಾಯಿಡ್‌ಜಾರ್ಜನ ಕಡೆಗೆ ತಿರುಗಿದುವು. ದೇಶದ ಎಲ್ಲ ಜನರಿಗೂ ಇವನ ಶಕ್ತಿಯ ಬಗ್ಗೆ ಆದರವಿತ್ತು. ಅರಿವು ಇತ್ತು. ಆ ನಾಲ್ಕು ವರುಷಗಳಲ್ಲಿ ಇವನಿಗೆ ಒಂದೇ ಗುರಿ. ವೈರಿಗಳನ್ನು ಸೋಲಿಸುವುದು ಒಂದೇ ವಿಚಾರ. ಅದರ ಸಾಧನ ನಿರ್ಮಿತಿ ಇದೊಂದಕ್ಕೇ ತನ್ನ ಶಕ್ತಿ ಸರ್ವಸ್ವವನ್ನೆಲ್ಲ ಉಪಯೋಗಿಸಿದನು. ಇವನು ತಪ್ಪು ಮಾಡಿರಬಹುದು: ತಪ್ಪು ಮಾನವನಿಗೆ ಸಹಜವಾಗಿದೆ. ಆದರೆ ಸಾಧ್ಯ-ಸಾಧನಗಳಲ್ಲಿ ಒಂದು ತರದ ಸಾಮರಸ್ಯವಿತ್ತು. ಆದುದರಿಂದಲೆ ವಿಜಯವು ಬಂದಿತು. ೧೯೧೬ನೆಯ ಇಸ್ವಿ ಬರುವುದರೊಳಗೆ, ಅವನಲ್ಲಿ ಹೊಸ ವಿಚಾರ ಬಂದಿತ್ತು. ತನ್ನ ಹೊರತು ಬೇರೆ ಯಾರೂ ಮುಂಬರುವ ಗಂಡಾಂತರಗಳ ಕಲ್ಪನೆಯನ್ನು ಕಂಡಿಲ್ಲವೆಂಬುದು ಆಗ ಒಂದು

ಭಾಷಣ ಮಾಡಿದುದು ಎಲ್ಲರಿಗೂ ಗೊತ್ತಿದೆ. "ತಡಮಾಡಿದರೆ ತೂಪಿದೊಗೆಯುವರು ವೈರಿಗಳು ನಮ್ಮನ್ನು" ಎಂದು ಎಚ್ಚರಿಸಿದನು. ಹೀಗೆಂದು ಯುದ್ಧರಂಗದ ಸೂತ್ರಗಳನ್ನೆಲ್ಲ ತನ್ನ ಕಡೆಗೆ ತೆಗೆದುಕೊಂಡ — ಮುಂದೆ ಯುದ್ಧದ ಸ್ವರೂಪವೇ ಬದಲಾಯಿತು.

ಯುದ್ಧಮಂತ್ರಿಯ ಅಧಿಕಾರವನ್ನು ಪಡೆದುದೂ ಒಂದು ಕತೆಯೆ. ೧೯೧೬ರಲ್ಲಿ ಆ್ಯಸ್ಕ್ವಿಥ್ ಸರಕಾರವನ್ನು ಕಾಲ್ಕೀಳುವಂತೆ ಮಾಡಿದರು. ಯುದ್ಧಸಮಿತಿಯ ಸದಸ್ಯನಾಗಿದ್ದ ಲಾಯಿಡ್ ಜಾರ್ಜನಿಗೆ ತನಗೆ ಬೇಕಾದ ಅಧಿಕಾರವು ಸಿಕ್ಕದ್ದರಿಂದ ಆ ಸ್ಥಳಕ್ಕೆ ರಾಜೀನಾಮೆಯನ್ನು ಕೊಟ್ಟನು. ಆದರೆ ಆ ಕಾಲದಲ್ಲಿ ಲಾಯಿಡ್ ಜಾರ್ಜನು ಇಡಿಯ ದೇಶದಲ್ಲೆಲ್ಲ ಜನರ ಆದರಕ್ಕೆ ಪಾತ್ರನಾಗಿದ್ದನು. ಇದರ ಪ್ರಭಾವದಿಂದ ಇಡಿಯ ಸರಕಾರವೇ ಮುಗ್ಗರಿಸುವಂತಿತ್ತು. ಆದರೆ ಹಾಗೆ ಮಾಡಗೊಡದೆ ಆದರ ಹೊಣೆಯನ್ನು ತಾನೆ ಹೊತ್ತು ಕಾರ್ಯಮಾಡಿದನು.

ಇಂದಿನ 'ಕೆನ್ಸಾಯ್' ಪದ್ಧತಿಯನ್ನು ೧೯೧೭ ರಲ್ಲಿ ಲಾಯಿಡ್ ಜಾರ್ಜನೇ ಪ್ರಾರಂಭಮಾಡಿದನು. ೧೯೧೮ ರ ಮಾರ್ಚದಲ್ಲಿ ಜರ್ಮನರು ಬಲವಾದ ಹೊಡೆತವನ್ನು ಕೊಟ್ಟರು. ಸೋಲು ಬಾಗಿಲಿಗೆ ಬಂದಂತಿತ್ತು. ಆದರೆ ಲಾಯಿಡ್ ಜಾರ್ಜನು ಎದೆಗುಂದಲಿಲ್ಲ. ಸಕಾಲಕ್ಕೆ ಸೈನಿಕರನ್ನೂ, ಸಾಮಗ್ರಿಗಳನ್ನೂ ಒದವಿಸಿ, ಹೊಸ ಹುರುಪನ್ನು ತುಂಬಿದನು. ಅನಂತರವೆ ಜನರಲ್ ಫೋಕನು ಮಿತ್ರಪಕ್ಷದ ಮುಖ್ಯಾಧಿಪತಿಯಾದನು.

೧೯೧೯ರ ನವೆಂಬರಿನಲ್ಲಿ ಲಾಯಿಡ್ ಜಾರ್ಜನು, ವರ್ಸೇಲಿನಲ್ಲಿ ಇದ್ದನು. ಅಲ್ಲಿ ಇವನಾಡಿದ ಮಾತುಗಳು ಮರ್ಮಭೇದಕವಾಗಿವೆ. "ಸುಂದರವಾದ ಅರಣ್ಯಗಳಲ್ಲಿ ಎಲೆಗಳುದುರುತ್ತಿದ್ದುವು; ಆದರೆ ಅವಷ್ಟೆ ಅಲ್ಲ. ಆ ಎಲೆಗಳೊಂದಿಗೆ, ಬಿರುಗಾಳಿಯ ಹೊಡೆತಕ್ಕೆ ಬೀಳುತ್ತಲಿದ್ದುವು, ಸಾಮ್ರಾಜ್ಯಗಳು; ಸಾಮ್ರಾಟರು; ಕಿರೀಟ-ಕುಂಡಲಗಳು; ಅರಸು-ಅರಸಿಯರು."

ಒಮ್ಮೆ ಯಾರೋ ಲಾರ್ಡ ಟ್ವೀಡ್ಸ್‌ಮೂರ್ ಅವರನ್ನು ವಿಚಾರಿಸಿದರಂತೆ: "ಯುದ್ಧಮಂತ್ರಿ ಲಾಯಿಡ್ ಜಾರ್ಜರ ಬಗ್ಗೆ ನಿಮ್ಮ ಅಭಿಮತವೇನು?" ಎಂದು. "ನಾನು ಅವರನ್ನು ಕ್ರಾಮವೆಲ್, ಚಾಥ್ಯಾಮ ಅವರ ಸಾಲಿನಲ್ಲಿ ಗಣಿಸುತ್ತೇನೆ" ಎಂದರಂತೆ.

ಯುದ್ಧದ ಉತ್ತರಕ್ರಿಯೆಯ ಮೇಲೆ; ೧೯೧೮ ರಲ್ಲಿ ಈತ ಅಧಿಕಾರ ಪದವನ್ನು ಹೊಂದಿದ ಕೂಡಲೆ, ಜನತೆಗೆ ಅನೇಕ ವಚನಗಳನ್ನು ದಯಪಾಲಿಸಿದನು. ಯುದ್ಧಾನಂತರದ ಕಾರ್ಯವ್ಯಾಪ್ತಿಯು ಹೆಚ್ಚಾಯಿತು. ವರ್ಸೇಲದ ಒಪ್ಪಂದದ ಕಾಗದದ ಮೇಲೆ ಲಾಯಿಡ್ ಜಾರ್ಜರ ಸಹಿಯಿದೆ. ಆ ಒಪ್ಪಂದಕ್ಕೆ ಅನೇಕರು ಮೂಗೇರಿಸಿದರು. ಇಷ್ಟು ಮಾತ್ರ ಹೇಳಬಹುದು. ಒಪ್ಪಂದವು ಆರ್ಥಿಕದೃಷ್ಟಿಯಿಂದ ಕೊರತೆಯದಾಗಿ ತೋರಿದರೂ, ರಾಜಕೀಯ ದೃಷ್ಟಿಯಿಂದ ಗೆಲವು ಕಾಣಬರುವಂತಹದಿತ್ತು.

೧೯೨೨ ರ ಜೆನೋವಾ ಪರಿಷತ್ತಿನ ತಂತ್ರ ಲಾಯಿಡ್ ಜಾರ್ಜನದೆ. ಆದರಿಂದ ರಸಿಯಾ, ಜರ್ಮನಿ ಮತ್ತು ಪಶ್ಚಿಮರಾಷ್ಟ್ರಗಳ ನಡುವೆ ಒಂದು ಬಗೆಯ ತಿಳಿವಳಿಕೆಯುಂಟಾಯಿತು; ಯುದ್ಧದ ಸಾಲ, ದೇಶದ ಮೇರೆ ಇವು ನಿರ್ಧರಿಸಲ್ಪಟ್ಟುವು. ಆದರೆ ಫ್ರಾನ್ಸದ ಸಂರಕ್ಷಣೆಯ ಬಗೆಗೆ ಮಾತ್ರ ಅವನ ಲಕ್ಷ್ಯ ಕಡಿಮೆಯಾಗಿ ಕಂಡುಬಂದಿತು. ಅದೇ ಇವನ ತಪ್ಪು. ಆದರೆ ಜೆನೋವಾ ಪರಿಷತ್ತಿನಿಂದ ಏನು ದೊರಕಬಹುದಿತ್ತೊ ಅದು ಸಾಧ್ಯವಾಗಲಿಲ್ಲ. ಆ ಪರಿಷತ್ತು ಸುತ್ತಲಿಂದಲೂ ಆವರಿಸಲ್ಪಟ್ಟಿತ್ತು. ಫ್ರೆಂಚರ ಬೆದರಿಕೆ, ಜರ್ಮನರ ಕುತೂಹಲ, ರಸಿಯಾದ ಸಾಶಂಕವೃತ್ತಿ ಮತ್ತು ಬ್ರಿಟಿಶರ ವೃತ್ತ-ಪತ್ರಗಳ ಟೀಕೆ ಇವುಗಳನ್ನು ಸಮನ್ವಯ ಮಾಡಿಕೊಂಡು ಹೋಗುವ ದೃಷ್ಟಿಯಿಂದ ಅದು ತಲೆಭಾರವಾಗಿ ಮುಗ್ಗರಿಸಿತು. ಮುಂದಿನ ಪೀಳಿಗೆಯ ಜನತೆಯ ಆಶಾತಂತುಗಳನ್ನು ಕತ್ತರಿಸಿತು. ಸ್ವದೇಶಕ್ಕೆ ಮರಳಿದಾಗ ಲಾಯಿಡ್ ಜಾರ್ಜರು ಬರಿಯ ಅಧಿಕಾರ-ಚ್ಯುತರಾಗಿದ್ದರು; ಜರ್ಮನಿಯ ಪ್ರತಿನಿಧಿಯಾಗಿದ್ದ ರಾಥೆನೊ ಅವರು ಮಾತ್ರ ದೇಶಕ್ಕೆ ಮರಳಿದಾಗ ಕುಠಾರವನ್ನು ಎದುರಿಸಬೇಕಾಯಿತು. ಅವರನ್ನು ಕೊಂದುಹಾಕಿದರಂತೆ.

ಜನರು ಆಗಾಗ ಲಾಯಿಡ್ ಜಾರ್ಜನ ಮೇಲೆ ಟೀಕೆಮಾಡುವುದು, ಅವನೊಬ್ಬ ತತ್ತ್ವರಹಿತ ಕರ್ತೃತ್ವಶಾಲಿಯೆಂದು; ಅದು ನಿಜ. ಅವನು ಯಾವುದೊಂದು ರಾಜಕೀಯ ತತ್ತ್ವಕ್ಕೆ ಜಿಗಳಿಯಂತೆ ಅಂಟಿಕೊಂಡಿಲ್ಲ. ಅವನೊಬ್ಬ ವ್ಯವಹಾರ ಚತುರ.— ಕೇವಲ ವ್ಯಾವಹಾರಿಕ ಮನುಷ್ಯ. ಒಪ್ಪಂದವು ಅವನಿಗೆ ಸರಿಹೊಂದದ ಮಾತಲ್ಲ. ಕಾಲಕ್ಕೆ ತಕ್ಕಂತೆ ಮನದ ನೆಳವನ್ನು ಬದಲು ಮಾಡುವುದಕ್ಕೆ ಎಂದೂ ಅಂಜಲಿಲ್ಲ. ಇವನ ಸ್ವಭಾವದಿಂದ ಎರಡು ವಿಷಯಗಳು ಎದ್ದು ಕಾಣುವುವು. ಒಂದು ಸ್ವದೇಶಪ್ರೀತಿ, ಎರಡನೆಯದು ಅತ್ಯಾಚಾರ — ಯಾವುದೇ ಸ್ವರೂಪದಲ್ಲಿದ್ದರೂ. ಅದಕ್ಕೆಂದೆ, ಎಷ್ಟೇ ವಿಲಕ್ಷಣಕಂಡರೂ ಇವನು ಕೆಮಾಲ ಪಾಚ್ಛಾನ ವಿರುದ್ಧ ಗ್ರೀಕರನ್ನು ಹುರಿದುಂಬಿಸಿದ.

ಇದೀಗ ಲಾಯಿಡ್ ಜಾರ್ಜನನ್ನು "ಕುಚೇಷ್ಟೆಗಾರ" ಎಂಬ ಅಭಿಧಾನದಿಂದ ಕರೆಯುವವರು ಕೆಲವರು ಇದ್ದಾರೆ; ಸರಿ. ಒಂದು ದೊಡ್ಡ ವ್ಯಕ್ತಿಯು ತನ್ನ ಕಾರ್ಯದ ಫಲವನ್ನು ನಿರೀಕ್ಷಿಸುತ್ತಿದ್ದಾಗ, ತನ್ನನ್ನು ಆದರ ಬಗೆಗೆ ವಿಚಾರಿಸುವುದಿಲ್ಲವೆಂಬುದು ಒಮ್ಮೊಮ್ಮೆ ಮಾತಿನಲ್ಲಿ ತೀಕ್ಷ್ಣತೆಯನ್ನು ತರುವುದು; ಅದು "ಕುಚೇಷ್ಟೆ" ಎಂದು ಕೆಲವರಿಗೆ ಎನಿಸಬಹುದು. ಚೇಂಬರ್‌ಲೇನರು ಜರ್ಮನಿಗೆ ಯಾತ್ರೆಮಾಡುವಾಗ ಒಬ್ಬರು ಲಾಯಿಡ್ ಜಾರ್ಜನನ್ನು ಕೇಳಿದರಂತೆ 'ಹಾಗೆ ಮಾಡುವುದು ಸರಿಯೆ' ಎಂದು. "ನನ್ನ ಕಾಲದಲ್ಲಿ ಅವರು ನನ್ನನ್ನೆ ಕಾಣಲು ಬರುತ್ತಿದ್ದರು" ಎಂದನು. ಈ ತರದ ಜಿಗುಟುತನವಿದ್ದ ರಾಜಕಾರಣಿಯು ಜೀವಿಸಿದ್ದುದು ಬ್ರಿಟಿಶರ ಭಾಗ್ಯ. ಪ್ರಸಂಗ ಬಂದರೆ ಮತ್ತೆ ಇಂಗ್ಲಂಡು ಲಾಯಿಡ್ ಜಾರ್ಜನ ಸಲಹೆ ತೆಗೆದುಕೊಳ್ಳಬಹುದು. ವಯಸ್ಸೇನೊ ೭೭ ಕ್ಕೆ ಮಾರಿದೆ. ಆದರೂ ಬುದ್ಧಿ ಹರಿತವಾಗಿದೆ. ಆದರಿಂದ ದೇಶಕ್ಕೆ ಪ್ರಯೋಜನವೇನಾದರೂ ಸಿಕ್ಕುವುದೇನೋ ನೋಡಬೇಕು.

ಕನ್ನಡ ಸಾಹಿತ್ಯ ಪರಿಷತ್ತು

ದಿವಂಗತ ಶ್ರೀ॥ ಇ. ಎ. ಭಾಸ್ಕರರಾಯರ ಜ್ಞಾಪಕ ಸ್ಪರ್ಧೆ

ದಿವಂಗತ ಶ್ರೀ॥ ಇ. ಎ. ಭಾಸ್ಕರರಾಯರ ಹೆಸರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಸಾಹಿತ್ಯ ಪ್ರೋತ್ಸಾಹದ ಒಂದು **ಏರ್ಪಾಡನ್ನು** ನಡಸಬೇಕೆಂಬ ಉದ್ದೇಶದಿಂದ ಶ್ರೀ॥ ಭಾಸ್ಕರ **ರಾಯರ** ತಾಯಿಯವರಾದ ಶ್ರೀಮತಿ ಎ. ಶೇಷಮ್ಮನವರು **ಒಂದು ಜ್ಞಾಪಕ** ನಿಧಿಯನ್ನು ಪರಿಷತ್ತಿಗೆ ಕೊಟ್ಟಿರುವುದು ಸರಿಯಷ್ಟೆ. ಈ ಜ್ಞಾಪಕನಿಧಿಯ ಸಂಬಂಧದಲ್ಲಿ ಈ ವರ್ಷ (೧೯೪೦) ಒಂದು ಪ್ರಬಂಧಸ್ಪರ್ಧೆಯನ್ನು ನಡಸಬೇಕೆಂದು ನಿಶ್ಚಯಿಸಿದೆ.

ಪ್ರಬಂಧದ ವಿಷಯ: "**ಕನ್ನಡ ಸಾಹಿತ್ಯದಲ್ಲಿ ಸಣ್ಣ ಕತೆಯ ಸ್ಥಾನ.**"

ಸ್ಪರ್ಧೆಯ ನಿಯಮಗಳು.

೧. ಪ್ರಬಂಧ ಸ್ವತಂತ್ರವಾಗಿರಬೇಕು ಮತ್ತು ಇದುವರೆಗೆ ಅಚ್ಚಾಗಿರಬಾರದು.

೨. ಪ್ರಬಂಧ ಫೂಲ್ಸ್ಕ್ಯಾಪ್ ಆಕಾರದ ೨೦ ಪುಟಗಳ ಪರಿಮಿತಿಯಲ್ಲಿ ಇರಬೇಕು; ಮತ್ತು ಅದನ್ನು ಕಾಗದದ ಒಂದೇ ಪಕ್ಕದಲ್ಲಿ ಶಾಯಿಯಲ್ಲಿ ಸ್ಪಷ್ಟಾಕ್ಷರಗಳಲ್ಲಿ ಬರೆದಿರಬೇಕು.

೩. ೧೯೪೦ನೆಯ ಇಸವಿ **ಸೆಪ್ಟಂಬರ್ ತಿಂಗಳು ೩೦ನೆಯ ತಾರೀಖಿನೊಳಗಾಗಿ** ಪ್ರಬಂಧ ಪರಿಷತ್ತಿನ ಕಚೇರಿಗೆ ತಲುಪಬೇಕು.

೪. ಅತ್ಯುತ್ತಮವೆಂದು ಪರೀಕ್ಷಾಸಮಿತಿ ತೀರ್ಮಾನಿಸಿದ ಪ್ರಬಂಧಕ್ಕೆ ೨೦ ರೂಪಾಯಿಗಳ ಬೆಲೆಯುಳ್ಳ ಬಹುಮಾನವನ್ನು ಕೊಡಲಾಗುವುದು.

೫. ಬಹುಮಾನ ಪಡೆದ ಪ್ರಬಂಧವನ್ನು ಪ್ರಕಟಿಸಲು ಪರಿಷತ್ತಿಗೆ ಹಕ್ಕು ಇರುತ್ತದೆ.

೬. ಸ್ಪರ್ಧೆಗೆ ಬಂದ ಪ್ರಬಂಧಗಳು ಬಹುಮಾನಕ್ಕೆ ಅರ್ಹವಾದುವುಗಳಲ್ಲವೆಂದು ಕಂಡು ಬಂದರೂ ಮತ್ತು ಸಾಕಷ್ಟು ಸಂಖ್ಯೆಯಲ್ಲಿ ಪ್ರಬಂಧಗಳು ಬರದಿದ್ದರೂ ಸ್ಪರ್ಧೆಯನ್ನು ನಿಲ್ಲಿಸಬಹುದು.

೭. ಹಿಂದಿನ ವರ್ಷಗಳ ಸ್ಪರ್ಧೆಯಲ್ಲಿ ಬಹುಮಾನ ಪಡೆದವರು ಈ ಸ್ಪರ್ಧೆಗೆ ನಿಲ್ಲಬಾರದು.

[ವಿ. ಸೂ:—ಸ್ಪರ್ಧೆಗೆ ಬಂದ ಪ್ರಬಂಧವನ್ನು ಹಿಂದಿರುಗಿಸುವುದಿಲ್ಲವಾದ್ದರಿಂದ; ಸ್ಪರ್ಧಿಗಳು ತಮ್ಮ ಪ್ರಬಂಧದ ಒಂದು ಪ್ರತಿಯನ್ನು ತಮ್ಮಲ್ಲಿ ಉಳಿಸಿಕೊಳ್ಳಬೇಕೆಂದು ಪ್ರಾರ್ಥನೆ.]

ಸ್ಪರ್ಧೆಗೆ ಸಂಬಂಧಿಸಿದ ಪತ್ರವ್ಯವಹಾರವನ್ನು ಪರಿಷತ್ತಿನ ಕಾರ್ಯದರ್ಶಿಯವರೊಂದಿಗೆ ನಡಸತಕ್ಕದ್ದು.

ಬೆಂಗಳೂರು — ಬಿ. ವೆಂಕೋಬರಾವ್

೨೬-೭-೧೯೪೦ — ಕಾರ್ಯದರ್ಶಿ

(೨೩೮ನೆಯ ಪುಟದಿಂದ ಮುಂದುವರಿದುದು)

ಹೊಗಳಿಸಿಕೊಂಡ ಶ್ರೇಯಸ್ಸಿಗೆ ಇಂದು ಕನ್ನಡದೊರೆಯೊಬ್ಬ—ಒಬ್ಬನೇ ಒಬ್ಬ—ಪಾತ್ರನಾದುದು ಅಖಿಲ ಕರ್ನಾಟಕಕ್ಕೆ ಹೆಮ್ಮೆಯ ಸಂಗತಿ, ಅದರಂತೆಯೆ ಅಂತಹ ಕನ್ನಡದೊರೆ ಅಗಲಿಹೋದುದು ಅಖಿಲ ಕರ್ನಾಟಕವೂ ಕಂಬನಿಗರೆಯುವಂತಹ ಸಂಗತಿ. ಪ್ರಜೆಗಳ ನೆಮ್ಮದಿಯನ್ನೆ ಕರ್ತವ್ಯವನ್ನಾಗಿರಿಸಿಕೊಂಡು, ಆದರ್ಶಜೀವನವನ್ನು ಜೀವಿಸಿಹೋದ ಶ್ರೀಮನ್ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಅವರಿಗಾಗಿ ಪ್ರತಿಯೊಬ್ಬ ಕನ್ನಡಿಗನೂ ತನ್ನ ಶ್ರದ್ಧೆಯ ಅಂಜಲಿಗಳನ್ನರ್ಪಿಸಿ, ಅವರಿಗೆ ಸದ್ಗತಿದೊರೆಯುವಂತೆ ಪರಮಾತ್ಮನನ್ನು ಪ್ರಾರ್ಥಿಸಬೇಕಾಗಿದೆ.

ದಿವಂಗತ ದೊರೆಗಳಿಗೆ ಚಿರಶಾಂತಿ ದೊರೆಯಲಿ!

* * *

ದೀವಳಿಗೆಯ ಸಂಚಿಕೆ

ಪ್ರತಿವರ್ಷದಂತೆ ಈ ಸಲವೂ ದೀವಳಿಗೆಗೆ ಜಯಂತಿಯ ವಿಶೇಷ ಸಂಚಿಕೆಯನ್ನು ಪ್ರಕಟಿಸಲಾಗುವುದು. ನವೆಂಬರ್ ೧ನೆಯ ತಾರೀಖಿಗೆ ಹೊರಡಲಿರುವ ಸಂಚಿಕೆಯೆ ದೀವಳಿಗೆಯ ಸಂಚಿಕೆಯಾಗಿ ಹೊರಬೀಳುವುದು. ಲೇಖಕಮಹನೀಯರು ವಿಶೇಷಸಂಚಿಕೆಗೆ ಒಪ್ಪುವಂತಹ ಒಳ್ಳೊಳ್ಳೆಯ ಲೇಖನ, ಕಥೆ, ಹರಟೆ, ಏಕಾಂಕನಾಟಕಗಳನ್ನು ಸಪ್ಟಂಬರ್ ಕೊನೆಯೊಳಗಾಗಿ ತಲ್ಪುವಂತೆ ದಯೆಯಿಟ್ಟು ಕಳಿಸಬೇಕು. ನಿಯಮಿತ ಪ್ರತಿಗಳನ್ನು ಪ್ರಕಟಿಸಲಾಗುವುದಾದುದರಿಂದ ಏಜಂಟರು ತಮಗೆ ಬೇಕಾಗಬಹುದಾದ ಹೆಚ್ಚಿನ ಪ್ರತಿಗಳ ಬಗೆಗೆ ಮೊದಲೆ ಬರೆದು ತಿಳುಹಬೇಕು. ಜಾಹೀರಾತು ಕೊಡಬೇಕೆನ್ನುವವರು ಬೇಗನೆ ಪತ್ರವ್ಯವಹಾರವನ್ನು ಆರಂಭಿಸಬೇಕು.

ವಿಲಂಬಕ್ಕಾಗಿ ಕ್ಷಮೆಯಿರಲಿ!

ಮುದ್ರಣಾಲಯದ ಕೆಲಸಗಾರರೆಲ್ಲರು ಪ್ಲೇಗಿನ ಮದ್ದನ್ನು ಚುಚ್ಚಿಸಿಕೊಂಡುದರಿಂದಲೂ, ಜಯಂತಿಯ ಮುದ್ರಣಸಮಯದಲ್ಲಿಯೆ ಹೆಚ್ಚಾಗಿ ಬಿಡುವಿನ ದಿನಗಳು ಬಂದುದರಿಂದಲೂ, ಈ ಸಂಚಿಕೆ ಎರಡು ದಿನ ತಡವಾಗಿ ಹೊರಟಿತು. ಅನಿವಾರ್ಯವಾದ ಈ ದೋಷವನ್ನು ಇದೊಂದು ಸಲ ನಮ್ಮ ವಾಚಕರು ಕ್ಷಮಿಸಬೇಕು.

—ಸಂಪಾದಕರು.

(೨೩೦ನೆಯ ಪುಟದಿಂದ ಮುಂದುವರಿದುದು)

ಹೆಚ್ಚಾಯಿತು. ಅಷ್ಟರಲ್ಲಿ ಅವನೇ ಹೇಳಿದನು: 'ಹೊಡೆದುದಕ್ಕೆ ಆಶ್ಚರ್ಯ ಯಾಕೆ? ಕೇವಲ ಒಳಜಗಳಕ್ಕೇ ಅಹಿಂಸೆ ಮಾನ್ಯವೆಂದೂ, ಹೊರಗಿನ ದಾಳಿಗಾಗಿ ಅದನ್ನು ಬಿಟ್ಟುಕೊಟ್ಟಿದೆ ಎಂದೂ ಕಾಂಗ್ರೆಸ್ಸೇ ಹೇಳಿದೆ; ಅದಕಾಗಿ ಯಾರೂ ನನ್ನ ಮೇಲೆ ಶಿಸ್ತುಭಂಗೋಪಾಯವನ್ನು ಕೈಕೊಳ್ಳಲಾರರು.' ಅದನ್ನು ಕೇಳಿ— ಅಥವಾ ಮುಂದಿನ ಮಾತೇಕೆ?

ನಮ್ಮಿಷ್ಟಕ್ಕೆ ನಾವು, ನಿಮ್ಮಿಷ್ಟಕ್ಕೆ ನೀವು।
ಯಾರ ಬುದ್ಧಿ ಅಷ್ಟಕ್ಕಷ್ಟೆ, ಹೇಳ್ಬೇಕು ತಾವು॥

" ಶಾಸ್ತ್ರರೀತಿಯನ್ನನುಸರಿಸಿರುವ ವಿಧವೆಯನ್ನು ಲಗ್ನವಾಗಲು, ನಮ್ಮ ರಾಯರು ಶಪಥಮಾಡಿದ್ದಾರೆ......."

ನನ್ನ ★ ಬೆನ್ನಟ್ಟಿದ್ದ ★ 'ವಿಧವಾಧವತ್ವ'

(ವಿನೋದ ಕಥೆ)

★

ಶ್ರೀ. " ರಾಮು "

ಗುಂಡಪ್ಪ ಸೇವಕ; ಸೀತಾರಾಮು ರಾಯರು ಯಜಮಾನರು. ಇಬ್ಬರ ಮಿದುಳೂ ಸೇರಿ ಒಬ್ಬನೆ ಗುಂಡಪ್ಪನ ತಲೆಯಲ್ಲಿ. ಗುಂಡಪ್ಪನಿಲ್ಲದಿದ್ದರೆ ಶ್ರೀಮತಿ ವಸುಂಧರಾಬಾಯಿ, ರಾಯರ ಬಾಳನ್ನು ಯಾವ ದಿಕ್ಕಿಗೆ ತಿರುಗಿಸುತ್ತಿದ್ದಳೊ!

★

ಆ ದಿನ ನಾನು ಹೆಚ್ಚುಗೆಯ ಸಡಗರದಿಂದಲೇ ಎದ್ದೆನು. ಎಂದಿಗಿಂತಲೂ ಅಂದು ಅರ್ಧ ಘಂಟೆ ಮುಂಚೆಯಾದರೂ ಎದ್ದಿರಬೇಕು. ಆ ದಿನವು ನನ್ನ ಜೀವನದ ಇತಿಹಾಸದಲ್ಲಿ ಹೆಗ್ಗುರುತಿನ ದಿನವೆಂದು, ನನ್ನ ಕೈಕೆಳಗೆ ಪರಿಚಾರಕವೃತ್ತಿಯಲ್ಲಿದ್ದರೂ ನನ್ನ ಆಪ್ತಸಚಿವನಾದ ಗುಂಡಪ್ಪನ ಅಭಿಪ್ರಾಯ. ಗುಂಡಪ್ಪನಷ್ಟು ತಿಳಿವಳಿಕೆಯುಳ್ಳವರು, ತಿಳಿಗಣ್ಣವರು ಬಹಳ ಅಪರೂಪ. ಗುಂಡಪ್ಪನೊಬ್ಬನೆ! ಎರಡನೆಯವರಿಲ್ಲ! ನಾನು ಎದ್ದಕೂಡಲೆ ನನಗೆ ಕಾಫಿಯನ್ನು ತಂದು ಕೊಟ್ಟು ಕೈಮುಗಿದು ನಿಂತುಕೊಂಡನು. ನಾನು ಕಾಫಿಯ ರುಚಿ ನೋಡಿದೊಡನೆ, ಆಶ್ಚರಿಗೊಂಡು "ಇದು ನಾಕಮ್ಮನ ಕಾಫಿ ಪುಡಿ ಅಲ್ಲ" ಎಂದೆನು.

"ಅಲ್ಲ!" — ಗುಂಡಪ್ಪನಿಗೆ ನನ್ನ ಜಿಹ್ವಾಶಕ್ತಿಯಲ್ಲಿ ಬಹಳ ಮೆಚ್ಚುಗೆ. "ಅದ್ಯಾಕೆ ಬದಲಾಯಿಸಿದೆ?"

"ಈ ದಿವಸ ನಡೆಯಲಿರುವ ತಮ್ಮ ಭಾಷಣದ ಪ್ರತಿಯನ್ನು.."

"ಅದಿರಲಿ, ಕಾಫೀಪುಡೀನ ಹೇಳದೆ ಕೇಳದೆ ಏಕೆ ಬದಲಾಯಿಸಿದೆ?"

ತಪ್ಪಿಲ್ಲದೆ— ಚಾಚೂ ತಪ್ಪಿಲ್ಲದೆ— ಕೆಲಸಮಾಡುವವನೆಂದು ಗುಂಡಪ್ಪನಿಗೆ ಬಹಳ ಹೆಮ್ಮೆ ಇತ್ತು; ಇಂದು ತಪ್ಪು ಸಿಕ್ಕಿತು.

ಗುಂಡಪ್ಪನ ಮುಖವು ಕಳೆಗುಂದಲಿಲ್ಲ. ಅಭಿಮಾನದಿಂದಲೇ ತುಳುಕುತ್ತಿತ್ತು. "ನಿನ್ನೆ ರಾತ್ರಿ—ತಮ್ಮ ಭಾಷಣದ ಪ್ರತಿಯನ್ನು ಚೆನ್ನಾಗಿ ವಿರಳವಾಗಿ ಬರೆದು ಮುಗಿಸುವ ಹೊತ್ತಿಗೆ ಹನ್ನೆರಡು ಏರಾರಿತ್ತು."

"ಅಷ್ಟು ಹೊತ್ತಾಗಿತ್ತೆ?"

"ಹೌದು"

"ಅದ್ಯಾಕೆ ಅಷ್ಟು ಹೊತ್ತು?"

"ನಿನ್ನೆ ಸಂಜೆ ತಾವು ತಮ್ಮ ಭಾಷಣವನ್ನು ಗೀಚಿ ಕೊಟ್ಟು 'ಲಕ್ಷ್ಮಣರಾಯರ ಕೈಯಿಂದ ತಿದ್ದಿಸಿಕೊಂಡು ಬಂದು ಸರಿಯಾಗಿ ಪ್ರತಿ ಮಾಡಿಡು' ಎಂದು ಹೇಳಿದಿರಿ!"

"ಹೌದೂ!"

"ಲಕ್ಷ್ಮಣರಾಯರು ನಿಮ್ಮ ಭಾಷಣವನ್ನು ಬಹಳ ಕಷ್ಟಪಟ್ಟು, ಅಕ್ಷರಗಳನ್ನು ಕೂಡಿಸಿ ಕೂಡಿಸಿ ಓದಿ, ಅನಂತರ ಗಟ್ಟಿಯಾಗಿ ನಕ್ಕು 'ಇಂಥಾ ಭಾಷಣವನ್ನು ತಿದ್ದಿಕೊಡುವುದರ ಬದಲು, ಬೇರೆ ಭಾಷಣವನ್ನೇ ಬರೆದು ಕೊಡುವುದು ಸುಲಭ' ಎಂದು ಹೇಳಿ, ಬೇರೆಯ ಭಾಷಣವನ್ನೇ ಬರೆದುಕೊಟ್ಟರು.

"ಹೂಂ!"—ಲಕ್ಷ್ಮಣನ ಅಭಿಪ್ರಾಯಕ್ಕೆ ನಾನು ಬೆಲೆಯನ್ನೇ ಕೊಡುತ್ತಿರಲಿಲ್ಲ.

"ಅದನ್ನು ತಂದು, ಸರಿಯಾಗಿ,—ತಾವು ತೊಡರಿಲ್ಲದೆ ಸುಲಭವಾಗಿ ಓದುವ ಹಾಗೆ— ನಕಲು ಮಾಡುವ ಹೊತ್ತಿಗೆ, ರಾತ್ರಿ ಹನ್ನೆರಡಾಗಿತ್ತು."

"ಅದೆಲ್ಲಾ ಸರಿ, ಆದರೆ ಕಾಫಿ ಪುಡಿ ಏಕೆ.."

"ನಿನ್ನೆ ಸಂಜೆ, ತಾವು ಬರುವಾಗ ಸಾಕಮ್ಮನ ಪುಡಿ ತರುತ್ತೇನೆಂದು ಹೇಳಿದ್ದಿರಿ; ತರಲಿಲ್ಲ. ಅದ್ದರಿಂದ ನಾನೇ ಲಕ್ಷ್ಮಣರಾಯರ ಮನೆಯಿಂದ ಅವರ ಮನೆಯಲ್ಲೇ ಮಾಡಿದ್ದ ಪುಡಿಯನ್ನು ತಂದಿದ್ದೆ."

"ಇರಲಿ ಬಿಡು. ಲಕ್ಷ್ಮಣನು ಬರೆದುಕೊಟ್ಟ ಭಾಷಣ ತಕ್ಕ ಮಟ್ಟಿಗಾದರೂ ಇದೆಯೋ?"

"ಇದೆ, ಇದೆ, ಬಹಳ ಎತ್ತರದ ಮಟ್ಟಕ್ಕೇ ಇದೆ. ಬಹಳ ಪರಿಣಾಮಕಾರಿಯಾಗುತ್ತೆ!"

ಗುಂಡಪ್ಪನು ಒಪ್ಪಿದರೆ ಸರಿ; ಚೆನ್ನಾಗಿಯೇ ಇರುತ್ತೆ. ಅಲ್ಲದೆ ಅವನು ಸ್ವಲ್ಪ ಓದಿದ್ದಾನೆ. ಪ್ರತಿ ತಿಂಗಳು **'ವಿಕಟವಿನೋದಿನಿ'**ಯನ್ನು ಬಿಡದೆ ಓದುತ್ತಾನೆ. ತಕ್ಕಮಟ್ಟಿನ ಸಾಹಿತಿ. (ಈಗೇನು; ಕತೆಯ ಸಾಹಸಿಗರೆಲ್ಲಾ ಸಾಹಿತಿಗಳೇ!)

ಗಡಿಯಾರ ನೋಡಿದೆನು. ಎಂಟೂವರೆ ಆಗಿ ಹೋಗಿತ್ತು. ಒಂಭತ್ತಕ್ಕೆ ಸರಿಯಾಗಿ ಉಪನ್ಯಾಸವು ಪ್ರಾರಂಭವಾಗಲಿತ್ತು. ಲಕ್ಷ್ಮಣನು ಬರೆದು ಕೊಟ್ಟಿದ್ದ ನನ್ನ ಭಾಷಣವನ್ನು ನಾನು ಇನ್ನೂ ಒಂದು ಸಾರಿಯೂ ಓದಿರಲಿಲ್ಲ. ಓದಲಿಕ್ಕಾಗಿರಲಿಲ್ಲ. ಚಿಂತೆಯಿಲ್ಲ. ಗುಂಡಪ್ಪನ ಬರವಣಿಗೆ ಮುತ್ತಿನ ಸರ; ತೊಡಕಿಲ್ಲದೆ ಸರಸರನೆ ಓದಬಹುದು. ಇಷ್ಟಕ್ಕೂ ಅಧ್ಯಕ್ಷರ ಭಾಷಣವನ್ನು ಓದುವುದು ಏನು ಮಹಾ ಕಷ್ಟ? ಅದ್ದರಿಂದ ಜಾಗ್ರತೆ ಬಟ್ಟೆಗಳನ್ನು ಹಾಕಿಕೊಂಡು, ಹೊತ್ತಿಗೆ ಸರಿಯಾಗಿ ಹೋಗಬೇಕೆಂದು "ಗುಂಡಪ್ಪಾ, ಜಾಗ್ರತೆ ಕರಿಯ ಸರ್ಜ್ ಅಂಗಿ, ಫೆಲ್ಟು ಹಾಟು, ಪ್ಲಾನಲ್ಲಿನ ಷರಾಯಿ ತೆಗೆದುಕೊಂಡು ಬಾ!" ಎಂದೆನು.

ಗುಂಡಪ್ಪನ ಗುಂಡುಮೊಗವು ಒಂದೂವರೆ ಮೊಳದುದ್ದವಾಯಿತು. ಅವನಿಗೆ ಇಷ್ಟವಿಲ್ಲದ್ದನ್ನು ಸೂಚಿಸಿದರೆ ಅವನ ಮುಖ ಹಾಗೆ ಆಗುತ್ತೆ. ಅವನು ನಿಂತ ಸ್ಥಳವನ್ನು ಬಿಟ್ಟು ಕದಲಲಿಲ್ಲ.

"ಏಕೆ?' ಎಂದು ನಾನು ಕೇಳಿದೆ.

"ತಾವು ಕರಿಯ ಅಂಗಿಯ ಮೇಲೆ ಫೆಲ್ಟುಹ್ಯಾಟು ಹಾಕಿಕೊಂಡರೆ ಚೆನ್ನಾಗಿ ಕಾಣುವುದಿಲ್ಲ ಸ್ವಾಮಿ. ಅವೆರಡನ್ನೂ ತಾವು ಒಟ್ಟಿಗೆ ಧರಿಸಿದರೆ ಸರ್ಕಸ್ಸಿನ ಸಕಲಿಯವನ ಹಾಗೇ ಕಾಣುತ್ತೀರಿ. ತಮ್ಮ ಕರಿಯ ಸರ್ಜ ಅಂಗಿಯ ಮೇಲೆ ಜರತಾರೀ ರುಮಾಲು ಒಪ್ಪುವ ಹಾಗೆ ಇನ್ನಾವುದೂ ಒಪ್ಪುವುದಿಲ್ಲ!"

ನನಗೆ ಸಿಟ್ಟು ಬಾರದೆ ಇರುತ್ತೇನು ಹೇಳಿ. ನಿಜ, ನಿಜ, ನಿಜ,.. ಗುಂಡಪ್ಪ ಬುದ್ಧಿವಂತ, ಗುಂಡಪ್ಪ ಯುಕ್ತಿವಂತ; ಗುಂಡಪ್ಪ ಮೇಧಾವಿ, ಗುಂಡಪ್ಪ ದೊಡ್ಡ ಅದು, ಗುಂಡಪ್ಪ ದೊಡ್ಡ ಇದು.. ಇವೆಲ್ಲಾ ನಿಜ. ನನಗೆ ನೂರಾರು ಕಷ್ಟಕಾಲಗಳಲ್ಲಿ ಸಲಹೆಕೊಟ್ಟು, ಯುಕ್ತಿಹೂಡಿ, ಚತುರತೆ ಸಾಧಿಸಿ, ನನ್ನನ್ನು ಕಷ್ಟದಿಂದ ಪಾರುಮಾಡಿದ್ದಾನೆ.. ಇದನ್ನೂ ಒಪ್ಪಿಕೊಳ್ಳುತ್ತೇನೆ. ಆದರೆ ನನ್ನ ಬಟ್ಟೆ-ಬರೆಗಳ ವಿಷಯದಲ್ಲಿ ಅವನು ತಲೆಹಾಕಲು ಯತ್ನಿಸಿದರೆ ಅಲ್ಲಿ ನಾನು ಗೀಟೆಳೆಯುತ್ತೇನೆ. ಮನೆಯ ಯಜಮಾನ ನಾನು; ಅವನು ನನ್ನ ಪರಿಚಾರಕ. ನಮ್ಮಿಬ್ಬರ ಈ ಸಂಬಂಧವನ್ನು ಅವನು ಮರೆಯಕೂಡದು. ನಾನು ಅನೇಕ ವೇಳೆ ಅವನ ಸಲಹೆಗಳನ್ನು ಕೇಳುತ್ತೇನೆಂದು ಅವನ ತಲೆ ತಿರುಗಿರಬೇಕು. ಆದ್ದರಿಂದ 'ನಾನೂ ಒಬ್ಬ ಮನುಷ್ಯ, ನನ್ನ ತಲೆಯಲ್ಲಿ ಟೊಳ್ಳಿಲ್ಲಾ' ಎಂಬುದನ್ನು ಅವನಿಗೆ ತಿಳಿಯಪಡಿಸಬೇಕೆಂದು ಸಂಕಲ್ಪಿಸಿಬಿಟ್ಟೆನು. ಹೂಂ, ಗುಂಡಪ್ಪನಿಗೇ ಎದುರುನಿಂತೆ. ಕೃಷ್ಣನೆದುರು ಅರ್ಜುನನು ನಿಂತಂತೆ.

"ಗುಂಡಪ್ಪಾ, ಇದು ತಲೆಹರಟೆ; ತಿಳೀತೇ? ಅಧಿಕಪ್ರಸಂಗತನ; ಗೊತ್ತಾಯ್ತೇ? ಪಿತ್ತರಸಾಧಿಕ್ಯ; ಅರಿವಾಯ್ತೇ? ಹೇಳಿದಷ್ಟು ಮಾಡುವುದು ನಿನ್ನ ಕೆಲಸ. ನಡೆ!"

ತನ್ನ ಪ್ರತಿಷ್ಠೆಯು ಮುರಿದುಬಿದ್ದುದರಿಂದ ಗುಂಡಪ್ಪನಿಗೆ ಬೆನ್ನುಮುರಿದಂತೆ ಆಗಿದ್ದರೂ, ತೋರ್ಪಡಿಸದೆ, ನೆಟ್ಟಗೆಯೇ ನಿಂತುಕೊಂಡು, ಶಾಂತನಾಗಿಯೇ, ಏನೂ ಕಳವಳವಿಲ್ಲದೆ "ಆಗ್ಲಿ ಸ್ವಾಮಿ, ಬಟ್ಟೆಗಳ ವಿಷಯದಲ್ಲಿ ನನಗೆ ತಿಳಿದದ್ದನ್ನ ಹೇಳಿದೆ ಅಷ್ಟೇ! ಅದೇ ಬಟ್ಟೆಗಳನ್ನೇ ತರುತ್ತೇನೆ. ಆದರೆ ನನ್ನ ಅಭಿಪ್ರಾಯ ಮಾತ್ರ ಬದಲಾಯಿಸದೆ ಉಳಿದೇ ಇದೆ!" ಎಂದು ಹೇಳಿ, ಬಟ್ಟೆಗಳನ್ನು ತರಲು ತನ್ನದೇ ಆದ ರೀತಿಯಿಂದ ಹೋದನು.

* * *

ನಿಮಗೆ ಇದರ ಸೂತ್ರವೇ ಸಿಕ್ಕಲಿಲ್ಲವೆಂದು ಕಾಣುತ್ತೆ. ನನ್ನ ಸ್ವಭಾವವೇ ಹಾಗೆ ಮಧ್ಯದಿಂದ ಪ್ರಾರಂಭಿಸಿ, ಮೊದಲನ್ನು ಮಧ್ಯದಲ್ಲಿ ತಂದು ಯದ್ವಾತದ್ವಾ ಮಾಡಿಬಿಡೋದು. ಸಂದರ್ಭ ಇಷ್ಟು: ನಮ್ಮ ಸೂರಿ.. ಮುಕ್ಕಡಿ ಮೂಗಿನವನು.. ಒಂದು ವಿಚಾರಪ್ರಚೋದಕ ಸಂಘವನ್ನು ಸ್ಥಾಪನೆಮಾಡಿ, ತಾನೇ ಅದರ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಖಜಾಂಚಿ ಎಲ್ಲಾ ಆಗಿದ್ದನು. ಈಗ ಒಂದು ತಿಂಗಳ ಕೆಳಗೆ— ನಾನು ಚಿಕ್ಕಪೇಟೆಯಲ್ಲಿ ಜಟಕಾಗಾಡಿಯಲ್ಲಿ ಹೋಗುತ್ತಿದ್ದಾಗ, ಅವನು ಸೈಕಲ್ಲಿನ ಮೇಲೆ ನನ್ನ ಗಾಡಿಯಹಿಂದೆ ಬಂದು, "ಲೋ ಸೀತು, ಮುಂದಿನ ತಿಂಗಳು ನಮ್ಮ ಸಂಘದಲ್ಲಿ ಶಾ. ಧರಣೀಯವರ ಉಪನ್ಯಾಸ ಇದೆ ಬಹಳ ಬರೆದಿದ್ದಾರಂತೆ ಅವರು. ಅಂದಹಾಗೆ ನೀನು ಏಕೆ ಅಧ್ಯಕ್ಷತೆ ವಹಿಸಬಾರದು?" ಎಂದನು. ನಾನು ಅವನಿಗೆ ಉತ್ತರ ಹೇಳುವಷ್ಟರಲ್ಲಿ ಅವನ ಸೈಕಲ್ಲ ಹಿಂದೆ ಒಂದು ಕಾರು ಬಂದು

ಅರಚಿದ್ದರಿಂದ, ಅವನು ಮಾತನ್ನು ಅಲ್ಲಿಗೇ ಬಿಟ್ಟು ವೇಗವಾಗಿ ಮುಂದಕ್ಕೆ ಹೊರಟುಹೋದನು. ಪುನಃ ಅವನ ಭೆಟ್ಟಿ ನನಗೆ ಆಗಿರಲಿಲ್ಲ. ಆ ವಿಷಯ ಪುನಃ ನಾವು ಮಾತನಾಡಿಯೂ ಇರಲಿಲ್ಲ. ಆದರೂ ಅವನು 'ಮೌನಂ ಸಮ್ಮತಿದರ್ಶನಂ' ತರ್ಕದವರ ಗುಂಪಿಗೆ ಸೇರಿದವನಿರಬೇಕು. ಏಕೆಂದರೆ ನಿನ್ನೆಯ ಮಧ್ಯಾಹ್ನ ನಾನು ಟೀ ಕುಡಿದು ಕಾಗದವನ್ನು ಬರೆಯುತ್ತಿರುವಾಗ, ಚೀಟಿಗಳನ್ನು ಹಂಚುವ ಹುಡುಗನೊಬ್ಬನು ನನಗೆ ಒಂದು ಪ್ರಕಟನಾಪತ್ರಿಕೆಯನ್ನು ಕೊಟ್ಟು ಹೊರಟುಹೋದನು. ಅದರಲ್ಲಿ ಈ ರೀತಿ ಇತ್ತು:—

" ವಿಚಾರ ಪ್ರಚೋದಕ ಸಂಘ: ಬೆಂಗಳೂರು.

ಮೇಲ್ಕಂಡ ಸಂಘದ ಆಶ್ರಯದಲ್ಲಿ ತಾ|| ೯-೫-೪೦ ನೇ ಶುಕ್ರವಾರ ಪ್ರಾತಃಕಾಲ ೯ ಘಂಟೆಗೆ ಸಲ್ಲುವ ಮಿಥುನಲಗ್ನದಲ್ಲಿ

(ಕನ್ನಡಸಾಹಿತ್ಯ ಪರಿಷನ್ಮಂದಿರದಲ್ಲಿ)

ಶ್ರೀ. ಶಾ ಧರಣಿ

ಇವರು

" ವಿಧವಾ — ವಿವಾಹ "

ಎಂಬ ವಿಷಯವಾಗಿ ಉಪನ್ಯಾಸ ಮಾಡುತ್ತಾರೆ.

ಸುಪ್ರಸಿದ್ಧ ಚಾಮರಾಜಪೇಟೆಯ ವಾಸಿಗಳೂ,

ಜಹಗೀರುದಾರರೂ,

ಮುನಿಸಿಪಾಲಿಟಿ, ಡಿಸ್ಟ್ರಿಕ್ಟ್‌ಬೋರ್ಡು, ರಿಪ್ರಜೆಂಟೆಟಿವ್ ಅಸೆಂಬ್ಲಿ, ಲೆಜಿಸ್ಲೆಟಿವ್ ಕೌನ್ಸಿಲ್....ಇತ್ಯಾದಿ, ಮಹಾಮಹಾ ಸಂಸ್ಥೆಗಳಿಗೆ ಘನವುಳ್ಳ ವೋಟುದಾರರೂ

ಆದ

ಶ್ರೀ. ಸೀತಾರಾಮರಾವ್. ಎಂ. ಎ., (ಆನರ್ಸ್)

ಅವರು ಅಗ್ರಾಸನವನ್ನು ವಹಿಸಲು ಒಪ್ಪಿರುತ್ತಾರೆ.

ಸೂರ್ಯನಾರಾಯಣ.

ಅಧ್ಯಕ್ಷ ಹಾಗೂ ಕಾರ್ಯದರ್ಶಿ "

ಆ ಚೀಟಿಯ ಹಿಂದುಗಡೆ, "ಲೋ ಸೀತು, ಪುನಃ ನಿನ್ನನ್ನು ನೋಡಿ ಹೇಳುವುದಕ್ಕೆ ಮರೆತುಬಿಟ್ಟೆ. ಚಕ್ಕರ್ ಕೊಡಬೇಡ. — ಸೂರಿ" ಎಂದು ಸೂರಿ ನನಗೆ ಬಿನ್ನಹವನ್ನು ಬರೆದು ಕಳುಹಿದ್ದನು.

ಆ ಪ್ರಕಟನಾಚೀಟಿಯು ನನ್ನನ್ನು ಹೌಹಾರಿಸಿ ನಿಲ್ಲಿಸಿತ್ತು. ನನ್ನ ತಲೆಯ ಮೇಲೇ ಬಾಂಬು ಹಾಕಿದ ಹಾಗೆ ನನಗೆ ಆಗಿತ್ತು. ಎಂಥಾ ಸೂರಿ ಅವನು ? ನನಗೇನಾದರೂ ಎದುರಿಗೆ ಸಿಕ್ಕಿದ್ದರೆ ಚಚ್ಚಿಬಿಡುತ್ತಿದ್ದೆ. ಏನು ಕೆಲಸ ಮಾಡಿಬಿಟ್ಟ ! ಎಂದೋ-ಎಲ್ಲೋ-ಏನೋ-ಹೇಗೋ-ಹೇಳಿ, ಈಗ ಹೀಗೆ ಸಿಕ್ಕಾಪಟ್ಟೆ ಮಾಡಿಬಿಡುವುದೆ ? ನನಗೆ ಬುದ್ಧಿಯೇ ಓಡಲಿಲ್ಲ. ಮಂಕು ಕವಿಯಿತು. ಗುಂಡಪ್ಪನನ್ನು ಆಪ್ತಾಲೋಚನೆಗೆ ಕರೆದೆನು. ಇಬ್ಬರೂ ಪ್ರಸಂಗವನ್ನು ಚರ್ಚಿಸಿದೆವು. ಆ ಚೀಟಿಯೇ ನನಗೆ ತಲುಪದಿದ್ದ ಹಾಗೆ ನಟಿಸಲೇ ಎಂದು ನಾನು ಸೂಚಿಸಿದೆನು. ಗುಂಡಪ್ಪನು ಒಪ್ಪಲಿಲ್ಲ "ಉಪನ್ಯಾಸ ಪ್ರಾರಂಭವಾಗುವಹೊತ್ತಿಗೆ ಅವರೇ ಇಲ್ಲಿಗೆ ಬರುತ್ತಾರೆ" ಎಂದನು. 'ಈ ಊರನ್ನೇ ಬಿಟ್ಟು ಸಂಜೆಯ ರೈಲಿಗೇ ನೋದರತ್ತೆಯ ಊರಿಗೆ ಹೋಗಲೇ ?' ಎಂಬ ಸಲಹೆಯನ್ನು ಮುಂದಿಟ್ಟೆ. ಗುಂಡಪ್ಪನು ಒಡಂಬಡಲಿಲ್ಲ. "ಅದು ಹೇಡಿತನ; ಅಷ್ಟಕ್ಕೂ ಮುಂದೆ ಮತ್ತೊಮ್ಮೆ ಆ ಸೂರ್ಯನಾರಾಯಣರೆಂಬವರು ಹೀಗೆಯೇ ಮಾಡುತ್ತಾರೆ. ಒಂದು ಸಲ ಅಧ್ಯಕ್ಷತೆಯ ನರದಿ ಮುಗಿಸಿಬಿಟ್ಟು ಪೀಡೆ ಕಳೆದುಕೊಳ್ಳುವುದು ಲೇಸು !" ಎಂದನು. ನನ್ನ ಬುದ್ಧಿ ಬಿರುಕು ಬಿಟ್ಟಿತು. ಇನ್ನೇನೂ ನನಗೆ ಹೊಳೆಯಲಿಲ್ಲ. ಆಗ ಗುಂಡಪ್ಪನು "ಅಧ್ಯಕ್ಷತೆ ವಹಿಸಿಬಿಡಿ; ಅಧ್ಯಕ್ಷರ ಭಾಷಣವನ್ನು ಬರೆದುಕೊಂಡು ಹೋಗಿಬಿಡಿ. ಈಗಿನ ಕಾಲದಲ್ಲಿ ಅನೇಕರು ಅಧ್ಯಕ್ಷತೆ ವಹಿಸುವುದೇ ಹಾಗೆ" ಎಂದನು. ಇದು ನನಗೆ ಸೂಕ್ತವಾಗಿ ತೋರಿತು. ಅದರಂತೆ, ನಾನು ಬರೆದಿದ್ದ ಭಾಷಣವನ್ನು ಲಕ್ಷ್ಮಣನಿಗೆ ತಿದ್ದಿಕೊಡಲಿಕ್ಕೆ ಕಳುಹಿಸಿದ್ದೆ. ಅವನು ಪ್ರತಿ ಭಾಷಣವನ್ನೇ ಬರೆದು ಕಳುಹಿಸಿದ್ದನಂತೆ. ಅವನು ಹೀಗೆ ಮಾಡುವನೆಂದು ನನಗೆ ಮುಂಚೆಯೇ ಗೊತ್ತಿದ್ದರೆ, ನಾನು ನಾಲ್ಕು ದಸ್ತು ಕಾಗದಗಳನ್ನು ಗೀಚಿ ಗೀಚಿ ಹರಿದು ಹಾಕುತ್ತಿರಲೇ ಇಲ್ಲ. ಈಗ ಲಕ್ಷ್ಮಣನು ಬರೆದು ಕಳುಹಿಸಿದ್ದ ಭಾಷಣವನ್ನು ಒಂದಾವರ್ತಿಯಾದರೂ ಓದಿಕೊಳ್ಳಲಿಕ್ಕೆ ನನಗೆ ಪುರಸೊತ್ತು ಆಗಿರಲಿಲ್ಲ. ಆದರೆ ಅಧ್ಯಕ್ಷರ ಭಾಷಣವನ್ನು ಓದುವುದೇನು ಕಷ್ಟ ?

ಕರಿಯ ಸರ್ಜು ಅಂಗಿ, ಫ್ಲಾನಲ್ ಷರಾಯಿ, ಫೆಲ್ಟು ಹ್ಯಾಟು ಇವುಗಳನ್ನೇ ಹಾಕಿಕೊಂಡು, ಆ ದಿನದ ನನ್ನ ಭಾಷಣದ ಪ್ರತಿಯನ್ನು ಜೇಬಿನೊಳಗಿಟ್ಟುಕೊಂಡು, ಪರಿಷನ್ಮಂದಿರದ ಕಡೆಗೆ ಹೊರಟೆನು. ಅಲ್ಲಿ ಸೇರಿದ್ದ ಜನಸಂದಣಿಯನ್ನು ನೋಡಿದೊಡನೆ ನನ್ನ ಹೊಸ ಷರಟೂ, ಬನಿಯನ್ನೂ ತೋಯ್ದು ತೊಪ್ಪೆಯಾಯ್ತು. ಸ್ನಾನಮಾಡಿ ಮುಖ ಒರಸಿಕೊಳ್ಳದೆ ಬಟ್ಟೆಗಳನ್ನು ಹಾಕಿಕೊಂಡು ಬಂದವನಂತೆ, ನನ್ನ ಮುಖದ ಮೇಲೆ ಬೆವರಿನ ಕಾಲುವೆಗಳಿಳಿದುವು. ನನ್ನ ಕೈ ಜೇಬಿನೊಳಗೆ ನುಗ್ಗಿ ಭಾಷಣದ ಪ್ರತಿಯನ್ನು ಭದ್ರವಾಗಿ ಹಿಡಿದುಕೊಂಡಿತು. ಕೂಡಲೆ ಮನೆಯವರೆಗೂ ಪಲಾಯನ ಸೂಕ್ತವನ್ನು ಪಠಿಸಿ, 'ಬಹಳ ಖಾಯಿಲೆ' ಎಂದು ಹೇಳಿ ಕಳುಹಲೆ ಎಂದು ನನಗೆ ಹೊಳೆಯಿತು. ಆದರೆ ಅಷ್ಟರಲ್ಲಿಯೆ ಮಂದಿರದ ಮುಂದಿದ್ದ ಮಂದಿ ನನ್ನನ್ನು ನೋಡಿದ್ದರಿಂದ, ಆ ಯೋಚನೆಯು ಹಾಗೆಯೇ ಇಂಗಿಹೋಯಿತು. ಯತ್ನವಿಲ್ಲದೆ ಮಂದಿರದ ಬಾಗಿಲುಗಳ ಬಳಿ ಬಂದೆನು. ಅಲ್ಲಿ ನೆರೆದಿದ್ದ ಸ್ತ್ರೀಸಮೂಹವನ್ನು ನೋಡಿ ನನಗೆ ಆಶ್ಚರ್ಯವೇ ಆಯಿತು. ಹೆಂಗುಸರಿಗೆ ಇಲ್ಲೇನು ಕೆಲಸ ? 'ವಿಧವೆ' ಸಂಪೂರ್ಣ ಸ್ತ್ರೀಪ್ರಪಂಚ, ನಿಜ. ಆದರೆ 'ವಿಧವಾ ವಿವಾಹ' ಗಂಡಿಗೇ ಬಿಟ್ಟಿದ್ದ ಪ್ರಶ್ನೆ. 'ವಿಧವೆಯನ್ನು ವಿವಾಹ-

ವಾಗಬೇಕೇ ಬೇಡವೇ? ಎಂಬುದನ್ನು ನಿರ್ಧರಿಸಿ, ಆಚರಿಸುವವರು, ಗಂಡಸರು. ಇಲ್ಲಿ ಹೆಂಗುಸರಿಗೇನು ಕೆಲಸ? ಹೆಂಗುಸರೇ ಹಾಗೆ ತಮ್ಮ ಕೆಲಸಗಳನ್ನು ತ್ಯಜಿಸಿ, ಗಂಡಿನ ಪ್ರಪಂಚದಲ್ಲಿ ಧುಮುಕಿ, ಶಿವಪೂಜೆಯ ಕರಡಿಗೆಗಳಾಗುತ್ತಾರೆ. ಒಳಗಡೆ ಸೇರಿದ್ದ ಜನಸಂದಣಿಯನ್ನು ನೋಡುತ್ತಾ, ನಾನು ಹಾಗೆಯೇ ವೇದಿಕೆಯ ಎಡಗಡೆಯ ಮೂಲೆಯಲ್ಲಿ ಕುಳಿತಿದ್ದ ಹೆಂಗುಸನ್ನು ಈಕ್ಷಿಸಿದೆನು. ಯಾರವಳು? ಅವಳನ್ನು ಎಲ್ಲಿಯೋ ನೋಡಿ ಖಂಡಿತ ಮರೆತಿದ್ದೆ. ಗುರುತು ಹಿಡಿಯುವುದಕ್ಕೋಸ್ಕರ ಆಕೆಯನ್ನೇ ಒಂದು ಗಳಿಗೆ ನೋಡುತ್ತಾ ಆ ಬಾಗಿಲ ಬಳಿ ನಿಂತು ಬಿಟ್ಟೆನು. ಅಲ್ಲಿದ್ದ ಸ್ವಯಂಸೇವಕನು ದಯಾದಾಕ್ಷಿಣ್ಯವರ್ಜಿತನಾಗಿ "ಏನ್ರೀ ಇದು, ದೊಡ್ಡ ಮನುಷ್ಯರ ಹಾಗೆ ಬಂದು, ಹೆಂಗುಸರ ಬಾಗಿಲ ಬಳಿ ನಿಂತು, ಮಿಕಮಿಕನೆ ನೋಡುತ್ತಿದ್ದೀರಿ, ಸರ್ಕಸ್ಸಿನ ನಕಲಿಯವನಂತೆ!" ಎಂದನು. ತಕ್ಷಣವೇ ಫೆಲ್ಟುಹ್ಯಾಟನ್ನು ನಾನು ತಲೆಯಿಂದ ತೆಗೆದು ಕೈಯಲ್ಲಿ ಹಿಡಿದುಕೊಂಡೆನು. ಏಕೋ, ಗುಂಡಪ್ಪನು ಹೇಳಿದ ಹಾಗೆ ಜರತಾರೀ ರುಮಾಲನ್ನೇ ಧರಿಸಿದ್ದರೆ ಚೆನ್ನಾಗಿರುತ್ತಿತ್ತು, ಎನಿಸಿತು.

ಅಷ್ಟರಲ್ಲಿ, ವೇದಿಕೆಯ ಮೇಲೆ ನಿಂತುಕೊಂಡು, ಕಾಲಿನಿಂದ ತಲೆಯ ವರೆಗೂ ಸಮಾನ ಸುತ್ತಳತೆಯುಳ್ಳ, ಶ್ಯಾಮಲಕಾಯದ, ಹೆಣ್ಣುಪ್ರಾಣಿಯೊಂದಿಗೆ ಮಾತನಾಡುತ್ತಾ ನಿಂತಿದ್ದ ಸೂರಿ, ನನ್ನನ್ನು ನೋಡಿ "ಅಧ್ಯಕ್ಷರು! ಅಧ್ಯಕ್ಷರು!" ಎಂದು ಅರಚಿದನು;— ಅಲ್ಲಿಯವರೆಗೂ ಸಿಕ್ಕದೆ ಬಚ್ಚಿಟ್ಟುಕೊಂಡಿದ್ದ ಕಳ್ಳನನ್ನೋ ಹುಲಿಯನ್ನೋ ತೋರಿಸಿಕೊಟ್ಟಂತೆ, ಸಭೆಗೆ ಸಭೆಯೇ ನನ್ನ ಕಡೆಗೆ ತಿರುಗಿ ನೋಡಿತು. ಆದರೆ ನನಗೆ ಸಭಿಕರನ್ನು ಎದುರು ನೋಡುವ ಅಭ್ಯಾಸವೇ ಇರಲಿಲ್ಲ. ಅಡ್ಡಗಟ್ಟಿದ್ದ ಹತ್ತುನೂರು ಹಸಿದ ಹೋರಿಗಳ ಹಿಂಡಿನ ಮುಂದೆ ನಿಂತು, ಮೆಲ್ಲನೆ ಸವಿಮಾತನಾಡಿಸಿ, ಅವುಗಳನ್ನು ಪುಸಲಾಯಿಸಲು ತೊಡಗುವ, ಹೋರಿಗಳ ಅಭ್ಯಾಸವೇ ಇಲ್ಲದ ನಾಗರಿಕನಂತೆ, ಒಣಗಿದ ನನ್ನ ನಾಲಗೆ—ಗಂಟಲುಗಳನ್ನು ಪುನಃ ಪುನಃ ಒದ್ದೆ ಮಾಡಿಕೊಳ್ಳುತ್ತಾ, ಆ ಸಭಿಕರನ್ನು ಹುಸಿನಗೆಯಿಂದ ನೋಡುತ್ತಾ ನಿಂತೆನು. ಆ ಸ್ವಯಂಸೇವಕನು, ನನ್ನ ಮತ್ತು ಆತನ ತಪ್ಪನ್ನು ತಿದ್ದಿ, ನನ್ನನ್ನು ವೇದಿಕೆಯ ಮೇಲೆ ಕೈಕೊಟ್ಟು ಕರೆತರದಿದ್ದರೆ, ಈ ಜನ್ಮದಲ್ಲಿಯೆ ನಾನು ಆ ವೇದಿಕೆಯನ್ನು ಮೆಟ್ಟುತ್ತಿರಲಿಲ್ಲ.

"ಇವರೇ ಇಂದಿನ ಉಪನ್ಯಾಸಕರು, ಶ್ರೀಮತಿ ಶಕುಂತಲಾ-ಧರಣಿಯವರು. ಬಹಳ ಬರೆದಿದ್ದಾರೆ." ಎಂದು ಹೇಳಿ, ಸೂರಿ ಆಕೆಯನ್ನು ನನಗೆ ಪರಿಚಯಮಾಡಿಕೊಟ್ಟನು..... ಶ್ಯಾಮಾಃ ಕುಂತಲಾಃ....ಶಾಕುಂತಲಾ; ಆದರೆ ಶ್ಯಾಮಃ ದೇಹಃ....? ....ಏಕೋ, ನನಗೆ ಧಟಕ್ಕನೆ ಕಾಳಿದಾಸನ ನೆನಪಾಗಿ, ಆ ಆ ಮಹಾಕವಿಯಲ್ಲಿ ನನಗೆ ನಿಜವಾಗಿಯೂ ಬಹಳ ಮರುಕ ಉಂಟಾಯಿತು.

ಉಪನ್ಯಾಸವು ಪ್ರಾರಂಭವಾಗಿ ಸೋನೆಮಳೆಯಂತೆ ಸಾಗಿತು. .....ಆ ಕಾಲದಲ್ಲಿ ನಾನು, ಆ ಹೆಂಗುಸು—ವೇದಿಕೆಯ ಎಡಗಡೆ ಮೂಲೆಯಲ್ಲಿದ್ದವಳು—ಯಾರಿರಬಹುದೆಂದು ಯೋಚಿಸುತ್ತಾ ತಲೆ ಕೆಡಿಸಿಕೊಂಡಿದ್ದೆನು. ನಾನು ಅವಳನ್ನು ಆಗಾಗ ನೋಡುತ್ತಿರುವಾಗ ಒಮ್ಮೆ ನಮ್ಮಿಬ್ಬರ ದೃಷ್ಟಿಗಳೂ ಸೇರಿ ಧಟಕ್ಕನೆ ಬೇರೆಯಾದುವು. ಅನಂತರ ಪುನಃ ಸೇರಿ ಧಟಕ್ಕನೆ ಬೇರೆಯಾಗದೆ ಕ್ಷಣಕಾಲ ಕೂಡಿದ್ದುವು. ಹೀಗೆ ಕ್ರಮವಾಗಿ ನಮ್ಮಿಬ್ಬರ ದೃಷ್ಟಿ-ಸಮ್ಮೇಳನವು ಹೆಚ್ಚು ಹೆಚ್ಚು ದೀರ್ಘವಾಗುತ್ತಾ ಬಂದಿತು. ಅನಂತರ ಒಂದು ಸಲ ಆಕೆ ನಕ್ಕಳು. ಗಟ್ಟಿಯಾಗಿಯಲ್ಲ; ಗಮನಿಸಿದವರಿಗೇ ಗೊತ್ತಾಗುವ ಗುಪ್ತ ನಸುನಗು. ನನ್ನಲ್ಲಿ ಒಂದು ಅಭ್ಯಾಸವಿದೆ: ನನ್ನೆದುರಿಗೆ ಯಾರಾರು ಎಷ್ಟೆಷ್ಟು ನಗುತ್ತಾರೋ ನಾನು ಕೂಡಲೆ ಅವರೆದುರಿಗೆ—ಕನ್ನಡಿಯು ಪ್ರತಿಬಿಂಬಿಸುವಂತೆ—ಅಷ್ಟಷ್ಟು ಹಾಗೆ ಹಾಗೆ ನಗುತ್ತೇನೆ. ಈ ನನ್ನ ವಿದ್ಯೆ ಅಥವಾ ಅಭ್ಯಾಸವು ಅನೈಚ್ಛಿಕವೆಂದು ನನ್ನ ಮಿತ್ರ ವೈದ್ಯನೊಬ್ಬನು ಅಭಿಪ್ರಾಯ ಪಟ್ಟಿದ್ದಾನೆ. ಆಕೆ ನಕ್ಕೊಡನೆ ನಾನೂ ನಕ್ಕೆ—ಗಟ್ಟಿಯಾಗಿ ಅಲ್ಲ; ಗಮನಿಸಿದ ಅವಳಿಗೇ ಗೊತ್ತಾಗುವ ಗುಪ್ತ-ನಗು. ಅವಳ ಮುಖ ಕೆಂಪಾಯಿತು; ತುಟಿಗಳನ್ನಗಲಿಸಿ ನಕ್ಕಳು. ಅಲ್ಲಿಯವರೆಗೂ ಅವಳು ಕಷ್ಟಪಟ್ಟು, ತುಟಿಗಳನ್ನು ಒತ್ತಿ ಮುಚ್ಚಿಟ್ಟಿದ್ದ ಆ ಎರಡು ಉಬ್ಬು ಹಲ್ಲುಗಳನ್ನು ನಾನು ಆಗಲೇ ಕಂಡದ್ದು. ಗ್ರಹಚಾರ! ನನ್ನ ಮುಖವೂ ಕೆಂಪಾಗಿರಲೇ ಬೇಕು. ನಾನೂ ತುಟಿಗಳನ್ನಗಲಿಸಿಯೇ ನಕ್ಕೆ—ಅಲ್ಲಿಯವರೆಗೂ ಅವಳಿಗೆ ಕಾಣದಿದ್ದ ನನ್ನ ಮೇಲುಸಾಲಿನ ಮುಂದಲೆರಡು ಭಂಗಾರದ ಹಲ್ಲುಗಳು ಆಗಲೇ ಅವಳಿಗೆ ಕಾಣಿಸಿರಬೇಕು.

ಇದ್ದಕ್ಕಿದ್ದ ಹಾಗೆ ಆ ಸೋನೆಮಳೆಯ ಉಪನ್ಯಾಸವು ನಿಂತು, ಬಿಸಿಲು ಬಂದಹಾಗಾಯಿತು. ಅನಂತರ ಎಲ್ಲರೂ ನನ್ನನ್ನೂ, ನಾನು ಆ ಸಭಿಕರನ್ನೂ ಒಬ್ಬರನ್ನೊಬ್ಬರು ಮಿಕಮಿಕನೆ ನೋಡುತ್ತಾ ಐದು ನಿಮಿಷಗಳನ್ನು ಕಳೆದೆವು. ಆಗ ಸೂರಿ ನನ್ನ ಹಿಂದೆ ಬಂದು ನನ್ನ ಪಕ್ಕೆಯನ್ನು ಚುಚ್ಚಿ "ನೀನು ಭಾಷಣ ಮಾಡಬೇಕೋ, ಪೆಂಗೆ" ಎಂದು ಸಲಹೆಯನ್ನೂ ಬಿರುದನ್ನೂ ಕೊಟ್ಟನು. ನಾನು ಎದ್ದು ನಿಂತು, ಕೈಯನ್ನು ಕಿಸೆಯೊಳಗೆ ಬಿಟ್ಟು, ನನ್ನ ಭಾಷಣದ ಪ್ರತಿಯನ್ನು ಹೊರಗೆಡಹಿದೆನು;..ಹಾಗೆಯೇ, ಸಭೆಯಲ್ಲೆಲ್ಲಾ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹರಡಿಹೋದ ಗುಜುಗುಜು ಅಲೆಗಳ ಸಮೂಹವನ್ನೂ ಹೊರಗೆಡಹಿರಬೇಕು.

ಇಲ್ಲಿ, ನಿಮಗೊಂದು ಸೂಚನೆ ಕೊಡಬೇಕಾಗಿದೆ: ಆ ದಿನದ ಉಪನ್ಯಾಸಕರು ಮಹಿಳೆ ಎಂಬುದು ನನಗೆ ತಿಳಿದಿರಲಿಲ್ಲ; ಮಹಾಶಯನೆಂದೇ ತಿಳಿದುಕೊಂಡಿದ್ದೆ. ಆದ್ದರಿಂದ ಲಕ್ಷ್ಮಣನಿಗೆ ತಿದ್ದಲಿಕ್ಕೆಂದು ನಾನು ಬರೆದು ಕಳುಹಿದ್ದ ಭಾಷಣದಲ್ಲಿ—ಉಪನ್ಯಾಸಕರನ್ನು ಮಹಾಶಯನೆಂದು ಒಂದೆರಡು ಕಡೆ ಸಂಬೋಧಿಸಿದ್ದೆ. ಈ ಮಹಿಳಾ-ಮಹಾಶಯ ಜಿಜ್ಞಾಸೆ ಲಕ್ಷ್ಮಣನಿಗೇನು ಗೊತ್ತು? ಅಂತೆಯೇ, ಲಕ್ಷ್ಮಣನು ಬರೆದುಕೊಟ್ಟಿದ್ದ ನನ್ನ ಭಾಷಣದಲ್ಲಿ, ಮೂರುವೀಸ ಪಾಲು ಉಪನ್ಯಾಸದ ವಿಷಯವನ್ನು ಬಿಟ್ಟು ಉಪನ್ಯಾಸಕರ ವಿಷಯವೇ ಇದ್ದಿತೆಂದೂ, ಉಪನ್ಯಾಸದ ಪ್ರಥಮದಲ್ಲೇ "ಶ್ರೀಮಾನ್ ಶಾ. ಧರಣಿ ಮಹಾಶಯರು ಈ ದಿವಸ.."

ಎಂದೂ ಇತ್ತೀಚೆಂದೂ, ಮುಂದೆಲ್ಲಾ ಉಪನ್ಯಾಸಕರನ್ನು 'ಮ|| ರಾ|| **ಶಾ. ಧರಣಿ**,' 'ಮಿಸ್ಟರ್ **ಧರಣಿ**' '**ಶಾ. ಧರಣಿ ಮಹಾಶಯ**' ಎಂಬುದಾಗಿ ಸಂಬೋಧಿಸಿದ ಪುಲ್ಲಿಂಗಸೂಚಕ ಗಳದಿತ್ತೆಂದೂ ನನಗಾದರೂ ಏನು ಗೊತ್ತು? ನಾನು ಅಧ್ಯಕ್ಷ-ಭಾಷಣದ ಮೊದಲೆರಡು ಮಾತುಗಳನ್ನು ಓದಿದೊಡನೆ ಸಭೆಯಲ್ಲಾದ ಗುಲ್ಲು-ಗೊಂದಲವು ಕ್ರಮವಾಗಿ ನನಗೆ ತಿಳಿವಳಿಕೆಯನ್ನು ಮೂಡಿಸಿತು. ಅಲ್ಲಿಂದ ಮುಂದೆ ನಾನು ಬಹಳ ಎಚ್ಚರಿಕೆಯನ್ನಿಟ್ಟು ಕೊಂಡೇ ಭಾಷಣವನ್ನು ಓದಬೇಕಾಯಿತು. ನನ್ನ ಭಾಷಣದಲ್ಲಿ ಲಕ್ಷ್ಮಣನು ಬರೆದಿದ್ದ, ಉಪನ್ಯಾಸಕರ ಲಿಂಗಸೂಚಕವನ್ನು ತಿದ್ದಿಕೊಂಡು ಓದುವುದರಲ್ಲಿಯೆ ನಾನು ತಲ್ಲೀನನಾಗಿದ್ದುದರಿಂದ, ಅದು ಏನಾ ನನ್ನ ಉಪನ್ಯಾಸದ ಉಳಿದ ವಿಚಾರವೇನೆಂಬುದೂ, ನಾನು ಏನು ಓದಿದೆನೆಂಬುದೂ ನನಗೇ ತಿಳಿದಿರಲಿಲ್ಲ. ಅಂತೂ ಭಾಷಣವು ಮುಗಿದಾಗ ನನಗೆ, ಒಂದು ಕೆಟ್ಟ ಸ್ವಪ್ನದಿಂದ ಎಚ್ಚತ್ತವನಿಗಾಗುವಂತೆ ಮನಸ್ಸು ಬಹಳ ಹಗುರವಾಯ್ತು. ಮನಶ್ಶಾಸ್ತ್ರ-ಪಾರಾಂಗತರು ಕಾರಣ ಹುಡುಕಲಿ. ಅಂತೂ ನನ್ನ ಭಾಷಣವು ಮುಗಿಯುವ ಹೊತ್ತಿಗೆ ಸರಿಯಾಗಿ, ಅಲ್ಲಿಯವರೆಗೂ ಭಾಷಣದ ಪ್ರತಿಯಲ್ಲಿಯೇ ನೆಟ್ಟಿದ್ದ ದೃಷ್ಟಿಯೂ, ಅಲ್ಲಿಂದ ಬಿಡುಗಡೆ ಹೊಂದಿದೊಡನೆ, ವೇದಿಕೆಯ ಎಡಗಡೆಯ ಮೂಲೆಯನ್ನಾರಿಸಿತು.

ಆಕೆಯ ಮುಖವು ಬಹಳ ಬದಲಾವಣೆಯನ್ನು ಹೊಂದಿತ್ತು. ಅಷ್ಟು ಸ್ವಲ್ಪ ಕಾಲದಲ್ಲಾಗಿದ್ದ ಅಷ್ಟು ಹೆಚ್ಚಿನ ವ್ಯತ್ಯಾಸವನ್ನು ನೋಡಿ ನನಗೆ ಆಚ್ಚರಿಯಾಯ್ತು. ಆ ಹೆಣ್ಣು ಈಗ ನನ್ನನ್ನು ಬೇರೆ ಬಗೆಯ, ಹೊಸದಾದ ಆಶಾದೃಷ್ಟಿಯಿಂದ ನೋಡುತ್ತಿದ್ದಳು. ಆಕೆ ಭಾವಪೂರಿತಳಾಗಿದ್ದಳು. ಕಣ್ಣುಗಳಲ್ಲಿ ನಿಂತಿದ್ದ ನೀರು ಕೆಳಗಿಳಿಯುವುದೊಂದು ಬಾಕಿ ಇದ್ದಿತು. ಆಕೆ ಭಾವೋದ್ರಿಕ್ತಳೂ ಆಗಿದ್ದಳು. ಸಭೆ ಮುಗಿದೊಡನೆ ವೇದಿಕೆಯನ್ನು ಹತ್ತಿ ನನ್ನಲ್ಲಿಗೆ ಬಂದು "ಅಹಾ! ಆಹಾ! ಬಹಳ ಚೆನ್ನಾಗಿತ್ತು, ಬಹಳ ಚೆನ್ನಾಗಿತ್ತು."ಎಂದು ಅಲ್ಲಿಯ ವರೆಗೂ ತಡೆಗಟ್ಟಿದ್ದ ಆನಂದವನ್ನು ವ್ಯಕ್ತಪಡಿಸಿದಳು.

ನಾನು, ಮಂಗನ ಹಾಗೆ "ಅರ್ಥವಾಯ್ತೆ?" ಎಂದು ಪಿಸು-ಗುಟ್ಟಿದೆನು.

ಅದು ನನ್ನ ಎರಡನೆಯ ಅಭ್ಯಾಸ. ಅದೂ ಅನೈಚ್ಛಿಕವೆಂದು ಮನಶ್ಶಾಸ್ತ್ರದ ಅಧ್ಯಾಪಕರು, ನಾನು ಅವರ ವಿದ್ಯಾರ್ಥಿಯಾಗಿದ್ದಾಗಲೇ ಕಂಡುಹಿಡಿದಿದ್ದರು. ನಾನು ಏನನ್ನಾದರೂ ವ್ಯಾಖ್ಯಾನ ಮಾಡಿದರೆ, ಇತರರಿಗೆ ಬೋಧಿಸಿದರೆ, ಅಥವಾ ಉತ್ತರ ಕೊಟ್ಟರೆ, ನಾನು ಹೇಳಿದ ಮಾತುಗಳಲ್ಲಿ ಯಾವ ಅಭಿಪ್ರಾಯ ಬಂದರೂ ಸರಿಯೆ, ಅದಕ್ಕೆ ಉತ್ತರವಾಗಿ "ಅರ್ಥವಾಯ್ತೆ?' ಎಂದು ಕೇಳುವುದು ನನಗೆ ಬೆನ್ನ ಹಿಂದೆ ಬಂದಿದ್ದ ಪದ್ಧತಿ.

ಆಕೆ ಹೆಚ್ಚಿನ ಹುರುಪಿನಿಂದ ನಸುನಕ್ಕು, ಕಣ್ಣುಗಳನ್ನು ಅರಳಿಸಿ, ಹೊರಳಿಸಿ, ಹುಬ್ಬುಗಳನ್ನು ಎತ್ತರಿಸಿ, ಬಗ್ಗಿಸಿ, "ಅಷ್ಟು ಅರ್ಥವಾಗದೇ ಇರುತ್ತೆಯೆ? ನಾನು ನಿಮಗೆ ಎಲ್ಲದಕ್ಕೂ ಪತ್ರ ಬರೆಯುತ್ತೇನೆ!" ಎಂದು ಹೇಳಿ ಕಣ್ಮರೆಯಾದಳು.

ಉಪನ್ಯಾಸಕರನ್ನು ರವಾನಿಸಲು ಹೊರಬಾಗಿಲ ತನಕ ಹೋಗಿದ್ದ ಸೂರಿ, ಅಷ್ಟುಹೊತ್ತಿಗೆ ನನ್ನಲ್ಲಿಗೆ ಬಂದು, ನನ್ನ ಬೆನ್ನಿನ ಮೇಲೆ ಅಪ್ಪಳಿಸಿ ಹೊಡೆದು "ಭೇಷ್! ಬಹಳ ಚೆನ್ನಾಗಿತ್ತಯ್ಯಾ. ಏನು ಭಾಷೆ! ಏನು ಶೈಲಿ! ಏನು ಧೋರಣೆ! ಏನು ಸಾಹಸ! ಬಂದಿದ್ದ ವಿಧವೆಯರಿಗೆಲ್ಲಾ ಏನು ಸವಾಲು ಹಾಕಿದೆ? ಏನು ಧೈರ್ಯ ನಿನ್ನದು? ಈಗ ಅರ್ಥವಾಯ್ತು, ನಿನ್ನ ಬ್ರಹ್ಮಚರ್ಯದ ಗುಟ್ಟು! ಇರಲಿ, ಮುಂದಿನ ತಿಂಗಳು ನೀನೇ ಏಕೆ '**ದಾಂಪತ್ಯ ವಿಚ್ಛೇದನ**'ದ ಮೇಲೆ ಉಪನ್ಯಾಸ ಕೊಡಬಾರದು?" ಎಂದು ಸರಸರನೆ ಛಟ-ಛಟನೆ ಹೇಳಿ, ನನ್ನ ಉತ್ತರವನ್ನೇ ನಿರೀಕ್ಷಿಸದೆ ಬೇರೊಂದು ಕಡೆಗೆ ಹೊರಟುಹೋದನು.

ಫೆಲ್ಟುಹ್ಯಾಟನ್ನು ಪುನಃ ತಲೆಯ ಮೇಲೇರಿಸದೆ, ಅದರಿಂದ ಮುಖಕ್ಕೆ ಗಾಳಿಯನ್ನು ಬೀಸಿಕೊಳ್ಳುತ್ತಾ ನನ್ನ ಮನೆಗೆ ಹೊರಟೆನು. ಆದರೆ, ಗುಂಡಪ್ಪನಿಗೆ ನನ್ನ ಸೋಲನ್ನು ತಿಳುಹಬಾರದೆಂದು ಬಿಗುಮಾನದ ಮೇಲೆ, ನನ್ನ ಮನೆಯ ಹೊರ ಅಂಗಳವನ್ನು ಪ್ರವೇಶಿಸಿದೊಡನೆ, ತಲೆಯ ಮೇಲೆ ಫೆಲ್ಟುಹ್ಯಾಟನ್ನು ಇಟ್ಟುಕೊಂಡು, ಅನಂತರ ಮನೆಯನ್ನು ಪ್ರವೇಶಿಸಿದೆನು.

* * *

ಮರುದಿವಸ ಪ್ರಾತಃಕಾಲ ಕಾಫಿ ಕುಡಿದೊಡನೆ, ಆ ದಿನದ ಟಪಾಲನ್ನು ನೋಡಲು ನನ್ನ ಕೊಠಡಿಗೆ ಹೋದೆನು ಮೇಜಿನ ಮೇಲೆ ನನಗಾಗಿ ಕಾಯುತ್ತಿದ್ದ ರಂಗಿನ ಲಕೋಟೆಯೊಂದು, ಸುವಾಸನೆಯನ್ನು ಬೀರುತ್ತಿತ್ತು. ಲಕೋಟೆಯ ಮೇಲೆ ಸುಂದರವಾಗಿ, ವಿರಳವಾಗಿ, ನನ್ನ ವಿಳಾಸವನ್ನು ಬರೆದಿತ್ತು. ಬರೆಹವು ನನಗೆ ಪರಿಚಿತವಾಗಿರಲಿಲ್ಲ. ಕಾಗದವು ಯಾರದಿರಬಹುದೆಂದು ಯೋಚಿಸುತ್ತಾ ಕುರ್ಚಿಯಮೇಲೆ ಕುಳಿತುಕೊಂಡು, ಲಕೋಟೆಯನ್ನು ಹರಿದು ಕಾಗದವನ್ನು ಓದಲು ಪ್ರಾರಂಭಿಸಿದವನೆ, ಕುಳಿತಿದ್ದ ಕುರ್ಚಿಯಿಂದ ಹೌಹಾರಿ ನೆಲದಮೇಲೆ ನಿಂತೆನು.

ಹೆಣ್ಣಿನ ಕೈಬರೆಹವೆಂದು ಲಕೋಟೆಯನ್ನು ನೋಡಿದಾಗ ಸಂದೇಹವೇ ಆಗಿತ್ತು. ಆದರೆ ಈ ಕಾಗದ ವಿಪರೀತವಾಗಿತ್ತು. ನನ್ನ ತಲೆಗೂದಲು ನೆಟ್ಟಗೆ ನಿಂತಿತು. ಕಣ್ಣಿಗೆ ಕತ್ತಲುಕವಿಯಿತು. ಮುಂದಿದ್ದ ಮೇಜನ್ನು ಹಿಡಿದುಕೊಂಡು ಸ್ವಲ್ಪ ಸುಧಾರಿಸಿಕೊಂಡು, ಕಾಗದವನ್ನು ಪುನಃ ಅವಲೋಕಿಸಿದೆನು. ಊಹುಂ! ಸ್ವಪ್ನವಲ್ಲ! ಅದೇ ಅಕ್ಷರಗಳು ಹಾಗೇ ಇದ್ದುವು.

"ಅತಿಪ್ರಿಯರಿಗೆ," ಎಂದು ಕಾಗದವು ಪ್ರಾರಂಭವಾಗಿತ್ತು!

ಅಭಿನವ ಭೀಷ್ಮಾಚಾರ್ಯನಾದ ನನಗೆ, ಬ್ರಹ್ಮಚರ್ಯಾಚಾರ್ಯನಾದ ನನಗೆ, ಯಾವ ಸ್ತ್ರೀಯ ನೆನಪೂ ಸೋಂಕೂ ಇಲ್ಲದ ನನಗೆ, ಈ ಪತ್ರವನ್ನು ಓದಲು ಪ್ರಾರಂಭಮಾಡಿದೊಡನೆ ಮೈಯಲ್ಲೆಲ್ಲಾ ಮುಳ್ಳುಮುರಿದಂತಾಯ್ತು. ಕಾಗದವು ಈ ರೀತಿ ಮುಂದುವರಿದಿತ್ತು:

". . . . ನಿನ್ನೆಯ ದಿವಸ ನಿಮ್ಮ ಭಾಷಣವನ್ನು ಕೇಳಿಬಂದ ಲಾಗಾಯ್ತು, ನನ್ನಲ್ಲಿ ಮನಸೋತ ನಿಮಗೆ ಕಾಗದವನ್ನು ಬರೆದ

ಹೊರತು ನಿಮ್ಮಲ್ಲಿ ಅನುರಕ್ತಳಾದ ನನಗೆ ಸಮಾಧಾನವೇ ಇರಲಿಲ್ಲ....''

ಯಾರೀಕೆ? ಆಕೆಯೆ? ವೇದಿಕೆಯ ಎಡಗಡೆ ಮೂಲೆಯಾಕೆ! ಆಕೆಯನ್ನು ಖಂಡಿತ ಎಲ್ಲೋ ನೋಡಿ ಮರೆತಿದ್ದೆ.

"....ನಿಮ್ಮ ಭಾಷಣವನ್ನು ಕೇಳಿದಾಗಿನಿಂದ, ವಿಧವಾವಿವಾಹ ದಲ್ಲಿ ನಿಮಗಿರುವ ಉತ್ಸುಕತೆಯೂ, ವಿಧವೆಯನ್ನೇ ವಿವಾಹವಾಗುವೆ ನೆಂದು ಹೇಳಿದ ನಿಮ್ಮ ಹೆಬ್ಬಯಕೆಯೂ, ಒಣಗಿದ ಬಳ್ಳಿಯಂತಿದ್ದ ಈ ನನ್ನ ವೈಧವ್ಯಜೀವನದಲ್ಲಿ, ಹೊಸಚಿಗುರುಗಳಂತೆ ಹೊಸ ಆಶೆ ಗಳನ್ನು ಚಿಗುರಿಸಿ, ಹೊಸಹುರುಪನ್ನು ಹುರಿದುಂಬಿಸಿ, ನನ್ನ ಜೀವನ ವನ್ನು ಹೊಸತಾಗಿ ಚಿಗಿತ ಮಲ್ಲಿಗಾಲತೆಯಂತೆ, ವೈವಿಧ್ಯಮಯ ವಾದದ್ದನ್ನಾಗಿ ಮಾಡಿರುತ್ತೆ...."

ಅಬ್ಬಾ! ಕಾಗದವನ್ನು ಓದುತ್ತಾ ನನಗೆ ಮೈ ಜುಂ ಎಂದಿತು. ನನ್ನ ಭಾಷಣದಲ್ಲಿ ನಾನೇನು ಹೇಳಿದ್ದೆನೋ ಅದೇ ನನಗೆ ಗೊತ್ತಿರಲಿಲ್ಲ.

".... ತುಂಬಿದ ಆ ಸಭೆಯಲ್ಲಿ ನೀವು ನನ್ನ ಕಡೆಗೇ ತಿರುಗಿ, ಪ್ರೇಮದೃಷ್ಟಿಯಿಂದ 'ಈ ಸಭೆಯಲ್ಲಿ ಯಾರಾದರೂ ವಿಧವೆ ಇದ್ದರೆ, ಆಕೆ ಇಷ್ಟಪಟ್ಟರೆ, ಬಯಸಿದರೆ, ನಾನು ಆಕೆಯನ್ನು ಲಗ್ನವಾಗಲು ತಯಾರಿದ್ದೇನೆ. ಇದು ಖಂಡಿತ, ಇದು ಖಂಡಿತ! ಆಕೆಯಾವಾಗ ನಿಶ್ಚಯಿಸುತ್ತಾಳೋ ಆಗ ನನಗೆ ಬರೆಯಬಹುದು' ಎಂದು ನನ್ನನ್ನುದ್ದೇಶಿಸಿಯೇ ನೀವು ಹೇಳಿದಾಗ, ನನಗೆ ಎಷ್ಟು ರೋಮಾಂಚ ನಾಯಿತೋ ...."

ಎಲೆಕ್ಟ್ರಿಕ್ ಷಾಕ್ ಹೊಡೆದಹಾಗಾಯ್ತು ನನಗೆ. ಮೈ ಬೆವರಿತು. ಏನಿದು ಅನಾಹುತ! ಲಕ್ಷ್ಮಣನು ಸಿಕ್ಕಾಪಟ್ಟೆ ಭಾಷಣ ವನ್ನು ಬರೆದುಕೊಟ್ಟು, ನನ್ನನ್ನು ದೊಡ್ಡ ತೊಂದರೆಯಲ್ಲಿ ಎತ್ತಿ ಹಾಕಿದ್ದನೆಂದು ತಿಳಿದುಕೊಂಡೆನು. ಕಾಲುಗಳಿಗೆ ನಡುಕಹತ್ತಿತು. ಮೆಲ್ಲಗೆ ಪುನಃ ಮೇಜನ್ನು ಹಿಡಿದುಕೊಂಡು, ಕುರ್ಚಿಯ ಮೇಲೆ ಕುಳಿತುಕೊಂಡೆನು. ಆದರೆ ಕಾಗದದ ಕಡೆಯ ವಾಕ್ಯಗಳನ್ನು ಓದಲಾರಂಭಿಸಿದವನೆ, ಕುರ್ಚಿಯನ್ನು ತೆಗೆದೊದ್ದು ಮೊದಲಿನಂತೆ ಹೌಹಾರಿದೆನು.

".... .... ಆದ್ದರಿಂದ ನನ್ನ ನಿಮ್ಮ ವಿವಾಹವು ಆದಷ್ಟು ಬೇಗನೆ ನಡೆಯುವುದು ಒಳ್ಳೆಯದು. ಕಾಲ ವ್ಯರ್ಥವೇಕೆ? ನಾಳೆ ಸಂಜೆಯೇ ಗೃಹಪ್ರವೇಶವನ್ನೂ ಮುಗಿಸಿಬಿಡಬಹುದು. 'ಅರ್ಥವಾಯ್ತೆ?' ಎಂದು ನೀವು ನನ್ನನ್ನು ಕೇಳಿದಿರಿ. ಅರ್ಥವಾಗದೆ ಏನು? ನನ್ನ ಮೇಲಿರುವ ನಿಮ್ಮ ಒಲವಿನಾಳವನ್ನು, ನಿಮ್ಮ ಒಂದೇ ಒಂದು ನೋಟದಲ್ಲಿ ಮುಳುಗಿ ನೋಡಿದೆನು.... ....

ನಿಮಗಾಗಿ ಕಾದಿರುವ
ಸದ್ಯ ವಿಧವೆಯಾದರೂ
ನಿಮ್ಮ ಮನೋವಲ್ಲಭೆಯೂ
ಭಾವೀಪತ್ನಿಯೂ ಆದ

ವಸುಂಧರಾ"

"ಗುಂಡಪ್ಪಾ" ಎಂದು ಗಟ್ಟಿಯಾಗಿ ಚೀರಿದೆನು. ಅವನೇ ಇನ್ನು ನನಗೆ ಗತಿ. ಕಷ್ಟಕಾಲದಲ್ಲಿ ಭಕ್ತನಿಗೆ ದೇವರಿದ್ದಂತೆ ನನಗೆ ಗುಂಡಪ್ಪನಿದ್ದನು. ನನ್ನನ್ನು ಈ 'ಗಂಡಾ'ಂತರದಿಂದ ಪಾರು ಮಾಡಲು, ಈ 'ವಿಧವಾಧವತ್ವ' ವನ್ನು ತಪ್ಪಿಸಲು, ಗುಂಡಪ್ಪನಿ ಗಲ್ಲದೆ ಈ ಭೂಮಿಯ ಮೇಲೇ ಇನ್ನೊಬ್ಬರಿಗೆ ಸಾಧ್ಯವಿರಲಿಲ್ಲ.

ಗಾಂಭೀರ್ಯದಿಂದ, ಗುಂಡಪ್ಪನು ಬಂದು ನನ್ನ ಮುಂದೆ ನಿಂತು ನಮಸ್ಕರಿಸಿದನು. "ಏನು ಸ್ವಾಮಿ?" ಎಂದು ಕೇಳಿದನು.

ನಾನು ಅವನಿಗೆ, ಕಾಗದವನ್ನು ಕೊಟ್ಟು ಓದಿಕೊಳ್ಳಬೇಕೆಂದು ಹೇಳಿದೆನು. ಗುಂಡಪ್ಪನು ಅದನ್ನು ನಿಧಾನವಾಗಿ— ಎರಡು ಸಲ ಮೊದಲಿನಿಂದ ಕಡೆಯವರೆಗೂ ಓದಿದನು.

"ಏನು ಮಾಡಬೇಕು?" ಎಂದು ನಾನು ಕೇಳಿದೆನು.

"ಶಾಸ್ತ್ರಿಗಳಿಗೆ ಹೇಳಿಕಳುಹಿಸಲೆ?" ಎಂದು ಗುಂಡಪ್ಪನು ಕೇಳಿದನು.

"ಏಕೆ?"

"ಜಾತಕಗಳನ್ನು ತೋರಿಸಿ, ಲಗ್ನ ಇಡಿಸಬೇಕಾಗುತ್ತೆ!"

ನಾನು ಸೋತೆನು. "ನೋಡು ಗುಂಡಪ್ಪಾ, ಕರಿಯ ಅಂಗಿಯ ಮೇಲೆ ಫೆಲ್ಟುಹ್ಯಾಟು ಎಂದೂ ಧರಿಸುವುದಿಲ್ಲ, ಈ ಗಂಡಾಂತರ ದಿಂದ ನನ್ನನ್ನು ಪಾರುಮಾಡಿದರೆ!" — ಗುಂಡಪ್ಪನು ಛಲದಂಕ ನೆಂಬುದು ನನಗೆ ಗೊತ್ತಿತ್ತು.

ಅವನ ಮುಖವು ಹಿಗ್ಗಿ ಆನೆಯ ಕಿವಿಯಾಯ್ತು. "ಆಹಾ!" ಎಂದನು.

"ಹೌದು, ಈಗ ನೋಡು! ಆಕೆ ನನ್ನನ್ನು ಲಗ್ನವಾಗಲಿಕ್ಕೆ ನಿಂತಿದ್ದಾಳೆ!"

"ಈ ರೀತಿ ಆಗುತ್ತೇ ಅಂತ ನನಗೆ ಗೊತ್ತಿತ್ತು!"

"ನಿನಗೆ ಗೊತ್ತಿತ್ತೆ?"

"ಹೌದು!"

"ಹೇಗೆ?"

"ಲಕ್ಷ್ಮಣರಾಯರು ಬರೆದುಕೊಟ್ಟಿದ್ದ ಭಾಷಣ ಬಹಳ ಪರಿಣಾಮಕಾರಿಯಾಗುತ್ತೇ ಎಂದು ತಿಳಿದುಕೊಂಡಿದ್ದೆ!"

"ಅದು ಹೇಗೆ?"

"ಧನಿಕರೂ, ಅವಿವಾಹಿತರೂ, ಯುವಕರೂ ಆದ ನಿಮ್ಮಂತಹ ವರು ದೊಡ್ಡಸಭೆಯಲ್ಲಿ ವಿಧವೆಯನ್ನೇ ಲಗ್ನವಾಗುತ್ತೇನೆಂದು ಕಂಕಣತೊಟ್ಟರೆ, ಆ ಭಾಷಣ ಮುಗಿಯುವಷ್ಟರಲ್ಲಿ ಯಾವುದಾದ ರೊಂದು ವಿಧವೆ ತನ್ನ ಬಲೆಯನ್ನು ನಿಮ್ಮ ಮೇಲೆ ಬೀಸುತ್ತೆ ಎಂದು ಊಹಿಸಿದ್ದೆ. ಗಂಡ ಬೇಕೆನ್ನುವ ಬಯಕೆ ವಿಧವೆಗೆ ಇರುವಷ್ಟು ವಧುಗಳಿಗೂ ಇರುವುದಿಲ್ಲ."

ಭೇಷ್! ಗುಂಡಪ್ಪನೆಂದರೆ ಸಾಮಾನ್ಯನೆ? ನನಗೆ ಹೀಗಾಗುತ್ತೆ ಎಂದು ಹಿಂದಿನ ದಿನವೇ ಗೊತ್ತು ಹಿಡಿದಿದ್ದ!

"ಈಗೇನು ಮಾಡಬೇಕು ಗುಂಡಪ್ಪಾ. ನನ್ನ ತಲೆ ಹುಳಿತು ಹೋಗಿದೆ!"

"ಏನಾದರೂ ಉಪಾಯ ಹುಡುಕಿ ಅವಳ ಭ್ರಾಂತಿ ತಪ್ಪಿಸಬೇಕು!"

"ಗುಂಡಪ್ಪಾ, ಈಗ ತಾನೆ ನನಗೊಂದು ಉಪಾಯ ಹೊಳೆಯಿತು ನೋಡು. ಅದರಂತೆ ಮಾಡಿಬಿಟ್ಟರೆ ಎಲ್ಲಾ ಸರಿ ಹೋಗಬಹುದು!"

"ಏನು ಉಪಾಯ ಸ್ವಾಮಿ?" — ನನ್ನ ಬುದ್ಧಿವಂತಿಕೆಯಲ್ಲಿ ಗುಂಡಪ್ಪನು ವಿಶ್ವಾಸವನ್ನು ಸೂಚಿಸಲಿಲ್ಲ.

"ಆಕೆಗೆ ಬರೆದು ಬಿಡೋಣ: ನಾನು ಆಕೆಯನ್ನು ವಿವಾಹವಾಗುವುದಿಲ್ಲ ಎಂದು!"

"ತಾನಾಗಿಯೆ ಮೈಮೇಲೆ ಬೀಳುವ ಪ್ರಾಣಿ ಬೇಡ ಎಂದರೆ ಬಿಡುತ್ತಾಳೆಯೆ? ತಮ್ಮ ಕಾಗದಕ್ಕೆ ಲಕ್ಷ್ಯಕೊಡದೆ ತಾನೇ ಇಲ್ಲಿಗೆ ಬಂದು ತಮ್ಮನ್ನು ಕಾಡಿಸುತ್ತಾಳೆ.. ನೀವು ಹೂಂ ಎನ್ನುವ ವರೆಗೂ. ಹೆಂಗುಸೇ ಹಾಗೆ. ಗಂಡುಸು ಸೋತು, ಸುಣ್ಣವಾಗಿ, ಸಾಯುವವರೆಗೂ ಹೆಂಗುಸು ಅವನನ್ನು ಕಾಡಿಸುತ್ತಾಳೆ." ಸ್ತ್ರೀವರ್ಗವೆಂದರೆ ನನ್ನ ಹಾಗೆಯೇ ಗುಂಡಪ್ಪನೂ ತಿರಸ್ಕಾರಭಾವವನ್ನಿಟ್ಟುಕೊಂಡಿದ್ದನು. ಅವನೂ ಬ್ರಹ್ಮಚರ್ಯಾಶ್ರಮವನ್ನು ಕೈಕೊಂಡಿದ್ದನು.

"ಅಥವಾ ನಾನು ನಿತ್ಯಬ್ರಹ್ಮಚಾರಿ. ಈ ಜೀವನದಲ್ಲಿ ಲಗ್ನವಾಗುವುದಿಲ್ಲ ಎಂದು ತಿಳಿಸಿ ಬಿಡಲೇ?"

"ಬೆಂಕಿಯಲ್ಲಿ ತುಪ್ಪ ಸುರಿದು ಆರಿಸಲು ಯತ್ನಿಸಿದ ಹಾಗಾಗುತ್ತೆ ಸ್ವಾಮಿ! ಈ ವಿಷಯ ತಿಳಿದ ಮೇಲಂತೂ, ಅವಳ ಪ್ರೇಮಜ್ವಾಲೆ ಅತ್ಯಧಿಕವಾಗುತ್ತೆ!"

"ಹಾಗಾದರೆ ಬೇರೆಯೊಬ್ಬಳನ್ನು ಲಗ್ನವಾಗುತ್ತೇನೆಂದು ಬರೆದು ಕಳುಹಿಸಲೆ?"

"ಅಯ್ಯೋ! ಅಯ್ಯೋ! ಅನಾಹುತವಾಗುತ್ತೆ. ಆ ಇನ್ನೊಂದು ಲಗ್ನವನ್ನು ಕೂಡಲೆ ಮುರಿಯುವ ಕಾರ್ಯವನ್ನು ಈ ವಸುಂಧರಾ ಪ್ರಾಣಿ ಕೈಕೊಳ್ಳುತ್ತೆ. ಅನಂತರ ಆ ಇನ್ನೊಂದು ಮದುವೆ ಸುಳ್ಳು ಎಂದು ತಿಳಿದೊಡನೆ ನೀವು ಅವಳನ್ನು ಲಗ್ನವಾದಂತೆಯೇ ಸರಿ!"

ನಾನು ಹತಾಶನಾದೆನು. ಗುಂಡಪ್ಪನು ಪ್ರಶಾಂತನಾಗಿಯೇ ಇದ್ದನು. "ಏನು ಮಾಡಲೀ ಗುಂಡಪ್ಪಾ?" ಎಂದು ಗೋಳಾಡಿದೆನು.

"ಏನಾದರೂ ಉಪಾಯ ಹುಡುಕಬೇಕು ಸ್ವಾಮಿ!"

"ಹುಡುಕು!"

"ಹುಡುಕಿದ್ದೇನೆ."

"ಹುಡುಕಿದ್ದೀಯಾ?"

"ಹೌದು?"

"ಈಗ?"

"ಹೂಂ!"

"ಇಲ್ಲಿ, ಈಗ ನನ್ನ ಜತೆ ಮಾತನಾಡುತ್ತಿರುವಾಗ?"

"ಹೌದು!"

ಏನು ಅಂತೀರಿ ನಮ್ಮ ಗುಂಡಪ್ಪನ್ನ!

"ಏನು ನಿನ್ನ ಉಪಾಯ ಗುಂಡಪ್ಪಾ?"

"ಆಕೆಗೆ ನೀವು ಕಾಗದ ಬರೆಯಬೇಕು ಸ್ವಾಮಿ!"

"ಏನಂತ?"

"ಆದಷ್ಟು ಬೇಗನೆ ಇಲ್ಲಿಗೆ ಬಂದು, ಕೆಲಸದ ವಿಷಯ ಮಾತನಾಡಿಕೊಂಡು ಹೋಗಬೇಕೆಂದು ಕಾಗದ ಬರೆಯಬೇಕು!"

"ಆ ಮೇಲೆ ಇನ್ನೇನಾದರೂ ತೊಂದರೆಗೆ ಇಟ್ಟುಕೊಂಡರೆ?"

"ಚಿಂತೆಯಿಲ್ಲ. ಕಾಗದದಲ್ಲಿ ಹೆಚ್ಚಿಗೆ ಏನೂ ಬರೆಯಕೂಡದು. ಸಾಧಾರಣ ಪತ್ರವಾಗಿರಬೇಕು ಅಷ್ಟೆ!"

"ಆ ಮೇಲೆ?"

"ಆಕೆ ಇಲ್ಲಿಗೆ ಬರುತ್ತಾಳೆ. ನೀವು ಅವಳೊಡನೆ ಮಾತನಾಡಿ, ನಿಮ್ಮ ಮಾತುಗಳಿಂದ ಆಕೆ ನಿಮ್ಮ ಮೇಲೆ ರೇಗಿ ಬೀಳುವ ಹಾಗೂ, ನಿಮ್ಮಲ್ಲಿ ಅವಳಿಗೆ ತಾತ್ಸಾರ ಜುಗುಪ್ಸೆ ಉಂಟಾಗುವ ಹಾಗೂ ಹೇಳಬೇಕು. ಆಗ ನಿಮ್ಮ ಯೋಚನೆಯನ್ನು ಅವಳು ಕೈಬಿಡುತ್ತಾಳೆ. ಹೆಂಗುಸೇ ಹಾಗೆ. ಒಲ್ಲದ ಮನುಷ್ಯನನ್ನು—ಅವನಿಗೆ ಪ್ರಪಂಚದ ನಿಧಿಯೆಲ್ಲಾ ಇದ್ದರೂ—ಧಿಕ್ಕರಿಸುತ್ತಾಳೆ!"

"ಅಹಾ!"

"ಹೌದು!"

ನಾನು ಯೋಚಿಸಿದೆನು. ನನ್ನ ವಿಷಯದಲ್ಲಿ ಅವಳಿಗೆ ಜುಗುಪ್ಸೆ-ತಾತ್ಸಾರಗಳು ಬರುವ ಹಾಗೆ ಮಾತನಾಡಬೇಕು. ಅನಂತರ "ಏನು ಹೇಳಬೇಕು?" ಎಂದು ಕೇಳಿದೆನು.

"ವಿಧವಾವಿವಾಹಕ್ಕೆ ನಿಮ್ಮ ಅನುಮತಿ ಸಂಪೂರ್ಣವಾಗಿದೆ ಎಂದು ಮೊದಲು ಅವಳಿಗೆ ಸ್ಪಷ್ಟವಾಗಿ ತಿಳಿಸಬೇಕು."

"ಆಂ?"

"ನಿಧಾನಿಸಿ; ಹೆದರಬೇಡಿ! ಆಮೇಲೆ, 'ವಿಧವೆ' ಎಂದರೆ 'ಶಾಸ್ತ್ರೀಯ ವಿಧವೆ' ಎಂಬ ನಿಮ್ಮ ಅರ್ಥವನ್ನು ಅವಳ ನೆತ್ತಿಗೆ ಹತ್ತಿಸಬೇಕು. ನೀವು ಲಗ್ನವಾಗುವ ವಿಧವೆಯು ಶಾಸ್ತ್ರೀಯ ವಿಧವೆಯೇ ಆಗಿರಬೇಕೆಂದು ನಿಮ್ಮ ಹಟ. ಆಗಲೇ ಸಮಾಜಕ್ಕೆ ಸಿಕ್ಕುವುದು ಪಾಠ. ಇತರರಿಗೆ ಮೇಲ್ಪಂಕ್ತಿ ಹಾಕಲಿಕ್ಕೆ ಶಾಸ್ತ್ರೀಯ ವಿಧವೆಯೇ ಬೇಕೆಂದು ಆಕೆಗೆ ಸ್ಪಷ್ಟಪಡಿಸಬೇಕು. ಆಕೆ ಶಾಸ್ತ್ರೀಯ ವಿಧವೆಯಾಗುವುದಾದರೆ ಖಂಡಿತ ಆಕೆಯ ಕೈಹಿಡಿಯುವೆನೆಂದು ಹೇಳಿಬಿಡಿ!"

"ಶಾಸ್ತ್ರೀಯ ವಿಧವೆ ಎಂದರೆ?"

"ಸಕೇಶಿ ವಿಧವೆ ಶಾಸ್ತ್ರೀಯ ವಿಧವೆಯಲ್ಲ ಎಂಬುದೇ ನಮ್ಮ ಅರ್ಥ. ಕೇಶರಹಿತ ವಿಧವೆಯೇ ಶಾಸ್ತ್ರೀಯವಿಧವೆ ಎಂಬುದು ನಮ್ಮ ತತ್ತ್ವ. ಕೆಂಪು ವಸ್ತ್ರ ಅಥವಾ ರೇಷ್ಮೆ ಮಡಿಯಲ್ಲದೆ ಬಾಕೀ ವಿಧದ ಬಟ್ಟೆಗಳು ಶಾಸ್ತ್ರೀಯ ವಿಧವೆಗೆ ನಿಷಿದ್ಧ. ಈ ನಮ್ಮ ನಿಯಮಗಳಿಗೆ ಯಾವ ಮಠದ ಸ್ವಾಮಿಗಳನ್ನಾದರೂ ಆಧಾರವಾಗಿ ತೋರಬಹುದು!"

"ಭೇಷ್! ಗುಂಡಪ್ಪಾ!! ಹಾಗೆ ಹೇಳಿ ಬಿಟ್ಟರೆ, ಅವರ ಕೋಪವು ಕೆರಳಿ, ರಕ್ತವು ಮರಳಿ, ಪ್ರೇಮವು ರೌದ್ರವಾಗಿ,

ಪ್ರಣಯವು ಪ್ರಳಯವಾಗಿ, ನನ್ನನ್ನು ಹೀನಾಮಾನಾ ಬೈದು, ಈ ಮದುವೆಯ ಯೋಜನೆಯನ್ನು ಬಿಡುತ್ತಾಳೆ, ಅಲ್ಲವೆ ?"

"ಖಂಡಿತ !"

ನನಗೆ ಭಯವು ತಪ್ಪಿತು. ಹೃದಯವು ಹಗುರವಾಯ್ತು. ಸಿಳ್ಳುಹಾಕಿದೆನು. ಆ ಮೇಲೆ ಇಬ್ಬರೂ ಕಾರ್ಯರಂಗಕ್ಕೆ ಇಳಿದೆವು. ಮರುದಿವಸ ಬೆಳಗ್ಗೆ ಹತ್ತು ಗಂಟೆಗೆ ನನ್ನ ಮನೆಗೆ ಬಂದು ಕಾರ್ಯದ ವಿಷಯ ಮಾತನಾಡಿಕೊಂಡು ಹೋಗಬಹುದೆಂದು, ಆ ದಿವಸವೇ ನಾನು ಆಕೆಗೆ ಕಾಗದವನ್ನು ಹಾಕಿದೆನು.

* * *

ನಾನು ಎದ್ದಾಗ ಇನ್ನೂ ಎಂಟು ಗಂಟೆಯೇ ಆಗಿತ್ತು. ಗುಂಡಪ್ಪನೇ ಬಂದು ನನ್ನನ್ನು ಆತುರದಿಂದ ಎಚ್ಚರುಗೊಳಿಸಿದ್ದನು. ಇಲ್ಲದಿದ್ದರೆ ಎಂಟೂವರೆಗೆ ಸರಿಯಾಗಿ ಏಳುವುದು ನನ್ನ ಪದ್ಧತಿ. ಗುಂಡಪ್ಪನು ಜಾಗ್ರತೆಯಾಗಿ ಎಬ್ಬಿಸಿದ್ದರಿಂದ, ಏನೋ ಅನಾಹುತವೇ ಆಗಿರಬೇಕೆಂದು ಊಹಿಸಿದೆ.

"ಆಕೆ— ವಸುಂಧರಾ—ಬಂದಿದ್ದಾರೆ" ಎಂದು ಗುಂಡಪ್ಪನು ಹೇಳಿದನು. ನನಗೆ ಮೊನ್ನೆಯದೆಲ್ಲವೂ ನೆನಪಿಗೆ ಬಂದು, ಹೃದಯವು ಹೊಟ್ಟೆಯೊಳಗಿಳಿದು ಹೋಯಿತು.

"ಯಾರ್ಯಾರು ಬಂದಿದ್ದಾರೆ ?" ಎಂದೆನು.

"ಆಕೆಯೊಬ್ಬರೆ ಬಂದಿದ್ದಾರೆ !"

"ಒಬ್ಬಳೆ ?"

"ಹೌದು!"

ನನಗೆ ಮೈ ನಡುಕ ಹತ್ತಿತು. ಹಾಸಿಗೆಯನ್ನು ಬಿಟ್ಟೇಳಲಿಲ್ಲ.

"ಭಯಪಡಬೇಡಿ" ಎಂದು ಗುಂಡಪ್ಪನು ನನಗೆ ಸಮಾಧಾನ ಹೇಳಿದನು.

"ಏನಾದರೂ ಟಾನಿಕ್ ಕೊಡು ಗುಂಡಪ್ಪಾ. ಅದನ್ನು ಕುಡಿದುಕೊಂಡು ಹೋಗಿ ಮಾತನಾಡುತ್ತೇನೆ !"

"ಬೇಡಿ ಸ್ವಾಮಿ. ಈ ದಿವಸಕ್ಕೋಸ್ಕರ, ಈ ಪ್ರಸಂಗ ಬರುವುದೆಂದರಿತು, ಎದುರಿಗಿರುವ ಪೋಲಿಸ್ ಇನ್‌ಸ್ಪೆಕ್ಟರ ಮನೆಯಿಂದ ಕಾಫೀ ಪುಡಿತಂದು ಕಾಫೀಮಾಡಿದ್ದೇನೆ. ಅದನ್ನು ಕುಡಿದುಬಿಡಿ, ಸಾಕು !"

ಗುಂಡಪ್ಪನದು ಹದ್ದಿನ ದೃಷ್ಟಿ. ಎಲ್ಲಾ ವಿಷಯಗಳನ್ನೂ ಗಮನಿಸಿರುತ್ತಾನೆ.

ನಾನು ಕಾಫಿಯನ್ನು ಕುಡಿದು, ಷರಟನ್ನು ತೊಟ್ಟು, ಕ್ರಾಪನ್ನು ಬಾಚಿಕೊಂಡು, ಬಾಗಿಲತನಕ ಹೋಗಿ, ಅನಂತರ ಹಿಂದಕ್ಕೆ ಬಂದು ಮಂಚದ ಮೇಲೆ ಕುಳಿತು, ಕೈಗಳಲ್ಲಿ ಮುಖವಿರಿಸಿ, "ಸಾಧ್ಯವಿಲ್ಲ, ಗುಂಡಪ್ಪಾ, ಸಾಧ್ಯವಿಲ್ಲ! ಪ್ರಾಣಹೋದರೂ ಸರಿ, ನಾನು ಇಲ್ಲಿಂದ ಕದಲುವುದಿಲ್ಲ !" ಎಂದೆನು.

ಗುಂಡಪ್ಪನು ಕ್ಷಣಕಾಲ ಕಕ್ಕಾಬಿಕ್ಕಿ ಆದನು. ಅನಂತರ "ಹೀಗಾಗುತ್ತೆ ಅಂತ ತಿಳಿದಿತ್ತು" ಎಂದು ಮೊದಲಿನಂತೆ ಶಾಂತನಾಗಿಯೇ ಹೇಳಿದನು.

"ನಾನು ಹೋಗಿ ಮಾತನಾಡುವುದಿಲ್ಲಾ ಅಂತ ಗೊತ್ತಿತ್ತೆ ?"

"ಹೌದು !"

"ಹೇಗೆ ?"

"ಇನ್‌ಸ್ಪೆಕ್ಟರ ಮನೆಯ ಕಾಫೀಪುಡಿ ತರುವುದರ ಬದಲು, ಕಾನ್‌ಸ್ಟೇಬಲನ ಮನೆಯ ಕಾಫೀಪುಡಿ ತರಬೇಕಿತ್ತು !"

"ಈಗೇನು ಮಾಡ್ತೀಯಾ ?"

"ಬೇರೆ ಉಪಾಯಯೋಜನೆ ಮಾಡಿದ್ದೇನೆ" — ಧನಿಕರು ಪೆಟ್ಟಿಗೆಯಲ್ಲಿ ನೋಟುಗಳನ್ನು ಇಟ್ಟಿರುವಂತೆ ಗುಂಡಪ್ಪನು ಮೆದುಳಿನಲ್ಲಿ ಉಪಾಯದ ಕಂತೆಗಳನ್ನು ಇಟ್ಟಿರುತ್ತಾನೆ.

"ಏನು ಮಾಡುತ್ತೀಯಾ ?"

"ನೀವು ಒಪ್ಪಿದರೆ, ನಿಮ್ಮ ಪರವಾಗಿ ನಾನೇ ಹೋಗಿ ಮಾತನಾಡುತ್ತೇನೆ."

ನಾನು ಗುಂಡಪ್ಪನನ್ನು ತಬ್ಬಿಕೊಂಡುಬಿಟ್ಟೆ. ಅನಂತರ ನನ್ನ ರಾಯಭಾರಿಯನ್ನಾಗಿ ಅವನನ್ನು ಆ ಕೆ ಯ ಬಳಿಗೆ ಕಳುಹಿಸಿಕೊಟ್ಟೆನು....

ಮೊದಲು ಮೊದಲು ಅವರ ಮಾತುಗಳು ನನ್ನ ಕೊಠಡಿಯವರೆಗೂ ಕೇಳಿಬರಲಿಲ್ಲ. ಆದರೆ ಕ್ರಮವಾಗಿ, ಅವರು ಶ್ರುತಿಗಳನ್ನು ಏರಿಸಿ ಮಾತನಾಡಿದಂತೆಲ್ಲಾ ಅವರ ಮಾತುಗಳು ನನ್ನ ಕಿವಿಗೂ ಬಿದ್ದುವು.

"........"

"........"

"ಹಾಗೆಂದರೆ ?" (ಸ್ತ್ರೀ ಶಾರೀರ, ವಸುಂಧರಾ ವಾಣಿ)

"ಹೇಳಿದೆನಲ್ಲ; ನಮ್ಮ ರಾಯರು ಶಾಸ್ತ್ರೀಯ ವಿಧವಾಧವರಾಗಬೇಕೆಂದು ಹಟಹಿಡಿದಿದ್ದಾರೆ. ಕಂಕಣ ತೊಟ್ಟಿದ್ದಾರೆ !" (ಗುಂಡಪ್ಪನ ನಿನಾದ.)

"ಏನು ಹಾಗೆಂದರೆ !" (ಶಂಕಾನಾದ.)

"ಶಾಸ್ತ್ರರೀತಿಯನ್ನನುಸರಿಸಿರುವ ವಿಧವೆಯನ್ನು ಲಗ್ನವಾಗಲು ನಮ್ಮ ರಾಯರು ಶಪಥಮಾಡಿದ್ದಾರೆ. ಆಗಲೇ ಅವರ ಮನೋಧೈರ್ಯವು ವ್ಯಕ್ತವಾಗುವುದು; ಆಗಲೇ ನಿಜವಾದ ಸಮಾಜ ಸೇವೆಯಾಗುವುದು; ಆಗಲೇ ವಿಧವಾವಿವಾಹ ಸರಿಯಾಗಿ ನೆರವೇರುವುದು !" (ಭಲೆ ಗುಂಡಪ್ಪ !)

"ನಾನೂ ವಿಧವೆ." (ಈಗ 'ಧವಾರ್ಥಿ' !)

"ಆದರೂ.." (ಗುಂಡಪ್ಪನ ಚಾಣಕ್ಯತನ.)

"ಇನ್ನೇನಾಗಬೇಕು ?" (ಕೇ..ಶಾ..ರ್ಪ..ಣ !)

"ಈಗ ನೀವು ಆಗಿರುವುದು ಆಗಿರಕೂಡದು !" (ಗುಂಡಪ್ಪ ನೊಡ್ಡಿದ ಸಂದೇಹಸಾಮ್ರಾಜ್ಯ)

"ಈಗ ನಾನು ಏನಾಗಿದ್ದೇನೆ ಅಂದರೆ?" (ಏನೋ ಭೀತಿಯ ಕುರುಹು.)

"ತಾವು ಸಕೇಶಾ ವಿಧವೆ!" (ಅಬ್ಬಾ! ಗುಂಡಪ್ಪನ ಧೈರ್ಯ !)

ಸ್ವಲ್ಪಕಾಲ ವಿರಾಮ. ನಿಶ್ಶಬ್ದ. ಅನಂತರ,

"ಅಂದರೆ?.." (ಅಸುಮಾನಿತ ವಸುಂಧರಾಕಂಠ)

"ಸಕೇಶಾವಿಧವೆ ಶಾಸ್ತ್ರೀಯವಿಧವೆಯಲ್ಲ!"(ಗುಂಡಪ್ಪನಶಾಸ್ತ್ರ)

"ಏನು ನೀವು ಹೇಳುತ್ತಿರುವುದು?' (ಬಗೆಹರಿಯದ ಪ್ರಶ್ನೆ)

"ನಮ್ಮ ರಾಯರಿಗೆ ನಿಮ್ಮನ್ನು ಲಗ್ನವಾಗಬೇಕೆಂದು ಬಹಳ ಆಶೆಯಿದೆ; ಆದರೆ ಅವರು ಶಾಸ್ತ್ರೀಯವಿಧವೆಯನ್ನೇ ಲಗ್ನವಾಗುವೆನೆಂದು ಭಾಷೆಕೊಟ್ಟಿದ್ದಾರೆ. ನಿಮಗೆ ನಮ್ಮ ರಾಯರನ್ನೇ ವರಿಸುವ ಮನಸಿದ್ದರೆ ನೀವು ದೊಡ್ಡ ತ್ಯಾಗಮಾಡಬೇಕು. ನೀವು ಶಾಸ್ತ್ರೀಯ ವಿಧವೆಯಾಗಬೇಕು. ಆಗ ರಾಯರು ನಿಮ್ಮನ್ನು ಬಹಳ ಒಲವಿನಿಂದ ವಿವಾಹವಾಗುವರು." (ಹಿಟ್ಲರನನ್ನು ಮೀರಿಸುತ್ತಾನೆ ಗುಂಡಪ್ಪ).

"ಏನು ನಿಮ್ಮ ಅರ್ಥ?" (ಅಥಾತೋ ಧರ್ಮಜಿಜ್ಞಾಸಾ)

"ನೀವು ಕೇಶತ್ಯಾಗಮಾಡಬೇಕು. ಕೇಶರಹಿತ ವಿಧವೆಯಾಗಬೇಕು. ಶಾಸ್ತ್ರೀಯ ವಿಧವೆಯಾಗಿ ಕೆಂಪುಬಟ್ಟೆಗಳನ್ನೇ ಧರಿಸಬೇಕು. ನೀವು ಎಂದು ತಲೆಬೋ...."

'ಛಟ್' ಎಂಬ ಶಬ್ದವೊಂದು ನನ್ನ ಕೊಠಡಿಗೆ ಹಕ್ಕಿಯಂತೆ ತೇಲಿಬಂದಿತು. ಒಬ್ಬರು ಇನ್ನೊಬ್ಬರ ಕೆನ್ನೆಗೆ ಗಟ್ಟಿಯಾಗಿ ಹೊಡೆದರೆ ಹೊರಡುವ ಶಬ್ದ ಅದು. ಆ ಶಬ್ದವು ಕೈಬಳೆಗಳ ಜಣಜಣತ್ಕಾರದ ಶ್ರುತಿಯಿಂದೊಡಗೂಡಿತ್ತು. ತಾಳಪ್ರಧಾನವಾದ ಸಂಗೀತದ ಮುಕ್ತಾಯದಲ್ಲಿ ಮೃದಂಗದ ಶಬ್ದವು ಕೇಳಿಬರುವಂತೆ, ಈ ಸಂವಾದದ ಮುಕ್ತಾಯವನ್ನು ಆ 'ಛಟ್' ಶಬ್ದವು ಸೂಚಿಸಿತು. ಅನಂತರ .... ಬೈಗಳ ಸುರಿಮಳೆ.... ಪ್ರಚಂಡ ಪ್ರವಾಹ .. .. ಪ್ರಳಯ.... ಅನಂತರ ಧಡೀರನೆ ಬಾಗಿಲನ್ನು ಹಾಕಿದ ಶಬ್ದ .. .. ಆ ಮೇಲೆ ಮೆಟ್ಟುಗಳನ್ನು ಹಾಕಿಕೊಂಡು ರಭಸದಿಂದ ಹೋಗುತ್ತಿದ್ದ ಭೀಮಗಮನ .... ಆ ಮೇಲೆ.... ಶಾಂತಿಃ ಶಾಂತಿಃ....ಶಾಂತಿಃ!

ಸುಮಾರು ಕಾಲುಗಂಟೆಯ ಕಾಲದವರೆಗೆ, ಕಳ್ಳನನ್ನು ಹುಡುಕಲು. ಪೋಲಿಸಿನವರು ಶೋಧಿಸುತ್ತಿದ್ದ ಮನೆಯಲ್ಲೇ ಬಚ್ಚಿಟ್ಟುಕೊಂಡಿರುವ ಕಳ್ಳನಂತೆ, ನನ್ನ ಕೊಠಡಿಯಲ್ಲೇ ನಿಶ್ಶಬ್ದನಾಗಿ ಕುಳಿತಿದ್ದೆ. ಗುಂಡಪ್ಪನ ಸುಳಿವೇ ಇರಲಿಲ್ಲ. ಮಾನಸಿಧಿಯಾದ ಗುಂಡಪ್ಪನು 'ಛಟ್' ಪ್ರಕರಣ ಕಾರಣ, ಆದಿನವೆಲ್ಲಾ ನನಗೆ ಕಾಣಿಸಿಕೊಳ್ಳಲು 'ಹಿಂಜರಿಯುತ್ತಾನೆಂದು ಅರಿತು, ಅವನೊಬ್ಬನನ್ನೇ ಬಿಟ್ಟಿರುವುದು ಉಚಿತವೆಂದು ನಿರ್ಧರಿಸಿ, ಮೆಲ್ಲಗೆ ಮನೆಯಿಂದ ಹೊರಟು, ನನ್ನ ಮಿತ್ರನೊಬ್ಬನ ಮನೆಗೆ ಅತಿಥಿಯಾಗಿ ಹೊರಟೆನು.

ಆ ಮಿತ್ರನ ಮನೆಯಲ್ಲೇ, ಏನೋ ಒಂದು ನೆವ ಹೇಳಿ ಊಟ ಮಾಡಿಕೊಂಡು, ಸಂಜೆಯವರೆಗೂ ಅಲ್ಲಿಯೇ ಕಾಲ ಕಳೆದೆನು. ಸಂಜೆ ಅವನೊಂದಿಗೆ ಮಾತನಾಡುತ್ತಾ ಇರುವಾಗ 'ತಾಯಿನಾಡು' ಪತ್ರಿಕೆ ಬಂದಿತು. ನಾನು, ಯುದ್ಧದ ಸುದ್ದಿಗಳನ್ನು ನೋಡೋಣವೆಂದು ಪತ್ರಿಕೆಯನ್ನು ತಿರುವಿ ಹಾಕಿದೊಡನೆ, ಪತ್ರಿಕೆಯ ಮಧ್ಯದಲ್ಲಿ ದಪ್ಪ ದಪ್ಪ ಅಕ್ಷರಗಳ ಜಾಹೀರಾತನ್ನು ನೋಡಿ, ಪ್ರಾಣ ಬಿಟ್ಟವನಂತೆಯೇ ಆದೆನು. ಜಾಹೀರಾತು ಈ ರೀತಿ ಇದ್ದಿತ್ತು:

"ಶಾಸ್ತ್ರೀಯ ವಿಧವೆಗಳಿಗೆ ಅಪೂರ್ವ ಸಮಯ!

ಶಾಸ್ತ್ರೀಯ ವಿಧವೆಗಳು ಎಂದರೆ, ಕೇಶರಹಿತರಾದ, ಕೆಂಪು ವಸ್ತ್ರಧಾರಿಣಿಯರಾದ ವಿಧವೆಯರು! ಯಾರಾದರೂ ಸರಿಯೆ; ಜಾತಿ, ಕುಲ, ಮತ, ವಯಸ್ಸುಗಳ ಬಾಧಕವಿಲ್ಲದೆ, ಕೆಳಗೆ ಕಂಡ ವಿಳಾಸದವರನ್ನು ಲಗ್ನವಾಗಬಹುದು. ಈ ವಿಳಾಸದವರು ಶ್ರೀಮಂತರೂ, ಜಹಗೀರುದಾರರೂ, ಯುವಕರೂ, ಇನ್ನೂ ಅವಿವಾಹಿತರೂ ಆಗಿರುತ್ತಾರೆ. ಬಾಕಿ ವಿಷಯಗಳನ್ನು ಪ್ರತ್ಯಕ್ಷವಾಗಿ ಬಂದು ಮಾತನಾಡತಕ್ಕದ್ದು. ಶುಭಸ್ಯ ಶೀಘ್ರಂ.

ಸೀತಾರಾಮರಾವ್ ಎಂ. ಎ., (ಆನರ್ಸ್)
ಚಾಮರಾಜಪೇಟೆ"

ನಾನು ಆ ಪತ್ರಿಕೆಯನ್ನು ಹಿಡಿದುಕೊಂಡು ಮನೆಗೆ ಓಡಿಬಂದ ರೀತಿಯನ್ನು ನೋಡಿದ ನನ್ನ ಮಿತ್ರನೂ ಇತರರೂ ನನ್ನನ್ನು ಹುಚ್ಚನೆಂದೇ ಎಣಿಸಿರಬೇಕು. ನನ್ನ ಮನೆಯ ಬಾಗಿಲನ್ನು ತಲುಪಿದೊಡನೆ "**ಗುಂಡಪ್ಪಾ**" ಎಂದು ಚೀರಿದೆನು.

ಗುಂಡಪ್ಪನು— 'ಛಟ್' ಪ್ರಕರಣವನ್ನು ಸಂಪೂರ್ಣವಾಗಿ ಮರೆತವನಾಗಿ–ನನ್ನ ಮುಂದೆ ನಿಂತು ಕೈಜೋಡಿಸಿದನು. "ಏನು ಸ್ವಾಮಿ?" ಎಂಬ ಭಾವ ಸೂಚಿಸಿದನು.

"ತಾಯಿನಾಡು ಪತ್ರಿಕೆ ನೋಡಿದೆಯಾ?"

"ನೋಡಿದೆ ಸ್ವಾಮಿ!"

"ಏನು ವಿಶೇಷ?"

"**ಶಾಸ್ತ್ರೀಯ ವಿಧವೆಯರಿಗೆ ಅಪೂರ್ವಸಮಯ**"

"ಏನು ಮಾಡಲಿ ಗುಂಡಪ್ಪಾ? ಹೀಗಾಗುತ್ತೆ ಎಂದು ಎಣಿಸಿರಲಿಲ್ಲ!"

"ಹೀಗಾಗುತ್ತೆ ಎಂದು ನನಗೆ ಗೊತ್ತಿತ್ತು!"

"ಹೀಗಾಗುತ್ತೆ ಎಂತ?"

"ಹೌದು!"

"ಪತ್ರಿಕೆಯಲ್ಲಿ ಪ್ರಕಟನೆ ಬರುತ್ತೆ ಎಂತ?"

ಅಂತಹುದೊಂದು ಏನಾದರೂ ಅನಾಹುತ ಆಗುತ್ತೆ ಅಂತ!"

"ಹೇಗೆ ಗೊತ್ತಿತ್ತು?"

"ಆಕೆ ಬಹಳ ರೇಗಿಕೊಂಡು ಹೋದಳು ಸ್ವಾಮಿ. ನಾನೇನಾದರೂ ಆಕೆಯ ಹತ್ತಿರ ನಿಂತಿದ್ದರೆ ನನ್ನ ಕೆನ್ನೆಗೆ ಏಟು ಬೀಳುತ್ತಿತ್ತು—" (ಸರಿಮರಿ ಗುಂಡಪ್ಪ!) — "— ಹೋಗುವಾಗ ಆಕೆ 'ನಿಮ್ಮ ರಾಯರಿಗೆ ಸರಿಯಾಗಿ ಬುದ್ಧಿ ಕಲಿಸುತ್ತೇನೆ. ಮುಂ... ಯರ ಮುಂದೆಯನ್ನೇ ಕಳುಹಿಸುತ್ತೇನೆ' ಎಂದು ಹೇಳಿ ಹೋದಳು ಸ್ವಾಮಿ! ಏನಾದರೂ ಅನಾಹುತ ಮಾಡುವಳೆಂದಿದ್ದೆ."

"ನಾನು ಏನು ಮಾಡಲಿ ಗುಂಡಪ್ಪ?"

"ಧೈರ್ಯ ಬಿಡಬೇಡಿ ಸ್ವಾಮಿ!"

"ಯಾರಾದರೂ — ಶಾಸ್ತ್ರೀಯ ವಿಧವೆಯರು – ಬರುತ್ತಾರೆ ಎನ್ನುತ್ತೀಯಾ ?"

"ಬರಬಹುದು ಸ್ವಾಮಿ! ಈಗಿನಕಾಲದಲ್ಲಿ, ಈ ಊರಲ್ಲಿ, —"

ಅಷ್ಟುಹೊತ್ತಿಗೆ ನಮ್ಮ ಆಳು ನಾವಿದ್ದಲ್ಲಿಗೆ ಬಂದು "ಪಡಸಾಲೆಯಲ್ಲಿ ಕೆಲವರು ಹೆಂಗುಸರು ಬಂದಿದ್ದಾರೆ ಸ್ವಾಮಿ" ಎಂದನು.

ನನಗೆ ಪ್ರಾಣವೇ ಹೋಯಿತು. "ಗು..ಗು..ಗು.." ಎಂದೆ. ಮುಂದೆ ಸ್ವರವೇ ಏಳಲಿಲ್ಲ. ಇಂಗಿತಜ್ಞನಾದ ಗುಂಡಪ್ಪನು, ಪಡಸಾಲೆಗೆ ಹೋಗಿ ನೋಡಿಕೊಂಡು ಹಿಂದಿರುಗಿ ಬಂದನು. ಅವನ ಮುಖವನ್ನು ನೋಡಿದೊಡನೆ ಅನಿಷ್ಟವು ಸಂಭವಿಸಿತೆಂದು ಊಹಿಸಿದೆನು. ಗುಂಡಪ್ಪನು "ಏಳು ಜನ ಬಂದಿದ್ದಾರೆ ಸ್ವಾಮಿ"ಎಂದು ಹೇಳಿ, ತನ್ನ ನುಣುಪಾದ ತಲೆಯಮೇಲೆ ಕೈಸವರಿಕೊಳ್ಳುತ್ತಾ, "ಅವರೆಲ್ಲರೂ ಶಾಸ್ತ್ರೀಯ ವಿಧವೆಯರು. ಎಲ್ಲರ ಕೈಯಲ್ಲೂ ಒಂದೊಂದು 'ತಾಯಿನಾಡು' ಪತ್ರಿಕೆ ಇದೆ" ಎಂದು ಪೂರ್ತಿ ಮಾಡಿದನು.

ಒಂದೇ ಉಸಿರಿನಲ್ಲಿ ನಾನು ನನ್ನ ಕೊಠಡಿಗೆ ಓಡಿದೆನು. ಗುಂಡಪ್ಪನು ಸ್ವಲ್ಪಹೊತ್ತಿನಲ್ಲೇ ನಿಧಾನವಾಗಿ ನನ್ನನ್ನು ಹಿಂಬಾಲಿಸಿದನು.

"ಏನಾದರೂ ಮಾಡು ಗುಂಡಪ್ಪಾ!" ಎಂದು ಅವನನ್ನು ಅಂಗಲಾಚಿದೆನು.

"ಯೋಚನೆ ಮಾಡುತ್ತೇನೆ ಸ್ವಾಮಿ" ಎಂದು ಗುಂಡಪ್ಪನು ಹೇಳಿದನು.

"ಜಾಗ್ರತೆ ಮಾಡು" ಎಂದು ನಾನು ಅವನನ್ನು ಅವಸರಪಡಿಸಿದೆನು.

ಗುಂಡಪ್ಪನು ಮಾತನಾಡಲಿಲ್ಲ. ಕ್ಷಣಕಾಲ ಕಣ್ಣುಮುಚ್ಚಿಕೊಂಡು ನಿಂತನು; — ಬಟ್ಟೆಯುಟ್ಟ ಗೋಮಟೇಶ್ವರನಂತೆ. ಅನಂತರ ಕಣ್ಣುಬಿಚ್ಚಿ ಪ್ರಸನ್ನವದನನಾದನು.

"ಉಪಾಯ ಹೊಳೆಯಿತೇ?" ಎಂದು ನಾನು ಕೇಳಿದೆನು.

"ಹೂಂ!"

"ಕಣ್ಣುಮುಚ್ಚಿ ಬಿಚ್ಚುವುದರೊಳಗಾಗಿ?"

"ಹೌದು!"

"ಏನು, ಜಾಗ್ರತೆ ಹೇಳು!"

ಗುಂಡಪ್ಪನು ಉತ್ತರ ಕೊಡಲಿಲ್ಲ. ಸೆಟ್ಟಗೆ ಪಡಸಾಲೆಗೆ ಹೋದನು. ಸ್ವಲ್ಪ ಹೊತ್ತಿನಲ್ಲೇ ಅವನ ಎತ್ತರಿಸಿದ ಧ್ವನಿ ಕೇಳಿಬಂದಿತು. "..ಆದ್ದರಿಂದ ವಿಧವಾವಿವಾಹವಾಗಲು ನಮ್ಮ ರಾಯರ ಅಡ್ಡಿಯಿಲ್ಲ. ಆದರೆ, ಅವರು ವಿಧವಾವಿವಾಹವಾಗುವುದಾದರೂ, ಏಕವಿಧವಾವ್ರತಸ್ಥರಾಗುವರು. ಆದ್ದರಿಂದ ನೀವುಗಳೆಲ್ಲರೂ ಈಗ ಹೋಗಿ! ಎಂದು ಏಕಕಂಠದಿಂದ ನಿಮ್ಮಲ್ಲಿ ಯಾರು ರಾಯರನ್ನು ಲಗ್ನವಾಗಬೇಕೆಂದು ಹೇಳುವಿರೋ, ಅಂದು ಅವರನ್ನು ರಾಯರು ಕೈಹಿಡಿಯುವರು!"

ಗುಂಡಪ್ಪನ ಧ್ವನಿ ನಿಂತೊಡನೆ; "ನಾನು!",.."ನೀನ್ಯಾಕೆ, ನಾನು!",.."ನೀನು ಮುದಿಗೂಬೆ, ನಿಂಗ್ಯಾಕೆ ಲಗ್ನ? ನಾನು!" "ನಾನು, ನಾನು!".."ನಾನೂ, ನಾನೂ".. ಎಂಬ ವಿವಿಧ ಸ್ವರಗಳ ಗೊಂದಲವು ಕೇಳಿ ಬಂದು, ಅನಂತರ ಅವರುಗಳು ದೂರ ಹೋದಂತೆಲ್ಲಾ, ಕ್ರಮೇಣ ಕಡಿಮೆಯಾಯಿತು. ಅನಂತರ ನಿಂತಿತು.

ಗುಂಡಪ್ಪನು ನನಗೆ ಪ್ರತ್ಯಕ್ಷನಾದನು. ನಾನು ಸ್ವಲ್ಪ ಅನುಮಾನದಿಂದ "ನಾಳೆ ಅವರೆಲ್ಲರೂ ಒಬ್ಬರನ್ನು ಚುನಾಯಿಸಿಕೊಂಡು ಬಂದರೆ?" ಎಂದು ಕೇಳಿದೆನು.

ಗುಂಡಪ್ಪನು— ವೇದವ್ಯಾಸರಂತೆ– ಹೇಳಿದನು: "ಇಬ್ಬರು ಹೆಂಗುಸರು ಒಂದು ಮಾತಿನ ಮೇಲೆ ಎಂದೂ ಒಪ್ಪುವುದಿಲ್ಲ. ಏಳುಜನ ವಿಧವೆಯರು ನಿಮ್ಮಂತಹವರ ಕೈಹಿಡಿಯುವ ವಿಚಾರದಲ್ಲಿ ಪ್ರಳಯದ ವರೆಗೂ ಏಕಕಂಠಿತರಾಗುವುದಿಲ್ಲ!"

"ಗುಂಡಪ್ಪಾ, ನಿನಗೀಗ ಸಂಬಳ ಎಷ್ಟು?"

"ಇಪ್ಪತ್ತು ರೂಪಾಯಿ ಸ್ವಾಮಿ"

"ಹೋದ ವರ್ಷ ನನ್ನ ಬೆನ್ನಟ್ಟಿದ್ದ ಮದುವೆ ತಪ್ಪಿಸಿದ್ದಕ್ಕಾಗಿ ಹದಿನೇಳರಿಂದ ಇಪ್ಪತ್ತು ಮಾಡಿದೆ ಅಲ್ವೇ?"

"ಹೌದು ಸ್ವಾಮಿ!"

"ಇನ್ನು ಮೇಲೆ ಇಪ್ಪತ್ತೈದು ರೂಪಾಯಿ!"

ಗುಂಡಪ್ಪನು ಕೈ ಜೋಡಿಸಿ ನಮಸ್ಕರಿಸಿದರೂ, ಹಜ್ಜೆ ಇಡಲಿಲ್ಲ. ನನಗೆ ಅರ್ಥವಾಯ್ತು. "ಗುಂಡಪ್ಪಾ, ಇನ್ನು ಮುಂದೆ ಕರಿಯ ಅಂಗಿಯೊಡನೆ ಫೆಲ್ಟುಹ್ಯಾಟು ತೆಗೆಯಬೇಡ. ಅಥವಾ, ಇತ್ನೋಡು, ಕರಿಯ ಅಂಗಿಯನ್ನು ನೀನೇ ತೆಗೆದುಕೊಂಡು ಬಿಡು" ಎಂದೆನು.

ಗುಂಡಪ್ಪನ ಮೂಗಿನ ಹೊಳ್ಳೆಗಳು ಬಿಲಗಳಾದುವು. ಅವನ ಬಾಯಿಯೂ ಕಿವಿಗಳನ್ನು ಮುಟ್ಟಿದುವು. ಹಲ್ಲು ಫಳ ಎಂದು ಕಾಣಿಸಿಕೊಂಡುವು. ಎರಡು ಕೈಗಳನ್ನೂ ಮತ್ತೊಮ್ಮೆ ಜೋಡಿಸಿ, ದೀರ್ಘಪ್ರಣಾಮವನ್ನು ಮಾಡಿ, ಗುಂಡಪ್ಪನು ನನ್ನನ್ನು ಬೀಳ್ಕೊಂಡನು. ನಾನು "ಪ್ರೇಮ ಸಬ್ ಝೂಟ್ ಹೈ" ಎಂದು ಶಿಳ್ಳು ಹಾಕಲಾರಂಭಿಸಿದೆನು.

ಎಲ್ಲಕ್ಕಿಂತ ಅಗ್ಗ! ಎಲ್ಲಕ್ಕಿಂತ ಉತ್ತಮ!
ಮಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ!



5 ANNAS FOR 10

೫ ಆಣೆಗೆ ೧೦ ಬ್ಲೇಡು!

ಜೀವನಕಲೆ

(ಎಲ್ಲ ಹಕ್ಕುಗಳನ್ನೂ ಕಾದಿಡಲಾಗಿದೆ)

★

ಶ್ರೀ. ವಿಶ್ವನಾಥ ಹೆಗಡೆ, ಮುಂಬಯಿ

ಕಾವ್ಯ-ನಾಟಕ-ಚಿತ್ರ-ಶಿಲ್ಪ- ಸಂಗೀತಗಳಷ್ಟೇ ಕಲೆಯಲ್ಲ. ಪ್ರತಿಯೊಬ್ಬ ಮಾನವನ ಬದುಕೇ ಒಂದು ಕಲೆಯ ಜಾಲವಾಗಿದೆ. ಬದುಕುವ ಕಲೆಯಲ್ಲಿ ಸಿದ್ಧಹಸ್ತರಾಗುವುದು ಅಸಾಧ್ಯ-ವಿಷಯವಲ್ಲವಾದರೂ, ಬಹುಜನರಿಗೆ ಸುಲಭ ಸಾಧ್ಯವಲ್ಲವೆಂಬುದು ಕಂಡುಂಡ ಮಾತಾಗಿದೆ. ಆದರೆ ಕಣ್ಣುಮುಚ್ಚಿನಡೆಯುವ ಬಹುಜನ ಸಮಾಜ ಕಣ್ಣುತೆರೆದು ನಡೆಯತೊಡಗಿದರೆ, ಬದುಕಿನ ಕಲೆ ಅಂಗೈಯ ನೆಲ್ಲಿ!

★

ಪ್ರಸಿದ್ಧ ಆಂಗ್ಲ ಗ್ರಂಥಕಾರನಾದ ಆರ್ನೊಲ್ಡ್ ಬೆನೆಟ್ಟನು ಒಂದೆಡೆಯಲ್ಲಿ " ಮಾನವನ ಕಷ್ಟ-ನಷ್ಟಗಳಲ್ಲಿಯ ಅರ್ಧಕ್ಕಿಂತ ಹೆಚ್ಚು, ಜೀವನಕಲೆಯ ಅರಿವಿಲ್ಲದುದರಿಂದ ಉಂಟಾಗುತ್ತವೆ " ಎಂದು ಹೇಳಿದ್ದಾನೆ. ಎಲ್ಲೆಲ್ಲಿ ನೋಡಿದರೂ ಇದು ಎಲ್ಲರ ನಿದರ್ಶನಕ್ಕೆ ಬರುವಂತಿದೆ. ' ಇತರ ಕಲೆಗಳಂತೆ ಜೀವನವೂ ಒಂದು ಕಲೆ; ಎಲ್ಲ ಕಲೆಗಳಿಗಿಂತ ಇದು ಮಿಗಿಲಾದುದು, ಕಠಿನವಾದುದು, ಫಲಕಾರಿಯಾದುದು '..ಎಂಬ ಸತ್ಯವು ಅನೇಕರಿಗೆ ಗೊತ್ತಿಲ್ಲನೆಂದು ಹೇಳಬೇಕಾಗುವುದು. ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದೆಂತು ? ಯಶಃಪ್ರಾಪ್ತಿಯ ಗುಟ್ಟೇನು? ಹೆಚ್ಚಿಗೆ ಹಣವನ್ನು ಹೇಗೆ ಸಂಪಾದಿಸುವುದು ? ಮಿತ್ರರನ್ನು ಗಳಿಸಿ, ಕಾಯ್ದುಕೊಳ್ಳುವ ಗೂಢವೇನು ? ನಮ್ಮ ದೌರ್ಬಲ್ಯಗಳನ್ನು ದೂರಮಾಡುವುದು ಹೇಗೆ? ಸುಖವನ್ನು ಹೇಗೆ ಸಂಪಾದಿಸಬೇಕು ? ಕೃತಕೃತ್ಯತೆಯ ಮರ್ಮವೇನು ?— ಇವೇ ಮೊದಲಾದ ವಿಷಯಗಳನ್ನು ತಿಳಿದವರು ಲೋಕದಲ್ಲಿ ತೀರ ಕಡಿಮೆ ಜನರು.

ಅದೆಷ್ಟೋ ಜನರು, ತಿಳಿವಳಿಕೆಯಿಲ್ಲದೆ ತಾವೇ ಬರಮಾಡಿಕೊಂಡ ಸಂಕಟಗಳಿಗೋಸ್ಕರ ಅದೃಷ್ಟವನ್ನು ಹಳಿಯುತ್ತ, ಕೊರಗುತ್ತ, ಕಾಲವನ್ನು ನೂಕುವರು. ಬೇನೆ, ಚಿಂತೆ, ಸಾಲ, ಅಸಮಾಧಾನ, ಕುರುಡುನಂಬಿಕೆ ಮುಂತಾದ ಅನೇಕ ತೊಂದರೆಗಳಿಗೆ ಪಕ್ಕಾಗಿ, " **ಜೀವನದಲ್ಲಿ ಸ್ವಾರಸ್ಯವಿಲ್ಲ** " " **ಬಾಳಿನಲಿ ಬೆಳಕಿಲ್ಲ** " " **ಬದುಕಿನಲಿ ಸುಖವಿಲ್ಲ,** " ಎಂದು ಮರುಗುತ್ತ ಕೈಕಟ್ಟಿಕೊಂಡು ಕುಳಿತು ಬಿಡುವರು. ಪ್ರವಾಹದಲ್ಲಿ ಸಿಲುಕಿದ ಕಡ್ಡಿಯಂತೆ ಗೊತ್ತುಗುರಿಯಿಲ್ಲದೆ, ಪರಿಸ್ಥಿತಿಗಳ ಕೈಗೊಂಬೆಯಂತಾಗಿ, ಎಲ್ಲೆಲ್ಲಿಗೋ ತೇಲಿ ಹೋಗುವರು.

ಬಾಳುವೆಯು ಮಣ್ಣುಮುದ್ದೆಯಂತಿದೆ. ಮಣ್ಣಿನಿಂದ ಒಗೆಬಗೆಯ ವಸ್ತುಗಳನ್ನು ತಯಾರಿಸಬಹುದು. ಒಂದೆ ಬಗೆಯ ಮಣ್ಣು ಮುದ್ದೆಯಿಂದ ಹೆಂಡದ ಗಡಿಗೆಯನ್ನೂ ಮಾಡಬಹುದು; ಸುಂದರವಾದ ಮೂರ್ತಿಯನ್ನೂ ಮಾಡಲಾಗುವುದು ! ಮಾಡುವವನ ಕಲಾಕೌಶಲ ಉದ್ದೇಶಗಳನ್ನು ಅನುಸರಿಸಿ, ಅದು ಭಿನ್ನ-ಭಿನ್ನ ರೂಪುಗಳನ್ನು ತಳೆಯುವುದು; ಅಲ್ಲವೆ? ಅದರಂತೆಯೆ ನಮ್ಮ ಜೀವನವನ್ನು ಸುಖಮಯವಾಗುವಂತಾಗಲಿ, ದುಃಖಪೂರ್ಣವಾಗುವಂತಾಗಲಿ ಮಾಡುವುದು ನಮ್ಮ ಕೈಯಲ್ಲಿದೆ. ಹುಳು-ಹುಪ್ಪಡಿಗಳ ಬಾಳನ್ನು ಬದುಕುವುದಾಗಲಿ, ತಿಳಿವಳಿಕೆಯ—ಸುವ್ಯವಸ್ಥಿತ—ಸಫಲವಾದ ಬಾಳನ್ನು ಜೀವಿಸುವುದಾಗಲಿ ನಮ್ಮನ್ನೇ ಸೇರಿದೆ. ಬಿತ್ತಿದುದನ್ನು ಬೆಳೆಯುವುದು ಸೃಷ್ಟಿನಿಯಮ. ನಮ್ಮ ಆಕಾಂಕ್ಷೆಗಳು ಸರಿಯಾಗಿದ್ದರೆ—ನಮ್ಮ ನಿಶ್ಚಯವು ಅಚಲವಾಗಿದ್ದರೆ—ನಮ್ಮ ಕೃತಿಗಳು ಅವಿಚ್ಛಿನ್ನವಾಗಿ ನಡೆದರೆ—ನಮ್ಮ ಉತ್ಸಾಹವು ಕುಂದದಿದ್ದರೆ—ಅಸಾಧ್ಯವೆಂದು ತೋರುವ ಕಾರ್ಯವನ್ನು ಸಹ ನಾವು ಸಾಧಿಸಬಹುದು. " **ನರ ಕರನೀ ಕರೇ ತೋ ನರ ಕಾ ನಾರಾಯನ ಹೋಜಾಯಗಾ** " ಎಂಬ ಅನುಭವ-ವೇದವನ್ನು ಎಂದೂ ಮರೆಯಲಾಗದು.

ನೆಪೋಲಿಯನ್ನಂತಹ ಉಕ್ಕಿನ ಮನಸ್ಸನ್ನೂ, **ಗಾಮಾ**ನಂತಹ ಭೀಮಶಕ್ತಿಯನ್ನೂ, **ತಾನಸೇನ**ನಂತಹ ಹಾಡುಗಾರಿಕೆಯನ್ನೂ, **ಬೋಸ**ರಂತಹ ವಿಜ್ಞಾನವಿಚಕ್ಷಣತೆಯನ್ನೂ, **ರವಿವರ್ಮ**ನಂತಹ ಕಲಾಕೌಶಲ್ಯವನ್ನೂ, **ಟಾಗೋರ**ರಂತಹ ಕವನಸಾಮರ್ಥ್ಯವನ್ನೂ, **ಫೋರ್ಡ**ರಂತಹ ಅಪಾರ ಸಂಪತ್ತನ್ನೂ, **ವಿವೇಕಾನಂದ**ರಂತಹ ಪ್ರತಿಭೆಯನ್ನೂ **ಗಾಂಧಿ-ನೆಹರು**ಗಳಂತಹ ದೊಡ್ಡಸ್ತಿಕೆಯನ್ನೂ ಸಂಪಾದಿಸುವುದು ಸಾಧ್ಯವಿದೆ. ಜೀವನದ ಮೇಲುಮೇಲಿನ ಅಂತಸ್ತುಗಳಿಗೇರುವುದು ಎಲ್ಲರಿಗೂ ಶಕ್ಯವಿದೆ. ಯಾಕೆಂದರೆ ಏಳಿಗೆಯ ಬೀಜವು ಪ್ರತಿಯೊಬ್ಬನಲ್ಲಿಯೂ ಇದ್ದೇ ಇದೆ. ಅದನ್ನು ಸಾಧಿಸುವ ಶಕ್ತಿಯೂ ನಮ್ಮಲ್ಲಿಯೆ ಅಡಗಿಕೊಂಡಿದೆ. ಕೀರ್ತಿಶೇಷರಾದ ದೊಡ್ಡ ದೊಡ್ಡ ಸ್ತ್ರೀ-ಪುರುಷರುಗಳ ಜೀವನಚರಿತ್ರೆಗಳು ಇದನ್ನೇ ಸಾರುತ್ತವೆ. ನಮ್ಮ ಸಮಕಾಲೀನರಾದ ಎಷ್ಟೋ ಕರ್ತೃತ್ವಶಾಲಿಗಳೂ ಇದೇ ತತ್ತ್ವವನ್ನು ಸಿದ್ಧಪಡಿಸುತ್ತಿದ್ದಾರೆ. ಅವರೆಲ್ಲರೂ ಮನುಷ್ಯರೆ ತಾನೆ ? ಅವರಿಗೆ ಸಾಧ್ಯವಾದುದು ನಮಗೂ ಸಾಧ್ಯವಾಗಬೇಕಷ್ಟೆ ?

ನಮ್ಮೊಡನೆ ಒಂದೇ ವರ್ಗದಲ್ಲಿ ಓದುತ್ತಿದ್ದ— ಓದುತ್ತಿರುವ, ಅಥವಾ ನಮ್ಮೊಟ್ಟಿಗೆ ದುಡಿಯುವ, ಕೆಲವರ ದೃಷ್ಟಾಂತವನ್ನು ತೆಗೆದುಕೊಳ್ಳೋಣ. ಒಬ್ಬನು ಅತಿ ಬುದ್ಧಿವಂತ. ಮಾತು-ಕತೆಯಲ್ಲಿ ಎಲ್ಲರನ್ನೂ ಅಚ್ಚರಿಗೊಳಿಸುವವನು. ಅವನ ಬಳಗದವರೂ ಬಂಧುಗಳೂ ಅವನು ಜಾಣನೆಂದು ಒಪ್ಪುತ್ತಾರೆ. ಆದರೆ ಅವನೇ



ಡೋಂಗರೆ ಇವರ ಬಾಲಾಮೃತವು

ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ

ಮ ಕ್ಕ ಳಿ ಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಕೆಲವು ವರ್ಷಗಳನಂತರ, ಹೇಳಿಕೊಳ್ಳುವಂತಹ ಪ್ರಗತಿಯನ್ನು ಹೊಂದದೆ ಎಲ್ಲಾದರೂ ಒಂದು ಕಾರಕೂನಿಕೆ ಮಾಡುತ್ತಿರುವನು. ಇನ್ನೊಬ್ಬ ಸಾಮಾನ್ಯನಾದ ತರುಣ; ಯಾರೂ ಹೆಚ್ಚಾಗಿ ಗಮನಿಸುವಂತಹನಲ್ಲ. ಅವನೇ ಕೆಲವು ಕಾಲದ ತರುವಾಯ ಮುಂದೆ ಮುಂದೆ ಬರುವನು; ದಿನದಿನಕ್ಕೂ ಏಳಿಗೆಯ ಮೆಟ್ಟಿಲು ಗಳನ್ನು ಏರುತ್ತ ಹೋಗುವನು; ಮಾನ-ಮರ್ಯಾದೆ, ಹಣ-ಕಾಸು, ಇಷ್ಟ-ಮಿತ್ರರನ್ನು ಗಳಿಸುತ್ತ ಹಾಯಾಗಿ ಇರುವನು. ಇವನು ತನಗೆ ತಿಳಿದೋ, ತಿಳಿಯದೆಯೋ, ಇನ್ನೊಬ್ಬರ ಪ್ರೇರಣೆಯಿಂದಲೋ, ಜೀವನಕಲೆಯ ಸೂತ್ರಗಳನ್ನು ಕಂಡಿರುವನು. ಉನ್ನತಿಗೇರುವ ಗುಟ್ಟನ್ನು ತಿಳಿದಿರುವನು. ಮೊದಲನೆಯವನು ಸೋಮಾರಿತನದಿಂದಎನ್ನಿ, ಬುದ್ಧಿಚಾಂಚಲ್ಯದಿಂದೆನ್ನಿ, ನಿರುತ್ಸಾಹ ದಿಂದೆನ್ನಿ, ಇದ್ದಲ್ಲಿಯೆ ಇರುವನು. ಸ್ತ್ರೀಯರಲ್ಲೂ ಇಂತಹ ದೃಷ್ಟಾಂತಗಳನ್ನು ಕಾಣಬಹುದು. ಕೆಲವರು ಕೇವಲ ಸಾಮಾನ್ಯರಾಗಿ ಜೀವನವನ್ನು ಸವೆಯಿಸುವರು; ಮತ್ತೆ ಕೆಲವರು ಬಾಳ್ವೆಯನ್ನು ಅಂದಗೊಳಿಸಿ ಸುಖದಿಂದ ಕಾಲಕಳೆಯುವರು. ಇದರ ಕಾರಣವೇನು ?

ಇದಕ್ಕೆ ಉತ್ತರಗಳನ್ನು ಬಲ್ಲಿದರ ಬಾಯಿಯಿಂದಲೇ ಕೇಳಿ:—

ಯಶಃಪ್ರಾಪ್ತಿಯ ಗುಟ್ಟಾವುದೆಂದು ಕೇಳಿದಾಗಲೆಲ್ಲ **ಎಫ್. ಡಬ್ಲ್ಯು. ವೂಲ್‌ವರ್ತ್‌ರು** "ಉದ್ಯೋಗ, ದೃಢ ನಿಶ್ಚಯ, ದೂರದೃಷ್ಟಿ" ಎಂದೆನ್ನುತ್ತಿದ್ದರು.

ಕಾರ್ಯಸಿದ್ಧಿಯ ಮರ್ಮವೇನೆಂದು **ಪ್ರೊ. ಐನ್‌ಸ್ಟೈನ**ರನ್ನು ಪ್ರಶ್ನಿಸಿದಾಗ ಅವರು "ಉದ್ಯೋಗ+ಆಟ+ಮೌನ" ಎಂದು ವಿನೋದವಾಗಿ ಹೇಳಿದರು.

ಈ ರೀತಿಯಲ್ಲಿ **ಡಾ. ಹೆರೊಲ್ಡ್ ಶೂಟ್ಜ್** ಎಂಬ ಶತಭಾಷಿಯನ್ನು— ಅವನಿಗೆ ೨೬೦ ಭಾಷೆಗಳಲ್ಲಿ ಮಾತನಾಡಲಿಕ್ಕೆ ಬರುತ್ತದೆ— ಕೇಳಿದಾಗ ಅವನೆಂದುದೇನೆಂದರೆ:—

"ಅದೇನೂ ಸೋಜಿಗವಲ್ಲ. ಸತತೋದ್ಯೋಗ, ಸಿಸ್ತು, ಒಂದಿಷ್ಟು ನೈಸರ್ಗಿಕಬುದ್ಧಿಬಲ, ಇಂಗಲಾರದ ಮಹತ್ವಾಕಾಂಕ್ಷೆ— ಇವು ನನ್ನ ಗುಟ್ಟು."

ಬೆಂಜಮಿನ್ ಫ್ರಾಂಕ್ಲಿನ್ನು ಈ ವಿಷಯದಲ್ಲಿ ಹೇಳುವುದನ್ನು ಕೇಳಿರಿ:

"ಸುಖ, ಸಂಪತ್ತು, ಗೌರವ, ಯಶಸ್ಸು ಮುಂತಾದ ಪುರುಷಾರ್ಥಗಳಿಗೆ ಕಾರ್ಯಾವಲಂಬನೆಯೇ ಮೂಲಭೂತವೆಂದು ನನಗೆ ಗೊತ್ತಿದ್ದಿತು !"

ಇದೇ ರೀತಿಯಲ್ಲಿ ಇನ್ನೆಷ್ಟೋ ಮಹಾಮಹಿಮರ ಸಾಕ್ಷ್ಯವನ್ನು ಕೊಡಬಹುದು.

ಸಾರಾಂಶವಿಷ್ಟೆ: ಜೀವನವು ಅಮೂಲ್ಯವಾದ ಭಾಗ್ಯವು. ಏಳಿಗೆಯು ಅದರ ಹೆಗ್ಗುರಿ. ಅದನ್ನು ಸಾಧಿಸುವುದು ಪ್ರತಿಯೊಂದು ವ್ಯಕ್ತಿಯ ಕೈಯಲ್ಲಿದೆ. ಕೀರ್ತಿಶೇಷರಾದ ದೊಡ್ಡ ದೊಡ್ಡ ಸ್ತ್ರೀ-ಪುರುಷರು ನಮಗೆಲ್ಲ ಆದರ್ಶಪ್ರಾಯರಾಗಿದ್ದು ತಮ್ಮ ಚರಿತ್ರೆಯ ಮೂಲಕ ಇಂದಿಗೂ ದಾರಿತೋರುತ್ತಲಿದ್ದಾರೆ.

ಜೀವನವನ್ನು ಆನಂದ-ಆರೋಗ್ಯ, ಉತ್ಸಾಹ-ಕಾರ್ಯಸಿದ್ಧಿಗಳಿಂದ ತುಂಬಿ ತುಳುಕಿಸುವಂತೆ ಮಾಡುವೆನೆಂದು ಈಗಿನಿಂದಲೇ ನಿರ್ಧರಿಸೋಣ. ಜೀವನವನ್ನು ಸಾರ್ಥಕಗೊಳಿಸುವೆವೆಂದು ದೃಢಸಂಕಲ್ಪವನ್ನು ಮಾಡೋಣ. ಹೆನ್ಲೆಯ ಈ ಸ್ಫೂರ್ತಿದಾಯಕವಾದ ಶಬ್ದಗಳು ನಮ್ಮ ಕಿವಿಗಳಲ್ಲಿ ಸದಾ ಮೊಳಗುತ್ತಿರಲಿ :

"ನಾನೇ ನನ್ನ ಅದೃಷ್ಟದ ವಿಶ್ವಕರ್ಮ !
ನಾನೇ ನನ್ನ ಆತ್ಮದ ಅಧಿನಾಯಕ !"

ಕೊಲ್ಹಾಪುರದಲ್ಲಿಯ
ಹೆಸರಾದ ಟೊಪ್ಪಿಗೆಯ ವ್ಯಾಪಾರಿಗಳು.
ಬೋಂಗಾಳೆ ಬ್ರದರ್ಸ್, ಕ್ಯಾಪ್ ಮೇಕರ್ಸ್
ಮಹಾದ್ವಾರ ರೋಡ್, ಕೊಲ್ಹಾಪುರ ಸಿಟಿ.
※ ಎಲ್ಲ ಮಾದರಿಯ ಟೊಪ್ಪಿಗೆಗಳೂ ಸರಿಯಾದ ಬೆಲೆಗೆ ಸಿಕ್ಕುವುವು. ಕರ್ನಾಟಕದಲ್ಲಿಯ ಗೋಕಾಕ, ಚಿಕ್ಕೋಡಿ, ರಾ. ದುರ್ಗ ಮೊದಲಾದ ಮುಖ್ಯಸ್ಥಳಗಳಲ್ಲೆಲ್ಲ ಪ್ರಸಿದ್ಧಿಯಿದೆ. ತಾವೂ ವಿಚಾರ ಮಾಡಿರಿ, ಒಮ್ಮೆ ಟೊಪ್ಪಿಗೆಗಳನ್ನು ತರಿಸಿ ಅನುಭವ ಪಡೆಯಿರಿ.

" ಏನು ? ತುಂಬಿದ ಸೀಸೆ ಹಾಗೆಯೆ ಇದೆಯಲ್ಲಾ ? ಬಹಳ ಬೆಲೆಯುಳ್ಳ ಔಷಧ;
ಎಲ್ಲವನ್ನೂ ಹಾಳುಮಾಡಿದಿರಿ......."

ಮರವಿಗೆ ★ ★ ಮದ್ದು

ಶ್ರೀ. ಆರ್. ಪಿ. ಹುಯಿಲಿಗೋಳ
ಬಿ. ಎಸ್. ಸಿ.

★

'ಅಯ್ಯೊ ಮರೆತು ಬಿಟ್ಟೆ' ಎಂದು ನಾವು ಹೇಳಿಬಿಡುವೆವು. ಈ ಮರೆವು ಮಾನವರನ್ನು ಎಂತೆಂತಹ ಗೋಳಿಗೆ ಗುರಿಮಾಡುವುದೆಂಬುದು ಅನೇಕರಿಗೆ ಅನುಭವದ ಸಂಗತಿಯಾಗಿದೆ. ಮರೆವು ಏಕಾಗುವುದು .ಗೊತ್ತೇ? ಇಲ್ಲವಾದರೆ ಡಾ. ಬದರೀನಾಥರ ಮಾತುಗಳನ್ನು ಕೇಳಿ ನಿಮ್ಮ ಮರೆವನ್ನು ಕಳೆದುಕೊಳ್ಳಿರಿ!

★

ಕಾಲೇಜಿನಿಂದ ಐದು ಘಂಟೆಗೆ ಮನೆಗೆ ಬಂದಕೂಡಲೆ ನಮ್ಮ ತಂದೆಯವರು "ಪತ್ರಾ ಟಪಾಲಿಗೆ ಹಾಕಿದೇನು ರಾಮೂ?" ಎಂದು ಕೇಳಿದರು. ಜೇಬಿನಲ್ಲಿ ಕೈಹಾಕಿ "ಇಲ್ಲ" ಎಂದವನೇ ಓಡಿದೆ. ಅಂಚೆಯ ಪೆಟ್ಟಿಗೆಯಿಂದ ಆಗಲೇ ಟಪಾಲನ್ನು ತೆಗೆದು ಕೊಂಡು ಹೋಗುತ್ತಿದ್ದ. ಅಂಚೆಯ ಜವಾನ. ಏದುತ್ತ ಅವನ ಹತ್ತಿರ ಹೋಗಿ ಕಾಗದವನ್ನು ಚೀಲದಲ್ಲಿ ಹಾಕಿದೆ. ತಿರುಗಿ ಮನೆಗೆ ಬಂದಕೂಡಲೆ ತಂದೆಯವರು "ಹೀಂಗ ಮರೆತರ ಹ್ಯಾಂಗೋ ರಾಮೂ? ಇಷ್ಟೊಂದು ಜರೂರೀ ಕೆಲಸಾ ಸಹಿತ ಮರೀಲಿಕ್ಕೆ ಹತ್ತೀದೀ ಅಂದಮ್ಯಾಲೆ ಮಾಡಬೇಕೇನು? ಕೋರ್ಟಿನ ಕಾಗದ ಇದು. ಈವೊತ್ತಿನ ಟಪಾಲಿಗೆ ಹೋಗದಿದ್ದರೆ ಎಷ್ಟು ಲುಕ್ಸಾನು ಆಗುತಿತ್ತು ನೋಡು!" ಎಂದರು. ನನಗೆ ನಾಚಿಕೆಯಾಯಿತು. 'ನನ್ನ ನೆನಪಿನ ಶಕ್ತಿಯೇ ಹಾಳಾಗಿಹೋಯಿತಲ್ಲಾ' ಎಂದು ವ್ಯಸನವಾಯಿತು. ಈ ಒಂದು ಮರೆವಿನ ರೋಗದಿಂದ ನಾನು, ಎರಡು ಸಲ ಪರೀಕ್ಷೆಗಳಲ್ಲಿ ಅದರ ಫಲವನ್ನು ಅನುಭವಿಸಿದ್ದೇನೆ. ಎಷ್ಟು ತೊಂದರೆಗಳಿಗೀಡಾದರೂ, ಯಾವ ರೀತಿಯಿಂದ ನಷ್ಟ ಹೊಂದಿದರೂ ಮರೆವು ಮಾತ್ರ ನನ್ನನ್ನು ಬಿಡಲಿಲ್ಲ.

ಮರುದಿನ ಬೆಳಗಿನಲ್ಲಿ ಎದ್ದ ಕೂಡಲೆ ತಂದೆಯವರು "ರಾಮೂ, ಈವೊತ್ತಿನ ದಿವಸ ಡಾಕ್ಟರ್ ಬದ್ರೀನಾಥರ ಕಡೆಗೆ ಹೋಗಿ ಬಾ! ಅವರು Foreign ಗೆ ಹೋಗಿ ಬಂದಾರ. Psychology ನೂ ಚೆಲೋ ಕಲ್ತಾರಂತ. ನಿನಗ ಏನಾದರೂ ಹೇಳ್ತಾರೇ ನೋಡೋಣ!" ಎಂದರು.

ಒಂಭತ್ತು ಘಂಟೆಗೆ ಡಾಕ್ಟರರ ಹತ್ತಿರ ಹೋದೆ. (ಅವರಿಗೆ ಕನ್ನಡ ಬರುತ್ತಿರಲಿಲ್ಲ. ಅವರು ಹೇಳಿದ ಮಾತುಗಳನ್ನು, ನಾನು ಇಲ್ಲಿ ಕನ್ನಡದಲ್ಲಿ ಬರೆದಿದ್ದೇನೆ.) ಕೆಲವು ಪೇಶಂಟರ ವಿಚಾರಣೆ ಯಾದ ಮೇಲೆ ನನ್ನ ಸರತಿ ಬಂದಿತು. ನನ್ನ ಕಥೆಯನ್ನೆಲ್ಲ ಹೇಳಿದೆ. ನಿಧಾನವಾಗಿ ಕೇಳಿದ ನಂತರ ತಮ್ಮ ಕಾಂಪೌಂಡರನನ್ನು ಕರೆದು ಏನನೋ ಹೇಳಿದರು. ಅವನು ಒಂದು ಸೀಸೆಯಲ್ಲಿ ಕೆಂಪು ಬಣ್ಣದ ಔಷಧವನ್ನು ತುಂಬಿ ತಂದುಕೊಟ್ಟ. ಡಾಕ್ಟರರು ನನ್ನನ್ನು

ಕರೆದು "ಈ ಔಷಧವನ್ನು ಮೂರು ಸಲ ತೆಗೆದುಕೊಳ್ಳಿರಿ" ಎಂದು ಆ ಸೀಸೆಯನ್ನು ನನ್ನ ಕೈಯಲ್ಲಿ ಕೊಟ್ಟು "ಆದರೆ. . ' ಎಂದರು. "ಏನು ?" ಎಂದು ಕೇಳಿದೆ. "ನೀವು ಈ ಔಷಧವನ್ನು ತೆಗೆದುಕೊಳ್ಳುವಾಗ ಮಂಗನನ್ನು ಮಾತ್ರ ಜ್ಞಾಪಿಸಿಕೊಳ್ಳಬೇಡಿರಿ. ಮಂಗವು ನಿಮ್ಮ ನೆನಪಿಗೆ ಬಂದರೆ ಆಗ ಔಷಧವನ್ನು ಕೆಳಗೆ ಇಟ್ಟುಬಿಡಿರಿ. ತಿರುಗಿ ನಾಲ್ಕು ಗಂಟೆಯ ಮೇಲೆ ಔಷಧವನ್ನು ತೆಗೆದುಕೊಳ್ಳಿರಿ. ಆಗಲೂ ನಿಮಗೆ ಮಂಗನ ನೆನಪಾದರೆ ಕೆಳಗೆ ಇಟ್ಟುಬಿಡಿರಿ. ಇಷ್ಟೇ, ಮಂಗನ ನೆನಪಾದರೆ ಔಷಧ ತೆಗೆದುಕೊಳ್ಳಕೂಡದು. ನಾಳೆಯ ಸಾಯಂಕಾಲ ನಿಮ್ಮ ಸೀಸೆಯನ್ನು ತೆಗೆದುಕೊಂಡು ಬಂದು ನನಗೆ ತಿಳಿಸಿರಿ. ಎಷ್ಟು ಅಲ್ಪ ಭಾಗವನ್ನು ನೀವು ಯಶಸ್ವಿಯಾಗಿ ತೆಗೆದುಕೊಂಡರೂ ಚಿಂತೆಯಿಲ್ಲ" ಎಂದರು. "ಅದೆಷ್ಟು ಸಲ, ಮಂಗ ಮಂಗ, ಎಂದರು ಡಾಕ್ಟರರು!" ಎಂದುಕೊಂಡೆ ಮನಸ್ಸಿನಲ್ಲಿ.

ಉತ್ಸಾಹಭರಿತನಾಗಿ ಹೊರಗೆ ಬಂದೆ. "ಆಯಿತು, ನನ್ನ ಮರೆವಿನ ಅಂತ್ಯಸಂಸ್ಕಾರ. ಈ ಔಷಧವನ್ನು ಸರಿಯಾಗಿ ತೆಗೆದುಕೊಂಡು ಬಿಟ್ಟರೆ ತೀರಿತು. ತೆಗೆದುಕೊಳ್ಳುವಾಗ ಮಾತ್ರ ಮಂಗನನ್ನು ಜ್ಞಾಪಿಸಿಕೊಳ್ಳಬಾರದು, ಇಷ್ಟೇ" ಎಂದು ಹಾದಿಯಲ್ಲೆಲ್ಲ ಎನ್ನುತ್ತ ಮನೆಗೆ ಬಂದೆ.

ಊಟವನ್ನು ತೀರಿಸಿ ಕಾಲೇಜಿಗೆ ಹೋದೆ. ಒಂದೂವರೆ ಘಂಟೆಗೆ ಮನೆಗೆ ಬಂದೆ. ಔಷಧದ ಸೀಸೆಯನ್ನು ತೆಗೆದುಕೊಂಡು ಬಟ್ಟಲಿನಲ್ಲಿ ಹಾಕುವ ಹೊತ್ತಿಗೆ ಮಂಗವು ನನ್ನ ಕಣ್ಣೆದುರಿನಲ್ಲಿ ನಿಂತಿತು. 'ಥೆ!' ಎಂದವನೆ ಕೆಳಕ್ಕೆ ಇಟ್ಟುಬಿಟ್ಟೆ. ತಿರುಗಿ ಸಾಯಂಕಾಲ ಐದು ಘಂಟೆಗೆ ಬಂದ ಮೇಲೆ ಪ್ರಯತ್ನ ಮಾಡಿದೆ. ಆಗಲೂ ಇದೇ ಅವಸ್ಥೆ. ರಾತ್ರಿ ಮಲಗುವಾಗಲೂ ಇದೇ ರೀತಿ. ಹೀಗೆ ಮೂರು ದಿವಸ ಪ್ರಯತ್ನ ಮಾಡಿದೆ. ಸಾಧ್ಯವೇ ಆಗಲಿಲ್ಲ. ಔಷಧದ ಸೀಸೆಯನ್ನು ತೆಗೆದುಕೊಳ್ಳುತ್ತಲೇ ಮಂಗನು ನೆನಪಾಗಿಬಿಡುತ್ತಿತ್ತು. ಔಷಧವನ್ನು ತಂದ ಮರುದಿವಸವೇ ಡಾಕ್ಟರರನ್ನು ಕಾಣಬೇಕಿತ್ತು. ಆದರೆ ಒಂದು ತೊಟ್ಟೂ ಔಷಧವನ್ನು ತೆಗೆದುಕೊಳ್ಳದೆ ಅವರನ್ನು ಹೇಗೆ ಕಾಣಬೇಕೆಂದು ಯೋಚಿಸಿ, ಸುಮ್ಮನಿದ್ದುಬಿಟ್ಟೆ.

ಮೂರು ದಿನಗಳು ಕಳೆದುವು. ನಾಲ್ಕನೆಯ ದಿವಸ ಡಾಕ್ಟರರೇ ಕರೆಯಿಸಿದರು. ಔಷಧದ ಸೀಸೆಯನ್ನು ಜೇಬಿನಲ್ಲಿಟ್ಟುಕೊಂಡು ಅವರೆದುರಿಗೆ ನಿಂತೆ. "ಎಷ್ಟು ಭಾಗ ಔಷಧವನ್ನು ತೆಗೆದುಕೊಂಡಿದ್ದೀರಿ?" ಎಂದು ಕೇಳಿದರು. ಸೀಸೆಯನ್ನು ಹೊರಕ್ಕೆ ತೆಗೆದು ಅವರ ಮೇಜಿನ ಮೇಲೆ ಇಟ್ಟೆ. "ಏನು? ತುಂಬಿದ ಸೀಸೆ ಹಾಗೆಯೇ ಇದೆಯಲ್ಲ! ಬಹಳ ಬೆಲೆಯುಳ್ಳ ಔಷಧ. ಎಲ್ಲವನ್ನೂ ಹಾಳು ಮಾಡಿದಿರಿ. ಒಂದು ಭಾಗವನ್ನಾದರೂ ತೆಗೆದುಕೊಳ್ಳಲೇಬೇಕಾಗಿತ್ತು!" ಎಂದರು. ನನಗೆ ಬಹಳ ವ್ಯಸನವಾಯಿತು. "ಡಾಕ್ಟರರೇ, ಕ್ಷಮಿಸಿರಿ. ನೀವು ಕೊಟ್ಟ ಔಷಧದ ಸೀಸೆಯನ್ನು ನೋಡುತ್ತಲೇ ನನಗೆ ಮಂಗನ ನೆನಪು ಆಗಿಬಿಡುತ್ತಿತ್ತು. ಒಂದು ಹನಿ ಔಷಧವನ್ನೂ ಸೇವಿಸುವುದಾಗಲಿಲ್ಲ; ನಾಚಿಕೆಯಾಯಿತು. ಅದಕ್ಕೋಸ್ಕರವೇ ನಿಮ್ಮನ್ನು ಮರುದಿವಸ ಕಾಣಲಿಲ್ಲ" ಎಂದೆ.

ಡಾಕ್ಟರರು ಪ್ರಾರಂಭಿಸಿದರು. "ನಿಮ್ಮ ಪ್ರಾಮಾಣಿಕತನವನ್ನೂ ಶುದ್ಧಭಾವವನ್ನೂ ಕಂಡು ಆನಂದವಾಗಿದೆ. ನೀವು ನನ್ನ ಮಾತುಗಳನ್ನು ಚೆನ್ನಾಗಿ ಲಕ್ಷ್ಯಕೊಟ್ಟು ಕೇಳಿರಿ. ಇನ್ನು ಮೇಲೆ ನೀವೆಂದಿಗೂ ಯಾವ ವಿಷಯವನ್ನೂ ಮರೆಯುವ ಕಾರಣವಿಲ್ಲ. ನೀವು ಎಷ್ಟು ಕಷ್ಟಪಟ್ಟರೂ ಮಂಗನನ್ನು ಮರೆಯಲಿಲ್ಲವಾದುದರಿಂದ ನಿಮ್ಮ ಜ್ಞಾಪಕಶಕ್ತಿಯು ಚೆನ್ನಾಗಿದೆ ಎಂಬುದು ವಿದಿತವಾಗುತ್ತದೆ. ಆದರೆ ಹೇಗೆ ನೆನಪಿನಲ್ಲಿಡಬೇಕೆಂಬ ವಿಷಯವು ನಿಮಗೆ ಗೊತ್ತಿಲ್ಲ; ಅದಕ್ಕೋಸ್ಕರವೇ ನೀವು ಮರೆಯುವುದು. ನೀವು ಮಂಗನನ್ನು ಮರೆಯಲು ಅಸಮರ್ಥರಾದಿರಿ ಎನ್ನುವುದನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ. ನೀವು ಈ ಕೆಂಪು ಔಷಧದ ಸೀಸೆಯನ್ನು ಕೈಯಲ್ಲಿ ಹಿಡಿದಾಗ ನಾನು ಹೇಳಿದೆ. . ಮಂಗನ ವಿಷಯವಾಗಿ. ಈ ಔಷಧವೂ ಮಂಗವೂ ನಿಮ್ಮ ಮನಸ್ಸಿನಲ್ಲಿ ನಾಟಿಕೊಂಡುವು. ಮಂಗನ ಬಣ್ಣವೂ ಕೆಂಪು ಇರುವುದರಿಂದ, ನಿಮಗೆ ಈ ಔಷಧವನ್ನು ನೋಡುತ್ತಲೇ ಮಂಗನ ನೆನಪಾಗಿ ಬಿಡುತ್ತದೆ. ನೆನಪಿನ ಶಕ್ತಿಯನ್ನು ಬೆಳೆಯಿಸುವುದರಲ್ಲಿ ಇದು ಮೊದಲನೆಯ ರಹಸ್ಯ. ಅಂತಹವೇ ಆದ ಎರಡು ವಿಷಯಗಳನ್ನು ನೀವು ಒಟ್ಟಿಗೆ ಯೋಚಿಸಿದ್ದರೆ ಅಥವಾ ಒಂದರ ಸಾಮೀಪ್ಯದಲ್ಲಿ ಇನ್ನೊಂದು ವಿಷಯವನ್ನು ಕುರಿತು ನೀವು ಯೋಚನೆಮಾಡಿದ್ದರೆ, ಅವೆರಡರ ಪೈಕಿ ಯಾವುದಾದರೊಂದು ವಿಷಯವು ನಿಮ್ಮ ದೃಷ್ಟಿಗೆ ಬಿದ್ದರೆ, ಇನ್ನೊಂದರ ನೆನಪು ತಕ್ಷಣವೇ ಆಗುತ್ತದೆ. ತಾನಾಗಿಯೇ ಆಗುತ್ತದೆ." ಅವರೇ ಮಾತನ್ನು ಮುಂದುವರಿಸಿದರು.

"ನೀವು ಈ ಔಷಧವನ್ನು ಪ್ರತಿ ನಾಲ್ಕು ಗಂಟೆಗಳಲ್ಲಿ ತೆಗೆದುಕೊಳ್ಳಲು ಪ್ರಯತ್ನಪಟ್ಟಿರಿ; ಆದರೆ ಸಾಧ್ಯವಾಗಲಿಲ್ಲ. ಯಾಕೆಂದರೆ, ಹಾಗೆಮಾಡಿದ ಪ್ರತಿಯೊಂದು ಪ್ರಯತ್ನದಿಂದ ಮಂಗವೂ ಔಷಧವೂ ನಿಮ್ಮ ಮನದಲ್ಲಿ ಮತ್ತಿಷ್ಟು ಗಟ್ಟಿಯಾಗಿ ಬೇರೂರಿಕೊಂಡುವು. ಹೀಗೆ ನೀವು ಆರೆಂಟುಸಲ ಪ್ರಯತ್ನಮಾಡಿದ ಮೇಲೆ ಅವು ಶಾಶ್ವತವಾಗಿ ನಿಮ್ಮ ಮನದಲ್ಲಿ ಉಳಿದು ಬಿಟ್ಟಿವೆ. ಇನ್ನುಮೇಲೆ ನಿಮ್ಮ ನೆನಪಿನಿಂದ ಔಷಧ ಮತ್ತು ಮಂಗದ ಜೊತೆಯು ಮಾಯವಾಗುವುದು ಸಾಧ್ಯವೇ ಇಲ್ಲ. ನೀವು ಇನ್ನುಮೇಲೆ ಯಾವಾಗ ಔಷಧವನ್ನು ತೆಗೆದುಕೊಂಡರೂ ಮಂಗನನ್ನು ನೆನಸುತ್ತೀರಿ. ಇದು ಎರಡನೆಯ ರಹಸ್ಯ. ನೀವು ಕಲಿತ ವಿಷಯಗಳನ್ನಾಗಲಿ ನೋಡಿದ ವಸ್ತುಗಳನ್ನಾಗಲಿ ಆಗಾಗ ಜ್ಞಾಪಿಸಿಕೊಳ್ಳುತ್ತಿದ್ದರೆ, ಅವುಗಳನ್ನು ನೀವೆಂದಿಗೂ ಮರೆಯುವುದಿಲ್ಲ. ಯಾವುದೋ ಒಂದು ಸಲ ನೋಡಿ, ಅಥವಾ ಕಲಿತು, ಆಮೇಲೆ ಅದರ ವಿಷಯವಾಗಿ ಎಂದೂ ಯೋಚಿಸದಿದ್ದರೆ, ಅದು ಮರೆತು ಹೋಗುವುದು ಸ್ವಾಭಾವಿಕವಾಗಿದೆ."

ನಾನು ಬಹಳ ಉತ್ಸುಕತೆಯಿಂದ ಕೇಳುತ್ತ ಕುಳಿತಿದ್ದೆ. ಕೂಡಲೇ ಡಾಕ್ಟರರು "ನಿನ್ನೆಯ ರಾತ್ರಿ ನಿಮ್ಮ ಮನೆಯಲ್ಲಿ ನೀವು ಏನೇನು ಊಟಮಾಡಿದಿರಿ?" ಎಂದರು. "ಊಂ. . ಎಂದು

(೨೫೦ ನೆಯ ಪುಟ ನೋಡಿರಿ.)

ಪರಿಣಯದ ಪರಿ

ಶ್ರೀ. ಶ್ರೀಧರಶರ್ಮ, ಮೈಸೂರು

೧

ಮೇಲುಮಾಳಿಗೆಮನೆಯ ಮುಂದುಹಂದರದೊಳಗೆ
ಹಸೆಮಣೆಯ ಹಾಸಿನಲಿ ಕುಳಿತುದಾಯ್ತು ;
ಹೊಸನಲ್ಲೆ ಬಲದೋಳನಾಂತು ನಾಣ್ನಗೆ ನಗಲು
ಕದಪು ಚೆಮ್ಮಾವಣ್ಣಿಗೆಕ್ಕೆಯಾಯ್ತು.
ಪ್ರಮದೆಯರು ವಿಭವ ಪ್ರಮೋದದಿಂದ—ಸುತ್ತಿ-
ಉರುಟಣೆಗೆ ಕಾದಿರಲು ಹುರುಪಿನಿಂದ,
ಮೊದಲುಗಿತ್ತಿಯ ಮಾಟ, ನಡೆವ ಕಜ್ಜದ ಹೂಟ
ಕಣ್ಮನವ ಸೆಳೆದಿತ್ತದೇನು ಚಂದ!

೨

ಅಂಬರ ವಿಜೃಂಭಿಸಿರಲಲರಂಬನಾಟವನು,
ತೋಳ್ವಳ್ಳಿ ತೊಳತೊಳಗಿ ತಂತಿಗಳಲಿ
ಬೆರಳುಗುಡಿಗಳ ಸೀಡಿ ಸರಳಿಸಿತು; ವಲ್ಲಕಿಯ
ಸರವು ಬಗೆಯೊಳಬಗೆಯ ಬೆರಸುತಿರಲು,
ಕರಣಪಂಚಕದಾಟ ಕಡಿಮೆಯಾಯ್ತು—ಷಷ್ಠ-
ಕರಣ 'ಸಂಗತಿ' ಗಳನು ಹಿಡಿಯೆ ಪೋಯ್ತು
ಚಿರಮೌನದಾಗಸದೊಳೊಡನೆ ಮೂಡಿತು ಮೊದಲ
ನನಸುವಾಳ್ ಕನಸಾದ ಕರಿಯ ತಾರೆ !

೩

ಅವಳ ನಿಲು, ಅವಳ ನಡೆ, ಅವಳ ಕುಂಕುಮರತ್ನ
ಥಳಥಳಿಸುತಿದ್ದ ಹೆಡೆಯಾಟ ಮೆರೆಯೆ,
ಅವಳ ಮಾರ್ದವ, ಅವಳ ಮಧುರಸುಂದರವಾಣಿ
ಕವಳಿಸಿದುವೆದೆಯನರೆನಿಮಿಷದೊಳಗೆ.
ಅಳಾದಲೆಯ ಕೂರ್ಮೆಗಿಚ್ಚುಬಂತು—ದುಃಖ-
ರಸವು ಕಣ್ಣಾಲಿಗಳ ಹಿಂದೆನಿಂತು ;
ಹಿಂದೆಹೋಗದೆ ಮುಂದೆಬರದೆ ಕೊರಳುಬ್ಬಿಸಿತು,
ಹೊಸಜೀವ ಹಳೆಯುದರ ನೆನಪುತಂತು !

೪

ರೊಕ್ಕವಿಲ್ಲದ ಬಾಳೊಳೊಕ್ಕಲಿದ್ದಳು ಗೆಳತಿ—
ಪುಣ್ಯದರಸಿತಿ ಎನ್ನಸುದತಿ—ನಾಡೆ;
ಚಿಕ್ಕವರು ನಾವಿಬ್ಬರಾಗ, ಹೊಸಹರೆಯ ತಾ-
ನುಕ್ಕಿ ಬರುತಿತ್ತು ದಿನದಿನವು ನೋಡೆ;
ಇಲ್ಲದೊಡವೆಗಳಿಂಗೆ ಕೂರ್ಮೆ ಬದಲು,—ನಮಗೆ-
ಇಲ್ಲ ಸಡೆನುಡಿಗಳೊಳಗಾವತೊಡಲು !
ಸಮರೂಪ, ಸಮಬುದ್ಧಿ, ಸಮವೃತ್ತಿ ನಮ್ಮೊಳಗೆ
ನಲವೆ ನಂದಾದೀಪವಾಯ್ತು ಮನೆಗೆ !

೫

ಓರಣದೊಳೊಪ್ಪುದೊಳಗವಳ ಕೈಗೆಣೆಯುಂಟೆ ?
ನೇರಜ್ಜೆತಲನೆತ್ತಿ ಹೊಳೆಯುತಿರಲು,
ಮೂರು ಲೋಕದ ಮಾನವತಿಯರೊಯ್ಯಾರವನು
ಬೀಳುಗಳೆದಿತ್ತವಳ ಸಂಕುಗೊರಲು !
ಚೇಲಾಂಚಲದ ಚತುರ ಚಲನೆಯಿಂದ—ಮೇಲೆ-
ಮುಡಿಸಿ ಕಟ್ಟಿದ ನೆರಿಗೆಗಚ್ಚೆಯಿಂದ
ತಾನಾಗಿ ಶಾಂತರಸ ಮೆಯ್ಗೊಂಡು ಬರುತಿಹುದೊ
ಎಂಬ ಗತಿಯಾ ಗರತಿಗೆಣೆಯದಾರು ?

೬

" ನೇಹಗುಡಿ, ನೇಹದೊಡವೊತ್ತ ನಲ್ನೇಹಿಗಳೆ,
ಸತಿಗಿಂತ ಸಖಿಯೆಂದರೊಪ್ಪು ನಿನಗೆ !
ನೋಹಿನಿಯೆ, ಮನದೊಡತಿ, ಮರೆತು ನಿನ್ನಾಣತಿಯ-
ನಕಟಗೆಯ್ದೆನೆ ಕವಡನಯ್ಯೊಗೆಳತಿ !
ಕರಣಗಳ ಕೈವಾಡಕೊಳವೆ ಚಿತ್ತ ?—ಎನ್ನ-
ಸ್ಥಿರವಾಕ್ಯವೆಂಬುದದು ಹೋಯಿತೆತ್ತ ?
ಎದೆಯುಗಾಣಿಯೆ ಸಹಿಸಲಾರೆನುಮ್ಮಳವನಾಃ
ಕೆಳೆಗೆಡನೆಸಗಿದೆನೆ? ಎನಿದೆತ್ತ !

೭

ಮಾವ-ಮಾಯಿಯರೆನ್ನ ಭಾವ-ಭಗಿನಿಯರೆಲ್ಲ
ಸಂತೋಷಸಾಗರದೊಳೀಸುತಿರಲು,
ಜೀವವೆನ್ನದು ತಲ್ಲಣಿಸಿದೆ ಸಂಕಟದೊಳಗೆ;
ಸಾವೇಕೆಬರದಯ್ಯೊ ಒಲಿದ ಕರುಳೆ!
ಸರಸಸಲ್ಲಾಪ ಸವಿನುಡಿಗಳೊಳಗೆ—ಮುದವ-
ಹರಿಸಿ ಮುದಗೊಳಿಸಬಹ ಬಿಂಕದೊಳಗೆ
ಎದೆಗೆದೆಯ ಸೇರಿಸಲು ತೋಳ್ಗೆ ತೋಳ್ಕೂಡಿಸಲು
ಚದುರೆ, ಬಿತ್ತಿಗನೆನ್ಣ ನೀನೆ ಮೊದಲು!"

೮

ಅದೊ, ಅಲ್ಲಿ ಬಾಗಿಲಲಿ ಹೊಗುತಿಹಳು ಆ ದೇವಿ;
ಅವಳ ಕಾಲುಂಗುರದ ದನಿಯ ಕೇಳು!
ಕದಲಲಾರೆನು ಕದಲದಿರಲಾರೆನಕಟಕಟ,
ನಿಗ್ರೈವೆನೇಗ್ಗೈವೆನೀಗ ಹೇಳು!
ಎಂದು ಹಮ್ಮೈಸಿ ಹಲುಬುತ್ತಲಿರಲು—ದೀನ-
ಮೌನದಾಗಸಕೊಂದು ಮಿಂಚುಬರಲು,
ಎರಳೆಗಣ್ಣಿನ ತರಳೆ ಬಳೆಸದ್ದು ಮಾಡಿದಳು,
ಕೆಳಗಿಡೆ ವಿಪಂಚಿಯನು ತವಕದಿಂದ!

೯

ಎಚ್ಚತ್ತು ಎವೆನಿಲಿಸಿ ನೋಡಿದೆನು; ನೋಡುತಿರೆ
ಸೊಗಸಳಿದ ಕೆಮ್ಮೊಗವ ಹಣುಕಿ ಹಾಕಿ
ಎದೆಯಾಳದೊಳಗೆನ್ನ ಸುಡುತಿರುವ ತಾಪವನು
ಕಂಡು ಬೆಚ್ಚಿದಳೋರೆಗಣ್ಣಿನಾಕೆ!
ನೆರೆದವರಿಗೋಸರಿಕೆಯಾಗಗೊಡದೆ—ಹೃದಯ-
ದರೆಯೊಳಗೆ ಬೈತಿಟ್ಟು ತೋರಗೊಡದೆ,
ಮನದ ಕೋಳಾಹಳವ, ಮೊಗದ ಕರಿಗಳೆಯಳವ-
ನಡಗಿಸಿದೆ ಗಂಭೀರಮುದ್ರೆಯಿಂದೆ!

೧೦

ಆ ರಮಣಿ, ಆ ಪ್ರೇಮದರಸಿ, ಮನದನ್ನೆ ಮಡಿ-
ದೀಗಳಿನ್ನೂ ಮೂರುತಿಂಗಳಾಯ್ತು;
'ಏನಿದೆತ್ತಣ ಪ್ರೇಮ, ಬಾಳಿಗೆತ್ತಣ ನೇಮ?'
ಎಂಬನುಡಿಗಾನೆ 'ಸಹಿ' ಹಾಕಿಯಾಯ್ತು!
ಬಾಳಭಂಡಾಟವಿದು ಹುಚ್ಚುಕೂಟ—ಕರಣ-
ದಾಳದೊಳಗಡಗಿರುವ ತೃಷ್ಣೆಯಾಟ!
ಪ್ರೇಮದಲೆಯನುಸರಿಸಿ ಕಾಮದಲೆಬಂದಾಯ್ತು,
ಜಗದ ಜಂಜಡ ಸುತ್ತುಗಟ್ಟಿತಂತು!

ಪ್ರೇಮಸತ್ಯವೆನಿಪ್ಪುದೆಂತಂತೆ ಕಾಮವೂ!
ಪ್ರೇಮ-ಕಾಮಗಳಮಳುಗುವರರಂತೆ!
ಕಾಮವಿದ್ದೆಡೆ ಪ್ರೇಮ, ಪ್ರೇಮವಿದ್ದೆಡೆ ಕಾಮ
ಒಂದನೊಂದಂಟಿಹವು ರಾಜಸದಲಿ!
ಇದನರಿತು ಸಂತಯಿಸಿಕೊಳಲೆ ಮನವ?—ಜಗದ-
ಚಾಪಲ್ಯಕೊಳಗಾದ ದೀನಮನವ?
ಆದರಾ ರನ್ನವನು, ಕಳೆದ ಕೈದೀಪವನು,
ಕೈಹಿಡಿದ ಗೆಳತಿಯನು ಮರೆಯೆನೆಂದೂ!

(೨೪೮ ನೆಯ ಪುಟದಿಂದ ಮುಂದುವರಿದದ್ದು.)

ಯೋಚಿಸಹತ್ತಿದೆ. "ಸರಿಯಾಗಿ ನೆನಪಿದೆಯೇ?" ಎಂದರು. 'ಇಲ್ಲ" ಎಂದೆ. "Tilden, Cochet, ಮುಂತಾದವರು ಹಿಂದುಸ್ಥಾನಕ್ಕೆ Tennis ಆಡುವುದಕ್ಕೆ ಯಾವಾಗ ಬಂದಿದ್ದರು?' ಎಂದರು. "January 1938" ಎಂದು ಥಟ್ಟನೆ ಉತ್ತರ ಕೊಟ್ಟೆ. "ನೋಡಿದಿರಾ, ನಿನ್ನೆ ರಾತ್ರಿಯಲ್ಲಿ ಊಟ ಮಾಡಿದ್ದು ನೆನಪಿಲ್ಲ. ಎರಡುವರುಷಗಳ ಹಿಂದಿನ ವಿಷಯ ನೆನಪಿನಲ್ಲಿದೆ. ಕಾರಣವೆಂದರೆ ನೀವು ಕೊಟ್ಟ ಲಕ್ಷ್ಯ. ನಿಮಗೆ ಅದರಲ್ಲಿದ್ದ ಅಭಿರುಚಿ. ನೀವು ಪ್ರತಿದಿನವೂ ತಿಂದುಂಡ ಜೀನಸುಗಳನ್ನು ನೆನಪಿನಲ್ಲಿಡಬೇಕೆಂದು ನನ್ನ ಇಚ್ಛೆ ಇಲ್ಲ. ಆದರೆ ಮುಖ್ಯ ವಿಷಯಗಳ ಕಡೆಗೆ ಗಮನವನ್ನು ಕೊಡಬೇಕು. ಎಲ್ಲ ವಿಷಯಗಳ ಜ್ಞಾಪಕವು ನೀವು ಕೊಟ್ಟ ಲಕ್ಷ್ಯ, ಮತ್ತು ನಿಮಗೆ ಅವುಗಳಲ್ಲಿದ್ದ ಅಭಿರುಚಿ ಇವುಗಳನ್ನೇ ಅವಲಂಬಿಸಿರುತ್ತದೆ." ಎಂದು ತಮ್ಮ ಅಮೌಲ್ಯವಾದ ಉಪದೇಶವನ್ನು ಮುಗಿಸಿದರು.

ಇದಾಗಿ ಆರು ತಿಂಗಳುಗಳಾದುವು. ನಾನು ಇತ್ತೀಚೆಗೆ ಯಾವ ವಿಷಯವನ್ನೂ ಮರೆತಿಲ್ಲ. ನನ್ನಂತೆಯೇ ಮರೆವಿನ ರೋಗಕ್ಕೆ ತುತ್ತಾದ ನನ್ನ ಸ್ನೇಹಿತರೆಲ್ಲರಿಗೂ ಇದರಿಂದ ಉಪಯೋಗವಾದೀತೆಂದು ನನ್ನ ಆಶೆ.

...ಾಲಿನ್‌ನ ಕೊಲೆಗಡುಕ-ತನಕ್ಕೆ ಕಾರಣವೇನು?

(ಮನೋವಿಶ್ಲೇಷಣಾತ್ಮಕ ಪರಿಚಯ)

★

ಶ್ರೀ. ಆರ್. ಎಸ್. ಕುಲಕರ್ಣಿ ಬಿ. ಎ. (ಆನರ್ಸ್)

ಸ್ಟಾಲಿನನು ಇಂದು ರಶಿಯದ ಸರ್ವಾಧಿಕಾರಿಯಾದರೂ, ಪ್ರಾಣದ ಭೀತಿ ಆತನೆದೆಯನ್ನು ಕ್ಷಣ ಕ್ಷಣಕ್ಕೂ ನಡುಗಿಸುತ್ತಲಿದೆ. ಇದಕ್ಕೆ ಕಾರಣವೆಂದರೆ ಆತನ ಕೊಲೆಗಡುಕತನ. ಆದರೆ ಆತನ ಕೊಲೆಗಡುಕತನಕ್ಕೆ ಮೂಲ-ಕಾರಣ ಯಾವುದಿರಬಹುದು?

★

ಕೊಲೆಯಲ್ಲಿ ಆನಂದವನ್ನನುಭವಿಸುವ ಸ್ಟಾಲಿನ್‌ನು

...ದ್ಧದ ಯುದ್ಧದಲ್ಲಿ ರಶಿಯವು ಯಾವ ಬಗೆಯ ಭಾಗವಹಿಸಿದೆ ...ಬುದು ಎಲ್ಲರಿಗೂ ಗೊತ್ತಿದೆಯಷ್ಟೆ! ಇಂಗ್ಲೆಂಡು ರಶಿಯ ...ಡನೆ ಸಂಧಿಮಾಡಿಕೊಂಡು ಜರ್ಮನಿಯನ್ನು ಹಣ್ಣಿಗೆ ತರಬೇ...ಮ ಪ್ರಯತ್ನಿಸಿತು; ಆದರೆ ರಶಿಯವು ಪೋಲಂಡಿನೊಳಗಿನ ...ಯದ ಭಾಗವನ್ನು ಬೇಡಿದೊಡನೆ, ಇಂಗ್ಲೆಂಡು ಪೋಲಂಡಿಗೆ ...ರಕ್ಷಣಾಶ್ವಾಸನಕೊಟ್ಟುದುರಿಂದ, ಸಂಧಿಯ ವಿಚಾರವನ್ನು ...ಂದೆ ಹಾಕುತ್ತ ಹೋಗಬೇಕಾಯಿತು. ಅಷ್ಟರಲ್ಲಿಯೆ ಹಿಟ್ಲರನು ...ಮಯಸಾಧಿಸಿ ರಶಿಯದೊಡನೆ—ಪೋಲಂಡನ್ನು ಅವರ...ಶ್ಯಾನುಸಾರವಾಗಿ ಹಂಚಿಕೊಳ್ಳುವ ಕರಾರುಗಳಿಂದ—ಒಪ್ಪಂದ ...ಾಡಿಕೊಂಡೇ ಬಿಟ್ಟ. ಆಮೇಲೆ ರುಮಾನಿಯಾದೊಳಗಿನ ಬೆಸ್-...ಬಿಯಾ ಭಾಗವನ್ನಾದರೂ ದಾಳಿಯ ಹೆದರಿಕೆ ಹಾಕಿ ಕಸಿದು...ಂಡುಬಿಟ್ಟ.

...ಇದೆಲ್ಲವನ್ನೂ ವಿಚಾರಮಾಡಿ ನೋಡಿದರೆ, ರಶಿಯವು ಕೂಡ ...ದು ಜಾಣಾಕ್ಷವೂ ಬಲಾಢ್ಯವೂ ಆದ ರಾಷ್ಟ್ರವಿದೆಯೆಂಬುದು ...ತ್ತಾಗದಿರದು. ಇಂತಹ ಬಲಾಢ್ಯರಾಷ್ಟ್ರದ ಅಂತರಾಂತರಿಕ ...ಸ್ಥಿತಿವು ಹೇಗಿದೆಯೆಂಬುದು ಗೊತ್ತಿದೆಯೇ?

...ರಶಿಯನ್ ಕ್ರಾಂತಿಯ ರಕ್ತಪಾತವು ಅಷ್ಟೊಂದು ಕಾತರಭಾವ...ನ್ನುಂಟುಮಾಡಲಿಲ್ಲ; ಏಕೆಂದರೆ ಹೊಸ ಸಮತಾವಾದದ ...ಸಿತವು, ತನ್ನ ಅಧಿಕಾರವನ್ನು ರಕ್ತಪಾತದಿಂದಲೆ ದೃಢಪಡಿ...ಿ ಆದುದರಿಂದಲೆ ಅಲ್ಲಿಯ ಕ್ರಾಂತಿಯು ಯಾರಿಗೂ ಅಷ್ಟೊಂದು ...ೈರ್ಯವನ್ನುಂಟುಮಾಡುವಂತೆ ಇರಲಿಲ್ಲ. ಕ್ರಾಂತಿಯನಂತರ ...ಸ್ಥಿರವಾದ ಶಾಂತಿಕಾಲವೊದಗಿತು.

ಲೆನಿನ್‌ನು ತನ್ನ ಗೋರಿಯನ್ನು ಸೇರಿ ಚಿರಶಾಂತಿಯನ್ನೈದಿದಾಗ, ಸ್ಟಾಲಿನ್ನನೇ ಮುಂದೆಬಂದು ಬಹುತ್ವಯದಿಂದ ರಾಜ್ಯ-ಸೂತ್ರಗಳನ್ನು ವಹಿಸಿಕೊಂಡನು. ಮುಂದೆ ರಶಿಯವು ಉಳಿದ ರಾಷ್ಟ್ರಗಳಿಂದ ಬಹಿಷ್ಕೃತವಾಗದೆ, ತನ್ನ ಬಲದಿಂದ ರಾಷ್ಟ್ರ-ಸಂಘದ ಘಟಕಗಳಲ್ಲಿ ಒಂದಾಯಿತು. ಈಗ ಪ್ರಶಾಂತ ಮನಸ್ಸಿನವನಾದ ಜೊಸೆಫ್ ಸ್ಟಾಲಿನ್‌ನೇ ರಾಷ್ಟ್ರನೌಕೆಯ ಗತಿಸೂಚಕನಾಗಿದ್ದಾನೆ. ಲೆನಿನ್‌ನ ಹೊಸ ಸಮಾಜರಚನೆಯು ಕಸಸು ಅವನ ಸೇನಾಧಿಪತಿಯಿಂದ ನನಸಾಗುವ ಲಕ್ಷಣಗಳು ತೋರಿದುವು; ಆ ಮೇಲೆ ಮಾತ್ರ ವಿಲಕ್ಷಣಪರಿಸ್ಥಿತಿ ಒದಗಿತು.

* * *

ಲೆನಿನ್‌ನ ತರುವಾಯ ಆತನ ಮೊದಲಿನ ಸಹಾಯಕರು ಕೆಲವರು ಕಣ್ಮರೆಯಾದರು, ಇನ್ನು ಕೆಲವರು ಗಡಿಪಾರಾದರು, ಮತ್ತೆ ಕೆಲವರು ಗುಂಡಿಗೆ ತುತ್ತಾದರು. ತೀವ್ರ ಕ್ರಾಂತಿಕಾರಕ ಸಮತಾವಾದದ ಉಪದೇಶಕರು, ಸಂಬಲಸರ್ಹವಾದ ತಪ್ಪು-ಒಪ್ಪಿಗೆಯ ನಿರ್ಣಯದ ನಾಟಕದಲ್ಲಿ ದುರಂತನಾಯಕರಾಗಿ ಹೋದರು. ಎಲ್ಲೆಲ್ಲಿ ನೋಡಿದರೂ ಸ್ಟಾಲಿನ್‌ನ ಕಾರ್ಯಚಿಂತಕರು, ರಾಜದ್ರೋಹಾರೋಪಣೆಯ ಮೇಲೆ, ಜನರನ್ನು ಮನೆಯಿಂದಲೂ ಉದ್ಯೋಗದಿಂದಲೂ ತಳ್ಳಿ ಹಾಕಿದರು. ಪ್ರತಿದಿನವೂ "ಮುಷ್ಕರವು ಹಣ್ಣಾಯಿತು" "ರಾಜದ್ರೋಹ" ಮುಂತಾದ ತಲೆಬರಹಗಳು ವರ್ತಮಾನಪತ್ರಗಳಲ್ಲಿ ಬರತೊಡಗಿದುವು. ನೂರು-ನೂರುಗಟ್ಟಲೆಯಾಗಿ ಜನರನ್ನು ಗಲ್ಲಿಗೆ ಹಾಕುವುದೂ ಗಡಿಪಾರುಮಾಡುವುದೂ ನಡೆಯಿತು. ರಶಿಯವು ಇಂತಹ ಭಯಗಳನ್ನೆದುರಿಸಲು ಪಳಗಿದ್ದ

ಮೇಲ್ತರಗತಿಯ

ಹೆಳುಕು (Concentrated) ಬಣ್ಣಗಳು

- ಬರೆಯುವ ಮಸಿಗಳು
- ಟಾಯಿಪ್‌ರಾಯಿಟಿಂಗ್ ರಿಬನ್ನುಗಳು
- ಸಾಬೂನುಗಳು
- ಮಿಠಾಯಿಗಳು

ಇವುಗಳನ್ನೆಲ್ಲ ತಯಾರಿಸುವುದಕ್ಕೆ ಬಳಸುವ ಬಣ್ಣಗಳು. ವಿಶೇಷವಿವರಗಳಿಗಾಗಿ ಇಂಗ್ಲಿಷ್ ಭಾಷೆಯಲ್ಲಿ ಬರೆದು ಕೇಳಿಕೊಳ್ಳಿರಿ.

ಕ್ರಿಪ್ಸಾಗ್ ಲಿಮಿಟೆಡ್,

ಪೋ. ಬಾ. ಸಂ. ೨೧೦, ಮುಂಬಯಿ.

ನಾದಾಗಿದ್ದರೂ ಈ ಸಲ ನಡುಗಿತು. ಜಗತ್ತೆಲ್ಲವೂ ನಡುಗಿ ತಲೆ ಅಲ್ಲಾಡಿಸಿತು. ಸೋವ್ಹಿಯಟಿನ ಗೌರವವು ನುಗ್ಗುನುರಿಯಾಗ ತೊಡಗಿತು. ಆದರೂ ವಿಚಾರಣೆ, ತಪ್ಪು ಒಪ್ಪಿಗೆ ಮತ್ತು ಗಲ್ಲು ಹಾಗೆಯೇ ನಾಗಿದುವು. ರಶಿಯುಕ್ಕೆ "ಭೀಕರ ಇವಾನನ" * ನೆನ ಪಾಯಿತು. ಸೋವ್ಹಿಯೆಟ್ ರಶಿಯುದ ಸಹಾಯಕರೂ, ಹಿತಚಿಂತ ಕರೂ ಕೂಡ ಈ ಕ್ರೂರರಾಜ್ಯದ ಉತ್ಕರ್ಷಕ್ಕಾಗಿ ನಿರುತ್ತರ ರಾದರು. ಈ ಭಯಂಕರ ಕೊಲೆಯನ್ನು ಕುರಿತು ಯಾರೂ ಮಾತ ನಾಡಲಿಲ್ಲ. ಹೊಸ ರಾಜ್ಯ ಸ್ಥಾಪಿಸಿ ೨೦ ವರುಷಗಳಾದ ಮೇಲೆಯೂ, ಈ ರೀತಿಯ ಭೀತಿಯ ಆವೇಶಕ್ಕೆ ಕಾರಣವೇನು ?

ಕೆಲವರು ಇದು ಸಹ್ಯದ ಉಗ್ರ ಕ್ರಾಂತಿಕಾರಕ ಸಮತಾವಾದ ದಲ್ಲಿ ಅಡಗಿದೆಯೆಂದೂ, ಮತ್ತೆ ಕೆಲವರು ಅಲ್ಲಿಯ ಕೊಲೆಗಡುಕ ಸರ್ವಾಧಿಕಾರಿಯ ವ್ಯೆಯಕ್ತಿಕಜೀವನಕ್ಕೆ ಇದು ಸಂಬಂಧಿಸಿದೆ ಯೆಂದೂ ವಾದಿಸಿದರು. ರಾಜಕೀಯ ದೃಷ್ಟಿಯಿಂದ ಈ ರೀತಿಯ ನರಹತ್ಯಕ್ಕೆ ಅರ್ಥವೇ ಆಗುವುದಿಲ್ಲ. ಮನುಷ್ಯತ್ವದ ದೃಷ್ಟಿ ಯಿಂದಂತೂ ಇದು ಸ್ವಲ್ಪವೂ ಒಳ್ಳೆಯದಲ್ಲ.

ರಾಜದ್ರೋಹಕ್ಕೊಳಪಟ್ಟವರಿಗೂ ಆಡಳಿತದಲ್ಲಿರುವ ರಾಜ- ಕೀಯ ಪಕ್ಷಕ್ಕೂ ಆಗದಿರಬಹುದು; ಆದರೆ ಅವರು ಅಪಮಾನ ಕಾರಕ ತಪ್ಪುಒಪ್ಪಿಗೆಗಳಿಂದ ತಮ್ಮನ್ನು ತಾವೇ ಮಾನ ಗೊಳಿಸಿಕೊಳಬೇಕೆ? ಕಳ್ಳನು ತಾನು ನಿರ್ದೋಷಿಯೆಂದು ಸಕ್ಷ ವಾಗಿ ಪ್ರತಿಪಾದಿಸಬಹುದು; ಆದರೆ ಸ್ಟಾಲಿನ್‌ನ ಕೈದಿ ಮಾತ್ರ ಸ್ವಂತದ ರಕ್ಷಣೆಯ ಸಲುವಾಗಿ ಒಂದು ಶಬ್ದವ ಆಡುತ್ತಿರುವುದಿಲ್ಲವಲ್ಲ !

ರಶಿಯುದ ಬಲವನ್ನು ಜಗತ್ತು ಭೀತಿಯಿಂದಲೂ ಕ್ಷ ದಿಂದಲೂ ನೋಡುತ್ತಿದೆ. ಜರ್ಮನಿ, ಇಟಲಿ, ಜಪಾನ್ ಮುಂ ಪ್ರಬಲ ರಾಷ್ಟ್ರಗಳಿಗೆ ಸರಿಸಮಾನವಾಗಿದೆ ಈ ರಾಷ್ಟ್ರ. ಇ ಮಾತೃಭೂಮಿಯ ಸಲುವಾಗಿ ತಮ್ಮ ರಕ್ತವನ್ನೇ ಧಾರೆಯೆರೆ ಸಿದ್ಧವಿರುವ ರಶಿಯುದ ಸೈನಿಕರನ್ನು ನೀಚರಾದ ರಾಜದ್ರೋ ಗಳೆಂದು ಕರೆಯಲಿಕ್ಕಾದೀತೆ? ಆದರೂ ನಿರಪರಾಧಿಗಳಾದ ಜನ ನಾಯಕರೂ ಒಬ್ಬ ಮುಖ್ಯ ಸೇನಾಧಿಪತಿಯೂ, ಸ್ವ ಮಾನದ ವಿಚಾರಣೆಯಿಲ್ಲದಲೇ ತಪ್ಪುಗಾರರೆಂದು ತಲೆ ಹ ಯಲ್ಪಟ್ಟರು.

ಉಗ್ರ ಸಮತಾವಾದಿಗಳ ತತ್ತ್ವವನ್ನು ನಾವು ಒಪ್ಪದಿದ್ದ ಆ ವಾದದ ಧುರೀಣರ ಅಂತಶ್ಶುದ್ಧಿಯನ್ನು ನಾವು ನಂಬಲೇಬೇ ಹೊಸ ಯುಗವನ್ನು ಪ್ರಾರಂಭ ಮಾಡಲು ಹವಣಿಸುವವ ಯಾವುದೊಂದು ಬಿಕ್ಕಟ್ಟಿಗೊಳಗಾದರೂ ತಮ್ಮ ಧ್ಯೇಯ ವಿಶ್ವಾಸಘಾತಿಗಳಾಗಿ ನಡೆಯುವುದು ಸಂಭವನೀಯವೆ ?

ಆದುದರಿಂದಲೆ ಎನ್ನಬೇಕಾಗುವುದು: 'ಸಮತಾವಾ ರಶಿಯುದಲ್ಲಿ ಏನೋ ಕುಂದು ಇದೆ' ಎಂದು. ಇಂದು ರಶಿ ಕಡೆಗೆ ನೋಡುವ ವಿಚಾರಿಗಳಾದ ನಿರೀಕ್ಷಕರಿಗೆ 'ರಶಿ ಮುಖ್ಯಾಧಿಕಾರಿಗೋ, ಅವನ ಆಡಳಿತಕ್ಕೊಳಪಟ್ಟವರಿಗೋ ಹು ಹಿಡಿದಿದೆ' ಎಂದು ಎನಿಸದೆ ಇರಲಾರದು.

* * *

ಇತ್ತೀಚೆಯ ಹೊಸ ಶೋಧದ ಪ್ರಕಾರ, ಜೋಸೆಫ್ ಸ್ಟಾಲಿ ಆತ್ಮದಲ್ಲಿಯೇ ಅದಾವುದೋ ಒಂದು ಭೀಕರ ಪ್ರಚೋದನೆ ಎಂದು ಗೊತ್ತಾಗುವುದು. ಅವನೊಮ್ಮೆ ಪ್ರಶಾಂತನಾಗಿಯ ಒಳ್ಳೆಯ ಮನಸ್ಸಿನವನಾಗಿಯೂ ಇದ್ದ. ಮೊದಮೊದಲು ಆಕರ ಹೀಗೆಯೇ ಇದ್ದು, ಲೋಕಾನುರಾಗವುಳ್ಳವರಾಗಿ, ಕೊನೆಗೆ ಕೊಲೆ ಕರಾದ ನಿರಂಕುಶ ಪ್ರಭುಗಳಾಗಿದ್ದುದು ಇತಿಹಾಸದಲ್ಲಿ ಎಷ್ಟೆ ಸಲ ಕಂಡುಬರುವದು. ನೀರೋನ* ಸಮಕಾಲೀನರು ಕ ಮೊದಮೊದಲು ಆತನನ್ನು ಆಶಾವಾದಿಯಾದ ತರುಣನೆಂದೇ ಬ ಸಿದರು. ಟಿಬರಿಸ್‌ನಲ್ಲಿ* ವಿಷವೃಕ್ಷದ ಮೊಳಕೆ ಏಳ ಮೊದಲು ಆತನು ಕೂಡ ರೋಮದ ಶ್ರೇಷ್ಠ ಸಮ್ರಾಟನೆ ಎಣಿಸಲ್ಪಟ್ಟನು. ನೀರೋ ಮತ್ತು ಟಿಬರಿಸ್ ಇವರಿಬ್ಬರ ಕ್ರೂ ಚರಿತ್ರಕ್ಕೆ ಅವರಿಗಿದ್ದ ಒಂದು ಬಗೆಯ ಮಾನಸಿಕ ರೋಗವೆ ಕಾ ವಾಗಿದೆ. ಪ್ರಾರಂಭದಲ್ಲಿ ಇವರಿಬ್ಬರೂ ತಮ್ಮ ಕ್ರೂರಕೃತ್ಯಗಳ ರಾಜಕೀಯದೃಷ್ಟಿಯಿಂದ ಸರಿಪಡಿಸಿಕೊಂಡರೂ, ಕ್ರೌರ್ಯ

---

* ಹಿಂದೆ ಇದೇ ದೇಶದಲ್ಲಿ ಆಳಿದ ಒಬ್ಬ ಕ್ರೂರನಾದ ದೊರೆ.

* ಇವರಿಬ್ಬರೂ ಪ್ರಾಚೀನ ರೋಮದಲ್ಲಾಳಿದ ದೊರೆಗಳು.

ದ ಹಾಗೆಲ್ಲ ಅವರು ಅದಕ್ಕೆ ತೋರಿಸಿದ ಬಹಿರಂಗ ಕಾರಣ ಕ್ಷುಲ್ಲಕವಾಗಿ ಕಂಡುವು. ಇಂಥವರಿಗೆ ಸೇಡಿಸ್ಟ್ (Sadist) ಪು ಹೆಸರು. 'ಸೇಡಿಸ್ಟ್' ಎಂದರೆ ನಿಷ್ಕಾರಣ ಪರಪೀಡನಾ ತೋಷಿಗಳು. ಇವರಲ್ಲಿ ಕ್ರೌರ್ಯದ ತೃಷ್ಣೆ ಯಾವಾಗಲೂ ರಿಯುವುದು; ಸ್ಟಾಲಿನ್‌ನ ವಿಷಯವೂ ಹೀಗೆಯೆ ಇರಬಹುದೆ? ಮಾನಸಶಾಸ್ತ್ರದ ಹೊಸ ಶೋಧದ ಪ್ರಕಾರ ಇಂತಹ ಸ್ವೇಚ್ಛೆ- ಗೆ ಅಂತರೀಕವಾದ ದುರ್ಬುದ್ಧಿ ಕಾರಣವಾಗಿರದೆ, ಮಕ್ಕಳಿ ಗ ಅನುಭವಿಸದ ದುಃಖ, ಗ್ರಂಥಿಗಳ ಅವ್ಯವಸ್ಥೆ, ಆನುವಂಶಿಕ ರತೆ, ಮಾನಸಿಕ ಆಘಾತ ಅಥವಾ ಇನ್ನಾವುದೊ ಗೊತ್ತಾಗ ತಹ—ಹತ್ತಿಕ್ಕಿದ—ಅಂತರಿಕವಾದ ರೋಷಮಯ ಉದ್ವೇಗ ಮೊದಲಾದು ಗಳು ಕಾರಣಗಳಾ ವು ವೆಂದು ಯುವುದು. ರಿಯವರಿಗೆ ತ್ತಾಗದೆ, ಆ ಗೆ ಕೂಡ ತಿಳಿ ದೆ, ಪರಪೀಡನಾ ತೋಷಿಗಳ ಮನ ಅವ್ಯಸ್ಥಿತ ರ್ಯ ಭಾಗಗಳು, ಮ್ಮೆ ಲೇ ಆ ಕ್ತಿಯ ಕಾರ್ಯ- ಗದಲ್ಲಿ ಇಳಿಯಲು ವಾಗಿರುವುವು. ಹತ್ತಿಕ್ಕಿದ ಭಾವ- ಗಳ ಪ್ರಚೋದನೆ ಮ್ಮೆ ಹೊರಕ್ಕೆ ಗ್ಗಿದರೆ ಸಾಕು; ವ್ಯಕ್ತಿಯನ್ನು ದಾಸನನ್ನಾ ಮ ಮಾಡಿಕೊ ವುದು. ಇಂತಹ ವ್ಯಕ್ತಿಯನ್ನು ಸಾಕಷ್ಟು ಬಲುಹಿನಿಂದ ಯುದಿದ್ದರೆ, ನಿಜವಾಗಿಯೂ ಲೋಕದಲ್ಲಿ ಅನರ್ಥಗಳಾಗುವುವು. ನಿರಂಕುಶಾಧಿಪತ್ಯದಲ್ಲಿ ಸೀರ್ಝರನಾಗಲಿ ಝಾರನಾಗಲಿ ಲಿನ್‌ನಗೆ ಕಡಿಮೆಯೇ? ಈ ಹೊತ್ತು ಭೂಮಿಯ ೩ ಭಾಗದಲ್ಲಿ ಸಿದ ೧೭೦೦ ಲಕ್ಷ ಜನರು ಸ್ಟಾಲಿನ್‌ನ ಕೈಗೊಂಬೆಗಳಾಗಿ ರೆ. ಆದುದರಿಂದ ರಶಿಯವನ್ನೇ ರಕ್ತದಲ್ಲಿ ಮುಳುಗಿಸಿ, ಗರಿಕತೆಯನ್ನು ಮರುಕಳಿಗೆ ತರುವುದಕ್ಕೆ ಮುನ್ನ, ಲಿನ್‌ನ ನಿಷ್ಕಾರಣ ಪರಪೀಡನೆಗೆ ಕಾರಣ ಹುಡುಕಿ, ಅದನ್ನು ರುಸಹಿತ ಕಿತ್ತೊಗೆಯುವ ಅಧಿಕಾರ ಜಗತ್ತಿನ ಹಿತೈಷಿಗಳಿಗಿದೆ.

* * * *

ಸ್ಟಾಲಿನ್‌ನ ತಂದೆ ಸರೆಗುಡುಕನಾದೊಬ್ಬ ಮೋಚೆಗಾರ. ಒಮ್ಮೆ ತನ್ನ ಕುಡಿತದ ಆವೇಶದಲ್ಲಿ ಆತ ತನ್ನ ಮಗನನ್ನು ಸಾಯುವಹಾಗೆ ಹೊಡೆದನು. ಹಾಗೆ ಹೊಡೆಯುವಾಗ ಅವನು ತನ್ನ ಕಸಬಿನ ಉಪಕರಣಗಳನ್ನು ಉಪಯೋಗಿಸಿದುದರಿಂದ, ಹುಡುಗನ ಮೈತುಂಬ ಗಾಯಗಳಾಗಿ ನೆತ್ತರು ಚಿಮ್ಮಿತು. ಆತನ ತಾಯಿ ಸರಿಯಾದ ವೇಳೆಗೆ ಬಂದುದರಿಂದ, ಮಗನನ್ನು ಹೇಗೋ ಉಳುಹಿಕೊಂಡಳು.

ಸ್ಟಾಲಿನ್‌ನ ತಂದೆ ಕುಡಿತದಿಂದಲೆ ತೀರಿದ. ಸ್ಟಾಲಿನ್‌ನ ಮೋರೆಯ ಮೇಲಿರುವ ಸಿಡುಬಿನ ಕಲೆಗಳಿಗಿಂತ ಆತನ ಮನಸ್ಸಿನ ಮೇಲೆ ಮೂಡಿದ ಆತನ ತಂದೆಯ ಹೊಡೆತದ ಕಲೆಗಳು ಬಲವಾದುವುಗಳಾಗಿವೆ. ಸ್ಟಾಲಿನ್‌ನು ಹುಟ್ಟಿದ ಜಿರೋಜಿಯಾ ಎಂಬಲ್ಲಿಯ ಕಿರಿಲ್ ಕಾಕಾಬಡ್ಸೆ ಎಂಬೊಬ್ಬ ಸರಕಾರಿ ಅಧಿಕಾರಿಯಿಂದ ಈ ಸಂಗತಿಯು ತಿಳಿದು ಬಂದಿದೆ.

ಸ್ಟಾಲಿನ್‌ನ ರಾಜನೀತಿ



ಸ್ಟಾಲಿನ್:— ಲೆನಿನ್ನರ ಪರಿವಾರದಲ್ಲಿ ಇನ್ನು ಯಾರು ಉಳಿದಂತಾಯಿತು?
ಒಬ್ಬ ಸೊಪ್ಪಿಯಿಟ್ಟನ ಅಧಿಕಾರಿ:— ಎಲ್ಲರೂ ತಮ್ಮ ಆಜ್ಞೆಗೆ ಆಹುತಿಯಾದರು.
ಇನ್ನು ಉಳಿದವರೆಂದರೆ ತಾವು ಒಬ್ಬರೆ ಒಬ್ಬರು!

ಆ ಅಧಿಕಾರಿಗೆ ಸ್ಟಾಲಿನ್‌ನ ರಾಷ್ಟ್ರ ನೇತೃತ್ವದಲ್ಲಿ ದೊಡ್ಡದೊಂದು ಹುದ್ದೆ ಸಿಕ್ಕಿತು. ಒಮ್ಮೆ ಇಬ್ಬರೂ ಪರದೇಶಕ್ಕೆ ಹೋಗಬೇಕಾಯಿತು. ಆಗ ಕಿರಿಲ್ ಕಾಕಾಬಡ್ಸೆಯು ರಶಿಯಕ್ಕೆ ಹಿಂದಿರುಗಲು ಒಪ್ಪದುದರಿಂದ ಆತನಿಗೆ ದೇಹಾಂತಶಿಕ್ಷೆಯಾಗಿ ಬಿಟ್ಟಿತು. ಆದುದರಿಂದಲೇ ಆತ ಹೊರಗೆಯೆ ಇದ್ದುಕೊಂಡು, ಸ್ಟಾಲಿನ್‌ನ ಕಾರುಣ್ಯದ ವಿಚಿತ್ರ ಕಥೆಗಳನ್ನು ಒಂದೊಂದಾಗಿ ಹೇಳುತ್ತಿದ್ದಾನೆ. ಈತನೊಬ್ಬನನ್ನು ಬಿಟ್ಟರೆ ಸ್ಟಾಲಿನ್‌ನ ವಿಷಯದಲ್ಲಿ ನಿಜಸಂಗತಿಯನ್ನರಿತವರು ಯಾರೂ ಇಲ್ಲವೆಂದು ಹೇಳಬಹುದು. ಏಕೆಂದರೆ ಅರಿತ ಕೆಲವರು ಕೈದಿಗಳಾಗಿದ್ದಾರೆ; ಉಳಿದವರು ಮಡಿದು ಹೋಗಿದ್ದಾರೆ. ರಶಿಯದ ವಿಷಯದಲ್ಲಿರುವ ಇಂತಹ ಪ್ರಿಯಾಪ್ರಿಯ ಸುದ್ದಿಗಳನ್ನು ನಾವು ಸೋಸಿನೋಡುವುದೇ ಒಳ್ಳೆಯದು. ಆ ಅಧಿಕಾರಿಯ ಈ ತೆರದ ನೆನಪುಗಳು ಸ್ಟಾಲಿನ್‌ನ ಕೃತ್ಯಗಳಿಗೆ ಹೊಂದಿಕೆಯಾಗಿರದಿದ್ದರೆ ಅವನ್ನು ಬಿಟ್ಟು ಬಿಡುವುದೇ ಒಳಿತು!

ಪಾಲಕರ (ಮಕ್ಕಳ ವಿಷಯಕ್ಕಿರುವ) ದುಷ್ಟವರ್ತನದ ಮೂಲಕ ಕೆಲವು ಸಲ ಅವರ ಮಕ್ಕಳ ಆಂತರಿಕ ಜೀವನವು ವಿಕಾಸಶಕ್ತಿರಹಿತ

ವಾಗಿ ಮುಗ್ಗಿ ಹೋಗುವುದು. ಸ್ಟಾಲಿನ್‌ನ ಹೆಸರೇ ಸೂಚಿಸುವ ಹಾಗೆ ಆತನ ಬಾಲ್ಯಾನುಭವವು ಆತನನ್ನು ನಿರ್ದಯನನ್ನಾಗಿ ಮಾಡಿದೆ. ತಕ್ಕುತನದಿಂದಲೂ, ಕ್ರೌರ್ಯದಿಂದಲೂ ಆತ್ಮರಕ್ಷಣೆ ಮಾಡಿಕೊಳ್ಳಲು ಬಾಲ್ಯದಲ್ಲಿಯೇ ಪಾಠಕಲಿತಿರುವನು. ಇಂತಹ ದುಃಖಮಯವೂ ಅಪಮಾನಕಾರಕವೂ ಆದ ಬಾಲ್ಯಾನುಭವವು, ಆತನನ್ನು ಕೀಳುಪ್ರವೃತ್ತಿ(ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್)ಯಿಂದ ಮುಕ್ತನನ್ನಾಗಿ ಮಾಡಿದೆ. ಆ ಗುಣವೇ ಆತನನ್ನು ಆತನ ಪರಿವಾರದ ಎಲ್ಲ ಜನರಿಗಿಂತಲೂ ಮಾನಸಿಕಯೋಗ್ಯತೆಯಲ್ಲಿ ಶ್ರೇಷ್ಠನನ್ನಾಗಿ ಮಾಡಿದೆ.

ಸ್ಟಾಲಿನ್‌ನ ತಾಂಡವನೃತ್ಯ ಅಷ್ಟಕ್ಕೇ ಮುಗಿದಿದ್ದರೆ ರಶಿಯವು ಇನ್ನು ಮೇಲಾದರೂ ಸುಖ-ಶಾಂತಿಗಳನ್ನು ಹೊಂದಬಹುದಾಗಿತ್ತು. ಕಠೋರತೆ,ಮೋಸಗಾರಿಕೆ ಇವು ರಾಜಕಾರ್ಯಜ್ಞನಿಗೆ ಅವಶ್ಯವಾದ ಗುಣಗಳಿದ್ದರೂ, ಇತ್ತೀಚೆಯ ಕೆಲವು ಘಟನೆಗಳಿಂದ ಸ್ಟಾಲಿನ್‌ನು ತನ್ನ ವೈಶಾಚ್ಯಮನೋವಿಕಾರದ ತೃಷ್ಣೆಗೆ ದೇಶದ್ದ ಹಿತವನ್ನೂ ರಾಜ್ಯಸೂತ್ರದ ತತ್ತ್ವಗಳನ್ನೂ ಕೂಡ ಬಲಿಕೊಡುತ್ತಿರುವನೆಂದು ತಿಳಿದುಬಂದಿದೆ. ಇಂತಹ ದುಷ್ಟ ಸ್ವಭಾವದಿಂದ ಆತನ ಆತ್ಮಕ್ಕೆ ಯಾವುದೋ ಒಂದು ಅನಾರೋಗ್ಯಕರವಾದ ಸಮಾಧಾನವಾಗು ವುದೆಂದು ನಂಬಲೇ ಬೇಕಾಗಿದೆ.

ಕೈದಿಗಳನ್ನು ಕೊಲೆಮಾಡುವುದರಿಂದಷ್ಟೇ ಸಮಾಧಾನಗೊಳ್ಳದೆ ಸ್ಟಾಲಿನ್‌ನು, ಬೆಕ್ಕು ಇಲಿಯೊಡನೆ ಆಟವಾಡಿದ ಹಾಗೆ ಮಾಡುವನು. ಈಪೊತ್ತು ಕೆಲವರಿಗೆ ಬಂಧನ; ನಾಳೆಯೇ ಅವರಿಗೆ ಬಿಡುಗಡೆ. ಮತ್ತೆ ಅವರನ್ನು ಹಿಡಿಯುವನು, ಬಿಡುವನು. ಹೀಗಾಗಿ ಕೊನೆಗೆ, ಅವರ ಅಂತ್ಯಕಾಲಕ್ಕೆ ಮೊದಲು, ಅವರನ್ನು ತಮ್ಮಷ್ಟಕ್ಕೆ ತಾವೇ ಅಪಮಾನಕಾರಕವಾದ ತಪ್ಪುಒಪ್ಪಿಗೆಯಿಂದ ಹೀಯಾಳಿಸಿ-ಕೊಳ್ಳುವ ಹಾಗೆಯೂ, ತಮ್ಮ ತಲೆಕೊಡೆಯುವವನನ್ನು ಬಹಿರಂಗವಾಗಿ ಸ್ತುತಿಸುವ ಹಾಗೆಯೂ ಒತ್ತಾಯಪಡಿಸುವನು. ಸ್ಟಾಲಿನ್‌ನ ಗೂಢಚಾರರು ಕೈದಿಗಳಿಗೆ ಮಾದಕಪೇಯಗಳನ್ನು ಕೊಡುವರೆಂದೂ, ಹೊಸ ಹೊಸ ರೀತಿಯ ಶಿಕ್ಷೆಗಳಿಗೆ ಗುರಿಮಾಡುವ ರೆಂದೂ ಕೆಲವರ ಅಭಿಪ್ರಾಯ. ಇವೆಲ್ಲ ಸಾಧ್ಯವಾಗದೆ ಇದ್ದಲ್ಲಿ, ಪೊಳ್ಳುಕ್ಷಮೆಯಿಂದ ಅಥವಾ ಸೆರೆಯಾಳುಗಳ ಹೆಂಡಿರು-ಮಕ್ಕಳಿಗೆ ಭೀತಿಯುಂಟಾಗುವಂತೆ ಮಾಡುವುದರಿಂದ, ವಿರೋಧಿಗಳನ್ನು ಹಣ್ಣು ಮಾಡುವನು. ಇಷ್ಟಾದರೂ ಅವರು ಬಗ್ಗದಿದ್ದರೆ ಸೆರೆಮನೆ ಯಲ್ಲಿಯೇ ಅವರು ಸಾಯಬೇಕಾಗುವುದು. ಕೆಲವರು ಮಾತ್ರ ತಮ್ಮ ಮನಸ್ಸಿಗೆ ವಿರುದ್ಧವಾಗಿ ಸ್ಟಾಲಿನ್‌ನ ಶಾಸನದಂತೆ ನಿರಾಧಾರವಾದ ತಪ್ಪುಗಳನ್ನು ಒಪ್ಪಿಕೊಳ್ಳುವರು. ಸ್ಟಾಲಿನ್‌ನ ಗೆಳೆಯರು ಕೂಡ ಆತನ ಪ್ರತಿಹಿಂಸೆಯ ಸ್ವಭಾವವನ್ನು ಒಪ್ಪುವರು. ಅವನ ದೃಷ್ಟಿ ಸಂಕುಚಿತ; ಕ್ಷಮಾಗುಣವು ಅವನಿಗೆ ಗೊತ್ತೇ ಇಲ್ಲ. ಅವನಿಗೆ ಅಪಮಾನ ಮಾಡಿದರೆ, ಅದರ ನೆನಪು ಅವನಲ್ಲಿ ವಜ್ರ-ಲೇಪದಂತೆ ಉಳಿಯುವುದು. ಇಷ್ಟೆಲ್ಲ ಸಂಗತಿಗಳಲ್ಲಿ ಅತಿಶಯೋಕ್ತಿ ಯಿದೆಯೆಂದೂ ಸ್ವಚ್ಛಂದದ ಕೊಂಕುಗಳಿವೆಯೆಂದೂ ತಿಳಿದರೂ, ಸ್ಟಾಲಿನ್‌ನು ನಿಷ್ಕಾರಣಪರಪೀಡನಾಸಂತೋಷಿಯೆಂಬುದನ್ನು ಮಾತ್ರ ಯಾರೂ ನಂಬಬಹುದಾಗಿದೆ.

ಈ ತೆರದ ಕ್ರೌರ್ಯ ಸ್ಟಾಲಿನ್‌ನ ಬಾಹಿರಂಗಿಕ ಜೀವನಕ್ಕೆ ಅಂಟಿಕೊಂಡಿಲ್ಲವೆಂದು ಕೆಲವರು ಒತ್ತಿಹೇಳುವರು. ಮ... ಶಾಸ್ತ್ರಜ್ಞರು ಸಾಮಾನ್ಯವಾಗಿ ಇಂತಹ ಸಂಧಿಸುವಿಕೆಗೆ ಸ್ವಾ... ರಹಿತವಾದ ಮಾನಸಿಕ ಅವಸ್ಥೆಗಳೇ ಕಾರಣಗಳೆಂದು ಹೇಳುವ... ಹುಡುಗತನದಲ್ಲಿಯ ತಂದೆಯ ಹೊಡೆತಗಳು ತಾರುಣ್ಯಾವಸ್ಥೆ... ಕೂಡ ಆತನ ಜೀವನದಲ್ಲಿ ಪರಿಣಾಮಕಾರಿಯಾಗಿರಬಹು... ದುಃಖಮಯವಾದ ಆ ಅನುಭವವು ಲೈಂಗಿಕ-ಉದ್ವೇಗ... ಜಟಿಲವಾಗಿ ಹೆಣೆದುಕೊಂಡಿರಬಹುದು. ಇಂತಹ ಜೀ... ಪರಹಿಂಸೆಯನ್ನು ಮಾಡಿದ ವಿನಾ ಉತ್ತರೋತ್ತರ ವೃದ್ಧಿ... ಹೊಂದಿದಂತೆ ಎನಿಸುವುದೇ ಇಲ್ಲ. ಈ ಹಿಂಸೇಚ್ಛೆ ಬಹುತ... ಬಾಲ್ಯದ ಕೆಟ್ಟ ಅನುಭವದಲ್ಲಿ ಹುದುಗಿರುವುದು. ಇವೆಲ್ಲ ದು... ಣಾಮಗಳು ಸ್ಟಾಲಿನ್‌ನ ಮಾನಸಜೀವನದಲ್ಲಿ ಹೊ... ಆತನನ್ನು ಭೀಕರನನ್ನಾಗಿ ಮಾಡಿವೆ.

ಸ್ಟಾಲಿನ್‌ನಂತಹ ಮನಃಪ್ರವೃತ್ತಿಯುಳ್ಳವರು ಎಷ್ಟೋ ಜ... ಬಹುದು. ಆದರೂ ಕಾಯಿದೆಯ ಬಂಧನವಿರುವುದರಿಂದ ... ಪ್ರವೃತ್ತಿಗಳು ಅಷ್ಟು ಪ್ರಜ್ವಲಿಸುವುದಿಲ್ಲ. ವಿಧಿಯ ಅಂಕು... ಸಂಕಲೆ ಕಿತ್ತೊಗೆದ ಸ್ಟಾಲಿನ್‌ನು, ತನ್ನ ಈ ನರಹತ್ಯದ ಪ್ರೇ... ರಾಜಕೀಯ ಕಾರಣಗಳನ್ನು ತೋರಿಸುವನು. ರಶಿಯದ ಇ... ನನು ಕೂಡ "ನನ್ನ ಪ್ರಜೆಗಳ ಸಂಹಾರವನ್ನು ನಾ... ಮಾಡದಿದ್ದರೆ, ನನ್ನ ಸಂಹಾರವೇ ಅವರಿಂದಾಗುವುದು" ಎ... ಉತ್ತರ ಕೊಟ್ಟನಂತೆ. ಸ್ಟಾಲಿನ್‌ನು ನಡೆಯಿಸಿರುವ ಭೀ... ಕೊಲೆಗಳಿಗೆ ಇಂತಹದೇ ಕಾರಣವಿರಬಹುದೇ?

ಸ್ಟಾಲಿನ್‌ನು ಸುಂದರನಲ್ಲ; ಗಂಟುಗಂಟಾದ ಮೋರೆಯವನಾ... ದ್ದರೂ ಅಂತಃಶಕ್ತಿಯ ಸ್ಫೂರ್ತಿಯಿಂದ ಜನರನ್ನು ಬೇಕಾ... ಹಾಗೆ ಹೆದರಿಸುವನು; ಹೆಣ್ಣುಮಕ್ಕಳನ್ನು ಮರುಳುಗೊಳಿ... ವನು. ಈತನ ಮೊದಲಿನ ಇಬ್ಬರು ಹೆಂಡಿರು ಈತನ ಪೈಶಾ... ಮನೋವೃತ್ತಿಗೆ ತುತ್ತಾಗಿಯೆ ಮಡಿದರು. ಮೂರನೆಯ ಹೆಂ... ಯಾದರೂ-ಪ್ರತಿಯೊಂದು ಸಮಾಜಸೇವೆಯಲ್ಲಿ ಈತನೊಂ... ಸಹಕರಿಸಿದರೂ-ಕೊನೆಗೆ ಇವನೊಡನೆ ಜಗಳವಾಡಿ ಚಮತ್ಕಾ... ವಾದ ರೀತಿಯಲ್ಲಿ ಮರಣಹೊಂದಿದಳು. ರಶಿಯದ ವಾಣಿ... ಪ್ರತಿನಿಧಿಯಾಗಿದ್ದ ಒಬ್ಬ ರಶಿಯನ್‌ನು, ಮತ್ತೊಬ್ಬ ರಶಿಯನ... ಸಂಗಡ ಬರ್ಲಿನ್‌ನಲ್ಲಿ ಮಾತನಾಡುವಾಗ, ಸ್ಟಾಲಿನ್‌ನ ಹೆಂಡತಿಯ ಸಾವಿನ ಬಗೆಗೆ ಕೆಲವು ನಿಜವಾದ ಸಂಗತಿಯನ್ನು ಹೇಳಿದ್ದಾನೆಂದು ಕಾಕಾ ಬಡ್ಸೆ ಅವರು ಹೇಳುತ್ತಾರೆ. ಏನೆಂದರೆ: ಯಾವುದೋ ಒಂದು ರಾಜಕೀಯ ಸಮಸ್ಯೆಯನ್ನು ಬಿಡಿಸುವಾಗ, ಈತ... ಮೂರನೆಯ ಹೆಂಡತಿ ಇವನ ವಿರುದ್ಧವಾಗಿರುವ ಜನರಿಗೆ ಪುಷ್ಟಿ ಕೊಟ್ಟಳಂತೆ. ಆಗ ಆಕೆಗೆ ಒಮ್ಮೆಲೇ ಬಂಧನದ ಹೆದರಿಕೆ ಹಾಕಿ... ನಂತೆ. ಆ ಮೇಲೆ ಆಕೆ ಮನೆಗೆ ಹೋಗಿ ಖಿನ್ನಮನಸ್ಸಿನಿಂ... ಮಲಗಿದಳಂತೆ. ಮರುದಿವಸ ಬೆಳಗಿನಲ್ಲಿ ಆಕೆಯನ್ನು ಎಬ್ಬಿಸಲೆ... ಕ್ಕೆಂದು ಆಕೆಯ ದಾಸಿ ಹೋಗಲು, ಹಾಸಿಗೆಯಲ್ಲಿಯೇ ಅವಳ... ತೀರಿಹೋಗಿದ್ದಳಂತೆ. ಪರೀಕ್ಷೆ ಮಾಡಲಾಗಿ; ಸಾವದು ಸ್ವಾಭಾವಿ... ವಾದುದಲ್ಲವೆಂದು ಕಂಡುಬಂದಿತಂತೆ. ಆದರೆ ಅದನ್ನು ಗ...

ಯಾಗಿ ಕೂಗಿಕೊಳ್ಳುವ ಗಂಡುಎದೆಯವರಾರೂ ಇರಲಿಲ್ಲ. ಆದರೂ ಸ್ಟಾಲಿನ್‌ನಿಗೆ ದೂರದಿಂದ ಮಾತ್ರ ಕೂಗಿ ಹೇಳಿದರು. ಅದಕ್ಕೆ ಸ್ಟಾಲಿನ್‌ನು ರೊಚ್ಚಿಗೆದ್ದು, ಆಕೆಯನ್ನು ರಾಷ್ಟ್ರದ್ರೋಹಿಯೆಂದೂ, ಹಾಸಿಗೆಯಲ್ಲಿ ಅಕಸ್ಮಾತ್ತಾಗಿ ಮರಣಹೊಂದಿದಳೆಂದೂ ಸಾರಬೇಕಾಗಿ ಅಪ್ಪಣೆಮಾಡಿದನು. ತನ್ನ ಮನೆತನದವರೆಲ್ಲ ತನಗೆ ದಾಸಾನುದಾಸರಾಗಿರಬೇಕೆಂದೇ ಸ್ಟಾಲಿನ್‌ನ ಕೆಟ್ಟ ಹಟ. ಆತನ ಮೊದಲಿನ ಹೆಂಡತಿಯ ಹಿರಿಯ ಮಗ-ಸುಮಾರು ಮೂವತ್ತು ವರ್ಷದವ-ಸಮತಾವಾದ ಸಂಘದ ಸದಸ್ಯನಿಲ್ಲ. ಇದಕ್ಕೆ ಕಾರಣ ವಿಷ್ಟೆ: ಹತ್ತು ವರುಷಗಳ ಹಿಂದೆಯೇ ಆತನು ತಂದೆಯ ಕ್ರೂರ-ತನಕ್ಕೆ ಬೇಸತ್ತು, ತನ್ನ ತಾಯಿಯ ಬಂಧುಗಳ ಕಡೆಗೆ ಓಡಿಹೋದ. ತನ್ನ ತಂದೆಯು ತನ್ನನ್ನು ಪೀಡಿಸಿದ ಹಾಗೆ, ಸ್ಟಾಲಿನ್‌ನು, ತನ್ನ ಮಗನನ್ನು ಪೀಡಿಸಲು ಹವಣಿಸಿದ.

ಸ್ಟಾಲಿನ್‌ನ ೪ ನೆಯ ಹೆಂಡತಿ ಒಬ್ಬ ಯಹೂದಿ ಮಹಿಳೆ. ಈಗಾಗಲೇ ಆಕೆಗೆ ಕೂಡ ಒಬ್ಬ ಪ್ರತಿಸ್ಪರ್ಧಿನಿ ಇರುವಳಂತೆ. ಆ ಪ್ರತಿಸ್ಪರ್ಧಿನಿ ಒಬ್ಬ ಅರಸುಗುವರಿ. ಸ್ಟಾಲಿನ್‌ನ ಮೂರನೆಯ ಹೆಂಡತಿಯ ಹೆಣವನ್ನು ಸ್ಮಶಾನಕ್ಕೊಂದು ತೆಗೆದುಕೊಂಡು ಹೋಗುವ ವೇಳೆಯಲ್ಲಿ, ಈ ಅರಸುಗುವರಿ ಮೂರು ಗುಲಾಬಿ ಹೂಗಳನ್ನು ಆ ಹೆಣದ ಮೇಲೆ ಚೆಲ್ಲಿದಳಂತೆ. ಅವುಗಳಲ್ಲಿ ಒಂದು ಹೂವು ಸ್ಟಾಲಿನ್‌ನ ಕೈಗೆ ಸಿಕ್ಕಿತಂತೆ. ಆ ಸನ್ನಿವೇಶದಲ್ಲಿಯೇ ಆಕೆಯನ್ನು ಈ ಮಹಾರಾಯ ಮೋಹಿಸಿ ಬಿಟ್ಟನಂತೆ. ಸ್ಟಾಲಿನ್‌ನಂತಹ ನಿರಂಕುಶನಿಗೆ ಯಾವಾಗಲೂ ಒಬ್ಬ ಪ್ರಿಯತಮೆ ಬೇಕೇ ಬೇಕು. ಇಂತಹ ಪ್ರಿಯತಮೆಯರೇ ಸ್ಟಾಲಿನ್‌ನಂತಹರಿಗೆ ಅಂಕುಶವಾಗಿ ಪರಿಣಮಿಸುವರು. ಈ ಅರಸುಗುವರಿ ತನಗೆ ಪ್ರಿಯವಾದದ್ದೆಲ್ಲವನ್ನೂ ಸ್ಟಾಲಿನನ ಮುಖಾಂತರ ಮಾಡಿಸಿಕೊಳ್ಳುವಳಂತೆ. ತನ್ನ ಬಂಧುಗಳನ್ನು ಗಲ್ಲಿಗೇರಿಸಿದ ಸರಕಾರಿ ಕಾರ್ಯದರ್ಶಿಗಳು ಈಕೆಯ ಸೇಡಿಗೆ ತುತ್ತಾಗಿದ್ದಾರೆ. ಹೀಗಾಗಿ ಸ್ಟಾಲಿನ್ ಮತ್ತು ಅವನ ಗೆಳತಿಯಾದ ಈ ಅರಸುಗುವರಿ ಸೇರಿ, ಇಡಿಯ ರಶಿಯವನ್ನೇ ಯಮಪಟ್ಟಣವನ್ನಾಗಿ ಮಾಡಿಬಿಟ್ಟಿದ್ದಾರೆ. ಸ್ಟಾಲಿನ್‌ನ ಪಟ್ಟದರಸಿಯಾಗಬೇಕೆಂದು ಈಕೆಯು ಹಂಬಲಿಸಿರಬಹುದು. ಹಿಂದಿನವರ ಹಾಗೆ ಈಕೆಗೂ ಮರಣದಂಡನೆಯ ಮರ್ಯಾದೆ ಯಾವಾಗ ದೊರೆತೀತೋ ಹೇಳಲಿಕ್ಕಾಗದು.

ಹೆಣ್ಣಿನ ಮೋಹ ಸ್ಟಾಲಿನ್‌ನಿಗೆ ತುಂಬ ಇದೆ. ಆದರೂ ಅಧಿಕಾರವೆಂದರೆ ಅವನಿಗೆ ಎಲ್ಲಕ್ಕೂ ಹೆಚ್ಚಿನ ಮೋಹ. ಅಧಿಕಾರದ ಸಲುವಾಗಿ ಏನು ಬೇಕಾದರೂ ಮಾಡಬಲ್ಲ. ಇಬ್ಬರ ನಡುವೆ ನ್ಯಾಯ ಹುಟ್ಟಿಸಿ ಮೋಜುನೋಡುವವನವನು. ಸದಸದ್ವಿವೇಕವೆಂಬುದು ಅವನಲ್ಲಿ ಎಳ್ಳಷ್ಟೂ ಇಲ್ಲ. ತರುಣನಿರುವಾಗ ತನ್ನನ್ನು ಮೆಚ್ಚಿದವರ ಉಪದೇಶದಿಂದ, ತನ್ನ ಯಾವುದೋ ಒಂದು ಕಾರ್ಯ-ಸಾಧನೆಯ ಸಲುವಾಗಿ, ಒಂದು ಬ್ಯಾಂಕನ್ನೇ ಲೂಟಿಮಾಡಿದನಂತೆ. ಲೆನಿನ್‌ನು ಸಾಯುವಾಗ, ಎಲ್ಲರನ್ನೂ ತಳ್ಳಿಹಾಕಿ ತಾನೇ ಅಭಿಷೇಕಮಾಡಿಕೊಂಡು, ಲೆನಿನ್‌ನ ಹೆಸರಿನಲ್ಲಿ ಅಪ್ಪಣೆಗಳನ್ನು ಕೂಡ ಕೊಡತೊಡಗಿದನಂತೆ. ಇಷ್ಟಕ್ಕೇ ಸಾಲದೇ ತಾಳ್ಮೆಗೆಟ್ಟು "ಲೆನಿನ್‌ನು ಸಾಯಲೊಲ್ಲನೇಕೆ? ಸಾಯಬೇಕು, ಇಲ್ಲವಾದರೆ ತೀವ್ರ ನೆಟ್ಟಗಾದರೂ ಆಗಬೇಕು!" ಎಂದನಂತೆ. ಲೆನಿನ್‌ನು ಬೇನೆಯಿಂದ ಬಳಲುವಾಗ ಅವನ ಹೆಂಡತಿಯನ್ನು ಸ್ಟಾಲಿನ್‌ನು ಬಹಳ ಕ್ರೂರ ರೀತಿಯಿಂದ ನಡಿಸಿಕೊಂಡನಂತೆ. ಲೆನಿನ್‌ನ ಮರಣದ ನಂತರ ಆಕೆಯನ್ನು ತಳ್ಳಿಯೇ ಬಿಟ್ಟ.

ಲೆನಿನ್‌ನು ತನ್ನ ಮರಣಕಾಲದಲ್ಲಿ ತನ್ನ ಸಮತಾವಾದಿ ಪಕ್ಷಕ್ಕೆ, ಸ್ಟಾಲಿನ್‌ನ ವಿಷಯದಲ್ಲಿ, ಬರೆವಣಿಗೆಯಲ್ಲಿ ಎಚ್ಚರಿಕೆ ಕೊಟ್ಟಿದ್ದನಂತೆ. ಅದನ್ನು ಟ್ರಾಟ್ಸ್ಕಿ ಎಂಬ ಸದಸ್ಯನೊಬ್ಬನು ಸಭೆಯಲ್ಲಿ ಓದಿದೊಡನೆ ಸ್ಟಾಲಿನ್‌ನು, ಸಾಯುವಾಗ ಲೆನಿನ್‌ನು ಎಚ್ಚರದಲ್ಲಿರಲಿಲ್ಲವೆಂದೂ ಇಂತಹ ಅಭಿಪ್ರಾಯ ಅವನದೆಂದೂ ಇರಲಿಲ್ಲವೆಂದೂ ಒತ್ತಿ ಒತ್ತಿ ಪ್ರತಿಪಾದಿಸಿದ. ಈ ಪ್ರತಿಪಾದನೆಯನ್ನು ಅಂದು ಪ್ರತಿಭಟಿಸಿದ ಪ್ರತಿಯೊಬ್ಬ ಸಭಾಸದನೂ ಈಗ ಸತ್ತಿರಬಹುದು, ಇಲ್ಲವೆ ಗಡಿಪಾರಾಗಿರಬಹುದು.

ಕೊಲ್ಲು, ಹೊಡೆ, ಬಡಿ- ಇವೇ ಸ್ಟಾಲಿನ್‌ನ ಜಪದ ಮಂತ್ರಗಳಿದ್ದಂತಿವೆ. ಲೆನಿನ್‌ನ ಹೆಂಡತಿ ಕೂಡ "ನನ್ನ ಗಂಡ ರೋಗದಿಂದ ಪಾರಾಗಿದ್ದರೆ ಸ್ಟಾಲಿನ್‌ನ ಮರಣದಂಡನೆಗೆ ಖಂಡಿತ ಗುರಿಯಾಗುತ್ತಿದ್ದ" ಎಂದಳಂತೆ. ಸ್ಟಾಲಿನ್‌ನ ನೆನಪಿನಿಂದ ಸಂಪೂರ್ಣ ರಶಿಯವೇ ಗಡಗುಟ್ಟಿ ನಡುಗುತ್ತಿದ್ದರೂ, ಅವನು ಕೂಡ ಭೀತಿಯಿಂದ ಚೋದಿತನಾಗಿದ್ದಾನೆ. ಯಾವಾಗಲೂ ದೇಹರಕ್ಷಣೆಗೆಂದು ಆತನ ಸುತ್ತಲೂ ಸೈನಿಕರು ಇದ್ದೇ ಇರುತ್ತಾರೆ. ಮಾಸ್ಕೋದಲ್ಲಿ ಬೇರೆ ಬೇರೆ ಹಲವು ಅರಮನೆಗಳನ್ನು ಕಟ್ಟಿಸಿ, ಅವುಗಳಲ್ಲಿ ಇಂತಹ ಸ್ಥಳದಲ್ಲಿಯೇ ತನ್ನ ರಾತ್ರಿಯ ವಾಸವೆಂದು ಯಾರಿಗೂ ಸುದ್ದಿ ಹತ್ತದ ಹಾಗೆ ಮಾಡಿಬಿಟ್ಟಿದ್ದಾನೆ.

ಚಿಕ್ಕ ವಯಸ್ಸಿನಲ್ಲಿಯೆ ಆತನಿಗೆ ಒಬ್ಬ ಸಹಾನುಭೂತಿಯುಳ್ಳ ಮಾನಸಶಾಸ್ತ್ರಜ್ಞನು ಸಿಕ್ಕಿದ್ದರೆ ಸ್ಟಾಲಿನ್‌ನ ಜೀವನವು ಮಾರ್ಪಡಬಹುದಾಗಿದ್ದಿತು. ಇಂತಹ ಭೀತಿಗೆ ಅವನು ಒಳಗಾಗಬೇಕಾಗುತ್ತಿದ್ದಿಲ್ಲ. ಅವನ ಮಾನಸಿಕ ರೋಗವನ್ನು ಅರಿದು ತೋರಿಸಿ, ಅಲ್ಲಿ ಬೇರೂರಿದ ದುಷ್ಪ್ರೇರಣೆಗಳನ್ನು ನಿರ್ಮೂಲಮಾಡಿದ್ದರೆ; ಈಗಿನ ಗಲ್ಲಿನ ಅಧಿಕಾರಿಯ ಬದಲು ಸ್ಟಾಲಿನ್‌ನು ಒಬ್ಬ, ಒಂದು ಜನಾಂಗದ ರಕ್ಷಕನಾಗುತ್ತಿದ್ದ. ತಾನು ತಿಂದ ಏಟುಗಳ ಸಲುವಾಗಿ ರಶಿಯವನ್ನೇ ಸೇಡಿಗೆ ಗುರಿಮಾಡುವೆನಲ್ಲ ಎಂಬ ವಿಚಾರ ಅವನಲ್ಲಿ ಎಂದಾದರೂ-ಒಮ್ಮೆ ಯಾವಾಗ ಹೊಳೆಯಬಹುದೇ?

ಈಗಿನ ಮಕ್ಕಳೇ ಬಾಳೀ ಜನಾಂಗದ ನಾಯಕರು, ರಾಷ್ಟ್ರದ ಉದ್ಧಾರಕರು. ಎಂದಮೇಲೆ ಆ ಶಿಶುಗಳ ಸರ್ವತೋಮುಖ ಉನ್ನತಿಯು ಅವರ ತಂದೆ-ತಾಯಿಗಳ ಮೇಲೆಯೆ ಹೆಚ್ಚು ಅವಲಂಬಿಸಿದೆ. ಈ ಮಾತು ಸ್ಟಾಲಿನ್‌ನ ವ್ಯಕ್ತಿತ್ವಪರಿಚಯದಿಂದ ಚೆನ್ನಾಗಿ ಉದ್ಬೋಧಿತವಾಗುವುದು.

ತಾಯಿ

(ಅನುವಾದಿತ ಕಥೆಯೊಂದು)

ಶ್ರೀ. ಕುಮಾರಮಾಧವ

★

(ಮೂಲಲೇಖಕರು:
ಹಾನ್ಸ್ ಕ್ರಿಶ್ಚಿಯನ್ ಅಂಡರಸನ್
೧೮೦೫–೧೮೭೫)

ಡೆನ್ಮಾರ್ಕಿನ ಸಾಹಿತ್ಯರತ್ನನಾದ ಹಾನ್ಸ್ ಕ್ರಿಶ್ಚಿಯನ್ ಅಂಡರ್ ಸನ್ನನು ೧೮೦೫ ರಲ್ಲಿ ಓಡೆನ್ಸ್ ಎಂಬ ಚಿಕ್ಕನಗರದ ಬಡಕುಟುಂಬ ವೊಂದರಲ್ಲಿ ಹುಟ್ಟಿದ. ಅವನ ತಂದೆ ಚರ್ಮಕಾರ; ತಾಯಿ ಅಗಸರ ವೃತ್ತಿಯವಳು. ಹಾನ್ಸ್ ತುಂಬ ಕುರೂಪಿಯೂ ಮೊದ್ದನೂ ಆಗಿದ್ದ. ಆದರೂ ಅವನು ತನ್ನವರ ಉದ್ಯಮಗಳನ್ನು ತ್ಯಜಿಸಿ, ಭಾಷೆ ಸಾಹಿತ್ಯ ಗಳನ್ನು ಚೆನ್ನಾಗಿ ಅಭ್ಯಸಿಸಿ ಬರೆಯುವುದಕ್ಕಾರಂಭಿಸಿದ. ಮೊದಲ ನೆಯ ಗ್ರಂಥವಾದ ' walking trip ' ದಿಂದಲೇ ಇವನು ಬಹಳ ವಿಖ್ಯಾತಿ ಪಡೆದ. ಇವನು ತನ್ನ ಜೀವನಕ್ಕೆ, ಸಂಬಂಧಿಸಿದ ಗ್ರಂಥ ಗಳನ್ನು ಬಹಳ ಬರೆದಿದ್ದಾನೆ. ತಾನು ಡೆನ್ಮಾರ್ಕಿನಂತಹ ಚಿಕ್ಕ ರಾಷ್ಟ್ರದವನಾಗಿದ್ದರೂ, ಜಗತ್ತಿನಲ್ಲೆಲ್ಲ ತನ್ನ ಪ್ರಖ್ಯಾತಿಯನ್ನು ಬೀರಿ, ಕಥೆಗಾರರಲ್ಲಿ ಅಗ್ರಸ್ಥಾನವನ್ನು ದೊರೆಕಿಸಿದ್ದಾನೆ. ಅವನ ಈ ಅನಂತ. ಕೀರ್ತಿಯು ಅವನ ಕಿನ್ನರಕಥೆಗಳನ್ನವಲಂಬಿಸಿದೆ.

ಹಾನ್ಸ್‌ನ ವಿಶೇಷವಾದ ಕೌಶಲ್ಯವು ಅವನ ದುಃಖಾಂತ ಕಥೆಗಳ ಲ್ಲಿದೆ. ಪುರಾಣಗಳಲ್ಲಿಯ ತನ್ನ ನಂಬಿಗೆ, ದೇವರಲ್ಲಿಯ ಭಕ್ತಿ, ಸತ್ಯಾಸತ್ಯತೆಗಳ ಭೀತಿ ಮೊದಲಾದುವುಗಳನ್ನು ಕಥೆಗಳಲ್ಲಿ ಸೇರಿಸಿ ಕೊಂಡು, ಅವುಗಳು ಬಹಳ ಸರಳವಾಗುವಂತೆ ಮಾಡಿದ್ದಾನೆ. ಮತ್ತು ಅವನ ಜಾಣ್ಮೆಯೂ ಅದರಲ್ಲಿಯೆ ಇದೆ. ಪ್ರೇಮಾಸ್ಪದ ಸಾಮಾಜಿಕ ಕಥಾಪ್ರಪಂಚದಲ್ಲಿ ಸೋಪಾನಾನಿಗಿರುವ— ಸರಳವಾದ ನೈತಿಕ ಕಥಾಪ್ರಪಂಚದಲ್ಲಿ ಬಾಲಸ್ವಾಯನಿಗಿರುವ— ಮಾನಕೀರ್ತಿಗಳಿಗಿಂತಲೂ, ಹಾನ್ಸ್‌ನಿಗೆ ಅವನ ಧಾರ್ಮಿಕ ಮತ್ತು ಕಿನ್ನರಕಥೆಗಳಿಂದ ಹೆಚ್ಚಿನ ಖ್ಯಾತಿ ದೊರೆತಿದೆ. ಇದನ್ನೂ ಅವನ ಇನ್ನಿತರ ಕಲಾಭಿಜ್ಞತೆ ಯನ್ನೂ ನಾವು ಈ 'ತಾಯಿ' ಎಂಬ ಕತೆಯಲ್ಲಿ ಕಾಣಬಹುದು.

ತಾಯಿಯೊರ್ವಳು ತನ್ನ ಮಗುವಿನ ಬಳಿ ಕುಳಿತಿದ್ದಳು. ಅದು ಸಾಯುವುದೆಂದು ಅವಳು ದುಃಖಿತಳಾಗಿದ್ದಳು. ಆ ಮಗುವಿನ ಮುಖವು ಸಪ್ಪಗಾಗಿದ್ದು ಕಣ್ಣುಗಳು ಮುಚ್ಚಿದ್ದುವು. ಅದು ಬಹು ಕಷ್ಟದಿಂದ ಶ್ವಾಸವನ್ನೆಳೆಯುತ್ತಿದ್ದು, ಒಂದೊಂದು ಸಲ ಅದು ನಿಟ್ಟುಸಿರೇನೋ ಎನ್ನುವಷ್ಟು ದೀರ್ಘವಾಗಿರುತ್ತಿದ್ದಿತು. ತಾಯಿ ತುಂಬ ದುಃಖದಿಂದ ಕೂಡಿದವಳಾಗಿ ಆ ಬಡ ಪ್ರಾಣಿಯನ್ನು ನೋಡುತ್ತಿದ್ದಳು.

ಬಾಗಿಲನ್ನು ನೂಕಿ ತೆರೆದು ವೃದ್ಧನೊರ್ವನು ಪ್ರವೇಶಿಸಿದ. ಅವನು ಮೈತುಂಬ ಹೊತ್ತುಕೊಂಡಿದ್ದ ವಸ್ತ್ರವು ಅಶ್ವಪರಿಧಾನದಂತಿದ್ದು, ಬೆಚ್ಚಗಿದ್ದಿತು. ಚಳಿಗಾಲವಿದ್ದುದರ ಮೂಲಕ ಅದು ಅವನಿಗೆ ಬೇಕಾಗಿದ್ದಿತು. ಅದಿಲ್ಲವಾಗಿದ್ದರೆ ಎಲ್ಲವೂ ಹಿಮ ಮತ್ತು ಮಂಜಿನಿಂದ ತುಂಬಿಹೋಗಿ, ಗಾಳಿಯ ಮೂಲಕ ಮುಖವು ಏಟು ತಿನ್ನುವುದಕ್ಕೆ ಸಿದ್ಧವಾಗಿರಬೇಕಾಗಿದ್ದಿತು.

ವೃದ್ಧನು ಚಳಿಯಿಂದ ನಡುಗುತ್ತಿದ್ದ. ಮಗುವು ಶಾಂತವಾಗಿ ಮಲಗಿದ್ದಿತು. ಆಗ ತಾಯಿ, ಚಿಕ್ಕದೊಂದು ಪಾತ್ರೆಯಲ್ಲಿ ಸ್ವಲ್ಪ ನೀರನ್ನು ಸುರಿದು ಬೆಂಕಿಯ ಮೇಲಿರಿಸಿದಳು. ಮುದುಕ ಕುಳಿತು ಕೊಂಡು ತೊಟ್ಟಿಲನ್ನು ತೂಗುವುದಕ್ಕಾರಂಭಿಸಿದ. ತಾಯಿ ಅವನ ಹತ್ತಿರದಲ್ಲಿದ್ದ ಮುರುಕು ಕುರ್ಚಿಯೊಂದರಲ್ಲಿ ಆಸನಸ್ಥಳಾಗಿ, ಭಯಂಕರವಾದ ಕಷ್ಟದಿಂದ ಶ್ವಾಸವನ್ನೆಳೆಯುತ್ತಿದ್ದ ತನ್ನ ಮಗುವನ್ನು ನೋಡುತ್ತಲಿದ್ದು, ಒಮ್ಮೆಲೇ ಅದರ ಚಿಕ್ಕ ಕೈಗಳನ್ನು ಹಿಡಿದಳು :

" ನಾನು ಇದನ್ನು ಇರಿಸಿಕೊಳ್ಳಬೇಕೆನ್ನುತ್ತಿರುವೆನಲ್ಲವೇ ?, ಹೌದು; ಇರಿಸಿಕೊಳ್ಳಬೇಕೆನ್ನುತ್ತೇನೆ ! ದಯಾಳು ದೇವರು ಇದನ್ನು ನನ್ನಿಂದ ಕಿತ್ತಿಕೊಳ್ಳಲಿಕ್ಕಿಲ್ಲ ! "

★

ಮಗುವನ್ನು ಮರಳಿ ಪಡೆಯಲು ಹಂಬಲಿಸುವ ತಾಯಿ, ಹೃದಯ ಹಿಡಿಸದ ದುಃಖದಲ್ಲಿಯೂ ಹಾಡಲಿಕ್ಕೆ ಸಿದ್ಧಳು; ಮುಳ್ಳುಕಂಟಿಯನ್ನಪ್ಪಿ ರಕ್ತಹರಿಸಿಕೊಳ್ಳಲೂ ಸಿದ್ಧಳು; ನೋಡುವ ಕಣ್ಣು ಕಳೆದುಕೊಳ್ಳಲಿಕ್ಕೂ ಸಿದ್ಧಳು; ಚೆಲುವಿನ ತಲೆಗೂದಲನ್ನು ಕೊಡಲೂ ಸಿದ್ಧಳು. ಆದರೆ ದೈವನಿಯಮದ ಎದುರು ತಾಯಿಯ ಪ್ರೀತಿಯು ಅವಿವೇಕದ್ದೆನಿಸುವುದೆ ?

★

ತಾಯಿ ಏನನ್ನೋ ಕೇಳಿದಳು, ಮತ್ತು ಹೇಳಿದಳು. ಆದರೆ ಆ ವೃದ್ಧನು (ಅವನು ಮೃತ್ಯುದೇವನಾಗಿದ್ದ !) ವಿಲಕ್ಷಣವಾಗಿ ತಲೆದೂಗಿದ. ಅದರಿಂದ ಹೌದೆಂದೂ ಇಲ್ಲವೆಂದೂ ಎರಡೂ ರೀತಿಯ ಅರ್ಥವಾಗುತ್ತಿದ್ದಿತು. ತಾಯಿ ಕಣ್ಣುಗಳನ್ನು ಕೆಳಕ್ಕೆ ಹಾಕಿದಳು; ಅವೆರಡರಿಂದಲೂ ನೀರುಹರಿದು ಕೆನ್ನೆಯವರೆಗೂ ಹೋಯಿತು. ಅವಳ ತಲೆಯು ಭಾರವಾಯಿತು. ಯಾಕೆಂದರೆ ಮೂರುದಿನ ರಾತ್ರಿ ಹಗಲು ಅವಳು ತನ್ನ ಕಣ್ಣುಗಳನ್ನು ಮುಚ್ಚಿರಲಿಲ್ಲ. ಎಂತಲೆ ಈಗ ಸ್ವಲ್ಪ ಹಾಗೆಯೆ ನಿದ್ರಿಸಿದಳು. ಎಷ್ಟು? ಒಂದೇ ಒಂದು ನಿಮಿಷದ ವರೆಗೆ. ಆನಂತರ ಎದ್ದು ನಿಂತಳು. ಚಳಿಯು ಅವಳನ್ನು ಆವರಿಸಿತು.

" ಇದೇನು ! " ಎಂದು ಅವಳು ಸುತ್ತಲೂ ನೋಡಿದಳು. ಮುದುಕ ಹೊರಟುಹೋಗಿದ್ದ. . . ಚಿಕ್ಕಮಗುವೂ ಕಾಣಲಿಲ್ಲ. . ಮೂಲೆಯೊಂದರಲ್ಲಿ ಹಳೆಯ ಗಡಿಯಾರವೊಂದು ನಿಧಾನವಾಗಿ

ಶಬ್ದಮಾಡುತ್ತಿದ್ದಿತು. ಏನೋ ಭಾರವಾಗಿದ್ದುದೊಂದು ಕೆಳಕ್ಕೆ ಬಿದ್ದಿತು.. ಗಡಿಯಾರವು ಒಮ್ಮೆಲೇ ನಿಂತುಹೋಯಿತು.

ತಾಯಿ ತನ್ನ ಮಗುವಿಗಾಗಿ ಪ್ರಲಾಪಿಸುತ್ತ ಮನೆಯಿಂದ ಹೊರಕ್ಕೋಡಿದಳು.

ದೂರದಲ್ಲಿ ಹಿಮದ ಮೇಲೆ ಕರಿಯ ಬಟ್ಟೆಯನ್ನುಟ್ಟು ತೊಟ್ಟವ ಳೊರ್ವಳು ಕುಳಿತಿದ್ದಳು. ಅವಳೆಂದಳು:

"ಮೃತ್ಯು ನಿನ್ನ ಮನೆಯಲ್ಲಿದ್ದ. ಅವನು ನಿನ್ನ ಮಗುವನ್ನು ತೆಗೆದುಕೊಂಡು ಓಡಿಹೋಗುವುದನ್ನು ನಾನು ನೋಡಿದೆ. ಅವನು ಗಾಳಿಗಿಂತಲೂ ಹೆಚ್ಚು ವೇಗದಿಂದ ಹೋಗುತ್ತಿದ್ದ. ತನ್ನ-ಜೊತೆಯಲ್ಲಿ ತೆಗೆದುಕೊಂಡೊಯ್ದುದ್ದುವುಗಳನ್ನೆಂದಿಗೂ ಅವನು ಮರಳಿ ಕೊಡುವುದಿಲ್ಲ!"

"ಅವನಾವ ದಾರಿಯಿಂದ ಹೋಗಿದ್ದಾನೆ? ನೀನು ಹೇಳುವುದಾದರೆ ಅವನನ್ನು ಹುಡುಕುವೆನು!" ಎಂದಳು ತಾಯಿ.

"ನನಗೆ ಅದರ ಪರಿಚಯವಿದೆ. ನಾನು ಅದನ್ನು ಹೇಳುವುದಕ್ಕೆ ಮೊದಲು, ನೀನು ನಿನ್ನ ಮಗುವಿನೆದುರಿನಲ್ಲಿ ಹಾಡುತ್ತಿದ್ದ ಗೀತಗಳನ್ನೆಲ್ಲ ನನ್ನೆದುರು ಹಾಡಬೇಕು. ನನಗೆ ಅವುಗಳಲ್ಲಿ ತುಂಬಾ ಪ್ರೇಮವಿದೆ. ಯಾಕೆಂದರೆ ಅವುಗಳನ್ನೊಂದು ಬಾರಿ-ಕೇಳಿದ್ದೇನೆ. ನಾನು ಇರುಳುರಾಣಿಯಾದುದರಿಂದ, ನೀನು ಅವುಗಳನ್ನು ಹಾಡುವಾಗ ಕತ್ತಲೆಯಲ್ಲಿಯೂ ಕಂಬನಿಗಳುದುರುವುದನ್ನು ನೋಡಿದೆ!"

"ನಾನು ಅವುಗಳನ್ನೆಲ್ಲಾ ಹಾಡುತ್ತೇನೆ. ಆದರೆ ನನ್ನನ್ನು ಈಗ ಹೆಚ್ಚು ಕಾಲ ತಡೆಯಬೇಡ. ಅವನ ಹತ್ತಿರ ಹೋಗಿ ಮಗುವನ್ನು ಹುಡುಕುವುದಿದೆ!"

ಇರುಳುರಾಣಿ ಮಾತನಾಡಲಿಲ್ಲ. ತಾಯಿ ತನ್ನ ಕರಗಳನ್ನುಜ್ಜಿಕೊಂಡು ಹಾಡಿದಳು. ಅದರೊಂದಿಗೆ ಪ್ರಲಾಪವೂ ಆಯಿತು. ಗೀತಗಳನೇಕವಾಗಿದ್ದರೂ ಕಂಬನಿಗಳು ಅದಕ್ಕೂ ಹೆಚ್ಚಾಗಿದ್ದುವು. ಅನಂತರ ಇರುಳುರಾಣಿ ಹೇಳಿದಳು:

"ನೇರವಾಗಿ ಈ ಘೋರಾರಣ್ಯದ ಕಾಳಿನಲ್ಲಿ ಹೋಗು. ಮೃತ್ಯುದೇವನು ನಿನ್ನ ಮಗುವಿನೊಂದಿಗೆ ಆ ದಾರಿಯನ್ನು ಹಿಡಿದುದನ್ನು ನಾನು ನೋಡಿದ್ದೇನೆ!"

* * *

ಅರಣ್ಯದ ಮಧ್ಯದಲ್ಲಿ ಎರಡು ದಾರಿಗಳು ಸೇರಿದ್ದುದರಿಂದ ಯಾವುದರಿಂದ ಹೋಗಬೇಕೆಂಬುದು ಅವಳಿಗೆ ತಿಳಿಯಲಿಲ್ಲ. ಅಲ್ಲಿ ಎಲೆ-ಹೂಗಳಿಲ್ಲದ ಕರಿಯಮುಳ್ಳಿನ ಕಂಟಿಯೊಂದಿದ್ದಿತು. ಚಳಿಗಾಲವಾಗಿದ್ದುದರಿಂದ, ಮಂಜು ಟೊಂಗೆಗಳ ಮೇಲೆ ಬೀಳುತ್ತಿದ್ದುದರಿಂದ, ಅವುಗಳೆಲ್ಲ ಉದುರಿಹೋಗಿದ್ದುವು.

"ನನ್ನ ಮಗುವನ್ನು ತೆಗೆದುಕೊಂಡು ಮೃತ್ಯುದೇವನು ಹೋಗುತ್ತಿದ್ದುದನ್ನು ನೀನು ನೋಡಿದ್ದೀಯಾ?"

"ನೋಡಿದ್ದೇನೆ; ಆದರೆ ನೀನು ನನ್ನನ್ನಪ್ಪಿಕೊಳ್ಳುವುದಾದರೆ ಅವನಾವ ದಾರಿಯಿಂದ ಹೋದನೆಂಬುದನ್ನು ನಾನು ಹೇಳುತ್ತೇನೆ. ನಾನೀಗ ಚಳಿಯಿಂದ ಅತ್ಯಂತವಾಗಿ ನಡುಗುತ್ತಿದ್ದು ಮುರಿದು ಬೀಳುವ ಸಂಭವವಿದೆ!"

ಅವಳು ಆ ಕರಿಯ ಕಂಟಿಯನ್ನು 'ಸ್ವಲ್ಪವಾದರೂ ಬೆಚ್ಚಗಾಗಲಿ' ಎಂದು, ಬಹು ಹತ್ತಿರದಲ್ಲಿ ಹೋಗಿ ಎದೆಗೆ ಒತ್ತಿಕೊಂಡಳು. ಮುಳ್ಳುಗಳು ಅವಳ ದೇಹದಲ್ಲಿ ಚುಚ್ಚಿ, ನೆತ್ತರು ಹಳ್ಳಗೊಂಡು ಹರಿಯುವಂತೆ ಮಾಡಿದುವು. ಆದರೆ ಆ ಕಂಟಿ ಒಮ್ಮೆಲೇ ಬೆಳೆದುದರಿಂದ, ಅಂತಹ ಚಳಿಗಾಲದ ಕಾಳುರಾತ್ರಿಯಲ್ಲಿಯೂ ಅದಕ್ಕೆ ಎಲೆ-ಹೂಗಳು ಹುಟ್ಟಿದುವು. ಅಹಾ! ದುಃಖಕ್ಕೀಡಾಗಿದ್ದರೂ ತಾಯಿಯ ಹೃದಯ ಎಷ್ಟು ಕೋಮಲವೂ ಪ್ರಯೋಜನಕಾರಿಯೂ ಬೆಚ್ಚಗೂ ಆಗಿರುವುದು? ಆ ಮೇಲೆ ಆ ಕಂಟಿ ಅವಳಿಗೆ ಹೋಗಬೇಕಾಗಿದ್ದ ಹಾದಿಯನ್ನು ತೋರಿಸಿತು.

* * *

ಅವಳು ಹಡಗು-ಹರಿಗೋಲುಗಳಿಲ್ಲದ ಸರೋವರವೊಂದಕ್ಕೆ ಬಂದಳು. ಅವಳ ಭಾರವನ್ನು ತಾಳಲು ಶಕ್ಯವಾಗುವಂತೆ ಅದು ಹೆಚ್ಚಾಗಿ ಹೆಪ್ಪುಗಟ್ಟಿರಲಿಲ್ಲ. ಅವಳಿಗೆ ನಡೆದು ಹೋಗಲಿಕ್ಕೆ ಅಥವಾ ಈಜಿಕೊಂಡು ಹೋಗಲಿಕ್ಕೆ ಬರುವಂತೆಯೂ ಇರಲಿಲ್ಲ. ಆದರೂ ಅವಳು ಅದನ್ನು ದಾಟಲೇ ಬೇಕಾಗಿದ್ದಿತು. ಆದುದರಿಂದ ಅವಳು ಅಲ್ಲಿ ಕುಳಿತುಕೊಂಡು, ಆ ಸರೋವರದಲ್ಲಿಯ ನೀರನ್ನೆಲ್ಲ ಕುಡಿದು ಬಿಡಲು ಯತ್ನಿಸಿದಳು; ಆದರೆ ಅದು ತುಂಬಾ ಅಸಾಧ್ಯವಾಗಿದ್ದಿತು. ಯಾವುದೊಂದು ದೈವೀಶಕ್ತಿಯ ನೆರವು ಸಿಕ್ಕಬಹುದೇನೋ ಎಂದು ಯತ್ನಿಸಿದಳು.

ಧನ್ವಂತರಿ ಕಾರ್ಯಾಲಯ, ಅಂಕೋಲಾ
ಉತ್ತರಕನ್ನಡ ಇವರ
ರಜಿಸ್ಟರ್ಡ್
ಅರ್ಧಾಂಗವಾಯು
ಹೊನ್ನಿ ಎಣ್ಣೆ
ಮತ್ತು
ವಾತಾರಿ ತೊಪ್ಪಲ
ಅರ್ಧಿತವಾಯು, ಕೈ-ಕಾಲು-ಮೋರೆ ನಡುಗುವುದು, ಪಕ್ಷವಾತ, ಸಂಧಿವಾತ ಮುಂತಾದ ರೋಗಿಗಳು ನಿರಾಶರಾಗದೆ ಒಮ್ಮೆ ಉಪಯೋಗಿಸಿರಿ; ಖಂಡಿತ ಗುಣವಾಗುವುದು.
ಬಾ. ಬ. ೧ ರೂ. ★ ತೊ. ಬೆ. ೧೦ ಆಣೆ.
ಸ್ಟಾರ್ ಕಂಪನಿ, ಬೆಳಗಾಂವ

PHOTO ENLARGEMENTS

Punctulity is our Motto;

SEND YOUR PHOTO; GET IT ENLARGED.

We Guarantee faithful reproduction.

Colouring our speciality.

Cheap Rates! *Satisfactory Work !!*

Even for Cinema Slides

Approach: GOVARIKAR & SONS,

Photographic dealers, KOLHAPUR.

" ಊಂಹು; ಅದೆಂದಿಗೂ ಸಾಧ್ಯವಿಲ್ಲ. ನಾವಿಬ್ಬರೂ ಒಪ್ಪಿಕೊಳ್ಳುವ ಹಾಗೆ ಮಾಡುವ! ನನಗೆ ರತ್ನಗಳನ್ನು ಕೂಡಿಸುವ ಹವ್ಯಾಸ ಬಹಳವಾಗಿದೆ. ನಿನ್ನ ನಯನಗಳು ಅತ್ಯಂತ ಸುಂದರ ಮತ್ತು ಸ್ವಚ್ಛವಾಗಿದ್ದು, ನೀನು ಪ್ರಕಾಶಿಸಿ ಅವುಗಳನ್ನು ನನಗಿತ್ತುದಾದರೆ, ನಾನು ನಿನ್ನನ್ನು ಆ ಮೃತ್ಯುವು ವಾಸಿಸುವ ಹಸಿರುಬಣ್ಣದ ಅರಮನೆಗೆ ಕರೆದೊಯ್ಯುತ್ತೇನೆ. ಅಲ್ಲಿ ಬೆಳೆಯುವ ಗಿಡಹೂಗಳೆಲ್ಲವೂ ಮಾನವಜೀವಿಗಳು. "

" ನನ್ನ ಮಗುವು ಸಿಕ್ಕುವುದಾದರೆ ನಿನಗೆ ನಾನೇನನ್ನು ಕೊಡಲಿಕ್ಕಿಲ್ಲ ? "

ಹೀಗೆ ಹೇಳುತ್ತ ದುಃಖಿತಳಾಗಿದ್ದ ತಾಯಿಯು ಹೆಚ್ಚಾಗಿ ಅಳುವುದಕ್ಕಾರಂಭಿಸಿದಳು. ಅವಳ ನಯನಗಳು ಕಳಚಿ ನೀರಿನಲ್ಲಿ ಬಿದ್ದು, ಅತ್ಯಂತ ಶ್ರೇಷ್ಠವಾದ ರತ್ನಗಳೆರಡಾದುವು. ಒಡನೆಯೆ ಸರೋವರವು, ಕಾಲುಮಣೆಯ ಮೇಲೆ ಕುಳಿತ ಹಾಗೆ ಕುಳಿತುಕೊಂಡ ಅವಳನ್ನೆತ್ತಿಕೊಂಡು ಆಚೆಯ ದಂಡೆಗೆ ಕರೆದುಕೊಂಡು ಹೋಯಿತು. ಅಲ್ಲಿ ಯೋಜನಗಳ ಅವಕಾಶವನ್ನು ವ್ಯಾಪಿಸಿದ ವಿಚಿತ್ರವಾದ ಮನೆಯೊಂದಿದ್ದಿತು. ಯಾರಾದರೂ ನೋಡಿದರೆ ಅದು ಗುಹೆ ಮತ್ತು ಅರಣ್ಯಗಳಿಂದೊಡಗೂಡಿದ ಗಿರಿದುರ್ಗವೊ ಕೋಟೆಯೆಂದೊ ಹೇಳಬಹುದಾಗಿದ್ದಿತು. ಆದರೆ ಆ ಬಡಪ್ರಾಣಿಗೆ ಕಣ್ಣುಗಳಿರದಿದ್ದುದರಿಂದ, ಅದನ್ನು ನೋಡುವುದಕ್ಕಾಗಲಿಲ್ಲ.

" ನಾನು, ನನ್ನ ಮಗುವನ್ನು ತೆಗೆದುಕೊಂಡೊಯ್ದ ಮೃತ್ಯು-ದೇವನನ್ನೆಲ್ಲಿ ಕಾಣಬಹುದು ? "

" ಅವನಿನ್ನೂ ಇಲ್ಲಿಗೆ ಬಂದಿಲ್ಲ ! " ಎಂದು ಆ ಮೃತ್ಯುವಿನ ಮನೆಯನ್ನು ಕಾಯುವುದಕ್ಕೆ ಹೋಗುತ್ತಿದ್ದ ಬಿಳಿಯ ಕೂದಲಿನ ಮುದುಕಿಯೊಬ್ಬಳು ಹೇಳಿದಳು. " ನೀನಿಲ್ಲಿಗೆ ಹೇಗೆ ಬಂದೆ ? ನಿನಗೆ ಸಾಹಾಯ್ಯವನ್ನಿತ್ತವರಾರು ? " ಎಂದು ಕೇಳಿದಳು.

" ದಯಾಳು ದೇವರು ಸಾಹಾಯ್ಯವನ್ನಿತ್ತ. ಅವನು ತುಂಬಾ ಕರುಣೆಯುಳ್ಳವ. ನೀನು ಕೂಡ ಅವನಂತೆಯೇ ಕರುಣೆಯಾಗಿರುವೆ. ನಾನು ನನ್ನ ಮಗುವನ್ನೆಲ್ಲಿ—ಎಲ್ಲಿ ಕಾಣಬಹುದು ? "

" ಅದು ನನಗೆ ಗೊತ್ತಿಲ್ಲ; ಅಲ್ಲದೆ ಅದು ನಿನಗೆ ಸಾಧ್ಯವೂ ಇಲ್ಲ. ಅನೇಕ ಹೂಗಳು ಮತ್ತು ಗಿಡಗಳು ಈ ದಿನ ರಾತ್ರಿಯಲ್ಲಿ ಬಾಡಿಹೋಗಿವೆಯಾದುದರಿಂದ, ಮೃತ್ಯುವು ಬೇಗನೇ ಬಂದು ಅವುಗಳನ್ನು ಬೇರೆ ಕಡೆಗೆ ಒಯ್ಯುವವನಿದ್ದಾನೆ. ಪ್ರತಿಯೊಂದು ಜೀವಿಗೂ ತನ್ನ ಜೀವನದ ಗಿಡವೂ ಜೀವದ ಹೂವೂ ಇರುವುದು ನಿನಗೆ ಗೊತ್ತೇ ಇದೆ. ಗಿಡ-ಬಳ್ಳಿಗಳಂತೆ ತೋರುತ್ತಿದ್ದರೂ ಅವುಗಳ ಹೃದಯಗಳು ಹಾರುತ್ತವೆ. ಮಕ್ಕಳ ಹೃದಯಗಳೂ ಹಾರುತ್ತವೆ. ಇದನ್ನು ನೋಡು. ಬಹುಶಃ ನೀನು ನಿನ್ನ ಮಗುವಿನ ಹೃದಯವು ಹಾರುವುದನ್ನು ಗುರುತಿಸಬಹುದು. ನೀನೀಗ ಏನು ಮಾಡಬೇಕೆನ್ನುವುದನ್ನು ನಾನು ಹೇಳಿದರೆ ನನಗೆ ಏನು ಕೊಡುತ್ತೀಯೆ ? "

" ಕೊಡುವುದಕ್ಕೆ ಈಗ ನನ್ನಲ್ಲೇನೂ ಇಲ್ಲ. ಆದರೆ ನಿನ್ನ ಸಲುವಾಗಿ ನಾನು ಪೃಥ್ವೀಪ್ರದಕ್ಷಿಣೆಯನ್ನು ಮಾಡೆಂದರೂ ಮಾಡುವೆನು ! "

" ಅದೇನೂ ನನಗೆ ಬೇಕಾಗಿಲ್ಲ. ನಿನ್ನ ಉದ್ದವಾದ ಕರಿಯ ಕೂದಲನ್ನು ನನಗೆ ಕೊಡು ! ಅದು ಬಹು ಸುಂದರವಿದೆಯೆಂದು ನಿನಗೆ ಗೊತ್ತಿರಬಹುದು, ಮತ್ತು ಅದು ನನ್ನ ಇಚ್ಛೆಯನ್ನು ಪೂರ್ಣಮಾಡುವುದು. ನೀನು ಅದಕ್ಕೆ ಬದಲಾಗಿ ನನ್ನ ನರೆಗೂದಲನ್ನು ತೆಗೆದುಕೋ ! ಕೊಟ್ಟು ತೆಗೆದುಕೊಳ್ಳುವುದು ಯಾವಾಗಲೂ ಯೋಗ್ಯ. "

" ನಿನಗೆ ಇನ್ನೇನೂ ಬೇಕಿಲ್ಲವೇ ? ಸರಿ, ನೀನು ಕೇಳಿದುದನ್ನು ನಾನು ಸಂತೋಷದಿಂದ ಕೊಡುವೆನು ! "

ಅವಳು ತನ್ನ ಅತ್ಯಂತ ಸುಂದರವಾದ ಕೂದಲನ್ನು ಕೊಟ್ಟು ಅದಕ್ಕೆ ಬದಲು ಆ ಮುದುಕಿಯ ನರೆಗೂದಲನ್ನು ಸ್ವೀಕರಿಸಿದಳು.

* * *

ಅನಂತರ ಅವರಿಬ್ಬರೂ ಮೃತ್ಯುವಿನ ಆಗ್ರಾಲಯವನ್ನು ಪ್ರವೇಶಿಸಿದರು. ಅಲ್ಲಿ ಅನೇಕ ಕುಸುಮಗಳೂ ತರು-ಲತೆಗಳೂ ಬಹು ಚೆನ್ನಾಗಿ ಬೆಳೆದಿದ್ದುವು. ಗಾಜಿನ ಗಂಟೆಗಳ ಕೆಳಕ್ಕೆ ಸುಂದರವಾದ ನೀಲಪುಷ್ಪಗಳ ಲತೆಗಳಿದ್ದು, ಕೆಲವು ಹೊಸವೂ ಪುಷ್ಟವೂ ಆಗಿದ್ದುವು; ಇನ್ನು ಕೆಲವು ಬಾಡಿದ್ದುವು. ನೀರ್ನಾಗಗಳು ಅವುಗಳನ್ನು ಸುತ್ತುಗಟ್ಟಿದ್ದು, ಏಡಿಗಳು ಅವುಗಳ ಚಿಕ್ಕ ಚಿಕ್ಕ ಬೊಡ್ಡೆಗಳನ್ನು ಹಿಡಿದುಕೊಂಡಿದ್ದುವು. ಎತ್ತರವಾದ ತಾಳೆಮರಗಳೂ, ತೆಂಗು-ಬಾಳೆಗಳೂ, ಇನ್ನಿತರ ಗಿಡಗಂಟೆಗಳೂ ಅಲ್ಲಿ ಮನೆ ಮಾಡಿದ್ದುವು. ಪ್ರತಿಯೊಂದು ಗಿಡಕ್ಕೂ ಬೇರೆ ಬೇರೆ ಮಾನವ-ಜೀವಿಗಳ ಹೆಸರುಗಳಿದ್ದುವು. ಚೀಣದವ, ಭಾರತದವ, ಗ್ರೀನ್ ಲ್ಯಾಂಡಿನವ ಹೀಗೆ ಜಗತ್ತಿನ ಎಲ್ಲಾ ಭಾಗಗಳವರ ಜೀವನವೃಕ್ಷಗಳೂ ಅಲ್ಲಿ ಒಟ್ಟಾಗಿದ್ದುವು. ಚಿಕ್ಕ ಚಿಕ್ಕ ಪಾತ್ರೆಗಳಲ್ಲಡಗಿಸಿದ ದೊಡ್ಡ ದೊಡ್ಡ ಮರಗಳೂ ಅಲ್ಲಿ ಇದ್ದುವು. ಅವು ಬಹು ದಟ್ಟವಾಗಿ ಬೆಳೆದಿದ್ದು, ಆ ಪಾತ್ರೆಗಳನ್ನು ಒಡೆಯುವಂತಿದ್ದುವು. ಸಣ್ಣವೂ ಎಷ್ಟೆಷ್ಟೊ ಬಾಡಿದುವೂ ಆದ ಹೂಗಳು, ಆ ಬೆಲೆಯುಳ್ಳ ಭೂಮಿಯಲ್ಲಿದ್ದುವು. ಪ್ರತಿಯೊಂದಕ್ಕೂ ಪಾವಸೆ ಸುತ್ತುಗಟ್ಟಿದ್ದು

ಅವೆಲ್ಲ ಬಹು ಜೋಕೆಯಿಂದಿರಿಸಲ್ಪಟ್ಟಿದ್ದುವು. ಆ ದುಃಖಿತಳಾದ ತಾಯಿ ಚಿಕ್ಕ ಚಿಕ್ಕ ಬಳ್ಳಿಗಳ ಹತ್ತಿರ ಬಾಗಿ, ಅವುಗಳಲ್ಲಿ ಮಾನವ ಹೃದಯವು ಜಾಗೃತವಾಗಿರುವುದನ್ನು ನಿರೀಕ್ಷಿಸಿದಳು. ಕೊನೆಯಲ್ಲಿ ಆ ಸಹಸ್ರಾವಧಿ ಲತಾಂಗಗಳಲ್ಲಿ, ತನ್ನ ಮಗುವಿದ್ದುದನ್ನು ಗೊತ್ತು ಪಡಿಸಿದಳು.

"ಅಹಾ, ಇಲ್ಲಿದೆ!" ಎಂದು ಆನಂದಭರಿತಳಾಗಿ ಕೂಗುತ್ತ ಅವಳು ತನ್ನ ಕರಗಳನ್ನು ಚಾಚಿ, ನಿರ್ವಿಣ್ಣವಾಗಿ ಬಾಡಿ ಬತ್ತಿದ ಚಿಕ್ಕ ಪೀತ ಪುಷ್ಪವೊಂದನ್ನು ಹಿಡಿಯಲು ಯತ್ನಿಸಿದಳು.

"ಹೂವನ್ನು ಮುಟ್ಟಬೇಡ. ಇಲ್ಲಿಯೇ ಇರಲಿ. ಮೃತ್ಯುವು ಬಂದಬಳಿಕ–ಈಗಲೇ ಬರಬಹುದು–ಅವನಿಗೆ ಆ ಬಳ್ಳಿಯನ್ನು ಎಳೆಯುವುದಕ್ಕಾಸ್ಪದವನ್ನೀಯಬೇಡ. ಅವನು ಹಾಗೆ ಮಾಡಿದುದಾದರೆ ನೀನು ಮಿಕ್ಕ ಬಳ್ಳಿಗಳನ್ನೆಳೆಯುವುದಾಗಿ ಬೆದರಿಸು. ಏಂದರೆ ಅವನು ಗಾಬರಿಯಾಗುವನು. ಅವನು ಅವೆಲ್ಲವುಗಳಿಗೂ ಹೊಣೆಗಾರನಾಗಿರುವನು. ಯಾವುದಾದರೊಂದು ಲತೆಯು ಎಳೆಯಲ್ಪಡುವುದಕ್ಕೆ ಮೊದಲು, ಅವನಿಗೆ ದೇವಲೋಕದಿಂದ ಆಜ್ಞೆ ಬೇಕಾಗುವುದು."

ಒಮ್ಮೆಲೇ ಶೀತಲವಾದ ಗಾಳಿಯೊಂದು ಆ ಶಾಲೆಯಲ್ಲಾಗಮಿಸಲು, ಆ ಕುರುಡು ತಾಯಿ, ಮೃತ್ಯು ಬರುವುದಾಗಿ ಭಾವಿಸಿದಳು. ಅದರಂತೆಯೆ ಮೃತ್ಯುವು ಅಲ್ಲಿಗೆ ಬಂದೇ ಬಿಟ್ಟ. ಬಂದು ಅವಳನ್ನು ಪ್ರಶ್ನಿಸಿದ:

"ನಿನಗೆ ಇಲ್ಲಿಗೆ ಬರುವ ಹಾದಿ ಹೇಗೆ ಗೊತ್ತಾಯಿತು? ನನಗಿಂತಲೂ ಹೆಚ್ಚಿನ ವೇಗದಿಂದ ಬರಲು ಹೇಗೆ ಸಾಧ್ಯವಾಯಿತು?"

"ನಾನು ಮಗುವೊಂದರ ತಾಯಿ!"

ಮೃತ್ಯು ತನ್ನ ಉದ್ದವಾದ ಕೈಗಳನ್ನು ಚಾಚಿ, ಆ ಚಿಕ್ಕ ಕೋಮಲ ಹೂವನ್ನು ಹಿಡಿಯಲು ಯತ್ನಿಸಿದ. ಆದರೆ ಅವಳು ತನ್ನ ಕರಗಳನ್ನು ಅದರ ಸುತ್ತಲೂ ಗಟ್ಟಿಯಾಗಿರಿಸಿದ್ದಳು. ಹೀಗಿದ್ದರೂ ಅವನದನ್ನು ಮುಟ್ಟುವನೆಂದು ಅವಳಿಗೆ ಹೆಚ್ಚಾಗಿ ಚಿಂತೆಯಿದ್ದಿತು. ಮೃತ್ಯು ಅವಳ ಕರಗಳ ಮೇಲೆ ಉಸಿರನ್ನು ಬಿಟ್ಟ. ಅದು ಮಂಜಿನಿಂದ ತುಂಬಿದ ಗಾಳಿಗಿಂತಲೂ ಹೆಚ್ಚಾಗಿ ತಂಪಾಗಿದ್ದುದರಿಂದ, ಅವಳ ಕೈಗಳು ನಿರ್ವಿಣ್ಣವಾಗಿ ಕೆಳಕ್ಕೆ ಜಾರಿದುವು.

"ನನಗೆ ವಿರೋಧವಾಗಿ ಏನನ್ನೂ ಮಾಡಲು ಸಾಧ್ಯವಿಲ್ಲ ನಿನಗೆ..!"

"ಆದರೆ ದಯಾಳು ದೇವನಿಗೆ ಸಾಧ್ಯವಿಲ್ಲವೆ?"

"ಅವನು ಹೇಳಿದುದನ್ನೇ ನಾನು ಮಾಡುವವನು. ನಾನು ಅವನ ತೋಟಿಗ; ಅವನ ಗಿಡಗಳನ್ನೂ ಹೂಗಳನ್ನೂ ತೆಗೆದುಕೊಂಡೊಯ್ದು, ಯಾರಿಗೂ ಗೊತ್ತಿರದ ನಂದನವನಗಳಲ್ಲಿಡುತ್ತೇನೆ. ಅವು ಅಲ್ಲಿಯೇ ಬೆಳೆಯುತ್ತವೆ. ಅಲ್ಲಿಯೆ ಏಕೆನ್ನುವುದನ್ನು ನಾನು ನಿನಗೆ ಹೇಳಲಾರೆನು."

"ನನ್ನ ಮಗುವನ್ನು ತಿರುಗಿಕೊಡು." ಎಂದು ಅವಳು ವಿಚಾರಿಸಿದಳು; ಒತ್ತಾಯಪಡಿಸಿದಳು; ಪ್ರಳಾಪಿಸಿದಳು. ಒಮ್ಮೆಲೆ ಎರಡು ಸುಂದರ ಕುಸುಮಗಳನ್ನು ಹಿಡಿದು "ನಾನು ನಿನ್ನ ಹೂವುಗಳನ್ನೆಲ್ಲ ಕಿತ್ತಿ ಹಾಕುತ್ತೇನೆ. ನನಗಿನ್ನು ಯಾವ ಆಶೆಯೂ ಉಳಿದಿಲ್ಲ!" ಎಂದು ಕೂಗಿದಳು ತಾಯಿ.

"ನೀನವುಗಳನ್ನು ಮುಟ್ಟಬೇಡ, ನೀನು ಬಹು ದುಃಖಿತಳಾಗಿದ್ದೀಯೆಂದು ಹೇಳುತ್ತೀಯೆ..ಹೀಗಿದ್ದೂ ಬೇರೊಬ್ಬ ನಿನ್ನಂತಹ ತಾಯಿಗೆ ದುಃಖವನ್ನೀಯುತ್ತೀಯೇ ನೀನು!"

"ಬೇರೊಬ್ಬ ತಾಯಿ—"

ಅವಳ ಕರಗಳು ನಿದಾನವಾಗಿ ಆ ಪುಷ್ಪಗಳಿಂದ ದೂರವಾದುವು.

"ಇಲ್ಲಿ ನಿನ್ನ ಕಣ್ಣುಗಳಿವೆ. ತೆಗೆದುಕೊ! ನಾನು ಅವುಗಳನ್ನು ಸರೋವರದಿಂದ ಪಡೆದುಕೊಂಡೆ. ಬಹಳ ಹೊಳೆಯುತ್ತಿವೆ. ನನಗೆ ಅವುಗಳು ನಿನ್ನವೆಂದು ತಿಳಿದಿರಲಿಲ್ಲ. ಅವುಗಳನ್ನು ತೆಗೆದುಕೊ. ಈಗ ಅವು ಬಹು ಸ್ವಚ್ಛವಾಗಿ ಕಾಣುತ್ತಿದ್ದು, ಬಹು ದೂರದರ್ಶಿಗಳಾಗಿವೆ.. ನೀನು ಕಿತ್ತಿಹಾಕಬೇಕೆಂದಿದ್ದ ಹೂವುಗಳೆರಡರ ಹೆಸರುಗಳನ್ನು ಹೇಳುತ್ತೇನೆ. ನೀನೇ ವಿಚಾರಿಸು, ಎಷ್ಟು ಹಾನಿಯನ್ನು ಮಾಡುತ್ತಿದ್ದೀಯೆ ಎನ್ನುವುದನ್ನು!"

ಅವುಗಳನ್ನು ನೋಡಿದಳು. ಮೊದಲನೆಯದು ಜಗತ್ತಿಗೆಷ್ಟು ಆನಂದದಾಯಕವಾಗಿದೆಯೆನ್ನುವುದನ್ನು ತಿಳಿದಳು. ಆನಂತರ ಬೇರೊಂದು ಜೀವಿಯೆಡೆ ನೋಡಿದಳು; ಅದು ಕುತೂಹಲ, ಜಿಪುಣತೆ, ದಾರಿದ್ರ್ಯ, ಕಷ್ಟಗಳಿಂದ ತುಂಬಿದ್ದಿತು.

"ಎರಡೂ ದೈವೇಚ್ಛೆಯಿಂದಾದುವುಗಳು." ಎಂದು ಮೃತ್ಯು ಉಸಿರಿದ.

"ಇವುಗಳಲ್ಲಾವ ಹೂವು ಕೆಡುಕಿನದು? ಮತ್ತಾವುದು ಸೌಖ್ಯಕಾರಕವಾಗಿದೆ?"

"ನಾನದನ್ನು ಹೇಳಲಾರೆ. ನೀನು ಇಷ್ಟು ಮಾತ್ರ ತಿಳಿಯಬಹುದು; ಇವುಗಳಲ್ಲೊಂದು ಹೂವು ನಿನ್ನ ಮಗುವಿನದು. ನೀನು ನಿನ್ನ ಮಗುವಿನ ಭವಿಷ್ಯಕ್ಕೆ ಕಾರಣಳಾದುದು ಅದರ ದೈವ!"

ತಾಯಿ ಭೀತಿಯಿಂದ ಕುಣಿದು ಮತಿಭ್ರಷ್ಟಳಾಗಿ ಕೂಗಿದಳು:

"ಇವುಗಳಲ್ಲಾವುದು ನನ್ನ ಮಗುವಿಗೆ ಸಂಬಂಧಿಸಿದೆ? ಹೇಳು ಅದನ್ನು! ಆ ಅಮಾಯಕ ಮಗುವನ್ನು ಬಿಟ್ಟುಬಿಡು! ನನ್ನ ಮಗುವು ಎಲ್ಲ ದುಃಖಗಳಿಂದಲೂ ಬಿಡುಗಡೆಹೊಂದಲಿ; ಇಲ್ಲವಾದರೆ ಅದನ್ನೆಲ್ಲಿಯಾದರೂ ಒಯ್ದುಬಿಡು! ದೇವರ ರಾಜ್ಯಕ್ಕೆ ತೆಗೆದುಕೊಂಡುಹೋಗು! ನಾನು ಪ್ರಳಾಪಿಸಿದುದನ್ನೂ ಯತ್ನ ಮಾಡಿದುದನ್ನೂ ಮರೆತುಬಿಡು! ನಾನು ಮಾಡಿದುವುಗಳೆಲ್ಲವೂ ಮರೆತುಹೋಗಲಿ!"

"ನೀನು ಹೇಳುವುದೇ ನನಗೆ ತಿಳಿಯಲೊಲ್ಲದು. ನಿನಗೆ ನಿನ್ನ ಮಗುವು ತಿರುಗಿಬೇಕೋ ಅಥವಾ ನಿನಗೆ ಗೊತ್ತಿರದಂತಹ ಸ್ಥಳಕ್ಕೆ ಅದನ್ನು ಒಯ್ದುಬಿಡಲೋ?"

ತಾಯಿಯೇನನ್ನೂ ಹೇಳಿ, ಅನಂತರ ತನ್ನ ಕೈಗಳನ್ನು ಮೇಲಕ್ಕೆತ್ತಿ ಮಣಿದು, ದಯಾಳು ದೇವರಿಗೆ ಪ್ರಾರ್ಥನೆಮಾಡಿದಳು:

"ದೇವಾ, ನಿನ್ನ ಆಜ್ಞೆಗೆ ವಿರೋಧವಾಗಿ ಹೋಗಹೇಳುವ ನನ್ನ ಮೊರೆ ಕೇಳಬೇಡ. ಅದೇ ಯಾವಾಗಲೂ ಸಾಧುವಾದುದು. ಮೊರೆ ಕೇಳಬೇಡ..ಬೇಡ..ಬೇಡವೇ ಬೇಡ!"

ಅವಳ ತಲೆಯು ಎದೆಯವರೆಗೂ ಬಾಗಿಹೋಯಿತು.

ಮೃತ್ಯು ಅವಳ ಮಗುವಿನೊಂದಿಗೆ ಎಲ್ಲಿಯೋ ಹೊರಟುಹೋದ.

ಏಸಿಯಾಖಂಡದಲ್ಲಿಯ ಫ್ರೆಂಚ್ ಪ್ರದೇಶಗಳು

★

ಶ್ರೀ. ಬಿ. ಪಾರ್ಥಸಾರಥಿರಾಯರು

ಫ್ರೆಂಚ್ ಸಾಮ್ರಾಜ್ಯದ ಆಧಿಪತ್ಯ ಏಸಿಯಾಖಂಡದಲ್ಲಿ ಎಲ್ಲೆಲ್ಲಿ ಇದೆಯೆಂಬುದನ್ನು ನಮ್ಮಲ್ಲಿ ಎಷ್ಟು ಜನ ಬಲ್ಲರು? ಬಲ್ಲವರು ಬಹಳಿಲ್ಲವೆಂತಲೆ ಈ ಲೇಖನ ಪ್ರಕಟಿಸಲಾಗಿದೆ.

★

ಮುನ್ನುಡಿ.

ಜಗತ್ತಿನಲ್ಲಿಯ ಸಾಮ್ರಾಜ್ಯಗಳಲ್ಲಿ ಫ್ರೆಂಚ್ ಸಾಮ್ರಾಜ್ಯವು ಎರಡನೆಯ ಕ್ರಮಾಂಕವನ್ನು ಪಡೆದು ನಿಲ್ಲುವುದು. ಮೊದಲನೆಯದು ಬ್ರಿಟಿಷ್ ಸಾಮ್ರಾಜ್ಯ, ಎರಡನೆಯದು ಫ್ರೆಂಚ್ ಸಾಮ್ರಾಜ್ಯ. ಬ್ರಿಟಿಷ್ ಸಾಮ್ರಾಜ್ಯದಂತೆಯೆ ಫ್ರೆಂಚ್ ಸಾಮ್ರಾಜ್ಯದಲ್ಲಿಯೂ ಸೂರ್ಯನು ಅಸ್ತನಾಗುವುದಿಲ್ಲವಂತೆ; ಏಕೆಂದರೆ ಜಗತ್ತಿನ ಐದು ಖಂಡಗಳಲ್ಲಿಯೂ ಫ್ರೆಂಚ್ ಸಾಮ್ರಾಜ್ಯವು ಹಬ್ಬಿಗೆಗೊಂಡಿದೆ. ಫ್ರಾನ್ಸು ಮೊದಲಿನಿಂದಲೂ ಬಲಾಢ್ಯನಾದ ರಾಷ್ಟ್ರ. ಅಲ್ಲಿಯ ಶೂರಸೈನಿಕರು ಸಾವಿನ ಭೀತಿಯನ್ನೆ ಅರಿಯದವರು. ಯುರೋಪಿನಲ್ಲಿ ಪ್ರಜಾಪ್ರಭುತ್ವವನ್ನು ಎಲ್ಲಕ್ಕಿಂತ ಮೊದಲು ಸ್ಥಾಪಿಸಿದುದೆಂದರೆ ಫ್ರಾನ್ಸ್ ದೇಶವೆ. ಇಂದು ಪರಿಸ್ಥಿತಿಯು ವೈಪರೀತ್ಯದ ಮೂಲಕ ಸೋತು ಸಣ್ಣಗಾಗಿದ್ದರೂ ಫ್ರೆಂಚ್‌ಸಾಮ್ರಾಜ್ಯದ ಸ್ವಾಧೀನದಲ್ಲಿದ್ದ ಬೇರೆ ಬೇರೆ ಖಂಡಗಳಲ್ಲಿಯ ಅನೇಕ ಪ್ರದೇಶಗಳು, ಈಗಲೂ ಅದರ ವಶದಲ್ಲಿಯೆ ಇವೆ. ಆ ಪ್ರದೇಶಗಳಲ್ಲಿ ಕೆಲವು ಫ್ರೆಂಚರ ವಸಹಾತಗಳಾಗಿವೆ; ಇನ್ನು ಕೆಲವು ಮಾಂಡಲಿಕ ಸಂಸ್ಥಾನಗಳಾಗಿವೆ. ಅವು ಯಾವುಯಾವುವೆಂಬುದನ್ನೂ, ಸ್ವಲ್ಪದರಲ್ಲಿಯೆ ಅವುಗಳ ಪರಿಚಯವನ್ನೂ ಈ ಲೇಖನದ ಮೂಲಕ ತಿಳುಹಬೇಕೆಂದು ಮನದ ಆಶೆ. ಜನಸಾಮಾನ್ಯರಲ್ಲಿ ಬಹುಶ್ರುತತ್ವವನ್ನು ಹರಡಬೇಕೆಂದು ಹವಣಿಸುವ ಜಯಂತಿಯ ಉದ್ದೇಶಕ್ಕೆ, ಈ ಲೇಖನ ಭೌಗೋಲಿಕ ಪರಿಚಯದ ದೃಷ್ಟಿಯಿಂದ ತಕ್ಕುದಾಗಿದೆ ಎಂದು ನನ್ನ ನಂಬುಗೆ. ಮೊದಲು ಏಶಿಯಾಖಂಡದಲ್ಲಿರುವ ಫ್ರೆಂಚ್ ಪ್ರದೇಶಗಳನ್ನೆ ಒಂದೊಂದನ್ನಾಗಿ ತೆಗೆದುಕೊಳ್ಳೋಣ.

ಫ್ರೆಂಚ್ ಹಿಂದುಸ್ತಾನ

ಫ್ರೆಂಚರು ಹಿಂದುಸ್ತಾನಕ್ಕೆ ಮೊದಲು ಬಂದು ಹಲವು ಪ್ರದೇಶವನ್ನು ಸಂಪಾದಿಸಿಕೊಂಡಿದ್ದರು. ಆದರೆ ಅದೆಲ್ಲ ಹೋಗಿ ಈಗ ಉಳಿದಿರುವ ಭಾಗವೆಂದರೆ ತೀರ ಕಡಿಮೆ. ಅದರಲ್ಲಿಯೂ ಪಾಂಡೀಚೇರಿ ಪ್ರಾಂತ್ಯವೆ ಪ್ರಾಮುಖ್ಯವಾದುದು. ಫ್ರೆಂಚರು ಈ ಪ್ರಾಂತ್ಯವನ್ನು ವಶಪಡಿಸಿಕೊಂಡುದು ೧೬೭೪ರಲ್ಲಿ; ಮುಂದೆ ೧೬೯೩ರಲ್ಲಿ ಡಚ್ಚರು ಇದನ್ನು ಅವರಿಂದ ಕಿತ್ತುಕೊಂಡಿದ್ದರು. ಬಳಿಕ ೧೬೯೯ರಲ್ಲಿ ಈ ಪ್ರಾಂತ್ಯವು ಮತ್ತೆ ಫ್ರೆಂಚರ ಕಡೆಗೆ ಬಂದಿತು. ಮುಂದೆ ೧೭೬೧ರಲ್ಲಿ ಇಂಗ್ಲಿಷರು ಇದನ್ನು ಗೆದ್ದು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು. ಮತ್ತೆ ೧೭೬೫ರಲ್ಲಿ ಮರಳಿ ಫ್ರೆಂಚರ ಕಡೆಗೆ ಬಂದಿತು. ಹೀಗೆಯೆ ಮೂರುಸಲ ಸೋಲು, ಗೆಲವು ನಡೆದು, ಕೊನೆಗೆ ೧೮೧೬ ರಲ್ಲಿ ಪಾಂಡೀಚೇರಿಯು ಫ್ರೆಂಚ ಅಧಿರಾಜ್ಯದ ಆಡಳಿತಕ್ಕೆ ನಿರಂತರವಾಗಿ ಸೇರಿ ಹೋಯಿತು. ೧೮೧೪-೧೫ರಲ್ಲಿ ನಡೆದ ಇಂಗ್ಲಿಷ್-ಫ್ರೆಂಚ್ ಒಪ್ಪಂದದಂತೆ, ಫ್ರೆಂಚ್ ಹಿಂದುಸ್ತಾನದಲ್ಲಿ ಬೇರೆ ಬೇರೆ ಐದು ವಸಹಾತುಗಳು ಉಳಿದುಕೊಂಡಿವೆ. ೧೯೩೬ನೆಯ ಇಸವಿಯಲ್ಲಿ ಪ್ರಸಿದ್ಧವಾದ ವರದಿಯಂತೆ, ಈ ಪ್ರಾಂತ್ಯದ ಜನಸಂಖ್ಯೆಯನ್ನು ಹೇಳಬೇಕೆಂದರೆ ಪಾಂಡೀಚೇರಿಯಲ್ಲಿ ೧೮೭೮೭೦, ಕಾರಿಕಲ್ಲಿನಲ್ಲಿ ೬೨೪೫೫, ಚಂದ್ರನಗರದಲ್ಲಿ ೩೧೮೫೩, ಮೆಹೂದಲ್ಲಿ ೧೩೧೬೨, ಯಾನಾನಿನಲ್ಲಿ ೫೩೯೭ ಹೀಗಿದೆ. ಫ್ರೆಂಚ್ ಹಿಂದುಸ್ತಾನದಲ್ಲಿ ಐದು ಮುಖ್ಯ ವಿಭಾಗಗಳನ್ನು ಮಾಡಲಾಗಿದ್ದು **ಪಾಂಡೀಚೇರಿ, ಕಾರೀಕಲ್ಲು, ಚಂದ್ರನಗರ, ಮೆಹು, ಯಾನಾನ್** ಇವು ಆಯಾ ವಿಭಾಗಗಳಲ್ಲಿಯ ಮುಖ್ಯ ನಗರಗಳಾಗಿವೆ. ಈ ಐದು ನಗರಗಳಲ್ಲಿಯೂ ಸ್ಥಾನಿಕಸ್ವರಾಜ್ಯ ಸಂಸ್ಥೆಗಳಿರುವುವು. ಫ್ರೆಂಚ್ ಹಿಂದುಸ್ತಾನದ ಗವರ್ನರನ ಕಾರ್ಯಾಲಯ ಪಾಂಡೀಚೇರಿಯಲ್ಲಿಯೆ ಇರುವುದು. ಫ್ರಾನ್ಸ್ ದೇಶದ ಪಾರ್ಲಿಮೆಂಟಿಗೆ ಈ ವಸಹಾತಿನ ಪರವಾಗಿ ಒಬ್ಬ ಸದಸ್ಯ (ಸಿನೇಟರ್) ನನ್ನೂ ಒಬ್ಬ ಸಹಕಾರಿಸದಸ್ಯ (ಡೆಪ್ಯುಟಿ) ನನ್ನೂ ಕಳುಹುವುದುಂಟು.

೧೯೩೬ನೆಯ ಇಸವಿಯ ಲೆಕ್ಕಾಚಾರದಂತೆ ಫ್ರೆಂಚ್ ಹಿಂದುಸ್ತಾನದಲ್ಲಿ ೬೧ ಪ್ರಾಥಮಿಕ ಶಾಲೆಗಳೂ, ೬ ಉಚ್ಚ ವಿದ್ಯಾಶಾಲೆಗಳೂ ಇದ್ದುವು. ಇವುಗಳಲ್ಲಿ ಕಲಿಯುವ ಹುಡುಗರ ಒಟ್ಟು ಸಂಖ್ಯೆ ೧೩೪೫೨; ಕಲಿಸುವ ಅಧ್ಯಾಪಕರ ಒಟ್ಟು ಸಂಖ್ಯೆ ೩೨೮. ಪಾಂಡೀಚೇರಿ, ಕಾರಿಕಲ್ಲುಗಳು ಪ್ರಮುಖ ಬಂದರಗಳಾಗಿದ್ದು, ಅಲ್ಲಿಂದ ಸುಮಾರು ೯೯೬೯೧೦೦೦ ಫ್ರ್ಯಾಂಕುಗಳ ಆಯಾತ ವ್ಯವಹಾರವೂ ೨೨೬೨೨೦೦೦ ಫ್ರ್ಯಾಂಕುಗಳ ನಿರ್ಗತ ವ್ಯವಹಾರವೂ ಆ ವರ್ಷದಲ್ಲಿ ನಡೆಯಿತು. ಪಾಂಡೀಚೇರಿಯಿಂದ ವಿಲ್ಲಾಪುರಮ್ಮಿನವರೆಗೂ ಪೆರಾಲಮಿನಿಂದ ಕಾರಿಕಲ್ಲಿನವರೆಗೂ ರೈಲುದಾರಿಯಿದ್ದು, ಈ ದಾರಿ ೪೧ ಮೈಲು ಉದ್ದಳತೆಯದಾಗಿದೆ.

ಫ್ರೆಂಚ್ ಇಂಡೋಚಾಯನಾ

ಜಪಾನಿಗಳ ಆಶೆಯ ಕಣ್ಣುಗಳು ಇಂದು ಈ ಪ್ರದೇಶದ ಮೇಲೆ ಬಿದ್ದುದರಿಂದ, ಪತ್ರಿಕೆಗಳಲ್ಲಿ ಅನೇಕ ಸಲ ಇದರ ಹೆಸರು ಪ್ರಕಟವಾಗುತ್ತಲಿದೆ. ಆದುದರಿಂದ ಫ್ರೆಂಚ್ ಇಂಡೋಚಾಯನಾದ ಹೆಸರನ್ನು ಕೇಳಿದವರು ಈಗ ಬಹು ಜನರು ಇರಬಹುದು. ಈ ಪ್ರದೇಶದ ವಿಸ್ತಾರವು ೨೮೫೦೦೦ ಚದರು ಮೈಲಿಗಳದಿದ್ದು, ೧೯೩೬ನೆಯ ಇಸ್ವಿಯ ಜನಗಣನೆಯಂತೆ ೨೩೨೫೦೦೦೦ ದಷ್ಟು ಇಲ್ಲಿ ಜನವಸತಿಯಿದೆ. ಈ ಸಂಖ್ಯೆಯಲ್ಲಿ ೩೦೬೬೫ ಜನರು ಫ್ರೆಂಚರು, ೩೩೩೦೦೦ ಜನರು ಚೀನಾದವರು, ಮಿಕ್ಕ ೨೨೮೬೪೦೦೦ ಜನರು ಫ್ರೆಂಚ್‌ಪ್ರಜೆಗಳೆಂದು ಹೇಳಿಸಿಕೊಳ್ಳುವ ದೇಶೀಯರು. ಈ ವಸಹಾತನ್ನು **ಅನಾಮ್, ಕ್ಯಾಂಬೋಡಿಯಾ, ಟೋಕಿಂಗ್, ಲ್ಯಾವೊಸ್, ಕ್ವಾಂಗ್-ಚಾ-ವಾನ್** ಎಂಬ ಐದು ಬೇರೆ ಬೇರೆ ಸಂಸ್ಥಾನಗಳಲ್ಲಿ ವಿಭಾಗಿಸಲಾಗಿದೆ; ಅಲ್ಲದೆ ಕೋಚೀನ್-ಚಾಯನಾ ಎಂಬುದೊಂದು ಬೇರೆ ವಸಹಾತೂ ಇದರಲ್ಲಿದೆ. ಇಂಡೋಚಾಯನಾದ ೫ ಸಂಸ್ಥಾನಗಳೂ ಒಬ್ಬನೆ ಗವ್ಹರ್ನರನ ನೇತೃತ್ವಕ್ಕೆ ಒಳಗಾಗಿರುವುವು. ಇವನ ಕೈಕೆಳಗೆ '**ಸೆಕ್ರೆಟರಿ ಜನರಲ್**' ಎಂದು ಒಬ್ಬ ಅಧಿಕಾರಿಯಿರುವನು. ಪ್ರತಿಯೊಂದು ಸಂಸ್ಥಾನದಲ್ಲಿಯೂ '**ರೆಸಿಡೆಂಟ್-ಸುಪೀರಿಯರ್**' ಎಂದು ಕರೆಯಿಸಿಕೊಳ್ಳುವ ಮುಖ್ಯಾಧಿಕಾರಿಯೊಬ್ಬನಿರುವನು. ಆದರೆ **ಕೋಚೀನ್‌ಚಾಯನಾ** ಎಂಬುದು ಪ್ರತ್ಯೇಕವಾದ ಫ್ರೆಂಚ್-ವಸಹಾತಾಗಿ ಇದ್ದುದರಿಂದ, ಮಿಕ್ಕ ಸಂಸ್ಥಾನಗಳಂತೆ ಅಲ್ಲಿ 'ರೆಸಿಡೆಂಟ್ ಸುಪೀರಿಯರ್' ಇರುವುದಿಲ್ಲ. ಅದಕ್ಕಾಗಿಯೆಂದೇ ಬೇರೆಯೊಬ್ಬ ಗವರ್ನರನು ಅಲ್ಲಿ ಇರುತ್ತಾನೆ. ಫ್ರೆಂಚ್ ಇಂಡೋ-ಚಾಯನಾದಲ್ಲಿ ಬರಿಯೆ ಆರ್ಥಿಕವ್ಯವಸ್ಥೆಯ ದೃಷ್ಟಿಯಿಂದ ಏರ್ಪಡಿಸಲಾದ '**ಗ್ರ್ಯಾಂಡ್ ಕೌನ್ಸಿಲ್**' ಎಂಬುದೊಂದು ಸಭೆ ಇದೆಯಲ್ಲದೆ, ಮಿಕ್ಕ ಆಡಳಿತದ ಸಲುವಾಗಿ ಏರ್ಪಟ್ಟಿರುವ ಇನ್ನೊಂದು '**ಗವರ್ನ್‌ಮೆಂಟ್ ಕೌನ್ಸಿಲ್**' ಎಂಬ ಶಾಸನ ಸಭೆಯೂ ಇದೆ. ಕೋಚೀನ್‌ಚಾಯನಾದ ಆಡಳಿತಕ್ರಮವನ್ನು ನಿರ್ಣಯಿಸುವುದಕ್ಕೆ '**ಕಾಲೋನಿಯಲ್ ಕೌನ್ಸಿಲ್**' ಎಂಬುದೊಂದು ಬೇರೆಯ ಶಾಸನಸಭೆಯಿದೆ. ಇಲ್ಲಿ ವಾಸಿಸುವ ಫ್ರೆಂಚ್ ವಿದ್ಯಾರ್ಥಿಗಳಿಗೆ, ಫ್ರಾನ್ಸ್‌ದೇಶದಲ್ಲಿ ಪ್ರಚಾರದಲ್ಲಿರುವ ಕ್ರಮದಂತೆಯೆ ಶಿಕ್ಷಣ ಕೊಡಲಾಗುತ್ತದೆ. ದೇಶೀಯ ಜನರ ಶಿಕ್ಷಣಕ್ಕಾಗಿ ೧೯೩೬ನೆಯ ಇಸವಿಯಲ್ಲಿ ಇಲ್ಲಿ ೬೪೪೩ ವಿದ್ಯಾಶಾಲೆಗಳಿದ್ದುವು. (ಈ ಸಂಖ್ಯೆಯಲ್ಲಿ ಪ್ರಾಥಮಿಕ ಮಾಧ್ಯಮಿಕ ಶಾಲೆಗಳೆರಡೂ ಸೇರಿರುವವು.) ಈ ವಸಹಾತಿನ ಸಂರಕ್ಷಣೆಗಾಗಿ ಮೂರು 'ಡಿವ್ಹಿಜನ್' ಗಳುಳ್ಳ ಸುಸಜ್ಜಿತ ಸೈನ್ಯವೊಂದಿದೆ.

೧೯೩೬ನೆಯ ಇಸ್ವಿಯಲ್ಲಿ ಇಂಡೋಚಾಯನಾದಲ್ಲಿ ಒಟ್ಟು ೫೪೪೧ ಮೈಲುಗಳಷ್ಟು ಉದ್ದದ ಟೆಲಿಫೋನ್ ಲೈನುಗಳು ಇದ್ದುವಲ್ಲದೆ, ತಂತೀಟಪಾಲಿನ ದಾರಿ ೩೧೯೪೨ ಮೈಲುಗಳುದ್ದದಷ್ಟು ಇದ್ದಿತು. ಸೈಗಾನಿನಿಂದ ಯುರೋಪಖಂಡಕ್ಕಾಗಿ ರೇಡಿಯೊ **ಟೆಲಿಫೋನಿಕ್ ಸರ್ವ್ಹಿಸ್ಸು** ಇದೆ. ೧೯೩೫ರ ಲೆಕ್ಕಾಚಾರದಂತೆ ತಂತೀಟಪಾಲಿನ ದಾರಿ ೧೨೦೫೬ ಮೈಲುಗಳಷ್ಟು ಮಾತ್ರ ಇದ್ದಿತು.

ಸೈಗಾನಿನಿಂದ ಮಾಯುಯೊವರೆಗೆ ೪೬ ಮೈಲು, ಹ್ಯಾನೋಯಿಯಿಂದ ನ್ಯಾಚ್ಯಾಮ್ ವರೆಗೆ ೧೧೧ ಮೈಲು, ಹ್ಯಾನೋಯಿಯಿಂದ ಸೈಗಾನಿನ ವರೆಗೆ ೧೦೭೪ ಮೈಲು, ಹೈಫೋಂಗಿನಿಂದ **ಯುನಾನ್‌ಟೊ** ವರೆಗೆ ೫೩೪ ಮೈಲು, **ಫ್ಯಾನೊಮ್ ಪೇನಿನಿಂದ ಮೊಂಕೋಲಬೊರೆ** ವರೆಗೆ ೨೧೧ ಮೈಲು, **ಟೂರ್ಚೆಮಿನಿಂದ ಡಲಾಟ್** ವರೆಗೆ ೪೯ ಮೈಲು ಹೀಗೆ ಬೇರೆ ಬೇರೆ ರೈಲುದಾರಿಗಳಿವೆ. ಒಟ್ಟು ಇಲ್ಲಿಯ ರೈಲುದಾರಿಗಳ ಉದ್ದಳತೆ ಸೇರಿ ೨೦೮೭ ಮೈಲುಗಳಷ್ಟಾಗುವುದು. ಮುಖ್ಯವಾದ ಅಂಚೆಯ ಕಚೇರಿಗಳು ೩೪೪೮ ಇದ್ದು, ಸಬ್ ಪೋಸ್ಟ್ ಆಫಿಸುಗಳು ೭೦೦ ಇವೆ. ಕರಾವಳಿಗುಂಟ ಹೊರಟ ನೌಕಾಮಾರ್ಗವು ೩೪೮೦ ಮೈಲುಗಳದಾಗಿದೆ. **ಮಾರ್ಸೇಲಿಸ್**, ಸೈಗಾನುಗಳಲ್ಲಿ ವಿಮಾನಗಳ ಹಾರಾಟ ಏರಾಟ ನಡೆಯುತ್ತಿದೆ. ಇಂಡೋಚಾಯನಾಕ್ಕೆ ಸೇರಿದ ಐದು ವಿಭಾಗಗಳಲ್ಲಿಯ ಒಂದೊಂದರ ವೈಶಿಷ್ಟ್ಯವನ್ನೂ ಕುರಿತು ಇಲ್ಲಿ ಒಂದೆರಡು ಮಾತುಗಳನ್ನು ಹೇಳಲಾಗಿದೆ.

ಕೋಚೀನ್-ಚಾಯನಾ

ಅನಾಮದ ದೊರೆಯು ಈ ದೇಶವನ್ನು ೧೮೬೨ನೆಯ ಇಸ್ವಿಯಲ್ಲಿ ಫ್ರೆಂಚರ ವಶಕ್ಕೆ ಒಪ್ಪಿಸಿದನು. ಕೋಚೀನ್ ಚಾಯನಾದ ವಿಸ್ತಾರವು ಸುಮಾರು ೨೬೪೭೬ ಚದರು ಮೈಲುಗಳಷ್ಟಿದ್ದು, ಇದು ೨೧ ಉಪಭಾಗಗಳಲ್ಲಿ ವಿಭಾಗಿತವಾಗಿದೆ. ೧೯೩೩ರಲ್ಲಿ ಇಲ್ಲಿಯ ಜನಸಂಖ್ಯೆ ೪೪೪೧೪೧೮ರಷ್ಟಿದ್ದಿತು. ಈ ಜನರಲ್ಲಿ ಸುಮಾರು ೧೬೦೦೦ ದಷ್ಟು

ಡಾಕ್ಟರ್ ಪಿ. ಸಿ. ರಾಯರು ಕೊಂಡಾಡಿದ

ರುಚಿಕರ ಮತ್ತು ಪಾಚಕ ವನಸ್ಪತಿಜನ್ಯ

ರಜಿಸ್ಟರ್ಡ **ಚಮನ** ಟ್ರಾ. ಕಿ. ೪೪.

CHAMAN

ಇದರಿಂದ ಹಸಿವೆಯಾಗಿ ಪಚನಶಕ್ತಿಯು ಬೆಳೆಯುತ್ತದೆ; ಮತ್ತು ದುರ್ಘಟ ಅಜೀರ್ಣವನ್ನು ಗುಣಪಡಿಸುತ್ತದೆ.

ಇದಲ್ಲದೆ ಥಂಡಿಯಿಂದ ಹೊಟ್ಟೆನೋಯೋಣ, ಅಪಚನ, ಕೆಮ್ಮು, ದಮ್ಮು, ಕಫ ಮುಂತಾದುವುಗಳ ಮೇಲೆ

ಚಮನವು

ಅತ್ಯಂತ ಗುಣಕಾರಿಯಿದೆ.

ಸ್ಟಾರ್ ಕಂಪನಿ, ಬೆಳಗಾಂವ

ಚಿತ್ರಸೃಷ್ಟಿ

ಎಂದರೆ

ಶ್ರೀ. ಸಾಲಿ ರಾಮಚಂದ್ರರಾಯ ಅವರ

ಕವನಸಂಗ್ರಹ

ಸಂಪಾದಕರು: **ಶಾಂ. ಭೀ. ದೇಸಾಯಿ, ಎಂ. ಎ.**

ಇದುವರೆಗೆ ಅಲ್ಲಲ್ಲಿ ತುಣುಕುಮಿಣುಕಾಗಿ ಪ್ರಕಟವಾಗಿದ್ದ ಶ್ರೀಯುತರ ಕವನಗಳನ್ನು, ಮೊದಲು ಬಾರಿ ಒಂದೆಡೆಗೆ ಈ ಪುಸ್ತಕದಲ್ಲಿ ಪವಣಿಸಿ, ಶ್ರೀಯುತರ ಕಾವ್ಯ ರಚನೆ, ಕಲಾರೀತಿ, ಕೃತಿಯ ವಿಶಿಷ್ಟತೆ, ಉದಾತ್ತಭಾವ ಇತ್ಯಾದಿ ಅಂಗಗಳನ್ನು ಸಮಾಲೋಚನೆಯಲ್ಲಿ ವಿಸ್ತಾರವಾಗಿ ವಿವೇಚಿಸಿದೆ. ಕೆಲವು ಪದ್ಯಗಳು ಕನ್ನಡ ಕಲಾಕೋವಿದರಾದ ಶ್ರೀ. ಅಷ್ಟಪುತ್ರಿ ಪ್ರಲ್ಹಾದರಾಯರು ಸಿದ್ಧಗೊಳಿಸಿದ ಭಾವವ್ಯಂಜಕವಾದ ಚಿತ್ರಗಳಿಂದ ಯುಕ್ತವಾಗಿವೆ.

ವಿಶ್ವಸಾಹಿತ್ಯ ಪ್ರಕಟನೆಯ ಎರಡನೆಯ ಕುಡಿಯು.

ಮುದ್ರಣ ಪ್ರಾರಂಭವಾಗಿದೆ. ಬೇಗನೆ ಪ್ರಕಟವಾಗುವುದು.

ಪ್ರತಿ ದೊರೆಯುವ ಸ್ಥಳ:

ಕರ್ನಾಟಕ ಬುಕ್ ಡಿಪೊ,

ಗಾಂಧಿ ಚೌಕ, ಧಾರವಾಡ.

ಫ್ರೆಂಚರೂ ೫೬೭ ರಷ್ಟು ಯುರೋಪದ ಬೇರೆ ಭಾಗದದರೂ ಇದ್ದರು. ಜನಸಂಖ್ಯೆಯಲ್ಲಿ ಅನಾಮಿಗಳು, ಚೀನಿಗಳು, ಪರದೇಶಿಗಳು ಇವರೇ ತುಂಬುತುಂಬಾಗಿ ಇದ್ದಾರೆ. **ಸೈಗಾನ್** ಎಂಬುದು ಮುಖ್ಯ ಬಂದರವಾಗಿದ್ದು ಇಲ್ಲಿಂದ **ಹಾಂಗ್‌ಕಾಂಗ್, ಸಿಂಗಾಪೂರ**ಗಳ ಮಾರ್ಗವಾಗಿ— ಇಂಗ್ಲಿಷ್, ನಾರ್ವೇಜಿಯನ್, ಜಪಾನ್ ಮತ್ತು ಚೀನಾ ಹಡಗುಗಳ ಮೂಲಕ — ಸಾಗರವ್ಯವಹಾರವು ನಡೆಯುತ್ತದೆ. ಈ ದೇಶದಲ್ಲಿ ವಾಹನಗಳು ಹೋಗಿಬರುವುದಕ್ಕೆ ಅನುಕೂಲವಾಗಿರುವಂತಹ ದಾರಿ ೩೮೬೨ ಮೈಲುಗಳಷ್ಟು ಉದ್ದಳತೆಯುಳ್ಳದ್ದಿದೆ.

ಅನಾಮ್

ಈ ಪ್ರಾಂತದ ವಿಸ್ತೀರ್ಣವು ೩೯೬೫೮ ಚದರು ಮೈಲುಗಳದಿದೆ. ೧೯೩೬ನೆಯ ಇಸ್ವಿಯ ಲೆಕ್ಕದಂತೆ ಇಲ್ಲಿಯ ಜನಸಂಖ್ಯೆ ೫೬೫೬೧೨೬ ರಷ್ಟಿದೆ. ಇದರಲ್ಲಿ ೩೬೮೧ ಜನ ಯುರೋಪಿಯನರೂ ೨೯೧೬೦೫ ರಷ್ಟು ಮೊಯಿ ಜನರೂ, ೮೪೩೫ ಚೀನೀ ಜನರೂ, ಜಪಾನಿಗಳು ಹಿಂದಿಗಳು ಸೇರಿ ಬರಿಯ ೧೫ ಜನರೂ ಇರುವರು. ಇಲ್ಲಿಯ ಆಡಳಿತವು ಇಲ್ಲಿಯ ದೊರೆಯಾದ ‘ಬಾವ್-ಡಿ’ ಎಂಬವನ ಶಾಸನದಂತೆ ನಡೆಯುತ್ತದೆ. ಫ್ರೆಂಚ್ ಸರಕಾರದಿಂದ ಮನ್ನಣೆ ಪಡೆದ ಮಂತ್ರಿಮಂಡಲವು ಆಡಳಿತದಲ್ಲಿ ದೊರೆಗೆ ಸಹಾಯಕವಾಗಿರುತ್ತದೆ. ೧೯೩೫ರಲ್ಲಿ ಈ ಭಾಗದಲ್ಲಿ ೧೦೪೨ ರಷ್ಟು ಪ್ರಾಥಮಿಕ ಶಾಲೆಗಳಿದ್ದುವು. ೧೯೩೬ ರಲ್ಲಿ ಈ ದೇಶದಲ್ಲಿ ೨೫೬೬೫೦೦೦ ಫ್ರ್ಯಾಂಕುಗಳ ಆಯಾತವ್ಯವಹಾರವೂ ೬೮೯೪೩೦೦೦ ಫ್ರ್ಯಾಂಕುಗಳ ನಿರ್ಗತವ್ಯವಹಾರವು ನಡೆಯಿತು.

ಕ್ಯಾಂಬೋಡಿಯಾ

೧೯೩೬ನೆಯ ಇಸವಿಯಲ್ಲಿ ಕ್ಯಾಂಬೋಡಿಯಾವು ಫ್ರೆಂಚರ ನೇತೃತ್ವದಲ್ಲಿ ಬಂದು ಸೇರಿತು. ಇದು ೬೭೫೫೦ ಚದರು ಮೈಲುಗಳಷ್ಟು ವಿಸ್ತೀರ್ಣವಾಗಿದ್ದು, ೧೯೩೬ ನೆಯ ಜನಗಣನೆಯಂತೆ ೩೦೪೬೪೩೧ ರಷ್ಟು ಇಲ್ಲಿ ಜನವಸತಿಯಿದೆ. ಸದ್ಯ ಇಲ್ಲಿ ಆಳುತ್ತಿರುವ ದೊರೆ ‘ **ಸಿಸೊವ್ಯಾಕ್ ಮೊನಿವೊಗ್** ’ ಎಂಬವನು ೧೯೨೭ನೆಯ ಇಸ್ವಿಯ ಜುಲೈ ೨೨ನೆಯ ತಾರೀಖಿನ ದಿನ ಪಟ್ಟಕ್ಕೆ ಬಂದಿರುವನು. ಈ ಪ್ರದೇಶದಲ್ಲಿ ೧೪ ಉಪಭಾಗಗಳನ್ನು ಮಾಡಲಾಗಿದೆ. ‘ **ಫ್ನೋಮ್-ಪೇನ್** ’ ಎಂಬ ಹೆಸರಿನ ನಗರವು ಇದರ ರಾಜಧಾನಿ. ಇಲ್ಲಿ ೧೦೨೬೫೮ ರಷ್ಟು ಜನವಸತಿಯಿರುವುದು. ೧೯೩೬ನೆಯ ವರ್ಷದ ಲೆಕ್ಕಾಚಾರದಂತೆ ಇಲ್ಲಿ ೯೫೨ ವಿದ್ಯಾಶಾಲೆಗಳಿದ್ದುವು. ಸಯಾಮ ಸಾಮುದ್ರಧುನಿಯ ತೀರದಲ್ಲಿರುವ ‘ **ಕೇಪ್** ’ ಮತ್ತು ‘ **ರೀಮ್** ’ ಎಂಬುವೆರಡೇ ಇಲ್ಲಿಯ ಪ್ರಮುಖ ಬಂದರಗಳು. ಪೂರ್ವಾರ್ಣಂತ್ಯ ಪ್ರದೇಶಗಳಲ್ಲಿ ಕ್ಯಾಂಬೋಡಿಯಾವು ಪುರಾತನ-ಸಂಸ್ಕೃತಿಯ ಅವಶೇಷಗಳ ಸಲುವಾಗಿ ತುಂಬ ಪ್ರಸಿದ್ಧಿಪಡೆದುದಾಗಿದೆ.

ಟೋಕಿಂಗ್

ಈ ದೇಶವು ಫ್ರೆಂಚರ ಆಡಳಿತಕ್ಕೆ ಒಳಪಟ್ಟುದು, ೧೮೮೪ನೆಯ ಇಸ್ವಿಯಲ್ಲಿ. ಇದರ ವಿಸ್ತೀರ್ಣವು ೪೦೫೩೦ ಚದರು ಮೈಲುಗಳದಿದ್ದು ೨೩ ಉಪಭಾಗಗಳಲ್ಲಿ ವಿಭಾಗಿತವಾಗಿದೆ. ಅಲ್ಲದೆ ೪ ಉಪಭಾಗಗಳನ್ನು ದಂಡಿನ ಸಲುವಾಗಿ ಕಾಯ್ದಿರಿಸಲಾಗಿದೆ. ‘ **ಹನೋಯಿ** ’ ಎಂಬುದು ಈ ಪ್ರದೇಶದಲ್ಲಿ ಪ್ರಮುಖನಗರ. ಇದರ ಜನಸಂಖ್ಯೆ— ೧೯೩೬ನೆಯ ಗಣನೆಯಂತೆ— ೧೪೨೦೨೦ ರಷ್ಟಿದ್ದು, ಅದರಲ್ಲಿ ೫೫೦೩ ಜನರು ಫ್ರೆಂಚರೂ ೯೩ ಬೇರೆ ಯುರೋಪಿಯನ್ ದೇಶಗಳವರೂ ೧೩೧೯೪೨ ರಷ್ಟು ದೇಶೀಯ ಜನರೂ ೪೧೬೫ ಚೀನಿಗಳೂ ಇರುವರು. ೧೯೦೨ನೆಯ ಜಾನೇವಾರಿ ೧ನೆಯ ತಾರೀಖಿನಿಂದ ಈ ನಗರವನ್ನು **ಇಂಡೋ-ಚಾಯನಾದ ರಾಜಧಾನಿ**ಯೆಂದು ಪರಿಗಣಿಸಲಾಗುತ್ತಿದೆ.

೧೯೩೯ರಲ್ಲಿ ಈ ದೇಶದಲ್ಲಿ ೩೬೧೬೪೬೦೦೦ ಫ್ರ್ಯಾಂಕುಗಳ ಆಯಾತವ್ಯವಹಾರವೂ ೩೧೫೦೧೨೦೦೦ ಫ್ರ್ಯಾಂಕುಗಳ ನಿರ್ಗತವ್ಯವಹಾರವೂ ನಡೆಯಿತು. ‘ **ಹೆಫೋಂಗ್** ’ ಎಂಬುದು ಈ ಪ್ರದೇಶದಲ್ಲಿಯ ಪ್ರಮುಖವಾದ ಬಂದರ.

ಲ್ಯಾವೋಸ್

ಈ ಪ್ರದೇಶವು ಫ್ರೆಂಚರ ಕಡೆಗೆ ಬಂದುದು ೧೮೯೩ ರಲ್ಲಿ. ಇದು ೮೯೩೨೦ ಚದರುಮೈಲುಗಳಷ್ಟು ವಿಸ್ತೃತವಾಗಿದ್ದು, ೧೯೩೬ ರ ಜುಲೈ ತಿಂಗಳಲ್ಲಿ ನಡೆದ ಜನಗಣನೆಯ ವರದಿಯಂತೆ ಇಲ್ಲಿಯ ಜನಸಂಖ್ಯೆ ೧೦೧೧೬೯೫ ಇದೆ. ರಾಜ್ಯವ್ಯವಸ್ಥೆಯ ಅನುಕೂಲತೆಗಾಗಿ ಈ ಪ್ರದೇಶವು ೧೦ ಪ್ರಾಂತಗಳಲ್ಲಿ ವಿಭಾಗಗೊಂಡಿದೆ. ‘ **ವ್ಹಿಂಟಿಯಾನ್** ’ ಎಂಬ ನಗರವು ಇದರ

ರಾಜಧಾನಿ. 'ಸುಪೀರಿಯರ್ ರೆಸಿಡೆಂಟ್' ಎಂಬ ಹೆಸರಿನ ಮುಖ್ಯಾಧಿಕಾರಿಯ ಅಪ್ಪಣೆಯಂತೆ ಈ ಪ್ರದೇಶದ ಎಲ್ಲ ಆಡಳಿತವೂ ನಡೆಯುತ್ತಲಿದೆ. **ಆನಾಮುದ** ಕಡೆಗೆ ಹೋಗುವ **ಸ್ಯಾವ್ಹನ್‌ಸೇಟಿ**ನಿಂದ **ಡೊಂಗ್ಹದ**ವರೆಗಿನ ರಾಜಮಾರ್ಗವು ಈ ಪ್ರದೇಶದಲ್ಲಿ ಪ್ರಾಮುಖ್ಯವನ್ನು ಪಡೆದುದಾಗಿದೆ.

ಕ್ವಾಂಗ್-ಚಾ-ವಾನ್

ಈ ಪ್ರದೇಶವು ೧೮೯೮ ರಲ್ಲಿ ಚೀನಾದೇಶದವರಿಂದ ಫ್ರೆಂಚರ ಕೈಗೆ ಬಂದು ಸೇರಿತು. ಮುಂದೆ ೧೮೯೯ ರಲ್ಲಿ ಚೀನ್ ಸಮುದ್ರದಲ್ಲಿಯ ಎರಡು ದ್ವೀಪಗಳನ್ನು ಸೇರಿಸಿ, ೧೯೦೦ ರಲ್ಲಿ ಇಂಡೋಚಾಯನಾದ ಗವರ್ನರನ ನೇತೃತ್ವಕ್ಕೆ ಇದನ್ನು ಒಪ್ಪಿಸಲಾಯಿತು. ಚೀನಾಸಮುದ್ರದ ದಂಡೆಯ ಮೇಲೆಯೆ ಈ **ಕ್ವಾಂಗ್-ಚಾ-ವಾನ್** ಪ್ರದೇಶವಿರುವುದು. ರಾಜ್ಯವ್ಯವಸ್ಥೆಯ ಅನುಕೂಲತೆಗಾಗಿ ಇದನ್ನು ಮೂರು ಪ್ರಾಂತಗಳಲ್ಲಿ ವಿಭಾಗಿಸಲಾಗಿದೆ. ಈ ವಸತಿ-ಕ್ಷೇತ್ರದ (ವಸಾಹತಿನ) ವಿಸ್ತೀರ್ಣವು ೩೨೫ ಚದರುಮೈಲುಗಳಷ್ಟಿದ್ದು, ಇದರ ಜನಸಂಖ್ಯೆ ೨೫೦೦೦ ಇದೆ. ಇದರಲ್ಲಿ ೧೨೩ರಷ್ಟು ಮಾತ್ರ ಫ್ರೆಂಚ್ ಜನರು ಇರುವರು. ಇಲ್ಲಿಯ ಸೈನ್ಯದ ವಿಷಯ ಹೇಳಬೇಕೆಂದರೆ ಸೈನ್ಯವಿಭಾಗದಲ್ಲಿ ಇನ್ಫಂಟ್ರಿಯದೊಂದು ಕಂಪನಿಯಿರುವುದಲ್ಲದೆ, ಮಶಿನ್‌ಗನ್ನುಗಳ ವಿಭಾಗವೊಂದು ಕೂಡ ಇದೆ. ಇಲ್ಲಿಯ ಪೋಲೀಸರ ಸಂಖ್ಯೆ ೫೦೦ರಷ್ಟು ಇದೆ. ೧೯೩೬ನೆಯ ಇಸ್ವಿಯಲ್ಲಿ ಈ ಪ್ರದೇಶದ ಆಯಾತ ವ್ಯವಹಾರವು ೧೦೭೧೬೭೦೫ ಡಾಲರುಗಳಷ್ಟು ಬೆಲೆಯದಾಯಿತು; ಅಲ್ಲದೆ ೮೨೬೮೯೦೮ ಡಾಲರುಗಳುಳ್ಳ ಬೆಲೆಯ ನಿರ್ಗತವ್ಯವಹಾರವು ನಡೆಯಿತು. ಫ್ರೆಂಚ್, ಪೋರ್ತುಗೀಜ್, ಚೀನಾ ಕಂಪನಿಗಳ ಹಡಗುಗಳು ಈ ಪ್ರದೇಶದ ಬಂದರದಲ್ಲಿ ಬಂದುನಿಲ್ಲುತ್ತವೆ.

ಏಸಿಯದಲ್ಲಿಯ 'ಮ್ಯಾಂಡೇಟೆಡ್' ಸ್ಟೇಟ್ಸ್

ಸಿರಿಯಾ ಮತ್ತು ಲೆಬೆನೋನ್

ಇವೆರಡೂ ಭೂಭಾಗಗಳನ್ನು ಫ್ರಾನ್ಸ್‌ದೇಶದ ಸಂರಕ್ಷಣೆಯಲ್ಲಿರುವ ಸ್ವತಂತ್ರ ಸಂಸ್ಥಾನಗಳೆಂದು ಗಣಿಸಲಾಗುತ್ತದೆ. ೧೯೨೦ನೆಯ ಎಪ್ರಿಲ್ ೨೫ನೆಯ ತಾರೀಖು ಸ್ಯಾನ್‌ರೆಮೊ ಎಂಬಲ್ಲಿ ಸೇರಿದ ಮಿತ್ರರಾಷ್ಟ್ರಗಳ ಸುಪ್ರೀಮ್ ಕೌನ್ಸಿಲಿನ ನಿರ್ಣಯಕ್ಕನುಸಾರವಾಗಿ, ಇವೆರಡನ್ನೂ ಮಾಂಡಲಿಕಸಂಸ್ಥಾನಗಳೆಂದು ಪರಿಗಣಿಸಲಾಯಿತಲ್ಲದೆ, ೧೯೨೨ನೆಯ ಜುಲೈ ೨೪ನೆಯ ತಾರೀಖಿನ ದಿನ ಲೀಗ್ ಆಫ್ ನೇಶನ್ಸಿನಿಂದಲೂ ಈ ಮಾತಿಗೆ ಮನ್ನಣೆ ದೊರೆಯಿತು.

ಈ ಪ್ರದೇಶದ ಪಶ್ಚಿಮಕ್ಕೆ ಭೂಮಧ್ಯ ಸಮುದ್ರವೂ ದಕ್ಷಿಣಕ್ಕೆ ಪ್ಯಾಲಿಸ್ಟಾಯಿನ್ ದೇಶವೂ ಪೂರ್ವಕ್ಕೆ ಇರಾಕ್‌ಪ್ರಾಂತವೂ ಉತ್ತರಕ್ಕೆ ತುರ್ಕಸ್ಥಾನವೂ ಇವೆ. ಸಿರಿಯಾ ಮತ್ತು ಲೆಬೆನೋನಾಗಳನ್ನು ಮೊದಲು ೫ ಉಪಭಾಗಗಳಲ್ಲಿ ವಿಭಾಗಿಸಲಾಗಿದ್ದಿತು. ಮುಂದೆ ೧೯೨೫ನೆಯ ಜನವರಿ ೧ನೆಯ ತಾರೀಖಿಗೆ ಈ ಐದರಲ್ಲಿಯ **ದಮಾಸ್ಕಸ್** ಮತ್ತು **ಅಲೋಪ್ಪೊ** ಎಂಬೆರಡೂ ಉಪಭಾಗಗಳನ್ನು **'ರಿಪಬ್ಲಿಕ್ ಆಫ್ ಸಿರಿಯಾ'** ಎಂಬ ಹೆಸರಿನಿಂದ ಒಂದುಗೂಡಿಸಲಾಯಿತು.

ಸಿರಿಯಾ ಮತ್ತು ಲೆಬೆನೋನ್ ಇವೆರಡರ ವಿಸ್ತಾರವೂ ಸೇರಿ ಸುಮಾರು ೫೭೯೦೦೦ ಮೈಲುಗಳದಾಗುವುದು. ೧೯೩೫ನೆಯ ಇಸ್ವಿಯಲ್ಲಿ ನಡೆದ ಜನಗಣನೆಯ ವರದಿಯಂತೆ ಇಲ್ಲಿಯ ಒಟ್ಟು ಜನರ ಸಂಖ್ಯೆ ೩೬೩೦೦೦ ದಷ್ಟಿದೆ. ಇಲ್ಲಿ ನಡೆಯುವ ಮುಖ್ಯ ಭಾಷೆ ಅರಬ್ಬಿ; ಏಕೆಂದರೆ ಇಲ್ಲಿಯ ಬಹುಸಂಖ್ಯಾಕರು ಎಂದರೆ ೧೫೧೪೬೫೫ ಜನರು ಮುಸಲ್ಮಾನರು. ಎಲ್ಲ ಪ್ರದೇಶದ ಮೇಲೆಯೂ ಫ್ರೆಂಚ್ ಸೈನ್ಯವೆ ತನ್ನ ನಿಯಂತ್ರಣವನ್ನು ನಡೆಯಿಸುತ್ತದೆ. ೧೯೩೭ನೆಯ ಜನವರಿ ೧ನೆಯ ತಾರೀಖಿನ ಲೆಕ್ಕಾಚಾರದಂತೆ ಇಲ್ಲಿಯ ಸೈನ್ಯದಲ್ಲಿ ೭೦೧ ಜನ ಕಾರ್ಯಕರ್ತರು (ಆಫೀಸರ್ಸ್) ಇದ್ದರು. ಇವರಲ್ಲಿಯ ಸುಮಾರು ೧೦೦ ಜನರು ಮಾತ್ರ ಫ್ರೆಂಚ್ ಜನರಿದ್ದರು. ಬೇರೆ ಬೇರೆ ತರಗತಿಯ ಸೈನಿಕರ ಸಂಖ್ಯೆಯನ್ನೆಲ್ಲ ಸೇರಿಸಿದರೆ ಅದು ೧೦೫೬೩ ರಷ್ಟಿದ್ದು, ಅದರಲ್ಲಿ ೨೭೮ ಜನರು ಮಾತ್ರ ಫ್ರೆಂಚರಿದ್ದರು.

ಸಿರಿಯಾದೇಶದ ಪ್ರಮುಖಬಂದರಗಳಲ್ಲಿಂದ ಬೇರೆ ಬೇರೆ ಕಂಪನಿಗಳ ಹಡಗುಗಳ ಮೂಲಕ ಪ್ರತಿದಿನವೂ ನೌಕಾವ್ಯವಹಾರವು ನಡೆದಿರುತ್ತದೆ. ಈ ದೇಶದಲ್ಲಿ ಎಲ್ಲೆಲ್ಲಿಯೂ ರೈಲುದಾರಿ ಹಾಯ್ದಿದೆ. **ರಯಾಕಿನಿಂದ ಅಲೇಪ್ಪೋ**ದವರೆಗೆ ೨೦೬ ಮೈಲುಗಳೂ, **ಅಲೇಪ್ಪೋ**ದಿಂದ **ಮೆಡನ್ ಹಕ್‌ಬೆಸ್**‌ವರೆಗೆ ೭೨ ಮೈಲೂ, ಅಲೇಪ್ಪೋದಿಂದ ಇರಾಕ್ ಪ್ರಾಂತ್ಯದ ಗಡಿಯಲ್ಲಿರುವ ಟೆಲ್ ಕೋಟ್‌ಚೆಕ್ ವರೆಗೆ ೩೨೫ ಮೈಲುಗಳೂ, ಹೋಮ್ಸ್‌ನಿಂದ ತ್ರಿಪೋಲಿಯವರೆಗೆ ೬೩ ಮೈಲುಗಳೂ ರೈಲುದಾರಿಗಳಿವೆ. ಅದರಂತೆಯೆ ದಮಸ್ಕಸ್ ನಗರದಿಂದ ಇಲ್‌ಹ್ಯಾಮೆಯ ವರೆಗೆ ೧೫೦ ಮೈಲು ಮತ್ತು ದಮಸ್ಕಸಿನಿಂದ **ಬೆರೂಟ**ದವರೆಗೆ ೯೩ ಮೈಲು ಉದ್ದದ ಚಿಕ್ಕಗಲರೈಲುದಾರಿಗಳೂ ಇವೆ. ತ್ರಿಪೋಲಿಯಿಂದ ಮಾರ್ಸೆಲ್ಸ್‌ವರೆಗೆ ವಿಮಾನಗಳು ಹಾರಾಡುತ್ತವೆ.

ಎಸಿಯಾ ಖಂಡದಲ್ಲಿ ಹಬ್ಬಿ ಹರಡಿದ ಫ್ರೆಂಚ್ ಸಾಮ್ರಾಜ್ಯದ ಹಬ್ಬುಗೆಯಿಷ್ಟಿದೆ. ಇಂದು ಹೀಗಿದೆ; ಮುಂದೇನಿದೆಯೋ ಕಾಲನಿಗೆ ಗೊತ್ತು!

ಸುದರ್ಶನ

★

'ಆನಂದಕಂದ'ರ ಕಾದಂಬರಿ
ಎರಡನೆಯ ಅಚ್ಚು ನಡೆದಿದೆ.
ಬೇಗನೆ ಹೊರಕ್ಕೆ ಬರುವುದು!

ಚಟವೆಂಬ ಚೋದಕ

(ಒಂದು ಹರಟೆ)

ಶ್ರೀ. ವಿ. ಎಂ. ಇನಾಮದಾರ್ ಬಿ.ಎ. (ಆನರ್ಸ್)

ಮನುಷ್ಯನು ಮನುಷ್ಯನೆಂದು ಬಾಳಬೇಕಾದರೆ ಅವನಲ್ಲಿ ಒಂದಾದರೂ ಚಟವಿರಲೇ ಬೇಕು; ಇಲ್ಲವಾದರೆ ಆತನ ಜೀವನವು ಸಾಮಾಜಿಕಜೀವನಕ್ಕೆ ವಿಸಂಗತವೆನಿಸದಿರದು!

ಈ ಕೆಲಸಗೇಡಿ ತರುಣನ ಮನಸ್ಸು ಬೀಡಿಯ ಹೊಗೆಯ ವಿಮಾನದ ಮೇಲೆ ಕುಳಿತು ಹೋಗಿ, ಯಾವ್ಯಾವುವೊ ಕನಸಿನ ಲೋಕಗಳನ್ನು ಕಾಣುತ್ತಿದೆ.

ಯಾವನಾದರೊಬ್ಬನು 'ನನಗೆ ಚಹಾ ಚುಟ್ಟಾಗಳ ದಂತೂ ಬಿಡಿರಿ, ಒಂದು ಅಡಿಕೆಯ ಹೋಳಿನ ಚಟ ಕೂಡ ಇಲ್ಲ' ಎಂದು ಎದೆಸೆಟಿಸಿ ಅಭಿಮಾನದಿಂದ ಹೇಳಿಕೊಂಡರೆ, ಆತನ ವಿಷಯದಲ್ಲಿ ನನಗಂತೂ ಆದರಕ್ಕಿಂತ ಅಂಜಿಕೆಯೇ ಹೆಚ್ಚಾಗಿ ಉಂಟಾಗುವುದು. ಎಲ್ಲರಂತೆಯೆ ಮನುಷ್ಯನಾಗಿದ್ದರೂ, ಒಂದು ಕೂಡ ಚಟವಿಲ್ಲವೆಂದರೆ ಅದೆಂತಹ ಆಶ್ಚರ್ಯ? ಅವನಲ್ಲಿ ಮಾನವತೆಯಾದರೂ ಹೇಗೆ ಉಳಿಯುವುದು? ಎಷ್ಟು ಮಾತ್ರ ಕ್ಷುದ್ರವಾದದ್ದಾದರೂ ಇರಲೊಲ್ಲದೇಕೆ; ಮನುಷ್ಯನೆನಿಸಿಕೊಳ್ಳಬೇಕಾದರೆ ಒಂದು ಸರ್ವಸಾಮಾನ್ಯವಾದ ವ್ಯಸನ ಅಥವಾ ಚಟ ಬೇಕೇಬೇಕು. ಇದರ ಮೇಲಿಂದ 'ಹೆಚ್ಚು ಹೆಚ್ಚಾಗಿ ಚಟಗಳುಳ್ಳವನೇ ದೊಡ್ಡ ಮನುಷ್ಯ' ಎಂದು ಮಾತ್ರ ಯಾರೂ ಅರ್ಥ ಮಾಡಬೇಡಿರಿ! ಇಲ್ಲವಾದರೆ, ಮದಿರಾಸೇವನವನ್ನು ಮಾಡಿ ಮದಿರಾಕ್ಷಿಯರ ಮನೆ ಮನೆ ಸುತ್ತಾಡುವ ನರಪಶುವನ್ನು ಆದರ್ಶಮನುಷ್ಯನೆಂದು ಬಗೆಯಬೇಕಾಗಬಹುದು! ಎಲ್ಲ ತರದ ಚಟಗಳಿಗೂ ಉದಾರಾಶ್ರಯವನ್ನು ಕೊಟ್ಟಂತಹ ಒಬ್ಬನನ್ನು

ನಾವು—ಮೇಲೆ ಹೇಳಿದ ತರ್ಕಶಾಸ್ತ್ರಾನುಸಾರವಾಗಿ— ಅತಿಮಾನುಷನೆಂದು ಎಣಿಸಿದರೆ, ಚಟದ ಹೆಸರನ್ನು ಕೇಳಿದಕೂಡಲೆ ಸಿಡಿದೇಳುವ ಸಂನ್ಯಾಸಿಯನ್ನು ಅಮಾನುಷನೆನ್ನಬೇಕಾಗುವುದು. ಇದಕ್ಕೆ ಪ್ರತಿಯಾಗಿ ಚಟವಿಲ್ಲದವನನ್ನು ಅತಿಮಾನುಷನೆಂದರೆ ರೋಮರೋಮಕ್ಕೂ ಚಟಗಳುಳ್ಳವನನ್ನು ಅಮಾನುಷನೆನ್ನಬೇಕಾಗುವುದು. ಆದರೆ ನಮ್ಮ ಸಮಾಜವು ಸರ್ವಸಾಧಾರಣ ಜನರದಿದ್ದು ಮೂಲಕ, ಈ ಅತಿಮಾನುಷರಿಂದಲೂ ಅಮಾನುಷರಿಂದಲೂ ಯಾವಾಗಲೂ ತಾಪ-ಸಂತಾಪಗಳ ಹೊರತು ಬೇರೆ ಏನೂ ಸಿಕ್ಕುವಂತಿಲ್ಲ. ವ್ಯಸನಾಧೀನ ಮನುಷ್ಯನಷ್ಟೇ ನಿರ್ವ್ಯಸನಿಯಾದ ಮನುಷ್ಯನು ಕೂಡ ವ್ಯವಹಾರದಲ್ಲಿ ತಾಪದಾಯಕನಾಗಿರುವನು.

೨

ಮನುಷ್ಯನಲ್ಲಿ ಯಾವುದೇ ಒಂದು ತರದ ಚಟವಿಲ್ಲದೆ ಹೋದರೆ, ಅವನಲ್ಲಿ ಮಾನವತೆ ಉತ್ಪನ್ನವಾಗಲಾರದೆಂದು ಮೇಲೆ ಹೇಳಿದೆ; ಅದು ಹೇಗೆ ಎಂಬುದನ್ನು ನಾನು ಹೇಳದೆಹೋದರೆ ಮಾನವಜೀವನದಲ್ಲಿ ಚಟದ ಮಹತ್ತ್ವವನ್ನು ಕಡಿಮೆಮಾಡಿದ ಆರೋಪಕ್ಕೆ ಗುರಿಯಾಗಬೇಕಾದೀತು ನನಗೆ. ಆದುದರಿಂದ ಈ ವಿಷಯವನ್ನು ಇನ್ನಷ್ಟು ಸವಿಸ್ತಾರವಾಗಿ ಪರೀಕ್ಷಿಸುವುದು ಅವಶ್ಯವಲ್ಲವೆ?

ಚಟಗಳಲ್ಲಿ ಅನೇಕ ಪ್ರಕಾರಗಳಿರುವುವು. ಮಾನವನನ್ನು ಪಶುವನ್ನಾಗಿ ಮಾಡಿ, ಭೂಲೋಕದಲ್ಲಿಯೆ ನರಕಯಾತನೆಯನ್ನು ಅನುಭೋಗಿಸಲಿಕ್ಕೆಹಚ್ಚುವಂತಹ ಚಟಗಳು ಜಗತ್ತಿನಲ್ಲಿ ಎಷ್ಟೋ ಇದ್ದರೂ, ಇನ್ನೆಷ್ಟೋ ಚಟಗಳು ತೀರ 'ಮಡಿ'ಯಾಗಿದ್ದು 'ಪರಿಣಾಮೇ' ಸುಖದಾಯಿಗಳಾಗಿದ್ದದ್ದು ಕಂಡುಬರುವುದುಂಟು. ಇಂತಹ ಚಟಗಳನ್ನು ಹೊರತುಪಡಿಸಿದರೆ ಮನುಷ್ಯನಿಗೆ

ಸುಖವಿಲ್ಲ. ಉದಾಹರಣಾರ್ಥವಾಗಿ, ಈಗಿನ ಸರ್ವಸಾಧಾರಣವಾದ ಚಟಗಳನ್ನೇ ನೋಡಿರಿ: **ಚಹಾ, ಕಾಫಿ, ಸಿಗರೇಟು.** ವೈದ್ಯಕೀಯ ದೃಷ್ಟಿಯಿಂದ ನೋಡಿದರೆ ಈ ತ್ರಿಕೂಟವು ಪರಮ ಘಾತುಕ! ಆದರೆ ಕೆಲವೊಂದು ಪ್ರಮಾಣದಲ್ಲಿ ಸೇವಿಸಿದರೆ, ಸಾಮಾಜಿಕಹಿತದ ದೃಷ್ಟಿಯಿಂದ ಇವುಗಳಿಗೆ ಬಹಳ ಮಹತ್ತ್ವವಿದೆ. ನಾಲ್ಕು ಜನರು ಒಂದೆಡೆಯಲ್ಲಿ ಕೂಡಿ ಕುಳಿತು ಹರಟೆ ಹೊಡೆಯುವುದಕ್ಕಾಗಲಿ, ಅಥವಾ ಪರಸ್ಪರರನ್ನು ಮನಬಿಚ್ಚಿ ಮಾತನಾಡಿಸಲಿಕ್ಕಾಗಲಿ ಇಂತಹವುಗಳಿಂದ ಎಷ್ಟರಮಟ್ಟಿಗೆ ಸಹಾಯವಾಗುವುದೆಂಬುದನ್ನು ಸಪ್ರಯೋಗವಾಗಿ ನೋಡಬೇಕೇ ಹೊರತು ಬಾಯಿಮಾತಿನಿಂದ ಹೇಳಿ ಪ್ರಯೋಜನವಿಲ್ಲ. (ಈ ಪ್ರಯೋಗವನ್ನು ಮಾಡಿ ನೋಡುವವರು ನಮ್ಮನ್ನು ಮಾತ್ರ ಮರೆಯಬಾರದು!) ಚಹದ ವಿಷಯದಲ್ಲಿ ಹೆಚ್ಚಿಗೆ ಹೇಳುವ ಅವಶ್ಯವೇ ಕಾಣುವುದಿಲ್ಲ. ಇಪ್ಪತ್ತನೆಯ ಶತಮಾನದಲ್ಲಿ ಚಹವೆಂದರೆ ಅದೊಂದು ಉತ್ಸಾಹದ ಬುಗ್ಗೆ. ಅದು ಸಿಕ್ಕದ ಮನುಷ್ಯನ ಮುಖ ನೋಡಬೇಕು.. ಮುಂಜಾವಿನ ಸಮಯದಲ್ಲಿ! ಮರಣ ಸಮೀಪಿಸಿದವನನ್ನು ನೀವು ನೋಡಿರಬಹುದಲ್ಲ; ಹಾಗೆಯೆ ಈತನ ಸ್ಥಿತಿ. ಚಹವೇ ಈತನಿಗೆ ಜೀವನಾಮೃತ. ಚಹವು ಅತಿ ಸಾಮಾನ್ಯವಾಗಿಹೋದ ಮೂಲಕ, ಅದಕ್ಕೆ 'ಚಟ'ವೆಂದು ಹೆಸರಿಡುವುದು ಕೂಡ ಸರಿಯಾಗದಂತಾಗಿದೆ. ಒಂದುವೇಳೆ ಅದೂ ಒಂದು ಚಟವೇ ಎಂದು ಹೇಳುವುದಾದರೆ, ಅದೊಂದು 'ಜೀವನಯಂತ್ರವನ್ನು ಹೊಸ ಹೊಸ ಹುರುಪಿನಿಂದ ಸಾಗಿಸಹಚ್ಚುವ ಸುಖಮಯ ಸಂಜೀವಿನಿ' ಎಂದೇ ಒಪ್ಪಬೇಕಾಗುವುದು!

ಚಟದ ಮಾತೆತ್ತಿದ ಕೂಡಲೆ ನಮ್ಮ ಕಣ್ಣ ಮುಂದೆ ನಿಲ್ಲುವುದು ತಂಬಾಕಿನ ವಿವಿಧ ಸಂಸಾರ. ಇದರ ವ್ಯಾಪಕತ್ವವು ನಿಜವಾಗಿಯೂ ಆಶ್ಚರ್ಯಪಡಿಸುವಂತಹದು. ನಾಲಗೆಗೆ ಸುಖವನ್ನುಂಟುಮಾಡುವುದು ವೀಳ್ಯದ ಜೊತೆಯಲ್ಲಿದ್ದ ಈ ತಂಬಾಕು. ಅದರ ಸೇವನೆಯಿಂದಾದ ಸುಖವು, ಅದನ್ನು ಸವಿಯುವವರಿಗೆ ಹೇಳಲಾರದಷ್ಟಾಗಿಯೆ, ಅವರು ಮುಚ್ಚಿದ ಬಾಯಿಯನ್ನು ತೆರೆಯಲಾರದೆ ಇರುವರು. ಅಂತಹ ಸಮಯದಲ್ಲಿ ಅವರನ್ನು ಹೆಚ್ಚಿಗೆ ಮಾತನಾಡಿಸಿದರೆ, ಮಾತನಾಡಿಸುವವರ ಮೈಮೇಲೆಯೆ ಬರುವುದು ಪ್ರಸಂಗ—ಅವರ ಮುಖರಸ ಹೊರಚೆಲ್ಲಿ! ಅಂತಹ ಅವರ ಸುಖಾತಿರೇಕದಲ್ಲಿ ಅವರಿಂದ ದೂರವಾಗಿರುವುದೇ ಲೇಸು! ಬಾಯಿಗೆ ಇಷ್ಟೊಂದು ಸುಖವನ್ನುಂಟುಮಾಡುವ ತಂಬಾಕು, ಮೂಗಿಗಾದರೂ ಪರಮ ಸುಖದಾಯಿಯಾಗಬಹುದೆಂಬ ವಿಷಯ, ತಂಬಾಕಿನ ವಿವಿಧವೈಚಿತ್ರ್ಯಕ್ಕೆ ಸಾಕ್ಷಿ. 'ಜರ್ದಾ'ಕ್ಕಿಂತಲೂ 'ನಸ್ಯ'ದ ಸುಖವೇ ಮಿಗಿಲೆಂದು, ನಸ್ಯೋಪಾಸಕರು ಸಾಧಿಸುವರು. ಒಂದು 'ಪಿಂಟಿ' ಪುಡಿಯನ್ನು ಚಿಮುಟಿಯಲ್ಲಿ ಹಿಡಿದು, ನೇರವಾಗಿ ನಾಸಿಕ ಮಾರ್ಗದಿಂದ ದೂರದಲ್ಲಿ ಒಳಗೆ ಇಟ್ಟುಬಿಟ್ಟು, ಕಣ್ಣು ಮುಚ್ಚಿ '**ಆ, ಹಾ, ಹಾ**' ಎಂದು ಉದ್ಗಾರ ತೆಗೆಯುವ ನಸ್ಯೋಪಾಸಕನ ಮುಖ ನೋಡಿದರೆ, ನಿಮಗೆ ಕ್ಷಣಾರ್ಧದಲ್ಲಿ ತಿಳಿಯುವುದು ಆತನ ಸುಖಾತಿಶಯದ ಸಂಭ್ರಮ! ನಿಮಿಷಮಾತ್ರದಲ್ಲಿಯೇ ಹೊಳೆಯುವುದು, ಸ್ವರ್ಗವಿದ್ದರೆ ಅದು ಭೂಲೋಕದಲ್ಲಿಯ ನಸ್ಯಸೇವಕನ ಘ್ರಾಣಾಂತರ್ಗತ ಸುಖದಲ್ಲಿಯೇ ಇದೆಯೆಂಬ ತತ್ತ್ವಜ್ಞಾನದ ತಿರುಳು! ತಂಬಾಕಿನ ಇನ್ನುಳಿದ ಭಕ್ತಗಣದವರೆಂದರೆ ತಂಬಾಕುಸೇದುಗರು! ಇವರು ಕೇವಲ ಬಾಯಿಗಷ್ಟೇ ಆಗಲಿ, ನಾಸಿಕಕ್ಕಷ್ಟೇ ಆಗಲಿ ಸುಖಸಂಪಾದಿಸಿಕೊಡುವ ಸಂಕುಚಿತ ಬುದ್ಧಿಯವರಲ್ಲ. ಈ ಚಟದಲ್ಲಿ ಬಾಯಿ-ಮೂಗುಗಳೆರಡರದೂ ಯೋಗ್ಯವಾದ ಉಪಯೋಗವಿದೆ. ಹೊಗೆಯ ನೀಲಮೇಘವು ಬಾಯಿಯಿಂದ ಒಳಹೊಕ್ಕು, **'ನಾಸೀಕ ರೋಡ್'**ನಿಂದ ಹೊರಗೆ ಬರುತ್ತಿರುವಾಗ, ನೋಡಬೇಕು ಈ ಚಟಗಾರರನ್ನು! ನೀಲ ವರ್ತುಲಗಳನ್ನೇರಿ ಇವರ ಕಲ್ಪನೆ ಆಕಾಶಕ್ಕೇರಹತ್ತುವುದು! ಆಗ ಆ ಕಲ್ಪನೆಯ ಪ್ರಪಂಚದಲ್ಲಿ ಇವರು ಕಾಣುವ ಸುಖದ ಕನಸುಗಳೆಂತಹವು? ಅವರ ದೇಹವಷ್ಟೇ ಭೂಮಿಯಲ್ಲಿ ಉಳಿದವರಂತೆ. ಕಣ್ಣು ಮಿಳುಕಿಸಿದರೆಂದರೆ, ಅವರ ಫೂತ್ಕಾರದೊಡನೆ ಮಂತ್ರಮುಗ್ಧರಂತೆ ಅವರ ದುಃಖಗಳೆಲ್ಲವೂ ಮಾಯವಾಗುವುವು. ಇವೆಲ್ಲಕ್ಕೂ ಹೆಚ್ಚಿನದೆಂದರೆ, ತಂಬಾಕುಮಾಡಿದ ಸಾಹಿತ್ಯದ ಏಳ್ಗೆ. ಸಾಹಿತ್ಯದ ಅಂತರಂಗದ ಇತಿಹಾಸವನ್ನು ಬರೆಯುವುದಾದರೆ ಅದರಲ್ಲಿ ತಂಬಾಕಿಗೆ ಅತಿ ಪ್ರಮುಖಸ್ಥಾನದೊರಕುವುದೆಂಬುದರಲ್ಲಿ ಏನೂ ಸಂಶಯವಿಲ್ಲ. ಇಂಗ್ಲೀಷು ಭಾಷೆಯಲ್ಲಿಯಂತೂ ೧೮ನೆಯ ಶತಮಾನದ ಅತ್ಯುಚ್ಚ ಲೇಖಕರೆಲ್ಲರೂ ತಮ್ಮ ಜೀವನವನ್ನು ಕಾಫಿಯ ಅಂಗಡಿಗಳಲ್ಲಿ ಕುಳಿತು, ಯಥೇಚ್ಛವಾಗಿ ನಸ್ಯ ಏರಿಸುತ್ತ

ಗಜಕರ್ಣ, ಹುರುಕು, ತದ್ದು ಮುಂತಾದ
ತ್ವಚರೋಗದಿಂದ ಪೀಡಿತರಾದ
ಜನರಿಗೆ

ರಜಿಸ್ಟರ್ಡ್

ಗೋವಾ ಮಲಮ
GOA OINTMENT

ಗುಣ ಬಾರದಿದ್ದಲ್ಲಿ
ಹಣ ತಿರುಗಿ ಕೊಡುವ ಗ್ಯಾರಂಟಿಯಿಂದ
ಮಾರಲ್ಪಡುತ್ತದೆ.

ಬಾಟಲಿ ಕಿಮ್ಮತ್ತು ೪ ಆಣೆ.

ಸ್ಟಾರ್ ಕಂಪನಿ, ಬೆಳಗಾಂವ

ಇರುವುದರಿಂದಲೇ ಆ ತರದ ಉಚ್ಚ ಸಾಹಿತ್ಯವನ್ನು ಹುಟ್ಟಿಸಿದರೆಂದು ಹೇಳಬಹುದು. ಅಷ್ಟು ದೂರವೇಕೆ? ಇಂದಿನ ಕಾಲದಲ್ಲಿ ಕೂಡ ಬೀಡಿ-ಸಿಗರೇಟುಗಳೆಂದರೆ ಕಲ್ಪನಾಸಾಮ್ರಾಜ್ಯಕ್ಕೆ ಕರೆದೊಯ್ಯುವ ಪುಷ್ಪಕ-ವಿಮಾನಗಳೆ! ಈ ಕಲ್ಪನಾಸಾಮ್ರಾಜ್ಯವನ್ನು ಬಿಟ್ಟು ಕೊಟ್ಟರೂ, ದಿನದ ವ್ಯವಹಾರದಲ್ಲಿ ಈ ಸಣ್ಣ ಪುಟ್ಟ ಚಟಗಳಿಂದ ಆಗುವ ಲಾಭಗಳನ್ನೆಲ್ಲ ಹೇಳುತ್ತ ಹೋದರೆ ಈ ಬರೆಹವನ್ನು ಮುಗಿಸಲಿಕ್ಕೇ ಸಾಧ್ಯವಾಗಲಿಕ್ಕಿಲ್ಲ. ಒಂದೇ ಒಂದು ಉದಾಹರಣೆಯನ್ನು ಹೇಳಿ ಬಿಟ್ಟುಬಿಡುವೆ. ರೈಲುಪ್ರವಾಸದಲ್ಲಿ ನೀವು ನಿಮ್ಮ "ಚಂಚಿ"ಯನ್ನು ಬಿಚ್ಚಿದರೆ, ನಸ್ಯದ ಡಬ್ಬಿಯನ್ನು ಮುಂದಕ್ಕೆ ಚಾಚಿದರೆ, ಒಂದು ಸಿಗರೇಟನ್ನು 'Offer' ಮಾಡಿದರೆ, ನಿಮಗೆ ಸಹಜವಾಗಿ ಒದಗುವ ಸೌಕರ್ಯವನ್ನು ನಾನು ಬೇರೆ ಹೇಳಲಿಕ್ಕೆ ಬೇಕಾಗಿಲ್ಲ. ಇವಾವುವೂ ನಿಮ್ಮಲ್ಲಿ ಇಲ್ಲದೆ ಹೋದರೆ, ನಿಮ್ಮಲ್ಲಿ ಹರಟೆಯ ಚಟವಿದ್ದರೂ ಸಾಲಬಹುದು. ರೈಲಿನಲ್ಲಿ ಕುಳಿತವರೆಲ್ಲರೂ ನಿಮ್ಮ ಪರಮಮಿತ್ರರಾಗುವರು. ನಿಮ್ಮ ಚಟವು ನಿಮಿಷ-ಪಾತ್ರದಲ್ಲಿ ವಿಶ್ವಬಂಧುತ್ವವನ್ನು ಹರಡಿಬಿಡುವುದು! ಒಟ್ಟಾರೆ ಹೇಳುವುದೆಂದರೆ, ಸರ್ವಸಾಮಾನ್ಯವಾದ ಈ ವ್ಯಸನಗಳು ಮಾನವನ ಇತಿಹಾಸಕ್ಕೆ ಕಪ್ಪು ಹಚ್ಚದೆ, ಚಂದ್ರನ ಮೇಲಿನ ಕಲಂಕಗಳಂತೆ ಶೋಭೆಯನ್ನೆ ಉಂಟುಮಾಡುವಂತಹವು. ಮನುಷ್ಯನು, ಮನುಷ್ಯನೆಂದು ಬಾಳಬೇಕಾದರೆ ಅವನಲ್ಲಿ ಒಂದಾದರೂ ಚಟ ಇರಲೇಬೇಕು. ಇಲ್ಲವಾದರೆ ಅವನ ಜೀವನವು ಸಾಮಾಜಿಕ ಜೀವನಕ್ಕೆ ವಿಸಂಗತವೆನಿಸದೆ ಇರದು.

೩

ಚಟಗಳ ಶೋಧಿಸುವಾರಿಯನ್ನು ಮಾಡಿ ನೋಡಿದರೆ, ಮಾನವ ಜಾತಿಗೆ—ಅದೆಷ್ಟೋ ಜ್ಞಾನಭಾಂಡಾರದಲ್ಲಿ—ಇದುವರೆಗೆ ಕಾಣದ ವಿಷಯಗಳು ನಮ್ಮ ದೃಷ್ಟಿಗೆ ಬೀಳುವುದರಲ್ಲಿ ಸಂಶಯವಿಲ್ಲ. ಚಟಗಳ ಇತಿಹಾಸವೆಂದರೆ ಇಡಿಯ ಮಾನವ ಜಾತಿಯ ಇತಿಹಾಸವೆಂದು ಬೇರೆ ಹೇಳಬೇಕಾಗಿಲ್ಲ. ನಮ್ಮ ಪೂರ್ವಜರಾದರೂ ಕಾವ್ಯಗಳಲ್ಲಿ ಅನೇಕ ಘಾತುಕವಾದ ವ್ಯಸನಗಳನ್ನು ಧಿಕ್ಕರಿಸಿ, ಕಲ್ಯಾಣಪ್ರದವಾದುವುಗಳೆಂದು ಅವರಿಗೆ ಎನಿಸಿದಂತಹ ಹೊಸ ಹೊಸ ಚಟಗಳನ್ನು ಹುಡುಕಿ ತೆಗೆದಿದ್ದಾರೆ. ಒಬ್ಬ ಸುಭಾಷಿತಕಾರ ಹೇಳುವ: "ವ್ಯಸನಗಳಲ್ಲಿ ಅದೆಷ್ಟೋ ತರ. ಆದರೆ ಅವುಗಳಲ್ಲಿ ನಿಜವಾದ ವ್ಯಸನಗಳೆಂದರೆ ಎರಡೇ. ಒಂದು ವಿದ್ಯಾವ್ಯಸನ, ಇನ್ನೊಂದು ಹರಿಪಾದಸೇವನ!" ಇದು ಆ ಸುಭಾಷಿತಕಾರನ ಮತ! ಇಂದಿನ ನಮ್ಮ "ಬೇಕಾದಂತೆ ಭಾಷಿತ" ಕಾಲದಲ್ಲಿ ಈ ಸುಭಾಷಿತವನ್ನು ಕೇಳುವವರಾರು? ಮೇಲಾಗಿ ಅವನು ಹೇಳಿದ್ದು ನಿಜವಾಗಿಯೂ ಸರಿಯೆಂದು ಒಪ್ಪಿ, ಮೇಲೆ ಹೇಳಿದ ಎರಡೂ ಚಟದ ಉಪಾಸನೆಯನ್ನು ಅದೆಷ್ಟು ಉಜ್ವಲವಾಗಿ ಮಾಡಿದರೂ ದೊರಕುವುದೇನು? ಇಹಪರದಲ್ಲಿ ಸುಖವೆಂದು ಹೇಳುವಿರಾ? ವಿದ್ಯಾವ್ಯಸನಕ್ಕೆ ಅನುಗುಣವಾಗಿ ಇಹದಲ್ಲಿ ಸಿಕ್ಕುವ ಸಂಭಾವನೆಯಂತೂ ಗೊತ್ತೇ ಇದೆ. ಅಂತಹ ವಿದ್ಯಾವಂತನು, ನಿರುದ್ಯೋಗದ ಮೂಲಕ ಊಟಕ್ಕೆ ಸಿಕ್ಕದೆ ಹರಿಸೇವಾನಿರತನಾಗಿ ಪ್ರಾಣ ನೀಗಿ ಹೋದರೆ, ಪರದಲ್ಲಿಯಾದರೂ ಅವನಿಗೆ ಸಿಕ್ಕುವುದೇನು? ಬಹಳವಾದರೆ ಸ್ವರ್ಗದ ಥಿಯಟರಿನಲ್ಲಿ ಮಿಸ್ ಅಪ್ಸರೆಯುಳ ಡಾನ್ಸ್ ಪ್ರೊಗ್ರಾಮಿನಲ್ಲಿ ಒಂದು ಫ್ರಂಟ್ ಸೀಟು! ಆದರೆ ಉಪವಾಸದಿಂದ ಮೃತಪಟ್ಟ ನಮ್ಮ 'ವೇದಾಭ್ಯಾಸ ಜಡ'ನಿಗೆ ಬೇಕಾದದ್ದು ಒಂದು ತುತ್ತು ಅನ್ನ. ಅದಂತೂ ಅಲ್ಲಿ ಸಿಕ್ಕುವಂತಿಲ್ಲ! ಒಂದು ತೀರ್ಥಸವುಟಿನಷ್ಟು ಅಮೃತ ಅವನ ಗಂಟಲಿನಲ್ಲಿ ಸುರುವಿ ಬಿಟ್ಟರೆ ಮುಗಿದು ಹೋಯಿತು ಈ ಪ್ರಾಣಿಯ ಅವಸ್ಥೆ! ಯಾವತಾಪವನ್ನೂ ತಾಳಲಾರದೆ, ಸತ್ತು ಹೋಗುವೆನೆಂದರೂ ಸಾಧ್ಯವಾಗದಂತೆ ಮಾಡಿ, ಅಜರಾಮರನನ್ನಾಗಿ ಮಾಡಿ ಬಿಡುವರು! ಅದೂ ಇರಲಿ. ಈ ವಿದ್ಯಾಭ್ಯಾಸ ಮತ್ತು ಹರಿಪಾದಸೇವನೆಯ ಚಟಗಳಿಂದ, ಇನ್ನು ಮತ್ತಾವ ಚಟಗಳಿಂದಲೂ ಆಗಲಾರದಷ್ಟು ಹಾನಿಯು ಹಿಂದುಸ್ಥಾನಕ್ಕೆ ಆಗಿದೆ ಎಂದು ನಿಷ್ಠುರವಾಗಿ ಹೇಳಬಹುದು. ನಮ್ಮ ಶಾಸ್ತ್ರಗಳು ನಮಗೆ ಹೇಳುವುದೇನೆಂದರೆ, ನಿಮ್ಮ ವಿದ್ಯೆ ಎಲ್ಲವೂ—ಆಜನ್ಮ ಆಚಾರ್ಯರಿಂದ ಚಂಡಿಕೆಯನ್ನು ಕತ್ತರಿಸಿಕೊಂಡು ಕಲಿತ ವಿದ್ಯೆಯೆಲ್ಲವೂ—ತೊಡೆಚಿವುಟಿಸಿಕೊಂಡು ಗಳಿಸಿದ ಪಾಂಡಿತ್ಯವೆಲ್ಲವೂ—ಶಾಲೆಯಲ್ಲಿ ಬೆಂಚಿನಮೇಲೆ ಬಾವುಟದಂತೆ 'ತಿಷ್ಠತ್' ತಪವನ್ನು ಆಚರಿಸಿ ತನ್ನದನ್ನಾಗಿ ಮಾಡಿಕೊಂಡ ವಿದ್ಯಾಭಾಗವೆಲ್ಲವೂ, ಕೇವಲ ಈಶ್ವರಾರ್ಪಣಕ್ಕಾಗಿಯೇ ಎಂದು! ಈ ಹವ್ಯಾಸವೆಲ್ಲ ಸ್ವರ್ಗದಲ್ಲಿಯ ಈಶ್ವರನ ಸಲುವಾಗಿ! ನೋಡಿದಿರಾ ಆತ್ಮಸಂತರ್ಪಣ; ಎಂದರೆ ತಾನಾಗಿಯೇ ಮಾಡಿಕೊಂಡ ತನ್ನ ಶ್ರಾದ್ಧ! ಸಂಸಾರದಲ್ಲಿಯ ದುಃಖಗಳೆಲ್ಲವನ್ನೂ ಮರೆಯುವಂತೆ ಮಾಡುವ ಸಾಧನವೆಂದರೆ ದೇವರ ಭಕ್ತಿಯೆಂದು ಧೂರ್ತರು ಹೇಳುವುದುಂಟು. ಆದರೆ ಈಗ ಅನೇಕ ಶತಮಾನಗಳಿಂದ, ನಿಷ್ಠಾಪೂರ್ವಕವಾಗಿ ಹರಿಪಾದಗಳ ಮೇಲೆ ಮಸ್ತಕವನ್ನಿಟ್ಟ ನಮ್ಮ ಕುತ್ತಿಗೆಯಮೇಲೆ, ಪರರು ಇಟ್ಟ ಕಾಲನ್ನು ಆ ಹರಿಯು ದೂರ ಏಕೆ ಸರಿಸಲೊಲ್ಲನೆಂಬದನ್ನು ನಮ್ಮ ಧೂರ್ತರು ಹೇಳುವರೆ? ಅವರು ಹೇಳದಿದ್ದರೆ ನಾನು ಹೇಳುವೆ: ದೇವರ ಭಕ್ತಿಯೆಂದು ಅಜ್ಞಾನದ ಮೂರ್ಛೆಯಲ್ಲಿ ಬಿದ್ದಿರುತ್ತೇವೆ. ಮುಗಿದ ಕೈಯನ್ನು ಕಟ್ಟಲು ಅಷ್ಟೇನು ಶ್ರಮ ಬೇಕಾಗಿಲ್ಲ. ಕೈಮುಗಿದವನಲ್ಲಿ ಕೃತಿಧೈರ್ಯವಿಲ್ಲ. ಆದ್ದರಿಂದ ನಮಗೆ ಬೇಕಾದದ್ದು, ಕೃತಿಯ ಚಟ! ಭಕ್ತಿಯ ಹಟವಲ್ಲ! ಉಪಯೋಗವಿಲ್ಲದ ವಿದ್ಯೆಯಲ್ಲ. ಇದ್ದ ವಿದ್ಯೆಯ ಉಪಯೋಗ ಬೇಕು!.... ಸಾಕು, ನಮಗೆ ಬೇಕಾದ ವಿಷಯ ಅದೆಷ್ಟೋ ಇದೆ! ಕೊಡುವವರು ಯಾರು? ನಮ್ಮ ಶಕ್ತಿಯನ್ನು ನಮ್ಮ ಹಿತಕ್ಕಾಗಿಯೇ ಉಪಯೋಗಿಸಿಕೊಳ್ಳುವ ಚಟ ಬೇಕಲ್ಲ! ಆದ್ದರಿಂದ ಚಟದ ಮಾತೆತ್ತಿದ ಕೂಡಲೆ ಮೂಗು ಮುರಿಯಬೇಡಿರಿ! ಯಾಕೆಂದರೆ ಅದೂ ಒಂದು ಚಟವೇ? ಮಾನವಜೀವನದಲ್ಲಿ ಚಟದ ಸ್ಥಾನವನ್ನು ಅನುಲಕ್ಷಿಸಿ, ಅದರ ಯೋಗ್ಯ ಉಪಯೋಗ ಮಾಡಿಕೊಳ್ಳುವುದೇ ಹಿತಕರವೆಂದು ಹೇಳಿ, ಈ ಹರಟೆಯನ್ನು ಇಲ್ಲಿಗೆ ನಿಲ್ಲಿಸೋಣ.

ಶ್ರೀ. ಬದಾಮಿ ಸರ್ವೋತ್ತಮರಾಯರು

★

ದಿಗ್ದರ್ಶಕ ಸರ್ವೋತ್ತಮ

ಶ್ರೀ. ಎಚ್. ಎಸ್. ಪಾಟೀಲ, ಎಂ. ಎ.

ಮನೆಯಲ್ಲಿಯ ಮಿಕ್ಕವರೆಲ್ಲ ಶಾಲೆಗೆ ಹೋಗಿ, ಪಾಠಓದಿ, ಪರೀಕ್ಷೆಯಲ್ಲಿ ಪಾಸಾಗಿ, ಕಚೇರಿಯ ಕಾರಕೂನರಾಗಿ ಕುಳಿತುಕೊಂಡರು. ಶಾಲೆಯ ಪಾಠ ಸರಿಯಾಗಿ ಓದದೆ 'ದಡ್ಡ'ನೆಂಬ ಬಿರುದನ್ನು ಪಡೆದ ಸರ್ವೋತ್ತಮನು, ತನ್ನ ಕಲಾಸರ್ವೋತ್ತಮತ್ವದಿಂದ ಚಲಚ್ಚಿತ್ರ ಕಲಾಪ್ರಪಂಚದಲ್ಲಿ ಶುಕ್ರನಂತೆ ತೊಳಗುತ್ತಿದ್ದಾನೆ. ಸರ್ವೋತ್ತಮರಾಯರು ಕನ್ನಡಿಗರು; ಆದರೆ ಅವರ ಕಾರ್ಯಕ್ಷೇತ್ರ ?

'ಕನ್ನಡ ಭಾಷೆಯಲ್ಲಿ ವಾಕ್ಪಟಗಳೇಕೆ ಇಲ್ಲ?' ಎಂದು ಯಾರಾದರೂ ಅನ್ಯಭಾಷೆಯ ಜನರು ಕೇಳಿದಾಗ, ಅಥವಾ ಅವರು ಈಗಾಗಲೆ ಕನ್ನಡದಲ್ಲಿ ಹೊರಟ ಐದು ಚಿತ್ರಪಟಗಳ ಹೆಸರನ್ನು ತೆಗೆದಾಗ, ಅದಕ್ಕೆ ಸಮರ್ಪಕವಾದ ಉತ್ತರವನ್ನು ಕೊಡಲಿಕ್ಕಾಗದೆ, ಪ್ರತಿಯೊಬ್ಬ ಕನ್ನಡಿಗನು ಕೆಳಕ್ಕೆ ಮೋರೆಹಾಕುವ ಸಂದರ್ಭಗಳು ಎಷ್ಟೋ ಒದಗುತ್ತಿರಬಹುದು. ಕೊನೆಗೆ ಇಂತಹ ಪ್ರಶ್ನೆಗಳನ್ನು ಕೇಳಿದವರಿಗೆ ಕೊಡಲು ಉತ್ತರವಿಲ್ಲದಿದ್ದರೆ ಹೋಗಲಿ; ನಮ್ಮ-ನಮ್ಮೊಳಗಾದರೂ ಸಮಾಧಾನ ಹಚ್ಚಿಕೊಳ್ಳಲಿಕ್ಕೆಂದು ಒಂದೆರಡು ಕಾರಣಗಳು ಸಿಕ್ಕಬಹುದೇ? 'ಕನ್ನಡದಲ್ಲಿ ವಾಕ್ಪಟ-ಮಂದಿರಗಳೇ ಕಡಿಮೆ' ಎಂದು ಕೆಲವರು ಹೇಳಬಹುದು. ಆದರೆ ಅಂಕೆ-ಸಂಖ್ಯೆಗಳನ್ನು ಪರೀಕ್ಷಿಸಿ ನೋಡಲಾಗಿ, ಕನ್ನಡನಾಡಿನಲ್ಲಿ ಒಟ್ಟಾರೆ ೧೨೫ ರಷ್ಟು ಚಿತ್ರಮಂದಿರ (ಸಿನೇಮಾ ಥಿಯೇಟರ್) ಗಳಿವೆ ಎಂಬುದು ಕಂಡುಬರುವುದು. ಇದರ ಮುಕ್ಕಾಲು ಪಾಲು ಮಂದಿರಗಳಿದ್ದ ಪಂಜಾಬಿಗಳು ಸಹ ತಮ್ಮ ತಾಯಿನುಡಿಯಲ್ಲಿ ಕೆಲವು ವಾಕ್ಪಟಗಳನ್ನು ಹೊರಡಿಸಿರುವರು; ಹೀಗಿರುವಾಗ ಕನ್ನಡದಲ್ಲಿ ಇರದೆ ಇರುವುದರಲ್ಲಿ ಏನು ವಿಶೇಷ? ಒಂದೂವರೆ ಕೋಟಿ ಜನ ಕನ್ನಡಿಗರಿದ್ದರೂ ಇದುವರೆಗೆ ಎದೆಯುಬ್ಬಿಸಿ ಹೇಳಿಕೊಳ್ಳುವಂತಹ ಚಿತ್ರಗಳು ಏಕೆ ಹೊರಟಿರಲಿಕ್ಕಿಲ್ಲ? ಒಂದು ಕಡೆಯಿಂದ ಮರಾಠಿ-ಹಿಂದಿಗಳ ಮೋಹ, ಇನ್ನೊಂದುಕಡೆಯಿಂದ ತೆಲುಗು-ತಮಿಳುಗಳ ದಾಳಿ, ಇದರಿಂದ ಕನ್ನಡವು ಇರುಕಿನಲ್ಲಿ ಸಿಕ್ಕಿಬಿದ್ದಿರುವುದು. ಭಾಷೆಯ ಸಹಾಯದಿಂದ ಜನತೆಯಲ್ಲಿ ಜಾಗೃತಿಯನ್ನು ಹುಟ್ಟಿಸಲು ಸಾಧನವಾಗಬಹುದಾದ ರೇಡಿಯೊ, ವಾಕ್ಪಟ ಮುಂತಾದುವುಗಳ ಲಾಭವು ಕನ್ನಡ ಜನಕ್ಕೆ ಆಗದೆ ಇರುವುದರ ಮೂಲಕ, ಅವರು ಪ್ರಗತಿನಿಷ್ಠಜಗತ್ತಿನಿಂದ ಇನ್ನೂ ಎಷ್ಟೋ ಅಂತರದ ಹಿಂದೆ ಉಳಿದಂತೆ ಹೆರವರಿಗೆ ಕಾಣುವುದರಲ್ಲಿ ಏನೂ ಆಶ್ಚರ್ಯವಿಲ್ಲ.

"ಸಂಗೀತ-ನಾಟ್ಯಕಲೆಗಳಲ್ಲಿ ಅಭಿರುಚಿ, ನೈಪುಣ್ಯಗಳುಳ್ಳ, ಅಸಂಖ್ಯ ಜನ ಕನ್ನಡಿಗರು, ತಮ್ಮ ಕಲೆಯ ಅಭಿವೃದ್ಧಿಗಾಗಿ, ಭಾಷೆಯ ತೊಡಕುಗಳನ್ನು ಹೇಗಾದರೂ ಮಾಡಿ ಬಗೆಹರಿಸಿಕೊಂಡು, ಕನ್ನಡವನ್ನು ಬಿಟ್ಟು, ನೆರೆಯ ನಾಡುಗಳಿಗೆ ತೆರಳುತ್ತಿರುವರು. ಇದಕ್ಕೆ ಕಾರಣವೇನು? ಇದಕ್ಕೆ ಪ್ರತಿಬಂಧಕ ಉಪಾಯವೇನೂ ಇಲ್ಲವೆ?" ಎಂಬ ವಿಚಾರಗಳು ನನ್ನ ತಲೆಯಲ್ಲಿ ಒಂದೆ ಸಮನಾಗಿ ಕುಣಿಯುತ್ತಿದ್ದುವು. 'ಇಂತಹ ಸಮಸ್ಯೆಗಳನ್ನು ನಿಷ್ಪಕ್ಷಪಾತದೃಷ್ಟಿಯಿಂದ ಬಿಡಿಸಿದವರು ಯಾರೂ ಇರಲಿಕ್ಕಿಲ್ಲವೆ?' ಎಂಬ ವಿಷಯವನ್ನೆ ಶ್ರೀ. ಸರ್ವೋತ್ತಮ ಬದಾಮಿಯವರಲ್ಲಿ ಅಂದು ಕೇಳಿದೆ. ಅದಕ್ಕೆ ಅವರು ಕೊಟ್ಟ ಕಾರಣಗಳು ನನಗೆ ನಿಜವಾಗಿಯೂ ಸಮಂಜಸವೆನಿಸಿದುವು.

"ಕನ್ನಡಲ್ಲಿ ಇಂತಹ ಉದ್ಯಮಗಳಿಗೆ ಬೇಕಾದಷ್ಟು ಹಣವಿದೆ. ಹಾಗೆ ನೋಡಿದರೆ ಬಂಗಾಲ, ಗುಜರಾತಿಗಳನಂತರ ಸಿರಿತನದಲ್ಲಿ ಕನ್ನಡವೇ ನಿಲ್ಲುವುದು. ಇದಕ್ಕೆ ಉದಾಹರಣೆಯೆಂದು ಬೇಕಾದರೆ, ಅನ್ಯಪ್ರಾಂತದ ಅನೇಕ ಉದ್ಯೋಗಗಳು ಕನ್ನಡದಲ್ಲಿ ದೊರಕಿಸಿದ ಹಣವನ್ನು ನೋಡಬಹುದು. ಆದರೆ ಕನ್ನಡ ಜನರಿಗೆ ತಮ್ಮವರ ಮೇಲೆಯೆ ವಿಶ್ವಾಸವಿಲ್ಲ. ಬೇರೆ ಜನರು ಇಂತಹ ಕಾರ್ಯವನ್ನು ಕೈಕೊಂಡರೆ ತಮ್ಮ ದುಡ್ಡನ್ನು ಅವುಗಳಲ್ಲಿ ತೊಡಕಿಸುವರು. ಆದರೆ ನನ್ನಂತಹ ಕನ್ನಡಿಗನೊಬ್ಬನು ಅದನ್ನೆ ಆರಂಭಿಸಿದರೆ ಅನು-ಮಾನಿಸುವರು. ಹೀಗೆ ಕನ್ನಡಿಗರಲ್ಲಿ ಆತ್ಮವಿಶ್ವಾಸವಿಲ್ಲ ಒಂದು; ಮತ್ತು ಆತ್ಮಗೌರವವಿಲ್ಲೆಂದು ಎರಡನೆಯದು. ತಮ್ಮ ಜನರು ಮಾಡಿದ ಕಾರ್ಯಕ್ಕಾಗಿ ಅಭಿಮಾನವಿಲ್ಲ; ತಮ್ಮ ಜನರೇ ಇಂತಹ ಕೆಲಸಗಳನ್ನು ಮಾಡಬೇಕೆಂಬ ಆಕಾಂಕ್ಷೆಯಿಲ್ಲ. ಹೀಗಾಗಿವೆ ನಮ್ಮ ಸ್ಥಿತಿ. ಪ್ರತಿಯೊಬ್ಬ ಕನ್ನಡಿಗನು "ಕನ್ನಡದಲ್ಲಿಯೆ ವಾಕ್ಪಟಗಳಾಗುವವರೆಗೆ ನಾನು ಬೇರೆ ಭಾಷೆಯ ಯಾವ ಚಿತ್ರಗಳನ್ನೂ ನೋಡಲಿಕ್ಕಿಲ್ಲ" ಎಂದು ಕೇವಲ ಎರಡು ವರ್ಷಗಳವರೆಗೆ ಪಣತೊಟ್ಟರೆ, ಮೂರನೆಯ ವರುಷವೆ ಕನ್ನಡದಲ್ಲಿ ವಾಕ್ಪಟಗಳು ಹೊರಟಿದ್ದನ್ನು ಕಾಣಬಹುದು; ಮತ್ತು ಬೇರೆ ಪ್ರಾಂತಗಳಿಗೆ, ಬೇರೆ ದೇಶಗಳಿಗೆ ಈ ಮಾರ್ಗವಾಗಿ ಹೋಗುವ ದುಡ್ಡಿನ ಉಳಿತಾಯವು ಕನ್ನಡಕ್ಕೆ ಆಗುವುದಲ್ಲದೆ, ಕಲೆಯ ವಿಕಾಸ

ಬದಾಮಿಯವರು ದಿಗ್ದರ್ಶನ ಮಾಡುತ್ತಿರುವ ಚಿತ್ರಗಳಲ್ಲಿ ಮುಖ್ಯ-
ಸ್ತ್ರೀಭೂಮಿಕೆಯನ್ನು ವಹಿಸುತ್ತಿರುವ ಶ್ರೀಮತಿ ಸವಿತಾದೇವಿ.

ಕಲ್ಕಾಗಲಿ, ಹೊಟ್ಟೆಯ ಪಾಡಿಗಾಗಲಿ ಕನ್ನಡಿಗರು ಬೇರೆ ಜನರ ಮನೆಯ ಬಾಗಿಲಿಗೆ ಹೋಗಿ ನಿಲ್ಲುವ ಸಂದರ್ಭವೂ ಒದಗುವುದಿಲ್ಲ."

* * *

ಮಾರ್ಚ್ ತಿಂಗಳ ಪ್ರಶಾಂತವಾದ ಒಂದು ರಾತ್ರಿ. ಮುಂಬಯಿಯಲ್ಲಿ, ಚೌಪಾಟಿಯ ಬಳಿಯಲ್ಲಿರುವ ಒಂದು ಬಂಗಲೆಯ ನಡುಮನೆಯಲ್ಲಿ, ಒಂದು ಸುಖಾಸನದ ಮೇಲೆ ಕುಳಿತಿದ್ದೆವು ನಾವಿಬ್ಬರು. ನಮ್ಮ ಹತ್ತಿರದಲ್ಲಿಯೆ ಮೇಲಿನ ಅಭಿಪ್ರಾಯವನ್ನು ಕೇಳುತ್ತ ಮುಗುಳುನಗೆ ನಗುವ ಶ್ರೀ. ವರ್ಶೇಣಿ ಗುರುರಾಜರೂ ಕುಳಿತಿದ್ದರು. ನಾವು ಬಂದೊಡನೆ, ನಮ್ಮ ಸ್ವಾಗತವಾಗುವುದಕ್ಕಿಂತ ಮೊದಲೇ ನಾವು, ಆ ನಡುಮನೆಯಲ್ಲಿಯ ಚಿತ್ರಸೃಷ್ಟಿಯ ಸೊಬಗನ್ನು ಸವಿದಿದ್ದೆವು. ಗೋಡೆಗಳ ಮೇಲೆ ಒಪ್ಪುವ ಚೆಂದಚೆಂದವಾದ ಚಿತ್ರಪಟಗಳು; ಎದುರಿಗಿನ ಗೋಡೆಗೆ ಹೊಂದಿ ಇರಿಸಿದ ಹುಲಿದೊಗಲಿನ ಗದ್ದುಗೆ; ಅಲ್ಲಲ್ಲಿ ತಮ್ಮ ಒಡೆಯನ ಕಲಾಭಿರುಚಿಯ ಪ್ರತೀಕಗಳಂತೆ ನಿಂತ ಸುಂದರವಾದ ಕಪಾಟುಗಳು. ಅವುಗಳನ್ನೆಲ್ಲ ನೋಡುತ್ತ ನಾವು ಕುಳಿತಾಗ, ನಮ್ಮಮೇಲೆ ಹಾರ್ದಿಕವಾದ ಒಂದು ನಗೆಯನ್ನು ಬೀರಿ, ಶ್ರೀ. ಬದಾಮಿಯವರು ನಡುವೆ ಕುಳಿತರು. ನಮ್ಮಲ್ಲಿ ಮಾತುಕತೆಗೆ ಆರಂಭವಾಯಿತು:

"ನಾನೇನು ಕಲಿತವನಲ್ಲ, ಪರದೇಶಪ್ರಯಾಣ ಮಾಡಿದವನಲ್ಲ, ನನ್ನನ್ನು ಕೇಳುವುದೇನು ಇದೆ ನಿಮಗೆ?" ಎಂದು ಕೇಳಿದರು ಶ್ರೀ. ಬದಾಮಿಯವರು. "ಅದನ್ನೇ ಕೇಳಬೇಕಾಗಿದೆ ನಮಗೆ" ಎಂದೆ ನಾನು. "ನೀವು ಕಲಿತವರಲ್ಲ, ಮುಂಬಯಿಯ ಕಡೆಯವರೂ ಅಲ್ಲ; ಆತಹರು ಇಷ್ಟೊಂದು ಲೋಕಪ್ರಿಯ ದಿಗ್ದರ್ಶಕರಾದುದು ಹೇಗೆಯೆಂಬುದನ್ನೇ ಕೇಳಬೇಕಾಗಿದೆ ನಮಗೆ!" ನಮ್ಮ ಮಾತಿನ ಈ ಬಗೆಯು ಅವರನ್ನು ಮರುಳುಗೊಳಿಸಿರಬೇಕು; ಯಾಕೆಂದರೆ ಅವರು ಕೂಡಲೆ ತಮ್ಮ ಪೂರ್ವವೃತ್ತಾಂತವನ್ನು ಹೇಳಲು ತೊಡಗಿದರು.

"ಅದೊಂದು ಆಕಸ್ಮಿಕ ಘಟನೆ ಎನ್ನಿರಿ" ಎಂದವರೆ ಅವರು ನಗಲಾರಂಭಿಸಿದರು. ಆಗ ನಮಗಾದರೂ—ಒಬ್ಬರ ಮೋರೆಯನ್ನು ಒಬ್ಬರು ನೋಡಿಕೊಂಡು—ನಗು ಬಂದಿತು. ಯಾಕೆಂದರೆ ನಾವು ಅವರನ್ನು ಕಾಣಲಿಕ್ಕೆ ಹೋದುದೂ ಒಂದು ಆಕಸ್ಮಿಕ ಘಟನೆಯೆ ಆಗಿತ್ತು. ಪೂರ್ವಸಿದ್ಧತೆಯಿಲ್ಲದೆ, ಮೊದಲಾಗಿಯೆ ಅವರಿಗೆ ತಿಳಿಸದೆ ಹೋಗಿದ್ದೆವು ನಾವು. ಕಾರಣ ಆ ಶಬ್ದದ್ವಯವು ಕಿವಿಯ ಮೇಲೆ ಬಿದ್ದೊಡನೆ ಕುತೂಹಲವೆನಿಸಿದಷ್ಟೆ ಮೋಜೆನಿಸದೆನಿಸಿತು.

"ನಮ್ಮ ಮನೆಯಲ್ಲಿ ನಾನೆಂದರೆ ಒಬ್ಬ '**ಹೆಡ್ಡ**' '**ಉಡಾಳ**' ಎಂದು ಮಾಡಿಟ್ಟಿದ್ದರು ನಮ್ಮ ಮನೆಯವರು. ನಮ್ಮ ಹಿರಿಯರ ಮನಸ್ಸಿನಲ್ಲಿ ನಾನೂ ರಾಜಮಾರ್ಗವನ್ನು ಹಿಡಿದು, ಪದವೀಧರನಾಗಿ, ಕಲೆಕ್ಟರ ಕಚೇರಿಯಲ್ಲಿ ಕಾರಕೂನನಾಗಲಿ, ಶಿರಸ್ತೇದಾರನಾಗಲಿ ಆಗಬೇಕು ಎಂದಿತ್ತು. ಅದರಂತೆಯೆ ಅವರು ನನ್ನನ್ನು ಶಾಲೆಗೂ ಕಳಿಸಿದರು. ಆದರೆ ನಾನು ಹೆಚ್ಚಾಗಿ ಶಾಲೆಯನ್ನು ಹಚ್ಚಿಕೊಳ್ಳಲಿಲ್ಲ. ಮೊದಲಿನಿಂದಲೂ ನನಗೆ ಕಲೆಯಲ್ಲಿ ಆಸಕ್ತಿಯೂ ಉದ್ಯೋಗದಲ್ಲಿ ಪ್ರೀತಿಯೂ ಬಹಳವಾಗಿದ್ದಿತು!'

"ನಿಮ್ಮ ಮನೆತನದಲ್ಲಿಯೆ ಯಾರಾದರೂ ಕಲಾವಿದರಿದ್ದರೋ ಅಥವಾ ನೀವು ಬೇರೆ ಮಿತ್ರರಿಂದಾದರೂ ಸ್ಫೂರ್ತಿಯನ್ನು ಪಡೆದಿರೊ?" ಎಂದು ನಾನು ಅವರನ್ನೊಂದು ಮಾತು ಕೇಳಿದೆ. ಯಾಕೆಂದರೆ ಮನೆಯಲ್ಲಿ ಹಾಗೂ ಮಿತ್ರರಲ್ಲಿ ಕೇವಲ ನೌಕರಿಯ ವಾತಾವರಣವೆ ಇದ್ದಲ್ಲಿ, ಇಂತಹ ಅಭಿರುಚಿ ಆಕಾಂಕ್ಷೆಗಳಿದ್ದ ಜನರು ಸಿಕ್ಕುವುದು ವಿರಲ. "ನಮ್ಮ ಅಜ್ಜಂದಿರಾದ ಶ್ರೀ. ಬದಾಮಿ ಕೃಷ್ಣರಾಯರಿಗೆ ನಾಟಕಗಳನ್ನು ಬರೆಯುವುದರಲ್ಲಿ ಮತ್ತು ಆಡುವುದರಲ್ಲಿ ತುಂಬ ಆಸಕ್ತಿಯಿದ್ದಿತು. ನಮ್ಮ ಮನೆತನದಲ್ಲಿಯೆ ನಮ್ಮದೊಂದು ನಾಟಕದ ಗುಂಪು ಇದ್ದಂತೆ ಇತ್ತು. ಅದರಲ್ಲಿ ನಾನು ಮೊದಲಿನಿಂದಲೂ ತುಂಬ ಉಬ್ಬಿನಿಂದ ಭಾಗವಹಿಸುತ್ತಿದ್ದೆ. ನನಗೆ ಸಾಲೆಗೆ ಹೋಗಿ ಪಾಠಕಲಿಯಲು ಮನಸ್ಸಿದ್ದಿಲ್ಲವೆಂದು, ಉಳಿದ ಕೆಲಸಗಳಲ್ಲಿಯೂ ನಾನು ಹಾಗೆಯೆ ಇದ್ದೆನೆಂದಲ್ಲ. ಹಾಗೆ ನೋಡಿದರೆ, ಚಿಕ್ಕವನಿದ್ದಾಗ ನಮ್ಮ ಮನೆಯಲ್ಲಿ ಉಳಿದ ಜನರು ಮಾಡುತ್ತಿದ್ದ ಸರಕಾರಿ ನೌಕರಿಯನ್ನು ಕಂಡಾಗ ನನಗೆ ಸೇರಿಕೆಯನಿಸದೆ, 'ಯಾವುದಾದರೊಂದು ದೊಡ್ಡ ಉದ್ಯೋಗವನ್ನು ನಾನು ಆರಂಭಿಸಬೇಕು' ಎಂದು ಮಾಡಿದ್ದೆ. ಒಮ್ಮೆಯಂತೂ ಮೈಸೂರಿನಲ್ಲಿ ಒಂದು ಕಡ್ಡಿಯ ಪೆಟ್ಟಿಗೆಯ ಕಾರಖಾನೆಯನ್ನು ಪ್ರಾರಂಭಮಾಡುವ ಸಿದ್ಧತೆಯನ್ನು ನಡೆಯಿಸಿಬಿಟ್ಟಿದ್ದೆ. ಆದರೆ ಅದೇನೋ ಒಮ್ಮೆಲೆ ಪ್ರವಾಹವು ಬದಲಾಯಿತು." ಎಂದವರೆ ಅವರು ತಮ್ಮ ಸುತ್ತಲೂ ನೋಡಿದರು. ಒಳಗಿನಿಂದ ಅವರಿಗೆ ಊಟದ ಕರೆಯು ಬಂದಿತು; ಆದರೆ ಆಗ ಅವರು 'ಕೊಂಚ ತಡೆದು ಬರುವೆ' ಎಂದು ಹೇಳಿ, ನಮ್ಮ ಸಂಗಡ ಮಾತನ್ನು ಮುಂದುವರಿಸಿದರು.

"ಆದರೆ ನೀವು ಬೆಂಗಳೂರಿನಿಂದ ಮುಂಬಯಿಗೆ ಬಂದುದೂ, ವಾಕ್ಪಟಗಳ ದಿಗ್ದರ್ಶಕರಾದುದೂ ಒಂದೊಂದು ಒಡೆಯದ ಒಗಟ ದಂತೆಯೆ ಕಾಣುವುವು ನಮಗೆ" ಎಂದು ಮತ್ತೆ ನಾನು ಅವರನ್ನು ಕೇಳಿದೆ. ಅದಕ್ಕೆ ಅವರು ಕೊಂಚ ವಿಚಾರ ಮಾಡಿದಂತೆಮಾಡಿ ಉತ್ತರವನ್ನಿತ್ತರು; "ಅದೆಂದರೆ ಹೀಗಾಯಿತು.." ಎಂದವರೆ ಬಳಿಯಲ್ಲಿರುವ ಎಲೆಯಡಿಕೆಗಳನ್ನು ನಮ್ಮ ಕಡೆಗೆ ಸರಿಸುತ್ತ ಹೇಳಿದರು: "ಬೆಂಗಳೂರಿನಲ್ಲಿ ನಮ್ಮ ಪರಿಚಯದವರಾದ ಡಾಕ್ಟರ್ ಪಟೇಲರೆಂಬ ಒಬ್ಬ ಗುಜರಾತಿಗಳಿದ್ದರು. ನಮ್ಮ ಮನೆಯ ಜನರಿಗೂ ಅವರಿಗೂ ತುಂಬ ಸಲುಗೆ. ಆಗಾಗ ಪ್ರವಾಸಗಳಿಗೆ ಹೋದಾಗ ನಾನು ತೆಗೆದುಕೊಂಡ ಕೆಲವು ಫೋಟೋಗಳು, ಮತ್ತು ನಾಟಕಗಳಲ್ಲಿಯ ನನ್ನ ಚಟುವಟಿಕೆಗಳು ಇವೇ ಮೊದಲಾದುವನ್ನು ಕಂಡು, ಅವರು ನನಗೆ ಒಂದು ದಿನ ಸಹಜವಾಗಿ ಹೇಳಿದರು: 'ಮುಂಬಯಿಗೆ ಹೋಗುವೆಯೇನು? ಅಲ್ಲಿಗೆ ಹೋಗಿ ಸುಮ್ಮನೆ ಒಂದು ಫಿಲ್ಮ್ ಕಂಪನಿಯಲ್ಲಿ ಸೇರಿಬಿಡು. ನನ್ನ ಗುರುತಿನ ಅನೇಕ ಜನರಿದ್ದಾರೆ ಅಲ್ಲಿ' ಎಂದರು. ಅಷ್ಟರಲ್ಲಿಯೆ ನಾನು **ಶ್ರೀ. ಗುಬ್ಬಿ ವೀರಣ್ಣ**ನವರೊಂದಿಗೆ ಒಂದೆರಡು ಅರ್ಥವಾರ್ಥ ಪ್ರಯತ್ನಗಳನ್ನು ಮಾಡಿದ್ದೆ. ಕಾರಣ ಆ ಮಾತನ್ನು ತುಸು ಆಳವಾಗಿ ವಿಚಾರಮಾಡಿ, ಕೊನೆಗೆ ಇತ್ತ ಬರಲು ನಿರ್ಣಯಿಸಿ ಬಿಟ್ಟೆ!" ಎಂದರವರು.

'ಚಿನ್‌ಗಾರಿ' ಎಂಬ ಚಿತ್ರಪಟದಲ್ಲಿ ನಾಯಕ ನಾಯಿಕೆಯರಾಗಿ ನಟಿಸಿದ ನಟ—
ಪ್ರಥ್ವೀರಾಜ ಮತ್ತು ನಟಿ ಸವಿತಾದೇವಿ

ಶ್ರೀ. ಸರ್ವೋತ್ತಮರು ಮುಂಬಯಿಗೆ ಹೋದೊಡನೆ, ಜನರು ಅವರನ್ನು ಒಮ್ಮೆಲೆ ದಿಗ್ದರ್ಶಕರೆಂದೇ ಗೌರವಿಸಹತ್ತಿದರು ಎಂದು ಮಾತ್ರ ಯಾರೂ ತಿಳಿದುಕೊಳ್ಳಬಾರದು. ನಮ್ಮ ನಾಡಿನ ಹಿರಿಯರು ಯಾವುದೊಂದು ಕೆಲಸಕ್ಕೆ 'ಕುಳಿತು ಮಲಗಿರಿ' ಎನ್ನುವುದರಲ್ಲಿ ಸಾರ್ಥಕತೆಯು ತುಂಬ ಇದೆ. ಮೊತ್ತಮೊದಲು ಶ್ರೀ ಬದಾಮಿಯವರನ್ನು ಚಿತ್ರಾಲಯ (Studio) ದಲ್ಲಿ, ಪ್ರತಿಯೊಂದು ವಿಭಾಗದಲ್ಲಿ '**ಬಿದ್ದ ಕೆಲಸ**'ವನ್ನು ಮಾಡತಕ್ಕದ್ದು ಎಂದು ನಿಯಮಿಸಿಕೊಂಡರು. ಮುಂದೆ ಬರುಬರುತ್ತ ಅವರು ಎಲ್ಲ ವಿಭಾಗಗಳಲ್ಲಿ ಪೂರ್ಣಮಾಹಿತಿಯನ್ನು ಮಾಡಿಕೊಂಡು, ಚಿತ್ರೀಕರಣ (Photography) ಮತ್ತು ದಿಗ್ದರ್ಶನ ಇವುಗಳಲ್ಲಿ ಹೆಚ್ಚಿನ ನೈಪುಣ್ಯವನ್ನು ಪಡೆದರು.

"ಈ ಕೆಲಸವು ಬಹಳ ಬೇಸರದ ಕೆಲಸ" ಎಂದರು ಅವರು. "ಯಾವುದೊಂದು ಸಂಗತಿಯು ಕೂಡಲೆ ಮುಗಿಯಿತು. ಎಂದು ಹೇಳಲಿಕ್ಕಾಗುವುದಿಲ್ಲ. ಸತತವಾಗಿ ಅದಕ್ಕೆ ಗಂಟುಬಿದ್ದರೆ, ಒಮ್ಮೊಮ್ಮೆ ಬೇಗ ಮುಗಿಯುವುದು; ಇಲ್ಲದಿದ್ದಲ್ಲಿ, ಹತ್ತೆಂಟು ತರದ ಜನರ ಸಂಬಂಧ ಬರುವ ಕಾರಣ, ಅದು ಮುಗಿಯಲಿಕ್ಕೆ ಸಾಮಾನ್ಯವಾಗಿ ವಿಲಂಬವಾಗುವುದೇ ಹೆಚ್ಚು."

"ಹತ್ತೆಂಟು ಜನರೆಂದ ಕೂಡಲೆ ನೆನಪಾಯಿತು. ಇಂತಹ ಜನರ ಸಹವಾಸದ ವಿಚಿತ್ರಪರಿಣಾಮವು ನಿಮ್ಮ ಮೇಲೆ ಆಗುವುದಿಲ್ಲವೆ?" ಎಂದು ಒಂದು ಸೂಕ್ಷ್ಮವಾದ ಪ್ರಶ್ನೆಯನ್ನು ಕೇಳಿದೆ ನಾನು. ಅದರ ನಿಲುವು ಅವರಿಗೆ ಹತ್ತಿರಬೇಕು. ಅಂತೆಯೆ ಅವರು ಅದಕ್ಕೆ ತಮ್ಮ ಅಭಿಪ್ರಾಯವನ್ನು ಹೇಳಿಬಿಟ್ಟರು:

"ನಮ್ಮ ಕೆಲಸದಲಿ ಅನೇಕ ಬಗೆಯ ಜನರ ಸಂಬಂಧವು— ನಿಕಟವಾದ ಸಂಬಂಧವು— ಬರುವುದು — ಇದು ನಿಜ. ಆದರೆ ಒಮ್ಮೆ ಒಬ್ಬ ನಟಿಯೇ ಆಗಲಿ, ದಿಗ್ದರ್ಶಕನೇ ಆಗಲಿ, ಜನರಲ್ಲಿ ಹೆಸರುಗಳಿಸಿಕೊಂಡರೆಂದರೆ. ಅತ್ತ ಕಡೆಗೇ ಅವರ ಲಕ್ಷ್ಯವಿರಬೇಕಾಗುವದು. ಏಕೆಂದರೆ ನೋಡಿರಿ, ನಟ-ನಟಿಯರಿಗೂ, ನಮಗೂ ಜನರೇ ಆಶ್ರಯದಾತರು. ಅವರ ಅಭಿಪ್ರಾಯದ ಮೇಲೆಯೆ ನಮ್ಮ ಅಭ್ಯುದಯಜೀವನ ಅವಲಂಬಿಸಿರುವ ಕಾರಣ, ನಾವು ಎಚ್ಚರದಿಂದಿರಲೇ ಬೇಕಾಗುವುದು" ಎಂದವರೇ ಅವರು ಮನಃಪೂರ್ವಕವಾಗಿ ನಕ್ಕರು. ಕೂಡಲೆ ಅವರು ಮತ್ತೆ ಆಸನದ ಮುಂಭಾಗಕ್ಕೆ ಸರಿದು ಕುಳಿತು, ಮಾತನ್ನು ಮುಂದುವರಿಸಿದರು:

"ಇನ್ನೂ ಒಂದು ಮಾತು: ನಟಿಯರೇ ಆಗಲಿ, ಮಿಕ್ಕ ಯಾವ ಜನರೇ ಆಗಲಿ, ಪರದೆಯ ಮೇಲೆ ಹಾಗೂ ಜಾಹೀರಾತಿನಲ್ಲಿ ಎಷ್ಟು ಚೆಂದ ಕಾಣುತ್ತಿರುವರೊ, ಅಷ್ಟು ಸತ್ಯಸೃಷ್ಟಿಯಲ್ಲಿ

ಇರುವುದಿಲ್ಲ. ಅದಕ್ಕಾಗಿಯೆ ನಾವು ಚಿತ್ರಾಲಯದಲ್ಲಿ ಅವರ 'ಸ್ವರೂಪ'ವನ್ನು ನೋಡಿ ನೋಡಿ, ಕೊನೆಗೆ ಮನೆಗೆ–ನಮ್ಮ ಮನೆಗೆ ಯಾವಾಗ ಓಡಿಹೋಗಬಹುದೊ ಎಂದು ತವಕಪಡುತ್ತಿರುವೆವು" ಎಂದು ತಾವು ಮೊನ್ನೆ ಮೊನ್ನೆ ಮದುವೆಯಾದುದನ್ನೂ, ಮನೆಮಾಡಿದುದನ್ನೂ ನಮಗೆ ಹೇಳಿದರು.

ಆಗ ಶ್ರೀ. ಪರ್ಕೇಡಿ ಗುರುರಾಜರಿಗೆ ಕೇಳಬೇಕಾಗಿದ್ದ ಒಂದು ಸಂಶಯದ ಪರಿಹಾರವು ಆಯಿತು. ಇನ್ನೊಂದು ಉಳಿಯಿತು ಎಂದು ಅವರು ನನ್ನ ಕಡೆಗೆ ಸನ್ನೆಮಾಡಿದರು. ನಾನು 'ಹೂಂ' ಎಂದೆ. ಕೂಡಲೆ ಎಸೆದರು ಅವರು ಪ್ರಶ್ನೆಯ ಅಲಗನ್ನು:

"ನಿಮ್ಮ ತೀವ್ರವಾದ ಆಕಾಂಕ್ಷೆ ಏನಿರುವುದು?" ಎಂದು ಕೇಳಿದರವರು. ತುಸು ವಿಚಾರ ಮಾಡಿ ಶ್ರೀ. ಸರ್ವೋತ್ತಮ ಬದಾಮಿಯವರು ನಕ್ಕುಬಿಟ್ಟರು.

"ಅಂತಹ ವಿಶೇಷವಾದ ಆಕಾಂಕ್ಷೆ ಯಾವುದೂ ನನಗೆ ಇಲ್ಲ. ಹಾಗೆ ನೋಡಿದರೆ ನಾನು ಆದರ್ಶವಾದಿಯಲ್ಲ— ಪ್ರಯತ್ನವಾದಿ. ಕೇವಲ ಬೆಳಗಿನ ೯ ಗಂಟೆಯಿಂದ ರಾತ್ರಿಯ ೯ರ ವರೆಗೆ ಮೈಮುರಿಯೆ ದುಡಿಯುವುದೊಂದೇ ನನಗೆ ಗೊತ್ತು... ನಮ್ಮ ಜನರಲ್ಲಿ ಈಗಲೂ 'ವಾಕ್ಪಟ' ಎಂದರೆ ನಿಷಿದ್ಧ. ಅವುಗಳನ್ನು ನೋಡುವುದು ಎಂದರೆ 'ಭ್ರಷ್ಟ'. ಅದರಲ್ಲಿ ತೊಡಗಿದ ಮಂದಿಯೆಂದರೆ 'ಪೋಕರಿ' ಜನಕು.. ಎಂಬ ಭಾವನೆಯಿದೆ. ಇದೇ ಈ ಭಾವನೆಯನ್ನು ಹೋಗಲಾಡಿಸಿ, ಜನರನ್ನು ಜಾಗೃತಗೊಳಿಸಿ ಜಾಣರನ್ನಾಗಿಸಲು ಅದೂ ಒಂದು ಉತ್ತಮ ಸಾಧನ ಎಂದು ನನಗೆ ಸಿದ್ಧಮಾಡಿ ತೋರಿಸಬೇಕಾಗಿದೆ. ಅಂತೆಯೆ ನಾನು ನನ್ನ ಪ್ರತಿಯೊಂದು ಚಿತ್ರದಲ್ಲಿ ಮಧ್ಯಮವರ್ಗದ ಸುಖ-ದುಃಖ, ಕಷ್ಟ-ನಷ್ಟಗಳನ್ನೊಳಗೊಂಡ ಸಂಸಾರಗಳನ್ನೆ ಚಿತ್ರಿಸುತ್ತೇನೆ... ಅಂತೆಯೆ ಇತ್ತ ಕಡೆಯ ಜನರು 'ಬದಾಮಿಯವರ ವಾಕ್ಪಟವೆಂದರೆ ಏನಾದರೂ ನೈಜವಾದುದಿರುತ್ತದೆ' ಎನ್ನುತ್ತಾರೆ. ಒಟ್ಟು ಜನರನ್ನು ಸುಸಂಸ್ಕೃತರನ್ನಾಗಿ ಮಾಡುವುದೇ ನನ್ನ ಗುರಿಯಾಗಿದೆ". 'ನಾನು ಆದರ್ಶವಾದಿಯಲ್ಲ' ಎಂದು ವಿನಯದಿಂದ ಹೇಳಿದುದೂ ಒಂದು ಶೋಭೆಯೆಂದೇ ಕಂಡಿತು ಆ ಕ್ಷಣಕ್ಕೆ!

ನಾವು ಹೋಗಿ ಸಾಕಷ್ಟು ವೇಳೆಯಾಗುತ್ತಬಂದಿತ್ತು; ಅದಲ್ಲದೆ ಅವರು ಊಟ ಮಾಡುವುದಿತ್ತು ಇನ್ನೂ. ಕಾರಣ ಬೇಗನೆ ಅಲ್ಲಿಂದ ಹೊರಡಬೇಕೆಂದು ನಾನು, ಮುಂದೆ ಒಂದೆರಡು ಸಂಗತಿಗಳನ್ನು ಕೇಳತೊಡಗಿದೆ:



ಚಿನ್‌ಗಾರಿ ಚಿತ್ರಪಟದಲ್ಲಿಯವೊಂದು ಹಳ್ಳಿಯ ಹೊಲದ ದೃಶ್ಯ

"ನೀವು ಹೇಗಾದರೂ ಈಗ ವಾಕ್ಪಟಸೃಷ್ಟಿಯಲ್ಲಿ ಹೆಸರು ಗಳಿಸಿಕೊಂಡಿರುವಿರಿ; ಕೊಂಚ ಧನಸಂಪಾದನೆಯನ್ನೂ ಮಾಡಿರುವಿರಿ. ಕಾರಣ ನಿಮ್ಮ ಕಲೆಯ ಉಪಯೋಗವನ್ನೂ ಅದರ ಲಾಭವನ್ನೂ ಕನ್ನಡಿಗರಿಗೇಕೆ ಒದವಿಸಿಕೊಡುವುದಿಲ್ಲ? ದೊಡ್ಡ ಚಿತ್ರಗಳಿಗೆ ಅಷ್ಟು ಹಣ ಹಾಗೂ ಉತ್ಸಾಹವನ್ನು ಪೂರಯಿಸಲು ಸಾಧ್ಯವಿರದಿದ್ದರೆ ಹೋಗಲಿ; ಕನಿಷ್ಠ ನಾಲ್ಕಾರು ಜನರನ್ನು ಕಲೆಹಾಕಿ, ಶೈಕ್ಷಣಿಕ ವಿಷಯಗಳನ್ನೊಳಗೊಂಡ ಚಿಕ್ಕಚಿತ್ರಗಳನ್ನಾದರೂ ಏಕೆ ಕನ್ನಡದಲ್ಲಿ ತೆಗೆಯುವುದಿಲ್ಲ!" ಎಂದು ಕೇಳಿದೆ. ಅವರು ನನ್ನ ಅಭಿಪ್ರಾಯವನ್ನು ಕಂಡುಹಿಡಿದು, ಕೊಂಚ ಉಬ್ಬಿನಿಂದ ಆ ವಿಷಯದಲ್ಲಿ ಒದಗಬಹುದಾದ ಅಡ್ಡಿಗಳನ್ನು ಒಂದೊಂದಾಗಿ ನಮ್ಮ ಮುಂದೆ ಇರಿಸಿದರು.

"ಈ ವಿಷಯದಲ್ಲಿ ನಾನೂ ಕೊಂಚ ವಿಚಾರ ಮಾಡಿದ್ದೇನೆ. ನನಗೆ ನಟರ ಹಾಗೂ ಲೇಖಕರ ಬೆಂಬಲವೂ ಸಿಕ್ಕಬಹುದು ನಿಜ. ಆದರೆ ಸ್ವಭಾವತಃ ನಾನು ಅಂತಹ ಸಾಹಸಿಗನಲ್ಲ.. ಇದು ಮೊದಲನೆಯದು. ಇನ್ನೊಂದು ನಿಜವಾದ ಮಾತು ಎಂದರೆ, ಎರಡು ಕಾರಣಗಳ ಮೂಲಕ ನಾನು ಜನರಲ್ಲಿ ಹೋಗಿ ಬೆರೆತು ಮಾತುಗಳನ್ನಾಡುವುದು ಕಡಿಮೆ. ನನ್ನ ಎಲ್ಲ ವೇಳೆಯು ಚಿತ್ರಾಲಯದ ಜಗತ್ತಿನಲ್ಲಿಯೆ ಹೋಗುವುದರಿಂದ ಹೊರಗೆ ಬೀಳುವುದರಲ್ಲಿಯೆ ಮಿಕ್ಕವರು ಮಲಗುವ ವೇಳೆಯಾಗಿರುತ್ತದೆ; ಮತ್ತು ಒಳಗಿನ ಮಾತು ಎಂದರೆ ನನ್ನ ವಿದ್ಯಾಭ್ಯಾಸ ಮುಂತಾದುವುಗಳು ಹಾಗೆಹಾಗೆಯೆ ಇದ್ದುದರಿಂದ, ನಾನೇ ನಿರ್ಮಿಸಿದ ಜಗತ್ತನ್ನು ಬಿಟ್ಟು ನಾನು ಎಂದೂ ಹೋಗುವುದೇ ಇಲ್ಲ. ಆದಕ್ಕಾಗಿಯೆ ನೀವು ಹೇಳಿದಂತಹ ಚಿಕ್ಕ ಚಿತ್ರಗಳ ನಿಯೋಜನೆಗಾಗಿ ನನಗೆ ಸ್ವತಃ ತಿರುಗಾಡಲು ಆಗುವುದಿಲ್ಲ. ಮತ್ತು ಇನ್ನೊಂದು: ನಮ್ಮ ದೇಶದಲ್ಲಿಯ ವಿಶಿಷ್ಟಪದ್ಧತಿಯಲ್ಲಿ ಒದಗುವ ತೊಂದರೆಯೆಂದರೆ, ಅಂತಹ ಚಿಕ್ಕ ಚಿತ್ರಗಳನ್ನು ತೋರಿಸುವುದು ಹೇಗೆ! ಮೊದಲೇ ನಮ್ಮ ಜನರಿಗೆ ೧೪ ರಿಂದ ೧೮ ಸಾವಿರ ಫೂಟುಗಳ ವರೆಗೆ ದೊಡ್ಡವಿರುವ ಚಿತ್ರಗಳು ಬೇಕು. ಕನಿಷ್ಠ ಮೂರು ತಾಸು ಸಾಗುವ ಇಂತಹ ಚಿತ್ರಗಳ ಸಂಗಡ, ಆ ಚಿಕ್ಕಚಿತ್ರಗಳನ್ನು ತೋರಿಸಿದರೆ ವೇಳೆ ಸಾಕಾಗುವುದಿಲ್ಲ. ಮತ್ತು

ನಮ್ಮ ಜನರು ಕೊಡುವ ಎರಡು-ಮೂರಾಣೆಗಳಲ್ಲಿಯೆ, ಅವರಿಗೆ ಬೇಕಾಗುವ ದೊಡ್ಡ ಚಿತ್ರ ಹಾಗೂ ನಮ್ಮ ಆದರ್ಶದ ಚಿಕ್ಕ ಚಿತ್ರ ತೆಗೆಯುವರ ವೆಚ್ಚವೂ ಹೊರಡುವುದಿಲ್ಲ. ಹಾಗೆ ಲಾಭವಾಗುತ್ತಿದ್ದರೆ ಇಲ್ಲಿಯ ಗುಜರಾತಿಗಳು ಬಿಡುವವರೇ? ಅಂತಹದು ಸಾಧ್ಯವಿಲ್ಲವೆಂದೇ ನಾನು ಈ ಜನರ ತಂಡದಲ್ಲಿ ಬಂದು ಸೇರಿದುದು. ಇಲ್ಲದಿದ್ದರೆ ಇವರಲ್ಲಿ ನಾನೇಕೆ ಹೀಗೆ ಬಂದು ದುಡಿಯುತ್ತಿದ್ದೆ?... ಈಗ ನಾವು ಬೇರೆಯ ಕಂಪನಿಯನ್ನು ತೆಗೆದಿದ್ದರೂ, ನಮಗೆ ಚಿತ್ರಗಳನ್ನು ತೆಗೆಯಲು ಕಾರಣ ಎಂದರೆ ಅವುಗಳು ಹೊರಡುವುದಕ್ಕಿಂತ ಎಷ್ಟೋ ದಿನ ಪೂರ್ವದಲ್ಲಿಯೆ ಅವುಗಳ ಮಾರಾಟವಾದುದು ಒಂದು; ಮತ್ತು ಪಾತ್ರವರ್ಗ, ದಿಗ್ದರ್ಶಕ ಇವರ ಲೋಕಪ್ರಿಯತೆ ಇದು ಎರಡನೆಯದು" ಎಂದರು ಅವರು. ಆಗ ನನಗೆ ಮತ್ತೊಂದು ವಿಚಾರ ಬಂದಿತು. ಅದನ್ನೇ ಅವರ ಮುಂದೆ ಕೂಡಲೆ ಇಟ್ಟು ನೋಡಿದೆ:

"ಈಗ ಚಿಕ್ಕ ಶೈಕ್ಷಣಿಕ ಅಥವಾ ಪ್ರಚಾರಕ ವಿನೋದಪೂರ್ಣ ಚಿತ್ರಗಳನ್ನು ಹೊರಡಿಸಿದರೆ; ಕರ್ನಾಟಕದಲ್ಲಿ ಎಲ್ಲ ಶಾಲೆಗಳಲ್ಲಿ ಹಾಗೂ ನಗರಸಭೆ, ಪ್ರಾದೇಶಿಕಮಂಡಲ (Municepality, Local Board) ಇವುಗಳ ನೇತೃತ್ವದಲ್ಲಿ ಅವುಗಳನ್ನು ತೋರಿಸ ಲಕ್ಕೆ ಬರುವುದಿಲ್ಲವೆ? ನಮ್ಮ ಎರಡೂ ಉದ್ದೇಶಗಳು ಸಾಧ್ಯವಾಗುವುವು. ಇತ್ತ ನಮ್ಮವರ ಜಾಗೃತಿಯೂ ಆಯಿತು; ಅತ್ತ ಹೊರಡಿಸಿದವರಿಗೆ ಸಾಕಷ್ಟು ಲಾಭವೂ ಆಯಿತು. ಹೀಗೆ ಮಾಡಲಿಕ್ಕಿವೆ?" ಎಂದು ಕೇಳಿದೆ.

"ಇದು ಸಾಧ್ಯವಿದೆ. ಹಾಗೆ ಯಾರಾದರೂ ಬಂದು ನನ್ನನ್ನು ಕೇಳಿದರೆ, ಮತ್ತು ಅದರ ಎಲ್ಲ ಜವಾಬ್ದಾರಿಯನ್ನು ಹೊತ್ತರೆ, ನಾನು ಉತ್ತಮಚಿತ್ರಗಳನ್ನು ತೆಗೆದುಕೊಡಲು ಸಿದ್ಧನಿದ್ದೇನೆ. ಹೇಗಾದರೂ ನಮ್ಮ ಚಿತ್ರಾಲಯದಲ್ಲಿ ಅನೇಕಜನ ಕನ್ನಡಿಗರು ಬೇರೆ ಬೇರೆ ವಿಭಾಗದಲ್ಲಿ ಕೆಲಸಮಾಡುತ್ತಿದ್ದಾರೆ. ಅವರಿಂದ ನಮಗೆ ತುಂಬ ಸಹಾಯವಾಗುವುದು. ಆದರೆ ಅದಕ್ಕೆ ಮುಂಚೆ ನಮ್ಮಲ್ಲಿ ಜಾತಿ, ಮತ ಹಾಗೂ ಪ್ರಾಂತಭೇದಗಳು ಇಲ್ಲದಂತಾಗಬೇಕು. ಈಗ ನನ್ನ ಅನುಭವವನ್ನೆ ಹೇಳಬೇಕೆಂದರೆ, ನಾವು ಮೂಲತಃ ಬಾಳೇಹೊಸೂರಿನವರು. ಹೈದರನ ಕಾಲದಲ್ಲಿ ಯಾವಾಗಲೋ ನಮ್ಮ ಅಜ್ಜಂದಿರು ಮೈಸೂರುಪ್ರಾಂತವನ್ನು ಸೇರಿರಬೇಕು. ಆದರೆ ಮೊನ್ನೆ ಮೊನ್ನೆಯವರೆಗೆ,ಅಚ್ಚ ಕನ್ನಡ ವೈಷ್ಣವ ಕುಟುಂಬದವರಾದ ನಮ್ಮನ್ನು ಕೂಡ ಆ ಜನರು, ಮಹಾರಾಷ್ಟ್ರ ರೆಂದು ತಿಳಿದಿದ್ದರು. 'ಕರ್ನಾಟಕ ಎಂದರೆ ಮೈಸೂರು ಅಷ್ಟೆ, ಹೊರಗೆ ಏನೂ ಇಲ್ಲ' ಎಂದು ಅವರ ಭಾವನೆ ಇದ್ದಿರಬೇಕು. ಕಾರಣ ಇಂತಹ ಎಲ್ಲ ಭೇದಭಾವಗಳು ಅಳಿಯಬೇಕು; 'ನಾವು ಎಲ್ಲರೂ ಒಂದೇ ಕುಲದವರು, ಒಂದೇ ಪ್ರಾಂತದವರು, ಕನ್ನಡಿಗರು ಎಲ್ಲರೂ ಒಂದೇ' ಎಂಬ ಭಾವನೆಯು ಬೆಳೆಯಬೇಕು. ಆಗ ಮಾತ್ರ ನಮ್ಮ ಎಲ್ಲ ಆಕಾಂಕ್ಷೆಗಳು ಕೈಗೂಡಿ ಬರಲು ಸಾಧ್ಯವಾಗುವುದು" ಎಂದವರೆ "ನಾನು ಒಂದು ದೊಡ್ಡ ಭಾಷಣವನ್ನೆ ಮಾಡಿದಂತಾಯಿತಲ್ಲವೆ?" ಎಂದು ನಗೆಯಾಡಿದರು.

ಶ್ರೀ. ಬದಾಮಿಯವರ ವಯಸ್ಸು ಕೇವಲ ಮೂವತ್ತು ವರುಷಗಳದು. ಅತ್ಯಲ್ಪ ಅವಧಿಯಲ್ಲಿಯೆ ಅವರು ಹಿಂದೀ ಚಿತ್ರಸೃಷ್ಟಿಯಲ್ಲಿ ಒಂದು ಉಚ್ಚವಾದ ಸ್ಥಾನವನ್ನು ಪಡೆದಿರುವರು. ಅವರು ಮುಂಬಯಿಯಲ್ಲಿ ಮೊದಲು ಪ್ರಖ್ಯಾತಿಯನ್ನು ಪಡೆದುದು ಎಂದರೆ ಸಬಿತಾದೇವಿಯು ಪಾತ್ರವಹಿಸಿದ "**ಕಲಿತ ಹೆಂಡತಿ** (Educated wife)" ಎಂಬ ಅವರ ಚಿತ್ರದಿಂದ. ಮುಂದೆ ಅವರು ಅನೇಕ ಚಿತ್ರಗಳಿಂದ ಜನರ ಮನಸ್ಸನ್ನು ಸಂತೋಷಗೊಳಿಸಿರುವರು. ಮೊನ್ನೆ ಮೊನ್ನೆ ಅವರು **ಸಾಗರ ಫಿಲ್ಮ್** ಕಂಪನಿಯಿಂದ ಬೇರೆಯಾಗಿ ಸಬಿತಾದೇವಿಯೊಂದಿಗೆ '**ಸುದಾಮ ಪಿಕ್ಚರ್ಸ್**' ಎಂಬ ಒಂದು ಬೇರೆ ಕಂಪನಿಯನ್ನೆ ಹೊರಡಿಸಿದ್ದಾರೆ. ಇನ್ನೂ ಅವರದೇ ಆದ ಒಂದು ಪ್ರಯೋಗಶಾಲೆ (Laborartory), ಚಿತ್ರಾಲಯ (Studio) ಮುಂತಾದುವುಗಳಿರದೆ ಇದ್ದರೂ, ಅವರು ಬೇರೆ ಚಿತ್ರಾಲಯಗಳಲ್ಲಿ ನಾಲ್ಕಾರು ಚಿತ್ರಗಳನ್ನು ಈಗಾಗಲೇ ಹೊರಡಿಸಿರುವರು. ತೀರ ಹೊಸದಾದ ಅವರ ಚಿತ್ರವೆಂದರೆ ಬಂಗಾಲದ ಸುಪ್ರಸಿದ್ಧ ಕಾದಂಬರೀಕಾರರಾದ **ಶ್ರೀ. ಶರದ್ಬಾಬು**ಗಳ ಕಾದಂಬರಿ '**ಚಿನ್‌ಗಾರಿ** (ಕಿಡಿ)' ಎಂಬುದೆ. ಇದೀಗ ಅವರು '**ಜೀವನಯಾತ್ರೆ**' ಅಥವಾ '**ಸಂಧ್ಯಾ**' ಎಂಬ ಇನ್ನೊಂದನ್ನು ಸಿದ್ಧಮಾಡಲಿರುವರು; ಮತ್ತು ಶೀಘ್ರದಲ್ಲಿಯೆ ಕವೀಂದ್ರ ರವೀಂದ್ರರ ಒಂದು ನಾಟಕವನ್ನು ಚಿತ್ರಿಸಬೇಕೆಂದೂ ಇವರ ಹಂಬಲು ಇದೆ. ಇವರು ದಿಗ್ದರ್ಶಿಸಿದ ಚಿತ್ರಗಳನ್ನು ನೋಡುವುದೆಂದರೆ ಹದಿನಾರಾಣೆ ತೃಪ್ತಿ ಎಂದು ಮುಂಬಯಿಯಲ್ಲಿ ಮತವಿದೆ.

ಶ್ರೀ. ಬದಾಮಿಯವರು ಮೊದಲು ಮುಂಬಯಿಗೆ ಬಂದುದು ೧೯೩೦ ರಲ್ಲಿ. ಆಗ ಇವರು ಕೇವಲ ಚಿತ್ರದಲ್ಲಿ ಮೇಲ್ವಿಚಾರಣೆ ಮಾಡಲಿಕ್ಕೆಂದು ಬಂದರು. ಮುಂದೆ ಇವರು ಹಿಂದೀ ಚಿತ್ರಗಳಲ್ಲಿ ಪದಾರ್ಪಣ ಮಾಡಿದರು. ಇವರು ತಮ್ಮ ಚಿತ್ರಗಳಿಗೆ ಇಡುವ ಹೆಸರುಗಳು ತುಂಬ ಅರ್ಥಸ್ವಾರಸ್ಯಗಳವುಗಳೂ, ನಾವೀನ್ಯಪೂರ್ಣವಾದುವೂ ಇರುವುವು. ನಾವು ಇದಿಷ್ಟು ಮಾತುಗಳನ್ನಾಡುತ್ತಲೆ ಹನ್ನೆರಡು ಹೊಡೆಯುತ್ತ ಬಂದಿತು. ನಾವಿನ್ನೂ ಚೌಪಾಟಿಯಿಂದ, ದಾದರದವರೆಗೆ ಸಾಯಂಕಾಲವೇ ತಿರುಗಿ ಹೋಗುವುದಿದ್ದ ಕಾರಣ, ಕೊರೆಯುವ ಎತ್ತುಗಡೆಯನ್ನು ನಡೆಯಿಸಿದೆವು. ಕೊನೆಗೆ "ನೀವು ಮನೆಯಲ್ಲಿಯೆ ಇಂದು ಸಿಕ್ಕಿದುದೂ ಒಂದು ಹೆಚ್ಚಿನವೆ" ಎಂದರು ಶ್ರೀ. ಗುರುರಾಜರು. ಅದಕ್ಕೆ ಉತ್ತರವಾಗಿ ಅವರು, "ಹಾಗೆ ನೋಡಿದರೆ ಈ ಭೆಟ್ಟಿಯಿಂದ ನೀವು ನನ್ನನ್ನೆ ಗೌರವಿಸಿದುದಕ್ಕೆ ನಾನು ನಿಮಗೆ ಋಣಿ. ಯಾಕೆಂದರೆ ಪಶ್ಚಿಮದೇಶಗಳಲ್ಲಿ ಜನರೂ, ಅಧ್ಯಕ್ಷರೂ, ನಟರನ್ನೂ ದಿಗ್ದರ್ಶಕರನ್ನೂ ಸನ್ಮಾನಿಸುವಂತೆ ಇತ್ತ ಸನ್ಮಾನಿಸುವುದಿಲ್ಲ" ಎನ್ನುತ್ತ ಅವರು ನಮ್ಮನ್ನು ಬೀಳ್ಕೊಡಲಿಕ್ಕೆಂದು ಎದ್ದರು. ನಾವು ಮೊದಲೆ ಕೇಳಿದಂತೆ, ತಮ್ಮ ಹಾಗೂ ತಾವು ತೆಗೆದ ಚಿತ್ರಗಳ ಒಂದೆರಡು ಪ್ರತಿಗಳನ್ನು ನಮಗೆ ಕೊಟ್ಟು, ನಮ್ಮನ್ನು ಹೊರತನಕ ಕಳಿಸಿ ಮರಳಿದರು.

ವಿಮೇದಾರರ ಹಿತಕ್ಕಾಗಿ:—

ಮಾಲಕರ ಸರ್ಟಿಫಿಕೇಟಿನ ನಿಜಸ್ವರೂಪ

ಶ್ರೀ. ಎನ್. ಪಿ. ಭಾಗವತ, ಮುಂಬಯಿ

★

ಖಾಸಗೀ ನೌಕರಿಯಲ್ಲಿರುವವನೊಬ್ಬ ಜೀವವಿಮೆ ಮಾಡಿದವನಿದ್ದು, ಆತ ಮರಣಹೊಂದಿದರೆ ಅವನ ವಾರಸದಾರರು, ಮೃತನು ಯಾರ ಬಳಿ ನೌಕರಿ ಮಾಡುತ್ತಿದ್ದನೋ ಆ ಯಜಮಾನನ ಕಡೆಯಿಂದ ಸರ್ಟಿಫಿಕೇಟೊಂದನ್ನು ಸಂಪಾದಿಸಿಕೊಡಬೇಕೆಂದು, ಕೆಲವು ವಿಮಾಕಂಪನಿಗಳು ಹೇಳುವುವು. ಇದೆಷ್ಟು ಅನ್ಯಾಯವಾದ್ದಾಗಿದೆ ನೋಡಿ!

★

"ವಿಮಾವ್ಯವಹಾರದಲ್ಲಿ ಇದೆಲ್ಲಿಂದ ಬಂತಪ್ಪಾ ಮಾಲಕರ ಸಂಬಂಧ?" ಎಂದು ವಿಮೇದಾರರು ಚಕಿತರಾಗಿ ಕೇಳಬಹುದು; ಆದರೆ ಅದು ಹಾಗೆಯೇ ಇದೆ. ಬಲಿಷ್ಠರು ನಿರ್ಬಲರ ಸಲುವಾಗಿ ಬೇಕು-ಬೇಕಾದ ನಿಯಮಗಳನ್ನು ಮಾಡುತ್ತಿರುವುದು ಈ ಜಗತ್ತು ಹುಟ್ಟಿದಂದಿನಿಂದಲೂ ನಡೆದುಬಂದ ರೂಢಿಯಾಗಿದೆ. ಪುರಾಣೇತಿಹಾಸಗಳ ಕಾಲಗಳಲ್ಲಿಯೂ ಹಾಗೆಯೇ ನಡೆಯುತ್ತಿದ್ದಿತೆಂಬುದು ತಿಳಿದುಬರುತ್ತದೆ. ಈಗಲೂ ಅದೇ ರೀತಿ ಆ ರೀತಿಯಂತೆಯೇ ಸತ್ತ ವಿಮೇದಾರನ 'ವಾರಸದಾರ'ರನ್ನು, ಸತ್ತ ವಿಮೇದಾರನ ನವುಕರಿಯ* ಮಾಲಕರ ಸರ್ಟಿಫಿಕೇಟು ಹಾಜರುಪಡಿಸಿರೆಂದು ಪೀಡಿಸುವುದೂ ಕೆಲವು ವಿಮಾಕಂಪನಿಗಳ ಒಂದು ರೀತಿಯಾಗಿದೆ.

ಆ ರೀತಿಯೆಂದರೆ ಹೀಗೆ: ಯಾವನೊಬ್ಬ ವಿಮೇದಾರನು ತನ್ನ ವಿಮಾಅವಧಿಯು ಪೂರ್ಣವಾಗುವುದರೊಳಗೇ ಮೃತನಾದರೆ, ವಿಮಾರಕಮನ್ನು ದೊರಕಿಸುವ ಬಾಧ್ಯತೆಗಾಗಿ, ಮೊದಲಿಗೆ ವಾರಸದಾರರು ವಿಮೇದಾರನ ಮರಣಸಂಬಂಧದ ಪುರಾವೆಗಳನ್ನು ಡಾಕ್ಟರು ಅಥವಾ ವೈದ್ಯರು ಇವರೆ ಮೊದಲಾದವರ—ಸರ್ವಸಾಧಾರಣವಾಗಿ ಮೂರು ಇಲ್ಲವೆ ನಾಲ್ಕು ಸರ್ಟಿಫಿಕೇಟುಗಳನ್ನು ಹಾಜರುಪಡಿಸಬೇಕಾಗುತ್ತದೆಂಬುದು ಬಹುಶಃ ಅನೇಕರಿಗೆ ತಿಳಿದ ಮಾತೇ ಸರಿ. ಆದರೆ ನಮ್ಮ ದೇಶೀ ವಿಮಾ ಕಂಪನಿಗಳಲ್ಲಿಯ ಕೆಲವಕ್ಕೆ ಇಷ್ಟು ಪುರಾವೆಗಳು ಸಾಲುವುದಿಲ್ಲ. ಅವುಗಳಿಗೆ ಇಷ್ಟರ ಹೊರತು ಇನ್ನೊಂದು ಪುರಾವೆಯು ಬೇಕೇಬೇಕಾಗುತ್ತದೆ. ಅದನ್ನೂ ಅವರ ಫಾರ್ಮಿನ ಮೇಲೆಯೇ ತುಂಬಿಸಿ ಕಳುಹಬೇಕು.

* ಈ ಲೇಖನದೊಳಗಣ "ನವುಕರಿ" ಎಂಬ ಶಬ್ದವು ಸರಕಾರೀ ನವುಕರಿಗೆ ಸಂಬಂಧಪಟ್ಟುದಲ್ಲ. ಖಾಸಗಿಯ ನವುಕರಿಗೆ ಮಾತ್ರವೇ ಸಂಬಂಧಪಟ್ಟುದು. —ಲೇಖಕ.

ನ್ಯಾಯವಾಗಲಿ, ಅನ್ಯಾಯವಾಗಲಿ; ಶಕ್ಯವಿರಲಿ, ಅಶಕ್ಯವಿರಲಿ, ಆ ಫಾರ್ಮಿನಲ್ಲಿಯ ಎಲ್ಲ ಪ್ರಶ್ನೆಗಳಿಗೂ ಸರಿಯಾದ ಉತ್ತರಗಳನ್ನು ವಾರಸದಾರರು ದೊರಕಿಸಬೇಕು. ಹಾಗೆ ಮಾಡಿದ ವಿನಾ ವಿಮಾರಕಮು ದೊರೆಯುವುದಿಲ್ಲ.

ಈ ಹೆಚ್ಚಿನ ಪುರಾವೆಯನ್ನು ದೊರಕಿಸುವ ಸಂಕಟವು ಯಾರಿಗೆಂದರೆ, ಇನ್ನೊಬ್ಬರ ಬಳಿಯಲ್ಲಿದ್ದು ಅವರ ನವುಕರಿ ಮಾಡುವ ದುರ್ದೈವಕ್ಕೆ ಬಲಿಬಿದ್ದಿದ್ದ ಬಡ ವಿಮೇದಾರರ ವಾರಸದಾರರಿಗೆ. ಹೆಚ್ಚಿನ ಪುರಾವೆಯೆಂದರೆಯೆ ಮೃತವಿಮೇದಾರನ "**ಮಾಲಕರ ಸರ್ಟಿಫಿಕೇಟು.**"

ಯಾರಲ್ಲಿಯೂ ನವುಕರಿ ಮಾಡದ ವಿಮೇದಾರರು ಮೃತರಾದ ಸಂದರ್ಭದಲ್ಲಿ, ಬರಿಯೆ ಯಾರಾದರೂ ಜವಾಬ್ದಾರ್ ಸದ್ಗೃಹಸ್ಥರ ಸರ್ಟಿಫಿಕೇಟಿನಿಂದ—ಇಂತಹ ಕಂಪನಿಗಳ—ಕೆಲಸವು ಸಾಗುತ್ತದೆ. ಆದರೆ ಇನ್ನೊಬ್ಬರ ನವುಕರಿ ಮಾಡುತ್ತಿದ್ದ ವಿಮೇದಾರರ ವಿಷಯದಲ್ಲಿ ಮಾತ್ರ ನಡೆಯುವುದಿಲ್ಲ. ಇದೇ ವಿಚಿತ್ರ. ಈ ಕಂಪನಿಗಳು ವಿಮೇದಾರರಲ್ಲಿ ದೊಡ್ಡವನಿಗೊಂದು ಸಣ್ಣವನಿಗೊಂದು, ಹೀಗೆ ನಿಯಮಗಳನ್ನು ಮಾಡಿ, ನಿಷ್ಕಾರಣವಾಗಿ ಬಡವರ ಜೀವ ಹಿಂಡುವ ಈ ರೀತಿಗೆ ಏನೆನ್ನಬಹುದು?

ಪಾಲಕರು ಮರಣಹೊಂದಿದುದರಿಂದ ಅನಾಥರಾದ ಮಕ್ಕಳು ವಿಮಾಹಣವನ್ನು ಪಡೆಯಬೇಕಾದರೆ, ತಮ್ಮ ಪಾಲಕರು ನವುಕರಿ ಮಾಡುತ್ತಿದ್ದಲ್ಲಿಗೆ ಹೋಗಿ, ಆ ಮಾಲಕರಿಗೆ ತಮ್ಮ ಗುರುತ ಮಾಡಿಕೊಟ್ಟು, ಅವರ ಮರ್ಜಿ ಹಿಡಿದು, ಅವರು ಸರ್ಟಿಫಿಕೇಟಿನ ಫಾರ್ಮನ್ನು ತುಂಬಿಕೊಡುವ ಕೃಪೆಮಾಡಿದರೆ ಮಾತ್ರ ಅದನ್ನು ಕಂಪನಿಗೆ ಕಳುಹಿಸುವುದು. (ಇಂತಹ ಪ್ರಸಂಗದಲ್ಲಿ ವಾರಸದಾರರು ಚಿಕ್ಕಮಕ್ಕಳಾಗಲಿ, ಹೆಂಗುಸರಾಗಲಿ ಇದ್ದರೆ ತೀರಿಯೆ

ಹೋಯಿತು. ಅವರ ಕಷ್ಟದ ವರ್ಣನೆಯನ್ನು ಮಾಡುವುದೇ ಬೇಕ್ಕವಿಲ್ಲ). ಫಾರ್ಮನ್ನು ಟಪಾಲಿನಿಂದ ಮಾಲಕರ ಕಡೆಗೆ ಕಳುಹಿಸಿದರೆ, ಅದು ತುಂಬಿ ತಿರುಗಿಬಂದೀತೆಂಬ ನಿಯಮವಿರುವುದಿಲ್ಲ. ಮಾಲಕರು ಒಳ್ಳೆಯವರಿದ್ದರೇನೋ ಸರಿಯೆ. ಅಶಿಕ್ಷಿತ, ಅಡಮಾಡಿ ಇಲ್ಲವೆ ದುಷ್ಟಸ್ವಭಾವದ ಮನುಷ್ಯರಿದ್ದರೆ ಕೇಳುವುದೇ ಬೇಡ. ಇಷ್ಟೆಲ್ಲ ಕಷ್ಟಪಟ್ಟು ಸರ್ಟಿಫಿಕೇಟು ದೊರಕಿಸಿದರೂ, ಇದಕ್ಕಾಗಿ ಸಹಿಸಬೇಕಾದ ಕಷ್ಟನಷ್ಟಗಳೂ ಕಾಲಾಪವ್ಯಯವೂ ಯಾತಕ್ಕೆ? ಕೇವಲ ಕಂಪನಿಯವರ ಖಾತ್ರಿ ಮಾಡುವುದಕ್ಕೆ. ಇಷ್ಟು ಕಷ್ಟ-ನಷ್ಟಗಳಿಗೆ ಗುರಿಮಾಡುವುದಕ್ಕಿಂತ ಇಂತಹ ಕಂಪನಿಗಳು ಇತರ ವಿಮೇದಾರರಂತೆಯೇ ಎಲ್ಲರನ್ನೂ ನಿಷ್ಪಕ್ಷಪಾತದಿಂದ ನಡೆಯಿಸಿದರೆ ಏನಾಗುವುದು? ಮಾಲಕರ ಸರ್ಟಿಫಿಕೇಟನ್ನು ದೊರಕಿಸದೆ ಹಣವನ್ನು ಪಾವತಿಮಾಡುವ ಇತರ ಅನೇಕ ಕಂಪನಿಗಳು ಮುಳುಗದೆ ಇರುವಾಗ, ಇಂತಹ ಕಂಪನಿಗಳು ಮಾತ್ರವೇ ಹೇಗೆ ಮುಳುಗುವುವು?

ಅನೇಕ ಪರದೇಶೀಯ ಮತ್ತು ದೇಶೀಯ ಕಂಪನಿಗಳು ಈ ಮಾಲಕರ ಸರ್ಟಿಫಿಕೇಟನ್ನು ಬೇಡದ ಕಾರಣವೆಂದರೆ, ಅದರ ಅವ್ಯವಹಾರ್ಯತೆಯೇ ಹೊರತು ಇನ್ನೇನೂ ಅಲ್ಲ. ಇಂತಹ ಹೊಲಸು ಪಕ್ಷಪಾತದ ಪದ್ಧತಿಯನ್ನು ಕೆಲವು ಕಂಪನಿಗಳು ಮಾತ್ರ ನಡೆಯಿಸಿಕೊಂಡು ಹೋಗುವುದು ಎಂದಿಗೂ ಒಳ್ಳೆಯದಲ್ಲ. ಈ ಪದ್ಧತಿಯು ನವುಕರಿ ಮಾಡುವ ವಿಮೇದಾರರಿಗೆ ಅತ್ಯಂತ ಅವಮಾನಕಾರಕವಿದೆ. ಅಲ್ಲದೆ ಅಸಹ್ಯವೂ ಕಷ್ಟಕಾರಕವೂ ಆಗಿದೆ.

ತಮ್ಮ ವಾರಸದಾರರು ಮುಂದೆ, ಮೇಲೆ ಬರೆದಂತೆ ಚಿತ್ರಹಿಂಸೆಗೆ ಗುರಿಯಾಗಬಾರದೆಂದು ಇಚ್ಛೆಯುಳ್ಳ ಖಾಸಗಿ ನವುಕರಿ ಮಾಡುವ ವಿಮೇಚ್ಛುಗಳು, ಎಚ್ಚರಿಕೆಯಿಂದ ಕಂಪನಿಯನ್ನು ಆರಿಸಿದರೆ ಮುಂದೆ ತೊಂದರೆಯಾಗಲಿಕ್ಕಿಲ್ಲ.

ಒಂದಾನೊಂದು ಸುಪ್ರಸಿದ್ಧ ವಿಮಾಕಂಪನಿಯವರು ಬೇಡುವ 'ಮಾಲಕರ ಸರ್ಟಿಫಿಕೇಟು'' ಲೇಖಕನ ದೃಷ್ಟಿಪಥದಲ್ಲಿ ಬಂದಿದೆ. ಅದರಲ್ಲಿ ಈ ಕೆಳಗಿನ ಮಾದರಿಯ ಪ್ರಶ್ನೆಗಳನ್ನು ಮಾಲಕರಿಗೆ ಕೇಳಿದ್ದಾರೆ:

(೧) ಮೃತನ ಹೆಸರು.

(೨) ಮೃತನ ನವುಕರಿಯ ಸ್ವರೂಪ.

(೩) ಮೃತನ ವಿಳಾಸ.

(೪) ಮೃತನು ನವುಕರಿಮಾಡಿದ ವರ್ಷಗಳ ಸಂಖ್ಯೆ.

(೫) ಅವನು ಕೆಲಸಕ್ಕೆ ಬಂದ ಕಡೆಯ ತಾರೀಕು.

(೬) ಮರಣದ ಪೂರ್ವದಲ್ಲಿ ಕೆಲಸದ ಮೇಲಿಂದ ಗೈರ್‌ಹಾಜರ್ ಆಗುವ ಆವಶ್ಯಕತೆಯುಳ್ಳ ಬೇನೆಯ ವಿಷಯವಾಗಿ ಮೃತನು ಏನಾದರೂ ಹೇಳುತ್ತಿದ್ದನೇನು?

(೭) ಹಾಗಿದ್ದರೆ, ಯಾವ (ರೋಗದ) ಲಕ್ಷಣಗಳ ವಿಷಯವಾಗಿ ಅವನು ಹೇಳುತ್ತಿದ್ದನು?

(೮) (ಮೃತ ಮನುಷ್ಯನು) ನವುಕರಿಯಲ್ಲಿದ್ದಾಗ ರಜಾ ಇಲ್ಲವೆ ಅನ್ಯಕಾರಣಗಳಿಂದ ಸಂಭವಿಸಿದ ಗೈರಹಾಜರಿಗಳ ದಾಖಲೆ.

(೯) ಮೃತನ ಮರಣದ ತಾರೀಕು.

(೧೦) ನಿಮಗೆ ಮೃತನ ಮರಣದ ಸುದ್ದಿಯನ್ನು ಯಾರು ತಿಳಿಸಿದರು?

(೧೧) ಸುದ್ದಿ ತಿಳಿಸುವವನನ್ನು ನೀವು ಸ್ವತಃ ಗುರುತಿಸುತ್ತೀರೋ?

(೧೨) ಯಾವ ಮೃತನ ಮರಣದ ಬಗ್ಗೆ ಈ ಬಾಧ್ಯತೆಯು (Claim) ತರಲ್ಪಟ್ಟಿದೆಯೋ ಅವನು "..............." ಕಂಪನಿಯ ಪಾಲಿಸಿಯಲ್ಲಿ ವರ್ಣಿತನಾದ ಮನುಷ್ಯನೇ ಇರುವನೆಂಬ ಮಾಹಿತಿಯು ನಿಮಗೆ ಇದೆಯೋ ಅಥವಾ ನೀವು ಹಾಗೆ ಖಾತ್ರಿ ಮಾಡಿಕೊಂಡಿದ್ದೀರೋ?

(೧೩) ಮೃತನನ್ನು ವರ್ಣಿಸಿರಿ. (ಮೃತನ ಸ್ವರೂಪವನ್ನು—ಇದ್ದರೆ ಏನಾದರು ಗುರುತು ಮೊದಲಾದುವನ್ನೂ)

(೧೪) ಮೃತನ ವಯಸ್ಸು ಸುಮಾರು ಎಷ್ಟಿರಬಹುದು?

ಮೇಲಿನ ಪ್ರಶ್ನೆಗಳನ್ನು ಓದಿದರೆ, "**ಮಾಲಕರ ಸರ್ಟಿಫಿಕೇಟು**" ಬೇಡುವ ಕಂಪನಿಗಳ ವಿಚಿತ್ರರೀತಿಯು ಸಹಜವಾಗಿ ಲಕ್ಷ್ಯದಲ್ಲಿ ಬರುವ ಹಾಗಿದೆ. ಇಂತಹ ಸರ್ಟಿಫಿಕೇಟಿನ ಆವಶ್ಯಕತೆಯೇನು? ಕಂಪನಿ ಮತ್ತು ವಿಮೇದಾರರ ಖಾಸಗಿವ್ಯವಹಾರದಲ್ಲಿ ಮಾಲಕರ ಸಂಬಂಧವೇನು? ನವುಕರಿ ಮಾಡುವ ದುರ್ದೈವವು ಪ್ರಾಪ್ತವಾದ ಬಡ ವಿಮೇದಾರರ ವಾರಸದಾರರ ಮೇಲೆ ಈ ಪಕ್ಷಪಾತದ ಅನ್ಯಾಯವು ಯಾತಕ್ಕೆ?

ತಲೆನೋವು, ನೆಗಡಿ, ಕಾಲರಾ,
ಉರಿ ಮುಂತಾದ ಶಾರೀರಿಕ
ರೋಗಗಳ ಮೇಲೆ

"ರಜಿಸ್ಟರ್ಡ"

ನೀಲಗಿರಿ ಅರ್ಕ

NILGIR ARK

ಪ್ರತಿ ಒಂದು ಹನಿ ಗುಣದ ಪ್ರಭಾವ
ತೋರಿಸುತ್ತದೆ.

ಬಾಟಲಿ ಕಿಮ್ಮತ್ತು ೪ ಆಣೆ.

ಸ್ಟಾರ್ ಕಂಪನಿ, ಬೆಳಗಾಂವ

ಈ ತರದ ಸರ್ಟಿಫಿಕೇಟನ್ನು ಎಲ್ಲ ಕಂಪನಿಗಳೂ ಬೇಡುವುದಿಲ್ಲ ವೆಂಬದನ್ನೂ ಕೆಲವೇ ಮಾತ್ರ ಬೇಡುತ್ತವೆಯೆಂಬದನ್ನೂ ಈ ಮೊದಲು ಹೇಳಿಯಾಗಿದೆ. ಅನೇಕಾನೇಕ ದೇಶೀಯ ವಿದೇಶೀಯ ಕಂಪನಿಗಳಿಗೆ ಈ ಸರ್ಟಿಫಿಕೇಟಿನ ಆವಶ್ಯಕತೆಯೇ ತೋರುವುದಿಲ್ಲ. ಮತ್ತು ಇಂತಹ ಸರ್ಟಿಫಿಕೇಟುಗಳ ವಿನಾ ಪಕ್ಕಾನ್ನು ಪಾವತಿ ಮಾಡುವುದರಿಂದ ಅವು ಮುಳುಗುವುದೂ ಇಲ್ಲ.

ನವುಕರಿಮಾಡುವ ಬಡಜನರ ಅನಾಥ ವಾರಸದಾರರಿಗೆ ಇಂತಹ ಕೆಲಸವನ್ನು ಹಚ್ಚುವದಕ್ಕಿಂತ, ಕಂಪನಿಗಳು ಅದನ್ನು ತಾವೇ ಪರಸ್ಪರ ಮಾಡಿದರೆ ಅಸಹಾಯ ಸ್ಥಿತಿಯಲ್ಲಿರುವ ವಾರಸದಾರರಿಗೆ ನಿರರ್ಥಕವಾದ ತೊಂದರೆಯೂ ಸಹ ಸಂಭವಿಸಲಿಕ್ಕಿಲ್ಲ. ವಿಮೇದಾರರ ನವುಕರಿಯ ವಿಳಾಸಗಳು ಕಂಪನಿಗಳ ಕಡೆಗೆ ಬಹುಶಃ ಇದ್ದೇ ಇರುವುದರಿಂದ, ಕಂಪನಿಗಳಿಗೆ ಅದು ಸುಲಭಸಾಧ್ಯವಿದೆ. ವಿಳಾಸಗಳು ಇರದ ಪ್ರಸಂಗದಲ್ಲಿ ವಾರಸದಾರರು ಅವುಗಳನ್ನು ಸಹಜವಾಗಿಯೇ ಕೊಡುವರು. "ಮಾಲಕರ ಸರ್ಟಿಫಿಕೇಟು" ಬೇಡುವ ಕಂಪನಿಗಳು ಇವಿಷ್ಟು ಸೌಜನ್ಯವನ್ನಾದರೂ ತೋರಿಸಬಾರದೇಕೆ?

ಮಾಲಕರ ಸರ್ಟಿಫಿಕೇಟಾದರೋ ಅತಿ ವಿಲಕ್ಷಣವಾದದ್ದು. ಕಂಪನಿಯವರಿಗೆ ಬೇಕಾಗುವುದೇನು? ಮೃತನಾದ ವಿಮೇದಾರನ ಮರಣದ ಪುರಾವೆ. ಅಷ್ಟನ್ನೇ ಅವರು ಕೇಳಿದರೆ ದೊಡ್ಡಮಾತಲ್ಲ. ಆದರೆ ಅವರು ಹಾಗೆ ಮಾಡವೆ, ಮೃತ ವಿಮೇದಾರನ ಮಾಲಕನಿಗೆ ಸಿಕ್ಕ ಸಿಕ್ಕ ಹಾಗೆ—ಅಲ್ಲದ ಸಲ್ಲದ—ಪ್ರಶ್ನೆಗಳನ್ನು ಕೇಳುತ್ತಾರೆ. ಮೃತವಿಮೇದಾರನು ನವುಕರಿಮಾಡಿದ ವರ್ಷಗಳ ಸಂಖ್ಯೆ, ಆತನು ಮೊದಲಿಂದಲೂ ಗೈರಾಹಾಜರಿದ್ದ ಅಥವಾ ರಜಾ ತಕ್ಕೊಂಡ ದಾಖಲೆ, ಆತನಿಗಾದ ರೋಗ, "ರೋಗದ ಲಕ್ಷಣಗಳು" ಇವೇ ಮೊದಲಾಗಿ ಕಂಡ ಕಂಡದ್ದನ್ನೆಲ್ಲ ಮಾಲಕರಿಗೆ ಕಂಪನಿಯವರು ಯಾವ ಹೇತುವಿನಿಂದ ಕೇಳುತ್ತಾರೆ? ಕಂಪನಿಯವರ ಹೇತುವು ಏನಿದ್ದರೂ, ಹೀಗೆಲ್ಲ ಅಲ್ಲದ ಸಲ್ಲದ ಪ್ರಶ್ನೆಗಳನ್ನು ಕೇಳುವುದು ಯಾವ ಸಮಂಜಸ ಜನರ ದೃಷ್ಟಿಯಿಂದಲೂ ಯೋಗ್ಯವೆನಿಸುವುದೆ?

ಇನ್ನೊಂದು ಮಾತೇನಂದರೆ, ವಿಮೇದಾರ ಮತ್ತು ಕಂಪನಿಯವರ ಸಂಬಂಧವು ಸ್ವತಂತ್ರವಿರುವಾಗ, ವಿಮಾಕಂಪನಿಯು ಮಧ್ಯದಲ್ಲಿ ನಿಷ್ಕಾರಣವಾಗಿ ಮಾಲಕರನ್ನು ತರುಬುವ ಅತಿಪ್ರಸಂಗವನ್ನಾದರೂ ಏತಕ್ಕೆ ಮಾಡಬೇಕು? ತನ್ನ ನವುಕರನು ವಿಮೆಯನ್ನಿಳಿಸಿದ ವಿಷಯವು ಒಮ್ಮೊಮ್ಮೆ ಮಾಲಕನಿಗೆ ಗೊತ್ತು ಕೂಡ ಇರದೆ ಇರುವ ಸಂಭವವಿದೆ. ತಮ್ಮ ಖಾಸಗಿಯ ವ್ಯವಹಾರಗಳನ್ನು ಯಾರೇ ಆದರೂ ಮಾಲಕರಿಗೆ ತಿಳಿಸುತ್ತಿರುವ ಸಂಭವ ತೀರ ಕಡಿಮೆ. ಇನ್ನು ತಮ್ಮ ಖರ್ಚಿನಿಂದಲೇ ನವುಕರರ ವಿಮೆಯನ್ನಿಳಿಸಿ ಕೊಡುವ ಮಾಲಕರ ವಿಷಯವೇ ಬೇರೆ. ಆದರೆ ವಿಮೇದಾರ ಮತ್ತು ಕಂಪನಿಯ ಸ್ವತಂತ್ರವಾದ ಸಂಬಂಧವಿದ್ದಲ್ಲಿ ಮೂರನೆಯವರ ಸಂಬಂಧವನ್ನು ಸೇರಿಸಿ ವೃಥಾ ತೊಂದರೆಯನ್ನುಂಟುಮಾಡುವುದು ವಿಪರೀತ ಸಂಗತಿ.

ಬ್ಯಾಂಕುಗಳ ವ್ಯವಹಾರವನ್ನು ನೋಡಿರಿ. ಬ್ಯಾಂಕುಗಳು ತಮ್ಮ ಠೇವುದಾರರ ರಹಸ್ಯವನ್ನು ಎಂದೂ ಸಿಕ್ಕಿದ ಹಾಗೆ ಹೊರಗೆಡಹದೆ ಅವರ ಮಾನವನ್ನು ಸಂರಕ್ಷಿಸುತ್ತವೆ. ವಿಮಾ ಕಂಪನಿಗಳದೂ ವಿಮೇದಾರರ ಬಗ್ಗೆ ಇದೇ ತರದ ನೈತಿಕ ಜವಾಬ್ದಾರಿಯಿದ್ದರೂ ಅವು ಅದನ್ನು ಲಕ್ಷಿಸುವುದೇ ಇಲ್ಲ. ಸದ್ಯಕ್ಕೆ ಅವು ತಮ್ಮ ಈ ರೀತಿಯ ಕರ್ತವ್ಯವನ್ನು ಒಪ್ಪುವ ಸಂಭವವೂ ಇದ್ದಂತೆ ತೋರುವುದಿಲ್ಲ.

ಇಂತಹ ಪರಿಸ್ಥಿತಿಯಿರುವುದರಿಂದ ಖಾಸಗಿಯ ನವುಕರಿಯಲ್ಲಿದ್ದು "ಮಾಲಕರ ಸರ್ಟಿಫಿಕೇಟು" ಬೇಡುವ ಕಂಪನಿಗಳಲ್ಲಿ ಮೊದಲೇ ವಿಮೆಯನ್ನಿಳಿಸಿದವರು, ತಮ್ಮ ತಮ್ಮ ಕಂಪನಿಯ "ವಿಮೇದಾರರ ಡಾಯರೆಕ್ಟರರ" ಕಡೆಗೆ (ಈಗಿನ ಕಾಯಿದೆಯ ಪ್ರಕಾರ ವಿಮೇದಾರರ ಡಾಯರೆಕ್ಟರರುಗಳಿಂತಲೇ ಬೇರೆ ಇರುತ್ತಾರೆ. ಅವರ ಹೆಸರುಗಳನ್ನು ಕಂಪನಿಯಿಂದ ದೊರಕಿಸಬೇಕು) ಪತ್ರವ್ಯವಹಾರ ಮಾಡಿ, ಈ "ಮಾಲಕರ ಸರ್ಟಿಫಿಕೇಟ" ಸಂಕಟವನ್ನು ದೂರಮಾಡಲು ಪ್ರಯತ್ನಿಸುವಂತೆ ಕೇಳಿಕೊಳ್ಳಬೇಕು. ಈ ಡಾಯರೆಕ್ಟರರು ವಿಮೇದಾರರ ಹಿತಸಾಧನೆಗೆಂತಲೇ ನಿಯಮಿಸಲ್ಪಟ್ಟಿರುವುದರಿಂದ, ಅವರು ಪ್ರಯತ್ನಮಾಡಿದರೆ ಒಂದಿಲ್ಲೊಂದು ವೇಳೆ ಯಶ ದೊರೆಯಬಹುದು.

ಹಿಂದುಸ್ಥಾನದ ಶ್ರೇಷ್ಠತರಗತಿಯ ವಿಮಾಸಂಸ್ಥೆಗಳಲ್ಲಿ ಒಂದಾದ

ದಿ ಏಶಿಯಾಟಿಕ್ ಗವ್ಹರ್ನ್‌ಮೆಂಟ್ ಸೆಕ್ಯೂರಿಟಿ

ಲೈಫ್ ಅಶ್ಯೂರನ್ಸ್ ಕಂಪನಿ, ಲಿ. ಬೆಂಗಳೂರು

ಇದುವರೆಗೆ ರೂ. ೨,೫೦,೦೦೦,೦೦ ವಿಮಾಕಾರ್ಯ ಮಾಡಿದೆ. ★ ೨೫,೦೦೦ ಸಂಸಾರಗಳಿಗೆ ವಿಮಾರಕ್ಷಣೆ ದೊರಕಿಸಿದೆ.

ಕಡಿಮೆದರದ ಹಪ್ತೆಯ ಮೇಲೆ ವಿಮಾ ಇಳಿಸಬಹುದು.

ಏಶಿಯಾಟಿಕ್ ಕಂಪನಿಯ ಪ್ರಗತಿಯು ಕನ್ನಡಿಗರು ಹೆಮ್ಮೆ ಪಡತಕ್ಕದ್ದಾಗಿದೆ. ವಿಮೆ ಇಳಿಸಲು ಸುರಕ್ಷಿತವಾದ, ಭದ್ರವಾದ ಮೈಸೂರಿನ ವಿಮಾ ಸಂಸ್ಥೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ಏಜನ್ಸಿ ಸುಪರಿಂಟೆಂಡೆಂಟ್,

ಏಶಿಯಾಟಿಕ್ ಲೈಫ್ ಆಫೀಸ್, ಧಾರವಾಡ.

(೫) ...ಮೈಸೂರವರಂತೆ ಉಳಿದ ಕರ್ನಾಟಕದ ಭಾಗದ ವಿದ್ಯಾರ್ಥಿಗಳಿಗೂ ಉಪಯುಕ್ತ ಹಾಗೂ ಆಕರ್ಷಕವಾಗು ... ...ಕು.

ಪ್ರಥಮ ಕನ್ನಡ - ಕನ್ನಡ ಅರ್ಥಕೋಶ

ಕನ್ನಡದ ಯಾವತ್ತು ಹಳೆ, ಹೊಸ ಸಾಹಿತ್ಯಗಳಲ್ಲಿ ಬಳಸಿರುವ 20,000 ಶಬ್ದಗಳಿಗೆ ಅರ್ಥ.

ಪೌರಾಣಿಕ ಅಂಕಿತನಾಮಗಳ ಚುಟುಕಿನ ಟಿಪ್ಪಣಿ ಸಹಿತ

ಡೆಮಿ $\frac{1}{8}$

500 ಪುಟಗಳು

ಕೆಲಿಕೋ ರಟ್ಟು

ಕವಿಚು 102 ಕಳಕಳಿ

—ಸಮಯ ಕಾವ್ಯಸಮಯ; ಕವಿಗೆ ವಿಶೇಷವಾದ ರೂಪ; ಕವಿಪದ್ಧತಿ.
ಕವಿಚು (ಕವಚು) ಮೊಗಚು, ಅಡಿಮೇಲಾಗು; ಆವರಿಸು, ಮುತ್ತು; ಮೇಲೆ ಹೋಗುವಂತೆ ಮಾಡು.
ಕವಿಲೆ (ದ್ಭ) ಕಪಿಲೆ, ಹಳದಿ ಕಂದು ಬಣ್ಣ.
ಕವಿಲ್ದಕಾಸೆ ಕಪಿಲ ಬಣ್ಣದ ವಸ್ತ್ರ.
ಕವುಚು (ನೋಡು: ಕವಿಚು).
ಕವುರು (ಕಮರು) ದುರ್ವಾಸನೆ; ಹೊತ್ತಿದ ನಾತ.
—ಇಡು ದುರ್ವಾಸನೆ ಹೊಡೆ.
—ಏಳು ನಾತ ಹೊರಡು.
ಕವುಳು ಕಪೋಲ, ಕೆನ್ನೆ;
ಕವುಳಡೆ ತಲೆದಿಂಬು,' ಗಾದಿ
ಕವುಂಗು (ಕೌಂಗು) ಕಂಗು, ಕ್ರಮುಕ (ಸಂ), ಅಡಕೆಯ ಮರ.
ಕವೆ ಕೌರು, ಕವಲು; ರೆಂಬೆ.
ಕವ್ಯ ಪಿತೃಗಳಿಗೆ ಅರ್ಪಿಸುವ ಪಿಂಡ ಮೊದಲಾದುವು.
ಕಳ್ಳರೆ ಚಾಂಚಲ್ಯ, ಸುಳಿ; ಸಂಭ್ರಮ
ಕಶೇರುಕ ಬೆನ್ನಿನ ಮುಖ್ಯ ನರ.
ಕಷ ಉಜ್ಜುವ, ತಿಕ್ಕುವ.
—ಣ ಉಜ್ಜುವಿಕೆ.
ಕಷಾಯ ಗಿಡಮೂಲಿಕೆಗಳನ್ನು ಬೇಯಿಸಿ ತೆಗೆದ ಸಾರ; ಭಾವಾತಿರೇಕ; ಕಾವಿ ಬಣ್ಣ.
ಕಷಾಯಾಂಬರ ಕಾವಿಬಟ್ಟೆ
ಕಷ್ಟ ತೊಡಕು, ತೊಂದರೆ; ಸಂಕಟ.
ಕಸ ಉಪಯೋಗವಿಲ್ಲದ ವಸ್ತು, ಕೆಲಸಕ್ಕೆ ಬಾರದ ದೂಳು ಮೊದಲಾದುದು.
ಕಸರತ್ತು ಚಮತ್ಕಾರ; ಚಮತ್ಕಾರದ ಅಂಗಸಾಧನೆ, ವ್ಯಾಯಾಮ.
ಕಸರು ಬೇಸರ, ಕೊರತೆ, ಕೊಸರು; ಕೊಳೆ; ಬಿರುಕು ಬಿಡು; ಗಂಟಲುಕೆರೆ.
—ಇಕೆ ಬೇಸರಿಕೆ, ಕೊರತೆ.
ಕಸವರ (ದ್ಭ) ಕಾರ್ತಸ್ವರ (ಸಂ), ಅರ್ಥ ಧ್ವನಿ; ಚೀರಾಟ; ಚಿನ್ನ, ಬಂಗಾರ, ಹೊನ್ನು; ದ್ರವ್ಯ.
ಕಸವಿಸಿ ಚೌಕಸಿ.
ಕಸಿ ಒಂದು ಗಿಡವನ್ನು ಇನ್ನೊಂದಕ್ಕೆ ಸೇರಿಸುವುದು.
ಕಸಿಕಿಸಿ ಸ್ಪರ್ಧೆ
ಕಸುಗಾಯಿ ಕಸುರುಗಾಯಿ, ದೋರೆ ಕಾಯಿ, ಹಣ್ಣಾಗದ ಕಾಯಿ, ಅರೆಗಾಯಿ.
ಕಸುವು ತ್ರಾಣ, ಬಲ, ಶಕ್ತಿ.
ಕಸೂತಿ ಹೂಗೆಲಸ; ಹೊಲಿಗೆಯ ಮೂಲಕ ಚಿತ್ರ ಕೆಲಸ.
ಕಸೆ ಚಾಚು; ಒಂದು ಗಿಡಕ್ಕೆ ಇನ್ನೊಂದನ್ನು ಹೊಂದಿಸಿ ಕೃಷಿಮಾಡುವುದು, ಕಸಿ; ಕವಚ, ಕಟ್ಟುವ ಹಗ್ಗ; ದಾರ; ಕುಸಿ.
ಕಸ್ತು ನೋವು; ಕಷ್ಟ.
ಕಸ್ತೂರಿ ಕತ್ತೂರಿ, ಒಂದು ಜಾತಿಯ ಪ್ರಾಣಿಯಿಂದ ಹೊರಡುವ ಸುಗಂಧವಸ್ತು.
—ಮೃಗ ಕಸ್ತೂರಿ ಕೊಡುವ ಪ್ರಾಣಿ.
ಕಹಳೆ (ಕಾಳೆ) ತುತ್ತೂರಿ; ಒಂದು ವಾದ್ಯ
ಕಹಿ ಒಂದು ರೀತಿಯ ರುಚಿ; ಅರುಚಿ.
ಕಹೋಡ ಅಷ್ಟಾವಕ್ರನ ತಂದೆಯಾದ ಒಬ್ಬ ಬ್ರಾಹ್ಮಣ.
ಕಳ್ (ಕಳ್ಳು) ಮದ್ಯ, ಹೆಂಡ, ರಸ; ಕಳವು ಮಾಡು
ಕಳ ಕಲ (ಸಂ), ಮನೋಹರ, ಮಧುರ, ಕಣ, ಯುದ್ಧಭೂಮಿ; ಜೂಜಿನ ರಂಗ.
ಕಳಕಳ ಕಲಕಲ, ಪಕ್ಷಿಗಳ ಧ್ವನಿ; ಗದ್ದಲ, ಜಂಕೆ.
ಕಳಕಳಿ ಮನೋವ್ಯಥೆ; ವ್ಯಾಕುಲತೆ, ಕಳ ಕಳ, ಉತ್ಸಾಹ.

ಚಿಕ್ಕದಾಗಿ ತೋರಿಸಿದ ಮಾದರಿ ಪುಟ.

ಬೆಲೆ: $2\frac{1}{2}$ ರೂ.

...ದೊಡ್ಡ ವ್ಯಾಕರಣ ಮಾಡಿರುವ ...ಗಿದೆ. ಶಬ್ದ- ...ಗುವುದಕ್ಕೆ ...ವು, ಗಾದೆ ...ಲ್ಲಿ ಸೊಗಸು ಬಗೆಯಾಗಿ ಮಕ್ಕಳಿಗೆ

...ಧಶಿಕ್ಷಣದ ...ದೇಬಗೆಯ ...ಗಿ ಸಮ್ಮಲ್ಲಿ ...ಾಗಿ ಹೇಳ ವ್ಯಾಕರಣ ...ಕಾಲವು ಪ್ರಬಂಧ- ...ಲಾರಂಭಿ ...ಸಾಕ್ಷಿ. ...ಇದೇ ...ಸ್ತಕಗಳು ...ತೈಕೆ. ...ಜೋಶಿ



ಈ ಸಂಸ್ಕರಣದಲ್ಲಿ ಸಹಕರಿಸಿದ ವಿದ್ವಾಂಸರು:—

ಶ್ರೀ. ಬಿ. ಶಂಕರನಾರಾಯಣ; ಶ್ರೀ. ಐ. ಶಿವರಾಮಯ್ಯ; ಶ್ರೀ. ಟಿ. ನಾರಾಯಣ ಭಟ್; ಶ್ರೀ. ಹು. ಬೆಂಗೇರಿ, ಎಮ್.ಎ., ಬಿ.ಟಿ.; ಶ್ರೀ. ವಿ. ಸೀತಾರಾಮಯ್ಯ, ಎಮ್.ಎ.

ಈ ತರದ ಸರ್ಟಿಫಿಕೇಟನ್ನು ಎಲ್ಲ ಕಂಪನಿಗಳೂ ಬೇಡುವುದಿಲ್ಲವೆಂಬದನ್ನೂ ಕೆಲವೇ ಮಾತ್ರ ಬೇಡುತ್ತಾವೆಯೆಂಬದನ್ನೂ ಈ ಮೊದಲು ಹೇಳಿಯಾಗಿದೆ. ಅನೇಕಾನೇಕ ದೇಶೀಯ ವಿದೇಶೀಯ ಕಂಪನಿಗಳಿಗೆ ಈ ಸರ್ಟಿಫಿಕೇಟಿನ ಆವಶ್ಯಕತೆಯೇ ತೋರುವುದಿಲ್ಲ. ಮತ್ತು

ಇಂತಹ
ರಿಂದ ಅವ
ನವುಕ
ಕೆಲಸವನ
ಪರಸ್ಪರ
ನಿರರ್ಥಕ
ವಿಮೇದಾ
ಬಹುಶಃ
ವಿದೆ. ವಿ
ಗಳನ್ನು ಸ
ಫಿಕೇಟು
ದರೂ ತ
ಮಾಲ
ಕಂಪನಿಯ
ಮರಣದ
ಆದರೆ ಅವ
ಸಿಕ್ಕ ಸಿಕ್ಕ
ವ್ಯತವಿವೆ
ಅವನು
ತಕ್ಕೊಂಡ
ಗಳು ”
ಕಂಪನಿಯ
ಯವರ ಪ
ಕೇಳುವುದ
ವೆನಿಸುವುದ
ಇನ್ನೊ

ಇವರ ಸಂಬಂಧವು ಸ್ವತಂತ್ರವಿರುವಾಗ, ವಿಮಾಕಂಪನಿಯ ಮಧ್ಯದಲ್ಲಿ ನಿಷ್ಕಾರಣವಾಗಿ ಮಾಲಕರನ್ನು ತರುಬುವ ಅತಿಪ್ರಸಂಗವನ್ನಾದರೂ ಏತಕ್ಕೆ ಮಾಡಬೇಕು? ತನ್ನ ನವುಕರನು ವಿ ಯನ್ನಿಳಿಸಿದ ವಿಷಯವ ಒಂದು ಮೇಳೆ ನಾಲ್ಕನವಿಗೆ ಗೆ

ಸಂಪಾದಕ:—
ಶಿವರಾಮ ಕಾರಂತ

ಎಲ್ಲ ಕನ್ನಡ ಪ್ರೇಮಿಗಳೂ ಇದಿರು ಕಾದಿರುವ ಈ ಕೋಶವು ಅಕ್ಟೋಬರ ತಿಂಗಳ ಕೊನೆಗೆ ವಿಕ್ರಯಕ್ಕೆ ಬರುವುದು.

ಮುಂಚಿತವಾಗಿ ಹಣ ಸಲಿಸಿದವರಿಗೆ. . ರೂ. 2—8—0. (ಅಂಚೆ ಮುಫತ್ತು).
ಪ್ರಕಟನೆಯ ಬಳಿಕ ” . . . ರೂ. 2—8—0. (0—8—0).

ವಿಳಾಸ:— ಶಿವರಾಮ ಕಾರಂತ, ಪುತ್ತೂರು, ದ. ಕ:

ಮನೋರಂಜಕ ವಾಕ್ಯರಚನೆ ಪುಸ್ತಕಗಳು ೧, ೨ ಮತ್ತು ೩,

ಲೇಖಕರು:– ಶ್ರೀ. ಕೆ. ಶ್ರೀನಿವಾಸಾಚಾರ್ಯ M. A. B. T. ಪ್ರಕಾಶಕರು: ಆಕ್ಸ್‌ಫರ್ಡ್ ಯುನಿವ್ಹರ್ಸಿಟಿ ಪ್ರೆಸ್, ಮದರಾಸು.
ಬೆಲೆ: ಆಣೆ ೩||, ೪. ೪

ಈ ಪುಸ್ತಕಗಳನ್ನು ಪ್ರಕಟಿಸಿ ಆಕ್ಸಫರ್ಡ್ ಯುನಿವ್ಹರ್ಸಿಟಿ. ಪ್ರೆಸ್ಸಿನವರು ಕನ್ನಡ ಬಾಲಕವರ್ಗದ ಮೇಲೆ ತುಂಬ ಉಪಕಾರ ಮಾಡಿದ್ದಾರೆ. ಪುಸ್ತಕದ ಬೆಲೆ ಸ್ವಲ್ಪ ಹೆಚ್ಚು. ಆದರೆ ಇಂತಹ ಉಪಯುಕ್ತವಾದ ಪುಸ್ತಕಗಳನ್ನು ಪ್ರತಿಯೊಬ್ಬ ಪಾಲಕರೂ ತಮ್ಮ ಮಕ್ಕಳ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ (೧ರಿಂದ ೪ನೆಯ ಇಯತ್ತೆ) ಕೊಂಡು ಕೊಡುವುದು ಲಾಭದಾಯಕವಾಗಿದೆ.

ಚಿಕ್ಕಂದಿನಿಂದ ಮಕ್ಕಳಿಗೆ ಸರಿಯಾದ ಭಾಷಾಶಿಕ್ಷಣವೇ ಇಲ್ಲದುದರಿಂದ, ನಮ್ಮ ವಿದ್ಯಾರ್ಥಿಗಳಿಗೆ ಮೇಲಣ ಇಯತ್ತೆಗಳಲ್ಲಿ ಪ್ರಬಂಧಗಳನ್ನು ಬರೆಯುವುದಕ್ಕೆ ಬರುವುದೇ ಇಲ್ಲ. ಪ್ರಬಂಧದ ಮಾತು ಹಾಗಿರಲಿ, ಸರಿಯಾಗಿ ಉಚಿತಶಬ್ದಗಳಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ– ಮಾತನಾಡುವುದಕ್ಕೆ ಸಹ ಬರುವುದಿಲ್ಲ. ಈ ಬಗೆಯ ಕೊರತೆಯು ತಮ್ಮ ಬಾಲಕರಲ್ಲಿ ಉಳಿಯಬಾರದೆಂದು ಇಂಗ್ಲೀಷಿನವರು ಚಿಕ್ಕಂದಿನಿಂದಲೆ ಬಗೆಬಗೆಯ ಹಂಚಿಕೆಗಳನ್ನು ಮಾಡಿಕೊಂಡಿದ್ದಾರೆ. ಅಂತಹ ಒಂದು ಹಂಚಿಕೆಯನ್ನೆ ಆಕ್ಸ್‌ಫರ್ಡ ಪ್ರೆಸ್ಸಿನವರು ಕನ್ನಡದಲ್ಲಿಯೂ ಪುಸ್ತಕರೂಪದಿಂದ ಪ್ರಕಟಿಸಿ, ಒಳ್ಳೆಯ ಕೆಲಸಮಾಡಿದ್ದಾರೆ. ಲೇಖಕರಾದ ಶ್ರೀ. ಕೆ. ಶ್ರೀನಿವಾಸಾಚಾರ್ಯ ಅವರೂ ಇವನ್ನು ಬರೆವಲ್ಲಿ ಬಹಳ ಪರಿಶ್ರಮಪಟ್ಟಿರುವರು.

ಆದರೂ ಈ ಪುಸ್ತಕಗಳು ಇದಕ್ಕೂ ಹೆಚ್ಚು ಉಪಯುಕ್ತವೂ, ದೋಷರಹಿತವೂ ಆಗುವ ದೃಷ್ಟಿಯಿಂದ ಒಂದೆರಡು ಸೂಚನೆಗಳನ್ನು ಮಾಡಬಯಸುತ್ತೇನೆ.

(೧) ಸಂಸ್ಕೃತ ಶಬ್ದಗಳನ್ನು ಹೆಚ್ಚಾಗಿ ಬಳಸದೆ, ಚಿಕ್ಕಮಕ್ಕಳಿಗೆ ಚೊಕ್ಕ ಚಿನ್ನದಂತಹ ಕನ್ನಡ ಮಾತುಗಳನ್ನೇ ಮೊದಲು ಕಿವಿಗೆ ಹಾಕುವುದು ತಕ್ಕುದಾಗಿದೆ. ಉದಾ: ಕಪಿ, ವಾಸಸ್ಥಾನ, . ಕೃಷ್ಣಸರ್ಪ ಎಂಬಲ್ಲಿ ಮಂಗ, ಬಿಡಾರ, ಕರಿಹಾವು ಎಂದರೆ ಆಗದೆ?

(೨) ಮಗ್ಗದವ, ಬಂಗಾರೆ ಎಂಬುದಕ್ಕಿಂತ ಅವರ ಜಾತಿವಾಚಕ ಜಾಡ ಮತ್ತು ಬಣ್ಣಗಾರ ಎಂಬುದು ಲೇಸು.

(೩) ೩ನೆಯ ಭಾಗದಲ್ಲಿ ೩೨ನೆಯ ಪಾಠದಲ್ಲಿ ಕೊಟ್ಟಂತಹ ವಾಕ್ಯಗಳನ್ನು ಹೇಳುವ ಮೊದಲು, ಅಕ್ಷರಗಳು ಸಿಕ್ಕಾಪಟ್ಟೆ ಹಾಗೆ ಹಿಂದುಮುಂದಾಗಿರುವ ಶಬ್ದಗಳನ್ನು ಓದಲು ಕಲಿಸುವುದು ಅವಶ್ಯ.

(೪) ತುಂಬಬೇಕಾದ ಶಬ್ದಕ್ಕೆ ಬಿಟ್ಟ ಸ್ಥಳವು ಪ್ರಮಾಣಬದ್ಧವಾಗಿದ್ದರೆ ಮಕ್ಕಳಿಗೆ ಶಬ್ದದ ಆಕೃತಿಯನ್ನು ಅರಿತುಕೊಳ್ಳಲು ಅನುಕೂಲವಾಗುವುದು. ಎರಡು ಅಕ್ಷರದ ಶಬ್ದಕ್ಕಿಂತ ಮೂರು ನಾಲ್ಕು ಅಕ್ಷರದ ಶಬ್ದಕ್ಕೆ ಹೆಚ್ಚು ಎಡೆಬಿಡಬೇಕು. ಮೊದಲು ಶಬ್ದಗಳ ಪಟ್ಟಿಯನ್ನು ಕೊಡದೆ, ಕಲ್ಪನೆಯಿಂದಲೇ ತುಂಬಬೇಕಾದಲ್ಲಿ (ಉದಾಹರಣೆಗಾಗಿ ೧ನೆಯ ಪುಸ್ತಕದ ೩೨, ೩೩ನೆಯ ಪಾಠ). ತುಂಬಬೇಕಾದ ಶಬ್ದದ ಸ್ಥಳದಲ್ಲಿ ಆ ಶಬ್ದಕ್ಕಿರುವ ಅಕ್ಷರಗಳಷ್ಟು X ಈ ಚಿಹ್ನಗಳನ್ನು ಹಾಕಿದ್ದರೆ ಇನ್ನೂ ಚೆನ್ನು. ತುಂಬ ಬೇಕಾದ ಶಬ್ದವು ಎಷ್ಟು ಅಕ್ಷರಗಳದಿರಬೇಕೆಂಬುದು ಗೊತ್ತಾಗಿ, ಅಂತಹದನ್ನೆ ಕಂಡುಹಿಡಿಯುವುದಕ್ಕೂ ಒಳಿತಾಗುವುದು.

(೫) ಮೈಸೂರವರಂತೆ ಉಳಿದ ಕರ್ನಾಟಕದ ಭಾಗದ ವಿದ್ಯಾರ್ಥಿಗಳಿಗೂ ಉಪಯುಕ್ತ ಹಾಗೂ ಆಕರ್ಷಕವಾಗುವಂತಹ ಪಾಠಗಳನ್ನು ಸೇರಿಸಬೇಕು.

ಇವೆಲ್ಲ ನಿಜವಾಗಿ ಅಂತಹ ದೊಡ್ಡ ಕೊರತೆಗಳಲ್ಲ. ಈ ಪುಸ್ತಕಗಳಲ್ಲಿ ವ್ಯಾಕರಣವನ್ನು ಕಲಿಸುವುದಕ್ಕೆ ಮಾಡಿರುವ ಪ್ರಯತ್ನವು ಅನುಕರಣೀಯವಾಗಿದೆ. ಶಬ್ದ-ಸಂಪತ್ತು ಮಕ್ಕಳಲ್ಲಿ ಹೆಚ್ಚಾಗುವುದಕ್ಕೆ ತಕ್ಕ ಏರ್ಪಾಡು ಇದೆ. ಒಡಪು, ಗಾದೆಗಳನ್ನು ಕಲಿಸಿ, ಮಕ್ಕಳ ಮಾತಿನಲ್ಲಿ ಸೊಗಸು ತರುವ ಹಂಚಿಕೆಯಿದೆ. ಇಂತೀ ಬಗೆಯಾಗಿ ಹಲವು ತೆರನಾಗಿ ಈ ಪುಸ್ತಕವು ಮಕ್ಕಳಿಗೆ ಬಹಳ ಉಪಯುಕ್ತವಾಗಿದೆ.

ಇನ್ನು ಮೇಲೆ ಪ್ರಬಂಧಶಿಕ್ಷಣದ ವರೆಗೆ ಒಯ್ದು ಮುಟ್ಟಿಸುವ ಇದೇಬಗೆಯ ಪುಸ್ತಕಗಳ ಸಂಖ್ಯೆಯು ಹೆಚ್ಚಾಗಿ ನಮ್ಮಲ್ಲಿ ಬೆಳಕಿಗೆ ಬಂದೀತೆಂದು ನಿಶ್ಚಿತವಾಗಿ ಹೇಳಬಹುದಾಗಿದೆ. ಬರಿಯ ನೀರಸ ವ್ಯಾಕರಣಗಳನ್ನು ಕಂಠಪಾಠಮಾಡುವ ಕಾಲವು ಹಿಂದೆ ಬಿದ್ದು, ಹೊಸಬಗೆಯ ಪ್ರಬಂಧ-ಶಿಕ್ಷಣದ ಪುಸ್ತಕಗಳು ತಲೆದೋರಲಾರಂಭಿಸಿದುದಕ್ಕೆ ಈ ಪುಸ್ತಕಗಳೇ ಸಾಕ್ಷಿ. ಇನ್ನೂ ಮುಂದಿನ ಮೆಟ್ಟಲಿನ ಇದೇ ಮಾದರಿಯ ಬಗೆಬಗೆಯ ಪುಸ್ತಕಗಳು ಬೇಗನೆ ಬೆಳಕುಕಾಣಲೆಂದು ಹಾರೈಕೆ.

—ಶಂ. ಬಾ. ಜೋಶಿ



೩೧. ಗಾಂಧೀಜಿಯ ಹಾಸ್ಯಪ್ರವೃತ್ತಿ

ಶ್ರೀಮಾನ್ ಕಂದಾಡೆ ಕೃಷ್ಣಯ್ಯಂಗಾರ್ ಬಿ.ಎ., ಅವರು ಬರೆದುದು. ಬೆಲೆ ಆರಾಣೆ.

ಗಾಂಧೀಜಯಂತಿಯ ಸಭೆಯೊಂದರಲ್ಲಿ ಕೊಟ್ಟ ಉಪನ್ಯಾಸದ ವಿಸ್ತಾರರೂಪವು ಈ ಪುಸ್ತಕದಲ್ಲಿ ಅಡಕವಾಗಿದೆ. ಲೇಖಕರು ಗಾಂಧೀಜಿಯವರ ಲೇಖನಗಳನ್ನು ಸೂಕ್ಷ್ಮವಾಗಿ ಓದಿ ಅಭ್ಯಾಸಿಸಿದವರಲ್ಲದೆ, ವಿಶ್ರಾಂತಿಗಾಗಿ ಗಾಂಧಿಯವರು ಮೈಸೂರು ದೇಶಕ್ಕೆ ಬಂದು ಮಹಾರಾಜರ ಅತಿಥಿಗಳಾಗಿ ವಾಸ ಮಾಡಿದಾಗ, ಹತ್ತಿರದಲ್ಲಿದ್ದೂ ಅವರ ನಡೆನುಡಿಗಳಲ್ಲಿಯ ನಗೆಯನ್ನು ವಿಮರ್ಶಾಬುದ್ಧಿಯಿಂದ ಪ್ರತ್ಯಕ್ಷ ಕಂಡವರಾಗಿರುವರು. ‘ ನಗುವುದೆಂದರೆ ಅದೊಂದು ಕಡಿಮೆ ಮಟ್ಟದ ಲಕ್ಷಣ ’ ಎಂಬ ತಿಳಿವಳಿಕೆಯಿದ್ದ ನಮ್ಮಲ್ಲಿಯ ಕೆಲವು ದೊಡ್ಡ ದೊಡ್ಡ ಜನರು, ಎಂತೆಂತಹ ಸಂದರ್ಭದಲ್ಲಿಯೂ ತುಟಿ ಕೂಡ ಮಿಟುಕಿಸದೆ, ಶ್ರೀಮದ್ಗಾಂಭೀರ್ಯದಿಂದಿದ್ದು, ತಮ್ಮ ದೊಡ್ಡಸ್ತಿಕೆಯನ್ನು ಸಂರಕ್ಷಿಸಿಕೊಳ್ಳುವರು. ಅಂತಹ ದೊಡ್ಡಸ್ತಿಕೆಯನ್ನು ಬಲ್ಲವರು ‘ ಮಹಾತ್ಮರಾದ ಗಾಂಧಿಯವರು ನಗಬಹುದೇ ? ನಗಿಸಬಹುದೇ ? ’ ಎಂದು ಸಂದೇಹಗೊಳಬಹುದು. ಆದರೆ ಒದಗಿದ ಸಂದರ್ಭದಲ್ಲಿದ್ದ ನಗೆಯನ್ನೆ ಮೊದಲು ಹೊರಕ್ಕೆ ಸೆಳೆತಂದು, ತಾವು ನಕ್ಕು, ಬಳಿಯಲ್ಲಿದ್ದವರನ್ನು ನಗಿಸುವುದು ಗಾಂಧಿಯವರ ರೀತಿಯಾಗಿದೆ. ಈ ಮಾತನ್ನು ಈ ಗ್ರಂಥದಲ್ಲಿಯ ಹಲವು ಪ್ರಸಂಗಗಳು ಸಿದ್ಧಗೊಳಿಸಿ ತೋರಿಸುವುವು.

ನಿಜವಾಗಿ ನೋಡಿದರೆ ನಗೆ ಮನುಷ್ಯತ್ವದ ಪರಿಪೂರ್ಣತೆಯ ಗುರುತು. ಈಗ ರೂಢಿಯಲ್ಲಿರುವ ದೊಡ್ಡಸ್ತಿಕೆಯ ಶ್ರೀಮದ್ಗಾಂಭೀರ್ಯವು, ಮನುಷ್ಯತ್ವದ ಕೊರತೆಯನ್ನು ವ್ಯಕ್ತಪಡಿಸುವಂತಹ ಕೀಳುತನದ ಭಾವನೆಗೆ ಗುರುತು. ಮನುಷ್ಯತ್ವದ ಸಿದ್ಧಿ ಎಲ್ಲೆಲ್ಲಿ ಹೆಚ್ಚಾಗಿ ಕಂಡುಬರುವುದೊ ಅಲ್ಲಿ ನಕ್ಕು ನಗಿಸುವ ಸಂದರ್ಭ ಹೆಚ್ಚಿಗೆ ಕಾಣುವುವೆಂದು ಮನೋವಿಜ್ಞಾನಿಗಳ ಅಭಿಪ್ರಾಯ. ಜ್ಞಾತಕಾಮವಾಗಲಿ ಅಜ್ಞಾತಕಾಮವಾಗಲಿ ಮನಸ್ಸನ್ನು ಕೊರೆಯುತ್ತಿರುತವರು, ಲೌಕಿಕ ದೃಷ್ಟಿಯಿಂದ ತಮ್ಮ ಮಹಿಮೆ ಮೆರೆಯಿಸಲಿಕ್ಕೆ ಶ್ರೀಮದ್ಗಾಂಭೀರ್ಯದ ತೆರೆಯನ್ನು ಹೊದ್ದುಕೊಳ್ಳಬೇಕಾಗುತ್ತದೆ. ಗಾಂಧಿಯವರಂತಹ ಉಪಶಾಂತ ಕಾಮರಿಗೆ ಯಾವ ಪರದೆಯೂ ಬೇಕಾಗಿಲ್ಲ. ಎಳೆಮಕ್ಕಳಂತಹದು ಅವರ ಮನಸ್ಸು. ಎಳೆಮಕ್ಕಳಂತೆಯೆ ನಗಬೇಕೆನಿಸಿದಾಗ ನಕ್ಕು ಬಿಡುತ್ತಾರೆ. ತಾವು ನಗುವುದಲ್ಲದೆ ಬಳಿಯಲ್ಲಿದ್ದವರನ್ನೂ ನಗಿಸುವುದಕ್ಕೆ ಹವಣಿಸುತ್ತಾರೆ. ಇಂತಹರ ನಗೆ ಇನ್ನೊಬ್ಬರನ್ನು ಕೆಣಕಿ ರೇಗಿಸುವ ಕವಡುನಗೆಯಲ್ಲ; ಚುಚ್ಚಿ ಕಳವಳಗೊಳಿಸುವ ಕೊಂಕುನಗೆಯಲ್ಲ. ಹೂವಿನರಳಿಕೆಯಂತಹ ಪ್ರಸನ್ನಭಾವದ ನಗೆ; ಸರಳವಾದ ನಗೆ; ಬಳಿಯಲ್ಲಿದ್ದವರ ಮನಸ್ಸನ್ನು ಗೊತ್ತಾಗದಂತೆಯೆ ತಿದ್ದುವಂತಹ ತಿಳಿವಿನ ನಗೆ. ಪ್ರಸ್ತುತ ಗ್ರಂಥದ ಲೇಖಕರು ಬೇರೆ ಬೇರೆ ಸಂದರ್ಭಗಳನ್ನು ಉದಹರಿಸಿ, ಅಲ್ಲಲ್ಲಿ ವ್ಯಕ್ತವಾದ ಗಾಂಧಿಜಿಯವರ ಹಾಸ್ಯಪ್ರವೃತ್ತಿಯನ್ನು ಇದರಲ್ಲಿ ಚೆನ್ನಾಗಿ ತೋರಿಸಿಕೊಟ್ಟಿದ್ದಾರೆ. ಕನ್ನಡಿಗರಿಗೆ ಇಂತಹ ಪುಸ್ತಕಗಳೂ ಬೇಕೆನ್ನುವುದನ್ನು, ಇದನ್ನೋದಿ ನೋಡಿದವರು ಖಂಡಿತ ಒಪ್ಪಿಕೊಳ್ಳಬಹುದಾಗಿದೆ.

—ಬಿ. ಪಿ. ಎಸ್. ರಾವ್.

ದೂರ ಹೋದಳು.

ಬರೆದವರು: ಶ್ರೀ. ‘ ಭಾರತೀಸುತ ’ ಅವರು
ಬೆಲೆ ೬ ಆಣೆ.

ಭಾರತೀಸುತರು ಸಮಾಜದಲ್ಲಿ ತಲೆದೋರುತ್ತಲಿರುವ ವಿವಾಹಸಮಸ್ಯೆಯ ಬಗೆಗೆ ವಿಚಾರಮಾಡಿ, ಸಮಾಜವನ್ನು ವಿಚಾರಮಾಡಲು ಹಚ್ಚುವಂತಹ ಕಾರ್ಯ ಮಾಡತೊಡಗಿದುದಕ್ಕಾಗಿ ಅಭಿನಂದನೆ.

“ ಪ್ರೇಮದಿಂದ ಕೂಡಿದ ಎರಡು ಎದೆಗಳು ಒಂದುಗೂಡಲು ಪ್ರಯತ್ನಿಸುವಾಗ ಅದನ್ನು ತಡೆಯಲು ಲೋಕದಲ್ಲಿ ಯಾವುದಕ್ಕೆ ಸಾಧ್ಯವಿದೆ ? ’ ಎಂಬ ಸಮಸ್ಯೆಯನ್ನೆ ಕತೆಯೊಂದರಲ್ಲಿ ಮೂಡಿಸಿ ತೋರಿಸಿರುವರು. ‘ಪ್ರೇಮವು ಜಾತಿ-ಮತ-ಪಂಥವನ್ನು ಅವಲಂಬಿಸಿಲ್ಲ; ಅದು ಕೇವಲ ಆ ಆ ವ್ಯಕ್ತಿಗಳ ಸ್ವರೂಪ-ಸೌಂದರ್ಯ-ಸ್ವಭಾವವನ್ನೇ ತನ್ನ ಅಡಿಗಲ್ಲನ್ನಾಗಿ ಮಾಡಿಕೊಂಡುದೆ’ ಎಂಬುದನ್ನು ಅವರಿಗೆ ಹೇಳಬೇಕಾಗಿದೆ; ಅದಕ್ಕಾಗಿ ತಮ್ಮ ಕತೆಯ ನಾಯಕನನ್ನು ಬ್ರಾಹ್ಮಣನನ್ನಾಗಿಯೂ ನಾಯಿಕೆಯನ್ನು ಕ್ರೈಸ್ತಳನ್ನಾಗಿಯೂ ಆಯ್ದುಕೊಂಡಿದ್ದಾರೆ.

ಆಶಯೇನೋ ಹಿರಿಯದಾಗಿದೆ. ಆದರೆ ಅದನ್ನು ಸಾಧಿಸುವುದಕ್ಕೆ ಮಾನವಸ್ವಭಾವದ ಅರಿವು ಹೆಚ್ಚಾಗಿ ಇರಬೇಕಾಗುವುದು. ಪ್ರಸ್ತುತ ಲೇಖಕರು ಈ ಗ್ರಂಥದಲ್ಲಿ ಗಂಡು ಹೆಣ್ಣಿನ ಪ್ರೇಮವನ್ನೇನೋ ಚಿತ್ರಿಸಿದ್ದಾರೆ. ಆದರೆ ಅದರಲ್ಲಿ ಪ್ರೇಮಿಗಳ ಉತ್ಕಟತೆ ಎದ್ದುಕಾಣುವುದಿಲ್ಲ. ಸನ್ನಿವೇಶಗಳು ಏಕಪ್ರಕಾರವಾಗಿ ಬಂದಿವೆ. ಯಾರೊಬ್ಬರು ಬಂದರೆಂಬುದನ್ನು ಸೂಚಿಸುವಾಗ ಅವರ ಕಾಲುಸಪ್ಪಳವನ್ನೇ ಮುಂಚೆ ಮಾಡುವುದು ರೂಢಿಯಾದಂತಿದೆ. ಸನ್ನಿವೇಶಗಳಲ್ಲಿ ಸ್ವಾರಸ್ಯವಿಲ್ಲ. ಉದ್ದುದ್ದವಾಗಿ ಹೆಣೆದ ಕೆಲವು ಸಂಗತಿಗಳು ಕತೆಯ ವಸ್ತುವಿನ ತೀಕ್ಷ್ಣತೆಯನ್ನು ಕಡಿಮೆ ಮಾಡುವುವು. ಬೇಕೆಂದು ಬೇಡಿ ಬಯಸಿ ಲಿಲ್ಲಿಯ ಪ್ರೇಮವನ್ನು ಪಡೆದು, ಎಲ್ಲ ಎಡರುಗಳನ್ನು ಎದುರಿಸುವೆನೆಂದು ಎದೆತಟ್ಟಿಕೊಂಡು, ತಾಯ ಮುಂದೆ ಸುಳ್ಳುಹೇಳಲು ಪ್ರಯತ್ನಿಸುವುದು ಸುಧಾರಕ ತರುಣನಿಗೆ ಯೋಗ್ಯವೆನಿಸಲಾರದು. “ ನೀನಿಲ್ಲದಿದ್ದರೆ ನನ್ನ ಬಾಳು ಹಾಳಾಗುವುದು. ” ಎಂದು ಬಾಲನ ಬಾಯಿಯಿಂದ ಬಿಚ್ಚಿ ಹೇಳಿಸುವುದಕ್ಕಿಂತ ಅವನ ವರ್ತನೆಯಲ್ಲಿ ತೋರಿಸಿದ್ದರೆ, ಮನದ ಉದ್ವಿಗ್ನತೆಯಲ್ಲಿ ಮೂಡಿಸಿದ್ದರೆ ಹೆಚ್ಚು ಮಾರ್ಮಿಕವಾಗುತ್ತಿತ್ತು. ಮುತ್ತಿನ ಕಾಣಿಕೆಯನ್ನು ಬೆನ್ನು ಹತ್ತಿ ಬೇಡುವುದರಲ್ಲಿ ರಸಕಡಿಮೆ. ಮಿಂಚಿನಂತೆ ಬರಬೇಕು.

ಕನ್ನಡದ ಬಗ್ಗೆ ಅವರು ಪುಸ್ತಕದಲ್ಲಿಯೂ ಪ್ರಚಾರ ಮಾಡುತ್ತಿರುವುದು ಅಭಿನಂದನೀಯವು. ಆದರೆ ಸ್ವತಃ ತಾವೆ “ ಚೇರಿನ ಮೇಲೆ ಆಸೀನನಾದ ” ಎಂಬ ಬಗೆಯ ಸರಣಿಯನ್ನು ಮಂಡಿಸಿರುವುದು ಮನಸ್ಸಿಗೆ ಚುಚ್ಚುವುದು ‘ ಆಸೀನನಾದ ’ ಎಂಬುದು ಒಂದು ರೀತಿಯಿಂದ ಅಸಹ್ಯವಾಗಿರುವುದು. ಸಂಸ್ಕೃತದ ಮೋಹ ಎದ್ದು ಕಾಣುತ್ತದೆ. ಮುಂಬರುವ ಕೃತಿಗಳಲ್ಲಿ ರಸದೂಟವನ್ನು ಬಡಿಸುವರೆಂದು ಹಾರಯಿಸುತ್ತೇವೆ.

—ನೆ. ರಂಗನಾಥ

ಸಾದರ ಸ್ವೀಕಾರ

೪೩. **ಪ್ರಭುಲಿಂಗಲೀಲೆಯ ಸಂಗ್ರಹ :—** (ಪದ್ಯ ಗ್ರಂಥ). ಸಂಪಾದಕರು ಶ್ರೀ. ಎಂ. ಎಸ್. ಬಸವಲಿಂಗಯ್ಯ ಎಂ ಎ., ಬಿ. ಎಲ್. ಮತ್ತು ಶ್ರೀಮಾನ್ ಎಂ ಆರ್. ಶ್ರೀನಿವಾಸ ಮೂರ್ತಿ ಬಿ. ಎ. ಅವರು. ಮೈಸೂರು ವಿ. ವಿ. ನಿಲಯದ ಕನ್ನಡ ಗ್ರಂಥಮಾಲೆಯ ೩ನೆಯ ಪ್ರಕಟನೆಯ ಎರಡನೆಯ ಆವೃತ್ತಿಯಿದು. ಕ್ರಾ. ಅ. ೯೨+೧೭೨ ಪುಟಗಳು. ಬೆಲೆ ೦-೧೨-೦.

೪೪. United Karnatak Insurance Co , Ltd. ೯ನೆಯ ವರ್ಷದ ವರದಿ (೧೯೩೯) ಮತ್ತು ಆಯವ್ಯಯ ಪತ್ರಿಕೆ. ನಮ್ಮ ಸಮಾಲೋಚನೆಗಾಗಿ ಬಂದಿದೆ.

ಅಖಿಲಕರ್ನಾಟಕದ ಕಲ್ಪನೆಯಿಂದ ಹೊರಟ ಜೀವವಿಮಾ ಕಂಪನಿಗಳಲ್ಲಿ ಯು. ಕ. ಇನ್ಶೂರನ್ಸ್ ಕಂಪನಿಯು ಮುಖ್ಯವಾದುದಾಗಿದೆ. ಈ ಕಂಪನಿಯ ಪ್ರಗತಿಯಿಂದ ಕನ್ನಡನಾಡಿಗೆ ಖಂಡಿತವಾಗಿಯೂ ಅನುಕೂಲವಾಗುವುದೆಂದು ಹಾರಯಿಸಬಹುದಾಗಿದೆ ಸದ್ಯ ನಮ್ಮ ಕೈಯಲ್ಲಿಯ ವರದಿಯನ್ನು ನೋಡಿದರೆ, ಕಂಪನಿಯು ಹೆಚ್ಚಿ ಕಳೆದ ವರ್ಷಕ್ಕಿಂತಲೂ ಮುಂದಿದೆಯೆಂದು ಯಾವ ಲೆಕ್ಕಾಚಾರಿಯೂ ಒಪ್ಪಬಹುದಾಗಿದೆ. ಉದಾಹರಣೆಗಾಗಿ ಹೇಳಬೇಕಾದರೆ:

೧೯೩೮ನೆಯ ಇಸ್ವಿಯಲ್ಲಿ ಆದ ವಿಮಾ ಕಾರ್ಯಕ್ಕೆ ಸುಮಸುಮಾರು ಇಮ್ಮಡಿಯಷ್ಟು ಹೊಸ ಕೆಲಸವನ್ನು [೯,೭೮೫೬೦] ಈ ವರುಷ ಎಂದರೆ ೧೯೩೯ನೆಯ ಇಸ್ವಿಯಲ್ಲಿ ಕಂಪನಿ ಮಾಡಿರುವುದು. ಅಲ್ಲದೆ ಹಿಂದಿನ ವರ್ಷಕ್ಕಿಂತ ಈ ವರ್ಷ ಪಾಲಿಸಿಗಳ ರದ್ದಾಗುವಿಕೆಯ ಪ್ರಮಾಣವು ಬಹಳ ಕಡಿಮೆಯಾಗಿದೆ. ಇನ್ನೊಂದು ಮುಖ್ಯವಾದ ಸಂಗತಿಯೆಂದರೆ ಕಳೆದ ವರ್ಷಕ್ಕಿಂತ ಈ ವರ್ಷ ಕಂಪನಿಯ ವಾರ್ಷಿಕ ಉತ್ಪನ್ನವು, ಒಟ್ಟು ೧೬೦೦೦ ರೂಪಾಯಿಗಳಷ್ಟು ಹೆಚ್ಚಾಗಿರುವುದು. ಈಗ ಕಂಪನಿಗೆ ೪೮೦೦೦ ರೂ. ಗಳ ವಾರ್ಷಿಕ ಉತ್ಪನ್ನವಿದ್ದು, ಅದು ಇನ್ನೂ ಪ್ರಗತಿಯಿಂದ ಬೆಳೆಯಬಹುದೆಂಬ ನಂಬುಗೆ ಹುಟ್ಟುವಂತಿದೆ.

ಆಗಾಗ ಸಂಭವಿಸುವ ಪಾಲಿಸಿದಾರರ ನಿಧನದ ಮೂಲಕ ಮತ್ತು ಬೇರೆ ಕಾರಣಗಳ ಮೂಲಕ ಪ್ರಾಪ್ತವಾಗುವ ಹೊಣೆಯನ್ನು ಸಲ್ಲಿಸಲು, ಕಂಪನಿಯಲ್ಲಿ ಸುಮಾರು ೫೦೦೦೦ ರೂಪಾಯಿಗಳಷ್ಟು ಕಾದಿಟ್ಟ ಹಣವಿರುವುದರಿಂದ, ಪಾಲಿಸಿದಾರರಿಗೆ ತಮ್ಮ ಹಣದ ಬಗ್ಗೆ ಯಾವ ಭಯವೂ ಇಲ್ಲವೆಂದು ಯಾರೂ ಹೇಳಬಹುದಾಗಿದೆ. ಈ ಜೀವವಿಮಾನಿಧಿಯು ಸರಕಾರದ ಆಧಾರಪತ್ರಗಳಲ್ಲಿರುವುದರಿಂದ ಬಳಿಕ ಇದರ ಭದ್ರತೆಯ ಬಗ್ಗೆ ಯಾರೂ ಸಂದೇಹಪಡುವಂತಿಲ್ಲ. ಒಟ್ಟಿನಲ್ಲಿ ಕಂಪನಿಯು ಪ್ರಗತಿಪಥದಲ್ಲಿರುವುದು ಕನ್ನಡ ನಾಡಿನ ಅಭಿಮಾನಿಗಳಿಗೆಲ್ಲ ಸಂತೋಷದ ವಿಷಯ. ಈ ಕಂಪನಿ ಹೆಚ್ಚು ಹುರುಪಿನಿಂದ ಮುಂದಡಿಯಿಟ್ಟು ಕನ್ನಡನಾಡಿನ ಆರ್ಥಿಕ ಸುಧಾರಣೆಗೆ ಕಾರಣವಾಗಲೆಂದು ನಮ್ಮ ಹಾರಯಿಕೆ

೪೫. **ಬೆಳ್ಳಿಯ ಹಬ್ಬದ ಸವಿನೆನಪು** (ಕ. ಸಾ. ಪರಿಷತ್ತಿನ ೨೫ ವರ್ಷಗಳ ಕಾರ್ಯಕಲಾಪದ ವರದಿ ೧೯೧೫—೧೯೪೦) ಕಳೆದ ಜೂನ್ ತಿಂಗಳಲ್ಲಿ ಜರುಗಿದ ಕ. ಸಾ. ಪರಿಷತ್ತಿನ ರಜತಮಹೋತ್ಸವದ ಕಾಲದಲ್ಲಿ ಪ್ರಕಟಿಸಿದ ಕ್ರಾ. ಅ. ೪೮ ಪುಟಗಳ ಪುಟ ಪುಸ್ತಕವಿದು. ಪರಿಷತ್ತಿಗೆ ವಿಶೇಷ ಸಹಾಯವಿತ್ತ ಮಹನೀಯರ ಕೆಲವು ಚಿತ್ರಗಳೂ ಇದರಲ್ಲಿವೆ. ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿದಂದಿನಿಂದ ಇದುವರೆಗಿನ ೨೫ ವರ್ಷಗಳಲ್ಲಿ ಮಾಡಿದ ಹಲವು ಬಗೆಯ ಕಾರ್ಯವಿವರವನ್ನು ತಿಳಿದುಕೊಳ್ಳಬೇಕೆನ್ನುವವರು, ಈ ಪುಸ್ತಕವನ್ನು ಅವಶ್ಯವಾಗಿ ಓದಿಕೊಳ್ಳಬೇಕು.

೪೬. **ಸುಬೋಧಸಾರ** (ಕವನ ಸಂಗ್ರಹ). 'ಮುಪ್ಪಿನ ಷಡಕ್ಷರಿ' ಎಂಬ ಪ್ರಾಚೀನ ನಿಂಬೆಯ ಕವಿಯಿಂದ ರಚಿತವಾದ ಭಕ್ತಿಗೀತಗಳ ಸಂಕಲನವಿದು. ಸಂಗ್ರಹಿಸಿ ಪ್ರಕಟಿಸಿದವರು ಶ್ರೀ. ಹರ್ದೇಕರ್ ಮಂಜಪ್ಪ, ಅಲನಟ್ಟಿ ಅವರು. ಕ್ರಾ ಅ. ೧೬+೧೨೮ ಪುಟ ಬೆಲೆ ೦-೧೨-೦.

೪೭. **ಪೌರುಷ** (ಶರೀರ ಸ್ವಾಸ್ಥ್ಯ ವಿಷಯಕ ಗ್ರಂಥ). ಡಾ ಗೋಪಾಲಕೃಷ್ಣರಾವ್ ದಾರವಾಡ ಅವರು ಬರೆದುದನ್ನು ಶ್ರೀ ಭಾಲಚಂದ್ರ ಪಾಣೇಕರ್, ಸಮಾಜ ಪುಸ್ತಕಮಾಲೆ ಧಾರವಾಡ ಅವರು ಪ್ರಕಟಿಸಿರುವರು. ಕ್ರಾ. ಅ. ೧೦೪ ಪುಟ ಬೆಲೆ. ೧-೦-೦.

೪೮. **ಲಹರಿ** (ಕಥಾಸಂಗ್ರಹ). ಶ್ರೀ ಕಲಮದಾನಿ ಗುರುರಾಜರು ಬರೆದು ಸಂಗ್ರಹಿಸಿದುವುಗಳನ್ನು, ಧಾರವಾಡದ ಮ. ಗ್ರಂ. ಭಾಂಡಾರದ ಶ್ರೀ. ಪಿ. ವ್ಹಿ. ಕುಲಕರ್ಣಿಯವರು ಪ್ರಕಟಿಸಿರುವರು. ಕ್ರಾ. ಅ. ೭೪ ಪುಟಗಳು. ಬೆಲೆ ೦-೬-೦.

೪೯. **ಕುಮಾರವ್ಯಾಸ ಪ್ರಶಸ್ತಿ** (ಕವಿ ಚರಿತ್ರೆ ಮತ್ತು ಕಾವ್ಯ ವಿಮರ್ಶೆ). ಬೇರೆ ಬೇರೆ ಲೇಖಕರು ಬರೆದಿದ್ದಾರೆ. ಮೈಸೂರು ಮಹಾರಾಜಾ ಕಾಲೇಜಿನ ಕರ್ನಾಟಕ-ಸಂಘದ ಪ್ರಕಟನೆಯಿದು. ಡೆ. ಅ. ೧೮+೩೮೮ ಪುಟಗಳು. ಬೆಲೆ ೩-೦-೦.

೫೦. **ಬೆಳಕು** (ವೈಜ್ಞಾನಿಕ ಗ್ರಂಥ). ಬರೆದವರು ಶ್ರೀ ಟಿ. ಎಸ್. ಸುಬ್ಬರಾಯ ಎಂ ಎಸ್.ಸಿ ; ಮೈಸೂರು ವಿ. ವಿ. ನಿಲಯದ ಪ್ರಚಾರ ಪುಸ್ತಕಮಾಲೆಯ ೧೬ನೆಯ ಪ್ರಕಟನೆ. ಫೂ. ಕ್ಯಾ. ಅ. ೫೬ ಪುಟ. ಬೆಲೆ. ೦-೨-೦.

೫೧. **ಸುಗ್ಗಿಯ ಮೈಸೂರು :—** (ವಾರಪತ್ರಿಕೆ) ಸಂಪಾದಕರು ಶ್ರೀಮಾನ್ ಆರ್. ಕೆ. ಅಯ್ಯಂಗಾರ್ ಬೆಂಗಳೂರು ನಗರ. ಕ್ರಾ. ೩೭೨ ಪುಟಗಳು. ವಾರ್ಷಿಕ ವರ್ಗಣಿ ೫-೦ ೦. ಸಂಪಾದಕರೇ ಪ್ರಕಾಶಕರು.

೫೨ ಹಂಪಸಾಗರದ ಜನಸೇವಾ ವಾಚನಾಲಯದ ೧ನೆಯ ವರ್ಷದ ವರದಿ. ಗೌ. ಕಾರ್ಯದರ್ಶಿಗಳಾದ ಶ್ರೀಮಾನ್ ಬಿ ಎಚ್. ಎಂ. ಅಡಿವೆಯ್ಯನವರು ಕಳುಹಿದ್ದಾರೆ.

ಮನೆಯಲ್ಲಿಯೆ ಹೊಲಿಗೆ

ಅರೆಚಲ್ಲಣ

(ನಿಕರ್)

★

ಶ್ರೀ. ಹಳಪೇಟೆ ಚಿಂತಾಮಣಿರಾಯರು, ಟಿ.ಸಿ.ಡಿ.

★

ಅಳತೆ:— ೨೪ ಇಂಚು ಆಸನ. ೨೨ ಇಂಚು ನಡು. ೧೬½ ಇಂಚು ಉದ್ದ. ೧೮ ಇಂಚು ಸಡಿಲು.

ಚಿತ್ರಿಸುವುದು:— ೧, ೦, ೨. ಕಾಟಕೋನವಿರಲಿ.

ಮುಂಭಾಗ

೦ ಇಂದ ೩= ೮½" ಎಂದರೆ ಆಸನದ ⅓ + ½"

೦ ಇಂದ ೨= ೧೬½". ಇದೇ ಪೂರ್ಣ ಉದ್ದ.

ಎರಡೂ ಬಿಂದುಗಳನ್ನು ಮುಂದಕ್ಕೆ ಎಳೆ.

೩ ರಿಂದ ೪= ೯½" ಎಂದರೆ ಆಸನದ ⅓ +೧½".

೪ ರಿಂದ ೫= ೨¼", ಎಂದರೆ ಆಸನದ $\frac{1}{12}$+ ¼".

೫ ರಿಂದ ೧೭=೨".

೧೫ ರ ಗುರುತಿನಲ್ಲಿ ¼" ನ ಕಚ್ಚು ಹಾಕಬೇಕು.

೫ ನ್ನು ಸರಳವಾಗಿ ೧ಕ್ಕೆ ಕೂಡಿಸು.

೧, ೧೫, ೪ ಬಾಗುರೇಷೆಯನ್ನು ಚಿತ್ರದಂತೆ ತೆಗೆ.

೨ ರಿಂದ ೬=೯" ಎಂದರೆ ಸಡಿಲಿನ ½.

೪, ೬ ಕೂಡಿಸು.

೧ ರಿಂದ ೧೩=೧¼".

೧೩ ರಿಂದ ೧೪=೬½" ಎಂದರೆ ನಡುವಿನ ¼+೧".

೩, ೧೪, ೦. ಚಿತ್ರದಂತೆ ಬಾಗುರೇಷೆ ಕೂಡಿಸು.

ಹಿಂಭಾಗ

ಮುಂಭಾಗದ ೦, ೩, ೨. ರೇಷೆಗಿಂತ ½" ಹೆಚ್ಚಿಗೆ ಒಂದು ರೇಷೆಯನ್ನೆಳೆ.



೪ ರಿಂದ ೮= ೨¼"

೬ ರಿಂದ ೭= ೨"

೭, ೮. ಕೂಡಿಸು.

೧ ರಿಂದ ೯= ¼"

೧೨ ರಿಂದ ಮೇಲೆ ೧¼"

೯, ೧೦, ೧೧. ಚಿತ್ರದಂತೆ ಕೂಡಿಸು. ಮತ್ತು ೮ ರಿಂದ ೯. ಚಿತ್ರದಂತೆ ಬಾಗು ಎಳೆ.

ಗುಂಡಿಪಟ್ಟಿಗಳು:— ೧ ರಿಂದ, ೧೨= ೨"

೧೧ ರಿಂದ, ೧೬= ೧½"

೧೨ ರಿಂದ ೧೬. ಬಾಗುರೇಷೆ.

೧, ೧೨, ೧೬, ೧೫. ಈ ಆಕಾರದ ೨ ಪಟ್ಟಿಗಳು ಬೇಕು.

ಕಿಸೆ:— ಚಿತ್ರದಲ್ಲಿ ತೋರಿಸಿದಂತೆ ಕಿಸೆಯ ಬಾಯನ್ನು ೧೪ ರಿಂದ ಕೆಳಕ್ಕೆ ೧" ನಿಂದ ೪½" (ಎಂದರೆ ಆಸನದ ⅙+½) ಆಗಲವಾಗಿಡಬೇಕು. ಟಿ ಮುಕ್ಕ ಗಳಿಂದ ತೋರಿಸಿದಂತೆ, ಅದೇ ಪ್ರಕಾರದ ಎರಡು ಕಿಸೆಗಳನ್ನು ಕತ್ತರಿಸಿಕೊಳ್ಳಬೇಕು. ಕಿಸೆಗಳನ್ನು ನಿಕ್ಕರಿನ ಬಣ್ಣದ್ದೇ ಆದ ಬೇರೆ ತಿಳುವಾದ ಬಟ್ಟೆಯಲ್ಲಿ ತೆಗೆದುಕೊಳ್ಳಬೇಕು. ನಿಕ್ಕರಿನ ಬಟ್ಟೆ ದಪ್ಪವಿರುತ್ತದೆ. ಗುಂಡಿಯ ಪಟ್ಟಿಗಳನ್ನು ಮಾತ್ರ ನಿಕ್ಕರಿನ ಬಟ್ಟೆಯಲ್ಲಿಯೇ ತೆಗೆದುಕೊಳ್ಳಬೇಕು.

ಬೇಕಾಗುವ ಬಟ್ಟೆ:— ಮುಂಭಾಗದುವು ೨, ಹಿಂಭಾಗದುವು ೨, ಹೀಗೆ ನಾಲ್ಕು ದೊಡ್ಡ ತುಂಡುಗಳೂ ಗುಂಡಿಯ ಪಟ್ಟಿಯ ನಾಲ್ಕು ಸಣ್ಣ ತುಂಡುಗಳೂ ನಿಕ್ಕರಿನ ಬಟ್ಟೆಯಲ್ಲಿ ಬೇಕು.

ಕಿಸೆಯ ತುಂಡುಗಳು ತಿಳುವಾದ ಬಟ್ಟೆಯುವಿರಲಿ.

೨೬" ಅಗಲ ಉಳ್ಳ ಬಟ್ಟೆಯು ೧ಕ್ಕೆ ಉದ್ದದ ಎರಡಷ್ಟು ಮತ್ತು ಹೊಲಿಗೆಗಾಗಿ ೫" ಹೆಚ್ಚು ಬೇಕು. ಮೇಲೆ ಕೊಟ್ಟ ಅಳತೆಯುಡಕ್ಕೆ ೧¼ ವಾರ ಸಾಕು.

ವಿ. ಸೂಚನೆ:— ಕತ್ತರಿಸುವಾಗ ಹಿಂಭಾಗ, ಮುಂಭಾಗಗಳ ತಳಕ್ಕೆ (೨ರಿಂದ ೬) ೨½" ಹೆಚ್ಚು ಬಟ್ಟೆ ಇಟ್ಟು ಕತ್ತರಿಸಬೇಕು.

ಈಗ ಇರಲಿಕ್ಕಿಲ್ಲ !

"ನೋಡು ಕಮಲಾ, ಹೆಂಡತೀ ಅಂದರ ಗಂಡನ ಅರ್ಧಾಂಗೀ ಅನಿಸಿಗೋತಾಳ. ಗಂಡನ ಸುಖ-ದುಃಖದೊಳಗ ಸರಿಯಾಗಿ ಭಾಗವಹಿಸಬೇಕಾಗತದ. ಈಗ ನೀನು ರಾಜಣ್ಣನ ಅರ್ಧಾಂಗಿಯಾಗಲಿಕ್ಕೆ ಸಿದ್ಧಳಾಗೀದೀ ಅಂದಮ್ಯಾಲೆ, ಅವನ ದುಃಖದೊಳಗ ಪಾಲು ವಹಿಸಲಿಕ್ಕೂ ತಯ್ಯಾರ್ ಇದ್ದಾಂಗಾತು ಅನ್ನು?"

"ಇದೇನು ಮಾತು ವಿಮಲಾ? ರಾಜೇಂದ್ರನಿಗೆ ಅಂತಹ ದುಃಖಗಳಾದರೂ ಅವs ಏನು ಈಗ?"

"ಈಗ ಇರಲಿಕ್ಕಿಲ್ಲ ಬಿಡು, ಈಗಿನ ಮಾತು ನಾ ಹೇಳ್ಳಿಲ್ಲ! ನಿನ್ನ ಮದಿವೀ ಮಾಡಿಕೊಂಡ ಮ್ಯಾಲ ನಡೀ ಬಹುದಾದ ಮಾತಿನ ಬಗ್ಗೆ ಅಡಿದೆ ಇಷ್ಟೇ!"

* * *

ನಿಮಗ ಸಾಧ್ಯ ಅದs ಏನು?

ಆತ:— ನಮ್ಮ ತಾಯಿ ಮಾಡುತಿದ್ದಳು ಹಾಂಗ ರುಚಿಕರವಾಗಿ ಅಡಿಗೀ ಮಾಡೂದಂದರ ನಿನಗ ಎಂದೆಂದೂ ಸಾಧ್ಯ ಇಲ್ಲ ನೋಡು!

ಆಕೆ:— ಎಲ್ಲಾ ಗೊತ್ತದs! ಮತ್ತ ನಮ್ಮ ಅಪ್ಪ ತಂದುಕೊಡತಿದ್ದನಲ್ಲಾ ನನಗ, ಒಳ್ಳೇ ಒಳ್ಳೇ ಸೀರಿ.... ಬಣ್ಣ ಬಣ್ಣದ ಪತ್ತಲಾ; ಅಂಥಾವನ್ನ ತಂದುಕೊಡಲಿಕ್ಕೆ ನಿಮಗ ಸಾಧ್ಯ ಅದs ಏನು?

* * *

ವಕೀಲನ ಮಗಳು

ವಕೀಲ ತಂದೆ:— ಏನು ಮಗು ಖುಶೀ! ನೀನು "ಪುನರ್ವಿವಾಹ ಮಾಡಿಕೊಳ್ಳಿಕ್ಕೆ ತಯಾರಾಗೀದೀ ಅಂತ ಕೇಳಿದಾಗಿನಿಂದs ನನಗಂತೂ ತುಂಬಾ ಚಿಂತಿ ಹತ್ತಿ ಬಿಟ್ಟೈದ ನೋಡು!

ಮಗಳು:— ಯಾಕ? ಸ್ವಾಮಿಗಳು ಬಹಿಷ್ಕಾರಾ ಹಾಕಬಹುದೂಂತ ಭೀತಿ ಏನು?

ವಕೀಲ ತಂದೆ:— ಅದರ ಅಂಜಿಕಿ ನನಗ ಇಲ್ಲೇ ಇಲ್ಲ. ನೀ ಪುನರ್ವಿವಾಹ ಮಾಡಿಕೊಂಡು ಬಿಟ್ಟರ ನಿಮ್ಮ ಮನೆತನದ ಆಸ್ತಿಯೊಳಗ ನಿನಗೊಂದು ಕವಡಿ ಕೂಡಾ ಸಿಗಲಾರದು. ಎಲ್ಲಾದಕ್ಕೂ ನಿನ್ನ ಮೈದುನ ವಾರಸದಾರ್ ಆಗಿ ಕೂಡತಾನ!

ಮಗಳು:— ಇಷ್ಟೇ ಹೌದಲ್ಲೋ ನಿಮ್ಮ ಅಂಜಿಕಿ? ಇದೂ ನನಗ ಗೊತ್ತಿತ್ತೂ ಅಂತಲೇ ನಮ್ಮ ಮೈದುನನ ಜೋಡೀಲೇನs ಪುನರ್ವಿವಾಹ ಮಾಡಿಕೊಳ್ಳುದೂ ಅಂತ ನಿಶ್ಚಯಿಸಿ ಬಿಟ್ಟೇನಿ!

* * *

ವೈವಾಹಿಕ ಜೀವನಕ್ಕೆ ತಕ್ಕ ವರ

"ಇನ್ನೇನು ಭೀಮರಾವ್, ನೀವು ಲಗ್ನ ಮಾಡಿಕೊಳ್ಳುವವರು ಇದ್ದೀರಂತ? ಆಯಿತು, ನಿಮ್ಮ ವೈವಾಹಿಕಜೀವನ ಸುಖದಾಯಕವಾಗಲಿ!"

"ಏನ್ರೀ, ಆಗಲೀ ಅಂತ ಏನಂತೀರಿ! ಆಗಲಿಕ್ಕೇ ಬೇಕು! ನಾನು ಮಹಾಯುದ್ಧಕ್ಕ ಹೋಗಿ ಮರಳಿಬಂದ ಸಿಪಾಯಿ ಬಂಟ ಇದ್ದೇನಿ; ಗೊತ್ತದs ಇಲ್ಲೋ?"

* * *

ಸಮಾನಶೀಲೇ.... ಸಖ್ಯಂ

ಗಂಡ-ಹೆಂಡಿರಿಬ್ಬರೂ ಪ್ಲೇಗಿನ ಮದ್ದನ್ನು ಚುಚ್ಚಿಸಿಕೊಂಡಿದ್ದರು. ಗಂಡನಿಗೆ ತುಂಬ ನೋವಾಗಿದ್ದಿತು.

ಹೆಂಡತಿ:— ಎಷ್ಟದು ನರಳೂದು? ರಾತ್ರಿ ಬೆಳತನಕಾ ನನಗ ನಿದ್ದಿ ಕೂಡಾ ಹತ್ತಲಿಲ್ಲ!

ಗಂಡ:— ಸೂ + ಮಗಂದು ಹೇಳಿ ಕೇಳಿ ಉಗ್ರವಿಷಾ ಅದು! ಅಂಥಾದ್ದನ್ನ ಮೈಯೊಳಗ ಹಾಕಿಕೊಂಡಮ್ಯಾಲ ಎಷ್ಟು ತ್ರಾಸ ಆಗಬಾರದು?

ಹೆಂಡತಿ:— ಸಾಕು ಬಿಡ್ರಿ; ಎಲ್ಲಾ ಸೋಂಗು ನಿಮ್ಮದು! ಈಗ ನಾನೂ ಚುಚ್ಚಿಸಿಕೊಂಡಿಲ್ಲೇನು? ನನಗೇನಾಗೇದ?

ಗಂಡ:— ನೋಡು, ಹಾಲಿನಾಗ ಹುಳಿ ಬಿದ್ದರ ಅದು ಕೆಟ್ಟುಹೋಗತದ! ಮಜ್ಜಿಗೀ ಒಳಗ ಹುಳೀ ಬಿದ್ದರ ಏನು ಆಗೂ ಹಾಂಗದ? ಸಮಾನಶೀಲರು ಮಿತ್ರರಾಗತಾರಂತ ಗೊತ್ತಿಲ್ಲೇನು ನಿನಗ?

* * *

ಎಂಟುನೂರು ಜನರು

ನ್ಯಾಯಾಧೀಶ:— ನೀನು ತೆಂಗಿನ ಕಾಯಿಗಳನ್ನು ಕಳವು ಮಾಡಿದ್ದನ್ನ ಪ್ರತ್ಯಕ್ಷಕಂಡ ಸಾಕ್ಷೀದಾರರು, ಎಂಟು ಜನರು ಕೋರ್ಟಿನೆದುರು ಬಂದಾರ....ಗೊತ್ತಾಯ್ತೇನು?

ಆರೋಪಿ:— ಅದರೇನಾತರೀ ದೇವ್ರು! ನಾನು ಈ ಕಳವು ಮಾಡಿದ್ದನ್ನ ನೋಡದs ಇರೂವವರನ್ನ ಎಂಟs ಯಾಕ, ಎಂಟುನೂರು ಜನರನ್ನ ಬೇಕಾದರೂ ತಂದುನಿಲ್ಲಸತೀನಿ, ಕೋರ್ಟಿನ ಮುಂದ....ದೇವ್ರು!

* * *

ಅನುಭವದ ವಿಷಯ

ಇಬ್ಬರು ಕಾರಕೂನರು ಕಚೇರಿಯಲ್ಲಿ ಕುಳಿತು ಮಾತನಾಡುತ್ತಿದ್ದರು:

ಒಬ್ಬ:— ನೋಡ್ರೆಪಾ ಈ ಆಫೀಸಿನ ತ್ರಾಸು ಮನೀಗೆ ನಾ ಎಂದೂ ಒಯ್ಯತಿರೂದಿಲ್ಲ.

ಇನ್ನೊಬ್ಬ:— ನನಗೂ ಅನುಭವ ಅದs ಬಿಡ್ರಿ! ಮನ್ಯಾಗಿನ ತ್ರಾಸs ಮನಿತುಂಬಾ ಆಗಿ ಬಿಟ್ಟಿರುವಾಗ, ಈ ಆಫೀಸಿನ ತ್ರಾಸಿಗೆ ಸ್ಥಳಾ ಆದರೂ ಹ್ಯಾಂಗ ಸಿಗಬೇಕು, ಮ್ಯಾಲ್ಯಾ ಆದರೂ ಎಲ್ಲೀದು ಸಿಗಬೇಕು?

* * *

ತರಿಸಿ ಕೊಡತೀನಿ!

"ಹುಂ, ಇದೇ ಮನೀ ಏನ್ರೀ ನೀವು ಬಾಡಿಗೆಗೆ ಕೊಡಬೇಕಾದದ್ದು? ಸರಿ! ಮತ್ತ ಈ ಮನ್ಯಾಗ ಇಲಿ ಹೆಗ್ಗಣ ಅವs ಏನು?"

"ಈಗಂತೂ ಇಲ್ಲ; ತಮಗೆ ಬೇಕಾಗೇ ಇದ್ದರೆ ತರಿಸಿಕೊಡತೀನಿ.... ಯಾರಕಡಿಂದಾದರೂ!"

* * *

ನಾಲ್ಕು ನಿಟ್ಟಿನ ನೋಟ

ಕಷ್ಟಕ್ಕೆ ಕೊನೆ ಎಂದು?

ಹೋದ ತಿಂಗಳು ಬ್ರಿಟಿಶ್ ಪಾರ್ಲಮೆಂಟಿನಲ್ಲಿ ಯುದ್ಧ ಪ್ರಗತಿಯ ಸಮಾಲೋಚನೆ ಮಾಡುವ ಭಾಷಣದಲ್ಲಿ ಮುಖ್ಯ-ಮಂತ್ರಿಗಳಾದ ಮಿ. ವಿನಾಸ್ಟನ್ ಚರ್ಚಿಲ್‍ರು ಎರಡು ಮಾತುಗಳನ್ನು ಹೇಳಿದರು. ' (೧) ಹಿಟ್ಲರನಿಗೆ ಬೇಕಾಗಿರುವವರೆಗೆ ಇಂಗ್ಲಂಡವು ಯುದ್ಧವನ್ನು ನಡೆಯಿಸಲು ಸಿದ್ಧವಿದೆ, ಮತ್ತು (೨) ೧೯೪೧-೪೨ಕ್ಕೆ ಆಕ್ರಮಣ (offensive) ವನ್ನು ನಡೆಯಿಸುವ ಸಿದ್ಧತೆಯನ್ನೂ ಇಂಗ್ಲಂಡವು ಮಾಡುತ್ತಲಿದೆ." ಈ ಮಾತುಗಳಿಂದ ಒಂದು ಸ್ಪಷ್ಟವಾಗುವುದು. ಯುದ್ಧವು ಸ್ವಲ್ಪಾವಧಿಯಲ್ಲಿಯೆ ಮುಗಿಯುವುದೆಂದು ನಿಶ್ಚಿತವಾಗಿ ನಂಬುವಂತಿಲ್ಲ. ಚರ್ಚಿಲ್‍ರು ಈ ಮಾತನ್ನು ಹೇಳಿದರು, ಆದಕಾಗಿ ತಮಗೆ ಎಳ್ಳಷ್ಟಾದರೂ ಒಣ ಹೆಮ್ಮೆಯಾಗಲಿ, ದುರಿಚ್ಛೆಯಾಗಲಿ ಇಲ್ಲವೆಂದೂ ಹೇಳಿದರು. ಆದರೆ ಯಾವ ತತ್ತ್ವಕ್ಕಾಗಿ ಈ ಯುದ್ಧ ನಡೆದಿದೆಯೊ ಆ ತತ್ತ್ವಕ್ಕೆ ಜಯ ದೊರಕಿ, ನಾಝೀವಾದದ ನಾಶವಾಗುವ ವರೆಗೆ ಮಾತ್ರ ಯುದ್ಧವನ್ನು ನಡೆಯಿಸಲೇ ಬೇಕಾಗುವುದು ಎಂದೂ ಹೇಳಿದರು. ಎರಡು ಕಾರಣಗಳಿಗಾಗಿ ಈ ಯುದ್ಧವು ಹಿಂದಿನ ಎಲ್ಲ ಯುದ್ಧಗಳಿಗಿಂತ ಬೇರೆಯಾಗಿದೆ. (೧) ಮೇಲೆ ಹೇಳಿದಂತೆ ಸ್ವಾತಂತ್ರ್ಯಮೂಲವಾದ ಪ್ರಜಾಪ್ರಭುತ್ವ ತತ್ತ್ವಕ್ಕಾಗಿ ಈ ಯುದ್ಧ ನಡೆದಿದೆ; (೨) ಈ ಯುದ್ಧದಲ್ಲಿ ಸೈನಿಕರೆಂದರೆ ಹುಡುಗರು-ಹೆಂಗುಸರನ್ನೊಳಗೊಂಡ ಇಡಿಯ ರಾಷ್ಟ್ರದ ಜನತೆ. ರಣಾಂಗಣಕ್ಕೆ ಹೋದ ಸೈನಿಕರಿಗಿಂತ ಮನೆಯಲ್ಲಿ ಮಲಗಿದ ನಾಗರಿಕರಿಗೆಯೆ ಸಾಯುವ ಸಂಭವ ಹೆಚ್ಚಾಗುತ್ತಲಿದೆ! ಜನ-ದನ-ಮನೆ-ಮಾರುಗಳ ನಾಶವು ಈ ಪ್ರಮಾಣದಲ್ಲಿ ನಡೆದರೆ, ರಾಷ್ಟ್ರಗಳೊಡನೆ ಮಾನವಸಂಸ್ಕೃತಿಯೂ ಮಣ್ಣುಪಾಲಾಗಬಹುದಾಗಿದೆ. ಆದಕಾಗಿಯೆ ಕೇಳುವುದು ' ಈ ಕಷ್ಟದ ಕೊನೆ ಯಾವಾಗ? ' ಎಂದು.

ಸಮಸ್ಯೆ ಮತ್ತು ಸಮಾಧಾನ

' ಕಷ್ಟದ ಕೊನೆ ಯಾವಾಗ? ' ಎಂಬ ಕಳವಳದಂತೆ ಇನ್ನೊಂದು ಕಳವಳವೂ ಬುದ್ಧಿವಂತರ ಎದೆಯಲ್ಲಿ ಕುದಿಯುತ್ತಲಿದೆ. ಅದನ್ನು ಚರ್ಚಿಲ್‍ರು ರಸವತ್ತಾಗಿ, ಪರಿಣಾಮಕಾರಕವಾಗಿ ಹೇಳಿದರು. ಸೋತು ಶರಣಾಗತರಾಗಿ ನಾಝೀ ಸರಕರಾಜ್ಯದಲ್ಲಿ ನಾಯಿಯ ಜೀವನ ನಡೆಸುವುದಕ್ಕಿಂತ, ವರ್ಷಾನುವರ್ಷ ಕಷ್ಟಪರಂಪರೆಗಳನ್ನು ಸಹಿಸಿ, ಕೊನೆಯ ವರೆಗೂ ಕಾದಾಡಿ, ಪ್ರಸಂಗ ಬಂದರೆ ಕಾಳಗದಲ್ಲಿ ಮಡಿಯುವುದೇ ಮೇಲು—ಎಂಬ ಭಾವನೆಯು ಪ್ರತಿಯೊಬ್ಬ ಸ್ವಾತಂತ್ರ್ಯಪ್ರಿಯನ ಎದೆಯಲ್ಲಿ ಮರುದನಿಸುತ್ತಲಿದೆ. ಒಂದು ಕಡೆ ಜೀವಕ್ಕಿಂತ ಹೆಚ್ಚೆನಿಸುವ ತತ್ತ್ವದ ಹಟ, ಇನ್ನೊಂದೆಡೆ ನಿರಪರಾಧಿ ನಾಗರಿಕರು ನಿಷ್ಕಾರಣ ಹಾನಿ-ಮರಣಗಳಿಗೀಡಾಗುವುದನ್ನು ನೋಡಿ ಕರುಳಿನ ಗೋಳಾಟ! ಸಾಮಾನ್ಯ ಜನತೆಗೆ ಇದೊಂದು ಬಗೆಹರಿಯದ ಸಮಸ್ಯೆಯಾಗಿದೆ. ದೂರದೃಷ್ಟಿಯಿಲ್ಲದ ಸಾಮಾನ್ಯರು ಈ ಸಮಸ್ಯೆಗೊಳಗಾಗುವುದು ನಾಝೀ ನಾಯಕನಿಗೆ ಇಷ್ಟಾಪತ್ತಿಯಾಗಿದೆ. ತಾತ್ಕಾಲಿಕ ನಿಷ್ಕಾರಣ ನಾಶಕ್ಕೆ ಬೆದರಿ ಬೆಂಡಾದ ಜನತೆಯ ಮೇಲೆ ಸಾಂಕ್ರಾಮಿಕ ರೋಗದಂತೆ ಜರ್ಮನ್ ಅಪಪ್ರಚಾರವು ಹಬ್ಬಬಹುದಾಗಿದೆ. ಆದಕಾಗಿ ಇಂಗ್ಲಂಡದ ಪ್ರಚಾರದಲ್ಲಿ ಸತ್ಯಾಂಶವು ಹೆಚ್ಚಾಗಿ ಸೇರಿಕೊಂಡಿದೆ ತಾತ್ಕಾಲಿಕ ಅನರ್ಥಗಳನ್ನು ಇಂಗ್ಲಂಡದ ಮುಖ್ಯಮಂತ್ರಿಗಳು ಮುಚ್ಚಿಡುವುದಿಲ್ಲ; ಶತ್ರುವಿನ ಶಕ್ತಿಯನ್ನೂ ಕೇವಲ ತಿರಸ್ಕಾರದಿಂದ ತಪ್ಪಾಗಿ ತಿಳುಹಿಸಿಕೊಡುವದಿಲ್ಲ. ' ಮಾನವಸಂಸ್ಕೃತಿ ಮತ್ತು ಪ್ರಗತಿಗಳಿಗೆ ಗಂಡಾಂತರ ಬಂದ ಈ ಕಾಲದಲ್ಲಿ, ಅವುಗಳ ರಕ್ಷಣೆಗಾಗಿ ನಾವು ಇಂತಹ ಅನರ್ಥಗಳನ್ನು ೨-೩ ವರ್ಷಗಳ ವರೆಗೆ ಸಹಿಸಬೇಕಾದರೂ, ಇತಿಹಾಸದ ಮಾನದಿಂದ ಅದು ತೀರ ಸ್ವಲ್ಪ ಮತ್ತು ಅವಶ್ಯವಾಗಿ ಸಹನೀಯ ಎಂದು ತಿಳಿಯಬೇಕು.' ಹೀಗೆ ತಮ್ಮ ಭಾಷಣದಲ್ಲಿ ಚರ್ಚಿಲ್‍ರು ಸಾರಿದ್ದಾರೆ. ಈ ಧೋರಣೆಯನ್ನಿಟ್ಟುಕೊಂಡರೆ ಮಾತ್ರ ಮೇಲಿನ ಸಮಸ್ಯೆಯನ್ನು ಬಿಡಿಸಲು ನಾವು ಸಮರ್ಥರಾಗುವೆವು.

ಸಬಲವಾದ ಆತ್ಮವಿಶ್ವಾಸ

ಇಂಗ್ಲಂಡದ ಧೋರಣೆಯಲ್ಲಿ ಕೇವಲ ತತ್ತ್ವದ ಹೆಮ್ಮೆ ಮಾತ್ರ ತುಂಬಿಲ್ಲ. ' ಸತ್ಯಕ್ಕೆ ಜಯವಿದೆ, ನ್ಯಾಯಕ್ಕೆ ಜಯವಿದೆ, ಸತ್ಯ-ನ್ಯಾಯಗಳು ನಮ್ಮ ಕಡೆಗಿವೆ ' ಎಂದು ಉಪನ್ಯಾಸಪೂರ್ವಕವಾಗಿ ವಿಶ್ವಾಸ ತಳೆದ ಮಾತ್ರಕ್ಕೆ ಇಂದಿನ ಪರಿಸ್ಥಿತಿಯಲ್ಲಿ ಜಯ ದೊರಕುವಂತಿಲ್ಲ. ಇಂದು ಜಗತ್ತಿನಲ್ಲಿ ಹಾವಳಿಯನ್ನೆಬ್ಬಿಸಿದ ಜರ್ಮನ್ ಜಟ್ಟಿಗಳ ಜೀವನದಲ್ಲಿ ಸತ್ಯ-ನ್ಯಾಯಗಳಿಗೆ ಸ್ಥಾನವೆ ಇಲ್ಲ; ಇದ್ದುದಾದರೆ ಅವುಗಳ ಸ್ವರೂಪವು ಘಾತುಕವಾಗಿದೆಯಲ್ಲದೆ ಪ್ರಗತಿಗೆ ಪೋಷಕವಾದುದಿಲ್ಲ. ಹೀಗಾಗಿ ನಾವು ಮಾತನಾಡುವ ಶಬ್ದಗಳ ಅರ್ಥವೆ ಹಿಟ್ಲರನ ಜರ್ಮನಿಗೆ ತಿಗುವಂತಿಲ್ಲ ಹಿಟ್ಲರನೂ ಅವನ ಅನುಯಾಯಿಗಳೂ ಇಷ್ಟೇ ಜನರ ನೀತಿದೃಷ್ಟಿಯು ಭಿನ್ನವಾಗಿದ್ದರೆ ಅಷ್ಟೊಂದು ಗಂಡಾಂತರವಿರುತ್ತಿರಲಿಲ್ಲ; ಆದರೆ ಕಳೆದ ೧೫ ವರ್ಷಗಳಲ್ಲಿ ಇಡಿಯ ಜನಾಂಗವನ್ನೆ ಹಿಟ್ಲರನು ಪ್ರಚಾರದಿಂದ, ಪದ್ಧತಿಯಿಂದ, ಶಿಕ್ಷಣದಿಂದ ಬೇರೆಯಾಗಿ ಪರಿವರ್ತಿಸಿದ್ದಾನೆ ಇಡಿಯ ಜರ್ಮನ್ ಜನಾಂಗದಲ್ಲಿ ಸತ್ಯ, ನ್ಯಾಯ ಮೊದಲಾದ ಶಬ್ದಗಳಿಗ ರೂಢವಾದ ಅರ್ಥವೆ ಇಲ್ಲ. ಹೀಗಾಗಿ ಜರ್ಮನರೊಡನೆ ವಾದ ಬೆಳೆಯಿಸಲು, ಚರ್ಚೆಮಾಡಲು, ತಿಳುಹಿಸಲೆತ್ನಿಸಲು ಶಕ್ಯವೇ ಇಲ್ಲ. ಅವರ ಭಾಷೆ, ಅವರ ಶಬ್ದ, ಅವರ ನೀತಿ, ಅವರ ಮಾನದಂಡ ಇವೆಲ್ಲವೂ ಬೇರೆಯಾಗಿವೆ. ಅಡವಿಯ ಹುಲಿಗೆ ಅಹಿಂಸೆಯ ತತ್ತ್ವೋಪದೇಶ ಮಾಡಿದಂತಾಗುವುದು ಕೇವಲ ಸತ್ಯ-ನ್ಯಾಯಗಳ ನೈತಿಕಬಲದ ಮೇಲೆ ಅವಲಂಬಿಸಿದರೆ. ಆದರೆ ಇಂಗ್ಲಂಡವು

ರಿಯೆ ನೀತಿ ತತ್ತ್ವೋಪದೇಶದ ಶಕ್ತಿಯ ಮೇಲೆ ನಿಂತಿಲ್ಲ. ಇಂಗ್ಲಿಶ್ ಜನಾಂಗದ ಸ್ವಭಾವ ಗಟ್ಟಿಗತನವಿದೆ, ಜಗತ್ತಿನ ಎಲ್ಲ ಭಾಗಗಳಲ್ಲಿ ಬೆಳೆದುನಿಂತ ಸಾಮ್ರಾಜ್ಯದ ಶಕ್ತಿ-ಸಂಪತ್ತು-ಸಹಾಯ ಗಳಿವೆ. ಅತ್ಯಂತ ಸಂಪತ್ತು-ಶಕ್ತಿಗಳನ್ನುಳ್ಳ ಅಮೇರಿಕೆಯ ಸಹಾಯವಿದೆ; ಇದಲ್ಲದೆ ಪ್ರತಿಯೊಬ್ಬ ಜರ್ಮನನಿಗೆ ತಪ್ಪದೆ ಅರ್ಧವಾಗುವ ಸೇನಾಶಕ್ತಿ ಇದೆ; ಶಸ್ತ್ರಸಂಗ್ರಹವಿದೆ; ಎಲ್ಲರನ್ನೂ ಮೀರಿದ ನೌಕಾದಳವಿದೆ; ಸಾಹಸಿಯಾದ ವಿಮಾನದಳವಿದೆ; ಕಳೆದ ತಿಂಗಳು ಜರ್ಮನರ ವಿಮಾನಗಳನ್ನು ಕೆಡವಿ ಹೊಡೆದೋಡಿಸಿದ ಬ್ರಿಟಿಶ್ ವಿಮಾನದಳವು ದಿನದಿನಕ್ಕೆ ಸಂಖ್ಯೆಯಲ್ಲೂ ಸಾಹಸದಲ್ಲೂ ಬೆಳೆಯುತ್ತಲಿದೆ. ಇವೆಲ್ಲ ಕಾರಣಗಳಿಗಾಗಿ ಚರ್ಚಿಲ್ಲರ ಆತ್ಮ-ವಿಶ್ವಾಸವು ಸ್ವಾತಂತ್ರ್ಯಪ್ರಿಯ ಜಗತ್ತಿಗೆ ಆಶಾದಾಯಕವಾಗಿದೆ.

ಭಾರತೀಯ ರಾಜಕಾರಣ

ಹಿಟ್ಲರನ ಮತ್ತು ಅವನ ಜರ್ಮನಿಯ ಹೃದಯಸಂಸ್ಕೃತಿಯು ಆಡವಿಯ ಹುಲಿಯಂತೆ ಎಂಬ ಮಾತು ಎಲ್ಲರಂತೆ ಈಗ ನಮ್ಮ ಕಾಂಗ್ರೆಸ್ ಮುಂದಾಳುಗಳಿಗೂ ಹೊಳೆದಿದೆ. ಹಿಟ್ಲರನಂತಹ ಶಾವ ಳಿಯನ್ನು ಕುರಿತೇ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು 'ಪರಕೀಯ ದಾಳಿಯನ್ನೆದುರಿಸುವಾಗ ಅಹಿಂಸೆಯು ಅಸ್ತ್ರವಾಗದು' ಎಂದು ಬಹುಮತದಿಂದ ಒಪ್ಪಿತು. ಅಹಿಂಸೆಯೆ ಶ್ರೇಷ್ಠತತ್ತ್ವವೆಂದು ವರ್ಕಿಂಗ್‌ಕಮಿಟಿಯು ಇಷ್ಟೊಂದು ಹಟದಿಂದ ಹೇಳಿಕೊಳ್ಳಬೇಕಾ ಗಿಲ್ಲ. ತತ್ತ್ವತಃ ಅಹಿಂಸೆಯು ಶ್ರೇಷ್ಠವಲ್ಲ ಎಂದು ಯಾರೂ ಹೇಳಿಲ್ಲ, ಹೇಳುವಂತಿಲ್ಲ. ಜಗತ್ತಿನಲ್ಲಿ ಪ್ರತಿಯೊಬ್ಬನು ಮಹಾತ್ಮಾ ಗಾಂಧಿಯಾದಾಗ ಅಹಿಂಸೆಯೆ ಮಾನವರ ವ್ಯವಹಾರವನ್ನು ಖಂಡಿತ ವಾಗಿ ನಡೆಸಬಲ್ಲುದು. ಆದರೆ ಸದ್ಯಕ್ಕೆ ಜಗತ್ತಿನಲ್ಲಿ ಹಿಟ್ಲರನಿದ್ದಾನೆ, ಮುಸೋಲಿನಿಯೂ ಇಂದಿದೆ; ಇಂತಹ ಜಗತ್ತಿನಲ್ಲಿ ಅಹಿಂಸೆಯ ಪ್ರಯೋಗವನ್ನು ಯಶಸ್ವಿಯಾಗಿ ಮಾಡುವುದು ಸಂದೇಹಾಸ್ಪದವೆ. ವರ್ಕಿಂಗ್ ಕಮಿಟಿಯ ಈ ಧೋರಣೆಯನ್ನು ಅಖಿಲಭಾರತ ಕಾಂಗ್ರೆಸ ಕಮಿಟಿಯೂ ಬಹುಮತದಿಂದ ಒಪ್ಪಿತು. ಕಾಂಗ್ರೆಸಿನ ಧೋರಣೆಯ ಈ ಬದಲಾವಣೆಯಿಂದ ಅನೇಕರಲ್ಲಿ ಆಶೆ ಅಂಕುರಿ ಸಿತು. ಕಾಂಗ್ರೆಸು ಪರಿಸ್ಥಿತಿಯನ್ನು ಎದುರಿಸುತ್ತಲಿದೆ. ಎಂದಿನಂತೆ ರಾಜಕಾರಣದಲ್ಲಿ ನೀತಿಯ ತತ್ತ್ವಗಳನ್ನು ಸೇರಿಸಲು ನಿರಾಕರಿಸಿದೆ. ಆದ್ದರಿಂದ ಇನ್ನುಮುಂದೆ ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸು ಭಾರತೀಯರಿಗೆ ಸರಿಯಾದ ಮಾರ್ಗವನ್ನು ತೋರಿಸಬಹು ದಾಗಿದೆ—ಹೀಗೆ ಅನೇಕ ಆಶೆಗಳು ಉದ್ಭವಿಸಿದ್ದುವು. ಆದರೆ—? ಕಳೆದ ತಿಂಗಳು ನಮ್ಮ ರಾಜಕಾರಣದಲ್ಲಿ ಅನೇಕ ಮಹತ್ತ್ವದ ಘಟನೆಗಳು ಸಂಭವಿಸಿ, ಕಾಂಗ್ರೆಸು ಮತ್ತೆ ಅಜ್ಞಾತವಾಸವನ್ನು ಕೈಕೊಳ್ಳುವದರಲ್ಲಿ ಅವುಗಳ ಕೊನೆಯಾಯಿತು!

ವೈಸರಾಯರ ಘೋಷಣೆ

ಕಾಂಗ್ರೆಸಿನ ಬೇಡಿಕೆ ಯಥಾರ್ಥವಾದುದು, ಯುಕ್ತಿಯುಕ್ತ ವಾದುದು ಎಂದು ಕಳೆದ ತಿಂಗಳ 'ನೋಟ'ದಲ್ಲಿ ನಾವು ಹೇಳಿರು ವೆವಷ್ಟೆ. ಕಾಂಗ್ರೆಸಿನ ಬೇಡಿಕೆ ಪ್ರಸಿದ್ಧವಾದ ನಂತರ ವೈಸ ರಾಯರು ಒಂದು ಘೋಷಣೆಯನ್ನು ಪ್ರಕಟಿಸಿದರು; ಇಂಡಿಯಾ ಸೆಕ್ರೆಟರಿಯಾದ ಎಮ್. ಅಮೇರಿಯವರು ಪಾರ್ಲಮೆಂಟಿನಲ್ಲಿ ಅದನ್ನು ಸ್ಪಷ್ಟೀಕರಿಸಿದರು. ಅವರಿಬ್ಬರ ಅಭಿಪ್ರಾಯಗಳ ಮುಖ್ಯಾಂಶ ಹೀಗೆ:—

(೧) ವೈಸರಾಯ:— ಹಿಂದುಸ್ಥಾನಕ್ಕೆ ವಸಾಹತ ಸ್ವರಾಜ್ಯ ವನ್ನು ಕೊಡುವ ನಮ್ಮ ಉದ್ದೇಶವು ದೃಢವಾಗಿದೆ; ಅದರ ವಿವರಗಳನ್ನು ಹಿಂದೀಯರೆ ಗೊತ್ತುಪಡಿಸಿದರೆ ಹೆಚ್ಚು ಒಳಿತು; ಆದಕಾಗಿ ಯುದ್ಧ ಮುಗಿದಮೇಲೆ, ಆದಷ್ಟು ಶೀಘ್ರ, ಹಿಂದೀಯರ ಪರಿಷತ್ತನ್ನು ಸೇರಿಸಲು ಸಹಾಯಮಾಡುವೆವು.

ಅಮೇರಿ:— ಇಂದಿನಕಾಲದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಕ್ಕಿಂತಲೂ ವಸಾಹತ ಸ್ವರಾಜ್ಯವು ಹೆಚ್ಚು ಸುರಕ್ಷಿತ ವಿದೆ, ಶ್ರೇಷ್ಠವಿದೆ. ನಮ್ಮ ಉದ್ದೇಶವೆಂದರೆ, ಇಂಗ್ಲಂಡ ದಲ್ಲಿ ಯಾವ ತರದ ಮತ್ತು ಎಷ್ಟರಮಟ್ಟಿಗೆ ಸ್ವಾತಂತ್ರ್ಯ ವಿದೆಯೊ ಅದೇ ಸ್ವಾತಂತ್ರ್ಯವನ್ನು ಹಿಂದೀಯರಿಗೂ ಕೊಡುವುದು.

(೨) ವೈಸರಾಯ:— ಸದ್ಯಕ್ಕೆ ಯುದ್ಧ ನಡೆದ ಪ್ರಸಂಗದಲ್ಲಿ ಎಲ್ಲ ವಿವರಗಳನ್ನು ಸಿದ್ಧಪಡಿಸುವುದು ಶಕ್ಯವಿಲ್ಲ. ಆದರೆ ನಮ್ಮ ಉದ್ದೇಶದ ಮೊದಲ ಸೂಚಕವೆಂದು, ವೈಸ-ರಾಯರ ಕಾರ್ಯಕಾರಿ ಮಂಡಳದಲ್ಲಿ ಜನತೆಯ ಪ್ರತಿನಿಧಿ ಗಳನ್ನು ಸೇರಿಸಿಕೊಂಡು, ಅವರಿಗೂ ಬೇರೆಬೇರೆ ಖಾತೆಗಳ ಆಡಳಿತೆಯ ಅಧಿಕಾರವನ್ನು ಒಪ್ಪಿಸಲಾಗುವುದು. ಅದ ರಂತೆ ಯುದ್ಧಕಾರ್ಯದಲ್ಲಿ ಭಾಗವಹಿಸಲು ಜನತೆಯ ಮುಂದಾಳುಗಳನ್ನೊಳಗೊಂಡ ಒಂದು ಯುದ್ಧಸಲಹಾ ಸಮಿತಿಯನ್ನೂ ನಿಯಮಿಸಲಾಗುವುದು. ಈ ಎರಡೂ ಸಮಿತಿಗಳು, ಯುದ್ಧ ಮುಗಿದನಂತರ ಸೇರಬಹುದಾದ ಘಟನಾಸಮಿತಿಯ ಘಟಕಗಳಾಗುವುವು.

ಅಮೇರಿ:— ಸದ್ಯಕ್ಕೆ ವೈಸರಾಯರೆ ಈ ಸದಸ್ಯರನ್ನು ಆರಿಸು ವರು. ಆದರೆ ಆಯಾ ಪಕ್ಷದವರು ಕೊಟ್ಟ ಪಟ್ಟಿಯ ಲ್ಲಿಯ ಹೆಸರುಗಳನ್ನೆ ಆರಿಸಲು ಆತಂಕವಿಲ್ಲ. ಕಾರ್ಯ-ಕಾರಿಮಂಡಳದ ಹೆಚ್ಚಿನ ಸದಸ್ಯರು ಈಗಿದ್ದ ಸದಸ್ಯರಂತೆ ತಮಗಧೀನವಾದ ಖಾತೆಗೆ ಪೂರ್ಣ ಅಧಿಕಾರಿಗಳಾಗು ವರು. ಈ ಎಲ್ಲ ಸದಸ್ಯರೂ ವೈಸರಾಯರಿಗೆ ಹೊಣೆ ಗಾರರು; ಯಾಕೆಂದರೆ ಇವರು ಶಾಸನಸಭೆಗಳಿಗೆ ಹೊಣೆ ಗಾರರಾಗಬೇಕಾದರೆ ಹಿಂದೆ ಎಂದೋ ಚುನಾಯಿಸಿದ ಕೇಂದ್ರ ಶಾಸನಸಭೆಗಳ ಮತ್ತೊಂದು ಚುನಾವಣೆಯಾಗ ಬೇಕಾಗುವುದು. ಇದರಿಂದುದ್ಭವಿಸಬಹುದಾದ ಘಟನಾತ್ಮಕ ವಿವರಗಳನ್ನೆಲ್ಲ ನಡೆಯಿಸಬೇಕಾಗುವುದು. ಇದರೆ ಇದು ಅಂತಹ ಕೆಲಸಕ್ಕೆ ಸಮಯವಲ್ಲ.

(೩) ವೈಸರಾಯ:— ಅಲ್ಪಸಂಖ್ಯಾಕರಿಗೆ ಅನ್ಯಾಯವಾಗದಂತೆ ನೋಡುವುದು ನಮ್ಮ ಇತಿಹಾಸಪ್ರಾಪ್ತ ಹೊಣೆ ಯಾಗಿದೆ.

ಅಮೇರಿ:— ತಥಾಸ್ತು.



ನಿಮ್ಮದು
ಯಾಕೆ
ಆಗಬಾರದು ?

ನಿಮಗೆ ನೆಟ್ಟಗಾದ ಕಾರಣ ಒಂದೇ. ಅಂದರೆ ಗುಣಪಡುವ ಆಶೆಯಿಂದ 'ನೀವು ಇಲ್ಲಿಯವರೆಗೆ ದೊರಕಿಸಿದ ಉಪಾಯಗಳೆಲ್ಲ ನಿರುಪಯೋಗಿಯಾಗಿದ್ದುವು. 'ಪುರೋಹಿತ ಶ್ವಾಸಹಾರಿ' ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯು ವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೆ, ಬೇರುಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದನ್ನು ತೆಗೆದುಕೊಳ್ಳಹತ್ತಿದ ಕೂಡಲೆ ಕೆಮ್ಮು ನಿಲ್ಲುವುದು, ಶ್ರಮ ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ, ಪಚನ ಕ್ರಿಯೆಯು ನೆಟ್ಟಗಾಗುವುದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸವು ಗಟ್ಟಿಮುಟ್ಟಾಗಿ, ದಮ್ಮು ಹೆಸರುಳಿಯದಂತೆ ನೆಟ್ಟಗಾಗುವುದು.

ಪುರೋಹಿತ ಶ್ವಾಸಹಾರಿಯು ೪ ಔ. ೬ ಔ. ಮತ್ತು ೧೨ ಔ. ಬಾಟ್ಲಗಳಲ್ಲಿ ಕ್ರಮವಾಗಿ
೨–೨ ರೂ. ೪–೧೨ ರೂ. ೬–೮ ರೂ. ಗಳಿಗೆ ಎಲ್ಲ ಕಡೆಗೆ ಸಿಗುವುದು.

ತರಿಸಿಕೊಳ್ಳುವ ವಿಳಾಸ:—
ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ.
ಇಲ್ಲವೆ ಮುಂಬಯಿ ಸೋಲ ಏಜಂಟರು:
ವನಮಾಳಿ, ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ, ಮುಂಬಯಿ.

ದಮ್ಮಿಗೆ
ಯಶಸ್ವಿಯಾದ
ಡಾಕ್ಟರರ
ಉಪಾಯವು.



ಪ್ರಾಜ್ಞೆ ಮತ್ತು ವಿಮರ್ಶೆ

ಒಂದು ದೃಷ್ಟಿಯಿಂದ ನೋಡಿದರೆ ವೈಸರಾಯರ ಘೋಷಣೆ ಯಲ್ಲಿ ಹೊಸತು ಏನೂ ಇಲ್ಲ. ಇದಲ್ಲದೆ ಕಾಂಗ್ರೆಸು ಮಂಡಿಸಿದ ಬೇಡಿಕೆಗೆ ಉತ್ತರವಾಗಿ ನಕಾರವೂ ಇಲ್ಲ ಚಕಾರವೂ ಇಲ್ಲ. ಅಲ್ಲಲ್ಲಿ ಹಿಂದೀಯರ ಸ್ವಾಭಿಮಾನಕ್ಕೆ ನೋವನ್ನುಂಟುಮಾಡುವಂ ತಹ ಮಾತುಗಳ ಚರ್ವಿತಚರ್ವಣವಿದೆ. ಉದಾಹರಣೆಗಾಗಿ, 'ಸ್ವಾತಂತ್ರ್ಯಕ್ಕೆ ಬೇಕಾಗುವ ಪಕ್ಷಗಳ ಪರಸ್ಪರ ಸೌಹಾರ್ದವು ಭಾರತದ ರಾಜಕಾರಣದ ಪಕ್ಷಗಳಲ್ಲಿಲ್ಲ'ಎಂಬ ಮಾತಿದೆ. ಇದರರ್ಥ ವೇನು? ಅಂತಹ ಸೌಹಾರ್ದ ನೆಲಸುವವರೆಗೆ ಭಾರತಕ್ಕೆ ಸ್ವಾತಂ ತ್ರ್ಯವೇ ಸಲ್ಲದು ಎಂದೋ? ಹಾಗಿದ್ದರೆ 'ಯುದ್ಧದ ತರುವಾಯು, ಆದಷ್ಟು ತೀವ್ರ, ಇಂಗ್ಲಂಡದಲ್ಲಿದ್ದಂತಹ ಸ್ವಾತಂತ್ರ್ಯವನ್ನೆ ಭಾರತೀಯರು ಉಪಭೋ ಗಿಸಲಿ'ಎಂಬ ಉದ್ದೇಶ ಸಾರುವುದರಲ್ಲಿ ಅರ್ಥವೇ ನಿದೆ? ಅತ್ತ ಯುದ್ಧ ಮುಗಿಯುವುದು, ತತ್‌ಕ್ಷಣ ಇತ್ತ ನಮ್ಮ ಪಕ್ಷಗಳಲ್ಲಿ ಸೌಹಾರ್ದ ಬೆಳೆಯು ವುದು ಎಂಬ ಅಭಿಪ್ರಾಯವೆ? ಅದರಂತೆಯೆ ಅಲ್ಪಸಂಖ್ಯಾಕರನ್ನು ಮುದುಕನ ಚಿಕ್ಕ ಹೆಂಡತಿಯಂತೆ ಇಷ್ಟೊಂದು ಮೇಲಿಂದ ಮೇಲೆ ತಲೆಯ ಮೇಲೆ ಕುಣಿಸುವುದೇಕೆ? ಅಲ್ಪಸಂಖ್ಯಾಕರು ಯಾವಾಗ ಒಂದು ರಾಜಕೀಯ ಪಕ್ಷವೆನಿಸಿಕೊಂಡು ಘಟನೆಯಲ್ಲಿ ಸ್ಥಾನ ಪಡೆಯುವರು? ಭಾರತದ ಪ್ರತಿ ಯೊಂದು ಜಾತಿಯಲ್ಲಿ ಕಾಂಗ್ರೆಸಿನ ಅನು ಯಾಯಿಗಳಿದ್ದಾರೆ, ರಾಜಕೀಯ ಪಕ್ಷವೆಂದರೆ ಅದೊಂದೆ; ಅದರಂತೆ ಮಿಕ್ಕ ಪಕ್ಷಗಳಲ್ಲಿ ಆಯಾ ಜಾತಿಯ ಜನರೇ (ಅದೂ ಎಲ್ಲರಲ್ಲ) ಇದ್ದಾರೆ. ಅಂತೂ ಬ್ರಿಟಿಶರು ನಮ್ಮ ನಮ್ಮ ಜಾತಿಗಾಗಿ ನಮಗೆ ಇಂತಿಷ್ಟು ಪ್ರಮಾಣದ ರಕ್ಷಣೆಯನ್ನು ಕೊಡುತ್ತಿದ್ದಾರೆ ಎಂದು ಹೇಳಬೇಕಾಗುವುದು. ಅಲ್ಪಸಂಖ್ಯಾಕರಿಗೆ ಅನ್ಯಾಯವಾಗುವುದು, ಬಹುಮತದ ದಬ್ಬಾ ಳಿಕೆ ನಡೆಯುವುದು ಎಂದು ಹೇಳಲು ಸಾಕಷ್ಟು ಉದಾಹರಣೆಗಳಿವೆಯೆ?

ಹೀಗೆ ಅನೇಕ ಅಸಮಾಧಾನಕಾರಕ ಮಾತುಗಳನ್ನು ಆ ಘೋಷಣೆಯಲ್ಲಿ ಕಾಣ ಬಹುದು. ಆದರೆ ಅಷ್ಟಕ್ಕೆ ಕಾಂಗ್ರೆಸು ಅಧಿಕಾರಯೋಗವನ್ನು ನಿರಾಕರಿಸಬೇಕಾಗಿರ ಲಿಲ್ಲ. 'ಸಂಪೂರ್ಣ ಸ್ವಾತಂತ್ರ್ಯವನ್ನು ಹಿಂದುಸ್ಥಾನಕ್ಕೆ ಕೊಡುವೆವು'ಎಂದು ಬ್ರಿಟಿಶರು ಹೇಳುವುದು ಮನುಷ್ಯಧರ್ಮಕ್ಕೇ ಅಶಕ್ಯ ವಾಗಿದೆ. ಆದರೂ 'ಇಂಗ್ಲಂಡದಂತಹ ಸ್ವಾತಂತ್ರ್ಯ' ಎಂದು ಸ್ಟೇಟ್ ಸೆಕ್ರೆಟರಿಯವರು ಧೈರ್ಯದಿಂದ ಹೇಳಿದ್ದಾರೆ. ಇದಲ್ಲದೆ ಅನಿಷ್ಟ ಪ್ರಸಂಗತಿಗಳನ್ನೂ ಜಾತಿಗಳ ರಾಜ್ಯವನ್ನೂ ಹೊಡೆದೋಡಿಸಲು ಯತ್ನಿಸಬೇಕಾದ ಕಾಂಗ್ರೆಸ್ಸು ನಿರಾಕರಣೆ ಯಿಂದ ಅವಕ್ಕೆ ಅವಕಾಶವನ್ನುಂಟುಮಾಡಿದಂತಾಗುವುದು. ಕೊನೆಗೆ ಮುಂದಾಳುಗಳು ಮಂತ್ರಿಯಾಗದೆ 'ಒಂದಾಳು' (ತಾನು ತನ್ನೊಬ್ಬನದೇ ಪ್ರತಿನಿಧಿ ಎನ್ನುವವ)ಗಳ ರಾಜ್ಯ ನಡೆದು ಹೊಣೆಗಾರಿಕೆಯೆ ಇಲ್ಲದ ಪ್ರಸಂಗ ಬರಬಹುದು. ಕಾಂಗ್ರೆಸು ಈಗಲೂ ತನ್ನ ಧೋರಣೆಯನ್ನು ಬದಲಾಯಿಸ ಬಹುದೆಂಬ ಆಶೆ ನಮಗಿದ್ದುದರಿಂದ, ಸದ್ಯಕ್ಕೆ ಇಲ್ಲಿಗೆ ತಡೆಯುವೆವು.

ಕನ್ನಡವೀರರಿಗೆ ಜಯಂತಿಯ ಅಭಿನಂದನೆಗಳು.

★

ಧಾರವಾಡದ ಸುಪ್ರಸಿದ್ಧ ವಕೀಲರೂ ಜಮೀನ್ದಾರರೂ ಹಿಂದೆ ಎಂ. ಎಲ್. ಸಿ. ಗಳಾಗಿದ್ದವರೂ ಆದ ಶ್ರೀ. ದೇಸಾಯಿ ಹನುಮಂತ ರಾಯರ ದ್ವಿತೀಯ ಪುತ್ರರಿರುವರು. ಇವರ ಶಿಕ್ಷಣವೆಲ್ಲ ಧಾರವಾಡದ ಶಾಲೆ-ಕಾಲೇಜುಗಳಲ್ಲಿಯೆ ನಡೆಯಿತು. ಕಾಲೇಜಿನಲ್ಲಿರುವಾಗ ಯುನಿವರ್ಸಿಟಿ ಟ್ರೇನಿಂಗ್ ಕೋರಿನಲ್ಲಿ ಸಾರ್ಜಂಟರಾಗಿದ್ದರು. ಕಾಲೇಜು ಬಿಟ್ಟ ಮೇಲೆ ಎ. ಐ. ಆರ್. ಓ. ದಲ್ಲಿ ಇವರ ಆಯ್ಕೆಯಾಯಿತು. ಈಗ ಹಿಂದುಸ್ತಾನ್ ಸರಕಾರವು ಕರೆದುದರಿಂದ, ಇವರು ಯುದ್ಧಕ್ಕಾಗಿ ಮೊನ್ನೆ ಮೊನ್ನೆಯೆ ಧಾರವಾಡವನ್ನು ಬೀಳ್ಕೊಂಡರು. ಇವರು ಕನ್ನಡ ನಾಡು-ನುಡಿಗಳ ಬಗೆಗೆ ಉಜ್ವಲ ಅಭಿಮಾನಿಗಳಾಗಿರುವರಲ್ಲದೆ ಜಯಂತಿಯ ಆಪ್ತವರ್ಗದವರಲ್ಲೊಬ್ಬರು.

★

ಲೆಫ್ಟನೆಂಟ್ ಆರ್. ಎಚ್. ದೇಸಾಯಿ, ಬಿ. ಎ.

ಲೆಫ್ಟನೆಂಟ್ ಎಂ. ಎಚ್. ಹೊನ್ನಾವರ, ಬಿ. ಎ.

★

ರಿಟಾಯರ್ಡ್ ಡಿ. ವೈ. ಎಸ್. ಪಿ. ಗಳಾಗಿ, ಧಾರವಾಡದಲ್ಲಿಯೆ ನಾಗರಿಕರಾಗಿ ನೆಲಸಿರುವ ಶ್ರೀಮಾನ್ ಹರಿಶ್ಚಂದ್ರ ಹೊನ್ನಾವರ ಇವರ ಹಿರಿಯ ಮಕ್ಕಳಿವರು. ಧಾರವಾಡ-ಪುಣೆಗಳಲ್ಲಿ ಇವರ ಕಾಲೇಜಿನ ಶಿಕ್ಷಣವಾಯಿತು. ಧಾರವಾಡ ಕಾಲೇಜಿನಲ್ಲಿರುವಾಗ ಇವರು ಯುನಿವರ್ಸಿಟಿ ಟ್ರೇನಿಂಗ್ ಕೋರಿನಲ್ಲಿ ಸಾರ್ಜಂಟರಾಗಿದ್ದರು. ಬಳಿಕ ಯುನೈಟೆಡ್ ಟ್ರೇಡರ್ಸ್ (ಲಿವರ ಬ್ರದರ್ಸ್) ಅವರ ಸಾಬೂನಿನ ಕಾರಖಾನೆಯ ಆಫೀಸಿನಲ್ಲಿ ಇವರು ಕೆಲಸ ಮಾಡುತ್ತಿದ್ದರು. ಎ. ಐ. ಆರ್. ಓ. ದಲ್ಲಿ ಆಯ್ಕೆಗೊಂಡುದರಿಂದ ಇವರೂ ಯುದ್ಧಕ್ಕೆ ಹೋದರು. ಇವರೂ ಕನ್ನಡಿಗರು, ಕನ್ನಡದ ಅಭಿಮಾನಿಗಳು !

★

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೦—೦ .... ವ್ಹಿ. ಪಿ. ಯಿಂದ ೩-೫-೦ .... ಬಿಡಿಸಂಚಿಕೆಗೆ ೪ ಆಣೆ

ಸಂಪಾದಕರು :

ಪಾಟೀಲ ಮಾಧವರಾಯರು ಬೆಟಗೇರಿ ಕೃಷ್ಣಶರ್ಮರು

೩ನೆಯ ವರ್ಷ	ಅಕ್ಟೋಬರ್ ೧೯೪೦	೬ನೆಯ ಸಂಚಿಕೆ

ಮುಖ್ಯವಿಷಯಗಳ ಪರಿವಿಡಿ

ಸರಸ್ವತಿಯ ವೀಣಾನಾದ (ಕವನ)	ಶ್ರೀ. ಗಂಗಾಧರ ಬಿ. ಶಾಸ್ತ್ರಿ ಕೊಪ್ಪಳ	೨೮೩
ಸಂಪಾದಕೀಯ	ಸಂಪಾದಕರು	೨೮೪
ಮಂಗನ ಮಲ್ಲಿನಾಥತನ	ಶ್ರೀ. ' ಮಲ್ಲಿನಾಥ '	೨೮೫
ಯುದ್ಧಕಾಲದಲ್ಲಿಯ ನಾಯಿಗಳ ಬದುಕು (ಪರಿಚಯಾತ್ಮಕ) ..	ಶ್ರೀ. ಚಾರ್ಮುನಿಯ ' ತಂತ್ರಿ '	೨೮೭
ಸಮವಸ್ತ್ರ ಅಲ್ಲವೆ ವಿಷಮವಿವಾದ (ಏಕಾಂಕದೃಶ್ಯ) ..	ಶ್ರೀ. ಪಾಟೀಲ ಹನುಮಂತರಾಯರು ಎಂ. ಎ.	೨೯೦
ಕೃತಕೃತ್ಯತೆಯ ಮೂಲ (ಜೀವನಕಲಾವಿಚಾರ)	ಶ್ರೀ. ವಿಶ್ವನಾಥ ಹೆಗಡೆ, ಮುಂಬಯಿ	೨೯೬
ಸಾರಾಸಾರ ವಿಚಾರ (ಕವನ)	ಶ್ರೀ. ' ಶ್ರೀಧರ ' ಪುಣೆ	೨೯೮
ಮಗ್ನತೆ . . ಆಹುದು ಮಗ್ನತೆಯೆ ! (ಹರಟೆ)	ಶ್ರೀ. ಎನ್. ಕೆ. ಕುಲಕರ್ಣಿ ಎಂ. ಎ., ಬಿ. ಟಿ.	೨೯೯
ಲೋಹಚುಂಬಕ ಕಣಗಳು (ಪ್ರಲಯವಿಜ್ಞಾನ)	ಶ್ರೀ. ಸ. ವೆ. ಪೂಜಾರ	೩೦೧
ಅಪರ ತಾಂಬೂಲ (ಸಣ್ಣಕತೆ)	ಶ್ರೀ. ಬಿ. ಕೆ. ರಾಮಚಂದ್ರರಾವ್, ಎಲ್‌ಎಲ್. ಬಿ.	೩೦೪
ಜನಸಂಖ್ಯೆಯ ಸಮಸ್ಯೆ (ಆರ್ಥಿಕ ವಿಚಾರ)	ಶ್ರೀ. ಮಿರ್ಜಿ ಅಣ್ಣಾರಾಯರು, ಸೇಡಬಾಳ	೩೦೯
ಸುದ್ದಿಯನ್ನು ಪೂರೈಸುವ ಸಂಸ್ಥೆಗಳು (ಪರಿಚಯಾತ್ಮಕ) ..	' ಜಯಂತಿಯ ಜೇನ್ನೊಣ '	೩೧೧
ಬೆಳಿಯಾ ಸಂತೆಗೆ ಹೋದ (ಜೀವನಚಿತ್ರ)	ಶ್ರೀ. ' ಭಾರತೀಸುತ ' ಮೈಸೂರು	೩೧೪
ವ್ಯವಹಾರ ಪರಿಜ್ಞಾನ (ಜೀವನಕಲಾತ್ಮಕ)	ಶ್ರೀ. ಬಿದರಕುಂದಿ ವೆಂಕಟರಾಯರು	೩೨೦
ಕಿಶೋರಿಲಾಲ ಮಶ್ರುವಾಲಾ (ವ್ಯಕ್ತಿಪರಿಚಯ)	ಶ್ರೀ. ಸಿ. ಕೃಷ್ಣಶರ್ಮ	೩೨೨
ವಿಮರ್ಶಕರುಗಳ ಕರ್ತವ್ಯ (ವಿಮರ್ಶಾವಿಚಾರ)	ಶ್ರೀ. ಎಮ್. ಪಿ. ಭಾಗವತ, ಮುಂಬೈ	೩೨೫
ಹೆಂಗುಸರಿಗಾಗಿ ವ್ಯಾಯಾಮ (೩-ನೆಯ ರೀತಿ)	ಶ್ರೀ. ಎಸ್. ಜಿ. ಬಾಪಟ ಬಿ. ಪಿ. ಎಚ್. ಸಿ.	೩೨೭
ಪುಸ್ತಕವಿಮರ್ಶೆ	ಬೇರೆ ಬೇರೆಯ ವಿಮರ್ಶಕರು	೩೨೮
ಸಾದರ ಸ್ವೀಕಾರ	.. ..	೩೩೨
ನಗೀಗೆ ನೇವಿದ್ಯ	ಶ್ರೀ. ' ಸಕಲೀ ನಾರಾಯಣಾಚಾರಿ '	೩೩೩
ನಾಲಗಿ ನಿಟ್ಟಿನ ನೋಟ	' ನಿರೀಕ್ಷಕರು '	೩೩೬



೩ನೆಯ ವರ್ಷ | ಅಕ್ಟೋಬರ್ ೧೯೪೦ | ೬ನೆಯ ಸಂಚಿಕೆ

ಸರಸ್ವತಿಯ ವೀಣಾನಾದ

ಶ್ರೀ. ಗಂಗಾಧರ ಬಿ. ಶಾಸ್ತ್ರಿ

ಸರಸ್ವತೀ ದೇವಿ ನಿನ್ನ ವೀಣೆ ನುಡಿಯೆ ತನನನ,
ತನು-ಮನದಲಿ ತುಂಬುತಿಹುದೆ ನವ್ಯ-ದಿವ್ಯಜೀವನ!
ಬೆಳೆಯುತಿಹುದು 'ತನ್ನತನ' ಬೆಳಗುವಾ ಚಿರಂತನ! ||೧||

ಎಲ್ಲಿ ಇದೆ ಶಾಂತಿ ಸುಧೆ ಉಂಟುವೆನದನೆನ್ನುತ,
ಅದರ ತೃಷೆಗೆ ತಾಳದೆ ಬಗೆ ಗಾಳಿಗುದುರೆಯೇರುತ,
ಹುಡುಕುತಿದೆ 'ಎಲ್ಲಿ ಶಾಂತಿ ಎಲ್ಲಿ ಮುಕ್ತಿ' ಎನ್ನುತ! ||೨||

ಎಲ್ಲಿಯು ಬೆಳೆಬೆಳೆದ ಮೋಹ ಎಳೆಯುತಿಹುದು ಕಾಡಿಗೆ;
ಹೊನ್ನು ಹೆಣ್ಣು ಕರೆಯುತಿಹವು, 'ಬಾರೊ ನಮ್ಮ ಪಾಡಿಗೆ!
ಇಹದ ಸೊಗವನುಣಲು ಇಲ್ಲಿ ಬಾ ನವಿಷ್ಟಾ ಬಾಡಿಗೆ!' ||೩||

ಹೋದೆಡೆಯಲು ಹೊಗೆಯನುಂಡು ಕಹಿಗೊಂಡಿತು ನಾಲಗೆ!
ಹೊಟ್ಟೆಯೊಳಗೆ ಹಸಿವುಬೆಂಕಿ ಹೊತ್ತಿ ಹಡೆದಿತೇಳಿಗೆ!
ಎಂದೆನಾಗ 'ಕರೆದೊಯ್ಯೆಲೆ ಶಾಂತಿ-ಸುಖದ ಬಾಳಿಗೆ!' ||೪||

ಎಲ್ಲೆಲ್ಲಿಯು ಅಲೆದು ಅಲೆದು ದಾರಿಗಾಣದಾದೆ!
ಸಿರಿಯ ಶಿಖರವೇರಿ ನಿಂತು ಸುಖವ ಪಡೆಯದಾದೆ!
ಮಡದಿ-ಮಕ್ಕಳೊಡನೆ ಕಲೆದು ಶಾಂತಿ ಸಿಗದೆ ಹೋದೆ! ||೫||

ಇಂತಿರುತಿರೆ ಎಂತೊ ಬಂದು ಕೇಳಿತಸಹನಾದ—
ನನ್ನ ದೈವರೇಷೆ ತಂದಿತಲ್ಲಿಂದಲೊ ಸ್ವಾದ!
ಕರೆಯುತಿಹುದು ನಾದವು 'ಬಾ ಇಲ್ಲಿಹುದಾಮೋದ!' ||೬||

ಮನದ ಮಾಂದ್ಯವಳಿಯುತಿಹುದು ನೋಡು ದಿವ್ಯಗಾನ!
ಬೆಳೆಯುತಿಹುದು ಬುದ್ಧಿ-ಭಾವ ನಿತ್ಯ ನಿತ್ಯ ನೂತನ!
ಮಂತ್ರದಂತೆ ತಾನೆ ತಾನು ಮಾಯೆಗೊಳಿಸಿತೆನ್ನ! ||೭||

ವಿರಸವೆಲ್ಲ ಸರಸವಾಯ್ತು ನಿನ್ನ ನುಡಿಯ ಮಹಿಮೆಗೆ;
ಬೇವು ಬೆಲ್ಲವಾಯ್ತು ದೇವಿ ನಿನ್ನ ದನಿಯ ಶಕ್ತಿಗೆ;
ಮನದ ಮಾಲಿನ್ಯವಳಿಯಿತಮ್ಮ ನಿನ್ನ ಯುಕ್ತಿಗೆ! ||೮||

ನಿನ್ನನುಳಿಯೆ ಬಾಳಿದು ಬರಿ ಮೂಕಭಾವಯಂತ್ರ!
ಸುತ್ತುತಿಹುದು ಸುಖಕೆ ಮಾತ್ರ ಭ್ರಮಿಸಿ ಭ್ರಮರಮಂತ್ರ...
ಪಠಿಸುತ ರೊಂಯ್‌ಗುಡುತಲಿಹುದು ಈ ಬಾಳಿನ ಜಂತ್ರ! ||೯||

ದೇವಿ ನಿನ್ನ ಗಾನದಿಂದೆ ನನ್ನ ಜೀವ ಪಾವನ—
ವಾಗುತಿಹುದು; ಹೃದಯ ಹಾಗೆ ಹಿಗ್ಗುತಿಹುದು ಕ್ಷಣ ಕ್ಷಣ!
ಮನಸು ಮೈಯನುಳಿದು ಮೇಲಕೇರಿಸುತಿದೆ ಜೀವನ! ||೧೦||

ತಾಯೆ ನಿನ್ನ ಕೃಪೆಯ ನೀಡು ಮಾನವಮನ-ಮಡಿಲಲಿ!
ಬಂಧ ತೊಂದರೆಗಳ ಮುಕ್ತ ತನ್ನ ತಾನು ತಿಳಿಯಲಿ!
ತನ್ನ ತಾನು ತಿಳಿದುಕೊಂಡು ಚಿರಶಾಂತಿಯ ಗಳಿಸಲಿ! ||೧೧||

ಕ. ವಿ. ವ. ಸಂಘದ ಚಿನ್ನದ ಹಬ್ಬ

ಕ್ರಿ. ಶ. ೧೮೯೦ ನೆಯ ಇಸ್ವಿಯಲ್ಲಿ ಸ್ಥಾಪಿತವಾದ ಕರ್ನಾಟಕ ವಿದ್ಯಾವರ್ಧಕ ಸಂಘವು, ಕರ್ನಾಟಕತ್ವದ ಭಾವನೆಯನ್ನು ಪೋಳಿಯಿಸಿ ಬಳೆಯಿಸಲು, ೨೦-೨೫ ವರ್ಷಗಳ ವರೆಗೆ ಎಡೆಬಿಡದೆ, ಜಾಗೃತಭಾವದಿಂದ ಕೆಲಸಮಾಡಿತು. ಅದರ ಫಲವಾಗಿ ಕನ್ನಡಿಗರಿಗೆ ತಾವು ಕನ್ನಡಿಗರೆಂಬ ಕಲ್ಪನೆ ಉದಯವಾಯಿತು. ಹೊಸ ಕನ್ನಡ ಗ್ರಂಥಗಳ ಹುಟ್ಟಿಗೆ ಬಂಜರುಭೂಮಿಯಂತಿದ್ದ ಉತ್ತರ ಕರ್ನಾಟಕದಲ್ಲಿ, ಅಲ್ಲೊಬ್ಬ ಇಲ್ಲೊಬ್ಬ ಗ್ರಂಥಕಾರರು ತಲೆದೋರುವಂತೆ ಮಾಡಿತು. ಛಿನ್ನವಿಚ್ಛಿನ್ನವಾಗಿ ಹೋಗಿ, ಹೆಸರು ಕೂಡ ಸ್ಮೃತಿಪಥದಿಂದ ಅಳಿಸಲು ಬಂದಿದ್ದ ಕರ್ನಾಟಕದಲ್ಲಿ, ಸಾಂಸ್ಕೃತಿಕಸಂಬಂಧವನ್ನು ಹಲವು ಮುಖದಿಂದ ಬಳೆಯಿಸಿ, ಹೊಸ ಕನ್ನಡನಾಡಿನ ಕಟ್ಟಡಕ್ಕೆ ಅಡಿಗಲ್ಲನ್ನು ಹಾಕಿತು. ಈ ಸಂಘದ ಸ್ಫೂರ್ತಿಯೆ ಇನ್ನಿಷ್ಟು ವ್ಯಾಪಕವಾದ ದೃಷ್ಟಿಯನ್ನಿರಿಸಿಕೊಂಡು, ಅಖಿಲಕರ್ನಾಟಕ ಸಾಹಿತ್ಯಪರಿಷತ್ತಾಗಿ ಪರಿಣಮಿಸಿತು. ಒಂದೇ ಒಂದು ಮಾತಿನಲ್ಲಿ ಹೇಳಬೇಕೆಂದರೆ, ಕನ್ನಡಿಗರಲ್ಲಿ ಆತ್ಮಜಾಗೃತಿಯನ್ನು ಹುಟ್ಟಿಸಲು ಹೊರಟ—ಮೊಟ್ಟಮೊದಲನೆಯ ಒಂದೇ ಒಂದು—ಸಂಸ್ಥೆಯೆಂದರೆ, **ಕರ್ನಾಟಕ ವಿದ್ಯಾವರ್ಧಕ ಸಂಘವು.**

ಸಂಘದ ೨೫ ವರ್ಷದ ಕಾರ್ಯೋತ್ಸಾಹಕ್ಕೆ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸಂಸ್ಥಾಪನೆಯಿಂದ ಅಡೆ-ತಡೆ ಒದವಿತೆಂಬ ನಿಷ್ಠುರ ಸತ್ಯವನ್ನು ಹೇಳದಿದ್ದರೆ ನಿರ್ವಾಹವಿಲ್ಲ. ಈ ಅಡೆ-ತಡೆ ಒದಗುವುದಕ್ಕೆ ಕಾರಣರು ಮೈಸೂರಿನ ಕನ್ನಡಿಗರಲ್ಲ; ಉತ್ತರ ಕರ್ನಾಟಕದ ಕನ್ನಡಿಗರೆ. ಏಕೆಂದರೆ ಮೊದಲಿನಿಂದಲೂ ಕಾರ್ಯಮಾಡುತ್ತ ಬಂದಿರುವ ಕರ್ನಾಟಕ ವಿದ್ಯಾವರ್ಧಕ ಸಂಘದ ಅಭಿವೃದ್ಧಿಯ ಬಗೆಗೆ ಉತ್ತರ ಕರ್ನಾಟಕದ ಸುಶಿಕ್ಷಿತ ವರ್ಗದ ಲಕ್ಷ್ಯ ಸಾಕಷ್ಟು ಸಿಕ್ಕದಾಯಿತು. ಮೈಸೂರು ಮಹಾರಾಜರ ಔದಾರ್ಯದ ನೆರವು ಸಿಕ್ಕಿದುದರಿಂದ, ಕರ್ನಾಟಕ ಸಾಹಿತ್ಯಪರಿಷತ್ತಿನ ಪ್ರಭಾವ ದಿನದಿನಕ್ಕೆ ಬಳೆಯತೊಡಗಿತು. ಹೊಸದರ ಬೆನ್ನನ್ನು ಹತ್ತುವ ಮಾನವಸಹಜ ಸ್ವಭಾವಾನುಸಾರವಾಗಿ, ಉತ್ತರ ಕರ್ನಾಟಕಸ್ಥರೂ ಪರಿಷತ್ತಿನ ಅಭಿವೃದ್ಧಿಯನ್ನೆ ಹೆಚ್ಚಾಗಿ ಅಪೇಕ್ಷಿಸಿ ಅದರ ಬೆನ್ನನ್ನೆ ಹಿಡಿದು ಹೊರಟರು. ಈ ಸಂದರ್ಭದಲ್ಲಿಯೆ ಸಂಘದ ಕಾರ್ಯೋತ್ಸಾಹ ಕುಗ್ಗಿತು. ಏಕೆಂದರೆ ಹಿಂದಿನ ಉತ್ಸಾಹದ ಭರದಲ್ಲಿ, ಒಳ್ಳೆಯ ಭವಿಷ್ಯದ ಆಶೆಯಿಂದ—ಬಿತ್ತಿದರೆ ಬೆಳೆ ಬಂದೇ ಬರುವುದೆಂಬ ನಂಬುಗೆಯಿಂದ—ಸಂಘವು ಸಾಲ-ಸೂಲ ಮಾಡಿ ತನಗಾಗಿಯೆ ಒಂದು ಕಟ್ಟಡವನ್ನು ಕಟ್ಟಿಸಿಕೊಂಡಿದ್ದಿತು. ಉತ್ತರ ಕನ್ನಡಿಗರ ಕಣ್ಣುಗಳು ಸಂಘದ ಕಡೆಯಿಂದ ಬೇರೆ ಕಡೆಗೆ ತಿರುಗಿದೊಡನೆಯೆ ಉತ್ಸಾಹವನ್ನು ಕಳೆದುಕೊಂಡ ಸಂಘವು, ಸಾಲದ ಹೊರೆಯಿಂದ ನೆಲವನ್ನೆ ಹಿಡಿಯಿತು. ಈ ಸಾಲತೀರಿಸಬೇಕೆಂದು ನಡುನಡುವೆ ಒಂದೆರಡು ಸಣ್ಣಪುಟ್ಟ ವೈಯಕ್ತಿಕ ಪ್ರಯತ್ನಗಳು ನಡೆದುವಾದರೂ, ಜನಸಾಮಾನ್ಯರ ಕಣ್ಮನಗಳಲ್ಲಿ ಬಿ... ಮೂಡುವಷ್ಟು ಬಲವಾದ ಸಾಮೂಹಿಕ ಪ್ರಯತ್ನಗಳೇನು ನಡೆಯಲ್ಲಿ... ಅಲ್ಲದೆ ಕನ್ನಡನಾಡಿನಲ್ಲಿ ಎಲ್ಲ ಕಡೆಗೂ ಸಮ್ಮೇಳನಗಳನ್ನು ನೆರೆಯಿ... ಕನ್ನಡಿಗರ ಮನದಲ್ಲೆಲ್ಲ ಕರ್ನಾಟಕಸಾಹಿತ್ಯಪರಿಷತ್ತು ಮನೆಮಾ... ಕೊಂಡು ಬಿಟ್ಟಿದ್ದಿತು. ಇಂತಹ ರಾಜಮಾನ್ಯ ಸಂಸ್ಥೆ ಅಖಿಲ ಕನ್ನಡಿಗ... ದೆಂದು ಕೆಲಸಮಾಡಲು ಉತ್ಸಾಹದಿಂದ ಮುಂದುವರಿಯುತ್ತಿರುವಾ... 'ಋಣರುಜೆ' ಯಿಂದ ಹಾಸಿಗೆಹಿಡಿದು ಮಲಗಿದ್ದ ಸಂಘವನ್ನು ಯಾ... ಕೇಳಬೇಕು? ಎಂತಲೆ ಅದರ ಹೆಸರಿಂದು ಹುಟ್ಟಿದ ಪ್ರದೇಶದಲ್ಲಿಯೆ ಅಜ್ಞಾತವಾಗಿದೆ; ಇಷ್ಟೇ ಅಲ್ಲ, ಅದಕ್ಕೊಂದು ಕಟ್ಟಡವಿರದಿದ್ದ... ಇಷ್ಟರಲ್ಲಿಯೆ ಸಂಘದ ಶ್ರಾದ್ಧಗಳು ಎಷ್ಟೋ ಆಗಿಹೋಗುತ್ತಿದ್ದುವೇ... ನಿಜವನ್ನುಹೇಳಿದರೆ, ಯಾರೂ ಕೆರಳುವ ಕಾರಣವಿಲ್ಲ. ವಿದ್ಯಾವರ್ಧ... ಸಂಘದ ಐವತ್ತುವರುಷದ ಬಾಳಿಕೆಗೆ ಅದರ ಸಂಸ್ಥಾಪಕರ ಸದಿಚ್ಛೆಯ... ಪುಣ್ಯದಷ್ಟೇ, ಅದಕ್ಕೊಂದು ಒಳ್ಳೆಯ ಕಟ್ಟಡವನ್ನು ಕಟ್ಟಿಸಿದವ... ಸತ್ಕೃತಿಯೂ ಮುಖ್ಯ ಕಾರಣವಾಗಿದೆ. ಕನ್ನಡದ ಭಾಗ್ಯವಿಧಾತ... ಸಂಘದಿಂದ ಇನ್ನೂ ಯಾವುಯಾವುವೊ ಕನ್ನಡಿಗರ ಅಭ್ಯುದಯದ ಕಾರ್ಯ ಮಾಡಿಸುವವನಿದ್ದಾನೆಯೇನೊ! ಈಗ ಮತ್ತೆ ಸಂಘ ನವಜೀವನದ ಉಸಿರಾಟವನ್ನು ನಡೆಯಿಸಿದೆ. ತಲೆಯ ಮೇಲಿನ ಸಾಲದ ಹೊರೆಯನ್ನು ಕನ್ನಡಿಗರೆಲ್ಲ ಸೇರಿ ಇಳುಹುವರೆಂಬ ವಿಶ್ವಾಸ ಅದಕ್ಕೆ ಕಾರ್ಯೋತ್ಸಾಹವನ್ನು ತುಂಬುತ್ತಲಿದೆ. ಕನ್ನಡಿಗರ ಅಭ್ಯುದಯಕ್ಕಾಗಿ ಒಂದೆ ಒಂದು ಸಂಸ್ಥೆಯ ಕಾರ್ಯಬಲ ಸಾಲದೆಂದೂ ಅಲ್ಲಲ್ಲಿ ಪ್ರಾದೇಶಿಕ ಸಂಸ್ಥೆಗಳು ತಲೆಯೆತ್ತಿ, ಅಲ್ಲಲ್ಲಿಯ ಜನರ ಅಭಿರುಚಿ-ಸಂಸ್ಕೃತಿಗಳಿಗನುಸಾರವಾಗಿ ಕಾರ್ಯಮಾಡುತ್ತಿದ್ದರೆಯೆ ಅಖಿಲ ಕರ್ನಾಟಕದ ಉದ್ಧಾರವಾಗುವುದೆಂದೂ ಉಂಟಾದ ಹೊಸ ತಿಳಿವಳಿಕೆ, ಸಂಘಕ್ಕೆ ಹೊಸಶಕ್ತಿಯನ್ನು ಒದವಿಸಿಕೊಟ್ಟಿದೆ. ಉತ್ತರ ಕರ್ನಾಟಕದಲ್ಲಿದ್ದು ಕರ್ನಾಟಕ ವಿದ್ಯಾವರ್ಧಕ ಸಂಘವು ಹೆಚ್ಚು ಉತ್ಸಾಹದಿಂದ ಕಾರ್ಯಮಾಡಬೇಕೆಂದರೆ, ಅದು ಕನ್ನಡ ಸಾಹಿತ್ಯಪರಿಷತ್ತಿಗೆ ಪ್ರತಿಸ್ಪರ್ಧಿಯಾಗಿ ನಿಲ್ಲಬೇಕಾಗಿಲ್ಲ; ಸಹಕರಿಸಿ ಕಾರ್ಯಮಾಡುವ ಸೋದರಸಂಸ್ಥೆಯಾಗಿ ಕೆಲಸಮಾಡಬೇಕಾಗಿದೆ. ಕರ್ನಾಟಕದಲ್ಲಿ ಯಾವ ಸಂಸ್ಥೆ ಹೊರಟು ಕಾರ್ಯಮಾಡಬೇಕಾದರೂ, ಅದು ಕನ್ನಡಿಗರ ಅಭ್ಯುದಯ—ಶ್ರೇಯಸ್ಸುಗಳಿಗಾಗಿರುವುದು. ಎಲ್ಲ ಸಂಸ್ಥೆಗಳ ಗುರಿಯೂ ಒಂದೆ ಆಗಿರುವಾಗ ಸ್ಪರ್ಧೆ, ಈರ್ಷೆಗಳ ಮಾತು ಬರುವುದೆಲ್ಲಿ. ವೈಯಕ್ತಿಕ ಅಧಿಕಾರ, ಆಶೆ, ಮಹತ್ವಾಕಾಂಕ್ಷೆಗಳಿರುವಲ್ಲಿಯೆ ಈ ಸ್ಪರ್ಧೆ, ಈರ್ಷೆ, ಮತ್ಸರ, ದ್ವೇಷಗಳು ಎಡೆಯಾಟವಾಡಬಹುದಿಷ್ಟೇ!

ಉತ್ತರ ಕರ್ನಾಟಕದಲ್ಲಿ ಹುಟ್ಟಿದ— ಕನ್ನಡದ ಎಲ್ಲ ಸಂಸ್ಥೆಗಳಿಗಿಂತಲೂ ಹಿರಿಯದಾದ— ಕರ್ನಾಟಕ ವಿದ್ಯಾವರ್ಧಕ ಸಂಘವು ಪುನರುಜ್ಜೀವನಗೊಂಡು, ಮತ್ತೆ ಅಖಿಲಕರ್ನಾಟಕದ ವ್ಯಾಪಕದೃಷ್ಟಿಯಿಂದ ಕಾರ್ಯಮಾಡುತ್ತ ಮುಂದುವರಿಯಬೇಕೆಂದು, ಕರ್ನಾಟಕದ ಶುಭಭವಿಷ್ಯಚಿಂತಕರಾದ ಹಲವರಿಗೆ ಇಂದು ತುಂಬ ಎನಿಸುತ್ತಲಿದೆ. ಹೀಗೆ ಎನಿಸುವ ಕಾಲದಲ್ಲಿಯೆ ಸಂಘಕ್ಕೆ ೫೦ ವರ್ಷಗಳು ತುಂಬಿದ

(೨೯೦ನೆಯ ಪುಟ ನೋಡಿರಿ.)

ಅಧ್ಯಕ್ಷಪದಕ್ಕೆ ಮುದ್ದಾದ ಆಯ್ಕೆ

ಧಾರವಾಡದಲ್ಲಿ ಸೇರಲಿರುವ ಸಾಹಿತ್ಯಸಮ್ಮೇಳನಕ್ಕೆ ಅಧ್ಯಕ್ಷರು ಯಾರಿರಬೇಕೆಂಬ ಬಗ್ಗೆ ಹಲವರು ಹಲವು ವಿಧದ ಸೂಚನೆಗಳನ್ನು ಮಾಡುತ್ತಿದ್ದಾರೆ. 'ಇದುವರೆಗೂ ಕನ್ನಡಿತಿಯರಾರನ್ನೂ ಅಧ್ಯಕ್ಷಸ್ಥಾನಕ್ಕೆ ಆರಿಸಿಲ್ಲ; ಅದುದರಿಂದ ಶ್ರೀಮತಿ × × × ದೇವಿಯವರನ್ನು ಆರಿಸಬೇಕೆಂದು ಒಬ್ಬರು ತಿಳುಹಿದರೆ, 'ಇದುವರೆಗೆ ಕ್ರೈಸ್ತರನ್ನು ಅಧ್ಯಕ್ಷರನ್ನಾಗಿ ಮಾಡಿಲ್ಲವಾದುದರಿಂದ, ರೆವರೆಂಡ್ ಡಾನಿಯಲರನ್ನು ಮಾಡಬೇಕು' ಎಂದು ಇನ್ನೊಬ್ಬರು ಸಾರುತ್ತಿದ್ದಾರೆ. ಮತ್ತೊಬ್ಬರು 'ಬರೆಯುವುದರಲ್ಲಿಯೆ ಆಯುಷ್ಯವನ್ನು ಕಳೆದು ಮುದುಕರಾಗಿರುವ × × × ರಾಯರನ್ನಾಗಲಿ, × × × ಭಟ್ಟರನ್ನಾಗಲಿ ಎತ್ತಿಕೊಂಡು ಬಂದು ಅಧ್ಯಕ್ಷಪೀಠದಲ್ಲಿ ಕುಳ್ಳಿರಿಸಬೇಕು' ಎಂದು ಕಳವಳದಿಂದ ಹೇಳುತ್ತಿದ್ದರೆ, ಬೇರೊಬ್ಬರು 'ಸಾಯಲು ಸಿದ್ಧರಾದ ಮುದುಕರಿಂದ ಪ್ರಯೋಜನವೇನು? ನಮಗೆ ಮುದುಕರು ಬೇಡ; ತರುಣ ಅಧ್ಯಕ್ಷರು ಬೇಕು!' ಎಂದು ಚಳವಳಿ ನಡಿಸಿರುವರು. 'ಹರಿಜನರಿಗೊಮ್ಮೆ ಆ ಸ್ಥಾನ ಕೊಡಬೇಕಲ್ಲವೆ?' ಎಂದೊಬ್ಬರು ಕೇಳುತ್ತಿದ್ದರೆ 'ಮುಸಲ್ಮಾನರಿಗೊಮ್ಮೆ ಕೊಟ್ಟೇ ತೀರಬೇಕು!' ಎಂದೊಬ್ಬರು ಅಧಿಕಾರವಾಣಿಯಿಂದ ಹೇಳುತ್ತಿರುವರು. 'ನೈಝಾಮ ಕರ್ನಾಟಕ ಹಿಂದುಳಿದುದು; ಅದುದರಿಂದ ಅಧ್ಯಕ್ಷಪದದ ಮಾನ ಈ ಸಲ ಅಲ್ಲಿಯವರಿಗೇ ಸಿಕ್ಕಬೇಕು.' ಎಂದೊಬ್ಬ ಕಲಬುರ್ಗಿಯವರೆನ್ನುತ್ತಿದ್ದರೆ 'ಮಿಕ್ಕ ಕಡೆಯವರಿಗೆ ಸಾಹಿತ್ಯವೆಂದರೇನು ಗೊತ್ತು? ಅದುದರಿಂದ ಧಾರವಾಡವು ಮೈಸೂರಿನ ಮಹಾಪಂಡಿತರನ್ನೇ ಕರೆಯಿಸಿಕೊಳ್ಳಬೇಕು!' ಎಂದೊಬ್ಬ ಕೋಲಾರಿಗರು ಕೂಗುತ್ತಿರುವರು. 'ಕೋರ್ಟಿನ ಕಾರಕೂನರಿಗೆ ಈ ಮಾನ ಕೊಡಬೇಕು' ಎಂದೂ, 'ಪೋಲೀಸ ಖಾತೆಗೆ ಈ ಮರ್ಯಾದೆ ಸಲ್ಲಿಸಲೇಬೇಕು' ಎಂದೂ, ಇನ್ನೂ ಎಲ್ಲಿಯೂ ಕೂಗೆದ್ದುದು ಕಿವಿಗೆ ಬಿದ್ದಿಲ್ಲ. ಕನ್ನಡ ಶಾಲೆಯ ಮಾಸ್ತರರು ಚಳವಳಿ ಮಾಡಬಹುದಾಗಿದ್ದಿತಾದರೂ, ಈ ಸಲ ಪ್ರಾಥಮಿಕಶಾಲೆಗಳಲ್ಲಿ ಹಚ್ಚುವ ಮೈಸೂರಿನ ಪತ್ಯಪುಸ್ತಕಗಳನ್ನು ಓದಿ ಅರ್ಥ ತಿಳಿದುಕೊಳ್ಳುವ ಗಡಬಿಡಿಯಲ್ಲಿ, ಅವರಿಗೆ ಬಿಡುವೆ ಇಲ್ಲವಾಗಿದೆ. ಮೊನ್ನೆಯೊಬ್ಬರು ಮೈಲೀ ಕಾರಕೂನರು ಮಂಗರಾಯನಿಗೆ ಭೆಟ್ಟಿಯಾದಾಗ 'ನಮಗೆಂದು ಕೊಟ್ಟದ್ದೀರಪ್ಪಾ ಆ ಸ್ಥಾನ?' ಎಂದು ಕೇಳಿದರು. ಇಷ್ಟೆಲ್ಲ ಜನ ಸೂಚಿಸುತ್ತಿರುವಾಗ—ಕೇಳುತ್ತಿರುವಾಗ—ಅಧ್ಯಕ್ಷಸ್ಥಾನವನ್ನು ಯಾರಿಗೆ ಕೊಡಬೇಕೆಂಬ ವಿಚಾರದಲ್ಲಿ ಕನ್ನಡಿಗರೆಲ್ಲ ಗೊಂದಲಗೊಳ್ಳುವುದು ಸಹಜವಾಗಿದೆ. ಅದುದರಿಂದಲೆ ಮಂಗರಾಯನಿಗೆ ಒಂದು ಸಮಂಜಸ ಸೂಚನೆಯನ್ನೀಗ ಮಾಡಬೇಕೆನಿಸುತ್ತಿದೆ. ಅದೇನೆಂದರೆ: ಕನ್ನಡಿಗರೆಲ್ಲರಲ್ಲಿ ಇಂದು ಮುಖ್ಯವಾಗಿ ಒಡೆದು ತೋರುವ ಜಾತಿಗಳು ಎರಡು. ಒಂದು ಕಲಿತವರದು, ಇನ್ನೊಂದು ಕಲಿಯದವರದು. ಇದುವರೆಗಿನ ಅಧ್ಯಕ್ಷಪದದ ಮಾನವೆಲ್ಲ ಕಲಿತವರ ಪಾಲಿಗೆ ಹೋದುದರಿಂದ, ಕಲಿಯದವರಿಗೆ ಈ ಸಲದ ಅಧ್ಯಕ್ಷಪದದ ಮಾನವನ್ನು ಸಲ್ಲಿಸಬೇಕು; ಅದಕ್ಕಾಗಿ ಹುಲ್ಲಹಳ್ಳಿಯ ಹೊನ್ನಮ್ಮನನ್ನೇ ಈ ಸಲದ ಅಧ್ಯಕ್ಷಪದಕ್ಕೆ ಆರಿಸಬೇಕು. ಎಂದರೆ ಹೆಂಗುಸರನ್ನು ಆರಿಸಬೇಕೆನ್ನುವವರನ್ನೂ ಸಮಾಧಾನಗೊಳಿಸುವಂತಾಗುವುದು; ಕಲಿಯದವರಿಗೆ ಸಲ್ಲಬೇಕಾಗಿರುವ ಸಾಹಿತ್ಯಕ ಪ್ರಾತಿನಿಧ್ಯವನ್ನು ಸಲ್ಲಿಸಿದಂತಾಗುವುದು. ಅಲ್ಲದೆ ಆಕೆಗೆ ವಯಸ್ಸೂ ಸಾಕಷ್ಟಾಗಿ ನಡು ಬಾಗಿದೆ. ಆದರೆ 'ಹೊನ್ನಮ್ಮ ಸಾಹಿತಿಯೇ?' ಎಂದು ಯಾರಾದರೂ ಕೇಳಲು ಮುಂಗೆತ್ತಬಹುದು. ಹಾಗೆ ಕೇಳುವವರನ್ನು ಮಂಗರಾಯ ಮರಳಿ, ಕೇಳುವ 'ಅಧ್ಯಕ್ಷರಾಗುವುದಕ್ಕೂ ಸಾಹಿತ್ಯಕ್ಕೂ ಸಂಬಂಧವೇನು?' ಎಂದು. ಇಷ್ಟಾದರೂ ಸಾಹಿತಿ ಇರಲೇಬೇಕೆಂದು ಹಟಹಿಡಿದರೆ, ಸಭಾಮಂಟಪದಲ್ಲಿ ಒಂದು ಬೀಸುವ ಕಲ್ಲನ್ನು ಹಾಕಿ, ಅದರ ಹತ್ತಿರ ಹೊನ್ನಮ್ಮನನ್ನು ಕುಳ್ಳಿರಿಸಿ ನೋಡಿರಿ; ಆಕೆಯ ಮುಖದಿಂದ ಜನಪದ ಸಾಹಿತ್ಯಗಂಗೆ ಹೊನಲು ಹೊನಲಾಗಿ ಹರಿಯುತ್ತಿರುವಳು. ಅದುದರಿಂದ ಮಾಡಿರಿ ಹೊನ್ನಮ್ಮನನ್ನೇ ಅಧ್ಯಕ್ಷಿಣಿಯನ್ನು! ಹೂಡಿರಿ ಆಕೆಗಾಗಿ ೨೫ ಕುದುರೆಯ ಟಾಂಗಾವನ್ನು!

ಕನ್ನಡದ ಈ ಸಭೆಗೆ ಅನ್ಯರಧ್ಯಕ್ಷರೆ?
ಇನ್ನೊಬ್ಬರನ್ನು ತರಲೇಕೆ? ಹುಲ್ಲೂರ
ಹೊನ್ನಮ್ಮನಿರಲು ಮಂಗಜ್ಜ!

* * *

ಕುರುಡ ಕನ್ನಡಿಗರನ್ನು 'ಕಣ್ಣುಮುಂಚ್ಚಣಿಕೆ' ಆಡಿಸಿದರು!

ಮಂಗರಾಯನಿಗೊಂದು ಮಹತ್ವದ ಕಾಗದ ಬಂದಿದೆ. ಅದು ಕನ್ನಡಿಗರು ಬರೆದುದಲ್ಲ; ಮರಾಟಿಗರೊಬ್ಬರು ಬರೆದುದು. ಅದರಲ್ಲಿ ಅವರು ಕರ್ನಾಟಕದ ಕೇಂದ್ರವಾದ ಧಾರವಾಡದ ಕನ್ನಡಿಗರನ್ನು ತುಂಬ ಹೊಗಳಿ ಹಾಡಿ, ಉಬ್ಬಿಸಿ ಅಭಿನಂದಿಸಿದ್ದಾರೆ. ಅವರೇನು ಬರೆದಿದ್ದಾರೆಂಬುದನ್ನು ನೋಡಬೇಕೆಂಬ ಆತುರ ಯಾರಿಗಾದರೂ ಇದ್ದರೆ, ಆ ಮರಾಟಿಯ ಕಾಗದದ ಕನ್ನಡ ಭಾಷಾಂತರವನ್ನಿಲ್ಲಿ ಕೊಡಲಾಗಿದೆ; ನೋಡಿ ಸಂತೋಷ-ಸಮಾಧಾನಗಳನ್ನು ಪಡಬೇಕೆಂದು ಯಾರಿಗಾದರೂ ಎನಿಸಿದರೆ ಅವಶ್ಯವಾಗಿ ಪಡಿರಿ! ಕನ್ನಡಿಗರು ಸಂತೋಷ-ಸಮಾಧಾನ ಪಟ್ಟರೆ ಕೆಚ್ಚುಕನ್ನಡಿಗನಾದ ಮಂಗರಾಯನಿಗೂ ಸಂತೋಷ, ಸಮಾಧಾನ. ಕಾಗದ ಹೀಗಿದೆ:—

"ಮಂಗರಾಯಾ, ಕನ್ನಡಿಗರ ರಸಿಕತನವನ್ನೂ ಔದಾರ್ಯವನ್ನೂ ಇದುವರೆಗೆ ಬರಿಯ ಕೇಳಿ ಅರಿತಿದ್ದೆ. ಆದರೆ ಮೊನ್ನೆ ಮೊನ್ನೆಯೆ ಕರ್ನಾಟಕದ ಗಂಡುಮೆಟ್ಟಿನ ಸ್ಥಳಗಳಾದ ಧಾರವಾಡ, ಹುಬ್ಬಳ್ಳಿಗಳಲ್ಲಿ ಅಭೂತಪೂರ್ವವಾಗಿ ಜರುಗಿದ 'ಲಪಂಡಾವ' ಚಿತ್ರಪಟದ ವಿಷಯಕವಾದ ಚರ್ಚಾಸಭೆಗಳ ಮತ್ತು ಸಂಗೀತ ಸ್ಪರ್ಧೆಗಳ ವರದಿಯನ್ನು ವೃತ್ತಪತ್ರಗಳಲ್ಲಿ ಓದಿ ತುಂಬ ಸಮಾಧಾನವಾಯಿತು. ರಸಿಕ ಕನ್ನಡಿಗರ ಸರ್ವಭಾಷಾ ಸಾಹಿತ್ಯ ಸಮುತ್ಪತ್ತಿಯ ಕಲ್ಪನೆ ನನಗೆ ಬಂದಿತು. 'ಲಪಂಡಾವ'ದಂತಹ ಹುಚ್ಚು ಚಿತ್ರಪಟದ ಮೇಲೆ ಮಹಾರಾಷ್ಟ್ರದಲ್ಲಿ ಕೂಡ ಇಷ್ಟೊಂದು ಚರ್ಚೆ-ವಾದ-ಸ್ಪರ್ಧೆಗಳು ನಡೆದಿಲ್ಲ.

ಎಲ್ಲ ಕನ್ನಡಿಗರೂ ಜಾತಿ, ಧರ್ಮ, ಲಿಂಗ, ವಯಸ್ಸು ಇವುಗಳನ್ನು ಮರೆತು, ಚರ್ಚೆ-ಸ್ಪರ್ಧೆಗಳಲ್ಲಿ ಭಾಗವಹಿಸಿದುದು ತುಂಬ ಅಭಿನಂದನೀಯವಾದ ಸಂಗತಿ. 'ಲಪಂಡಾವ' ಚಿತ್ರಕ್ಕೆ ಇಷ್ಟೊಂದು ಮಹತ್ತ್ವವನ್ನು ಕೊಟ್ಟು, ಅದರ ಹೆಸರನ್ನು ಕರ್ನಾಟಕದ ಮೂಲೆಮೂಲೆಯ ಜನರೆಲ್ಲರೂ ಕೇಳುವಂತೆ ಮಾಡಿದುದಕ್ಕಾಗಿ, ಆ ಚಿತ್ರ-ಪಟದ ಕಂಪನಿಯವರೂ ಕಥಾಲೇಖಕರಾದ ಆಚಾರ್ಯ ಅತ್ರೆಯವರೂ ಕನ್ನಡಿಗರಿಗೆ ಕೃತಜ್ಞರಾಗಿರಲೆ ಬೇಕು. ನಿಮ್ಮಂತಹ ಉದಾರಿಗಳು ಎತ್ತಿ ಹಿಡಿಯದಿದ್ದರೆ 'ಲಪಂಡಾವ'ದಂತಹ 'ಲಳಬಳ' ಚಿತ್ರಪಟಕ್ಕೆ ದುಡ್ಡು ಹೇಗೆ ಆಗಬೇಕು? ದುಡ್ಡು ಆಗದಿದ್ದರೆ 'ನವಯುಗ' ಕಂಪನಿಯಲ್ಲಿ ಕೆಲಸ ಮಾಡುವ ನಟವರ್ಗ, ದಿಗ್ದರ್ಶಕರು, ಚಿತ್ರಕಾರರು, ಸಂಗೀತಗಾರರು ಇವರೆಲ್ಲ ಹೇಗೆ ಬದುಕಬೇಕು? ಕನ್ನಡಿಗರಂತಹ ಸ್ವಾರ್ಥತ್ಯಾಗಿಗಳ ಬೆಂಬಲದ ಮೂಲಕವಾಗಿಯೆ 'ಲಪಂಡಾವ'ದಂತಹ ಚಿತ್ರವು ಹಣದ ರಾಶಿಯನ್ನು ನಮ್ಮಲ್ಲಿಗೆ ಸೆಳೆದುಕೊಂಡು ಬರಬೇಕಲ್ಲವೆ? ಆ ಕಾರ್ಯದಲ್ಲಿ ಕನ್ನಡಿಗರು ಸಂಪೂರ್ಣವಾಗಿ ಸಹಕರಿಸಿದುದು ಅಭಿಮಾನದ ಸಂಗತಿ."

ಮಂಗರಾಯ ಈ ಪತ್ರವನ್ನೋದಿಕೊಂಡು, ಇದನ್ನು ಬರೆದ ಮರಾಟಿಗ ಮಿತ್ರರಿಗೆ ಹೀಗೆಂದು ಉತ್ತರ ಬರೆದಿದ್ದಾನೆ:

"ಮಂಗರಾಯಾ, ಕನ್ನಡಿಗರ ಈ ಕಾರ್ಯದಿಂದ ಮರಾಟಿಗರಿಗೆ ಲಾಭವಾಗಿದ್ದರೆ ಮಂಗ-ರಾಯನಿಗೇನೂ ಮತ್ಸರವಿಲ್ಲ. ಆದರೆ ಆ ಸಭೆ-ಸ್ಪರ್ಧೆಗಳೆಲ್ಲ ನಡೆದುದು ಕನ್ನಡಿಗರ ಔದಾರ್ಯ ಮತ್ತು ರಸಿಕತನಗಳ ಕಾರಣದಿಂದಲ್ಲ. ಕರ್ನಾಟಕದಲ್ಲಿ ತಾವು ಕಳುಹಿರುವ 'ಪಂಚಮದಳ'ದ ಪ್ರಚಾರದ ಪ್ರಭಾವ ಅವುಗಳಿಗೆ ಮುಖ್ಯ ಕಾರಣವಾಗಿವೆ; ಕನ್ನಡಿಗರ ಮಂದತನ-ಮೌಢ್ಯಗಳು ಉಪಕಾರಣಗಳಾಗಿವೆ. ಈ ಕಾರಣಗಳು ಇರುವವರೆಗೂ ಮರಾಟಿಯ ಯಾವ ಚಿತ್ರಪಟಕ್ಕೂ ಕರ್ನಾಟಕದಲ್ಲಿ ಪ್ರಾಶಸ್ತ್ಯ, ಪ್ರಸಿದ್ಧಿ ಸಿಕ್ಕುವುದು. ತಾವು ಯೋಚನೆಯಾವುದೂ ಇಲ್ಲದೆ ಇರಿ!"

* * *

ಸಾಕಪ್ಪಾ ಸಾಕಿನ್ನು ಕಣ್ಣುಮುಚ್ಚಾಟ!

ಕನ್ನಡಿಗರನ್ನು ಕಣ್ಣುಮುಚ್ಚಾಟವಾಡಿಸುವವರು ಬಹಳ ಜನರು. ಕುಂದಗೋಳದಂತಹ ೧೦೦ಕ್ಕೆ ೧೦೦ ಕನ್ನಡಿಗರಿರುವ ಊರಲ್ಲಿ ಮ್ಯುನಸಿ-ಪಾಲಿಟಿಯ ಆಡಳಿತದ ಭಾಷೆ ಕನ್ನಡವಿರಬೇಕೆಂದು ಸೂಚನೆ ಬಂದರೆ, ಹದಿನಾರಾಣೆ ಕನ್ನಡಿಗರೊಬ್ಬರು ಮರಾಟಿಗರಿಂದ ಕಣ್ಣು ಮುಚ್ಚಿಸಿಕೊಂಡು, ಆ ಸೂಚನೆಯನ್ನು ಮುಟ್ಟಿ ಮುಂದೆ ಬರಗೊಡದಂತೆ ಮಾಡಿದರು. ಜಮ-ಖಂಡಿಯ ಅಧಿಕಾರಿ ವರ್ಗದವರು ಅಲ್ಲಿಯ ಎಂತೆಂತಹ ಕನ್ನಡಿಗರನ್ನೂ 'ಕದಲುಬದಲು ಕಂಚೀಬದಲು' ಆಡಿಸುತ್ತಿದ್ದಾರೆ. ಮೊನ್ನೆ-ಮೊನ್ನೆಯೆ ಹಿಂದೀ ಪ್ರಚಾರಕರು ನಡೆಯಿಸಿದ ಸಭೆಯೊಂದರಲ್ಲಿ 'ಕನ್ನಡದ ಕಟ್ಟಾಭಿಮಾನಿಗಳೊಬ್ಬರು ಕೂಡ ಕಣ್ಣುಮುಚ್ಚಾಟವಾಡಿಸಿಕೊಂಡು ದಿಗ್ಭ್ರಮೆಗೊಂಡು ಹೋದರು. ಬರಿಯೆ ಕಣ್ಣು-ಮುಚ್ಚಿಸಿಕೊಳ್ಳಲೆಂದೆ ಮುಂದೆ ಬರುವ ಕನ್ನಡ ಆಟಗಾರರನ್ನು ಕಂಡು' ಮಂಗರಾಯನಿಗೆ ಮಂಕುಕವಿದು ಹೋಗಿದೆ. ಕಣ್ಣುಮುಚ್ಚಿ 'ಕದಲುಬದಲು' ಆಡಿಸುವ ಕೆಲಸಮಾಡಲಿಕ್ಕೆ ಕನ್ನಡಿಗರಿಂದ ಆಗದೇ ಆಗದೇನು? ಹೇಗೆ ಆಗಬೇಕು ಹೇಳಿರಿ! 'ಗನೀಮಿ ಅಮುಚಾ ಕಾವಾ' ಎಂದು ಅಭಿಮಾನದಿಂದ ಹೇಳುವ ಕೌಟಿಲ್ಯ-ಚಾಣಕ್ಯರ ಮುಂದೆ 'ಕಳಬೇಡ, ಕೊಲಬೇಡ, ಹುಸಿಯನುಡಿಯಲಿಬೇಡ' ಎನ್ನುವ ಶರಣರ ಅನು-ಯಾಯಿಗಳೂ 'ಆರೇನು ಮಾಡುವರು ಆರಿಂದಲೇನಹುದು? ಪೂರ್ವಜನ್ಮದ ಕರ್ಮವಿಧಿ ಬೆನ್ನ ಬಿಡದು!' ಎಂದು ಕಣ್ಣುಮುಚ್ಚಿ ಹಾಡುವ ದಾಸರ ದಾಸರೂ 'ಸತ್ಯ, ಅಹಿಂಸೆ, ಸಹಕಾರ, ಸಹಾನುಭೂತಿ' ಎಂದು ಕನವರಿಸುವ ಮಹಾತ್ಮರ ಮರಿಗಳೂ ಆದ ಕನ್ನಡಿಗರು ಏನು ಮಾಡಬಲ್ಲರು? ಕಣ್ಣು ತೆರೆದಾಗ ಕೂಡ ಮುಚ್ಚಿದ ಕಣ್ಣಿನವರೇ ಆಗಿರುವ ಕನ್ನಡಿಗರ ಕೈಗೆ, ಕಣ್ಣು-ಮುಚ್ಚಿಸಿಕೊಳ್ಳುವವರು ಸಿಕ್ಕಬೇಕೆಲ್ಲಿ? ಆದುದರಿಂದಲೆ ಇವರು ಯಾವಾಗಲೂ, ಕಣ್ಣುಮುಚ್ಚಾಟದಲ್ಲಿ ಮುಚ್ಚಿಸಿಕೊಳ್ಳುವವರಾಗಿಯೆ ಭಾಗವಹಿಸುತ್ತಿರುವರು. ತಗ್ಗಿದ್ದುದೂ ಗೊತ್ತಿಲ್ಲ, ದಿಣ್ಣೆಯಿದ್ದುದೂ ಗೊತ್ತಿಲ್ಲ. ಕಣ್ಣನ್ನು ಮುಚ್ಚಿದವರ ಮಾತಿನ ಮೇಲೆ ನಂಬಿಗೆಯಿಟ್ಟು ಓಡುವುದೊಂದೇ ಗೊತ್ತು! ಹೀಗೆ ಮುಚ್ಚಿದ ಕಣ್ಣಿನ ಮನುಷ್ಯರಾಗಿ ಮನೆಗಳಲ್ಲಿ ಬಾಳುವುದಕ್ಕಿಂತ, ಹೇ ದಾವ ಕನ್ನಡಿಗರೆ, ನನ್ನಂತೆ ನೀವು ತೆರೆದ ಕಣ್ಣಿನ ಮಂಗಣ್ಣಗಳಾಗಿ ಮರಮರ ಹಾರುತ್ತಿದ್ದರಾಗದೆ? ಆಗ ನಿಮ್ಮನ್ನು ಕಣ್ಣುಮುಚ್ಚಲು ಬರುವ ಎದೆಯಾರಿಗಿರುವುದು?

ಸಾಕಪ್ಪಾ ಸಾಕಿನ್ನು ಕಣ್ಣುಮುಚ್ಚಾಟ!
ಬೇಕಪ್ಪಾ ನನ್ನಂಥಾ ಹಾರೂ ಹುಚ್ಚಾಟ।

* * *

ಆಳಾದವ ಬಾಳುವನು!

'ಆಳಾಗಿ ದುಡಿ, ಅರಸಾಗಿ ಉಣ್ಣು' ಎಂಬುದು ಒಂದು ಕನ್ನಡ ಗಾದೆಯ ಮಾತು. ಮಂಗರಾಯನಿಗೆ ಈ ಗಾದೆಯಲ್ಲಿ ಅರಳೆಯೆ ಇಲ್ಲವೆಂದು ತೋರುತ್ತಿದೆ ಇಂದು. ಎಂತಲೆ ಅವನಿಂದು ತನ್ನ ಅನುಭವದ ತಿರುಳಿನಿಂದ ತುಂಬಿದ ಹೊಸ ಗಾದೆಯೊಂದನ್ನು ಹೊಲಿದಿದ್ದಾನೆ. ಅದೇನೆಂದರೆ 'ಅರಸಾಗಿ ಬೀಳು, ಆಳಾಗಿ ಬಾಳು' ಎಂದು. ಇದರ ಸತ್ಯತೆ ಹಿಂದುಗಳಾದ ನಿಮಗೆಲ್ಲ ಸ್ಪಷ್ಟವಾಗಿ ಕಂಡಿರಬಹುದು. ಇಂದು ಅರಸರಾಗಿ ಆಳುವ ಆಳಿದ ರಾಷ್ಟ್ರಗಳೆಲ್ಲ ಈ ಮಹಾಪ್ರಳಯದಂತಹ ಕಡುಗಾಳೆಗದಲ್ಲಿ ಬೀಳುತ್ತಲಿಷ್ಟು ಎಷ್ಟೋ ಬಿದ್ದಿವೆ. ಆದರೆ ಸಾವಿರಾರು ವರ್ಷಗಳಿಂದ ಆಳಾಗಿಯೆ ಬಾಳಿರುವ ಭಾರತಕ್ಕೆ ಬೀಳುವ ಭೀತಿಯೆಲ್ಲಿದೆ? ಎಂತಲೆ ಅದಿಂದು ಹಾಯಾಗಿ ಉಂಡುಂಡು ಮಲಗುತ್ತಿದೆ. ಆಳುವ ರಾಷ್ಟ್ರಗಳ ಬಾನಬಯಲಲ್ಲಿಂದು ಎದೆ ನಡುಗಿಸುವಂತಹ ಗುಂಡಿನ ಸುರಿಮಳೆ. ಬಾಂಬಿನ ಸಿಡಿಲಗರ್ಜನೆ. ಆದರೆ ಆಳಾದ ಭಾರತಭೂಮಿಯ ಮುಗಿಲಲ್ಲಿ ಮೋಡದ ಸುರಿಮಳೆ ಸಹ ಇಲ್ಲ, ಗುಡುಗು-ಮಿಂಚುಗಳ ಗುಡುಗುಡಾಟ ಕೂಡ ಇಲ್ಲ. ಎಲ್ಲಿಯೂ ಶಾಂತತೆ.... ಸ್ಮಶಾನ... ಬೇಡ ಬೇಡ, ಬರಿಯೆ ಶಾಂತತೆ. ಆಳುವ ದೇಶಗಳಲ್ಲಿಂದು ಜನರಿಗೆ ಹೊಟ್ಟೆತುಂಬ ಊಟವಿಲ್ಲ; ಕಣ್ಣುತುಂಬ ನಿದ್ದೆಯಿಲ್ಲ. ಆದರೆ ಯಾವಾಗಲೂ ಹೊಟ್ಟೆ ತುಂಬ ಉಂಡು ಗೊತ್ತಿಲ್ಲದ ಆಳಾದ ಭಾರತೀಯರು, ಸಿಕ್ಕಷ್ಟು ಉಂಡುಕೊಂಡು ಬರಿಯೆ ಕಣ್ಣು ತುಂಬಲ್ಲ; ಕಣ್ಣು-ಮನ-ಮೈತುಂಬೆಲ್ಲ ಚಿಂತೆಯಿಲ್ಲದೆ ನಿದ್ದೆಮಾಡುತ್ತಲಿದ್ದಾರೆ. ಅದೇ, ಭಾರತೀಯರೂ ಆಳುವವರಾಗಿದ್ದರೆ....? ಸೈನ್ಯದಲ್ಲಿ ಸೇರಿಕೊಳ್ಳಬೇಕಾಗಿದ್ದಿತು. ಸಿಡಿಗುಂಡುಗಳನ್ನು ಗುಡುಗಿಸಬೇಕಾದ್ದಿತು. ಮಂದಿಯನ್ನು ಮಡಿಯಿಸಿ ತಾವೂ ಮಡಿಯಬೇಕಾಗುತ್ತಿದ್ದಿತು? ಆದರೇನು ನಾವು ಅರಸರಲ್ಲ! ಆಳುಗಳು! ನಾವು ಅರಸರ ದುಃಖಗಳೆಲ್ಲದರಿಂದಲೂ ಮುಕ್ತರು, ನಿತ್ಯಮುಕ್ತರು; ಸಮರದ ಸಾವಿನಿಂದ ಸರಿದು ನಿಂತವರು!

ಆಳಾಗಿರುವುದೆ ಭಾಳ ಸುಖಾ..।
ಭಾಳ ಸುಖಾ....ಇದು ಭಾಳ ಸುಖಾ!



ಯುದ್ಧಕಾಲದಲ್ಲಿಯ ★

★ ನಾಝಿಗಳ ಬದುಕು

ಜರ್ಮನಿಯ ' ತಂತ್ರಿ ' ಬರೆದುದು.

ಗಾಜಿನಿಂದ ನಿರ್ಮಿಸಿದ ಬಟ್ಟೆಯನ್ನು ಮಡಿಚಿಟ್ಟಿದ್ದು

★

ಜೀವನಕ್ಕೆ ಬೇಕಾಗಿದ್ದುದನ್ನೆಲ್ಲ ಸರಕಾರ ಯುದ್ಧಕ್ಕೆ ಕಸಿದುಕೊಳ್ಳುತ್ತಿರುವಾಗ ಜರ್ಮನ್ ಜನರು ಏನು ಮಾಡಬೇಕು? ಹಾಲಿನ ಹಸಿವನ್ನು ಹಿಟ್ಟಿನ ನೀರಿನಿಂದ ಹಿಂಗಿಸಿಕೊಳ್ಳಬೇಕು, ಇಷ್ಟೆ!. ಎಂತಲೆ ಜರ್ಮನಿಯ ವೈಜ್ಞಾನಿಕರು ಇಂದು ಕಸಕ್ಕೆ ರಸದ ರೂಪವನ್ನು ಕೊಟ್ಟು, ದೇಶದ ಜನರ ಆವಶ್ಯಕತೆಗಳನ್ನು ಕಡಿಮೆಮಾಡಲು ಹೆಣಗುತ್ತಿದ್ದಾರೆ.

★

ಯಾವುದೊಂದು ದೇಶದಲ್ಲಿ ಯುದ್ಧಕ್ಕೆ ಪ್ರಾರಂಭವಾಯಿತೆಂದರೆ, ಆ ದೇಶದ ಬಣ್ಣವೇ ಬದಲಾಗುವುದು. ಯುದ್ಧವು ತಾನೆತಾನಾಗಿ, ಇದ್ದ ಬಿದ್ದ ಎಲ್ಲ ಉತ್ಸಾಹವನ್ನೂ ಯುದ್ಧವನ್ನು ಗೆಲ್ಲುವುದಕ್ಕೆ ಉಪಯೋಗಿಸಲಾಗುವುದು. ಯುದ್ಧಕಾಲದಲ್ಲಿ ವೆಚ್ಚವು ಹೆಚ್ಚಾಗುವುದರಿಂದ, ಅದನ್ನು ಪೂರಯಿಸುವುದಕ್ಕೆ ಹಲವು ಬಗೆಯಿಂದ ಹಂಚಿಕೆ ಹಾಕಬೇಕಾಗುವುದು. ಆ ವೆಚ್ಚವನ್ನು ಪೂರಯಿಸಲು ದೇಶದಲ್ಲಿ ಇಷ್ಟವಸ್ತುಗಳು ಸಾಕಷ್ಟು ಸಮೃದ್ಧಿಯಾಗಿವೆಯೆ?..ಎಂದು ಪ್ರಶ್ನೆ ಬರುವುದು. ಯುದ್ಧವು ಪ್ರಾರಂಭವಾಗುವುದಕ್ಕೆ ಮುಂಚೆಯೆ ಅದರ ಯೋಚನೆಯನ್ನು ಮಾಡಿ ತೀರಬೇಕಾಗುತ್ತದೆ. ತಮ್ಮ ದೇಶದಲ್ಲಿಯ ವಸ್ತುಗಳೆಲ್ಲ ಯುದ್ಧದ ಉಪಕರಣಗಳನ್ನು ಮಾಡುವುದರಲ್ಲಿ ವೆಚ್ಚವಾಗಲು ತೊಡಗಿದರೆ, ಸಾಮಾನ್ಯಜನತೆಯ ಜೀವನದ ಆವಶ್ಯಕತೆಗಳನ್ನು ಪೂರಯಿಸಬೇಕಾದರೆ--ಸಾಮಾನ್ಯಜೀವನವು ಸಾಗಬೇಕಾದರೆ—ಪ್ರತಿನಿತ್ಯ ಬಳಕೆಗೆ ಬೇಕಾಗುವ ವಸ್ತುಗಳು ದೇಶದಲ್ಲಿ ಸಿಕ್ಕಬೇಕು. ತಮ್ಮ ದೇಶದಲ್ಲಿ ಸಿಕ್ಕದಿದ್ದರೆ, ಬೇರೆ ದೇಶಗಳಿಂದ ಮಾರಲಿಕ್ಕೆ ತೆಗೆದುಕೊಳ್ಳಬೇಕಾಗಬಹುದು. ಯುದ್ಧವು ಪ್ರಾರಂಭವಾದ ಮೇಲೆ ಯಾರು ಯಾರು ಯಾರ ಯಾರ ಮಿತ್ರರಾಗಿ ಉಳಿಯಬಹುದೆಂಬುದನ್ನು ನಿಶ್ಚಿತವಾಗಿ ಹೇಳಲು ಬರುವಂತಿಲ್ಲ. ವಸ್ತುಗಳ ಆವಶ್ಯಕತೆಯು ಬಲವಾಗಿ, ಪ್ರಬಲವಾಗಿ ಬಾಧಿಸತೊಡಗಿದರೆ, ಅವುಗಳನ್ನು ಒದಗಿಸಿಕೊಡುವುದಕ್ಕೆ ವಿಜ್ಞಾನ ಸಂಶೋಧನೆಯೆ ತರಣೋಪಾಯವಾಗುವುದು.

ಇಂದು—ಈ ವೈಜ್ಞಾನಿಕ ಯುಗದಲ್ಲಿ—ಎಲ್ಲರಿಗಿಂತ ಮುಂದೆ ಹೋಗಿರುವವರೆಂದರೆ ಅಮೇರಿಕನರು, ಜರ್ಮನರು. ಜರ್ಮನರ ವೈಜ್ಞಾನಿಕ ದೃಷ್ಟಿ ಹೆಚ್ಚು ತೀಕ್ಷ್ಣವಿದೆ. ಅವರ ದೇಶವು ಸುತ್ತಲಿಂದಲೂ ದಿಗ್ಬಂಧಿತವಾದುದರಿಂದ, ಬೇರೆದೇಶದ ಸರಕು ಅವರಲ್ಲಿಗೆ ಬಂದು ಮುಟ್ಟುವ ಸಂಭವ ಕಡಿಮೆ. ಆದಕ್ಕೆಂತಲೆ ಅವರು ತಮ್ಮ ದೇಶದಲ್ಲಿಯ ಸುಲಭಲಭ್ಯ ವಸ್ತುಗಳಿಂದಲೆ ತಮಗೆ ಬೇಕಾಗುವ ಎಲ್ಲ ಸಾಮಾನುಗಳನ್ನೂ ಹುಟ್ಟಿಸುತ್ತಿದ್ದಾರೆ. ಆ ಸಾಮಾನುಗಳು ನೈಸರ್ಗಿಕವಾದುವುಗಳಲ್ಲ; ಶಾಸ್ತ್ರೀಯ ಸಮ್ಮಿಶ್ರಣಗಳಿಂದ ಸಿದ್ಧಪಡಿಸಿದುವುಗಳು. ಆ ಕೃತ್ರಿಮ ವಸ್ತುಗಳಿಂದಲೆ ತಮ್ಮ ಆವಶ್ಯಕತೆಯನ್ನು ಪೂರಯಿಸಿಕೊಳ್ಳಬೇಕಾಗಿದೆ ಅಲ್ಲಿ. ಹಾಗೆ ಪೂರಯಿಸಿಕೊಳ್ಳಲು ಅಪಳಿತದ ಕಟ್ಟಾಜ್ಞಾತಿಯೂ ಹೊರಟಿದೆ.

ನಮ್ಮ ನಾಡಿನಲ್ಲಿ ತುಪ್ಪ ಸಿಕ್ಕದ ಸ್ಥಳಗಳಲ್ಲೆಲ್ಲ ಕೊಬ್ಬರಿ ಎಣ್ಣೆಯಿಂದ ತುಪ್ಪದ ಹಸಿವನ್ನು ಹಿಂಗಿಸುವರು. ಮಜ್ಜಿಗೆ ಮೊಸರು ಸಿಕ್ಕದ ಸ್ಥಳಗಳಲ್ಲಿ ಇನ್ನಾವುದೊಂದು ಹುಳಿಯ ಪದಾರ್ಥದಿಂದ ಬಯಕೆ ಪೂರಯಿಸಿಕೊಳ್ಳುವರು. ಎಂದರೆ ಒಂದು ವಸ್ತು ಸಿಕ್ಕದೆ ಹೋದರೆ, ಆ ವಸ್ತುವಿನಲ್ಲಿದ್ದ ಗುಣ-ಧರ್ಮಗಳುಳ್ಳ ಬೇರೊಂದು ವಸ್ತುವಿನ ಸಹಾಯದಿಂದ ಆವಶ್ಯಕತೆಯನ್ನು ತುಂಬಿಕೊಳ್ಳಬೇಕಾಗುತ್ತದೆ. ಆ ಪ್ರತಿನಿಧಿವಸ್ತುವು ಮೊದಲಿನದರಷ್ಟು ಒಳ್ಳೆಯದಾಗಿರಲಿಕ್ಕಿಲ್ಲ. ಆದರೆ "ಅಭಾವ" ವೈರಾಗ್ಯವನ್ನು ತಾಳುವುದಕ್ಕಿಂತ ಸಿಕ್ಕುವ ವಸ್ತುವಿನಿಂದ ಕೊರತೆ ತುಂಬಿಕೊಂಡು ಸಮಾಧಾನ ಹೊಂದಬೇಕಲ್ಲವೆ?

ಸದ್ಯದ ಯುದ್ಧವು ಪ್ರಾರಂಭವಾದ ಕೂಡಲೆ, ಜರ್ಮನಿಯ ಆರ್ಥಿಕ ಪರಿಸ್ಥಿತಿಯ ಬಗೆ ಅಲ್ಲಲ್ಲಿ ಚರ್ಚೆಗಳು ಎದ್ದುವು. 'ಆರ್ಥಿಕ ಬಂಧನದಿಂದ ಪಾರಾಗಿ, ತನ್ನ ದೇಶದಲ್ಲಿ ಸುಖವನ್ನು ನೆಲೆಗೊಳಿಸಲು ಜರ್ಮನಿಗೆ ಶಕ್ತಿಯಿದೆಯೆ?' ಎಂದು ಹಲವರು ಶಂಕಿಸಿದರು. 'ಈ



ಕಟ್ಟಿಗೆಯ ಅಭಾವದ ಮೂಲಕ, ಬೆಂಕಿಕಡ್ಡಿಯ ಮುಕ್ಕುಗಳ ಗುಳಿಗೆಗಳನ್ನು ಕ್ಲಿಪ್ಪಿನಲ್ಲಿ ಹಿಡಿದು ಕೊರೆಯುವುದು.

★

ಭಯಂಕರವಾದ ಯುದ್ಧದ ಪ್ರಭಾವದಿಂದ ಉಂಟಾದ ಸವಕಳಿಯನ್ನು ಪೂರಯಿಸಿಕೊಳ್ಳಲು ಜರ್ಮನಿಗೆ ಸಾಮರ್ಥ್ಯವಿದೆಯೆ !' ಎಂದು ವಿಚಾರಿಸಿರುವುದುಂಟು. ಜರ್ಮನಿಯ ಮುಂದಾಳುಗಳು ಮುಂಧೋರಣದಿಂದ ಇವೆಲ್ಲವನ್ನೂ ವಿಚಾರಿಸಿಯೆ ಇರಬಹುದು. ಅದೇಕೆ ? ಹಿಟ್ಲರನು ಅಧಿಕಾರಾರೂಢನಾದಂದಿನಿಂದಲೂ ಅವನು ಬ್ರಿಟನ್, ಫ್ರಾನ್ಸ್ ಇವುಗಳ ಸಂಗಡ ಯುದ್ಧಹೂಡಬೇಕೆಂಬ ಹವಣಿಕೆಯಲ್ಲಿಯೆ ಇದ್ದ. ಕಳೆದ ಮಹಾಯುದ್ಧವನ್ನು ತೀಕ್ಷ್ಣವಾಗಿ, ಸೂಕ್ಷ್ಮವಾಗಿ, ಆಳವಾಗಿ, ಅಭ್ಯಸಿಸಿ, ಅಂದುಮಾಡಿದ ತಪ್ಪುಗಳನ್ನೂ ಅಂದಿನ ಎಡರು ತೊಡರುಗಳನ್ನೂ ಮೊದಲೇ ತಿಳಿದುಕೊಂಡು, ಅವುಗಳಿಂದ ದೂರವಾಗಿರಬೇಕೆಂದು ಮೊದಲಿಂದಲೆ ದಕ್ಷತೆ ತೆಗೆದುಕೊಳ್ಳಬೇಕೆಂಬುದನ್ನು ಹಿಟ್ಲರ್ ಮರೆತಿರಲಾರ. ಕಳೆದ ಯುದ್ಧದಲ್ಲಿ ಜರ್ಮನಿಗೆ ಸೋಲುಬಂದುದರ ಕಾರಣವು ಆರ್ಥಿಕದಿಗ್ಬಂಧನವೆ. ಅದಕ್ಕೆ ತಲೆಗೊಟ್ಟು ನಿಲ್ಲಲು ಪ್ರಯತ್ನಿಸಿದ್ದಾರೆ ಇಂದು ಜರ್ಮನರು.

ಇದೊಂದು ಚಳವಳಿಯು ಪ್ರಾರಂಭವಾಯಿತು. ಇದಕ್ಕೆ "ಇರ್ಸಾಜ್" ಎನ್ನುವರು. ನೈಸರ್ಗಿಕ ಪದಾರ್ಥದ ಬದಲು ವೈಜ್ಞಾನಿಕ ಪ್ರಯೋಗ ಶಾಲೆಯಲ್ಲಿಯ ರಸಾಯನಗಳ ಸಂಮಿಶ್ರಣ (Synthetical process) ಗಳಿಂದ ಕೃತ್ರಿಮಪದಾರ್ಥಗಳನ್ನು ತಯಾರಿಸುವಿಕೆಗೆ "ಇರ್ಸಾಜ್" ಎಂದು ಹೆಸರು. ರಬ್ಬರವು ಗಿಡದ ರಸವಾಗಿದ್ದರೂ ಅದನ್ನು ಪ್ರಯೋಗಶಾಲೆಯಲ್ಲಿ ಸಿದ್ಧಮಾಡಲಿಕ್ಕೆ ಬರುತ್ತದೆ. ಪೆಟ್ರೋಲ್ ಎಣ್ಣೆಯು ಕಣಿಯಿಂದ ನೈಸರ್ಗಿಕವಾಗಿ ಸಿಕ್ಕುತ್ತಿದ್ದರೂ, ಅದನ್ನು ಕೂಡ ರಸಾಯನಗಳ ಬೆರಕೆಯಿಂದ ಮಾಡಲು ಬರುವುದು. ಯುದ್ಧವು ಪ್ರಾರಂಭವಾದ ಕೂಡಲೆ ಈ ಕೃತ್ರಿಮ ವಸ್ತುಗಳ ಕಾರಖಾನೆಗಳು ಜರ್ಮನಿಯಲ್ಲಿ ತುಂಬಾ ರಭಸದಿಂದ ಕೆಲಸಮಾಡಲು ತೊಡಗಿದುವು. ಆ ಕಾರಣದ ಮೂಲಕವಾಗಿಯೆ ಇಡಿಯ ವರುಷದ ವರೆಗೆ ಜರ್ಮನರಿಗೆ ಯುದ್ಧದಲ್ಲಿ ತನ್ಮಯರಾಗಲು ಸಾಧ್ಯವಾಯಿತು.

ಇಂದಿನ ಯುದ್ಧದಲ್ಲಿ ಎಣ್ಣೆಯ ಪೂರಯಿಕೆಯು ಹೆಚ್ಚಾಗಿ ಬೇಕಾಗುತ್ತದೆ; ಆದರೆ ಅವಿರತವಾದ ಈ ಯುದ್ಧಕ್ಕೆ ಬೇಕಾಗುವಷ್ಟು; ಜರ್ಮನಿಯಲ್ಲಿ ಎಣ್ಣೆಯ ಸಂಗ್ರಹವು ಇರದೆ ಇರುವುದರಿಂದ, ಅದರ ಸವಕಳಿಯನ್ನು ಪೂರಯಿಸುವುದಕ್ಕೆ ಅವರು ಒಂದು ಉಪಾಯವನ್ನು ಸಂಶೋಧಿಸಿದರು. ಅದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿದೆ. ಕಲ್ಲಿದ್ದಲಿಯಿಂದ ಎಣ್ಣೆಯನ್ನು ತೆಗೆಯುವುದೆಂದರೆ ಉಸುಕನ್ನು ಹಿಂಡಿ ಎಣ್ಣೆ ತೆಗೆದಂತೆ ಅಲ್ಲವೆ ? ಯುದ್ಧಕ್ಕೆ ಮೊದಲು ಜರ್ಮನಿಗೆ, ವರುಷಕ್ಕೆ ೬ ಮಿಲಿಯ ಟನ್ನುಗಳಷ್ಟು ಎಣ್ಣೆ ಬೇಕಾಗುತ್ತಿದ್ದಿತು. ಇಂದು ಈ ಕಲ್ಲಿದ್ದಲಿಯಿಂದ ಹೊರಡುವ ಎಣ್ಣೆಯು, ಆಗ ಬೇಕಾಗುತ್ತಿದ್ದುದರ ಅರ್ಧದಷ್ಟನ್ನು ಪೂರಯಿಸಬೇಕಾದರೆ ಸಾಕುಬೇಕಾಗುವುದು. ಈ ಎಣ್ಣೆಯನ್ನು ಕಲ್ಲಿದ್ದಲಿ ಮತ್ತು ಲಿಗ್ನಾಯಿಟ್ ಎಂಬ ವಸ್ತುವಿನಿಂದ ತೆಗೆಯುವರು. ಇದಕ್ಕೆ 'ಫಿಶರ್-ಟ್ರೊಪ್‌ಶ್' ಪದ್ಧತಿಯೆನ್ನುವರು.

ಎರಡನೆಯ ಸಂಶೋಧನೆಯೆ ಬಟಾಟಿಯಿಂದ ಮಧ್ಯಾರ್ಕ (Alcohol) ವನ್ನು ತೆಗೆಯುವುದು. ಇದನ್ನು ಪೆಟ್ರೋಲ್ ಎಣ್ಣೆಯೊಂದಿಗೆ ಬೆರಸಿ, ಯುದ್ಧದಲ್ಲಿ ಬಳಸುವ ಯಂತ್ರಗಳಿಗೆ ಉಪಯೋಗಿಸುತ್ತಾರೆ.

ಈ ಎಲ್ಲ ಬಗೆಯಿಂದ ತೆಗೆದ ಎಣ್ಣೆಯೆಲ್ಲ ಸೇರಿದರೂ, ಜರ್ಮನಿಯ ಸಾಧಾರಣ ಬಯಕೆಯನ್ನು ಕೂಡ ಇಂದು ಪೂರಯಿಸಲಾರದು. ಅದಕ್ಕಂತಲೆ ಜರ್ಮನಿಯ ದೃಷ್ಟಿ ರೊಮಾನಿಯದ ಎಣ್ಣೆಗಣಿಗಳ ಮೇಲಿದೆ.

ಹೋದ ಯುದ್ಧದ ಕಾಲದಲ್ಲಿ ಸಾಮಾನ್ಯ ಜನತೆಗೆ ಸಾಬೂನಿನ ಕೊರತೆ ಬಿದ್ದಿತು. ಆಗ ಕೃತ್ರಿಮ ಸಾಬೂನೊಂದನ್ನು ಸಿದ್ಧಮಾಡಿದ್ದರು. ಆದರೆ ಅದು ಬಹಳ ಒರಟಾಗಿದ್ದುದರಿಂದ, ಅದನ್ನು ಉಪಯೋಗಿಸುವುದಕ್ಕಿಂತ ಬಿಡುವುದೇ ಲೇಸೆಂದರು. ಈ ಸಲ ಅದಕ್ಕೂ ಮುಂದೆ ಹೋಗಿದ್ದಾರೆ. 'ಫಿಶರ್ ಟ್ರೊಪ್‌ಶ' ಪದ್ಧತಿಯಿಂದ ಪೆಟ್ರೋಲನ್ನು ತೆಗೆಯುವಾಗ 'ಪ್ಯಾರಾಫಿನ್' ಎಂಬ ಎಣ್ಣೆಯು ದೊರೆಯುವುದು. ಅದರ ಸಹಾಯದಿಂದ ಸಾಬೂನನ್ನು ಸಿದ್ಧಮಾಡುವರು. ಇದು ಒಳ್ಳೆಯದಾಗಿದ್ದರೂ, ಇದರ ಪೂರಯಿಕೆ ಬೇಡಿಕೆಯಷ್ಟು ಇಲ್ಲದುದರಿಂದ, ಸಾಬೂನನ್ನು ಇಂತಿಷ್ಟೆ ಉಪಯೋಗಿಸಬೇಕೆಂದು ವಿಧಿಸಲಾಗಿದೆ. ಈ ಹೊಸ ಸಾಬೂನು ಜರ್ಮನಿಯ ಸಾಬೂನಿನ ಬೇಡಿಕೆಯನ್ನು ೩೫%ರಷ್ಟು ಪೂರಯಿಸುವುದು.

ವಿಮಾನಗಳನ್ನು ಸಿದ್ಧಪಡಿಸಲು ಅಲ್ಯೂಮಿನಮ್ ಹೆಚ್ಚು ಉಪಯುಕ್ತವಾಗಿದ್ದುದರಿಂದ, ಅದನ್ನು ಸಾದಾ ಮಣ್ಣಿನಿಂದ ಮಾಡಲು ಅನುಕೂಲವಾಗುವಂತೆ ಸಂಶೋಧನೆಮಾಡಿದ್ದಾರೆ.

ಸೀಸ, ತಾಮ್ರ ಮುಂತಾದ ಧಾತುಗಳನ್ನು ಯುದ್ಧದ ಉಪಕರಣಗಳಿಗಾಗಿ ಉಪಯೋಗಿಸುತ್ತಿದ್ದುದರಿಂದ, ಜರ್ಮನರು ಕಾಜಿನ ನಳಿಕೆಗಳನ್ನು ಸಿದ್ಧಮಾಡಿದ್ದಾರೆ. ಮತ್ತು ಕಪ್ಪು-ಬಸಿಗಳನ್ನು ಸೆಲೊಲೈಡ್ (Celluloid) ನಿಂದ ಮಾಡಿ, ಕಾಜಿನ ಕೊರತೆಯನ್ನು ಕಡಮೆಮಾಡಿಕೊಂಡಿದ್ದಾರೆ. ಹತ್ತಿ-ಉಣ್ಣೆಗಳು ಯುದ್ಧಕ್ಕೆ ಬೇಕಾದುದರಿಂದ, ಕೃತ್ರಿಮರೇಶಿಮೆಯನ್ನು ಉಪಯೋಗಿಸುತ್ತಾರೆ. ಬಟಾಟಿಯಿಂದ ಕಾಗದವನ್ನು ಸಿದ್ಧಮಾಡುತ್ತಾರೆ. ೧೯೩೯ರಲ್ಲಿಯೆ ಈ ಬಟಾಟಿಯ ಕಾಗದದಿಂದ ಪತ್ರಿಕೆಗಳು ಅಚ್ಚಾಗತೊಡಗಿದುವು. ಇಂದು ಜರ್ಮನಿಯಲ್ಲಿ ಬಟಾಟಿಯ ಕಾಗದದ ಕಾರಖಾನೆಗಳು ಅನೇಕವಾಗಿವೆ.

ಇಂದಿನ ಈ ಭಯಂಕರಸ್ಥಿತಿಯಲ್ಲಿ ಜರ್ಮನರು ಯಾವ ವಸ್ತುವನ್ನೂ ಕೆಡಿಸಲಾರರು ; ಬೀಳುಗಳೆಯಲಾರರು. ಪ್ರತಿಯೊಂದು ವಸ್ತುವಿನಿಂದಲೂ ಪ್ರಯೋಜನ ಪಡೆದುಕೊಳ್ಳತೊಡಗಿದ್ದಾರೆ. ಅಡವಿಗಳಲ್ಲಿಯ ತರಗೆಲೆಗಳಿಂದ ಉಣ್ಣೆಯಂತಹ ವಸ್ತುಗಳನ್ನು ಸಿದ್ಧಮಾಡುತ್ತಲಿದ್ದಾರೆ. ಕಲ್ಲಿದ್ದಲಿ-ಸುಣ್ಣಗಳ ಸಹಾಯದಿಂದ ' ಬುನಾ ' ಎಂಬ ಕೃತ್ರಿಮ ರಬ್ಬರನ್ನು ಸಿದ್ಧಮಾಡಿದ್ದಾರೆ. ಕಾಜಿನಿಂದ ಅರಿವೆಯು ಮಾಡಲ್ಪಡುತ್ತಲಿದೆ.

ಮಿತ್ರಪಕ್ಷದವರು ಜರ್ಮನಿಯನ್ನು ಆರ್ಥಿಕ ದಿಗ್ಬಂಧನದಿಂದ ಬಿಗಿದು ಉಸಿರುಗಟ್ಟಿಸಿದರೆ, ಈ "ವಿಶ್ವಾಮಿತ್ರನ ಸೃಷ್ಟಿ"ಯಿಂದ ಅವರು ತಮ್ಮದೆ ಇದ ಇಂದ್ರಲೋಕವನ್ನು ನಿರ್ಮಿಸುವ ಸಾಮರ್ಥ್ಯವುಳ್ಳವರಾಗಿದ್ದಾರೆ. ಈ ಹೊಸ ಸೃಷ್ಟಿಗೆ ವೆಚ್ಚ ಹೆಚ್ಚು. ವೆಚ್ಚಕ್ಕಾಗಿಯೆ ಬೊಬ್ಬೆ ಬೀಳುವ ಪರಿಸ್ಥಿತಿ ಬಂದಿರುವಾಗ ವೆಚ್ಚದ ಹೆಚ್ಚಳವನ್ನು ತಡೆದುಕೊಂಡು ಈ 'ವಿಶ್ವಾಮಿತ್ರನ ಸೃಷ್ಟಿ'ಯಿಂದ ಸುಖಪಡೆಯುವುದೆಂತು? ಆದರೆ ಇತ್ತೀಚೆಯ ಪರಿಸ್ಥಿತಿಯು ಜರ್ಮನಿಗೆ ಹೆಚ್ಚು ಆಶಾದಾಯಕವಾಗಿದೆ. ಜರ್ಮನಿಯ ಅಭಿಯೋಗದಿಂದ ನಾರ್ವೆ, ಡೆನ್ಮಾರ್ಕ್ ಮೊದಲಾದುವು ಅದರ ಆಡಳಿತದಲ್ಲಿ ಬಂದಿವೆ. ಅಲ್ಲಿಯ ಸಾಮಾನು-ಸರಕುಗಳು ಜರ್ಮನಿಗೆ ಯುದ್ಧದ ಆಧಾರವನ್ನು ಒದವಿಸಲು ಅನುಕೂಲವಾಗುತ್ತಿವೆ. ಆದರೆ ಆದರೆ .... ಮುಂದಾಗುವುದನ್ನು ಇಂದು ಉಸಿರುವವರಾರು?

ಆಶೆ

ಗುಂಡಗುಂಡಿ ಶ್ರೀನಿವಾಸ

ನೀನು ಒಲಿವೆ ಎಂದು ತಿಳಿದು ಜೀವಿಸಿರುವೆನು
ನೀನೆ ಬರಲಿ! ಹೇಗೆ ಇರಲಿ! ತಾಳಿಕೊಳುವೆನು....|| ೧ ||
ವಿವಿಧ ರೂಪ ತಾಳಿ ನನ್ನ ಮನವ ಸೆಳೆಯುವೆ,
ಹಿಡಿಯ ಹೋಗೆ ನೀನು ಬರದೆ ಮಾಯವಾಗುವೆ....|| ೨ ||
ಎರಳೆ-ಜಲಕೆ ಮರುಳುತನದಿ ಜಿಂಕೆ ನೆಗೆವೊಲು
ಮರಳಿ ಮರಳಿ ಮೋಸಪಡುವೆ ನಿನ್ನ ನೆವದೊಳು....|| ೩ ||
ಮೋರೆ ವಿವಾರಿ ಹೋಗದಿರು! ಸರಿಯೆ ನಾರಿಗೆ ?
ಧಾರೆ ಎರೆದು ಕೊಳ್ಳು ನಿನಗೆ ಮರೆಯುವಾತಗೆ....|| ೪ ||
ಮಿಂಚಿನಂತೆ ಚಂಚಲಾಗಬೇಡ ಪ್ರೀಯಳೇ
ವಂಚಿಸದಲೆ ಒಲಿಯುವಿಯಾ ಹೇಳು ನನ್ನೊಳೇ....|| ೫ ||
ಬೇಡ, ಬೇಡ ನೋರೆದೋರಬೇಡ ಎಂದಿಗೂ
ದೂಡುತಿರುವೆ ಕೆಳಗೆ ನನ್ನ ಎಂದೆಂದಿಗೂ.... || ೬ ||

ದೀನ ಕವಿ

ಶ್ರೀ. ವಿ. ಎನ್. ಭೂಪಾಲಂ

ಕಾವ್ಯದೇವಿ ಒಲಿದು ಬಾರ !
ದೀನ ಕವಿಗೆ ಒಸಗೆ ತಾರ !
ಕವನ ರನ್ನದೊಡವೆ ಇಟ್ಟು
ಕವಿಯ ಮಾನಿಸು !
ಕಾವ್ಯಜೊನ್ನ ಖನಿಯ ಕೊಟ್ಟು
ಸಿರಿಯ ಕಾಣಿಸು !

ಮಾತೆ ವಾಣಿ ನಲಿದು ಬಾರ,
ಕವಿಯ ಹೃದಯ ಮಿಡಿದು ಸಾರ,
ಭಾವಪುಷ್ಪ ವರ್ಷ ಸುರಿಸಿ
ಇರವ ಮರೆಯಿಸು !
ಕಾಯುನುಡಿ ಪತಾಕೆ ಮೆರೆಸಿ
ಕವಿಯ ಮೆರೆಯಿಸು.



ನಿಮಗೆ ನೆಟ್ಟಗಾಗದ ಕಾರಣ ಒಂದೇ. ಅಂದರೆ ಗುಣಪಡುವ ಆಶೆಯಿಂದ 'ನೀವು ಇಲ್ಲಿಯವರೆಗೆ ಸೇವಿಸಿದ ಔಷಧಗಳೆಲ್ಲ ನಿರುಪಯೋಗಿಯಾಗಿದ್ದುವು. 'ಪುರೋಹಿತ ಶ್ವಾಸಹಾರಿ'ಯು ಮಾತ್ರ ನಿಮಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನಿಂತಿಸದೆ, ಬೇರುಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದನ್ನು ತೆಗೆದುಕೊಳ್ಳಹತ್ತಿದ ಕೂಡಲೆ ಕೆಮ್ಮು ನಿಲ್ಲುವುದು, ಕೇಕು ಕಡಿಮೆಯಾಗುವುದು, ಶಾಚದ ತೊಂದರೆ ಉಳಿಯುವುದಿಲ್ಲ, ಪಚನ ಕ್ರಿಯೆಯು ನೆಟ್ಟಗಾಗುವುದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸವು ಗಟ್ಟಿಮುಟ್ಟಾಗಿ, ದಮ್ಮು ಹೆಸರುಳಿಯದಂತೆ ನೆಟ್ಟಗಾಗುವುದು.

ಪುರೋಹಿತ ಶ್ವಾಸಹಾರಿಯು ೪ ಔ. ೭ ಔ. ಮತ್ತು ೧೨ ಔ. ಬಾಟ್ಲಗಳಲ್ಲಿ ಕ್ರಮವಾಗಿ ೨-೨ ರೂ. ೪-೧೨ ರೂ ೭-೮ ರೂ. ಗಳಿಗೆ ಎಲ್ಲ ಕಡೆಗೆ ಸಿಗುವುದು.

ತರಿಸಿಕೊಳ್ಳುವ ವಿಳಾಸ :—

ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಇಲ್ಲವೆ ಮುಂಬಯಿ ಸೋಲ ಏಜಂಟರು :

ವನಮಾಳಿ, ಭಿಕಾ ಮತ್ತು ಕಂಪನಿ,

ಪ್ರಿನ್ಸೆಸ್ ಸ್ಟ್ರೀಟ, ಮುಂಬಯಿ.

ದಮ್ಮಿಗೆ ಯಶಸ್ವಿಯಾದ ಡಾಕ್ಟರರ ಉಪಾಯವು.



(೨೬೪ ನೆಯ ಪುಟದಿಂದ ಮುಂದುವರಿದುದು)

ಸುವರ್ಣಮಹೋತ್ಸವದ ಎಂದರೆ ಚಿನ್ನದ ಹಬ್ಬದ ಸುಪ್ರಸಂಗ ಒದಗಿ ಬಂದಿದೆ. ಕನ್ನಡಿಗರ ಸಂಚಿಗೆಗೆ ಪಾತ್ರರಾದ ಕಾರ್ಯಕರ್ತರು ಕೆಲವರು ಸೊಂಟಬಿಗಿದು, ಸುವರ್ಣಮಹೋತ್ಸವದ ಸಮಯದೊಳಗಾಗಿಯೆ ಸಂಘದ ತಲೆಯ ಮೇಲಿದ್ದ ಸಾಲದ ಹೊರೆಯನ್ನು ತೀರಿಸುವೆನೆಂದು ಪ್ರತಿಜ್ಞಾಬದ್ಧರಾಗಿ ಕಾರ್ಯಕ್ಕೆ ತೊಡಗಿದ್ದಾರೆ. ಹಲವು ಜನ ಉದಾರಬುದ್ಧಿಯ ಲಕ್ಷ್ಮೀಪುತ್ರರು ಅವರ ಕಾರ್ಯಕ್ಕೆ ಸಹಾನುಭೂತಿಯನ್ನು ಸಕ್ರಿಯವಾಗಿ ತೋರಿಸಿ, ಸಂಘದ ಪುನರುಜ್ಜೀವನದ ಬಯಕೆಗೆ ಭರವಸೆಯ ಸ್ವರೂಪವನ್ನು ಕೊಡುತ್ತಿದ್ದಾರೆ.

ಬರಲಿರುವ ಡಿಸೆಂಬರ ಕೊನೆಯ ವಾರದಲ್ಲಿಯೆ ಸಂಘದ ಸುವರ್ಣಮಹೋತ್ಸವ ಸಮಾರಂಭ ಜರಗುವುದು, ಅದೇ ಸಮಯದಲ್ಲಿಯೆ ೨೫ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ತನ್ನ ವಿವಿಧಮುಖ ಸಾಂಸ್ಕೃತಿಕ ಕಾರ್ಯಕಲಾಪಗಳೊಂದಿಗೆ ಧಾರವಾಡದಲ್ಲಿಯೆ ಸೇರಲಿರುವುದು. ಸುವರ್ಣಮಹೋತ್ಸವ ಮಾಡಿ ಸಂಘವನ್ನು ಸಾಲದ ರಾಹುವಿನಿಂದ ವಿಮುಕ್ತಗೊಳಿಸಬೇಕು; ಸಾಹಿತ್ಯ ಸಮ್ಮೇಳನದಿಂದ ಮುಂದಿನ ಕಾರ್ಯಯೋಜನೆಯನ್ನು ನಿರ್ಣಯಿಸಿಕೊಳ್ಳಬೇಕು. ಇವೆರಡೂ ಕಾರ್ಯಗಳನ್ನು ಕೈಕೊಂಡು ಮಾಡಲಿರುವ ಧಾರವಾಡದ ಕನ್ನಡಿಗರಿಗೆ, ಅಖಿಲಕರ್ನಾಟಕವು ಉದಾರದೃಷ್ಟಿಯಿಂದ ಸಹಾಯ ಮಾಡುವುದು ಆವಶ್ಯಕ ಕರ್ತವ್ಯವಾಗಿದೆ. ಕ. ವಿ. ವ. ಸಂಘವು ಸುಸಂಘಟಿತವಾಗಿ, ಹಲವು ಕಾಲದವರೆಗೂ ಕನ್ನಡಿಗರಿಗೆ ಮಾರ್ಗದರ್ಶಕವಾಗಿ ಕೆಲಸಮಾಡುತ್ತಿರಲೆಂದು ನಮ್ಮ ಅಂತಃಕರಣದ ಕೋರಿಕೆ !

ದೀಪಾವಳಿ ಸಂಚಿಕೆ

ನವಂಬರ ಸಂಚಿಕೆಯೆ ದೀಪಾವಳಿ ಸಂಚಿಕೆಯಾಗಿ ಹೊರಡುವುದೆಂದು ಈ ಮೊದಲೆ ಅರಿಕೆ ಮಾಡಿಕೊಳ್ಳಲಾಗಿದೆಯಷ್ಟೆ. ಇದರಲ್ಲಿ ಅಖಿಲ ಕರ್ನಾಟಕದ ಸುಪ್ರಸಿದ್ಧ ಸಾಹಿತ್ಯಿಕರ ಸರಸ ಲೇಖನಗಳು ಪ್ರಕಟವಾಗುವುವಲ್ಲದೆ, ಸುಂದರವಾದ ಚಿತ್ರ, ಹೊಳಪಿನ ಹಾಳೆ, ಅಂದವಾದ ಅಚ್ಚು ಇವೆಲ್ಲವುಗಳಿಂದ ಇದು ಆಕರ್ಷಕವೆನಿಸುವಂತಾಗುವುದು. ಯುದ್ಧದ ಮಹರ್ಘತೆಯ ಮೂಲಕ ಸಂಚಿಕೆಗಳನ್ನು ನಿಯಮಿತ ಸಂಖ್ಯೆಯಲ್ಲಿ ಹೊರಡಿಸಲಾಗುವುದು. ಬೇಕಾದವರು ಮೊದಲೆ ಬರೆದು ತಿಳುಹಿಸದಿದ್ದರೆ ಖಂಡಿತ ನಿರಾಶರಾಗಬೇಕಾಗುವುದು. ನಮ್ಮ ಅಲ್ಲಲ್ಲಿಯ ಏಜಂಟರು ಕೂಡ, ತಮಗೆ ಹೆಚ್ಚಿಗೇನಾದರೂ ಪ್ರತಿಗಳು ಬೇಕಾಗಿದ್ದರೆ ಕೂಡಲೆ ಬರೆದು ತಿಳುಹಿಸಬೇಕು. ಜಾಹೀರಾತುಗಳನ್ನು ಕೊಡುವವರು ಜಯಂತಿಯ ದೀಪಾವಳಿ ಸಂಚಿಕೆಯಲ್ಲಿ ಕೊಡುವುದನ್ನು ಮರೆಯಲಾಗದು.

ಕ್ಷಮಾಯಾಚನೆ

ಕಳೆದ ಸಂಚಿಕೆ ಒಂದೆರಡು ದಿನ ಮಾತ್ರ ವಿಲಂಬವಾಯಿತೆಂದು ಕ್ಷಮೆಯನ್ನು ಕೋರಿರುವುದರಲ್ಲಿಯೆ, ಈ ಸಲದ ಅನಿವಾರ್ಯ ಅಡಚಣೆಗಳ ಮೂಲಕ ಸಂಚಿಕೆ ಒಂದೆರಡು ವಾರ ವಿಲಂಬವಾಗಿ ಹೊರಟಿತು. ಇದಕ್ಕಾಗಿ ನಾವು ಯಾವ ಮುಖದಿಂದ ನಮ್ಮ ವಾಚಕರಲ್ಲಿ ಕ್ಷಮೆಯಾಚಿಸೋಣ ?

—ಸಂಪಾದಕ

ಸಮವಸ್ತ್ರ

ಅಲ್ಲವೆ

ವಿಷಮ-ವಿವಾದ

(ಒಂದು ಅಂಕಿತ ನಾಟಕ)*

★

ಶ್ರೀ. ಪಾಟೀಲ ಹನುಮಂತರಾಯರು ಎಂ. ಎ.

—: ಪಾತ್ರ ವಿವರ :—

ಅಕ್ಕಾ (ತರಗತಿಯ ಉಪಾಧ್ಯಾಯಿನಿ)

ರಮಾ ಕಮಾ ಪಮಾ	ಇವರೆಲ್ಲರೂ ವಿದ್ಯಾರ್ಥಿನಿ- ವಿದ್ಯಾರ್ಥಿಗಳು. ಸುಮಾ	ಚಂದೂ ಬಿಂದೂ ನಂದೂ

೫-೬ 'ಹೆಣ್ಣು' ಹುಡುಗಿಯರು. ೧೦-೧೨ 'ಗಂಡು' ಹುಡುಗರು.

★

[ಒಂದು ಇಂಗ್ಲಿಶ್ ಶಾಲೆಯಲ್ಲಿಯ ಮೂರನೆಯ ಇಯತ್ತೆಯ ಕೋಣೆ. ಪರದೆಯು ಮೇಲಕ್ಕೇಳುವುದಕ್ಕಿಂತ ಮೊದಲು, ಹೊರಗಿನಿಂದಲೆ ಒಳಗಿನ ಹುಡುಗರ ಕಿಲಕಿಲಾಟವು ಕೇಳಬರುತ್ತದೆ. ಬಾಲಿಕೆಯರ ಚೀರುದನಿಯ ಮಾತುಗಳೂ, ಬಾಲಕರ ಬಿರುಸುನುಡಿಗಳೂ ಬೆರೆತು, ಏನೋ ಒಂದು ಬಗೆಯ ಘುಂಜಾರವವು ಎದ್ದು, ನೋಟಕನು ಬೆಳಗಿನ ಮೊದಲ ಜಾವದಲ್ಲಿ ಒಂದು ಹೂದೋಟದ ಬಳಿ ಬಂದೆನೇನೋ ಎಂಬ ಭಾವನೆಯನ್ನು ತಾಳುವನು ಆದರೆ ಆ ಬಗೆಯ ಕಾವ್ಯಮಯ ಕಲ್ಪನೆಯನ್ನು ಬರಮಾಡಿಕೊಂಡ ಒಂದು ಕ್ಷಣದಲ್ಲಿಯೆ, ಪರದೆಯು ಮೇಲೆದ್ದಾಯಿತು. ಅವನು ಮತ್ತೆ ಸತ್ಯಸೃಷ್ಟಿಯ ಹಿಡಿತದಲ್ಲಿ ಸಿಗಲು, ಕುರ್ಚಿಯ ಮೇಲೆ ಧೊಪ್ಪೆಂದು ಬಿದ್ದು, ಎಚ್ಚತ್ತು, ಮತ್ತೆ ಮುಂದೆಬಂದುದನ್ನು ನೋಡಿಯೆ ತೀರುವ ನಿರ್ಧಾರದಿಂದ ಸೆಟೆದು ಕುಳಿತುಕೊಳ್ಳುವನು. ಅವನ ಎದುರಿಗೆ, ರಂಗಭೂಮಿಯ ಮೇಲೆ ಒಂದು ಮೇಜು ಇದೆ. ಆ ಮೇಜಿನ ಹಿಂಬದಿಯಲ್ಲಿ, ಸಂಸಾರದಲ್ಲಿ ಬೆನ್ನ ಹಿಂದೆಯುಳಿದರೂ ರಕ್ಷಣೆಮಾಡುವ ಹೊಣೆಯನ್ನು ಹೊತ್ತ—ಥಾಲಿನಂತಹ ಹೆಂಡತಿಯಂತಿರುವ— ಒಂದು ಕುರ್ಚಿಯಿದೆ. ಇದು ಶಾಲೆಯ ಒಂದು ವರ್ಗದ ಕೋಣೆ ಎಂದು ಅವನು ಇಷ್ಟರ ಮೇಲಿಂದ ತಿಳಿದುಕೊಂಡರೂ, ಅವನಿಗೆ ಸಮಾಧಾನವಾಗುವುದಿಲ್ಲ. ಒಂದು ವರ್ಗಕ್ಕೆ ಒಬ್ಬ ಶಿಕ್ಷಕನೆಂದಮೇಲೆ ಒಂದೇ ಕುರ್ಚಿ ಸಾಕು; ಆದರೆ ಇಂದು ಈ ವರ್ಗದ, ಆ ಮೇಜಿನಿಂದ ತುಸು ಅಂತರದ ಮೇಲೆ, ಎಡಬದಿಗೆ, ಒಂದಕ್ಕೆ ಸರಿಸಿ ಹಾಕಿದ ಇನ್ನೊಂದು ಕುರ್ಚಿಯನ್ನು ನೋಡಿ ಅವನು ಗಾಬರಿಗೊಳ್ಳುವ ಆದೇ ಗಾಬರಿಯಲ್ಲಿ ಅವನು ಕಣ್ಣುಗಳನ್ನು ಉಜ್ಜಿಕೊಂಡು ಚೆನ್ನಾಗಿ ನೋಡಲಾಗಿ, ಆ ವರ್ಗದೊಳಗಿನ ಬಾಕುಗಳು, ಮೇಜಿನ ಎರಡೂ ಬದಿಗೆ, ಮೂಲೆಯ ಮೇಲೆ—ನೋಟಕರಿಗೆ ಎದುರಾಗುವಂತೆ—ಹಾಕಿದ್ದುದನ್ನು ನೋಡುವನು. ಅವನ ಎಡಗಡೆಯ ಬಾಕುಗಳ ಮೇಲೆ ಕೇವಲ ಹುಡುಗಿಯರೇ ಕುಳಿತಿದ್ದಾರೆ. ಆದರೆ ಬಲಗಡೆಯ ಬಾಕುಗಳ ಮೇಲೆ ಕುಳಿತ ಹುಡುಗರು ಹುಡುಗಿಯರ ಎರಡರಷ್ಟು ಇದ್ದುದನ್ನು ನೋಡಿ, ಅವರು ಗದ್ದಲವನ್ನೂ ಹುಡುಗಿಯರಿಗೆ ಎರಡರಷ್ಟು ಮಾಡುತ್ತಾರೆಂದು ಮಾತ್ರ ತಿಳಿಯುವುದಿಲ್ಲ. ಹುಡುಗಿಯರು ಚಿವುಟುವುದು, ಚೀರುವುದು, ಚೀತ್ಕಾರವಿಡುವುದು ಇವುಗಳನ್ನು ಮಾಡುತ್ತಿದ್ದಾರೆ; ಗಂಡುಗಳು ಹೊಡೆದಾಡುವುದು, ಹಾರಾಡುವುದು, ಹೇಕರಿಸುವುದು ಇವುಗಳನ್ನು ನಡೆಯಿಸಿವೆ. ಅಷ್ಟರಲ್ಲಿ —]

ಕಮಾ:— (ಯಾರಿಗೂ ಕೇಳಿಸದಂತೆ) ಪುಸ್ತಕಾ ಯಾಕ ತಂದ್ಯಾಕೆ? (ಎಂದು ರಮಾನನ್ನು ಕೇಳುವಳು)

ರಮಾ:— (ಅಣಕಿಸುವ ದನಿಯಲ್ಲಿ) ಯಾಕಂದ್ರ? ನೀ ಸಾಲಿಗೆ ಯಾಕ ಬರತೀದ್ಯಾಕೇ?

ಪಮಾ:— ಇಕೀದು ಹೀಂಗೇ ನೋಡು. . ಯಾವಾಗಲೂ; ವಾಂಡ ವಾಂಡ ಉತ್ತರ! ಒಮ್ಮೆರೆ ನೆಟ್ಟಗೆ ಮಾತಾಡಿದ್ದು ನೆನಪದಽ ಏನು ನಿನಗ? ಅದಕ್ಕಽ ನಾ ಅನ್ನೋದು, ನಿನಗ 'ರಮಾಬಾಯಿ ಜಕ್ಕಲಿ' ಅನ್ನೋದರ ಬದಲು 'ರಮಾಬಾಯಿ ಚಕ್ಕಲಿ' ಅಂತ ಹೆಸರಿಡಬೇಕೂ ಅಂತ. ಮುಳ್ಳು ಮುಳ್ಳು ಮಾತು, ಡೊಂಕು ಡೊಂಕು ಉತ್ತರ!

ಚಂದೂ:— (ಅಷ್ಟರಲ್ಲಿ ದೊಡ್ಡದನಿಯಿಂದ) ಏ ಬಿಂದೂ. . ಏಳೋ ಮಹಾರಾಯಾ! ಆ ಪುಸ್ತಕದ ಕೊಳಚ್ಯಾಗಿಂದಽ ಎದ್ದು ಬಾ ನಮ್ಮ ಕಡೆ ಒಮ್ಮೆ! ಈವೊತ್ತರೇ ಬಿಡು ಹೂರು! (ಎಂದು ಅವನ ಕಿವಿಯನ್ನು ಹಿಡಿದು ಅಲುಗಾಡಿಸುವನು.)

ಬಿಂದೂ:—(ಪ್ರಯಾಸದಿಂದ ಮೇಲೆ ನೋಡಿ) ಈವೊತ್ತರೇ. . ಅಂದರ?. . ಮುಹೂರ್ತ ಚೆಲೋ ಅದಽ ಏನು?

ನಂದೂ:—ಹೌದಽ. . ಬಂತು ನೋಡು ಇವನ ಮುಹೂರ್ತ! ನೋಡಿದರ ನಾ ವೈದಿಕ ಭ್ರಾಂಬರ ಮಗ. . ಅಂಥಾದು ಇವಗ್ಯಾಕಪಾ ಮುಹೂರ್ತದ ಮಾತು!

ಚಂದೂ:—(ಚೇಷ್ಟೆಯಲ್ಲಿ) ಓಹೋ, ಈಗ ತಿಳೀತು. ಅದಕ್ಕಽ ಇಷ್ಟು ಓದತಾನೇನು ಇಂವಾ. ಮುಂದೆನೆಂತೂ ಆಗೇದ. . ಇನ್ನ ಲಗೂನಽ ಮ ಎಂದಿನ ಕಾರ್ಯದ ಮುಹೂರ್ತ. . (ಎನ್ನುವಷ್ಟರಲ್ಲಿ ಎದುರಿಗಿನ ಹುಡುಗಿಯರ ಗಲಾಟೆಯನ್ನು ನೋಡಿ, ಅಷ್ಟಕ್ಕೆ ಮಾತನ್ನು ತಡೆಯುವನು.)

ಕಮಾ:—(ಗುಡುಮುರಿಗೆಯ ಕೊನೆಗೆ) ಅದೇನಿಲ್ಲ; ಸುಮ್ಮನೆ ಹೋಗಿ ಪುಸ್ತಕಾ ಇಟ್ಟುಬಾ ರಮಾ. ಈವೊತ್ತೇನು ಟೀಚರ್‍ರಿಗೆ ಪುಸ್ತಕ ಬೇಕಾಗೋದಿಲ್ಲ!

ರಮಾ:— (ಸಿಟ್ಟಿನಿಂದ) ಸಾಕು ಬಿಡೇ; ಟೀಚರ್‍ರಿಗೆ ಎಂದ ಪುಸ್ತಕ ಬೇಕಾಗತದ? ಅವರಿಗೆ ಅಭ್ಯಾಸದ ನೆನಪು ಇದ್ದರ ಹೌದಲ್ಲೊ!

ಪಮಾ:—(ಬೇಸತ್ತು) ಏ ಮಹಾರಾಯತೀ, ಇವತ್ತ ಅವರಿಗೆ ಅಭ್ಯಾಸದ ನೆನಪು ಆಗಬಾರದಂತಽ ಇದೆಲ್ಲಾ ಆಡಂಬರ. . (ಎಂದು ಕುರ್ಚಿ-ಬಾಕುಗಳ ಪರಿಯನ್ನು ತೋರಿಸುವಳು.)

* ಇದರ ಎಲ್ಲ ಒಪೆತನವು ಭಾರತದ ಬಡತನಕ್ಕಾಗಿ ಬರೆಹಗಾರರಿಂದ ಮಾಸಲಾಗಿರಿಸಲ್ಪಟ್ಟಿದೆ.

ನಂದೂ:— (ಗಡಿಬಿಡಿಯಿಂದ) ಏ ಮುಚ್ಚಿಡೋ ಪುಣ್ಯಾತ್ಮಾ ಆ ಪುಸ್ತಕಾ! .. ಈವೊತ್ತು ಓದಿಲ್ಲ .. ಡಿಬೇಟ್ ಅದ.

ಚಂದೂ:— ಏ ನಂದೂ .. ಡಿಬೇಟ್ ಕನ್ನಡದೊಳಗೋ ಇಂಗ್ಲೀಶದೊಳಗೋ ? .. ಗೊತ್ತದ ಏನು ನಿನಗ .. ?

ನಂದೂ:— (ಗೊತ್ತಿರದೆ ತತ್ತರಿಸುತ್ತ) ಏನಿದ್ದರೇನು .. ಈ ಬಿಂದ್ಯಾಗ ಪುಸ್ತಕಾ ಮುಚ್ಚಿಡಲಿಕ್ಕೇನು... !

ರಮಾ:— (ಹವಣಿಗೆ) ಅಂಥಾಂಗೇಕೆ, ಡಿಬೇಟಿಗೆ ಕನ್ನಡದೊಳಗ ಏನು ಅಂತಾರ ಗೊತ್ತ ಇಲ್ಲಲ್ಲ ನನಗ! .. ಹಃ ಹಃ ನಾವೂ ಶಾಣ್ಯಾರು .. !

ಕಮಾ:— (ಸಂಭ್ರಮದಿಂದ) ಅಪ್ಪ್ಯಾಕ .. ಇಲ್ಲೇ ಟೀಚರ್ ಒಂದರಲ್ಲ! ಕೇಳಿಯೇ .. (ಎನ್ನುವಷ್ಟರಲ್ಲಿ 'ಶಾಲೆಯ ಸಮವಸ್ತ್ರವನ್ನುಟ್ಟ ಪ್ರಾಗತಿಕ ಸ್ತ್ರೀಯೆಂದರೆ ನಾನೇ ಒಬ್ಬಳು' ಎಂಬುವ ಮುಖದಿಂದ, ಬಿಳಿಯಂಚಿನ ಕರಿಯ ಪತ್ತಲವನ್ನು ದುಂಡಾಗುಟ್ಟುಕೊಂಡು, ಓರಣದ ಒಬ್ಬ ಯುವತಿಯು ಅಲ್ಲಿ ಪ್ರವೇಶಿಸುವಳು. ಅವಳ ಕೈಯಲ್ಲಿ ಒಂದು ದೊಡ್ಡ ಗ್ರಂಥವಿದೆ.)

ಸುಮಾ:— (ಚಟ್ಟನೆ ಎದ್ದುನಿಂತು) ಗುಡ್‌ಮಾರ್ನಿಂಗ್ ಟೀಚರ್! (ಎಂದು ಎಡಗಡೆಯ ಮೂಲೆಯಲ್ಲಿ ಕುಳಿತಿರುವ ಬಾಲಿಕೆಯು ನುಡಿದು ಪೆಚ್ಚಾಗುವಳು.)

ಅಕ್ಕಾ:— (ದಿನದ ದನಿಯಲ್ಲಿ ದರ್ಪದಿಂದ) Good morning children. ಹಂ (ಎಂದು ಆ ಮೇಜಿನ ಹಿಂದಿನ ಕುರ್ಚಿಯನ್ನು ಊರಿಕೊಂಡು, ಕೊಡ್ರುವಳು ಮತ್ತು ಸರಸರನೆ ಆ ದೊಡ್ಡ ಪುಸ್ತಕದ ಒಂದೆರಡು ಪುಟಗಳನ್ನು ತಿರುಹಿ ಹಾಕಹತ್ತುವಳು. ಅಷ್ಟರಲ್ಲಿ ಆಕೆ ಕೆಳಕ್ಕೆ ಮೋರೆ ಹಾಕಿದುದೇ ಒಂದು ಸುಸಂಧಿ ಎಂದು, ಎಡಗಡೆಗೆ ಕಮಾ, ಪಮಾ ಇವರು ಕೂಡಿ, ರಮಾನ ಮೇಲೆ ಮುತ್ತಿಗೆ ಹಾಕಿ, ಆಕೆಯ ಪುಸ್ತಕವನ್ನು ಕಸಿದು, ಕಿಟಕಿಯೊಳಗಿಂದ ಹೊರಕ್ಕೆ ಎಸೆಯುವರು. ಇತ್ತ ಬಲಗಡೆಗೆ ಚಂದೂ ಮತ್ತು ನಂದೂ ಇವರು ಬಿಂದೂನ ಮೇಲೆ ದಾಳಿ ಮಾಡಿದರು. ಆ ಪುಸ್ತಕ ಹರಿದು, ಅವನ ಕೈ ಮುರಿಯುವ ವರೆಗೆ ಬಂದರೂ ಅವನೇನು ಪುಸ್ತಕ ಬಿಡಲಿಲ್ಲ. ಈ ಗದ್ದಲವನ್ನು ಕೇಳಿ)

ಅಕ್ಕಾ:— silence! ಹಂ. ಇವತ್ತೇನದ ?

ಸುಮಾ:— (ಅಲ್ಲಿಂದಲೇ) ಕನ್ನಡರಿ!

ಅಕ್ಕಾ:— (ರೊಚ್ಚಿನಿಂದ) ಕನ್ನಡ ಅಂಬೂದು ನನಗೂ ಗೊತ್ತದ! ಕವಿತಾನೋ, ಏನು ವಾಚನನೋ ಅದನ್ನು ಹೇಳಿರಿ!

ಚಂದೂ:— (ಧೈರ್ಯದಿಂದ) ಇವತ್ತೇನೂ ಇಲ್ಲರಿ .. ; ನಾವ್ಯಾರೂ ಪುಸ್ತಕಾ ಸುದ್ಧಾ ತಂದಿಲ್ಲರಿ!

ಅಕ್ಕಾ:— sitdown (ಅವನು ಕುಳಿತುದನ್ನೇ ನೋಡಿ) ಏನ್ಹಾಂಗಂದರ ?

ಬಿಂದೂ:— (ಬಿಕ್ಕುತ್ತ) ನಾ .. ಪುಸ್ತಕಾ ತಂದಿದ್ನಿರಿ .. ಟೀಚರ್! .. ಇವರಿಬ್ಬರೂ ಅದನ್ನ ಕಸಿದು, ಮುಚ್ಚಿಡಲಿಕ್ಕೆಹೋಗಿ .. ಅದನ್ನ .. ಹಃ ಹಃ (ಎಂದು ದೊಡ್ಡ ದನಿಯಿಂದ ಅಳುವನ್ನು ತೆಗೆಯುವನು.)

ನಂದೂ:— ನಾ ಅಲ್ಲರೀ ಟೀಚರ್ .. ಮತ್ತರಿ .. ಇವತ್ತ ಡಿಬೇಟ್ ಅದ ಅಂತಿಷ್ಟು ಹೇಳಿದ್ನರಿ .. ಚಂದೂ ಅಂವಗ!

ಕಮಾ:— (ಹೆದರಿ) ಟೀಚರ್ .. ಇವತ್ತ ಡಿಬೇಟ್ ಅದ ಅಂತ ನಾವು ಬುಕ್ಕು ತಂದಿಲ್ಲರಿ .. ಅಂಥ್ಹಾಂಗರಿ ಟೀಚರ್, ಡಿಬೇಟಿಗ ಕನ್ನಡದಾಗ ಏನಂತಾರ್ರಿ ?

ಅಕ್ಕಾ:— (ಎಲ್ಲರನ್ನೂ ದುರಿತು) ಓಹೋ, ಹೌದಲ್ಲ! ಇವತ್ತಿನ ದಿನಾ ಡಿಬೇಟ್ ಅದ (ಎಂದು ತನ್ನ ಸುತ್ತಲಿನ ಬಾಕು, ಕುರ್ಚಿಗಳನ್ನು ಬದಲಿಸಿಟ್ಟುದನ್ನು ನೋಡಿ, ಮುನಗಾಣಿಕೆ ಮಾಡಿಕೊಂಡು, ಕುರ್ಚಿಯಿಂದ ಏಳುವಳು. ಕೆಲವು ಹುಡುಗರ ಮೋರೆಯ ಮೇಲೆ ಅಧೀರತೆಯು ವ್ಯಕ್ತವಾಗುತ್ತಿದ್ದರೆ, ಬೇರೆ ಕೆಲವು ಹುಡುಗರು ಬರುವ ಸಂಗತಿಗಳಿಗಾಗಿ ತವಕಪಡಹತ್ತಿದ್ದಾರೆ. ಆ ನೋಟವನ್ನು ಇನ್ನೊಮ್ಮೆ ಇಡಿಯಾಗಿ ನೋಡಿ, ಎದ್ದುನಿಂತು) ಹಂ, ಡಿಬೇಟು .. ಡಿಬೇಟಿಗೆ, ಕನ್ನಡದಾಗ, ಅಂದರ ಸಂಸ್ಕೃತದಾಗ 'ವಾದ-ವಿವಾದ' ಅಂತಾರ. ಅದಕ್ಕ ಕನ್ನಡದಾಗ ಕೆಲವರು 'ಮಾತಿಗೆ ಮಾತು' ಅಂತಾರ. ಆದರ ಅದು ಅಸಂಯ್ ಕಾಣೋದರಿಂದ, ನಾವು 'ವಾದ-ವಿವಾದ' ಅನ್ನೋಣ .. ಅಂದರ ಅನ್ಲಿಕ್ಕೆ ಸರಳ ಆಗತದ .. ಹಂ. ಸುರೂ ಮಾಡಿರಿನ್ನ!

ಪಮಾ:— (ಹುರುಪಿನಿಂದ ಒಮ್ಮೆಲೆ) ಏನಿಲ್ಲರೀ ಟೀಚರ್, 'ಮಾತಿಗೆ ಮಾತು' ಇದೇ ಚಂದ ಕಾಣತದರೀ .. ನಾವೂ ಹಾಂಗ ಅಂತೇವಿ—ಹುಂ ಏಳ ಕಮಾ, ಮತ್ತ ಮೊನ್ನೆ ಒಳೆ ಹಾರಾಡಿ ಕೋತಿ ಹೆಸರು ಕೊಟ್ಟಿದ್ದಿಲಾ .. ಮಾತಾಡತೀನೀ ಅಂತ!

ಕಮಾ:— (ಎದ್ದುನಿಂತು) ಈಗೆಲ್ಲಿ ಒಲ್ಲೇ ಅಂತೀನಿ .. ನಾನು ? .. ನೋಡ್ರಿ ಟೀಚರ್ (ಕೈಗಳನ್ನು ಒರಸಿಕೊಳ್ಳುತ್ತಾ) ಸಮವಸ್ತ್ರಗಳನ್ನು ಹಾಕಿಕೊಂಡರೆ ನಮ್ಮೆಲ್ಲರ-- (ಗಂಡುಹುಡುಗರೆಲ್ಲರೂ ಘೊಳ್ಳನೆ ನಕ್ಕದ್ದನ್ನು ಕೇಳಿ, ಆಕೆ ದೊಪ್ಪನೆ ನೆಲಕ್ಕೆ ಕುಳಿತುಕೊಳ್ಳುವಳು.)

ಅಕ್ಕಾ:— ಶ್‌ಶ್ .. ಹೀಂಗೇನು ಸುರೂ ಮಾಡೂದಂದ್ರ ? ಮೊದಲು ಈ ಸಭೆಗೆ ಒಬ್ಬ—ಅಧ್ಯಕ್ಷರನ್ನು ಆರಿಸಬೇಕು .. ರ ಮೇಲೆ ..

ಚಂದೂ:— (ಭರ್‍ರನೆ) ಸುಮ್ಮನ ನೀವೇ ಆಗಿ ಬಿಡ್ರಿ ಟೀಚರ್!

ಅಕ್ಕಾ:— (ತಿಳಿಸಹೋಗಿ) ಊಂ ಹೂಂ ... ನಾ ಆಗೂಹಾಂಗಿಲ್ಲ. ಎಲ್ಲಾ ನಿಮ್ಮದು ನೀವೇ ಮಾಡಿಕೊಳ್ಳಬೇಕು .. ಅದೇ ನಿಜವಾದ ಬೆಳವಣಿಗೆ. ನಾನು ಕೇವಲ ಕುಳಿತು ನೋಡುವಾಕೆ. ಹೂಂ! ಯಾರನ್ನಾದರೂ ಅಧ್ಯಕ್ಷ ಆಗಲಿಕ್ಕೆ ಸೂಚಿಸಿರಿ!

ಕಮಾ:— (ಎದ್ದುನಿಂತು) ಇವತ್ತಿನ ದಿನಾ ಸುಮಾ ಅಧ್ಯಕ್ಷ ಆಗಬೇಕರೀ!

ಚಂದೂ :— ಇಲ್ಲರಿ, ಟೀಚರ್. ಇವತ್ತಿನದು ಮೊದಲನೇ ದಿನಾ ಅದಽನ್ರಿ. . ಅದಕ್ಕ ನಮ್ಮ ಬಿಂದೂ ಅಧ್ಯಕ್ಷ ಆಗಬೇಕರಿ !

ಅಕ್ಕಾ :— ಶ್‌ಶ್, ಸುಮ್ಮನೆ ಕೂಡಿರಿ. ಕಮಾನ್ನ ಸೂಚನೆಗೆ ಯಾರಾದರೂ ಅನುಮೋದನಾ ಕೊಡ್ರಿ.

ನಂದೂ :— (ಕಿಡಿಗೇಡಿತನದಿಂದ) ಅಂದರೇನ್ರಿ ಟೀಚರ್. . ?

ಅಕ್ಕಾ:—(ಅಷ್ಟೇ ತಾಳ್ಮೆಯಿಂದ) ಅಂದ್ರ ಆಕಿ ಅಂಧಾಂಗ ನಾನೂ ಅಂತೀನಿ ಅನ್ನೋದು.

ನಂದೂ :— ಹಾಂಗಾರ ನಾ ಮಾಡತೇನ್ರಿ ಅದನ್ನ !

ಅಕ್ಕಾ:— (ನಗುತ್ತ) ಹಂ. . ಏಳು ಸುಮಾ.

ಚಂದೂ :— (ಬೇಸತ್ತು) ಏ ನಂದೂ, ನಿಂದೂ ಅಂತಷ್ಟು ಏನಾರೆ ಹೇಳೋ ಮಾರಾಯಾ. . ಒಂದಿನಾ ಅರೆ! . . ಯಾವಾಗಲೂ ಮಂದಿ ಅಂದದ್ದಕ್ಕಽ ' ನಂದೂ ' ಅಂತೀಯಲ್ಲಾ !

ಅಕ್ಕಾ :— Silence ! ಹಂ. . (ಇಲ್ಲಿಯವರೆಗೆ ಮುರುಕ ಮಾಡುತ್ತ ಕುಳಿತ ಸುಮೆಯು ಇನ್ನೂ ಏಳದಿರುವುದನ್ನು ಕಂಡು, ಗಡಿಯಾರದಲ್ಲಿ ನೋಡಿ) ಹಂ. ಏಳು ಸುಮಾ. . ಇಲ್ಲಿ ಕೂಡ್ರು ಬಾ ! (ಎಂದು ತನ್ನ ಕುರ್ಚಿಯನ್ನು ತೋರುವಳು.)

ಸುಮಾ :— (ಅಲ್ಲಿಯೇ ಎದ್ದುನಿಂತು, ಅಳಿಮೋರೆಯಿಂದ) ನಾ ಒಲ್ಲೆರೀ ಟೀಚರ್; . . ನನಗ ಏನೂ ಬರೂದಿಲ್ಲರಿ ! . .

ಅಕ್ಕಾ:—(ಮೋಜಿನ ಮುಖದಿಂದ) ಹಂ. ಅದನ್ನೇ ಇಲ್ಲಿ. . ಈ ಮೇಜಿನ ಹಿಂದೆ ನಿಂತು ಹೇಳಿದರ, ಅಧ್ಯಕ್ಷ ಆಗಲಿಕ್ಕೆ ಯೋಗ್ಯ ಇದ್ದೀದಿ ಅಂಧಾಂಗಾತು !

ಸುಮಾ :— (ನಾಚಿಕೆಯಿಂದ) ಇಲ್ರೀ ಟೀಚರ್. . ನನಗ ಖರೇವಂದ್ರೂ ಮಾತಾಡಲಿಕ್ಕೆ ಬರೂದಿಲ್ಲರಿ; . . ನನ್ನ ಆರಿಸ ಬ್ಯಾಡರಿ. . !

ಅಕ್ಕಾ :— (ಮತ್ತಷ್ಟು ಮೋಜಿನಿಂದ) ಅದಽ ಹೇಳಿದೆನಲ್ಲಽ ಇಲ್ಲಿ ನಿಂತು' ನನಗ ಮಾತಾಡಲಿಕ್ಕೆ ಬರೂದಿಲ್ಲ, . . ನನಗ ಮಾತಾಡಿ ಗೊತ್ತಿಲ್ಲ, . . ಆದರೂ ನೀವು ನನ್ನನ್ನು ಆರಿಸಿದಿರಿ ಅಂತ ನಾನು ನಿಮ್ಮ ಉಪಕಾರ ಸ್ಮರಿಸತೇನಿ' ಅಂತ ಅಂದಿಯಂದರ, ನೀ ಅಧ್ಯಕ್ಷ ಆದದ್ದು ಸಾರ್ಥಕ ಆಧಾಂಗಾತು. . ಮತ್ತು, ಇದಕ್ಕೂ ಹೆಚ್ಚಿಗೆ ದೊಡ್ಡವರು ಏನು ಮಾಡತಿರತಾರ ಅಂತ ತಿಳದೀದಿ ? . . ಹುಂ. ಏಳು! (ಎನ್ನಲು ಮೆಲ್ಲಗೆ ನಡೆದುಬಂದು, ಅನುಮಾನಿಸುತ್ತ ಸುಮೆಯು ಕುರ್ಚಿಯಲ್ಲಿ ಕೂಡ್ರುವಳು). . ಹಂ. ಇನ್ನ ಕಮಾಗ ತನ್ನ ಭಾಷಣ ಆರಂಭ ಮಾಡಲಿಕ್ಕೆ ಹೇಳು !

ಸುಮಾ:— (ಕಮಾನ ಕಡೆಗೆ ನೋಡುತ್ತ) ಹೂಂ! (ಎನ್ನುವಳು. ಅಷ್ಟಕ್ಕ ಸೊನ್ನೆಯನ್ನು ತಿಳಿದು 'ಈಕೆಯು ಹೀಗೆಯೆ ' ಎಂದು ಗೋಣನ್ನಲ್ಲಾಡಿಸಿ, ಕಮೆಯು ಸಡಗರದಿಂದ ಮೇಜಿನ ಬಲ-ಗಡೆಗೆ ಬಂದು ನಿಂತು, ಮಾತನ್ನು ಪ್ರಾರಂಭಮಾಡುವಳು.)

ಕಮಾ:— (ಧೈರ್ಯದಿಂದ) ಅಧ್ಯಕ್ಷಳೇ, ಮತ್ತು ಗೆಳತಿಯರೇ, (ಎಂದು ತನ್ನ ಸಂಗಡಿತಿಯರ ಕಡೆಗೆ ನೋಡುವಳು. 'ಅಕ್ಕಾ' ಮುಗುಳುನಗೆಯನ್ನು ಬೀರುವಳು. . ಹುರಿದುಂಬಿ) ಇವತ್ತಿನ ಮಾತಿನ ವಿಷಯ 'ಸಮವಸ್ತ್ರವು ಬೇಕೆ ? ' ಎಂದಿದ್ದುದು ನಿಮಗೆಲ್ಲರಿಗೂ ಗೊತ್ತಿದೆ. ನಾನು ' ಬೇಡ ' ಎಂಬ ಅಭಿಪ್ರಾಯದವಳು. ನಾನು 'ಅದು ಬೇಡ ' ಎನ್ನುವದಕ್ಕೆ ಮೊದಲನೆಯ ಕಾರಣ ಎಂದರೆ, ಈಗ ನಾವು ಒಂದೇ ಬಗೆಯ ಬಟ್ಟೆ ಅಥವಾ ಸೀರೆಗಳನ್ನು ತರಬೇಕಾದರೆ, ಅವುಗಳನ್ನು ಸಿದ್ಧಮಾಡಲಿಕ್ಕೆ ಒಂದೇ ಗಿರಣಿಗೆ, ಅವುಗಳನ್ನು ಪೂರಯಿಸಲಿಕ್ಕೆ ಒಬ್ಬನೇ ವ್ಯಾಪಾರಸ್ಥನಿಗೆ ಹೇಳಬೇಕಾಗುತ್ತದೆ. ಹಾಗೆ ಒಬ್ಬರಿಗೇ ಅದನ್ನು ಒಪ್ಪಿಸ ಹೋದರೆ, ಅವರು ಸಂಧಿಯನ್ನು ಸಾಧಿಸಲು ಎರಡರಷ್ಟು ಹಣವನ್ನು ನಮ್ಮಿಂದ ಹೀರುವುದರಲ್ಲಿ ಸಂದೇಹವಿಲ್ಲ ! (ಪಮಾ, ರಮಾ ಚಪ್ಪಾಳೆಯನ್ನಿಕ್ಕುವರು. ಅದೇ ಸಮಯವನ್ನು ಸಾಧಿಸಿ ಆಕೆಯು ಕೈಯೊಳಗಿನ ಹಾಳೆಯನ್ನು ನೋಡಿ) ಇನ್ನೊಂದು ಮಾತು. ನಾವು ಸಮವಸ್ತ್ರಗಳನ್ನು ಹಾಕಿದರೆ, ಎಲ್ಲರೂ ಕೂಡಿ ಚೆಂದಕಾಣುವದು ಮುಂತಾಗಿ ಯಾರಿಗಾದರೂ ಗೊತ್ತಾಗಬಹುದು. ಆದರೆ ಒಂದೇ ಬಗೆಯ ಸೀರೆಗಳನ್ನಾಗಲಿ. ಪತ್ತಲಗಳನ್ನಾಗಲಿ ಉಟ್ಟುಕೊಳ್ಳಲು ಬೇಸರವಾಗುವುದು. ಇನ್ನು ಸಮವಸ್ತ್ರಬೇಡ ಎನ್ನಲು ಇನ್ನೊಂದು ಕಾರಣ ಎಂದರೆ: —ಈಗ ನಮ್ಮಲ್ಲಿ ಬೇರೆ ಜಾತಿಗಳ ಜನರಿದ್ದಾರೆ; ಬೇರೆ ಬೇರೆ ಧರ್ಮಗಳ ಜನರಿದ್ದಾರೆ. ಅವರೆಲ್ಲರಿಗೂ ಒಪ್ಪುವಂತಹ ಒಂದೇ ಸಮವಸ್ತ್ರವನ್ನು ಇನ್ನೂ ಯಾರೂ ತೆಗೆದಿಲ್ಲ. ಕಾರಣ ಈ ನಮ್ಮ ಶಾಲೆಯಲ್ಲಿ ಹಾಕಿಕೊಳ್ಳಲು ಹೇಳಿದ ಸಮವಸ್ತ್ರವು ನಮ್ಮೊಳಗಿರುವ ಒಡಕುಗಳನ್ನು ಹೆಚ್ಚಾಗಿ ಎದ್ದುಕಾಣುವಂತೆ ಮಾಡುತ್ತದೆ. ಕಾರಣ ಸಮವಸ್ತ್ರವು ಬೇಡ. . ಎಂದು ನಾನು ಸಾರಿ ಸಾರಿ ಹೇಳುತ್ತೇನೆ. (ಎಂದು ಪಟಕ್ಕನೆ ತನ್ನ ಆಸನದೆಡೆಗೆ ಹೋಗಿ ಕುಳಿತುಕೊಳ್ಳುವಳು. ಕೂಡಲೆ ಪಮಾನು ಆಕೆಯ ಬೆನ್ನನ್ನು ದೊಪ್ಪೆಂದು ಚಪ್ಪರಿಸುವಳು).

ಅಕ್ಕಾ:— ಹಂ. ಇನ್ನ ಬಿಂದೂಗ ಮಾತಾಡಲಿಕ್ಕೆ ಹೇಳು ! (ಎಂದು ಕಮಾನನ್ನು ಕೇಳುವಳು. ಆದರೆ ಆಕೆಯು ಅಕ್ಕನ ಕಡೆಗೆ ಟಕ್ಕ ಹಚ್ಚಿ ನೋಡುತ್ತ ಸುಮ್ಮನೆ ಕೂಡ್ರುವಳು.)

ಎಲ್ಲಕ್ಕಿಂತ ಅಗ್ಗ ! ಎಲ್ಲಕ್ಕಿಂತ ಉತ್ತಮ !

ಮಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ !



೫ ಆಣೆಗೆ ೧೦ ಬ್ಲೇಡು !

ಡೋಂಗರೆ ಇವರ ಬಾಲಾಮೃತವು

ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಬಿಂದೂ:— (ಅಷ್ಟರಲ್ಲಿ ತಾನೇ ಎದ್ದು, ಕೋಟಿನ ಕಾಲರು-ಟೊಪ್ಪಿಗೆಗಳನ್ನು ಸರಿಮಾಡಿಕೊಳ್ಳುತ್ತ ಬಂದು, ಮಾತುಗಳನ್ನು ಪ್ರಾರಂಭ ಮಾಡುವನು) ಅಧ್ಯಕ್ಷರೇ ಮತ್ತು ಬಂಧು ಭಗಿನಿಯರೇ, (ಎಂದ ಕೂಡಲೆ ಚಪ್ಪಾಳೆ, ನಗೆ, ಕಿಲಕಿಲಾಟಗಳು ಪ್ರಾರಂಭವಾದುವು. . ಮುಗಿಯಲಿಕ್ಕೆ ಕೊಂಚ ವೇಳೆ ಹಿಡಿಯುವುದು. ಅವನು ಮತ್ತೆ ಮೊದಲಿನಿಂದ ಸುರುವು ಮಾಡುವನು) ಸಮವಸ್ತ್ರವು ಬೇಕು; ಇಷ್ಟೇ ಅಲ್ಲ, ಅದು ಅವಶ್ಯಕ ಎಂದು ಹೇಳಲು ನಾನು ಬಂದಿರುವೆ. ಈಗ ನಾವು ಪರತಂತ್ರ್ಯದಲ್ಲಿ ಸಿಲುಕಿ ಬಳಲುತ್ತಲಿದ್ದೇವೆ. ಅದನ್ನು ಹೋಗಲಾಡಿಸಿ ಸ್ವತಂತ್ರರಾಗಬೇಕಾದರೆ, ಶಾಂತರೀತಿಯಿಂದಾದರೂ ಆಗಲಿ, ನಮಗೆ ಹೋರಾಟದ ಹೊರತು ಗತಿಯಿಲ್ಲ. ಅದಕ್ಕಾಗಿ ನಮಗೊಂದು ಶಾಂತಿಸೇನೆ ಬೇಕು. ಸೇನೆಯಲ್ಲಿ ಸಮವಸ್ತ್ರವು ಎಷ್ಟು ಮಹತ್ತ್ವದ್ದಿರುವದು ಎಂಬುದು ನಿಮಗೆಲ್ಲರಿಗೂ ಗೊತ್ತಿದೆ. ಇನ್ನು ನಮ್ಮಲ್ಲಿ ಒಕ್ಕಟ್ಟು ಇಲ್ಲ. ನಾವೆಲ್ಲರೂ ಒಂದೇ ಎಂಬ ಭಾವನೆಯು ನಮ್ಮಲ್ಲಿಲ್ಲ. ಅಂತಹ ಭಾವನೆಯು ಒಳಗೆ ಉಂಟಾಗಿ, ಎಲ್ಲರಿಗೂ ಅಂಟಿಕೊಳ್ಳಬೇಕಾದರೆ, ಈ ಸಮವಸ್ತ್ರವು ಬೇಕೇ ಬೇಕು. ಅದು ಇದ್ದಿತೆಂದರೆ ನಾವು, ನಮ್ಮಲ್ಲಿಯ ಭೇದಭಾವಗಳನ್ನು ಮರೆತು, ಒಂದಾಗಿ ಬಲಿಷ್ಠರಾಗುವೆವು. ಅದು ಕಾರಣವೆ ಸಮವಸ್ತ್ರವು ಆವಶ್ಯಕ, ಅತ್ಯಾವಶ್ಯಕ ಎಂದು ನನ್ನ ಮತ (ಎಂದು ಒಮ್ಮೆ ಎಲ್ಲರ ಕಡೆಗೆ ಸಿಂಹಾವಲೋಕನವನ್ನು ಬೀರುವನು.

ಗಂಡು ಹುಡುಗರು ಮಾತ್ರ ‘ ವಾಹವ್ವಾ ’ ಎನ್ನುವುದನ್ನು ನೋಡಿ, ಹೆಣ್ಣು ಹುಡುಗಿಯರನ್ನು ಮತ್ತೊಮ್ಮೆ ನೋಡದೆ, ತನ್ನವರ ಬಳಿಗೆ ಹೋಗುವನು.)

ಅಕ್ಕಾ:— ಹಂ. ಇನ್ಯಾರು ಮಾತನಾಡತೀರಿ ?

ಕಮಾ:— ಪಮಾ ಮಾತನಾಡತಾಳಂತರೀ ಟೀಚರ್ !

ಅಕ್ಕಾ:— ಹೌದೇನs ಪಮಾ ? ಏಳ್ಹಾಂಗಾರ; ಬಾ. ಹೇಳ ಬಾ ಏನು ಹೇಳಬೇಕಾಗೇದ ಅದನ್ನ !

ಪಮಾ:— ಮಾತಾಡಬೇಕಂತೆಲ್ಲಾ ಅದನ್ರೀ ಟೀಚರ್. . ಆದರ ಸುಡ್ಲಿ ನಾಚಿಕಿ ಬರತsದರಿ !

ಅಕ್ಕಾ:— ಅದರಾಗೇನದ. ಏಳು ಬೇಗ, ಏಳು ! ಗಂಟೆಯಾಗಬಹುದು.

ಪಮಾ:— (ಎದ್ದು ಮೆಲ್ಲನೆ ಮೇಜಿನ ಬಳಿಯಲ್ಲಿ ಬಂದು ನಿಂತು) ನಾವು ಸಮವಸ್ತ್ರ ಹಾಕಿಕೋಬಾರದೂ ಅಂತ ಹೇಳಲಿಕ್ಕೆ ನಾನು ಇಲ್ಲಿ ಬಂದೀನಿ. (ಇಷ್ಟು ಅನ್ನುವಾಗ ಗಾಬರಿಯಿಂದ ‘ ಅಕ್ಕ ’ನು ಇತ್ತ ನೋಡಿದರೆ, ನಂದೂನು ‘ ಇಷ್ಟೇ ಹೇಳಲಿಕ್ಕೆ ಅಷ್ಟ್ಯಾಕ ನಾ....ಚಿ....’ ಎಂದು ಖೊಕ್ಕನೆ ನಗುವನು. ಅದಕ್ಕೆ ‘ ಅಕ್ಕ ’ ಮೂಗಿನ ಮೇಲೆ ಬೆರಳು ಇಟ್ಟುಕೊಂಡು ಅವನನ್ನು ಸುಮ್ಮನಾಗಿಸುವಳು.) ಇದೇ ಈಗ ಮಾತನಾಡಿರುವವರು, ನಾವು ಸಮವಸ್ತ್ರ ಹಾಕಿಕೊಂಡರೆ ನಮ್ಮೊಳಗಿನ ಭೇದಭಾವ ಹೋಗತಾವs ಅಂತ ಹೇಳಿದರು. ಆದರೆ ನಾವು ಹಾಂಗಮಾಡಿದರ, ಬ್ರಾಂಬರು ಯಾರು, ಹೊಲ್ಯಾರು ಯಾರು, ಮುಸಲರು ಯಾರು ಅಂಬೋದು ಗೊತ್ತಾಗದs ಪೈಲಿಗಿ ಕಲಿಸಿ ಬಿಡತsದ ಎಲ್ಲಾ ಕಡೆ. ಅದಕ್ಕ ಈ ಸಮವಸ್ತ್ರ ಎಷ್ಟೂ ಚೆಲೋ ಅಲ್ಲ (ಎಂದು ಅತಿ ಗಂಭೀರ-ಭಾವದಿಂದ ಮರಳಿ ಹೋಗುವಳು.)

ನಂದೂ:— ಈಗ ನನಗ ಮಾತನಾಡೂದದsರಿ ಟೀಚರ್ !

ಅಕ್ಕಾ:— (ನೊಂದುಕೊಂಡು) ಮಾತಾಡ ಬಾ ಅಲ್ಲಾ; ಯಾರು ಬ್ಯಾಡಾ ಅಂತಾರ.

ನಂದೂ:— ಅಲ್ಲ ಮೊದಲೇ ಹೇಳಿದಿನಿರಿ. . (ಎಂದು ಮೇಜು ಬಿಟ್ಟು ತುಸು ದೂರ ನಿಂತು ಆರಂಭಿಸುವ.) ಗೆಳೆಯರೆ, ಸಮವಸ್ತ್ರವು ಎಲ್ಲರಿಗೂ ಬೇಕು. ಕೊನೆಗೆ ನಮ್ಮ ಬಿಂದೂನು ಹೇಳಿದ ಕಾರಣಗಳಿಗಾಗಿ ಬೇಕಾಗಿರದಿದ್ದರೂ, ಒಂದು ಕಾರಣಕ್ಕಾದರೂ ಅದು ಬೇಕು. ಅದೇ ಕಾರಣಕ್ಕಾಗಿ ಈಗ ಹೆಣ್ಣುಮಕ್ಕಳು ಬೇಡಾ ಅನ್ನುವದು. ಸಮವಸ್ತ್ರವು ಬಂದಿತೆಂದರೆ, ಬೇರೆ ಬೇರೆ ಬಣ್ಣಗಳ ಬೆಡಗಿನ ವಸ್ತ್ರಗಳನ್ನುಡುವುದು ಹೋಗಿ, ಸಂನ್ಯಾಸಿಗಳಂತೆ ಒಂದೇ ಬಣ್ಣದ ಸೀರೆಯನ್ನು (ಅಕ್ಕಾ ನಗೆಯನ್ನು ತಡೆಯಲಾಗದೆ ಖೊಳ್ಳೆಂದು ನಗುವಳು.) ಉಡಬೇಕಾಗುವುದಲ್ಲ ಎಂಬ ಹೆದರಿಕೆಯಿಂದ ಹೆಂಗಸರು ಅವಕ್ಕೆ ಬೇಡಾ ಎನ್ನುವುದು. ಅದಕ್ಕಾಗಿಯೇ ನಾವು ಹೆಂಗಸರ ಸೊಕ್ಕನ್ನು ಮುರಿಯುವದಕ್ಕಾದರೂ ‘ ಸಮವಸ್ತ್ರ ಬೇಕೂ ’ ಎನ್ನುವದು. ಅಂದರೆ ತಿಳಿಯುವದು ಅವರ ಬಣ್ಣ ! (ಎನ್ನಲು ಅವನ ಗೆಳೆಯರು ಹೊಟ್ಟೆ ಹಿಡಿಸಲಾರದಷ್ಟು ನಗುತ್ತಿರಲು ಅವನು ‘ ಪಟ್ಟದ ಕುದುರೆ ’ ಯಂತೆ ತನ್ನ ಜಾಗವನ್ನು ಸೇರುವ.)

ಅಕ್ಕಾ:— ಹಂ.. ಸಾಕಿನ್ನ.. ಇನ್ನ ಮ್ಯಾಲೆ (ಎಂದು ಚಿಟ್ಟನೆ ಚೀರುವಳು. ಅಷ್ಟರಲ್ಲಿ)

ಚಂಪೂ:— ಅದ್ಯಾಕರೀ ಟೀಚರ್ .. ಇತ್ತಲಾಗ ಇನ್ನೂ ಮಾತಾಡೂ ಅವರಿದ್ದಾರರಿ..!

ರಮಾ:— ನಮ್ಮ ಕಡೇನೂ ಭಾಳ ಮಂದಿ ಅದಾರರಿ ಟೀಚರ್!

ಚಂದೂ:— ಆಗಲಿ ನೋಡೋಣು, ಯಾರ ಕಡೆ ಭಾಳ ಮಂದಿ ಮಾತಾಡತಾರ..!

ರಮಾ:— ನೋಡೇ ಬಿಡೂಣ್ರೆಕೆ.. ಯಾರ ಕಡೆ ಹೆಚ್ಚು ಜನಾ ಆಗತಾದ!

ಚಂದೂ:— (ಎದ್ದು ನಿಂತು ಮುಂದೆ ಬಂದು) ಇವತ್ತಿನ ದಿನಾ ಇದರ ಗೊತ್ತುಹಚ್ಚೇ ಬಿಡೂದ್ರೀ ಟೀಚರ್!

ಅಕ್ಕಾ:— ಶ್‌ಶ್. ಈಗ ಬ್ಯಾಡೀಗ .. ಗಂಟೆಯಾಗೋ ಹೊತ್ತಾತು.. ಅದಕ್ಕ ಸಮವಸ್ತ್ರ ಬೇಕೋ ಬೇಡೋ ಗೊತ್ತು ಮಾಡಲಿಕ್ಕೆ, ಹಿಂದಾಗಡೆ ಅಧ್ಯಕ್ಷರು ವ್ಹೋಟು ತಗೊಳ್ಳಲಿ. ಆದರ ಈಗ ಮೊದಲ ಸುಮಾ, ನಿನ್ನ "ಅಧ್ಯಕ್ಷೀಯ ಭಾಷಣ" ಅಷ್ಟು ಮುಗಿಸು; ಆ ಮೇಲೆ ವ್ಹೋಟು ತಗೊಂಡೀಯಂತ.

ಸುಮಾ:— (ಅನುಮಾನಿಸುತ್ತ ಮೆಲ್ಲನೆ ಎದ್ದು) ಸಹಪಾಠಿಗಳೇ .. ಈಗ ನೀವೆಲ್ಲರೂ ಬಹಳೇ ಚೆನ್ನಾಗಿ ಮಾತನಾಡಿದಿರಿ. ನಿಮ್ಮ ಮಾತುಗಳಿಂದ ನನಗೆ ತೋರಿದ ಒಂದೆರಡು ಮಾತುಗಳನ್ನು ನಾನೀಗ ಹೇಳುವೆ. ಸಮವಸ್ತ್ರ ಬೇಕು ನಿಜ (ಎನ್ನಲು ಹುಡುಗರಲ್ಲಿ ದೊಡ್ಡ ಕೋಲಾಹಲವೇಳುವದು.); ಆದರೆ.. ಸಾಲಿಗೆ ಬರಲಿಕ್ಕೆ ಒಂದು ಸೀರಿ .. ಒಂದು ಹೊರೀ ಪುಸ್ತಕಾ .. ಎರಡು ರೂಪಾಯಿ ಫೀ—ಕೊಡೂದ್ರಾಗ, ನಮ್ಮ ಹಿರೇರಿಗೆ ಸಾಕುಬೇಕಾಗಿ ಹೋಗತದ .. ಅದಕ್ಕ ಈ ಸಮವಸ್ತ್ರದ ಒಜ್ಜಿ ನಮ್ಮ ಜನರ ಮೇಲೆ ಹೆಚ್ಚಾಗಿ, ಅದನ್ನ ಕೊಳ್ಳೂದು ಅಶಕ್ಯ ಆಗೂದರಿಂದ .. ಅದೂ ಬೇಡಾ ಅಂತ ನಾ ಹೇಳಬಯಸತೀನಿ (ಎನ್ನಲು ಹುಡುಗಿಯರಲ್ಲಿ ಗದ್ದಲ, ಚಪ್ಪಾಳೆಗಳ ಕಡಕಡಾಟ); ಯಾಕಂದ್ರ ಸಮವಸ್ತ್ರ ಅಂದ್ರೆ ಅದಕ್ಕ ಎಲ್ಲಾ ತಿಸ್ತು..ಬೇಕು. ಸಾಲಿಗೆ ಸಮವಸ್ತ್ರ, ಮನೆಯಲ್ಲಿ ಸಾದಾವಸ್ತ್ರ, ಪ್ರಸಂಗದಲ್ಲಿ ಬೆಲೆಯುಳ್ಳ ವಸ್ತ್ರ, ಹೀಂಗ ಮಾಡಲಿಕ್ಕೆ—ಒಂದು ಬಗೆಯ ವಸ್ತ್ರವನ್ನು ಸಹ ಕೊಳ್ಳುವ ಯೋಗ್ಯತೆ ಇಲ್ಲದ ನಮ್ಮವರಿಗೆ ಸಾಧ್ಯವಿಲ್ಲ .. ಇನ್ನು ಸಮವಸ್ತ್ರ ಕೊಡನರೀ ಅಂತ ನಮ್ಮ ಮನಿಯವರ್ನ ಕೇಳಿದರ.. ಅವರು ನಮ್ಮನ್ನ ಸಾಲೀನs ಬಿಡಿಸಿಬಿಡತಾರ..! ಅದಕ್ಕ ಬಡತನಾ ಇದ್ದರೂ ಚಿಂತಿಯಿಲ್ಲ. ಸಾಲೀ ಕಲೀಬೇಕೂ ಅಂತ ಇದ್ದರ, ನಾವು ಸಮವಸ್ತ್ರ ಬಿಡಬೇಕೂ ಅಂತ ನನ್ನ ಅಭಿಪ್ರಾಯ ಇನ್ನ ನೀವು ಎಲ್ಲಾರೂ ಕೂಡಿ ಏನು ನಿರ್ಣಯಿಸ ತೀರಿ ಅದನ್ನ ನೋಡಲಿಕ್ಕೇ ಅಂತ . (ಎನ್ನುವಷ್ಟರಲ್ಲಿ ಅಲ್ಲಿಯ ವರೆಗೆ ಆಕೆಯ ಮಾತುಗಳಿಂದ ಪೆಚ್ಚಾದ ಮುಖದ ಜಿಪ್ಸನ ನಿಂತವಳು. ಯಾಕೆಂದರೆ ಹುಡುಗರಲ್ಲಿ ಗೊಂದಲವೇಳುತ್ತದ- ಅಷ್ಟರಲ್ಲಿ ಸಾಲೆಯ ಗಂಟೆ ಬಾರಿಸುವ್ರದು..ಗಂಟೆ ಬಾರಿಸಿದ ಕೂಡಲೆ ಪರದೆಯು ಬೀಳಲೇ ಬೇಕಲ್ಲನೇ?)

ಮುಗಿಯಿತು!

ವೈದ್ಯ ಮತ್ತು ಡಾಕ್ಟರ್-

ಜನರಿಗೆ ಸೂಚನೆ

ನಿಮ್ಮ ಮೇರಂಟೆರಿಗೆ ಕೆಳಗಿನ ಚರ್ಮರೋಗವಿದ್ದರೆ ಸ್ಟಾರ್ ಕಂಪನಿ, ಬೆಳಗಾಂವ (Regd.) ಇವರ

"ಗೋವಾ ಮುಲಮು"

(GOA OINTMENT)

ಉಪಯೋಗಿಸಿದರೆ, ಒಂದೇ ಸಪ್ತಾಹದಲ್ಲಿ ಎಷ್ಟು ಬೇಗನೆ ಗುಣಬರುತ್ತದೆ ಎಂಬುದು ನಿಮ್ಮ ನಿದರ್ಶನಕ್ಕೆ ಬಂದೀತು. ಹಸಿ ಮತ್ತು ಒಣ ಖಜ್ಜಿ (ಹುರುಕು), ತದ್ದು ಮತ್ತು ಮಿತಿಮೀರಿದ ಗಜಕರ್ಣ

(RINGWORM)

ಮುಂತಾದ ತ್ವಚರೋಗದಿಂದ ಪೀಡಿತ ಜನರಿಗೆ

ಖಾತ್ರಿಯ ಉಪಾಯವು!

ಗುಣ ಬರದಿದ್ದಲ್ಲಿ
ಹಣ ಮರಳಿ ಕೊಡುವ
ಗ್ಯಾರಂಟಿಯಿಂದ ಮಾರಲ್ಪಡುತ್ತದೆ.

ಬಾ. ಕಿಂ. ೪ ಆಣೆ

ಸ್ಟಾರ್ ಕಂಪನಿ, ಬೆಳಗಾಂವ

STAR Co., BELGAUM

ಕೃತಕೃತ್ಯತೆಯ ಮೂಲ ಅರ್ಥಾತ್

★

ಜೀವನಕಲೆಯನ್ನು ಸಾಧಿಸುವ ರೀತಿ

ಶ್ರೀ. ವಿಶ್ವನಾಥ ಹೆಗಡೆ, ಮುಂಬಯಿ

ಸಂಸಾರದ ಸಂತೆಯಲ್ಲಿ ಆಸಕ್ತಿ ತೋರಿಸಿರಿ! ಸುತ್ತುಮುತ್ತಲಿನ ಪ್ರಪಂಚದಲ್ಲಿ ಸಹಾನುಭೂತಿಯುಳ್ಳವರಾಗಿರಿ! ಒಂದೆ ಮಾತಿನಲ್ಲಿ ಹೇಳಬೇಕೆಂದರೆ ಸಚೇತನರಾಗಿರಿ! ಹಾಗೆ ಆದಾಗಲೆ ಮಾನವನ ಬಾಳು ಪೂರ್ಣತೆಯನ್ನು ಪಡೆಯತೊಡಗುವುದು.

★

ಯಾವುದೇ ಒಂದು ದಿಶೆಯಲ್ಲಿ ನಾವು ಯಶಸ್ವಿಗಳಾಗಬೇಕಾದರೆ, ನಮ್ಮ ಮನಸ್ಸು ಪರಿಪಕ್ವಗೊಂಡಿರುವುದು ಅತ್ಯವಶ್ಯ. ಏಕೆಂದರೆ ಮನಸ್ಸೇ ಪ್ರತಿಯೊಂದು ಕಾರ್ಯದ ಮೂಲಸ್ಥಾನವು. ಸುಂದರವಾದ ಚಿತ್ರವಾಗಲಿ, ಒಳ್ಳೆಯ ಕವನವಾಗಲಿ, ಗ್ರಂಥವಾಗಲಿ, ಮೋಹಕವಾದ ಮೂರ್ತಿಯಾಗಲಿ, ಅಚ್ಚರಿಗೊಳಿಸುವ ಯಂತ್ರವಾಗಲಿ, ಸೊಗಸಾದ ಕಟ್ಟಡವಾಗಲಿ,–ಎಲ್ಲವೂ ಮೊದಲು ಮನಸ್ಸಿನಲ್ಲಿ ಮೂಡುವುವು. ಮನಸ್ಸು ದಕ್ಷತೆಯಿಂದ ಕೆಲಸ ಮಾಡಿದರೆಯೆ ಅದರಿಂದ ಬರುವ ವಿಚಾರಗಳೂ ಕೃತಿಗಳೂ ಚೆನ್ನಾಗಿ ಇರುವುವು. ಮನಸ್ಸು ಎಷ್ಟೊಂದು ಬೆಳೆಯುವುದೊ ಅಷ್ಟೊಂದು ಜೀವನವು ಫಲದಾಯಕವಾಗುವುದು. ಹಾಗಾದರೆ ಮನಸ್ಸಿನ ಬೆಳವಣಿಗೆಯಾಗುವುದೆಂತು? ಅದು ಪರಿಪಕ್ವವಾಗುವ ಬಗೆಯೆಂತು?

ನಮಗೆ ದೊರೆಯುವ ಜ್ಞಾನವೂ ಅನುಭವವೂ, ಹೆಚ್ಚಾಗಿ, ನಮ್ಮ ಪಂಚೇಂದ್ರಿಯಗಳ ಮುಖಾಂತರ ಬರುವುವು. ಕಣ್ಣು, ಕಿವಿ, ಮೂಗು, ನಾಲಗೆ ತ್ವಚೆ ಇವು ಜ್ಞಾನದ ಹೆದ್ದಾರಿಗಳು. ಇವುಗಳ ಸಹಾಯದಿಂದಾಗುವ ರೂಪ, ಶಬ್ದ, ಗಂಧ, ರಸ, ಸ್ಪರ್ಶಗಳ ಅನುಭವವೇ ಜ್ಞಾನದ ಮೂಲವು. ಈ ಐದು ಬಗೆಯ ಅರಿವುಗಳು ಸುಲಭವಾಗಿಯೂ ನಿರ್ದೋಷವಾಗಿಯೂ ಆಗಬೇಕಾದರೆ, ಪಂಚೇಂದ್ರಿಯಗಳು ಸುಲಭವಾಗಿಯೂ ನಿರ್ದೋಷವಾಗಿಯೂ ಕೆಲಸ ಮಾಡಬೇಕಷ್ಟೆ? ಪಂಚೇಂದ್ರಿಯಗಳನ್ನು ತರಬಿಯತ್ತು ಮಾಡುವುದೇ ಮನಸ್ಸಿನ ಬೆಳವಣಿಗೆಯಲ್ಲಿಯ ಮೊದಲನೆಯ ಕೆಲಸ.

ಸಾಮಾನ್ಯವಾಗಿ ನಮ್ಮ ಜ್ಞಾನೇಂದ್ರಿಯಗಳು ತಂತಮ್ಮ ಕಾರ್ಯವನ್ನು ಸರಿಯಾಗಿ ಮಾಡುತ್ತವೆ. ಅವು ವಸ್ತುಗಳ ಸ್ವರೂಪ, ಗುಣ, ಧರ್ಮಗಳನ್ನು ಜ್ಞಾನತಂತುಗಳ ಮಾರ್ಗವಾಗಿ ಮನಸ್ಸಿಗೆ ಮುಟ್ಟಿಸುವುವು; ಮನಸ್ಸು ಬುದ್ಧಿಗೆ ವರದಿ ಕೊಡುವುದು; ಅಲ್ಲಿಂದ ವಿಚಾರಗಳೂ ಭಾವಗಳೂ ಉದ್ಭವಿಸುವುವು. ನಾವು ನಮ್ಮ ಸುತ್ತುಮುತ್ತಲಿನ ಎಷ್ಟೋ ವಸ್ತುಗಳನ್ನು ನೋಡುತ್ತೇವೆ; ಎಷ್ಟೋ ಶಬ್ದಗಳನ್ನು ಕೇಳುತ್ತೇವೆ; ತರತರದ ವಾಸನೆಗಳನ್ನು ಅನುಭವಿಸುತ್ತೇವೆ. ಅವೆಲ್ಲವನ್ನೂ ನಮ್ಮ ಮನಸ್ಸು ಏಕಕಾಲಕ್ಕೆ ಗ್ರಹಿಸುವುದಿಲ್ಲ. ಏಕೆಂದರೆ ನಮ್ಮ ಲಕ್ಷ್ಯವು ಒಂದೇ ವೇಳೆಯಲ್ಲಿ ಹಲವು ಕಡೆಗಿರುವುದಿಲ್ಲ. ಅದು ಬೇರೆ ಬೇರೆ ಕಡೆಗೆ ಹರಿಯುತ್ತಿರಬಹುದು. ವಸ್ತುವಿನ ಪರಿಜ್ಞಾನವಾಗಬೇಕಾದರೆ, ಇಂದ್ರಿಯಗಳು ಮಾತ್ರ ಕೆಲಸಮಾಡಿದರೆ ತೀರಲಿಲ್ಲ. ಮನಸ್ಸು ಅದನ್ನು ಗಮನಿಸಬೇಕು. ನಮ್ಮ ಲಕ್ಷ್ಯವು ಅತ್ತಕಡೆಗಿರಬೇಕು. ವಸ್ತುವಿನ ಜ್ಞಾನವಾಗಬೇಕಾದರೆ ಮನಸ್ಸಿನ ಗುಂಡಿಯನ್ನು ತೆರೆದಿಡಬೇಕಾಗುವುದು.

ಕೆಲವೊಂದರ ಜ್ಞಾನವು ಕಣ್ಣುಗಳಿಂದಾಗುತ್ತದೆ. ಕೆಲವೊಂದರ ಜ್ಞಾನವು ಮತ್ತೆರಡು ಇಂದ್ರಿಯಗಳಿಂದಾಗುತ್ತದೆ. ಮತ್ತಿಷ್ಟು ಜ್ಞಾನವು ಎಲ್ಲ ಇಂದ್ರಿಯಗಳ ಸಹಾಯದಿಂದಾಗುತ್ತದೆ. ಎಂದರೆ ಒಂದೊಂದು ಅನುಭವವಾಗುವಲ್ಲಿ ಒಂದೊಂದು ಇಂದ್ರಿಯವು ಪ್ರಧಾನವಾಗಿ ಕೆಲಸಮಾಡುವುದು. ಉಳಿದ ಇಂದ್ರಿಯಗಳು ಏನೋ ಸ್ವಲ್ಪ ಸಹಕಾರಿಗಳಾಗಬಹುದು. ಇನ್ನೂ ಕೆಲವು ಪ್ರಸಂಗಗಳಲ್ಲಿ ಎಲ್ಲ ಇಂದ್ರಿಯಗಳೂ ಕೂಡಿ ಜ್ಞಾನವನ್ನು ಮಾಡಿಕೊಡಬಹುದು. ಜ್ಞಾನವನ್ನು ಸಂಪಾದಿಸುವಾಗ ಹೆಚ್ಚು ಹೆಚ್ಚು ಇಂದ್ರಿಯಗಳು ನೆರವಾದಂತೆ, ಆ ಜ್ಞಾನವೂ ಹೆಚ್ಚು ದೃಢವಾಗುವುದು. ಎಂದರೆ ಯಾವುದಾದರೊಂದು ಅನುಭವವನ್ನು ಪಡೆಯುವಾಗ ಎಲ್ಲ ಜ್ಞಾನೇಂದ್ರಿಯಗಳನ್ನೂ ಉಪಯೋಗಿಸಬೇಕು. ಇದರಿಂದಾಗುವ ಲಾಭಗಳೆಂದರೆ ಏಕಾಗ್ರಚಿತ್ತವು ಬೆಳೆಯುವುದು. ಚಿಕಿತ್ಸಕ ಬುದ್ಧಿ ಹೆಚ್ಚಾಗುವುದು; ಸ್ಮರಣಶಕ್ತಿಯು ಬೆಳೆಯುವುದು. ನೋಡುವುದನ್ನಾಗಲಿ, ಕೇಳುವುದನ್ನಾಗಲಿ, ಮೂಸುವುದನ್ನಾಗಲಿ ಲಕ್ಷ್ಯಪೂರ್ವಕವಾಗಿ, ಮನಃಪೂರ್ವಕವಾಗಿ ಮಾಡಬೇಕು. ವಸ್ತುವಿನ ಅಂತರಾಳವನ್ನು ಭೇದಿಸಬೇಕು. ಅದರ ವಿಷಯವಾಗಿ ತಿಳಿಯಬೇಕಾದುದನ್ನೆಲ್ಲ ಸಾಧ್ಯವಿದ್ದಮಟ್ಟಿಗೂ ತಿಳಿದುಕೊಳ್ಳಬೇಕು. ಕಣ್ಣಿದ್ದು ಕುರುಡರಾದರೆಂತು? ಕಿವಿಯಿದ್ದು ಕಿವುಡರಾದರೆ ಹೇಗೆ?

ಸಂಸಾರದ ಸಂತೆಯಲ್ಲಿ ಆಸಕ್ತಿ ತೋರಿಸಿರಿ. ಸುತ್ತುಮುತ್ತಲಿನ ಪ್ರಪಂಚದಲ್ಲಿ ಸಹಾನುಭೂತಿಯುಳ್ಳವರಾಗಿರಿ. ಸಂಕ್ಷಿಪ್ತವಾಗಿ ಹೇಳಬೇಕಾದರೆ, ಸಚೇತನರಾಗಿರಿ! ಹಾಗಾದಲ್ಲಿ ಬಾಳ್ವೆಯು ಪೂರ್ಣತೆಯನ್ನು ಹೊಂದತೊಡಗುವುದು; ನಮ್ಮ ಧೀಶಕ್ತಿಯು ದ್ವಿಗುಣಿತವಾಗುವುದು; ಆತ್ಮವಿಶ್ವಾಸವು ನೆಲೆದೋರುವುದು.

ಹೇಗೆ ಶರೀರದ ಸ್ನಾಯುಗಳನ್ನು ವ್ಯಾಯಾಮದಿಂದ ಬಲಪಡಿಸಲಾಗುವದೋ, ಹಾಗೆಯೆ ಜ್ಞಾನೇಂದ್ರಿಯಗಳನ್ನೂ ಯೋಗ್ಯವಾದ ಪರಿಶ್ರಮದಿಂದ ಬಲಪಡಿಸಲಾಗುವುದು. ಈ ವಿಷಯವನ್ನು ಕುರಿತು ಎಷ್ಟೋ ಗ್ರಂಥಗಳು ದೊರೆಯುವುವು. ವಾಚಕರು ತಮತಮಗೆ ಅಗತ್ಯವಿದ್ದ ಸಂಗತಿಯನ್ನು ಅವುಗಳ ಸಹಾಯದಿಂದ ತಿಳಿದುಕೊಳ್ಳಬೇಕು. ಇಲ್ಲಿ ಕಣ್ಣುಗಳನ್ನು ಕುರಿತು ಕೆಲವು ಸಂಗತಿಗಳನ್ನು ಮಾತ್ರ ಹೇಳಲಾಗುವುದು. ಏಕೆಂದರೆ ಜ್ಞಾನೇಂದ್ರಿಯಗಳಲ್ಲಿ ಕಣ್ಣು ಪ್ರಧಾನವಾದದ್ದು. ತೇಜಃಪುಂಜವಾದ, ನಿರ್ದೋಷವಾಗಿ ಕೆಲಸಮಾಡುವ ದೃಷ್ಟಿಯಿಂದಾಗುವ ಲಾಭವು ಅಷ್ಟಿಷ್ಟಲ್ಲ.

(೧) ಗೋಡೆಯ ಮೇಲೆ ಅಥವಾ ಒಂದು ಕನ್ನಡಿಯ ಮೇಲೆ ಒಂದು ಚುಕ್ಕಿಯನ್ನು ಮಾಡಿಸಬೇಕು. ಚುಕ್ಕಿಯು ಕಣ್ಣಿನ ಮಟ್ಟಕ್ಕೆ ಸಮನಾಗಿರಬೇಕು. ಅದರ ಮೇಲೆಯೆ ದೃಷ್ಟಿಯನ್ನಿಟ್ಟು ಕೆಲವು ನಿಮಿಷ ಕತ್ತನ್ನು ಎಡಕ್ಕೂ ಬಲಕ್ಕೂ ಸಾವಕಾಶವಾಗಿ ಹೊರಳಿಸುವ ಕ್ರಮವನ್ನು ನಿತ್ಯವೂ ನಡೆಯಿಸಿರಿ. ಕಣ್ಣಿಗೆ ಆಯಾಸವಾಗಹತ್ತಿದ ಕೂಡಲೆ ಈ ಪ್ರಯೋಗವನ್ನು ನಿಲ್ಲಿಸಿಬಿಡಬೇಕು.

(೨) ಕಣ್ಣುಗಳನ್ನರಳಿಸಿ ಕನ್ನಡಿಯಲ್ಲಿ ನಿಮ್ಮ ದೃಷ್ಟಿಯನ್ನೇ ಕೆಲವು ನಿಮಿಷ ಎವೆಯಿಕ್ಕದೆ ನೋಡಿರಿ. ಆಯಾಸವನ್ನು ಮಾತ್ರ ಮಾಡಿಕೊಳ್ಳಬೇಡಿರಿ!

ಮೊದಮೊದಲು ಕೆಲವು ನಿಮಿಷಗಳೊಳಗೆಯೆ ಕಣ್ಣುಗಳು ದಣಿಯುವುವು; ಆದರೆ ಅಭ್ಯಾಸದಿಂದ ಈ ಅವಧಿಯನ್ನು ಹೆಚ್ಚಿಸಲಿಕ್ಕಾಗುತ್ತದೆ.

(೩) ಓದುಬರೆಯುವ ಕೆಲಸವನ್ನು ತೀರ ಮಂದವಾದ ಅಥವಾ ಕಣ್ಣುಕುಕ್ಕುವ ಪ್ರಕಾಶದಲ್ಲಿ ಮಾಡಬಾರದು.

(೪) ಪ್ರತಿನಿತ್ಯವೂ ೩-೪ ಬಾರಿ ಕಣ್ಣುಗಳನ್ನು ಸ್ವಚ್ಛವಾದ ತಣ್ಣೀರಿನಿಂದ ತೊಳೆದುಕೊಂಡರೆ ಎಷ್ಟೋ ಹಿತವಿದೆ.

ಇದರಂತೆಯೆ ಕಿವಿಯು ಸೂಕ್ಷ್ಮವಾದ ಸಪ್ಪಳವನ್ನು ಸಹ ಗ್ರಹಿಸುವಂತೆ ತಯಾರು ಮಾಡಲಿಕ್ಕೆ ಯಾವುದೊಂದು ಅನುಕೂಲವಾದ ಕ್ರಮವನ್ನು ಮಾಡಿಕೊಳ್ಳಬೇಕು.

ಜ್ಞಾನೇಂದ್ರಿಯಗಳನ್ನು ದಕ್ಷತೆಯಿಂದ ಉಪಯೋಗಿಸುವುದೇ ಬುದ್ಧಿಯ ಬೆಳವಣಿಗೆಯಲ್ಲಿ ಮುಖ್ಯವಾದುದೆಂದು ಹೇಳಿದೆಯಷ್ಟೆ! ಹಾಗೆಂದರೆ ನಮ್ಮ ಅವಲೋಕನಸಾಮರ್ಥ್ಯವನ್ನು ಬೆಳೆಯಿಸುವುದೇ ಮಹತ್ತ್ವವಾದುದು ಎಂದೆನ್ನಬಹುದು. ಅವಲೋಕನವೆಂದರೆ ಬರಿಯೆ ನೋಡುವುದು ಎಂದಲ್ಲ. ಯಾವುದೊಂದು ವಸ್ತುವಿನ ಪರಿಪೂರ್ಣಜ್ಞಾನವಾಗುವುದೇ ಅವಲೋಕನದ ಪರಿಣಾಮ.

ಶ್ರೀ|| ಅರವಿಂದ ಘೋಷರು ಅವಲೋಕನವೆಂದರೇನೆಂಬುದನ್ನು ಹೀಗೆ ವರ್ಣಿಸುತ್ತಾರೆ :—

“ ಒಂದು ಹೂವಿನ ಉದಾಹರಣೆ ತೆಗೆದುಕೊಳ್ಳೋಣ. ನಾವು ಸಾಮಾನ್ಯವಾಗಿ ಅದರ ರೂಪ-ಪರಿಮಳಗಳನ್ನು ಮಾತ್ರ ತಿಳಿದುಕೊಳ್ಳುವೆವು. ಇದು ಅವಲೋಕನವಲ್ಲ. ಹೂವಿನ ಆಕಾರವೇನು? ಅದರ ರಚನೆ ಹೇಗಿದೆ? ಅದಕ್ಕೆ ಎಸಳುಗಳೆಷ್ಟು? ಅದರ ವಾಸನೆ ಎಂತಹದು? ಸೂಕ್ಷ್ಮವಾಗಿದೆಯೊ, ತೀವ್ರವಾಗಿದೆಯೋ? ಅದರ ಬಣ್ಣವೆಂತಹದು? ಅದಕ್ಕೆ ಮೆರುಗಿದೆಯೊ? ನುಣುಪಾಗಿದೆಯೆ? ಅದರ ಹೆಸರೇನು? ಅದು ಯಾವ ಹೂವಿನಂತಿದೆ? .. ಇತ್ಯಾದಿ ಎಷ್ಟೋ ವಿವರವನ್ನು ತಿಳಿಯಬೇಕಾಗುವುದು. ಬರಿಯೆ ಮೇಲಿಂದ ಮೇಲೆ ನೋಡುವುದರಿಂದ ವಿಶೇಷ ಪ್ರಯೋಜನವಾಗುವುದಿಲ್ಲ. ಅದರ ಪ್ರತಿಯೊಂದು ಚಿಕ್ಕಪುಟ್ಟವಿವರವನ್ನು ಪರಿಶೀಲಿಸಿ,ಹೊಂದಿಸಿ, ಹೋಲಿಸಿ ತಿಳಿದುಕೊಳ್ಳುವುದರಿಂದ, ಅನೇಕ ಲಾಭಗಳಿವೆ. ”

ತಿರುಗಾಡಲಿಕ್ಕೆ ಹೋದಾಗ, ಒಂದು ದೃಶ್ಯವನ್ನು ಕಂಡಾಗ ಇಲ್ಲವೆ ಒಂದು ಅಂಗಡಿಗೆ ಹೋದಾಗ ಅಥವಾ ಕೆಲವು ಜನರು ಸೇರಿದಲ್ಲಿ ನಡೆದ ಘಟನೆಯನ್ನು ನೋಡಿದಾಗ, ಉಂಟಾದ ಚಿತ್ರವನ್ನು ಕೆಲಹೊತ್ತಿನ ಮೇಲೆ ನೆನಪುಮಾಡಿಕೊಂಡು ಬರೆದು ನೋಡುವ ಅಭ್ಯಾಸವು ಬಹಳ ಸಹಕಾರಿಯಾದುದು. ನಾವು ನೋಡಿದ ಅಥವಾ ಕೇಳಿದ ವಸ್ತುಗಳನ್ನೂ ಸಂಗತಿಗಳನ್ನೂ ಶಬ್ದಚಿತ್ರಗಳನ್ನಾಗಿ ಮಾಡುವುದರಿಂದ, ನಮ್ಮ ಅವಲೋಕನಶಕ್ತಿಯು ಬೆಳೆಯುವುದರಲ್ಲಿ ಸಂದೇಹವಿಲ್ಲ.

ಮೇಲ್ತರಗತಿಯ

ಹಳುಕು (Concentrated) ಬಣ್ಣಗಳು

● ಬರೆಯುವ ಮಸಿಗಳು

● ಟಾಯಿಪ್‌ರಾಯಿಟಿಂಗ್ ರಿಬನ್ನುಗಳು

● ಸಾಬೂನುಗಳು

● ಮಿಠಾಯಿಗಳು

ಇವುಗಳನ್ನೆಲ್ಲ ತಯಾರಿಸುವುದಕ್ಕೆ ಬಳಸುವ ಬಣ್ಣಗಳು. ವಿಶೇಷವಿವರಗಳಿಗಾಗಿ ಇಂಗ್ಲಿಷ್ ಭಾಷೆಯಲ್ಲಿ ಬರೆದು ಕೇಳಿಕೊಳ್ಳಿರಿ.

ಕ್ರಿಪಾಗ್ ಲಿಮಿಟೆಡ್,

ಪೋ. ಬಾ. ಸಂ. ೨೧೦, ಮುಂಬಯಿ.

ಸಾರಾಸಾರ ವಿಚಾರ

ಶ್ರೀ. 'ಶ್ರೀಧರ' ಪುಣೆ

ಗದ್ಯ

ಸಾರಾಸಾರ ವಿಚಾರ ಮಾಡಿದರೆ
ಗದ್ಯವೆಂಬುದೇ ಬಲು ಹೃದ್ಯ !
'ಗದ್ಯವಧ್ಯ' ಎಂದೆನ್ನುವ ಜನರಿಗೆ
ಬುದ್ಧಿಯಿರುವುದೇ ಬಲು ಚೋದ್ಯ !

ಗದ್ಯದಿಂದ ಸಂಸಾರ ನಡಿಯುತ್ತದ
ಗದ್ಯದಿಂದಲೇ ವ್ಯವಹಾರ,
ಉಪ್ಪು-ಬೆಲ್ಲ-ಹುಳಿ ಕೊಂಡುಕೊಳ್ಳುವಾಗ
ಪದ್ಯ ನಡಸಿದರೆ ಬಲು ಘೋರ !

ಗಂಡ-ಹೆಂಡದಿರು ಕಲೆತು ನಲಿಯುವಾಗ
ನಕ್ಕು ಕೆಲಿಯುವಾಗ ನಗಿಮಾತಾ;
ತಾಯಿ-ತಂದಿ ಮಕ್ಕಳನು ನಗಿಸುವಾಗ
ಪದ್ಯವ್ಯಾಕೆ ಬೇಕೋ ಕವಿಭೂತಾ !

'ನಾಟಕವಿದು ಸಂಸಾರದ ಚಿತ್ರವು'
ಎಂದೆನ್ನುವ ನುಡಿ ಬಲು ಸತ್ಯಾ !
ರಂಗಭೂಮಿ ಮ್ಯಾಲೆ ರಾಗ ತಗೀಬೇಕು,
ಮಾಡಬೇಕು ಪದ್ಯದ ನೃತ್ಯಾ !

ಸಂಸಾರಿದು ನಾಟಕದ ಚಿತ್ರವೇನು ?
ಮಾತನಾಡಬೇಕು ಮನಿಯೊಳಗ !
ಕಂಸಾರಿಯ ಸವಿಭಜನಿ ಮಾಡುವಾಗ
ಹಾಡಿ ಮುಗಿಸಬೇಕು ಮನದೊಳಗ !

ಸಜ್ಜಿಯ ಬಕ್ಕರಿ, ಬೆಣ್ಣಿ, ಬದನೇಕಾಯಿ,
ಹುಗ್ಗಿ-ತುಪ್ಪ ಇವು ದಿನದೂಟಾ !
ಮಜ್ಜಿಗಿಯಾ ರುಚಿ ಹಾಲಿಗೆ ಬರುವುದೆ ?
ಸಕ್ರಿಯುಂಡಿ, ಪುರಿ ಬರಿ ಮಾಟಾ !

ಗದ್ಯವೊಂದು ಗತಿಯಿಂದ ನಡಿದರs
ಪದ್ಯವಾಗುತsದೊ ತಿಳಿಗೇಡಿ !
ಹೃದ್ಯವಾದರೂ ಪದ್ಯಗದ್ಯವೇ
ಹೃದ್ಯಗದ್ಯಗಳ ಹೃದಯ ತಿಳಿ !

ಪದ್ಯ

ಸಾರಾಸಾರ ವಿಚಾರ ಮಾಡಿದರೆ
ಪದ್ಯವೆಂಬುದೇ ಬಲು ಹೃದ್ಯ !
'ಪದ್ಯವಧ್ಯ' ಎಂದೆನ್ನುವ ಜನರಿಗೆ
ಬುದ್ಧಿಗಲಿಸುವುದು ಈ ಪದ್ಯ !

ತಾಯಿಯಾ ಬಸಿರಿಂದ್ಹುಟ್ಟಿ ಬರೂಮುಂದ
ಗದ್ಯದ ಗುರುತಿತ್ತೇನೊ ಜರಾ ?
ಗದ್ಯವಿಲ್ಲದೇ ಜೀವ ಜೀವಿಸಿತ್ತು,
ಹಾಲಿನಿಂದ ತುಂಬತಿತ್ತುದರಾ !

ಮದಿವಿಗಿಂತ ಮುಂಚೆ ಪೀಂ ಪೀಂ
ಊದುತಾರ,
ಹಾಡೇ ಹಾಡುತಾರ ಸೋಬಾನಾ !
ಬರೀ ಗದ್ಯದಿಂದ ಮದಿವಿ ಮಾಡಿನೋಡು,
ಸೊಗಸಲ್ಲೇನಿದೆ ಹುಚ್ಚಮುಂಗಾ !

ಆಟದೊಳಗ ಸಂಗೀತ ಕೂಡಿದರ
ರೊಕ್ಕ ಹರಿಯುತ್ತದ ಝಣಾಝಣಾ !
ಗದ್ಯಗದ್ಯವೆಂದು ಥಕ್‌ಥೈ ಮಾಡಿದರೆ
ರಂಗ ಸುರಿಯುತ್ತದ ಭಣಾ ಭಣಾ !

ರಣಭೇರಿಯು ಘುಡುಘುಡಿಸಿ ಹಾಡಿದರೆ
ವೈರಿಯಾಗತಾನ ತಣ್ಣೀರಾ;
ಗದ್ಯದಿಂದಲೇ ಯುದ್ಧಸಾಗಿದರೆ
ಹುರುಪು ಬಂದೀತ್ಹ್ಯಾಂಗೋ
ಜೋಕ್ಮಾರಾ !

ಪ್ರೇಮದೊಳಗ ಸಂಗೀತ-ಪದ್ಯಬೇಕು
ಪ್ರೇಮವೆಂದರೆಯೆ ಸಂಗೀತಾ !
ಗಂಡ-ಹೆಂಡಿದಿರು ಕೂಡಿ ಹಾಡಿದರ
ಬಾಳ್ವೆ ಮುತ್ತು-ಚಿನ್ನದ ಮಾತಾ !

ಜೀವವಿರೂತನ ಹಾಡಿ ಕುಣಿಯ ಬೇಕು
ಪದ-ಪದ್ಯ ಹೇಳಬೇಕು ಹರಿಹನುಮಾ,
ವಾದ್ಯಹಚ್ಚಿ ಹಾಡಿದರೆ ಹೆಣದ ಮುಂದೆ
ಗೆದ್ದು ಹೋಗತsದ ಈ ಜನುಮಾ !

ಕಾವ್ಯ

ಸಾರಾಸಾರ ವಿಚಾರ ಮಾಡಿದರೆ
ಗದ್ಯ ಪದ್ಯ ಎರಡೂ ಹೃದ್ಯ !
ಗದ್ಯ-ಪದ್ಯದಿಂದಸುವ ಬೆಳಸಿದರೆ
ಮರ್ತ್ಯನಾಗುತಾನೆ ತಾ ಬುದ್ಧ !

ಗದ್ಯದಿಂದ ವ್ಯವಹಾರ ನಡಿಯುತsದ
ವಿಶ್ವದೊಳಗಿನೆಲ್ಲಾ ವ್ಯಾಪಾರಾ !
ಪದ್ಯದಿಂದ ರಸ-ರಾಗ ಹೊಳಿಯುತಾವ
ಬಾಳ್ವೆ ಆಗತsದ ಶೃಂಗಾರಾ !

ನಾದ ಹುಟ್ಟಿಸಿದ ಬ್ರಹ್ಮ; ನುಡಿಯು ಇದು
ನಾದದ ಬಳ್ಳಿಯ ಹೊಸಹೂವಾ !
ಹಾಡೆಂದರೆ ಆ ಬಳ್ಳಿಗೆ ಹುಟ್ಟಿದ
ಸವಿರಸ ತುಂಬಿದ ಫಲಜೀವಾ !

ಗದ್ಯ-ಪದ್ಯವಿವು ರೀತಿ; ರಸದ ಝರಿ
ಹರಿ ತುಂಬು ನೀ ಮನದಾಗ !
ರಸದಿ ತುಂಬಿರುವ ಜೀವಕಾವ್ಯವಿದು
ಉಸಿರು ಆಗತsದ ರಸ-ರಾಗ

ಕಾವ್ಯಜೀವನವೆ ರಸಾ, ಒಣಗಿರುವ
ಗದ್ಯ-ಪದ್ಯವಿವು ಹಿರಿಯ ಕಸಾ !
ಗದ್ಯ-ಪದ್ಯದಾಗ ರಸಾ ತುಂಬಿದರೆ
ಕಾವ್ಯವಾಗುತsದ ಹಸಾ ಹಸಾ !

ಪ್ರೇಮರೂಪ ಪರಮಾತ್ಮ ತುಂಬಿರುವ
ವಿಶ್ವದೊಳಗ ತಾ ರಸರೂಪಾ !
ರಾಗರೂಪ ಪರಮಾತ್ಮನ ನೆನೆದರೆ
ಒಲಿಯುತಾನೆ ವಿಶ್ವದ ಭೂಪ !

ಗದ್ಯ ಕುಣಿದರೇ ಪದ್ಯವಾಗುತsದ
ಬಾಳ್ವೆಯಾಗುತsದ ಬಲುಹೃದ್ಯ;
ದೇಹದೊಳಗ ಜನ ಜೀವ ನೋಡುತsದ
ಓದು ಶ್ರೀಧರನ ಸವಿಪದ್ಯ !

ಮಗ್ನತೆ...ಅಹುದು, ಮಗ್ನತೆಯೆ!

(ಹರಟೆಯೊಂದು)

ಶ್ರೀ. ಎನ್‍. ಕೆ. ಕುಲಕರ್ಣಿ, ಎಂ. ಎ., ಬಿ. ಟಿ.

ವಿಚಾರಮಗ್ನತೆಯೆನ್ನಿ, ವಿಷಯಮಗ್ನತೆಯೆನ್ನಿ, ಆಲೋಚನಾ ಮಗ್ನತೆಯೆನ್ನಿ, ವಾಚನಮಗ್ನತೆಯೆನ್ನಿ ಎಲ್ಲವೂ ಮನಃಸ್ತಂಭನವನ್ನು ಮಾಡುವಂತಹವು; ಎಂದರೆ ಮೈಮೇಲಿನ ಎಚ್ಚರನ್ನು ತಪ್ಪಿಸುವಂತಹವು. ಮದ್ಯಪಾಯಿಯೂ ಮಗ್ನಜೀವಿಯೂ ಒಂದೆ ಮೆಟ್ಟಲಿನಲ್ಲಿರುವರು. ಅಲ್ಲವೆಂದರೆ ಇದನ್ನೋದಿರಿ.

★

ವಾಚಕರೆ, ಮೇಲಿನ ಶಿರೋನಾಮವು ತುಸು ಗಂಡಾಂತರದ್ದಿರುತ್ತದೆ. ಅಂತೇ ಈಗಲೆ ಆ ಬಗ್ಗೆ ಸ್ಪಷ್ಟಪಡಿಸುವೆ. ತಲೆಬರಹವಿದ್ದುದು ಮಗ್ನತೆ; ನಗ್ನತೆಯೆಂದಲ್ಲ. ಇಲ್ಲವಾದರೆ ವಾಚಕರು ಗೊಂದಲದಲ್ಲಿ ಬಿದ್ದು ಲೇಖಕನನ್ನೂ ಗೊಂದಲದಲ್ಲಿ ಕೆಡಹಿ, ಲೇಖಕನು ತಲೆ ಕೆಟ್ಟು ಬರೆಯುತ್ತಿದ್ದಾನೆಂದು ಕಲ್ಪನೆ ಮಾಡಿಕೊಳ್ಳಬಹುದು. ಹಾಗೆ ಮಾಡಿಕೊಳ್ಳಲೂ ಸಂಭವವಿಲ್ಲವೆನ್ನೋಣ ಒಂದು ವೇಳೆ— ಏಕೆಂದರೆ 'ನ್ಯೂಡಿಜಂ'ನ ಮೇಲೆ ವಿಚಾರಾತ್ಮಕ ಲೇಖನ ಬರೆಯುವಷ್ಟು ಪ್ರಾವೀಣ್ಯತೆಯೂ ಹಕ್ಕೂ ನನಗೆ ಯಾವ ರೀತಿಯಿಂದಲೂ ಇಲ್ಲ. ಇರಲಿ, ಆ ಮಾತು ಬೇರೆ. ಏಕೆಂದರೆ ನಾನು ಆಯ್ದುಕೊಂಡ ವಿಷಯವೇ ಬೇರೆ.

ಜಗತ್ತಿನಲ್ಲಿ ವಿಚಾರಮಗ್ನರಾಗದವರು ತೀರ ಕಡಿಮೆ. ಯೋಗಿಗಳು ಯುಗ-ಯುಗಗಳವರೆಗೆ ಆತ್ಮಮಗ್ನರಾದುದನ್ನು ಕೇಳಿದ್ದೇವೆ. ರೋಗಿಗಳೂ ರೋಗವಿರುವವರೆಗೆ ವಿಚಾರಮಗ್ನರಾಗಿ ಬಡಬಡಿಸುತ್ತಾರೆ. ಸಂಶೋಧಕರೂ ಶಾಸ್ತ್ರಜ್ಞರೂ ಕವಿಗಳೂ ವಿಷಯಮಗ್ನರಾಗಿರುತ್ತಾರೆ. ಕವಿಗಳ ಮಗ್ನತೆಗೆ ಮಾತ್ರ ಭಾವನಾಪರವಶತೆ ಇಲ್ಲವೆ ತನ್ಮಯತೆಯೆನ್ನಬೇಕು. ಕವಿಗಳಂತೆಯೆ ಕಾಮಿಗಳೂ ಒಮ್ಮೊಮ್ಮೆ ಪರವಶರಾಗಿರುತ್ತಾರೆ.

ಮಾನವನಿಗೆ ದೇವರು ವಿಚಾರಶಕ್ತಿಯನ್ನು ದಯೆಪಾಲಿಸಿದ್ದಾನೆ. ಪಶುಗಳಿಗಿಂತ ಮಾನವ ಶ್ರೇಷ್ಠನೆಂದು ಹೇಳುವುದಕ್ಕೆ ಎರಡು ಕಾಲಿನ ಹೊರತು ಎರಡನೆಯದೊಂದು ಆಧಾರವೆಂದರೆ ಇದು. ಈ ವಿಚಾರದ ಭಾರದ ಮೇಲೆ ತೂಗಾಡಿಸುವ—ತೂಕಡಿಸುವ ಮಾನವರೆಲ್ಲರೂ ಒಮ್ಮೊಮ್ಮೆ ವಿಚಾರಮಗ್ನರಾಗಿರುವುದೂ ಉಂಟು. ನಾನೂ ಸಾಮಾನ್ಯರಂತೆಯೆ ವಿಚಾರಮಗ್ನನಾಗುತ್ತಿದ್ದರೆ ಮಗ್ನತೆಯನ್ನು ಬಿಟ್ಟು ನಗ್ನತೆಯ ಮೇಲೆಯೆ ಬರೆಯುತ್ತಿದ್ದೆ. ಇದರ ಪ್ರಸಂಗ ಹಾಗಿಲ್ಲ; ನನ್ನ ವಿಚಾರಮಗ್ನತೆ ವಿಲಕ್ಷಣವಾದುದೆಂದೇ ತಮ್ಮೆಲ್ಲರಿಗೆ ನಿರೂಪಿಸುವೆ. ತಮ್ಮ ಮಗ್ನತೆಯ ಅರಿವು ತಮಗೆ ಇರುವುದು ಸಾಧ್ಯವಿಲ್ಲವೆಂಬುದು ನಿಜ. ಹಾಗೆ ಅರಿವು ಇದ್ದರೆ ಅದು ಮಗ್ನತೆಯೂ ಎನಿಸಲಾರದು. ನನ್ನ ಮಗ್ನತೆಯ ಅರಿವು ಮಾತ್ರ ನನಗೆ ನನ್ನ ಮಿತ್ರರ ಮುಖಾಂತರ, ನನ್ನ ಆತ್ಮನಿರೀಕ್ಷಣೆಯ ಮುಖಾಂತರ ಉಂಟಾದುದು.

ನನ್ನ ವಿಚಾರಮಗ್ನತೆಯ ಬಗೆಬಗೆಯ ಸೋಗು ನೋಡಬೇಕಾದರೆ, ನಾನು ಪರಊರಿಗೆ ಹೋಗಿರಬೇಕು. ಅಲ್ಲಿ ನನ್ನವರೆನ್ನುವವರು ಯಾರೂ ಇರಬಾರದು. ಹಾಂ. ಪರಊರೆಂದರೆ ಮಹಾರಾಷ್ಟ್ರದ 'ಪೈಕೀ' ಒಂದು ಊರೇ ಆಗಿರಬೇಕು. ಎಂದರೆ ಮತ್ತೊಬ್ಬರು ಮಾತನಾಡಿದುದು ಸಹ ತಿಳಿಯದಾಗಲು ವಿಚಾರಮಗ್ನತೆಗೆ ಮತ್ತಿಷ್ಟು ಮೆರುಗು ಬರುತ್ತದೆ. ಒಮ್ಮೊಮ್ಮೆ ಮತ್ತೊಬ್ಬರು ಮರಾಟಿ ಭಾಷೆಯಲ್ಲಿ ಪ್ರಶ್ನೆ ಕೇಳಿದಾಗ— ಅದೇ ಭಾಷೆಯಲ್ಲಿ ಉತ್ತರ ಕೊಡುವ ಯೋಗ್ಯತೆ ನಮ್ಮಲ್ಲಿಲ್ಲದಾಗ— ಸುಳ್ಳುಸುಳ್ಳೇ ವಿಚಾರಮಗ್ನರಾಗಿ, ಪ್ರಶ್ನೆಯನ್ನು ಕಿವಿಯಿಂದ ಕೇಳಿದ್ದರೂ ಕೇಳದವರಂತೆ ನಟಿಸಬೇಕಾಗುತ್ತದೆ. ಇಂತಹ ಸನ್ನಿವೇಶದಲ್ಲಿಯೂ ವಿಚಾರಮಗ್ನತೆಗೆ ವಿಶೇಷ ಕಳೆಬರುವುದುಂಟು.

ಸಾಮಾನ್ಯವಾಗಿ ವಿಚಾರಮಗ್ನರಾಗುವವರ ಉದಾಹರಣೆಯನ್ನು ನೀವು ಕೇಳಿರಬಹುದು: ವಿಸು, ಒಬ್ಬ ಮಹಾನುಭಾವರು ಊಟಕ್ಕೆ ಕುಳಿತಾಗ ವಿಚಾರಮಗ್ನತೆಯಲ್ಲಿ ಬಕ್ಕರಿಯ ಬದಲಾಗಿ ನೆಲದ ಹಕ್ಕಳಿಯನ್ನೆ ಬಕ್ಕರಿಸಿದುದನ್ನು, ಇಲ್ಲವೆ ಇನ್ನೊಬ್ಬ ಮಹಾವೀರರು ವಿಚಾರಮಗ್ನತೆಯಲ್ಲಿ ಹೊರಗಿನಿಂದ ಬಂದವರೇ ಹಾಸಿಗೆಯ ಮೇಲೆ ತಮ್ಮ ವಾಕಿಂಗ್‍ಸ್ಟಿಕ್‍ ಇಟ್ಟು ತಾವು ಮೂಲೆಯಲ್ಲಿ ಹೋಗಿ ನಿಂತುದನ್ನು; ಅಥವಾ ಇನ್ನೊಬ್ಬ ಧರ್ಮವೀರರು ಯಾವಾಗಲೂ ದೇವರಿಗೆ ಕೈಮುಗಿಯುವ ಭರದಲ್ಲಿ ಒಂದೆಡೆಗೆ ಕ್ಲಾಕ್‍ಟಾವರಿಗೂ ಟಾಯಿಮ ನೋಡಿ ಕೈ ಮುಗಿದಿದ್ದರಂತೆ. ಏಕೆ, ಹೇರ್‍ ಕಟಿಂಗ್‍ ಸಲೂನಿಗೆ ಕೈಮುಗಿದಿದ್ದರೂ ಮುಗಿದಿರಬಹುದು (ಒಳಗಿನವರು ಸಲಾಂ ಮಾಡಿದಾಗಲ್ಲ ಮತ್ತೆ!). ಕದಾಚಿತ್‍ ಇನ್ನೊಬ್ಬ ಪ್ರೇಮವೀರರು, ಊರಿಗೆ ಹೋಗುವಾಗ ಬೀಳ್ಕೊಡುವ ಭರದಲ್ಲಿ ತಮ್ಮ ಹೆಂಡತಿಗೆ ಟಿಪ್ಸಿ ಕೊಟ್ಟು ಪೋರ್ಟರನಿಗೆ ಕಿಸ್‍ ಕೊಟ್ಟಿರಬಹುದು. ಒಬ್ಬ ವಿಜ್ಞಾನಸಂಶೋಧಕನು ತನ್ನ ಮದುವೆಯ ವೇಳೆಗೆ ಚರ್ಚಿಗೆ ಹೋಗುವ

ಬದಲು ಪ್ರಯೋಗಶಾಲೆಗೆ ನಡೆದುದೂ ಇರಬಹುದು. ಇಷ್ಟಕ್ಕೇ ನೀವು ನಕ್ಕರೆ ನನ್ನ ವಿಚಾರಮಗ್ನತೆಗೆ ಏನೆನ್ನುವಿರೊ!

ವಿಚಾರಮಗ್ನತೆಯಲ್ಲಿ ಕೊಂಚ ಕೊಂಚ ಮರೆವುಗೇಡಿತನವೂ ಕೂಡಿರುತ್ತದೆಯೆಂದು ಹೇಳಬೇಕು. ಏಕೆಂದರೆ ಒಬ್ಬ ಪುಣ್ಯಾತ್ಮರು ಆಕಳಿಸಬೇಕೆಂದು ಹೊರಟವರು, ಮರೆತು ಸೀತು ಬಿಟ್ಟರಂತೆ. ಇಲ್ಲಿ ಕರ್ತೃವಿನ ಮನಸ್ಸನ್ನು ವಿಭಜಿಸಿನೋಡಿದರೆ, ಮಗ್ನತೆಯೊಂದಿಗೆ ಮರೆವುಗೇಡಿತನವೂ ಅದರಲ್ಲಿದ್ದಿರಬೇಕೆಂಬುದು ಸ್ಪಷ್ಟವಾಗುವುದಿಲ್ಲವೆ? ನನ್ನ ಮಗ್ನತೆಯ ಮಾದರಿಯೂ ಕೊಂಚ ಇದೇ ತರಗತಿಯದು.

ನನ್ನ ಸ್ವಭಾವವೆಂದರೆ, ನಡೆದ ಪ್ರಸಂಗದಲ್ಲಿ ಮನಸ್ಸುಹಾಕುವುದಕ್ಕಿಂತಲೂ ಮುಂದಾಗಬೇಕಾದ ಪ್ರಸಂಗದಲ್ಲಿ ಮನಸ್ಸು ಹಾಕುವುದು. ಇದರಿಂದ ಸದ್ಯದ ಪ್ರಸಂಗವು ಮೂರಾಬಟ್ಟೆಯಾಗುವುದಲ್ಲದೆ, ಮುಂದಿನ ಪ್ರಸಂಗಕ್ಕಾದರೂ ನಿಶ್ಚಿತಸ್ವರೂಪ ಬರುವುದಿಲ್ಲ. ಏಕೆಂದರೆ ಮುಂದಿನ ಪ್ರಸಂಗ ಬಂದಿತೆನ್ನೋಣ, ಆ ಕಾಲಕ್ಕೇ ಅದರ ಮುಂದಿನ ಯೋಚನೆಯೊಂದಿರುತ್ತದಲ್ಲ! ನನ್ನ ವಿಚಾರಮಗ್ನತೆಯ ಕಲ್ಪನೆ ನಿಮಗೆ ಬಂದಿರಬೇಕಲ್ಲವೆ! ಒಮ್ಮೊಮ್ಮೆ ಅನೇಕರು ನನಗೆ 'Absentminded-ಶೂನ್ಯ ಮನಸ್ಕ'—ಎನ್ನುತ್ತಿದ್ದರು. ನನ್ನ ಮನಸ್ಸೇನೂ absent ಆಗಲಿ ಶೂನ್ಯವಾಗಲಿ ಇರುತ್ತಿದ್ದಿಲ್ಲ ಆದರೆ ಬೇರೊಂದು ವಿಷಯದಲ್ಲಿ ಮಗ್ನವಾಗಿರುತ್ತಿತ್ತು, ಇಷ್ಟೇ. ಒಮ್ಮೆ ಒಬ್ಬ ಮಿತ್ರರು ಊರಿಗೆ ಹೋಗುತ್ತೇನೆಂದು ಹೇಳಲು ಬಂದಿದ್ದರು. ಅವರು ಹೇಳಿಯೇ ಹೇಳಿದರು; ನಾನು ಕೇಳಿಯೇ ಕೇಳಿದೆ. ಆದರೆ ಕೊನೆಗೆ ಕೇಳಿಯೂ ಕೇಳದಂತೆಯೆ ಇದ್ದೆ. ಏಕೆಂದರೆ ನಾನಾಗ ವಿಚಾರಮಗ್ನನಾಗಿದ್ದೆ. ಅವರ ಮಟ್ಟಿಗೆ ಶೂನ್ಯಮನಸ್ಕನಾಗಿದ್ದೆನೆನ್ನೋಣಬೇಕಾದರೆ. ಅವರು ಹೊರಟ ಮೇಲೆ ಕೇಳಿದೆ— "ಇಂದು ಸಂಜೆಯು ಮುಂದೆ ಇಲ್ಲಿಯೇ ಊಟಕ್ಕೆ ಬನ್ನಿರಲ್ಲ" ಎಂದು. ಒಂದೊಂದು ಪ್ರಸಂಗದಲ್ಲಿ ಏನಾದರೂ ಸಾಮಾನು ತೆಗೆದುಕೊಂಡು ರೊಕ್ಕ ಕೊಡದೆ ಹಾಗೆಯೆ ಬಂದಿದ್ದೇನೆ. ಆದರೆ ನನ್ನ ವಿಚಾರಮಗ್ನತೆ ಬಹು ಲಾಭದಾಯಕವೆಂದು ಮಾತ್ರ ತಿಳಿಯಬೇಡಿರಿ. ಕೆಲವೆಡೆಗೆ ನೋಟುಕೊಟ್ಟು ಚಿಲ್ಲರ್ ಕೇಳದೆಯೂ ಮರೆತು ಬಂದಿದ್ದೇನೆ. ಒಮ್ಮೊಮ್ಮೆ ರೇಲ್ವೆ ರಿಟರ್ನ್ ಟಿಕೆಟ್ ಕೊಂಡಾಗ, ಮರಳುವ ಮೊದಲೇ ಇಡಿಯ ಟಿಕೆಟ್ ಕೊಟ್ಟುಬಿಟ್ಟು ಹೋಗಿಬಿಟ್ಟದ್ದೇನೆ. ಮರೆತು ವಿಳಾಸ ಬರೆಯದೆ ಪತ್ರ ಹಾಕಿದುದಂತೂ ಎಷ್ಟು ಸಲವೋ ನೆನಪೇ ಇಲ್ಲ. ಏಕೆ, ಸ್ಟ್ಯಾಂಪ್ ಹಚ್ಚುವುದನ್ನು ಮರೆತು ಬಿಟ್ಟು, ಪತ್ರದಲ್ಲಿಯೇ ನನ್ನ ಮಿತ್ರನಿಗೆ— "ಕ್ಷಮಿಸು ಸ್ಟ್ಯಾಂಪ್ ಹಚ್ಚಲು ಮರೆತೆ"—ಎಂದೂ ಬರೆದಿಬೇಕೆನಿಸುತ್ತದೆ. ಕೋಣೆಗೆ ಬೀಗ ಹಾಕಿ, ಬೀಗದಲ್ಲಿಯೇ ಬೀಗದ ಕೈ ಇಟ್ಟು, ಮರಳಿ ಬಂದ ಮೇಲೆ ಊರೆಲ್ಲ ಬೀಗದ ಕೈ ಹುಡುಕಿ, ಕೀಲಿ ಮುರಿಯ ಹೋದಾಗ ಕೈ ಕೈಗೆ ದೊರೆತುದೂ ಮರೆತಿಲ್ಲ. ಊಟಕ್ಕೆ ಕುಳಿತಾಗ ಹೊಟ್ಟೆ ತುಂಬಿದುದರ ಕಡೆಗೆ ಲಕ್ಷ್ಯವೇ ಇಲ್ಲದೆ, ಮೊಸರನ್ನ ಉಂಡಮೇಲೆಯೂ ಹಾಗೆಯೆ ಸಲ್ಲೆಕಾಯಿ ಬಾಡಿಸುತ್ತ, ಅವು ತೀರಿದ ಮೇಲೆ ಬರಿಯೆ ಉಪ್ಪನ್ನೆ ಬಾಡಿಸುತ್ತ, ಅದೂ ತೀರಿದ ಮೇಲೆ ಬರಿಯೆ ತಾಟನ್ನೆ ಅಲ್ಲಲ್ಲ, ಬೆರಳನ್ನು ನೆಕ್ಕುತ್ತ ಕುಳಿತಾಗ-ಬಡಿಸುವವರು 'ಮತ್ತೇನು ಬೇಕು?' ಎಂದು ನಗುತ್ತ ಕೇಳಿದಾಗ-ನನ್ನ ಊಟ ಮುಗಿದುದರ ಕಲ್ಪನೆ ಬಂದುದೂ ಗೊತ್ತಿದೆ. ಒಮ್ಮೆ ವಿಚಾರಭರದಲ್ಲಿ ತಂಬಾಕನ್ನು ಹಾಕಿಕೊಂಡಾಗ ಬದಿಗೆ ಕುಳಿತವರಿಗೆ ರಂಗಪಂಚಮಿಯ ನೆನಪು ತಂದುಕೊಟ್ಟುದೂ ನೆನಪಿರದೆ ಇಲ್ಲ. ಒಮ್ಮೆ ನನ್ನ ಮಿತ್ರರೊಡನೆ ಚಹಕುಡಿಯುತ್ತಿದ್ದಾಗ ವಿಚಾರಭರದಲ್ಲಿ ನನ್ನ ಕಪ್ಪಿನೊಳಗಿನ ಚಹ ಮುಗಿದಾಗ ಬೇರೊಬ್ಬರ ಕಪ್ಪಿಗೆ ಕೈಹಾಕಿದ್ದೆನೆಂಬುದು ಮೊದಲೇ ತಿಳಿದಿರಲಿಲ್ಲ.

ಒಮ್ಮೆಯಂತೂ ಹೀಗಾಗಿತ್ತು: ನನ್ನ ಮನಸ್ಸಿಗೆ ತಕ್ಕುದೆನಿಸಿದ ಒಂದಾದರೂ ರೇಝರ್‌ಬ್ಲೇಡು ಸಿಕ್ಕಿರಲಿಲ್ಲ. ಯಾವ ಬ್ಲೇಡನ್ನು ಕೇಳಿದರೂ ಅಂಗಡಿಕಾರರು, ತಮ್ಮ ಧರ್ಮದಂತೆ ಸರ್ವೋತ್ಕೃಷ್ಟವಾದುದೆಂದೇ ಹೇಳುತ್ತಿದ್ದರು. ಅದಾದರೊ ಒಂದು ಕಪೋಲವನ್ನು ಬಿಟ್ಟು ಇನ್ನೊಂದು ಕಪೋಲಕ್ಕೆ ಹೋದಕೂಡಲೆ ಸಿಂಹದ ನಖದಂತೆ ಚುಗಿಬಿಡುತ್ತಿದ್ದಿತು. ಈ ಸಮಸ್ಯೆ ನನ್ನನ್ನು ಎಷ್ಟೋ ದಿನಗಳ ವರೆಗೆ ಪೀಡಿಸುತ್ತಿದ್ದಿತು. ಒಂದು ದಿನ ಒಬ್ಬ ಗೆಳೆಯರು ಒಂದು ಬ್ಲೇಡನ್ನು 'ಸಿಫಾರಸು' ಮಾಡಿದರು. ಅವರು ಅಂಗಡಿಕಾರರಾಗಿದ್ದಿಲ್ಲವಾದುದರಿಂದ ಅವರ ಮಾತನ್ನು ನಂಬಿದೆ; ಬ್ಲೇಡು ತಂದೆ, ಬ್ಲೇಡು ಯಾವುದೆಂದು ಕೇಳಬೇಡಿರಿ. ಏಕೆಂದರೆ ರೊಕ್ಕವಿಲ್ಲದೆ ಆ ಬ್ಲೇಡಿನ ಜಾಹೀರಾತು ಮಾಡಿದಂತಾಗುತ್ತದೆ. ಅಂತೂ ಕ್ಷೌರಕ್ಕೆ ಮೊದಲಾಯಿತು. ಗಡ್ಡಕ್ಕೆ ಸಾಬೂನು ಹಚ್ಚಿಕೊಳ್ಳುತ್ತಿರುವಾಗ— ಸಾಮಾನ್ಯವಾಗಿ ಆಕೆಲಸ ಯಾಂತ್ರಿಕವಿದ್ದು ಮನಸ್ಸು ಮತ್ತೊಂದು ಲೋಕದ ವಿಚಾರಮಾಡುತ್ತಿರುವ ಪ್ರಸಂಗವಿರುತ್ತದೆ— ಸಾಬೂನನ್ನು ಎಷ್ಟೊಂದು ಭರಾಟೆಯಿಂದ ತಿಕ್ಕುವೆನೋ ವಿಚಾರಗಳ ತಾಕಲಾಟ ಅಷ್ಟೊಂದು ಭರದಿಂದ ಸಾಗುತ್ತದೆ 'ಕ್ಷೌರ ಮುಗಿದ ಮೇಲೆ ಮುಂದಿನ ಕಾರ್ಯಕ್ರಮವೇನು?' ಎಂಬ ವಿಚಾರದಲ್ಲಿದ್ದೆ. ಅಥವಾ 'ಗಡ್ಡ ನುಣುಪಾದರೆ ನನ್ನ ಮಿತ್ರನ ಕಡೆ ಹೋಗಿ ಥ್ಯಾಂಕ್ಸ್‌ಕೊಟ್ಟು ಬ್ಲೇಡಿನ ಕಂಪನಿಯವರಿಗೂ ಒಂದು ಅಭಿಪ್ರಾಯ ಕಳಿಸೋಣ' ಎಂದು ವಿಚಾರಿಸಿಕೊಂಡಿದ್ದೆ. ಕ್ಷೌರವಾಯಿತು. ಆಯಿತೋ ಇಲ್ಲವೋ ಎನ್ನುವಷ್ಟು ಸರಳವಾಯಿತು. ನುಣುಪು ಅಗಿರಬೇಕೆಂದು ನನ್ನೊಳಗೆ ನಾನೇ ನಗುತ್ತ ನ್ನೋ ಹಚ್ಚಿಕೊಳ್ಳಲು ಕನ್ನಡಿ ತೆಗೆದುಕೊಂಡೆ ಹೇಳಿದೆನಲ್ಲ.. ವಿಚಾರದ ಭರವೆಂದು. ವಿಚಾರದ ಭರದಲ್ಲಿ ಕನ್ನಡಿಯನ್ನು ನೋಡಿಕೊಳ್ಳುವುದನ್ನೆ ಮರೆತಿದ್ದೆ. ಗಲ್ಲ ಹರಿದಿದ್ದರೆ ಕನ್ನಡಿ ನೆನಪಾಗುತ್ತಿತ್ತೇನ್ನಿ. ಕನ್ನಡಿಯಲ್ಲಿ ನೋಡಿಕೊಂಡೆ. ಗಡ್ಡವೆಲ್ಲವೂ ಹಾಗೆಯೆ ಇದ್ದುವು. 'ಇದೆಂತಹ ಬ್ಲೇಡೋ ಮಾರಾಯಾ' ಎಂದುಕೊಂಡೆ. ರೇಝರ್ ಬಿಚ್ಚಿ ನೋಡುತ್ತೇನೆ-ಬ್ಲೇಡ್ ಹಾಕಿರಲೇ ಇಲ್ಲ! ವಿಚಾರಮಗ್ನತೆ! ಆ ಬ್ಲೇಡಿನ ಹೆಸರು 'ಏಳುಗಂಟೆ'—7 O'clock. ಈಗ ಆಗಿತ್ತು ಸಾಡೇಸಾತ್.

ನನ್ನ ಮಗ್ನತೆಯ ಕಲ್ಪನೆ ಪೂರ್ಣ ಬಂದಿರಬೇಕಲ್ಲವೆ ತಮಗ!

—: ಲೋಹಚುಂಬಕ ಕಣಿಗಳು :—

★ ಅಥವಾ ★

ಜಲಸುರಂಗಗಳು (Magnetic Mines)*

(ಪ್ರಲಯವಿಜ್ಞಾನದ ಪರಿಚಯ) ★ ಶ್ರೀ. ನ. ವೇ. ಪೂಜಾರ

★

ನಡೆದಿರುವ ಮಹಾಯುದ್ಧದಲ್ಲಿ, ನೂರಾರು ಹಡಗುಗಳನ್ನು ಕಡಲ ತಳಕ್ಕೆ ಅಟ್ಟಿದ ಜಲಸುರಂಗದ ವಾಮನಮೂರ್ತಿಯ ಹೆಸರು ಆಬಾಲವೃದ್ಧರಿಗೂ ಗೊತ್ತಾಗಿದೆ; ಆದರೆ ಆ ಜಲಸುರಂಗದ ರಚನೆ ಹೇಗಿದೆಯೆಂಬುದನ್ನು ಅರಿತವರು ವಿರಳ, ಅರಿಯದವರು ಈ ಲೇಖನ ಓದಿಕೊಳ್ಳಬೇಕು.

★

ಲೋಹಚುಂಬಕ ಕಣಿಗಳು† ಕಳೆದ ಮಹಾಯುದ್ಧದ ಕೊನೆಕೊನೆಯ ಭಾಗದಲ್ಲಿ ಪ್ರಚಾರಕ್ಕೆ ಬಂದುವು. ಈ ಸಲದ ಯುದ್ಧದಲ್ಲಿ ಅವು ತುಂಬ ಸುಧಾರಣೆಹೊಂದಿ ಮುಂದೆ ಬಂದುದು ಸ್ಪಷ್ಟವಾಗಿ ಕಂಡುಬಂದಿದೆ. ಈ ಎಲ್ಲ ಕಣಿಗಳೂ ಒಂದೆ ಒಂದು ತತ್ತ್ವದಮೇಲೆ ನಿಂತಿರುತ್ತವೆ. ಆ ತತ್ತ್ವವಾವುದೆಂದರೆ: ಕೆಳಭಾಗವು ಲೋಹದ ಆವರಣದಿಂದ ಹೊದ್ದಿಸಲ್ಪಟ್ಟ ಹಡಗುಗಳು ಈ ಕಣಿಗಳ ಮೇಲಾಗಲಿ, ಅವುಗಳ ಸಮೀಪದಲ್ಲಿಯಾಗಲಿ ಹಾಯ್ದು ಹೋದರೆ, ಹಡಗದ ಕೆಳಭಾಗದ ಆ ಶಕ್ತ ಲೋಹಚುಂಬಕ ಪರಿಧಿಯು, ಕಣಿಯೊಳಗಿನ ಲೋಹಚುಂಬಕದ ಸೂಜಿಯನ್ನು ಮೇಲಕ್ಕೆ ಆಕರ್ಷಿಸುವುದು. ಆ ಸೂಜಿಗಳು ವಿದ್ಯುತ್ತಿನ ಪ್ರದಕ್ಷಿಣೆಯನ್ನು ತಡೆಹಿಡಿದು, ವಿದ್ಯುತ್ತಿನ ಕುದುರೆ (Relays) ಗಳನ್ನು ಪ್ರಚೋದಿಸುವದರಿಂದಲೂ, ಆ ಕುದುರೆಗಳು ಸ್ಫೋಟದ ಪ್ರದಕ್ಷಿಣೆಯನ್ನು ಪೂರ್ಣ ಮಾಡುವುದರಿಂದಲೂ ಪ್ರತಿಯಾಗಿ ಸುರಂಗವನ್ನು ಮತ್ತು ಸ್ಫೋಟಕದ್ರವ್ಯವನ್ನು (ಕಲ್ಲಿದ್ದಲಿಯಿಂದ ತಯಾರಿಸಲ್ಪಟ್ಟ ಸ್ಫೋಟಕ ದ್ರವ್ಯಗಳನ್ನು) ಹಾರಿಸುತ್ತವೆ.

ಆಕಾರ:— ಆಕಾರದಲ್ಲಿ ಇವು ಗೋಲಾಕಾರ (Spherical) ಮತ್ತು ಗುಂಡುಗಂಭ (Cylindrical) ದಾಕಾರ ಹೀಗೆ ಎರಡು ಬಗೆಯವಿರುವುವು. ಮೊದಲಿನವು ೩ ಫೂಟು ವ್ಯಾಸದುವಿದ್ದು, ೩೦೦ ಪೌಂಡು ಸ್ಫೋಟಕದ್ರವ್ಯದಿಂದ ಕೂಡಿ ೧೫೦೦ ಪೌಂಡು ಭಾರದುವಾಗಿರುವುವು. ಅವು ಕಡಲತಂತಿಗಳ ಸಹಾಯದಿಂದ ನೀರಿನ ಮೇಲ್ಭಾಗದಲ್ಲಿ ತೇಲಾಡುವುವು. ಅಥವಾ ನೀರಿನಲ್ಲಿ ನಿರ್ದಿಷ್ಟವಾದ ಆಳತೆಯಲ್ಲಿರುವಂತೆ ಭಾರವಾದ ನೀರಳತೆಯ ಗುಂಡಿನ ಸಹಾಯದಿಂದ ಇರಿಸಲ್ಪಡುವುವು. ಬಹುತರವಾಗಿ ಅವುಗಳಿಗೆ ನಾಲ್ಕು ಕೋಡುಗಳಿರುವುವು. ಇವುಗಳಿಗೆ ಹೊಂದಿ ಒಳಭಾಗದಲ್ಲಿ "ಸಲ್ಫ್ಯೂರಿಕ್ ಆಸಿಡ್" (Sulphuric acid)" ನಿಂದ ತುಂಬಿದ ಕಾಚಿನ ಕೊಳವೆಗಳಿರುವುವು. ಆ ಕೊಳವೆಗಳನ್ನು ಮುರಿಯಲಿಕ್ಕೆ ಸುಮಾರು ೫೦ ಪೌಂಡು ಭಾರದ ಶಕ್ತಿಯು ಅವಶ್ಯ. ಆ ಕೊಳವೆ ಮುರಿದು ಕೆಳಕ್ಕೆ ಚೆಲ್ಲಿದ ಆಮ್ಲವು (ಆಸಿಡ್), ಒಂದು ಬಗೆಯ ರಸಾಯನಕ್ರಿಯೆಯನ್ನುಂಟುಮಾಡಿ, ಆ ಕಣಿಯನ್ನು ಪ್ರೇರೇಪಿಸುವುದು. ಕೆಲವು ಸಲ ಹುಳುಗಳ ಮಿಾಸೆಯಂತಿರುವ ಸ್ಫೋಟಕವಸ್ತುವನ್ನು, ಈ ಕಣಿಗಳಿಗೆ ೩೦ ರಿಂದ ೫೦ ಫೂಟು ಉದ್ದವಾದ ಕಡಲತಂತಿಯಿಂದ ಡೊಂಕುಡೊಂಕಾಗಿ ಜೋಡಿಸಲ್ಪಡುವುದರಿಂದ, ಕಡಲಿನಲ್ಲಿ ಕಂಟಕಮಯ ಪ್ರದೇಶದ ಪ್ರಮಾಣ ಹೆಚ್ಚಾಗುವುದು.

ಗುಂಡುಗಂಭದಂತಹ ಕೆಲವು ಕಣಿಗಳು ತುಂಬ ಬಾಗವಾಗಿರುವುವು. ಅವುಗಳನ್ನು ಕೆಳಕ್ಕಿಳಿಸಲಿಕ್ಕೆ ಸಣ್ಣ ಸಣ್ಣ ಕೊಡೆಗಳ ಸಹಾಯ ಬೇಕಾಗುವುದು. ಇಲ್ಲವಾದರೆ ಅವು ಸಮುದ್ರದ ತೆರೆಗಳ ಮೂಲಕ ಸ್ಫೋಟವಾಗುವ ಸಂಭವವಿರುವುದು; ಹೆಚ್ಚು. ಅಲ್ಲದೆ ಅದರ ಸೂಕ್ಷ್ಮ ಯಂತ್ರವೂ ಕೆಡುವ ಸಂದರ್ಭವಿರುವುದು. ಈ ಕಣಿಯ ಕೆಳಭಾಗವು ಬೇರೆಯಾಗುವುದು ಸುಲಭ. ಅದರ ಮೇಲ್ಭಾಗದಲ್ಲಿ ಇರುವ ಒಂದು ತ್ರಿಕೋಣಾಕಾರದ ಪೆಟ್ಟಿಗೆಯಲ್ಲಿ, ಒಂದು ಕೊಡೆ ಇರುವುದು. ತನ್ನಿಂದ ತಾನೇ ತೆರೆಯುವ ಆ ಪೆಟ್ಟಿಗೆಯಲ್ಲಿದ್ದ ಕೊಡೆಯು ತೆರೆಯುವುದು. ಕಣಿಯು ನೀರಿನ ಮಟ್ಟಕ್ಕೆ ಬಂದ ಕೂಡಲೆ ಅದು ಕಳಚಿ ಬೀಳುವುದು. ಹವೆಯ ಒತ್ತುವಿಕೆಯ ಉಪಕರಣವು (Hydrostatic Gear), ವಿದ್ಯುತ್ತಿನ ಸುರಂಗವನ್ನು ಅಧೀನದಲ್ಲಿಟ್ಟುಕೊಳ್ಳುವುದರಿಂದ, ಕಣಿಯು ಕೆಲವು ಆಳ ನೀರಿನಲ್ಲಿ ಹೋದಮೇಲೆ ಪ್ರಚೋದನೆಗೊಳ್ಳುವುದು. ಕಣಿಯು

---

* ಕೆಲವು ಲೇಖನಗಳ ಆಧಾರದ ಮೇಲಿಂದ ಬರೆದುದು. —ಲೇಖಕ

† 'ಮೈನ್' ಎಂಬ ಇಂಗ್ಲಿಷ್ ಪದಕ್ಕೆ ಈ ಬರೆಹದಲ್ಲಿ 'ಕಣಿ' ಎಂಬ ಕನ್ನಡಶಬ್ದವನ್ನು ರಚಿಸಿ ಇರಿಸಲಾಗಿದೆ. ಆದರೆ 'ಕಣಿ' ಎಂಬ ಶಬ್ದ ಅಷ್ಟೊಂದು ಉಚಿತವಾದುದಲ್ಲ. 'ಸುರಂಗ ಕೋರೆ' ಎಂಬ ಪದವನ್ನು ಪ್ರಯೋಗಿಸುವುದು ಹೆಚ್ಚು ಒಳ್ಳೆಯದು. —ಸಂ. ಜ.

ಉರುಳಿ ಬೀಳಬಾರದೆಂದು ಸಮತೂಕವನ್ನಿರಿಸಲಿಕ್ಕೆ ಬೇರೆ ಕೋಡುಗಳನ್ನು ಮಾಡಿರುವರು. ವಿದ್ಯುತ್ ಚುಂಬಕದ ಸಾಮಾನುಗಳಿರುವ ಭಾಗವನ್ನು ಸಮನಾಗಿರಿಸುವುದಕ್ಕಾಗಿ, ಹಾಗೂ ವಿದ್ಯುತ್ತಿನ ಸೂಜಿಯನ್ನು ಯಾವಾಗಲೂ ಮೇಲಿನ ಭಾಗದಲ್ಲಿ ಒಳ್ಳೆಯ ಕೆಲಸ ಮಾಡುವ ಪರಿಸ್ಥಿತಿಯಲ್ಲಿರಿಸುವುದಕ್ಕಾಗಿ, ಅವಶ್ಯಕ ಸಮಭಾರವನ್ನು ಹಚ್ಚಿರುವರು.

ಗುಂಡುಗಂಭದಾಕಾರದ ಕಣಿಯು ೮ ಫೂಟು ಉದ್ದವಿದ್ದು, ೩ ಫೂಟು ವ್ಯಾಸವುಳ್ಳದಿರುವದು. ೬೫೦ ಪೌಂಡು ಸ್ಫೋಟಕ ದ್ರವ್ಯವನ್ನು ಒಳಗೊಂಡಿದ್ದು, ೧೨೦೦ ಪೌಂಡು ಭಾರವುಳ್ಳದಾಗಿ ಇರುತ್ತದೆ. ಇದು ಆಕಾಶದಿಂದ ಒಗೆಯುವ ಬಾಂಬಿನಂತೆ ಇರುವುದು. ಇನ್ನು ಕೆಲವು ಇಂತಹ ಗುಂಡುಗಂಭದ ಕಣಿಗಳು ಇವಕ್ಕಿಂತ ಹಗುರಾಗಿರುವುವು." ಅವುಗಳಿಗೆ ಕೊಡೆಗಳ ಅವಶ್ಯಕತೆ ಇರದು. ೨೦೦ ಫೂಟು ಅಂತರದ ಮೇಲಿಂದ ಏನೂ ಧಕ್ಕೆಯಾಗದಂತೆ ಮತ್ತು ಸ್ಫೋಟವಾಗದಂತೆ ಇವುಗಳನ್ನು ಒಗೆಯಲು ಬರುವುದು. ಇವುಗಳಲ್ಲಿ ಎರಡು ಬಗೆಗಳಿರುವುವು. ಉದ್ದ ನೀರಿನಲ್ಲಿ ಒಗೆಯುವಂತಹವು, ಆಳವಿಲ್ಲದ ನೀರಿನಲ್ಲಿ ಒಗೆಯುವಂತಹವು. ಒಂದೊಂದು ವಿಮಾನವು ಇಂತಹ ೧೨ ಕಣಿಗಳನ್ನು ತೆಗೆದುಕೊಂಡು, ವೈರಿಗಳ ಹಡಗುಗಳ ದಾರಿಯಲ್ಲಿ ಹಾಕಬಹುದು. ಆಳವಿಲ್ಲದ ನೀರಿನಲ್ಲಿ ಇವುಗಳನ್ನು ಒಗೆದರೆಯೆ ಒಳ್ಳೆಯದು. ಹೆಚ್ಚು ಆಳವಿರುವ ನೀರಿನಲ್ಲಿ ಒಗೆದರೆ, ಇವುಗಳಿಂದ ಭಯವು ಕಡಿಮೆ. ಯಾಕೆಂದರೆ ನೀರಿನ ಆಳವು ಹೆಚ್ಚಾದಂತೆ ಹಡಗಿನ ಕೆಳಭಾಗದ ವಿದ್ಯುತ್‌ಚುಂಬಕ ಕ್ಷೇತ್ರವು ಅಶಕ್ತವಾಗುತ್ತ ಹೋಗುವುದು.

ಕಣಿಯ ಮೂರು ಭಾಗಗಳು — ಅಲ್ಯೂಮಿನಿಯಂ ಲೋಹದಂತಹ ಲೋಹದ ಪೆಟ್ಟಿಗೆಯಲ್ಲಿ, ಈ ಕಣಿಯು ಮೂರು ಭಾಗಗಳನ್ನು ಒಳಗೊಂಡು ಇರುತ್ತದೆ.

ಎಲ್ಲಕ್ಕೂ ಮೇಲಿನ ಭಾಗದಲ್ಲಿ ಒಂದು ಬ್ಯಾಟ್ರಿ, ಲೋಹ-ಚುಂಬಕ ಸೂಜಿ, ವಿದ್ಯುತ್ ಪ್ರದಕ್ಷಿಣೆಗಳಿಗಾಗಿ ಒಂದು ಸ್ಪ್ರಿಂಗ್ ಮತ್ತು ಎರಡು ಹೈಡ್ರೊಸ್ಟೆಟಿಕ್ ಡಾಯಫ್ರ್ಯಾಗಮ್ಸ್ (Hydrostatic Diaphragms)—ಒಂದಕ್ಕೊಂದು ವಿರುದ್ಧ ತತ್ತ್ವಗಳ ಮೇಲೆ ನಡೆಯುವಂತಹವು—ಇರುವುವು.

ಎಲ್ಲಕ್ಕೂ ಕೆಳಗಿನ ಭಾಗದಲ್ಲಿ ಒಂದು **ಹವೆಯ ಹೂಜಿ** ಇರುತ್ತದೆ. ಅದು ಸುರಂಗದೊಳಗೆ (ಕಣಿ) ಹೊಕ್ಕ ನೀರನ್ನು ಕೂಡಲೆ ಹೊರಕ್ಕೆ ಹಾಕಿ, ಕಣಿಗೆ ಮೇಲಕ್ಕೇಳಲಿಕ್ಕೆ ಶಕ್ತಿಯನ್ನು ಕೊಡುತ್ತದೆ.

ಮಧ್ಯಭಾಗವು ಸ್ಫೋಟವನ್ನುಂಟುಮಾಡುವ ಬಿಡಿಕೆಗಳಿಂದ ಹಾಗೂ ಸ್ಫೋಟಕದ್ರವ್ಯಗಳಿಂದ ತುಂಬಿರುತ್ತದೆ. ಮಧ್ಯಭಾಗದ ತುದಿಯಲ್ಲಿ "ವ್ಹೆಂಟ್ ವ್ಹಾಲ್ವ್ಸ (Vent valves)"ಗಳು ಸೂಕ್ಷ್ಮವಾದ ಸ್ಪ್ರಿಂಗುಗಳಿಂದ ತೆರೆದು ಹಿಡಿಯಲ್ಪಟ್ಟಿರುತ್ತವೆ. ಹವೆಯ ಹೂಜಿಯೊಳಗಿನ ಹವೆಯು, ಸಣ್ಣ ತಾಮ್ರದ ಕೊಳವೆಗಳ ಮಾರ್ಗವಾಗಿ ಮುಟ್ಟಿದಕೂಡಲೆ ಪಿಸ್ಟನ್ನುಗಳು (Pistons) ಆ ತುಂಬುಗಳನ್ನು ಮುಚ್ಚುತ್ತವೆ.

ಎಲ್ಲಕ್ಕೂ ಮೇಲಿನ ಭಾಗವು ಎಲ್ಲಕ್ಕೂ ಕೆಳಗಿನ ಭಾಗಕ್ಕೆ ಎಂದರೆ ಹವೆಯ ಕೋಣೆಗೆ ಒಂದು ಕೊಳವೆಯಿಂದ ಜೋಡಿಸಲ್ಪಟ್ಟಿರುವುದು. ಆ ಕೊಳವೆಯು ಹವೆಯ ಹೂಜಿಗೆ ಚೆನ್ನಾಗಿ ಸ್ಕ್ರೂದಿಂದ ಗಟ್ಟಿಯಾಗಿ ಕೂಡಿಸಲ್ಪಟ್ಟಿರುವುದು. ಹಾಗೂ ಅಲ್ಲಿಯೆ ಒಂದು 'ಫ್ಯೂಜ್' ಮತ್ತು ಒಂದು ಸ್ಪ್ರಿಂಗಿನ ಒತ್ತುವಿಕೆಯ ತುಂಬು ಇರುತ್ತವೆ.

ಕಣಿಯ ತಳವು ಭಾರವಿರುವುದರಿಂದ, ಅದು ನೀರಿನಲ್ಲಿ ಬಿದ್ದ ಕೂಡಲೆ, ಬಾಲ ಕೆಳಗಾಗಿ ಹೊರಳಾಡದಂತೆ ನೆಟ್ಟಗೆ ನಿಲ್ಲುವುದು. ಸಮುದ್ರದಲ್ಲಿ ಒಗೆದ ಕೂಡಲೆ ಭರಾವಣೆಯ ಪೊಳ್ಳು ಅವಕಾಶದಲ್ಲಿ (Ballast space) ಸೇರಿಕೊಂಡು, ಅಲ್ಲಿದ್ದ ಹವೆಯನ್ನು (Open vent), (Air nozzle) ತುಂಬುಗಳ ಮಾರ್ಗವಾಗಿ ಹೊರದೂಡುತ್ತದೆ. ಆಗ ಕಣಿಯು ಕೆಳಕ್ಕಿಳಿಯುವುದು. ಅದು ೭೦ ಫೂಟು ಕೆಳಕ್ಕೆ ಹೋದ ಮೇಲೆ, ಮೇಲಿನ ಭಾಗದ ಒಂದು ಬದಿಯಲ್ಲಿರುವ ಹವೆಯ ಒತ್ತುವಿಕೆಯ (diaphragm) ತಗಡು, ಹೊರಗಿನ ೩೫ ಪೌಂಡು ಶಕ್ತಿಯಿಂದ ಒಳಕ್ಕೆ ಸರಿಯುವುದು. ಹಾಗೆ ಮಾಡುವುದರಿಂದ ಅದು, ಅಲ್ಲಿ ಇರುವ ಸೂಕ್ಷ್ಮವಾದ ಸ್ಪ್ರಿಂಗಿನಿಂದ ಹೊದಿಸಲ್ಪಟ್ಟ ಕೊಳವೆಯನ್ನು (piston) ದೂಡುವುದು. ಈ ಕ್ರಿಯೆಯು ನಡೆಯುವುದರಿಂದ ಅಲ್ಲಿಯ ಸಣ್ಣ ಪಾರಜದ ಕೊಳವಿಯ ಭದ್ರತೆಯು ಕಡಿಮೆಯಾಗುವುದು. ಇದರಿಂದ ಅಲ್ಲಿಯ ವಿದ್ಯುತ್ ಪ್ರದಕ್ಷಿಣೆಯ ಪೊಳ್ಳು ತುಂಬುವುದು.

ಇದೇ ಕ್ರಿಯೆಯು ವಿದ್ಯುತ್ತಿನ ಸೂಜಿಯ ಹತ್ತಿರಿರುವ ಬ್ರೆಕ್ಕನ್ನು ಮುಕ್ತಮಾಡುತ್ತದೆ. ಇದರಿಂದ ತೀವ್ರತರವಾದ ಸ್ಫೋಟದ ಪ್ರದಕ್ಷಿಣೆ ಪ್ರಾರಂಭವಾಗುತ್ತದೆ. ಆದರೆ ಇಷ್ಟರಿಂದಲೆ ಅದು ಪೂರ್ಣವಾಗದು. ಯಾಕೆಂದರೆ ಇನ್ನೊಂದು (Hydrostatic valve) ತುಂಬು ಸ್ಫೋಟಕ ಪ್ರದಕ್ಷಿಣೆಯನ್ನು ತೋರಿಸುತ್ತದೆ.

ಸ್ಫೋಟ:— ಕಟ್ಟಕಡೆಗೆ ಕಣಿಯು ಕೆಳಕ್ಕಿಳಿಯುತ್ತದೆ. ಅಲ್ಲಿ ಸಮುದ್ರದ ತಳದ ನೀರು ಅದನ್ನು ಸುತ್ತುತ್ತದೆ. ಕಣಿಯು ಸಮುದ್ರದಲ್ಲಿ ಬೇಕಾದ ಹಾಗೆ ಬಿದ್ದರೂ, ಮೇಲಿನ ವಿದ್ಯುತ್ತಿನ ಕೋಣೆಗೆ ಹಚ್ಚಿದ ಸಮತೂಕದ ಭಾರದಿಂದ, ಲೋಹಚುಂಬಕದ ಮುಳ್ಳು ಯಾವಾಗಲೂ ಮೇಲಿನ ಭಾಗದಲ್ಲಿ ನೆಟ್ಟಗೆ ನಿಲ್ಲುವುದು. ಅರ್ಧಮೈಲಿನ ಅಂತರದಲ್ಲಿ ಹಡಗು ಬಂದರೆ ಆ ಲೋಹಚುಂಬಕ ಮುಳ್ಳು ಅಗಳಾಡತೊಡಗುವುದು. ಹಡಗುಗಳು ಸಮಾಪಕ್ಕೆ ಬಂದ ಹಾಗೆ ಲೋಹಚುಂಬಕ ಕ್ಷೇತ್ರವು ಬಲಗೊಳ್ಳುತ್ತದೆ. ಹಾಗು ಮುಳ್ಳು ಸಾವಕಾಶವಾಗಿ ಮೇಲಕ್ಕೆ ಸರಿದು ಕಡೆಗೆ ೬೫ದ ಕೋಣವನ್ನು ತೋರಿಸುತ್ತದೆ. ಇದೇ ನೂರಾರು ಜೀವಗಳನ್ನು ಗಂಡಾಂತರದಲ್ಲಿ ನೂಕುವ ಕ್ಷಣ. ಇಂತಹ ಹೊರಳುವ (Deflection) ಕೋಣದಲ್ಲಿ, ಲೋಹಚುಂಬಕಸೂಜಿಯು (Gird) ಸ್ವಲ್ಪ ಸ್ವಲ್ಪವಾಗಿ ವಿದ್ಯುತ್ ಸಂಯೋಗವನ್ನುಂಟು ಮಾಡುವುದರಿಂದ, ಅದು ಸುಲಭವಾಗಿ ಕರಗುವ ಅರಗಿನ ಮುದ್ರೆಯ

(Fuse seal) ಮೇಲೆ ಪರಿಣಾಮ ಮಾಡುತ್ತದೆ. ಈ ಮುದ್ರೆ ಹವೆಯ ಹೂಜಿಯ ಸ್ಪ್ರಿಂಗಿನ ತುಂಬನ್ನು ಅಂಕಿತದಲ್ಲಿಟ್ಟುಕೊಂಡಿರುತ್ತದೆ. ಅಲ್ಲಿಯ ಫ್ಯೂಜ್ ಕರಗುವುದರಿಂದ, ಆ ಹವೆಯ ತುಂಬು ತೆರೆಯುವುದು. ಹೀಗೆ ಬಿಡಲ್ಪಟ್ಟ ಹವೆಯು ಕೆಳಗಿನ ಭರಾವಣಿಯಲ್ಲಿಯ (Ballast) ನೀರನ್ನು ಹೊರಗೆ ಹೋಗುವ ದಾರಿಯಿಂದ ಕೆಳಗೆ ದೂಡುತ್ತದೆ. ಕೊಳವೆಗಳಿಂದ (Pistons) ಹವೆಯ ತುಂಬುಗಳು (Air vents) ಮುಚ್ಚಲ್ಪಡುತ್ತವೆ. ಯಾಕೆಂದರೆ ಒತ್ತಿ ಇಟ್ಟ ಹವೆಯು ಸಣ್ಣ ತಾಮ್ರದ ಕೊಳವೆಗಳ ಮಾರ್ಗವಾಗಿ ಅವುಗಳನ್ನು ದೂಡುತ್ತಿರುತ್ತದೆ.

ಕಣೆಯ ತಳದಲ್ಲಿಯ ನೀರಿನ ಶಕ್ತಿಯಿಂದ ಕಣೆಯ ರಚನೆಯಲ್ಲಿ ಇರುವ ಮಣ್ಣಿನ ಭಾಗವು ಒಡೆಯುವುದು. ಅದರಿಂದ ತೇಲುವಿಕೆಯಲ್ಲಿ ಹಗುರಾಗುವುದರಿಂದಲೂ, ನೀರಿನ ದೂಡುವಿಕೆಯಿಂದಲೂ ಜೋರಿನಿಂದ ಅದು ಮೇಲಕ್ಕೇರುವುದು. ಕಣೆಯು ನೀರಿನ ಪಾತಳಿಗಿಂತ ೫೦ ಫೂಟು ಕೆಳಗಿರುವಾಗಲೆ ಸ್ಫೋಟವಾಗುವುದು. ಯಾಕೆಂದರೆ ಹೈಡ್ರೊಸ್ಟೆಟಿಕ್ ಸ್ವಿಚ್ಚು (Hydrostatic-switch) ಹೊರಭಾಗದಿಂದ ದೊಡ್ಡದಾಗುವುದು; ಮತ್ತು ಒತ್ತುವಿಕೆಯ ಮೂಲಕ ಯಾವಾಗಲೂ ತೆರೆದಿಡಲ್ಪಡುವುದು. ಒತ್ತುವಿಕೆಯು ಸ್ವಲ್ಪ ಕಡಿಮೆಯಾಗುತ್ತ ಹೋದಹಾಗೆ ಎಂದರೆ ನೀರಿನ ಮೇಲ್ಪಟ್ಟದಿಂದ ೫೦ ಫೂಟು ಒಳಗೆ ಇದ್ದಾಗ, ಆ ಸ್ವಿಚ್ಚು (switch) ಸ್ಫೋಟದ ಪ್ರದಕ್ಷಿಣೆಯನ್ನು ನಿಲ್ಲಿಸಿಬಿಡುವುದರಿಂದ, ಒಮ್ಮೆಲೆ ಸ್ಫೋಟವಾಗುವುದು.

ತಪ್ಪು ತಿಳಿವಳಿಕೆ:— ಬಹಳ ಜನರ ತಿಳಿವಳಿಕೆಯೆಂದರೆ ಕಣೆಯು ಲೋಹಚುಂಬಕಶಕ್ತಿಯಿಂದ ಹಡಗದ ಹತ್ತಿರ ಹೋಗಿ ಬಡಿಯುವದೆಂದೋ ಅಥವಾ ಹಡಗವೆ ಇದರ ಸಮೀಪಕ್ಕೆ ಬಂದು ತಾಕಿ ಹಾಳಾಗುವುದೆಂದೋ ಇರುವುದು. ಆದರೆ ಕಣೆಯು ಸರಳವಾಗಿ ಮೇಲಕ್ಕೇರುವುದು. ಸ್ಫೋಟವಾದಕೂಡಲೆ ಅಪರಂಪಾರವಾದ ನೀರು ಬಲಿಷ್ಠವಾದ ತೆರೆಗಳನ್ನೆಬ್ಬಿಸುವುದರಿಂದ, ಅವು ಹಡಗುಗಳನ್ನು ಒಡೆಯುವುವು; ಇಲ್ಲವೆ ಬುಡಮೇಲು ಮಾಡುವುವು.

ಆಳವಿಲ್ಲದ ನೀರಿನಲ್ಲಿ ಒಗೆಯುವ ಕಣೆಗಳನ್ನು, ಬಂದರಗಳ ಪ್ರವೇಶ ಮಾರ್ಗದಲ್ಲಿಯೂ ಕಾಲುವೆಗಳಲ್ಲಿ ಅಥವಾ ಬಂದರದ ಮಾರ್ಗದಲ್ಲಿಯೂ ಹಾಕುವ ಪದ್ಧತಿಯುಂಟು. ಇವು ಇದುವರೆಗೆ ವರ್ಣಿಸಿ ಹೇಳಿದ ಉದ ನೀರಿನ ಚಪಲ ಕಣೆಗಳನ್ನೆ ಹೋಲುತ್ತವೆ. ಆದರೆ ಇದರಲ್ಲಿ ಹವೆಯ ಒತ್ತುವಿಕೆಯ ಪದ್ಧತಿ, ಮತ್ತು ಹವೆಯ ಒತ್ತುವಿಕೆಯ ಮೂಲಕ ಸ್ಫೋಟವಾಗುವುದು ಇವು ಇರುವುದಿಲ್ಲ. ಈ ಕಣೆಗಳು ತುಂಬ ಹಗುರಿರುವುದರಿಂದ ಬಹಳ ಕಣೆಗಳನ್ನು ವಿಮಾನದಲ್ಲಿ ಒಯ್ಯಲು ಬರುವುದು. ಈ ಚುರುಕು ಕಣೆಯು ಹಡಗುಗಳನ್ನು ಸಮುದ್ರದ ಉಸುಕಿನ ಹಾಸಿಗೆ ಬಿಡದೆ, ತುಂಬ ಗೊಂದಲಕ್ಕೆ ಗುರಿ ಮಾಡುವುವು. ಇದರಲ್ಲಿ ಲೋಹಚುಂಬಕ ಮುಳ್ಳು, ಸ್ಫೋಟದ ಪ್ರದಕ್ಷಿಣೆಯನ್ನು ೯೦° ಕೋನದಲ್ಲಿದ್ದು ಪ್ರಾರಂಭಮಾಡುತ್ತದೆ. ಇದರ ಮೇಲೆ ಹಡಗು ದಾಟಿ ಹೋದರೆ ಮಾತ್ರ ಸ್ಫೋಟವಾಗುವುದುಂಟು.

ಸದ್ಯದ ಯುದ್ಧದಲ್ಲಿ ಇವು ಸಮುದ್ರದಲ್ಲಿ ತೇಲಾಡುವ ಹಡಗುಗಳಿಗೆ ಯಮಸ್ವರೂಪಿಗಳಾಗಿರುವುವು. ಇವುಗಳಿಂದ ಅಪಾರ ನಷ್ಟವಾಗುವುದು. ಪ್ರಾಣಹಾನಿಗೂ ಅಳತೆಯಿರದು. ಆದರೂ ಮಿತ್ರರಾಷ್ಟ್ರದ ಶಾಸ್ತ್ರಜ್ಞರು ಬಹು ಶ್ರಮಬಟ್ಟು, ದಂಡೆಗೆ ಒಂದ ಒಂದು ಗೋಲಾಕಾರದ ಕಣೆಯನ್ನು ಒಡೆದು ಪರೀಕ್ಷಿಸಿದರು. ಇಂತಹ ಕಣೆಗಳ ಪ್ರಾಣಹರಣ ಮಾಡಲಿಕ್ಕೆಂದು ಅನೇಕ ಉಪಾಯಗಳನ್ನು ಕಂಡುಹಿಡಿದಿರುವರು. ಮರಣವನ್ನು ತರುವ ವಿಜ್ಞಾನಕ್ಕೆ ವಿಜ್ಞಾನವೆ ಪ್ರತಿಕ್ರಿಯೆಯೆನಿಸುವುದು.

ಹಡಗಿನ ಒಳಭಾಗದಲ್ಲಿ ವಿದ್ಯುತ್ತಿನ ತಂತಿಗಳನ್ನು ಒಂದು ಪದ್ಧತಿಯಿಂದ ಹಾಕಿದರೆ, ಈ ವಿದ್ಯುತ್ ಕ್ಷೇತ್ರವು ಹಡಗಿನ ತಳದ ವಿದ್ಯುತ್‌ಕ್ಷೇತ್ರವನ್ನು ಇಲ್ಲದಂತೆ ಮಾಡುವುದರಿಂದ, ಕಣೆಯೊಳಗಿನ ಸೂಜಿಯು ಅಗಳಾಡುವುದಿಲ್ಲ. ಆದರೆ ಇದು ಎಷ್ಟರಮಟ್ಟಿಗೆ ಸಾಧ್ಯವಾಗುವುದೆಂಬುದು ಇನ್ನೂ ಸಪ್ರಯೋಗಸಿದ್ಧಿಯನ್ನು ಪಡೆದಿಲ್ಲ.

೩ನೆಯ ತರಗತಿಯ ಕಣೆಗಳು ನೆಲವನ್ನು ಬಿಟ್ಟು ಏಳುವುದಿಲ್ಲವಾದುದರಿಂದ, ಅವುಗಳನ್ನು ನಿವಾರಿಸುವುದು ಬಹು ಕಠಿಣ. ತೇಲುವ ಕಣೆಗಳನ್ನು ತಂತಿಗಳ ಸಹಾಯದಿಂದ ಒಂದುಗೂಡಿಸಿ ಎಳೆಯುವುದು ಘಾತುಕವಾಗುವುದು. ಎಳೆಯಲಿಕ್ಕೆ ಹೋದ ಹಡಗುಗಳೇ ನಾಶವಾಗುವ ಸಂಭವವು ಹೆಚ್ಚು. ಕಟ್ಟಿಗೆಯ ನಾವೆಗಳಿಗೆ ಕೂಡ ಒಂದು ಬಗೆಯ ವಿದ್ಯುತ್-ಪರಿಧಿ ಇರುವುದರಿಂದ, ಅವು ಕೂಡ ಲೋಹಚುಂಬಕ ಸೂಜಿಯನ್ನು ಪ್ರಚೋದಿಸುತ್ತವೆ. ಮೇಲಿನಿಂದ ಒಗೆದಾಗ ನೀರಿನಲ್ಲಿ ಸ್ವಲ್ಪ ಅಂತರದ ಮೇಲೆ ಹಾರುವ ಬಾಂಬುಗಳನ್ನು ಅವುಗಳ ಸಮೀಪಕ್ಕೆ ಒಗೆದರೆ, ಅದರಿಂದ ಕಣೆಯು ಪ್ರಚೋದನೆಗೊಂಡು ಸ್ಫೋಟಿಸುವುದು. ಇಂತಹ ಕಣೆಗಳನ್ನು ತಯಾರಿಸಿ ಒಗೆದಲ್ಲಿ ಕಣೆಯಲ್ಲಿಯ ಸೂಜಿಯು ವಿದ್ಯುದಾಘಾತದಿಂದ ಶಕ್ತಿಹೀನವಾಗಿ, ಕಣೆಯು ಹಾರಲಾರದು. ಇಂತಹ ಕಣೆಗಳನ್ನು ತಯಾರಿಸಿ ಒಗೆದರೆ, ಸಮುದ್ರದಲ್ಲೊದಗುವ ಗಂಡಾಂತರಗಳ ಭೀತಿ ಸ್ವಲ್ಪ ದೂರವಾಗುವುದು.

—o—

PHOTO ENLARGEMENTS
Punctuality is our Motto;
SEND YOUR PHOTO; GET IT ENLARGED.
We Guarantee Faithful Reproduction.
Colouring our Speciality.
Cheap Rates! *Satisfactory Work!!*
Even for Cinema Slides
Approach GOVARIKAR & SONS,
Photographic dealers, KOLHAPUR.

ಅವರ ತಾಯಿತ

(ಸಣ್ಣ ಕತೆಯೊಂದು)

ಶ್ರೀ. “ ರಾಮು ”

★

ವಕೀಲ ರಘುನಾಥರಾಯರು ಎಷ್ಟೊಂದು ಪರಿಯಾಗಿ ಬೇಡವೆಂದು ಹೇಳಿದರೂ ನೀಲವ್ವ ಕೇಳಲಿಲ್ಲ. ಗಂಡನಮೇಲೆ ಜೀವನಾಂಶಕ್ಕಾಗಿ ದಾವಾ ಹಾಕಿಸಿಯೆ ಬಿಟ್ಟಳು. ಆದರೆ ಅದರ ಪರಿಣಾಮವೇನಾಯಿತು ?

★

ಲಾಯರ್ ರಘುನಾಥರಾಯರು ಶ್ರದ್ಧೆವಹಿಸಿ ಸಾಧಿಸುತ್ತಿದ್ದ ಮಧ್ಯಸ್ಥಿಕೆ ಎಲ್ಲವೂ ನಿಷ್ಫಲವಾಯಿತು. ತನಗಾಗಿಯೂ ತನ್ನ ಮಗುವಿಗಾಗಿಯೂ ಜೀವನಾಂಶಕ್ಕೆಂದು ತನ್ನ ಗಂಡನ ಮೇಲೆ ದಾವೆಯನ್ನು ಹೂಡಲೇ ಬೇಕೆಂದು ನೀಲವ್ವನು ಸಂಕಲ್ಪಿಸಿದ್ದರಿಂದ, ರಘುನಾಥರಾಯರ ಮಾತುಗಳಿಗೆ ಅವಳು ಸ್ವಲ್ಪವೂ ಸೋಲಲಿಲ್ಲ. ಆದುದರಿಂದ ರಘುನಾಥರಾಯರು, ಯತ್ನವಿಲ್ಲದೆ ನೀಲವ್ವನ ಪರ ದಾವಾ ಹೂಡಿದರು. ನೀಲವ್ವನು ಜೀವನಾಂಶಕ್ಕೆ ತನ್ನ ದಾವಾ ಪ್ರಾರಂಭಿಸಿದೊಡನೆ, ಅವಳ ಗಂಡ ತಿಮ್ಮಪ್ಪನು, ತನ್ನ ಮಗುವಿನ ರಕ್ಷಣೆಯನ್ನು ತನಗೇ ಒಪ್ಪಿಸಿಕೊಡಬೇಕೆಂದು ಎದುರು ಅರ್ಜಿಯನ್ನು ಹೂಡುವನೆಂದು ರಘುನಾಥರಾಯರು ಎಣಿಸಿದ್ದರು. ಆದರೆ ತಿಮ್ಮಪ್ಪನು ಹಾಗೆ ಮಾಡಲಿಲ್ಲ. ಆ ಮಾರ್ಗವನ್ನು ಅವನು ಅನುಸರಿಸುವುದೂ ಇಲ್ಲವೆಂದು, ರಘುನಾಥರಾಯರಿಗೆ, ತಿಮ್ಮಪ್ಪನ ವಕೀಲರಾದ ಶ್ಯಾಮಣ್ಣನವರಿಂದ ತಿಳಿದುಬಂದಿತು. ತಾನು ತಪ್ಪಿತಸ್ಥನಲ್ಲವೆಂದೂ, ನೀಲವ್ವನು ಮನೆಯಲ್ಲಿ ಗರತಿಯಾಗಿದ್ದುಕೊಂಡಿರದೆ ವೃಥಾ ವ್ಯಾಜ್ಯಮಾಡಿಕೊಂಡು ಮನೆಬಿಟ್ಟು ಹೊರಟು ಹೋಗಿರುವಳೆಂದೂ, ತಾನಾಗಿಯೆ ಮಗುವಿನ ಸಂರಕ್ಷಣೆಯ ಜವಾಬ್ದಾರಿಯನ್ನು ಕೂಡ ಹೊತ್ತು, ಮಗುವನ್ನು ಕರೆದುಕೊಂಡು ಹೋಗಿರುವಳೆಂದೂ, ಅವಳ ದಾವಾಕ್ಕೆ ವ್ಯಾಜ್ಯಕಾರಣವಿಲ್ಲವೆಂದೂ, ತಿಮ್ಮಪ್ಪನು ತಕರಾರನ್ನು ಬರೆಯಿಸಿ ಹಾಜರ್‌ಮಾಡಿಸಿದ್ದನು. ದಾವಾ ನಡೆಯುತ್ತಿತ್ತು.

* * *

ತಿಮ್ಮಪ್ಪ, ನೀಲವ್ವ ಇವರುಗಳು ತಾವು ಲಗ್ನವಾದನಂತರ ಸುಮಾರು ಎರಡು ಮೂರು ವರ್ಷಗಳ ಕಾಲ ಅನ್ಯೋನ್ಯವಾಗಿದ್ದು, ಸಂಸಾರ ನಡೆಯಿಸಿ, ಸುತ್ತುಮುತ್ತಲವರಿಗೆ ಆದರ್ಶ ದಂಪತಿಗಳಾಗಿದ್ದರು. ಆನಂತರ ಅವರ ಅನ್ಯೋನ್ಯತೆಯು, ಹೊಸ ಅಗಸಗೊಣೆ ಒಗೆದುದರ ಸಮಾಚಾರವೆಂದು ನೆರೆಹೊರೆಯವರಿಗೆ ಎನ್ನಿಸಿತು. ಅನುರಾಗದಲ್ಲಿ ಒಬ್ಬರಿಂದೊಬ್ಬರು ಅಗಲಿ ದೂರ ಸರಿಯುತ್ತಿದ್ದ ಆ ದಂಪತಿಗಳ ಅನ್ಯೋನ್ಯತೆಗೆ ಬೆಸುಗೆಯಂಬಂತೆ ಅವರಿಗೆ ಒಂದು ಗಂಡುಮಗುವೂ ಆಯಿತು. ಆದರೂ ದುರದೃಷ್ಟದಿಂದ ಕ್ರಮೇಣ ಅವರಲ್ಲಿ ಸಂಸಾರ ತಾಪತ್ರಯಗಳು ಹೆಚ್ಚಿದಂತೆಲ್ಲಾ, ಸಣ್ಣ ಸಣ್ಣ ತಪ್ಪುಗಳೂ ಮಹಾಪ್ರಮಾದವಾಗಿ, ಜಗಳಗಳೂ ಬೈಗಳೂ, ಕದನಗಳೂ ಸಾಧಾರಣವಾಗುತ್ತಾ ಬಂದುವು. ಇನ್ನೂ ಒಂದೆರಡು ವರ್ಷಗಳು ಕಳೆಯುವಷ್ಟರಲ್ಲಿ ಸಂಸಾರ ಕಷ್ಟದಿಂದ ಉದ್ಭವಿಸಿದ ಪರಸ್ಪರ ಮನಸ್ತಾಪವು ತಿಕ್ಕಾಟದಿಂದ ಬೆಳೆದು, ಅಸ್ಥಿರಣೆಯಿಂದ ಕೊಬ್ಬಿ, ಅವರ ಒಲವನ್ನು ಇಂಗಿಸದಿದ್ದರೂ, ಅದರ ಮೇಲೆ ದಪ್ಪವಾಗಿ ಹೆಪ್ಪುಗಟ್ಟಿ ಅದನ್ನು ಸಂಪೂರ್ಣವಾಗಿ ಮರೆಮಾಡಿಬಿಟ್ಟಿತ್ತು. ಒಲವು ಅಗೋಚರವಾದುದರಿಂದ ಅನಾದರಣೆ ಹೆಚ್ಚಾಗಿ, ಕಡೆಯಲ್ಲೊಂದು ದಿನ ಅವರಿಬ್ಬರಲ್ಲಿ ಬದನೇಕಾಯಿ ಬ್ರಹ್ಮರಾಕ್ಷಸವಾಗಿ, ನೀಲವ್ವನು ತನ್ನ ಗಂಡನಿಗೆ ನೂರಾರು ಮಾತುಗಳನ್ನು ಬೈದೂ ತಿಮ್ಮಪ್ಪನು ನೀಲವ್ವನನ್ನು ಚೆನ್ನಾಗಿ ಹೊಡೆದೂ ಆಯಿತು. ಇವುಗಳ ಪರಿಣಾಮದಿಂದ ನೀಲವ್ವನು, ಆ ದಿನವೇ ಗಂಡನ ಮನೆಯನ್ನು ಬಿಟ್ಟು, ತನ್ನ ಮಗುವಿನೊಂದಿಗೆ ಅದೇ ಊರಲ್ಲಿದ್ದ ತನ್ನ ತಾಯಿಯ ಮನೆಯನ್ನು ಸೇರಿಬಿಟ್ಟಳು.

* * *

ನೀಲವ್ವನು ಗಂಡನ ಮನೆಯನ್ನು ಬಿಟ್ಟು ಬಂದದ್ದೂ, ಅದರ ಕಾರಣಗಳೂ ರಘುನಾಥರಾಯರಿಗೆ ಕೂಡಲೆ ತಿಳಿದುವು. ರಘುನಾಥರಾಯರು ಈ ದಂಪತಿಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ನೀಲವ್ವನು ಅವರ ಮನೆಯ ಒಕ್ಕಲುಗಿತ್ತಿಯ ಮಗಳು. ಆಕೆಯು ಚಿಕ್ಕಂದಿನಿಂದಲೂ ಅವಳನ್ನು ಅವರು ನೋಡಿದ್ದರು. ತಿಮ್ಮಪ್ಪನೂ ಅವರಿಗೆ ಮೊದಲಿನಿಂದಲೂ ಪರಿಚಯಸ್ಥನೇ. ಚಿಕ್ಕಪೇಟೆಯಲ್ಲಿದ್ದ ಅವರ ‘ ಆಫೀಸಿ’ನ ಎದುರಿಗೆ ಅವನು ಕಿರಾಣಿ ಅಂಗಡಿಯನ್ನು ಇಟ್ಟುಕೊಂಡಿದ್ದನು. ಅವರಿಬ್ಬರ ವಿವಾಹಕ್ಕೆ ರಘುನಾಥರಾಯರೇ ಕಾರಣರು. ಆದುದರಿಂದ ಅವರಿಗೆ ಈ ವರ್ತಮಾನ ತಿಳಿದೊಡನೆ, ಅವರು ಸಂಕಟಪಟ್ಟು ಗಂಡಹೆಂಡಿರಿಬ್ಬರೂ ಒಂದುಗೂಡುವಂತೆ ಹವಣಿಸಿದರು. ಆದರೆ ಆ ದಂಪತಿಗಳಲ್ಲಿ ಯಾರೊಬ್ಬರೂ ಸೋಲುವಂತಿರಲಿಲ್ಲ. ನೀಲವ್ವನು “ ಅದ್ಯಾಕೆ ಸ್ವಾಮಿ, ಪುನಃ ಅವನ ಮನೆಗೆ ಹೋಗೋದು ? ಹೊಡೆದು ಓಡಿಸಿದಾನೆ.. ಮನೇಲಿ ಕಾಲಿಡಬೇಡಾಂತ. ನಂಗೇನು ಗತಿ ಇಲ್ವಾ..ಮಾನ ಇಲ್ವಾ..ಅವನ ಮನೇಗೆ ಹಿಂದಿರುಗೋಕೆ ! ನನ್ನ ದಾವಾ ವಜಾ ಆಗಿ, ಜೀವನಾಂಶ ಸಿಕ್ಕದಿದ್ದರೆ ಹೋಗ್ಲಿ ಸ್ವಾಮಿ, ನಂಗೆ ಯೋಚನೆ ಇಲ್ಲ. ನಿಮ್ಮ ಮನೇಲಿ ಚಾಕ್ರೀಮಾಡಿ ಹೊಟ್ಟೆ ಹೊರೆದು ಕೊಳ್ತೀನಿ. ಅವನ ಮನೇಲಿ ಕಾಲಿಡೊಲ್ಲ ” ಎಂದು ಬಿಟ್ಟಿದ್ದಳು. ತಿಮ್ಮಪ್ಪನೊಡನೆ ಪ್ರಸ್ತಾಪಿಸಿದಾಗ, ಅವನು ಕಿಡಿಕಿಡಿಯಾಗಿ “ ಏನು ಸ್ವಾಮಿ, ನೀವು ಹೇಳೋದು ?. ಅದೆಲ್ಲಾ ಆಗದ ಮಾತು ! ತಾನಾಗೆ ಊರು ಬಿಟ್ಟು ಹೋದ ಮಾರೀನ

ವೃಥಾ ನಾನು ಮನೆಗೆ ಕರೆತರಲೆ? ಅವಳನ್ನು ಮೆನ್ಯಾಗೆ ಬಿಟ್ಟು-ಕೊಳ್ಳದಿದ್ದರೆ ಏನಾಗುತ್ತೆ ಸ್ವಾಮಿ! ಕೋರ್ಟಿನವರು ಜೀವನಾಂಶ ಕೊಡಿಸುತ್ತಾರೆ ತಾನೇ? ಕೊಡಿಸಲಿ. ದುಡ್ಡು ಹೋದರೆ ಹೋಗಲಿ. ಅವಳು ಬೇಡ!'' ಎಂದು ಆರ್ಭಟಿಸಿದ್ದನು. ರಘುನಾಥರಾಯರ ಪ್ರಯತ್ನಗಳೆಲ್ಲವೂ ವಿಫಲವಾಗಿದ್ದುದರಿಂದ ಅವರು ನೀಲವ್ವನ ಪರವಾಗಿ ವಕಾಲತ್ತು ವಹಿಸಿ, ತಿಮ್ಮಪ್ಪನ ಮೇಲೆ ಯತ್ನವಿಲ್ಲದೆ ದಾವಾ ಹೂಡಿದ್ದರು. ದಾವಾ ನಡೆಯುತ್ತಿತ್ತು.

* * *

ನೀಲವ್ವನು ತನ್ನ ಗಂಡನ ಮನೆಯನ್ನು ಬಿಟ್ಟು ಬಂದನಂತರ ಆ ಗಂಡ-ಹೆಂಡತಿಯರು ಒಬ್ಬರನ್ನೊಬ್ಬರು ನೋಡಿಯೇ ಇರಲಿಲ್ಲ. ಹಟವಾದಿಯಾದ ತಿಮ್ಮಪ್ಪನು, ತನ್ನ ಮುದ್ದಿನ ಮಗುವನ್ನು ನೋಡುವ ಸಲುವಾಗಿಯಾದರೂ, ನೀಲವ್ವನಿದ್ದೆಡೆಗೆ ಬಂದಿರಲಿಲ್ಲ. ನೀಲವ್ವನಿಗೆ ತನ್ನ ಗಂಡನ ಮನೆಯ ಕಡೆಗೆ ಹೋಗುವ ಸಂಭವವೆ ಇರಲಿಲ್ಲ; ಹೋಗುವ ಅಪೇಕ್ಷೆಯೂ ಇರಲಿಲ್ಲ. ತಿಮ್ಮಪ್ಪನಿಗೆ ತನ್ನ ಮಗುವನ್ನು ನೋಡಬೇಕೆಂಬ ಆಶೆ ಹಿರಿದಾಗಿದ್ದರೂ, ಅವನ ಮನವು ಅದನ್ನು ಬಿಗಿಹಿಡಿದಿತ್ತು; ಹೊರಬೀಳದಂತೆ ಹತೋಟಿಯಲ್ಲಿಟ್ಟಿತ್ತು; ಗೋಚರಿಸದಂತೆ ಮರೆಮಾಡಿತ್ತು.

ಅವರ ಮಗು ಬಹಳ ಮುದ್ದು ಮಗು: ಮನೋಹರ ಮಗು. ಸೇವಕವರ್ಗದವರ ಮಗುವಾಗಿದ್ದರೂ, ಅದನ್ನು ಉತ್ತಮವರ್ಗದ ಸ್ತ್ರೀಯರೂ ಎತ್ತಿ ಮುದ್ದಾಡುತ್ತಿದ್ದರು. ಅಂತಹ ಮಗುವು ಕೂಡ ತನ್ನ ತಂದೆ-ತಾಯಿಯರ ಭಿನ್ನತೆಯನ್ನು ಬಗೆಹರಿಸಿ, ಬಿಗಿ-ಹಿಡಿದು, ಅವರನ್ನು ಸೇರಿಸಲು ಸಾಧನವಾಗಿರಲಿಲ್ಲ.

ತಾನು ಹೂಡಿದ ದಾವಾ ವಿಚಾರಣೆಗೆ ಬಂದ ದಿನವೇ, ನೀಲವ್ವನು ಮೊದಲನೆಯ ಸಾರಿ ಕಛೇರಿಗೆ ಬಂದದ್ದು. ಅಲ್ಲಿಯವರೆಗೂ ಕಛೇರಿಗೆ ಬಂದವಳಲ್ಲ. ತನ್ನ ಕೇಸಿನ ವಿದ್ಯಮಾನಗಳನ್ನೆಲ್ಲಾ ಚಾಮರಾಜ ಪೇಟೆಯಲ್ಲಿದ್ದ ರಘುನಾಥರಾಯರ ಮನೆಗೇ ಹೋಗಿ ತಿಳಿಯುತ್ತಿದ್ದಳು. ವಿಚಾರಣೆಯ ದಿವಸ ಸಾಕ್ಷಿಗಳಿಗೆ ಸಮನಸ್ಸುಗಳು ಜಾರಿಯಾಗದಿದ್ದರೂ, ಆ ದಿವಸ ವಿಚಾರಣೆ ನಡೆಯುವ ಹಾಗಿರದಿದ್ದರೂ ಕಕ್ಷಿ-ಪ್ರತಿಕಕ್ಷಿಗಳಿಬ್ಬರಿಗೂ ಅವರವರ ವಕೀಲರು ಕಛೇರಿಗೆ ಬರಬೇಕೆಂದು ಹೇಳಿದ್ದರು. ಅಂತೆಯೇ ನೀಲವ್ವನು ತನ್ನ ಮಗುವನ್ನು ಕೊಂಕುಳಲ್ಲಿ ಎತ್ತಿಕೊಂಡು, ಕಛೇರಿಯ ಬಳಿ ಸಾರಿದ್ದು. ಬಂದವಳು, ಕಛೇರಿಯ ಮುಂದೆಯೇ ಇದ್ದ ಬೇವಿನ ಮರದ ನೆರಳಿನಲ್ಲಿ—ತಮ್ಮ ತಮ್ಮ ಕೇಸುಗಳ ನಿರೀಕ್ಷಣೆಯಲ್ಲಿದ್ದ ಕಕ್ಷಿಗಾರರ ಗುಂಪನ್ನು ಸೇರಿ—ತಾನೊಂದೆಡೆಯಲ್ಲಿ ಕುಳಿತಳು. ಅಲ್ಲಿ ನೀಲವ್ವನು ಕೂಡುವಾಗ, ಅವಳ ಎದುರಿಗೇ ಮರದ ಬುಡಕ್ಕೆ ಒರಗಿಕೊಂಡು, ತನ್ನೆದೆಗೆ ಮೊಳಕಾಲುಗಳನ್ನು ಒತ್ತಿಕೊಂಡು, ಕೈಗಳಿಂದ ಕಾಲುಗಳನ್ನು ಬಂಧಿಸಿ, ಮೊಳಕಾಲುಗಳಮೇಲೆ ಮೊಗ ವಿರಿಸಿ, ಅವಳನ್ನೇ ದಿಟ್ಟಿಸಿ ನೋಡುತ್ತಾ ಕುಳಿತಿದ್ದ ತಿಮ್ಮಪ್ಪನನ್ನು ಅವಳು ಗಮನಿಸಿರಲಿಲ್ಲ. ಗಮನಿಸಿದ್ದರೆ, ಅವನ ದೃಷ್ಟಿದಿಗಂತದಿಂದ ಬೇರೆಯಾಗಿಯೆ ಕುಳಿತುಕೊಳ್ಳುತ್ತಿದ್ದಳೇನೊ! ಬಳಿಯಲ್ಲಿಯೇ ಆಟವಾಡುತ್ತಿದ್ದ ತನ್ನ ಮಗುವಿನಲ್ಲೇ ತಲ್ಲೀನಳಾಗಿ, ಅದರೊಂದಿಗೆ ವಿನೋದಿಸುತ್ತಾ ನೀಲವ್ವ ಕುಳಿತುಬಿಟ್ಟಳು. ಆ ಮಗುವು ಅವಳ ಮುಂದೆಯೆ ಕುಳಿತುಕೊಂಡು ಸ್ವಲ್ಪ ಹೊತ್ತು ಆಡುತ್ತಿದ್ದು, ಅನಂತರ ಅವಳ ಹಿಂದೆ ಬಂದು ಕುತ್ತಿಗೆಗೆ ತನ್ನ ಪುಟ್ಟ ಕೈಗಳನ್ನು ಸುತ್ತಿ, ಅವಳ ಬೆನ್ನಿನಮೇಲೆ ಜೋತು ಬಿದ್ದು ಆಟವಾಡುತ್ತಿದ್ದಾಗ, ಎದುರಿನ ಮರದ ಕೆಳಗೆ, ಅದರ ಬುಡಕ್ಕೆ ಒರಗಿಕೊಂಡು, ತನ್ನನ್ನೇ ನೋಡುತ್ತಿದ್ದ ತಿಮ್ಮಪ್ಪನನ್ನು ನೋಡಿ, ಮೊಗವನ್ನರಳಿಸಿ, ನಗೆಹರಿಸಿ, ನಯನಗಳನ್ನು ವಿಸ್ತರಿಸಿ, ತನ್ನ ತಾಯಿಯ ಬಳಿ ನಿಂತು, ತನ್ನ ಪುಟ್ಟದೊಂದು ಕೈಯಿಂದ ನೀಲವ್ವನ ಸೆರಗನ್ನು ಹಿಡಿದೆಳೆಯುತ್ತಾ, ಇನ್ನೊಂದು ಕೈಯಿಂದ ತಿಮ್ಮಪ್ಪನನ್ನು ತೋರಿಸುತ್ತಾ "ಅವ್ವಾ! ಅಪ್ಪ!! ಅಪ್ಪ, ಬಂದ!" ಎಂದು ಬೊಬ್ಬಿರಿದು. ಅನಂತರ ಮರುಕ್ಷಣದಲ್ಲಿ—ನೀಲವ್ವನು ತಿಮ್ಮಪ್ಪನನ್ನು ನೋಡಿ ಎಚ್ಚತ್ತುಕೊಳ್ಳುವಷ್ಟರಲ್ಲಿ — ಅವಳೆಡೆಯಿಂದ ಬಿಟ್ಟ ಬಾಣದಂತೆ ತಿಮ್ಮಪ್ಪನೆಡೆಗೆ ಬಂದುಬಿಟ್ಟಿತು. ನೀಲವ್ವನು ತನ್ನ ಗಂಡನ ಮನೆಯನ್ನು ಬಿಟ್ಟುಬಂದ ಕಾರಣವನ್ನೂ, ಅದರ ತಾಯ್ತಂದೆಗಳ ಮಧ್ಯೆ ಬೆಟ್ಟದಂತೆ ಬೆಳೆದಿದ್ದ ವೈಷಮ್ಯವನ್ನೂ, ಆ ಮಗುವು ಅರಿಯುವುದು ಹೇಗೆ? ನೀಲವ್ವನು ತನ್ನ ಗಂಡನ ಮನೆಯಲ್ಲಿ ಸಂಸಾರ ಮಾಡಿಕೊಂಡಿದ್ದಾಗ, ಆ ಮಗುವಿಗೆ ವಯಸ್ಸು ಹೆಚ್ಚಿದಂತೆಲ್ಲಾ, ತಾಯಿಗಿಂತಲೂ ತಂದೆಯ ಬಳಕೆಯೇ ಹೆಚ್ಚಾಗುತ್ತಾ ಬಂದಿತ್ತು. ಆದುದರಿಂದ ನೀಲವ್ವನು ತಿಮ್ಮಪ್ಪನೊಡನೆ ಜಗಳವಾಡಿಕೊಂಡು, ಅವನ ಮನೆಯನ್ನು ಬಿಟ್ಟು ಬಂದ ಮರು ಸಂಜೆಯೆ, ಎಂದಿನಂತೆ ತಿಮ್ಮಪ್ಪನು ತನ್ನನ್ನು ಹೆಗಲಮೇಲೇರಿಸಿಕೊಂಡು ಆಡಿಸಲು ಬಾರದಿದ್ದುದರಿಂದ, ಆ ಮಗುವು, ತನ್ನ ತಾಯಿಯನ್ನು "ಅವ್ವಾ, ಅಪ್ಪ ಎಲ್ಲಿ?" ಎಂದು ಕೇಳಿತ್ತು. ನೀಲವ್ವ ಉತ್ತರ ಕೊಡದಿರಲು, ಅದು ಅವಳನ್ನು ಅದೇ ಪ್ರಶ್ನಾವಳಿಯಿಂದ ಪೀಡಿಸಿತ್ತು. ತತ್ಕಾಲಕ್ಕೆ ಮಗುವನ್ನು ಸಮಾಧಾನಪಡಿಸಲೋಸುಗ ಹೇಳಿದ್ದ "ಊರಲ್ಲಿಲ್ಲ, ಪೋವು ಹೋಗಿದ್ದಾನೆ" ಎಂಬ ಕುಂಟು ಸಮಾಧಾನವೇ, ಅಲ್ಲಿಂದ ಪ್ರತಿಸಂಜೆ ಆ ಮಗುವು ಜಪಿಸುತ್ತಿದ್ದ "ಅವ್ವಾ ಅಪ್ಪ ಎಲ್ಲಿ?" ಎಂಬ ಪ್ರಶ್ನೆಯ ಪಾರಾಯಣಕ್ಕೆ ಕುರುಹು ಮಂಗಳವಾಗಿತ್ತು. ತನ್ನ ತಂದೆಯು ಎಲ್ಲಿಗೋ ಹೋಗಿರುವನೆಂದೂ, ಹಿಂದಿರುಗಿ ಬಂದು ತನ್ನನ್ನು ಮೊದಲಿನಂತೆ ಹೆಗಲಮೇಲೇರಿಸಿಕೊಂಡು ಆಡಿಸುವನೆಂದೂ ನಂಬಿದ್ದ ಆ ಮಗುವು, ಪ್ರತಿಸಂಜೆಯೂ ತನ್ನ ತಂದೆಯ ನಿರೀಕ್ಷಣೆಯಲ್ಲಿದ್ದು, ಮೋಸಹೋಗುತ್ತಿತ್ತು. ಆದರೆ ಆ ದಿವಸ ಅಲ್ಲಿ ಎದುರಿಗೆ, ಮರದ ಕೆಳಗೆ ಕುಳಿತಿದ್ದ ತಿಮ್ಮಪ್ಪನನ್ನು ನೋಡಿ, 'ಪೋವು' ಹೋಗಿದ್ದ ತಂದೆ ಹಿಂದಿರುಗಿ ಬಂದನೆಂದು ಭ್ರಮಿಸಿ, ಆ ಮಗುವು "ಅವ್ವಾ! ಅಪ್ಪ!! ಅಪ್ಪ, ಅಪ್ಪ ಬಂದ!" ಎಂದು ಗರ್ಜಿಸಿ, ಹಿಂದಿರುಗಿ ಬಂದವನಿಗೆ ಸ್ವಾಗತವೀಯಲು ಅವನ ಬಳಿ ಸಾರಿತ್ತು.

ನೀಲವ್ವನು ಗಂಡನ ಮನೆಯನ್ನು ಬಿಟ್ಟುಹೋಗುವುದಕ್ಕೆ ಮುಂಚೆ, ನೀಲವ್ವನ ಮೇಲೆ ತಿಮ್ಮಪ್ಪನಿಗಿದ್ದ ಒಲುಮೆಗೆ ಮನಸ್ತಾಪದ ಮಸಿ ಬಳಿದಿದ್ದರೂ, ಅನೇಕವೇಳೆ ತಿಮ್ಮಪ್ಪನು ಅವಳಮೇಲೆ ಸಿಟ್ಟುಮಾಡುತ್ತಿದ್ದರೂ, ಅವಳಲ್ಲಿ ಅವನಿಗೆ

ಸಂಪೂರ್ಣ ಅನಾದರಣೆಯಾಗಲಿ, ದಯಾಗರ್ಜನೆಯೆ ಆಗಲಿ. ತಾತ್ಸಾರವೇ ಆಗಲಿ ಇರಲಿಲ್ಲ: ಆದರೆ ನೀಲವ್ವನು ಅವನ ಮನೆಯನ್ನೇ ಬಿಟ್ಟುಬಂದುದರಿಂದ, ಅವನ ಸಿಟ್ಟು ರೋಷವಾಗಿ, ಮನಸ್ತಾಪವು ವೈಷಮ್ಯವಾಗಿ, ಒಲವು ಹಿಂಗಿ, ನೀಲವ್ವನಲ್ಲಿ ತಿಮ್ಮಪ್ಪನಿಗೆ ತಾತ್ಸಾರವೂ ಜುಗುಪ್ಸೆಯೂ ಹುಟ್ಟಿ, ಅವನಿಗೆ ಅವಳು ಬೇಕಿಲ್ಲದವಳಾದಳು; ತಾನೂ ಹಟದ ವೃತ್ತಿಯುವನಾದನು. ಆದುದರಿಂದಲೇ ಅವನು ಅವಳಿಗೆ ಜೀವನಾಂಶವನ್ನು ಕೊಡುವ ಚೈತನ್ಯವುಳ್ಳವನಾದರೂ, ತಕರಾರು ಹಾಕಿ ವ್ಯಾಜ್ಯವನ್ನು ಬೆಳೆಯಿಸಿದ್ದನು. ವಿಚಾರಣೆಯ ದಿವಸ ತನ್ನ ಲಾಯರ ಮಾತಿನಂತೆ ಕಛೇರಿಗೆ ಬಂದು, ತನ್ನ ಕೇಸಿಗಾಗಿ ಕಾಯುತ್ತಾ ಮರದಡಿ ಕುಳಿತಿದ್ದನು. ಸ್ವಲ್ಪಹೊತ್ತಿನಲ್ಲೇ ನೀಲವ್ವನು ಬರುತ್ತಿದ್ದುದನ್ನು ಗಮನಿಸಿ, ಅವಳಲ್ಲೇ ನಟ್ಟ ದೃಷ್ಟಿಯುವನಾದನು. ಹಟಕ್ಕೆ, ಜಗಳಕ್ಕೆ ಬಿದ್ದುದರಿಂದ. ಅವಳ ಎದುರುದೃಷ್ಟಿಯಿಂದ ತಪ್ಪಿಸಿಕೊಳ್ಳುವ ಮನಸಿರಲಿಲ್ಲ. ಇದ್ದರಿಂದಲೇ, ನೀಲವ್ವನು ಅವನೆದುರಿಗೆ ಕುಳಿತಾಗ. ಅವನು ಅವಳನ್ನು ದಿಟ್ಟಿಸಿ, ಕೆಚ್ಚಿನಿಂದ, ರೋಷದಿಂದ ನೋಡುತ್ತಿದ್ದನು; ದೃಷ್ಟಿಯಿಂದಲೇ ಅವಳನ್ನು ಕುಕ್ಕಿಬಿಡುವಂತೆ ನೋಡುತ್ತಿದ್ದನು. ಕ್ರಮೇಣ ಅವನ ದೃಷ್ಟಿವ್ಯಾಪ್ತಿಯು ಅವಳ ಒಳೆ ಇದ್ದ ಮಗುವಿನ ವರೆಗೆ ಹರಡಿತು. ಆ ಮಗುವಿನೆಡೆಗೆ ವ್ಯಾಪಿಸಿದ ಅವನ ದೃಷ್ಟಿಯು ಕ್ರಮೇಣ ಮಗುವನ್ನೇ ತನ್ನ ಕೇಂದ್ರವನ್ನಾಗಿ ಮಾಡಿಕೊಂಡಿತ . ತಿಮ್ಮಣ್ಣನ ನೋಟವು ನೀಲವ್ವನಿಂದ ಮಗುವಿನ ಕಡೆಗೆ ಸರಿಯುತ್ತಾ ಬಂದಂತೆಲ್ಲ, ಅದರಲ್ಲಿದ್ದ ಕಠೋರತೆಯು ಕರಗುತ್ತಾ ಬಂದಿತು. ಮಗುವನ್ನು ಈಕ್ಷಿಸಿದಂತೆಲ್ಲ ಅವನಲ್ಲಿ ಅದರ ಮೇಲಣ ಮಮತೆ ಮೂಡುತ್ತಾ ಬಂದಿತು. ನೀಲಮ್ಮನೆದುರಿಗೆ ನಿಂತು. ಕುಳಿತು, ಕುಣಿದು, ಹೊರಳಿ ಮಲಗಿ, ಕಿರಿಚಿ ಚೀರಿ, ನಲಿದು ಒಲಿದು ಆಡುತ್ತಿದ್ದ ಆ ಮಗುವಿನ ಮುದ್ದು ಆಟಪಾಟಗಳನ್ನು ನೋಡುತ್ತಾ, ತಿಮ್ಮಪ್ಪನು ಮುಗ್ಧನಾಗಿ ಚಿತ್ರದ ಬೊಂಬೆಯಂತೆ ಕುಳಿತುಬಿಟ್ಟನು. ಆಗಲೇ ಆ ಮಗುವು ಅವನನ್ನು ನೋಡಿ "ಅವ್ಮಾ ! ಅಪ್ಪ !! ಅಪ್ಪ ಬಂದ ! " ಎಂದು ಕೂಗಿ ಅವನ ಕಡೆಗೆ ಚಿಮ್ಮಿದುದು.

"ಅವ್ಮಾ ! ಅಪ್ಪ !! ಅಪ್ಪ ಬಂದ ! " ಎಂದು ಆ ಮಗುವು ತನ್ನನ್ನು ಉದ್ದೇಶಿಸಿ ನುಡಿದ ಮಾತುಗಳು. ತಿಮ್ಮಪ್ಪನ ಕಿವಿಗಳಲ್ಲಿ ಹೂವಿನಮೇಲೆ ಎಳೆಯ ಸೂರ್ಯಕಿರಣಗಳಂತೆ—ಬಿದ್ದರೂ, ಸುಂದರವಾದ ಮಿಂಚಿನೊಡನೆ ಆವಿರ್ಭವಿಸುವ ಅದರ ಸಿಡಿಲಿನ ಶಬ್ದದಂತೆ, ಆ ಮಾತುಗಳ ಸವಿಯೊಡನೆಯೆ., ತಿಮ್ಮಪ್ಪನಿಗೆ, ಆ ಮಗುವಿನ ಪರ ನೀಲವ್ವನು ಹಾಕಿದ ಜೀವನಾಂಶದಾವಾ ನೆನಪಿಗೆ ಬಂದು, ಅವನ ಹೃದಯದಲ್ಲಿ ಬಾಂಬುಹಾಕಿದ ಪರಿಣಾಮವೂ ಆಯ್ತು. ವಿರೋಧಪ್ರಕೃತಿಗಳಾದ ಇವೆರಡರ ಪರಿಣಾಮದಿಂದ ಅವನಿಗೆ ಮಂಕುಕವಿದು, ಬುದ್ಧಿ ಶೂನ್ಯವಾಗಿ, ಏನೂ ತೋಚದವನಾಗಿ, ಅಲ್ಲಿಯ ತನಕ ಅಚಲತ್ವದಲ್ಲಿ ಅವನು ಶಿಲಾಪ್ರತಿಮೆಯಂತಿದ್ದರೆ, ಅನಂತರ ವಿವೇಚನಾಶೂನ್ಯತೆಯಲ್ಲಿಯೂ ಅವನು ಶಿಲಾಪ್ರತಿಮೆಯೇ ಆಗಿಬಿಟ್ಟನು. ಮಗುವು ತನ್ನ ಹತ್ತಿರಕ್ಕೆ ಓಡಿ ಬಂದುದನ್ನು ನೋಡಿದರೂ, ಅದು ತನ್ನ ಹತ್ತಿರಕ್ಕೆ ಬಂದು ತನ್ನ -ರಟ್ಟೆಗಳನ್ನು ಹಿಡಿದೆಳೆಯುತ್ತಾ ತನ್ನ ಮೇಲೆ ಬೀಳುತ್ತಾ ಇರುವ್ವದನ್ನು ಅರಿತಿದ್ದರೂ, ಅದರ ಪುಟ್ಟ ಕೋಮಲಕೈಗಳಿಂದ ತನ್ನ ಮುಖ ಕಿವಿ, ಕೆನ್ನೆಗಳನ್ನು ಸವರುತ್ತಿದ್ದ ಸುಖವನ್ನನುಭವಿಸುತ್ತಿದ್ದರೂ, ಅದು ಹರ್ಷದಿಂದ ನಲಿಯುತ್ತಾ ಕೈತಟ್ಟಿ ಕುಣಿಯುತ್ತಿದ್ದುದನ್ನು ಗಮನಿಸುತ್ತಿದ್ದರೂ, "ಎಲ್ಲಿಗೆ ಹೋಗಿದ್ದಿ?" "ಎತ್ತುಕೋ !", ಭುಜದ ಮೇಲೆ ಕೂಡಿಸಿಕೋ !", 'ಹತ್ತಿರ ಬಾಮ್ಮಾ", "ಇಲ್ಲಿಗೇ ಬಾಮ್ಮಾ", "ಅಪ್ಪನ ಹತ್ತಿರ ಬಾಮ್ಮಾ" ಎಂಬುದಾಗಿ ಅದು ಮುದ್ದು ಮುದ್ದಾಗಿ ಹೇಳುತ್ತಿದ್ದ ಮಾತುಗಳನ್ನು ಕೇಳುತ್ತಿದ್ದರೂ, ತಿಮ್ಮಪ್ಪನು ತನ್ನ ದೃಷ್ಟಿಯನ್ನು ಮಾತ್ರ ಮಗುವಿನ ಮುಖದಿಂದ ಬೇರೊಂದೆಡೆಗೂ ಚಲಿಸದೆ, ಕರ್ತವ್ಯಶೂನ್ಯನಾಗಿ, ತನ್ನೊಳಗಿನಿಂದುಂಟಾದ ವಿರುದ್ಧಭಾವದ ಅಲುಗಾಟವೊಂದೂ ಇರದೆ, ಹೊಳೆಯಲ್ಲಿ ಅಲೆಗಳ ಹೊಡೆತಕ್ಕೆ ಸಿಕ್ಕಿ ತಿರುಗುತ್ತಾ ತೇಲಿಹೋಗುವ ಬೆಂಡಿನಂತೆ, ಆ ಮಗುವಿನ ಮೇಲಿನ ಮೋಹದಲ್ಲಿ ಮೈಮರೆತು ತೇಲುತ್ತಿದ್ದನು.

ತಿಮ್ಮಪ್ಪನ ಮನೆಯನ್ನು ಬಿಟ್ಟು ಬಂದನಂತರ, ನೀಲವ್ವನು ತಿಮ್ಮಪ್ಪನನ್ನು ನೋಡಿಯೆ ಇರದಿದ್ದರೂ, ವಿಚಾರಣೆಯ ದಿವಸ ಅವನೂ ಕಛೇರಿಗೆ ಬರುವನೆಂದು ಅವಳು ಎಣಿಸಿರಲಿಲ್ಲ. ಬರಬಹುದೆಂದು, ಅವಳು ತನ್ನ ವಕೀಲರನ್ನು ವಿಚಾರಿಸಿ ತಿಳಿದುಕೊಂಡೂ ಇರಲಿಲ್ಲ. ಆ ದಿವಸ ತನ್ನ ಕಡೆಯ ಸಾಕ್ಷಿಗಳ ವಿಚಾರಣೆ ಮಾತ್ರ ಇದ್ದಿತಾದ್ದರಿಂದ, ತಿಮ್ಮಪ್ಪನು ಕೋರ್ಟಿನ ಬಳಿ ಬರಬಹುದೆಂದು ನಿರೀಕ್ಷಿಸಿಯೂ ಇರಲಿಲ್ಲ. ಅವಳು ಕಡೆಯ ಸಲ ತಿಮ್ಮಪ್ಪನನ್ನು ನೋಡಿದಾಗ, ತಮ್ಮಿಬ್ಬರ ಜಗಳದಲ್ಲಿ ತನ್ನನ್ನು ಹೊಡೆಯುತ್ತಿದ್ದ ಅವನ ಉಗ್ರಸ್ವರೂಪವನ್ನೇ ನೋಡಿದ್ದರಿಂದ, ಅವನ ಆ ಚಿತ್ರವೇ ಅವಳ ಮನದಲ್ಲಿ ಮುದ್ರಿತವಾಗಿತ್ತು. ಆದಕಾರಣ ಅವನನ್ನು ನೋಡುವ ಅಭಿಲಾಷೆಯಾಗಲಿ, ಉತ್ಸಾಹವೇ ಆಗಲಿ ಅವಳಿಗೆ ಇರಲಿಲ್ಲ. ತಪ್ಪೋ, ಸರಿಯೋ, ಅಂತು ಮುಂದೆ ತನ್ನ ಗಂಡನನ್ನು ನೋಡುವಾಗಲೆಲ್ಲ ಅವನಿಗೆ ಅದೇ ಸಿಡುಕಿನ ಮುಖ, ಕೆಂಡದ ಕಣ್ಣು, ಎತ್ತಿದ ಕೈ ಇವುಗಳೇ ಇರುತ್ತವೆಂದು ಅವಳಿಗೆ ಭಾಸವಾಗಿ ಬಿಟ್ಟಿತ್ತು. ಆದುದರಿಂದಲೇ "ಅವ್ಮಾ ! ಅಪ್ಪ !! ಬಂದಾ ! " ಎಂದು ಮಗುವು ತನ್ನ ತಂದೆಯ ಕಡೆಗೆ ಕೈ ತೋರಿಸಿದ ಕೂಡಲೆ, ಅವನನ್ನು ನೋಡುವುದಕ್ಕೂ ಮುಂಚೆ, ಅವಳ ಮನದಲ್ಲಿ ಅವನ ಉಗ್ರಚಿತ್ರವೇ ಮಿಂಚಿಬಿಟ್ಟಿತು. ಆದರೆ, ಅದಕ್ಕೆ ಪ್ರತಿಯಾಗಿ, ಅವನು, ದೀನನಾಗಿ, ಮೈಮುದುರಿ ಕುಳಿತು, ಒಲವಿನಿಂದ ಮಗುವನ್ನು ನೋಡುತ್ತಿದ್ದುದನ್ನು ನೋಡಿ ಅವಳು ಅಚ್ಚರಿಪಟ್ಟಳು. ನೀಲವ್ವನು ತಿಮ್ಮಪ್ಪನನ್ನು ನೋಡುವ ಹೊತ್ತಿಗಾಗಲೇ, ತಿಮ್ಮಪ್ಪನ ದೃಷ್ಟಿಯು ಅವಳಿಂದ ಮಗುವಿಗೆ ಸರಿದು, ಅದರಲ್ಲಿ ಮೋಹದ ಮಿಂಚು ಮಿನುಗುತ್ತಿತ್ತು. ನೀಲವ್ವನು ತಿಮ್ಮಪ್ಪನಲ್ಲಿ ಮೊದಲು ಗುರುತಿಸಿದ್ದು ಅದನ್ನು— ಮಗುವಿನ ಮೇಲಣ ಅವನ ಮಮತೆಯನ್ನು. ಅದನ್ನು ನೋಡಿ ಅವಳಿಗೆ ವರ್ಣಿಸಲಸದಳವಾದ ಶಾಂತತೆ ಬಂದಿತು. ಆದರೂ ಅವಳಿಗೆ ತಿಮ್ಮಪ್ಪನ ಮೇಲಿನ ವೈಷಮ್ಯವು ಸ್ವಲ್ಪವೂ ಕಡಿಮೆಯಾಗಲಿಲ್ಲ. ಅನಂತರ, ಸ್ತ್ರೀಸಹಜವಾದ ಗುಣದಿಂದ,

ನೀಲಮ್ಮನು ತನ್ನ ಗಂಡನನ್ನು ಸೂಕ್ಷ್ಮವಾಗಿ ಗಮನಿಸಿದಳು. ಅವನ ಮುಖವು ಕಂದಿತ್ತು. ಬಹಳ ಗೀರುಗಳು ಮೂಡಿದ್ದುವು. ಮುಂಚೆ ಉಕ್ಕುತ್ತಿದ್ದ ಗೆಲವು ಬತ್ತಿಹೋಗಿತ್ತು. ಯೌವನವು ಕಳೋಗಿ ಮುಪ್ಪು ತಲೆದೋರಿತ್ತು. ದೇಹವೂ ಮುಂಚಿನಂತೆ ಕಟ್ಟುಮುಟ್ಟಾಗಿರಲಿಲ್ಲ. ಶಿಥಿಲವಾಗಿ, ರೋಗಿಯುದರಂತಿತ್ತು. ಇವೆಲ್ಲಕ್ಕಿಂತಲೂ ಅವಳು ಅವನಲ್ಲಿ ಹೆಚ್ಚು ಸೂಕ್ಷ್ಮತೆಯಿಂದ ಒಂದು ವಿಷಯವನ್ನು ಗಮನಿಸಿದ್ದಳು. ಅವಳು ಅವನೊಂದಿಗೆ ವಾಸವಾಗಿದ್ದ ಅಷ್ಟು ವರ್ಷಗಳಲ್ಲಿಯೂ, ತಿಮ್ಮಪ್ಪನು ತನ್ನ ಮುಖದ ಮೇಲೆ ಅಷ್ಟುದ್ದ ಕೂದಲು ಬೆಳೆಯುವ ವರೆಗೆ ಕ್ಷೌರ ಮಾಡಿಕೊಳ್ಳದೆ ಇರುತ್ತಿರಲಿಲ್ಲ. ಅದು ಅವಳಲ್ಲಿ ಒಂದು ಬಗೆಯ ಅಭಿಮಾನವನ್ನೂ ಮೂಡಿಸಿತು. ಆದುದರಿಂದ ಮಗುವು ತಂದೆಯು

ತನ್ನನ್ನು ಎತ್ತಿಕೊಳ್ಳಬೇಕೆಂದು ಮಗುವು ತಿಮ್ಮಪ್ಪನನ್ನು ಪೀಡಿಸುತ್ತಲೆ ಇದ್ದಿತು. ಎಷ್ಟು ಪೀಡಿಸಿದರೂ, ಕೇಳಿಕೊಂಡರೂ, ಬೇಡಿಕೊಂಡರೂ, ತಿಮ್ಮಪ್ಪನು ಅಲುಗಾಡದೆಯೆ, ಮಾತನಾಡದೆಯೆ, ಊರಮುಂದಣ ಹನುಮಂತನ ಹಾಗೆ ಮಿಕಮಿಕನೆ ಕಣ್ಣುಗಳನ್ನು ಬಿಟ್ಟುಕೊಂಡು ಕುಳಿತುಕೊಂಡಿರಲು, ಮಗುವಿನ ನಲಿವೂ ಸಂತಸವೂ ಕ್ರಮೇಣ ಕುಗ್ಗುತ್ತಾ ಬಂದಿತು. ಅನಂತರ ಮಾಯವಾಯಿತು. ಕಡೆಯಲ್ಲಿ ಅದು ದುಃಖದಿಂದ ಅಳಲಾರಂಭಿಸಿತು. "ಎತ್ಕೋ ಅಪ್ಪಾ" ಎಂದು ಕಣ್ಣೀರುಹರಿಸಿ, ಜೊಲ್ಲುಸುರಿಸಿ, ಕೈಗಳಿಂದ ಕಣ್ಣುಗಳನ್ನು ಉಜ್ಜಿಕೊಳ್ಳುತ್ತಾ ನಿಂತಿತು. ಆದರೂ ತಿಮ್ಮಪ್ಪನು ಎತ್ತಿಕೊಳ್ಳದಿರಲು ಅದು ಬಿಕ್ಕಿಬಿಕ್ಕಿ ಅಳಲಾರಂಭಿಸಿತು. ನೀರುತುಂಬಿದ ತನ್ನ ದೊಡ್ಡ ಕಣ್ಣುಗಳನ್ನು ತಾಯಿಯ

"ನೀನೇ ಎತ್ಕೋ ಅಪ್ಪಾ; ಅಮ್ಮಾ ಬೇಡ" ಎಂದು ಮಗು ರೋದಿಸಲಾರಂಭಿಸಿತು.

ಬಳಿ ಹೋದ ಮೇಲೆ, ಅದನ್ನು ಹಿಂದಕ್ಕೆ ಕರೆತರಬೇಕೋ ಬೇಡವೋ ತಿಳಿಯದಾಗಿ, ನೀಲಮ್ಮನು ಸುಮ್ಮನೆ ಕುಳಿತು ಬಿಟ್ಟಳು. 'ಪ್ರೋಪು' ಹೋಗಿದ್ದ ತಂದೆಯು ಹಿಂದಿರುಗಿ ಬಂದನೆಂದು ನಂಬಿದ್ದ ಆ ಮಗುವಿನ ಅಪಾರಸಂತೋಷವನ್ನೂ, ಅದರಿಂದುಂಟಾದ ಅದರ ಹೆಚ್ಚಿನ ನಲಿವನ್ನೂ, ನೀಲಮ್ಮನು ಗಮನಿಸದೆ ಇರಲಿಲ್ಲ. ತಾನು ಗಂಡನೊಡನೆ ಜಗಳವಾಡಿಕೊಂಡು ಬಂದಂದಿನಿಂದ ತನ್ನ ಮಗನು ಅಷ್ಟು ಗಟ್ಟಿಯಾಗಿ ಕೇಕೆಹಾಕಿದ್ದನ್ನು ಅವಳು ಕೇಳಿರಲಿಲ್ಲ. ಅವಳೂ ಸ್ವಲ್ಪ ಕಾಲ ತಿಮ್ಮಪ್ಪನಂತೆ ಮಗುವಿನ ಒಲವಿನ ಪ್ರದರ್ಶನವನ್ನು — ಮೂಕಿಯಂತೆ — ಸುಮ್ಮಗೆ ನೋಡುತ್ತಾ ಕುಳಿತುಬಿಟ್ಟಳು.

ಕಡೆಗೆ ಹೊರಳಿಸುತ್ತಾ "ಅಮ್ಮಾ, ಅಪ್ಪಾ ಎತ್ಕೋ-ವೊಲ್ಲಂತೆ. ಯಾಕಮ್ಮಾ, ನೀನು ಹೇಳಮ್ಮಾ!" ಎಂಬುದಾಗಿ ಮೊರೆಯಿಟ್ಟಿತು.

ಅಲ್ಲಿಯವರೆಗೂ ಸುಮ್ಮನೆ ಕುಳಿತಿದ್ದ ನೀಲಮ್ಮನು, ಹೆಚ್ಚು ತಡೆಯಲಾರದೆ ಎದ್ದು ಮಗುವಿನ ಬಳಿ ಬಂದು "ನಾನು ಎತ್ತಿಕೊಳ್ಳುತ್ತೇನೆ. ಬಾಪ್ಪಾ" ಎಂದು ತನ್ನೆರಡೂ ಕೈಗಳನ್ನು ಚಾಚಿ, ಆ ಮಗುವನ್ನು ತನ್ನೆದೆಗಪ್ಪಿಕೊಳ್ಳಲು ಯತ್ನಿಸಿದಳು. ಆದರೆ ಆ ಮಗುವು, ತಿಮ್ಮಪ್ಪನು ತನ್ನನ್ನು ಹೆಗಲಮೇಲೇರಿಸಿಕೊಳ್ಳಲು ಹಟಹಿಡಿದಿದ್ದುದರಿಂದ, ತಾಯಿಯ ಕೈಯಿಂದ ಕೊಸರಿಕೊಂಡು, ತನ್ನೆರಡೂ ಕೈಗಳಿಂದ ತಿಮ್ಮಪ್ಪನ ಕುತ್ತಿಗೆಯನ್ನು

ಮುಂಬಯಿ ಸರಕಾರದ ಔದ್ಯೋಗಿಕ ಸಮಿತಿಯಿಂದ ಮನ್ನಣೆಯನ್ನು ಪಡೆದಿರುವ

ದಿ ನ್ಯಾಶನಲ್ ಟೇಲರಿಂಗ್ ಕಾಲೇಜ್

ಮರಾಠಾಗಲ್ಲಿ—ಹುಬ್ಬಳ್ಳಿ.

ಹಣವನ್ನು ವೆಚ್ಚಮಾಡಿ ಎಲ್ಲೆಲ್ಲಿಯವೊ ಖಾಸಗೀ
ಸರ್ಟೀಫಿಕೆಟುಗಳನ್ನು ಪಡೆದುಕೊಳ್ಳುವುದಕ್ಕಿಂತ,
ಸರಕಾರದಿಂದ ದೊರೆಯುವ ಅಧಿಕೃತ ಸರ್ಟೀ-
ಫಿಕೇಟುಗಳನ್ನು ಪಡೆದುಕೊಂಡರೆ
ಒಳ್ಳೆಯದಲ್ಲವೆ?

ಈ ಸಲ ನಮ್ಮ ಕಾಲೇಜಿನ ಪರಿಣಾಮವು ಸರಕಾರೀ
ಪರೀಕ್ಷೆಯಲ್ಲಿ ೧೦೦ ಕ್ಕೆ ೯೦ ರಂತೆ ಆಗಿದೆ.
ಹಚ್ಚಿಗೆ ಮಾಹಿತಿ ಬೇಕಾಗಿದ್ದವರು
೧ ಆಣೆಯ ಸ್ಟ್ಯಾಂಪು ಇಟ್ಟು ಬರೆದು ಕೇಳಿರಿ.

ಎನ್. ಆರ್. ಬುಲ್‌ಬುಲೆ,
D.M.T.C.A. (London)
ಪ್ರಿನ್ಸಿಪಾಲ್

ಸುತ್ತಿ, ಬಿಗಿದಪ್ಪಿಕೊಂಡು, "ನೀನೇ ಎತ್ಕೊಳ್ಳೀ ಅಪ್ಪಾ. ಅಮ್ಮಾ ಬೇಡ" ಎಂದು ರೋದಿಸಲಾರಂಭಿಸಿತು.

ತಿಮ್ಮಪ್ಪನ ಕಣ್ಣುಗಳಲ್ಲಿ ನೀರು ತುಂಬಿತ್ತು. ಅಲ್ಲಿಯವರೆಗೂ ಕಲ್ಲಿನಂತೆ ಕುಳಿತಿದ್ದ ತಿಮ್ಮಪ್ಪನಿಗೆ "ನೀನೇ ಎತ್ಕೊಳ್ಳೀ ಅಪ್ಪಾ; ಅಮ್ಮಾ ಬೇಡ' ಎಂಬ ಮಾತುಗಳು, ಹೊಸ ಸ್ಫೂರ್ತಿಯನ್ನು ಕೊಟ್ಟಂತಾಗಿ, ಅದು ಅವನನ್ನು ಕರ್ತವ್ಯಮುಖನನ್ನಾಗಿ ಮಾಡಿತು. ಒಂದು ಮಾತನ್ನೂ ಆಡದೆ, ತಿಮ್ಮಪ್ಪನು ತನ್ನ ಕಾಲುಗಳ ಸುತ್ತ ಸುತ್ತಿದ್ದ ತನ್ನ ಕೈಗಳನ್ನು ಸಡಲಿಸಿ, ತನ್ನ ಮಗುವನ್ನು ಎತ್ತಿಕೊಂಡು, ಬಿಗಿದಪ್ಪಿ ಮುದ್ದಾಡಿ, ಕಣ್ಣೀರು ಸುರಿಸಿದನು. ಅನಂತರ ಎದ್ದುನಿಂತು, ಮಗುವನ್ನು ತನ್ನ ಹೆಗಲ ಮೇಲೇರಿಸಿಕೊಂಡು, ಮರದ ಸುತ್ತಲೂ ಮೂರು ಸಲ ಸುತ್ತಿ, ಒಳಿಕ ಮಗುವನ್ನು ಕೆಳಕ್ಕಿಳಿಸಿ, ಷರಟಿನ ತೋಳಿನಿಂದ ತನ್ನ ಕಣ್ಣುಗಳನ್ನು ಒರಸಿಕೊಂಡು, ಅಲ್ಲಿ ನಿಲ್ಲದೆ, ಪುನಃ ಹಿಂದಿರುಗಿ ಕೂಡ ನೋಡದೆ, ಸರಸರನೆ ಹೊರಟುಹೋದನು.

ತನ್ನೆರಡು ಕೈಗಳನ್ನೂ ತಂದೆಯ ಕಡೆಗೆ ಚಾಚಿ ಮಗುವು ಗಟ್ಟಿಯಾಗಿ "ಅಪ್ಪಾ, ಬಾಪ್ಪಾ" ಎಂದು ರೋದಿಸತೊಡಗಿತು. ನೀಲವ್ವನು ಸ್ತಬ್ಧಳಾಗಿ ನಿಂತುಬಿಟ್ಟಳು. ಅವಳ ಕಣ್ಣುಗಳಲ್ಲಿಯೂ ನೀರುಹರಿಯುತ್ತಿತ್ತು.

*　　*　　*　　*

ಆ ದಿನ ಸಂಜೆ ರಘುನಾಥರಾಯರು ಮನೆಗೆ ಬರುವಾಗ, ರಾತ್ರಿ ಒಂಭತ್ತರ ಮೇಲಾಗಿದ್ದರೂ, ಅವರಿಗಾಗಿ ಕಾಯುತ್ತಾ ಕುಳಿತಿದ್ದ ನೀಲವ್ವನು ಅವರು ಬಂದೊಡನೆ "ದಾವಾ ಬೇಡ ಸ್ವಾಮಿ, ವಜಾಮಾಡಿಸ್ಬಿಡಿ" ಎಂದು ಹೇಳಿದಳು.

ರಘುನಾಥರಾಯರಿಗೆ ಆಶ್ಚರ್ಯವೇ ಆಯಿತು. "ಏಕೆ?" ಎಂದು ಕೇಳಿದರು.

ನೀಲವ್ವನು ಗದ್ಗದಕಂಠದಲ್ಲಿ "ನನಗೆ ದಾವಾ ಬೇಡಾ ಸ್ವಾಮಿ! ನಾನು ಅವನ ಮನೆಗೆ ಹೋಗಿ ವಾಸವಾಗಿರುವುದು ಅವನಿಗೆ ಇಷ್ಟವಿಲ್ಲದಿದ್ದಲ್ಲಿ, ನಾನು ಈ ಊರನ್ನೇ ಬಿಟ್ಟುಹೋಗ್ತೇನ ಸ್ವಾಮಿ! ಎಲ್ಲಾದ್ರೂ ಹೋಗ್ತೇನೆ; ಆದ್ರೆ ಮಗೂನ ಅವನು ಕರೆದುಕೊಂಡು ಹೋಗಿ ಸಾಕಿಕೊಳ್ಳುವ ಹಾಗೆ, ಅಷ್ಟು ಮಾಡಿಸಿ ಬಿಡಿ ಸ್ವಾಮಿ" ಎಂದು ಹೇಳಿದಳು. ರಘುನಾಥರಾಯರು ನೀಲವ್ವನಿಗೆ, ಆ ವಿಷಯ ತಿಮ್ಮಪ್ಪನೊಡನೆ ಮಾತನಾಡಿ, ಅವನನ್ನು ಒಪ್ಪಿಸುವುದಾಗಿ ಭರವಸೆಕೊಟ್ಟು, ದಾವಾ ಕೂಡ ವಜಾಮಾಡಿಸುವುದಾಗಿ ಹೇಳುವವರೆಗೂ, ನೀಲವ್ವನು ಅವರನ್ನು ಬಿಡಲಿಲ್ಲ.

ಮರುದಿವಸ ಬೆಳಗಿನಲ್ಲಿ ರಘುನಾಥರಾಯರು ತಮ್ಮ ಆಫೀಸಿಗೆ ಹೋದಾಗ, ಅವರ ಗುಮಾಸ್ತನಾದ ರಂಗಣ್ಣನು ಅವರ ಕೈಯಲ್ಲಿ, ಆ ದಿನ ವಕೀಲ ಶ್ಯಾಮಣ್ಣನವರು ರಘುನಾಥರಾಯರಿಗೆ ಬರೆದು ಕಳುಹಿಸಿದ್ದ ಕಾಗದವನ್ನು ಕೊಟ್ಟನು. ಅದರಲ್ಲಿ ಈ ರೀತಿ ಇದ್ದಿತು: —

" ಮ|| ರಾ|| ರಘುನಾಥರಾಯರಿಗೆ....

ನೀವು ನೀಲವ್ವನ ಪರವಾಗಿ ನಮ್ಮ ಕಕ್ಷಿಗಾರರಾದ ತಿಮ್ಮಪ್ಪನ ಮೇಲೆ ಹಾಕಿದ ಜೀವನಾಂಶ ದಾವಾದಲ್ಲಿ, ನಮ್ಮ ಕಕ್ಷಿಗಾರರು ತಕರಾರು ಹಾಕಿ ವ್ಯಾಜ್ಯ ನಡೆಯಿಸುತ್ತಿದ್ದರಷ್ಟೆ. ಆದರೆ ನಮ್ಮ ಕಕ್ಷಿಗಾರರು ನಿನ್ನೆಯ ರಾತ್ರಿ ನನಗೆ ತಿಳಿಸಿ ಹೋದ ಪ್ರಕಾರ ನಿಮಗೆ, ನಿಮ್ಮ ಕಕ್ಷಿಗಾರರ ತಿಳಿವಳಿಕೆಯ ಬಗ್ಗೆ, ಈ ರೀತಿ ತಿಳಿಸಿರುತ್ತೇವೆ: ನಿಮ್ಮ ಕಕ್ಷಿಗಾರರಿಗೆ ನಮ್ಮ ಕಕ್ಷಿಗಾರರ ಮನೆಯಲ್ಲಿ ಬಂದು ವಾಸವಾಗಿರುವುದು ಇಷ್ಟವಿಲ್ಲದ ಪಕ್ಷದಲ್ಲಿ, ನಿಮ್ಮ ದಾವಾದಂತೆ ನೀವು ಕೇಳಿರುವಷ್ಟು ಹಣಕ್ಕೆ ಡಿಕ್ರಿ ಆಗಲು ನಮ್ಮ ಕಕ್ಷಿಗಾರರು ಒಪ್ಪಿಗೆ ಕೊಡಲು ಸಿದ್ಧರಾಗಿರುತ್ತಾರೆ. ಅಷ್ಟೇಅಲ್ಲ, ಇನ್ನೊಂದು ವಿಷಯ: ಒಂದು ವೇಳೆ ಮಗುವಿಗಾಗಿ ನಿಮ್ಮ ಕಕ್ಷಿಗಾರರು ಕೇಳಿರುವ ಹಣ, ಅದರ ಪರಿಪಾಲನೆಗೆ ಸಾಲದಿದ್ದಲ್ಲಿ, ಅದಕ್ಕೂ ಹೆಚ್ಚಿನ ಮೊಬಲಗನ್ನು ನಿಮ್ಮ ಕಕ್ಷಿಗಾರರು ಕೇಳಿದಂತೆ ಕೊಡಲೂ ನಮ್ಮ ಕಕ್ಷಿಗಾರರು ಸಿದ್ಧರಾಗಿರುತ್ತಾರೆ.

ನಿಮ್ಮ ವಿಶ್ವಾಸಿ
ಶ್ಯಾಮಣ್ಣ
ವಕೀಲ್'

ಕಾಗದವನ್ನು ಓದಿಕೊಂಡು ರಘುನಾಥರಾಯರು, "ಹುಚ್ಚು ದಂಪತಿಗಳು. ನಾನು ಮುಂಚೆ ಎಷ್ಟು ಹೇಳಿದರೂ ಒಬ್ಬರೂ ಸೋಲಲಿಲ್ಲ. ಈಗ ಹೆಂಗೆ ಬಂದಿತು, ಇವರಿಗೆ, ಈ ಒಳ್ಳೆಯ ಬುದ್ಧಿ!" ಎಂದುಕೊಂಡರು.

ಜನಸಂಖ್ಯೆಯ ಸಮಸ್ಯೆ

ಶ್ರೀ. ಮಿರ್ಜಿ ಅಣ್ಣಾರಾಯರು
ಸೇಡಬಾಳ

ಯಾವಾಗಲೂ, ನಾಡಿನಲ್ಲಿ ಜನ್ಮಿಸುವ ಜನರ ಸಂಖ್ಯೆಗೂ ಉತ್ಪತ್ತಿಯಾಗುವ ಆಹಾರದ ಅಳತೆಗೂ ಮೇಳಹೊಂದುತ್ತಿರಬೇಕು. ಹೀಗೆ ಇರದ ಜನಸಮಾಜದಲ್ಲಿ ಉಚ್ಚ ಆದರ್ಶ, ಅದನ್ನು ಸಾಧಿಸಲು ಬೇಕಾಗುವ ಆಚಾರ-ವಿಚಾರ ಇವುಗಳಿಗೆ ಅವಕಾಶವೆ ಇರದು. ಒಂದು ತುತ್ತು ಅನ್ನಕ್ಕಾಗಿ ಕೆಳೆ-ಹತ್ತುಗಡೆಗಳನ್ನೂ ನೋಡದೆ ಕಲಹಮಾಡುವ ಎಡೆಯಲ್ಲಿ, ಪ್ರೇಮ-ಶಾಂತಿಗಳು ನೆಲೆಗೊಳ್ಳುವ ಬಗೆ ಹೇಗೆ?

★

ನಾವು ಜೀವನವನ್ನು ಆತ್ಮಿಕ ಆನಂದದಿಂದ ಸಾಗಿಸಲು ನಮಗೊಂದು ಆರ್ಥಿಕ ಆಧಾರ ಅವಶ್ಯವಾಗಿ ಬೇಕಾಗಿದೆ. ಅನಾದಿಯಿಂದಲೂ ಇದ್ದುದನ್ನೇ ಇಂದು, ನಾವು ಹುಡುಕುತ್ತ ಅಲೆಯ ಬೇಕಾಗಿದೆಯೇಕೆ? ಒಂದು ವೇಳೆ ಆ ಆಧಾರ ದೊರೆತರೂ ಅದು ನಮ್ಮ ಒಲವು-ನಲವುಗಳ ನೆಲೆಯಾಗಿರುವುದಿಲ್ಲವೇಕೆ? ಹಾಗೆ ಆಗುವುದಕ್ಕೇನು ಮಾಡಬೇಕು?—ಇವೆಲ್ಲ ಪ್ರಶ್ನೆಗಳ ಮೂಲವು ಬೆಳೆಯುತ್ತಿರುವ ಜನಸಂಖ್ಯೆಯಲ್ಲಿದೆ. ಆದರಿಂದ 'ಆರ್ಥಿಕ ಶಾಂತತೆಯ ಆದರ್ಶವನ್ನು ಪಡೆಯುವುದೆಂದರೆ ಜನಸಂಖ್ಯೆಯ ಸಮಸ್ಯೆಯನ್ನು ಬಿಡಿಸುವುದೇ' ಎಂದು ಹೇಳಬಹುದು.

'ಮಕ್ಕಳಿಲ್ಲದವರಿಗೆ ಗತಿಯಿಲ್ಲ' ಎಂದು ನಮ್ಮ ಶ್ರುತಿ-ಸ್ಮೃತಿಗಳು ಹೇಳುತ್ತಿರುವುವೇನೊ ನಿಜ; ಆದರೆ ಅದು ಆರ್ಯರು ಹಿಂದುಸ್ಥಾನಕ್ಕೆ ಬಂದು ನೆಲೆಯಾಗಿ ನಿಲ್ಲುವ ಕಾಲಕ್ಕೆ ಅಪೇಕ್ಷಣೀಯ ವಿಷಯವಾಗಿರಬಹುದು. ಹೆಚ್ಚಿಗೆ ಹುಡುಗರನ್ನು ಹೆತ್ತವರು ಸುದೈವಿಗಳೆಂದು ಆಗ ಗಣಿಸುತ್ತಿದ್ದರೆ, ಅಂತಹರನ್ನೇ ಇಂದು ಭಾಗ್ಯಹೀನರೆಂದು ಭಾವಿಸಬೇಕಾಗಿದೆ. 'ಮಕ್ಕಳು ಕೊಟ್ಟ ನೀರಿನಿಂದ ಸ್ವರ್ಗ ಸಂಪಾದಿಸುವೆ' ಎಂದು ನಂಬಿದ ಮಾನವರು, ಮೊದಲು ತಮ್ಮ ಮನೆಯ ಸ್ಥಿತಿಯನ್ನು ಕಣ್ದೆರೆದು ನೋಡಬೇಕು, ಸತ್ತ ಮೇಲೆ ಸಿಕ್ಕುವ ಸ್ವರ್ಗವಂತೂ ದೂರಕ್ಕೇ ಉಳಿಯಿತು; ವರ್ಷಕ್ಕೊಂದು ಮನೆಯಲ್ಲಿ ಕಟ್ಟಬೇಕಾದ ತೊಟ್ಟಿಲಿನಿಂದ ಮನೆಯೇ ಮೊದಲು ನರಕದಂತೆ ಭಾಸವಾಗುತ್ತದೆ. ಅದೇತಕ್ಕೆಂದರೆ ಇಂದಿನ ಜನಸಂಖ್ಯೆ ಮಿತಿಮೀರಿ ಬೆಳೆಯುತ್ತಲಿದೆ. ಹಿಂದಿನ ಜನಗಣನೆ ಮೂವತ್ತೈದು ಕೋಟಿಯದಾದರೆ ನಾಳೆಯದು ನಲವತ್ತು ಕೋಟಿಯನ್ನು ಮಿಕ್ಕಬಹುದು. ಜನಸಂಖ್ಯೆ ಬೆಳೆಯುವುದು ಭರದಿಂದ—ಅವಶ್ಯಕ ಆಹಾರದ ಹುಟ್ಟುವಳಿ ನಿಧಾನವಾಗಿ! ಎಂದರೆ ಜನಸಂಖ್ಯೆಯ ಬೆಳವಣಿಗೆಯ ಕ್ರಮ ಒಂದಕ್ಕೆರಡು (೧, ೨; ೪, ೮) ಉತ್ಪನ್ನದ ಬೆಳವಣಿಗೆಯು ಒಂದೊಂದರಂತೆ (೧, ೨, ೩, ೪) ಮಾತ್ರ. ಆದರಿಂದ ಇಂದು ಸುಖೋಪಭೋಗಿಯಾದ ಕುಟುಂಬ ಮುಂದಿನ ವರ್ಷ ಮಧ್ಯಮತರಗತಿಯದಾಗಬೇಕಾಗುವುದು. ಹೀಗಾದಾಗಲೂ ಸುಖದಲ್ಲಿ ಕೊರತೆ ಬೀಳಲಿಕ್ಕಿಲ್ಲ. ಆದೇ ಮತ್ತೊಂದು ವರ್ಷ ಹೋಗಲು ಕೈ ಬಿಗಿಹಿಡಿಯಬೇಕಾಗುವುದು. ಮತ್ತೆ ವರ್ಷ ಕಳೆಯಿತೆಂದರೆ ಅರೆಹೊಟ್ಟೆಯ ಅನ್ನದಿಂದ ತೃಪ್ತಿ ಹೊಂದುತ್ತಿರಬೇಕಾಗುವುದು. ಆ ಮುಂದಿನ ದಿನಗಳ ಸ್ಥಿತಿ ಇಂದಿನ ಹಿಂದುಸ್ಥಾನದ ಸ್ಥಿತಿಯು! ಅಂತೆಯೆ ಬೆಳೆಯುತ್ತಿರುವ ಈ ಜನಸಂಖ್ಯೆ ಮಾನವಕುಲವನ್ನು ಸಂಹರಿಸುವ ಯುಕ್ತಿಯನ್ನು ಮುಂದೊಡ್ಡುತ್ತಲಿದೆ.

ಹೊಲದೊಳಗೆ ಬಿತ್ತಿ ಬೆಳೆಯಿಸುವ ಬೆಳೆಯೂ ಜನಾಂಗದ ಏಕಾಂತಜೀವನವೂ ಸರಿಹೋಲುವಂತಿವೆ. ಏಕೆಂದರೆ ಇವೆರಡೂ ಇರುವ ರೀತಿಯು ನಿಸರ್ಗಕ್ಕೆ ಪ್ರತಿಕೂಲವಾಗಿರುವುದು. ಹೇಗೆಂದರೆ ಸ್ವಲ್ಪ ಕಾಲದ ಗುರಿಯಿಂದಲೆ ಅಲ್ಲದೆ ನಿರಂತರ ಜೀವನದ ನಲುವಾಗಿ ಹೋರಾಡುವುದು; ನಿಸರ್ಗದ ನಿಯಮ. ಒರಿಯೆ ಜೀವಿತಕ್ಕಾಗಿ ಹಣಗಾಡುವುದು ಏಕಾಂತದ ಎಂದರೆ ಸುಸಂಸ್ಕೃತತೆಯ ನಿಯಮ. ಸಂಸ್ಕೃತ ಜೀವನಪದ್ಧತಿಯೂ, ಹೊಲದೊಳಗಿನ ಬಿತ್ತಿ ನೀರುಣ್ಣಿಸಿದ ಬೆಳೆಯ ಬಗೆಯೂ, ಜೀವನಕಲಹದಲ್ಲಿ ಹೋರಾಟ ಮಾಡುವಂತಹ ಪರಿಸ್ಥಿತಿಯನ್ನೇ ಪಲ್ಲಟಿಸುತ್ತವೆ. ಸಂಸ್ಕೃತ ಜೀವನಪದ್ಧತಿ, ನಿಸರ್ಗನಿಯಮ ಇವುಗಳಲ್ಲಿ ಸಾಮರಸ್ಯ, ಸಮನ್ವಯಗಳನ್ನುಂಟುಮಾಡುವುದೇ ಏಕಾಂತತತ್ತ್ವವಾದಿಗಳ ಆದ್ಯಕರ್ತವ್ಯವಾಗಿದೆ.

ಹೊಲದೊಳಗೆ ಹೆಚ್ಚಾಗಿ ನಾಟಿರುವ ಸಸಿಗಳನ್ನು ಒಕ್ಕಲಿಗ ಸಕಾಲಕ್ಕೆ ಕಿತ್ತು ತೆಗೆಯದಿದ್ದಲ್ಲಿ, ಆ ಹೊಲಕ್ಕೆ ಹುಲ್ಲುಗಾವಲಿನ ಸ್ವರೂಪ ಬರಬಹುದು. ಮತ್ತು ಬೇಗನೆ ಆ ಸಸಿಗಳಲ್ಲಿ ಜೀವಿತಾರ್ಥವಾಗಿ ಕಲಹ ಹುಟ್ಟಿ, ಶಾಂತತೆ ಸಮೃದ್ಧಿಗಳು ನಷ್ಟವಾಗುವುವು. ಈ ಮಾತನ್ನು ಎಲ್ಲರೂ ಒಪ್ಪಬಹುದು. ಇದೇ ನಿಯಮವನ್ನು ಜನಾಂಗದ ಜನಸಂಖ್ಯೆಗೂ ಹಚ್ಚಬಹುದು. ಯಾವುದೇ ಜನಾಂಗದ ಜನಗಣನೆಯು ಪ್ರಮಾಣಮೀರಿ ನಿಂತರೆ, ಮತ್ತು ಆ ಹೆಚ್ಚಾದ ಜನಸಂಖ್ಯೆಯ ಯೋಗ್ಯವ್ಯವಸ್ಥೆ ಸಕಾಲಕ್ಕೆ ಆಗದೆ ಹೋದರೆ, ಜೀವನಕಲಹವು ಭಯಂಕರ ಸ್ವರೂಪವನ್ನು ತಾಳಿ, ಶಾಂತತೆ ನಷ್ಟವಾಗುವುದು ಖಂಡಿತ. ಅಲ್ಲದೆ ನೀತಿಯ ನಿಯಮಗಳೂ ನಷ್ಟವಾಗುವುದು ಖಚಿತ. ಗ್ರೀಸ್, ರೋಮ

ದೇಶಗಳ ಅವನತಿಯ ಮೂಲಕಾರಣಕ್ಕೆ ಅಲ್ಲಿಯ ಅಂದಿನ ಬೆಳೆದ ಜನಸಂಖ್ಯೆಯೇ ಸಾಕಷ್ಟು ಆಹಾರ-ಆಧಾರಗಳನ್ನು ಒದವಿಸಿ ಕೊಟ್ಟಿತು.

ಹಿಂದುಸ್ಥಾನದೊಳಗಿನ ಜನಸಂಖ್ಯೆ ಎಷ್ಟೋ ವರ್ಷಗಳಿಗೆ ಮೊದಲಿನಿಂದಲೆ ಏರುತ್ತ ಹೊರಟಿದೆ. ಅದರಿಂದ ಆಗುವ ಅನಿಷ್ಟವನ್ನು ಅಳಿಸಲಿಕ್ಕೆ ಯಾವ ಆಲೋಚನೆಯೂ ನಡೆದಂತಿಲ್ಲ. ಆದುದರಿಂದಲೆ ಹಿಂದುಸ್ಥಾನದಂತಹ ಆರ್ಥಿಕ ಅವನತಿಯನ್ನು ಹೊಂದಿದ ನಾಡು ಸದ್ಯದ ಜಗತ್ತಿನಲ್ಲಿ ಇನ್ನೊಂದಿರಲಾರದು. 'ಉತ್ಪನ್ನ ಕಡಿಮೆ; ಮನೆಯಲ್ಲಿ ತಿನ್ನಲು ಜನ ಹೆಚ್ಚು' ಇದು ಎಲ್ಲ ಮನೆತನಗಳಲ್ಲಿಯೂ ಕಾಣುವ ಸ್ಥಿತಿಯು. ಇದೇ ರಾಷ್ಟ್ರದ ಸುಖ-ಸಮೃದ್ಧಿಗಳ ಅಳತೆಗೋಲು. ಅಂತೆಯೆ ಇಲ್ಲಿರುವ ಶಾಂತತೆ ಸ್ಮಶಾನಶಾಂತತೆ. ನಾವೇನೋ ಮೊದಲಿನಿಂದಲೂ ಶಾಂತತಾಪ್ರಿಯರು ನಿಜ. ಆದರೆ ಈ ಬೆಳೆಯುತ್ತಿರುವ ಜನಸಂಖ್ಯೆಯಿಂದ ಆರ್ಥಿಕ ಅಧಃಪತನವಾಗಲು, ನಮ್ಮ ಸತ್ತ್ವಗುಣವು ಹೋಗಿ ತಮೋವೃತ್ತಿಯು ತಲೆ ಎತ್ತುತ್ತಲಿದೆ. ಆದರಿಂದ ಸ್ಪರ್ಧೆ-ಮತ್ಸರಗಳನ್ನು ಹತೋಟಿಯಲ್ಲಿಡಲಿಕ್ಕಾಗದಾಗಿದೆ. ಎಲ್ಲಿಯವರೆಗೆ ನಮ್ಮ ಜನಾಂಗ ಆರ್ಥಿಕ ಆದರ್ಶವನ್ನು ಪಡೆಯಲಾರದೊ ಅಲ್ಲಿಯವರೆಗೆ ಪ್ರೇಮಭಾವನೆ, ರಾಷ್ಟ್ರೀಯ ಐಕ್ಯಗಳು ಬರಿಯೆ ಕನಸು—ಕಲ್ಪನೆಗಳು! ಮೋಡದಲ್ಲಿ ಕಂಡ ಚಿತ್ರ!

ಯಾವ ಸಮಾಜದಲ್ಲಿ ಸುತ್ತಲಿನ ಜನಸಮೂಹ ದೈನ್ಯ-ದಾರಿದ್ರ್ಯಗಳಲ್ಲಿ ದಹಿಸುತ್ತಿರುವುದೊ, ಆ ಸಮಾಜದಲ್ಲಿ ನಿಃಸ್ವಾರ್ಥ ಬುದ್ಧಿ, ಪ್ರೇಮಭಾವನೆಗಳು ಉತ್ಕರ್ಷ ಹೊಂದಲಾರವು. ಇದು ಸಮಾಜಶಾಸ್ತ್ರದ ಸೂತ್ರ. ಪ್ರಖ್ಯಾತ ಆಂಗ್ಲ ಶಾಸ್ತ್ರಜ್ಞ 'ಮಾಲ್ಥಸ್' (೧೭೬೬-೧೮೩೪) ಎಂಬವನು ನಿರ್ಮಿಸಿದ ನಿಯಮವಿದು. ಸುತ್ತಲೂ ದೈನ್ಯ ಹಬ್ಬಿದಾಗ ಸಹಕಾರ-ಪ್ರೇಮಗಳ ಬೆಳವಣಿಗೆ ಬಯಸುವುದು ಆಷಾಢದಲ್ಲಿ ಬೀಜಗಳನ್ನು ಬಿತ್ತಿ ಬೇಡಿದಂತೆ; ಮಾಗಿಯಲ್ಲಿ ಹಾರುವ ಮಾವಿನ ಹಣ್ಣು ಬೇಡಿದಂತೆ.

ಒಂದು ಪದಾರ್ಥದ ಪರಮಾಣುಗಳು ಸಮಾಂತರವಿದ್ದು, ಒಂದರ ಕದಲುವಿಕೆಯಿಂದ ಮತ್ತೊಂದರ ಕದಲುವಿಕೆಗೆ ಅಡ್ಡಿಯಾಗದಿದ್ದರೆ ಮಾತ್ರ ಆ ಪದಾರ್ಥದಲ್ಲಿ ಸಮತೋಲ ಉಳಿಯುವುದು. ಇದು ವಿಜ್ಞಾನ ಶಾಸ್ತ್ರದ ಅಭ್ಯಾಸಕರಿಗೆ ಅರಿಯದುದಲ್ಲ. ಇದೇ ಮಾತು ನಮ್ಮ ಜನಾಂಗಕ್ಕೂ ಅನ್ವಯಿಸುತ್ತದೆ. ನಮ್ಮಲ್ಲಿಯ ಜನರಿಗೆ ಎರಡನೆಯವರ ಸುಖದ ದಾರಿಯಲ್ಲಿ ಮುಳ್ಳು ಹಾಸದೆ ಸುಖಸಂಪಾದಿಸುವುದಕ್ಕೆ ಈಗ ಅವಕಾಶವಿರುವುದೇ? ಅನ್ಯರಿಗೆ ಅಡ್ಡಿಯಾಗದಂತೆ ತನ್ನ ಸ್ವಾಭಾವಿಕವಾದ ಏಳ್ಗೆಯನ್ನು ಹೊಂದಲಿಕ್ಕೆ ಹಿಂದೀಯರಿಗೆ ಹಾದಿಯಿರುವುದೇ? ಇಲ್ಲವೇತಕ್ಕೆಂದರೆ ಹಿಂದುಸ್ಥಾನದ ಮೂವತ್ತೈದು ಕೋಟಿ ಜನರಲ್ಲಿ ಏಳು ಕೋಟಿ ಜನರು ಭಿಕ್ಷಾಶನಿಗಳಾದರೆ, ಅಷ್ಟೇ ಜನರು ಸುಧಾರಿಸಿದ ಸಾಲಿಗೆಯಿಂದ ಹೊಟ್ಟೆ ಹೊರಕೊಳ್ಳುವವರಿರುವರು. ಏಳು ಕೋಟಿ ಜನರು ಅಡಿ ಉಣ್ಣುವ ಬಾಲಕರಾದರೆ, ಕೆಲಸಕ್ಕೆ ಬಾರದ ಅಂಗಹೀನ ಶಕ್ತಿಹೀನರ ಸಂಖ್ಯೆ ಅವರನ್ನು ಸರಿಗಟ್ಟಬಹುದು. ಎಂದಮೇಲೆ ಸರಾಸರಿ ಏಳುಕೋಟಿ ಜನ ದುಡಿದು ಮೂವತ್ತೈದು ಕೋಟಿ ಜನರಿಗೆ ಜೀವನಾಂಶವನ್ನು ಒದಗಿಸಿ ಕೊಡಬೇಕು. ಆದುದರಿಂದ ಇಂತಹ ರಾಷ್ಟ್ರಗಳಲ್ಲಿ ಆರ್ಥಿಕಆದರ್ಶವನ್ನು ಪಡೆದು ತನ್ನ ಸಮತೋಲವನ್ನು ಕಾಯ್ದುಕೊಳ್ಳಲು ಬೇಗನೆ ಯೋಗ್ಯ ಉಪಾಯಗಳನ್ನು ಯೋಚಿಸಲಿಕ್ಕೆಬೇಕು. ಇಲ್ಲವಾದರೆ ನಿಸರ್ಗ ನಿಯಮವು ಭೂಕಂಪ, ಬರಗಾಲ, ಸಂಹಾರಕಸಮರ, ಮಹಾಮಾರಿ ಮೊದಲಾದುವುಗಳಿಂದ ಹೆಚ್ಚಾದ ಜನಸಂಖ್ಯೆಯ ಸಮಸ್ಯೆಯನ್ನು ಬಿಡಿಸಬಹುದು.

ಮಕ್ಕಳ ಮದುವೆ ಮಾಡುವುದು, ತಮ್ಮಂತೆ ಅವರೂ ಕುನ್ನಿಗಳಂತಹ ಕೂಸುಗಳನ್ನು ಹೆರುವುದು, ಮುಂದೆ ಅವುಗಳ ಹೊಟ್ಟೆ-ಬಟ್ಟೆಗಳಿಗಾಗಿ ದುಡಿದು ದೈನ್ಯದಿಂದ ದಿವಸಗಳನ್ನು ದೂಡಿ ಗುಲಾಮರಂತೆ ಸಾಯುವುದು.. ಇದೇ ಇಂದಿನ ನಮ್ಮ ಜನ-ಜೀವನದ ಗುರಿಯಾಗಿದೆ. ಇಂತಹ ಅನಿಷ್ಟ ಗುರಿಯನ್ನು ಆದಷ್ಟು ಬೇಗನೆ ಅಳಿಸಲಿಕ್ಕೆ ಬೇಕು. ನಮ್ಮ ಅವನತಿಗಾಗಿ ನಾವು ಹಿಂದೆ ಆಳಿದ ಮುಸಲ್ಮಾನರನ್ನೂ ಇಂದು ಆಳುತ್ತಲಿರುವ ಇಂಗ್ಲಿಷರನ್ನೂ ದೂರುತ್ತೇವೆ. ಒಮ್ಮೊಮ್ಮೆ ಧರ್ಮ, ಶಿಕ್ಷಣಪದ್ಧತಿಗಳ ಮೇಲೆಯೂ ಕಿಚ್ಚನ್ನು ಕಾರುತ್ತೇವೆ. ಆದರೆ ಇವುಗಳಲ್ಲಿ ಇರುವ ಸತ್ಯಾಂಶ ಸ್ವಲ್ಪ; ಲಗ್ನಪದ್ಧತಿಯಲ್ಲಿರುವುದು ಹೆಚ್ಚು.

ಲಗ್ನಸಂಸ್ಥೆ ಸಮಾಜಸ್ವಾಸ್ಥ್ಯಕ್ಕಾಗಿ ನಿರ್ಮಿತವಾದುದು. ಅದರ ಸತ್ಯಸ್ವರೂಪವನ್ನು ಅರಿಯದೆ ನಾವು ಇಂದು ಅಧೋಗತಿಗೆ ಇಳಿಯುತ್ತಲಿದ್ದೇವೆ. ಯಾರಿಗೆ ಸ್ವಂತದ ಹೊಟ್ಟೆಯನ್ನು ಹೊರ-ಕೊಳ್ಳುವ ಸಾಮರ್ಥ್ಯವು ಇಲ್ಲವೋ, ಅಂತಹರ ಮದುವೆಮಾಡುವುದೆಂದರೆ ಕುಂಟನಿಗೆ ಕಾಲ್ಬಳೆ ತೊಡಿಸಿದಂತಾಗುವುದು ಅವರೇ ಆರ್ಥಿಕಸ್ವಾತಂತ್ರ್ಯದ ಆಧಾರವನ್ನು ಹಿಡಿದು ನಿಂತಮೇಲೆ, ಅವಶ್ಯಕವೆನಿಸಿದರೆ ಮದುವೆಮಾಡಿಕೊಳ್ಳಬಹುದು; ಇಲ್ಲವೆ ಬಿಡಬಹುದು. ಹಾಗೆ ಅರಿತು ವರಿಸಿದ ತರುಣ-ತರುಣಿಯರು ತಮ್ಮ ತಾರುಣ್ಯವನ್ನು ಬರಿಯೆ ಜನಸಂಖ್ಯೆಯ ಬೆಳವಣಿಗೆಯಲ್ಲಿಯೆ ವೆಚ್ಚಮಾಡಲಿಕ್ಕಿಲ್ಲ. ಮಾಡಲೂ ಬಾರದು. ಅವರು ತಮ್ಮ ಹದಿನೆಂಟರ (ವಯಸ್ಸು) ಹುರುಪನ್ನು ಹಳಸದಂತೆ ಕಡೆತನಕ ಕಾಯ್ದುಕೊಂಡು, ಅದರಿಂದ ತನ್ನ ನಾಡು-ನುಡಿಗಳಿಗೆ ತೆರಬೇಕಾದ ತೆರಿಗೆಯನ್ನು ಸಲ್ಲಿಸುತ್ತ ಸಾಗಬೇಕು. ಆಗಲೆ ಶಾಂತಿ, ಸುಖ!

ಸುದ್ದಿಯನ್ನು ಸುರಿಸುವ ಸಂಸ್ಥೆಗಳು

(ಜಯಂತಿಯ ಜೀನ್ನೋಣ)

ಇಂದಿನ ವೃತ್ತಪತ್ರಗಳನ್ನೋದಲು ತೊಡಗಿದಾಗ, ನಮಗೆ ದ್ದು ಕಾಣುವ ಪ್ರಪಂಚದ ಸುದ್ದಿಗಾರಸಂಸ್ಥೆಯೆಂದರೆ ರಾಯುಟರ್' ಸಂಸ್ಥೆಯು. ಇದನ್ನು ಬಿಟ್ಟು ಬೇರೆ ಕೆಲವು ಸ್ಥೆಗಳ ಹೆಸರುಗಳನ್ನೂ ನಾವು ಕಾಣುತ್ತೇವೆ; ಆದರೆ ನಮ್ಮ ಶದಲ್ಲಿ ಜಗತ್ತಿಗೆ ಸುದ್ದಿ ಕಳಿಸುವಂತಹ ವ್ಯಾಪಕಸಂಸ್ಥೆಯಿಲ್ಲವಲ್ಲ ದೆನಿಸುತ್ತದೆ. '**ರಾಯುಟರ್**' ಸಂಸ್ಥೆಯವರು ಜಗತ್ತಿಗೆ ದ್ದಿಗಳನ್ನು ಕಳುಹುವ ಏರ್ಪಾಡನ್ನು ಮಾಡಿದ್ದರೂ, ಇವರು ಳುಹುವ ಎಲ್ಲ ಸುದ್ದಿಗಳೂ ಇವರ ಪ್ರತಿನಿಧಿಗಳಿಂದಲೇ ಬಂದುವು ರುವುದಿಲ್ಲ. ಬೇರೆ ಬೇರೆ ದೇಶದ ಸುದ್ದಿ-ಸಂಸ್ಥೆಗಳ ಸಂಗಡ ಳಕೆಯನ್ನು ನಡೆಯಿಸಿ, ಅವರಿಂದ ಸುದ್ದಿಗಳನ್ನೂ ಸಂಗತಿಗಳನ್ನೂ ಸಿಕೊಂಡು, ಆಯಾ ಪತ್ರಿಕೆಗಳಿಗೆ ಹಂಚುವ ವ್ಯವಸ್ಥೆಯನ್ನು ಾಯುಟರ್ ಸಂಸ್ಥೆಯವರು ಾಡುವರು. ಜಪಾನ್-ನಾಗಳ ಸುದ್ದಿಯನ್ನು **ಡೊಮಾಯ್**' ಸಂಸ್ಥೆಯಿಂದ ಪಡೆಯುವರು; ್ರಾನ್ಸದ ಸುದ್ದಿಯನ್ನು **ಹಾವಾಸ**' ಸಂಸ್ಥೆಯಿಂದ ಂಪಾದಿಸುವರು; ರೋಮ ಲ್ಲಿಯ ವ್ಯವಹಾರವು ್ಟೆಫಾನಿ' ಸಂಸ್ಥೆಯಿಂದ ತ್ತಾಗುವುದು. ರೊಮಾನಿಯಾದಿಂದ '**ರೇಡರ್**' ಸ್ಥೆಯು ಸುದ್ದಿಯನ್ನು ಕಳುಹುವ ಏರ್ಪಾಡುಮಾಡಿರುವುದು. ಗತ್ತಿನ ಎಲ್ಲ ಭಾಗಗಳ ಸುದ್ದಿಸಂಗತಿಗಳೂ ಈ ಸಂಸ್ಥೆಗಳ ಮೂಲಕ ಎಲ್ಲ ದೇಶಗಳಿಗೆ ಹಂಚಲ್ಪಡುತ್ತಿರುವುದರಿಂದ, ದೇಶ-ದೇಶಗಳಲ್ಲಿ ನಡೆದ ಘಟನೆಗಳ ಅರಿವು ಬೇಗನೆ ಆಗುವುದು. ಕೇಳಿದ ಜನಸಮಾಜದಲ್ಲಿ ತಿಳಿವಳಿಕೆ ಹೆಚ್ಚುವುದು.

ಈ ಸುದ್ದಿಯ ಸಂಸ್ಥೆಗಳು, ಜಗತ್ತಿನ ಸಾಮಾಜಿಕ ಜೀವನದಲ್ಲಿಯೆ ಒಂದು ಬಗೆಯ ಕ್ರಾಂತಿಯನ್ನುಂಟುಮಾಡಿವೆ. ಮ್ಮೊಮ್ಮೆ ಒಂದೊಂದು ಸಂಸ್ಥೆಯಿಂದ ಬಂದ ಸುದ್ದಿಯು ಬೇರೆ ರೆಯಾಗಿರುವುದರಿಂದ, ಸಂಶಯುಕ್ಕೆ ಸ್ವಲ್ಪ ಆಸ್ಪದವೇನೊ ಉಂಟಾದರೂ, ಅದು ಆ ಸುದ್ದಿಯ ತಪ್ಪುತನದ ದ್ಯೋತಕವಾಗಿರದೆ, ದೇಶದ ದೃಷ್ಟಿಕೋಣದ ಪರಿಚಯುವನ್ನು ಮಾಡಿಕೊಡುವುದು. ಇಂದಿನ ನಮ್ಮ ವೃತ್ತಪತ್ರಗಳು ಸಾಮಾನ್ಯಮನುಷ್ಯನ ಆರ್ಥಿಕ ಪರಿಸ್ಥಿತಿಗೆ ಅನುಕೂಲವಾಗುವಂತೆಯೂ ಸಿಕ್ಕುವುದು, ಕೇವಲ ಈ ಸುದ್ದಿಯ ಸಂಸ್ಥೆಗಳು ಸಾಹಾಯ್ಯಮಾಡುತ್ತಿರುವುದರಿಂದಲೆ. ವೃತ್ತಪತ್ರಗಳನ್ನು ಜನತೆಗೆ ಹೆಚ್ಚು ರುಚಿಸುವಂತೆ, ಸೇರುವಂತೆ ಮಾಡುವುವು ಈ ಸುದ್ದಿಯ ಸಂಸ್ಥೆಗಳು.

ಹಿಂದಿನ ಕಾಲದಲ್ಲಿ ಒಂದು ಹಳ್ಳಿಯ ಸುದ್ದಿ ತೀರ ನೆರೆಯ ಹಳ್ಳಿಗೆ ಕೂಡ ಬೇಗನೆ ತಿಳಿಯುವ ಸಂಭವವಿರುತ್ತಿದ್ದಿಲ್ಲ; ಇಂದು ಹಾಗಲ್ಲ. ಜನತ್ತಿನ ಮೂಲೆಮೂಲೆಗಳಲ್ಲಿಯ ಮಹತ್ತ್ವದ ಸುದ್ದಿ-ಸಂಗತಿಗಳೆಲ್ಲ, ಈ ಸುದ್ದಿಯ ಸಂಸ್ಥೆಗಳ ಮುಖಾಂತರ ಜಗತ್ತಿನ ಎಲ್ಲ ಭಾಗಗಳಲ್ಲಿಯೂ ತಿಳಿಸಲ್ಪಡುತ್ತವೆ. ೧೯ನೆಯ ಶತಮಾನದ ಮೊದಲರ್ಧದಲ್ಲಿ ಈ ತರದ ವ್ಯವಸ್ಥೆ ಇರಲಿಲ್ಲ. ಔದ್ಯೋಗಿಕ ಯುಗದ ಬೆಳೆವಣಿಗೆಯಿಂದ ಅನೇಕ ಸಂಶೋಧನೆಗಳು ಒದಗಿ ಬಂದುವು. ಹಾಗೆ ಬಂದುವುಗಳಲ್ಲಿ 'ತಂತಿಯಂಚೆ (ಟೆಲಿಗ್ರಾಫ್)' ಒಂದು. ನಮ್ಮ ದೇಶದಲ್ಲಿ ಈ ತಂತಿಯಂಚೆಯ ಯಂತ್ರಗಳನ್ನು **ಲಾರ್ಡ್ ಡಾಲ್‌ಹೌಸಿಯ** ಕಾಲಕ್ಕೆ ನಿರ್ಮಿಸಿದಾಗ, ನಮ್ಮ ಜನತೆ-ಭಾವಿಕತನದ ಮೂಲಕವೊ ಏನೊ— **ಆ ತಂತಿಗಳನ್ನು** 'ಬ್ರಿಟಿಶರು ನಮ್ಮ ಕೊರಳಿಗೆ ಹಾಕುತ್ತಿರುವ ತಂತಿಯ ಪಾಶಗಳು' ಎಂದು ತಿಳಿದುಕೊಂಡರಂತೆ. ಈ ಸಂದರ್ಭದಲ್ಲಿ W. B. **ಬಶೊನೆಸಿ** ಅವರ ಪ್ರಯೋಗವನ್ನು ಹೇಳುವುದವಶ್ಯ. ೧೮೩೯ರಲ್ಲಿ ಅವರು ಗವ್ಹರ್ನರ್ ಜನರಲ್ಲರ ಅಪ್ಪಣೆ ಪಡೆದು, **ಕಲಕತ್ತೆಯಿಂದ ಡಾಯಮಂಡ್** ಬಂದರದ ವರೆಗೆ ತಂತಿಯಂಚೆಯನ್ನು ನಿರ್ಮಿಸಿದರು. ಅದು " ಗ್ಯಾಲ್ವಾನೊಸ್ಕೋಪ್ " ಮಾದರಿಯ ಯಂತ್ರದ ಸಹಾಯದಿಂದ ನಡೆಯುತ್ತಿದ್ದಿತು. ೧೮೫೭ರಲ್ಲಿ **ಮೋರ್ಸ್‌ರ** ಸಂಶೋಧನೆಯು ಮುಂದೆ ಬಂದು, ಆ ಮೊದಲಿನ ಪದ್ಧತಿಯು ಹಿಂದೆಬಿತ್ತು.

ರಾಯುಟರ್ ಸಂಸ್ಥೆಯ ಇತಿಹಾಸವು ೧೮೪೯ರಿಂದಲೆ ಪ್ರಾರಂಭವಾಗುವುದು. ಅದೇ ವರುಷ **ಜೂಲಿಯಸ್ ರಾಯುಟರ್** ಎಂಬವನು ಫ್ರಾನ್ಸ್, ಬೆಲ್ಜಿಯಮ್ ಮತ್ತು ಜರ್ಮನಿಗಳ ನಡುವೆ ಸುದ್ದಿಗಳನ್ನು ಹಂಚುವ ಸಂಸ್ಥೆಯನ್ನು ಪ್ರಾರಂಭಮಾಡಿದನು.

ಪರದೇಶದ ಹಲವು ಪದಾರ್ಥಗಳಿಗಾಗಿ ಹಿಂದುಸ್ತಾನಂದಿದ ಹೊನ್ನಿನ ಹೊಳೆ ಹರಿದು ಹೋಗುವಂತೆ, ಸುದ್ದಿಗಳಿಗಾಗಿಯೂ ನಮ್ಮ ದುಡ್ಡು ಸಾವಿರ ಸಾವಿರದೆಣಿಕೆಯಲ್ಲಿ ಸರಿದು ಹೋಗುತ್ತಲಿದೆ. ಆ ದುಡ್ಡು ಪರದೇಶದ ಯಾವಯಾವ ಸಂಸ್ಥೆಗಳ ಬಾಯಲ್ಲಿ ಬೀಳುವುದೆಂಬುದನ್ನು ಅರಿತುಕೊಳ್ಳಬೇಕಲ್ಲವೇ ? ಹಾಗಾದರೆ ಇದನ್ನೋದಿರಿ!

ವ್ಯಾಲೆರ್ನಿಯರ್ಸ್ ಮತ್ತು ಎ-ಲಾ-ಶಾಪೆಲ್‌ಗಳ ನಡುವೆ ತಂತಿಯಂಚೆ ಇರದ ಮೂಲಕ, ಪಾರಿವಾಳಗಳ ಸಹಾಯದಿಂದ ಸುದ್ದಿಗಳನ್ನು ಕಳಿಸಲಾಗುತ್ತಿತ್ತು.

ಜೂಲಿಯಸ್ ರಾಯಟರನು ಜರ್ಮನ್ ಮನುಷ್ಯ. ಮೊದಲು ಅವನು ಒಂದು ಬ್ಯಾಂಕಿನಲ್ಲಿ ಕಾರಕೂನನಾಗಿ ಕೆಲಸಮಾಡುತ್ತಿದ್ದನು. ಆದರೆ **ಗೊಟಿಂಜೆನ್**‌ನಲ್ಲಿ ವೈಜ್ಞಾನಿಕನಾದ **ಕಾರ್ಲ್ ಫ್ರೆಡ್‌ರಿಕ್ ಗಾಸ್** ಎಂಬವನ ಸಂಶೋಧನೆಗಳೂ ಪ್ರಯೋಗಗಳೂ ಇವನ ಮನವನ್ನಾಕರ್ಷಿಸಿದುವು. ಫ್ರಾನ್ಸ್ ದೇಶದಲ್ಲಿಯ ರಾಯಟರನ ಪ್ರಯತ್ನಗಳು ಯಶಸ್ವಿಯಾಗಲಿಲ್ಲವಾದ ಕಾರಣ ಅವನು ಇಂಗ್ಲಂಡಿಗೆ ಪ್ರಯಾಣಬೆಳಸಿದನು. ಅಲ್ಲಿ ಇಂಗ್ಲಂಡ್ ನಾಗರಿಕತ್ವವನ್ನು ಪಡೆದು, ಇಂದು ಹೆಸರುವಾಸಿಯನ್ನು ಪಡೆದಿರುವ ಅಂತರರಾಷ್ಟ್ರೀಯ ಸುದ್ದಿಯ ಸಂಸ್ಥೆಯನ್ನು ಸ್ಥಾಪಿಸಿದನು. ಅದು ಅವನ ಹೆಸರಿನಲ್ಲಿಯೆ ಇದೆ. **ಡೊವ್ಹರ್** ಮತ್ತು **ಕ್ಯಾಲೆ**ಗಳ ನಡುವೆ **ಕೇಬಲ್**‌ವ್ಯವಸ್ಥೆಯಾಗಿ ಅವರಿಗೆ ಅನುಕೂಲವಾಗಿದ್ದರೂ, ತಮ್ಮ ಸುದ್ದಿಗಳನ್ನು ಸ್ವೀಕರಿಸಲು ವೃತ್ತಪತ್ರಗಳ ಮನವೊಲಿಸುವುದಕ್ಕಾಗಲಿಲ್ಲ. ಅವರ ಕಾರ್ಯ ಪ್ರಾರಂಭವಾದುದು ನಿಜವಾಗಿಯೂ ೧೮೫೧ ರಿಂದಲೆ. ಲಂಡನಿನ **ಟಾಯಿಮ್ಸ್** ಪತ್ರಿಕೆಯು, ಫ್ರಾನ್ಸದ ಮೂರನೆಯ ನೆಪೋಲಿಯನ್ನನು ಫ್ರಾನ್ಸದಲ್ಲಿ ಮಾಡಿದ ಭಾಷಣವನ್ನು, ರಾಯಟರ್ ಸುದ್ದಿಗಾರನು ಕಳುಹಿದುದನ್ನು ಪ್ರಸಿದ್ಧಮಾಡಿತು. ಅಷ್ಟು ಬೇಗನೆ ಸುದ್ದಿಬಂದುದು ಜನರಿಗೆ ಅಚ್ಚರಿ; ಕುತೂಹಲ. ಈ ಕುತೂಹಲವೆ ಮುಂದೆ ಈ ಸುದ್ದಿಯ ಸಂಸ್ಥೆಗೆ ಪ್ರಚೋದನೆಯನ್ನು ಕೊಟ್ಟಿತು. ಅಮೇರಿಕೆಯಲ್ಲಿ ಯಾದವೀಕಲಹವು ಪ್ರಾರಂಭವಾದೊಡನೆಯೆ, ಅದಕ್ಕೆ ಇನ್ನಿಷ್ಟು ಪುಟಸಿಕ್ಕಿತು. ಹಡಗುಗಳು ಸುದ್ದಿಗಳನ್ನು ತರುವುದಕ್ಕೆ ಮುಂಚಿತವಾಗಿಯೆ ರಾಯಟರ್ ಸಂಸ್ಥೆಯವರು ಸುದ್ದಿಗಳನ್ನು ಸಲ್ಲಿಸಿರುತ್ತಿದ್ದರು.

ದೊಡ್ಡ ದೊಡ್ಡ ಜನರು ರಾಯಟರನಿಗೆ ಗೆಳೆಯರಾದರು. **ಸ್ಯಾಕ್ಸೆಕೊಬರ್ಗ್-ಗೋಥಾ**ದ ಡ್ಯೂಕನು ಇವನಿಗೆ '**ಬಾರನ್**' ಎಂಬ ಪದವಿಯನ್ನು ದಯೆಪಾಲಿಸಿದನು. **ವ್ಹಿಕ್ಟೋರಿಯಾ ಮಹಾರಾಣಿ**ಯವರ ಅನುಮತಿಯಿಂದ ಆ ಪದವಿಯು ಪರಂಪರಾಗತವಾಗಿ ನಡೆಯಬಹುದೆಂದು ನಿರ್ಧರಿಸಲಾಯಿತು. ರಾಯಟರನು ೭೩ ವಯಸ್ಸಿನ ವರೆಗೆ ಜೀವಿಸಿದನು. ಅವನು ತನ್ನ ಜೀವಮಾನದಲ್ಲಿಯೆ ಜಗತ್ತಿನಲ್ಲಿ ತನ್ನದೆ ಆದ ಒಂದು ಸ್ಥಾನವನ್ನು ಪಡೆದಿದ್ದನು. ಅವನ ಕೀರ್ತಿಯು ಪೂರ್ವದಲ್ಲಿಯೂ ಹಬ್ಬಿತು. **ತೆಹರಾನ**ದಲ್ಲಿ ಇವನಿಗೆ ಒಂದು ಬ್ಯಾಂಕನ್ನು ತೆರೆಯುವ ಸವಲತ್ತು ಸಿಕ್ಕಿತು. ಇವನ ಬರುವಿಕೆಯಿಂದಲೆ **ಇರಾಣ**ದಲ್ಲಿ ಬ್ಯಾಂಕಿಂಗಿನ ಇತಿಹಾಸ ಪ್ರಾರಂಭವಾಯಿತೆನ್ನಬಹುದು. ಜೂಲಿಯಸ್ ರಾಯಟರನು ೧೮೯೯ ರಲ್ಲಿ ತೀರಿದನು.

ರಾಯಟರ್ ಸಂಸ್ಥೆಯು ೧೮೬೫ ರಲ್ಲಿ ಪಾಲುಗಾರಿಕೆಯ ಸಂಸ್ಥೆ (Joint stock company) ಯಾಗಿತ್ತು. ೧೮೭೮ ರಲ್ಲಿ ಅದರ ಆಡಳಿತವು ಪ್ರೆಸ್ ಅಸೋಸಿಯೇಶನಿನವರ ಸ್ವಾಧೀನವಾಯಿತು. ೧೯೧೫ರಲ್ಲಿ ಜೂಲಿಯಸನ ಹಿರಿಯಮಗ **ಹರ್ಬರ್ಟ**ನು ಕಾಲವಾದಮೇಲೆ, **ಸರ್ ಫ್ರೆಡರಿಕ್ ಜೋನ್ಸ**ನು ಆ ಕಂಪನಿಯ ಮುಖ್ಯ ಸಂಚಾಲಕನಾದನು. ಇಂದಿಗೂ ಅವನೇ ಆ ಸ್ಥಾನದಲ್ಲಿ ಇದ್ದಾನೆ. ರಾಯಟರ್ ಸಂಸ್ಥೆಯು ಇಂದು ಅತಿಶಯವಾದ ಮೇಲ್ಮಟ್ಟಕ್ಕೆ ಮುಟ್ಟಿದೆ. ರಾಜಕೀಯ—ವ್ಯಾವಹಾರಿಕ ಸುದ್ದಿಗಳನ್ನು ಸಂಚಯಿಸುವುದಲ್ಲದೆ, ಜಗತ್ತಿನಲ್ಲಿಯೆ ದೊಡ್ಡದಾದ **ವಾಯರ್‌ಲೆಸ್ ಸ್ಟೇಶನ**ನ್ನು ಸ್ಥಾಪಿಸಿ, ಒಂದೇಕಾಲದಲ್ಲಿ ಎಲ್ಲ ದೇಶಗಳ ರಾಜಧಾನಿಗಳಿಗೂ ಸುದ್ದಿ ಮುಟ್ಟುವಂತೆ ಏರ್ಪಾಡನ್ನು ಮಾಡಲಾಗಿದೆ.

ಪಾಶ್ಚಾತ್ಯರನ್ನು ಅನುಕರಣಮಾಡುವುದರಲ್ಲಿ ಮೊದಲನೆಯ ಸ್ಥಾನವನ್ನು ಪಡೆದ ಜಪಾನಿಗಳು, ಈ ಸುದ್ದಿಗಳಿಂದ ತಮ್ಮ ವೃತ್ತಪತ್ರವ್ಯವಸಾಯವನ್ನು ಮುಂದುವರಿಸಿದರು. ಮತ್ತು ಅಂತಹದೊಂದು ಸುದ್ದಿಯ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಹವಣಿಸಿ, ೧೮೮೮ ರಲ್ಲಿ **ಟೈ-ಕೊ-ಕು ಟುಶಿನ್** ಎಂಬ ಸಂಸ್ಥೆಯನ್ನು ಸ್ಥಾಪಿಸಿಕೊಂಡರು.

ಇಂದು ಪ್ರಚಾರದಲ್ಲಿದ್ದು ಪ್ರಸಿದ್ಧಿಯನ್ನು ಪಡೆದಿರುವ **ಡೋಮಾಯ್** ಸಂಸ್ಥೆಯು, ೧೯೩೬ ರಲ್ಲಿ ಹೊಸ ಹೆಸರನ್ನು ಪಡೆಯಿತು. ಅದು ಮೊದಲು ಕೆಲಸಮಾಡುತ್ತಿದ್ದ ಶಿಂಬುನ್ ರಿಂಗೊ-ಟುಶಿನ್‌ಶಾ ಎಂಬ ಎರಡು ಸಂಸ್ಥೆಗಳ ಸಂಯೋಗದಿಂದ ಉಂಟಾಗಿದೆಯಲ್ಲದೆ, ಜಗತ್ತಿನ ಉಳಿದ ಎಲ್ಲ ಸುದ್ದಿಯ ಸಂಸ್ಥೆಗಳೊಂದಿಗೂ ಬಳಕೆಯನ್ನಿಟ್ಟುಕೊಂಡಿದೆ.

ಫ್ರಾನ್ಸದ ಸುದ್ದಿಯ ಸಂಸ್ಥೆಗೂ ಒಂದು ಇತಿಹಾಸವಿದೆ. ಅಲ್ಲಿ, ಮಹಾಮಂತ್ರಿ **ರಿಚಲೂ**ನ ಕಾಲದಿಂದಲೂ ಸುದ್ದಿಸಂಸ್ಥೆ ನಡೆದುಕೊಂಡು ಬಂದಿದೆ. ಇಂದಿನ **ಹಾವಾಸ್** ಸಂಸ್ಥೆಯು ಮಾತ್ರ ೧೮೩೫ ರಲ್ಲಿ **ಲುಯಿ ಫಿಲಿಪ್ಪ**ನ ಆಳಿಕೆಯಲ್ಲಿ ಸ್ಥಾಪಿತವಾಯಿತು.

ಇದರ ಶ್ರೇಯಸ್ಸು **ಚಾರ್ಲ್ಸ್ ಹವಾಸ**ನಿಗೆ ಸಲ್ಲತಕ್ಕದ್ದು. ಅವನೊಬ್ಬ ಸಿರಿವಂತನಾದ ವರ್ತಕ. ವೃತ್ತಪತ್ರಗಳಿಗೆ ಸುದ್ದಿಯನ್ನು ಸಂಚಯಿಸಿ ಕಳುಹುವ ಹವ್ಯಾಸ ಅವನಿಗೆ ಇತ್ತು. ಆ ಸಂಸ್ಥೆಯು ದಿನದಿನಕ್ಕೂ ಪ್ರಗತಿಹೊಂದಿ, ಇಂದು ಅಧಿಕಾರಿಗಳ ಸಹಾಯದೊಂದಿಗೆ ಜಗತ್ತಿನಲ್ಲಿಯ ಒಂದು ಗಣನೀಯವಾದ ಸುದ್ದಿಯ ಸಂಸ್ಥೆಯೆಂದು ಮೆರೆಯುತ್ತಲಿದೆ. ಹವಾಸ್ ಸಂಸ್ಥೆಯು ಸುದ್ದಿಯನ್ನು ಬಿಡುವುದೆಂದರೆ ಯಾವುದೆ ಒಂದು ಪತ್ರಿಕೆಗೆ ದೊಡ್ಡ ಕೊರತೆ ಇದ್ದಂತೆ. ಹೀಗಿರುವುದರಿಂದಲೆ ಹವಾಸ್ ಸಂಸ್ಥೆಯು ವಿಶಿಷ್ಟವಾದ ಪರಿಸ್ಥಿತಿಯನ್ನು ಪಡೆದುಕೊಂಡಿದೆ. ಫ್ರಾನ್ಸದಲ್ಲಿ ವೃತ್ತಪತ್ರಗಳ ಭಾಷೆಯೇ ಸಾಹಿತ್ಯದ ಭಾಷೆಯು. ಸಾಹಿತ್ಯವು ವೃತ್ತಪತ್ರದ ಮಾದರಿಯಲ್ಲಿಯೆ ಇದೆ ಎಂಬುವಷ್ಟು ಸಹಜಭಾಷೆಯಲ್ಲಿದೆ. ಫ್ರಾನ್ಸದ ಮಂತ್ರಿಯಾದ ಕ್ಲೆಮೆನ್ಸೊ ಅವರು ಒಮ್ಮೆ ಹೇಳಿದುದರಲ್ಲಿ ಸಾಕಷ್ಟು ತಥ್ಯವಿದೆ:

ಬಳ್ಳಿಯರಾದ ಲೆಕ್ಕಣಿಕೆ, ಕಾಗದಗಳಿಂದ ಯಾರೊಬ್ಬರು ಜಗತ್ತಿನ ಸಾರ್ವಭೌಮತ್ವವನ್ನೂ ಪಡೆಯಬಹುದು!''

ರಾಯಟರ್‌ಸಂಸ್ಥೆಗಿಂತ ಹವಾಸ್‌ನವರು ೨೫ ವರ್ಷಕ್ಕೆ ಮುಂಚಿತವಾಗಿಯೆ ಕಾರ್ಯವನ್ನಾರಂಭಿಸಿದ್ದರೂ, ರಾಯಟರಿನವರು ಜಗತ್ತಿನಲ್ಲಿಯೆ ಪ್ರಧಾನಸ್ಥಾನವನ್ನು ಪಡೆದಿದ್ದಾರೆ; ಮತ್ತು ಲಂಡನ್‌ನಗರವು ಜಗತ್ತಿಗೇ ಸುದ್ದಿ ಹಂಚುವ ಕೇಂದ್ರವಾಗಿದೆ. ರಾಯಟರ್ ಸಂಸ್ಥೆಯು ಸ್ಥಾಪಿತವಾಗುವ ಕಾಲಕ್ಕೆ ಎಂದರೆ ೧೮೫೩ ರಲ್ಲಿ, ಇಟಲಿಯ ಸುದ್ದಿಯ ಸಂಸ್ಥೆಯಾದ 'ಎಜೆನ್ಸಿಯಾ ಸ್ಟಿಫಾನಿ' ಎಂಬುದು ಸ್ಥಾಪಿತವಾಯಿತು. ಇಂದು ಅದೇ ಫ್ಯಾಸಿಸ್ಟ ಆಡಳಿತದ ಮುಖವಾಗಿದೆ. ಜರ್ಮನಿಯ ಸುದ್ದಿಯ ಸಂಸ್ಥೆಯಾದ **ಊಲ್ಫ್‌ಟೆಲಿಗ್ರಾಫ್ ಬೀರೊ'** ಎಂಬುದು, ೧೯೩೩ರಲ್ಲಿ ಟೆಲಿಗ್ರಾಫೆನ್ ಯೂನಿಯನಿನ ಸಂಗಡ ಸಮರಸವಾಗಿ, ಇಂದು **'ಡೂಶ್‌ಸ್ ನಾಕ್ರಿಕ್ ಟೆಂಬುರೊ'**ಎಂಬ ಹೆಸರಿನಿಂದ **ಆಲ್‌ಫ್ರೆಡ್ ಹ್ಯೂಗೆನ್‌ಬರ್ಗ** ಅವರ ನಿಯಂತ್ರಣದಲ್ಲಿದೆ.

ಇನ್ನೂ ಕೆಲವು ಚಿಕ್ಕಪುಟ್ಟ ಸಂಸ್ಥೆಗಳು ಅಲ್ಲಲ್ಲಿ ಕೆಲಸ ಮಾಡುತ್ತಲಿವೆ. **ರೋಸ್ಟಾ** ಏಜೆನ್ಸಿ ಅಥವಾ ಹೆಚ್ಚು ಪ್ರಚಲಿತವಿದ್ದ **ಟಾಸ್** ಸಂಸ್ಥೆಯು ಸೋವಿಯೆಟ್ ಸರಕಾರದವರದು. **ರೇಡರ್** ಸಂಸ್ಥೆಯು ರೊಮಾನಿಯದಲ್ಲಿ ೧೯೨೧ ರಲ್ಲಿ ಸ್ಥಾಪಿತವಾಗಿ, ಇಂದು ಡಾಕ್ಟರ್ ಅಲೆಕ್ಝಾಂಡರ್ ಹರ್ಟಿಗ್ ಇವರ ಸಂಚಾಲಕತ್ವದಲ್ಲಿದೆ. ಯುಗೋಸ್ಲಾವಿಯದಲ್ಲಿ ಅವಾಲಾ ಎಂಬ ಸಂಸ್ಥೆಯಿದೆ. ಝೆಕೋಸ್ಲೊವ್ಯಾಕಿಯದಲ್ಲಿ 'ಪ್ರೆಸ್ ಬ್ಯೂರೊ' ಎಂದಿದೆ. ನಾರ್ವೆಯಲ್ಲಿ ನಾರ್ಸ್ಕ್ ಟೆಲಿಗ್ರಾಂಬಿರಾ ಎಂಬ ಹೆಸರಿನಿಂದಿದ್ದು, ಚಾರ್ಲಸ್ ಹ್ಯಾಂಬ್ರೊ ಎಂಬವರು ಅದರ ಕರ್ಣಧಾರರು.

ಇವೆಲ್ಲ ಅಲ್ಲಲ್ಲಿಯ ಸುದ್ದಿಗಳನ್ನು ಸಂಚಯಿಸಿ, ಉಳಿದ ಸಂಸ್ಥೆಗಳೊಡನೆಯೂ ಅಮೇರಿಕೆಯ **ಅಸೋಸಿಯೇಟೆಡ್ ಪ್ರೆಸ್** ಎಂಬುದರೊಡನೆಯೂ ಬಳಕೆ ಇಟ್ಟು, ಜಗತ್ತಿನ ವೃತ್ತಪತ್ರಗಳಿಗೆ ಆಹಾರವನ್ನೊದವಿಸುತ್ತವೆ. ವೃತ್ತಪತ್ರಗಳ ಪ್ರಭಾವವು ಇಂದು ಅಸಾಧಾರಣವಾಗಿದೆ. ಬ್ರಿಟಿಶ್ ಸಾಮ್ರಾಜ್ಯವನ್ನು ಮುಖ್ಯಮಂತ್ರಿ ಡೌನಿಂಗ್ ಸ್ಟ್ರೀಟಿನಲ್ಲಿ ಕುಳಿತುಕೊಂಡು ನಡೆಯಿಸುತ್ತಿದ್ದರೆ, ಅವನ್ನು ನಡುಗಿಸುವ ಶಕ್ತಿ ವೃತ್ತಪತ್ರಗಳಲ್ಲಿದೆ. ಸಾಮಾಜಿಕ ಅಭಿಪ್ರಾಯವು ಅಷ್ಟು ಬಲವತ್ತರವಾದುದು. ಸಮಾಜದ ಅಭಿಪ್ರಾಯವನ್ನು ಸಮಾಜ ಹಿತಕ್ಕಾಗಿ ಮಾರ್ಪಾಟು ಮಾಡುವ ಶಕ್ತಿಯು ವೃತ್ತಪತ್ರಗಳಲ್ಲಿದೆ— ಅವುಗಳ ಝರಿಗಳಂತಿದ್ದ ಸುದ್ದಿಯ ಸಂಸ್ಥೆಗಳಲ್ಲಿದೆ.

ದಿವಸ ಎಂಥದಿದ್ದರೂ ಧಷ್ಟ ಪ್ರಕೃತಿ ಬೇಕು

ಕೆಲವರಿಗೆ ಬಿಸಿಲಿನ ಬಾಧೆ, ಕೆಲವರಿಗೆ ಚಳಿಯ ಬಾಧೆ, ಮತ್ತೆ ಕೆಲವರಿಗೆ ಮಳೆಗಾಲದಲ್ಲಿ ಮೇಲಿಂದ ಮೇಲೆ ಬೇನೆ—

ಇದಕ್ಕೆ ಕಾರಣವೆಂದರೆ, ಋತುಮಾನದಂತೆ ಹವೆಯಲ್ಲಿಯ ಬದಲಾವಣೆಗಳನ್ನು ಸಹನಮಾಡಲು ಸಾಕಷ್ಟು ಶಕ್ತಿಯಿಲ್ಲದ್ದು.

ಯಾವ ಋತುವಿನಲ್ಲಿಯೂ ಪ್ರಕೃತಿಯನ್ನು ಧಷ್ಟಪುಷ್ಟ ಇಡಲು ಪರ್ಲ ಕಾಢೆಯು ಬಹಳೇ ಹಿತಕರವು. ಮೈ ಮೊದ್ದಾಗುವುದು, ಹಸಿವೆ ಹಾರಿಹೋಗುವುದು, ಹೊಟ್ಟೆ ಹಸನಾಗದ್ದು, ಕೈಕಾಲು ಕಣ್ಣು ಉರಿಯುವುದು, ಹುಳಿಸುಡುವುದು ಮುಂತಾದ ವಿಕಾರಗಳಿಂದ ಬಳಲುವ ಜನರು, ಕೆಲವು ದಿವಸ ಪರ್ಲಕಾಢೆಯನ್ನು ತೆಗೆದುಕೊಂಡರೆ ಅವರ ಮೈನೋವುಗಳು ದೂರವಾಗುವವು, ಹಸಿವೆ ಹತ್ತುವುದು, ಪ್ರಕೃತಿಯು ನೆಟ್ಟಗಾಗುವುದು, ಮತ್ತು ಮೈಯಲ್ಲಿ ಹೊಸ ಶಕ್ತಿ, ಹೊಸ ಸ್ಫೂರ್ತಿ, ಹೊಸ ಉತ್ಸಾಹ ಹುಟ್ಟಿದ ಅನುಭವ ಬರುವುದು.

ಪರ್ಲಕಾಢೆಯು ನಿಮ್ಮ ನೆರೆಯ ಔಷಧದ ಅಂಗಡಿಯಲ್ಲಿ ಸಿಗುವುದು. ಒಮ್ಮೆ ಸ್ವತಃ ಉಪಯೋಗಿಸಿ ನಿಮ್ಮ ಪ್ರಕೃತಿಯು ಹ್ಯಾಗೆ ನೆಟ್ಟಗೆ ಆಗುವುದು ಎಂಬುದರ ಪ್ರತ್ಯಕ್ಷ ಅನುಭವ ಪಡೆಯಿರಿ.



ಬೆಳಿಯಾ ಸಂತೆಗೆ ಹೋದ

(ವೈನಾಡಿನ ಫಣಿಯರ ಜೀವನಚಿತ್ರಗಳಲ್ಲೊಂದು)

ಶ್ರೀ. 'ಭಾರತೀಸುತ' ವೈನಾಡು

★

ಬಡವರ ಕೆಲಸ ದುಡಿಯುವುದೊಂದೆ. ವ್ಯವಹಾರದಲ್ಲಿಯ ಮೋಸಗಾರಿಕೆಯನ್ನೆ ಅವರು ಅರಿಯರು. ಈ ಅಜ್ಞಾನದ ಮೂಲಕವಾಗಿಯೆ ಬಡವರ ರಕ್ತದಿಂದ ಬದುಕುವವರ ಸಂಖ್ಯೆ ಲೋಕದಲ್ಲಿ ಹೆಚ್ಚಿರುವುದು. ಇದಕ್ಕೆ ಉದಾಹರಣೆಯೆಂದರೆ ಬೆಳಿಯಾ ಸಂತೆಗೆ ಹೋಗಿ ಬಂದದ್ದು; ಸವಿಮಾತಿನ ಸುಳ್ಳುಗಾರರನ್ನೆಲ್ಲಾ ಸತ್ಯವಂತರೆಂಬ ಭ್ರಮೆಯಲ್ಲಿ ಬಿದ್ದದ್ದು.

★

ಬೆಳಿಯಾ ಇದಿರು ನೋಡುತ್ತಿದ್ದ ಭಾನುವಾರ ಬಂದಿತು. ಆ ದಿನ ಪಾಪನ ಗದ್ದೆಗಳಲ್ಲಿ ಕೆಲಸಮಾಡಬೇಕಾಗಿರಲಿಲ್ಲ; ಏಕೆಂದರೆ ಆ ದಿನ ಫಣಿಯರಿಗೆ ಬಿಡುವು ಎಂದರೆ ಸೂಟಿ. ಆ ದಿನ ಅವರು ಗೆಣಸುಗಳನ್ನು ಕೀಳಲೂ, ಮೀನುಗಳನ್ನು ಹಿಡಿಯಲೂ ಹೋಗಬಹುದು; ಇಲ್ಲವೆ ತಮ್ಮ ತಮ್ಮ ನಂಟರಿಷ್ಟರ ಗುಡಿಸಿಲುಗಳಿಗೆ ಹೋಗಿ ಅವರನ್ನು ನೋಡಿಕೊಂಡು ಬರಬಹುದು. ಆದರೆ ಮರುದಿನ ಪಾಪನ ಗದ್ದೆಗಳಲ್ಲಿ ಕೆಲಸಮಾಡಲು ಅವರು 'ಹಾಜರ್' ಇರಬೇಕು. ಇಲ್ಲದಿದ್ದರೆ ಪಾಪನ ಕೋಪದೃಷ್ಟಿಗೆ ಒಳಗಾಗಬೇಕಾಗುವುದು.

ಸಂತೆಗೆ ಹೋಗಬೇಕೆಂದು ಬೆಳಿಯನಿಗೆ ಹಿರಿಯಾಶೆ. ಆದುದರಿಂದಲೆ ಅವನು ಇತರ ಫಣಿಯರಂತೆ ಗೆಣಸುಗಳನ್ನು ಕೀಳಲು ಕಾಡಿಗಾಗಲಿ, ಮೀನುಗಳನ್ನು ಹಿಡಿಯಲು ಹೊಳೆಗಾಗಲಿ ಹೋಗಲಿಲ್ಲ. ಹಿಂದಣ ದಿನ ಅವನು, ಸಂತೆಗೆ ಹೋಗುವಾಗ ಉಟ್ಟು-ತೊಟ್ಟುಕೊಳ್ಳಲೋಸುಗ ಒಂದು ಪಂಚೆಯನ್ನೂ, ಹಚ್ಚಡವನ್ನೂ ಒಗೆದು ಶುಚಿಗೊಳಿಸಿದ್ದ. ಈ ಅರಿವೆಗಳನ್ನು ಒಗೆಯಲು ಅವನು ಸಾಬೂನನ್ನಲ್ಲ ಉಪಯೋಗಿಸಿದುದು; ಅದರ ಬದಲು ಅವನುಪಯೋಗಿಸಿದುದು ಒಲೆಯೊಳಗಿನ ಬೂದಿಯನ್ನು. ಸಾಧಾರಣವಾಗಿ ಫಣಿಯರು ಸಾಬೂನು, ಸೀಗೆಕಾಯಿಗಳನ್ನು ಉಪಯೋಗಿಸುವುದಿಲ್ಲ; ಅವುಗಳ ಬದಲು ಬೂದಿಯನ್ನೆ ಉಪಯೋಗಿಸುತ್ತಾರೆ. ಅದರಂತೆಯೇ ಬೂದಿಹಾಕಿ ತನ್ನ ಅರಿವೆಗಳನ್ನು ಒಗೆದು, ಬೆಳಿಯಾ ಶುಚಿಗೊಳಿಸಿದ್ದ.

ಅವನು ಸಂತೆಗೆ ಹೋಗಬೇಕೆಂದು ನಿಶ್ಚಯಿಸಿದ್ದ. ಆದರೆ ಅವನ ಕೈಯಲ್ಲಿ ಕಾಸಿಲ್ಲ. ದುಡ್ಡಿಲ್ಲದೆ ಸಂತೆಗೆ ಹೋಗುವುದು ಹೇಗೆ? ಹಣವು ಸಿಕ್ಕಬೇಕಾದರೆ ಪಾಪನನ್ನು ಆಶ್ರಯಿಸದೆ ಬೇರೆ ಉಪಾಯವಿರಲಿಲ್ಲ. ಆದುದರಿಂದ ಬೆಳಿಯಾ ಬೆಳಗಿನಲ್ಲಿ ಎದ್ದು ಗಂಜಿಕುಡಿಯುವ ಮುನ್ನ ಪಾಪನ ವಸತಿಗೆ ಹೋದ. ಪಾಪನು ತನ್ನ ಮನೆಯ ಹಜಾರದಲ್ಲಿದ್ದ ಒಂದು ಬೆಂಚಿನ ಮೇಲೆ ಕುಳಿತು ತನ್ನ ಲೆಕ್ಕದ ಪುಸ್ತಕವನ್ನು ಬಿಚ್ಚಿ, ವಾರದ ಲೆಕ್ಕಗಳನ್ನು ನೋಡುತ್ತಿದ್ದ. ಅವನು ಬಾಯೊಳಗೆ ತುಂಬಿಕೊಂಡಿದ್ದ ಹೊಗೆಸೊಪ್ಪನ್ನು ಉಗುಳದಿದ್ದುದರಿಂದ, ಆತನ ಗಲ್ಲಗಳೆರಡೂ ಉಬ್ಬಿಕೊಂಡಿದ್ದುವು. ಪಾಪನ ದೃಷ್ಟಿಯು ಪುಸ್ತಕದ ಮೇಲಿದ್ದುದರಿಂದ ಬೆಳಿಯಾ ಬಂದುದನ್ನು ಅವನು ನೋಡಲಿಲ್ಲ. ಬೆಳಿಯಾ ಹೋಗಿ ಅಂಗಳದಲ್ಲಿ ನಿಂತುಪಾಯಿತು, ಆದರೆ ಪಾಪನ ದೃಷ್ಟಿಯು ಆ ಕಡೆಗೆ ಹರಿಯಲಿಲ್ಲ.

ನಿಮಿಷಗಳು ಕೆಲವು ಕಳೆದುವು. ಪಾಪನ ದೃಷ್ಟಿಯನ್ನು ತನ್ನ ಕಡೆಗೆ ಸೆಳೆಯಲೋಸುಗ ಬೆಳಿಯಾ ಒಂದು ಸಲ ಮೆಲ್ಲಗೆ ಕೆಮ್ಮಿದ. ಕೆಮ್ಮಲಿನ ಸದ್ದು ಗಾಳಿಯಲ್ಲಿ ತೇಲಿತು; ಅದು ಹರಿದು ಪಾಪನ ಕಿವಿಗಳಲ್ಲಿ ಪ್ರವೇಶಿಸಿತು. ಪಾಪನು ತನ್ನ ಮುಂದಿದ್ದ ಪುಸ್ತಕದಿಂದ ಕಣ್ಣುಗಳನ್ನು ಮೇಲಕ್ಕೆತ್ತಿದ. ಅಂಗಳದಲ್ಲಿ ನಿಂದಿರುವ ಬೆಳಿಯನ ಆಕೃತಿಯು ಪಾಪನ ಕಣ್ಣುಗಳಲ್ಲಿ ಪ್ರತಿಬಿಂಬಿಸಿತು. ಪಾಪನು ಕೈಯೊಳಗಿನ ಪುಸ್ತಕವನ್ನು ಬೆಂಚಿನಮೇಲೆ ಮಡಚಿ ಕುಳಿತಲ್ಲಿಂದ ಎದ್ದುನಿಂತ. ಬಾಯೊಳಗೆ ತುಂಬಿಕೊಂಡಿದ್ದ ಹೊಗೆಸೊಪ್ಪನ್ನು ಉಗುಳಿದುದಾಯಿತು. ಅವನ ಕಣ್ಣುಗಳು ಬೆಳಿಯನ ಮೋರೆಯನ್ನು ನೋಡಿದುವು. ಅವನ ತುಟಿಗಳಿಂದ ಈ ಪ್ರಶ್ನೆಯು ಉದುರಿತು: "ಏನು ಬೆಳಿಯಾ? ನೀನು ಬಂದುದೇಕೆ?"

"ನೋಕುಮಿ ಪಾಪನೇ, ತಾಯಿ ಮಿರಾತಿಕು ಚುಟ್ಟು ಒಂಜು ಕಾಣೆ. ನಾಕು ಒಂಜು ರುಪಿಯಾ ಬೋಣೆ (ನೋಡು ಪಾಪನೆ, ನನ್ನ ತಾಯಿಗೆ ಸುತ್ತಿಕೊಳ್ಳಲು ವಸ್ತ್ರವಿಲ್ಲ. ನನಗೆ ಒಂದು ರೂಪಾಯಿ ಬೇಕಾಗಿದೆ.)" ಎಂದು ಬೆಳಿಯಾ ತನ್ನ ತಲೆಯನ್ನು ತುರಿಸುತ್ತಾ ತನ್ನ ಅಪೇಕ್ಷೆಯನ್ನು ಬಿನ್ನವಿಸಿಕೊಂಡ.

"ನಿನಗೇಕೋ ಒಂದು ರೂಪಾಯಿ? ಬೆಳ್ಳೂರು ಕಾವು ಹಬ್ಬಕ್ಕೆ ಎರಡು ರೂಪಾಯಿ, ವಿಷುಹಬ್ಬಕ್ಕೆ ಒಂದು ರೂಪಾಯಿ, ಹತ್ತರೊಳಗ ಭತ್ತ ಇವನ್ನೆಲ್ಲಾ ಕೊಟ್ಟಿದ್ದೇನೆ. ನಿನ್ನ ಲೆಕ್ಕದಲ್ಲಿ ನಾಲ್ಕೈದು ರೂಪಾಯಿಗಳಿವೆ. ನಾನು ಎಂಟಾಣೆಗಳನ್ನು ಕೊಟ್ಟು ಇನ್ನೂ ಹದಿನೈದು ದಿನ ಕಳೆದಿಲ್ಲ. ಈಗ ಪುನಃ ನೀನು ದುಡ್ಡು ಕೇಳಿದರೆ ನಾನು ಎಲ್ಲಿಂದ ಕೊಡಲಿ?"

"ಆಣೆ ಪರಯಾದೆವಿಾ; ಉಡುಪಾ ಒಂಜೂ ಕಾಣೆ. ಪುರೆಯಿಲು ತಳ್ಳ ವಿರಾತಿ, ಚುಟ್ಟುವ ಒಂಜು ಇಲ್ಲಾದೆ ಕುಳಿರು ಕಡಿಚುಬಿರಕಿಂಜೆೞೀ. ಚಂತೆಕು ಪೋಯಿ ಅವಾಳುಕು ಅರಕ್ಕೈ ಕಾರಿಕನ್ನು ಕೊಂಡು ಬರಾಣಿ. (ಹಾಗೆ ಹೇಳದಿರಿ; ಉಡಲು ಬಟ್ಟೆಯಿಲ್ಲ. ತಾಯಿ ಮುದುಕಿ ಸುತ್ತಲು ಬಟ್ಟೆಯಿಲ್ಲದೆ ಗುಡಿಸಿಲಲ್ಲಿ ಚಳಿಹಿಡಿದು ನಡುಗುತ್ತಿದ್ದಾಳೆ. ಸಂತೆಗೆ ಹೋಗಿ ಅರ್ಧಕೈ ಕಾರಿಕ್ಕನು ತೆಗೆದುಕೊಂಡು ಬರಬೇಕು)" ಬೆಳಿಯನ ಕಂಠದಿಂದ ವಿನೀತಸ್ವರವೊಂದು ಹೊರಟಿತು.

"ಅದು ಬೇಕು; ಇದು ಬೇಕು ಎಂದು ನೀನು ಹೇಳುವುದೆಲ್ಲಾ ಸರಿ. ಆದರೆ ನೀನು ಸರಿಯಾಗಿ ಕೆಲಸಮಾಡುವುದಿಲ್ಲ. ಕಳೆದ ವಾರ ನೀನು ನಾಲ್ಕು ದಿವಸ ಕೂಡ ಕೆಲಸಮಾಡಿಲ್ಲ. ಹೀಗಾದರೆ ನಾನು ಹೇಗೆ ನಿನಗೆ ಹಣಕೊಡುವುದು ?"

"ನಾಳು ಬರುತ ಆಯಿಂದ; ಏಣೆ ಪಣಿಯೆಡುಪ್ಪ! ಬಂಜ ಆಯ್ಚು ನಾ ಆರುನಾಳು ಪಣಿಯೆಡುಕ್ಕುವೇ (ನನಗೆ ಕಾಹಿಲೆ ಆಗಿತ್ತು; ಹೇಗೆ ಕೆಲಸಮಾಡುವುದು! ಬರುವವಾರ ನಾನು ಆರುದಿನ ಕೆಲಸಮಾಡುವೆನು)" ಹೀಗೆ ಬೆಳಿಯಾ ಹೋದವಾರ ತಾನು ಕೆಲಸಕ್ಕೆ ಬಾರದಿದ್ದುದೇಕೆಂಬುದನ್ನು ವಿವರಿಸಿದುದಲ್ಲದೆ, ಮುಂದಿನ ವಾರ ಆರು ದಿನ ಕೆಲಸಮಾಡುವೆನೆಂಬ ಭರವಸೆಯನ್ನು ನೀಡಿದ.

"ಒಂದು ರೂಪಾಯಿ ಕೊಡಲಾಗುವುದಿಲ್ಲ. ಬೇಕಾದರೆ ಹನ್ನೆರಡಾಣೆಗಳನ್ನು ಕೊಡುತ್ತೇನೆ." ಈ ಉತ್ತರವು ಪಾಪನಿಂದ ಬಂದಿತು.

"ಏಕು ಪೇರುತು ಕೊಯುಕ್ಕು ಅಂಜು. ಒರುರೂಪಿಯು ತರುಮಿ ಪಾಪನೆ; ಕುಂಡಲುನೆಲ್ಲಿಲಿಂದು ಕಯಿಚ್ಚು ಎಡುಕ್ಕಯಿಲಾ (ನನಗೆ ಬಹಳ ತೊಂದರೆಯಾಗಿದೆ. ಒಂದು ರೂಪಾಯಿಯನ್ನು ಕೊಡಿ. ಕುಂಡಲು ಭತ್ತದಿಂದ ಕಳೆಯ ಬಹುದಲ್ಲ!)" ಬೆಳಿಯಾ ತನಗೆ ಒಂದು ರೂಪಾಯಿಯನ್ನು ಕೊಡಬೇಕೆಂದು ಬಿನ್ನವಿಸಿದ.

ಪಾಪ ಮಾತನಾಡಲಿಲ್ಲ. ಅವನು ಅಲ್ಲಿಂದ ತನ್ನ ಮಲಗುವ ಕೋಣೆಗೆ ಹೋದ. ಅಲ್ಲಿರುವ ಹಣದ ಪೆಟ್ಟಿಗೆಯನ್ನು ತೆರೆದುದಾಯಿತು. ಅದರೊಳಗಿಂದ ಅವನು ಹನ್ನೆರಡು ಆಣೆಗಳನ್ನು ತೆಗೆದ. ಆ ಹಣವನ್ನು ತೆಗೆದುಕೊಂಡು ಬಂದು ಬೆಳಿಯನಿಗೆ ಕೊಟ್ಟುದಾಯಿತು. "ಹೆಚ್ಚಿಗೆ ಕೊಡಲಾಗುವುದಿಲ್ಲ; ಈ ದುಡ್ಡನ್ನು ತೆಗೆದುಕೊ. ನನ್ನನ್ನು ಕಾಡಬೇಡ." ಎಂದು ಹೇಳಿಯಾಯಿತು.

ಪಾಪನು ನೀಡಿದುದನ್ನು ಕೈಯೊಡ್ಡಿ ಸ್ವೀಕರಿಸಿದುದಾಯಿತು. ಇನ್ನು ಅಲ್ಲಿ ನಿಲ್ಲುವುದರಿಂದ ಪ್ರಯೋಜನವಿಲ್ಲವೆಂಬುದನ್ನು ಬೆಳಿಯಾ ತಿಳಿದ. ದೊರೆತುದು ಮಹಾಪ್ರಸಾದವೆಂದು ವಿಚಾರಿಸುತ್ತಾ, ಅವನು ತನ್ನ ಗುಡಿಸಿಲ ಕಡೆಗೆ ಹಜ್ಜೆ ಹಾಕಿದ.

ಗುಡಿಸಿಲನ್ನು ಸೇರಿದುದಾಯಿತು. ಅವನ ತಾಯಿ ಬೆಳಿಚ್ಚಿ ಮಿರಾತಿ ಗಂಜಿಯನ್ನು ತಯಾರುಮಾಡಿ, ಮಗನು ಪಾಪನ ವಸತಿಯಿಂದ ಹಿಂದಿರುಗಿ ಬರುವುದನ್ನು ಇದಿರು ನೋಡುತ್ತಿದ್ದಳು. ಬೆಳಿಯಾ ಜಗಲಿಯಲ್ಲಿದ್ದ ಒಂದು ಮರದ ತುಂಡಿನ ಮೇಲೆ ಆಸೀನನಾದ. ಮುದುಕಿ ಒಂದು ಮಡಿಕೆಯಲ್ಲಿ ಗಂಜಿಯನ್ನು ತಂದು ಅವನ ಮುಂದೆ ಇರಿಸಿದಳು. ಆಕೆಯು ಅವನ ಮುಂದೆ ಇರಿಸಿದ ಒಂದು ಎಲೆಯಲ್ಲಿ, ನಂಜಿಕೊಳ್ಳಲೆಂದಿದ್ದ ವ್ಯಂಜನಗಳಿದ್ದುವು. ಆ ವ್ಯಂಜನಗಳೇನೆಂಬುದನ್ನು ನಾನಿಲ್ಲಿ ವಿವರಿಸಬೇಕಾಗಿಲ್ಲ. ಅವುಗಳೇನೆಂಬುದನ್ನು ನೀವು ತಿಳಿದಿರಬಹುದು. ಕೆಲವು ಸುಟ್ಟ ಮೀನುಗಳು, ಏಡಿಗಳು, ಮೆಣಸಿನಕಾಯಿ ಇವಿಷ್ಟೆ! ಬೆಳಿಯಾ ಮಾತನಾಡದೆ ಗಂಜಿ ಕುಡಿಯಲಾರಂಭಿಸಿದ. ಅವನ ಮನಸ್ಸು ಸಂತೆಯೊಳಗಿನ ವಿವಿಧನೋಟಗಳನ್ನು ನೋಡುತ್ತಿದ್ದಿತು. ತಾನಾವ ಸಾಮಾನುಗಳನ್ನು ಕೊಂಡುಕೊಳ್ಳಬೇಕು; ತನ್ನ ಗೆಳತಿ ಚುಂಡೆಗೆ ಸಂತೆಯಿಂದ ಯಾವ ಒಡವೆಗಳನ್ನು ತರಬೇಕು....ಎಂದು ಮೊದಲಾಗಿ ಹಲವು ಆಲೋಚನೆಗಳು ಅವನ ಚಿತ್ತದಲ್ಲಿ ತೇಲುತ್ತಿದ್ದುವು.

"ನೋಕುಮಿ ಬೆಳಿಯಾ, ಚಂತೆಯಿಲಿರುಂದು ಎಣ್ಣೆಕೊಂಡು ಬರಾಣಂ (ನೋಡು ಬೆಳಿಯಾ, ಸಂತೆಯಿಂದ ಎಣ್ಣೆ ತರಬೇಕು.)" ತನ್ನ ಚೀಲದೊಳಗಿಂದ ಹೊಗೆಸೊಪ್ಪು ಚೂರೊಂದನ್ನು ತೆಗೆದು ತನ್ನ ಬಾಯೊಳಗೆ ಹಾಕಿಕೊಳ್ಳುತ್ತಾ ಮುದುಕಿ ಹೇಳಿದಳು. "ಓಮಿ ನಲ್ಲ ಪುಗೆಯುಂ ಕೊಂಡು ಬಾತವ. ನಾಕು ಚುಟ್ಟುವ ಒಂಜುಕಾಣೆ, ಪಾಪನ ಬಾಟು ಪರಂಜುಳೆಯೋ? (ಸ್ವಲ್ಪ ಒಳ್ಳೆಯ ಹೊಗೆಸೊಪ್ಪನ್ನೂ ತರಬೇಕು. ನನಗೆ ಉಡಲು ಬಟ್ಟೆಯಿಲ್ಲವೆಂಬ ಸಂಗತಿಯನ್ನು ಪಾಪನ ಹತ್ತಿರ ಹೇಳಿದೆಯಾ?)"

"ಪಾಪೆ ಪಂದಿರಂಡಣೆ ತಂದುಳ! (ಪಾಪ ಹನ್ನೆರಡಾಣೆಗಳನ್ನು ಕೊಟ್ಟಿದಾನೆ)" ಬಾಯೊಳಗೆ ತುಂಬಿಸಿದ್ದ ಗಂಜಿಯನ್ನು ನುಂಗಿದ ಮೇಲೆ ಬೆಳಿಯಾ ಉತ್ತರಿಸಿದ.

ಮುದುಕಿ ಬಾಯೊಳಗೆ ತುಂಬಿಕೊಂಡಿದ್ದ ಹೊಗೆಸೊಪ್ಪನ್ನು ಉಗುಳಿದ ಮೇಲೆ, ಸಂತೆಯಿಂದ ತರಬೇಕಾದ ಸಾಮಾನುಗಳಾವುವೆಂಬುದನ್ನು ಬೆಳಿಯನಿಗೆ ತಿಳಿಸಿದಳು. ಎಲೆ, ಅಡಿಕೆ, ಹೊಗೆಸೊಪ್ಪು ಉಪ್ಪು, ಎಣ್ಣೆ, ಮೀನು ಹೀಗೆ ಆಕೆ ಹಲವು ಸಾಮಾನುಗಳ ಹೆಸರುಗಳನ್ನು ಉಸುರಿದಳು. ಇದಲ್ಲದೆ ತನಗೆ ಉಡಲು ಅರ್ಧ ಕೈ ಕಾರಿಕನ್ನು ತಂದುಕೊಡಬೇಕೆಂಬುದನ್ನೂ ಮಗನಿಗೆ ತಿಳಿಸಲು ಮೊರತಿ ಮರೆಯಲಿಲ್ಲ.

"ಈ ಪೈಚ ಮಪಿ ಆಗುವೋ? (ಈ ದುಡ್ಡು ಸಾಕಾಗ ಬಹುದೇ?)" ಇಷ್ಟೆಲ್ಲಾ ಸಾಮಗ್ರಿಗಳನ್ನು ತರಲು ಹಣ ಸಾಕಾಗಬಹುದೇ ಎಂಬ ಸಂದೇಹವನ್ನು ಬೆಳಿಯಾ ಸೂಚಿಸಿದ.

ಆಗ ಮುದುಕಿ ಹೇಳಿದಳು; ಇತರ ಸಾಮಾನುಗಳನ್ನು ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ತಂದರೂ ಚಿಂತೆಯಿಲ್ಲ; ಕಾರಿಕನ್ನನ್ನು ಕೊಳ್ಳಲು ಮರೆಯಲಾಗದೆಂದು. ಬೆಳಿಯಾ ತಾಯಿನುಡಿಗೆ ಒಪ್ಪಿಗೆಯನ್ನು ಸೂಚಿಸಿದ.

ಗಂಜಿ ಕುಡಿದು ಮುಗಿಯಿತು. ಹಿಂದಣ ದಿನ ತಾನು ಒಗೆದು ಶುಚಿಗೊಳಿಸಿದ ಪಂಚೆಯನ್ನು ತೆಗೆದು ಬೆಳಿಯಾ ತನ್ನ ಸೊಂಟಕ್ಕೆ ಸುತ್ತಿದ; ಹಚ್ಚಡವನ್ನು ಹೊದೆದುಕೊಂಡುದಾಯಿತು. ಪಾಪ ಕೊಟ್ಟ ದುಡ್ಡನ್ನು ತನ್ನ ಪಂಚೆಯ ತುದಿಯಲ್ಲಿ ಕಟ್ಟಿದ. ತಾಯಿ ಬೆಳಿಯನಿಗೆ ತಿಳಿಯದಂತೆ ಒಂದು ಬಿದಿರು ಅಂಡೆಯಲ್ಲಿ ಮೋಪಾನ-

ಪಡಿಸಿದ್ದ ನಾಲ್ಕಾಣೆಗಳನ್ನು ಹೊರಕ್ಕೆ ತೆಗೆದಳು. ಆ ಕಾಸುಗಳನ್ನು ಮಗನ ಕೈಗೆ ಕೊಟ್ಟು 'ಪಾಪಕೊಟ್ಟುದು ಸಾಕಾಗದಿದ್ದರೆ ಇದೂ ಇರಲಿ; ಅನಾವಶ್ಯಕ ಹಣವನ್ನು ಹಾಳುಮಾಡಕೂಡದು' ಎಂದು ಉಪದೇಶಿಸಿದಳು. ಬೆಳಿಯಾ ಅವ್ವ ನೀಡಿದ ಕಾಸುಗಳನ್ನೂ ತನ್ನ ಪಂಚೆಯ ತುದಿಯಲ್ಲಿ ಕಟ್ಟಿದ ಎಣ್ಣೆಯ ಕುಪ್ಪಿಯನ್ನು ತೆಗೆದುಕೊಂಡುದಾಯಿತು. ಆದಷ್ಟು ಬೇಗನೆ ಹಿಂದಿರುಗಿ ಬರುವೆನೆಂದು ಅವನು ತಾಯಿಗೆ ಹೇಳಿ ಸಂತೆಗೆ ಹೊರಟನು.

ದಾರಿಯಲ್ಲಿ ಅವನ ಗೆಳತಿ ಚುಂಡೆ ನೋಡಲು ಸಿಕ್ಕಿದಳು. ಆಕೆ ಹತ್ತಿರದ ತೋಡಿನಿಂದ ನೀರುತೆಗೆದುಕೊಂಡು ಬರುತ್ತಿದ್ದಳು. ನೀರ ಗಡಿಗೆಯು ಅವಳ ತಲೆಯ ಮೇಲೆ ಇದ್ದಿತು. ಬೆಳಿಯನನ್ನು ಕಾಣಲು ಆ ಫಣಿಯ ಕನ್ನೆಯ ಮೋರೆಯು ಅಗಲವಾಯಿತು. ವೀಳ್ಯದೆಲೆಗಳನ್ನು ಮೆದ್ದುದರಿಂದ ಕೆಂಬಣ್ಣವನ್ನು ತಳೆದ ಆಕೆಯ ಹಲ್ಲುಗಳು ಗೋಚರಿಸಿದುವು. ಚುಂಡೆಯ ಮೊಗದಲ್ಲಿ ಮೂಡಿದ ಮೃದುಸ್ಮಿತವು ಬೆಳಿಯನ ಮೋರೆಯಮೇಲೆ ಪ್ರತಿಬಿಂಬಿಸಿತು. ಅವನು ಅವಳ ಮೋರೆಯಿಂದ ತನ್ನ ದೃಷ್ಟಿಯನ್ನು ಬೇರೆ ಕಡೆಗೆ ಹೊರಳಿಸದೆ ನುಡಿದ: "ನಾ ಚಂತೆಕು ಪೋಗಿಂಜೇ (ನಾನು ಸಂತೆಗೆ ಹೋಗುತ್ತೇನೆ!)"

"ನಾ ಪರಂಜ ಚಂಗತಿ ನೆಪ್ಪು ಉಳಾನೋ? (ನಾನು ಹೇಳಿದ ಸಂಗತಿ ನೆನಪಿದೆಯೋ?"

"ಉಳ (ಇದೆ.)' ಬೆಳಿಯಾ ಉತ್ತರಿಸಿದ.

"ಒವ್ವಿ ಕರಿಮಣಿಯುಂ ಚುಗಾಪ್ಪುಂ ಬೇಂಗುವ ಮರೆಕ್ಕಾದೆ ವಿಶಾ. (ಸ್ವಲ್ಪ ಕರಿಮಣಿಗಳು, ಚುಗಪ್ಪು ಇವುಗಳನ್ನು ಕೊಂಡು [illegible]) ಚುಂಡೆಯ ಮುಖದಿಂದ ಉದುರಿದುವು.

"ಇಲ್ಲ. ಮರಕ್ಕಾದೆ ಕೊಂಡು ಬರುವೆ. (ಇಲ್ಲ, ಮರೆಯದೆ ತೆಗೆದುಕೊಂಡು ಬರುತ್ತೇನೆ.)" ಎಂದು ಬೆಳಿಯ ಹೇಳಿದ.

"ಬೇಗ ಬಾತಿರಾ! (ಬೇಗ ಬಾ.)" ಎಂದು ಹೇಳಿ ಚುಂಡೆ ತನ್ನ ಗೆಳೆಯನನ್ನು ಬೀಳ್ಕೊಂಡಳು. ನೀರ ಗಡಿಗೆಯನ್ನು ತಲೆಯ ಮೇಲಿರಿಸಿಕೊಂಡು ಮೆಲ್ಲನೆ ಹೆಜ್ಜೆಹಾಕುತ್ತಿದ್ದ ಚುಂಡೆಯನ್ನು ನೋಡುತ್ತ ಅವನು ಸ್ವಲ್ಪ ಹೊತ್ತು ನಿಂತ. ಆ ಮೇಲೆ ಅವನು ಸಂತೆಯ ಹಾದಿಯನ್ನು ಹಿಡಿದು ನಡೆಯತೊಡಗಿದ.

* * *

ಸಂತೆಗೆ ತಲುಪಿದುದಾಯಿತು. ಅಲ್ಲಿ ಜನರ ಕೋಲಾಹಲ. ವ್ಯಾಪಾರಿಗಳು ತಮ್ಮ ಅಂಗಡಿಗಳ ಮುಂದೆ, ಸಾಮಾನುಗಳನ್ನು ರಾಶಿ ಹಾಕಿ ಕುಳಿತಿದ್ದರು. ದಾರಿಯಲ್ಲಿ ಹೋಗುತಿದ್ದ ಜನರನ್ನು ತಮ್ಮ ಬಳಿಗೆ ಅವರು ಕೂಗಿ ಕೂಗಿ ಕರೆಯುತ್ತಿದ್ದರು. ರಸ್ತೆಯ ಪಕ್ಕದಲ್ಲಿ ತಿಂಡಿಯ ವ್ಯಾಪಾರಿಗಳು ತಮ್ಮ ತಿಂಡಿಗಳನ್ನು ಗುಡ್ಡೆ ಹಾಕಿ ಗಿರಾಕಿಗಳಿಗೆ ಮಾರುತ್ತಿದ್ದರು. ಈ ತಿಂಡಿಗಳನ್ನು ನೊಣಗಳ ಹಿಂಡು ಮುತ್ತುತ್ತಲಿದ್ದುವು. ಗಿರಾಕಿಗಳಿಗೆ ಕೊಡಲೋಸುಗ ವ್ಯಾಪಾರಿಯು ತಿಂಡಿಗಳಿಗೆ ಕೈ ಹಾಕುವಾಗ, ಆ ನೊಣಗಳು 'ಝೂಂಯ್' ಎಂಬ ಹಾಡನ್ನು ಹಾಡುತ್ತಾ ತಮ್ಮ ಸ್ಥಳಗಳಿಂದ ಕದಲುತ್ತಿದ್ದುವು. ವ್ಯಾಪಾರಿಯು ಗಿರಾಕಿಗಳೊಡನೆ ಮಾತನಾಡುವಾಗ, ಅವನ ಬಾಯಿಯಿಂದ ಚಿಟ್ಟಿದ ಎಂಜಲುನೀರು, ಈ ತಿಂಡಿಗಳ ಮೇಲೆ ಹಾರಿ ಹಾರಿ ಬೀಳುತ್ತಿದ್ದಿತು. ದಾರಿಯಲ್ಲಿ ಜನರು ಸಂಚರಿಸುವಾಗ ಏಳುತ್ತಿದ್ದ ಧೂಳಿಯು, ಗಾಳಿಯಲ್ಲಿ ತೇಲಿಬಂದು ತಿಂಡಿಗಳ ಮೇಲೆ ಕುಳಿತುಕೊಳ್ಳುತ್ತಿದ್ದಿತು. ಹೀಗೆ ಮಲಿನವಾದ ತಿಂಡಿಗಳನ್ನು ಗಿರಾಕಿಗಳಿಗೆ ಮಾರಿ, ಅವರಿಂದ ಕಾಸುಗಳನ್ನು ಕಸಿದುಕೊಳ್ಳಲು ವ್ಯಾಪಾರಿಯು ಪ್ರಯತ್ನಿಸುತ್ತಿದ್ದ.

ಬೆಳಿಯಾ ಈ ತಿಂಡಿಗಳ ರಾಶಿಗಳನ್ನೂ ಅಂಗಡಿಗಳಲ್ಲಿದ್ದ ಸರಕುಗಳನ್ನೂ ನೋಡಿ ಬೆರಗಾದ. ಜವಳಿಯ ಅಂಗಡಿಗಳಲ್ಲಿದ್ದ ಬಗೆಬಗೆಯ ಬಣ್ಣಗಳ ಅರಿವೆಗಳು ಅವನ ದೃಷ್ಟಿಯನ್ನು ಸೆಳೆದುವು. ಅವನು ಅಚ್ಚರಿಗೊಂಡು ಉಡಿಗೆ-ತೊಡಿಗೆಗಳನ್ನು ನೋಡುತ್ತಾ ನಿಂತ. ಈ ವಸ್ತ್ರಗಳನ್ನು ನೋಡಿ ಆನಂದಿಸುವುದರಲ್ಲಿ ಅವನ ಚಿತ್ತವು ಮುಳುಗಿತು. ತನ್ನ ಅಂಗಡಿಯ ಮುಂದೆ ನಿಂತಿರುವ ಬೆಳಿಯನನ್ನು ಅಂಗಡಿಯ ಮಾಲೀಕನು ಕಾಣದಿರಲಿಲ್ಲ. 'ಇಲ್ಲಿ ಬಾ' ಎಂದು ಅವನು ಆ ಫಣಿಯ ಹುಡುಗನನ್ನು ಕರೆದ.

ಅಂಗಡಿಯವನ ಕರೆಯನ್ನು ಬೆಳಿಯಾ ಸ್ವೀಕರಿಸಿದ. ಬೀದಿಯನ್ನು ಬಿಟ್ಟು ಜಗಲಿಗೆ ಹತ್ತಿದುದಾಯಿತು. ಅಂಗಡಿಯವನು ಬಹು ಒಳ್ಳೆಯ ಮಾತಿನಲ್ಲಿ ಪ್ರಶ್ನಿಸಿದ: "ನಿನಗೆ ಬೇಕಾದುದೇನು? ಏಕೆ ನಿಂತಿರುವೆ? ಕುಳ್ಳಿರು!"

ವ್ಯಾಪಾರಿಯ ಮೃದುಮಾತುಗಳು ಬೆಳಿಯನನ್ನು ಸಂತೃಪ್ತಿಗೊಳಿಸಿದುವು. ಅವನ ತುಟಿಗಳ ಮೇಲೆ ಒಂದು ಕಿರುನಗೆ ಮೂಡಿತು. "ನಾಕು ಅರಕ್ಕೈ ಕಾರಿಕನ್ನು ಬೋಣೆ (ನನಗೆ ಅರ್ಧ ಕೈ ಕಾರಿಕನ್ನು ಬೇಕು.)"

"ಬಹು ಸುಲಭಕ್ರಯದಲ್ಲಿ ಕೊಡುವೆ. ಏಕೆ ನಿಂತಿರುವೆ? ಕುಳ್ಳಿರು! ಎಲೆ ಅಡಿಕೆಗಳನ್ನು ಹಾಕಿಕೊಳ್ಳುವೆಯಾ?" ಅಂಗಡಿಯವನು ಸ್ನೇಹವನ್ನು ನಟಿಸಿ, ಎಲೆ-ಅಡಿಕೆ-ಹೊಗೆಸೊಪ್ಪುಗಳನ್ನು ತೆಗೆದು, ಬೆಳಿಯನಿಗೆ ಕೊಟ್ಟ. ಬೆಳಿಯಾ ವ್ಯಾಪಾರಿಯು ನೀಡಿದ ತಾಂಬೂಲವನ್ನು ಸ್ವೀಕರಿಸಿದ. ಎಲೆ-ಅಡಿಕೆಗಳನ್ನು ಹಾಕಿಕೊಂಡುದಾಯಿತು. ಅಂಗಡಿಯವನು ಪ್ರಶ್ನಿಸಿದ: "ನಿನಗೆ ಬೇಕಾದ ಅರಿವೆಯು ಯಾವಬಗೆಯದು?"

"ಅರೆಕ್ಕೈ ಕಾರಿಕನ್ನು. (ಅರ್ಧ ಕೈ ಕಾರಿಕನ್ನು!)'

ಅಂಗಡಿಯವನು ಬೀರೋವಿನಿಂದ ಒಂದು ಕೈ ಕಾರಿಕನ್ನವನ್ನು ಹೊರತೆಗೆದು, ಅದನ್ನು ಬಿಚ್ಚಿ ಬೆಳಿಯನಿಗೆ ತೋರಿಸಿದ. "ನೋಡು ಇದು ಹೊಸದು.. ಇತರ ಅಂಗಡಿಗಳಲ್ಲಿರುವಂತೆ ಹಳೆಯ ಮಾಲಲ್ಲ. ಅಷ್ಟು ಬೇಗನೆ ಹರಿದುಹೋಗದು. ಬಹಳ ಸುಲಭಬೆಲೆಗೆ ಕೊಡುತ್ತೇನೆ."

ಕಾರಿಕನ್ನು, ವ್ಯಾಪಾರಿಯು ಹೇಳಿದಂತೆ ಹೊಸ ಸರಕಾಗಿರಲಿಲ್ಲ. ಅದು ಅವನಲ್ಲಿದ್ದ ಜವುಳಿಗಳಲ್ಲಿ ಬಹಳ ಹಳೆಯದಾಗಿದ್ದಿತು. ಅದರ ನೂಲುಗಳು ಕುಂಬಾಗಿದ್ದುವು. ಬಟ್ಟೆ-ಬರೆಗಳ ಗುಣ-ದೋಷ

ಗಳನ್ನು ಬಲ್ಲವರು ಅವನನ್ನು ಕೊಂಡುಕೊಳ್ಳರು; ಅದರ ನಿಜವಾದ ಬೆಲೆಯಲ್ಲಿ ಅರ್ಧಕ್ಕಿಂತ ಹೆಚ್ಚು ಕೊಡಲಾರರು. ಆದುದರಿಂದ ಈ ವ್ಯಾಪಾರಿಯಲ್ಲಿ ಈ ಹಳೆಯ ಸರಕುಗಳು ವ್ಯಯವಾಗದೆ ಹಾಗೆಯೆ ಉಳಿದಿದ್ದುವು. ವಸ್ತ್ರಗಳ ಗುಣ-ದೋಷಗಳನ್ನು ಅರಿಯದ ಫಣಿಯರ ಹೆಗಲುಗಳ ಮೇಲೆ ತನ್ನ ಹಳೆಯ ಸರಕುಗಳನ್ನು ಹೊರಿಸಿ ದುಡ್ಡು ಸೆಳೆಯಲು ಆ ವ್ಯಾಪಾರಿಯು ಹೊಂಚುಹಾಕುತ್ತಿದ್ದ.

ಬೆಳಿಯಾ ಫಣಿಯ ಕುಲದಲ್ಲಿ ಹುಟ್ಟಿದವ. ಇತರ ಫಣಿಯರಂತೆ ಅವನೂ ಪೇಟೆಯ ಧಾರಣೆಯನ್ನಾಗಲಿ, ಸರಕುಗಳ ಗುಣದೋಷಗಳನ್ನಾಗಲಿ ಬಲ್ಲವನಾಗಿರಲಿಲ್ಲ. ಇದಲ್ಲದೆ ವ್ಯಾಪಾರಿಯಾಡಿದ ಮೃದುಮಾತುಗಳು ಆ ಫಣಿಯ ಹುಡುಗನನ್ನು ಮರುಳುಗೊಳಿಸಿದ್ದುವು. ತನ್ನನ್ನು ಮೋಸಗೊಳಿಸಿ, ಹಳೆಯ ಅರಿವೆಯನ್ನು ತನ್ನ ಕೈಯಲ್ಲಿ ಹಿಡಿಸಲು ವ್ಯಾಪಾರಿಯು ಹೊರಟಿದ್ದಾನೆಂಬುದನ್ನು ಆಲೋಚಿಸುವಷ್ಟು ದೂರ, ಆ ಫಣಿಯನ ಬುದ್ಧಿಯು ಓಡಲಿಲ್ಲ. ಅವನು ಅಂಗಡಿಯವನಾಡಿದ ಮಾತುಗಳನ್ನು ನಂಬಿದ: "ಬೆಲೆ ಏಣೆ? (ಕ್ರಯವೇನು?)" ಎಂಬ ಪ್ರಶ್ನೆಯು ಬೆಳಿಯನ ಬಾಯಿಂದ ಹೊರಟಿತು.

"ಬೆಲೆ ಬಹಳ ಕಡಿಮೆ ಇದೆ. ಇಷ್ಟು ಒಳ್ಳೆಯ ಕಾರಿಕನ್ನು ನಿನಗೆ ಇದಕ್ಕಿಂತ ಕಡಿಮೆ ಬೆಲೆಗೆ ದೊರಕದು. ಕೈಗೆ ಒಂದೂ-ಕಾಲು ರೂಪಾಯಿ ಕೊಟ್ಟರೆ ಸಾಕು!"

ಒಳ್ಳೆಯ ಕಾರಿಕನ್ನಿನ ನಿಜವಾದ ಬೆಲೆಯು ಒಂದು ರೂಪಾಯಿ. ಪಕ್ಕದ ಅಂಗಡಿಯವನು ಹೊಸ ಕಾರಿಕನನ್ನು ಒಂದು ರೂಪಾಯಿಗೆ ಮಾರುತ್ತಿದ್ದಾನೆ. ಆದರೆ ಫಣಿಯ ಹುಡುಗನಿಗೆ ಈ ವಸ್ತುಸ್ಥಿತಿ ತಿಳಿಯದು. ಅವನು ವ್ಯಾಪಾರಿಯ ಕೈಯಲ್ಲಿದ್ದ ಕಾರಿಕನ್ನಿನಿಂದ ತನ್ನ ದೃಷ್ಟಿಯನ್ನು ಬೇರೆ ಕಡೆಗೆ ಕದಲಿಸದೆ ಹೇಳಿದ: "ಒರು ರುಪಿಯಾ ಇರಾಂಡು ಅಣೆಕು ತರುವಿರಾ? (ಒಂದು ರೂಪಾಯಿ ಎರಡು ಆಣೆಗಳಿಗೆ ಕೊಡುವಿರಾ?)"

"ಹೋಗಲಿ, ಬೆಳಗಿನ ಹೊತ್ತು ನನ್ನ ಅಂಗಡಿಗೆ ಬಂದಿದ್ದೀಯೇ; ನನಗೆ ಎರಡಾಣೆ ನಷ್ಟವಾದರೂ ಚಿಂತೆಯಿಲ್ಲ. ನೀನು ಹೇಳಿದ ಬೆಲೆಗೆ ಕೊಡುತ್ತೇನೆ!"

"ಆಣೆ ಅಕಲೋ ಅರಕ್ಕೈ ಕೊಡುವಿ. (ಹಾಗಾದರೆ ಅರ್ಧ ಕೈ ಕಾರಿಕನ್ನು ಕೊಡಿರಿ!)"

ವ್ಯಾಪಾರಿಯು ತಾನು ಕೈಯಲ್ಲಿ ಹಿಡಿದಿದ್ದ ಕಾರಿಕನ್ನನ್ನು ನಡುವೆ ಕತ್ತರಿಸಿದ. ಅರ್ಧ ಭಾಗವನ್ನು ಮಡಿಚಿ ಬೆಳಿಯನ ಕೈಗೆ ಕೊಟ್ಟುದಾಯಿತು. ಬೆಳಿಯಾ ತನ್ನ ಪಂಚೆಯ ತುದಿಯಲ್ಲಿಯ ಗಂಟನ್ನು ಬಿಚ್ಚಿದ. ಒಂಭತ್ತು ಆಣೆಗಳನ್ನು ತೆಗೆದು ವ್ಯಾಪಾರಿಯ ಕೈಗೆ ಕೊಟ್ಟ. ವ್ಯಾಪಾರಿ ಆ ಹಣವನ್ನು ತನ್ನ ಪೆಟ್ಟಿಗೆಯೊಳಗೆ ಸೇರಿಸಿದ. ಆ ಮೇಲೆ ಅವನು ತನ್ನ ಮೋತಿಯನ್ನು ಬೆಳಿಯನ ಕಡೆಗೆ ತಿರುಗಿಸಿ ಹೇಳಿದ: "ಇನ್ನೇನು ಬೇಕು? ಮಾದಿರಿ ಪಾಡು ಬೇಡವೇ? ಹೊಸ ಮಾದಿರಿಪಾಡು ಇದೆ!"

ಇಷ್ಟರಲ್ಲಿ ತನ್ನ ಗೆಳತಿ ಚುಂಡೆ ತನಗೆ ಚುಗಪ್ಪು ತರಬೇಕೆಂದು ಹೇಳಿದುದು ಬೆಳಿಯನಿಗೆ ನೆನಪಾಯಿತು. ಅವಳ ಅಪೇಕ್ಷೆಯನ್ನು ನೆರವೇರಿಸದಿದ್ದರೆ ಆಕೆ ತನ್ನೊಡನೆ ಬೇಸರುಪಟ್ಟುಕೊಳ್ಳುವಳೆಂಬುದನ್ನು ಅವನು ಬಲ್ಲ. ಚುಂಡೆಯನ್ನು ಬೇಸರಗೊಳಿಸಲು ಬೆಳಿಯನಿಗೆ ಇಷ್ಟವಿಲ್ಲ. ಅವನು ಇತರ ಫಣಿಯ ಹುಡುಗಿಯರಿಗಿಂತ ಹೆಚ್ಚಾಗಿ ಚುಂಡೆಯನ್ನು ಮೆಚ್ಚಿದ್ದ. ಅವಳ ಸಹವಾಸ ಅವನ ಜೀವನವನ್ನು ತಣಿಸುತ್ತಿದ್ದುದಾಗಿತ್ತು. ಆಕೆಯನ್ನು ಬೇಸರುಗೊಳಿಸಿ ತನ್ನ ಸುಖ-ಸಂತೋಷಗಳನ್ನು ಇಲ್ಲದಾಗಿಸಲು ಅವನು ಇಚ್ಛಿಸಲಿಲ್ಲ. ಆದುದರಿಂದ ಬೆಳಿಯಾ ಆಕೆ ಹೇಳಿದ ಚುಗಪ್ಪನ್ನು ಕೊಂಡುಕೊಳ್ಳಲು ಸಿದ್ಧನಾದ. ಅವನು ತನ್ನ ಕಣ್ಣುಗಳನ್ನು ವ್ಯಾಪಾರಿಯ ಕಡೆಗೆ ಓಡಿಸುತ್ತಾ ನುಡಿದ: "ಈಡೆ ಚುಗಾಪ್ಪು ಉಳಾನೋ? (ಇಲ್ಲಿ ಚುಗಪ್ಪು ಇದೆಯೇ?)"

"ಇದೆ!" ಅಂಗಡಿಯವನ ಜವಾಬು ಬಂದಿತು. ಅವನು ಬೀರೂವಿನಿಂದ ಕೆಂಪು ಬಟ್ಟೆಯ ಥಾನೊಂದನ್ನು ಹೊರಕ್ಕೆ ತೆಗೆದ. ಆ ವಸ್ತ್ರವನ್ನು ಬೆಳಿಯನಿಗೆ ತೋರಿಸಿದಮೇಲೆ ಹೀಗೆ ನುಡಿದ: 'ನೋಡು; ಇದು ಹೊಸತಾಗಿ ಬಂದದ್ದು. ಇತರ ಚುಗಪ್ಪುಗಳಂತೆ ಇದರ ಬಣ್ಣ ಹೋಗುವುದಿಲ್ಲ. ಬಹಳ ದಿನ ಬಾಳಿಕೆ ಬರುತ್ತದೆ; ಬೆಲೆ ಬಹಳ ಕಡಿಮೆಯಿದೆ.'

"ಬೆಲೆ ಏಣೆ ಅಂಜು. (ಕ್ರಯವೇನು?)"

"ಗಜಕ್ಕೆ ಮೂರಾಣೆ ಕೊಟ್ಟರೆ ಸಾಕು. ನಿನಗೆ ಎಷ್ಟು ಮೊಳ ಬೇಕು?"

"ಒನ್ನರ ಮೊಳ ಮುರಿಯುವಿ! (ಒಂದುವರೆ ಮೊಳ ಕತ್ತರಿಸಿ)" ಬೆಳಿಯನು ಹೇಳಿಯೆ ಬಿಟ್ಟ.

ವ್ಯಾಪಾರಿಯು ಆ ಥಾನಿನಿಂದ ಒಂದುವರೆ ಮೊಳ ಅರಿವೆಯನ್ನು ಹರಿದು ಬೆಳಿಯನಿಗೆ ಕೊಟ್ಟ. ಅದರ ಬೆಲೆ ಎರಡುವರೆಯಾಣೆಗಳೆಂದು ವ್ಯಾಪಾರಿಯು ನುಡಿದ. ಪಾಪ, ಬೆಳಿಯನಿಗೆ ಲೆಕ್ಕ ಮಾಡಲು ತಿಳಿಯದು. ಒಂದು ಗಜಕ್ಕೆ ಎರಡು ಮೊಳಗಳೆಂಬುದನ್ನು ಅವನು ಬಲ್ಲ. ಆದರೆ ಗಜಕ್ಕೆ ಮೂರಾಣೆ ಬೆಲೆಯಾದರೆ ಒಂದುವರೆ ಮೊಳಕ್ಕೆ ಎಷ್ಟು ಕೊಡಬೇಕಾಗುವುದೆಂದು ಲೆಕ್ಕ ಮಾಡಲು ಅವನು ಕಲಿತಿಲ್ಲ. ಅವನು ಪಡೆದ ಚುಗಪ್ಪಿನ ನಿಜವಾದ ಬೆಲೆಯು ಎರಡೂ ಕಾಲಾಣೆ. ಆದರೆ ವ್ಯಾಪಾರಿಯು ಬೆಳಿಯನನ್ನು ಮೋಸಗೊಳಿಸಿ, ಒಂದು ಬಿಲ್ಲೆಯನ್ನು ಹೆಚ್ಚಿಗೆ ಸೆಳೆಯಲೋಸುಗ, ಅದರ ಕ್ರಯವು ಎರಡೂವರೆ ಆಣೆಗಳೆಂದು ಹೇಳಿದ. ಬೆಳಿಯಾ ಅಂಗಡಿಯ ಮಾಲೀಕನು ಹೇಳಿದುದನ್ನು ನಿಜವೆಂದು ನಂಬಿದ. ತನ್ನ ಗಂಟನ್ನು ಬಿಚ್ಚಿ ಅವನು ವ್ಯಾಪಾರಿಗೆ ಆ ಹಣವನ್ನು ಕೊಟ್ಟುಬಿಟ್ಟ.

ಬೆಳಿಯನ ಜವಳಿ ಕೊಂಡುಕೊಳ್ಳುವ ಕೆಲಸವು ಹೀಗೆ ಹೀಗೆ ಮುಗಿಯಿತು. ಅಂಗಡಿಯವನು ತನ್ನ ಎಲೆಅಡಿಕೆ ಪೆಟ್ಟಿಗೆಯನ್ನು ಬಿಚ್ಚಿ, ಬೆಳಿಯನಿಗೆ ಪುನಃ ಎಲೆಡಿಕೆ-ಹೊಗೆಸೊಪ್ಪುಗಳನ್ನು ಕೊಟ್ಟನು. ಈ ಸನ್ಮಾನವನ್ನು ಬೆಳಿಯಾ ಬಹು ಆದರದಿಂದ ಸ್ವೀಕರಿಸಿದ. ಇಷ್ಟು ಒಳ್ಳೆಯ ವ್ಯಾಪಾರಿಯು ಬೇರೊಬ್ಬನಿಲ್ಲವೆಂಬ ಭಾವನೆಯು ಬೆಳಿಯನ ಮನಸ್ಸಿನಲ್ಲಿ ಮೂಡಿತು. ಎಲ್ಲ ಅಂಗಡಿಯವರೂ

ಇವನಾಕಾದರೆ ಎಷ್ಟು ಚೆನ್ನಾಗುತ್ತಿದ್ದಿತೆಂದು ಅವನು ಆಲೋಚಿಸಿದ.

ಎಲೆ ಅಡಿಕೆಗಳನ್ನು ಹಾಕಿಕೊಂಡುದಾಯಿತು. ತಾನು ಕೊಂಡ ಅರಿವೆಗಳನ್ನು ತನ್ನ ಹಚ್ಚಡದ ತುದಿಯಲ್ಲಿ ಕಟ್ಟಿದ. ತಾನು ಕುಳಿತಲ್ಲಿಂದ ಎದ್ದು ನಿಂತು "ನಾ ಪೊಗಟ್ಟೆ ಪಾಪನೇ? (ಪಾಪನೇ, ನಾನು ಹೋಗುತ್ತೇನೆ.)" ಎಂದು ಹೇಳಿದ.

"ಒಳ್ಳೆಯದು, ನಿನಗೆ ಬೇರೆ ಬಟ್ಟೆ ಬರೆಗಳು ಬೇಕಾದರೆ, ನನ್ನ ಅಂಗಡಿಗೇ ಬರಬೇಕು ತಿಳಿಯಿತೇ?" ಅಂಗಡಿಯವನು ಹೇಳಿದ.

"ಆಣೆ ಆಗಟ್ಟೆ ಪಾಪನೇ, ನಿಂಗಳ ಪೂಡಿಗಕ್ಕು ಬರಾದೆ ಇರಿಕ್ಕೇ. (ಹಾಗೆಯೇ ಆಗಲಿ! ನಿಮ್ಮ ಅಂಗಡಿಗೆ ಬಾರದಿರೆನು.)" ಎಂಬ ಭರವಸೆಯ ಮಾತು ಬೆಳಿಯನ ಬಾಯಿಂದ ಹೊರಟಿತು.

* * *

ಬೇರೆ ಅಂಗಡಿಗಳಿಗೆ ಹೋದುದಾಯಿತು, ಬೆಳಿಯಾ ತನಗೆ ಬೇಕಾದ ಸಾಮಾನುಗಳನ್ನು ಕೊಂಡುಕೊಂಡನು. ತೆಂಗಿನೆಣ್ಣೆ, ಎಲೆ-ಅಡಿಕೆ, ಹೊಗೆಸೊಪ್ಪು, ಉಪ್ಪು, ಮೀನು ಮೊದಲಾದ ಸಾಮಗ್ರಿಗಳನ್ನೆಲ್ಲಾ ಅವನು ಕೊಂಡುಕೊಂಡ. ತಾನು ಪಡೆದ ಸರಕುಗಳ ಬೆಲೆಯನ್ನು ಕುರಿತು ಅವನು ವ್ಯಾಪಾರಿಗಳೊಡನೆ ಚರ್ಚಿಸಲಿಲ್ಲ. ಅವುಗಳ ಗುಣ-ದೋಷಗಳನ್ನು ಪರೀಕ್ಷಿಸಿ ನೋಡಲಿಲ್ಲ. ಅವರು ಕೊಟ್ಟ ಸಾಮಾನುಗಳನ್ನು ಪಡೆದುದಾಯಿತು. ವ್ಯಾಪಾರಿಗಳು, ತಮ್ಮ ಹಳೆಯ ಹೊಲಸು ಸಾಮಾನುಗಳನ್ನು ಖರ್ಚು ಮಾಡಲು ಫಣಿಯರಿಗಿಂತ ಉತ್ತಮ ಗಿರಾಕಿಗಳು ಬೇರೆಯಿಲ್ಲವೆಂಬುದನ್ನು ಬಲ್ಲರು. ಅವರೆಲ್ಲ ಜವಳಿಯ ವ್ಯಾಪಾರಿಯಂತೆಯೆ ಒಳ್ಳೆಯ ನುಡಿಗಳಿಂದ ಬೆಳಿಯನನ್ನು ಮರುಳುಗೊಳಿಸಿದರು; ನಾಲ್ಕು ಸವಿಮಾತುಗಳಿಂದ ಅವನನ್ನು ಮೆಚ್ಚಿಸಿದರು; ತಮ್ಮ ಹಳೆಯ ಮಾಲುಗಳನ್ನು ಅವನ ಕೊರಳಿಗೆ ನೇತು ಹಾಕಿ, ಅವನ ಕೈಯಲ್ಲಿದ್ದ ಕಾಸುಗಳನ್ನು ಕಸಿದರು. ಪಾಪ, ಆ ಫಣಿಯ ಹುಡುಗನಿಗೆ ತಿಳಿಯದು. . ತಾನು ಕೊಡುತ್ತಿದ್ದ ಬೆಲೆಯು ಪೇಟೆಯ ಧಾರಣೆಗಿಂತ ಹೆಚ್ಚಾಗಿದೆಯೆಂಬುದು. ಅವರು ಕೊಟ್ಟ ಮಾಲುಗಳಿಂದ ಅವನು ಸಂತೃಪ್ತನಾದ. ನಾತ ಬಡಿಯುತ್ತಿದ್ದ ಕೊಬ್ಬರಿ ಎಣ್ಣೆ, ಮಣ್ಣುಬೆರೆತ ಉಪ್ಪು, ನೀರುಬೆರಸಿದ ಹೊಗೆ-ಸೊಪ್ಪು ಇವುಗಳಾಗಿದ್ದುವು ಬೆಳಿಯನಿಗೆ ದೊರೆತ ಸಾಮಾನುಗಳು.

ಸಾಮಾನುಗಳನ್ನು ಕೊಂಡುಕೊಳ್ಳುವ ಕೆಲಸವು ಮುಗಿಯಿತು. ಅವನು ಸಂತೆಯಲ್ಲೆಲ್ಲಾ ಅಲೆದು ಅಲ್ಲಿಯ ನೋಟಗಳನ್ನು ನೋಡಿದ. ದಾರಿಯ ಬಳಿಯಲ್ಲಿರುವ ಒಂದು ತಿಂಡಿಯ ಅಂಗಡಿಯಿಂದ ಧೂಳು- ಹುಡಿಗಳು ಬೆರೆತ ತಿಂಡಿಗಳನ್ನು ಪಡೆದು, ಅವುಗಳಿಂದ ತನ್ನ ಹಸಿವೆಯನ್ನು ಅಡಗಿಸಿದ. ಚಹಾ ಕುಡಿದು ತನ್ನ ನೀರಡಿಕೆಯನ್ನು ತಣಿಸಿದುದಾಯಿತು. ಹೋಟೆಲಿನವನು ಫಣಿಯರಿಗೆ ಕೊಡುವ ಚಹಾ ಬೇರೆ ರೀತಿಯದು. ಆ ಚಹವನ್ನು ತಯಾರಿಸಲು ಅವರು ಹೊಸ ಚಹಾಹುಡಿಯನ್ನು ಉಪಯೋಗಿಸುವುದಿಲ್ಲ; ಒಮ್ಮೆ ಉಪಯೋಗಿಸಿದ ಚಹಾ ಹುಡಿಯನ್ನೇ ಉಪಯೋಗಿಸುತ್ತಾರೆ. ಹಾಲನ್ನು ಹೆಚ್ಚಿಗೆ ಸೇರಿಸುವುದಿಲ್ಲ. ಆದರೆ ಸಕ್ಕರೆಯನ್ನು ಮಾತ್ರ ಸ್ವಲ್ಪ ಹೆಚ್ಚು ಪ್ರಮಾಣದಲ್ಲಿ ಬೆರಸುತ್ತಾರೆ. ಬೆಳಿಯಾ ಕುಡಿದ ಚಹಾ ಈ ಪರಿಯದಾಗಿದ್ದಿತು.

ನೇಸರು ಪಡುವಣ ಬಾನಿನಲ್ಲಿ ಇಳಿಯತೊಡಗಿದ. ಬೆಳಿಯಾ ಸಂತೆಯಲ್ಲಿ ಅಲೆಯುವ ಕೆಲಸವನ್ನು ಸಾಕುಮಾಡಿದ. ಅವನು ತನ್ನ ಹಳ್ಳಿಯ ಹಾದಿಯನ್ನು ಹಿಡಿದ. ಅವನ ಮನಸ್ಸಿನಲ್ಲಿ ಹಲವು ವಿಚಾರಗಳು ತೇಲುತಿದ್ದುವು. ಅವು ಅವನ ಗೆಳತಿ ಚುಂಡೆಗೆ ಸಂಬಂಧಿಸಿದುವುಗಳಾಗಿದ್ದುವು. ತಾನು ತೆಗೆದುಕೊಂಡು ಬಂದಿರುವ ಕರಿಮಣಿ, ಚುಗಪ್ಪು ಇವುಗಳನ್ನು ಕಾಣುವಾಗ ಆಕೆಯ ಮೊಗವು ಹೇಗೆ ಅರಳಬಹುದೆಂಬ ಚಿತ್ರವು ಅವನ ಮನೋಮುಕುರದಲ್ಲಿ ಬಿಂಬಿಸಿದ್ದಿತು. ಆ ಸೊಗಸು ಚಿತ್ರವನ್ನು ತನ್ನ ಮನಸ್ಸಿನಲ್ಲಿ ಕಾಣಲು, ಅವನ ಎದೆಯಲ್ಲಿ ಹರುಷವು ತುಂಬಿತು.

* * *

ಬೆಳಿಯಾ ಗುಡಿಸಿಲನ್ನು ಸೇರುವಾಗ ಸಂಜೆಯಾಗಿತ್ತು. ರಾತ್ರಿಗೆಂದು ಆಹಾರಗಳನ್ನು ತಯಾರುಮಾಡಲು ಫಣಿಚ್ಚಿಗಳು ಭತ್ತವನ್ನು ಕುಟ್ಟುತ್ತಿದ್ದರು. ಗುಡಿಸಿಲಿನ ಜಗುಲಿಯ ಮೇಲೆ ಕುಳಿತಿದ್ದ ಮೊರವನೊಬ್ಬನು, ದುಡಿಯನ್ನು ಬಾಜಿಸುತಿದ್ದ; ಹತ್ತುವರುಷ ಪ್ರಾಯದ ಹುಡುಗನೊಬ್ಬನು ಕೊಳಲನ್ನೂದುತ್ತಿದ್ದ. ಈ ವಾದ್ಯನಾದಗಳ ಶ್ರವಣದಿಂದ ಆ ಹೆಂಗುಸರು ಆನಂದಿಸುತ್ತಿದ್ದರು, ಆಗಾಗ ಅವರ ಕೊರಳುಗಳಿಂದ ಹಾಡುಗಳು ಹೊರಕ್ಕೆ ಹರಿದು ಗಾಳಿಯಲ್ಲಿ ತೇಲುತಿದ್ದುವು.

ಈ ಸಂದರ್ಭದಲ್ಲಿ ಸಂತೆಯಿಂದ ಹಿಂದಿರುಗಿ ಬಂದ ಬೆಳಿಯಾ ತನ್ನ ಗುಡಿಸಿಲನ್ನು ಸೇರಿದ; ತಾನು ತಂದ ಒಡವೆಗಳನ್ನು ತಾಯ ಕೈಗೆ ನೀಡಿದ. ಮುದುಕಿ ಮಗನು ತಂದ ಕಾಣಿಕನ್ನನ್ನು ನೋಡಿ ಸಂತೋಷಿಸಿದಳು. ಪಾಪ, ಅದು ಹಳೆಯದಾಗಿದ್ದಿತೆಂಬುದು ಅವಳಿಗೂ ತಿಳಿಯದು. ಮಗನು ಹಸಿದು ಬಂದಿರುವನೆಂಬುದು ಅವಳಿಗೆ ಗೊತ್ತು. ಅವಳು ಮಧ್ಯಾಹ್ನಮಾಡಿದ ಅನ್ನವನ್ನು ಸ್ವಲ್ಪ ಮಿಗಿಸಿ ಇರಿಸಿದ್ದಳು. ಈ ಅನ್ನವನ್ನು ತಾಯಿ ಮಗನಿಗೆ ಬಡಿಸಿದಳು. ನಂಜಿಕೊಳ್ಳಲು ಸುಟ್ಟ ಮೀನು, ಮೆಣಸಿನ ಕಾಯಿಗಳಿದ್ದುವು. ಇವುಗಳಿಂದ ಬೆಳಿಯಾ ತನ್ನ ಹಸಿವೆಯನ್ನು ಇಲ್ಲ-ದಾಗಿಸಿದ.

ರಾತ್ರಿ ತನ್ನ ಕೆಲಸಗಳನ್ನು ಮುಗಿಸಿದ ಮೇಲೆ, ಚುಂಡೆ ಬೆಳಿಯನ ವಸತಿಗೆ ಬಂದಳು. ಆಗ ಬೆಳಿಯಾ ತನ್ನ ಗುಡಿಸಿಲಿನ ಜಗುಲಿಯ ಮೇಲೆ, ಉರಿಯುತಿದ್ದ ಬೆಂಕಿಯ ಮುಂದೆ ಕುಳಿತಿದ್ದ. ಅವನ ಕಣ್ಣುಗಳು ಅರ್ಧ ಮುಚ್ಚಿದ್ದುವು. ಅವನ ಜೀವವು ಸ್ವಪ್ನರಾಜ್ಯದಲ್ಲಿ ವಿಹರಿಸುತಿದ್ದಿತು. ಚುಂಡೆ ಸದ್ದುಮಾಡದೆ ಅವನ ಬಳಿಗೆ ಕಟ್ಟೆಹಾಕಿದಳು, ಬೆಳಿಯಾ ಆಕೆ ಬಂದುದನ್ನು ಅರಿಯಲಿಲ್ಲ. ಅವಳು ಬಂದು ಅವನ ಬೆನ್ನ ಹಿಂದೆ ನಿಂತಳು. ಅವನ ಅರ್ಧಮುಚ್ಚಿದ ಕಣ್ಣುಗಳನ್ನು ನೋಡಲು ಅವಳ ಮೆದುಳಿನಲ್ಲಿ ಯಾವುದೋ ಒಂದು ಆಲೋಚನೆಯು ಮಿಂಚಿತು. ಆಕೆ ತನ್ನ ಕೈಗಳನ್ನು ಚಾಚಿದಳು; ಇನ್ನೊಂದು ಕ್ಷಣದಲ್ಲಿ ಅವಳ ಕೈಗಳು ಬೆಳಿಯನ ಕಣ್ಣುಗಳನ್ನು ಮುಚ್ಚಿದುವು. ಚುಂಡಿಯ ಕೈಗಳು ಬೆಳಿಯನ

ವ್ಯೆಗೆ ತಗಲಲು ಆವನಿಗೆ ಎಚ್ಚರವಾಯಿತು. ಅವನು ತನ್ನ ಸ್ವಪ್ನ ರಾಜ್ಯದಿಂದ ಎಚ್ಚತ್ತು "ಆರಾಂಜು? (ಯಾರದು)" ಎಂದು ಪ್ರಶ್ನಿಸಿದ.

"ಎನ್ನೆ ನೀಕು ಅರಿಂಜು ಕೂಡಿಯೋ? (ನೀನು ನನ್ನನ್ನು ತಿಳಿಯಲಿಲ್ಲವೇ?)" ನಗುತ್ತಾ ಜುಂಡೆ ನುಡಿದಳು.

"ನೀಯಾಂಜೋ! ನಾ ಅರಿವಾನು ಕಾಣಿ! (ನೀನೋ! ನಾನು ತಿಳಿಯಲಿಲ್ಲ.)" ಬೆಳಿಯಾ ಉತ್ತರಿಸಿದ.

ಫಣಿಯ ಕನ್ನೆ ಅವನ ಕಣ್ಣುಗಳಿಂದ ಕೈಗಳನ್ನು ತೆಗೆದಳು. ಅವಳ ಮೊಗದಲ್ಲಿ ಮೂಡಿದ ನಗೆಮಿಂಚನ್ನು ಅವನು ನೋಡಿದ. ಅವನ ಪಕ್ಕಕ್ಕೆ ಸರಿಯುತ್ತಾ ಅವಳು ಪ್ರಶ್ನಿಸಿದಳು. "ಚಂತೆಯಿಲಿಂದು ಜುಗಾಪ್ಪುಕೊಂಡು ಬರುವಾ ಕಾಣಿಯೋ? (ಸಂತೆಯಿಂದ ಜುಗಪ್ಪನ್ನು ತರಲಿಲ್ಲವೇ?)"

"ಕೊಂಡು ಬಂದುಳೆ; ಮರೆಪ್ಪ ಏಣಿ ಚಾದಿಕ್ಕು? (ತಂದಿದೇನೆ; ಮರೆಯುವುದು ಹೇಗೆ ಸಾಧ್ಯ!)" ಬೆಳಿಯ ತನ್ನ ಹಚ್ಚಡದ ತುದಿಯಲ್ಲಿರುವ ಗಂಟನ್ನು ಬಿಚ್ಚಿದ. ಅಲ್ಲಿಂದ ಜೊಗಪ್ಪು, ಕರಿಮಣಿಗಳನ್ನು ಹೊರತೆಗೆದುದಾಯಿತು. ಆ ಒಡವೆಗಳನ್ನು ಅವನ ಕೈಯಿಂದ ಈಸಿಕೊಂಡಳು ಜುಂಡೆ. ತನ್ನ ಕಣ್ಣುಗಳನ್ನರಳಿಸಿ ಆಕೆ ಆ ಒಡವೆಗಳನ್ನು ನೋಡಿದಳು. ಬೆಳಿಯಾ ನೀಡಿದ ಉಡುಗೊರೆಗಳು ಜುಂಡೆಯ ಎದೆಯನ್ನು ಅರಳಿಸಿದುವು; ಅವಳ ಮೋರೆಯು ಅಗಲವಾಯಿತು. ಅವನ ಪಕ್ಕದಲ್ಲಿಯೆ ಆಕೆ ಕುಳಿತುಕೊಂಡಳು.

ಸಂತೆಯಿಂದ ತಂದ ಎಲೆ-ಅಡಿಕೆಗಳನ್ನು ಇಬ್ಬರೂ ಹಾಕಿಕೊಂಡರು. ಎದೆಬಿಚ್ಚಿ ಮಾತನಾಡಿದರು. ಜುಂಡೆಯ ಸವಿಮಾತುಗಳು ದಾರಿನಡೆದುಬಂದ ಬೆಳಿಯನ ಆಯಾಸವನ್ನು ಪರಿಹರಿಸಿದುವು. ಆ ನೆಲದವ್ವನ ಮಕ್ಕಳು ಮಾತು-ಕತೆಗಳಲ್ಲಿ ಹೊತ್ತನ್ನು ಕಳೆದರು. ಮೂಡಣದಲ್ಲಿ ಉದಿಸಿದ ಚಂದಿರನು ಆ ಎಳೆಯ ಎದೆಗಳಿಂದ ಉಕ್ಕಿ ಹರಿಯುತ್ತಿದ್ದ ಸಲಿಪಿನ ಹೊನಲನ್ನು ನೋಡಿದ.*

---

* ಈ ಲೇಖನದಲ್ಲಿ ಬರುವ ಕೆಲವು ಫಣಿಯ ಭಾಷೆಯ ಶಬ್ದಗಳ ವಿಶೇಷಾರ್ಥ

ಮಿರಾತಿ:— ಮುದುಕಿ.

ಕಾರಿಕನ್ನು:—೧೫ ಮೊಳ ಉದ್ದವಿರುವ ಒಂದು ವಸ್ತ್ರ ಬಿಳಿಯ ಬಣ್ಣದ್ದಿದ್ದು ಒಬ್ಬ ಒರಟಾಗಿರುತ್ತದೆ. ಫಣಿಯ ಹೆಂಗುಸರು ಈ ಒಟ್ಟೆಗಳನ್ನು ಉಡುತ್ತಾರೆ ಅರ್ಧ ಕೈ ಕಾರಿಕನ್ನು ಎಂದರೆ:— ೧೫ ಮೊಳವಿರುವ ಈ ವಸ್ತ್ರದ ಅರ್ಧವೆಂದು ಅರ್ಥ.

ಪಂಂತಲುನೆಲ್ಲು:— ಫಣಿಯನು ಒಂದು ಒಂದು ವರುಷ ಪೂರ್ತಿ ಮಾಪನ ಗದ್ದೆಗಳಲ್ಲಿ ಕೆಲಸಮಾಡಿದರೆ, ಮಾಪನು ಧಾನ್ಯರೂಪದಲ್ಲಿ ಕೊಡುವ ಪಾರಿತೋಷಕ.

ಜುಗಪ್ಪು:— ಕೆಂಪು ಬಣ್ಣದ ವಸ್ತ್ರ, ಫಣಿಯ ಹೆಂಗುಸರು ತಮ್ಮ ಸೊಂಟಗಳಿಗೆ ಈ ಅರಿವೆಯನ್ನು ಪಟ್ಟಿಗಳಂತೆ ಸುತ್ತುತ್ತಾರೆ.

ನಾದಿರಿಪಾಡು:— ಕಡಿಮೆ ಬೆಲೆಯ ಬಿಳಿವಸ್ತ್ರದ ಥಾನು. ಇದಕ್ಕೆ 'ಕೋರಾ' ಎಂದೂ ಹೇಳುತ್ತಾರೆ.

ಮೊರವ:— ಮುದುಕ.



ಸಾಧನ ಮುದ್ರಣಾಲಯದ ಸುಂದರ ಪ್ರಕಟನೆಗಳು

ಮೈಸೂರು ವಿದ್ಯಾಖಾತೆಯವರಿಂದ ಮಂಜೂರಾಗಿದೆ.

T.B.C. No. 162 of 39-40.

ವರ್ಧಾಯಾತ್ರೆ; ಲೇ. ಶ್ರೀ. ಎಸ್. ಕೃಷ್ಣಶರ್ಮಾ. ಬೆಲೆ. ೧-೦-೦

ಅಭಿಪ್ರಾಯಗಳು

೧) ಈ ಪುಸ್ತಕವನ್ನು ಗಾಂಧೀಜಿಯವರ ಸತ್ಯಶೋಧನೆ, ಜವಾಹರಲಾಲರ ಆತ್ಮಕಥೆ, ಪಟ್ಟಾಭಿಯವರ ಕಾಂಗ್ರೆಸ್ ಇತಿಹಾಸ ಇವುಗಳೊಡನೆ ಓದಿ ನೋಡಬೇಕು.

—ವಿಶ್ವಕರ್ನಾಟಕ. ಶ್ರೀ. ತಿ ತಾ. ಶರ್ಮನ್.

೨) WARDHA YATRA is a new departure in Kannada Literature. —*Indian P.E.N.*

ಇದೇ ಲೇಖಕರ ಹರ್ಣಕುಟಿ ಅಚ್ಚಿನಲ್ಲಿದೆ.

ಭಾರತೀಯ ಕಥಾವಳಿ

ಭಾರತದಲ್ಲಿರುವ ಸುಪ್ರಸಿದ್ಧ ಭಾಷೆಗಳಿಂದ ಆಯ್ದ ಉತ್ತಮವಾದ ಕಥೆಗಳ ಸಂಗ್ರಹದ ಹೊಸಯೋಜನೆ. ಅಖಿಲಭಾರತದ ಸಾಂಸ್ಕೃತಿಕ ತಿಳುವಳಿಕೆಗೆ ತುಂಬ ಅವಶ್ಯವಾದ ಸಂಗ್ರಹ. ಪ್ರತಿ ಮನೆಮನೆಗೂ ಇರಬೇಕಾದ ಅತ್ಯವಶ್ಯ ಸಾಹಿತ್ಯ.

೧. ತೆಲುಗಿನ ಕತೆಗಳು .. ೦-೯-೦

೨. ಅಸಾಮೀ ಕತೆಗಳು .. ೦-೯-೦

ಉಳಿದ ಕತೆಗಳ ಸಂಗ್ರಹಗಳಾದರೂ ಬೇಗ ಪ್ರಕಟಿಸಲ್ಪಡುವುವು.

ದೊರೆಯುವ ಸ್ಥಳ:— ಸಾಧನ ಮುದ್ರಣಾಲಯ, ಧಾರವಾಡ

ವ್ಯವಹಾರ ಪರಿಜ್ಞಾನ

ಶ್ರೀ. ಬಿದರಕುಂದಿ ವೆಂಕಟರಾಯರು

೧ ಮಿತವ್ಯಯ

ಸಂಸಾರಕ್ಕೆ ಅನುಕೂಲತೆಗಳನ್ನು ದುಡ್ಡು ಒದಗಿಸಿಕೊಡುವುದಾದರೂ, ಕಡಿಮೆ ದುಡ್ಡಿದ್ದವರು ತಮ್ಮ ಬುದ್ಧಿಕೌಶಲದಿಂದ ಅಂತಹ ಅನುಕೂಲತೆಗಳನ್ನು ಒದಗಿಸಿಕೊಂಡು, ಸುಖಸಂಸಾರಿಗಳಾಗಿ ಇರುವುದನ್ನೂ ನಾವು ನೋಡುತ್ತೇವೆ. ಈ ಬುದ್ಧಿಕೌಶಲದಲ್ಲಿ ಮಿತವ್ಯಯವೃತ್ತಿಯೆ ಅಡಗಿಕೊಂಡಿರುವುದು !

ಇದು ಕಥೆಯಲ್ಲ, ಕಾದಂಬರಿಯಲ್ಲ; ಅನುಭವದ ಪ್ರಬಂಧವು. ಹಣವನ್ನು ಹೇಗೆ ದೊರಕಿಸಬೇಕೆಂಬುದಕ್ಕೆ ಉಚಿತವಾದ ಉತ್ತರವನ್ನು ಯಾರೂ ಹೇಳರು. ಇದನ್ನು ಪ್ರತಿಯೊಬ್ಬರೂ ಅಭ್ಯಾಸ ಮಾಡಿ ತಾವೇ ಬಿಡಿಸತಕ್ಕದ್ದು. ಆದರೆ ಗಳಿಸುವುದೊಂದು ಮಾರ್ಗ ಸಿಕ್ಕರೆ ಅದನ್ನು ಉಳಿಸಿಕೊಳ್ಳುವುದೂ, ಬೆಳೆಸಿಕೊಳ್ಳುವದೂ. ಅವರವರ ದುಡಿತ, ಕರ್ತೃತ್ವಶಕ್ತಿ,' ಪತ್ತು ಮತ್ತು ಮಿತವ್ಯಯ ಇವುಗಳನ್ನೆ ಅವಲಂಬಿಸಿರುವುದು. ಇವುಗಳಲ್ಲಿ ಮಿತವ್ಯಯವೆಂಬುದೆ ಎಲ್ಲಕ್ಕೂ ಮಾರ್ಗದರ್ಶಕವಾಗಿರುತ್ತದೆ. ಮಿತವ್ಯಯವೆಂದರೆ ಜಿಪುಣತನವಲ್ಲ ; ಇದೊಂದು ಕಲೆ ಇದರಿಂದಲೇ ಜಗತ್ತಿನಲ್ಲಿ ಪತ್ತು ಬೆಳೆಯುತ್ತದೆ. ಮಿತವ್ಯಯದಿಂದಲೇ ಪ್ರಪಂಚದಲ್ಲಿ ಮಾನ-ಮರ್ಯಾದೆಗಳು ಸಿಕ್ಕುವುವಲ್ಲದೆ, ಮಾನವನು ವ್ಯವಹಾರಚತುರನೂ ಆಗುತ್ತಾನೆ. ವ್ಯವಹಾರಸ್ಥರು ಹಣದ ವೆಚ್ಚವನ್ನು ತಮ್ಮ ದೊಂದು ಧೋರಣೆಯಿಂದ ಪ್ರಸಂಗಾನುಸಾರವಾಗಿ ಮಾಡಲೆ ಬೇಕಾಗುತ್ತದೆ. ಆದರೂ ಅದರಲ್ಲಿಯೂ ಹಿಡಿತದ ಇಕ್ಕಟ್ಟಿಕೆಯು ಬೇಕೇ ಬೇಕು. ದೊಡ್ಡ ವ್ಯಾಪಾರೋದ್ಯಮಿಗಳು ಅಸಂಖ್ಯಾತ ಹಣವನ್ನು ಗಳಿಸಬಹುದು, ಕಳೆಯಬಹುದು. ಅವರ ಗೊಡವೆಗೆ ನಮ್ಮಂತಹವರು ಹೋಗುವುದೂ ಸರಿಯೆನಿಸುವುದಿಲ್ಲ. ಆದರಿಂದ ಮಧ್ಯಮತರಗತಿಯ ಜನರ ಸಲುವಾಗಿಯೆ ಈ ಬರಹ ವಿರುತ್ತದೆ. ಚಾಕರಿಯಿಂದಾಗಲಿ ಉದ್ಯೋಗದಿಂದಾಗಲಿ ಪ್ರತಿ-ತಿಂಗಳ ಆದಾಯವು ೩೫ ರೂಪಾಯಿಗಳಿಗಿಂತ ಹೆಚ್ಚು, ೧೦೦ ರೂಪಾಯಿಗಳಿಗಿಂತ ಕಡಿಮೆ ಇಲ್ಲದಷ್ಟು ಗಳಿಸುವವರಿಗಾಗಿ ಮಾತ್ರ ಇರುವುದು. ೩೫ ರೂಪಾಯಿಗಳಿಗಿಂತ ಕಡಿಮೆ ಗಳಿಕೆಯುಳ್ಳವರ ಮಿತವ್ಯಯವನ್ನು ಗೊತ್ತುಪಡಿಸುವುದು ಹಣಪ್ರಪಂಚದಲ್ಲಿ ಅಭ್ಯಾಸಮಾಡಿದ ಕೋವಿದರಿಗೂ ಅಸಾಧ್ಯವೇ ಸರಿ. ೧೦೦ಕ್ಕಿಂತ ಹೆಚ್ಚು ಗಳಿಕೆಯುಳ್ಳವರೂ ನಮ್ಮ ಹಾದಿಯನ್ನೇ ತುಳಿದರೆ, ಅವರು ಧನಾಢ್ಯರಾಗಬಹುದು. ಸಾಧಾರಣವಾಗಿ ಪಟ್ಟಣಗಳಲ್ಲಿ ಮಧ್ಯಮ ತರಗತಿಯ ಪ್ರಾಪಂಚಿಕರೇ ಹೆಚ್ಚಾಗಿರುವರು. ಅವರು ತಮ್ಮ ಗಳಿಕೆಯ ಕಡೆಗೆ ಲಕ್ಷ್ಯಕೊಡದೆ, ಮನಬಂದಂತೆ ವೆಚ್ಚಮಾಡಿ ಇಕ್ಕಟ್ಟಿನಲ್ಲಿ ಸಿಕ್ಕು ಅಪಮಾನಕ್ಕೂ ದುರ್ದಶೆಗೂ ಕಾರಣರಾಗುವರಲ್ಲದೆ, ಆತ್ಮಹತ್ಯೆಮಾಡಿಕೊಳ್ಳುವಂತಹ ಪ್ರಸಂಗವನ್ನು ತಂದುಕೊಳ್ಳುವುದರ ಉದಾಹರಣೆಗಳನ್ನೂ ನೋಡುತ್ತೇವೆ. 'ಹಾಸಿಗೆ ಇದ್ದಷ್ಟೇ ಕಾಲು ಚಾಚು' ಎಂಬ ನಾಣ್ಣುಡಿಯು 'ಮಿತವ್ಯಯದಿಂದಲೆ ಸಂಸಾರಸಾಗಿಸು' ಎಂಬರ್ಥದಲ್ಲಿಯೆ ಇದೆ. ಪ್ರಾಪಂಚಿಕನು ಮಿತವ್ಯಯದಿಂದ ಸಂಸಾರ ಸಾಗಿಸಿದರೆ ಸುವಿಚಾರಿಯೂ ಸುವ್ಯವಸ್ಥಿತನೂ ಆಗುವನಲ್ಲದೆ, ತುಂಬ ಅಚ್ಚುಕಟ್ಟುಳ್ಳವನೂ ಆಗುವನು. ಮಿತವ್ಯಯವೇ ಬಾಳುವೆಯ ತಳಹದಿಯು. ಗಳಿಸುವ ಯಜಮಾನನೊಬ್ಬನೆ ಮಿತವ್ಯಯದಿಂದಿದ್ದರೆ ನಡೆಯದು; ಅವನ ಮೇಲೆ ಅವಲಂಬಿಸಿದವರೆಲ್ಲರೂ ಆತನೊಂದಿಗೆ ಸರಿಯಾಗಿ ಸಹಕರಿಸಬೇಕು; ಎಂದರೆಯೆ ಬಾಳಿನಲ್ಲಿ ಬೆಳಕು ಬೀಳುವುದು.

ನಾಲ್ಕು ಜನರಿದ್ದ ಒಂದು ಕುಟುಂಬದವರಿಗೆ ತಿಂಗಳ ಆದಾಯ ೩೫-೫೦-೧೦೦ ಹೀಗೆ ಇದ್ದರೆ, ಹೇಗೆ ಹೇಗೆ ವೆಚ್ಚ ಮಾಡಬೇಕೆಂಬ ಲೆಕ್ಕದ ವಿವರವನ್ನು, ಈ ಕೆಳಗಿನ ಕೋಷ್ಟಕದಲ್ಲಿ, ಒಂದು ಅನುಭವಸಿದ್ಧಿಯ ಸಹಾಯದಿಂದ ಕೊಡಲಾಗಿದೆ.

ನಾಲ್ಕು ಜನ ಕುಟುಂಬದ ಒಂದು ತಿಂಗಳ ಸರಾಸರಿ.

ತಿಂಗಳ ಆದಾಯ	೩೫—೦—೦			೫೦—೦—೦			೧೦೦—೦—೦			
ವೆಚ್ಚದ ಬಾಬು	ವೆಚ್ಚ		ನೂರು ರೂಪಾಯಿಗೆ ಶೇಕಡ ವೆಚ್ಚ	ವೆಚ್ಚ		ನೂರು ರೂಪಾಯಿಗೆ ಶೇಕಡ ವೆಚ್ಚ	ವೆಚ್ಚ		ನೂರು ರೂಪಾಯಿಗೆ ಶೇಕಡ ವೆಚ್ಚ	[illegible]
	ರೂ.	ಆ.	ರೂ.	ರೂ.	ಆ.	ರೂ.	ರೂ.	ಆ.	ರೂ.	
ಊಟ, ತಿನಿಸು	೧೯	೦	೫೬	೨೨	೦	೪೪	೩೫	೦	೩೫	[illegible]
ಮನೆಯ ಬಾಡಿಗೆ	೧	೮	೬	೫	೦	೧೦	೧೦	೦	೧೦	
ಶಿಕ್ಷಣ	೦	೮	೨	೩	೦	೬	೬	೦	೬	
ಔಷಧಿ	೧	೮	೪	೧	೦	೨	೨	೦	೨	
ಅಗಸ, ಸಾಬೂನು	೧	೦	೪	೧	೦	೨	೪	೦	೪	
ಆಳು	—		—	೨	೦	೪	೩	೦	೩	
ಪ್ರವಾಸ	೦	೮	೨	೧	೦	೨	೩	೦	೩	
ಧಾರ್ಮಿಕ	೦	೪	೧	೦	೮	೧	೧	೦	೧	
ಮನೋರಂಜನೆ	೦	೮	೨	೧	೦	೨	೩	೦	೩	
ಬಟ್ಟೆ, ಹಾಸಿಗೆ, ಪಾದತ್ರಾಣ ಇ.	೩	೧೩	೧೧	೪	೮	೯	೧೦	೦	೧೦	
ಶಿಲ್ಕು	೧	೦	೪	೫	೦	೧೦	೧೦	೦	೧೦	
ಅಪದ್ಧನ	೨	೦	೮	೪	೦	೮	೧೩	೦	೧೩	
	೩೫	೦	೧೦೦	೫೦	೦	೧೦೦	೧೦೦	೦	೧೦೦	

೨೫-೫೦, ೫೦-೧೦೦ ಈ ನಡುವಿನ ಗಳಿಕೆಯವರು ಇದೇ ಪ್ರಮಾಣ ದಿಂದ ತಮ್ಮ ಖರ್ಚಿನ ಪಟ್ಟಿಯನ್ನು ಗೊತ್ತುಪಡಿಸಿಕೊಳ್ಳಬೇಕು.

ಪ್ರತಿಯೊಬ್ಬ ಗಳಿಕೆಗಾರರಿಗೂ ಆಪದ್ಧನದ ಅವಶ್ಯಕತೆ ಉಂಟೇ ಉಂಟು. ತಮ್ಮ ಗಳಿಕೆಯ ೧/೨ ಭಾಗವನ್ನು ಆಪತ್ಕಾಲಕ್ಕಾಗಿ ಕಾಯ್ದಿಡಬೇಕೆಂದು ನಮ್ಮ ಹಿಂದಿನ ಋಷಿಗಳೂ ಹೇಳಿರುವರು.

ಆಪತ್ಕಾಲದಲ್ಲಿ ಯಾರಿಂದಲೂ ಸಹಾಯವಾಗದು ಎಂಬ ಸಿದ್ಧಾಂತವನ್ನು ಯಾವಾಗಲೂ ಲಕ್ಷ್ಯದಲ್ಲಿ ಇಡಬೇಕು. ವೃದ್ಧಾಪ್ಯದ ಗಂಜಿಯನ್ನೂ ನಾವು ಕೈನಡೆಯುವಾಗಲೆ ಮಾಡಿಡಬೇಕು. ಇದನ್ನು ಹೀಗೆಯೇ ಬರೆಯುತ್ತಾಹೋದರೆ ಮುಗಿಯದ ವಿಷಯ. ಆದರಿಂದ ಪ್ರತಿಯೊಬ್ಬ ಸಂಸಾರಿಕರೂ ತಮ್ಮ ಮನಸ್ಸಿನಲ್ಲಿ ತಾವೇ ವಿಚಾರಮಾಡಬೇಕು.

ಇನ್ನು, ಮೇಲೆಬರೆದ ವಿವರಗಳಲ್ಲಿ ಮದುವೆ, ಮುಂಜಿ, ಬಾಣಂತಿತನ – ಇತ್ಯಾದಿಗಳ ಸಮಾವೇಶವಾಗಿರುವುದಿಲ್ಲ. ಇವು ದಿನಾಲು ಬರುವ ಖರ್ಚುಗಳೂ ಅಲ್ಲ. ಇವುಗಳಿಗಾಗಿ ಶಿಲಕು-ಆಪದ್ಧನಗಳ ವಿವರಗಳು ಕಾದಿಡಲ್ಪಟ್ಟಿವೆ; ಅಲ್ಲದೆ ಎಲ್ಲ ವಿವರಗಳ ಖರ್ಚೂ ಆಗದೆ, ಎಲ್ಲ ಹಾಗೆಯೆ ಅಥವಾ ಅದರ ಅಂಶ ಉಳಿಯುವುವು; ಅದನ್ನೂ ಉಪಯೋಗಿಸಬಹುದು. ಹೀಗೆ ೧೨ ಖಾನೆಗಳುಳ್ಳ



ಚೀಲದಲ್ಲಿ ಪ್ರತಿ ತಿಂಗಳೂ ಆ ಆ ವಿವರಗಳ ಹಣವನ್ನು ಹಾಕಿ, ಆದರದರ ಹಣ ಆದರದರ ಉಪಯೋಗಕ್ಕೆ ಬಳಸಬೇಕು; ತಪ್ಪಿ ಸಹ ಎರಡನೆಯ ಖಾನೆಯ ಕಡೆಗೆ ಕೈ ಹೋಗಬಾರದು. ಇದಕ್ಕೆ ಮನಃಸಂಯಮ ತುಂಬ ಬೇಕಾಗುವುದು.

ಇನ್ನು 'ನಾಲ್ಕು ಜನಕ್ಕಿಂತ ಹೆಚ್ಚು ಜನರಿದ್ದರೆ?' ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ. ನಾಲ್ಕು ಜನಕ್ಕಾಗಿ ೧೪, ೨೨, ೩೫ ರೂಪಾಯಿಗಳು ಊಟಕ್ಕಾಗಿ ಖರ್ಚುಬಂದರೆ, ಒಬ್ಬರಿಗಾಗಿ ೩॥-, ೫-, ೮॥ ಹೀಗೆ ಬರುವುದಿಲ್ಲ. ನಾಲ್ವರಲ್ಲಿ ಒಬ್ಬರ ಊಟ ಸಹಜವಾಗಿ ನಡೆಯುವುದು. ಆದರೂ ಒಬ್ಬಿಬ್ಬರು ಹೆಚ್ಚಿಗಿದ್ದರೆ ಅವರು ನೂಲುವುದು, ಹೊಲಿಗೆ, ಕಸೂತಿ ಇತ್ಯಾದಿ ಮನೆಯ ಕೈಗಾರಿಕೆಯ ದುಡಿತದಿಂದ ತಮ್ಮ ಹೊಟ್ಟೆಯ ಮಟ್ಟಿಗೆ ೪-೬ ರೂಪಾಯಿ ಗಳಿಸಿದರೆ ಸಾಕು.

ತನ್ನ ಗಳಿಕೆಗಿಂತ ಹೆಚ್ಚು ವೆಚ್ಚಮಾಡುವವರಿಗೆ ಮೊದಮೊದಲಿಗೆ ಈ ರೀತಿ ಸ್ವಲ್ಪ ಬಿಗಿಯಾಗಿ ಹೋದರೂ, ೪-೬ ತಿಂಗಳುಗಳ ನಂತರ ಈ ರೀತಿ ರೂಢಿಯಾಗಿಬಿಡುವುದು. ಹಾಗೆ ರೂಢಿಯಾಗುವುದು ಅತ್ಯಾವಶ್ಯಕ. ಇಲ್ಲದಿದ್ದರೆ ಗಳಿಕೆಗಿಂತಲೂ ಬಳಿಕೆಯ ಅಂಕಿ ಹೆಚ್ಚಾಗಿ, ಸಂಸಾರವು ದಿವಾಳಿಗೇಳುವುದು ಖಂಡಿತವಾದ ಸಂಗತಿ.

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

೧೯೪೧ ನೆಯ ಇಸ್ವಿಯಲ್ಲಿ ಗ್ರಂಥಕರ್ತರಿಗೆ ಕೊಡಲಾಗುವ ಪಾರಿತೋಷಕದ ಬಗ್ಗೆ ಪ್ರಕಟನೆ

(೧) ಕೆಳಗೆ ಕಾಣಿಸಿದ ವಿಷಯಗಳಲ್ಲಿ ಯಾವುದೊಂದನ್ನು ಕುರಿತು ಸ್ವತಂತ್ರವಾಗಿ ಬರೆದ ಕನ್ನಡ ಗ್ರಂಥಗಳಿಗೆ ಪಾರಿತೋಷಕವನ್ನು ಕೊಡಲು ೩೦೦ ರೂಪಾಯಿಗಳನ್ನು ಕಾದಿರಿಸಲಾಗಿದೆ.

ವಿಷಯವಿವರಣೆ

(ಅ) ಕನ್ನಡ ಸಾಹಿತ್ಯದ ಯಾವುದೇ ಒಂದು ಕಾಲದ ಇತಿಹಾಸ.

(ಬ) ಯಾವನೊಬ್ಬ ಕನ್ನಡ ಕವಿಯ ಇಲ್ಲವೆ ಯಾವುದೆ ಒಂದು ಗ್ರಂಥದ ವಿಮರ್ಶಾತ್ಮಕ ಗ್ರಂಥ.

(ಕ) ಆಧುನಿಕ ಭಾರತೀಯ (ಕನ್ನಡವನ್ನು ಬಿಟ್ಟು) ಇಲ್ಲವೆ ಯುರೋಪಿಯನ್ ಭಾಷೆಯಲ್ಲಿಯ ಸಾಹಿತ್ಯದ ವಿಮರ್ಶಾತ್ಮಕ ಗ್ರಂಥ.

(ಡ) ವಿಜ್ಞಾನದ ಬೆಳೆವಣಿಗೆ.

(೨) ಪುಸ್ತಕಗಳ ಯೋಗ್ಯತಾನುಸಾರವಾಗಿ, ಮೂರರ ವರೆಗೆ ಪಾರಿತೋಷಕಗಳನ್ನು ಕೊಡಲಾಗುವುದು. ಬಂದ ಪುಸ್ತಕಗಳಲ್ಲಿ ಒಂದೇ ಒಂದು ಉತ್ತಮವೆಂದು ನಿರ್ಣಯವಾದಲ್ಲಿ, ೩೦೦ ರೂಪಾಯಿಗಳ ಒಂದೇ ಪಾರಿತೋಷಕವನ್ನೂ ಕೊಡಬಹುದು.

(೩) ಕೈಬರೆಹದ ಪುಸ್ತಕಗಳನ್ನು ಕಾರ್ಯದರ್ಶಿಗಳ ಕಡೆಗೆ ೧೯೪೦ ನೆಯ ಡಿಸೆಂಬರ್ ೩೧ ರೊಳಗಾಗಿ ಮುಟ್ಟುವಂತೆ ಕಳುಹಿಸಬೇಕು. ಪಾರಿತೋಷಕವನ್ನು ಪಡೆದ ಪುಸ್ತಕಗಳನ್ನು ಇಟ್ಟುಕೊಂಡು, ಉಳಿದುವುಗಳನ್ನು ಗ್ರಂಥಕರ್ತರಿಗೆ ಅವರ ವೆಚ್ಚದಿಂದ ತಿರುಗಿ ಕೊಡಲಾಗುವುದು.

(೪) ಉಳಿದ ೩೦೦ ರೂಪಾಯಿಗಳನ್ನು, ನಡೆಯುವ ವರ್ಷದಲ್ಲಿ ಎಂದರೆ ೧೯೪೦ ರಲ್ಲಿ ಪ್ರಕಟವಾದ ಯಾವ ಉತ್ತಮ ಗ್ರಂಥಗಳಿಗೂ ಈಗಿನಂತೆ ಪಾರಿತೋಷಕಗಳನ್ನು ಹಂಚಲು ಉಪಯೋಗಿಸಲಾಗುವುದು.

(೫) ಮುದ್ರಿತ ಪುಸ್ತಕಗಳ ೭ (ಏಳು) ಪ್ರತಿಗಳನ್ನು, ಇದೇ ಅಕ್ಟೋಬರ್ ೩೧ರೊಳಗಾಗಿ ಸಂಘದ ಕಾರ್ಯದರ್ಶಿಗಳ ಕಡೆಗೆ ಮುಟ್ಟುವಂತೆ ಕಳುಹಿಸಬೇಕು.

ಕಾಂತೇಶ ಕೆಮಲಾಪೂರ
ಬೆಟಗೇರಿ ಕೃಷ್ಣಶರ್ಮ
ಗೌರವಕಾರ್ಯದರ್ಶಿಗಳು
ಕ. ವಿ. ವ. ಸಂಘ, ಧಾರವಾಡ.

ಟೀಪು:— ಪಾರಿತೋಷಕ ಕೊಡುವುದರ ಸಲುವಾಗಿ ನಿಯಮಗಳನ್ನೂ ಅರ್ಜಿಯ ನಮೂನೆಗಳನ್ನೂ ಕ. ವಿ. ವ. ಸಂಘದ ಕಾರ್ಯದರ್ಶಿಗಳಿಗೆ ಬರೆದು ತರಿಸಿಕೊಳ್ಳಬೇಕು. ಪ್ರತಿ ಒಂದು ನಮೂನೆಗೆ ಎರಡಾಣೆ ಬೆಲೆ ಬೀಳುವುದು.

ಕಿಶೋರಿಲಾಲ ಮಶ್ರೂವಾಲಾ

★

ಶ್ರೀ. ಸಿ. ಕೃಷ್ಣಶರ್ಮರು

ಗಾಂಧಿಜಿಯವರ ತತ್ತ್ವಜ್ಞಾನವನ್ನು ಪೂರ್ಣವಾಗಿ ಗ್ರಹಿಸಿಕೊಂಡವರು ಹಿಂದುಸ್ಥಾನದಲ್ಲಿ ತೀರ ಕಡಮೆ ಜನರು. ಕಿಶೋರಿಲಾಲರು ಅವರಲ್ಲಿ ಮುಖ್ಯರಾದ ಒಬ್ಬರು. ಇವರ ಆದರ್ಶಜೀವನದಲ್ಲಿಯ ನಿಷ್ಠೆ, ಗಾಂಧಿಜಿಯವರನ್ನು ಕೂಡ ಬೆರಗುಗೊಳಿಸುವಂತಹದಾಗಿದೆ.

★

'ಸಂಘಂ ಶರಣಂ ಗಚ್ಛಾಮಿ' ಎಂಬ ಮಂತ್ರವನ್ನು ತನ್ನ ಅನುಯಾಯಿಗಳಿಗೆ ಪಾಠ ಮಾಡಿಸುತ್ತಿದ್ದಾಗ, ಭಗವಾನ್ ಬುದ್ಧದೇವನು ಜಗತ್ತಿಗೇ ಒಂದು ಬೆಳಕನ್ನು ತೋರಿದ. ಬೌದ್ಧರಿಗೆ ಬುದ್ಧನೇ ಭಗವಂತ. ಬುದ್ಧನನ್ನೂ ಸತ್ಯವನ್ನೂ ಶರಣುಹೋಗಬಹುದು. ಆದರೆ ಸಂಘವನ್ನು ಮರೆತರೆ ಆವೆರಡೂ ನಿರುಪಯೋಗವಾದಾವು. ಸತ್ಯವೇ ಆಗಲಿ ಒಂದು ಸಂಘಟಿತಸ್ವರೂಪ, ಒಂದು ಕ್ರಮ ವ್ಯವಸ್ಥೆ ಇರದೆ ಇದ್ದರೆ ಅದು ಬೆಳೆಯಲಾರದು. ಬೆಳೆದರೂ ಅದರ ಪರಿಣಾಮ ಕಾಡಿನಲ್ಲಿ ಚೆಲ್ಲಿದ ಬೆಳದಿಂಗಳ ಹಾಗೆ.

ಈ ಮಾತನ್ನು ವ್ಯಾಸಮಹರ್ಷಿಯು ತಿಳಿಸಿದಷ್ಟು ಮೊನೆಯಾಗಿ ಹರಿತವಾಗಿ ಯಾರೂ ತಿಳಿಸಿಲ್ಲ. ವೇದದ ಕಡಲಲ್ಲಿ ಮುಳುಗಿ ತೇಲಿ, ಅದನ್ನೆಲ್ಲ ಸರಿಯಾಗಿ ವಿಂಗಡಿಸಿ, ಸಮನಿಸಿ ಇಟ್ಟ ಮಹಾನುಭಾವ. ಧರ್ಮವನ್ನು ಬುಡದಿಂದ ಕೊನೆಯವರೆಗೆ ಪರಿಶೋಧಿಸಿ ಕಂಡು ಹಿಡಿದ ಮಹಾಸಾಹಸಿ. ಸಮಾಜದ ಆಳ-ಎತ್ತರಗಳನ್ನೂ ಇರುಕು-ಅಗಲಗಳನ್ನೂ ಅಳೆದು ನೋಡಿದ ಅನುಭವಶಾಲಿ. ಪಂಚಮವೇದವನ್ನೇ ಹೇಳಿದ. ಗೀತೆಯನ್ನೇ ಜಗತ್ತಿನ ಮುಂದೆ ಇಟ್ಟ. ಪುರಾಣಗಳನ್ನೂ ಉಪದೇಶಿಸಿದ. ಹಿಂದೂಧರ್ಮಕ್ಕೆ ವ್ಯಾಸಮಹರ್ಷಿ ಮಾಡಿದ ಉಪಕಾರ ಸಾಟಿ ಇಲ್ಲದುದು. ಅಂತಹ ಅದ್ಭುತಜೀವ ಜಗತ್ತಿನಲ್ಲಿ ಬೇರೆ ಎಲ್ಲಿಯೂ ಹುಟ್ಟಿಲ್ಲ. ಮತ್ತೆ ಇಲ್ಲೇ ಹುಟ್ಟುವ ನಂಬಿಗೆ ಸಾಲದು. ವ್ಯಾಸಪ್ರೋಕ್ತವಲ್ಲದುದು ಏನಿದೆ ಹಿಂದೂ ಧರ್ಮದಲ್ಲಿ? ಆ ಕೈವಾಡಕ್ಕೆ ಹೊರತಾದದ್ದು ಏನಿದೆ ಈ ಸಂಸ್ಕೃತಿಯಲ್ಲಿ?

ಅಂತಹ ವ್ಯಾಸರೂ ಕೊನೆಯ ದಿನಗಳಲ್ಲಿ ಗೋಳಾಡುತ್ತ ಹೇಳಿದರು:

'ಊರ್ಧ್ವಬಾಹುರ್ವಿರೌಮ್ಯೇಷ ನ ಚ ಕಶ್ಚಿಚ್ಛೃಣೋತಿ ಮೇ ।
ಧರ್ಮಾದರ್ಥಶ್ಚ ಕಾಮಶ್ಚ ಸ ಧರ್ಮಃ ಕಿಂ ನ ಸೇವ್ಯತೇ ॥'

'ನಾನು ಇಷ್ಟು ಸಾರಿ ಸಾರಿ ಕೈಯೆತ್ತಿ ಹೇಳುತ್ತಿದ್ದರೂ ಕೇಳುವವರೇ ಇಲ್ಲವಲ್ಲ. ಧರ್ಮವು ಅರ್ಥವನ್ನೂ ಕಾಮವನ್ನೂ ಕೊಡುತ್ತದೆ. ಯಾಕೆ ನೀವು ಧರ್ಮವನ್ನು ಅನುಸರಿಸಬಾರದು?' ಆದರೆ ಯಾರೂ ಆ ಹಾದಿ ತುಳಿಯರು. ಏಕೆ ಹೀಗೆ?

ಅರ್ಥಬಲಕ್ಕೆ ಅಂಗಬಲ ಬೇಕು. ಇವೆರಡಕ್ಕೂ ಒಂದು ಶಿಸ್ತು, ಸಂಘಟನೆ ಬೇಕು. ದೇವರಿಗೇ ಆದರೂ ಒಂದು ರೂಪ ಬೇಕು. ರೂಪವಿಲ್ಲದ ನಿರಾಕಾರನಾದ ದೇವರು ಜನರ ಮನಸ್ಸಿನಲ್ಲಿ ನಿಲ್ಲಲಾರ. ಹೊಗೆಯಂತೆ ತೆಳ್ಳಗಾಗಿ ತಿಳಿಯಾಗಿ ಹೋಗುತ್ತಾನೆ. ಈ ನಿಯಮವು ನಾಮ-ರೂಪದ ಜಗತ್ತಿನಲ್ಲಿ ಎಲ್ಲಕ್ಕೂ ಇದೆ. ಸತ್ಯಕ್ಕೇ ಆಗಲಿ, ಧರ್ಮಕ್ಕೇ ಆಗಲಿ, ಮಿಂಚಿನಂತೆ ಯಾವಾಗಲಾದರೂ ಹೊಳೆದು ಹೋಗುವ ರೂಪು ಸಾಲದು. ಆ ಜೀವಕ್ಕೆ ಒಂದು ಮೈ ಬೇಕು. ಬುದ್ಧದೇವನಿಗಿಂತ ಮೊದಲು ಈ ಮಾತು, ಧರ್ಮದ ಅಂಗಳದಲ್ಲಿ ಯಾರಿಗಾದರೂ ಒಪ್ಪಿಗೆ ಆಗಿತ್ತೋ ಇಲ್ಲವೋ ತಿಳಿದಿಲ್ಲ. ಬುದ್ಧನ ಕಾಲದಲ್ಲಿ ಈ ಮಾತಿನ ಅನುಭವ ಬರಿಯ ಶಾಸ್ತ್ರವಾಗಿ ಉಳಿಯಲಿಲ್ಲ; ಅರ್ಧ ಜಗತ್ತಿಗೇ ಜ್ಞಾನದೀಕ್ಷೆ ಕೊಟ್ಟು, ಹೊಸತೊಂದು ಬೆಳಕನ್ನು ಸಂಸ್ಕೃತಿಯಲ್ಲಿ ಬೆರೆಯಿಸಿದ ಬೌದ್ಧಭಿಕ್ಷುಸಂಘವಾಗಿ ರೂಪುಗೊಂಡಿತು.

ಬುದ್ಧದೇವನ ತರುವಾಯ ಹುಟ್ಟಿದ ಯಾವ ಮುಂದಾಳೂ ಆ ಸೂತ್ರವನ್ನು ಮರೆತಿಲ್ಲ. ಸಂಘಶಕ್ತಿಯ ಬಲವನ್ನು ಯಾರೂ ಅಸಡ್ಡೆ ಮಾಡಿಲ್ಲ. ದ್ವೈತಾದ್ವೈತ, ವಿಶಿಷ್ಟಾದ್ವೈತಗಳೇನು, ಸಾಮ್ಯವಾದ-ರಾಷ್ಟ್ರವಾದಗಳೇನು, ಎಲ್ಲವೂ ಸಂಘವನ್ನು ಶರಣುಹೋಗಿವೆ. ತಮ್ಮ ತಮ್ಮ ಕೋಟೆ-ಕೊತ್ತಳಗಳನ್ನು ಕಟ್ಟಿಕೊಂಡಿವೆ. ಧರ್ಮಸಂಸ್ಥಾಪನೆಯಾಗಲಿ, ರಾಷ್ಟ್ರನಿರ್ಮಾಣವಾಗಲಿ, ಲೋಕಸಂಗ್ರಹವಿಲ್ಲದೆ ಆಗದು. ಲೋಕಸಂಗ್ರಹಕ್ಕೆ ಸಮಾಜದಲ್ಲಿ ಸಂಘಟನೆ ಬೇಕು.

ಗಾಂಧೀಜಿ ಈ ನೀತಿಯನ್ನು ಚೆನ್ನಾಗಿ ಬಲ್ಲರು. ಕೈಯಲ್ಲಿ ಕತ್ತಿಯನ್ನು ಹಿಡಿದು, ಜನರನ್ನೆಲ್ಲ ಒಂದು ಮಂದೆಯಾಗಿ ಸೇರಿಸುವ ಬಲವು ಒಂದು ಚಾತುರ್ಯವಲ್ಲ. ಸುಖ-ಭೋಗಗಳಿಗೆ ಹಾದಿಮಾಡಿ ತಮ್ಮ ಪಕ್ಷ ಬೆಳೆಯಿಸುವುದೂ ವಿಶೇಷವಲ್ಲ. ತ್ಯಾಗ-ಸೇವೆಗಳ ಕಂಟಕಕಿರೀಟವನ್ನು ಕೈಯಲ್ಲಿ ಹಿಡಿದು, ಕೇವಲ ಬಿನ್ನಹ ತರ್ಕಗಳಿಂದ ಕೋಟಿಗಟ್ಟಲೆ ಜನರನ್ನೂ ಒಂದು ನಿಯಮ–ಶಿಸ್ತು ಒಂದು ವ್ಯವಸ್ಥಿತವಾದ ಆಡಳಿತಕ್ಕೆ ಒಳಪಡಿಸಿಕೊಳ್ಳುವುದು ಗಾಂಧೀಜಿಗೆ ವಿನಾ ಬೇರೆ ಯಾರಿಗೂ ಸಾಧ್ಯವಿಲ್ಲ.

ತಮ್ಮ ಸತ್ಯಾಗ್ರಹಸಿದ್ಧಾಂತವನ್ನು ಬಿತ್ತಲೂ ಹರಡಲೂ ಗಾಂಧೀಜಿ ಹಲವು ಬಗೆಯ ಸಾಧನೆಗಳನ್ನು ಉಪಯೋಗಮಾಡಿದ್ದಾರೆ. ಅವರ ದರ್ಶನ ಬಹಳ ವ್ಯಾಪಕವಾದುದು. ಇಡಿಯ ಜೀವನವನ್ನೇ ಕವಿದುಕೊಳ್ಳುತ್ತದೆ. ಬರಿಯ ರಾಜಕಾರಣದ ಕಾಂಗ್ರೆಸ್ ಅವರಿಗೆ ಸಾಲಲಿಲ್ಲ. ಖಾದಿಯ ಕೇಂದ್ರಗಳನ್ನು ಹೂಡಿದರು. ಆಶ್ರಮಗಳನ್ನು ಸ್ಥಾಪಿಸಿದರು. ಹರಿಜನ ಸೇವಕ-ಸಂಘವನ್ನು ಕಟ್ಟಿದರು. ಪತ್ರಿಕೆಯನ್ನು ಹಿಡಿದರು. ರಾಷ್ಟ್ರೀಯ ಶಾಲೆ-ವಿದ್ಯಾಪೀಠಗಳನ್ನು ನಿರ್ಮಿಸಿದರು. ಗ್ರಾಮೋದ್ಯೋಗ-ಸಂಘವನ್ನು ನೆಲೆಗೊಳಿಸಿದರು. ಇವೆಲ್ಲದರ ಜೀವಾಳವಾಗಿ ಗಾಂಧೀ ಸೇವಾಸಂಘ ರೂಪುಗೊಂಡಿತು. ಅದೇ ಗಾಂಧೀಜಿಯ ಸತ್ಯ-ಅಹಿಂಸೆಗಳ ಸತ್ಯಾಗ್ರಹದ ಗುಡಿಯನ್ನು ಹಿಡಿದುನಿಂತ ಗಾಂಧೀಸೇನೆ.

ಆ ಸೇನೆಯ ಅಲಗು— ಅದರ ಮೊದಲಾಳು **ಕಿಶೋರಿಲಾಲ ಮಶ್ರೂವಾಲಾ.** ಅವರೇ ಅದರ ಧ್ವಜಧಾರಿ. ಎಂದೂ ಆ ಬಾವುಟವನ್ನು ಅವರು ಕೆಳಗೆ ಇಳಿಸಿಲ್ಲ. 'ಪ್ರಾಪ್ಯವರಾನ್ನಿಬೋಧತ' ಎಂಬ ಶ್ರುತಿಯನ್ನು ನಂಬಿ, ತಡೆ-ಬಿಡುವು ಇಲ್ಲದೆ ಆ ಗುರಿಯನ್ನು ಹೊತ್ತು ಸಾಗಿದ್ದಾರೆ. ಕಿಶೋರಿಲಾಲರನ್ನೂ ಗಾಂಧೀ ಸೇವಾಸಂಘವನ್ನೂ ನೆನೆದರೆ ಒಂದು ಚಿತ್ರ ಕಣ್ಣಿಗೆ ಕಟ್ಟಿ ನಿಲ್ಲುತ್ತದೆ. ಟೆನಿಸನ್ ಕವಿಯ

and tho'
We are not now that strength which in old days
Moved earth and heaven ; that which we are,
we are ;
One equal Temper of heroic hearts,
Made weak by time and fate, but strong in will
To strive, to seek, to find and not to yield.

ಎಂಬ ಸಾಲುಗಳು ನೆನಪಿಗೆ ಬರುತ್ತವೆ.

ಮಹಾಯುದ್ಧವು ಮೊದಲಾದ ಮೇಲೆ ಗಾಂಧೀಜಿಯ ಶಿಷ್ಯರಲ್ಲಿ— ಗಾಂಧೀ ಸೇವಾ ಸಂಘದ ಸದಸ್ಯರಲ್ಲಿ ಕೂಡ— 'ಅಹಿಂಸೆಯು ಅಂತಿಮಸತ್ಯವೇ ?' 'ಧರ್ಮ್ಯವಾದ ಹಿಂಸೆಗೂ ಸ್ಥಾನ ಇಲ್ಲವೇ ?' ಎಂಬ ಆ ಸಂದೇಹ ಬಂದಿದೆ. ಗಾಂಧೀವಾದಿಗಳಲ್ಲಿ ಪ್ರಮುಖರೆನಿಸಿದ್ದವರು ಕೂಡ ತಮಗಾಗಿಯೋ, ತಮ್ಮ ಅನುಯಾಯಿಗಳಿಗಾಗಿಯೋ, ಅಹಿಂಸೆಯು ಪರಮಧರ್ಮವಾದರೂ ಸರ್ವಕಾಲ ಸರ್ವಪ್ರದೇಶದ ಧರ್ಮವಲ್ಲ ಎಂದುಬಿಟ್ಟರು. ಅವರಲ್ಲಿ ಬುದ್ಧಿವಂತರಾದವರು 'ಧರ್ಮ್ಯಹಿಂಸೆ ಅಹಿಂಸೆಯೇ' ಎಂದರು. ಇದೆಲ್ಲವನ್ನು ನೋಡಿ ಗಾಂಧೀಜೀ 'ಒಂಟಿಯಾದರೂ ನನ್ನ ದಾರಿ ಬಿಡಲಾರೆ. ಒಂದೇ ನೇಗಿಲಾದರೂ ಚಿಂತೆಯಿಲ್ಲ ನಾನು ಉಳುವೆ' ಎಂದರು. ಕಿಶೋರಿಲಾಲರು ಅಂತಹ ಹೊತ್ತಿನಲ್ಲೂ ಗಾಂಧೀಧರ್ಮದ ಗುಡಿಯನ್ನು ಕೆಳಗೆ ಇಳಿಸಲಿಲ್ಲ.

ಈ ವರ್ಷ ಕಿಶೋರಿಲಾಲರು ಗಾಂಧೀಸೇವಾಸಂಘದ ಸಮಿತಿಯ ಸದಸ್ಯರು. ಅಧ್ಯಕ್ಷರು ಬೇರೆ. ಆದರೂ ಇವರೇ ಅದರ ಜೀವಾಳ. ಕಳೆದ ಐದು ವರ್ಷಗಳಿಂದಲೂ ಅದರ ಅಧ್ಯಕ್ಷರಾಗಿದ್ದವರು ಇವರೇ. ಈ ಐದು ವರ್ಷಗಳಲ್ಲಿ ಸಂಘವು ಅನೇಕ ಮಹತ್ತ್ವದ ಮಾತುಗಳನ್ನು ಆಲೋಚಿಸಿ ನಿರ್ಣಯಮಾಡಿದೆ. ಸತ್ಯ-ಶೋಧಕರ ಈ ಗುಂಪಿನಲ್ಲಿ ರಾಜಕಾರಣದ ಪ್ರಭಾವ ಬಹಳ ಬಿದ್ದಿತ್ತು. ರಾಜಕೀಯ ನಾಯಕರೇ ಇಲ್ಲಿಯೂ ಮುಂದಾಳುಗಳಾಗಿ ಇದ್ದರು. ಕಿಶೋರಿಲಾಲರ ಶುದ್ಧಜೀವಕ್ಕೆ ಈ ಕಲಬೆರಕೆಯ ಸೊಪ್ಪು ನಿರುಪಯೋಗ ಎನಿಸಿತು. ಮೊದಲು ಮಂತ್ರಿಗಳು, ಶಾಸನ ಸಭೆಯ ಸದಸ್ಯರು, ಕೊನೆಗೆ ರಾಜಕೀಯ ನಾಯಕರು—ಒಂದೊಂದು ಹೆಜ್ಜೆಯಂತೆ—ಎಲ್ಲರನ್ನೂ ಗಾಂಧೀ ಸೇವಾಸಂಘದಿಂದ ದೂರಮಾಡಿ, ಆ ಗುಂಪಿನ ಸತ್ಯವನ್ನು ಕಾಯ್ದುಕೊಳ್ಳಲು ಯತ್ನಮಾಡಿದರು. ಸತ್ಯಸಾಧನೆಯಲ್ಲಿ ಗಾಂಧೀಜಿಯಲ್ಲಿ ಇದ್ದಷ್ಟೇ ನಿಷ್ಠುರವೃತ್ತಿ ಇವರದು. 'ಗಾಂಧೀ-ಸೇವಾ ಸಂಘವನ್ನೇ ಮುರಿಯದೆ ಗಾಂಧೀಧರ್ಮ ಉಳಿಯದು' ಎಂದು ಇವರಿಗೆ ಎನಿಸಿತು. ಆ ತ್ಯಾಗಕ್ಕೂ ಸಿದ್ಧರಾದರು. ಸತ್ಯಕ್ಕಾಗಿ ಯಾವ ತ್ಯಾಗವಾದರೇನು ?

ಇವರು ಗುಜರಾತಿ ಜನ. ವೈಶ್ಯವರ್ಣ. ಆದರೆ ಮಹಾರಾಷ್ಟ್ರದಲ್ಲಿ ಹುಟ್ಟಿ ಬೆಳೆದಿದ್ದಾರೆ. ಆ ಪ್ರಾಂತದ ವಿವೇಕ ಈ ಪ್ರಾಂತದ ದಾರ್ಢ್ಯ ಎರಡೂ ಇವರಿಗೆ ಲಭಿಸಿವೆ. ಬಿರಾರ ಪ್ರಾಂತದ ಅಕೋಲಾದವರು. ಅಲ್ಲಿ ವಕೀಲರಾಗಿದ್ದರು. ಗಾಂಧೀಜಿಯ ಕಹಳೆಯ ಧ್ವನಿಗೆ ಓಗೊಟ್ಟು, ವಕೀಲಿಯನ್ನು ಬಿಟ್ಟು ಸಾಬರಮತಿಯ ಕಡೆಗೆ ಓಡಿದರು. ಅಲ್ಲಿಂದ ಮುಂದೆ ಇವರಿಬ್ಬರ ನಿಕಟ ಸಂಬಂಧ ಬೆಳೆಯಿತು.

ಕಿಶೋರಿಲಾಲರಿಗೆ ಶಿಕ್ಷಣ, ತತ್ತ್ವಶಾಸ್ತ್ರಗಳಲ್ಲಿ ರುಚಿ ಹೆಚ್ಚು. ಯಾವ ವಿಷಯವನ್ನೇ ಆಗಲಿ ಸೂಕ್ಷ್ಮವಾಗಿ ಪರಿಶೀಲಿಸಿ, ಬಿಕವಾಗಿ ವಿಂಗಡಿಸಿ ನೋಡುತ್ತಾರೆ. ತರ್ಕದ ಹಿಡಿತ ಚೆನ್ನಾಗಿದೆ. ಜೀವನದಲ್ಲಿ ಸಂಭವಿಸುವ ಕೃತಿಗಳನ್ನು ತತ್ತ್ವದ ಒರೆಗೆ ಹಚ್ಚಿ ನೋಡುವುದರಲ್ಲಿ ನಿಪುಣರು. ಪ್ರವೃತ್ತಿ ಆಧ್ಯಾತ್ಮಿಕ, ಸ್ವಭಾವ ಸೂಕ್ಷ್ಮ, ಮಾತಿನಲ್ಲಿ ಸ್ಪಷ್ಟಬಾಷೆ. ಇವರು ವಿಚಾರಮಾಡುವ ಹಾದಿ ತೀರಾ ಸ್ವತಂತ್ರವಾದುದು. ಹೀಗಾಗಿ ಅನೇಕ ಸಲ ಇವರ ವಿಮರ್ಶೆ, ಟೀಕೆ ಬಹಳ ಕಟುವಾಗಿ ಕಾಣಬರುತ್ತದೆ. ಗಾಂಧೀಜಿಯ ಸಿದ್ಧಾಂತಗಳನ್ನು ಪೂರ್ಣವಾಗಿ ಗ್ರಹಿಸಿದವರು ಹಿಂದುಸ್ಥಾನದಲ್ಲಿ ಬಹಳೇ

ಕೊಲ್ಹಾಪುರದಲ್ಲಿಯ
ಹೆಸರಾದ ಟೊಪ್ಪಿಗೆಯ ವ್ಯಾಪಾರಿಗಳು.
ಬೋಂಗಾಳೇ ಬ್ರದರ್ಸ್, ಕ್ಯಾಪ್ ಮೇಕರ್ಸ್
ಮಹಾದ್ವಾರ ರೋಡ್, ಕೊಲ್ಹಾಪುರ ಸಿಟಿ.
❋ ಎಲ್ಲ ಮಾದರಿಯ ಟೊಪ್ಪಿಗೆಗಳೂ ಸರಿಯಾದ ಬೆಲೆಗೆ ಸಿಕ್ಕುವವು. ಕರ್ನಾಟಕದಲ್ಲಿಯ ಗೋಕಾಕ, ಚಿಕ್ಕೋಡಿ, ರಾಮದುರ್ಗ ಮೊದಲಾದ ಮುಖ್ಯಸ್ಥಳಗಳಲ್ಲೆಲ್ಲ ಪ್ರಸಿದ್ಧಿಯಿದೆ. ತಾವೂ ವಿಚಾರ ಮಾಡಿರಿ, ಒಮ್ಮೆ ಟೊಪ್ಪಿಗೆಗಳನ್ನು ತರಿಸಿ ಅನುಭವ ಪಡೆಯಿರಿ.

೬-೩೬೮೭

ಸ್ವಲ್ಪ ಜನ. ಕಿಶೋರಿಲಾಲರು ಅವರಲ್ಲಿ ಮುಖ್ಯರಾದ ಒಬ್ಬರು. ಅಂತೇ ೧೯೩೪ ರಲ್ಲಿ ಗಾಂಧೀಸೇವಾಸಂಘವು ಈಗಿನ ರೂಪಕ್ಕೆ ಬಂದಾಗ, ಗಾಂಧೀಜೀ ಇವರನ್ನು ಅದಕ್ಕೆ ಅಧ್ಯಕ್ಷರಾಗಿರಲು ಆರಿಸಿದರು. ಅಂದಿನಿಂದ ಕಿಶೋರಿಲಾಲರು ವರ್ಧಾದಲ್ಲೇ ಇದ್ದಾರೆ.

ಕಾಂಗ್ರೆಸ್ಸಿನ ವ್ಯವಹಾರದಲ್ಲಿ ಇವರು ಹೆಚ್ಚು ಪ್ರವೇಶಿಸುವುದಿಲ್ಲ. ಆದರೂ ಬೊಂಬಾಯಿ ಕಾಂಗ್ರೆಸ್ಸಿನಲ್ಲಿ ಕಾಂಗ್ರೆಸ್ಸಿನ ರಚನೆ, ಘಟನೆಗಳಲ್ಲಿ ಮಾಡಲ್ಪಟ್ಟ ದೂರವ್ಯಾಪಿಯಾದ ಬದಲಾವಣೆಗಳಿಗೆ ಇವರು ಕಾರಣರು. ಗಾಂಧೀಜಿಯೊಡನೆ ಅನೇಕ ಸಲ ಧೈರ್ಯವಾಗಿ ಸ್ಪಷ್ಟವಾಗಿ ವಾದಿಸಿ, ತಮ್ಮ ಭಿನ್ನಾಭಿಪ್ರಾಯವನ್ನು ತೋರಿಸಿದ್ದಾರೆ. ಇವರಿಬ್ಬರಲ್ಲಿ ತಾತ್ತ್ವಿಕ ಮತಭೇದವಾದಾಗ ಕಿಶೋರಿಲಾಲರಿಗೇ ಜಯವಾಗುವುದು ಹೆಚ್ಚು ಸಲ. ಇವರದು ಸಿದ್ಧಾಂತದ ಅಸಿಧಾರೆ. ಗಾಂಧೀಜಿಯವರದು ವ್ಯವಹಾರದ ಸಮನ್ವಯ. 'ವ್ಯವಹಾರಕ್ಕಾಗಿ ಆದರ್ಶವನ್ನು ಮಸಕು ಮಾಡಿದರೆ ಬೆರಳುಕೊಟ್ಟು ಕೈ ನುಂಗಿಸಿಕೊಂಡಂತೆ' ಎಂದು ಸಂಘದ ಅಧ್ಯಕ್ಷರ ದೃಷ್ಟಿ. 'ಸಂಘದ ಸದಸ್ಯರು ರಾಜಕೀಯ ಶಾಸನಸಭೆಗಳಲ್ಲಿರಬೇಕೋ ಬೇಡವೋ' ಎಂಬ ಪ್ರಶ್ನೆ ಮೇಲೆ ಹೇಳಿದ ರೀತಿಯಲ್ಲಿ ತೀರ್ಮಾನವಾಗಲು, ಕಿಶೋರಿಲಾಲರ ಆದರ್ಶವಾದಿತ್ವವೇ ಕಾರಣ.

ಕಿಶೋರಿಲಾಲರು ಗುಜರಾತಿಗೆ ಹೋದಮೇಲೆ ಗುಜರಾಥ ವಿದ್ಯಾಪೀಠದ ರೆಜಿಸ್ಟ್ರಾರರಾಗಿದ್ದರು. ಸತ್ಯಾಗ್ರಹದ ಬೇಗೆಯಲ್ಲಿ ಇವರೂ ಕಾರಾಗಾರ ಕಂಡಿದ್ದಾರೆ. ಒಂದು ಸಲ ಇವರೂ ಸರದಾರರೂ ಒಟ್ಟಿಗೆ ಸೆರೆಯಲ್ಲಿದ್ದರು. ಇವರ ಮೈ ಹುಟ್ಟಾ ದುರ್ಬಲವಾದುದು. ಇವರ ಮರಿತನದಲ್ಲೇ ಶ್ವಾಸರೋಗ ಹುಟ್ಟಿಬಂದಿದೆ. ಸೆರೆಮನೆಯಲ್ಲಿ ಆರೋಗ್ಯ ಮತ್ತೂ ಕೆಟ್ಟುಹೋಯಿತು.

ನೋಡಲು ಕಡ್ಡಿಯಂತೆ ಸೀರಲು, ಬರಗಾಲದ ಕಂಗಾಲರಂತೆ ಕಾಣುತ್ತಾರೆ. ಆದರೆ, ಈ ನಿರ್ಬಲದೇಹದಲ್ಲಿ ಅಡಗಿರುವ ಜೀವ ಮಾತ್ರ ಅಜೇಯವಾದುದು, ಅದಮನೀಯವಾದುದು.

ಕಿಶೋರಿಲಾಲರ ಬಾಳಿನಲ್ಲಿ ಈ ಅಮರಜ್ಯೋತಿಯನ್ನು ಬೆಳಗಿಸಿದ ಹಣತೆಗಳು ಅವರ ಸತ್ಯಪ್ರೇಮ, ಬ್ರಹ್ಮಚರ್ಯ. ಸತ್ಯವಾಡುವುದು ಇವರಿಗೊಂದು ವ್ರತ ಎನ್ನುವುದಕ್ಕಿಂತ ಹಟ ಎನ್ನುವುದು ಸರಿ. ಇದರ ಜೊತೆಯಲ್ಲೇ ಅಸತ್ಯದ ಬಗ್ಗೆ ಅಸಹನೆಯೂ ಬೆಳೆದುಬಂದಿದೆ. ಸುಳ್ಳು ಕಪಟಗಳು ಇವರಿಗೆ ಸೇರುವುದಿಲ್ಲ. ಇಲಿ, ಬೆಕ್ಕಿನ ನ್ಯಾಯ ಅದು. ಗಿರಾಕಿ ತಂದು ಕೊಟ್ಟ ನಾಣ್ಯದಲ್ಲಿ ಒಂದೇ ಖೋಟಾ ನಾಣ್ಯವಿದ್ದರೂ ಆ ಹಣವನ್ನೆಲ್ಲಾ ತಳ್ಳಿಬಿಡುವ ಕೋಮಟಿಯಂತೆ ಇವರು. ೧೯೩೨ರ ಸತ್ಯಾಗ್ರಹದಲ್ಲಿ ವ್ಯೂಹರಚನೆ ಗುಪ್ತವಾಗಿತ್ತು, ಸರಕಾರಕ್ಕೆ ಸ್ವಲ್ಪವೂ ತಿಳಿಯಗೊಡದಂತೆ ಎಲ್ಲವೂ ಗುಟ್ಟಾಗಿ ನಡೆಯಿಸಲ್ಪಟ್ಟಿತು. ಮುಂದೆ ಗಾಂಧೀಜೀ ಈ ಗುಟ್ಟಿನ ಪದ್ಧತಿಯನ್ನು ಬಹಳ ನಿಂದಿಸಿದರು. 'ಸತ್ಯಾಗ್ರಹದಲ್ಲಿ ಇಂಥ ಗುಟ್ಟಿನ ವ್ಯವಹಾರವು ಪಾಪ' ಎಂದರು. ಇದಕ್ಕೆಲ್ಲ ಕಿಶೋರಿಲಾಲರ ಸತ್ಯಪ್ರೇಮವು ಕಾರಣ.

ಇವರ ಬ್ರಹ್ಮಚರ್ಯ ಆದರ್ಶದ ಜಾತಿಯದು. ಇವರಿಗೆ ಮೊದಲೇ ಮದುವೆಯಾಗಿತ್ತು. ಸಾಬರಮತಿಯ ಗಾಳಿ ಕುಡಿದ ಮೇಲೆ, ಬ್ರಹ್ಮಚರ್ಯದಲ್ಲಿ ಇವರಿಗೆ ಶ್ರದ್ಧೆ ಉಂಟಾಯಿತು. ಅಂದಿನಿಂದ ಗಂಡ-ಹೆಂಡಿರಿಬ್ಬರೂ ಬ್ರಹ್ಮಚಾರಿಗಳಾಗೇ ಇದ್ದಾರೆ. ಸುಳ್ಳು ಹೇಳದವರು, ಧರ್ಮವಾಗಿಯೇ ನಡೆಯುವವರು ಸಿಕ್ಕಾರು; ಆದರೆ ಇಂದ್ರಿಯ-ಸಂಯಮದಲ್ಲಿ ತೇರ್ಗಡೆ ಹೊಂದುವವರು ಅತಿ ವಿರಳ.

ಕಿಶೋರಿಲಾಲರು ಆ ಹಾದಿಯಲ್ಲಿ ನಡೆದಿದ್ದಾರೆ.

ಹಾಲ್‌ವೆಲ್ ಸ್ಮಾರಕ

ಇತ್ತೀಚಿಗಾಗಿ ವೃತ್ತಪತ್ರಿಕೆಗಳಲ್ಲಿ ಈ ಸ್ಮಾರಕದ ಬಗ್ಗೆ ಗಲಭೆ ಎದ್ದುದರ ಅರಿವು, ಓದುಗರಿಗೆ ಆಗಿರಲಿಕ್ಕೆ ಸಾಕು. ಅದು ಕಲಕತ್ತೆಯ ಕತ್ತಲೆಯ ಕೋಣೆಯಲ್ಲಿ ಆಹುತಿಯಾದ ಹುತಾತ್ಮರ ಸ್ಮಾರಕವು. ಅದರ ಬಗೆಗೆ ಇದೀಗ ಅನೇಕ ವಿಷಯಗಳು ಹೊರ ಬಂದಿವೆ. ಆ ಸ್ಮಾರಕವನ್ನು, ಮೊದಲು ೧೭೬೦ ನೆಯ ಇಸವಿಯಲ್ಲಿ, ಹಾಲ್‌ವೆಲ್ ಸಾಹೇಬರು ಕಲಕತ್ತೆಯಲ್ಲಿ ತಾತ್ಕಾಲಿಕ ಗವರ್ನರರಾಗಿದ್ದಾಗ, ತಮ್ಮ ವೆಚ್ಚದಿಂದ ನಿರ್ಮಿಸಿದರಂತೆ; ಆದರೆ ೧೮೨೧ ರಲ್ಲಿ ಲಾರ್ಡ್ ಹೇಸ್ಟಿಂಗ್ಸ್‌ರ ಅನುಜ್ಞೆಯ ಮೇರೆಗೆ ಅದನ್ನು ಕಿತ್ತೊಗೆಯಲಾಯಿತಂತೆ. ಈಗ ಇದ್ದುದು ಲಾರ್ಡ್ ಕರ್ಝನ್ ಸಾಹೇಬರು ೧೯೦೨ ರಲ್ಲಿ ಕಟ್ಟಿಸಿದುದು.

ಮೂಲ ಆ ಸಂಗತಿಯು ಎಂದರೆ ಕತ್ತಲೆಯ ಕೋಣೆಯ ಸಂಗತಿಯು ಐತಿಹಾಸಿಕ ಸಂಶೋಧನೆಗಳಿಂದ ಸುಳ್ಳೆಂಬುದು ತಿಳಿದು ಬಂದಿದೆ. ಲಾರ್ಡ್ ಕರ್ಝನರ ಕಾಲಕ್ಕೂ ಕೆಲವು ವಿಷಯಗಳು ತಿಳಿದು ಬಂದಿದ್ದುವು. ಆದರೂ ಅವರು ಹೊಸತಾಗಿಯೆ ಆ ಸ್ಮಾರಕವನ್ನು ಕಟ್ಟಿಸಿದರು. ಮತ್ತು ಆ ಸ್ಮಾರಕದ ಮೇಲೆ ಮೊದಲನೆಯ ಸ್ಮಾರಕದಲ್ಲಿ ಕಟ್ಟಿಸದೆ ಇದ್ದ ಕೆಲವು ವಿಷಯಗಳನ್ನು ಕರ್ಝನರವರು ಕೆತ್ತಿಸಿದರಂತೆ. ಸುರಾಜ ಉದ್ದೌಲನ ಉದ್ದಾಮತನದಿಂದ ಈ ಕತ್ತಲೆಯ ಕೋಣೆಯ ಸಂಗತಿಯು ಸಂಭವಿಸಿತೆಂಬ ಪ್ರತೀತಿ ಇದೆ. ಆಂಗ್ಲ ಇತಿಹಾಸಕಾರರಾದ ವ್ಹಿನ್ಸೆಂಟ್ ಸ್ಮಿಥ್ ಅವರು ಎಂದುದು ಹೀಗೆ: "ಈ ಘಟನೆಯಲ್ಲಿ ಸುರಾಜ ಉದ್ದೌಲನ ಭಾಗವು ಏನೂ ಇಲ್ಲ." ಮತ್ತೊಬ್ಬನು ಅದೊಂದು ಅಪಘಾತವೆಂದು ವರ್ಣಿಸಿದ್ದಾನೆ. ಇಂದು ಆ ಸಂಗತಿಯೇ ಸುಳ್ಳೆಂಬುದು ತಿಳಿದು ಬಂದಾಗ, ಆ ಕತೆಯನ್ನು ಹುಟ್ಟಿಸಿ ಅದರಿಂದ ಆಂಗ್ಲಜನತೆಯನ್ನು ರೊಚ್ಚಿಗೆಬ್ಬಿಸಿದ ಪುಣ್ಯಾತ್ಮನು ಎಂತಹ ಸಂಸ್ಕೃತಿ ಹೀನನಿರಬಹುದು ?.. ಎಂಬುದನ್ನು ಭಾವಿಸಬಹುದಾಗಿದೆ. ಇದೊಂದು ನಾಗರಿಕ ಜನಾಂಗಕ್ಕೆ ಕಲಂಕವಿದ್ದಂತಿತ್ತು. ಶ್ರೀ. ಸುಭಾಷಚಂದ್ರ ಬೋಸರು ಚಳವಳಿಯನ್ನೆಬ್ಬಿಸಿ ಆ ಸ್ಮಾರಕವನ್ನು ತೆಗೆದೊಗೆಸಿದುದರಿಂದ ಮಾನವ ಕುಲಕ್ಕೆ ಶೋಭೆ ಬಂದಂತಾಗಿದೆ. ಆದರೆ ಮಾನವಕುಲಕ್ಕೆ ಒಳ್ಳೆಯದನ್ನು ಮಾಡಲು ಮುಂದೆ ಬಂದವರಾರೂ ಮಾನವರಿಂದ ಸುರಕ್ಷಿತರಾಗಿ ಉಳಿದಿಲ್ಲವೆಂಬುದು ಐತಿಹಾಸಿಕ ಸತ್ಯ. ಶ್ರೀಮಾನ್ ಸುಭಾಷ ಬೋಸರಾದರೂ ಈ ಐತಿಹಾಸಿಕಸತ್ಯವನ್ನು ವಿಚಾರಿಸದೆ ಹೇಗೆ ಇರಬಲ್ಲರು ?

ವಿಮೇದಾರರ ಹಿತಕ್ಕಾಗಿ:—

ವಿಮೇಚ್ಛುಗಳ ಕರ್ತವ್ಯ

ಶ್ರೀ. ಎಮ್. ಪಿ. ಭಾಗವತ, ಮುಂಬಯಿ

★

ವಿಮೇದಾರನು ವಿಮೆಮಾಡುವಾಗ ಕಂಪನಿಗೆ ಪೂರಯಿಸಿದ ಸಂಗತಿಯೆಲ್ಲ ಸತ್ಯವಾಗಿರಬೇಕು. ಅಸತ್ಯವೆಂದು ಕಂಪನಿಗೆ ಎನಿಸಿ, ಅಧಿಕೃತರೀತಿಯಿಂದ ಅದನ್ನು ಸಿದ್ಧಮಾಡಿ ಕೊಟ್ಟರೆ, ಪಾಲಿಸಿಯನ್ನು ರದ್ದುಗೊಳಿಸಬಹುದೆಂದು ಜೀವವಿಮೆಯ ಹೊಸಕಾಯಿದೆ ಹೇಳುತ್ತದೆ.

ತಮ್ಮಮೇಲೆ ಅವಲಂಬಿಸಿರುವ ಮಕ್ಕಳು-ಮರಿಗಳ ಸುಖದ ಸಲುವಾಗಿ, ಇಲ್ಲವೆ ಮುಪ್ಪಿನ ಕಾಲದಲ್ಲಿ ತಮಗೆ ಉಪಯೋಗಕ್ಕೆ ಬರಬಹುದೆಂಬ ಮುಂಧೋರಣೆಗಾಗಿ— ಶಕ್ಯವಿದ್ದರೆ ತಮ್ಮ ಆಯುಷ್ಯದ ವಿಮೆಯನ್ನು ಮಾಡಿಬಿಡುವುದು ಪ್ರತಿಯೊಬ್ಬನ ಆದ್ಯಕರ್ತವ್ಯವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಅದರಂತೆಯೆ ತಾವು ತಮ್ಮ ಇಲ್ಲವೆ ತಮ್ಮ ಮಕ್ಕಳು-ಮರಿಗಳ ನಿಜವಾದ ಹಿತವನ್ನು ಬಯಸುತ್ತಿರುವವರಾದರೆ, ತಾವು ಮಾಡಿದ ವಿಮೆಯು ಸುರಕ್ಷಿತವಾಗಿ ಉಳಿದು ಅದರ ಪೂರ್ಣಲಾಭವು ದೊರಕುವುದಕ್ಕಾಗಿ, ಕೆಲಕೆಲವು ವಿಶೇಷಸಂದರ್ಭಗಳನ್ನು ಕುರಿತು ಬಹು ಎಚ್ಚರದಿಂದ ನಡೆಯುವುದು ಅತ್ಯಾವಶ್ಯಕವಿದೆ.

ಅವಸರದಿಂದಾಗಲಿ, ಅನ್ಯಕಾರಣಗಳಿಂದಾಗಲಿ ವಿಮೇಚ್ಛುಗಳ ಕೈಯಿಂದ ಅನೇಕ ಪ್ರಕಾರದ ತಪ್ಪುಗಳು ಸಂಭವಿಸಿ, ಅವು ಮುಂದೆ ವೃಥಾ ತೊಂದರೆಗಳಿಗೂ ನಷ್ಟಕ್ಕೂ ಕಾರಣಗಳಾಗುತ್ತವೆ. ಈ ತಪ್ಪುಗಳು "ವಿಮೆಯ ಅರ್ಜಿ (Proposal)" "ಡಾಕ್ಟರರ ರಿಪೋರ್ಟ್ (Medical Report)" ಮೊದಲಾದ ವಿಮಾಸಂಬಂಧದ ಪ್ರಾಥಮಿಕ ಕೆಲಸಗಳ ಬಗ್ಗೆ ಬೇಕಾದ ಮಾಹಿತಿಯನ್ನು ಪೂರಯಿಸುವಾಗಲೆ ಸಂಭವಿಸುತ್ತವೆ. ವಿಶೇಷವಾಗಿ, ತಾವಾಗಿ ವಿಮೆ ಇಳಿಸಲು ಸಿದ್ಧರಿಲ್ಲದ ಜನರ ಕೈಯಿಂದಲೆ ಇಂತಹ ತಪ್ಪುಗಳು ಘಟಿಸುವ ಸಂಭವ ಹೆಚ್ಚಿರುವುದು.

ಈ ಜನರ ಸ್ಥಿತಿಯು ಹೇಗಿರುವುದೆಂದರೆ, ಇವರಿಗೆ ತಾವು ಜೀವವಿಮೆ ಮಾಡಬೇಕೋ ಬೇಡವೋ ಎಂಬುದರ ನಿಶ್ಚಯವೇ ಆಗಿರುವುದಿಲ್ಲ. ಇಂತಹ ಪ್ರಸಂಗದಲ್ಲಿ ಯಾವನೊಬ್ಬ ವಿಮಾ ಏಜಂಟನು ಬೆನ್ನುಹತ್ತಿದನೆಂದರೆ ತೀರಿಯೆ ಹೋಯಿತು. ಸ್ವಾಭಾವಿಕವಾಗಿಯೇ ಅನಿಶ್ಚಿತ ಮನಃಸ್ಥಿತಿಯ ಮೇಲೆ ಆಗುವ ವಿಲಕ್ಷಣ ಪರಿಣಾಮವು ಇವರ ಮೇಲಾಗಿ, "ಅಹುದು-ಅಹುದು ಅಲ್ಲ-ಅಲ್ಲ" ಎನ್ನುತ್ತಲೇ ಇವರು— ಕಟ್ಟಕಡೆಗೆ ಹೇಗಾದರೂ ಮಾಡಿ ಜೀವವಿಮೆ ಮಾಡುವ ಕೆಲಸವನ್ನು ನೆರವೇರಿಸಿಬಿಡುತ್ತಾರೆ. ಏಜಂಟರಿಗಾದರೂ ಇಂತಹ ಜನರನ್ನು ವಿಮೆ ಮಾಡಲಿಕ್ಕೆ ಹಚ್ಚುವುದು ಕಷ್ಟವೇ ಆದುದರಿಂದ, ಅವರಿಗೆ ಮೇಲಿಂದ ಮೇಲೆ ಒತ್ತಾಯ ಮಾಡಬೇಕಾಗಿ ಬರುತ್ತದೆ. ಇಂತಹ ಗಿರಾಕಿಗಳ ಮಾನಸಶಾಸ್ತ್ರವು ಏಜಂಟರ ಉದ್ಯೋಗ ಮಾಡುವವರಿಗೆ ಚೆನ್ನಾಗಿ ಗೊತ್ತಿರುವುದರಿಂದ, ಮತ್ತು ಇಂತಹ ಜನರ ಕೇಸುಗಳು ಕೈತಪ್ಪಿ ಇನ್ನೊಬ್ಬರ ಬಾಯಿಗೆ ಬೀಳುವ ಭಯವು ಹೆಚ್ಚಿರುವುದರಿಂದ, ಅವರಿಗೆ ಹಾಗೆ ಒತ್ತಾಯಮಾಡಿದ ವಿನಾ ಗತ್ಯಂತರವೇ ಇಲ್ಲ.

ಏಜಂಟರು ಎಷ್ಟೇ ಅವಸರ ಪಡಿಸಲಿ— ಅವರ ಮತ್ತು ವಿಮೇದಾರರ ಸಂಬಂಧವು ಕ್ಷಣಿಕವಿರುವುದರಿಂದ, ವಿಮೇದಾರರ ತಪ್ಪಿನ ಬಗ್ಗೆ ಅವರನ್ನು ದೂಷಿಸುವುದು ಎಂದಿಗೂ ಯೋಗ್ಯವಾಗಲಿಕ್ಕಿಲ್ಲ. ವಿಮೇಚ್ಛುಗಳಿಗೆ ತಮ್ಮ ಸ್ವಂತದ ಅಥವಾ ತಮ್ಮ ವಾರಸದಾರರ ಹಿತವು ತಿಳಿಯುತ್ತಿದ್ದರೆ, ಅವರು ಕಂಪನಿಗೆ ಅಕ್ಷರಶಃ ನಿಜವಾದ ಮಾಹಿತಿಯನ್ನು ಪೂರಯಿಸುವ ತಮ್ಮ ನೈತಿಕ ಹೊಣೆಗಾರಿಕೆಯನ್ನು ಎಂದಿಗೂ ಮರೆಯಬಾರದು.

ತಪ್ಪು ಮಾಹಿತಿಯನ್ನು ಕೊಡುವುದರಿಂದ ವಿಮೇದಾರರಿಗೆ ಮುಂದೆ ಆಗಬಹುದಾದ ಕಷ್ಟ-ನಷ್ಟಗಳನ್ನು ತಪ್ಪಿಸುವ ಹೇತುವಿನಿಂದಲೇ ವಿಮಾ-ಕಾಯಿದೆಯಲ್ಲಿ ಒಂದು ಹೊಸ ಯೋಜನೆಯನ್ನು ಮಾಡಬೇಕಾಯಿತು. ವಿಚಾರ ಮಾಡಿದರೆ, ಇದರ ಮೇಲಿಂದ ಎಲ್ಲ ವಿಷಯಗಳೂ ಲಕ್ಷ್ಯದಲ್ಲಿ ಬರುವಂತಿವೆ. ಆದರೆ, ಈ ಯೋಜನೆಯಲ್ಲಿಯೂ ಕೆಲವೊಂದು ಪ್ರಕಾರದ ಸಂದಿಗ್ಧತೆಯು ತೊಡಕು ಇರುವುದರಿಂದ (ಹಾಗಿರುವುದು ಅಪರಿಹಾರ್ಯವದೆ), ವಿಮೇಚ್ಛುಗಳು ಅದರ ಬಗ್ಗೆ ತಪ್ಪುತಿಳಿವಳಿಕೆಯನ್ನು ಮಾಡಿಕೊಳ್ಳದೆ, ನಿಜವಾದ ಮಾಹಿತಿಯನ್ನು ಪೂರಯಿಸುವ ತಮ್ಮ ಕರ್ತವ್ಯವನ್ನು ಅಗತ್ಯವಾಗಿ ಪಾಲಿಸಬೇಕು. ವಾಚಕರ ತಿಳಿವಳಿಕೆಯ ಸಲುವಾಗಿ, ಈ ಯೋಜನೆಯ ಮೂಲವನ್ನು ಕನ್ನಡ ಭಾಷಾಂತರ ಸಹಿತವಾಗಿ ಇಲ್ಲಿ ಕೊಡಲಾಗಿದೆ:—

Section 45 of Insurance Act 1938:—

"No policy of life insurance effected before the commencement of this Act shall after the expiry of two years from the date of commencement of this Act and no policy of life insurance effected after the coming into force of this Act shall, after the expiry

of two years from the date on which it was effected, be called in question by an insurer on the ground that a statement made in the proposal for insurance or in any report of a medical officer, or referee, or friend of the insured, or in any other document leading to the issue of the policy, was inaccurate or false, unless the insurer shows that such statement was on a material matter and fraudulently made by the policy-holder and that the policy-holder knew at the time of making it that the statement was false."

ಮೇಲಿನದರ ಭಾಷಾಂತರವು :—

"ಕಾಯಿದೆಯು ಪ್ರಾರಂಭವಾಗುವುದಕ್ಕೆ ಮೊದಲು ಮಾಡಿದ ಯಾವುದೇ ಜೀವವಿಮೆಗಾದರೂ ಅದು ಪ್ರಾರಂಭವಾಗಿ ಎರಡು ವರ್ಷಗಳ ನಂತರ, ಮತ್ತು ಕಾಯಿದೆಯು ಪ್ರಾರಂಭವಾದ ಮೇಲೆ ತೆಗೆದುಕೊಂಡ ಪಾಲಿಸಿಯು ತಾರೀಖಿನ ನಂತರ ಎರಡು ವರ್ಷಗಳು ತುಂಬಿದ ಮೇಲೆ, ಯಾವ ಜೀವವಿಮೆಯ ಪಾಲಿಸಿಗೂ— ಪ್ರೊಪೋಜಲ್ ಫಾರ್ಮ್ (ವಿಮಾ-ಅರ್ಜಿ) ನಲ್ಲಿ, ಮೆಡಿಕಲ್ ರಿಪೋರ್ಟ್ ನಲ್ಲಿ, ಮಿತ್ರನು ಕೊಟ್ಟ ಮಾಹಿತಿಯ ಪತ್ರಕದಲ್ಲಿ (ಫ್ರೇಂಡ್ಸ್ ರಿಪೋರ್ಟ್) ಅಥವಾ ಪಾಲಿಸಿಯನ್ನು ಕೊಡುವುದಕ್ಕೆ (ಕಂಪನಿಯವರು ಮಂಜೂರು ಮಾಡುವುದಕ್ಕೆ) ಅವಶ್ಯವಿರಬಹುದಾದ ಯಾವುದೇ ಇತರ ಪತ್ರಿಕೆ (ಕಾಗದ ಪತ್ರಗಳು) ಯಲ್ಲಿ, ವಿಮೇದಾರನು ತಪ್ಪು ಮಾಹಿತಿಯನ್ನು ಪೂರಯಿಸಿದನೆಂಬ ಕಾರಣದ ಮೇಲಿಂದ, ವಿಮಾ ಕಂಪನಿಗೆ ಅಡ್ಡಿಯನ್ನು ತರಲಿಕ್ಕೆ ಬರುವುದಿಲ್ಲ. ಆದರೆ ಸದರೀ (ಮೊದಲು ಕೊಟ್ಟ) ಮಾಹಿತಿಯು ಮಹತ್ತ್ವದ ಬಾಬತಿನದಿದ್ದು, ವಿಮೇದಾರನು ಅದನ್ನು ಕೊಡುವಾಗ ಅದು ತಪ್ಪು ಮಾಹಿತಿಯೆಂದು ತಿಳಿದಿದ್ದರೂ ಅದನ್ನು ಮೋಸಪಡಿಸುವ ಹೇತುವಿನಿಂದಲೆ ಕೊಟ್ಟಿರುವನೆಂದು ವಿಮಾಕಂಪನಿಯು ಸಿದ್ಧಪಡಿಸಿದರೆ, ಅಂತಹ ಪಾಲಿಸಿಗೆ ಅಡ್ಡಿ ಮಾಡಲು ಬರುವುದು."

ಈ ಯೋಜನೆಯ ಪ್ರಕಾರ ಕೇವಲ "ತಪ್ಪು ಮಾಹಿತಿಯನ್ನು ಕೊಟ್ಟ" ಕಾರಣಕ್ಕಾಗಿಯೇ ಎರಡು ವರ್ಷಗಳನಂತರ ವಿಮಾ ಪಾಲಿಸಿಗೆ ಅಡ್ಡಿಯನ್ನು ತರಲು ಬಾರದಂತಿದ್ದರೂ, ವಿಮಾ ಇಳಿಸಿದ ತಾರೀಖಿನಿಂದ ಎರಡು ವರ್ಷಗಳ ತನಕ ಹಾಗೆ ಮಾಡಲು ಕಂಪನಿಯವರಿಗೆ ಪೂರ್ಣ ಅಧಿಕಾರವಿದೆಯೆಂಬುದನ್ನು ಮಾತ್ರ ಯಾರೂ ಮರೆಯಕೂಡದು. ಆ ಮೇಲಾದರೂ ಅದರಲ್ಲಿ ತೊಡಕು ಇದ್ದೇ ಇದೆ. ಕಾಯಿದೆಯ ಸೆಕ್ಶನಿನ ಕಡೆಯ ಭಾಗವನ್ನೋದಿದರೆ, ಅದು ಸಹಜವಾಗಿ ಲಕ್ಷ್ಯದಲ್ಲಿ ಬರುವಂತಿದೆ. ನೋಡಿರಿ :—

"Unless the insurer shows that such statement was on a material matter and fraudulently made by the Policy-holder and that the policy-holder knew at the time of making it that the statement was false."

"ಆದರೆ ಸದರೀ (ಮೊದಲು ಕೊಟ್ಟ) ಮಾಹಿತಿಯು ಮಹತ್ತ್ವದ ಬಾಬತಿನದಿದ್ದು, ವಿಮೇದಾರನು ಅದನ್ನು ಕೊಡುವಾಗ ಅದು ತಪ್ಪು ಮಾಹಿತಿಯೆಂದು ತಿಳಿದಿದ್ದರೂ ಅದನ್ನು ಮೋಸಪಡಿಸುವ ಹೇತುವಿನಿಂದ ಕೊಟ್ಟಿರುವನೆಂದು ವಿಮಾಕಂಪನಿಯು ಸಿದ್ಧಪಡಿಸಿದರೆ, ಅಂತಹ ಪಾಲಿಸಿಗೆ ಅಡ್ಡಿಮಾಡಲು ಬರುವುದು."

"Material matter" ಅಥವಾ "ಮಹತ್ತ್ವದ ಬಾಬತು" ಯಾವುದೆಂಬುದನ್ನು ಗೊತ್ತುಪಡಿಸುವ ಕೆಲಸವು ಸುಲಭವಾದುದಲ್ಲ; ಆದುದರಿಂದ ಮೇಲಿನ ಸೆಕ್ಶನಿನ ವಿಷಯವಾಗಿ ವಿಮೇಚ್ಛುಗಳು ತಪ್ಪುತಿಳಿವಳಿಕೆಯನ್ನು ಮಾಡಿಕೊಳ್ಳದೆ, ಶಕ್ತ ಪ್ರಯತ್ನಮಾಡಿಯೂ ನಿಜವಾದ, ಸ್ಪಷ್ಟವಾದ ಮತ್ತು ತೊಡಕಿಲ್ಲದ ಮಾಹಿತಿಯನ್ನು ಪೂರಯಿಸುವುದೇ ವಿಮೇದಾರರ ಹಿತದ ದೃಷ್ಟಿಯಿಂದ ಯೋಗ್ಯವಿರುವುದೆಂಬುದರಲ್ಲಿ ಸಂದೇಹವಿಲ್ಲ. ನಿಜವಾದ ಮಾಹಿತಿಯನ್ನು ದೊರೆಕಿಸುವುದಕ್ಕೆ ಕಾಲದ ಅವಶ್ಯಕತೆಯಿರುವುದೆಂಬುದು ಸರಿಯೆ; ಆದರೂ ಅಷ್ಟು ಕಾಲದ ತನಕ ಏಜಂಟರನ್ನು ತಡೆಯಿಸುವುದು ಕಠಿನವಾಗಲಿಕ್ಕಿಲ್ಲ. ಕೇಸು ತಮಗೇ ದೊರೆಯುವುದೆಂಬ ನಿಶ್ಚಯವಿದ್ದಲ್ಲಿ ಏಜಂಟರು ಎಂದೂ ಅವಸರಪಡಿಸುವ ತಪ್ಪು ಮಾಡಲಾರರು. ಸುಮ್ಮಸುಮ್ಮನೆ ತಿರುಗಾಡಿ, ಕಟ್ಟಕಡೆಗೆ ಮೋಸವಾಗುವ ಸಂಭವವು ತೋರಿದರೆ ಮಾತ್ರ ನಿರುಪಾಯದಿಂದ ಅವರಿಗೆ ಅವಸರ ಮಾಡಲೆಬೇಕಾಗುತ್ತದೆ.

ವಿಮಾಅರ್ಜಿ, ಮಿತ್ರನ ರಿಪೋರ್ಟು, ಮತ್ತು ಡಾಕ್ಟರರ ರಿಪೋರ್ಟು ಇವುಗಳ ಆಧಾರದ ಮೇಲಿಂದಲೇ ಒಟ್ಟು ವಿಮೆಯ ಕರಾರು ರಚಿಸಲ್ಪಡುವುದರಿಂದ, ವಿಮೇದಾರರು ಪೂರಯಿಸುವ ಎಲ್ಲ ಮಾಹಿತಿಗಳೂ ಅಕ್ಷರಶಃ ನಿಜವಿರುವುದು ಅತ್ಯವಶ್ಯವಿದೆ. ಆದುದರಿಂದ, ಕೇಳಿದ ಪ್ರಶ್ನೆಗಳಿಗೆಲ್ಲ ಸರಿಯಾದ ಉತ್ತರಗಳನ್ನು ಸ್ಪಷ್ಟವಾಗಿ ಕೊಡಬೇಕು. ಯಾವುದೊಂದು ಮಾಹಿತಿಯು ದೊರೆಯುವುದು ಶಕ್ಯವಿರದಿದ್ದರೆ, ಅದು ದೊರೆಯುವುದಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕೇ ಹೊರತು, ಅದರ ಸ್ಥಳದಲ್ಲಿ ಏನಾದರೂ ಅಂದಾಜಿನ ಮಾಹಿತಿಯನ್ನು ಕೊಡಬಾರದು. ಹೇತುಪುರಃಸರವಾಗಿ ಬೇಕೆಂತಲೆ ಅಡಗಿಸಿಟ್ಟ ಮಾಹಿತಿಗಳು ಹೊರಬಿದ್ದರೆ, ವಿಮೆಯನ್ನು ರದ್ದುಪಡಿಸುವ (ಎಂದರೆ ಅದಕ್ಕೆ ಅಡ್ಡಿಯನ್ನು ತರುವ) ಶಾಸನಬದ್ಧ (ಕಾಯಿದೆ ಶೀರ್) ಅಧಿಕಾರವು ಕಂಪನಿಗಳಿಗೆ ಯಾವಾಗಲೂ ಇರುವುದು.

ಇದರ ಹೊರತು ವಿಮೇಚ್ಛುಗಳು ವಿಮಾಹಣದ ಕಂತುಗಳನ್ನು ಪಾವತಿ ಮಾಡುವ ಬಗ್ಗೆ ದೊರೆಯುವ ಸವಲತುಗಳು, ರದ್ದುಪಡಿಸಿದ ವಿಮಾಪಾಲಿಸಿಗಳನ್ನು ಪುನಃ ಚಾಲೂ ಮಾಡುವ ಬಗ್ಗೆ ಶರತುಗಳು ಮತ್ತು ಅದಕ್ಕಾಗಿ ದೊರೆಯುವ ಸವಲತುಗಳು, ಬಿಡುಬೆಲೆ (Surrender Value) ಗಳ ಬೇರೆ ಬೇರೆ ಕಾಲಗಳ ಪ್ರಮಾಣಗಳು, (ದೊರೆಯುವ ಹಾಗಿದ್ದರೆ) ಪೇಡ್-ಅಪ್-ಪಾಲಿಸಿಯ ನಿಯಮಗಳು, ಸಾಲದ ವಿಷಯದಲ್ಲಿಯ ಶರ್ತುಗಳು, ಮತ್ತು ನಿಯಮಗಳು, ಮೊದಲಾದುವುಗಳ ಬಗ್ಗೆ ಯೋಗ್ಯ ಮತ್ತು ಪೂರ್ಣ ಮಾಹಿತಿಗಳನ್ನು ಕಂಪನಿಗಳ ಕಡೆಯಿಂದ ದೊರೆಕಿಸುವ ಪ್ರಯತ್ನ ಮಾಡಲು ಎಂದೂ ಮರೆಯಬಾರದು.

ಹೆಂಗುಸರಿಗಾಗಿ ವ್ಯಾಯಾಮಕ್ರಮ

ಶ್ರೀ. ಶ್ರೀ. ಜ. ಬಾಪಟ, ಬಿ. ಪಿಎಚ್. ಸಿ.

★

೫ ನೆಯ ಬರೆಹ

೩ ನೆಯ ವ್ಯಾಯಾಮ

ಒಂದು ಮೊಳದ ಅಂತರ ಎರಡೂ ಅಡಿಗಳ ನಡುವೆ ಇರುವಂತೆ ಇರಿಸಿ ನಿಂತುಕೊಳ್ಳಬೇಕು. ಕೈಗಳೆರಡನ್ನೂ ಪಕ್ಕಗಳಿಗೆ



೩ ನೆಯ ವ್ಯಾಯಾಮದ ಚಿತ್ರ.

ನಿಡಿದಾಗಿ ಚಾಚಬೇಕು. ಬಳಿಕ ಎದೆಯನ್ನು ಎಷ್ಟು ಸಾಧ್ಯವಿದ್ದಷ್ಟು ಹೆಚ್ಚಿಗೆ ಎಡಗಡೆಗೆ ತಿರುಗಿಸಬೇಕು. ಮುಂದೆ ಹಾಗೆಯೆ ಎದುರಿಗೆ ಬಾಗಿ, ಬಲದ ಕೈಯನ್ನು ಎಡದ ಅಂಗಾಲಿಗೆ ಹಚ್ಚಬೇಕು. ಆ ಮೇಲೆ ಮೊದಲಿನಂತೆ ನೇರವಾಗಿ ನಿಂತುಕೊಂಡು, ಎಡಗಡೆಯಂತೆಯೆ ಬಲಗಡೆಗೆ ಎದೆಯನ್ನು ತಿರುಗಿಸಿ, ಎದುರಿಗೆ ಬಾಗಿ, ಎಡದ ಕೈಯನ್ನು ಬಲದ ಅಂಗಾಲಿಗೆ ಹಚ್ಚಬೇಕು. ಈ ಕಾಲದಲ್ಲಿ ಶ್ವಾಸೋಚ್ಛ್ವಾಸವು ಸಹಜಸ್ಥಿತಿಯಲ್ಲಿ ನಡೆದಿರಬೇಕಲ್ಲದೆ, ಪ್ರಯತ್ನಪೂರ್ವಕವಾಗಿ ಮೆಲ್ಲಗೆ ಅಥವಾ ಒತ್ತರದಿಂದ ಅದನ್ನು ನಡೆಯಿಸಲಾಗದು.

ಮೊದಮೊದಲು ಐದು ಸಲ ಮಾತ್ರ ಈ ವ್ಯಾಯಾಮಕ್ರಮವನ್ನು ಮಾಡುತ್ತಿರಬೇಕು. ಬರುಬರುತ್ತ ೧೫ ಸಲದ ವರೆಗೂ ಬೆಳೆಯಿಸಬಹುದು. ಎರಡೂ ಬದಿಯ ಕ್ರಿಯೆಗಳು ಒಂದುಸಲ ಮುಗಿದರೆ, ಒಂದುಸಲ ವ್ಯಾಯಾಮವಾಯಿತೆಂದು ತಿಳಿಯಬೇಕು. ಒಂದು ಸಲದ ಈ ವ್ಯಾಯಾಮಕ್ಕೆ ೨ ಮಿನಿಟುಗಳು ಹತ್ತುವವು.

೪ ನೆಯ ವ್ಯಾಯಾಮ

ಅಡಿಗಳನ್ನು ಸರಿಯಾಗಿ ಜೋಡಿಸಿ ನಿಂತುಕೊಳ್ಳಬೇಕು. ಬಲಗಡೆಗೆ—ಸೊಂಟದ ಮೇಲಿನ ದೇಹವನ್ನು—ಬಾಗಿಸಬೇಕು. ಎಡಗೈಯನ್ನು ಎಡಪಕ್ಕದಗುಂಟ ಮೇಲಕ್ಕೆತ್ತಿ, ತಲೆಯ ಮೇಲೆ ಹಾಯಿಸಿ, ಸಾಧ್ಯವಿದ್ದಷ್ಟು ಹೆಚ್ಚಿಗೆ ಬಲಕ್ಕೆ ಒಯ್ಯಬೇಕು. ಬಲಗೈಯನ್ನು ಹಾಗೆಯೆ ಜೋಲು ಬಿಟ್ಟು ಮೊಣಕಾಲ ಕೆಳಕ್ಕೆ ಒಯ್ಯಬೇಕು. ಬಳಿಕ ನೇರವಾಗಿ ನಿಂತು, ಎಡಗಡೆಗೆ ದೇಹವನ್ನು ಬಗ್ಗಿಸಿ, ಬಲಗಡೆಗೆ ಮಾಡಿದ ಕ್ರಿಯೆಗಳನ್ನೆಲ್ಲ ಬಲಗೈ ಎಡಗೈಗಳಿಂದ ಮಾಡಬೇಕು. ಉಸಿರಾಟವನ್ನು ಸಹಜಸ್ಥಿತಿಯಲ್ಲಿಯೆ ನಡೆಯಿಸಿರಬೇಕು. ಸೊಂಟದ ಮೇಲಿನ ದೇಹವನ್ನು ಹಿಂದೆ ಅಥವಾ ಮುಂದೆ ಒಲಿಯುಗೊಡಬಾರದು. ಕಾಲುಗಳನ್ನು ಮೊಣಕಾಲುಗಳಲ್ಲಿ ಮಣಿಯುಗೊಡಬಾರದು.

ಈ ವ್ಯಾಯಾಮವನ್ನು ಪ್ರಾರಂಭದಲ್ಲಿ ೫ ಸಲ ಮಾತ್ರ ಮಾಡುತ್ತಿರಬೇಕು. ಮುಂದೆ ಬರುಬರುತ್ತ ೧೫ ಸಲದ ವರೆಗೆ ಬೆಳೆಸ

೪ ನೆಯ ವ್ಯಾಯಾಮದ ಚಿತ್ರ.

ಬಹುದು. ಎರಡೂ ಬದಿಯ ಕ್ರಿಯೆಗಳು ಸೇರಿ, ೧ ಸಲದ ಪೂರ್ಣ ವ್ಯಾಯಾಮವಾಗುತ್ತದೆ. ೧ ಪೂರ್ಣ ವ್ಯಾಯಾಮಕ್ಕೆ ಎರಡು ಮಿನಿಟುಗಳು ಬೇಕಾಗುವುವು.



೧೩೧ ಹಳ್ಳಿಯ ಪದಗಳು

ಸಂಗ್ರಾಹಕರು: ಶ್ರೀ. ಬಿ. ಎಸ್. ರಂಗಸ್ವಾಮಿ, ಬಡವನಾಳು ಉಣ್ಣೆಯ ಕೇಂದ್ರ, ಕೋಲಾರ.

ಕನ್ನಡ ನಾಡಿನ ಹಳ್ಳಿ ಹಳ್ಳಿಗಳಲ್ಲಿಯೂ ರಾಶಿರಾಶಿಯಾಗಿ ಸಿಕ್ಕುವ ಜಾನಪದ ತ್ರಿಪದಿಸಾಂಗತ್ಯಗಳಲ್ಲಿ ಎಂತಹ ಸುಂದರವಾದ ಸಾಹಿತ್ಯ ಹುದುಗಿಕೊಂಡಿದೆಯೆಂಬುದು, ಸುಶಿಕ್ಷಿತರ ಮನಸ್ಸಿಗೆ ಇತ್ತೀಚೆಗೆ ಅರಿಕೆಯಾಗುತ್ತ ನಡೆದಿದೆ. ಧಾರವಾಡದ ಜಯಕರ್ನಾಟಕ ಗ್ರಂಥಮಾಲೆಯಲ್ಲಿ ಪ್ರಸಿದ್ಧವಾದ 'ಗರತಿಯ ಹಾಡು' ಎಂಬ ತ್ರಿಪದಿಯ ಸಂಗ್ರಹವು, ಸುಶಿಕ್ಷಿತ ರಸಿಕರನ್ನು ಬೆರಗುಗೊಳಿಸಿತಷ್ಟೇ ಅಲ್ಲ, ಹಲವರನ್ನು ಅದರ ಬಗೆಗೆ ವಿಚಾರ ಮಾಡಹಚ್ಚಿತು. ಇಂಗ್ಲಿಷಿನಲ್ಲಿ ಕೂಡ ಹಳ್ಳಿಯ ತ್ರಿಪದಿಗಳ ಕೊಂಡಾಟ ನಡೆಯುವಂತೆ ಮಾಡಿತು. 'ಗರತಿಯ ಹಾಡು' ಎಂಬ ಸಂಗ್ರಹದಂತಹ ಸಂಗ್ರಹಕಾರ್ಯವನ್ನೆ ಮುಂದುವರಿಸಿ, ಶ್ರೀಮಾನ್ ರಂಗಸ್ವಾಮಿಯವರು ಮೈಸೂರು ಪ್ರಾಂತದಲ್ಲಿ ಒಳಕೆಯಲ್ಲಿರುವ ತ್ರಿಪದಿಗಳನ್ನು ಸಂಗ್ರಹಿಸಿ ಪ್ರಕಟಿಸುತ್ತಲಿದ್ದಾರೆ. ಪ್ರಸ್ತುತಸಂಗ್ರಹವು ಅವರ ಎರಡನೆಯ ಪ್ರಕಟನೆ. ಮೈಸೂರು ಜಿಲ್ಲೆಯ ದಕ್ಷಿಣ ಭಾಗದಲ್ಲಿ ದೊರೆತ ತ್ರಿಪದಿಗಳನ್ನೂ ಕೋಲಾರ ಜಿಲ್ಲೆಯಲ್ಲಿ ದೊರೆತ ತ್ರಿಪದಿಗಳನ್ನೂ ಇದರಲ್ಲಿ ಸಂಗ್ರಹಿಸಿದ್ದಾರೆ.

ಇದರಲ್ಲಿಯ ತ್ರಿಪದಿಗಳು, ವಿಷಯಾನುಸಾರವಾಗಿ ೩ ಭಾಗಗಳಲ್ಲಿ ವಿಭಾಗಿತವಾಗಿವೆ. ಮೊದಲಿನ ೭ ಭಾಗಗಳಲ್ಲಿ ಅಲ್ಲಲ್ಲಿಯ ಪ್ರಾದೇಶಿಕ ದೇವ-ದೇವತೆಗಳ ಸ್ತುತಿ-ಸ್ತೋತ್ರಗಳುಂಟು. ಈ ಸ್ತುತಿ-ಸ್ತೋತ್ರಗಳಲ್ಲಿ ಬರುವ ಆ ಆ ದೇವರಿಗೆ ಸಂಬಂಧಿಸಿದ ಕಥೆಗಳನ್ನು ನಾವು ಯಾವ ಸಂಸ್ಕೃತ ಪುರಾಣಗಳಲ್ಲಿಯೂ ಕಾಣಲಾರೆವು. ಇಲ್ಲಿಯ 'ಹಿಮವದ್ಗೋಪಾಲ' ಬೆಟ್ಟದ ಮೇಲೆ ಏಕೆ ನೆಲೆಗೊಂಡಿರುವ ಗೊತ್ತೇ?

"ಹಾಲು ಅನ್ನಕೆ ಒಲಿದು, ಜೇನು-ಸಕ್ಕರೆ ಗೊಲಿದು,
ಸೋಲಿಗರ ಹೆಣ್ಣಿಗೆ ಮನಸಾಗಿ—ಒಲಕೊಂಡು—
ನೆಲೆಗೊಂಡ ಗಿರಿಯಲ್ಲಿ ಗೋಪಾಲ!"

ಈ ಗೋಪಾಲನು 'ಸೋಲಿಗರ ಸೀಮೆಯ ಸರದಾರ'. ಈತನಿಗೆ ಪ್ರೀತಿಯ ಆಹಾರವೆಂದರೆ 'ನೆಲ್ಲಕ್ಕಿಯಾ ಅನ್ನ, ಬೆಲ್ಲ, ಬದನೇಕಾಯಿ'. ಈತನಿಗೆ ವಾಹನ 'ಬೆಳ್ಳಿಯ ಗರುಡ'ನೂ ಅಹುದು, ನವಿಲೂ ಅಹುದು.

ಹಿಮವದ್ಗೋಪಾಲನಂತೆಯೆ 'ಏಳು ಮಲೆಯ ಮಾದೇಶ್ವರ'ನಿಗೂ ಸ್ಥಳ-ಪುರಾಣದ ಕತೆಗಳಿವೆ:

"ಮಲೆ ಮಲೆ ಮಾತಾಡಿ ಹುಲಿ-ಕರಡಿ ಜೂಜಾಡಿ,
ಅಲ್ಲಿರಡು ಕಾಳಿಂಗ ಮರೆಯಾಯ್ತು—ಮಾದೇವ—
ತಿಳಿಯಾದು ನಿಮ್ಮ ಘನಮಹಿಮೆ!"

'ಬಿಳಿಗಿರಿ ರಂಗಸ್ವಾಮಿ'ಯ ಕುದುರೆಯ ಶೃಂಗಾರ ಹೇಗಿದೆ ನೋಡಿ!

"ರಂಗಯ್ಯ ಕುದುರೆಗೆ ಉಂಗುರದ ಕಡಿವಾಣ
ರಂಗು ಮಾಣಿಕದ ಮೊಕರಂಬೆ—ಹಾಕ್ಕೊಂಡು—
ರಂಗಯ್ಯ ಬೀದಿ ಮೆರೆದಾನು!"

ಈ ರಂಗಯ್ಯ ಒಂದು ದಿನ 'ಎಡದಲ್ಲಿ ತೊಳಸಮ್ಮ, ಬಲದಲ್ಲಿ ಲಕ್ಷ್ಮೀದೇವಿ; ನಡುವೆ ಹಾಸಪ್ಪ ಸಾರಂಗ ಗಪ್ಪೆ ಮೇಲೆ' ಒರಗಿಕೊಂಡಿದ್ದಾನೆ. ಆಗ ಹೆಂಡಂದಿರಿಬ್ಬರಿಗೂ 'ಆಕಳಿಕೆ ಹೆಚ್ಚಾಯ್ತು, ತೂಕಡಿಕೆ ಘನವಾಯ್ತು!' ಅವರನ್ನು ರೇಗಿಸಿ ಎಚ್ಚರಿಸಬೇಕೆಂದು ರಂಗಯ್ಯ 'ಯಾವ ನನಸೂಳೆ ನೆನೆದಾಳೊ?' ಎಂದೆನ್ನುತ್ತ—'ಅಜೀಕೆಟ್ಟಿ ಪಾರ್ವಾಳ್ದ ಪಚ್ಚೆನ-ಸೆಯೊಳು.. ಆಕೆ ಸೂಳೆ ರಂಗಿ ಹ್ಯಾಗ್ಯಾಗೆ ನನ್ನ ನೆನೆದಾಳೊ!' ಎಂದು ಚಿಂತೆಗೊಳಗಾಗ್ತವನು. 'ಸ್ವಾಮಿ ಆಡಿದ ಮಾತ ಕೇಳಿ ಲಕ್ಷ್ಮೀದೇವಿ ತಾಯಿ' ತನ್ನ ಪಕ್ಕದಲ್ಲಿದ್ದ ತುಳಸಮ್ಮನಿಗೆ ಹೇಳುತ್ತಾಳೆ:—

"ನೋಡು ನೀ ತಂಗಮ್ಮ ರಾಯರಾಡಿದ ಮಾತ
ಕರೆಯಮ್ಮ ಧೀರ ಹನುಮಯ್ನ—ಬಲು ಭಂಟ್ನ—
ಕಾಲಿಗೆ ಸಂಕೋಲೆ ಕೈಕೋಳ"
ಕಾಲಿಗೆ ಸಂಕೋಲೆ ಕೈಕೋಳ ಹಾಕ್ಸೋಣಾ
ಸಂಪೀಗಿ ಮರಕೆ ಬಿಗಿಸೋಣಾ—ರಾಯರ
ಹೆಣ್ಗೋಳ ಗ್ಯಾನ ಬಿಡಿಸೋಣಾ!"

ಲಕ್ಷ್ಮೀದೇವಿ ತೊಳಸಮ್ಮರನ್ನೂ ಹಳ್ಳಿಯ ಲಕ್ಕಮ್ಮ ತುಳಚಮ್ಮರಂತೆ ಮಾಡಿದೆ, ಈ ಹಳ್ಳಿಯ ಕವನ.

ದೇವರನ್ನೆ ಈ ರೀತಿಯಲ್ಲಿ ಲೌಕಿಕಕ್ಕೆಳೆದ ಈ ಕವನಗಳು, ಮಾನವ ಜೀವನದಲ್ಲಿಯ ಕಷ್ಟ-ನಷ್ಟ-ಸುಖ-ಸಂತೋಷಗಳನ್ನು ಎಷ್ಟೊಂದು ರಸವತ್ತಾಗಿ ಚಿತ್ರಿಸುತ್ತಲಿವೆಯೆಂಬುದನ್ನು ಈ ಪುಸ್ತಕದಲ್ಲಿಯ ಬೇರೆ ಬೇರೆ ತ್ರಿಪದಿಗಳನ್ನು ಓದಿ ನೋಡಿಯೆ ಅರಿತುಕೊಳ್ಳಬೇಕು.

'ಗಿರಿಜಾಕಲ್ಯಾಣ' 'ಗಂಗೆ-ಗೌರಿಯರ ಜಗಳ' ಇವುಗಳನ್ನೊಳಗೊಂಡ ತ್ರಿಪದಿಗಳಂತೂ ಸಹಜಸೌಂದರ್ಯ, ಸ್ವಾಭಾವಿಕ ಹಾಸ್ಯದ ಹೊಳೆಗಳಾಗಿವೆ. ಜೀವನವನ್ನು ಚಿತ್ರಿಸುವ ತ್ರಿಪದಿಗಳೊಂದೆರಡರ ಉದಾಹರಣೆಯನ್ನೂ ಕೊಡದೆ ಇರುವುದಕ್ಕೆ ಮನಸೊಪ್ಪದು.

ಹಳ್ಳಿಯ ತರುಣ ರಸಿಕನೊಬ್ಬ ಪಟ್ಟಣದ ಹೆಣ್ಣನ್ನು ಕಟ್ಟಿಕೊಂಡಿರುವನು. ಆಕೆ ತುಂಬ ಬೆಡಗುಗಾತಿ. ಒಳ್ಳೊಳ್ಳೆ ಸೀರೆ ಬೇಕು, ಕುಪ್ಪಸ ಬೇಕು, ಒಡವೆ ಬೇಕು. ಇವೆಲ್ಲ ದೊರೆತಾಗಲೆ ಆಕೆಯ ಒಲವು ತರುಣನಿಗೆ ದೊರೆಯಬೇಕಲ್ಲವೆ? ಆದರೆ ಆ ಹಳ್ಳಿಯ ಬಡವ, ಈ ಪಟ್ಟಣದವಳ ಒಲವಿಗಾಗಿ ಬೆಲೆಯನ್ನು ಎಲ್ಲಿಂದ ಕೊಡಬೇಕು? ಅವನನ್ನು

ಣಕವಾಡಲು— ಆ ತರುಣನ ತಂಗಿಯೆ ಇರಬಹುದು — ಒಂದು ತ್ರಿಪದಿಯನ್ನು ಹಾಡಿ, ಆತನ ಮನದ ಹೊಯ್ದಾಟವನ್ನು ಹೇಗೆ ರೂಪಿಸಿದ್ದಾಳೆ ನೋಡಿರಿ:

"ಪಟ್ಟಣದ ಹೆಣ್ಣೀಗೆ ಹೊಟ್ಟೇಲಿ ಕರುಳಿಲ್ಲ!
ಕೊಟ್ಟೇನು ಎಂದಾರೆ ಕೈಲಿಲ್ಲ—ಆ ಹೆಣ್ಣ-
ಬಿಟ್ಟೇನು ಎಂದಾರೆ ಮನಸಿಲ್ಲ!"

ಅನುಕೂಲವಿಲ್ಲದ ಮನೆಗೆ, ಮನವೊಪ್ಪದ ಗಂಡನಿಗೆ ಕೊಟ್ಟಿರುವ ಗೃಹಿಣಿಯೊಬ್ಬಳು, ಬೇಸತ್ತು ಬೆಂಡಾಗಿ ಹೀಗೆ ನಿಟ್ಟುಸಿರಿಡುತ್ತಾಳೆ:

"ಹಾಯಬಾರದ ಹಳ್ಳ, ಹಾಯಬಾರದ ಗಂಗೆ,
ಹತ್ತಬಾರದ ಕತ್ತಾಳೆ ಮುಳ್ಳಿಗೆ
ಅಪ್ಪಾಜಿ ನನ್ನನೆರೆದಾರೆ!
ಹೆತ್ತಮ್ಮ ನಂತಾಯಿ ಹೆತ್ತುದಕೆ ಫಲವೇನು?
ಎಕ್ಕದ್ದಾಲಿಟ್ಟು ಕೊಲಲಿಲ್ಲ— ಹುತ್ತಾದ—
ಸರ್ಪನಿಗೆ ಸೆರೆಯ ಕೊಡಿಸೀದೆ!"

ಇಂತಹ ಹಲವು ಸೊಗಸಾದ ಪದ್ಯಗಳನ್ನು ಉದಹರಿಸಬಹುದು; ಆದರೆ ಸ್ಥಳಸಂಕೋಚದ ಮೂಲಕ ಬಿಡಬೇಕಾಗಿದೆ. ಆದುದರಿಂದಲೆ ಈ ಪುಸ್ತಕವನ್ನು ಓದಿಯೆ ಇದರ ಸೌಂದರ್ಯವನ್ನು ಅನುಭವಿಸಬೇಕೆಂದು ಸೂಚಿಸುತ್ತೇವೆ. ಸಂಗ್ರಹಕಾರರೂ ಪ್ರಕಾಶಕರೂ ನಿಜವಾಗಿಯೆ ಕನ್ನಡಿಗರ ಅಭಿನಂದನೆಗೆ ಪಾತ್ರರಾಗಿದ್ದಾರೆ.

—ಬೆಟಗೇರಿ ಕೃಷ್ಣಶರ್ಮ.

೫೩ ಬಹಿಷ್ಕಾರ

(ನೀಳ್ಗತೆ)

ಶ್ರೀಮಾನ್ 'ನೆರಂಗ'ರು ಬರೆದುದು.

ಧಾರವಾಡವು ಉತ್ತರ ಕರ್ನಾಟಕದ ಪ್ರಕಾಶನ ಕೇಂದ್ರವಾಗುತ್ತ ಹೊರಟುದು ತುಂಬ ಸಂತೋಷದ ಸಂಗತಿ. ಮನೋಹರ ಗ್ರಂಥಮಾಲೆ ಈಗಾಗಲೆ ತನ್ನ ಲಲಿತ ಗ್ರಂಥ ಪ್ರಕಾಶನದಿಂದ ಕನ್ನಡಿಗರಿಗೆ ಸಾಕಷ್ಟು ಪರಿಚಿತವಾಗಿದೆ. 'ಮಿಂಚಿನಬಳ್ಳಿ' ತನ್ನ ಮಿಂಚಿನ ಕುಡಿಗಳಿಂದ ಜನರಿಗೆ ವಿವೇಚನಾತ್ಮಕ ಗ್ರಂಥಗಳನ್ನು ಒದಗಿಸಿಕೊಡುತ್ತ ನಡೆದಿದೆ. ಮನೋಹರ ಗ್ರಂಥಭಾಂಡಾರ, ಕರ್ನಾಟಕ ಸಾಹಿತ್ಯಭಾಂಡಾರ, ಶಂಕರ-ಕರ್ನಾಟಕ ಪುಸ್ತಕಭಾಂಡಾರ, ವಿದ್ಯಾವರ್ಧಕ ಸಂಘ, ಇತಿಹಾಸ ಸಂಶೋಧನ ಮಂಡಲ, ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘ, ಸಮಾಜ ಪುಸ್ತಕಮಾಲೆ ಇವೆಲ್ಲ ಗ್ರಂಥಪ್ರಕಾಶನ ಕಾರ್ಯವನ್ನು ಕೈಕೊಂಡಿವೆ. ಅಲ್ಲದೆ ವೈಯಕ್ತಿಕವಾಗಿ ತಂತಮ್ಮ ಗ್ರಂಥಗಳನ್ನು ಪ್ರಕಟಿಸುವ ಗ್ರಂಥಕಾರರೂ ಇಲ್ಲಿ ಸಾಕಷ್ಟು ಜನರು ಇದ್ದಾರೆ. ಈಗ ಕನ್ನಡ ವಾಚಕವರ್ಗಕ್ಕೆ ಇನ್ನೊಂದು ಬಗೆಯ ಲಘುಗ್ರಂಥಗಳನ್ನು ಒದಗಿಸಿಕೊಡಲಿಕ್ಕೆಂದು 'ರಂಗ-ಮಂಗ ರಂಜನೋದ್ಯಾನ'ವೊಂದು ಧಾರವಾಡದಲ್ಲಿ ನಿರ್ಮಿತವಾಗಿದೆ. ಪ್ರಸ್ತುತ ಪುಸ್ತಕ ಆ ಉದ್ಯಾನದಲ್ಲಿ ಉದ್ಗಮಿಸಿದ ಮೊದಲನೆಯ ಹೂಗೊಂಚಲು. ಹೆಣ್ಣುಗಂಡಿನ ತೊಡಕೊಂದು ಅಡಕವಾಗಿದ್ದ ನಿಡುಗತೆ ಇದರಲ್ಲಿ ಅರಳಿ ನಿಂತಿದೆ.

ಕಮಲೆ ಗೋವಿಂದರಾಯರಿಗೆ ಒಬ್ಬಳೆ ಮಗಳು. ತುಂಬ ಪ್ರೀತಿಯವಳು. ಕಲಿಸುವ ಅಪೇಕ್ಷೆಯಿಂದ ಮಗಳ ಲಗ್ನವನ್ನು ಬೇಗನೆ ಮಾಡಿರಲಿಲ್ಲ. ರಾಮನಾಥ ಮಾಸ್ತರರ ಬಳಿ ಕಮಲೆಯ ಮನೆಯ ಪಾಠ ನಡೆಯುತ್ತಿದ್ದಿತು. ತರುಣ ರಾಮನಾಥನಿಗೆ ಮದುವೆಯಾಗಿರಲಿಲ್ಲ. ಹುಡುಗಿಯಾಗಿದ್ದ ಕಮಲೆ ಹೆಂಗುಸಾಗುತ್ತ ಹೊರಟಿದ್ದಳು. ಶಿಕ್ಷಣಕಾಲದಲ್ಲಿ ದೊರೆಯುವ ಏಕಾಂತಿಕ ಸಮಯ ಇಬ್ಬರ ಹೃದಯಗಳಲ್ಲಿಯೂ ಎಂತೆಂತಹ ಭಾವನೆಗಳನ್ನು ಉಬ್ಬಿಸಿತೇನೊ! ಗಂಡು-ಹೆಣ್ಣು ಒಂದಾದ ಪರಿಣಾಮ ಕಮಲೆಯಲ್ಲಿ ಕಾಣಿಸಿಕೊಂಡಿತು. ಸಮಾಜ-ಭೀತಿಗಾಗಿ ತಂದೆ ಕೋಪಗೊಂಡ; ತಾಯಿ ಮನದಲ್ಲಿಯೆ ಮರುಗಿದಳು. ಮಗಳು ಒಂದು ದಿನ ನಟ್ಟಿರುಳು ಮನೆಬಿಟ್ಟು, ಜೀವ ಬಿಡಲೆಂದು ಬಾವಿಯ ಬಳಿ ಬಂದಿರುವಳು. ಅಂದೆಯೆ ರಾತ್ರಿಯ ರೈಲಿನಿಂದ ಬಂದ ಕರೀಮ ಅವಳನ್ನು ನೋಡಿದ. ಆತ್ಮಹತ್ಯೆಯ ವಿಚಾರದಿಂದ ಆಕೆಯ ಮನಸ್ಸನ್ನು ತಿರುಗಿಸಿ, ಅಂದೆಯೆ ತನ್ನೂರಾದ ಬಳನಾವರಕ್ಕೆ ಕರೆದೊಯ್ಯುವನು. ಇದ್ದುದರಲ್ಲಿಯೆ ಸುಖ ಹಚ್ಚಿಕೊಂಡು ಬದುಕಬೇಕೆನ್ನುವ ಜೀವನ ದರ್ಮಕ್ಕನುಸಾರವಾಗಿ, ಕಮಲೆ 'ಕಮರ್'ಆಗಿ ರಹೀಮನಲ್ಲಿ ಇದ್ದುಬಿಡುವಳು. ತನ್ನ ಕೃತ್ಯಕ್ಕೆ ಪಶ್ಚಾತ್ತಾಪಪಟ್ಟ ರಾಮನಾಥಮಾಸ್ತರೂ ಅಂದೆಯೆ ಮನೆ ಬಿಟ್ಟು ಹೊರಟು, ಎಲ್ಲೆಲ್ಲಿಯೋ ದುಃಖದಿಂದ ಆಯುಷ್ಯವನ್ನು ನೂಕುತ್ತ, ಕೊನೆಗಾಲದಲ್ಲಿ ಕಮಲೆಯಿರುವ ಬಳನಾವರಕ್ಕೆ ಬಂದಿರುಳು ಬಂದು, ಉಪವಾಸ-ಚಳಿಗಳನ್ನು ತಡೆಯಲಾರದೆ ಪ್ರಾಣಬಿಡುವನು. ಈ ಸಂಗತಿ ಕಮಲೆಗೆ ತಿಳಿದಾಗ ಆಕೆಯ ಮನವನ್ನು ದ್ವೇಷಮೂಲಕವಾದ ಕ್ರೋಧ, ಏತಕ್ಕಾಗಿಯೊ ಉಂಟಾದ ದುಃಖ ಎರಡೂ ಆವರಿಸಿದುವು. ತಂದೆ-ತಾಯಿ ಸತ್ತುಹೋಗಿ ಅವರು ತಮ್ಮ ಆಸ್ತಿಯನ್ನೆಲ್ಲ ಮಗಳ ಹೆಸರಿಗೆ ಮಾಡಿ-ಹೋಗಿದ್ದುದು ತಿಳಿದರೂ, ಕಮಲೆ ಅದನ್ನು ದೊರೆಕಿಸಿಕೊಳ್ಳುವ ಆಶೆಗೆ ಬೀಳದೆ, ಇದ್ದುದರಲ್ಲಿಯೆ ಸುಖ ಹಚ್ಚಿಕೊಂಡು, ಗಂಡ (?) ಕರೀಮ, ಮಗ ರಹೀಮನೊಂದಿಗೆ ಸುಖವಾಗಿದ್ದಳು.

ಇದೇ ಕತೆ. ಪಾತ್ರ ಪರಿಪೋಷಣೆಯ ದೃಷ್ಟಿಯಿಂದ ಕಮಲಾ-ಕರೀಮರಿಗಿಂತ ರಾಮನಾಥರು ಹೆಚ್ಚು ಸ್ಪಷ್ಟವಾಗಿ ಚಿತ್ರಿತರಾಗಿದ್ದಾರೆ. ಕತೆಯ ಹೇಳಿಕೆಗೆ ಒಪ್ಪುವಂತಹ ಸರಳವಾದ ಭಾಷೆಯಿದೆ. ಅಲ್ಲಲ್ಲಿ ಒಂದೆರಡು ಶಬ್ದದೋಷಗಳೂ ಮುದ್ರಣದೋಷಗಳೂ ಹಣೆಯಿಕ್ಕುತ್ತಿವೆಯಾದರೂ ಅವೇನು ವಾಚಕರಿಗೆ ಅಡೆ-ತಡೆಯನೊಡ್ಡುವಷ್ಟು ಮಹತ್ತ್ವದುವಾಗಿಲ್ಲ. 'ರಂಗ-ಮಂಗ ರಂಜನೋದ್ಯಾನ'ದಿಂದ ಮುಂದೆ ಇನ್ನೂ ಕೂಡಿದ ಹಲವು 'ಹೂಗೊಂಚಲು'ಗಳು ಕನ್ನಡ ಸಾಹಿತ್ಯದೇವಿಗೆ ದೊರೆಯಲಿ!

—ಕುಂಜವಿಹಾರಿ

ಮುಂದುವರಿದ ಜಪಾನು

(೧-೨ ಭಾಗಗಳು)

ಬರೆದವರು: ಕೆ. ಎಲ್. ನಂಜಪ್ಪ, ವಾಣಿಜ್ಯ
ವಿಶ್ವವಿದ್ಯಾನಿಲಯ ಟೋಕಿಯೊ—ಜಪಾನ್

ಪೇಟೆಯಲ್ಲಿ ಹೋಗಿ ಏನೊಂದು ಪದಾರ್ಥವನ್ನು ಕೇಳಿದರೆ, ಕಡಮೆಯ ಬೆಲೆಗೆ ಸಿಕ್ಕುವುವು ಜಪಾನಿನ ಸಾಮಾನುಗಳು. ನಮ್ಮ ದೇಶದಲ್ಲಿ ಹುಟ್ಟುವ ವಸ್ತುಗಳಿಗಿಂತ ಪರದೇಶೀಯವಾದ ಜಪಾನಿನ ವಸ್ತುಗಳು ಕಡಮೆಯ ಬೆಲೆಗೆ ಸಿಕ್ಕುವುದು ಆಶ್ಚರ್ಯದ

ವಿಷಯ. ಇಷ್ಟು ಕಡಮೆಯ ಬೆಲೆಗೆ ಮಾರಾಟ ಮಾಡಲು ಶಕ್ತರಾದ ಜಪಾನಿಗಳ ಬಗೆಗೆ ಆದರಾಶ್ಚರ್ಯಗಳು ಉಂಟಾಗುವುದು ಸಹಜಸಂಗತಿ. ಜಪಾನಿಗಳ ವ್ಯವಸಾಯ ದೃಷ್ಟಿಯನ್ನೂ, ಅವರ ಕೈಚಳಕವನ್ನೂ, ಜಾಣತನವನ್ನೂ ಅರಿಯಬೇಕಾದರೆ ಓದಬೇಕು "ಮುಂದುವರಿದ ಜಪಾನು" ಎಂಬುದನ್ನು.

ಕನ್ನಡಿಗರ ಸಂಕುಚಿತದೃಷ್ಟಿಯನ್ನು ವಿಶಾಲವಾದುದನ್ನಾಗಿಸಲು ಬಾಹ್ಯ ಜಗತ್ತಿನ ಯಥಾರ್ಥ ಕಲ್ಪನೆಯು ಸಹಕಾರಿಯಾಗುವುದು. ಕನ್ನಡದಲ್ಲಿಯೆ ಜಪಾನಿಗಳ ಬಗೆಗೆ ಸ್ಪಷ್ಟವಾದ ಚಿತ್ರವನ್ನು ಮೂಡಿಸಿ ತೋರಿಸಿದುದಕ್ಕೆ ಕನ್ನಡಿಗರು ಶ್ರೀ. ಸಂಜಪ್ಪನವರಿಗೆ ಋಣಿಗಳು.

"ಮುಂದುವರಿದ ಜಪಾನು" ಪುಸ್ತಕದಲ್ಲಿ ಜಪಾನು ಹೇಗೆ ಮುಂದುವರಿದಿದೆ-ಮುಂದುವರಿಯುತ್ತಲಿದೆ ಎಂಬುದು ಕಾಣುವುದು. ಬರೆಹಗಾರರು ಕಾರ್ಯ-ಕಾರಣ ದೃಷ್ಟಿಯಿಟ್ಟುಕೊಂಡವರಿರುವುದರಿಂದ, ಈ ಪ್ರಗತಿಯ ಕಾರಣವನ್ನು ಸೋಸಿ ನೋಡಿದ್ದಾರೆ. ಈ ಕಾರಣ ಪ್ರಕರಣಗಳು ಹಿಂದೆ ಬಿದ್ದ ದೇಶ-ಪ್ರಾಂತಗಳಿಗೆ ಖಂಡಿತವಾಗಿಯೂ ಉತ್ತೇಜನಕೊಟ್ಟು ಎಚ್ಚರಿಸುವಂತಿವೆ. ಜಪಾನಿಗಳ ಹಿಂದಿನ ಪರಿಸ್ಥಿತಿಯನ್ನು ಪರಿಶೀಲಿಸಿ, ಇಂದಿನ ವೈಭವವನ್ನೂ ವೈವಿಧ್ಯವನ್ನೂ ನೋಡಿದರೆ, ಎಂತಹ ನಿರಾಶಾವಾದಿಯಾದ ಜನಾಂಗಕ್ಕೂ ಆಶೆ ಕೊನರುವುದು.

ಇಡಿಯ ಪುಸ್ತಕವು ಎರಡು ಭಾಗಗಳಲ್ಲಿದೆ. ಮೊದಲನೆಯ ಭಾಗವು ಹಿನ್ನೆಲೆಯನ್ನಾಗಿ ಉಪಯೋಗಿಸಿಕ್ಕೊಂಡುದಾಗಿದೆ. ಆ ದೇಶದ ಭೌಗೋಲಿಕ ಸ್ಥಿತಿ, ಐತಿಹಾಸಿಕ ಪರಂಪರೆ, ನೈಸರ್ಗಿಕ ವಿಚಾರಗಳು—ಹೇಗೆ ಜಪಾನಿಗಳ ಇಂದಿನ ಪ್ರಯತ್ನಕ್ಕೆ ಪುಟ ಕೊಟ್ಟಿವೆ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಜನಾಂಗವೈಚಿತ್ರ್ಯವನ್ನು ಹೇಳಿ, ಅವರ ತಲೆಬುರುಡೆಗಳು ಸಾಮಾನ್ಯವಾಗಿ ದೊಡ್ಡವಿರುತ್ತವೆಯೆಂದೂ, ಮೀನಿನ ಆಹಾರವೆ ಅದಕ್ಕೆ ಕಾರಣವೆಂದೂ ಲೇಖಕರು ಹೇಳಿದ್ದಾರೆ. ಬುದ್ಧಿ ಹರಿತವಾಗಿದ್ದರೆ ಯಾವುದು ತಾನೆ ಅಸಾಧ್ಯ? ಅಲ್ಲದೆ ಅನುಕೂಲವಾದ ವಾತಾವರಣವೂ ಇದೆ.

ಕೇವಲ ೭೦ ವರುಷಗಳಲ್ಲಿ ಜಪಾನಿಗಳು ತಮ್ಮ ದೇಶವನ್ನು ಮುಂದುವರಿಸಿದ್ದಾರೆ. ಈ ಪ್ರಗತಿಯ ಚಿತ್ರವು ಸ್ಪಷ್ಟವಾಗುವಂತೆ ಶ್ರೀ. ಸಂಜಪ್ಪನವರು ಪ್ರತಿಯೊಂದು ಪ್ರಕರಣದಲ್ಲಿಯೂ ಆ ಆ ವಿಷಯಕ್ಕೆ ಸಂಬಂಧಿಸಿದ ತುಲನಾತ್ಮಕ ಅಂಕೆ-ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಪುಸ್ತಕದಲ್ಲಿ ಅನೇಕ ಚಿತ್ರಗಳು ಜಪಾನಿನ ವಿವಿಧಜೀವನವನ್ನು ಸ್ಪಷ್ಟವಾಗಿ ತೋರಿಸುತ್ತವೆ. ಜಪಾನಿಗಳ ಪ್ರಯತ್ನವನ್ನು ಜಗತ್ತಿನ ಬೇರೆಯ ರಾಷ್ಟ್ರಗಳೊಂದಿಗೆ ಹೋಲಿಸಿ ತೋರಿಸಿದ್ದಾರೆ. ಪಾಶ್ಚಾತ್ಯ ನಾಗರಿಕತೆಯನ್ನು ಜಪಾನಿಗಳು ಮೈಗೂಡಿಸಿಕೊಂಡಿದ್ದರೂ, ಅದು ಜಪಾನಿನ ಮುದ್ರೆಯೊಂದಿಗೆ ಕೂಡಿ ಇದ್ದುದರಿಂದ, ಅದು ಸ್ವಾಭಾವಿಕವೆಂದು ಕಾಣುತ್ತಲಿದೆ. ನವನಾಗರಿಕತೆಯ ಎಲ್ಲ ಬೆಡಗು-ಸೌಕರ್ಯಗಳೂ ಅಲ್ಲಿ ಇವೆ.

ಅಜ್ಞಾನದಲ್ಲಿ ಮಲಗಿದ ನಮ್ಮ ಜನತೆಗೆ ಕೈದೀವಿಗೆಯಂತೆ ಪರಿಣಮಿಸಬಹುದು "ಮುಂದುವರಿದ ಜಪಾನು". ಸಂಜಪ್ಪನವರ ಎಚ್ಚರಿಕೆಯ ಮಾತನ್ನೆ ಇಲ್ಲಿ ಎತ್ತಿ ಕೊಡುವೆವು :--

"ಇಡೀ ಏಸ್ಯಾಖಂಡದಲ್ಲಿ ವಿದ್ಯುದುತ್ಪತ್ತಿಯು ಮೈಸೂರುಸೀಮೆಯಲ್ಲಿಯೆ ಮೊದಲಾಯಿತು. ತರುವಾಯ ಅನೇಕ ವರುಷಗಳ ಮೇಲೆ ಜಪಾನೀಯರು ವಿದ್ಯುತ್ತನ್ನು ಹುಟ್ಟಿಸಿದರು. ಮತ್ತೆ ಇಷ್ಟರಲ್ಲಿಯೆ ತಮ್ಮ ದೇಶವನ್ನವರು ಕೈಗಾರಿಕೆಯ ದೇಶವನ್ನಾಗಿ ಮಾಡಿದ್ದಾರೆ. ಜಪಾನಿನಲ್ಲಿಂದು ವಿದ್ಯುಚ್ಛಕ್ತಿ ಪ್ರವೇಶಿಸದ ಮನೆಯಿಲ್ಲ. ಅದೇ ಮೈಸೂರಿನಲ್ಲಿ?" ಇದೇ ಗತಿಯನ್ನು ನಮ್ಮ ದೇಶದ ಬೇರೆ ವ್ಯವಸಾಯಗಳಲ್ಲಿಯೂ ಕಾಣಬಹುದು. ಮುಂದೆ ಬಿದ್ದು ಮೊದಲು ಮಾಡುವರು; ಆಮೇಲೆ ಮಂದವಾಗುವುದು ನಮ್ಮವರ ಉತ್ಸಾಹ. ಇವರ ಕಾರ್ಯವೆಲ್ಲವೂ "ಹನುಮ ಗದ್ದರಿಸಿದಂತೆ". ತಾಳ್ಮೆಯಿಂದ ಜಾಣತನದಿಂದ, ಕಾರ್ಯವು ಮುಗ್ಗರಿಸಿ ಬೀಳದಂತೆ ಸಾಗುವ ವಿಚಾರವೆ ಕಡಮೆ. ಅಂತಹ ಜನರಿಗೆಲ್ಲ "ಮುಂದುವರಿದ ಜಪಾನು" ಮಾರ್ಗದರ್ಶಿಯಾಗಿದೆ.

—ನೆರಂಗ.

ಚಿಲ ಲಹರಿ

ಶ್ರೀ. ಕಲಮದಾನಿ ಗುರುರಾಯರ ಕಥಾಸಂಗ್ರಹ.
ಪ್ರಕಾಶಕರು:— ಶ್ರೀ. ಪಿ. ವ್ಹಿ. ಕುಲಕರ್ಣಿ,
ಮನೋಹರ ಗ್ರಂಥಭಾಂಡಾರ, ಧಾರವಾಡ.

ಪ್ರಪಂಚದಲ್ಲಿ ಒದಗುವ ಘಟನೆಗಳನ್ನು ಸೂಕ್ಷ್ಮವಾಗಿ ಆಳವಾಗಿ ಅವಲೋಕಿಸಿ, ಕತೆಯ ಕಟ್ಟಿನಲ್ಲಿ ಅವನ್ನು ಕಲಾತ್ಮಕವಾಗಿ ಅರಳಿಸಲು ಶ್ರೀ. ಕಲಮದಾನಿಯವರು ಇಲ್ಲಿ ಪ್ರಯತ್ನಿಸಿದ್ದಾರೆ. ಅವರ ಪ್ರಯತ್ನವು ಅಭಿನಂದನೀಯ. ಕತೆಗಾರಿಕೆಗಾಗಿ ಶ್ರೀ. ಕಲಮದಾನಿಯವರು ಪಟ್ಟಶ್ರಮವು ಸ್ತುತ್ಯವಾಗಿದೆ. ಸಣ್ಣಕತೆಯ ಕ್ಷೇತ್ರದಲ್ಲಿ ಬೆಳವಣಿಗೆಯನ್ನು ಹೊಂದಲು ಕತೆಗಾರರಿಗೆ ತುಂಬಾ ಅವಕಾಶವಿದೆ. ಸಣ್ಣಕತೆಗಳಿಗೆ ಹಿಡಿತಬೇಕು, ಆಳವಾದ ಭಾವನೆಬೇಕು, ವಿಚಾರತೀಕ್ಷ್ಣತೆ ಬೇಕು, ಪಾತ್ರ ಪರಿಪೋಷಣೆಬೇಕು, ಕಲ್ಪನಾಚಾತುರಿಬೇಕು. ಇವೆಲ್ಲ ಘಟಕಗಳಿದ್ದರೆಯೆ ಸಣ್ಣಕತೆಯು ಕಲಾಕೃತಿಯಾಗಿ ಅರಳಬಹುದು.

ಪ್ರಕೃತ ಕತೆಗಾರರು ವಿಶಾಲವಾದ ಜೀವನ ಅನುಭವದಲ್ಲಿ ಒಳಹೊಕ್ಕು, ಕಥಾವಸ್ತುವಿಗೆ ತಕ್ಕಂತಹ ಲಹರಿಗಳನ್ನಿಷ್ಟೆ ಆಯ್ದುಕೊಳ್ಳುವಲ್ಲಿ, ಕತೆಗಾರನ ನೈಜಸ್ವಭಾವವನ್ನು ತೋರ್ಪಡಿಸಿದ್ದಾರೆ. ಎಲ್ಲ ಕತೆಗಳಲ್ಲಿಯೂ ಇನ್ನಿಷ್ಟು ಗಂಭೀರತೆ ಒಡಮೂಡಿದ್ದರೆ ಕತೆಗಳಿಗೆ ಅವಶ್ಯವಾಗಿ ಬೇಕಾಗುವ ಒಂದು ಬಿಗುಹು ಬರುತ್ತಿತ್ತು. 'ಮುದ್ದು ಮೋಹನ'ದಲ್ಲಿಯ ಕೊನೆಯು ನಮ್ಮ ಅಂತಃಕರಣವನ್ನು ನಸುವೆ ಮಿಡಿಟುವಂತೆ, ಕತೆ ತುಂಬೆಲ್ಲಾ ಈ ಗಾಂಭೀರ್ಯ ಬಂದಿದ್ದರೆ ಕತೆಗೆ ಇನ್ನೂ ಒಪ್ಪ ಬಂದು ಕರುಣಾರಸವು ಒಳ್ಳೆಯ ಪರಿಪಾಕವನ್ನು ಹೊಂದಬಹುದಾಗಿತ್ತು. 'ಮಾಲತಿಯ ಸಮಸ್ಯೆ'! ಮಾಲತಿ ತಾನಾಗಿಯೇ ತನ್ನ ಮುಂದೆ ಒಡ್ಡಿಕೊಂಡ ಒಂದು ಸಮಸ್ಯೆಯಾಗಿ, ನಮ್ಮ ಸಹಾನುಭೂತಿಯನ್ನೇನು ತನ್ನತ್ತ ಸೆಳೆದುಕೊಳ್ಳುವುದಿಲ್ಲ. ಇದು ಸಾರ್ವತಿಯ ತಪ್ಪೂ ಅಲ್ಲ, ಬಿಂದುರಾಯನ ತಪ್ಪೂ ಅಲ್ಲ. ಪಾತ್ರನಿರೂ-

ಷೆಯಲ್ಲಿ ಕತೆಗಾರರೆ ಸ್ವಲ್ಪ ಸರಿಪಡಿಸಿ ಕೊಂಡಿದ್ದರೆ ಹೆಚ್ಚು ಕಳೆ ಬರುತ್ತಿತ್ತು. 'ಬೆಂಡೋಲೆ'ಯೊಳಗಿನ ಸನ್ನಿವೇಶವು ಚಮತ್ಕಾರಿಕವಾಗಿದೆ. ಚಮತ್ಕಾರವೆಂದರೇನು, ಗಂಡಹೆಂಡಿರ ಮದುವೆಯಾಗಿ ಇಷ್ಟು ದಿನವಾದರೂ ಒಮ್ಮೆಯೂ ಆನಂದರಾಯನ ತಂಗಿಯ ಪ್ರಸ್ತಾಪ ಎದ್ದಿರಲಿಲ್ಲವೆ-ಎಂದೆನಿಸುವಷ್ಟಿದೆ.

'ಕೆಂಪು ಕೂದಲ ಸಮಿತಿ'ಯು ಅನುವಾದದ ಮಟ್ಟಿಗೆ ಒಳ್ಳೆಯ ಛಟ್ಟಿಗೆ ಇಳಿದಿದೆ. ಅನುವಾದದ ಕೃತ್ರಿಮತೆ ಇಲ್ಲಿ ಎಷ್ಟೂ ಇಲ್ಲ. ಪತ್ತೆದಾರಿಯ ಕಥೆಗೆ ಬೇಕಾದ ಕುತೂಹಲ ನಿರ್ಮಾಣಕಾರಕ-ಶಕ್ತಿ ಇಲ್ಲಿದೆ.

ಶ್ರೀ. ಕಲಮದಾನಿಯವರು ಕತೆಗಳನ್ನು ಉತ್ತಮವಾಗಿ ಕೊನೆಗಾಣಿಸುವ ಶಕ್ತಿಯುಳ್ಳವರು. 'ಭ್ರಮನಿರಸನ'ದಲ್ಲಿ ಕೊನೆಯೂ ನಿರೂಪಣೆಯೂ ಕೂಡಿಯೇ ರಂಜಕವಾಗಿವೆ. ರಸದ ಪರಿಪಾಕ, ಪಾತ್ರ-ಪರಿಪುಷ್ಟಿ ಇವುಗಳೆಡೆಗೆ ವಿಶೇಷ ಲಕ್ಷ್ಯ ಪೂರಯಿಸಿದರೆ ಪ್ರಕೃತ ಕತೆಗಾರರು ಇನ್ನೂ ಮೇಲ್ತರಗತಿಯ ಸಾಹಿತ್ಯವನ್ನು ನಿರ್ಮಿಸ ಬಲ್ಲರೆಂದು ನಾವು ಆಶಿಸಬಹುದು.

—'ಎನ್ಕೆ'

೫೪. ದ್ವೈತ ದರ್ಶನ

ಶ್ರೀ ಶಿರೂರುಮಠದ ಶ್ರೀಲಕ್ಷ್ಮೀಂದ್ರತೀರ್ಥ ಶ್ರೀಪಾದಂಗಳವರಿಂದ ವಿರಚಿತವಾದುದು.

ನಮ್ಮಲ್ಲಿಯ ಮತಾಚಾರ್ಯರೆಲ್ಲ ಗೀರ್ವಾಣ ಭಾಷೆಯೆಂಬ ಸಾಂಪ್ರದಾಯಿಕ ತಿಳಿವಳಿಕೆಯ ಮೂಲಕ, ತಮ್ಮ ಮತಗ್ರಂಥಗಳನ್ನು ಸಂಸ್ಕೃತ ಭಾಷೆಯಲ್ಲಿ ಬರೆದರು. ಅಂದಿನವರೆಗೆ ಎಲ್ಲರಿಗೂ ಸಂಸ್ಕೃತ ಚೆನ್ನಾಗಿ ಬರುತ್ತಿದ್ದಿತೇನೋ, ಎಲ್ಲ ಮತಾಚಾರ್ಯರಿಗೂ ಹಲವು ಜನ ಅನುಯಾಯಿಗಳು ದೊರೆತರು. ಆ ಅನುಯಾಯಿಗಳ ವಂಶಜರಿಂದು ಅದೇ ಮತದವರಾಗಿ ಬದುಕಿಕೊಂಡಿದ್ದರೂ, ಸಂಸ್ಕೃತ ಭಾಷೆಯ ಅಭಾವದ ಮೂಲಕವಾಗಿ ತಂತಮ್ಮ ಮತಸಿದ್ಧಾಂತಗಳನ್ನು—ಸೂಕ್ಷ್ಮವಾಗಿ ಬೇಡ— ಸ್ಥೂಲವಾಗಿ ಅಭ್ಯಾಸಿಸಿ ಪರಿಚಯ ಮಾಡಿಕೊಂಡವರೂ ತೀರ ಕಡಿಮೆ ಜನರು. ಮತಸಿದ್ಧಾಂತದ ಪರಿಚಯವಿಲ್ಲದಿದ್ದರೂ ಇಲ್ಲದ ಅಭಿನಿವೇಶದ ಮೂಲಕ ಮತ–ಮತಾಂತರಗಳಲ್ಲಿ ಕಲಹಗಳು ನಡೆಯುತ್ತಿರುವುದು ಕಂಡುಂಡ ಮಾತು. ಕಲಹಗಳ ಮಾತನ್ನು ಬಿಟ್ಟರೂ, ಮತಸಿದ್ಧಾಂತದ ಅಜ್ಞಾನದ ಮೂಲಕ ವ್ಯಕ್ತಿಗಳಿಗೆ ಸರಿಯಾದ ಆದರ್ಶವೆ ಇಲ್ಲದಂತಾಗಿದೆ. ಆದುದರಿಂದಲೆ ಇಂಥ ಎಲ್ಲ ಮತಸಿದ್ಧಾಂತಗಳನ್ನೂ— ಹೆಚ್ಚಾಗಿ ಬುದ್ಧಿಗೆ ಒಪ್ಪಿಗೆಯಾಗುವಂತೆ— ದೇಶಭಾಷೆಯಲ್ಲಿ ಬರೆದು, ಜನಸಾಮಾನ್ಯರೆದುರು ಇರಿಸಬೇಕಾಗಿದೆ. ಆ ದೃಷ್ಟಿಯಿಂದ ಶ್ರೀ. ಹೊಳವನಹಳ್ಳಿ ರಾಘವೇಂದ್ರಾಚಾರ್ಯರು ಬರೆದು ಪ್ರಕಟಿಸಿರುವ 'ಭಾರತೀಯ ತತ್ತ್ವಶಾಸ್ತ್ರಸಂಗ್ರಹ' ಎಂಬ ಪುಸ್ತಕವು ತುಂಬ ಉಪಯುಕ್ತವಾದುದಾಗಿದೆ. ಒರಿಯೆ ಸಾಂಪ್ರದಾಯಿಕ ದೃಷ್ಟಿಯಿಂದ ಶಾಂಕರಾದ್ವೈತ ತತ್ತ್ವವನ್ನು ತಿಳುಹಿ ಕೊಡುವಂತಹ ಕೆಲವು ಗ್ರಂಥಗಳನ್ನು ಶ್ರೀಮಾನ್ ವೈ. ಸುಬ್ಬರಾಯರೂ, ದಿವಂಗತ ಎಚ್. ಚಿದಂಬರಯ್ಯನವರೂ ಬರೆದು ಪ್ರಕಟಿಸಿರುವರು. ಈಗ ಮಾಧ್ವಸಿದ್ಧಾಂತವನ್ನು ಸಾಂಪ್ರದಾಯಿಕ ರೀತಿಯಿಂದ ಜನಸಾಮಾನ್ಯರಿಗೆ ತಿಳುಹುವುದಕ್ಕೆಂದು ಶ್ರೀ ಶಿರೂರು ಮಠದ ಶ್ರೀಗಳವರು ಸುಲಭವಾದ ಭಾಷೆಯಲ್ಲಿ ಈ ಸಣ್ಣ ಪರಿಚಯಾತ್ಮಕ ಗ್ರಂಥವನ್ನು ಬರೆದಿರುವರು.

ಇದರಲ್ಲಿ ಮುನ್ನುಡಿ, ಉಪೋದ್ಘಾತಗಳಲ್ಲದೆ (೧) ವಿಷ್ಣು ಸರ್ವೋತ್ತಮತ್ವ, (೨) ಜಗತ್‌ಸತ್ಯತ್ವ, (೩) ಭೇದಸತ್ಯತ್ವ, (೪) ಜೀವರು ಪರಮಾತ್ಮನ ಅನುಚರರು (೫) ಜೀವರು ತಾರತಮ್ಯ ಉಳ್ಳವರು, (೬) ಮೋಕ್ಷಸ್ವರೂಪವು (೭) ಭಕ್ತಿ ಸ್ವರೂಪವು (೮) ಪ್ರಮಾಣತ್ರಯ ನಿರೂಪಣ (೯) ವೇದ ವೇದ್ಯತ್ವ ಎಂಬ ಒಂಬತ್ತು ವಿಷಯ ವಿಚಾರಗಳನ್ನೊಳಗೊಂಡ ಬೇರೆ ಬೇರೆ ಪ್ರಕರಣಗಳಿವೆ. ಸಾಂಪ್ರದಾಯಿಕ ಭಾವನೆಯಿಂದ ದ್ವೈತಸಿದ್ಧಾಂತದ ಪರಿಚಯ ಮಾಡಿಕೊಳ್ಳಬೇಕೆನ್ನುವವರಿಗೆ, ಪ್ರಾಥಮಿಕ ಪುಸ್ತಕವೆನಿಸಿಕೊಳ್ಳಲು ಇದು ತುಂಬ ಚೆನ್ನಾಗಿದೆ. ಜಿಜ್ಞಾಸುಗಳು ಅವಶ್ಯವಾಗಿ ಓದಬೇಕು. ಮಾಧ್ವಮತಾನುಯಾಯಿಗಳಂತೂ ವಿನಾಮುಖ್ಯವಾಗಿ ಸಿಕ್ಕುವ ಈ ಗ್ರಂಥವನ್ನು ತರಿಸಿಕೊಂಡು, ಓದಿ ಪ್ರಯೋಜನ ಪಡೆಯಲೆ ಬೇಕು.

—ಬಿ. ಪಿ. ಎಸ್. ರಾವ್

ಹಿಂದುಸ್ಥಾನದ ಶ್ರೇಷ್ಠತರಗತಿಯ ವಿಮಾಸಂಸ್ಥೆಗಳಲ್ಲಿ ಒಂದಾದ

ದಿ ಏಶಿಯಾಟಿಕ್ ಗವ್ಹರ್ನ್‌ಮೆಂಟ್ ಸೆಕ್ಯೂರಿಟಿ

ಲೈಫ್ ಅಶ್ಯೂರನ್ಸ್ ಕಂಪನಿ, ಲಿ. ಬೆಂಗಳೂರು

ಇದುವರೆಗೆ ರೂ. ೨,೫೦,೦೦೦,೦೦ ವಿಮಾಕಾರ್ಯ ಮಾಡಿದೆ. ★ ೬೫,೦೦೦ ಸಂಸಾರಗಳಿಗೆ ವಿಮಾರಕ್ಷಣೆ ದೊರಕಿಸಿದೆ.

ಕಡಿಮೆದರದ ಹಪ್ತೆಯ ಮೇಲೆ ವಿಮಾ ಇಳಿಸಬಹುದು.

ಏಶಿಯಾಟಿಕ್ ಕಂಪನಿಯ ಪ್ರಗತಿಯು ಕನ್ನಡಿಗರು ಹೆಮ್ಮೆ ಪಡತಕ್ಕದ್ದಾಗಿದೆ. ವಿಮೆ ಇಳಿಸಲು ಸುರಕ್ಷಿತವಾದ, ಭದ್ರವಾದ ಮೈಸೂರಿನ ವಿಮಾ ಸಂಸ್ಥೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ಏಜನ್ಸಿ ಸುಪರಿಂಟೆಂಡೆಂಟ್,

ಏಶಿಯಾಟಿಕ್ ಲೈಫ್ ಆಫೀಸ್, ಧಾರವಾಡ.

ಸಾದರ ಸ್ವೀಕಾರ

೫೩. **ಬಹಿಷ್ಕಾರ** (ಒಂದು ನಿಡುಗತೆ). ಬರೆದವರು ಶ್ರೀ. 'ನೆರಂಗ' ಅವರು. ಧಾರವಾಡದ ರಂಗ-ಮಂಗರಂಜನೋದ್ಯಾನದ ೨ನೆಯ ಹೂಗೊಂಚಲು. ಫೂ. ಕ್ಯಾ. ಅ. ೬೪ ಪುಟ; ಬೆಲೆ ೦-೪-೦.

೫೪. **ದ್ವೈತದರ್ಶನ** (ತತ್ತ್ವವಿಚಾರ): ಬರೆದವರು ಶ್ರೀ. ಶಿರೂರುಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀಪಾದಂಗಳವರು. ಪ್ರಕಾಶಕರು ಶ್ರೀ. ಎಂ. ಆರ್. ರಾವ್ ಎಂ. ಎ. ಪ್ರಿನ್ಸಿಪಾಲ್ ಎಸ್. ಎಂ. ಎನ್. ಪಿ. ಸಂಸ್ಕೃತ ಕಾಲೇಜು ಉಡುಪಿ. ಕ್ರಾ. ಅ. ೧೬+೪೮ ಪುಟ. ಭಕ್ತರ ಜ್ಞಾನೋದಯವೆ ಬೆಲೆ.

೫೫. **ಕಂದನಕೂಗು** (ಶಿಶುಗೀತ-ಸಂಗ್ರಹ). ಬರೆದವರು ಶ್ರೀ. 'ಯೋಗ', ಅವರು. ಕ್ರಾ. ಅ. ೧೬ ಪುಟ. ಬೆಲೆ ೦-೧-೦. ಧಾರವಾಡದ ಮನೋಹರ ಗ್ರಂಥ-ಭಾಂಡಾರದ ಪ್ರಕಟನೆ.

೫೬. **ಗಾಳಿಗೋಪುರ** (ಸಾಮಾಜಿಕ ಕಾದಂಬರಿ). ಬರೆದವರು ಶ್ರೀಮಾನ್ ನಾ. ಕಸ್ತೂರಿ ಎಂ. ಎ., ಬಿ. ಎಲ್, ಮೈಸೂರು. ಧಾರವಾಡದ ಮನೋಹರ ಗ್ರಂಥಮಾಲೆಯ ೪೩ನೆಯ ಪ್ರಕಟನೆ. ಕ್ರಾ. ಅ. ೧೬+೧೮೦ ಪುಟಗಳು. ಬೆಲೆ ೧-೪-೦.

೫೭. **ದೇಶಭಕ್ತ** (ವಾರಪತ್ರಿಕೆ). ಸಂಪಾದಕರು ಮತ್ತು ಪ್ರಕಾಶಕರು, ಶ್ರೀಮಾನ್ ಬಿ. ವಿ. ಜಯದೇವಜಿ, ಫೆಲಿಕ್ಸ್‌ಪೈ ಬಝಾರ್, ಮಂಗಳೂರು. ಕ್ರಾ. ಫೋಲಿಯೊ ೧೬ ಪುಟಗಳು, (ಬೇಗನೆ ೨೦ ಪುಟಗಳದಾಗುವವೆಂದು ಬರೆದಿದ್ದಾರೆ). ವಾ. ಚಂದಾ ೩-೪-೦; ಬಿಡಿಸಂಚಿಕೆಗೆ ೦-೧-೦.

ಒಳ್ಳೆಯ ಲೇಖನ ಮುದ್ರಣಗಳಿಂದ ಕೂಡಿದ ರಾಷ್ಟ್ರೀಯ ಭಾವನೆಯ ಪತ್ರಿಕೆಯಿದು, ಬೆಳೆದು ಬಹುಕಾಲ ಬಾಳಲಿ!

೫೮. **ಗೋಪಿಗೀತಂ** (ಸಂಸ್ಕೃತ ಸ್ತೋತ್ರ ಸಂಗ್ರಹ). ಇದರಲ್ಲಿ ಗೋಪೀಗೀತವಲ್ಲದೆ ಅಚ್ಯುತಾಷ್ಟಕ, ಶ್ರೀಕೃಷ್ಣಾಷ್ಟಕ, ವಿಷ್ಣೋರ್ದಿವ್ಯಷೋಡಶನಾಮ ಎಂಬುವೂ ಇವೆ. ಸಾಹಿತ್ಯ ವಿದ್ವಾನ್–ವೇದಾಂತ ಶಿರೋಮಣಿ ಶ್ರೀ. ಪಿ. ಶ್ರೀನಿವಾಸ ತಂತ್ರಿಗಳಿಂದ ಪರಿಶೋಧಿತವಾಗಿದೆ. ಪ್ರಕಾಶಕರು ಶ್ರೀ. ಪಿ. ಎ. ಉಪಾಧ್ಯಾಯ ಬುಕ್‌ಡಿಪೊ, ಎ. ಎಸ್ ಸ್ಟ್ರೀಟ್ ಬೆಂಗಳೂರು ನಗರ. ಕ್ರಾ. ಅ. ೮ ಪುಟ. ಬೆಲೆ ೦-೧-೦.

೫೯. **ನನ್ನ ದೇವರು ಮತ್ತು ಇತರ ಕಥೆಗಳು** (ಕಥಾಸಂಗ್ರಹ). ಬರೆದವರು ಶ್ರೀಮಾನ್ ಕೆ. ವಿ. ಪುಟ್ಟಪ್ಪ. ಶಿವಮೊಗ್ಗೆಯ ಕಾವ್ಯಾಲಯದ ೧೨ನೆಯ ಪ್ರಕಟನೆ. ಕ್ರಾ. ಅ. ೧೦೮ ಪುಟ. ಬೆಲೆ. ೦-೧೨-೦.

೬೦. **ತೆಲುಗಿನ ಕತೆಗಳು** (ಕಥಾ ಸಂಗ್ರಹ). ಧಾರವಾಡದ ಭಾರತೀಯ ಕಥಾವಳಿಯ ೧ನೆಯ ಪ್ರಕಟನೆ. ಪ್ರಕಾಶಕರು ಶೇಷಗಿರಿರಾವ್ ಕುಲಕರ್ಣಿ, ಸಾಧನ ಮುದ್ರಣಾಲಯ ಧಾರವಾಡ. ಕ್ರಾ. ಅ. ೧೨೭ ಪುಟ, ಬೆಲೆ ೦-೮-೦.

೬೧. **ಸುಳ್ಳಿನ ಸೋಲು** (ಮಕ್ಕಳ ನಾಟಕ). ಬರೆದವರು ಶ್ರೀಮಾನ್ ಬಿ ಶ್ರೀ. ಪಾಂಡುರಂಗರಾಯರು, ಬೆಂಗಳೂರು. ದೊರೆಯುವ ಸ್ಥಳ; ಸತ್ಯಶೋಧನ ಪುಸ್ತಕ ಭಾಂಡಾರ, ಬೆಂಗಳೂರುನಗರ. ಕ್ರಾ. ಅ. ೩೦ ಪುಟ. ಬೆಲೆ ೦-೩-೦.

೬೨. **ಹಿಂದೂದರ್ಶನ ಸಾರ** (ತತ್ತ್ವಜ್ಞಾನ ವಿಷಯಕ). ಬರೆದವರು ಶ್ರೀಮಾನ್ ಮಹಾಮಹೋಪಾಧ್ಯಾಯ-ಪಂಡಿತ ರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ೧೨ನೆಯ ಪ್ರಕಟನೆ. ಕ್ರಾ. ಅ. ೧೨+೩೦೧ ಪುಟಗಳು. ಬೆಲೆ ಸಾದಾ ೦-೧೨-೦; ಕ್ಯಾಲಿಕೊ ೧-೪-೦.

೬೩. **ನವಯುಗ** (ವಾರಪತ್ರಿಕೆಯ ಶ್ರೀಕೃಷ್ಣ ಜಯಂತಿಯ ಹಬ್ಬದ ವಿಶೇಷ ಸಂಚಿಕೆ). ಸಂಪಾದಕರು ಶ್ರೀಯುತರುಗಳಾದ ಕೆ. ಕೆ ಸೆಟ್ಟಿ ಮತ್ತು ಕೆ. ಎಚ್. ಸೆಟ್ಟಿ ಅವರು. ಕ್ರಾ. ೪ದ ೬೦ ಪುಟಗಳು. ಬೆಲೆ ?

ಒಳ್ಳೊಳ್ಳೆಯ ಲೇಖನ, ಕತೆ, ಕವಿತೆ ಪ್ರಬಂಧಗಳು ಇದರಲ್ಲಿ ಪ್ರಕಟವಾಗಿದ್ದು ಹಲವು ಚಿತ್ರಗಳಿಂದ ಕೂಡಿದೆ. ಅಚ್ಚುಕಟ್ಟು ಅಂದವಾಗಿದೆ. ಸುಸ್ವಾಗತಂ.

೬೪. **ಒಂದು ಮೊದಲ ತರಗತಿಯ ದುರಂತ** (ವರದಿ). ಪ್ರಕಾಶಕರು ಸ್ವಾಮಿ ರಾಮಾನಂದ ತೀರ್ಥರು ಹೈದರಾಬಾದ್.

'ಮಹಾಘನತೆಗೇರಿದ ಶ್ರೀಮನ್ನಿಜಾಂ ಸರಕಾರ' ಮತ್ತು ಹೈದರಾಬಾದ್ ಸ್ಟೇಟ್ ಕಾಂಗ್ರೆಸ್ಸು ಇವುಗಳಲ್ಲಿ ನಡೆದ ಪತ್ರವ್ಯವಹಾರವು ಕನ್ನಡದಲ್ಲಿ ಭಾಷಾಂತರಿತವಾಗಿ ಈ ಪುಸ್ತಕದಲ್ಲಿ ಪ್ರಕಟವಾಗಿದೆ. ಓದಿನೋಡಿದವರೆಲ್ಲರಿಗೂ ಹೈದರಾಬಾದ್ ಆಡಳಿತದಲ್ಲಿರುವ ಪ್ರಜಾಸ್ವಾತಂತ್ರ್ಯದ ಪ್ರಮಾಣ ಖಂಡಿತ ಗೊತ್ತಾಗುವುದು. ಅಲ್ಲದೆ ಯಾರ ಮುಖದಿಂದಲೂ 'ಅಲ್ಲಿಯ ಪ್ರಜೆಗಳನ್ನು ದೇವರೆ ಕಾಪಾಡಬೇಕು' ಎಂಬ ಮಾತು—ನಿಟ್ಟುಸಿರಿನೊಂದಿಗೆ—ಹೊರಡದಿರದು.

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ,
೬ ಆಣೆಗೆ ಒಂದು ಸೆಟ್ಟು.

೧ ಬ್ಲೇಡಿಗೆ ೬ ಉತ್ತಮ ಕ್ಷೌರ!
೫ ಬ್ಲೇಡಿಗೆ ೬ ಆಣೆ.

ಆಕಿ ಹೇಳತಿರತಾಳ !

“ಗೋವನಕೊಪ್ಪದ ಗೋವಿಂದರಾಯ. ಒಳ್ಳೆ ಹುರುಪಿನ ಮನುಷ್ಯ, ಒಳ್ಳೇ ಮನುಷ್ಯ ಇದ್ದ್ರೇಪಾ. ಪಾಪ, ಸತ್ತುಹೋಗಿಬಿಟ್ಟ!”

“ಆತನ ಗುರುತು ಎಲ್ಲೀದರೀ ನಿಮಗ ?”

“ನಿಮಗ ಗೊತ್ತಿಲ್ಲೇನು ? ನಾನು ಅವನ ಹೆಂಡತಿನ್ನ ಪುನರ್ವಿವಾಹ ಮಾಡಿಕೊಂಡೀನಿ. ಆಕಿ ಆಗಾಗ ಅವನ ನೆನಪು ತಗದು ನನಗ ಹೇಳತಿರತಾಳ !”

*   *   *

ಸಮಂಜಸ ಸ್ವಭಾವ

“ಈಗ ಎರಡು ವರ್ಷ ಆಗಿ ಹೋದೂ ! ಒಂದು ದಿನಾ ಕೂಡಾ ನನ್ನ ಹೆಂಡತೀ ಕೂಡೀ ನಾನು ಮಾತನಾಡಿಲ್ಲ !”

“ಅಯ್ಯೊ, ಪಾಪ! ನಿಮಗs ಅವರಿಗೆs ಜಗಳ ಬರಲಿಕ್ಕೆ ಅಂಥಾ ಕಾರಣಾದರೂ ಏನು ಘಟಿಸಿತು ?”

“ಎಲ್ಲೀ ಜಗಳರೀ; ನನಗ ನೋಡ್ರಿ, ಮಂದೀ ಕೂಡ ಯಾರಾದರೂ ಮಾತನಾಡ ಹತ್ತಿರೂವಾಗ, ನಡುವೆ ಹೋಗಿ ಮಾತಾಡೋದು ಸರಿ ಬರೂದಿಲ್ಲ, ಅದಕ್ಕs !

*   *   *

ಹಾಂಗ ಅನ್ನೂದೇ ಇಲ್ಲ!

ಆತ:— (ಊಟ ಮಾಡುತ್ತಿರುವಾಗ) ಅಲ್ಲs . . ಹ-ಹ-ಹ ! ನಿನಗ ಅಡಿಗೀ ಚೆಲೋ ಮಾಡಲಿಕ್ಕೆ ಬರೂದಿಲ್ಲಾ ಅಂತ ಅಂದರ ಸಿಟ್ಟು ಬರತsದ ಅಲ್ಲs ?

ಆಕೆ:—ಬರದs ಬಿಡತsದ ಹಾಂಗಾದರ!

ಆತ:— ಹ-ಹ-ಹ! ಸಿಟ್ಟು ಬರೂ ಹಾಂಗಿದ್ದರ ಹೋಗಲಿ ಬಿಡು, ಹಾಂಗ ಅನ್ನೂದೇ ಇಲ್ಲ ನಾನು....ಹಹಹ !

ನಿಜವಾದ ಮಾತು !

“ನೋಡ್ರೀ, ಇಲ್ಲೀ ನೆರಿಹೊರೀ ಮಂದಿ ಎಲ್ಲಾರೂ ಆಗಾಗ ನಿಮಗಾಗಿ ಅಂತಿರತಾರ, ‘ಪಾಪ, ಎಂಥಾ ಬುದ್ಧಿವಂತ ಮನುಷ್ಯರು; ಹೀಂಗ್ಯಾಕ ಆಗಿದ್ದಾರೋ’ ಅಂತ !”

“ಅವರಂಬೂದು ನಿಜವಾದ ಮಾತು !”

“ಹಾಂಗಾದರ ಏನಾಗೇದ ನಿಮಗ ?”

“ಇನ್ನೇನೂ ಆಗಿಲ್ಲ ! ಹೆಂಡತಿ, ಬುದ್ಧಿ ಎರಡನ್ನೂ ಇಟ್ಕೊಂಡಿರಲಿಕ್ಕೆ ಗಂಡಸರಿಗೆ ಸಾಧ್ಯವಿರೂದಿಲ್ಲ! ಈ ಸೂಕ್ಷ್ಮ ಜನರಿಗೆಲ್ಲಾ ಏನು ಗೊತ್ತು ?”

*   *   *

ಗುಂಡನ ‘ಗುಡ್ ಟರ್ನ್’

ಶಿಕ್ಷಕ :— ಪ್ರತಿಯೊಬ್ಬ ಬಾಲವೀರನೂ ಸಂಕಟದಲ್ಲಿ ಸಿಕ್ಕವರನ್ನು ಪಾರು ಮಾಡುತ್ತಿರಬೇಕು ! ಈ ಮಾತನ್ನು ಎಲ್ಲರೂ ಲಕ್ಷ್ಯದಲ್ಲಿಟ್ಟುಕೊಂಡಿದ್ದೀರಾ ?

ಹುಡುಗರು :— ಹೂಂನ್ರಿ ಮಾಸ್ತರ್ !

ಶಿಕ್ಷಕ :— ಶಾಹಬಾಸ್, ಹೇಳೋ ಗುಂಡ್ಯಾ. ನೀನು ಯಾರನ್ನಾದರೂ ಸಂಕಟದಲ್ಲಿ ಸಿಕ್ಕವರನ್ನು ಪಾರು ಮಾಡಿದ್ದೀಯಾ ?

ಗುಂಡ್ಯಾ :—ಹೂನ್ರಿ ಮಾಸ್ತರ್; ಮೊನ್ನೆ ಆದಿತ್ಯವಾರ ನಮ್ಮ ಅಪ್ಪನ್ನs ಪಾರು ಮಾಡಿದೀನ್ರಿ !

ಶಿಕ್ಷಕ :— ಭಲೇ ಹೇಳಪಾ.... ಹ್ಯಾಂಗ ಮಾಡಿದೀ ಅಂಬೂದನ್ನ ?

ಗುಂಡ್ಯಾ:—ಅವತ್ತು ಮುಂಜಾನಿನಿಂದs ಉಂಡೀ ಕೊಡಂತ ಅಪ್ಪನ್ನ ಕೇಳಲಿಕ್ಕೆ ಹತ್ತಿದ್ದೆ. ಆಗ ಆಕಿ ಸಿಟ್ಟಿಗೆದ್ದು ಉಂಡೀ ಡಬ್ಬೀ ನನ್ನ ಮುಂದ ಅಪ್ಪಳಿಸಿ ಎಲ್ಲಾ ತೊಗೋಳಪ್ಪಾ ಮಹಾರಾಯಾ, ಒಮ್ಮೆ ನನ್ನ ಸಂಕಟದಿಂದs ಪಾರುಮಾಡಿ ಬಿಡು !’ ಅಂದಳ್ರಿ, ಆಗ ನಾ ಡಬ್ಬೀ ಎಲ್ಲಾ ಬರೀದು ಮಾಡಿ, ಆಕಿನ್ನ ಸಂಕಟದಿಂದs ಪಾರುಮಾಡಿ ಬಿಟ್ಟೆನ್ರಿ !”

*   *   *

ಕಾಣಿಸಿದರs ಹೌದಲ್ಲೊ !

“ಏನ್ರೀ, ನೀವು ಉಡುಪಿಗೆ ಹೋಗಿ ಬಂದ್ರಿ. ಹಾದ್ಯಾಗ ಶಿವಮೊಗ್ಗಾ ಜಿಲ್ಲಾದೊಳಗಿನ ಸೃಷ್ಟಿಸೌಂದರ್ಯ ಹ್ಯಾಂಗ ಅನಿಸಿತು ನಿಮಗ ?”

“ಹ್ಯಾಂಗ ಅನಸತsದೇನು ಮಣ್ಣು ! ಆ ಸೌಂದರ್ಯ ಕಾಣಿಸಿದರ ಹೌದಲ್ಲೋ ! ಎರಡೂ ಬದಿಗೂ ಮುಗಿಲುದ್ದದ ಬೆಟ್ಟ. ಬೆಟ್ಟವಿಲ್ಲದಲ್ಲಿ ಮುಗಿಲಿಗೆ ಮುಟ್ಟಲಿಕ್ಕೆ ಹೊರಟ ಗಿಡ-ಮರಗಳ ಕಾಡು. ಇವೇ ಕಣ್ಣು ದುಡು ಬರೂದರಿಂದ, ಆ ಸೃಷ್ಟಿಸೌಂದರ್ಯ ಅಂಬೂದು ಕಾಣ್ಸೂದೇ ಇಲ್ಲ !”

*   *   *

ಯಾತ್ರರ ತೊಂದರೆ, ಸಾಹೇಬ್ !

ಒಬ್ಬ ಮುದುಕಿ ಸಾಕ್ಷಿ ಹೇಳಲು ಕೋರ್ಟಿಗೆ ಬಂದಿದ್ದಳು. ಸಾಕ್ಷಿಯೆಲ್ಲ ಮುಗಿದ ಮೇಲೆ, ಮ್ಯಾಜಿಸ್ಟ್ರೇಟರು ಆಕೆಗೆ ಹೇಳಿದರು:

“ಅವ್ವಾ, ನಿಮಗೆ ಬಹಳ ಪ್ರಶ್ನೆಗಳನ್ನು ಕೇಳಿದೆ. ತೊಂದರೆಯೇನೂ ಆಗಲಿಲ್ಲವಲ್ಲ?”

“ತೊಂದರಿ ಯಾತರದು ಸಾಹೇಬ್ ! ನಮ್ಮ ಮನ್ಯಾಗ ಮೊಮ್ಮಗಾ ಒಬ್ಬ ಇದ್ದಾನ. ಅಂವಾ ಕೇಳೂ ಪ್ರಶ್ನೆಗಳ ಮುಂದ ನಿಮ್ಮ ಪ್ರಶ್ನೆ ಅಂದರೆ ಏನೂ ಅಲ್ಲ ! ಮುಂಜಾನೆದ್ದ ಕೂಡಲೆ ಏನೇನಾದರೂ ಕೇಳಲಿಕ್ಕೆ ಹತ್ತಿದ ನಂದರ ಸಂಜೀತನಕಾ ಹಾಂಗs ಅವನ ಪ್ರಶ್ನದ ಮಳೀ ನಡೆದs ಇರತsದ !”

*   *   *

ಯಾವ ಖಾತೆಗೆ ಖರ್ಚು?

“ತಮ್ಮಲ್ಲಿಯ ಕ್ಯಾಶಿಯರು ಮೊನ್ನೆಮೊನ್ನೆ ಕೆಲವು ಹಣಾ ಎತ್ತಿಕೊಂಡು ಓಡಿಹೋದ ನಂತಲ್ಲಾ ! ಆ ಹಣಾ ಯಾವ ಖಾತೆಗೆ ಖರ್ಚು ಅಂತ ಹಾಕಿದಿರಿ ?”

“ರನಿಂಗ್ ಎಕ್ಸ್‌ಪೆನ್ಸೆಸ್— ಅನ್ನೂ ಖಾತೆಗೆ ಖರ್ಚು ಅಂತ ಬರೆದಿದ್ದೇವೆ....ಸದ್ಯಕ್ಕಂತೂ !”

*   *   *

ಓರಿಯೆಂಟಲ್

ಗ್ಯಾ. ಸೆಕ್ಯುರಿಟಿ ಲೈಫ್ ಇನ್ಶುರನ್ಸ್ ಕಂ., ಲಿ.

ಮುಖ್ಯ ಕಚೇರಿ: **ಮುಂಬಯಿ**

ವಿವೇಚನಾಶೀಲರಾದ ಸಾವಿರಾರು ಜನ ಸುಶಿಕ್ಷಿತರು, ತಮ್ಮ ಮುಪ್ಪಿನ ಕಾಲದಲ್ಲಿ ತಮಗಾಗಿಯೊ, ಇಲ್ಲವೆ ತಮ್ಮ ನಂತರ ತಮ್ಮ ಅವಲಂಬಿತ ಕುಟುಂಬಕ್ಕಾಗಿಯೊ ಆರ್ಥಿಕ-ಸ್ವಾತಂತ್ರ್ಯದ ಅಡಿಗಲ್ಲನ್ನು ಹಾಕಿ ಇರಿಸುತ್ತಿರುವರು.

ಎಂದರೆ

ಪ್ರತಿವರ್ಷವೂ ಸಾವಿರಾರು ಜನರು 'ಓರಿಯೆಂಟಲ್' ನಲ್ಲಿ ತಮ್ಮ ಜೀವವಿಮೆ ಮಾಡುತ್ತಿರುವರು.

ತಡಮಾಡಬೇಡಿರಿ! ಕೂಡಲೆ ನೀವೂ ಒಂದು 'ಓರಿಯೆಂಟಲ್' ಪಾಲಿಸಿ ಕೊಳ್ಳಿರಿ!

ವಿಶೇಷ ಸಂಗತಿಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಟಿ. ಅಥಣಿಕರ್,
ಶಳಕವಾಡಿ, ಬೆಳಗಾಂವಿ.

ದಿವಸಗಳ ಹಿಂದೆ ಸಹಕಾರಕ್ಕೆ ಸಿದ್ಧವಾದ ಕಾಂಗ್ರೆಸು, ಅಹಿಂಸೆಗಿಂತ ದೇಶದ ಸ್ವಾತಂತ್ರ್ಯ ಹೆಚ್ಚು ಮಹತ್ವದ್ದು ಎಂದು ಒಪ್ಪಿಕೊಂಡಂತಾಗಿರಲಿಲ್ಲವೆ? ಇಂದು ಕಾಂಗ್ರೆಸು ಭಾಷಣಸ್ವಾತಂತ್ರ್ಯದ ತತ್ವಕ್ಕಾಗಿ ಜೀವವಿಡಲು ಸಿದ್ಧವಾಗಿದೆ ಎಂಬ ಮಾತಿನಿಂದ ಯಾರೂ ಭ್ರಾಂತಿಗೊಳ್ಳಬಾರದು. ಯಾಕೆಂದರೆ ಈ ಭಾಷಣ-ಸ್ವಾತಂತ್ರ್ಯವು ವಿಶಿಷ್ಟತರದ್ದಾಗಿದೆ. 'ಬ್ರಿಟಿಶರ ಕಷ್ಟಗಳು ಹೆಚ್ಚುವುದು ನಮ್ಮ ಇಚ್ಛೆ ಇಲ್ಲ, ನಾವು ಹೆಚ್ಚಿಸುವುದೂ ಇಲ್ಲ' ಎಂದು ಮಹಾತ್ಮರೂ ವರ್ಕಿಂಗ್ ಕಮಿಟಿಯ ಗೊತ್ತುವಳಿಯೂ ವಚನ ಕೊಟ್ಟಂತೆಯೆ ಆಗಿದೆ. ಇದಲ್ಲದೆ ಈ ಭಾಷಣ ಸ್ವಾತಂತ್ರ್ಯವು ತತ್ವತಃ ಸಿದ್ಧವಾಗುವ ಭಾಷಣಸ್ವಾತಂತ್ರ್ಯವಲ್ಲ, ಕೇವಲ 'ಹಿಂಸಾವಿರೋಧ' ವನ್ನು ಸಾಧಿಸಲು ಸ್ವಾತಂತ್ರ್ಯ, ಅರ್ಥಾತ್ ಹಿಂಸಾತ್ಮಕವೆನಿಸಿದ ಸದ್ಯದ ಯುದ್ಧವನ್ನೇ ವಿರೋಧಿಸುವ ಸ್ವಾತಂತ್ರ್ಯ. ಇಂತಹ ವಿರೋಧದಿಂದ ಸರಕಾರಕ್ಕೆ ತೊಂದರೆಯಾಗುವುದಿಲ್ಲ ಎಂದು ಹೇಳುವುದು ಯಾವ ತರ್ಕದ ಆಧಾರದಿಂದಲೊ! ಹೇಳಬೇಕಾದ ಪ್ರಸಂಗಕ್ಕೆ ಅಹಿಂಸಾನೀತಿಯ ಪ್ರಚಾರವೆ ಮೂಲಕಾರಣವಾಗಿದೆ. ಸದ್ಯಕ್ಕೆ ನಾವು ಕೇಳಬೇಕಾದ ಪ್ರಶ್ನೆ ಒಂದೆ: ಕಾಂಗ್ರೆಸಿನ ರಾಜಕೀಯ ಧೋರಣೆಗೆ ಅಹಿಂಸಾನೀತಿಯ ನಿಬಂಧನೆ ಇದೆಯೆ? ಇರಬೇಕಾದುದೆ?

ಹಿಂಸೆ ಮತ್ತು ಅಹಿಂಸೆ

ಹೀಗೆಂದ ಮಾತ್ರಕ್ಕೆ ಕಾಂಗ್ರೆಸು ಹಿಂಸೆಯ ಧೋರಣೆಯನ್ನೆ ಕೈಕೊಳ್ಳಬೇಕೆಂದು ಹೇಳಿದಂತಾಗಲಿಲ್ಲ. ಕಾಂಗ್ರೆಸಿನ ಧ್ಯೇಯಕ್ಕೆ ಅಹಿಂಸೆಯು ಸಾಧನವಾದುದೆ ಆದರೆ, ಸಾಧನವೆ ಸಾಧ್ಯಕ್ಕೆ ನಿಬಂಧನವೆನಿಸುವುದು ಸಹಜವೂ ಅಲ್ಲ; ಸಮಂಜಸವೂ ಅಲ್ಲ. ಇನ್ನು ಅಹಿಂಸೆಯು ಧ್ಯೇಯವೆ ಆಗಿದ್ದರೆ ಅದರ ಪ್ರಚಾರಕ್ಕಾಗಿ ಇನ್ನೊಬ್ಬರ ಪೂರ್ವಸಮ್ಮತಿಯನ್ನು ಪಡೆಯಬೇಕಾಗಿಲ್ಲ. ಇದಲ್ಲದೆ ಹಿಂಸೆ-ಅಹಿಂಸೆಯನ್ನು ಕಾರ್ಯದ ಸ್ವರೂಪದಿಂದ ನಿರ್ಣಯಿಸಬೇಕೆ, ಹೃದಯದೊಳಗಿನ ಸಂಕಲ್ಪದಂತೆ ನಿರ್ಣಯಿಸಬೇಕೆ? ಇಂದು ಜರ್ಮನಿ-ಇಂಗ್ಲಂಡುಗಳು ಪರಸ್ಪರ ಹೋರಾಟದಲ್ಲಿ ತೊಡಗಿವೆ. ಜರ್ಮನಿಗೆ ಆಕ್ರಮಣವೃತ್ತಿ, ಇಂಗ್ಲಂಡಕ್ಕೆ ಕೇವಲ ಆತ್ಮರಕ್ಷಣೆ ಧ್ಯೇಯವಾಗಿವೆ. ತೋರಿಕೆಗೆ ಎರಡೂ ರಾಷ್ಟ್ರಗಳು ಯುದ್ಧದ ಹಿಂಸಾತ್ಮಕ ಚಟುವಟಿಕೆಗಳನ್ನು ಕೈಕೊಂಡಿದ್ದರೂ, ಇವೆರಡರಲ್ಲಿ ವ್ಯತ್ಯಾಸವಿಲ್ಲವೆ? ವ್ಯತ್ಯಾಸವನ್ನು ಕಂಡುದರಿಂದಲೆ ಕಾಂಗ್ರೆಸು ಬ್ರಿಟಿಶರಿಗೆ ಸಹಾನುಭೂತಿಯನ್ನು ತೋರಿಸುತ್ತಿದೆಯಲ್ಲವೆ? ಆಕ್ರಮಣವೃತ್ತಿ ಇಲ್ಲದ ಇಂಗ್ಲಂಡಿನ ನಡೆವಳಿಕೆಯೂ ಜರ್ಮನಿಯಂತೆ ಹಿಂಸಾತ್ಮಕವಾಗಿದೆ ಎಂದರೆ ಆ ವ್ಯತ್ಯಾಸ ಉಳಿಯಿತೆಲ್ಲಿ? ಹಿಂಸಾವೃತ್ತಿಯಾಗಲಿ ಅಹಿಂಸಾವೃತ್ತಿಯಾಗಲಿ, ಆತ್ಮಿಕ ಸಂಸ್ಕೃತಿಯಿಂದ ನೋಡಬೇಕಲ್ಲದೆ ಆನುಷಂಗಿಕ ಸಂನಿವೇಶಗಳಿಂದ ನೋಡಲಾಗದು. ಇದಲ್ಲದೆ ಮಹಾತ್ಮರು ಹೇಳುವಂತಹ ಅಹಿಂಸೆಯು ವೈಯಕ್ತಿಕ ಚಾರಿತ್ರ್ಯದ ತಳಹದಿಯ ಮೇಲೆಯೆ ನಿಲ್ಲತಕ್ಕುದು. 'ವ್ಯಕ್ತಿಗಳ ಚಾರಿತ್ರ್ಯದಲ್ಲಿ ಅಂತಹ ಅಹಿಂಸೆಯ ಸಂಸ್ಕಾರ ಬಾರದವರೆಗೆ, ರಾಷ್ಟ್ರಕ್ಕೆ ಅಹಿಂಸೆಯು ಅನ್ವಯಿಸದು, ಹಿಂದುಸ್ಥಾನವು ಅಹಿಂಸಾಮಾರ್ಗವನ್ನೆ ಕೈಕೊಂಡಿದೆ' ಎಂಬ ಮಾತಿಗೆ ಅರ್ಥವಾಗದು. ಈ ವಿವೇಚನೆಯನ್ನು ಅರಿತುಕೊಳ್ಳದೆಯೊ ಒಪ್ಪಿಕೊಳ್ಳದೆಯೊ ನಮ್ಮ ಮುಂದಾಳುಗಳು ಪರಿಸ್ಥಿತಿಯಲ್ಲಿ ಗೊಂದಲ ಸೇರಲು ಕಾರಣರಾಗಿದ್ದಾರೆ.

ಹಕ್ಕು ಮತ್ತು ಹೊಣೆಗಾರಿಕೆ

ಸ್ವಾತಂತ್ರ್ಯಕ್ಕಾಗಿ ಸ್ವಜನರ ಸಂರಕ್ಷಣೆಗಾಗಿ ಹೋರಾಡುವುದು ಕಾಂಗ್ರೆಸಿನ ಹಕ್ಕು ಆಗಿದೆ ಎಂದು ಹೇಳುವುದುಂಟು. ಒಂದು ದೃಷ್ಟಿಯಿಂದ ಆ ಮಾತು ನಿಜ. ಕಾಂಗ್ರೆಸನ್ನು ಬಿಟ್ಟರೆ ರಾಷ್ಟ್ರೀಯ ಇಲ್ಲವೆ ಅಖಿಲಭಾರತೀಯ ಸ್ವರೂಪದ ಸಂಸ್ಥೆ ಒಂದೂ ಇಲ್ಲ. ಮಿಕ್ಕವುಗಳು ಆಯಾ ಜಾತಿಗಳ ಸ್ವಾರ್ಥಾನುಕೂಲಗಳನ್ನು ಸಾಧಿಸಿಕೊಳ್ಳುವ ಸಂಕುಚಿತ ದೃಷ್ಟಿಯ ಸಂಸ್ಥೆಗಳೆ ಆಗಿವೆ. ಆದರೆ ಇನ್ನೊಂದು ದೃಷ್ಟಿಯಿಂದ ನೋಡಿದರೆ, ಕಾಂಗ್ರೆಸು ಒಂದು ಮಾತಿನ ಮಹತ್ವವನ್ನು ಸಾಕಷ್ಟು ತಿಳಿದುಕೊಂಡಿಲ್ಲ ಎಂದೇ ಹೇಳಬೇಕಾಗುವುದು. ಅದೆಂದರೆ ಹಕ್ಕಿನೊಡನೆ ತಗುಲಿಕೊಂಡಿರುವ ಹೊಣೆಗಾರಿಕೆ. 'ಹೊಣೆಗಾರಿಕೆ ಇಲ್ಲದೆ ಹಕ್ಕು ಇಲ್ಲ' ಎಂದು, ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಿಂತ ಕಾಂಗ್ರೆಸಿಗೆ ಗೊತ್ತಿರಲು ಸಾಕು. ಆ ಹೊಣೆಗಾರಿಕೆಯನ್ನು ನಿರ್ವಹಿಸುವ ದೃಷ್ಟಿಯಿಂದ ಇಂದು ಕಾಂಗ್ರೆಸು ಅನಪೇಕ್ಷಿತ, ಅನಪೇಕ್ಷಣೀಯ

ಧೋರಣೆಯನ್ನು ಹಿಡಿದಿದೆ ಎಂದು ಹೇಳಬೇಕಾಗುವುದು. ಯಾವುದೆ ಕಾರಣದಿಂದ ನಾಝೀವಾದವನ್ನು ವಿರೋಧಿಸುವ, ಬ್ರಿಟಿಶ ಪಕ್ಷಕ್ಕೆ ಸಹಾನುಭೂತಿಯನ್ನು (ಆಗಾಗಲಾದರೂ) ತೋರಿಸುತ್ತಲಿರುವ ಕಾಂಗ್ರೆಸು, ಅಸಹಕಾರವೃತ್ತಿಯನ್ನಾಗಲಿ ಕಾರ್ಯಕ್ರಮವನ್ನಾಗಲಿ ಸ್ವೀಕರಿಸಿದರೆ, ಯಾವುದು ಅನಿಷ್ಟವೆಂದು ಕಾಂಗ್ರೆಸು ಅಭಿಪ್ರಾಯ ಪಟ್ಟು ಪ್ರಚಾರಮಾಡುತ್ತಲಿದೆಯೊ ಅಂತಹ ಘಟನೆಯೆ ಸಂಭವಿಸುವಂತಿದೆ. ಹಾಗಾಗದಂತೆ ನೋಡತಕ್ಕುದು ಕಾಂಗ್ರೆಸಿನ ಹೊಣೆಗಾರಿಕೆಯಲ್ಲವೆ?

ಏಕತಂತ್ರತೆ ಮತ್ತು ಜಾತೀಯತೆ

ಅಂತಹ ಘಟನೆ ಎಂದರೆ ಎರಡು ಸಂಗತಿಗಳು. (೧) ನಾಝೀವಾದ ಇಲ್ಲವೆ ಅದರ ಮಾದರಿಯದಾದ ಏಕತಂತ್ರತೆಯ ರಾಜ್ಯ. ಮೊದಲನೆಯದಾಗಿ, ಕಾಂಗ್ರೆಸಿನ ವಿರೋಧದಿಂದ ಪ್ರಜಾಪ್ರಭುತ್ವದ ಶತ್ರುಗಳಿಂದ ನಾಝಿಗಳಿಗೆ ಪ್ರಾಶಸ್ತ್ಯದೊರಕುವುದು ಅಲ್ಲದೆ ಮತ್ತೇನು? ಇಂದು ಜಗತ್ತಿನಲ್ಲಿ ನಾಝಿಗಳನ್ನು ಧೈರ್ಯದಿಂದ—ಪರಿಣಾಮಕಾರಕವಾಗುವಂತೆ— ಎದುರಿಸುವವರೆಂದರೆ ಬ್ರಿಟಿಶರೊಬ್ಬರೆ. ಯಾವುದೆ ಕಾರಣದಿಂದಾಗಲಿ ಕಾಂಗ್ರೆಸು ಬ್ರಿಟಿಶರೊಡನೆ ಅಸಹಕಾರ ಹೂಡಿದರೆ, ಅದರಿಂದ ಬ್ರಿಟಿಶರ ನೈತಿಕ ಬಲವಾದರೂ ಕಡಮೆಯಾಗಲೇ ಬೇಕು, ಇಂತಹ ಪರಿಸ್ಥಿತಿಯ ಹೊಣೆಗಾರಿಕೆಯನ್ನು ಕಾಂಗ್ರೆಸು ಹೊರಲೇಬೇಕಾಗುವುದು. ಇದಲ್ಲದೆ ಕಾಂಗ್ರೆಸಿನ ಅಸಹಕಾರ ಧೋರಣೆಯಿಂದ ಪ್ರತ್ಯಕ್ಷವಾಗಿಯೆ ನಾಝೀವಾದದ ಪ್ರಥಮಸೂತ್ರದಂತಿದ್ದ ಏಕತಂತ್ರತೆಯ ರಾಜ್ಯವು ಪ್ರಚಾರದಲ್ಲಿ ಬರುವುದು. ಬ್ರಿಟಿಶರು ಈಗ ಆತ್ಮಸಂರಕ್ಷಣೆಯ ಹೋರಾಟದಲ್ಲಿದ್ದಾರೆ. ಕೇವಲ ತಾತ್ತ್ವಿಕ ಕಾರಣಕ್ಕಾಗಿಯೆ ವಿರೋಧವನ್ನು ತಾಳಿದರೂ ಅದಕ್ಕೆ ಅವರು ಅವಕಾಶವನ್ನು ಕೊಡುವಂತಿಲ್ಲ ಎಂಬುದು, ಪ್ರಸಿದ್ಧವಾದ ಗಾಂಧಿ-ವೈಸ್‌ರಾಯರ ಪತ್ರವ್ಯವಹಾರದಿಂದ ಸ್ಪಷ್ಟವಾಗುವುದು. ಈ ವಿರೋಧವನ್ನು ತಡೆಯಲು ವೈಸರಾಯರು ಸರ್ವಾಧಿಕಾರಿತ್ವದ ಏಕತಂತ್ರತೆಯ ಆಡಳಿತವನ್ನು ಸಾಗಿಸಲೂ ಹಿಂದುಮುಂದು ನೋಡಲಿಕ್ಕಿಲ್ಲ. ಅಂತಹ ಪರಿಸ್ಥಿತಿಯ ಸಾರ್ವಜನಿಕ ಪರಿಣಾಮವು ಕಾಂಗ್ರೆಸಿನ ಧ್ಯೇಯಕ್ಕೆ ಬಾಧಕವಾಗುವ ಸಂಭವವೆ ಹೆಚ್ಚು.

ಸ್ವಾರ್ಥದ 'ಸ್ವರಾಜ್ಯ'

ಎರಡನೆಯ ಸಂಗತಿ ಎಂದರೆ ಅಸಹಕಾರವನ್ನು ತಾಳಿ ಕಾಂಗ್ರೆಸು ಆಡಳಿತದ ಹೊಣೆಗಾರಿಕೆಯನ್ನು ಬಿಟ್ಟುಕೊಟ್ಟರೆ ಅಧಿಕಾರಸ್ಥಾನಗಳಲ್ಲಿ ವಿುಕ್ಕ ಸಂಸ್ಥೆಯವರು ಸೇರಿಕೊಳ್ಳುವುದು ಖಂಡಿತ. ಮಿಕ್ಕ ಸಂಸ್ಥೆಗಳೆಲ್ಲ ಸಾಮಾನ್ಯವಾಗಿ ಜಾತೀಯ ಸಂಸ್ಥೆಗಳೆ ಎಂದು ಮೇಲಿಂದ ಮೇಲೆ ಹೇಳಬೇಕಾಗಿಲ್ಲ. ಪ್ರಜಾಪ್ರಭುತ್ವದ ತತ್ತ್ವಕ್ಕೆ ಮುಸ್ಲಿಂಲೀಗಿನ ಆಡಳಿತವು ವಿಘಾತುಕವೆನಿಸಿದಷ್ಟೆ ಹಿಂದು ಮಹಾಸಭೆಯ ಆಡಳಿತವೂ ವಿಘಾತುಕವೆನಿಸಬಹುದು. ವೈಸ್‌ರಾಯರ ಘೋಷಣೆಯನ್ನು ಈ ಎರಡೂ ಸಂಸ್ಥೆಗಳು ವಿರೋಧಿಸಿದರೂ, ಇಂದಿಲ್ಲ ನಾಳೆ ಇವು ಪರಸ್ಪರ ವಿರೋಧಬುದ್ಧಿಯಿಂದ, ಪರಸ್ಪರ ಅವಿಶ್ವಾಸದ ಈರ್ಷೆಯಿಂದ ವೈಸರಾಯರೊಡನೆ ಸಹಕಾರ ಮಾಡಬಹುದು. ಯಾಕೆಂದರೆ ಇಂತಹ ಪ್ರಸಂಗದಲ್ಲಿ ಒಬ್ಬರೆಗೆ ನಿಂತು ತಡೆಯುವ ತತ್ತ್ವಗಳು ಇವೆರಡೂ ಸಂಸ್ಥೆಗಳಿಗಿಲ್ಲ. 'ಇನ್ನೊಂದು ಸಂಸ್ಥೆ ಪ್ರಬಲವಾಗದಂತೆ ನೋಡಿಕೊಳ್ಳುವುದೆ ತನ್ನ ಅಸ್ತಿತ್ವದ ಧ್ಯೇಯ' ಎಂದು ಇವು ಪರಸ್ಪರ ವ್ಯವಹಾರವನ್ನು ಇಟ್ಟ ಸಂಸ್ಥೆಗಳು. ಇಂತಹ ಸಂಸ್ಥೆಗಳ ಕೈಯಲ್ಲಿ ಆಡಳಿತದ ಸೂತ್ರ ಸಿಕ್ಕರೆ ಆಗುವುದೇನು? ದೇಶದಲ್ಲಿ ಜಾತೀಯತೆಗೆ ಹೆಚ್ಚಿನ ಮಾನ ದೊರಕುವುದು; ಜಾತೀಯತೆಯ ಪ್ರಚಾರವಾಗುವುದು; ಪರಸ್ಪರ ಅವಿಶ್ವಾಸ ಬೆಳೆದು ಜಾತಿಜಗಳದ ಪೂರ್ವಸಿದ್ಧತೆಗಳೆಲ್ಲ ಸಜ್ಜಾಗುವುವು. ಒಂದು ವೇಳೆ ಇಂತಹ ಪರಿಸ್ಥಿತಿಗೆ ಬ್ರಿಟಿಶ ಮುತ್ಸದ್ದಿಗಳ ಜಾಣತನವೆ ಕಾರಣ ಎಂದರೂ, ಆ ಜಾಣತನಕ್ಕೆ ಕಾಂಗ್ರೆಸಿನ ಧೋರಣೆ ಬಲವಾಗಿ ಪೋಷಕವಾಗುವುದು— ಎಂಬುದನ್ನು ಒಪ್ಪಲೇಬೇಕಾಗುವುದು. ನಿಜವಾಗಿಯೆ ಆ ಪರಿಸ್ಥಿತಿ ಬಂದರೆ, ಕಾಂಗ್ರೆಸಿನ ಭವಿತವ್ಯತೆಯೊಡನೆ ದೇಶದ ಭವಿತವ್ಯತೆಯೂ ದೀರ್ಘಕಾಲ ಕಷ್ಟಕ್ಕೊಳಗಾಗಬಹುದಾಗಿದೆ.

ಹಾಸ್ಯದ ರಸದೂಟ! ಸಮಾಜದ ಬೇರೆ ಬೇರೆ ದೃಶ್ಯಗಳ ಕೂಟ!

ಬೆಳ್ಳಿಯ ಹಬ್ಬ

★

ಶ್ರೀ. ಎನ್. ಕೆ. ಕುಲಕರ್ಣಿಯವರ ಹೊಸ ಏಕಾಂಕ ಸಂಗ್ರಹ.
ಬಾಲ-ಬಾಲಿಕೆಯರಿಗಾಗಿ ಬೇರೆ ಬೇರೆ ನಾಟಕಗಳು.

ದೊರೆಯುವ ಸ್ಥಳ:-
ಮನೋಹರ ಗ್ರಂಥಭಾಂಡಾರ, ಧಾರವಾಡ.

ಸಂಲಿಗೆಗಾರರ ಸಂಘ

ಇಟಲಿ-ಜರ್ಮನಿಗಳು ಜಪಾನದೊಡನೆ ಮಾಡಿಕೊಂಡ ಒಪ್ಪಂದದಿಂದ ಮಾನವಪ್ರಗತಿಗೆ ಆಡ್ಡಿಯನ್ನುಂಟುಮಾಡುವ ಸುಲಿಗೆಗಾರರ ಸಂಘ ಸ್ಥಾಪಿತವಾಯಿತೆಂದು ಹೇಳಬಹುದು. ಅಮೇರಿಕೆಗೆ ತೊಂದರೆ ಕೊಡಲು ಜಪಾನದ ಉಪಯೋಗವಿದೆ; ತನಗೆ ತೊಂದರೆ ಯಾವರೆ ಅಮೇರಿಕೆಯು ಇಂಗ್ಲಂಡಕ್ಕೆ ಕೊಡುವ ಸಹಾಯವನ್ನು ತಡೆಯದಿದ್ದರೂ ಕಡಮೆ ಮಾಡಬೇಕಾಗುವುದು; ಇಲ್ಲವಾದರೆ ಅಮೇರಿಕೆಯು ಯುದ್ಧದಲ್ಲಿ ಬೀಳಬೇಕಾಗುವುದು— ಎಂದು ಮುಂತಾಗಿ ಸರ್ವಾಧಿಕಾರಿಗಳು ಹಂಚಿಕೆಯನ್ನು ಹಾಕಿರಬಹುದು. ಇದಲ್ಲದೆ ಇನ್ನೂ ಒಂದು ಮಾತು: ಸದ್ಯದ ಅಧ್ಯಕ್ಷಪದವಿಯ ಚುನಾವಣೆ ಮುಗಿಯುವವರೆಗೆ, ಅಮೇರಿಕೆ ಯಾವನಿರ್ಣಯವನ್ನೂ ಮಾಡುವಂತಿಲ್ಲ. ಪರಸ್ಪರ ದುರುಪಯೋಗ ಮಾಡಿ ಲಾಭಪಡೆದುಕೊಳ್ಳಬಹುದೆಂಬ ಹೆದರಿಕೆಯಿಂದ, ಅಧ್ಯಕ್ಷಪದವಿಯ ಇಬ್ಬರೂ ಹುರಿಯಾಳುಗಳು, ನಿರ್ಣಯಾತ್ಮಕ ಧೋರಣೆಯನ್ನು ಸಾರುವಂತಿಲ್ಲ. ಚುನಾವಣೆಯ ಕಾಲದ ಕೊನೆ ಮಾರ್ಚ್ ತಿಂಗಳಲ್ಲಿ. ಎಂದರೆ ಇನ್ನೂ ಐದುತಿಂಗಳ ಅವಧಿಯಲ್ಲಿ ಅಮೇರಿಕೆಯನ್ನು ಹೆದರಿಸಿ

ದೂರಿರಿಸಿ, ಆಫ್ರಿಕದಲ್ಲಿ ಇಟಲಿಯನ್ನು 'ಛೂ' ಬಿಟ್ಟು, ಏಶಿಯಾದಲ್ಲಿ ಜಪಾನನ್ನು ಹಗ್ಗ ಸಡಿಲಿಸಿ, ಎಲ್ಲ ಕಡೆಗೂ ಹಣ್ಣಾದ ನಿರಾಶ್ರಿತವಾದ ಇಂಗ್ಲಂಡನ್ನು ಧ್ವಂಸಮಾಡಬೇಕು—ಎಂದು ಹಿಟ್ಲರನು ಹಂಚಿಕೆಗಾಗಿ ಹರ್ಷವಾಯು ಭರಿತನಾಗಿರಬಹುದು.

ಸಾಮ್ರಾಜ್ಯದ ಶಕ್ತಿ

ಆದರೆ ಈ ಹಂಚಿಕೆಯಲ್ಲಿ ಕೈಗಸುಬಿಗಿಂತ ಕಲ್ಪನೆಯು ಕಸುವೆ ಹೆಚ್ಚಾಗಿದೆ ಎಂದು ಹೇಳಬಹುದು. ಯುರೋಪು ಮತ್ತು ಏಶಿಯಾ ಎರಡೂ ಕಡೆ ಕಣ್ಣಿಟ್ಟು ನಿಂತಿದೆ ರಾಕ್ಷಸಾಕಾರವಾದ ರಶಿಯಾ. 'ಯುರೋಪದಲ್ಲಿ ಹಿಟ್ಲರನ ಪ್ರಾಬಲ್ಯ ಬೆಳೆಯದಂತೆ ಏಶಿಯಾದಲ್ಲಿ ಜಪಾನಿನ ಪ್ರಾಬಲ್ಯವೂ ಬೆಳೆಯಕೂಡದು' ಎಂಬುದು ರಶಿಯಾದ ರಾಜನೀತಿ. ರಶಿಯಾದ ಸುಲಿಗೆಗಾರನನ್ನು ಸಮಾಧಾನಗೊಳಿಸಬೇಕು, ಇಲ್ಲವೆ ಸುಲಿಗೆಗಾರರ ಸಂಘದಲ್ಲಿ ಅವನಿಗೂ ಸ್ಥಾನಬೇಕು. ಸಮಾಧಾನಗೊಳಿಸುವುದೆಂದರೆ ರಶಿಯಾದ ಶಕ್ತಿಯನ್ನು ಒಪ್ಪಿಕೊಂಡಂತೆ. ಸಂಘದಲ್ಲಿ ಸ್ಥಾನ ಕೊಡಬೇಕೆಂದರೆ ರಶಿಯಾಕ್ಕೆ ಅಷ್ಟೊಂದು ಉತ್ಸುಕತೆ ಇಲ್ಲ, ಬಹಳ ಜನ ಸುಲಿಗೆಗಾರರು ಒಂದೆಡೆ ಸೇರುವುದು ಸುರಕ್ಷಿತವಲ್ಲ. ಈ ತೊಡಕಿನ ಜೊತೆಗೆ ಇನ್ನೊಂದು ಎಂದಿಗೂ ಬಗೆಹರಿಯದ ತೊಡಕಿದೆ. ಅದೆಂದರೆ ಬ್ರಿಟಿಶ ಸಾಮ್ರಾಜ್ಯದ ಶಕ್ತಿಸಂಪತ್ತು. ಈ ಸಂಪತ್ತು ಅಪಾರವಾಗಿದೆ, ಅನೇಕಮುಖವಾಗಿದೆ, ಆದ್ದರಿಂದ ಪರಿಣಾಮಕಾರಕವಾಗಲೇಬೇಕು ಎಂಬುದು ಬ್ರಿಟಿಶ ವಿಮಾನದಳದ ಬಲಿಯುವ ಶ್ರೇಷ್ಠತೆಯಿಂದ ಸ್ಪಷ್ಟವಾಗುತ್ತಲಿದೆ. ಸಿದ್ಧತೆ ಕಡಮೆ ಇದ್ದಾಗ ಯಶಸ್ಸನ್ನು ಕಾಣದ ಹಿಟ್ಲರನು ದಿನೇದಿನೇ ಸಿದ್ಧತೆ ಬೆಳೆಯುತ್ತಲಿರುವ ಈಗ ಯಶಸ್ಸಿನ ಆಶೆಯನ್ನೆ ಬಿಡಬೇಕಾಗಿದೆ. ಬರುವ ಐದು ತಿಂಗಳು ಚಳಿಗಾಲದ ಮಂಜು-ಮುಸುಕುಗಳ ನಿಮಿತ್ತವಾಗಿ ಇಂಗ್ಲಂಡಿಗೆ ದಾಳಿಯ ಹೆದರಿಕೆಯೆ ಇಲ್ಲ. ಬಾಂಬುಗಳ ಅನರ್ಥಕ್ಕೆ ಇದುವರೆಗೆ ಎಳ್ಳಷ್ಟೂ ಹೆದರದ ಬ್ರಿಟಿಶರು, ಇನ್ನು ಹೆದರುವ ಶಕ್ಯತೆ ಇಲ್ಲ. ಅಷ್ಟರಲ್ಲಿ ಅಮೇರಿಕೆಯಲ್ಲಿ ಚುನಾವಣೆ ಮುಗಿಯುವುದು. ಅಮೇರಿಕೆಯ ಧೋರಣೆಗಾಗಿ ಯಾರಿಗೂ ಸಂಶಯವಿಲ್ಲ. ಅಮೇರಿಕೆಯು ಇಂಗ್ಲಂಡನ್ನು ಕೂಡಿಕೊಳ್ಳುವುದು ಖಂಡಿತ. ಅಷ್ಟಾದ ಮೇಲೆ ಸರ್ವಾಧಿಕಾರಿಗಳ ಸರ್ವನಾಶವಾಗುವುದೂ ಅಷ್ಟೆ ಖಂಡಿತ.

ಕನ್ನಡ "ವರ್ಧ ಪ್ರಾಯಿಜ" ಪರೀಕ್ಷೆ ೧೯೪೧

೧. ಪರೀಕ್ಷೆಯ ವಿಷಯಗಳು:—

(ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯಪದ್ಯ ಭಾಗಗಳ ಅರ್ಥವಿವರಣೆ ಮಾಡಲಿಕ್ಕೂ ಅವುಗಳಿಗೆ ಟೀಕೆ-ಟಿಪ್ಪಣಿಗಳನ್ನು ಬರೆಯಲಿಕ್ಕೂ ಹಳೆಯ ಮತ್ತು ಹೊಸ ಕನ್ನಡದಲ್ಲಿ ನಿಬಂಧ ಬರೆಯಲಿಕ್ಕೂ ಉಮೇದವಾರರು ಸಮರ್ಥರಾಗಿರಬೇಕು.

(ಬ) ವರ್ಧಸಾಹೇಬರು ರಚಿಸಿರುವ 'ಪ್ರಾಕ್ಕಾವ್ಯಮಾಲೆ' ಎಂಬ ಗ್ರಂಥವನ್ನು ಸಾದ್ಯಂತವಾಗಿ ಓದಿ, ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಪರೀಕ್ಷೆಯಲ್ಲಿ ಅರ್ಥವಿವರಣೆ; ಟೀಕೆ ಟಿಪ್ಪಣಿ; ಸ್ವತಂತ್ರ ನಿಬಂಧ; ಪದ್ಯರಚನೆ ಈ ವಿಷಯಗಳ ಸಮಾವೇಶವಾಗುವುದು.

೨. ಇನಾಮು:— ಈ ಮೊದಲು ಇದ್ದ ೮೦ ರೂ. ಯ ಒಂದೇ ಇನಾಮಿನ ಬದಲಾಗಿ, ಈಗ ಇನಾಮುಗಳು ಎರಡು ಎಂದು ಗೊತ್ತಾಗಿವೆ. ಮೊದಲನೆಯ ಇನಾಮು ೫೦ ರೂ. ೨ನೆಯ ಇನಾಮು ೩೦ ರೂ.

ಮೊದಲನೆಯ ಇನಾಮು ಪಡೆಯುವ ಉಮೇದವಾರನು ೧೦೦ಕ್ಕೆ ೭೫ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ, ಎರಡನೆಯ ಇನಾಮು ಪಡೆಯುವ ಉಮೇದವಾರನು ೧೦೦ಕ್ಕೆ ೫೦ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಪಡೆದಿರಬೇಕು. ಈ ಉಮೇದವಾರರು ಯಾವ ವಿಷಯದಲ್ಲಿಯೂ ಅಸಮಾಧಾನಕರವಾಗಿ ಕಡಿಮೆ ಗುಣಗಳನ್ನು ಪಡೆದು ನಾಪಾಸಾಗಿರಕೂಡದು.

ಒಂದುವೇಳೆ ಒಬ್ಬರಿಗಿಂದ ಹೆಚ್ಚು ಉಮೇದವಾರರು ಸಮಾನ ಗುಣಗಳನ್ನು ಪಡೆದು ಸಮಾಧಾನಕರವಾಗಿ ಪಾಸಾಗಿದ್ದರೆ, ಇನಾಮುಗಳನ್ನು ಸರಿಯಾಗಿ ವಿಭಜಿಸಿ ಹಂಚಲಾಗುವುದು.

೩. ಅರ್ಜಿ ಮಾಡತಕ್ಕ ಅವಧಿ:— ಪರೀಕ್ಷೆಗೆ ಕೂಡ್ರಲಪೇಕ್ಷಿಸುವವರು, ೧೯೪೧ ನೆಯ ಇಸವಿಯ ಜೂನ್ ತಿಂಗಳ ೧ನೆಯ ತಾರೀಖಿನೊಳಗಾಗಿ ಮೆ॥ ಎಜ್ಯುಕೇಶನಲ್ ಇನಸ್ಪೆಕ್ಟರ ಸಾ॥ ದಕ್ಷಿಣಭಾಗ ಇವರಿಗೆ ಮುಟ್ಟುವಂತೆ ಅರ್ಜಿಯನ್ನು ಮಾಡತಕ್ಕದ್ದು.

೪. ಪರೀಕ್ಷೆಯ ಸ್ಥಳ:— ಧಾರವಾಡ ಟ್ರೇನಿಂಗ್ ಸ್ಕೂಲಿನಲ್ಲಿ ಈ ಪರೀಕ್ಷೆಯು ಮುಂದಿನ ತಾ. ೨೮-೭-೧೯೪೧ ಮತ್ತು ಎರಡು ದಿವಸಗಳವರೆಗೆ ನಡೆಯುವುದು.

೫. ಪ್ರಶ್ನಕಾಗದಗಳು ಕೆಳಗೆ ಬರೆದಂತೆ:—

೧ನೆಯದು ವಿಷಯ ಪ್ರಾಕ್ಕಾವ್ಯಮಾಲೆ; ಅವಧಿ ೩ ಘಂಟೆ; ಗುಣ ೧೦೦.

೨ನೆಯದು ವಿಷಯ ಹಳಗನ್ನಡ; ನಿಬಂಧ ಮತ್ತು ಪದ್ಯರಚನೆ; ಅವಧಿ ೩ ಘಂಟೆ; ಗುಣ ೧೦೦.

೩ನೆಯದು ಹೊಸಗನ್ನಡ ನಿಬಂಧ ಅವಧಿ ೩ ಘಂಟೆ; ಗುಣ ೧೦೦.

ಜಯಂತಿಯ ದೀಪಾವಳಿ ಸಂಚಿಕೆ

ಬರಲಿರುವ ನವ್ಹಂಬರ್ ಸಂಚಿಕೆಯು ದೀಪಾವಳಿಯ ಸಂಚಿಕೆಯಾಗಿ ಪ್ರಕಟವಾಗುವುದು.

ಬರಿಯ ಮನೆಯಲ್ಲಿ ದೀಪಮಾಲೆಗಳನ್ನು ಹೊತ್ತಿಸಿಟ್ಟು, ದೀಪಾವಳಿ ಮಾಡುವೆನೆಂದು ಹಿಗ್ಗಿ ನಲಿದರೆ ಏನಾದೀತು ; ಉರಿಸಿದ ಎಣ್ಣೆ ಮಾತ್ರ ದಂಡ ಸರಿ ! ಮನೆಗಿಂತ ಮೊದಲು ಮನದಲ್ಲಿ ದೀಪಬೆಳಗಿಸಿ ಕೊಳ್ಳಬೇಕು. ಮನದಲ್ಲಿ ಕತ್ತಲೆ ತುಂಬಿರುವಾಗ ಮನೆಯ ದೀಪಮಾಲೆಯಿಂದ ಯಾವ ಪ್ರಯೋಜನ ?

ಮನದ ಕತ್ತಲೆ ಕಳೆಯಬೇಕಾದರೆ

ಜಯಂತಿಯ ದಿಪಾವಳಿಸಂಚಿಕೆಯನ್ನು ಓದಿರಿ !

ದೀಪಾವಳಿ ಸಂಚಿಕೆಯ ಲೇಖಕರು :

ಶ್ರೀ. ಆಲೂರ ವೆಂಕಟರಾಯರು, ಬಿ. ಎ., ಎಲ್ ಎಲ್. ಬಿ.
ಪ್ರೊ. ಕೆ. ಜಿ. ಕುಂದಣಗಾರ್, ಎಂ. ಎ.
ಶ್ರೀ. ಕೆ. ವಿ. ರಾಘವಾಚಾರ್ಯ, ಎಂ. ಎ.
ಶ್ರೀ. ಬೇಂದ್ರೆ ದತ್ತಾತ್ರೇಯರಾಯರು, ಎಂ. ಎ.
ಶ್ರೀ. ಎಸ್. ಕೆ. ಕುಲಕರ್ಣಿ. ಎಂ ಎ., ಬಿ. ಟಿ.
ಶ್ರೀ. ಎಚ್. ಎಸ್. ಪಾಟೀಲ, ಎಂ. ಎ.
ಶ್ರೀ. ಜೋಗಳೆಕರ್ ಪಾಂಡುರಂಗರಾಯರು, ಬಿ. ಎ.
ಶ್ರೀ. ಗು. ಕೃ. ವಾಳ್ವೇಕರ್, ಬಿ. ಎ., ಎಲ್. ಎಲ್. ಬಿ.
ಶ್ರೀ. ಪಂಡಿತ ತಾರಾನಾಥರಾಯರು
ಶ್ರೀ. ದೊರೆಸ್ವಾಮಿ ಅಯ್ಯಂಗಾರ್, ಎಂ. ಎ., ಬಿ. ಎಲ್.
ಶ್ರೀ. ಎಂ. ವಿ. ಸೀತಾರಾಮಯ್ಯನವರು, ಎಂ. ಎ.
ಶ್ರೀ. ಕೆ. ಟಿ. ಪುರಾಣಿಕ. ಬಿ. ಎ., ಬಿ. ಟಿ.
ಶ್ರೀ. ಕುಡ್ಪಿ ವಾಸುದೇವ ಶೆಣೈ, ಮಂಗಳೂರು
ಶ್ರೀ. ನೆಗಳೂರ ರಂಗನಾಥ, ಬಿ. ಎ.
ಶ್ರೀ. ಕುಲಕರ್ಣಿ ಶೇಷಗಿರಿರಾಯರು
ಶ್ರೀ. ಜಿ. ಎ. ವಾಮನಭಟ್ಟ, ಬಿ. ಎ., ಎಲ್. ಟಿ.

ಅಲ್ಲದೆ ಶ್ರೀಯುತರುಗಳಾದ ಬೇಂದ್ರೆ, ಸಾಲಿ, ಆನಂದಕಂದ, ವಿ. ಸೀತಾರಾಮಯ್ಯ, ಶ್ರೀಧರ ಮೊದಲಾದವರ ಸರಸಕವನಗಳು ಪ್ರಕಟವಾಗುವುವು.

ಮನೋಹರವಾದ ಮೇಲುಹೊದಿಕೆ! ಮಿಕ್ಕ ಸಂಚಿಕೆಗಳಿಗಿಂತ ಹೆಚ್ಚು ಪುಟಗಳು!
ಸುಂದರವಾದ ಸಂದರ್ಭ ಚಿತ್ರಗಳು! ಮುದ್ದಾಗಿರುವ ಮುದ್ರಣ!

★ ಸಂಚಿಕೆ ಬೇಕಾದವರು ಮೊದಲೆ ಬೇಡಿಕೆಗಳನ್ನು ಕಳಿಸಬೇಕು. ★
★ ಹೆಚ್ಚು ಸಂಚಿಕೆ ಬೇಕಾದವರು ಬೇಗನೆ ಬರೆದು ತಿಳಿಸಬೇಕು. ★
★ ಜಾಹೀರಾತು ಕೊಡಬೇಕೆನುವವರು ಕೂಡಲೆ ಪತ್ರ ಬರೆಯಬೇಕು. ★

ಜಯಂತಿಯ ದೀಪಾವಳಿ ಸಂಚಿಕೆ

ಓದುವ ಸುಯೋಗವನ್ನು ಯಾರೂ ಕಳೆದುಕೊಳ್ಳಬೇಡಿರಿ

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾ ರ ವಾ ಡ.

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲಿ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.

ಧೂ ತ ಪಾ ಪೇ ಶ್ವ ರ ★

TRADE MARK

ಬೋಧಚಿಹ್ನ

★ ಅರವಿಂದಾಸವ

ಚಿಕ್ಕಮಕ್ಕಳ ವಿಕಾರಗಳ ಮೇಲೆ ರತ್ನದಂತಹ ಔಷಧ!

ಕಿಡಿಗೇಡಿ ಮಕ್ಕಳಿಂದ ತಾಯಿತಂದೆಗಳ ಆನಂದ ಹೆಚ್ಚುವುದು.
ಮನೆಯಲ್ಲಿ ಸುಖ-ಶೃಂಗಾರ ನೆಲೆಗೊಳ್ಳುವುದು.
ಮಕ್ಕಳ ತುಂಟತನ ಅವರ ಆರೋಗ್ಯದ ಸ್ಪಷ್ಟಚಿಹ್ನ;

ಆ ದು ದ ರಿಂ ದ

ನಿಮ್ಮ ಮಕ್ಕಳ ಆರೋಗ್ಯ ಚೆನ್ನಾಗಿರಬೇಕಾದಲ್ಲಿ

ಅರವಿಂದಾಸವವನ್ನು ಕೊಡಿರಿ !

ಶ್ರೀಧೂತಪಾಪೇಶ್ವರ ಪನವೇಲ, ಲಿಮಿಟೆಡ್
ಪನವೇಲ–ಕುಲಾಬಾ.

ಎಲ್ಲಾ ಏಜಂಟರಲ್ಲಿಯೂ ಸ್ಟಾಕಿಸ್ಟರಲ್ಲಿಯೂ ದೊರೆಯುವುದು.

Printed by V. Y. Jather, B. Sc. Karnatak Printing Works, Dwr. Edited and published by M. G. Patil at Jayanti Office Dharwar